ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–35

ಆಶ್ವಮೇಧಿಕಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೫

ಆಶ್ವಮೇಧಿಕಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಅಶ್ವಮೇಧಿಕಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಅಶ್ವಮೇಧಿಕಪರ್ವ - ಭಾಗ ೩೫

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-39-6

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XXIV + 564 = 588
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿನೇ ನಮಃ



ವಿದ್ಯಾಮಾನ್ಯಾನ್ಮನೀನ್ವುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

ನಮ್ಮ ಪ್ರಾಚೀನರು ಸಮಗ್ರ ಭಾರತ ದೇಶಗಳಲ್ಲಿ, ಗ್ರಾಮ-ಗ್ರಾಮಗಳಲ್ಲಿ ಶ್ರೀಕೃಷ್ಣನ ಅನುಗ್ರಹದಿಂದ ಧರ್ಮದ ಬೀಜಗಳನ್ನು ಬಿತ್ತಿರುತ್ತಾರೆ. ಈ ಧರ್ಮದ ಬೀಜಗಳು ಆಶ್ವಮೇಧಿಕ ಪರ್ವದಲ್ಲಿ ಬರುವ ವೈಷ್ಣವ ಧರ್ಮ ಎಂಬ ಉಪಪರ್ವದಲ್ಲಿ ಹೇರಳವಾಗಿ ದೊರೆಯುತ್ತವೆ. ಅಂದು ಬಿತ್ತಿದ ಧರ್ಮಬೀಜಗಳೇ ಇಂದು ಸಮಗ್ರ ಭಾರತದೇಶದಲ್ಲಿ ಹೆಮ್ಮರವಾಗಿ ಬೆಳೆದಿವೆ. ಅಂದು ಶ್ರೀಕೃಷ್ಣ ಪಾಂಡವರಿಗೆ ಮಾಡಿದ ಧರ್ಮೋಪದೇಶವೇ ಇಂದು ಮಹಾವೃಕ್ಷವಾಗಿ ಬೆಳೆದು ಸಜ್ಜನರ ಸಮುದಾಯಕ್ಕೆ ಸತ್ಫಲಗಳನ್ನು ನೀಡುತ್ತಿವೆ. ಶ್ರೀಕೃಷ್ಣನ ಪರಮಾನುಗ್ರಹದಿಂದ ಪರಮ ವೈಷ್ಣವೋತ್ತಮನಾದ ಭೀಮಸೇನನು ಪ್ರತಿ ಗ್ರಾಮದಲ್ಲಿಯೂ ಐದು ಜನ ಧರ್ಮಜ್ಞರಾದ ಬ್ರಾಹ್ಮಣರನ್ನು ವೇತನಕೊಟ್ಟು ಸ್ಥಾಪಿಸಿ ಅವರ ಮೂಲಕ ವೈಷ್ಣವಧರ್ಮಗಳನ್ನು ಮನೆ ಮನೆಗಳಲ್ಲಿ ಪ್ರಚಾರ ಮಾಡಿರುತ್ತಾರೆ. ಯಾರು ಆ ಬ್ರಾಹ್ಮಣರು ಉಪದೇಶ ಮಾಡಿದ ಧರ್ಮಗಳನ್ನು ಅನುಷ್ಠಾನ ಮಾಡುತ್ತಾರೋ ಅವರ ವಿಷಯದಲ್ಲಿ ಭೀಮನು ಸಂತುಷ್ಟನಾಗುತ್ತಿದ್ದ. ಯಾರು ವೈಷ್ಣವಧರ್ಮಗಳನ್ನು ಅನುಷ್ಠಾನ ಮಾಡುವುದಿಲ್ಲವೋ ಅವರಲ್ಲಿ ದಂಡ ಪ್ರಹಾರ ಮಾಡಿ ಶಿಕ್ಷಿಸುತ್ತಿದ್ದ. ಎಲ್ಲೆಡೆಯೂ ಸಮರ್ಪಕವಾಗಿ ಧರ್ಮವು ವಿಸ್ತಾರಗೊಳ್ಳುವಂತೆ ಮಾಡಿದ ಕೀರ್ತಿ ಅಂದು ಭೀಮಸೇನನದ್ದು. ಇದನ್ನು ಆಶ್ವಮೇಧಿಕ ಪರ್ವದಲ್ಲಿ ನಿರೂಪಿಸಿದ್ದಾರೆ. ಅದೇ ಭೀಮಸೇನನು ಇಂದು ಕಲಿಯುಗದಲ್ಲಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಾಗಿ ಅವತರಿಸಿ ಧರ್ಮಜ್ಞಾನಹೀನರಾದ ಸಾಧಕರಿಗೆ ಸನಾತನವಾದ ಪರಮತತ್ತ್ವವನ್ನು ಪುನಃ ಬೋಧಿಸಿರುತ್ತಾರೆ. ಈ ಧರ್ಮಗಳ ಅರಿವಿಲ್ಲದೆ ನೂರು ಕಾಲ ಬದುಕಿದರೂ ಆ ಬದುಕು ವ್ಯರ್ಥ. ಜ್ಯೋತಿ ಇಲ್ಲದ ಪ್ರಣತಿ, ದೇವರಿಲ್ಲದ ಮಂಟಪ, ಶೀಲವಿಲ್ಲದ ಸ್ತ್ರೀ, ದಕ್ಷತೆ ಇಲ್ಲದ ರಾಜ, ಗೋವುಗಳಿಲ್ಲದ ದೇಶ, ಬ್ರಾಹ್ಮಣ್ಯವಿಲ್ಲದ ಬ್ರಾಹ್ಮಣ, ಮತ್ಸ್ಯಗಳಿಲ್ಲದ ಸರೋವರ, ಕಾಂತಿಯಿಲ್ಲದ ಚಂದ್ರ, ಪ್ರಭೆ

ಇಲ್ಲದ ಸೂರ್ಯ, ಮಾಧುರ್ಯವಿಲ್ಲದ ನೀರು, ಇಂದ್ರಿಯನಿಗ್ರಹವಿಲ್ಲದ ಸಂನ್ಯಾಸಿ, ದಾನವಿಲ್ಲದೆ ಬದುಕುವ ಶ್ರೀಮಂತ, ಜಪ ಮಾಡದೆ ಜೀವಿಸುವ ದರಿದ್ರ – ಇವೆಲ್ಲವೂ ಹೇಗೆ ನಿರುಪಯುಕ್ತ, ಅಪ್ರಯೋಜಕ, ವ್ಯರ್ಥ ಎನಿಸುತ್ತವೆಯೋ ಇದರಂತೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಶಾಸ್ತ್ರಾಧ್ಯಯನವಿಲ್ಲದ ಬದುಕು, ಆಶ್ವಮೇಧಿಕ ಪರ್ವದಲ್ಲಿ ಶ್ರೀಕೃಷ್ಣನು ಪ್ರತಿಪಾದಿಸಿದ ವೈಷ್ಣವಧರ್ಮಗಳನ್ನು ಅರಿಯದ ಬುದ್ಧಿ, ಈ ಧರ್ಮಗಳನ್ನು ಮನಃಪೂರ್ವಕವಾಗಿ ಅನುಷ್ಠಾನ ಮಾಡದ ಬದುಕು ವ್ಯರ್ಥ, ಅಪ್ರಯೋಜಕ ಎನಿಸುತ್ತದೆ. ಮಹಾಭಾರತದ ಅಧ್ಯಯನವು ಆಶ್ವಮೇಧಿಕ ಪರ್ವದ ಕೊನೆಯಲ್ಲಿ ಬರುವ ವೈಷ್ಣವಧರ್ಮ ಎಂಬ ಉಪಪರ್ವದ ಅಧ್ಯಯನದಿಂದಲೇ ಪೂರ್ಣವಾಗುತ್ತದೆ. ಪ್ರತಿದಿನ ಬದುಕಿಗೆ ಬೇಕಾದ ಮೌಲಿಕವಾದ ನೂರಾರು ಧರ್ಮ ರಹಸ್ಯಗಳನ್ನು ಶ್ರೀಕೃಷ್ಣನು ಸಮಸ್ತ ಜೀವರ ಆತ್ಮೋನ್ನತಿಗೆ ತಿಳಿಸಿಕೊಟ್ಟಿರುತ್ತಾನೆ. ಇಂತಹ ಮೋಕ್ಷವನ್ನು ದಯಪಾಲಿಸುವ ಶ್ರೀಕೃಷ್ಣನ ಅನುಗ್ರಹ ರೂಪವಾದ ಈ ಉಪದೇಶಗಳನ್ನು ಸಮಸ್ತ ಸಜ್ಜನರು ಈ ಕೃತಿಯ ಮೂಲಕ ಪಡೆಯುವಂತಾಗಬೇಕೆಂದು ಆಶಿಸುತ್ತೇವೆ. ಈ ಮಹಾಭಾರತ ಗ್ರಂಥದ ಆಶ್ವಮೇಧಿಕ ಪರ್ವದ ಸಂಶೋಧನೆ, ಸಂಪಾದನೆ, ಅನುವಾದಗಳನ್ನು ನಡೆಸಿದ ವಿದ್ವಾಂಸರಾದ ಬೆ.ನಾ. ವಿಜಯೀಂದ್ರಾಚಾರ್ಯರನ್ನು ವಿಶೇಷವಾಗಿ ಅಭಿನಂದಿಸುತ್ತೇವೆ. ಈ ಗ್ರಂಥದ ಅನುವಾದ ಮಾಡಿದ ಇವರಿಗೂ, ಅಧ್ಯಯನ ಮಾಡುವ ತಮಗೂ ಶ್ರೀಹರಿ-ವಾಯು-ಗುರುಗಳು ನಿರಂತರ ಅನುಗ್ರಹಿಸಲಿ.

ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

'ಭಾರತಂ ಸರ್ವಶಾಸ್ತ್ರೇಷು' ಎಂಬ ಪ್ರಸಿದ್ಧವಾದ ಮಾತಿದೆ. ಮಹಾಭಾರತವೇ ಸಮಸ್ತ ಶಾಸ್ತ್ರಗಳ ಸಾರವೆನಿಸಿದರೆ, ಮಹಾಭಾರತದ ಸಾರ ಭಗವದ್ಗೀತೆ. ಭಗವದ್ಗೀತೆಯ ಉಪದೇಶವು ಲಕ್ಷಶ್ಲೋಕಾತ್ಮಕವಾದ ಮಹಾಭಾರತದ ನಡುವೆ ಇದೆ. ಸಂಪುಟದ ನಡುವೆ ಇರುವ ಭಗವನ್ಮೂರ್ತಿಗೆ ಹೇಗೆ ಮಹತ್ವವಿದೆಯೋ, ಇದರಂತೆ ಮಹಾಭಾರತದ ನಡುವೆ ಇರುವ ಭಗವದ್ಗೀತೆ ಕೃಷ್ಣನ ಪ್ರತಿರೂಪದಂತಿದೆ. ಭಗವದ್ಗೀತೆಯ ಆಸುಪಾಸಿನ ಭಾಗಗಳೆಲ್ಲವೂ ಗೀತೆಗೆ ಪೂರಕವಾಗಿ ಗೀತೆಯ ಮಹತ್ವವನ್ನು ಪ್ರತಿಪಾದಿಸುವುದಕ್ಕಾಗಿಯೇ ವ್ಯಾಸರಿಂದ ನಿರೂಪಿಸಲ್ಪಟ್ಟಿವೆ. ಇಂತಹ ಭಗವದ್ಗೀತೆಯನ್ನು ಉಪದೇಸ ಪಡೆದ ಅರ್ಜುನನು ಕಾಲಾಂತರದಲ್ಲಿ ನಮ್ಮ, ನಿಮ್ಮೆಲ್ಲರಂತೆ ಮರೆತಿದ್ದೇನೆಂದು ಕೃಷ್ಣನ ಬಳಿ ಹೇಳುತ್ತಾನೆ. ಪುನಃ ಭಗವದ್ಗೀತೆಯನ್ನು ಬೋಧಿಸೆಂದು ಕೃಷ್ಣನ ಬಳಿ ಪ್ರಾರ್ಥಿಸುತ್ತಾನೆ. ಆದರೆ ಶ್ರೀಕೃಷ್ಣನು ಗೀತೆಯ ಮಹತ್ವವನ್ನು ಸಾರುವುದಕ್ಕಾಗಿ ಮತ್ತೊಮ್ಮೆ ಆ ಗೀತೆಯನ್ನು ಹೇಳದೆ ಅದರ ಮೌಲ್ಯವನ್ನು ಹೆಚ್ಚಿಸಿ ಜಿಜ್ಞಾಸುವಾದ ಅರ್ಜುನನ ಬೌದ್ಧಿಕ ತೃಷೆಯನ್ನು ಅನುಗೀತೆಯ ಮೂಲಕ ಪರಿಹರಿಸಿದ್ದಾನೆ. ಆಶ್ವಮೇಧಿಕ ಪರ್ವದಲ್ಲಿ ಬರುವ ಎರಡು ಉಪಪರ್ವಗಳು ಅನುಗೀತಾ ಪರ್ವ, ವೈಷ್ಣವಧರ್ಮ ಪರ್ವಗಳು. ಗೀತೆಯಲ್ಲಿ ಉಪದೇಶ ಮಾಡಿದ ತತ್ತ್ವ ಸಂದೇಶಗಳಿಗೆ ಅನುಗುಣವಾದ ಅನೇಕ ಸಂವಾದಗಳನ್ನು, ಆಖ್ಯಾಯಿಕೆಗಳನ್ನು ಅನುಗೀತಾ ಪರ್ವದಲ್ಲಿ ಹೇಳುತ್ತಾ ಶ್ರೀಕೃಷ್ಣನು ಗೀತೆಯ ಸಾರವನ್ನೇ ಮತ್ತೊಂದು ರೂಪದಿಂದ ಉಪದೇಶಿಸಿರುತ್ತಾನೆ. ವೈಷ್ಣವ ಧರ್ಮ ಪರ್ವವು ಶ್ರೀಕೃಷ್ಣನ ಉಪದೇಶವೇ ಆಗಿದೆ. ಹೀಗೆ ಮಹಾಭಾರತದಲ್ಲಿ ಕೃಷ್ಣನಿಂದ ಉಪದಿಷ್ಟವಾದ ವಿಸ್ತಾರವಾದ ವಿಚಾರಗಳು ಆಶ್ವಮೇಧಿಕ ಪರ್ವದಲ್ಲಿ ತುಂಬಿವೆ. ಈ ಕಾರಣದಿಂದಲೇ ವ್ಯಾಸರು 'ಆಶ್ವಮೇಧಾಽಮೃತ ರಸಃ' ಎಂದು ಅನುಕ್ರಮಣಿಕಾ ಪರ್ವದಲ್ಲಿ ಹೇಳಿದ್ದು. ಮಹಾಭಾರತವೆಂಬ ವೃಕ್ಷದಲ್ಲಿ ಮೂಡಿದ ಫಲದ ಅಮೃತರಸವೇ ಆಶ್ವಮೇಧಿಕ ಪರ್ವ ಎನಿಸಿದೆ. ಇಂತಹ ಹದಿನಾಲ್ಕನೆಯ ಪರ್ವದ ಅನುವಾದವನ್ನು ಅತ್ಯಂತ ಶ್ರದ್ಧೆಯಿಂದ ನಡೆಸಿಕೊಟ್ಟವರು ಡಾ।। ಬೆ.ನಾ. ವಿಜಯೀಂದ್ರಾಚಾರ್ಯರು ಅವರಿಗೆ ತತ್ವಸಂಶೋಧನಾ ಸಂಸತ್ ವತಿಯಿಂದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಆಶ್ವಮೇಧಿಕಪರ್ವದ ಭಾಗವನ್ನು ಅರ್ಥಸಹಿತ ಎರಡು ಸಂಪುಟದಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲ ರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲ ಪದಾಧಿಕಾರಿಗಳಿಗೆ ಸಂಶೋಧನ ಸಂಸತ್‌ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ, ವಿದ್ವಾಂಸರೂ ಆಗಿರುವಂತಹ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಮನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು

ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟು ಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿ ಸಹಕಾರ ಮಾಡಿಕೊಟ್ಟಿರುವ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿ ಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಅಶ್ವಮೇಧಿಕಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು

ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್

ನಿರ್ದೇಶಕರು, ತತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಆಶ್ವಮೇಧಿಕ ಪರ್ವ - ಭೂಮಿಕೆ

'ಆಶ್ವಮೇಧಾऽಮೃತರಸಃ' ಎಂದು. ಮಹಾಭಾರತದಲ್ಲಿ ಅಶ್ವಮೇಧಿಕ ಪರ್ವವು ಹದಿನಾಲ್ಕನೆಯ ಪರ್ವವೆನಿಸಿದೆ. ಸಂವರ್ತ ಮರುತ್ತುಗಳ ಆಖ್ಯಾನ, ಪಾಂಡವರಿಗೆ ಸುವರ್ಣಕೋಶ ಪ್ರಾಪ್ತಿ, ಪರೀಕ್ಷಿತನ ಜನ್ಮ, ಅಶ್ವತ್ಥಾಮನ ಜನ್ಮ, ಮೃತನಾದ ಪರೀಕ್ಷಿತನನ್ನು ಕೃಷ್ಣನು ಬದುಕಿಸುವುದು, ಯಜ್ಞಾಶ್ವವನ್ನು ಅನುಸರಿಸಿ ತೆರಳುವ ಅರ್ಜುನನ ಜೊತೆ ರಾಜರುಗಳ ಯುದ್ಧ, ಚಿಂತ್ರಾಗಧೆಯ ಪುತ್ರನಾದ ಬಭ್ರುವಾಹನನು ಧನಂಜಯನ ಜೊತೆ ಯುದ್ಧ ಮಾಡುವುದು, ಧನಂಜಯನು ಪತನವನ್ನು ಹೊಂದಿದಾಗ, ಮೃತಸಂಜೀವಿನಿಯಿಂದ ಅವನನ್ನು ಎಬ್ಬಿಸುವುದು, ಅಶ್ವಮೇಧ ಮಹಾಯಜ್ಞವನ್ನು ಪೂರೈಸಿದ ಬಳಿಕ ಪ್ರತಿಪಾದಿಸಿದ ನಕುಲೋಪಾಖ್ಯಾನ, ಮರುದ್ದೇವತಾ ದರ್ಶನ ವಿಸ್ತಾರವಾಗಿ ವೈಷ್ಣವಧರ್ಮವನ್ನು ನಿರೂಪಿಸುವುದು - ಇವೆಲ್ಲವೂ ಅಶ್ವಮೇಧಿಕ ಪರ್ವದಲ್ಲಿ ಕಾಣಿಸುವ ವಿಷಯಗಳು. ಒಟ್ಟು ಅಶ್ವಮೇಧಿಕ ಪರ್ವದಲ್ಲಿ ನೂರ ಹದಿನೆಂಟು ಅಧ್ಯಾಯಗಳು ಇವೆ. ಈ ಪರ್ವದಲ್ಲಿ ಅಪೂರ್ವವಾದ ವಿಷಯಗಳು ನಿರೂಪಿಸಲ್ಪಟ್ಟಿರುವುದರಿಂದ ಅಮೃತರಸ ಎಂಬ ಮಾತು ಅತ್ಯಂತ ಉಚಿತವಾಗಿ ಕಾಣುತ್ತದೆ.

ಜಗತ್ತೆಲ್ಲವೂ ಮೂರು ಗುಣಗಳಿಂದ ಭೂಷಿತವಾಗಿದೆ. ಸಾತ್ವಿಕ, ರಾಜಸ, ತಾಮಸ ಎಂಬ ವಿಭಾಗವು ದಿನದಿಂದ ಆರಂಭಿಸಿ ಸಂವತ್ಸರ ಪರ್ಯಂತವು ವ್ಯಾಪಕವಾಗಿದೆ. ಇಂತಹ ಸೂಕ್ಷ್ಮ ವಿಷಯಗಳು ಆಶ್ವಮೇಧಿಕ ಪರ್ವದಲ್ಲಿ ಪ್ರತಿಪಾದಿಸಲ್ಪಟ್ಟಿವೆ.

ಅಹಸ್ತ್ರಿಧಾ ತು ವಿಜ್ಞೇಯಂ ತ್ರಿಧಾ ರಾತ್ರಿರ್ವಿಧೀಯತೇ ।
ಮಾಸಾರ್ಧಮಾಸವರ್ಷಾಣಿ ಋತವಃ ಸಂಧಯಸ್ತಥಾ ॥೧೮॥

ಗುಣಗಳ ಪ್ರಭೇದದಿಂದ ಹಗಲು ಮೂರು ಪ್ರಕಾರವಾಗಿದೆ, ರಾತ್ರಿಯೂ ಮೂರು ಪ್ರಕಾರವಾಗಿದೆ. ಮಾಸ, ವರ್ಷ, ಋತು, ಇವುಗಳ ಸಂಧಿಭಾಗಗಳೂ ಮೂರು ಪ್ರಕಾರವಾಗಿರುತ್ತವೆ.

ಹೀಗೆ ಈ ಶ್ಲೋಕವನ್ನು ಸ್ವರಸ ಸುಂದರವಾಗಿ ವಾದಿರಾಜ ಗುರುಸಾರ್ವಭೌಮರು ವ್ಯಾಖ್ಯಾನಿಸಿರುತ್ತಾರೆ. ಕಬ್ಬನ್ನು ಚೀಪಿದಾಗ ಅದರಲ್ಲಿರುವ ಮಧುರರಸವು ಅನುಭವಕ್ಕೆ

ಬಾರದು. ಎಲ್ಲಿಯ ತನಕ ಕಬ್ಬನ್ನು ಜಗಿಯುವುದಿಲ್ಲವೋ ಅಲ್ಲಿಯ ತನಕವೂ ಅಮೃತ ರಸದ ಅನುಭವವು ಬರುವುದಿಲ್ಲ. ಇದರಂತೆ ಮಹಾಭಾರತದ ವೈಷ್ಣವಧರ್ಮ ಪರ್ವವನ್ನು ಅಧ್ಯಯನ ಮಾಡದೆ ಮಹಾಭಾರತದ ಅಮೃತರಸವೇನೆಂಬುದು ಅನುಭವಕ್ಕೆ ಬರುವುದಿಲ್ಲ. ಬಹುತೇಕ ಎಲ್ಲ ಪರ್ವಗಳಲ್ಲಿಯೂ ವ್ಯಾಸರು ಜೀವ-ಬ್ರಹ್ಮರ ಐಕ್ಯವನ್ನು ನಿರಾಕರಿಸಿರುತ್ತಾರೆ. ಸ್ವಗತ ಭೇದವರ್ಜಿತನಾದ ನಾರಾಯಣನ ದೆಸೆಯಿಂದ ನಿಯಮ್ಯರಾದ ಜೀವರುಗಳಿಗೆ ಭೇದವನ್ನು ಹೇಳಬೇಕು ಎಂಬುದನ್ನು ದೃಷ್ಟಾಂತ ಪೂರ್ವಕವಾಗಿ ಪ್ರತಿಪಾದಿಸಿದ್ದಾರೆ.

ಆಹುರೇತೇ ಮಹಾತ್ಮಾನೋ ಯೇ ಜ್ಞಾನೇಷು ಪ್ರತಿಷ್ಠಿತಾಃ ।
ಕ್ಷೇತ್ರಜ್ಞಸತ್ವಯೋರೈಕ್ಯಮಿತ್ಯೇತನ್ನೋಪಪದ್ಯತೇ ॥೧೧॥

ಜ್ಞಾನದಲ್ಲಿಯೇ ಮುಳುಗಿರುವ ಕೆಲವು ವಿದ್ವಾಂಸರು ಹಿಂದೆ ಹೇಳಿದಂತೆ ಯೋಗಿಗಳಲ್ಲಿ ನಾಲ್ಕು ಪ್ರಕಾರಗಳನ್ನು ಹೇಳುತ್ತಾ, ಬ್ರಹ್ಮ-ಜೀವರಲ್ಲಿ ಐಕ್ಯ ಇದೆ ಎಂಬ ಮತವನ್ನು ಅವರು ಅಂಗೀಕರಿಸುವುದಿಲ್ಲ.

ಪೃಥಗ್ಭೂತಂ ತತೋ ನಿತ್ಯಮಿತ್ಯೇತದಪಿ ವಾರಿತಮ್ ।
ಪೃಥಗ್ಭಾವಶ್ಚ ವಿಜ್ಞೇಯಃ ಸಹಜಶ್ಚಾಪಿ ತತ್ತ್ವತಃ ॥೧೨॥

ನಿತ್ಯವೂ ಈ ಜಗತ್ತು ಪರಮಾತ್ಮನಿಗಿಂತ ಭಿನ್ನವಾಗಿ, ಅನಿತ್ಯವಾಗಿದೆ. ಈಶ್ವರನಿಂದ ಪೃಥಕ್ ಆಗಿ ಇದೆ. ಪರಮಾತ್ಮನ ಅಪೇಕ್ಷೆಗಿಂತ ಮಿಥ್ಯಾ ಎನಿಸಿದೆ. ಈ ಕ್ಷೇತ್ರಜ್ಞನೆನಿಸಿದ ಜೀವನಿಗೂ ಸತ್ತ್ವ ಎನಿಸಿದ ಪರಮಾತ್ಮನಿಗೂ ಸ್ವಾಭಾವಿಕವಾದ ಭೇದವೇ ಇದೆ. ಆದ್ದರಿಂದ ಪರಮಾತ್ಮನ ದೆಸೆಯಿಂದ ಜಗತ್ತನ್ನು ಪೃಥಕ್ ಆಗಿಯೇ ತಿಳಿಯಬೇಕು. ಹಿಂದಿನ ಪದ್ಯದಲ್ಲಿ ಸ್ಪಷ್ಟವಾಗಿ ಐಕ್ಯವನ್ನು ನಿಷೇಧಿಸಿ, ಈ ಪದ್ಯದಲ್ಲಿ ಭೇದವನ್ನು ಸಮರ್ಥನೆ ಮಾಡುವುದರಿಂದ ಮೇಲ್ನೋಟದಲ್ಲಿ ತೋರುವ ಈ ಪದದ ಅರ್ಥಗಳನ್ನು ಸ್ವೀಕರಿಸಬಾರದು. ಐಕ್ಯವನ್ನು ನಿಷೇಧಿಸಿ ಭೇದ ಸತ್ಯ ಎಂಬ ಅರ್ಥವನ್ನೇ ಇಲ್ಲಿ ಸ್ವೀಕರಿಸಬೇಕು. ಒಂದು ವೇಳೆ ಹೀಗೆ ಅರ್ಥವನ್ನು ಹೇಳದಿದ್ದಲ್ಲಿ 'ಅಹಂ ಬ್ರಾಹ್ಮಣಃ' 'ನಾಹಂ ಬ್ರಾಹ್ಮಣಃ' ಎಂಬ ವಾಕ್ಯಗಳು ಪರಸ್ಪರ ವಿರುದ್ಧವಾಗುವಂತೆ 'ಪೃಥಕ್ ಭಾವಃ ನ' 'ಪೃಥಕ್ ಭಾವೋಽಪಿ ವಿಜ್ಞೇಯಃ' ಎಂಬ ವಾಕ್ಯಗಳಲ್ಲಿ ಪರಸ್ಪರ ವಿರೋಧ ಉಂಟಾಗಿ ವ್ಯಾಹತಿ ದೋಷವು ಬಂದೀತು. ಎಲ್ಲಿ ಐಕ್ಯವನ್ನು ನಿಷೇಧಿಸುತ್ತಾರೋ

ಅಲ್ಲಿ ನಿಯಮೇನ ಭೇದವನ್ನು ಸಾಧಿಸಲೇಬೇಕು. ಇಲ್ಲದಿದ್ದಲ್ಲಿ ಪ್ರಕ್ರಮವಿರೋಧವು ಉಂಟಾಗುತ್ತದೆ. ಆದ್ದರಿಂದಲೇ ಹಿಂದೆ 'ಯೇ ಜ್ಞಾನೇಷು ಪ್ರತಿಷ್ಠಿತಾಃ, ಏತೇ ಮಹಾತ್ಮಾನಃ' ಮುಂತಾದ ವಾಕ್ಯಗಳಲ್ಲಿ ಮೀಮಾಂಸಾ ನಿಪುಣರಾದ ಮಹಾಪುರುಷರನ್ನು ಸಂಗ್ರಹಿಸಲು ಈ ವಿಶೇಷಣವನ್ನು ನೀಡಿದ್ದಾರೆ.

ಮುಂದಿನ ಪದ್ಯದಲ್ಲಿ ಸಮಸ್ತ ಸಕಲ ಜೀವರಿಗೆ ಆಧಾರವಾಗಿರುವ, ಜೀವರ ಹೃದಯದಲ್ಲಿರುವ ಭಗವಂತನ ರೂಪಗಳಲ್ಲಿ ಭೇದಗಳನ್ನು ತಿಳಿಯಬಾರದು. ಹೊರತು ಸ್ವಗತಭೇದ ವರ್ಜಿತನಾದ ನಾರಾಯಣನಿಂದ ನಿಯಮ್ಯರಾದ ಜೀವರಲ್ಲಿ ಭೇದವನ್ನೇ ಹೇಳಬೇಕು ಎಂದು ತಿಳಿಸಲು ದೃಷ್ಟಾಂತವನ್ನು ನೀಡುತ್ತಾರೆ.

ತಥಾ ವೈಕತ್ವನಾನಾತ್ವಮಿಷ್ಯತೇ ವಿದುಷಾಂ ನಯಾತ್ ।
ಮಶಕೌದುಂಬರೇ ತ್ವೈಕ್ಯಂ ಪೃಥಗ್ಭಾವಶ್ಚ ದೃಶ್ಯತೇ ॥೧೩॥

'ಮಶಕೌದುಂಬರಮ್' ಎಂಬಲ್ಲಿ ದ್ವಂದ್ವೈಕವದ್ಭಾವವನ್ನು ತಿಳಿಯಬೇಕು. ಸೊಳ್ಳೆಗಳಿಗೆ ಆಧಾರವಾದ ಅತ್ತಿಯ ಹಣ್ಣಿನಲ್ಲಿ ಐಕ್ಯವನ್ನು ಹೇಳಿದಂತೆ ಇಲ್ಲಿ ಆಧೇಯ ಎನಿಸಿದ ಸೊಳ್ಳೆಗಳಿಗೆ ಅತ್ತಿಹಣ್ಣಿನಿಂದ ಅತ್ಯಂತ ಭೇದವೇ ಇದೆ. ಆ ಅತ್ತಿಯ ಹಣ್ಣಿನ ಒಳಗಡೆ ಇರುವ ಸೊಳ್ಳೆಗಳಲ್ಲಿ ಪರಸ್ಪರ ಭೇದವಿದೆ. ಆ ಸೊಳ್ಳೆಗಳು ಅನೇಕ ಸಂಖ್ಯೆಯಲ್ಲಿ ಇರುವುದರಿಂದ ನಾನಾತ್ವವೂ ಇದೆ. ಹೀಗೆ ಅತ್ತಿ ಹಣ್ಣಿಗೂ ಸೊಳ್ಳೆಗಳಿಗೂ ಬಹುಸಂಖ್ಯಾಕವಾದ್ದರಿಂದ ನಾನಾತ್ವವು ಎಂಬುದಾಗಿ ಪೃಥಕ್ ಭಾವವು ಮೂರು ವಿಧವಾಗಿದೆ. ಸೊಳ್ಳೆಗಳಿಗೂ ಮತ್ತು ಅತ್ತಿಹಣ್ಣಿಗೂ ಆಧಾರ-ಆಧೇಯ ಭಾವರೂಪ ಸಂಬಂಧವು ಚೆನ್ನಾಗಿ ತೋರುತ್ತಿದೆ. ಇಲ್ಲಿ ಜಡವಾದ ಅತ್ತಿಹಣ್ಣಿಗೂ ಚೇತನವಾದ ಸೊಳ್ಳೆಗಳಿಗೂ ಐಕ್ಯವನ್ನು ಹೇಳಲಾಗುವುದಿಲ್ಲ. ಇದರಿಂದ ಪರಮಾತ್ಮನೆಂಬ ಅತ್ತಿಯ ಹಣ್ಣನ್ನು ಆಶ್ರಯವಾಗಿ ಪಡೆದಿರುವ ಜೀವರಿಗೂ, ಪರಮಾತ್ಮನಿಗೂ ಪರಸ್ಪರ ಭೇದವೇ ಕಾಣಿಸುತ್ತದೆ ಎಂದು ತಾತ್ಪರ್ಯ.

ಹೀಗೆ ಅತ್ಯಂತ ಕಠಿಣವಾದ ಪ್ರಮೇಯಗಳನ್ನು ವಾದಿರಾಜರು ವಿಸ್ತಾರವಾಗಿ ವ್ಯಾಖ್ಯಾನಿಸಿರುತ್ತಾರೆ. ದೋಣಿ ಇಲ್ಲದೆ ನದಿಯನ್ನು ಹೇಗೆ ದಾಟಲಾಗುವುದಿಲ್ಲವೋ, ಇದರಂತೆ ಲಕ್ಷಾಲಂಕಾರವೆಂಬ ದೋಣಿ ಇಲ್ಲದೆ ಮಹಾಭಾರತವನ್ನು ಯಥಾರ್ಥವಾಗಿ ಅರ್ಥೈಸಿಕೊಳ್ಳಲು ದುಷ್ಕರವಾಗುತ್ತದೆ. ಇಂತಹ ಮಹಾಭಾರತವನ್ನು ಸಂಪಾದಿಸಿ,

ಅನುವಾದಿಸುವ ಮಹಾಭಾಗ್ಯವನ್ನು ದೊರಕಿಸಿಕೊಟ್ಟ ಮಹಾನುಭಾವರು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು. ಇವರ ಪರಮಾನುಗ್ರಹದಿಂದ ಮತ್ತು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು, ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥರು – ಇವರುಗಳ ಪರಮಾನುಗ್ರಹದಿಂದ ಈ ಕೃತಿಯನ್ನು ಯಥಾಮತಿಯಾಗಿ ಸಂಪಾದಿಸಿ ಅನುವಾದಿಸಿದ್ದೇನೆ. ಹಂಸಕ್ಷೀರ ನ್ಯಾಯದಂತೆ ಗುಣಾಂಶವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

– ನಿಮ್ಮ ವಿಧೇಯ,

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ

ಮೈಸೂರು.

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೫

ಆಶ್ವಮೇಧಿಕ ಪರ್ವ

ಪುಟ ಸಂ.

1. ಶೋಕಮಗ್ನನಾದ ಯುಧಿಷ್ಠಿರನಿಗೆ ಧೃತರಾಷ್ಟ್ರನ ಸಾಂತ್ವನ 1

2. ಶ್ರೀಕೃಷ್ಣ ವ್ಯಾಸರೂಪಗಳಿಂದ ಯುಧಿಷ್ಠಿರನಿಗೆ ಸಾಂತ್ವನ 18

3. ಯುಧಿಷ್ಠಿರನಿಗೆ ವ್ಯಾಸರಿಂದ ಅಶ್ವಮೇಧಯಾಗಕ್ಕಾಗಿ ಪ್ರಚೋದನೆ ಮತ್ತು ಉಪಾಯ. 23

4. ವ್ಯಾಸರು ಯುಧಿಷ್ಠಿರನನ್ನು ಕುರಿತು ಮರುತ್ತನ ಉಪಾಖ್ಯಾನ ಹೇಳಲು ಆರಂಭಿಸಿದುದು. ರಾಜನಾದ ಮರುತ್ತನು ಹಿಮವದ್ ಪರ್ವತದ ಉತ್ತರ ಭಾಗದಲ್ಲಿ ಸುವರ್ಣಗಳಿಂದಲೇ ಕುಂಡ-ಭಾಂಡ ಮೊದಲಾದ ಉಪಕ್ರಮದಿಂದ ಯಜ್ಞವನ್ನು ಆರಂಭಿಸಿದುದು 29

5. ಮರುತ್ತನ ಜೊತೆಯಲ್ಲಿ ಸ್ಪರ್ಧೆಗಿಳಿದ ದೇವೇಂದ್ರನು ಮರುತ್ತನನ್ನು ಜಯಿಸಲು ಶ್ರಮಪಟ್ಟ ಬಗೆ. ಬೃಹಸ್ಪತಿಗಳ ಬಳಿ ಮರುತ್ತನ ಯಜ್ಞಕ್ಕೆ ಹೋಗದಿರುವಂತೆ ಪ್ರಾರ್ಥನೆ. ಇಂದ್ರನ ಪ್ರೇರಣೆಯಿಂದ ಮಾನವರಿಗೆ ಯಜ್ಞವನ್ನು ಮಾಡಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದುದು 36

6. ನಾರದರ ಆಜ್ಞೆಯಂತೆ ಮರುತ್ತನು ಸಂವರ್ತನನ್ನು ಸಂಪರ್ಕಿಸಿದ 42

7. ಸಂವರ್ತ-ಮರುತ್ತರ ಸಂಭಾಷಣೆ. ಸಂವರ್ತನು ಮರುತ್ತನಿಗೆ ಯಜ್ಞವನ್ನು ಮಾಡಿಸಲು ಒಪ್ಪಿದುದು. 50

8. ಸಂವರ್ತನಿಂದ ಹಿರಣ್ಯಪ್ರಾಪ್ತಿಗಾಗಿ ಮರುತ್ತನಿಗೆ ಮಹಾದೇವನ ಸ್ತೋತ್ರೋಪದೇಶ. ಮರುತ್ತಿನಿಂದ ಧನದ ಪ್ರಾಪ್ತಿ. ಮರುತ್ತನ ಐಶ್ವರ್ಯವನ್ನು ಕಂಡು ಬೃಹಸ್ಪತಿಯ ಚಿಂತೆ 57

9. ಬೃಹಸ್ಪತಿಯು ಇಂದ್ರನ ಬಳಿ ತನ್ನ ಚಿಂತೆಯ ಕಾರಣವನ್ನು ಹೇಳಿದುದು. ಇಂದ್ರನ ಆದೇಶದಂತೆ ಅಗ್ನಿದೇವನು ಮರುತ್ತನ ಬಳಿ ಸಾಗಿದ. ಸಂವರ್ತನನ್ನು ಕಂಡ ಅಗ್ನಿಯು ಹೆದರಿ ಇಂದ್ರನ ಬಳಿ ಬಂದು ಬೃಹತ್ತೇಜಸ್ಸಿನ ಮಹತ್ವವನ್ನು ತಿಳಿಸಿದುದು 68

10. ಇಂದ್ರನು ಗಂಧರ್ವರಾಜನನ್ನು ಕಳುಹಿಸಿ ಹೆದರಿಸಿದುದು. ಸಂವರ್ತನು ಮಂತ್ರಬಲದಿಂದ ಇಂದ್ರಾದಿದೇವತೆಗಳನ್ನು ಕರೆಸಿ ಯಜ್ಞವನ್ನು ಸಂಪೂರ್ಣಗೊಳಿಸಿದುದು 81

11. ಶ್ರೀಕೃಷ್ಣನು ಚಿಂತಾಗ್ರಸ್ತನಾದ ಯುಧಿಷ್ಠಿರನಿಗೆ ಇಂದ್ರನಿಂದ ವೃತ್ರಾಸುರನ ವಧೆಯ ಕ್ರಮವನ್ನು ತಿಳಿಸಿ ಸಮಾಧಾನ ಪಡಿಸಿದುದು 95

12. ಮನಸ್ಸನ್ನು ಜಯಿಸಲು ಶ್ರೀಕೃಷ್ಣನಿಂದ ಯುಧಿಷ್ಠಿರನಿಗೆ ಉಪದೇಶ 100

13. ಶ್ರೀಕೃಷ್ಣನು ಧರ್ಮರಾಜನಿಗೆ ಅಹಂಕಾರ, ಮಮಕಾರವನ್ನು ಬಿಡಲು ಹೇಳುವುದು. ಕಾಮಗೀತೆಯ ಉಲ್ಲೇಖ. ಯಜ್ಞ ಮಾಡಲು ಯುಧಿಷ್ಠಿರನಿಗೆ ಪ್ರೇರಣೆ 104

14. ಋಷಿಗಳು ಉಪದೇಶಿಸಿ ಅದೃಶ್ಯರಾದುದು. ಭೀಷ್ಮರೇ ಮೊದಲಾದವರಿಗೆ ಔರ್ಧ್ವದೇಹಿಕ ವಿಧಿಗಳನ್ನು ಪೂರೈಸಿದ ಧರ್ಮರಾಜನು ಹಸ್ತಿನಾವತಿಗೆ ಪ್ರವೇಶಿಸಿದುದು 110

15. ವೈಶಂಪಾಯನರಿಂದ ಕುರುವಿಜಯದ ಬಳಿಕ ಹಸ್ತಿನಾಪುರದಲ್ಲಿ ಕೃಷ್ಣಾರ್ಜುನರು ವಿಹರಿಸಿದ ಪ್ರಕಾರದ ವರ್ಣನೆ. ಕೃಷ್ಣನು ಅರ್ಜುನನಿಗೆ ತನ್ನ ದ್ವಾರಕೆಗೆ ಹೊರಡುವ ಅಭಿಪ್ರಾಯವನ್ನು ಯುಧಿಷ್ಠಿರನಿಗೆ ತಿಳಿಸಲು ಹೇಳಿದುದು 114

16. ಅರ್ಜುನನು ಕೃಷ್ಣನ ಬಳಿ, ಹಿಂದೆ ಉಪದೇಶ ಮಾಡಿದ ಗೀತೆಯ ಅರ್ಥವನ್ನು ಪುನಃ ಉಪದೇಶಿಸಲು ಪ್ರಾರ್ಥಿಸಿದುದು. ಕೃಷ್ಣನು ಅರ್ಜುನನಿಗೆ ತನಗೆ ಬ್ರಾಹ್ಮಣನು ಹೇಳಿದ ಸಿದ್ಧರು ಮತ್ತು ಕಾಶ್ಯಪರ ಸಂವಾದವನ್ನು ಅನುವಾದಿಸಿದುದು 125

17. ಬ್ರಾಹ್ಮಣನು ಕೃಷ್ಣನನ್ನು ಕುರಿತು ಸಕಲ ಪ್ರಾಣಿಗಳ ಜನನ-ಮರಣಾದಿ ಪ್ರತಿಪಾದಕವಾದ ಸಿದ್ಧ-ಕಾಶ್ಯಪರ ಸಂವಾದವನ್ನು ಅನುವಾದಿಸಿದುದು 135

18. ಬ್ರಾಹ್ಮಣನು ಕೃಷ್ಣನನ್ನು ಕುರಿತು ಜೀವನ ಗರ್ಭಪ್ರವೇಶ, ಕರ್ಮಫಲದ ಅನಿವಾರ್ಯತೆ, ಸಂಸಾರ ದಾಟುವ ಉಪಾಯಗಳನ್ನು ಕಾಶ್ಯಪ-ಸಿದ್ಧಪುರುಷರ ಸಂವಾದದ ಉಲ್ಲೇಖದ ಮೂಲಕ ತಿಳಿಸಿದುದು 146

19. ಕೃಷ್ಣನು ಅರ್ಜುನನಿಗೆ ಮಾಡಿದ ಮೋಕ್ಷಸಾಧನ ಮೊದಲಾದವುಗಳನ್ನು ಪ್ರತಿಪಾದಿಸುವ ಸಿದ್ಧ-ಕಾಶ್ಯಪರ ಸಂವಾದರೂಪವಾದ ಅನುಗೀತೆಯ ಉಪದೇಶ 154

20. ಕೃಷ್ಣನು ಅರ್ಜುನನಿಗೆ ಅನುಗೀತೆಯ ರಹಸ್ಯವನ್ನು ಹೇಳಿದುದು 167

21. ಕೃಷ್ಣನು ಅರ್ಜುನನನ್ನು ಕುರಿತು ಭೂತ-ಪ್ರಾಣಾದಿ ಸೃಷ್ಟಿ ಮೊದಲಾದವುಗಳನ್ನು ಪ್ರತಿಪಾದಿಸುವ ಬ್ರಾಹ್ಮಣದಂಪತಿಗಳ ಸಂವಾದವನ್ನು ಅನುವಾದಿಸಿದುದು 170

22. ಕೃಷ್ಣನು ಅರ್ಜುನನಿಗೆ ಹತ್ತು ಇಂದ್ರಿಯಗಳ ಗುಣಾದಿಗಳನ್ನು ಪ್ರತಿಪಾದಿಸುವ ಬ್ರಾಹ್ಮಣದಂಪತಿಗಳ ಸಂವಾದವನ್ನು ಹೇಳಿದುದು 178

23. ಕೃಷ್ಣನು ಅರ್ಜುನನನ್ನು ಕುರಿತು ಘ್ರಾಣ ಮೊದಲಾದ ಇಂದ್ರಿಯ ಗುಣಗಳನ್ನು ಪ್ರತಿಪಾದಿಸುವ ಬ್ರಾಹ್ಮಣ ದಂಪತಿಗಳ ಸಂವಾದವನ್ನು ಅನುವಾದಿಸಿದುದು 186

24. ಕೃಸ್ಣನು ಅರ್ಜುನನಿಗೆ ಪ್ರಾಣಾಪಾನಾದಿಗಳ ಸಂವಾದವನ್ನು ಬ್ರಾಹ್ಮಣ ದಂಪತಿಗಳ ಸಂವಾದದ ಮೂಲಕ ಅನುವಾದಿಸಿದುದು. ಅಲ್ಲೂ ವಾಯುಗಳು ಶ್ರೇಷ್ಠವೆಂದು ಬ್ರಹ್ಮನು ನಿರ್ಣಯ ಮಾಡಿದ ಪ್ರಸಂಗ 193

25. ಕೃಷ್ಣನು ಅರ್ಜುನನಿಗೆ, ಬ್ರಾಹ್ಮಣನು ಬ್ರಾಹ್ಮಣಿಯನ್ನು ಕುರಿತು ಹೇಳಿದ ಸೃಷ್ಟ್ಯಾದಿ ಪ್ರತಿಪಾದಕವಾದ ನಾರದ ಮತ್ತು ದೇವತಮನ ಸಂವಾದವನ್ನು ಉಪದೇಶಿಸಿದುದು 201

26. ಕೃಷ್ಣನು ಅರ್ಜುನನನ್ನು ಕುರಿತು ಕರ್ತೃ-ಕರ್ಮ ಮೊದಲಾದವುಗಳನ್ನು ಪ್ರತಿಪಾದಿಸುವ ಬ್ರಾಹ್ಮಣದಂಪತಿಗಳ ಸಂವಾದವನ್ನು ಅನುವಾದಿಸಿದುದು 207

27. ಕೃಷ್ಣನು ಅರ್ಜುನನಿಗೆ ಚತುರ್ಮುಖ ಬ್ರಹ್ಮನಿಂದ ಒಂದೇ ಶಬ್ದದಿಂದ ಪರಬ್ರಹ್ಮನನ್ನು ಉಪದೇಶಿಸಲಾಗಿ ದೇವರ್ಷಿ ಮೊದಲಾದ ಸಾಧಕರಿಗೆ ತಮ್ಮ ತಮ್ಮ ಯೋಗ್ಯತೆಗನುಗುಣವಾಗಿ ಬೇರೆ ಬೇರೆ ಅರ್ಥಗಳಿಂದ ತಿಳಿಯಲ್ಪಟ್ಟನು ಎಂಬ ವಿಚಾರವು ಬ್ರಾಹ್ಮಣದಂಪತಿಗಳ ಸಂವಾದದ ಮೂಲಕ ಉಪದೇಶಿಸಿದುದು 212

28. ಕೃಷ್ಣನು ಅರ್ಜುನನನ್ನು ಕುರಿತು ವಿದ್ಯಾಬ್ರಹ್ಮರಿಗೆ ಅರಣ್ಯತ್ವವನ್ನು ನಿರೂಪಣೆ ಮಾಡುವ ಬ್ರಾಹ್ಮಣ ದಂಪತಿಗಳ ಸಂವಾದವನ್ನು ಅನುವಾದಿಸಿದುದು 218

29. ಕೃಷ್ಣನು ಅರ್ಜುನನನ್ನು ಕುರಿತು ಯಾಗೀಯ ಹಿಂಸೆಯು ಅಧರ್ಮವಾಗುವುದಿಲ್ಲ ಎಂದು ಪ್ರತಿಪಾದಿಸಲು ಅಧ್ವರ್ಯು ಮತ್ತು ಯತಿ ಎಂಬ ವ್ಯಕ್ತಿಗಳಿಗೆ ನಡೆದ ಸಂವಾದವನ್ನು ಅನುವಾದಿಸುತ್ತಾನೆ 224

30. ಬ್ರಾಹ್ಮಣನು ತನ್ನ ಪತ್ನಿಯನ್ನು ಕುರಿತು ಹಿಂಸೆ ಮಾಡಬಾರದೆಂಬ ವಿಷಯದಲ್ಲಿ ಮಹರ್ಷಿಗಳ ಮಾತುಗಳನ್ನು ಪ್ರಮಾಣವನ್ನಾಗಿ ಹೇಳಲು,

ಪರಶುರಾಮನ ಚರಿತ್ರೆಯನ್ನು ಹೇಳಿದುದು. ಪರಶುರಾಮನು ಕಾರ್ತವೀರ್ಯನನ್ನು ಸಂಹರಿಸಿದ ಬಳಿಕ ಅವನ ಬಂಧುಗಳು ಜಮದಗ್ನಿಯನ್ನು ಸಂಹರಿಸಿದುದು. ಅದರಿಂದ ಕ್ರುದ್ಧನಾದ ಪರಶುರಾಮನು ಇಪ್ಪತ್ತೊಂದು ಬಾರಿ ಭೂಮಂಡಲವನ್ನು ಸಂಚರಿಸಿ, ಕ್ಷತ್ರಿಯರನ್ನು ಸಂಹರಿಸುತ್ತಿರಲು ಪರಶುರಾಮನ ಪಿತೃಗಳು ರಾಮನನ್ನು ಸಾಂತ್ವನಗೊಳಿಸಿದ ಪ್ರಸಂಗವನ್ನು ಕೃಷ್ಣನು ಅರ್ಜುನನಿಗೆ ಉಪದೇಶಿಸಿದುದು 233

31. ಪರಶುರಾಮನನ್ನು ಕುರಿತು ಪಿತಾಮಹರು ಕ್ಷತ್ರಿಯ ವಧೆಯಿಂದ ನಿವೃತ್ತನಾಗು ಎಂದು ಹೇಳಲು ಅಲರ್ಕೋಪಾಖ್ಯಾನವನ್ನು ಹೇಳಿದುದು. ಇದನ್ನು ಕೇಳಿಸಿಕೊಂಡ ಪರಶುರಾಮನು ಯುದ್ಧದಿಂದ ನಿವೃತ್ತನಾದುದು 238

32. ಬ್ರಾಹ್ಮಣನು ಬ್ರಾಹ್ಮಣಿಗೆ ಕಾಮ-ಕ್ರೋಧಗಳನ್ನು ಬಿಟ್ಟು ಭಗವಂತನನ್ನು ಚಿಂತಿಸಬೇಕು. ಇದೇ ಪರಮಪುರುಷಾರ್ಥ ಎಂದು ತಿಳಿಸಲು ಅಂಬರೀಶ ಹಾಡಿದ ಆಧ್ಯಾತ್ಮಿಕ ಸ್ವಾರಾಜ್ಯಗೀತೆಯನ್ನು ಉಪದೇಶಿಸಿದುದು 246

33. ಬ್ರಾಹ್ಮಣನು ತನ್ನ ಪತ್ನಿಗೆ ಮಮತೆಯನ್ನು ತ್ಯಾಗ ಮಾಡಲು ದೃಷ್ಟಾಂತವಾಗಿ ಬ್ರಾಹ್ಮಣ-ಜನಕಸಂವಾದವನ್ನು ಹೇಳಿದುದು 249

34. ಬ್ರಾಹ್ಮಣನು ಬ್ರಾಹ್ಮಣಿಗೆ ತನ್ನ ಮಹಿಮೆಯನ್ನು ತೋರಿಸಿದುದು 256

35. ಕೃಷ್ಣನು ಅರ್ಜುನನಿಗೆ ಬ್ರಾಹ್ಮಣ-ಬ್ರಾಹ್ಮಣಿಶಬ್ದಗಳಿಂದ ನಿರ್ದಿಷ್ಟವಾದ ಬುದ್ಧಿ ಮತ್ತು ಮನಸ್ಸುಗಳ ವಿಚಾರವನ್ನು ಹೇಳಿದುದು. 259

36. ಕೃಷ್ಣನು ಅರ್ಜುನನಿಗೆ ಪರಬ್ರಹ್ಮಸ್ವರೂಪವನ್ನು ಹೊಂದಲು ಯೋಗ್ಯವಾದ, ಸಾಧನೆಯನ್ನು ಪ್ರತಿಪಾದನೆ ಮಾಡುವ ಗುರು-ಶಿಷ್ಯರ ಸಂವಾದವನ್ನು ಉಪದೇಶಿಸುತ್ತಾನೆ. 262

37. ಚತುರ್ಮುಖ ಬ್ರಹ್ಮನು ಕಶ್ಯಪಾದಿ ಮಹರ್ಷಿಗಳನ್ನು ಕುರಿತು ತಮೋಗುಣದ ಕಾರ್ಯವನ್ನು ನಿರೂಪಿಸಿದುದು. 272

38. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ರಜೋಗುಣದ ಕಾರ್ಯವನ್ನು ನಿರೂಪಿಸಿದುದು 280

39. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಸತ್ವಗುಣದ ಕಾರ್ಯವನ್ನು ನಿರೂಪಿಸಿದುದು 383

40. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಸತ್ವಾದಿಗುಣತ್ರಯವನ್ನು ನಿರೂಪಿಸಿದುದು 287

41. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಮಹತತ್ತ್ವವನ್ನು ನಿರೂಪಿಸಿದುದು 293

42. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಅಹಂಕಾರತತ್ತ್ವವನ್ನು ನಿರೂಪಿಸುತ್ತಾನೆ 296

43. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಅಹಂಕಾರತತ್ತ್ವದಿಂದ ಪಂಚಭೂತ ಮೊದಲಾದ ಸೃಷ್ಟಿಪ್ರಕಾರವನ್ನು ಹೇಳಿದುದು 297

44. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು, ಮನುಷ್ಯರು ಕ್ಷತ್ರಿಯರು ರಜೋಗುಣ ಕಾರ್ಯದ ಬಲವನ್ನು ಪ್ರಧಾನವಾಗಿ ಹೊಂದಿರುವುದರಿಂದ ಸತ್ವಗುಣ ಪ್ರಧಾನರಾದ ಬ್ರಾಹ್ಮಣರನ್ನು ರಕ್ಷಿಸುವುದು ಕರ್ತವ್ಯವಾಗಿದೆ ಎಂದು ಹೇಳುವ ಮೂಲಕ ಬ್ರಾಹ್ಮಣ ಜಾತಿಯ ಶ್ರೇಷ್ಠತ್ವವನ್ನು ಹೇಳಿದುದು. ಇದರಂತೆ ಅಹಿಂಸಾದಿ ಧರ್ಮಗಳನ್ನು ಪ್ರತಿಪಾದಿಸಿದುದು 311

45. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು, ತಮ್ಮ ತಮ್ಮ ಜಾತಿಗಳಲ್ಲಿ ಶ್ರೇಷ್ಠ ವಸ್ತು ಯಾವುದು ಎಂಬುದನ್ನು ಪ್ರತಿಪಾದನೆ ಮಾಡುವ ಮೂಲಕ ಜ್ಞಾನದ ನಿತ್ಯತ್ವವನ್ನು, ಭಗವದ್ಧ್ಯಾನವೇ ಶ್ರೇಯಸ್ಸಾಧನ ಎಂದೂ ನಿರೂಪಿಸಿದುದು 320

46. ಚತುರ್ಮುಖ ಬ್ರಹ್ಮನು ಋಷಿಗಳನ್ನು ಕುರಿತು ಶರೀರವು ಕಾಲಚಕ್ರದಂತೆ ಸರ್ವನಾಶಕವಾಗಿದೆ ಎಂದು ಹೇಳುವ ಮೂಲಕ ಗೃಹಸ್ಥಧರ್ಮವು ಶ್ರೇಯಸ್ಸಾಧನವೆಂದು ನಿರೂಪಿಸಿದುದು. 325

47. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಬ್ರಹ್ಮಚರ್ಯ, ವಾನಪ್ರಸ್ಥ ಧರ್ಮಗಳನ್ನು ನಿರೂಪಣೆ ಮಾಡುವ ಮೂಲಕ ಆ ಧರ್ಮಗಳ ಅನುಷ್ಠಾನವು ಶ್ರೇಯಸ್ಸಾಧನವಾಗಿದೆ ಎಂದು ಹೇಳಿದುದು. ಸಂನ್ಯಾಸಧರ್ಮವನ್ನು ನಿರೂಪಿಸಿದುದು. 332

48. ಚತುರ್ಮುಖ ಬ್ರಹ್ಮನು ಋಷಿಗಳನ್ನು ಕುರಿತು ಸಂನ್ಯಾಸ, ಜ್ಞಾನ, ತಪಸ್ಸುಗಳನ್ನು ಪರಮಪುರುಷಾರ್ಥಸಾಧನ ಎಂದು ಹೇಳಿದುದು 345

49. ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಜೀವಾತ್ಮ-ಪರಮಾತ್ಮರ ಸ್ವರೂಪವನ್ನು ಹೇಳಿದುದು 350

50. ಚತುರ್ಮುಖ ಬ್ರಹ್ಮದೇವರು ಮಹರ್ಷಿಗಳನ್ನು ಕುರಿತು, ಧರ್ಮಪ್ರದರ್ಶನ ಪೂರ್ವಕವಾಗಿ ಅದನ್ನು ಅನುಷ್ಠಾನ ಮಾಡಿದಾಗ ಉಂಟಾಗುವ ಜ್ಞಾನವೇ ಪರಮಪುರುಷಾರ್ಥ ಸಾಧನವಾಗುತ್ತದೆ ಎಂದು ಹೇಳುತ್ತಾ, ದೃಷ್ಟಾಂತವನ್ನು ನೀಡಿದುದು. ಇದರಂತೆ ಕ್ಷೇತ್ರ-ಕ್ಷೇತ್ರಜ್ಞರ ಸಂಬಂಧವನ್ನು ಹೇಳಿದುದು. ಹಾಗೆ ಪೃಥಿವ್ಯಾದಿ ಪಂಚಭೂತಗಳ ಗುಣಗಳನ್ನು ಪ್ರತಿಪಾದಿಸಿದುದು. 360

51. ಕೃಷ್ಣನು ಅರ್ಜುನನನ್ನು ಕುರಿತು ಮುಕ್ತಿಯ ಉಪಾಯವನ್ನು ಹೇಳುವ ಗುರು-ಶಿಷ್ಯ ಸಂವಾದವನ್ನು ಅನುವಾದಿಸುವ ಮೂಲಕ ಕಥಾವಿಸ್ತಾರವನ್ನು ಮುಕ್ತಾಯಗೊಳಿಸಿ, ತನ್ನ ಪಟ್ಟಣಕ್ಕೆ ಹೋಗುವ ಆಕಾಂಕ್ಷೆಯನ್ನು ತಿಳಿಸಿದುದು. ಅರ್ಜುನನು ಶ್ರೀಕೃಷ್ಣನಿಗೆ ಯುಧಿಷ್ಠಿರನ ಅನುಮತಿಯನ್ನು ಕೊಡಿಸುವ ಮೂಲಕ ದ್ವಾರಕೆಗೆ ಹೊರಡಲು ಒಪ್ಪಿದುದು 374

52. ಅನುಗೀತೆಯ ಉಪದೇಶದ ಬಳಿಕ ಕೃಷ್ಣಾರ್ಜುನರು ಹಸ್ತಿನಾವತಿಯನ್ನು ಕುರಿತು ಹೊರಟಿದುದು. ಮಾರ್ಗಮಧ್ಯದಲ್ಲಿ ವ್ಯಾಸ-ನಾರದಾದಿಗಳಿಂದ ಕೃಷ್ಣನ ಮಹಾತ್ಮ್ಯವನ್ನು ಅರ್ಜುನನು ತಿಳಿದುಕೊಂಡಿದುದು. ನಂತರ ಕೃಷ್ಣನು ಅರ್ಜುನನಿಂದ ಸಹಿತನಾಗಿ ಹಸ್ತಿನಾವತಿಗೆ ಆಗಮಿಸಿ, ಧೃತರಾಷ್ಟ್ರಾದಿಗಳಿಗೆ ವಂದಿಸಿ, ಕುಂತಿ-ಧರ್ಮರಾಜಾದಿಗಳ ಅನುಮತಿಯನ್ನು ಪಡೆದು, ದ್ವಾರಕೆಯನ್ನು ಕುರಿತು ಪಯಣ ಬೆಳೆಸಿದುದು 388

53. ಶ್ರೀಕೃಷ್ಣನು ಹಸ್ತಿನಾವತಿಯಿಂದ ದ್ವಾರಕೆಗೆ ತೆರಳುವಾಗ ಮಾರ್ಗಮಧ್ಯದಲ್ಲಿ ಉದಂಕ ಮುನಿಯ ಭೇಟಿಯಾದುದು. ಕೌರವರ ವಿನಾಶವನ್ನು ತಿಳಿದ ಉದಂಕ ಮುನಿಯು ಇದಕ್ಕೆಲ್ಲ ಕೃಷ್ಣನೇ ಕಾರಣನೆಂದು ಶಾಪ ಕೊಡಲು ಹೊರಟಿದುದು. ಅವನನ್ನು ಸಾಂತ್ವನಗೊಳಿಸಲು ತತ್ತ್ವೋಪದೇಶವನ್ನು ಮಾಡಿದುದು 407

54. ಕೃಷ್ಣನು ಉದಂಕರನ್ನು ಕುರಿತು ತನ್ನ ಮಹಿಮೆಯನ್ನು ಹೇಳುವ ಮೂಲಕ ಕೌರವರ ನಾಶಕ್ಕೆ ಕಾರಣವಾದುದು ಕೃಷ್ಣನ ಮಾತಿನ ಉಲ್ಲಂಘನೆ. ಸ್ವಯಂಕೃತ ಅಪರಾಧದಿಂದ ಮರಣೋನ್ಮುಖರಾಗಿದ್ದಾರೆ ಎಂದು ತಿಳಿಸಿದುದು 413

55. ಕೃಷ್ಣನು ಉದಂಕನಿಗೆ ವಿಶ್ವರೂಪವನ್ನು ತೋರಿಸುವ ಮೂಲಕ ಮರುಭೂಮಿಯಲ್ಲಿ ಬಾಯಾರಿಕೆಯಾದಾಗ ನೀರು ಸಿಗಲೆಂದು ವರವನ್ನು ಕೊಟ್ಟಿದುದು. ಕೃಷ್ಣನು ಉದಂಕನಿಗೆ ಅಮೃತವನ್ನು ನೀಡು ಎಂದು ಇಂದ್ರನಿಗೆ ಹೇಳಿದುದು. ಒಂದು ಬಾರಿ ಕಾಡಿನ ಮಧ್ಯದಲ್ಲಿ ಬಾಯಾರಿದ ಉದಂಕನಿಗೆ ಇಂದ್ರನು ಚಂಡಾಲವೇಷದಿಂದ ಆಗಮಿಸಿ, ನೀರನ್ನು ಸ್ವೀಕರಿಸು ಎಂದು

ಪ್ರಾರ್ಥಿಸಿದಾಗ, ಉದಂಕನು ಇಂದ್ರನನ್ನು ಚಂಡಾಲನೆಂದು ಭಾವಿಸಿ, ಅಮೃತಮಯವಾದ ಜಲವನ್ನು ನಿರಾಕರಿಸಿದುದು. ನಂತರ ಚಂಡಾಲ ರೂಪನಾದ ಇಂದ್ರನು ಅದೃಶ್ಯನಾಗಲು ದುಃಖಿತನಾದ ಉದಂಕನನ್ನು ಕುರಿತು ಅಲ್ಲೇ ಇರುವ ಕೃಷ್ಣನು ಇಂದ್ರ ಮಾಡಿದ ವಂಚನೆಯನ್ನು ತಿಳಿಸಿ, ಮರು ಪ್ರದೇಶದಲ್ಲಿ ನೀರು ಸಿಗುವಂತಹ ವರವನ್ನು ನೀಡಿದುದು 419

56. ವೈಶಂಪಾಯನರು ಜನಮೇಜಯರಾಜನಿಗೆ ಉದಂಕೋಪಾಖ್ಯಾನವನ್ನು ಹೇಳಲು ಆರಂಭಿಸಿದುದು. ಉದಂಕನು ಗುರುಸೇವೆಯನ್ನು ಮಾಡಿದ್ದರೂ ಗೌತಮರು ಉದಂಕನಲ್ಲಿ ಸಂತುಷ್ಟರಾಗಿಯೇ ಗುರುಕುಲದಿಂದ ಬಿಡದಿರುವುದು. ಒಂದು ಬಾರಿ ಗೌತಮರ ಶಾಸನದಂತೆ ಕಾಡಿನಿಂದ ಕಟ್ಟಿಗೆಯನ್ನು ತರುವಾಗ ಕಾಷ್ಠದಲ್ಲಿ ಸಿಕ್ಕಿಬಿದ್ದ ತನ್ನ ನೆರೆಕೂದಲನ್ನು ಕಂಡು ಉದಂಕನು ದುಃಖ ಹೊಂದುವುದು. ನಂತರ ತನ್ನ ವೃದ್ಧಾಪ್ಯದಿಂದ ದುಃಖಪಡುತ್ತಿರುವ ಉದಂಕನಿಗೆ ಗುರುಗಳು ಸಮಾಧಾನಪಡಿಸಿ, ಗುರುಪತ್ನಿಯ ಆದೇಶದಂತೆ ಕುಂಡಲವನ್ನು ತರಲು ಸೌದಾಸನನ್ನು ಕುರಿತು ಉದಂಕನು ಹೊರಟಿದುದು 429

57. ಶಾಪದಿಂದ ರಾಕ್ಷಸನಾಗಿರುವ ಸೌದಾಸನ ಬಳಿ ಉದಂಕನು ಸಾಗಿದುದು. ಸೌದಾಸನು ಉದಂಕನನ್ನು ತಿನ್ನಲು ಬಂದಾಗ ಕರ್ತವ್ಯವನ್ನು ಮುಗಿಸಿ ಪುನಃ ಬರುತ್ತೇನೆಂದು ಸಮಾಧಾನ ಪಡಿಸಿದುದು. ಸೌದಾಸನ ಬಳಿ ಕುಂಡಲವನ್ನು ಬೇಡಿದುದು. ಸೌದಾಸನ ಮಾತಿಗನುಗುಣವಾಗಿ ಉದಂಕನು ಅವನ ಪತ್ನಿಯ ಬಳಿ ಹೋಗಿ ಕುಂಡಲವನ್ನು ಬೇಡಿದಾಗ, ಗಂಡನ ಅನುಮತಿಯ ಚಿಹ್ನೆಯನ್ನು ಧರಿಸಿ ಬರುವಂತೆ ಮದಯಂತಿಯು ಹೇಳಿದುದು 438

58. ಉದಂಕನು ಸೌದಾಸನ ಬಳಿ ಚಿಹ್ನೆಯನ್ನು ಸ್ವೀಕರಿಸಿ ಮದಯಂತಿಯಿಂದ ಕುಂಡಲಗಳನ್ನು ಸ್ವೀಕರಿಸಿ ಹೊರಟಿದುದು. ಮಾರ್ಗಮಧ್ಯದಲ್ಲಿ ಹಸಿವೆಯಿಂದ ಬಿಲ್ವವೃಕ್ಷದ ಹಣ್ಣನ್ನು ಸ್ವೀಕರಿಸುವಾಗ ಕುಂಡಲಗಳನ್ನು ಕೃಷ್ಣಾಜಿನದಲ್ಲಿ ಕಟ್ಟಿ ಇಟ್ಟಿದುದು. ಹಣ್ಣುಗಳು ಮರದಿಂದ ಉದುರುವಾಗ ಕುಂಡಲಗಳು ನೆಲದ ಮೇಲೆ ಬಿದ್ದಿದುದು. ನೆಲದಲ್ಲಿ ಬಿದ್ದ ಕುಂಡಲಗಳನ್ನು ಸರ್ಪ ಒಂದು ಅಪಹರಿಸಿ ನಾಗಲೋಕಕ್ಕೆ ಹೋಗಿದುದು. ಉದಂಕನು ಇಂದ್ರನ ಸಹಾಯದಿಂದ ಭೂಮಿಯನ್ನು ಸೀಳಿಕೊಂಡು ನಾಗಲೋಕಕ್ಕೆ ತೆರಳಿ ಅಲ್ಲಿರುವ ಕುದುರೆಯ ಮಾತಿನಂತೆ ಅದರ ಅಪಾನದ ದೇಶವನ್ನು ಊದಿದಾಗ ಅದರಿಂದ ಹೊರಹೊಮ್ಮಿದ ಹೊಗೆಯಿಂದ

ಸರ್ಪಲೋಕವೇ ಕಂಗಾಲಾಗಿ ಉದಂಕನಿಗೆ ಕುಂಡಲವನ್ನು ತಂದು ಒಪ್ಪಿಸಿದುದು. ಬಳಿಕ ಉದಂಕನು ಗುರುಪತ್ನಿಗೆ ಕುಂಡಲವನ್ನು ಕೊಟ್ಟಿದುದು 446

59. ಉದಂಕನಿಗೆ ವರವನ್ನು ನೀಡಿ ಶ್ರೀಕೃಷ್ಣನು ದ್ವಾರಕೆಗೆ ಆಗಮಿಸುವಾಗ ಮಧ್ಯದಲ್ಲಿ ರೈವತ ಪರ್ವತಕ್ಕೆ ಹೋದುದು. ರೈವತ ಮಹೋತ್ಸವದಲ್ಲಿ ಕೃಷ್ಣನು ಭಾಗವಹಿಸಿ ಬಳಿಕ ದ್ವಾರಕೆಗೆ ಆಗಮಿಸಿ, ತಂದೆ-ತಾಯಿಗಳನ್ನು ನಮಸ್ಕರಿಸಿದುದು 459

60. ವಸುದೇವಾದಿಗಳನ್ನು ಕುರಿತು ಕೃಷ್ಣನು ಕುರು-ಪಾಂಡವರ ಯುದ್ಧಪ್ರಕಾರವನ್ನು ನಿರೂಪಿಸಿದುದು. 465

61. ಸಭೆಯಲ್ಲಿ ವಸುದೇವನಿಗೆ ಯುದ್ಧದ ಕಥೆಯನ್ನು ಕೃಷ್ಣನು ಹೇಳುವಾಗ ಅಭಿಮನ್ಯುವಿನ ವಧೆಯ ಕಥೆಯನ್ನು ಹೇಳಲಿಲ್ಲ. ಇದರಿಂದ ಸುಭದ್ರೆಯು ದುಃಖಿತಳಾಗಿ, ಆ ಕಥೆಯನ್ನು ಹೇಳುವಂತೆ ಕೃಷ್ಣನನ್ನು ಪ್ರಚೋದಿಸಿದಳು. ಸುಭದ್ರೆಯ ಮಾತಿನಂತೆ ಅಭಿಮನ್ಯುವಿನ ಮರಣದ ವಾರ್ತೆಯನ್ನು ವಸುದೇವನಿಗೆ ಹೇಳುವಾಗ ಮೋಹದಿಂದ ಸುಭದ್ರೆಯು ಭೂಮಿಯಲ್ಲಿ ಮೂರ್ಛಿತಳಾಗಿ ಬಿದ್ದಳು. ಬಳಿಕ ಕೃಷ್ಣ-ವಸುದೇವರು ಸಂತೈಸಿದರು 473

62. ವಸುದೇವಾದಿಗಳಿಂದ ಅಭಿಮನ್ಯುವಿಗೆ ಶ್ರಾದ್ಧಪ್ರಕ್ರಿಯೆ. ವೇದವ್ಯಾಸರು ಉತ್ತರೆಯನ್ನು, ಅರ್ಜುನನನ್ನು ಸಮಾಧಾನಪಡಿಸಿ, ಯುಧಿಷ್ಠಿರನಿಗೆ ಅಶ್ವಮೇಧ ಯಾಗವನ್ನು ಮಾಡಲು ಹೇಳಿ ಅಂತರ್ಧಾನ ಹೊಂದಿದುದು 482

63. ಯುಧಿಷ್ಠಿರನು ವೇದವ್ಯಾಸದೇವರ ಆದೇಶದಂತೆ ಭೀಮಸೇನನೇ ಮೊದಲಾದವರ ಜೊತೆ ಸಮಾಲೋಚಿಸಿ, ಯಜ್ಞಕ್ಕಾಗಿ ಧನವನ್ನು ತರಬೇಕೆಂದು ಎಲ್ಲರೊಟ್ಟಿಗೆ ಹಿಮಾಲಯದ ತಪ್ಪಲಿಗೆ ಸಾಗಿದುದು 487

64. ಯುಧಿಷ್ಠಿರನು ಹಿಮವತ್‌ಪರ್ವತದ ಬಳಿಗೆ ಸೇನಾ ಸಹಿತವಾಗಿ ಬಂದುದು. ಅಲ್ಲಿರುವ ಬ್ರಾಹ್ಮಣರ ಪ್ರೇರಣೆಯಂತೆ ಉಪವಾಸವೇ ಮೊದಲಾದ ವ್ರತಗಳನ್ನು ಆಚರಿಸಿ ರಾತ್ರಿಯನ್ನು ಕಳೆದುದು 494

65. ಯುಧಿಷ್ಠಿರನು ಬ್ರಾಹ್ಮಣರ ಆದೇಶದಂತೆ ಮಹಾರುದ್ರನನ್ನು, ಭೂತಗಣಗಳನ್ನು ಬಲಿಹರಣಾದಿಗಳಿಂದ ಸಂತೋಷಪಡಿಸಿದುದು. ಭೂಮಿಯನ್ನಗೆದು ಧನರಾಶಿಯನ್ನು ತುಂಬಿಕೊಂಡು, ಹಸ್ತಿನಾವತಿಯ ಕಡೆ ಪ್ರಯಾಣ ಬೆಳೆಸಿದುದು 499

66. ಕೃಷ್ಣನು, ಬಲರಾಮ, ಸುಭದ್ರೆ ಮೊದಲಾದವರಿಂದ ಕೂಡಿಕೊಂಡು
ಪಾಂಡವರು ನಡೆಸುವ ಯಜ್ಞಕ್ಕಾಗಿ ಹಸ್ತಿನಾವತಿಗೆ ಆಗಮಿಸಿದುದು.
ಅದೇ ಪ್ರಸಂಗದಲ್ಲಿ ಉತ್ತರೆಯು ಪರೀಕ್ಷಿತನಿಗೆ ಜನ್ಮ ನೀಡಿದುದು.
ಅಶ್ವತ್ಥಾಮರ ಬ್ರಹ್ಮಶಿರೋಸ್ತ್ರದಿಂದ ಹುಟ್ಟುವ ಸಮಯದಲ್ಲಿ
ಹೆಣವಾಗಿರುವ ಆ ಶಿಶುವನ್ನು ಬದುಕಿಸುವಂತೆ ಕುಂತಿ
ಮೊದಲಾದವರು ಕೃಷ್ಣನ ಬಳಿ ಪ್ರಾರ್ಥಿಸಿದುದು 505

67. ಸುಭದ್ರೆಯು ಕೃಷ್ಣನ ಬಳಿ ಅವನ ಮಹಿಮೆಯನ್ನು ವರ್ಣಿಸುತ್ತಾ
ಶಿಶುವನ್ನು ಬದುಕಿಸು ಎಂದು ಪ್ರಾರ್ಥಿಸಿದುದು. 512

68. ಕೃಷ್ಣನು ಪ್ರಸೂತಿಗೃಹಕ್ಕೆ ತೆರಳಿದುದು. ಉತ್ತರೆಯ ವಿಲಾಪ.
ಮಗನನ್ನು ಬದುಕಿಸಿಕೊಡುವಂತೆ ಅನೇಕ ಪ್ರಕಾರದಿಂದ
ವಿಲಾಪಗೈಯ್ಯುತ್ತಾ ಉತ್ತರೆಯು ಪ್ರಾರ್ಥಿಸಿದುದು 516

69. ಉತ್ತರೆಯ ವಿಲಾಪವನ್ನು ಕೇಳಿಸಿಕೊಂಡ ಕೃಷ್ಣನು ಶಪಥ ಮಾಡುತ್ತಾ
ಪರೀಕ್ಷಿತರಾಜನನ್ನು ಸ್ಪರ್ಶ ಮಾಡಿದುದು. ಪರೀಕ್ಷಿತನು ಜೀವಂತನಾದುದು 522

70. ಕೃಷ್ಣನು ಅಭಿಮನ್ಯುವಿನ ಮಗನಿಗೆ ನಾಮಕರಣವನ್ನು ಮಾಡಿದುದು.
ಈ ಮಧ್ಯದಲ್ಲಿ ಯುಧಿಷ್ಠಿರಾದಿಗಳು ಸ್ವರ್ಣದ ಭಾರವನ್ನು ಹೊತ್ತುಕೊಂಡು
ಹಸ್ತಿನಾಪಟ್ಟಣದ ಬಳಿಗೆ ಆಗಮಿಸಿದುದು. ಅವರನ್ನು ಕೃಷ್ಣನನ್ನು
ಮುಂದಿಟ್ಟುಕೊಂಡು ನಾಗರಿಕರು ಸ್ವಾಗತಿಸಿದುದು 529

71. ಕೃಷ್ಣನು ಪರಿವಾರದವರ ಜೊತೆ ಪಾಂಡವರನ್ನು ಸ್ವಾಗತಿಸಿದುದು.
ಸ್ವರ್ಣಭಾರ ಸಹಿತರಾಗಿ ಪಾಂಡವರು ಹಸ್ತಿನಾವತಿಗೆ ಆಗಮಿಸಿದುದು.
ವ್ಯಾಸ-ಕೃಷ್ಣರು ಧರ್ಮಜನಿಗೆ ಯಾಗ ಮಾಡಲು ಆದೇಶಿಸಿದುದು 534

72. ವೇದವ್ಯಾಸರು ಯುಧಿಷ್ಠಿರನಿಗೆ ಪೃಥಿವಿಯಲ್ಲಿ ಸಂಚರಿಸಲು
ಯಜ್ಞಾಶ್ವವನ್ನು ಬಿಡುವಂತೆ ಪ್ರಚೋದಿಸಿದುದು. ಅದರಂತೆ ಅಶ್ವವನ್ನು
ರಕ್ಷಿಸಲು ಅರ್ಜುನನನ್ನು ನಿಯೋಜಿಸಿದುದು 541

73. ಅರ್ಜುನನು ಸೇನೆಯೊಡನೆ ಯಜ್ಞಾಶ್ವವನ್ನು ರಕ್ಷಿಸಿಕೊಂಡು
ಉತ್ತರ ದಿಕ್ಕಿನೆಡೆ ನಡೆದುದು 547

74. ಅರ್ಜುನನಿಂದ ತ್ರಿಗರ್ತರ ಪರಾಜಯ 554

75. ಪ್ರಾಗ್ಜ್ಯೋತಿಷ ಪುರವನ್ನು ಹೊಂದಿದ ಅರ್ಜುನನು
ಭಗದತ್ತನ ಮಗನಾದ ವಜ್ರದತ್ತನೊಡನೆ ಯುದ್ಧ ಮಾಡಿದ ಪ್ರಸಂಗ 560

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಆಶ್ವಮೇಧಿಕ ಪರ್ವ

೧. ಅಶ್ವಮೇಧ ಪರ್ವ

ಒಂದನೆಯ ಅಧ್ಯಾಯ

ಶೋಕಮಗ್ನನಾದ ಯುಧಿಷ್ಠಿರನಿಗೆ ಧೃತರಾಷ್ಟ್ರನ ಸಾಂತ್ವನ

ವೈಶಂಪಾಯನಃ

ಕೃತೋದಕಂತು ರಾಜಾನಂ ಧೃತರಾಷ್ಟ್ರಂ ಯುಧಿಷ್ಠಿರಃ ।
ಪುರಸೃತ್ಯ ಮಹಾಬಾಹುರುತ್ತತಾರಾಕುಲೇಂದ್ರಿಯಃ ॥೧॥

ವೈಶಂಪಾಯನ– ಜನಮೇಜಯನೇ, ಮಹಾಬಾಹುವಾದ ಯುಧಿಷ್ಠಿರನು ಭೀಷ್ಮರಿಗೆ ಜಲತರ್ಪಣವನ್ನು ನೀಡಿ, ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು, ತಳಮಳಗೊಂಡ ಮನಸ್ಸಿನಿಂದಲೇ ಗಂಗಾನದಿಯಿಂದ ಮೇಲಕ್ಕೆದ್ದನು.

ಉತ್ತೀರ್ಯ ತು ಮಹೀಪಾಲೋ ಬಾಷ್ಪವ್ಯಾಕುಲಲೋಚನಃ ।
ಪಪಾತ ತೀರೇ ಗಂಗಾಯಾ ವ್ಯಾಧವಿದ್ಧ ಇವ ದ್ವಿಪಃ ॥೨॥

ನದಿಯಿಂದ ಮೇಲೆಬಂದ ಮಹಾರಾಜನು ದುಃಖದ ಕಣ್ಣೀರಿನಿಂದ ತುಂಬಿದ ಕಣ್ಣುಗಳುಳ್ಳವನಾಗಿ ಗಂಗಾನದಿಯ ತೀರದಲ್ಲಿ ವ್ಯಾಧನಿಂದ ಹೊಡೆಯಲ್ಪಟ್ಟ ಆನೆಯಂತೆ ಧೊಪ್ಪನೆ ಕುಸಿದು ಬಿದ್ದನು.

ತಂ ಸೀದಮಾನಂ ಜಗ್ರಾಹ ಭೀಮಃ ಕೃಷ್ಣೇನ ಚೋದಿತಃ ।
ಮೈವಮಿತ್ಯಬ್ರವೀಚ್ಚೈನಂ ಕೃಷ್ಣಃ ಪರಬಲಾರ್ದನಃ ॥೩॥

ಶ್ರೀಕೃಷ್ಣನಿಂದ ಪ್ರೇರಿತನಾದ ಭೀಮಸೇನನು ಕುಸಿದು ಬೀಳುತ್ತಿದ್ದ ಧರ್ಮಜನನ್ನು ಹಿಡಿದುಕೊಂಡನು. ಶತ್ರುಸೇನೆಯನ್ನು ಮರ್ದಿಸುವ ಶ್ರೀಕೃಷ್ಣನು ಯುಧಿಷ್ಠಿರನನ್ನು ಕುರಿತು- 'ಯುಧಿಷ್ಠಿರನೇ, ನೀನು ಹೀಗೆ ಅಧೀರನಾಗಬೇಡ' ಎಂದು ಹೇಳಿದನು.

ತಮಾರ್ತಂ ಪತಿತಂ ಭೂಮೌ ಶ್ವಸಂತಂ ಚ ಪುನಃ ಪುನಃ ।
ದದೃಶುಃ ಪಾಂಡವಾ ರಾಜನ್ ಧರ್ಮಪುತ್ರಂ ಯುಧಿಷ್ಠಿರಮ್ ॥೪॥

ಯುಧಿಷ್ಠಿರನಾದರೋ ನೆಲದ ಮೇಲೆ ಬಿದ್ದು ಆರ್ತನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಿದ್ದನು. ಇಂತಹ ಧರ್ಮಪುತ್ರನಾದ ಯುಧಿಷ್ಠಿರನನ್ನು ಅಲ್ಲಿ ನೆರೆದಿರುವ ರಾಜರೆಲ್ಲರೂ ನೋಡಿದರು.

ತಂ ದೃಷ್ಟ್ವಾ ದೀನಮನಸಂ ಗತಸತ್ವಂ ಜನೇಶ್ವರಮ್ ।
ಭೂಯಃ ಶೋಕಸಮಾವಿಷ್ಟಾಃ ಪಾಂಡವಾಃ ಸಮುಪಾವಿಶನ್ ॥೫॥

ದೀನವಾದ ಮನಸ್ಸಿನಿಂದ ಕೂಡಿರುವ, ಸತ್ವಹೀನನಾಗಿರುವ ಆ ಜನೇಶ್ವರನನ್ನು ನೋಡಿ ಪಾಂಡವರೆಲ್ಲರೂ ಪುನಃ ಶೋಕದಿಂದ ಕಳವಳಗೊಂಡವರಾಗಿ ಧರ್ಮರಾಜನ ಬಳಿಯೇ ನಿಂತುಕೊಂಡರು.

ರಾಜಾ ಚ ಧೃತರಾಷ್ಟ್ರಸ್ತಮುಪಾಸೀನಂ ಮಹಾಭುಜಮ್ ।
ವಾಕ್ಯಮಾಹ ಮಹಾಬುದ್ಧಿರ್ಮಹಾಬುದ್ಧಿಂ ಜನೇಶ್ವರಮ್ ॥೬॥

ಪುತ್ರಶೋಕದಿಂದ ಪೀಡಿತನಾಗಿರುವ ಪ್ರಜ್ಞಾಚಕ್ಷುವೆನಿಸಿದ, ಮಹಾಬುದ್ಧಿಶಾಲಿಯಾದ ರಾಜ ಧೃತರಾಷ್ಟ್ರನು ಯುಧಿಷ್ಠಿರನನ್ನು ಕುರಿತು ಹೇಳಿದನು.

ಧೃತರಾಷ್ಟ್ರಃ

ಉತ್ತಿಷ್ಠ ನರಶಾರ್ದೂಲ ಕುರು ಕಾರ್ಯಮನಂತರಮ್ ।
ಕ್ಷತ್ರಧರ್ಮೇಣ ಕೌರವ್ಯ ಜಿತೇಯಮವನಿಸ್ತ್ವಯಾ ॥೭॥

ಧೃತರಾಷ್ಟ್ರ– ನರಶಾರ್ದೂಲನೇ, ಎದ್ದೇಳು. ಮುಂದೆ ಮಾಡಬೇಕಾಗಿರುವ ಕಾರ್ಯವನ್ನು ನಿರೂಪಿಸು. ಕ್ಷತ್ರಧರ್ಮಕ್ಕೆ ಅನುಗುಣವಾಗಿ ನೀನು ಈ ಭೂಮಂಡಲವನ್ನು ಗೆದ್ದುಕೊಂಡಿರುವಿ.

ತಾಂ ಭುಂಕ್ಷ್ವ ಭ್ರಾತೃಭಿಃ ಸಾರ್ಧಂ ಸುಹೃದ್ಭಿಶ್ಚ ಜನೇಶ್ವರ ।
ನ ಶೋಚಿತವ್ಯಂ ಪಶ್ಯಾಮಿ ತ್ವಯಾ ಧರ್ಮಭೃತಾಂ ವರ ॥೮॥

ಧರ್ಮಾತ್ಮರಲ್ಲಿ ಶ್ರೇಷ್ಠನಾದ ಯುಧಿಷ್ಠಿರನೇ, ನೀನು ನಿನ್ನ ಸಹೋದರರೊಡನೆ, ಸ್ನೇಹಿತರೊಡನೆ ಸೇರಿ ಮನೋವಾಂಛಿತವಾದ ಭೋಗಗಳನ್ನು ಅನುಭವಿಸು. ಈ ಸಮಯದಲ್ಲಿ ಶೋಕಪಡಲು ನಿನ್ನಲ್ಲಿ ಯಾವ ಕಾರಣಗಳೂ ಇರುವುದಿಲ್ಲ. ಧರ್ಮವನ್ನು ಅನುಸರಿಸುವವರಲ್ಲಿ ಶ್ರೇಷ್ಠನಾಗಿರುವಿ. ನಿನಗೆ ದುಃಖಪಡಲು ಬೇಕಾದ ಕಾರಣ ಯಾವುದೂ ನನಗೆ ಕಾಣಿಸುತ್ತಿಲ್ಲ.

ಶೋಚಿತವ್ಯಂ ಮಯಾ ಚೈವ ಗಾಂಧಾರ್ಯಾ ಚ ಮಹಾಮತೇ ।
ಯಯೋಃ ಪುತ್ರಶತಂ ನಷ್ಟಂ ಸ್ವಪ್ನಲಬ್ಧಂ ಧನಂ ಯಥಾ ॥೯॥

ಒಂದು ವೇಳೆ ಶೋಕಪಡುವುದಾದರೆ ನಾನು ಮತ್ತು ಗಾಂಧಾರಿಯು ಶೋಕ ಪಡಬೇಕು. ಕಾರಣ ನೂರು ಮಕ್ಕಳನ್ನು ಕಳೆದುಕೊಂಡವರು ನಾವು. ಸ್ವಪ್ನದಲ್ಲಿ ಸಿಕ್ಕಿದ ಐಶ್ವರ್ಯವು ಎಚ್ಚರದಲ್ಲಿ ನಷ್ಟವಾದಂತೆ ಕ್ಷಣಮಾತ್ರದಲ್ಲಿ ಪುತ್ರ ಸಂಪತ್ತಿನಿಂದ ವಿಮುಖರಾಗಿದ್ದೇವೆ.

ಅಶ್ರುತ್ವಾ ಹಿತಕಾಮಸ್ಯ ವಿದುರಸ್ಯ ಮಹಾತ್ಮನಃ ।
ವಾಕ್ಯಾನಿ ಸುಮಹಾರ್ಥಾನಿ ಪರಿತಪ್ತೋಽಸ್ಮಿ ದುರ್ಮತಿಃ ॥೧೦॥

ಉಕ್ತವಾನೇಷ ಮಾಂ ಪೂರ್ವಂ ಧರ್ಮಾತ್ಮಾ ದಿವ್ಯದರ್ಶನಃ ॥೧೧॥

ನಮ್ಮ ಹಿತಚಿಂತಕನಾದ, ಮಹಾತ್ಮನಾದ ವಿದುರನ ಅರ್ಥಯುಕ್ತವಾದ ಮಹಾವಾಕ್ಯಗಳನ್ನು ಆಗ ಕೇಳದಿದ್ದುದಕ್ಕೆ ಪರಿಣಾಮವಾಗಿ ಇಂದು ದುಃಖಪಡುತ್ತಿದ್ದೇನೆ.

ಮೂರ್ಖನಾಗಿದ್ದೇನೆ. ಭವಿಷ್ಯತ್ತಿನ ಎಚ್ಚರವುಳ್ಳ, ಧರ್ಮಾತ್ಮನಾದ ವಿದುರನು ಹಿಂದೆಯೇ ನನ್ನನ್ನು ಕುರಿತು ಹೀಗೆ ಹೇಳಿದ್ದನು.

ವಿದುರಃ

ದುರ್ಯೋಧನಾಪರಾಧೇನ ಕುಲಂ ತೇ ವಿನಶಿಷ್ಯತಿ ।
ಸ್ಫಿ ಚೇದಿಚ್ಛಸೇ ಕಾಮಂ ಕುಲಸ್ಯ ಕುರು ಮೇ ವಚಃ ।
ಬಧ್ಯತಾಮೇಷ ದುಷ್ಟಾತ್ಮಾ ಮಂದೋ ರಾಜಾ ಸುಯೋಧನಃ ॥೧೨॥

ವಿದುರ– ದುರ್ಯೋಧನನ ಅಪರಾಧದಿಂದ ನಿನ್ನ ಕುಲವೇ ನಾಶ ಹೊಂದುತ್ತದೆ. ಕುರುಕುಲಕ್ಕೆ ಒಳ್ಳೆಯದನ್ನು ಬಯಸುವುದಾದರೆ, ದುಷ್ಟಚೇತನನಾದ, ಮಂದ ಬುದ್ಧಿಯವನಾದ ದುರ್ಯೋಧನನನ್ನು ಕೊಂದುಬಿಡು ಎಂದು ಹೇಳಿದ್ದನು.

ಕರ್ಣಶ್ಚ ಶಕುನಿಶ್ಚೈವ ಮೈನಂ ಪಶ್ಯತು ಕರ್ಹಿಚಿತ್ ।
ದೂತಸಂಪಾತಮಪ್ಯೇಷಾಮಪ್ರಮತ್ತೋ ನಿವಾರಯ ॥೧೩॥

ಕರ್ಣ, ಶಕುನಿಗಳಾದರೋ ದುರ್ಯೋಧನನನ್ನು ಒಮ್ಮೆಯೂ ನೋಡದಂತೆ ಮಾಡು. ಕೌರವ-ಪಾಂಡವರು ಜೂಜಾಡಲು ಒಟ್ಟುಸೇರುವುದನ್ನಾದರೂ ತಡೆ ಎಂದು ಹೇಳಿದ್ದನು.

ಅಭಿಷೇಚಯ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಸ ಪಾಲಯಿಷ್ಯತಿ ವಶೀ ಧರ್ಮೇಣ ಪೃಥಿವೀಮಿಮಾಮ್ ॥೧೪॥

ಧರ್ಮಾತ್ಮನಾದ ಯುಧಿಷ್ಠಿರನಿಗೆ ಪಟ್ಟಾಭಿಷೇಕವನ್ನು ಮಾಡು. ಜಿತೇಂದ್ರಿಯನಾದ ಧರ್ಮಜನು ಧರ್ಮದಿಂದ ಈ ಭೂಮಂಡಲವನ್ನು ಪರಿಪಾಲಿಸುತ್ತಾನೆ.

ಅಥ ನೇಚ್ಛಸಿ ರಾಜಾನಂ ಕುಂತೀಪುತ್ರಂ ಯುಧಿಷ್ಠಿರಮ್ ।
ಮೇಢೀಭೂತಂ ಸ್ವಯಂ ರಾಜ್ಯಂ ಪ್ರತಿಗೃಹ್ಣೀಷ್ವ ಪಾರ್ಥಿವ ॥೧೫॥

ಒಂದುವೇಳೆ ನಿನಗೆ ಕುಂತಿಯ ಮಗನಾದ ಯುಧಿಷ್ಠಿರನಿಗೆ ಪಟ್ಟಾಭಿಷೇಕ ಮಾಡಲು ಮನಸ್ಸಿಲ್ಲದಿದ್ದರೆ ಮೇಟಿಯ ಕಂಬದಂತೆ ನಿಂತು ನೀನೇ ರಾಜ್ಯಭಾರವನ್ನು ಮಾಡು.

ಅನುಜೀವಂತು ಸರ್ವೇ ತ್ವಾಂ ಜ್ಞಾತಯೋ ಜ್ಞಾತಿವರ್ಧನ ॥೧೬॥

ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮಾನವಾದ ವ್ಯವಹಾರವುಳ್ಳ ನಿನ್ನನ್ನು ಜ್ಞಾತಿಗಳು, ಅಣ್ಣ-ತಮ್ಮಂದಿರು, ಬಂಧುಗಳು ಅನುಸರಿಸಿಕೊಂಡು ಜೀವನವನ್ನು ನಿರ್ವಹಿಸಲಿ.

ಧೃತರಾಷ್ಟ್ರಃ

ಏವಂ ಬ್ರುವತಿ ಕೌಂತೇಯ ವಿದುರೇ ದೀರ್ಘದರ್ಶಿನಿ ।
ದುರ್ಯೋಧನಮಹಂ ಪಾಪಮನುವೃತ್ತೋ ವೃಥಾಮತಿಃ ॥೧೭॥

ಧೃತರಾಷ್ಟ್ರ- ಯುಧಿಷ್ಠಿರನೇ, ಹೀಗೆ ದೀರ್ಘದರ್ಶಿಯಾದ ವಿದುರನು ಪದೇ ಪದೇ ಹೇಳುತ್ತಿದ್ದರೂ ವ್ಯರ್ಥವಾದ ಬುದ್ಧಿಯನ್ನು ಹೊಂದಿರುವ ನಾನು ಪಾಪಿಷ್ಟನಾದ ದುರ್ಯೋಧನನನ್ನೇ ಅನುಸರಿಸಿದೆನು.

ಅಶ್ರುತ್ವೈವಾಸ್ಯ ವಾಕ್ಯಾನಿ ಹಿತಾನಿ ಮಧುರಾಣಿ ಚ ।
ಫಲಂ ಪ್ರಾಪ್ಯ ಮಹದ್ ದುಃಖಂ ನಿಮಗ್ನಃ ಶೋಕಸಾಗರೇ ॥೧೮॥

ಧೀರನಾದ ವಿದುರನ ಸುಮಧುರವಾದ, ಹಿತಕರವಾದ ಮಾತುಗಳನ್ನು ಕೇಳದೆ ಅದರ ಫಲವಾಗಿ ಮಹಾದುಃಖವನ್ನು ಹೊಂದಿ ಶೋಕಸಮುದ್ರದಲ್ಲಿಯೇ ಮುಳುಗಿರುವೆ.

ವೃದ್ಧೌ ಹಿ ತೇಽಂಬಾಪಿತರೌ ಪಶ್ಯಾವಾಂ ದುಃಖಿತೌ ನೃಪ ।
ನ ಶೋಚಿತವ್ಯಂ ಭವತಾ ಪಶ್ಯಾಮೀಹ ಜನಾಧಿಪ ॥೧೯॥

ವೃದ್ಧರಾಗಿರುವ ಅತ್ಯಂತ ದುಃಖಿತರಾಗಿರುವ ಈ ನಿನ್ನ ತಂದೆ-ತಾಯಿಗಳನ್ನು ನೋಡು. ಈ ಸಮಯದಲ್ಲಿ ನಮಗೆ ಸಾಂತ್ವನ ಹೇಳಬೇಕಾಗಿರುವ ನೀನು ಖಂಡಿತವಾಗಿಯೂ ದುಃಖವನ್ನು ಪಡಬಾರದು. ಕರ್ತವ್ಯವನ್ನು ಆಚರಿಸಿದ ನಿನ್ನ ಈ ದುಃಖಕ್ಕೆ ಕಾರಣವೇನೆಂಬುದೇ ನನಗೆ ತಿಳಿಯದಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಪ್ರಥಮೋಧ್ಯಾಯಃ ॥
॥ ಆಶ್ವಮೇಧಪರ್ವಣಿ ಪ್ರಥಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

(ಅಧ್ಯಾಯಃ ೩೦, ಶ್ಲೋಕ ೧-೪೮)

ಅಥ ಕೃಷ್ಣಮನುಸ್ಮೃತ್ಯ ಭೀಷ್ಮೇ ಸ್ವಾಂ ವಸುತಾಂ ಗತೇ ।
ಕೃತ್ವಾ ಕಾರ್ಯಾಣಿ ಸರ್ವಾಣಿ ಗಂಗಾಮಾಶ್ವಾಸ್ಯ ದುಃಖಿತಾಮ್ ॥

ಆಶ್ವಾಸಿತಶ್ಚ ಕೃಷ್ಣಾಭ್ಯಾಂ ಧರ್ಮಜೋ ದುಃಖಿತಃ ಪುನಃ ।
ಪರಾಶರಸುತೇನೋಕ್ತಃ ಕೃಷ್ಣೇನಾನಂತರಾಧಸಾ ॥

ಪಾಂಡವರಿಗೆ ಧರ್ಮಗಳನ್ನು ಉಪದೇಶಿಸಿದ ಬಳಿಕ ಭೀಷ್ಮ ಕೃಷ್ಣನನ್ನು ಧ್ಯಾನಿಸಿ, ತನ್ನ ವಸುರೂಪವನ್ನು ಸೇರಿದಾಗ ಧರ್ಮರಾಜ ಅವನಿಗೆ ಎಲ್ಲ ಉತ್ತರಕ್ರಿಯೆಗಳನ್ನೂ ಮಾಡಿ ದುಃಖಿತಳಾದ ಗಂಗೆಯನ್ನು ಶ್ರೀವೇದವ್ಯಾಸ-ಕೃಷ್ಣರ ಮೂಲಕ ಸಾಂತ್ವನ ಮಾಡಿ ತಾನೂ ಕೂಡ ಶ್ರೀವೇದವ್ಯಾಸ-ಕೃಷ್ಣರಿಂದ ಸಾಂತ್ವನ ಪಡೆದ. ಆದರೂ ಪುನಃ ದುಃಖಿತನಾದ. ಆಗ ಪೂರ್ಣಕಾಮರಾದ ವೇದವ್ಯಾಸರು ಹೇಳಿದರು.

ಅಪಾಪೇ ಪಾಪಶಂಕಿತ್ವಾದಶ್ವಮೇಧೈರ್ಯಜಾಚ್ಯುತಮ್ ।
ಕುರು ರಾಜ್ಯಂ ಚ ಧರ್ಮೇಣ ಪಾಲಯಾಪಾಲಕಾಃ ಪ್ರಜಾಃ ॥

'ಪಾಪವಲ್ಲದುದನ್ನು ಪಾಪವೆಂದು ನೀನು ಶಂಕಿಸುತ್ತಿರುವುದರಿಂದ ಅಶ್ವಮೇಧ ಯಾಗಗಳಿಂದ ಹರಿಯನ್ನು ಆರಾಧಿಸು. ಧರ್ಮದಿಂದ ರಾಜ್ಯಭಾರ ಮಾಡು. ರಕ್ಷಕರಿಲ್ಲದ ಪ್ರಜೆಗಳನ್ನು ರಕ್ಷಿಸು'.

ಇತ್ಯುಕ್ತಃ ಸ ತಥಾ ಚಕ್ರೇ ತ್ಯಕ್ತ್ವಾ ಭೋಗಾಂಶ್ಚ ಕೃತ್ಸ್ನಶಃ ।
ಗೋವ್ರತಾದಿವ್ರತೈರ್ಯುಕ್ತಃ ಪಾಲಯಾಮಾಸ ಮೇದಿನೀಮ್ ॥

ವೇದವ್ಯಾಸರು ಹೀಗೆ ಹೇಳಿದಾಗ ಧರ್ಮರಾಜ ಅದರಂತೆಯೇ ಮಾಡಿದ. ಭೋಗಗಳನ್ನು ಪೂರ್ತಿಯಾಗಿ ತೊರೆದು ಗೋವ್ರತ ಮುಂತಾದ ವ್ರತಗಳಿಂದ ಯುಕ್ತನಾಗಿ ಭೂಮಿಯನ್ನಾಳಿದ.

ದದೌ ದೇಯಾನಿ ಮುಖ್ಯಾನಿ ಯಥಾಕಾಮಮಖಂಡಿತಮ್ ।
ನೈವಾರ್ಥೀ ವಿಮುಖಃ ಕಶ್ಚಿದಭೂದ್ ಯೋಗ್ಯಃ ಕದಾಚನ ॥

ಧರ್ಮರಾಜ ನಿರಂತರ ಯಥೇಚ್ಛ ತುಲಾಪುರುಷಾದಿ ಮಹಾದಾನಗಳನ್ನೂ ಮಾಡಿದ. ಯೋಗ್ಯನಾದ ಯಾವ ದ್ರವ್ಯಾರ್ಥಿಯೂ ದ್ರವ್ಯ ಪಡೆಯದೆ ಎಂದೂ ಹಿಂತಿರುಗಿದುದು ಇಲ್ಲ.

ಪ್ರಷ್ಟಾ ಚ ದಾತಾऽಖಿಲರಾಜನಮ್ಯೋ
ಯಷ್ಟಾ ಚ ಧರ್ಮಾತ್ಮಜ ಏವ ತತ್ರ ।
ಬಭೂವ ಪಾಂಡೋರ್ಗೃಹಮಾವಸಂಶ್ಚ
ರಾಜಾಧಿರಾಜೋ ವನಿತಾನಿವೃತ್ತಃ ॥

ರಾಜಾಧಿರಾಜನಾದ ಧರ್ಮರಾಜ ಪಾಂಡುವಿನ ಮನೆಯಲ್ಲಿ ವಾಸಮಾಡುತ್ತಾ, ಸ್ತ್ರೀಭೋಗದಿಂದ ನಿವೃತ್ತನಾಗಿ ಎಲ್ಲ ರಾಜರುಗಳಿಂದ ನಮಸ್ಕಾರ ಸ್ವೀಕರಿಸುವವನೂ, ಪ್ರಜೆಗಳ ಸುಖ-ದುಃಖಗಳನ್ನು ವಿಚಾರಿಸುವವನೂ ದಾನ, ಯಾಗ ಮಾಡುವವನೂ ಆದ.

ಭೀಮಸ್ತು ದೌರ್ಯೋಧನಮೇವ ಸದ್ಮ
ಪ್ರಪೇದಿವಾನೂರ್ಜಿತವೀರ್ಯಲಬ್ಧಮ್ ।
ಕೃಷ್ಣಾಸಹಾಯಃ ಸುರರಾಜಯೋಗ್ಯಾ-
ನಭುಂಕ್ತ ಭೋಗಾನ್ಯುವರಾಜ ಏವ ॥

ಭೀಮ ಉತ್ಕೃಷ್ಟ ಪರಾಕ್ರಮದಿಂದ ಪ್ರಾಪ್ತವಾದ ದುರ್ಯೋಧನನ ಮನೆಯನ್ನು ಹೊಂದಿದ. ಯುವರಾಜನಾಗಿಯೇ ದ್ರೌಪದಿಯೊಂದಿಗೆ ದೇವೇಂದ್ರನಿಗೆ ಯೋಗ್ಯವಾದ ಭೋಗಗಳನ್ನು ಅನುಭವಿಸಿದ.

ಕೃಷ್ಣಾ ಚ ಪಾರ್ಥಾಂಶ್ಚತುರೋ ವಿಹಾಯ ಸುವ್ಯಕ್ತಸಾರಸ್ವತಶುದ್ಧಭಾವಾ ।
ರರಾಜ ರಾಜಾವರಜೇನ ನಿತ್ಯಮನನ್ಯಯೋಗೇನ ಶಿಖೇವ ವಹ್ನೇಃ ॥

ದ್ರೌಪದಿ ಆಗ ಭಾರತೀದೇವಿಯ ವ್ಯಕ್ತ ಹಾಗೂ ಶುದ್ಧವಾದ ಸನ್ನಿಧಾನ ಉಳ್ಳವಳಾಗಿ ನಾಲ್ವರು ಪಾಂಡವರನ್ನೂ ಬಿಟ್ಟು, ಭೀಮನೊಡನೆಯೇ ಸದಾ ಇದ್ದು ಅನ್ಯರ ಸಂಪರ್ಕವಿಲ್ಲದೆ ಬೆಂಕಿಯ ಜ್ವಾಲೆಯಂತೆ ಬೆಳಗಿದಳು.

ಪ್ರೀತ್ಯೈವ ವಿಜ್ಞಾನಯುಜಾऽನ್ಯಪಾರ್ಥೈಃ
ಸಂವಾದತಃ ಪರಿಹೃತಾ ಗತಭಾವಿಕಾಲೇ ।

ಅಪಿ ಸ್ವಕೀಯಂ ಪತಿಮೇವ ಭೀಮ-
ಮವಾಪ್ಯ ಸಾ ಪರ್ಯಚರನ್ಮುದೈವ ॥

ಬೇರೆ ಪಾಂಡವರು ಭೀಮನೊಂದಿಗೆ ಸಹಮತಿಯಿಂದ ದ್ರೌಪದಿ ಭೀಮನಿಗೇ ತಕ್ಕವಳೆಂಬ ವಿಶೇಷ ಜ್ಞಾನಯುಕ್ತವಾದ ಪ್ರೀತಿಯಿಂದಲೇ ದ್ರೌಪದಿಯನ್ನು ಭೀಮನಿಗೆ ಬಿಟ್ಟುಕೊಟ್ಟರು. ಈಗ ಮಾತ್ರವಲ್ಲ, ಭೂತ-ಭವಿಷ್ಯತ್ ಕಾಲಗಳಲ್ಲಿಯೂ ದ್ರೌಪದಿ ತನ್ನ ಪತಿಯೇ ಆದ ಭೀಮನನ್ನು ಹೊಂದಿ ಸಂತೋಷದಿಂದಲೇ ಅವನನ್ನು ಸೇವಿಸಿದಳು.

ರರಾಜ ರಾಜಾವರಜಸ್ತಯಾ ಸ
ದ್ವಿರೂಪಯಾ ಸೋಮಕಕಾಶಿಜಾತಯಾ ।
ಶ್ರಿಯಾ ಭುವಾ ಚೈವ ಯಥಾऽಬ್ಜನಾಭೋ
ನಿಹತ್ಯ ಸರ್ವಾನ್ ದಿತಿಜಾನ್ ಮಹಾಬ್ಧೌ ॥

ಶ್ರೀಹರಿ ಎಲ್ಲ ದೈತ್ಯರನ್ನೂ ಕೊಂದು ಕ್ಷೀರಸಾಗರದಲ್ಲಿ ಶ್ರೀಭೂ ಎಂಬ ಎರಡು ರೂಪಗಳ ಲಕ್ಷ್ಮಿಯೊಡನೆ ಶೋಭಿಸುವಂತೆ ಭೀಮನೂ ಎಲ್ಲ ಶತ್ರುಗಳನ್ನೂ ಸಂಹರಿಸಿ ದ್ರೌಪದಿ-ಕಾಳಿ ಎಂಬ ಎರಡು ರೂಪಗಳ ಭಾರತೀದೇವಿಯೊಡಗೂಡಿ ಬೆಳಗಿದ.

ಸರ್ವೋತ್ತುಂಗೋ ನಾಮತಃ ಪ್ರಾಣವಾಯೋ-
ರಂಶೋ ನಿಶಾಯಾಂ ಗುರುಪುತ್ರಸೂದಿತಃ ।
ಮಾತಾऽಸ್ಯ ದೇವೀತಿ ಚ ರೌಹಿಣೇಯೀ
ಭೀಮಪ್ರಿಯಾऽऽಸೀದ್ಯಾ ಪುರಾಸ್ಯೈವ ರಾಕಾ ॥

ಸರ್ವೋತ್ತುಂಗ ಎಂಬ ಹೆಸರಿನ ಭೀಮಪುತ್ರ, ಮುಖ್ಯಪ್ರಾಣನ ಪುತ್ರನೇ ಆದ ಅಹಂಕಾರಿಕ ಪ್ರಾಣ ಎಂಬ ವಾಯುವಿನ ಅಂಶ. ರಾತ್ರಿಯಲ್ಲಿ ಅಶ್ವತ್ಥಾಮನಿಂದ ಹತನಾದ. ಅವನ ತಾಯಿ ವಸುದೇವನ ಹೆಂಡತಿಯಾದ ರೋಹಿಣಿಯ ಮಗಳು, ದೇವಿ ಎಂದೇ ಅವಳಿಗೆ ಹೆಸರು. ಅವಳು ಹಿಂದೆ ಪೂರ್ಣಿಮೆಗೆ ಅಭಿಮಾನಿನಿಯಾದ ರಾಕಾದೇವಿ. ವಾಯುಪತ್ನಿಯೇ ಆಗಿದ್ದವಳು ಅವಳೂ ಭೀಮನ ಹೆಂಡತಿಯಾಗಿದ್ದಳು.

ಅನ್ಯಾಶ್ಚಾऽಸುರ್ವಾಸುದೇವ್ಯೋ ದಿಶೋ ಯಾ
ಆಪಶ್ಚ ಪೂರ್ವಂ ವಿಂಶತಿರಗ್ರ್ಯರೂಪಾಃ ।

ತಾಭಿರ್ಯುತೋ ದೈವತೈರಪ್ಯಲಭ್ಯಾ-
ನಭುಂಕ್ತ ಭೋಗಾನ್ ವಿಬುಧಾನುಗಾರ್ಚಿತಃ ॥

ಭೀಮನಿಗೆ ಬೇರೆ ಉತ್ತಮರೂಪವತಿಯರಾದ ಇಪ್ಪತ್ತು ವಸುದೇವ ಪುತ್ರಿಯರೂ ಭಾರ್ಯೆಯಾಗಿದ್ದರು. ಅವರು ಹಿಂದೆ ದಿಗಭಿಮಾನಿನಿಯರೂ ಅಬಭಿಮಾನಿನಿಯರೂ ಆಗಿದ್ದರು. ಅವರೊಡಗೂಡಿ ದೇವತೆಗಳಿಂದ ಮತ್ತು ಗಂಧರ್ವಾದಿಗಳಿಂದ ಸೇವಿತನಾಗಿ ದೇವತೆಗಳಿಗೂ ಅಲಭ್ಯವಾದ ಭೋಗಗಳನ್ನು ಭೀಮನು ಭೋಗಿಸಿದ.

ರರಕ್ಷ ಧರ್ಮಾನಖಿಲಾನ್ ಹರೇಃ ಸ
ನಿಧಾಯ ವಿಪ್ರಾನನುಶಾಸ್ಯ ಯುಕ್ತಾನ್ ।
ಸದ್ವೈಷ್ಣವಾನ್ ವಿದುಷಃ ಪಂಚ ಪಂಚ
ಸವೇತನಾನ್ ಗ್ರಾಮಮನು ಸ್ವಕೀಯಾನ್ ॥

ಸದ್ವೈಷ್ಣವರೂ ಪರಸ್ಪರ ಸೌಹಾರ್ದ ಉಳ್ಳವರೂ ತನ್ನವರೂ ಆದ ವಿದ್ವಾಂಸರಾದ ಐದೈದು ಬ್ರಾಹ್ಮಣರನ್ನು ಭೀಮ ಪ್ರತಿ ಗ್ರಾಮಗಳಲ್ಲಿಯೂ ವೇತನ ಸಹಿತರಾಗಿ ನೇಮಿಸಿ ಅವರ ಮೂಲಕ ಏಕಾದಶ್ಯಾದಿ ಸಕಲ ವಿಷ್ಣುಧರ್ಮಗಳನ್ನೂ ಕಾಪಾಡಿದ.

ದಧಾರ ದಂಡಂ ತದವರ್ತಿಷು ಸ್ವಯಂ
ಜಗ್ರಾಹ ಚಾನ್ವೇವ ಮುದಾऽಥ ತದ್ಗಾನ್ ।
ತದ್ವೃತ್ತಮನ್ಯೈರಪಿ ವಿಪ್ರವರ್ಯೈಃ
ಸಂಶೋಧಯನ್ ಸರ್ವಮಸೌ ಯಥಾ ವ್ಯಧಾತ್ ॥

ಆ ಬ್ರಾಹ್ಮಣರ ಆದೇಶದಂತೆ ನಡೆಯದವರಿಗೆ ಭೀಮ ತಾನೇ ಶಿಕ್ಷೆ ವಿಧಿಸುತ್ತಿದ್ದ. ಅನುಕೂಲರಾಗಿ ನಡೆದವರನ್ನು ಸಂತೋಷದಿಂದ ಅನುಗ್ರಹಿಸುತ್ತಿದ್ದ. ಆ ಬ್ರಾಹ್ಮಣರ ನಡತೆಗಳನ್ನೂ ಬೇರೆ ಬ್ರಾಹ್ಮಣೋತ್ತಮರಿಂದ ಪರೀಕ್ಷೆ ಮಾಡಿಸುತ್ತ ಎಲ್ಲ ಧರ್ಮವನ್ನೂ ಯಥಾವತ್ತಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ.

ನಾವೈಷ್ಣವಃ ಕಶ್ಚಿದಭೂತ್ ಕುತಶ್ಚಿ-
ನ್ನೈವಾನ್ಯನಿಷ್ಠೋ ನ ಚ ಧರ್ಮಹಂತಾ ।
ನ ವಿದ್ಯವರ್ತೀ ನ ಚ ದುಃಖಿತೋऽಭೂ-
ನ್ನಾಪೂರ್ಣವಿತ್ತಶ್ಚ ತದೀಯರಾಷ್ಟ್ರೇ ॥

ಭೀಮಸೇನನ ರಾಜ್ಯದಲ್ಲಿ ವಿಷ್ಣುದ್ವೇಷಿ ಯಾರೂ ಎಲ್ಲಿಯೂ ಇರಲಿಲ್ಲ. ಅನ್ಯ ದೇವತೋಪಾಸಕನೂ ಇರಲೇ ಇಲ್ಲ. ಧರ್ಮದ್ರೋಹಿ ಇರಲಿಲ್ಲ. ಶಾಸ್ತ್ರವಿಧಿಯನ್ನು ಉಲ್ಲಂಘಿಸುವವನಿರಲಿಲ್ಲ. ದುಃಖಿತನಿರಲಿಲ್ಲ. ದರಿದ್ರನೂ ಇರಲಿಲ್ಲ.

ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಂ
ತಾಭ್ಯಾಂ ಚ ಭೀಮೇನ ಮುನೀಶ್ವರೈಶ್ಚ ।
ಸಂಶಿಕ್ಷಿತಾನಾಂ ಪ್ರಥಮಾದ್ಯುಗಾಚ್ಚ
ಗುಣಾಧಿಕಃ ಕಲಿರಾಸೀತ್ ಪ್ರಜಾನಾಮ್ ॥

ಪ್ರಜೆಗಳು ಶ್ರೀವೇದವ್ಯಾಸರನ್ನೂ ಶ್ರೀಕೃಷ್ಣನನ್ನೂ ದರ್ಶನ ಮಾಡುತ್ತಿದ್ದರು. ಅವರಿಬ್ಬರಿಂದಲೂ ಭೀಮನಿಂದಲೂ ಶ್ರೇಷ್ಠ ಮುನಿಗಳಿಂದಲೂ ಉಪದೇಶ ಪಡೆಯುತ್ತಿದ್ದರು. ಅದರಿಂದ ಅವರಿಗೆ ಕಲಿಯುಗ ಕೃತಯುಗಕ್ಕಿಂತಲೂ ಗುಣದಲ್ಲಿ ಮೇಲೆನಿಸಿತು.

ಶುಭಂ ಮಹತ್ಸ್ವಲ್ಪಫಲಂ ಕೃತೇ ಹಿ
ವಿಪರ್ಯಯೇಣಾಶುಭಮೇಷ ದೋಷಃ ।
ತದ್ದಿನಮಪ್ಯುಚ್ಚಶುಭಂ ಕೃತಾದ್ಯುಗಾ-
ಚ್ಚಕ್ಕೇ ಕಲಿಂ ಮಾರುತಿರಚ್ಯುತಾಶ್ರಯಾತ್ ॥

ಕೃತಯುಗದಲ್ಲಿ ಮಹಾಪುಣ್ಯ ಕಾರ್ಯಕ್ಕೂ ಅಲ್ಪಪುಣ್ಯಫಲ. ಇದಕ್ಕೆ ವ್ಯತಿರಿಕ್ತವಾಗಿ ಅಲ್ಪದುಷ್ಕರ್ಮಕ್ಕೆ ಅಧಿಕ ದುಷ್ಪಫಲ. ಇದು ಆ ಯುಗದ ದೋಷ. ಭೀಮ ಶ್ರೀಕೃಷ್ಣನ ಅನುಗ್ರಹದಿಂದ ಕಲಿಯುಗವನ್ನು ಈ ದೋಷದಿಂದ ಮುಕ್ತಗೊಳಿಸಿ ಕೃತಯುಗಕ್ಕಿಂತ ಹೆಚ್ಚು ಪುಣ್ಯಪ್ರದವನ್ನಾಗಿ ಮಾಡಿದ.

ಧನಂಜಯಃ ಪ್ರೋದ್ಯತದಂಡ ಆಸೀತ್
ಸದಾऽನ್ಯಚಕ್ರೇಷು ನಿಜಾಗ್ರಜೇರಿತಃ ।
ವಿಭೀಷಯಿತ್ವಾ ನೃಪತೀನ್ ಸರತ್ನಾನ್
ಪದೋರ್ನೃಪಸ್ಯಾಗ್ರಭುವೋ ನ್ಯಪಾತಯತ್ ॥

ಅರ್ಜುನ ಪರರಾಷ್ಟ್ರಗಳಲ್ಲಿ ದಂಡಯಾತ್ರೆ ಮಾಡುವವನಾದ. ಅವನು

ಧರ್ಮರಾಜನ ಆದೇಶಕ್ಕನುಸಾರವಾಗಿ ರತ್ನಯುಕ್ತರಾದ ಪರರಾಜರನ್ನು ಹೆದರಿಸಿಯೇ ಧರ್ಮರಾಜನ ಕಾಲುಗಳ ಮೇಲೆ ಬೀಳಿಸುತ್ತಿದ್ದ.

ಸದೈವ ಕೃಷ್ಣಸ್ಯ ಮುಖಾರವಿಂದಾದ್
ವಿನಿಸ್ಸೃತಂ ತತ್ತ್ವವಿನಿರ್ಣಯಾಮೃತಮ್ ।
ಪಿಬನ್ ಸುತಾದ್ಯಾಧಿಮಸೌ ಕ್ರಮೇಣ
ತ್ಯಜಂಶ್ಚ ರೇಮೇ ವಿರತಾತಿಭೋಗಃ ॥

ಸದಾ ಕೃಷ್ಣನ ಮುಖಾರವಿಂದದಿಂದ ಹೊರಡುವ ತತ್ತ್ವನಿರ್ಣಯವೆಂಬ ಅಮೃತವನ್ನು ಅರ್ಜುನ ಪಾನ ಮಾಡುತ್ತಾ, ಪುತ್ರಾದಿ ಶೋಕಗಳನ್ನು ಕ್ರಮೇಣ ಬಿಟ್ಟು ಅಧಿಕ ಭೋಗಗಳನ್ನು ನಿಲ್ಲಿಸಿ ಸುಖಿಸಿದ.

ದುಶ್ಶಾಸನಸ್ಯಾऽವಸಥಂ ಸುಭದ್ರಾ
ಚಿತ್ರಾಂಗದಾಸಹಿತೋಧ್ಯಾವಸಂಶ್ಚ ।
ಸಚಂದ್ರಿಕಾಕಾಂತಿರನೂನಬಿಂಬೋ
ನಭಸ್ಥಿತಶ್ಚಂದ್ರ ಇವಾತ್ಯರೋಚತ ॥

ಅರ್ಜುನ ಸುಭದ್ರೆ ಮತ್ತು ಚಿತ್ರಾಂಗದೆಯರಿಂದೊಡಗೂಡಿ ದುಶ್ಶಾಸನನ ಮನೆಯಲ್ಲಿ ವಾಸ ಮಾಡುತ್ತಾ, ಚಂದ್ರಿಕೆ ಮತ್ತು ಕಾಂತಿ ಎಂಬ ಇಬ್ಬರು ಪತ್ನಿಯರಿಂದೊಡಗೂಡಿ ಆಕಾಶದಲ್ಲಿನಿಂತ ಪೂರ್ಣಬಿಂಬನಾದ ಚಂದ್ರನಂತೆ ಬಹಳ ಶೋಭಿಸಿದ.

ಸಮಸ್ತಭೃತ್ಯಾಶ್ರಿತವೇತನಾನಾಂ
ಮಾದ್ರೇಯ ಆಸೀತ್ ಪ್ರಥಮಃ ಪ್ರದಾತಾ ।
ಸ ದುರ್ಮುಖಸ್ಯಾऽವಸಥೇऽವಸಚ್ಚ
ಸ ಮದ್ರರಾಜಾತ್ಮಜಯಾऽಗ್ರ್ಯವರ್ತೀ ॥

ಎಲ್ಲ ಭೃತ್ಯರಿಗೂ ಆಶ್ರಿತರಿಗೂ ವೇತನ ನೀಡುವವನು ನಕುಲನಾಗಿದ್ದ. ಅವನು ಅಣ್ಣನ ಆಜ್ಞೆಯಂತೆ ನಡೆಯುತ್ತ ಶಲ್ಯನ ಮಗಳೊಂದಿಗೆ ಧೃತರಾಷ್ಟ್ರಪುತ್ರನಾದ ದುರ್ಮುಖನ ಮನೆಯಲ್ಲಿ ವಾಸಮಾಡಿದ.

ಸಂಧಾನಭೇದಾನುಗತಪ್ರವೃತ್ತಿ-
ಸ್ತಿಷ್ಠಂಶ್ಚ ದುರ್ಮರ್ಷಣಶುಭ್ರಸದ್ಮನಿ ।
ನೃಪಾಂಗರಕ್ಷಃ ಪ್ರಗೃಹೀತಖಡ್ಗ-
ಸ್ತಸ್ಯಾನುಜೋ ಮಾಗಧಕನ್ಯಯಾಽಽಸೀತ್ ॥

ಪರರಾಜ್ಯದಲ್ಲಿ ಸಂಧಿಭೇದಗಳನ್ನು ನೋಡಿಕೊಳ್ಳುವವನು ಸಹದೇವ. ಅವನು ಖಡ್ಗಧಾರಿಯಾಗಿ ಧರ್ಮರಾಜನಿಗೆ ಅಂಗರಕ್ಷಕನೂ ಆಗಿದ್ದ. ಜರಾಸಂಧನ ಮಗಳೊಂದಿಗೆ ಧೃತರಾಷ್ಟ್ರ ಪುತ್ರನಾದ ದುರ್ಮರ್ಷಣನ ಶುಭ್ರವಾದ ಮನೆಯಲ್ಲಿ ವಾಸ ಮಾಡಿದ.

ಸೇನಾಪತಿಃ ಕೃಪ ಆಸೀದ್ಯುಯುತ್ಸುಃ
ಸ ಸಂಜಯೋ ವಿದುರಶ್ಚಾಽಂಬಿಕೇಯಮ್ ।
ಪಾರ್ಥೈರಿತಾಃ ಪರ್ಯಚರನ್ ಸ್ವಯಂ ಚ
ಸರ್ವೇ ಯಥಾ ದೈವತಮಾದರೇಣ ॥

ಕೃಪ ಸೇನಾಧಿಪತಿಯಾಗಿದ್ದ. ಯುಯುತ್ಸು, ಸಂಜಯ ಮತ್ತು ವಿದುರರು ಪಾಂಡವರ ಆದೇಶದಂತೆ ಧೃತರಾಷ್ಟ್ರನನ್ನು ಸೇವಿಸಿದರು. ಪಾಂಡವರೆಲ್ಲರೂ ತಾವೂ ಕೂಡ ಧೃತರಾಷ್ಟ್ರನನ್ನು ದೇವತೆಯಂತೆ ಆದರದಿಂದ ಸೇವಿಸಿದರು.

ದ್ವಿರೂಪಕೃಷ್ಣಪ್ರಹಿತೇಷು ಪಾಂಡುಷು
ಕ್ಷಿತಿಂ ಪ್ರಶಾಸತ್ಸು ನ ಕಶ್ಚನಾಽತುರಃ ।
ನ ಚಾಕ್ರಮಾನ್ಮೃತ್ಯುರಭೂನ್ನ ನಾರ್ಯೋ
ವಿಧರ್ತ್ಯಕಾ ನೋ ವಿಧುರಾ ನರಾಶ್ಚ ॥

ವ್ಯಾಸ-ಕೃಷ್ಣರೆಂದು ಎರಡು ರೂಪಗಳ ಕೃಷ್ಣನಿಂದ ಸ್ಥಾಪಿತರಾದ ಪಾಂಡವರು ಭೂಮಿಯನ್ನು ಆಳುತ್ತಿದ್ದಾಗ ರೋಗಿ ಯಾರೂ ಇರಲಿಲ್ಲ. ಅಕ್ರಮದಿಂದ ಮರಣ ಹೊಂದುತ್ತಿರಲಿಲ್ಲ. ನಾರಿಯರು ವಿಧವೆಯರಾಗುತ್ತಿರಲಿಲ್ಲ. ಪುರುಷರೂ ವಿಧುರರಾಗುತ್ತಿರಲಿಲ್ಲ.

ಶಬ್ದಾದಯಶ್ಚಾಽಸುರತೀವ ಹೃದ್ಯಾ
ನಿಕಾಮವರ್ಷೀ ಚ ಸುರೇಶ್ವರೋಽಭೂತ್ ।

ಪ್ರಜಾ ಅನಾಸ್ಪೃಷ್ಟಸಮಸ್ತತಾಪಾ
ಅನನ್ಯಭಕ್ತ್ಯಾऽಚ್ಯುತಮರ್ಚಯಂತಿ ॥

ಶಬ್ದಾದಿ ವಿಷಯ ಪದಾರ್ಥಗಳು ಅತ್ಯಂತ ಮನೋಹರವಾಗಿದ್ದವು. ಇಂದ್ರನೂ ಚೆನ್ನಾಗಿ ಮಳೆಗರೆಯುತ್ತಿದ್ದ. ಪ್ರಜೆಗಳು ಯಾವುದೇ ತಾಪತ್ರಯದ ಸ್ಪರ್ಶವೂ ಇಲ್ಲದವರಾಗಿ ಅನನ್ಯ ಭಕ್ತಿಯಿಂದ ಅಚ್ಯುತನನ್ನು ಆರಾಧಿಸುತ್ತಿದ್ದರು.

ಪೃಥ್ವೀ ಚ ಗಾವಃ ಸಸರಸ್ವತೀಕಾ
ನಿಕಾಮದೋಹಾ ಅಭವನ್ ಸದೈವ ।
ಅಬ್ಧಾಬ್ಧಿನದ್ಯೋ ಗಿರಿವೃಕ್ಷಜಂಗಮಾಃ
ಸರ್ವೇऽಪಿ ರತ್ನಪ್ರಸವಾ ಬಭೂವುಃ ॥

ಭೂಮಿಯೂ ಗೋವುಗಳೂ ವೇದಗಳೂ ಸದಾ ಯಥೇಚ್ಛ ಹಾಲು ಕೊಡುತ್ತಿದ್ದವು. ಮೋಡ, ಸಮುದ್ರ, ನದಿ, ಬೆಟ್ಟ, ಮರ, ಜಂಗಮ ಪ್ರಾಣಿಗಳು ಎಲ್ಲವೂ ರತ್ನಗಳ ಬೆಳೆಯನ್ನು ಕೊಡುತ್ತಿದ್ದವು.

ಕೃಷ್ಣಾಶ್ರಯಾತ್ ಸರ್ವಮಿದಂ ವಶೇ ತೇ
ವಿಧಾಯ ಸಮ್ಯಕ್ ಪರಿಪಾಯಯಂತಃ ।
ದಿವೀವ ದೇವಾ ಮುಮುದುಃ ಸದೈವ
ಮುನೀಂದ್ರಗಂಧರ್ವನೃಪಾದಿಭಿರ್ವೃತಾಃ ॥

ಪಾಂಡವರು ಕೃಷ್ಣನ ಆಶ್ರಯದಿಂದ ಭೂಮಿ, ನದಿ, ಬೆಟ್ಟಮುಂತಾದ ಎಲ್ಲವನ್ನೂ ತಮ್ಮ ವಶದಲ್ಲಿಟ್ಟುಕೊಂಡು ಚೆನ್ನಾಗಿ ರಾಜ್ಯಪಾಲನೆ ಮಾಡುತ್ತ ಸದಾ ಮುನೀಶ್ವರ, ಗಂಧರ್ವ, ಚಕ್ರವರ್ತಿ ಮುಂತಾದವರಿಂದೊಡಗೂಡಿ ಸ್ವರ್ಗದಲ್ಲಿ ದೇವತೆಗಳಂತೆ ಆನಂದಿಸಿದರು.

ಸಮುಜ್ಜ್ವಲಾ ಪಾಂಡವಕೀರ್ತಿನಾರೀ
ಪದಂ ವಿಧಾಯಾಸುರಪಕ್ಷಮೂರ್ಧಸು ।
ವರಾಭಯೇ ಚೈವ ಸತಾಂ ಕರಾಭ್ಯಾಂ
ಕೃಷ್ಣಪ್ರಸೂತಾ ಜಗದಂಡಮಾವೃಣೋತ್ ॥

ಶ್ರೀವೇದವ್ಯಾಸರ ಮುಖಕಮಲದಿಂದ ಮಹಾಭಾರತ ರೂಪದಲ್ಲಿ ಉದಿಸಿದ ಪಾಂಡವರ ಕೀರ್ತಿನಾರಿ ಉಜ್ವಲವಾಗಿ ಬೆಳಗುತ್ತ, ಅಸುರಪಕ್ಷದವರ ತಲೆಮೇಲೆ ಕಾಲಿಟ್ಟು, ಸಜ್ಜನರ ತಲೆಗಳ ಮೇಲೆ ಎರಡು ಕೈಗಳಿಂದ ವರ ಅಭಯಗಳನ್ನಿಟ್ಟು ಬ್ರಹ್ಮಾಂಡವನ್ನು ವ್ಯಾಪಿಸಿದಳು.

ಪಾತಾಳಪಾದಾಂ ಪೃಥಿವೀನಿತಂಬಾ-
ಮಾಕಾಶಮಧ್ಯಾಂ ಕರಸಂತತಾಶಾಮ್ ।
ಗ್ರಹರ್ಕ್ಷತಾರಾಭರಣದ್ಯುವಕ್ಷಸಂ
ವಿರಿಂಚಲೋಕಸ್ಥಿತಸನ್ಮುಖಾಂಬುಜಾಮ್ ॥

ಕೀರ್ತಿನಾರಿಗೆ ಪಾತಾಲದಲ್ಲಿ ಪಾದಗಳು, ಪೃಥಿವಿಯಲ್ಲಿ ನಿತಂಬ, ಆಕಾಶದಲ್ಲಿ ನಡು, ದಿಕ್ಕುಗಳಲ್ಲೆಲ್ಲ ವ್ಯಾಪಿಸುವ ಕೈಗಳು, ಗ್ರಹ-ನಕ್ಷತ್ರ ತಾರೆಗಳು ಆಭರಣಗಳು. ದ್ಯುಲೋಕದಲ್ಲಿ ಎದೆ. ಬ್ರಹ್ಮಲೋಕದಲ್ಲಿ ಮುಖಕಮಲ.

ವಿಕುಂಠನಾಥಾಭಯಹಸ್ತಮಾದರಾ-
ನ್ಮೂರ್ಧ್ನಾ ವಹಂತೀಂ ವರಭಾರತಾಖ್ಯಾಮ್ ।
ನಿಶಮ್ಯ ತಾಮೀಕ್ಷ್ಯ ಸಮಸ್ತಲೋಕಾಃ
ಪವಿತ್ರಿತಾ ವೇದಿಭವಾಮಿವಾನ್ಯಾಮ್ ॥

ವೈಕುಂಠಮೂರ್ತಿಯ ಅಭಯಹಸ್ತವನ್ನು ಆದರದಿಂದ ತಲೆಯ ಮೇಲೆ ಹೊತ್ತಿದ್ದಾಳೆ, ಶ್ರೇಷ್ಠವಾದ ಭಾರತ ಎಂಬ ಹೆಸರುಳ್ಳ ಪಾಂಡವರ ಕೀರ್ತಿನಾರಿ. ಸಮಸ್ತಲೋಕದ ಜನರು ಯಜ್ಞವೇದಿಕೆಯಿಂದ ಉದಿಸಿದ ದ್ರೌಪದಿಯನ್ನು ನೋಡಿ ಹೇಗೆ ಪವಿತ್ರರಾದರೋ ಹಾಗೇ ಈ ಪಾಂಡವಕೀರ್ತಿನಾರೀ ಸ್ವರೂಪದ ಭಾರತವನ್ನು ಶ್ರವಣ ಮಾಡಿ ಪವಿತ್ರಿತರಾದರು.

ಪ್ರಪಾಲಯತ್ಸ್ವೇವ ಧರಾಂ ಸಕೃಷ್ಣೇ-
ಷ್ವದ್ಧೈವ ಪಾರ್ಥೇಷು ಕಲಿರ್ಬಲಿಶ್ಚ ।
ಸಪಾಪದೈತ್ಯೈ ಕ್ವ ಚ ರಾಷ್ಟ್ರವಿಪ್ಲವಂ
ಸಂಚಕ್ರತುಸ್ತಚ್ಚ್ರುತಮಾಶು ಪಾರ್ಥೈಃ ॥

ಪಾಂಡವರು ಕೃಷ್ಣನೊಡಗೂಡಿ ಭೂಮಿಯನ್ನು ಚೆನ್ನಾಗಿ ಪಾಲಿಸುತ್ತಿರುವಾಗಲೇ ಕಲಿ ಮತ್ತು ಬಲಿ ಎಂಬ ಇಬ್ಬರು ಮಹಾಪಾಪಿ ದೈತ್ಯರು ಕೆಲವೆಡೆ ರಾಷ್ಟ್ರವಿಪ್ಲವ ಮಾಡಿದರು. ಪಾಂಡವರು ಅದನ್ನು ಬೇಗನೆ ಕೇಳಿ ತಿಳಿದರು.

ನೃಪೇಣ ಕೃಷ್ಣೇನ ಚ ಸಾಧು ಚೋದಿತೋ
ಭೀಮಸ್ತದಾ ತೌ ಸಗಣೌ ವಿಜಿತ್ಯ ।
ಬಲಿಂ ಪ್ರವಿದ್ರಾಪ್ಯ ಕಲಿಂ ನಿಬದ್ಧ್ಯ
ಸಮಾನಯತ್ ಕೃಷ್ಣನೃಪೇಂದ್ರಯೋಃ ಪುರಃ ॥

ಧರ್ಮರಾಜನ ಮತ್ತು ಶ್ರೀಕೃಷ್ಣನ ಆದೇಶವನ್ನು ಪಡೆದ ಭೀಮ ಕಲಿ-ಬಲಿಗಳನ್ನು ಪರಿವಾರಸಮೇತರಾಗಿ ಪರಾಭವಗೊಳಿಸಿ ಬಲಿಯನ್ನು ಓಡಿಸಿ, ಕಲಿಯನ್ನು ಬಂಧಿಸಿ ಶ್ರೀಕೃಷ್ಣ-ಯುಧಿಷ್ಠಿರರ ಮುಂದೆ ತಂದು ನಿಲ್ಲಿಸಿದ.

ಪಪ್ರಚ್ಛ ತಂ ಕೃಷ್ಣಪುರೋ ಯುಧಿಷ್ಠಿರ ಉದಾರಧೀಃ ।
ಕಲೇ ಕಿಮಿತಿ ಮೇ ರಾಷ್ಟ್ರಂ ವಿಪ್ಲಾವಯಸಿ ದುರ್ಮತೇ ॥

ಉತ್ತಮ ಬುದ್ಧಿಯುಳ್ಳ ಯುಧಿಷ್ಠಿರ ಶ್ರೀಕೃಷ್ಣನ ಸಮಕ್ಷಮದಲ್ಲಿ ಕಲಿಯನ್ನು ಪ್ರಶ್ನಿಸಿದ. ದುರ್ಬುದ್ಧಿಯವನೇ, ನನ್ನ ರಾಷ್ಟ್ರವನ್ನು ಏಕೆ ವಿಪ್ಲವಗೊಳಿಸುತ್ತಿ ? ಎಂದು.

ಇತ್ಯುಕ್ತ ಆಹ ಕಾಲೋಽಯಂ ದುರ್ಯೋಧನನಿಪಾತನಮ್ ।
ಆರಭ್ಯ ಮಮ ತತ್ರ ತ್ವಂ ಬಲಾದಾಕ್ರಮ್ಯ ತಿಷ್ಠಸಿ ॥

ಧರ್ಮರಾಜ ಹೀಗೆ ಹೇಳಿದಾಗ ಕಲಿ ನುಡಿದ, 'ದುರ್ಯೋಧನನ ಪತನವನ್ನಾರಂಭಿಸಿ ಇದು ನನ್ನ ಕಾಲ. ನೀನು ಬಲಾತ್ಕಾರವಾಗಿ ಆಕ್ರಮಿಸಿ ನಿಂತಿರುವೆ.

ತತೋ ಮಯಾ ಕೃತೋ ರಾಷ್ಟ್ರವಿಪ್ಲವಸ್ತೇ ನರಾಧಿಪ ।
ತಮಾಹ ರಾಜಾ ರಾಜ್ಞಾಂ ಹಿ ಬಲಾದ್ ರಾಜ್ಯಂ ಪ್ರವರ್ತತೇ ॥

ಅಪಿ ಕಾಲಭವಂ ರಾಷ್ಟ್ರಂ ತ್ವದೀಯಂ ಮಾದೃಶೈರ್ನರೈಃ ।
ಹ್ರಿಯತೇ ಬಲವದ್ಭಿರ್ಹಿ ರಾಜ್ಯಾಶಾ ತೇ ಕುತಸ್ತದಾ ॥

'ಅದರಿಂದ, ರಾಜನೇ, ನಾನು ನಿನ್ನ ರಾಷ್ಟ್ರದಲ್ಲಿ ವಿಪ್ಲವ ಮಾಡಿದೆ' ಎಂದು ಕಲಿ ನುಡಿದಾಗ ಧರ್ಮರಾಜನೆಂದ, ರಾಜರ ಬಲದಿಂದಲೇ ರಾಜ್ಯ ನಡೆಯುತ್ತದೆ.

ಅದರಿಂದ ಈ ಕಾಲದಲ್ಲಿರುವ ರಾಷ್ಟ್ರ ನಿನ್ನದಾಗಿರಬಹುದು. ಆದರೆ ಬಲಿಷ್ಠರಾದ ನನ್ನಂಥ ರಾಜರಿಂದ ಅದು ಅಪಹೃತವಾಗುತ್ತದೆ. ಆಗ ನಿನಗೆ ರಾಜ್ಯದ ಆಸೆ ಎಲ್ಲಿಯದು?

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾಭೂದ್ರಾಜಾ ಕಾಲಸ್ಯ ಕಾರಣಮ್ ॥

'ರಾಜ ಕಾಲಕಾರಣನೋ ಕಾಲಕ್ಕೆ ರಾಜ್ಯ ಕಾರಣನೋ ಎಂದು ನಿನಗೆ ಸಂಶಯ ಬೇಡ. ರಾಜನೇ ಕಾಲಕ್ಕೆ ಕಾರಣ'.

ತಮುವಾಚ ಕಲಿಃ ಕಾಲೇ ಮದೀಯೇ ತ್ವಾದೃಶಃ ಕುತಃ ।
ರಾಜಾನಂ ಪೂರ್ವಮಾವಿಶ್ಯ ವಿಪ್ರಾಂಶ್ಚ ಸ್ಯಾಮಹಂ ನೃಪ ॥

ಧರ್ಮರಾಜನಿಗೆ ಕಲಿ ಹೇಳಿದ, 'ರಾಜನೇ, ನನ್ನ ಕಾಲದಲ್ಲಿ ನಿನ್ನಂಥ ರಾಜರೆಲ್ಲಿ? ನಾನು ಮೊದಲಿಗೇ ರಾಜನನ್ನೂ ಬ್ರಾಹ್ಮಣರನ್ನೂ ಪ್ರವೇಶಿಸಿ ಇರುತ್ತೇನೆ.

ವಾಸುದೇವಸಹಾಯೇಷು ತೇಜೋ ಯುಷ್ಮಾಸು ಮೇ ನ ಹಿ ।
ಕ್ವ ರಾಜಾಽಸಾವೃತೇ ಯುಷ್ಮಾನ್ಯೋ ಮಯಾ ನಾಭಿಭೂಯತೇ ॥

ಮದೀಯಕಾಲೇ ಭೂಪಾಲ ವಿಪ್ರವೇದವಿರೋಧಿನಿ ।
ಮದ್ದೃಷ್ಟಿಪಾತೇ ಕ್ವ ಗುಣಾಃ ಕ್ವ ವೇದಾಃ ಕ್ವ ಸುಯುಕ್ತಯಃ ॥

ಕೃಷ್ಣನ ಸಹಾಯ ಉಳ್ಳವರಾದ್ದರಿಂದ ನಿಮ್ಮ ವಿಷಯದಲ್ಲಿ ನನಗೆ ಸಾಮರ್ಥ್ಯವಿಲ್ಲ. ರಾಜನೇ, ಬ್ರಾಹ್ಮಣರಿಗೂ ವೇದಗಳಿಗೂ ವಿರೋಧಿಯಾದ ನನ್ನ ಕಾಲದಲ್ಲಿ ನಿಮ್ಮನ್ನು ಹೊರತುಪಡಿಸಿದರೆ ನನ್ನ ವಶನಾಗದ ರಾಜನೆಲ್ಲಿದ್ದಾನೆ? ನನ್ನ ದೃಷ್ಟಿ ಬಿದ್ದಾಗ ಎಲ್ಲಿ ಗುಣಗಳು? ಎಲ್ಲಿ ವೇದಗಳು? ಮತ್ತೆಲ್ಲಿ ಒಳ್ಳೆಯ ಯುಕ್ತಿಗಳು?'

ಜಗಾದ ನೃಪತಿಃ ಸತ್ಯಂ ಕಲೇ ವಕ್ಷ್ಯನೃತೋಽಪಿ ಸನ್ ।
ಮೋಚಯೇ ತ್ವರ್ತವಚನಾದ್ ಯದಾಽಸ್ಮತ್ಸಂತತೇಃ ಪರಮ್ ॥

ಮಿಲುಂಪಸ್ಯಖಿಲಾನ್ ಧರ್ಮಾನ್ ಕರಂ ತತ್ರಾಪಿ ನೋಽರ್ಪಯ ।
ಸೀಮಾಧಿರ್ಬಹುವಾಕ್ಯಂ ಚ ತುಲಾಮಾನೇ ಚ ಮೇ ಕರಃ ॥

ಧರ್ಮರಾಜನೆಂದ, ಕಲಿಯೇ, ನೀನು ಅಸತ್ಯರೂಪನಾದರೂ ಸತ್ಯವನ್ನೇ ಹೇಳುತ್ತಿರುವೆ. ಸತ್ಯವನ್ನು ನುಡಿದೆಯಾದ್ದರಿಂದ ನಿನ್ನನ್ನು ಬಿಡುತ್ತೇನೆ. ನಮ್ಮ ಸಂತತಿ ನಿಂತ ಬಳಿಕ ನೀನು ಯಾವಾಗ ಎಲ್ಲ ಧರ್ಮಗಳನ್ನೂ ನಾಶಪಡಿಸುವೆಯೋ ಆಗಲೂ ನಮಗೆ ನೀನು ಕಪ್ಪ ಕೊಡಬೇಕು. ಗ್ರಾಮದ ಗಡಿ, ಅಡವಿಟ್ಟ ವಸ್ತು, ಬಹುಜನರ ಸಾಕ್ಷಿವಚನ, ತಕ್ಕಡಿ, ಅಳತೆ ಪಾತ್ರೆ ಇವೇ ನನಗೆ ಕೊಡಬೇಕಾದ ಕಪ್ಪಗಳು.

ನೈವಾತಿಕ್ರಮಮೇತೇಷಾಂ ಕುರು ಸರ್ವಾತ್ಮನಾ ಕ್ವಚಿತ್ ।
ತಮಾಹ ಭಗವಾನ್ ಕೃಷ್ಣೋ ಯಾವತ್ ಪಾಂಡವಸಂತತಿಃ ॥

ತಾವನ್ನ ತೇ ಭವೇಚ್ಚಕ್ತಿಃ ಪ್ರವೃತ್ತಸ್ಯಾಪಿ ಭೂತಳೇ ।
ಪಾಂಡವೇಭ್ಯಃ ಪರಂ ಯಾವತ್ ಕ್ಷೇಮಕಃ ಕ್ರಮವರ್ದ್ಧಿತಾ ॥

'ಇವುಗಳ ಅತಿಕ್ರಮವನ್ನು ಎಲ್ಲಿಯೂ ಸರ್ವಥಾ ಮಾಡಬೇಡ' ಎಂದ ಧರ್ಮರಾಜ. ಶ್ರೀಕೃಷ್ಣನೂ ನುಡಿದ, ಪಾಂಡವರ ಸಂತತಿ ಇರುವಷ್ಟು ಕಾಲ ನೀನು ಭೂಮಿಯಲ್ಲಿ ಪ್ರವೃತ್ತಿ ಮಾಡಿದರೂ ನಿನಗೆ ಸಾಮರ್ಥ್ಯ ಬರಲಾರದು. ಪಾಂಡವರ ಅನಂತರ ಕ್ಷೇಮಕನವರೆಗೆ ಅವರ ಸಂತತಿ ಕ್ರಮವಾಗಿ ಬೆಳೆಯುತ್ತದೆ.

ಕ್ಷೇಮಕಾತ್ ಪರತಃ ಪೂರ್ತಿಂ ಶಕ್ತಿಸ್ತೇ ಯಾಸ್ಯತಿ ಧ್ರುವಮ್ ।
ನ ದ್ರಷ್ಟವ್ಯಂ ಭೂತಳಂ ತೇ ಕುತ ಏವ ಸ್ಪೃಶೇರ್ಭುವಮ್ ॥

ಯಾವತ್ ಪಾರ್ಥಾ ಅಹಂ ಚಾತ್ರ ತತೋ ಭುವಿ ಪದಂ ಕುರು ।
ಇತ್ಯುಕ್ತೋ ವಾಸುದೇವೇನ ಮೋಚಿತೋ ಧರ್ಮಜೇನ ಚ ॥

ತಾನ್ ಪ್ರಣಮ್ಯ ಯಯೌ ಪಾರೇ ಸಮುದ್ರಸ್ಯಾऽಶ್ರಯದ್ ಗುಹಾಮ್।
ಪಾರ್ಥಾಶ್ಚ ಕೃಷ್ಣಸಹಿತಾ ರಕ್ಷಂತಃ ಕ್ಷ್ಮಾಂ ಮುದಂ ಯಯುಃ ॥

'ಕ್ಷೇಮಕನ ಅನಂತರ ನಿನ್ನ ಶಕ್ತಿ ನಿಶ್ಚಯವಾಗಿಯೂ ಪೂರ್ಣ ಬೆಳೆಯುತ್ತದೆ. ಪಾಂಡವರೂ ನಾನೂ ಇಲ್ಲಿ ಇರುವಷ್ಟು ಕಾಲ ನೀನು ಭೂತಲವನ್ನು ನೋಡಲೂ ಕೂಡದು ಎಂದ ಮೇಲೆ ಹೇಗೆ ಸ್ಪರ್ಶಿಸುವಿ? ನಾವು ಹೋದ ಬಳಿಕ ನೀನು ಭೂಮಿಯ ಮೇಲೆ ಕಾಲೂರಬಹುದು'. ಹೀಗೆ ಶ್ರೀಕೃಷ್ಣ ಕಲಿಗೆ ಹೇಳಿದ. ಧರ್ಮರಾಜ ಅವನನ್ನು ಬಿಟ್ಟ. ಅವನು ಅವರನ್ನು ನಮಿಸಿ ಹೊರಟುಹೋದ. ಸಮುದ್ರದ ಆಚೆ ದ್ವೀಪದಲ್ಲಿ

ಒಂದು ಗುಹೆಯನ್ನು ಆಶ್ರಯಿಸಿದ. ಪಾಂಡವರು ಶ್ರೀಕೃಷ್ಣಸಹಿತರಾಗಿ ಭೂಮಿಯನ್ನು ಆಳುತ್ತಾ ಆನಂದಪಟ್ಟರು.

ಏವಂ ಪಾರ್ಥಾನ್ ಪ್ರತಿಷ್ಠಾಪ್ಯ ಶಕ್ರಪ್ರಸ್ಥೇ ತು ಸಾರ್ಜುನಃ ।
ಕ್ರೀಡನ್ ದಿವ್ಯಾಃ ಕಥಾಃ ಪ್ರಾಹ ಪುತ್ರಶೋಕಾಪನುತ್ತಯೇ ॥

ಹೀಗೆ ಶ್ರೀಕೃಷ್ಣ ಪಾಂಡವರನ್ನು ಸ್ಥಾಪಿಸಿ ಅರ್ಜುನನೊಡಗೂಡಿ ಇಂದ್ರಪ್ರಸ್ಥದಲ್ಲಿ ವಿಹರಿಸುತ್ತಾ ಅವನ ಪುತ್ರಶೋಕ ಪರಿಹಾರಕ್ಕಾಗಿ ದಿವ್ಯವಾದ ಕಥೆಗಳನ್ನು ಹೇಳಿದ.

★ ★ ★ ★ ★

ಎರಡನೆಯ ಅಧ್ಯಾಯ

ಶ್ರೀಕೃಷ್ಣ ವ್ಯಾಸರೂಪಗಳಿಂದ ಯುಧಿಷ್ಠಿರನಿಗೆ ಸಾಂತ್ವನ

ವೈಶಂಪಾಯನಃ

ಏವಮುಕ್ತಸ್ತು ರಾಜಾಽಸೌ ಧೃತರಾಷ್ಟ್ರೇಣ ಧೀಮತಾ ।
ತೂಷ್ಣೀಂ ಬಭೂವ ಮೇಧಾವೀ ತಮುವಾಚಾಥ ಕೇಶವಃ ॥೧॥

ವೈಶಂಪಾಯನ– ಜನಮೇಜಯನೇ, ಬುದ್ಧಿವಂತನಾದ ಧೃತರಾಷ್ಟ್ರನು ಧರ್ಮರಾಜನಿಗೆ ಹೀಗೆ ಹೇಳಿದ ನಂತರವೂ ಮೇಧಾವಿಯಾದ ಯುಧಿಷ್ಠಿರನು ಯಾವ ಮಾತನ್ನೂ ಆಡದೆ ಸುಮ್ಮನೆ ಕುಳಿತಿದ್ದನು. ಈ ಸಮಯದಲ್ಲಿ ಯುಧಿಷ್ಠಿರನನ್ನು ಕುರಿತು ಕೇಶವನು ಹೀಗೆ ಹೇಳಿದನು.

ಶ್ರೀಭಗವಾನ್

ಅತೀವ ಮನಸಾ ಶೋಕೋ ಧ್ರಿಯಮಾಣೋ ನರಾಧಿಪ ।
ಸಂತಾಪಯತಿ ಚೈತಸ್ಯ ಪೂರ್ವಪ್ರೇತಾನ್ ಪಿತಾಮಹಾನ್ ॥೨॥

ಶ್ರೀಭಗವಾನ್– ಜನೇಶ್ವರನೇ, ಸತ್ತು ಹೋದವರ ವಿಷಯದಲ್ಲಿ ಮಾಡುವ ಅತಿಯಾದ ಶೋಕವು ಈ ಮೊದಲೇ ಮರಣ ಹೊಂದಿರುವವರ ಪಿತಾಮಹರಿಗೆ ಬಹಳವಾದ ಸಂತಾಪವನ್ನು ಉಂಟುಮಾಡುತ್ತದೆ.

ಯಜಸ್ವ ವಿವಿಧೈರ್ಯಜ್ಞೈರ್ಬಹುಭಿಶ್ಚಾಪ್ತದಕ್ಷಿಣೈಃ ।
ದೇವಾಂಸ್ತರ್ಪಯ ಸೋಮೇನ ಸ್ವಧಯಾ ಚ ಪಿತೄನಪಿ ।
ಅತಿಥೀನನ್ನಪಾನೇನ ಕಾಮೈರನ್ಯೈರಕಿಂಚನಾತ್ ॥೩॥

ಆದ್ದರಿಂದ ಹೆಚ್ಚು ಶೋಕ ಪಡಬೇಡ. ಬಹುದಕ್ಷಿಣೆಗಳುಳ್ಳ ನಾನಾ ಪ್ರಕಾರವಾದ ಯಜ್ಞಗಳನ್ನು ಆಚರಿಸು. ಸೋಮರಸದ ಮೂಲಕವಾಗಿ ದೇವತೆಗಳನ್ನು ಸಂತೋಷಪಡಿಸು. ಸ್ವಧಾರಸದ ಮೂಲಕವಾಗಿ ಪಿತೃಗಳನ್ನೂ ತೃಪ್ತಿಪಡಿಸು. ಅತಿಥಿಗಳನ್ನು ಅನ್ನ-ಪಾನಗಳಿಂದ, ದರಿದ್ರರನ್ನು ಅವರಿಗೆ ಬೇಕಾದ ಪದಾರ್ಥಗಳನ್ನು ಕೊಡುವುದರಿಂದ ತೃಪ್ತಿಗೊಳಿಸು.

ತ್ವದ್ವಿಧಸ್ಯ ಮಹಾಬುದ್ಧೇ ನೈತದದ್ಯೋಪಪದ್ಯತೇ ।
ವಿದಿತಂ ವೇದಿತವ್ಯಂ ತೇ ಕರ್ತವ್ಯಮಪಿ ತೇ ಕೃತಮ್ ॥೪॥

ಮಹಾಬುದ್ಧಿವಂತನಾದ ಧರ್ಮಜನೇ, ನಿನಗೆ ಈ ರೀತಿಯಾದ ಶೋಕವು ಸಲ್ಲದು. ತಿಳಿಯಬೇಕಾದುದೆಲ್ಲವನ್ನೂ ನೀನು ತಿಳಿದುಕೊಂಡಿರುವೆ. ಮಾಡಬೇಕಾದ ಕರ್ತವ್ಯವನ್ನು ಮಾಡಿರುವೆ.

ಶ್ರುತಾಶ್ಚ ರಾಜಧರ್ಮಾಸ್ತೇ ಭೀಷ್ಮಾದ್ ಭಾಗೀರಥೀಸುತಾತ್ ।
ಕೃಷ್ಣದ್ವೈಪಾಯನಾಚ್ಚಾಪಿ ನಾರದಾದ್ ವಿದುರಾತ್ ತಥಾ ॥೫॥

ಭಾಗೀರಥಿಯ ಮಗನಾದ ಭೀಷ್ಮನಿಂದ, ಕೃಷ್ಣ-ದ್ವೈಪಾಯನರಿಂದ, ನಾರದರಿಂದ, ವಿದುರನಿಂದ ಸಮಸ್ತ ಧರ್ಮಗಳನ್ನು ಅರಿತಿರುವೆ.

ನೇಮಾಮರ್ಹಸಿ ಮೂಢಾನಾಂ ಮತಿಂ ತ್ವಮನುವರ್ತಿತುಮ್ ।
ಪಿತೃಪೈತಾಮಹಂ ವೃತ್ತಮಾಸ್ಥಾಯ ಧುರಮುದ್ವಹ ॥೬॥

ಇಂತಹ ನೀನು ಮೂಢನಂತೆ ವ್ಯವಹರಿಸುವುದು ಯೋಗ್ಯವಲ್ಲ. ನಿನ್ನ ತಾತ-ಮುತ್ತಾತಂದಿರು ಆಶ್ರಯಿಸಿದ ಕ್ಷತ್ರವೃತ್ತಿಯನ್ನೇ ನೀನು ಆಶ್ರಯಿಸಿ ರಾಜ್ಯಭಾರವನ್ನು ನಡೆಸು.

ಯುಕ್ತಂ ಹಿ ಯಶಸಾ ಕ್ಷಾತ್ರಂ ಸ್ವರ್ಗಂ ಪ್ರಾಪ್ತಮಸಂಶಯಮ್ ।
ನ ಹಿ ಕಶ್ಚನ ಶೂರಾಣಾಂ ನಿಹತೋಽತ್ರ ಪರಾಙ್ಮುಖಃ ॥೭॥

ಕ್ಷತ್ರಿಯಸಮುದಾಯವು ಯುದ್ಧದಲ್ಲಿ ಪಡೆಯುವ ಯಶಸ್ಸನ್ನು ಹೊಂದಬಯಸುವುದು ಯುಕ್ತವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಇಷ್ಟು ಮಂದಿ ಶೂರರಲ್ಲಿ ಯಾವ ಒಬ್ಬನೂ ಯುದ್ಧದಿಂದ ಪರಾಙ್ಮುಖನಾಗಿ ಕೊಲ್ಲಲ್ಪಟ್ಟಿರುವುದಿಲ್ಲ. (ಎಲ್ಲರೂ ಯುದ್ಧಧರ್ಮದಿಂದಲೇ ಹತರಾಗಿರುವುದರಿಂದ ಅವರೆಲ್ಲರೂ ಸ್ವರ್ಗವನ್ನು ಹೊಂದಿರುತ್ತಾರೆ. ಉತ್ತಮ ಸ್ಥಾನವನ್ನು ಹೊಂದಿದವರ ಬಗ್ಗೆ ಶೋಕಪಡಲು ಯಾವ ಕಾರಣಗಳೂ ಇಲ್ಲ).

ತ್ಯಜ ಶೋಕಂ ಮಹಾರಾಜ ಭವಿತವ್ಯಂ ಹಿ ತತ್ ತಥಾ ।
ನ ಶಕ್ಯಾಸ್ತೇ ಪುನರ್ದ್ರಷ್ಟುಂ ತ್ವಯಾ ಯೇಽಸ್ಮಿನ್ ರಣೇ ಹತಾಃ ॥೮॥

ಮಹಾರಾಜನೇ, ಶೋಕವನ್ನು ಬಿಡು. ಈಗ ಏನೆಲ್ಲ ಘಟನೆಗಳು ನಡೆದಿರುವೆಯೋ, ಅದು ಆಗಬೇಕಾಗಿರುವ ಘಟನೆಗಳು. ನೀನು ಎಷ್ಟು ದುಃಖ ಹೊಂದಿದರೂ ಯುದ್ಧದಲ್ಲಿ ಹತರಾದವರನ್ನು ನೀನು ಪುನಃ ನೋಡಲಾರೆ. ಆದ್ದರಿಂದ ದುಃಖವನ್ನು ನಿಲ್ಲಿಸಿ ಮುಂದಿನ ಕರ್ತವ್ಯಗಳಲ್ಲಿ ಆಸಕ್ತನಾಗು.

ವೈಶಂಪಾಯನಃ

ಏತಾವದುಕ್ತ್ವಾ ಗೋವಿಂದೋ ಧರ್ಮರಾಜಂ ಯುಧಿಷ್ಠಿರಮ್ ।
ವಿರರಾಮ ತದಾ ರಾಜಾ ಪುನರ್ವಚನಮಬ್ರವೀತ್ ॥೯॥

ವೈಶಂಪಾಯನ– ಜನಮೇಜಯನೇ, ಧರ್ಮರಾಜನಾದ ಯುಧಿಷ್ಠಿರನಿಗೆ ಮಹಾತೇಜಸ್ವಿಯಾದ ಶ್ರೀಕೃಷ್ಣನು ಇಷ್ಟು ಮಾತನ್ನು ಹೇಳಿ ಮೌನವಹಿಸಿದನು.

ಯುಧಿಷ್ಠಿರಃ

ಗೋವಿಂದ ಮಯಿ ಯಾ ಪ್ರೀತಿಃ ತವ ಸಾ ವಿದಿತಾ ಮಯಾ ।
ಸೌಹೃದೇನ ತಥಾ ಪ್ರೇಮ್ಣಾ ಸದಾ ಮಾಮನುಕಂಪಸೇ ॥೧೦॥

ಧರ್ಮರಾಜನು ಕೃಷ್ಣನನ್ನು ಕುರಿತು ಹೇಳುತ್ತಾನೆ- ಗೋವಿಂದನೇ, ನಿನಗೆ ನನ್ನ ಮೇಲೆ ಯಾವ ವಿಧವಾದ ಪ್ರೀತಿಯಿದೆ ಎಂಬುದು ಚೆನ್ನಾಗಿ ತಿಳಿದಿದೆ. ಸೌಹಾರ್ದದಿಂದ, ಪ್ರೇಮದಿಂದ ನೀನು ನನ್ನ ವಿಷಯದಲ್ಲಿ ಯಾವಾಗಲೂ ಅನುಕಂಪವನ್ನೇ ತೋರಿಸುತ್ತಿರುವೆ.

ಪ್ರಿಯಂ ತು ಮೇ ಸ್ಯಾತ್ ಸುಮಹತ್ ಕೃತಂ ಚಕ್ರಗದಾಧರ ॥೧೧॥

ಶ್ರೇಮನ್ ಪ್ರೀತೇನ ಮನಸಾ ಸರ್ವಯಾದವನಂದನ ।
ಯದಿ ಮಾಮನುಜಾನೀಯಾದ್ ಭವಾನ್ ಗಂತುಂ ತಪೋವನಮ್ ॥

ಕೃತಕೃತ್ಯೋ ಭವಿಷ್ಯಾಮೀತಿ ಮೇ ನಿಶ್ಚಿತಾ ಮತಿಃ ॥೧೩॥

ಚಕ್ರಗದಾಧರನೇ, ಕಾಂತಿಯುಕ್ತನೇ, ಯಾದವನಂದನನೇ, ನೀನು ನನ್ನಲ್ಲಿ ಅತಿಶಯವಾದ ಪ್ರೀತಿಯನ್ನೇ ತೋರುತ್ತಿರುವೆ. ನೀನೇನಾದರೂ ಪ್ರಸನ್ನವಾದ ಮನಸ್ಸಿನಿಂದ ನನಗೆ ಅರಣ್ಯಕ್ಕೆ ಹೋಗಲು ಅನುಮತಿಯನ್ನಿತ್ತರೆ ಅದಕ್ಕಿಂತ ಪ್ರಿಯವಾದ ಕರ್ಮ ಇನ್ನೊಂದಿಲ್ಲ ಎಂದಾಗುತ್ತಿತ್ತು. ವನವಾಸದ ಕ್ರಿಯೆಯಿಂದ ಕೃತಕೃತ್ಯನಾಗುತ್ತೇನೆ ಎಂಬ ನಿಶ್ಚಯವಾದ ಬುದ್ಧಿಯನ್ನು ಹೊಂದಿರುತ್ತೇನೆ.

ನ ಹಿ ಶಾಂತಿಂ ಪ್ರಪಶ್ಯಾಮಿ ಘಾತಯಿತ್ವಾ ಪಿತಾಮಹಮ್ ।
ಕರ್ಣಂ ಚ ಪುರುಷವ್ಯಾಘ್ರಂ ಸಂಗ್ರಾಮೇಷ್ವಪಲಾಯಿನಮ್ ॥೧೪॥

ಕರ್ಮಣಾ ಯೇನ ಮುಚ್ಯೇಯಂ ತಸ್ಮಾತ್ ಪಾಪಾದರಿಂದಮ ।
ಕರ್ಮ ತತ್ ತ್ವಂ ವಿಧತ್ಸ್ವೇಹ ನ ಹಿ ಶುದ್ಧ್ಯತಿ ಮೇ ಮನಃ ॥೧೫॥

ಪಿತಾಮಹನಾದ ಭೀಷ್ಮನನ್ನು ವಧಿಸಿ ಮನಸ್ಸಿಗೆ ಶಾಂತಿಯನ್ನು ಹೊಂದುತ್ತಿಲ್ಲ. ಎಂದೂ ರಣಹೇಡಿಯಾಗದ, ಪುರುಷವ್ಯಾಘ್ರನೆನೆನಿಸಿದ ಕರ್ಣನನ್ನು ಕೊಂದು ಸಂತುಷ್ಟನಾಗಿಲ್ಲ. ಈಗ ಯಾವ ಕರ್ಮವನ್ನು ಮಾಡಿದರೆ ಕ್ರೌರ್ಯದಿಂದ ಮಾಡಿದ ಪಾಪದಿಂದ ವಿಮುಕ್ತನಾಗುತ್ತೇನೋ ನನ್ನ ಮನಸ್ಸಿನಲ್ಲಿ ಶಾಂತಿಯನ್ನು ಹೊಂದುತ್ತೇನೋ ಅಂತಹ ಕರ್ಮವನ್ನು ಅರಿಂದಮನೇ, ನಿರ್ದೇಶಿಸು.

ವೈಶಂಪಾಯನಃ

ತಮೇವಂ ವಾದಿನಂ ವ್ಯಾಸಸ್ತತಃ ಪ್ರೋವಾಚ ತಂ ಪ್ರಭುಃ ।
ಸಾಂತ್ವಯನ್ ಸುಮಹಾತೇಜಾಃ ವೇದವೇದಾಂಗತತ್ತ್ವವಿತ್ ॥೧೬॥

ವೈಶಂಪಾಯನ– ಜನಮೇಜಯನೇ, ಶ್ರೀಕೃಷ್ಣನೊಡನೆ ಹೀಗೆ ಮಾತನಾಡುತ್ತಿದ್ದ ಧರ್ಮರಾಜನನ್ನು ಕುರಿತು ಧರ್ಮವಿದರಾದ, ವೇದ-ವೇದಾಂಗವನ್ನರಿತ

ಮಹಾತೇಜಸ್ವಿಗಳಾದ ವೇದವ್ಯಾಸರು ಸಾಂತ್ವನಗೊಳಿಸುತ್ತಾ ಅರ್ಥವತ್ತಾದ ಮಾತುಗಳನ್ನು ಹೇಳಿದರು.

ವ್ಯಾಸಃ

ಸುಕೃತಾ ತೇ ಮತಿಸ್ತಾತ ಪುನರ್ಬಾಲ್ಯೇನ ಮುಹ್ಯಸಿ ।
ಕಿಮಾಕಾಶೇ ವಯಂ ಸರ್ವೇ ಪ್ರಲಪಾಮೋ ಮುಹುರ್ಮುಹುಃ ॥೧೭॥

ಮಗು ಯುಧಿಷ್ಠಿರನೇ, ನಿಶ್ಚಯವಾಗಿಯೂ ನಿನ್ನ ಬುದ್ಧಿಯು ಇನ್ನೂ ಪರಿಪಕ್ವತೆಯನ್ನು ಪಡೆದಿಲ್ಲ. ಪುನಃ ನೀನು ಬಾಲಕರಂತೆ ಅವಿವೇಕದಿಂದಲೇ ಮೋಹ ಹೊಂದುತ್ತಿರುವಿ. ಇದರಿಂದ ನಾವೆಲ್ಲರೂ ವ್ಯರ್ಥವಾದ ವ್ಯರ್ಥವಾದ ಪ್ರಲಾಪವನ್ನು ಮತ್ತೆ ಮತ್ತೆ ಮಾಡುತ್ತಲೇ ಇದ್ದೇವೆ.

ವಿದಿತಾಃ ಕ್ಷತ್ರಧರ್ಮಾಸ್ತೇ ಯೇಷಾಂ ಯುದ್ಧೇನ ಜೀವಿಕಾ ॥೧೮॥

ಯಾರಿಗೆ ಯುದ್ಧದಿಂದಲೇ ಜೀವಿಕೆಯೋ ಅಂತಹ ಕ್ಷತ್ರಿಯಧರ್ಮವೆಲ್ಲವೂ ನಿನಗೆ ಸಂಪೂರ್ಣವಾಗಿ ತಿಳಿದಿದೆ.

ಯಥಾ ವೈ ಕಾಮಜಾಂ ಮಾಯಾಂ ಪರಿತ್ಯಕ್ತುಂ ತ್ವಮರ್ಹಸಿ ।
ತಥಾ ತು ಕುರ್ವನ್ ನೃಪತಿರ್ನಾನುಬಂಧೇನ ಯುಜ್ಯತೇ ॥೧೯॥

ಯಥಾ ಚ ವೈ ತ್ವಂ ನೃಪತೇ ಶೋಕಬಂಧಾದ್ ವಿಮೋಕ್ಷ್ಯಸೇ ।
ಮೋಕ್ಷಧರ್ಮಾಶ್ಚ ನಿಖಿಲಾ ಯಥಾವತ್ ಸಂಶ್ರುತಾಸ್ತ್ವಯಾ ॥೨೦॥

ಅಸಕೃಚ್ಚೈವ ಸಂದೇಹಾಶ್ಛಿನ್ನಾಸ್ತೇ ಕಾಮಜಾ ಮಯಾ ।
ಅಶ್ರದ್ದಧಾನೋ ದುರ್ಮೇಧಾ ಲುಪ್ತಸ್ಮೃತಿರಸಿ ಧ್ರುವಮ್ ॥೨೧॥

ಅಂತಹ ಕ್ಷತ್ರಿಯಧರ್ಮಾನುಸಾರವಾಗಿ ವ್ಯವಹರಿಸುವ ರಾಜನು ಎಂದಿಗೂ ಮಾನಸಿಕ ಚಿಂತೆಗೆ ತುತ್ತಾಗುವುದಿಲ್ಲ. ಆದ್ದರಿಂದ ಮನಸ್ಸಿನಲ್ಲಿ ಹುಟ್ಟಿದ ಮೋಹವನ್ನು ಬಿಡಲು ನೀನು ಅರ್ಹನಾಗಿರುವಿ. ನಿನ್ನ ಸಂಕಲ್ಪಕ್ಕನುಗುಣವಾಗಿ ಕೇಳಿದ ಸಂದೇಹಗಳೆಲ್ಲವನ್ನೂ ನಾನು ಹಲವು ಬಾರಿ ಪರಿಹರಿಸಿರುತ್ತೇನೆ. ಮೋಕ್ಷಧರ್ಮಗಳೆಲ್ಲವನ್ನೂ ಯಥಾವತ್ತಾಗಿ ನನ್ನಿಂದ ಕೇಳಲ್ಪಟ್ಟಿರುವಿ. ಹೀಗಿದ್ದರೂ ನಿನ್ನ ಅಶ್ರದ್ಧೆಯ ಪರಿಣಾಮ ಹೇಳಿದ ಉಪದೇಶಗಳೆಲ್ಲವೂ ವಿಸ್ಮೃತವಾಗಿವೆ. ಇದು ನಿಶ್ಚಯ.

ಮೈವಂ ಭೂಸ್ತ್ವಂ ನ ತೇ ಯುಕ್ತಮಿದಮಜ್ಞಾನಮೀದೃಶಮ್ ॥೨೨॥

ಯುಧಿಷ್ಠಿರನೇ, ಇನ್ನೆಂದೂ ಈ ರೀತಿ ಮಾತನಾಡಬೇಡ. ಈ ವಿಧವಾದ ಅಜ್ಞಾನವನ್ನು ಆಶ್ರಯಿಸುವುದು ನಿನಗೆ ಯೋಗ್ಯವಲ್ಲ.

ಪ್ರಾಯಶ್ಚಿತ್ತಾನಿ ಸರ್ವಾಣಿ ವಿದಿತಾನಿ ಚ ತೇಽನಘ ।
ಯುದ್ಧಧರ್ಮಾಶ್ಚ ತೇ ಸರ್ವೇ ದಾನಧರ್ಮಾಶ್ಚ ತೇ ಶ್ರುತಾಃ ॥೨೩॥

ನಿಷ್ಪಾಪನೇ, ಎಲ್ಲ ವಿಧವಾದ ಪ್ರಾಯಶ್ಚಿತ್ತಗಳನ್ನೂ ಬಲ್ಲವನಾಗಿರುವಿ. ಯುದ್ಧಧರ್ಮಗಳೇನು? ದಾನಧರ್ಮಗಳೇನು? ಎಲ್ಲವೂ ನಿನಗೆ ತಿಳಿದಿದೆ.

ಸ ಕಥಂ ಸರ್ವಧರ್ಮಜ್ಞಃ ಸರ್ವಾಗಮವಿಶಾರದ ।
ಪರಿಮುಹ್ಯಸಿ ಭೂಯಸ್ತ್ವಮಜ್ಞಾನಾದಿವ ಭಾರತ ॥೨೪॥

ಭಾರತನೇ, ಈ ರೀತಿ ನೀನು ಸರ್ವಧರ್ಮಗಳನ್ನು ತಿಳಿದವನಾಗಿದ್ದರೂ, ಸರ್ವಶಾಸ್ತ್ರಗಳಲ್ಲಿ ವಿಶಾರದನಾಗಿದ್ದರೂ ಪುನಃ ಅಜ್ಞಾನಕ್ಕೆ ವಶನಾಗಿ ಏಕೆ ವಿಮೋಹಕ್ಕೆ ತುತ್ತಾಗುತ್ತಿರುವೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವ್ಯಾಸವಚನಂ ನಾಮ ದ್ವಿತೀಯೋಧ್ಯಾಯಃ ॥

॥ ಅಶ್ವಮೇಧಪರ್ವಣಿ ದ್ವಿತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಯುಧಿಷ್ಠಿರನಿಗೆ ವ್ಯಾಸರಿಂದ ಅಶ್ವಮೇಧಯಾಗಕ್ಕಾಗಿ ಪ್ರಚೋದನೆ ಮತ್ತು ಉಪಾಯ.

ವ್ಯಾಸಃ

ಯುಧಿಷ್ಠಿರ ತವ ಪ್ರಜ್ಞಾ ನ ಸಮ್ಯಗಿತಿ ಮೇ ಮತಿಃ ।
ನ ಹಿ ಕಶ್ಚಿತ್ ಸ್ವಯಂ ಮರ್ತ್ಯಃ ಸ್ವವಶಃ ಕುರುತೇ ಕ್ರಿಯಾಮ್ ॥೧॥

ವ್ಯಾಸರು ಮುಂದುವರಿದು ಹೇಳುತ್ತಾರೆ- ಯುಧಿಷ್ಠಿರ, ನಿನ್ನ ಪ್ರಜ್ಞೆ ಸರಿಯಿಲ್ಲವೆಂದೇ ನನ್ನ ಅಭಿಪ್ರಾಯ. ಯಾವ ಮನುಷ್ಯನೇ ಆಗಲಿ ತಾನಾಗಿ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಸ್ವತಂತ್ರವಾಗಿ ಕಾರ್ಯವನ್ನು ಮಾಡಲು ಸಮರ್ಥನಾಗಿರುವುದಿಲ್ಲ.

ಈಶ್ವರೇಣ ಚ ಯುಕ್ತೋಽಯಂ ಸಾಧ್ವಸಾಧು ಚ ಪಾಂಡವ ।
ಕರೋತ್ಯಸುಕರಂ ಕರ್ಮ ತತ್ರ ಕಾ ಪರಿದೇವನಾ ॥೨॥

ಈಶ್ವರನ ಪ್ರೇರಣೆಯಿಂದ ಮನುಷ್ಯನು ಒಳ್ಳೆಯದು, ಕೆಟ್ಟದ್ದು ಎಂಬ ಎರಡು ವಿಧವಾದ ಕರ್ಮವನ್ನು ಮಾಡುತ್ತಾನೆ. ಭಗವತ್ಪ್ರೇರಣೆಯಿಂದ ನಡೆದಿರುವ ಈ ಸಂಹಾರದ ವಿಷಯದಲ್ಲಿ ಶೋಕವನ್ನೇಕೆ ಪಡುವಿ?

ಆತ್ಮಾನಂ ಮನ್ಯಸೇ ಪಾರ್ಥ ಪಾಪಕರ್ಮಾಣಮಂತತಃ ।
ಶೃಣು ತತ್ರ ಯಥಾ ಪಾಪಮಪಕೃಷ್ಯೇತ ಭಾರತ ॥೩॥

ಇಷ್ಟಾದರೂ ನೀನು ನಿನ್ನನ್ನು ಪಾಪಕರ್ಮಿಯೆಂದೇ ಬಗೆಯುವುದಾದರೆ, ಪಾಪಕರ್ಮಕ್ಕೆ ನೀನೇ ಕಾರಣನೆಂದು ಭಾವಿಸುವಿಯಾದರೆ ಆ ಪಾಪವನ್ನು ಕೂಡ ಯಾವ ರೀತಿಯಾಗಿ ಪರಿಹರಿಸಿಕೊಳ್ಳಲು ಸಾಧ್ಯ ಎಂಬುದನ್ನು ನಿನಗೆ ಹೇಳುತ್ತೇನೆ, ಕೇಳು.

ತಪೋಭಿಃ ಕ್ರತುಭಿಶ್ಚೈವ ದಾನೇನ ಚ ಯುಧಿಷ್ಠಿರ ।
ತರಂತಿ ನಿತ್ಯಂ ಪುರುಷಾ ಯೇ ಸ್ಮ ಪಾಪಾನಿ ಕುರ್ವತೇ ॥೪॥

ಪಾಪಗಳನ್ನು ಮಾಡುವವರು ತಪಸ್ಸುಗಳಿಂದ, ಯಜ್ಞಗಳಿಂದ, ದಾನಗಳಿಂದ ಪಾಪರಾಶಿಯನ್ನು ದಾಟುತ್ತಾರೆ.

ಯಜ್ಞೇನ ತಪಸಾ ಚೈವ ದಾನೇನ ಚ ನರಾಧಿಪ ।
ಪೂಯಂತೇ ರಾಜಶಾರ್ದೂಲ ನರಾ ದುಷ್ಕೃತಕಾರಿಣಃ ॥೫॥

ನರಾಧಿಪನೇ, ಪಾಪಕರ್ಮವನ್ನು ಮಾಡುವ ಮನುಷ್ಯರು ಯಜ್ಞದಿಂದ, ತಪಸ್ಸಿನಿಂದ, ದಾನದಿಂದ ಪರಿಶುದ್ಧಿಯನ್ನು ಹೊಂದುತ್ತಾರೆ.

ಅಸುರಾಶ್ಚ ಸುರಾಶ್ಚೈವ ಪುಣ್ಯಹೇತೋರ್ಮಖಕ್ರಿಯಾಮ್ ।
ಸಹಸೈವಾನುವರ್ತಂತೇ ತಸ್ಮಾದ್ ಯಜ್ಞಃ ಪರಾಯಣಮ್ ॥೬॥

ಮಹಾತ್ಮರಾದ ದೇವತೆಗಳು ಮತ್ತು ದೈತ್ಯರು ಪುಣ್ಯಸಂಪಾದನೆಗಾಗಿ ಯಜ್ಞಗಳನ್ನು ಮಾಡಲು ಪ್ರಯತ್ನಿಸುತ್ತಾರೆ. ಆದ್ದರಿಂದ ಪಾಪವನ್ನು ಪರಿಹರಿಸಿಕೊಳ್ಳಲು, ಪುಣ್ಯವನ್ನು ಸಂಪಾದಿಸಿಕೊಳ್ಳಲು ಯಜ್ಞವೇ ಪರಮ ಆಶ್ರಯವಾಗಿದೆ.

ಯಜ್ಞೈರೇವ ಮಹಾತ್ಮಾನೋ ಬಭೂವುರಧಿಕಾಃ ಸುರಾಃ ।
ತತೋ ದೇವಾಃ ಕ್ರಿಯಾವಂತೋ ದಾನವಾನಭ್ಯಧರ್ಷಯನ್ ॥೭॥

ಯಜ್ಞಗಳನ್ನು ಆಚರಿಸುವುದರಿಂದಲೇ ಮಹಾತ್ಮರಾದ ದೇವತೆಗಳು ಹೆಚ್ಚು ಬಲಶಾಲಿಗಳಾಗಿದ್ದಾರೆ. ಯಜ್ಞಕ್ರಿಯೆಯಲ್ಲಿ ನಿಷ್ಠರಾಗಿದ್ದರಿಂದಲೇ ಅವರು ದಾನವರನ್ನು ಪರಾಜಯಗೊಳಿಸಿದರು.

ರಾಜಸೂಯಾಶ್ವಮೇಧೌ ಚ ಸರ್ವಮೇಧಂ ಚ ಭಾರತ ।
ನರಮೇಧಂ ಚ ನೃಪತೇ ತ್ವಮಾಹರ ಯುಧಿಷ್ಠಿರ ॥೮॥

ಭಾರತನೇ, ಆದುದರಿಂದ ನೀನೂ ಕೂಡ ರಾಜಸೂಯ, ಅಶ್ವಮೇಧ, ಸರ್ವಮೇಧ, ನರಮೇಧ ಎಂಬ ಯಜ್ಞಗಳನ್ನು ಆಚರಿಸು (ಸರ್ವಸ್ವ ತ್ಯಾಗ-ಎಲ್ಲರಿಗಾಗಿ ತ್ಯಾಗ ಎಂಬ ಯಜ್ಞಗಳನ್ನಾಚರಿಸು).

ಯಜಸ್ವ ವಾಜಿಮೇಧೇನ ವಿಧಿವದ್ ದಕ್ಷಿಣಾವತಾ ।
ಬಹುಕಾಮಾನ್ನವಿತ್ತೇನ ರಾಮೋ ದಾಶರಥಿರ್ಯಥಾ ॥೯॥

ಬಹುದಕ್ಷಿಣೆಯುಳ್ಳ, ಮನಸ್ಸಿನಲ್ಲಿ ಬಯಸಿದ ಪದಾರ್ಥದಿಂದಲೂ, ಅನ್ನದಿಂದಲೂ ಸಂಪನ್ನವಾದ ಅಶ್ವಮೇಧಯಾಗವನ್ನು ದಾಶರಥಿ ಎನಿಸಿದ ಶ್ರೀರಾಮಚಂದ್ರನು ಆಚರಿಸಿದಂತೆ ವಿಧಿವತ್ತಾಗಿ ಆಚರಿಸು.

ಯಥಾ ಹಿ ಭರತೋ ರಾಜಾ ದೌಷ್ಯಂತಿಃ ಪೃಥಿವೀಪತಿಃ ।
ಶಾಕುಂತಲೋ ಮಹಾವೀರ್ಯಃ ತವ ಪೂರ್ವಪಿತಾಮಹಃ ॥೧೦॥

ನಿನ್ನ ಪೂರ್ವಪಿತಾಮಹನಾದ, ಮಹಾಪರಾಕ್ರಮಿಯಾದ, ದುಶ್ಯಂತನ ಮಗನಾದ, ಶಕುಂತಲೆಯ ಮಗನಾದ ಭರತ ಚಕ್ರವರ್ತಿಯು ಅಶ್ವಮೇಧಯಾಗವನ್ನು ಆಚರಿಸಿದಂತೆ ನೀನೂ ಆಚರಿಸು.

ಯುಧಿಷ್ಠಿರಃ

ಅಸಂಶಯಂ ವಾಜಿಮೇಧಃ ಪಾವಯೇತ್ ಪೃಥಿವೀಮಪಿ ।
ಅಭಿಪ್ರಾಯಸ್ತು ಮೇ ಕಶ್ಚಿತ್ ತಂ ತ್ವಂ ಶ್ರೋತುಮಿಹಾರ್ಹಸಿ ॥೧೧॥

ಯುಧಿಷ್ಠಿರ– ವಿಪ್ರಶ್ರೇಷ್ಠರೇ, ನೀವು ಹೇಳಿದಂತೆ ಅಶ್ವಮೇಧ ಯಾಗವು ಸಮಗ್ರ ಭೂಮಂಡಲವನ್ನೂ ಪವಿತ್ರಗೊಳಿಸುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಕೇಳುವ ಕೃಪೆ ಮಾಡಿರಿ.

ಇಮಂ ಜ್ಞಾತಿವಧಂ ಕೃತ್ವಾ ಸುಮಹಾಂತಂ ದ್ವಿಜೋತ್ತಮ ।
ಅಹಮಾರಾಧಯಿಷ್ಯಾಮಿ ಕಥಂ ಶೋಕಪರಾಯಣಃ ॥೧೨॥

ದಾನಮಲ್ಪಂ ನ ಶಕ್ಷ್ಯಾಮಿ ದಾತುಂ ವಿತ್ತಂ ಚ ನಾಸ್ತಿ ಮೇ ॥೧೩॥

ಜ್ಞಾತಿಗಳ ಮಹತ್ವವಾದ ಸಂಹಾರವನ್ನು ಮಾಡಿರುವ ನಾನು ಈ ಸಂದರ್ಭದಲ್ಲಿ ಅತ್ಯಲ್ಪವಾದ ದಾನವನ್ನು ಮಾಡಲು ಅಸಮರ್ಥನಾಗಿದ್ದೇನೆ. ನನ್ನ ಬಳಿ ಐಶ್ವರ್ಯವೇ ಇಲ್ಲವಾಗಿದೆ.

ನ ಚಾಪಲಾದಿನಾ ದೀನಾನುತ್ಸಹೇ ವಸು ಯಾಚಿತುಮ್ ।
ತಥೈವಾದ್ರವಿಣಾನ್ ಕೃಚ್ಛ್ರೇ ವರ್ತಮಾನಾನ್ ನೃಪಾತ್ಮಜಾನ್ ॥೧೪॥

ಸ್ವಯಂ ವಿನಾಶ್ಯ ಪೃಥಿವೀಂ ರಾಜ್ಯಾರ್ಥೇ ದ್ವಿಜಸತ್ತಮ ।
ಕರಮಾಹಾರಯಿಷ್ಯಾಮಿ ಕಥಂ ಶೋಕಪರಾಯಣಾನ್ ॥೧೫॥

ಯಜ್ಞ ಮಾಡಬೇಕೆಂಬ ಚಾಪಲ್ಯದಿಂದ ದುಃಖಿತರಾಗಿರುವ ರಾಜಕುಮಾರರಿಂದ ಹಣವನ್ನು ಯಾಚಿಸಲು ನನಗೆ ಉತ್ಸಾಹವೂ ಇರುವುದಿಲ್ಲ. ಹಾಗೆಯೇ ಯುದ್ಧದ ಗಾಯಗಳಿನ್ನೂ ಮಾಸದಿರುವಾಗ, ಕಷ್ಟದಲ್ಲಿ ಸಿಲುಕಿರುವ ರಾಜಪುತ್ರರಿಂದಲೂ ಐಶ್ವರ್ಯವನ್ನು ಬೇಡೆನು.

ದುರ್ಯೋಧನಾಪರಾಧೇನ ವಸುಧಾಯಾಂ ನರಾಧಿಪಾಃ ।
ಪ್ರನಷ್ಟಾ ಯೋಧಯಿತ್ವಾಽಸ್ಮಾನ್ ಅಕೀರ್ತ್ಯಾ ಮುನಿಸತ್ತಮ ॥೧೬॥

ಮುನಿಶ್ರೇಷ್ಠರೇ, ದುರ್ಯೋಧನನ ಅಪರಾಧದಿಂದ ಭೂಮಂಡಲವೇ ನಾಶ ಹೊಂದಿತು. ಭೂಮಂಡಲದ ಚಕ್ರವರ್ತಿಗಳು ಸಾವನ್ನಪ್ಪಿದರು. ಅವನು ಮಾಡಿದ ಅಪರಾಧವು ನಮ್ಮನ್ನು ಅಪಕೀರ್ತಿಗೀಡು ಮಾಡಿತು.

ದುರ್ಯೋಧನೇನ ಪೃಥಿವೀ ಕ್ಷಪಿತಾ ವಿತ್ತಕಾರಣಾತ್ ।
ಕೋಶಶ್ಚಾಪಿ ವಿಶೀರ್ಣೋಽಯಂ ಧಾರ್ತರಾಷ್ಟ್ರಸ್ಯ ದುರ್ಮತೇಃ ॥೧೭॥

ದುರ್ಯೋಧನನು ಐಶ್ವರ್ಯದ ಲೋಭದಿಂದಲೇ ಪೃಥಿವಿಯನ್ನು ಶೋಷಿಸಿದನು. ಪೃಥಿವಿಯನ್ನು ಶೋಷಿಸಿ ಧನವನ್ನು ಸಂಗ್ರಹಿಸಿದ್ದನೋ, ಇಂದು ದುರ್ಮತಿಯಾದ ಅವನ ಭಂಡಾರವೂ ಬರಿದಾಗಿಹೋಗಿದೆ.

ಪೃಥಿವೀ ದಕ್ಷಿಣಾ ಚಾತ್ರ ವಾಜಿಮೇಧೇ ಮಹಾಕ್ರತೌ ।
ವಿದ್ವದ್ಭಿಃ ಪರಿದೃಷ್ಟೋಽಯಂ ವಿಶಿಷ್ಟೋ ವಿಧಿಪರ್ಯಯಃ ॥೧೮॥

ಅಶ್ವಮೇಧಯಾಗದಲ್ಲಿ ಪೃಥಿವಿಯನ್ನೇ ದಕ್ಷಿಣೆಯ ರೂಪದಲ್ಲಿ ಕೊಡುವುದು ಮುಖ್ಯಕಲ್ಪವೆಂಬುದು ವಿದ್ವಾಂಸರು ಯೋಚಿಸಿ, ನಿರ್ಣಯಿಸಿದ ವಿಧಿಯಾಗಿದೆ. ಇದನ್ನು ಬಿಟ್ಟು ಅನ್ಯವಿಧಿಯನ್ನು ಆಶ್ರಯಿಸುವುದು ವಿಧಿವಿಪರ್ಯಯ ಎನಿಸುತ್ತದೆ. ಪ್ರಾಚೀನ ವಿಧಿಗೆ ವಿರುದ್ಧವಾಗಿ ನಡೆದಂತಾಗುತ್ತದೆ.

ನ ಚ ಪ್ರತಿನಿಧಿಂ ಕರ್ತುಂ ಚಿಕೀರ್ಷಾಮಿ ತಪೋಧನ ।
ಅತ್ರ ಮೇ ಭಗವನ್ ಸಮ್ಯಕ್ ಸಾಚಿವ್ಯಂ ಕರ್ತುಮರ್ಹಸಿ ॥೧೯॥

ಭೂರೂಪವಾದ ದಕ್ಷಿಣೆಗೆ ಬದಲಾಗಿ ಬೇರೆ ದಕ್ಷಿಣೆಯನ್ನು ಕೊಡಲು ನಾನು ಬಯಸುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಾನು ಹೇಗೆ ವರ್ತಿಸಬೇಕು ಎಂಬುದರ ಬಗ್ಗೆ ಸಲಹೆಯನ್ನು ನೀಡುವ ಕೃಪೆ ತೋರಿ.

ವೈಶಂಪಾಯನಃ

ಏವಮುಕ್ತಸ್ತು ಪಾರ್ಥೇನ ಕೃಷ್ಣದ್ವೈಪಾಯನಸ್ತದಾ ।
ಮುಹೂರ್ತಮಭಿಸಂಚಿಂತ್ಯ ಧರ್ಮರಾಜಾನಮಬ್ರವೀತ್ ॥೨೦॥

ವೈಶಂಪಾಯನ– ಜನಮೇಜಯನೇ, ಯುಧಿಷ್ಠಿರನು ಹೀಗೆ ಹೇಳಿದ ನಂತರ ಕೃಷ್ಣದ್ವೈಪಾಯನರು ಒಂದು ಮುಹೂರ್ತದ ಕಾಲ ಆಲೋಚಿಸಿ, ಅನಂತರ

ಧರ್ಮರಾಜನಿಗೆ ಹೇಳಿದರು (ವೇದವ್ಯಾಸದೇವರು ನಿತ್ಯಜ್ಞಾನ ಸಂಪನ್ನರಾಗಿದ್ದರೂ ಧರ್ಮರಾಜನಿಗೆ ಅವನು ಕೇಳಿದ ಪ್ರಶ್ನೆಯ ಮಹತ್ವವನ್ನು ತಿಳಿಸಲು ಒಂದು ಮುಹೂರ್ತದ ಕಾಲ ಯೋಚಿಸಿದವರಂತೆ ನಟಿಸಿದರು).

ವ್ಯಾಸಃ

ಕೋಶಶ್ಚಾಪಿ ವಿಶೀರ್ಣೋ೯ಽಯಂ ಪರಿಪೂರ್ಣೋ೯ ಭವಿಷ್ಯತಿ ।
ವಿದ್ಯತೇ ದ್ರವಿಣಂ ಪಾರ್ಥ ಗಿರೌ ಹಿಮವತಿ ಸ್ಥಿತಮ್ ॥೨೧॥

ಉತ್ಸೃಷ್ಟಂ ಬ್ರಾಹ್ಮಣೈರ್ಯಜ್ಞೇ ಮರುತ್ತಸ್ಯ ಮಹೀಪತೇಃ ।
ತದಾನಯಸ್ವ ಕೌಂತೇಯ ಪರ್ಯಾಪ್ತಂ ತೇ ಭವಿಷ್ಯತಿ ॥೨೨॥

ವ್ಯಾಸರು– ಯುಧಿಷ್ಠಿರನೇ, ನೀನು ನಿನ್ನ ಭಂಡಾರದ ವಿಷಯವಾಗಿ ಯೋಚಿಸುವ ಕಾರಣವಿಲ್ಲ. ಇಂದು ಅದು ಬರಿದಾಗಿರುವುದು ಸತ್ಯ . ಆದರೆ ಅದು ಶೀಘ್ರವಾಗಿ ತುಂಬುತ್ತದೆ. ಮಹಾತ್ಮನಾದ ಮರುತ್ತನ ಯಜ್ಞದಲ್ಲಿ ಬ್ರಾಹ್ಮಣರಿಂದ ಹೊರಲಾಗದೆ ವಿಸರ್ಜಿಸಲ್ಪಟ್ಟ ಐಶ್ವರ್ಯವು ಇಂದಿಗೂ ಹಿಮವತ್‌ಪರ್ವತದ ತಪ್ಪಲಿನಲ್ಲಿ ಇದೆ. ಆ ಐಶ್ವರ್ಯವನ್ನು ತೆಗೆದುಕೊಂಡು ಬಾ. ಅದು ನೀನು ಮಾಡಲಿರುವ ಅಶ್ವಮೇಧಕ್ಕೆ ಸಾಕಾಗುತ್ತದೆ.

ಯುಧಿಷ್ಠಿರಃ

ಕಥಂ ಯಜ್ಞೇ ಮರುತ್ತಸ್ಯ ದ್ರವಿಣಂ ತತ್ ಸಮಾಹಿತಮ್ ।
ಕಸ್ಮಿಂಶ್ಚ ಕಾಲೇ ಸ ನೃಪೋ ಬಭೂವ ವದತಾಂ ವರ ॥೨೩॥

ಯುಧಿಷ್ಠಿರ– ವಾಗ್ಮಿಗಳಲ್ಲಿ ಶ್ರೇಷ್ಠರಾದವರೇ, ಮರುತ್ತನು ಯಾವ ಕಾಲದಲ್ಲಿದ್ದನು? ಯಜ್ಞದಲ್ಲಿ ಅಷ್ಟೊಂದು ಐಶ್ವರ್ಯವು ಹೇಗೆ ಸಂಗ್ರಹವಾಯಿತು? ಇದನ್ನು ದಯಮಾಡಿ ತಿಳಿಸಿರಿ.

ವ್ಯಾಸಃ

ಯದಿ ಶುಶ್ರೂಷಸೇ ಪಾರ್ಥ ಶೃಣು ಕಾರಂಧಮಂ ನೃಪಮ್ ।
ಯಸ್ಮಿನ್ ಕಾಲೇ ಮಹಾವೀರ್ಯಃ ಸ ರಾಜಾಽಽಸೀನ್ಮಹಾಧನಃ ॥೨೪॥

ಯುಧಿಷ್ಠಿರನೇ, ನಿನಗೆ ಕೇಳುವ ಅಪೇಕ್ಷೆ ಇದ್ದರೆ ಕರಂಧಮನ ಮೊಮ್ಮಗನಾದ ಮರುತ್ತನ ವೃತ್ತಾಂತವನ್ನು ಹೇಳುತ್ತೇನೆ, ಕೇಳು. ಮಹಾಧರ್ಮಿಯೂ, ಮಹಾಪರಾಕ್ರಮಿಯೂ ಅಗಿದ್ದ ರಾಜನು ಯಾವ ಕಾಲದಲ್ಲಿ ಇದ್ದನೆಂಬುದನ್ನೂ ಹೇಳುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವಿತ್ತೋಪಾಯಕಥನಂ ನಾಮ ತೃತೀಯೋಧ್ಯಾಯಃ ॥

॥ ಅಶ್ವಮೇಧಪರ್ವಣಿ ತೃತೀಯೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ವ್ಯಾಸರು ಯುಧಿಷ್ಠಿರನನ್ನು ಕುರಿತು ಮರುತ್ತನ ಉಪಾಖ್ಯಾನ ಹೇಳಲು ಆರಂಭಿಸಿದುದು. ರಾಜನಾದ ಮರುತ್ತನು ಹಿಮವದ್ ಪರ್ವತದ ಉತ್ತರ ಭಾಗದಲ್ಲಿ ಸುವರ್ಣಗಳಿಂದಲೇ ಕುಂಡ-ಭಾಂಡ ಮೊದಲಾದ ಉಪಕ್ರಮದಿಂದ ಯಜ್ಞವನ್ನು ಆರಂಭಿಸಿದುದು.

ಯುಧಿಷ್ಠಿರಃ

ಶುಶ್ರೂಷೇ ತಸ್ಯ ಧರ್ಮಜ್ಞ ರಾಜರ್ಷೇಃ ಪರಿಕೀರ್ತನಮ್ ।
ದ್ವೈಪಾಯನ ಮರುತ್ತಸ್ಯ ಕಥಾಂ ಪ್ರಬ್ರೂಹಿ ಮೇಽನಘ ॥೧॥

ಯುಧಿಷ್ಠಿರ– ಧರ್ಮಜ್ಞರೇ, ದ್ವೈಪಾಯನ ಮುನಿಗಳೇ, ರಾಜರ್ಷಿಯಾದ ಮರುತ್ತನ ಕಥೆಯನ್ನು ಕೇಳಲು ಆಸಕ್ತಿಯುಂಟಾಗಿದೆ. ನಿರ್ದುಷ್ಟರಾದ ವ್ಯಾಸರೇ, ಸೇವಾಸಕ್ತನಾದ ನನಗೆ ಆ ಕಥೆಯನ್ನು ಹೇಳಿರಿ.

ವ್ಯಾಸಃ

ಆಸೀತ್ ಕೃತಯುಗೇ ಪೂರ್ವಂ ಮನುರ್ದಂಡಧರಃ ಪ್ರಭುಃ ।
ತಸ್ಯ ಪುತ್ರೋ ಮಹೇಷ್ವಾಸಃ ಪ್ರಜಾತಿರಭವದ್ ನೃಪಃ ॥೨॥

ವ್ಯಾಸರು– ಕೃತಯುಗದಲ್ಲಿ ಹಿಂದೆ ದಂಡಧಾರಿಯಾದ ಶಕ್ತನಾದ ಮನು ಎಂಬ ರಾಜನಿದ್ದನು. ಅವನಿಗೆ ಮಹಾಪರಾಕ್ರಮಿಯಾದ ಪ್ರಜಾತಿ ಎಂಬ ಮಗನು ಹುಟ್ಟಿದನು.

ಪ್ರಜಾತೇರಭವತ್ ಪುತ್ರಃ ಕ್ಷುಪ ಇತ್ಯಭಿವಿಶ್ರುತಃ ।
ಕ್ಷುಪಸ್ಯ ಪುತ್ರ ಇಕ್ಷ್ವಾಕುರ್ಮಹೀಪಾಲೋಽಭವತ್ ಪ್ರಭುಃ ॥೩॥

ಪ್ರಜಾತಿಗೆ ಕ್ಷುಪನೆಂಬ ಹೆಸರಿನ ವಿಖ್ಯಾತನಾದ ಮಗನಿದ್ದನು. ಕ್ಷುಪನ ಅನಂತರ ಅವನ ಮಗನಾದ ಶಕ್ತಿಶಾಲಿಯಾದ ಇಕ್ಷ್ವಾಕುವು ಭೂಮಂಡಲಕ್ಕೆ ರಾಜನಾದನು.

ತಸ್ಯ ಪುತ್ರಶತಂ ರಾಜನ್ನಾಸೀತ್ ಪರಮಧಾರ್ಮಿಕಮ್ ।
ತಾಂಸ್ತು ಸರ್ವಾನ್ ಮಹೀಪಾಲಾನ್ ಇಕ್ಷ್ವಾಕುರಕರೋತ್ ಪ್ರಭುಃ ॥೪॥

ಇಕ್ಷ್ವಾಕುವಿಗೆ ಪರಮಧಾರ್ಮಿಕರಾದ ನೂರು ಮಕ್ಕಳಿದ್ದರು. ಇಕ್ಷ್ವಾಕುವು ಪ್ರಭಾವಶಾಲಿಗಳಾದ ಅವರೆಲ್ಲರನ್ನೂ ಮಹೀಪತಿಗಳನ್ನಾಗಿ ಮಾಡಿದನು.

ತೇಷಾಂ ಜ್ಯೇಷ್ಠಸ್ತು ವಿಂಶೋಽಭೂತ್ ಪ್ರತಿಮಾನಂ ಧನುಷ್ಮತಾಮ್ ।
ವಿಂಶಸ್ಯ ಪುತ್ರಃ ಕಲ್ಯಾಣೋ ವಿವಿಂಶೋ ನಾಮ ಭಾರತ ॥೫॥

ಇಕ್ಷ್ವಾಕುವಿನ ನೂರು ಮಕ್ಕಳಲ್ಲಿ ಹಿರಿಯನಾದ ವಿಂಶನೆಂಬುವನು ಧನುರ್ಧಾರಿಗಳಲ್ಲಿಯೇ ಆದರ್ಶನಾಗಿದ್ದನು. ವಿಂಶನಿಗೆ ಮಂಗಳಕರನಾದ ಪುತ್ರನಾಗಿ ವಿವಿಂಶ ಎಂಬುವನು ಹುಟ್ಟಿದನು.

ವಿವಿಂಶಸ್ಯ ಸುತಾ ರಾಜನ್ ಬಭೂವುರ್ದಶ ಪಂಚ ಚ ।
ಸರ್ವೇ ಧನುಷಿ ವಿಕ್ರಾಂತಾ ಬ್ರಹ್ಮಣ್ಯಾಃ ಸತ್ಯವಾದಿನಃ ॥೬॥

ವಿವಿಂಶನಿಗೆ ಹದಿನೈದು ಜನ ಮಕ್ಕಳು ಹುಟ್ಟಿದರು. ಅವರೆಲ್ಲರೂ ಧನುರ್ಯುದ್ಧದಲ್ಲಿ ಪರಾಕ್ರಮಿಗಳಾಗಿದ್ದರು. ಬ್ರಾಹ್ಮಣ ಪ್ರಿಯರಾಗಿದ್ದರು, ಸತ್ಯವಾದಿಗಳಾಗಿದ್ದರು.

ದಾನಕರ್ಮರತಾಃ ಸಂತಃ ಪ್ರಜಾಹಿತಚಿಕೀರ್ಷವಃ ॥೭॥

ದಾನ ಮಾಡುವುದರಲ್ಲಿ, ಸತ್ಕರ್ಮಾಚರಣೆಯಲ್ಲಿಯೂ ನಿರತರಾಗಿದ್ದರು. ಸಜ್ಜನರಾದ ಅವರು ಪ್ರಜೆಗಳ ಹಿತವನ್ನು ಸಾಧಿಸುವವರಾಗಿದ್ದರು.

ತೇಷಾಂ ಜ್ಯೇಷ್ಠಃ ಖನೀನೇತ್ರಃ ಸ ತಾನ್ ಸರ್ವಾನಪೀಡಯತ್ ॥೮॥

ಅವರಲ್ಲಿ ಹಿರಿಯನಾದವನು ಖನೀನೇತ್ರನು. ಅವನು ಎಲ್ಲರಂತೆ ಸದ್ಗುಣಿಯಾಗಿರಲಿಲ್ಲ. ತನ್ನ ತಮ್ಮಂದಿರನ್ನು ಬಹಳವಾಗಿ ಪೀಡಿಸುತ್ತಿದ್ದನು.

ಖನೀನೇತ್ರಸ್ತು ವಿಕ್ರಾಂತೋ ಜಿತ್ವಾ ರಾಜ್ಯಮಕಂಟಕಮ್ ।
ನಾಶಕ್ನೋದ್ ರಕ್ಷಿತುಂ ರಾಜ್ಯಂ ನಾನುರಂಜಂತಿ ತಂ ಪ್ರಜಾಃ ॥೯॥

ಖನೀನೇತ್ರನು ಪರಾಕ್ರಮಿಯಾಗಿದ್ದು, ರಾಜ್ಯವನ್ನು ಗೆದ್ದು ತನ್ನ ರಾಜ್ಯವನ್ನು ಶತ್ರುರಹಿತವನ್ನಾಗಿ ಮಾಡಿಕೊಂಡಿದ್ದರೂ ರಾಜ್ಯದ ರಕ್ಷಣೆಯನ್ನು ಮಾಡಲು ಸಮರ್ಥನಾಗಲಿಲ್ಲ. ಕಾರಣ ಪ್ರಜೆಗಳು ಅವನ ವಿಷಯದಲ್ಲಿ ಅನುರಾಗವುಳ್ಳವರಾಗಿರಲಿಲ್ಲ.

ತಮಪಾಹಾಯ ತದ್ರಾಜ್ಯೇ ತಸ್ಯ ಪುತ್ರಂ ಸುವರ್ಚಸಮ್ ।
ಅಭ್ಯಷಿಂಚಂತ ರಾಜೇಂದ್ರ ಮುದಿತಾ ಹ್ಯಭವಂಸ್ತದಾ ॥೧೦॥

ಆ ಕಾರಣದಿಂದ ಕನೀನೇತ್ರನನ್ನು ಪ್ರಜೆಗಳೆಲ್ಲರೂ ರಾಜ್ಯದಿಂದ ಓಡಿಸಿ ಅವನ ಮಗನಾದ ಸುವರ್ಚಸನನ್ನು ರಾಜ್ಯದ ಸಿಂಹಾಸನದಲ್ಲಿ ಕುಳ್ಳಿರಿಸಿ ಸಂತೋಷದಿಂದ ಪಟ್ಟಾಭಿಷೇಕ ಮಾಡಿದರು. ಅದರಿಂದ ಪ್ರಜೆಗಳಿಗೆ ಆನಂದವಾಯಿತು.

ಸ ಪಿತುರ್ವಿಕ್ರಿಯಾಂ ದೃಷ್ಟ್ವಾ ರಾಜ್ಯಾನ್ನಿರಸನಂ ತಥಾ ।
ನಿಯತೋ ವರ್ತಯಾಮಾಸ ಪ್ರಜಾಹಿತಚಿಕೀರ್ಷಯಾ ॥೧೧॥

ಸುವರ್ಚಸನು ತನ್ನ ತಂದೆಯು ಮಾಡಿದ ದುಷ್ಕ್ರಿಯೆಗಳು ಯಾವುದೆಂದು ಅರಿತು, ಆ ಕಾರಣದಿಂದ ಪ್ರಜೆಗಳು ಅವನನ್ನು ರಾಜ್ಯಭ್ರಷ್ಟರನ್ನಾಗಿಸಿದ್ದಾರೆ ಎಂದರಿತು, ಪ್ರಜೆಗಳ ಹಿತವನ್ನುಂಟು ಮಾಡುವ ಇಚ್ಛೆಯಿಂದ ನಿಯಮಬದ್ಧವಾಗಿ ಪ್ರಜೆಗಳ ಜೊತೆಗೆ ವ್ಯವಹರಿಸಿದನು.

ಬ್ರಹ್ಮಣ್ಯಃ ಸತ್ಯವಾದೀ ಚ ಶುಚಿಃ ಶಮದಮಾನ್ವಿತಃ ॥೧೨॥

ಸುವರ್ಚಸ್ಸನು ಬ್ರಾಹ್ಮಣಪ್ರಿಯನಾಗಿದ್ದನು, ಸತ್ಯನಿಷ್ಠನಾಗಿದ್ದನು. ಶುಚಿಯೂ, ಕ್ಷಮ-ದಮಾದಿಗುಣಗಳಿಂದಲೂ ಕೂಡಿದ್ದನು.

ಪ್ರಜಾಸ್ತಂ ಚಾನ್ವರಜ್ಯಂತ ಧರ್ಮನಿತ್ಯಂ ಮನಸ್ವಿನಮ್ ॥೧೩॥

ಅಂತಹ ಧರ್ಮನಿಷ್ಠನಾದ, ಸ್ಥಿರಚಿತ್ತನಾದ ಸುವರ್ಚಸನನ್ನು ಪ್ರಜೆಗಳೆಲ್ಲರೂ ಬಹಳವಾಗಿ ಪ್ರೀತಿಸತೊಡಗಿದರು.

ತಸ್ಯ ಧರ್ಮಪ್ರವೃತ್ತಸ್ಯ ವ್ಯಶೀರ್ಯತ್ ಕೋಶವಾಹನಮ್ ।
ತಂ ಕ್ಷೀಣಕೋಶಂ ಸಾಮಂತಾಃ ಸಮಂತಾತ್ ಪರ್ಯಪೀಡಯನ್ ॥

ಸುವರ್ಚಸನು ನಿತ್ಯ ಧರ್ಮಶೀಲನಾಗಿದ್ದರೂ ಅವನ ಭಂಡಾರವು ಒಮ್ಮೆ ಬರಿದಾಗಿ ಹೋಯಿತು. ಇದನ್ನರಿತ ಸಾಮಂತರು ಎಲ್ಲೆಡೆಯಿಂದಲೂ ಅವನನ್ನು ಪೀಡಿಸಿದರು.

ಸ ಪೀಡ್ಯಮಾನೋ ಬಹುಭಿಃ ಕ್ಷೀಣಕೋಶಾಶ್ವವಾಹನಃ ।
ಆರ್ತಿಮಾರ್ಚ್ಛತ್ ಪರಾಂ ರಾಜಾ ಸಹ ಭೃತ್ಯೈಃ ಪುರೇಣ ಚ ॥೧೫॥

ಸಾಮಂತರಾಜನಿಂದ ಪೀಡೆಗೆ ತುತ್ತಾದ ಸುವರ್ಚಸನು ಭಂಡಾರವನ್ನು ಬರಿದು ಮಾಡಿಕೊಂಡನು. ಅಶ್ವ-ರಥ ಮುಂತಾದ ವಾಹನಗಳನ್ನೂ ನಾಶಪಡಿಸಿ- ಕೊಂಡನು. ಇದರಿಂದ ತನ್ನ ಭೃತ್ಯರಿಂದ ಪಟ್ಟಣಗಳಿಂದ ದುಃಖಕ್ಕೆ ಈಡಾದನು.

ನ ಚೈನಂ ಪರಿಹರ್ತುಂ ತೇ ಶಕ್ನುವನ್ ಪರಿಸಂಕ್ಷಯೇ ।
ಸಮ್ಯಗ್ ವೃತ್ತೋ ಹಿ ರಾಜಾऽऽಸೌ ಧರ್ಮನಿತ್ಯೋ ಯುಧಿಷ್ಠಿರ ॥೧೬॥

ಕ್ಷೀಣವಾಹನನಾದ ಸುವರ್ಚಸನನ್ನು ಯುದ್ಧದಲ್ಲಿ ಗೆಲ್ಲಲು ಶತ್ರುಗಳು ಸಮರ್ಥರಾಗಲಿಲ್ಲ. ಧರ್ಮನಿಷ್ಠನಾದ, ಶೀಲಸಂಪನ್ನನಾದ ಕಾರಣ ಯುದ್ಧ ಮಾಡುವುದರಲ್ಲಿ ಅಸಮರ್ಥನೇ ಆದನು.

ಯದಾ ತು ಪರಮಾಮಾರ್ತಿಂ ಗತೋऽಸೌ ಸಪುರೋ ನೃಪ ।
ತತಃ ಪ್ರದಧ್ಮೌ ಸ ಕರಂ ಪ್ರಾದುರಾಸೀತ್ ತತೋ ಬಲಮ್ ॥೧೭॥

ಯಾವಾಗ ಸುವರ್ಚಸನು ತುಂಬಾ ದುಃಖವನ್ನು ಹೊಂದಿದನೋ ಭೃತ್ಯರು, ಪ್ರಜಾವರ್ಗದಿಂದಲೂ ಕಷ್ಟಕ್ಕೆ ತುತ್ತಾದನೋ, ಇದಕ್ಕೆ ಪರಿಹಾರವನ್ನು ಕಂಡುಹಿಡಿಯಲು ತನ್ನ ಕೈಯನ್ನೇ ಶಂಖವನ್ನಾಗಿ ಮಾಡಿಕೊಂಡು ಗಟ್ಟಿಯಾಗಿ ಊದಿದನು. ಒಡನೆಯೇ ಅವನ ಕೈಯಿಂದ ದೊಡ್ಡದಾದ ಸೈನ್ಯವೇ ಪ್ರಕಟವಾಯಿತು.

ತತಸ್ತಾನಜಯತ್ ಸರ್ವಾನ್ ಪ್ರತಿಸೀಮಾನ್ ನರಾಧಿಪಾನ್ ।
ಏತಸ್ಮಾತ್ ಕಾರಣಾದ್ ರಾಜನ್ ವಿಶ್ರುತಃ ಸ ಕರಂಧಮಃ ॥೧೮॥

ಆ ಸೈನ್ಯದ ಸಹಾಯದಿಂದ ಸುವರ್ಚಸನು ತನ್ನ ರಾಜ್ಯದ ಗಡಿಯಲ್ಲಿ ವಾಸ ಮಾಡಿಕೊಂಡಿದ್ದ, ತನ್ನಮೇಲೆ ಆಕ್ರಮಣ ಮಾಡಿದ ಎಲ್ಲ ರಾಜರನ್ನು ಪರಾಭವಗೊಳಿಸಿ

ಓಡಿಸಿದನು. ಈ ಕಾರಣದಿಂದಲೇ ಈ ರಾಜನು ಕರಂಧಮ (ಕೈಯಿಂದ ಶಬ್ದ ಮಾಡಿದವನು) ಎಂಬ ಹೆಸರಿನಿಂದಲೇ ಪ್ರಸಿದ್ಧನಾದನು.

ಪುತ್ರಸ್ತ್ರೇತಾಯುಗಮುಖೇऽಭವದಾವೀಕ್ಷಿಸಂಜ್ಞಕಃ ।
ಇಂದ್ರಾದನವಮಃ ಶ್ರೀಮಾನ್ ದೇವೈರಪಿ ಸುದುರ್ಜಯಃ ॥೧೯॥

ತ್ರೇತಾಯುಗದ ಆರಂಭದಲ್ಲಿ ಕರಂಧಮನಿಗೆ ಆವಿಕ್ಷಿತ ಎಂಬ ಮಗನು ಹುಟ್ಟಿದನು. ಇವನು ಇಂದ್ರನಿಗೆ ಯಾವುದರಲ್ಲಿಯೂ ಕಡಿಮೆಯಾಗಿರಲಿಲ್ಲ. ದೇವತೆಗಳಿಂದಲೂ ಜಯಿಸಲು ಅಸಾಧ್ಯನಾಗಿದ್ದನು.

ಕಾರಂಧಮ ಇತಿ ಖ್ಯಾತೋ ಬಭೂವ ಜಗತೀಪತಿಃ ॥೨೦॥

ಈತನು ಜಗತ್ತಿನಲ್ಲಿ ಕಾರಂಧಮ ಎಂದು ಖ್ಯಾತಿಯನ್ನು ಪಡೆದು ಜಗತ್ಪತಿಯಾದನು, ಚಕ್ರವರ್ತಿಯಾದನು.

ತಸ್ಯ ಸರ್ವೇ ಮಹೀಪಾಲಾ ವರ್ತಂತೇ ಸ್ಮ ವಶೇ ತದಾ ।
ಸ ಹಿ ಸಮ್ರಾಡಭೂದ್ ತೇಷಾಂ ವೃತ್ತೇನ ಚ ಬಲೇನ ಚ ॥೨೧॥

ಆವಿಕ್ಷಿತನಿಗೆ ಅಂದಿನ ಎಲ್ಲಾ ಚಕ್ರವರ್ತಿಗಳು ವಶವಾದರು. ತನ್ನ ಶೀಲ-ಬಲಗಳಿಂದ ಸಮ್ರಾಟ್ ಎಂದು ಕರೆಸಿಕೊಂಡನು.

ಆವಿಕ್ಷಿದೇವ ಧರ್ಮಾತ್ಮಾ ಶೌರ್ಯೇಣೇಂದ್ರಸಮೋऽಭವತ್ ।
ಯಜ್ವಶೀಲೋ ಕರ್ಮರತೋ ಧೃತಿಮಾನ್ ಸಂಯತೇಂದ್ರಿಯಃ ॥೨೨॥

ಆವಿಕ್ಷಿತನು ಧರ್ಮಾತ್ಮನಾಗಿದ್ದನು. ಶೌರ್ಯದಲ್ಲಿ ಇಂದ್ರನಿಗೆ ಸಮಾನನಾಗಿದ್ದನು. ಯಜ್ವಶೀಲನಾಗಿದ್ದನು, ಕರ್ಮದಲ್ಲಿ ಆಸಕ್ತನಾಗಿದ್ದನು, ಧೈರ್ಯವಂತನೂ, ಜಿತೇಂದ್ರಿಯನೂ ಆಗಿದ್ದನು.

ತೇಜಸಾऽऽದಿತ್ಯಸದೃಶಃ ಕ್ಷಮಯಾ ಪೃಥಿವೀಸಮಃ ।
ಬೃಹಸ್ಪತಿಸಮೋ ಬುದ್ಧ್ಯಾ ಹಿಮವಾನಿವ ಸುಸ್ಥಿರಃ ॥೨೩॥

ತೇಜಸ್ಸಿನಲ್ಲಿ ಸೂರ್ಯಸದೃಶನೂ, ಕ್ಷಮೆಯಲ್ಲಿ ಭೂಮಿಸದೃಶನೂ, ಬುದ್ಧಿಯಲ್ಲಿ ಬೃಹಸ್ಪತಿ ಸಮಾನನೂ, ಸ್ಥಿರತೆಯಲ್ಲಿ ಹಿಮವಂತನಿಗೆ ಸದೃಶನೂ ಆಗಿದ್ದನು.

ಕರ್ಮಣಾ ಮನಸಾ ವಾಚಾ ದಮೇನ ಪ್ರಶಮೇನ ಚ ।
ಮನಾಂಸ್ಯಾರಾಧಯಾಮಾಸ ಪ್ರಜಾನಾಂ ಸ ಮಹೀಪತಿಃ ॥೨೪॥

ಮಹೀಪತಿಯಾದ ಆವಿಕ್ಷಿತನು ಸತ್ಕರ್ಮದಿಂದಲೂ, ಮಾನಸಿಕವಾಗಿ, ವಾಚನಿಕವಾಗಿಯೂ, ಇಂದ್ರಿಯನಿಗ್ರಹ, ವಿನಯದ ಮಾತುಗಳಿಂದಲೂ ಸಜ್ಜನರ ಮನಸ್ಸನ್ನು ಸಂತೋಷಗೊಳಿಸುತ್ತಿದ್ದನು.

ಯ ಈಜೇ ಹಯಮೇಧಾನಾಂ ಶತೇನ ವಿಧಿವತ್ ಪ್ರಭುಃ ।
ಯಾಜಯಾಮಾಸ ಯಂ ವಿದ್ವಾನ್ ಸ್ವಯಮೇವಾಂಗಿರಾಃ ಪ್ರಭುಃ ॥

ಅತ್ಯಂತ ಪ್ರಭಾವಶಾಲಿಯಾದ ಈ ಭೂಪತಿಯು ವಿಧಿಪೂರ್ವಕವಾಗಿ ಮೂರು ಅಶ್ವಮೇಧ ಯಾಗವನ್ನು ಮಾಡಿದನು. ಮಹಾವಿದ್ವಾಂಸರಾದ, ಪ್ರಭುವಾದ ಅಂಗೀರಸ ಮುನಿಯೇ ಮೂರು ಯಾಗಗಳನ್ನು ಮಾಡಿಸಿದನು.

ತಸ್ಯ ಪುತ್ರೋಽತಿಚಕ್ರಾಮ ಪಿತರಂ ಗುಣವತ್ತಯಾ ।
ಮರುತ್ತೋ ನಾಮ ಧರ್ಮಜ್ಞಃ ಚಕ್ರವರ್ತೀ ಮಹಾಯಶಾಃ ॥೨೬॥

ಇವನ ಮಗನು ತಂದೆಗಿಂತ ಗುಣಗಳಲ್ಲಿ ಶ್ರೇಷ್ಠನೆನಿಸಿದನು. ಚಕ್ರವರ್ತಿ ಎನಿಸಿದನು. ಮಹಾಕೀರ್ತಿವಂತನಾದ, ಧರ್ಮಜ್ಞನಾದ ಇವನ ಮಗನಿಗೆ ಮರುತ್ ಎಂದು ಹೆಸರು.

ನಾಗಾಯುತಸಮಪ್ರಾಣಃ ಸಾಕ್ಷಾದ್ ವಿಷ್ಣುರಿವಾಪರಃ ॥೨೭॥

ಹತ್ತುಸಾವಿರ ಆನೆಗಳ ಬಲದಿಂದ ಕೂಡಿದ ಮರುತ್ತನು ಮತ್ತೊಬ್ಬ ಸಾಕ್ಷಾತ್ ವಿಷ್ಣುವೋ ಎಂಬಂತೆ ಕಾಣಿಸುತ್ತಿದ್ದನು.

ಸ ಯಕ್ಷ್ಯಮಾಣೋ ಧರ್ಮಾತ್ಮಾ ಶಾತಕುಂಭಮಯಾನಿ ತು ।
ಕಾರಯಾಮಾಸ ಶುಭ್ರಾಣಿ ಭಾಜನಾನಿ ಸಹಸ್ರಶಃ ॥೨೮॥

ಆ ಧರ್ಮಾತ್ಮನಾದ ಮರುತ್ತನು ಯಜ್ಞ ಮಾಡುವಾಗ ಶುಭ್ರವಾದ ಸುವರ್ಣಮಯವಾದ ಸಾವಿರಾರು ಯಜ್ಞಪಾತ್ರೆಗಳನ್ನು ಮಾಡಿಸಿದನು.

ಮೇರುಂ ಪರ್ವತಮಾಸಾದ್ಯ ಹಿಮವತ್ಪಾರ್ಶ್ವ ಉತ್ತರೇ ।
ಕಾಂಚನಃ ಸುಮಹಾನ್ ಪಾದಃ ತತ್ರ ಕರ್ಮ ಚಕಾರ ಸಃ ॥೨೯॥

ಮರುತ್ತನು ಯಜ್ಞ ಮಾಡುವ ಕಾರಣದಿಂದ ಹಿಮವದ್ ಪರ್ವತದ ಉತ್ತರದಿಕ್ಕಿನಲ್ಲಿರುವ ಮೇರುಪರ್ವತಕ್ಕೆ ಹೋದನು. ಅಲ್ಲಿ ಒಂದು ದೊಡ್ಡ ಸುವರ್ಣಪರ್ವತವೂ ಇದೆ. ಆ ಸ್ಥಳದಲ್ಲಿ ಯಜ್ಞಶಾಲೆಯನ್ನು ನಿರ್ಮಿಸಿ ಯಜ್ಞಕರ್ಮವನ್ನು ಆರಂಭಿಸಿದನು.

ತತಃ ಕುಂಡಾನಿ ಪಾತ್ರ್ಯಶ್ಚ ಪಿಠರಾಣ್ಯಾಸನಾನಿ ಚ ।
ಚಕ್ರುಃ ಸುವರ್ಣಕರ್ತಾರಃ ತೇಷಾಂ ಸಂಖ್ಯಾ ನ ವಿದ್ಯತೇ ॥೩೦॥

ಮರುತ್ತನ ಆಜ್ಞೆಯಂತೆ ಅನೇಕ ಅಕ್ಕಸಾಲಿಗರು ಯಜ್ಞದ ಸಲುವಾಗಿ ಸುವರ್ಣದ ಕುಂಡಗಳನ್ನು, ಸುವರ್ಣದ ಪಾತ್ರೆಗಳನ್ನು, ಆಸನಗಳನ್ನು, ಅನ್ನವನ್ನು ಬೇಯಿಸುವ ಪಾತ್ರೆಗಳನ್ನು, ತಪ್ಪಲೆಗಳನ್ನು ಸಿದ್ಧಗೊಳಿಸಿದರು. ಅವರು ಎಷ್ಟು ವಸ್ತುಗಳನ್ನು ತಯಾರಿಸಿದರು ಎಂದು ಎಣಿಕೆಯನ್ನು ಮಾಡಲು ಸಾಧ್ಯವಿಲ್ಲ.

ತಸ್ಯೈವ ಚ ಸಮೀಪೇ ತು ಯಜ್ಞವಾಟೋ ಬಭೂವ ಹ ॥೩೧॥

ಆ ಬಂಗಾರದ ಬೆಟ್ಟದ ಸಮೀಪದಲ್ಲಿಯೇ ಯಜ್ಞಮಂಟಪವು ನಿರ್ಮಾಣವಾಯಿತು.

ಈಜೇ ತತ್ರ ಸ ಧರ್ಮಾತ್ಮಾ ವಿಧಿವತ್ ಪೃಥಿವೀಪತಿಃ ।
ಮರುತ್ತಃ ಸಹಿತೈಃ ಸರ್ವೈಃ ಪ್ರಜಾಪಾಲೈರ್ನರಾಧಿಪಃ ॥೩೨॥

ಯಜ್ಞಪಾತ್ರೆಗಳೆಲ್ಲವೂ ಸಿದ್ಧವಾದ ಬಳಿಕ ಮೇರುಪರ್ವತದ ತಪ್ಪಲಿನಲ್ಲಿ ಧರ್ಮಾತ್ಮನಾದ ಮರುತ್ತನು ಇತರ ಸಾಮಂತ ರಾಜನೊಡನೆ ಸೇರಿಕೊಂಡು ವಿಧಿಪೂರ್ವಕವಾಗಿ ಯಜ್ಞವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಮರುತ್ತಯಜ್ಞಸ್ಥಳಕಥನಂ ನಾಮ ಚತುರ್ಥೋऽಧ್ಯಾಯಃ ॥

॥ ಅಶ್ವಮೇಧಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಮರುತ್ತನ ಜೊತೆಯಲ್ಲಿ ಸ್ಪರ್ಧೆಗಿಳಿದ ದೇವೇಂದ್ರನು ಮರುತ್ತನನ್ನು ಜಯಿಸಲು ಶ್ರಮಪಟ್ಟ ಬಗೆ. ಬೃಹಸ್ಪತಿಗಳ ಬಳಿ ಮರುತ್ತನ ಯಜ್ಞಕ್ಕೆ ಹೋಗದಿರುವಂತೆ ಪ್ರಾರ್ಥನೆ. ಇಂದ್ರನ ಪ್ರೇರಣೆಯಿಂದ ಮಾನವರಿಗೆ ಯಜ್ಞವನ್ನು ಮಾಡಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದುದು.

ಯುಧಿಷ್ಠಿರಃ

ಕಥಂ ವೀರ್ಯಃ ಸಮಭವತ್ ಸ ರಾಜಾ ದದತಾಂ ವರಃ ।
ಕಥಂ ಸ ಜಾತರೂಪೇಣ ಸಮಾಯುಜ್ಯತ ವೈ ನೃಪಃ ॥೧॥

ಯುಧಿಷ್ಠಿರ– ವಾಗ್ಮಿಗಳಲ್ಲಿ ಶ್ರೇಷ್ಠರಾದ ವೇದವ್ಯಾಸರೆ, ಮರುತ್ತರಾಜನು ಎಂತಹ ಪರಾಕ್ರಮವುಳ್ಳವನಾಗಿದ್ದನು? ಆ ರಾಜನಿಗೆ ಸುವರ್ಣದೊಡನೆ ಸಂಬಂಧವು ಹೇಗೆ ಬೆಳೆಯಿತು?

ಕ್ವ ಚ ತತ್ ಸಾಂಪ್ರತಂ ದ್ರವ್ಯಂ ಭಗವನ್ನವತಿಷ್ಠತೇ ।
ಕಥಂ ಚ ಶಕ್ಯಮಸ್ಮಾಭಿಸ್ತದವಾಪ್ತುಂ ತಪೋಧನ ॥೨॥

ಪೂಜ್ಯರೇ, ಈಗ ಆ ದ್ರವ್ಯವು ಎಲ್ಲಿದೆ? ತಪೋಧನರೇ, ಅದನ್ನು ನಾವು ಪಡೆದುಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಇವೆಲ್ಲವನ್ನೂ ನಮಗೆ ತಿಳಿಸಿರಿ.

ವ್ಯಾಸಃ

ಅಸುರಾಶ್ಚೈವ ದೇವಾಶ್ಚ ದಕ್ಷಸ್ಯಾಸನ್ ಪ್ರಜಾಪತೇಃ ।
ಅಪತ್ಯಂ ಬಹುಲಂ ತಾತ ತೇಽಸ್ಪರ್ಧಂತ ಪರಸ್ಪರಮ್ ॥೩॥

ವ್ಯಾಸರು– ಯುಧಿಷ್ಠಿರನೇ, ದಕ್ಷಪ್ರಜಾಪತಿಗೆ ದೇವತೆಗಳು ಮತ್ತು ಅಸುರರು ಎಂಬ ಅಪಾರವಾದ ಸಂತಾನವು ಉತ್ಪನ್ನವಾಯಿತು. ಒಬ್ಬನೇ ತಂದೆಯ ಮಕ್ಕಳಾದರೂ ಆ ದೇವಾಸುರರು ಪರಸ್ಪರವಾಗಿ ಸ್ಪರ್ಧಿಸುತ್ತಿದ್ದರು.

ತಥೈವಾಂಗಿರಸಃ ಪುತ್ರೌ ಪಿತೃತುಲ್ಯೌ ಬಭೂವತುಃ ।
ಬೃಹಸ್ಪತಿರ್ಬೃಹತ್ತೇಜಾಃ ಸಂವರ್ತಶ್ಚ ತಪೋಧನಃ ॥೪॥

ಇದರಂತೆ ಅಂಗಿರಸನಿಗೆ ಸಮಾನ ವ್ರತನಿಷ್ಠರಾದ ಇಬ್ಬರು ಮಕ್ಕಳು ಇದ್ದರು. ಅವರು ಪರಸ್ಪರ ಸ್ಪರ್ಧಿಸುತ್ತಿದ್ದರು. ಅವರಲ್ಲಿ ಬೃಹಸ್ಪತಿ ಮಹಾತೇಜಸ್ವಿಯಾಗಿದ್ದನು. ಮತ್ತೊಬ್ಬ ಮಗನಾದ ಸಂವರ್ತನು ತಪೋಧನನಾಗಿದ್ದನು.

ತಾವಪಿ ಸ್ಪರ್ಧಿನೌ ರಾಜನ್ ಪೃಥಗಾಸ್ತಾಂ ಪರಸ್ಪರಮ್ ।
ಬೃಹಸ್ಪತಿಸ್ತು ಸಂವರ್ತಂ ಬಾಧತೇ ಸ್ಮ ಪುನಃ ಪುನಃ ॥೫॥

ಬೃಹಸ್ಪತಿ-ಸಂವರ್ತರು ಯಾವಾಗಲೂ ಪರಸ್ಪರ ಸ್ಪರ್ಧಿಸುತ್ತಿದ್ದರು. ಅದರಲ್ಲಿಯೂ ಬೃಹಸ್ಪತಿಯು ಸಂವರ್ತನನ್ನು ಪುನಃ ಪುನಃ ಪೀಡಿಸುತ್ತಿದ್ದನು.

ಸ ಬಾಧ್ಯಮಾನಃ ಸತತಂ ಭ್ರಾತ್ರಾ ಜ್ಯೇಷ್ಠೇನ ಭಾರತ ।
ಅರ್ಥಾನುತ್ಸೃತ್ಯ ದಿಗ್ವಾಸಾ ವನೇ ವಾಸಮರೋಚಯತ್ ॥೬॥

ಎಲೈ ಭಾರತನೇ, ತನ್ನ ಅಣ್ಣನಿಂದ ಪುನಃ ಪುನಃ ಪೀಡಿತನಾದ ಸಂವರ್ತನು ಬೇಸತ್ತು, ತನ್ನ ಸಮಸ್ತ ಸಂಪತ್ತನ್ನು ತೊರೆದು ದಿಗಂಬರನಾಗಿ ಕಾಡಿಗೆ ಹೊರಟುಹೋದನು.

ವಾಸವೋಽಪ್ಯಸುರಾನ್ ಸರ್ವಾನ್ ವಿಜಿತ್ಯ ಚ ನಿಪಾತ್ಯ ಚ ।
ಇಂದ್ರತ್ವಂ ಪ್ರಾಪ್ಯ ಲೋಕೇಷು ತತೋ ವವ್ರೇ ಪುರೋಹಿತಮ್ ॥೭॥

ನಂತರ ಇಂದ್ರನು ಸಮಸ್ತ ದಾನವರನ್ನು ಪರಾಜಯಗೊಳಿಸಿ, ಸಂಹರಿಸಿ, ಮೂರು ಲೋಕಗಳ ಇಂದ್ರ ಪದವಿಯನ್ನು ಪಡೆದು, ಅಂಗಿರಸನ ಜ್ಯೇಷ್ಠ ಸುತನಾದ ಬೃಹಸ್ಪತಿಯನ್ನು ಪುರೋಹಿತನನ್ನಾಗಿ ಸ್ವೀಕರಿಸಿದನು.

ಪುತ್ರಮಂಗಿರಸೋ ಜ್ಯೇಷ್ಠಂ ವಿಪ್ರಜ್ಯೇಷ್ಠಂ ಬೃಹಸ್ಪತಿಮ್ ॥೮॥

ಯಾಜ್ಯಸ್ತ್ವಂಗಿರಸಃ ಪೂರ್ವಮಾಸೀದ್ ರಾಜಾ ಕರಂಧಮಃ ।
ವೀರ್ಯೇಣಾಪ್ರತಿಮೋ ಲೋಕೇ ವೃತ್ತೇನ ಚ ಬಲೇನ ಚ ॥೯॥

ಈ ವೃತ್ತಾಂತಕ್ಕಿಂತಲೂ ಮೊದಲು ಕರಂಧಮನೆಂಬ ರಾಜನು ಅಂಗಿರಸನನ್ನು ಪುರೋಹಿತನನ್ನಾಗಿ ಮಾಡಿಕೊಂಡಿದ್ದನು. ಕರಂಧಮ ರಾಜನು ವೀರ್ಯದಿಂದಲೂ, ಸದಾಚಾರದಿಂದಲೂ, ಬಲದಿಂದಲೂ ಲೋಕದಲ್ಲಿ ಅಪ್ರತಿಮನೆನಿಸಿದ್ದನು.

ಶತಕ್ರತುರಿವೌಜಸ್ವೀ ಧರ್ಮಾತ್ಮಾ ಸಂಶಿತವ್ರತಃ ॥೧೦॥

ಇಂದ್ರನಂತೆ ತೇಜಸ್ವಿಯೂ ಧರ್ಮಾತ್ಮನೂ ಕಠೋರ ವ್ರತನಿಷ್ಠನೂ ಆಗಿದ್ದನು.

ವಾಹನಂ ಯಸ್ಯ ಯೋಧಾಶ್ಚ ದ್ರವ್ಯಾಣಿ ವಿವಿಧಾನಿ ಚ ।
ಶಯನಾನಿ ಚ ಮುಖ್ಯಾನಿ ಮಹಾರ್ಹಾಣಿ ಚ ಸರ್ವಶಃ ॥೧೧॥

ಧ್ಯಾನಾದೇವಾಭವನ್ ರಾಜನ್ ಮುಖವಾತೇನ ಸರ್ವಶಃ ॥೧೨॥

ವಾಹನಗಳೂ, ಯೋಧರೂ, ಮಿತ್ರರೂ, ವಿಧ-ವಿಧವಾದ ಅಮೂಲ್ಯವಾದ ದ್ರವ್ಯಗಳೂ, ಮುಖ್ಯವಾದ ಹಾಸಿಗೆಗಳೂ, ಅನರ್ಘ್ಯವಾದ ಬೆಲೆಬಾಳುವ ವಸ್ತುಗಳೆಲ್ಲವೂ ಕರಂಧಮರಾಜನು ನೆನೆದೊಡನೆ ಅವನ ಮುಖದಿಂದ ಹೊರಹೊಮ್ಮುವ ಗಾಳಿಯಿಂದಲೇ ಸೃಷ್ಟಿಗೊಳ್ಳುತ್ತಿದ್ದವು.

ಸ ಗುಣೈಃ ಪಾರ್ಥಿವಾನ್ ಸರ್ವಾನ್ ವಶೇ ಚಕ್ರೇ ನರಾಧಿಪಃ ।
ಸಂಜೀವ್ಯ ಕಾಲಮಿಷ್ಟಂ ಚ ಸಶರೀರೋ ದಿವಂ ಗತಃ ॥೧೩॥

ಆ ನರಾಧಿಪನಾದ ಕರಂಧಮರಾಜನು ತನ್ನ ಕಲ್ಯಾಣಗುಣಗಳಿಂದ ಭೂಮಂಡಲದಲ್ಲಿನ ಎಲ್ಲ ರಾಜರನ್ನೂ ವಶವರ್ತಿಗಳನ್ನಾಗಿ ಮಾಡಿಕೊಂಡಿದ್ದನು. ತನಗೆ ಇಷ್ಟವಾದಷ್ಟು ಕಾಲ ಭೂಮಿಯಲ್ಲಿ ಜೀವಿಸಿದ್ದನು. ಕೊನೆಗೆ ಸಶರೀರನಾಗಿಯೇ ಸ್ವರ್ಗಕ್ಕೆ ಹೋದನು.

ಬಭೂವ ತಸ್ಯ ಪುತ್ರಸ್ತು ಯಯಾತಿರಿವ ಧರ್ಮವಿತ್ ।
ಅವೀಕ್ಷಿನ್ನಾಮ ಶತ್ರುಘ್ನೋ ಯೋ ವಶೇ ಕೃತವಾನ್ ಮಹೀಮ್ ॥೧೪॥

ವಿಕ್ರಮೇಣ ಗುಣೈಶ್ಚೈವ ಪಿತೇವಾಸೀತ್ ಸ ಪಾರ್ಥಿವಃ ॥೧೫॥

ಅವೀಕ್ಷಿತನೆಂಬ ಅವನ ಮಗನು ಯಯಾತಿಯಂತೆ ಸಕಲ ಧರ್ಮಗಳನ್ನೂ ತಿಳಿದವನಾಗಿದ್ದನು. ತನ್ನ ಸಕಲ ಭುಜ-ಬಲ-ಪರಾಕ್ರಮದಿಂದಲೂ, ಕಲ್ಯಾಣ ಗುಣಗಳಿಂದಲೂ ಶತ್ರುಗಳನ್ನು ಜಯಿಸಿ, ಭೂಮಂಡಲವನ್ನು ಸ್ವಾಧೀನ ಪಡಿಸಿಕೊಂಡಿದ್ದನು. ಪ್ರಜೆಗಳಿಗೆ ತಂದೆಯಂತೆ ರಕ್ಷಕನಾಗಿದ್ದನು.

ತಸ್ಯ ವಾಸವತುಲ್ಯೋಽಭೂನ್ಮರುತ್ತೋ ನಾಮ ವೀರ್ಯವಾನ್ ।
ಪುತ್ರಸ್ತಮನುರಕ್ತಾಽಭೂತ್ ಪೃಥಿವೀ ಸಾಗರಾಂಬರಾ ॥೧೬॥

ಈ ಅವೀಕ್ಷಿತನ ಮಗನೇ ಮರುತ್ತನು. ಅವನು ಇಂದ್ರನಿಗೆ ಸಮಾನನಾಗಿದ್ದನು. ಸಾಗರವನ್ನೇ ವಸ್ತ್ರವನ್ನಾಗಿಸಿಕೊಂಡಿರುವ ಭೂಮಿಯು ಇವನ ಗುಣಗಳಲ್ಲಿ ಅನುರಕ್ತಳಾಗಿದ್ದಳು.

ಸ್ಪರ್ಧತೇ ಸತತಂ ಯಸ್ಮಾದ್ ದೇವರಾಜೇನ ಪಾರ್ಥಿವಃ ।
ವಾಸವೋಽಪಿ ಮರುತ್ತೇನ ಸ್ಪರ್ಧತೇ ಪಾಂಡುನಂದನ ॥೧೭॥

ಪಾಂಡುನಂದನನೇ, ಮರುತ್ತನು ಇಂದ್ರನೊಡನೆ ಯಾವಾಗಲೂ ಸ್ಪರ್ಧಿಸುತ್ತಲೇ ಇದ್ದನು. ಇಂದ್ರನೂ ಮರುತ್ತನೊಡನೆ ಸ್ಪರ್ಧಿಸುತ್ತಿದ್ದನು.

ಶುಚಿಃ ಸ ಗುಣವಾನಾಸೀತ್ ಮರುತ್ತಃ ಪೃಥಿವೀಪತಿಃ ।
ಯತಮಾನೋಽಪಿ ಯಂ ಶಕ್ರೋ ನಿರ್ವಿಶೇಷಯತಿ ಸ್ಮ ಹ ॥೧೮॥

ಮರುತ್ತನು ಸದಾಚಾರಿಯೂ, ಗುಣವಂತನೂ ಆಗಿದ್ದನು. ಪೃಥಿವಿಗೆ ಸ್ವಾಮಿಯಾಗಿದ್ದನು. ಇವನನ್ನು ಪ್ರಯತ್ನಿಸಿದರೂ ಇಂದ್ರನಿಗೆ ಗೆಲ್ಲಲಾಗಲಿಲ್ಲ.

ಸೋಽಶಕ್ನುವನ್ ವಿಶೇಷಾಯ ಸಮಾಹೂಯ ಬೃಹಸ್ಪತಿಮ್ ।
ಉವಾಚೇದಂ ವಚೋ ದೇವೈಃ ಸಹಿತೋ ಹರಿವಾಹನಃ ॥೧೯॥

ಈ ಸಂದರ್ಭದಲ್ಲಿ ಮರುತ್ತನನ್ನು ಮೀರಿಸಲು ಅಸಮರ್ಥನಾದ ಇಂದ್ರನು ಬೃಹಸ್ಪತಿಯನ್ನು ಅರಮನೆಗೆ ಕರೆಸಿಕೊಂಡು ದೇವತೆಗಳೊಡನೆ ಕೂಡಿಕೊಂಡು ಬೃಹಸ್ಪತಿಗೆ ಹೀಗೆ ಹೇಳಿದನು.

ಇಂದ್ರಃ

ಬೃಹಸ್ಪತೇ ಮರುತ್ತಸ್ಯ ಮಾ ಸ್ಮ ಕಾರ್ಷೀಃ ಕದಾಚನ ।
ದೈವಂ ಕರ್ಮಾಥ ಪಿತ್ರ್ಯಂ ಚ ಕರ್ತಾಸಿ ಮಮ ಚೇತ್ ಪ್ರಿಯಮ್ ॥

ಇಂದ್ರ– ಬೃಹಸ್ಪತಿಯೇ, ನೀನು ನನಗೇನಾದರೂ ಪ್ರಿಯವನ್ನುಂಟು ಮಾಡುವ ಇಚ್ಛೆಯುಳ್ಳವನಾಗಿದ್ದರೆ ಮರುತ್ತನಿಗೆ ಯಾವುದೇ ಕಾರಣದಿಂದಲೂ ಯಜ್ಞ ಯಾಗಾದಿಗಳನ್ನಾಗಲಿ, ಪಿತೃಕರ್ಮಗಳನ್ನಾಗಲಿ ಮಾಡಿಸಬಾರದು.

ಅಹಂ ಹಿ ತ್ರಿಷು ಲೋಕೇಷು ಸುರಾಣಾಂ ಚ ಬೃಹಸ್ಪತೇ ।
ಇಂದ್ರತ್ವಂ ಪ್ರಾಪ್ತವಾನೇಕೋ ಮರುತ್ತಸ್ತು ಮಹೀಪತಿಃ ॥೨೧॥

ಬೃಹಸ್ಪತಿಯೇ, ನಾನು ಮೂರುಲೋಕಗಳಿಗೂ ಏಕಮಾತ್ರಸ್ವಾಮಿಯಾಗಿದ್ದೇನೆ. ದೇವತೆಗಳ ಆಧಿಪತ್ಯವನ್ನು ಪಡೆದಿರುತ್ತೇನೆ. ಮರುತ್ತನಾದರೂ ಭೂಮಿಗೆ ಮಾತ್ರ ರಾಜನಾಗಿದ್ದಾನೆ.

ಕಥಂ ಹ್ಯಮರ್ತ್ಯಂ ಬ್ರಹ್ಮಂಸ್ತ್ವಂ ಯಾಜಯಿತ್ವಾ ಸುರಾಧಿಪಮ್ ।
ಯಾಜಯೇರ್ಮೃತ್ಯುಸಂಯುಕ್ತಂ ಮರುತ್ತಮವಿಶಂಕಯಾ ॥೨೨॥

ಬ್ರಾಹ್ಮಣಶ್ರೇಷ್ಠನೇ, ನೀನು ಅಮರನಾದ ದೇವರಾಜನಿಗೆ ಯಜ್ಞವನ್ನು ಮಾಡಿಸುವ ಪುರೋಹಿತನಾಗಿರುವೆ. ಹೀಗಿರಲು ಮರಣಧರ್ಮವುಳ್ಳ ಮರುತ್ತನಿಗೆ ಸಂಕೋಚ ಪಡದೆ ಹೇಗೆ ಯಜ್ಞ ಮಾಡಿಸುತ್ತಿರುವಿ?

ಮಾಂ ವಾ ವೃಣೀಷ್ವ ಭದ್ರಂ ತೇ ಮರುತ್ತಂ ವಾ ಮಹೀಪತಿಮ್ ।
ಪರಿತ್ಯಜ್ಯ ಮರುತ್ತಂ ವಾ ಯಥಾಜೋಷಂ ಭಜಸ್ವ ಮಾಮ್ ॥೨೩॥

ಬೃಹಸ್ಪತಿಯೇ, ನಿನಗೆ ಮಂಗಳವಾಗಲಿ. ನೀನು ನನ್ನನ್ನಾದರೂ ಯಜಮಾನನನ್ನಾಗಿ ಪರಿಗ್ರಹಿಸು ಅಥವಾ ಮರುತ್ತನನ್ನಾದರೂ ಸ್ವೀಕರಿಸು. ಅಥವಾ ಮರುತ್ತನನ್ನು ತ್ಯಜಿಸಿ ನನ್ನನ್ನಾಶ್ರಯಿಸಿಕೊಂಡು ಸುಖವಾಗಿರು.

ವ್ಯಾಸಃ

ಏವಮುಕ್ತಃ ಸ ಕೌರವ್ಯ ದೇವರಾಜ್ಞಾ ಬೃಹಸ್ಪತಿಃ ।
ಮುಹೂರ್ತಮಪಿ ಸಂಚಿಂತ್ಯ ದೇವರಾಜಾನಮಬ್ರವೀತ್ ॥೨೪॥

ವ್ಯಾಸ– ಕುರುಕುಲಶ್ರೇಷ್ಠನೇ, ದೇವರಾಜನಾದ ಇಂದ್ರನು ಬೃಹಸ್ಪತಿಗೆ ಹೀಗೆ ಹೇಳಿದಾಗ ಬೃಹಸ್ಪತಿಯು ಸ್ವಲ್ಪಸಮಯ ಚಿಂತಿಸಿ ನಂತರ ಉತ್ತರಿಸಿದನು.

ಬೃಹಸ್ಪತಿಃ

ತ್ವಂ ಭೂತಾನಾಮಧಿಪತಿಸ್ತ್ವಯಿ ಲೋಕಾಃ ಸಮಾಹಿತಾಃ ।
ನಮುಚೇರ್ವಿಶ್ವರೂಪಸ್ಯ ನಿಹಂತಾ ತ್ವಂ ಬಲಸ್ಯ ಚ ॥೨೫॥

ಬೃಹಸ್ಪತಿ– ದೇವರಾಜನೇ, ನೀನು ಸಕಲ ಪ್ರಾಣಿಗಳಿಗೆ ಸ್ವಾಮಿಯಾಗಿರುವೆ. ನಿನ್ನಲ್ಲಿಯೇ ಲೋಕಗಳೆಲ್ಲವೂ ಪ್ರತಿಷ್ಠಿತವಾಗಿವೆ. ನಮುಚಿ, ವಿಶ್ವರೂಪ, ಬಲ, ಇವರೆಲ್ಲರನ್ನೂ ನೀನು ಸಂಹರಿಸಿರುವಿ.

ತ್ವಮಾಜಹಾರ್ಷೀರ್ದೇವಾನಾಮೇಕವೀರ್ಯಃ ಶ್ರಿಯಂ ಪರಾಮ್ ।
ತ್ವಂ ಬಿಭರ್ಷಿ ಭುವಂ ದ್ಯಾಂ ಚ ಸದೈವ ಬಲಸೂದನ ॥೨೬॥

ಬಲಸೂದನನೇ, ಸಕಲ ದೇವತೆಗಳ ಶ್ರೇಷ್ಠವಾದ ವೀರ್ಯಸಂಪತ್ತುಗಳನ್ನು ನೀನೊಬ್ಬನೇ ರಾಕ್ಷಸರಿಂದ ಹಿಂದಿರುಗಿ ಪಡೆದುಕೊಂಡಿರುವೆ. ನಿರಂತರವೂ ಭೂಮಿ, ಸ್ವರ್ಗಲೋಕಗಳ ಭರಣ, ಪೋಷಣಗಳನ್ನು ಮಾಡುತ್ತಿರುವೆ.

ಪೌರೋಹಿತ್ಯಮಹಂ ಕೃತ್ವಾ ತವ ದೇವ ಸುರೇಶ್ವರ ।
ಯಾಜಯೇಯಂ ಕಥಂ ಮರ್ತ್ಯಂ ಮರುತ್ತಂ ಪಾಕಶಾಸನ ॥೨೭॥

ಸುರೇಶ್ವರನೇ, ಪಾಕಶಾಸನನೇ, ಅಂತಹ ನಿನಗೆ ಪೌರೋಹಿತ್ಯವನ್ನು ಮಾಡಿಸಿ, ಮರಣಧರ್ಮವುಳ್ಳ ಮರುತ್ತನಿಗೆ ಹೇಗೆ ತಾನೆ ಯಜ್ಞವನ್ನು ಮಾಡಿಸುವೆನು?

ಸಮಾಶ್ವಸಿಹಿ ದೇವೇಶ ನಾಹಂ ಮರ್ತ್ಯಾಯ ಕರ್ಹಿಚಿತ್ ।
ಗ್ರಹೀಷ್ಯಾಮಿ ಸ್ರುವಂ ಯಜ್ಞೇ ಶೃಣು ಚೇದಂ ವಚೋ ಮಮ ॥೨೮॥

ದೇವೇಂದ್ರನೇ, ಸಮಾಧಾನ ಮಾಡಿಕೊ. ಇನ್ನೆಂದೂ ನಾನು ಮನುಷ್ಯನ ಸಲುವಾಗಿ ಯಜ್ಞದಲ್ಲಿ ಸ್ರುವವನ್ನು ಹಿಡಿಯುವುದಿಲ್ಲ. ಇಷ್ಟುಮಾತ್ರವಲ್ಲ, ನನ್ನ ಮಾತನ್ನು ಕೇಳು.

ಹಿರಣ್ಯರೇತಾ ನೋಷ್ಣಃ ಸ್ಯಾತ್ ಪರಿವರ್ತೇತ ಮೇದಿನೀ ।
ಭಾಸಂ ಚ ನೋ ರವಿಃ ಕುರ್ಯಾತ್ ಮತ್ಸತ್ಯಂ ವಿಚಲೇದ್ ಯದಿ ॥

ಮಹೇಂದ್ರನೇ, ಬೆಂಕಿಯು ತಣ್ಣಗಾಗಬಹುದು. ಭೂಮಿಯು ತಲೆಕೆಳಗಾಗಬಹುದು. ಸೂರ್ಯನು ಕಾಂತಿರಹಿತನಾಗಬಹುದು. ಆದರೆ ನನ್ನ ಸತ್ಯಪ್ರತಿಜ್ಞೆ ಎಂದೂ ವ್ಯತ್ಯಯವಾಗುವುದಿಲ್ಲ.

ವೈಶಂಪಾಯನಃ

ಬೃಹಸ್ಪತಿವಚಃ ಶ್ರುತ್ವಾ ಶಕ್ರೋ ವಿಗತಮತ್ಸರಃ ।
ಪ್ರಶಸ್ಯೈನಂ ವಿವೇಶಾಥ ಸ್ವಮೇವ ಭವನಂ ತದಾ ॥೩೦॥

ವೈಶಂಪಾಯನ– ಜನಮೇಜಯನೇ, ಇಂದ್ರನು ಬೃಹಸ್ಪತಿಯ ಆ ಪ್ರತಿಜ್ಞೆಯನ್ನು ಕೇಳಿಸಿಕೊಂಡು, ಮಾತ್ಸರ್ಯರಹಿತನಾಗಿ ಬೃಹಸ್ಪತಿಯನ್ನು ಬಹಳವಾಗಿ ಪ್ರಶಂಸೆ ಮಾಡಿ ತನ್ನ ಆರಮನೆಗೆ ತೆರಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಬೃಹಸ್ಪತಿಶಪಥವಚನಂ ನಾಮ ಪಂಚಮೋऽಧ್ಯಾಯಃ ॥

॥ ಅಶ್ವಮೇಧಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ನಾರದರ ಆಜ್ಞೆಯಂತೆ ಮರುತ್ತನು ಸಂವರ್ತನನ್ನು ಸಂಪರ್ಕಿಸಿದ.

ವ್ಯಾಸಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಬೃಹಸ್ಪತೇಶ್ಚ ಸಂವಾದಂ ಮರುತ್ತಸ್ಯ ಚ ಧೀಮತಃ ॥೧॥

ವ್ಯಾಸರು– ಯುಧಿಷ್ಠಿರನೇ, ಈ ವಿಷಯದಲ್ಲಿ ಹಿಂದೆ ಬೃಹಸ್ಪತಿಗೂ ಮತ್ತು ಧೀಮಂತನಾದ ಮರುತ್ತನಿಗೂ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ದೇವರಾಜಸ್ಯ ಸಮಯಂ ಕೃತಮಾಂಗೀರಸೇನ ಹ ।
ಶ್ರುತ್ವಾ ಮರುತ್ತೋ ನೃಪತಿರ್ಮನ್ಯುಮಾಹಾರಯತ್ ತದಾ ॥೨॥

ಇಂದ್ರದೇವನು ಬೃಹಸ್ಪತಿಗಳಿಂದ ಮನುಷ್ಯರಿಗೆ ಯಜ್ಞವನ್ನು ಮಾಡಿಸುವುದಿಲ್ಲ ಎಂಬ ಪ್ರತಿಜ್ಞೆಯನ್ನು ಸ್ವೀಕಾರ ಮಾಡಿಸಿಕೊಂಡು ಒಂದು ಸಂಕಲ್ಪವನ್ನು ಮಾಡಿದನು.

ಸಂಕಲ್ಪ್ಯ ಮನಸಾ ಯಜ್ಞಂ ಕರಂಧಮಸುತಾತ್ಮಜಃ ।
ಬೃಹಸ್ಪತಿಮುಪಾಗಮ್ಯ ವಾಗ್ಮೀ ವಚನಮಬ್ರವೀತ್ ॥೩॥

ಇಂದ್ರದೇವನು ಶ್ರೇಷ್ಠವಾದ ಮಹಾಯಜ್ಞವನ್ನು ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿ, ಕರಂಧಮನ ಮಗನ ಮಗನಾದ ವಾಗ್ಮಿಯಾದ ಬೃಹಸ್ಪತಿಯನ್ನು ಸಂಪರ್ಕಿಸಿ ಹೀಗೆ ಹೇಳಿದನು.

ಮರುತ್ತಃ

ಭಗವನ್ ಯನ್ಮಯಾ ಪೂರ್ವಮಧಿಗಮ್ಯ ತಪೋಧನ ।
ಕೃತಾಭಿಸಂಧಿರ್ಯಜ್ಞಾಯ ಭವತೋ ವಚನಾದ್ ಗುರೋಃ ॥೪॥

ತದಹಂ ಯಷ್ಟುಮಿಚ್ಛಾಮಿ ಸಂಭಾರಾಃ ಸಂಭೃತಾಶ್ಚ ಮೇ ।
ಯಾಜ್ಯೋಽಸ್ಮಿ ಭವತಃ ಸಾಧೋ ತಂ ಪ್ರಾಪ್ನುಹಿ ವಿಧತ್ಸ್ವ ಚ ॥೫॥

ಮರುತ್ತ– ಪೂಜ್ಯನೇ, ತಪೋಧನನೇ, ಗುರುಶ್ರೇಷ್ಠನೇ, ಹಿಂದೆ ನಾನು ಒಮ್ಮೆ ಬಂದು ಯಜ್ಞದ ವಿಷಯದಲ್ಲಿ ನಿನ್ನ ಸಲಹೆಯನ್ನು ಕೇಳಿದ್ದೆನು. ಅಂದು ನೀನು ಹೇಳಿದ ರೀತಿಯಲ್ಲಿಯೇ ಇಂದು ಆ ಯಜ್ಞವನ್ನು ಪ್ರಾರಂಭಿಸಬೇಕೆಂದು ಸಂಕಲ್ಪಿಸಿದ್ದೇನೆ. ಆ ಯಜ್ಞದ ಸಲುವಾಗಿ ಬೇಕಾದ ಸಾಮಗ್ರಿಗಳೆಲ್ಲವನ್ನೂ ಸಂಗ್ರಹಿಸಿರುತ್ತೇನೆ. ಸತ್ಪುರುಷನೇ, ಮೊದಲಿನಿಂದಲೂ ನಿನ್ನಿಂದಲೇ ಯಾಗವನ್ನು ಮಾಡಿಸಿಕೊಂಡು ಬಂದಿರುತ್ತೇನಷ್ಟೆ! ಆದ್ದರಿಂದ ಇಂದು ನೀನು ನನ್ನ ಯಜ್ಞಶಾಲೆಗೆ ಆಗಮಿಸಿ, ನಾನು ಸಂಕಲ್ಪಿಸಿದ ಯಜ್ಞವನ್ನು ನನ್ನ ಮೂಲಕ ಮಾಡಿಸು.

ಬೃಹಸ್ಪತಿಃ

ನ ಕಾಮಯೇ ಯಾಜಯಿತುಂ ತ್ವಾಮಹಂ ಪೃಥಿವೀಪತೇ ।
ವೃತೋಽಸ್ಮಿ ದೇವರಾಜೇನ ಪ್ರತಿಜ್ಞಾತಂ ಚ ತಸ್ಯ ಮೇ ॥೬॥

ಬೃಹಸ್ಪತಿಯು ಉತ್ತರಿಸುತ್ತಾನೆ– ಪೃಥಿವೀಪತಿಯಾದ ಮರುತ್ತನೇ, ನಾನು ನಿನಗೆ ಯಜ್ಞವನ್ನು ಮಾಡಿಸಲು ಇಚ್ಛಿಸುವುದಿಲ್ಲ. ನನ್ನನ್ನು ಕುಲಪುರೋಹಿತನನ್ನಾಗಿ ಇಂದ್ರದೇವನು ಸ್ವೀಕರಿಸಿದ್ದಾನೆ. ಅವನನ್ನು ಬಿಟ್ಟು ಮನುಷ್ಯರಿಗೆ ಸಂಬಂಧಿಸಿದ ಯಜ್ಞವನ್ನು ಮಾಡಿಸುವುದಿಲ್ಲವೆಂದು ಇಂದ್ರನ ಬಳಿ ಪ್ರತಿಜ್ಞೆಯನ್ನು ಮಾಡಿರುತ್ತೇನೆ.

ಮರುತ್ತಃ

ಪಿತ್ರ್ಯಮಸ್ಮಿ ತವ ಕ್ಷೇತ್ರಂ ಬಹು ಮನ್ಯೇ ಚ ತೇ ಭೃಶಮ್ ।
ನ ಚಾಸ್ಮ್ಯಯಾಜ್ಯತಾಂ ಪ್ರಾಪ್ತೋ ಭಜಮಾನಂ ಭಜಸ್ವ ಮಾಮ್ ॥೭॥

ಮರುತ್ತನು ಹೇಳುತ್ತಾನೆ– ವಿಪ್ರಶ್ರೇಷ್ಠನೇ, ನಾನು ನಿನ್ನ ಪಿತೃ-ಪಿತಾಮಹರ ಕಾಲದಿಂದಲೂ ನಿನ್ನ ವಂಶದವರ ಯಾಜ್ಯವರ್ಗಕ್ಕೆ ಸೇರಿದ ವಂಶದವನಾಗಿದ್ದೇನೆ. ಅಂಗಿರಸರಿಗೆ ಸಂಬಂಧಿಸಿದ ಕ್ಷೇತ್ರದಲ್ಲಿಯೇ ಉತ್ಪನ್ನನಾಗಿದ್ದೇನೆ. ಆದ್ದರಿಂದ ನಿನ್ನಲ್ಲಿ ನನಗೆ ಅಪಾರವಾದ ಗೌರವ. ನಾನು ನಿನ್ನ ಯಾಜ್ಯನಾಗಿದ್ದೇನೆ. ನಿನ್ನ ಸೇವೆಯಲ್ಲಿಯೇ ತತ್ಪರನಾಗಿರುವ ನನ್ನನ್ನು ಅನುಗ್ರಹಿಸು.

ಬೃಹಸ್ಪತಿಃ

ಅಮರ್ತ್ಯಂ ಯಾಜಯಿತ್ವಾऽಹಂ ಯಾಜಯಿಷ್ಯೇ ನ ಮಾನುಷಮ್ ।
ಮರುತ್ತ ಗಚ್ಛ ವಾ ಮಾ ವಾ ನಿವೃತ್ತೋऽಸ್ಮ್ಯದ್ಯ ಯಾಜನಾತ್ ॥೮॥

ಬೃಹಸ್ಪತಿಯು ಹೇಳುತ್ತಾನೆ– ಯಾರಿಗೆ ಮರಣವಿಲ್ಲವೋ ಅಂತಹವರಿಗೆ ಯಜ್ಞವನ್ನು ಮಾಡಿಸುವ ಸಂಕಲ್ಪವನ್ನು ಮಾಡಿರುವ ನಾನು ಮೃತ್ಯುಧರ್ಮವಿರುವ ಮನುಷ್ಯರಿಗೆ ಹೇಗೆ ಯಜ್ಞ ಮಾಡಿಸಲಿ? ನೀನು ಎಲ್ಲಿಗೆ ಬೇಕಾದರೂ ಹೋಗಬಹುದು ಅಥವಾ ಇಲ್ಲಿಯೇ ಇರಬಹುದು. ನಾನು ಮನುಷ್ಯರಿಗೆ ಯಾಜಕನಾಗುವುದಿಲ್ಲ.

ನ ತ್ವಾಂ ಯಾಜಯಿತಾಸ್ಮ್ಯದ್ಯ ವೃಣು ಚಾನ್ಯಂ ಯಮಿಚ್ಛಸಿ ।
ಉಪಾಧ್ಯಾಯಂ ಮಹಾಬಾಹೋ ಯಸ್ತೇ ಯಜ್ಞಂ ಕರಿಷ್ಯತಿ ॥೯॥

ಮಹಾಬಾಹುವೇ, ನಾನಂತೂ ನಿನಗೆ ಯಜ್ಞವನ್ನು ಮಾಡಿಸುವುದಿಲ್ಲ. ಯಾರು ಯಜ್ಞ ಮಾಡಿಸುತ್ತಾರೋ, ಯಾರಿಂದ ಯಜ್ಞ ಮಾಡಿಸಲು ಬಯಸುತ್ತೀಯೋ ಅವರನ್ನೇ ನೀನು ಉಪಾಧ್ಯಾಯನನ್ನಾಗಿ ಸ್ವೀಕರಿಸು.

ವ್ಯಾಸಃ

ಏವಮುಕ್ತಸ್ತು ನೃಪತಿರ್ಮರುತ್ತೋ ವ್ರೀಡಿತೋऽಭವತ್ ।
ಪ್ರತ್ಯಾಗಚ್ಛತ್ ಸುಸಂವಿಗ್ನೋ ದದರ್ಶ ಪಥಿ ನಾರದಮ್ ॥೧೦॥

ದೇವರ್ಷಿಣಾ ಸಮಾಗಮ್ಯ ನಾರದೇನ ಸ ಪಾರ್ಥಿವಃ ।
ವಿಧಿವತ್ ಪ್ರಾಂಜಲಿಸ್ತಸ್ಥೌ ತಥೈನಂ ನಾರದೋऽಬ್ರವೀತ್ ॥೧೧॥

ವ್ಯಾಸರು ಹೇಳುತ್ತಾರೆ– ಯುಧಿಷ್ಠಿರನೇ, ಬೃಹಸ್ಪತಿಯು ಹೀಗೆ ಹೇಳಿದ ಬಳಿಕ ಮರುತ್ತರಾಜನು ತುಂಬಾ ನಾಚಿಕೆ ಹೊಂದಿದನು. ಖಿನ್ನ ಮನಸ್ಕನಾಗಿ ತನ್ನ ದೇಶಕ್ಕೆ

ಹಿಂದಿರುಗಿದನು. ಆ ಸಂದರ್ಭದಲ್ಲಿ ನಾರದರನ್ನು ಕಂಡನು. ಕಂಡೊಡನೆ ಮರುತ್ತನು ಯಥಾವಿಧಿಯಿಂದ ಅವರನ್ನು ಸತ್ಕರಿಸಿ ಬದ್ಧಾಂಜಲಿಯಾಗಿ ಅವರ ಮುಂದೆ ನಿಂತಾಗ, ನಾರದರು ಅವನನ್ನು ಪ್ರಶ್ನಿಸುತ್ತಾರೆ.

ನಾರದಃ

ರಾಜರ್ಷೇ ನಾತಿಹೃಷ್ಟೋಽಸಿ ಕಚ್ಚಿತ್ ಕ್ಷೇಮಂ ತವಾನಘ ।
ಕ್ವ ಗತೋಽಸಿ ಕುತೋ ವೇದಮಪ್ರೀತಿಸ್ಥಾನಮಾಗತಮ್ ॥೧೨॥

ನಾರದರು ಹೇಳುತ್ತಾರೆ– ರಾಜರ್ಷಿಯೇ, ನೀನು ಎಂದಿನಂತೆ ಸಂತುಷ್ಟ ಮನಸ್ಕನಾಗಿ ಕಾಣುತ್ತಿಲ್ಲ. ಅನಘನೇ, ನೀನು ಕ್ಷೇಮವಷ್ಟೆ? ಈಗ ಎಲ್ಲಿಗೆ ಹೋಗಿದ್ದೆ? ಯಾವ ಕಾರಣದಿಂದ ದುಃಖಕ್ಕೀಡಾಗಿರುವಿ?

ಶ್ರೋತವ್ಯಂ ಚೇನ್ಮಯಾ ರಾಜನ್ ಬ್ರೂಹಿ ಮೇ ಪಾರ್ಥಿವರ್ಷಭ ।
ವ್ಯಪನೇಷ್ಯಾಮಿ ತೇ ಮನ್ಯುಂ ಸರ್ವಯತ್ನೈರ್ನರಾಧಿಪ ॥೧೩॥

ಪಾರ್ಥಿವಶ್ರೇಷ್ಠನೇ, ನರಾಧಿಪನೇ, ಮಹಾರಾಜನೇ, ನಿನ್ನ ದುಃಖದ ಕಾರಣವನ್ನು ನಾನು ಕೇಳಬಹುದೆನಿಸಿದರೆ ಹೇಳುವಂಥವನಾಗು. ನಾನು ನಿನ್ನ ದುಃಖವನ್ನು ಪರಿಹರಿಸಲು ಎಲ್ಲ ವಿಧವಾದ ಪ್ರಯತ್ನವನ್ನು ಮಾಡುವೆನು.

ವ್ಯಾಸಃ

ಏವಮುಕ್ತೋ ಮರುತ್ತಸ್ತು ನಾರದೇನ ಮಹರ್ಷಿಣಾ ।
ವಿಪ್ರಲಂಭಮುಪಾಧ್ಯಾಯಾತ್ ಸರ್ವಮೇವ ನ್ಯವೇದಯತ್ ॥೧೪॥

ವ್ಯಾಸರು– ಮಹರ್ಷಿಗಳಾದ ನಾರದರು ಮರುತ್ತರಿಗೆ ಹೀಗೆ ಅಭಯವನ್ನು ನೀಡಲು, ಮರುತ್ತನು ಉಪಾಧ್ಯಾಯನಾದ ಬೃಹಸ್ಪತಿಯು ಮಾಡಿದ ವಂಚನೆಯನ್ನೂ, ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ತಿಳಿಸಿದನು.

ಮರುತ್ತಃ

ಗತೋಽಸ್ಮ್ಯಂಗಿರಸಃ ಪುತ್ರಂ ದೇವಾಚಾರ್ಯಂ ಬೃಹಸ್ಪತಿಮ್ ।
ಯಜ್ಞಾರ್ಥಮೃತ್ವಿಜಂ ಪ್ರಷ್ಟುಂ ಸ ಚ ಮಾಂ ನಾಭ್ಯನಂದತ ॥೧೫॥

ಮರುತ್ತ– ನಾರದರೇ, ಯಜ್ಞದ ಸಲುವಾಗಿ ಋತ್ವಿಜರಾಗಬೇಕೆಂದು ಕೇಳಿಕೊಳ್ಳಲು ಅಂಗಿರಸರ ಮಗನಾದ ದೇವಗುರು ಬೃಹಸ್ಪತಿಯನ್ನು ನೋಡಲು ಹೋಗಿದ್ದೆನು. ಆದರೆ ಅವರು ನನ್ನ ಪ್ರಾರ್ಥನೆಯನ್ನು ಸ್ವೀಕರಿಸಲಿಲ್ಲ.

ಪ್ರತ್ಯಾಖ್ಯಾತಶ್ಚ ತೇನಾಹಂ ಜೇವಿತಂ ನಾದ್ಯ ಕಾಮಯೇ ।
ಪರಿತ್ಯಕ್ತಶ್ಚ ಗುರುಣಾ ದೂಷಿತಶ್ಚಾಸ್ಮಿ ನಾರದ ॥೧೬॥

ಅವರು ನನ್ನ ಪ್ರಾರ್ಥನೆಯನ್ನು ತಿರಸ್ಕರಿಸುವುದರ ಜೊತೆಗೆ ನನ್ನನ್ನು ಮರಣಧರ್ಮನೆಂದು ದೂಷಿಸಿ ಪರಿತ್ಯಾಗ ಮಾಡಿದರು. ಆದ್ದರಿಂದ ನನಗೆ ಜೀವಿತವೇ ಅಸಹ್ಯವಾಗಿದೆ.

ವ್ಯಾಸಃ

ಏವಮುಕ್ತಸ್ತು ರಾಜ್ಞಾ ಸ ನಾರದಃ ಪ್ರತ್ಯುವಾಚ ಹ ।
ಆವಿಕ್ಷಿತಂ ಮಹಾರಾಜ ವಾಚಾ ಸಂಜೀವಯನ್ನಿವ ॥೧೭॥

ವ್ಯಾಸರು ಹೇಳುತ್ತಾರೆ– ಯುಧಿಷ್ಠಿರನೇ, ಮರುತ್ತನು ಹೀಗೆ ಹೇಳಿದ ಬಳಿಕ ದೇವರ್ಷಿ ಎನಿಸಿದ ನಾರದರು, ತಮ್ಮ ಅಮೃತಮಯವಾದ ಮಾತಿನ ಮೂಲಕ ಆವಿಕ್ಷಿತನ ಮಗನಾದ ಮರುತ್ತನನ್ನು ಪುನಃ ಬದುಕಿಸುವರೋ ಎಂಬಂತೆ ಮಾತುಗಳನ್ನು ಆಡಿದರು.

ನಾರದಃ

ರಾಜನ್ನಂಗಿರಸಃ ಪುತ್ರಃ ಸಂವರ್ತೋ ನಾಮ ಧಾರ್ಮಿಕಃ ।
ಚಂಕ್ರಮೀತಿ ದಿಶಃ ಸರ್ವಾ ದಿಗ್ವಾಸಾ ಮೋಹಯನ್ ಪ್ರಜಾಃ ॥೧೮॥

ನಾರದರು– ರಾಜನೇ, ಅಂಗಿರಸನ ಇನ್ನೊಬ್ಬ ಮಗನಾದ, ಧಾರ್ಮಿಕನಾದ ಸಂವರ್ತನೆಂಬ ಹೆಸರಿನ ಮಹರ್ಷಿಯೊಬ್ಬನಿದ್ದಾನೆ. ದಿಗಂಬರನಾಗಿದ್ದಾನೆ. ತನ್ನ ಚರ್ಯೆಯಿಂದ ಪ್ರಜೆಗಳನ್ನು ಭ್ರಾಂತಿಗೊಳಿಸುತ್ತಾ, ಸಮಸ್ತ ದಿಕ್ಕುಗಳಲ್ಲಿ ಸಂಚರಿಸುತ್ತಿದ್ದಾನೆ.

ತಂ ಗಚ್ಛ ಯದಿ ಯಾಜ್ಯಂ ತ್ವಾಂ ನ ವಾಂಛತಿ ಬೃಹಸ್ಪತಿಃ ।
ಪ್ರಸನ್ನಸ್ತ್ವಾಂ ಮಹಾತೇಜಾಃ ಸಂವರ್ತೋ ಯಾಜಯಿಷ್ಯತಿ ॥೧೯॥

ಬೃಹಸ್ಪತಿಯು ನಿನ್ನನ್ನು ಯಾಜ್ಯನನ್ನಾಗಿ ಪ್ರತಿಗ್ರಹಿಸಲು ಇಚ್ಛಿಸದಿದ್ದರೆ ಏನಾಯಿತು? ನೀನು ಅದೇ ಅಂಗಿರಸ ಸುತನಾದ ಸಂವರ್ತನ ಬಳಿ ಹೋಗು. ಮಹಾತೇಜಸ್ವಿಯಾದ ಆತನು ಪ್ರಸನ್ನನಾಗಿ ನಿನ್ನಿಂದ ಯಾಗವನ್ನು ಮಾಡಿಸುತ್ತಾನೆ.

ಮರುತ್ತಃ

ಸಂಜೀವಿತೋಽಹಂ ಭವತಾ ವಾಕ್ಯೇನಾನೇನ ನಾರದ ।
ಪಶ್ಯೇಯಂ ಕ್ವ ನು ಸಂವರ್ತಂ ಶಂಸ ಮೇ ವದತಾಂ ವರ ॥೨೦॥

ಮರುತ್ತನು ಹೇಳುತ್ತಾನೆ– ನಾರದರೇ, ನಿಮ್ಮ ಮಾತಿನಿಂದ ಪುನಃ ಜೀವ ಬಂದಂತಾಗಿದೆ. ವಾಗ್ಮಿಶ್ರೇಷ್ಠರೇ, ಸಂವರ್ತನನ್ನು ನಾನು ಎಲ್ಲಿ ಕಾಣಬೇಕೆಂಬುದನ್ನು ತಿಳಿಸಿರಿ.

ಕಥಂ ಚ ತಸ್ಮೈ ವರ್ತೇಯಂ ಕಥಂ ಮಾಂ ನ ಪರಿತ್ಯಜೇತ್ ।
ಪ್ರತ್ಯಾಖ್ಯಾತೋ ಹಿ ತೇನಾಪಿ ನಾಹಂ ಜೀವಿತುಮುತ್ಸಹೇ ॥೨೧॥

ಅವನು ನನ್ನನ್ನು ತಿರಸ್ಕಾರ ಮಾಡದಂತೆ ಅವನ ವಿಷಯದಲ್ಲಿ ನಾನು ಹೇಗೆ ವರ್ತಿಸಬೇಕೆಂಬುದನ್ನೂ ತಿಳಿಸಿರಿ. ಏಕೆಂದರೆ ಆತನೂ ನನ್ನನ್ನು ತಿರಸ್ಕರಿಸಿದರೆ ಮುಂದೆ ನಾನು ಬದುಕಿರಲಾರೆ.

ನಾರದಃ

ಉನ್ಮತ್ತವೇಷಂ ಬಿಭ್ರತ್ ಸ ಚಂಕ್ರಮೀತಿ ಯಥಾಸುಖಮ್ ।
ವಾರಾಣಸೀಂ ತು ನಗರೀಮಭೀಕ್ಷ್ಣಮುಪಸೇವತೇ ॥೨೨॥

ನಾರದರು ಹೇಳುತ್ತಾರೆ– ಮಹಾರಾಜನೇ, ಸಂವರ್ತನು ಉನ್ಮತ್ತರ ವೇಷವನ್ನು ಧರಿಸಿ, ವಾರಣಾಸಿ ನಗರದಲ್ಲಿ ಸಂಚರಿಸುತ್ತಿದ್ದಾನೆ. ಅಲ್ಲಿರುವ ಮಹೇಶ್ವರನನ್ನು ಸಂದರ್ಶಿಸುತ್ತಾ ನಿಶ್ಚಿಂತೆಯಿಂದ ತಿರುಗುತ್ತಿದ್ದಾನೆ.

ಯತ್ರ ಸಾಕ್ಷಾತ್ ಮಹಾದೇವೋ ದೇಹಾಂತೇ ಪರಮೇಶ್ವರಃ ।
ವ್ಯಾಚಷ್ಟೇ ತಾರಕಂ ಜ್ಞಾನಂ ಜಂತೂನಾಮಪವರ್ಗದಮ್ ॥೨೩॥

ವಾರಣಾಸಿಯಲ್ಲಾದರೂ ಮಹಾರುದ್ರನು ಪ್ರತಿಯೊಬ್ಬ ಜೀವರು ಮರಣವನ್ನು ಹೊಂದಿದ ಮೇಲೆ ರಾಮತಾರಕ ಮಂತ್ರವನ್ನು ಪ್ರತಿಯೊಬ್ಬರ ಕಿವಿಯಲ್ಲಿ ಮೋಕ್ಷಕ್ಕೆ ಸಾಧನವಾಗುವಂತೆ ಉಸುರುತ್ತಾನೆ.

ತಸ್ಯಾ ದ್ವಾರಂ ಸಮಾಸಾದ್ಯ ನ್ಯಸೇಥಾಃ ಕುಣಪಂ ಕ್ವಚಿತ್ ।
ತಂ ದೃಷ್ಟ್ವಾ ಯೋ ನಿವರ್ತೇತ ಸ ಸಂವರ್ತೋ ಮಹೀಪತೇ ॥೨೪॥

ಅಂತಹ ವಾರಣಾಸಿ ಪಟ್ಟಣದ ಮಹಾದ್ವಾರದಲ್ಲಿ ಒಂದು ಹೆಣವನ್ನು ಇಟ್ಟುಕೊಂಡು, ನೀನು ದಾರಿಹೋಕರ ಪ್ರತಿಕ್ರಿಯೆಯನ್ನು ಗಮನಿಸುತ್ತಿರು. ಆ ಹೆಣವನ್ನು ನೋಡಿದ ಕೂಡಲೇ ಯಾರು ತಾನು ಬಂದ ಹಾದಿಯನ್ನು ಹಿಡಿದು ಹಿಂದಿರುಗುತ್ತಾನೋ ಅವನೇ ಸಂವರ್ತನೆಂದು ತಿಳಿದುಕೊ.

ತಂ ಪೃಷ್ಠತೋಽನುಗಚ್ಛೇಥಾ ಯತ್ರ ಗಚ್ಛೇತ್ ಸ ವೀರ್ಯವಾನ್ ।
ತಮೇಕಾಂತೇ ಸಮಾಸಾದ್ಯ ಪ್ರಾಂಜಲಿಃ ಶರಣಂ ವ್ರಜ ॥೨೫॥

ವೀರ್ಯವಂತನಾದ ಸಂವರ್ತನು ಯಾವ ಕಡೆಗೆ ಓಡುತ್ತಾನೋ ನೀನೂ ಅವನು ಸಂಚರಿಸುವ ಸ್ಥಳಗಳಲ್ಲೆಲ್ಲ ಹಿಂಬಾಲಿಸಿಕೊಂಡೇ ಹೋಗು. ಅವನು ಏಕಾಂತ ಸ್ಥಳಕ್ಕೆ ಹೋದ ಬಳಿಕ ಅವನನ್ನು ಬದ್ಧಾಂಜಲಿಯಾಗಿ ಸಂಧಿಸಿ ಶರಣು ಹೊಂದು.

ಪೃಚ್ಛೇತ್ ತ್ವಾಂ ಯದಿ ಕೇನಾಹಂ ತವಾಖ್ಯಾತ ಇತಿ ಸ್ಮ ಹ ।
ಬ್ರೂಯಾಸ್ತ್ವಂ ನಾರದೇನೇತಿ ಸಂಜ್ಞಪ್ತ ಇತಿ ಶತ್ರುಹನ್ ॥೨೬॥

ಅವನೇನಾದರೂ ತನ್ನ ಪರಿಚಯವನ್ನು ಯಾರು ಮಾಡಿಕೊಟ್ಟರೆಂದು ಪ್ರಶ್ನಿಸಿದರೆ ನಾರದರೇ ಪರಿಚಯ ಮಾಡಿಕೊಟ್ಟರೆಂದು ತಿಳಿಸು.

ಸ ಚೇತ್ ತ್ವಾಮನುಯುಂಜೀತ ಮಮಾನುಗಮನೇಪ್ಸಯಾ ।
ಶಂಸೇಥಾ ವಹ್ನಿಮಾರೂಢಂ ಮಾಮಪಿ ತ್ವಮಶಂಕಯಾ ॥೨೭॥

ಸಂವರ್ತನೇನಾದರೂ ನನ್ನ ಬಳಿಗೆ ಬರುವ ಇಚ್ಛೆಯನ್ನು ಸೂಚಿಸಿದರೆ, ನಾರದರು ಎಲ್ಲಿದ್ದಾರೆಂದು ಪ್ರಶ್ನಿಸಿದರೆ, ನಾರದರು ಬೆಂಕಿಯಲ್ಲಿ ಸೇರಿಹೋದರೆಂದು ಸಂಶಯ ಬಾರದಂತೆ ಹೇಳು.

ವ್ಯಾಸಃ

ಸ ತಥೇತಿ ಪ್ರತಿಶ್ರುತ್ಯ ಪೂಜಯಿತ್ವಾ ಚ ನಾರದಮ್ ।
ಅಭ್ಯನುಜ್ಞಾಪ್ಯ ರಾಜರ್ಷಿರ್ಯಯೌ ವಾರಾಣಸೀಂ ಪುರೀಮ್ ॥೨೮॥

ವ್ಯಾಸರು– ಯುಧಿಷ್ಠಿರನೇ, ನಾರದರ ಆ ಮಾತನ್ನು ಕೇಳಿ, ರಾಜರ್ಷಿಯಾದ ಮರುತ್ತನು ಹಾಗೆಯೇ ಆಗಲೆಂದು ಹೇಳಿದನು. ಅವರನ್ನು ಯಥೋಚಿತವಾಗಿ ಸತ್ಕರಿಸಿ, ಅವರ ಆಜ್ಞೆಯನ್ನು ಸ್ವೀಕರಿಸಿ ವಾರಾಣಸಿಪುರಕ್ಕೆ ಪಯಣಿಸಿದನು.

ತತ್ರ ಗತ್ವಾ ಯಥೋಕ್ತಂ ಸ ಪುರ್ಯಾ ದ್ವಾರೇ ಮಹಾಯಶಾಃ ।
ಕುಣಪಂ ಸ್ಥಾಪಯಾಮಾಸ ನಾರದಸ್ಯ ವಚಃ ಸ್ಮರನ್ ॥೨೯॥

ಶ್ರೇಷ್ಠಕೀರ್ತಿಸಂಪನ್ನನಾದ ಮರುತ್ತನು ವಾರಾಣಸಿಗೆ ಹೋಗಿ ನಾರದರ ಮಾತನ್ನು ಜ್ಞಾಪಿಸಿಕೊಂಡು ಅವರು ತಿಳಿಸಿದಂತೆ ಪಟ್ಟಣದ ದ್ವಾರದಲ್ಲಿ ಶವವೊಂದನ್ನು ಇಟ್ಟನು.

ಯೌಗಪದ್ಯೇನ ವಿಪ್ರಃ ಸ ಪುರೀದ್ವಾರಂ ಸಮಾವಿಶತ್ ।
ತತಃ ಸ ಕುಣಪಂ ದೃಷ್ಟ್ವಾ ಸಹಸಾ ಸನ್ನ್ಯವರ್ತತ ॥೩೦॥

ದೈವವಿಧಿಯಂತೆ ಆ ಸಮಯಕ್ಕೆ ಸರಿಯಾಗಿ ಸಂವರ್ತನು ಆ ಪಟ್ಟಣದ ಮಹಾದ್ವಾರದ ಬಳಿಗೆ ಬಂದನು. ಮರುತ್ತನಿಟ್ಟಿರುವ ಹೆಣವನ್ನು ನೋಡಿದೊಡನೆ ಸಂವರ್ತನು ರಭಸದಿಂದ ಹಿಂದಿರುಗಿ ಹೊರಟನು.

ಸ ತಂ ನಿವೃತ್ತಮಾಲೋಕ್ಯ ಪ್ರಾಂಜಲಿಃ ಪೃಷ್ಠತೋಽನ್ವಗಾತ್ ।
ಆವಿಕ್ಷಿತೋ ಮಹೀಪಾಲಃ ಸಂವರ್ತಮುಪವೀಕ್ಷಿತುಮ್ ॥೩೧॥

ನಾರದರು ಹೇಳಿದಂತೆ ಅವನೇ ಸಂವರ್ತನೆಂದು ನಿಶ್ಚಯಿಸಿಕೊಂಡ, ಅವಿಕ್ಷಿತನ ಮಗನಾದ ಮರುತ್ತನು ಸಂವರ್ತನ ಶಿಷ್ಯನಾಗುವುದಕ್ಕಾಗಿ ಕೈಗಳನ್ನು ಜೋಡಿಸಿಕೊಂಡು ಅವನ ಹಿಂದೆಯೇ ಓಡಿದನು.

ಸ ಚೈನಂ ವಿಜನೇ ದೃಷ್ಟ್ವಾ ಪಾಂಸುಭಿಃ ಕರ್ದಮೇನ ಚ ।
ಶ್ಲೇಷ್ಮಣಾ ಚೈವ ರಾಜಾನಂ ಷ್ಠೀವನೈಶ್ಚ ಸಮಾಕಿರತ್ ॥೩೨॥

ಸಂವರ್ತನು ರಭಸವಾಗಿ ಓಡುತ್ತಾ ನಿರ್ಜನವಾದ ಏಕಾಂತ ಸ್ಥಳವನ್ನು ಸೇರಿದನು. ಮರುತ್ತನೂ ಅವನನ್ನು ಹಿಂಬಾಲಿಸುತ್ತಾ ಅಲ್ಲಿಗೆ ಹೋಗಲು, ಸಂವರ್ತನು ರಾಜನನ್ನು ಧೂಳಿನಿಂದಲೂ, ಕೆಸರಿನಿಂದಲೂ, ಕಫದಿಂದಲೂ, ಉಗುಳಿನಿಂದಲೂ ಮುಚ್ಚಿಬಿಟ್ಟನು.

ಸ ತಥಾ ಪೀಡ್ಯಮಾನೋಽಪಿ ಸಂವರ್ತೇನ ಮಹೀಪತಿಃ ।
ಅನ್ವಗಾದೇವ ತಮೃಷಿಂ ಪ್ರಾಂಜಲಿಃ ಸಂಪ್ರಸಾದಯನ್ ॥೩೩॥

ಸಂವರ್ತನು ಹೀಗೆ ಬಾಧೆಪಡಿಸುತ್ತಿದ್ದರೂ ಮರುತ್ತನು ಅದನ್ನು ಪರಿಗಣಿಸದೆ ಕರಜೋಡಿಸಿ ಸಂವರ್ತನನ್ನು ಪ್ರಸನ್ನಗೊಳಿಸುತ್ತಾ ಹಿಂದೆಯೇ ಹೋದನು.

ತತೋ ನಿವೃತ್ಯ ಸಂವರ್ತಃ ಪರಿಶ್ರಾಂತ ಉಪಾವಿಶತ್ ।
ಶೀತಲಚ್ಛಾಯಮಾಸಾದ್ಯ ನ್ಯಗ್ರೋಧಂ ಬಹುಶಾಖಿನಮ್ ॥೩೪॥

ಬಳಿಕ ರಭಸವಾಗಿ ಓಡುತ್ತಾ ಆಯಾಸಗೊಂಡ ಸಂವರ್ತನು ಹಿಂದಿರುಗಿ ಅನೇಕ ರೆಂಬೆಗಳಿಂದ ಕೂಡಿದ ಆಲದ ಮರದ ತಂಪಾದ ನೆರಳಿನಲ್ಲಿ ಕುಳಿತುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಮರುತ್ತಸ್ಯ ಸಂವರ್ತದರ್ಶನಂ ನಾಮ ಷಷ್ಠೋಽಧ್ಯಾಯಃ ॥

॥ ಅಶ್ವಮೇಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ಸಂವರ್ತ-ಮರುತ್ತರ ಸಂಭಾಷಣೆ. ಸಂವರ್ತನು ಮರುತ್ತನಿಗೆ ಯಜ್ಞವನ್ನು ಮಾಡಿಸಲು ಒಪ್ಪಿದುದು.

ವ್ಯಾಸಃ

ಕಥಮಸ್ಮಿ ತ್ವಯಾ ಜ್ಞಾತಃ ಕೇನ ವಾ ಕಥಿತೋಽಸ್ಮಿ ತೇ ।
ಏತದಾಚಕ್ಷ್ವ ಮೇ ಸತ್ಯಂ ಜೀವಿತಂ ಚೇತ್ ಪ್ರಿಯಂ ತವ ॥೧॥

ವ್ಯಾಸರು ಹೇಳುತ್ತಾರೆ– ಮಹಾರಾಜ ಯುಧಿಷ್ಠಿರನೇ, ಮರುತ್ತನಿಗೆ ಸಂವರ್ತನು ಹೇಳುತ್ತಾನೆ- ನಾನಿರುವುದು ನಿನಗೆ ಹೇಗೆ ತಿಳಿಯಿತು? ನನ್ನ ವಿಷಯವಾಗಿ ಯಾರು ನಿನಗೆ ತಿಳಿಸಿದರು? ನನ್ನ ಅನುಗ್ರಹವನ್ನು ಬಯಸುವಿಯಾದರೆ ನಾನು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರಿಸು.

ಸತ್ಯಂ ತೇ ಬ್ರುವತಃ ಸರ್ವೇ ಸಂಪತ್ಸ್ಯಂತೇ ಮನೋರಥಾಃ ।
ಮಿಥ್ಯಾ ಪ್ರಬ್ರುವತೋ ಮೂರ್ಧಾ ಸಪ್ತಧಾ ತೇ ಫಲಿಷ್ಯತಿ ॥೨॥

ನೀನು ಸತ್ಯವಾದ ವಿಚಾರವನ್ನೇ ಹೇಳಿದರೆ ನಿನ್ನ ಮನಸ್ಸಿನ ಅಭಿಲಾಷೆಗಳೆಲ್ಲವೂ ಪೂರ್ಣವಾಗುತ್ತವೆ. ಸುಳ್ಳು ಹೇಳಿದರೆ ನಿನ್ನ ತಲೆಯು ನೂರು ಹೋಳಾಗಿ ಸೀಳಿಹೋಗುತ್ತದೆ.

ಮರುತ್ತಃ

ನಾರದೇನ ಭವಾನ್ ಮಹ್ಯಮಾಖ್ಯಾತೋ ಗಚ್ಛತಾ ಪಥಿ ।
ಗುರುಪುತ್ರೋ ಮಮೇತಿ ತ್ವಂ ತತೋ ಮೇ ಪ್ರೀತಿರುತ್ತಮಾ ॥೩॥

ಮರುತ್ತನು ಹೇಳುತ್ತಾನೆ– ಮಹರ್ಷಿಗಳೇ, ನಾನು ದಾರಿಯಲ್ಲಿ ಸಂಚರಿಸುತ್ತಿರುವಾಗ ಮಹರ್ಷಿಗಳಾದ ನಾರದರು ನಿಮ್ಮ ವಿಷಯವನ್ನು ತಿಳಿಸಿದರು. ಅವರ ಮೂಲಕ ನನ್ನ ಗುರುಗಳಾದ ಅಂಗಿರಸರ ಮಕ್ಕಳು ನೀವು ಎಂಬುದು ತಿಳಿಯಿತು. ಅದರಿಂದ ಎಲ್ಲಿಲ್ಲದ ಸಂತೋಷವೂ ಉಂಟಾಯಿತು.

ಸಂವರ್ತಃ

ಸತ್ಯಮೇತದ್ ಭವಾನಾಹ ಸ ಮಾಂ ಜಾನಾತಿ ಸತ್ತಮ ।
ಕಥಯಸ್ವೈತದೇವಂ ಮೇ ಕ್ವ ನು ಸಂಪ್ರತಿ ನಾರದಃ ॥೪॥

ಸಂವರ್ತನು ಹೇಳುತ್ತಾನೆ– ಮಹಾರಾಜನೇ, ನೀನು ಸತ್ಯವನ್ನೇ ಹೇಳಿರುವೆ. ನಾನು ಯಜ್ಞ ಮಾಡಿಸಲು ಅರ್ಹನಾಗಿದ್ದೇನೆ ಎಂಬ ವಿಚಾರ ನಾರದರಿಗೆ ತಿಳಿದಿದೆ. ಈಗ ನಾರದರು ಎಲ್ಲಿದ್ದಾರೆ ಎಂಬುದನ್ನು ನನಗೆ ತಿಳಿಸು.

ಮರುತ್ತಃ

ಭವಂತಂ ಕಥಯಿತ್ವಾ ತು ಮಮ ದೇವರ್ಷಿಸತ್ತಮಃ ।
ತತೋ ಮಾಮಭ್ಯನುಜ್ಞಾಯ ಪ್ರವಿಷ್ಟೋ ಹವ್ಯವಾಹನಮ್ ॥೫॥

ಮರುತ್ತನು ಹೇಳುತ್ತಾನೆ– ದೇವಶ್ರೇಷ್ಠರಾದ ನಾರದರು ನನಗೆ ನೀವಿರುವ ಸ್ಥಳವನ್ನು, ನಿಮ್ಮನ್ನು ಗುರುತಿಸುವ ವಿಧಾನವನ್ನು ತಿಳಿಸಿ, ನಿಮ್ಮನ್ನು ನೋಡುವಂತೆ ಹೇಳಿ ಕೂಡಲೇ ಅಗ್ನಿಪ್ರವೇಶ ಮಾಡಿದರು.

ವ್ಯಾಸಃ

ಶ್ರುತ್ವಾ ತು ಪಾರ್ಥಿವಸ್ಯೈತತ್ ಸಂವರ್ತಃ ಪರಯಾ ಮುದಾ ।
ಏತಾವದಹಮಪ್ಯೇವಂ ಕುರ್ಯಾಮಿತಿ ತಮಬ್ರವೀತ್ ॥೬॥

ಸಂವರ್ತನು ಹೀಗೆ ಬಾಧೆಪಡಿಸುತ್ತಿದ್ದರೂ ಮರುತ್ತನು ಅದನ್ನು ಪರಿಗಣಿಸದೆ ಕರಜೋಡಿಸಿ ಸಂವರ್ತನನ್ನು ಪ್ರಸನ್ನಗೊಳಿಸುತ್ತಾ ಹಿಂದೆಯೇ ಹೋದನು.

ತತೋ ನಿವೃತ್ಯ ಸಂವರ್ತಃ ಪರಿಶ್ರಾಂತ ಉಪಾವಿಶತ್ ।
ಶೀತಲಚ್ಛಾಯಮಾಸಾದ್ಯ ನ್ಯಗ್ರೋಧಂ ಬಹುಶಾಖಿನಮ್ ॥೩೪॥

ಬಳಿಕ ರಭಸವಾಗಿ ಓಡುತ್ತಾ ಆಯಾಸಗೊಂಡ ಸಂವರ್ತನು ಹಿಂದಿರುಗಿ ಅನೇಕ ರೆಂಬೆಗಳಿಂದ ಕೂಡಿದ ಆಲದ ಮರದ ತಂಪಾದ ನೆರಳಿನಲ್ಲಿ ಕುಳಿತುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಮರುತ್ತಸ್ಯ ಸಂವರ್ತದರ್ಶನಂ ನಾಮ ಷಷ್ಠೋಽಧ್ಯಾಯಃ ॥

॥ ಅಶ್ವಮೇಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಏಳನೆಯ ಅಧ್ಯಾಯ

ಸಂವರ್ತ-ಮರುತ್ತರ ಸಂಭಾಷಣೆ. ಸಂವರ್ತನು ಮರುತ್ತನಿಗೆ ಯಜ್ಞವನ್ನು ಮಾಡಿಸಲು ಒಪ್ಪಿದುದು.

ವ್ಯಾಸಃ

ಕಥಮಸ್ಮಿ ತ್ವಯಾ ಜ್ಞಾತಃ ಕೇನ ವಾ ಕಥಿತೋಽಸ್ಮಿ ತೇ ।
ಏತದಾಚಕ್ಷ್ವ ಮೇ ಸತ್ಯಂ ಜೀವಿತಂ ಚೇತ್ ಪ್ರಿಯಂ ತವ ॥೧॥

ವ್ಯಾಸರು ಹೇಳುತ್ತಾರೆ- ಮಹಾರಾಜ ಯುಧಿಷ್ಠಿರನೇ, ಮರುತ್ತನಿಗೆ ಸಂವರ್ತನು ಹೇಳುತ್ತಾನೆ- ನಾನಿರುವುದು ನಿನಗೆ ಹೇಗೆ ತಿಳಿಯಿತು? ನನ್ನ ವಿಷಯವಾಗಿ ಯಾರು ನಿನಗೆ ತಿಳಿಸಿದರು? ನನ್ನ ಅನುಗ್ರಹವನ್ನು ಬಯಸುವಿಯಾದರೆ ನಾನು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರಿಸು.

ಸತ್ಯಂ ತೇ ಬ್ರುವತಃ ಸರ್ವೇ ಸಂಪತ್ಸ್ಯಂತೇ ಮನೋರಥಾಃ ।
ಮಿಥ್ಯಾ ಪ್ರಬ್ರುವತೋ ಮೂರ್ಧಾ ಸಪ್ತಧಾ ತೇ ಫಲಿಷ್ಯತಿ ॥೨॥

ನೀನು ಸತ್ಯವಾದ ವಿಚಾರವನ್ನೇ ಹೇಳಿದರೆ ನಿನ್ನ ಮನಸ್ಸಿನ ಅಭಿಲಾಷೆಗಳೆಲ್ಲವೂ ಪೂರ್ಣವಾಗುತ್ತವೆ. ಸುಳ್ಳು ಹೇಳಿದರೆ ನಿನ್ನ ತಲೆಯು ನೂರು ಹೋಳಾಗಿ ಸೀಳಿಹೋಗುತ್ತದೆ.

ಮರುತ್ತಃ

ನಾರದೇನ ಭವಾನ್ ಮಹ್ಯಮಾಖ್ಯಾತೋ ಗಚ್ಛತಾ ಪಥಿ ।
ಗುರುಪುತ್ರೋ ಮಮೇತಿ ತ್ವಂ ತತೋ ಮೇ ಪ್ರೀತಿರುತ್ತಮಾ ॥೩॥

ಮರುತ್ತನು ಹೇಳುತ್ತಾನೆ– ಮಹರ್ಷಿಗಳೇ, ನಾನು ದಾರಿಯಲ್ಲಿ ಸಂಚರಿಸುತ್ತಿರುವಾಗ ಮಹರ್ಷಿಗಳಾದ ನಾರದರು ನಿಮ್ಮ ವಿಷಯವನ್ನು ತಿಳಿಸಿದರು. ಅವರ ಮೂಲಕ ನನ್ನ ಗುರುಗಳಾದ ಅಂಗಿರಸರ ಮಕ್ಕಳು ನೀವು ಎಂಬುದು ತಿಳಿಯಿತು. ಅದರಿಂದ ಎಲ್ಲಿಲ್ಲದ ಸಂತೋಷವೂ ಉಂಟಾಯಿತು.

ಸಂವರ್ತಃ

ಸತ್ಯಮೇತದ್ ಭವಾನಾಹ ಸ ಮಾಂ ಜಾನಾತಿ ಸತ್ತಮ ।
ಕಥಯಸ್ವೈತದೇವಂ ಮೇ ಕ್ವ ನು ಸಂಪ್ರತಿ ನಾರದಃ ॥೪॥

ಸಂವರ್ತನು ಹೇಳುತ್ತಾನೆ– ಮಹಾರಾಜನೇ, ನೀನು ಸತ್ಯವನ್ನೇ ಹೇಳಿರುವೆ. ನಾನು ಯಜ್ಞ ಮಾಡಿಸಲು ಅರ್ಹನಾಗಿದ್ದೇನೆ ಎಂಬ ವಿಚಾರ ನಾರದರಿಗೆ ತಿಳಿದಿದೆ. ಈಗ ನಾರದರು ಎಲ್ಲಿದ್ದಾರೆ ಎಂಬುದನ್ನು ನನಗೆ ತಿಳಿಸು.

ಮರುತ್ತಃ

ಭವಂತಂ ಕಥಯಿತ್ವಾ ತು ಮಮ ದೇವರ್ಷಿಸತ್ತಮಃ ।
ತತೋ ಮಾಮಭ್ಯನುಜ್ಞಾಯ ಪ್ರವಿಷ್ಟೋ ಹವ್ಯವಾಹನಮ್ ॥೫॥

ಮರುತ್ತನು ಹೇಳುತ್ತಾನೆ– ದೇವಶ್ರೇಷ್ಠರಾದ ನಾರದರು ನನಗೆ ನೀವಿರುವ ಸ್ಥಳವನ್ನು, ನಿಮ್ಮನ್ನು ಗುರುತಿಸುವ ವಿಧಾನವನ್ನು ತಿಳಿಸಿ, ನಿಮ್ಮನ್ನು ನೋಡುವಂತೆ ಹೇಳಿ ಕೂಡಲೇ ಅಗ್ನಿಪ್ರವೇಶ ಮಾಡಿದರು.

ವ್ಯಾಸಃ

ಶ್ರುತ್ವಾ ತು ಪಾರ್ಥಿವಸ್ಯೈತತ್ ಸಂವರ್ತಃ ಪರಯಾ ಮುದಾ ।
ಏತಾವದಹಮಪ್ಯೇವಂ ಕುರ್ಯಾಮಿತಿ ತಮಬ್ರವೀತ್ ॥೬॥

ವ್ಯಾಸರು ಹೇಳುತ್ತಾರೆ– ಯುಧಿಷ್ಠಿರನೇ, ಮರುತ್ತ ರಾಜನ ಆ ಮಾತನ್ನು ಕೇಳಿ ಸಂವರ್ತನು ಸಂತುಷ್ಟನಾದನು. ಇಷ್ಟೇ ಆದರೆ ಅದನ್ನು ನಾನು ಮಾಡಲು ಸಮರ್ಥನಾಗಿದ್ದೇನೆ ಎಂದೂ ಹೇಳಿದನು.

ತತಃ ಸಂವರ್ತ ಉನ್ಮತ್ತೋ ವಾಚಾ ನಿರ್ಭರ್ತ್ಸಯನ್ನಿವ ।
ರೂಕ್ಷಯಾ ಬ್ರಾಹ್ಮಣೋ ರಾಜನ್ ಪುನಃ ಪುನರಥಾಬ್ರವೀತ್ ॥೭॥

ಮರುಕ್ಷಣದಲ್ಲಿಯೇ ಉನ್ಮತ್ತನಂತೆ ವೇಷ ಧರಿಸಿರುವ ಸಂವರ್ತಬ್ರಾಹ್ಮಣನು ಕಠಿಣವಾದ ಮಾತುಗಳಿಂದ ಮರುತ್ತನನ್ನು ಭಯಪಡಿಸುವನೋ ಎಂಬಂತೆ ಪುನಃ ಪುನಃ ಈ ಮಾತುಗಳನ್ನು ಹೇಳಿದನು.

ಸಂವರ್ತಃ

ಮದಪ್ರಧಾನೇನ ಮಯಾ ಸ್ವಚಿತ್ತವಶವರ್ತಿನಾ ।
ಏವಂ ವಿಕೃತರೂಪೇಣ ಕಥಂ ಯಾಜಿತುಮಿಚ್ಛಸಿ ॥೮॥

ಸಂವರ್ತ– ಮಹಾರಾಜನೇ, ನಾನೊಬ್ಬ ಉನ್ಮತ್ತನಾದ ವ್ಯಕ್ತಿ. ನನ್ನ ಮನಸ್ಸಿಗೆ ತೋರಿದಂತೆ ನಡೆಯುವವನು. ವಿಕೃತವಾದ ರೂಪವುಳ್ಳವನು. ಇಂತಹವನಿಂದ ನೀನು ಯಜ್ಞವನ್ನು ಮಾಡಿಸಿಕೊಳ್ಳಲು ಹೇಗೆ ಇಚ್ಛಿಸುವಿ?

ಭ್ರಾತಾ ಮಮ ಸಮರ್ಥಶ್ಚ ವಾಸವೇನ ಚ ಸತ್ಕೃತಃ ।
ವರ್ತತೇ ಯಾಜನೇ ಚೈವ ತೇನ ಕರ್ಮಾಣಿ ಕಾರಯ ॥೯॥

ನನ್ನ ಅಣ್ಣನಾದ ಬೃಹಸ್ಪತಿಯಾದರೂ ಯಜ್ಞವನ್ನು ಮಾಡಿಸುವುದರಲ್ಲಿ ಸಮರ್ಥನಾಗಿದ್ದಾನೆ. ದೇವತೆಗಳಿಗೆ ಒಡೆಯನಾದ ಇಂದ್ರನ ಜೊತೆಗೆ ಅವನ ಒಡನಾಟವಿದೆ. ಇಷ್ಟಾಗಿ ಯಜ್ಞ ಮಾಡಿಸುವ ಕರ್ಮದಲ್ಲಿ ನಿರಂತರ ಆಸಕ್ತನಾಗಿದ್ದಾನೆ. ಆದ್ದರಿಂದ ಈ ನಿನ್ನ ಯಜ್ಞ ಕರ್ಮವನ್ನು ಅವನಿಂದಲೇ ಮಾಡಿಸು.

ಗಾರ್ಹಸ್ಥ್ಯಂ ಚೈವ ಯಾಜ್ಯಾಶ್ಚ ಸರ್ವಾ ಗೃಹ್ಯಾಶ್ಚ ದೇವತಾಃ ।
ಪೂರ್ವಜೇನ ಮಮಾಕ್ಷಿಪ್ತಂ ಶರೀರಂ ವರ್ಜಿತಂ ತ್ವಿದಮ್ ॥೧೦॥

ನನ್ನ ಬಳಿ ಇರುವ ಗೃಹಕೃತ್ಯದ ಎಲ್ಲ ಪದಾರ್ಥಗಳು, ಯಜ್ಞದೀಕ್ಷಿತರು,

ಗೃಹದೇವತೆಗಳು ಎಲ್ಲವೂ ನನ್ನ ಅಣ್ಣನಾದ ಬೃಹಸ್ಪತಿಯಿಂದ ಹಿಂದೆಯೇ ಅಪಹೃತವಾಗಿವೆ. ಈಗ ನನ್ನ ಬಳಿ ಈ ಶರೀರ ಒಂದೇ ಉಳಿದಿದೆ.

ನಾಹಂ ತೇನಾನನುಜ್ಞಾತಃ ತ್ವಾಮಾವಿಕ್ಷಿತ ಕರ್ಹಿಚಿತ್ ।
ಯಾಜಯೇಯಂ ಕಥಂಚಿದ್ ವೈ ಸ ಮೇ ಪೂಜ್ಯತಮೋ ಗುರುಃ ॥೧೧॥

ಅವೀಕ್ಷಿತನೇ, ನಾನು ಅಣ್ಣನ ಅನುಮತಿಯಿಲ್ಲದೆ ಯಾವುದೇ ಕಾರಣದಿಂದಲೂ ಎಂದೂ ಯಜ್ಞವನ್ನು ಮಾಡಿಸುವುದಿಲ್ಲ. ಏಕೆಂದರೆ ಅವನು ನನಗೆ ಪರಮಪೂಜ್ಯನಾದ ಜ್ಯೇಷ್ಠ ಸಹೋದರನಾಗಿದ್ದಾನೆ.

ಸ ತ್ವಂ ಬೃಹಸ್ಪತಿಂ ಗಚ್ಛ ತಮನುಜ್ಞಾಪ್ಯ ಮಾಂ ವ್ರಜ ।
ತತೋಽಹಂ ಯಾಜಯಿಷ್ಯೇ ತ್ವಾಂ ಯದಿ ಯಷ್ಟುಮಿಹೇಚ್ಛಸಿ ॥೧೨॥

ನೀನು ಯಜ್ಞ ಮಾಡುವ ಇಚ್ಛೆಯುಳ್ಳವನಾಗಿದ್ದರೆ ಈಗಲೇ ನನ್ನ ಅಣ್ಣನಾದ ಬೃಹಸ್ಪತಿಯ ಸಮೀಪಕ್ಕೆ ಹೋಗು. ಅವನ ಅನುಮತಿಯನ್ನು ಪಡೆದು ಬಾ. ನಂತರವೇ ಯಜ್ಞವನ್ನು ಮಾಡಿಸುತ್ತೇನೆ.

ಮರುತ್ತಃ

ಬೃಹಸ್ಪತಿಂ ಗತಃ ಪೂರ್ವಮಹಂ ಸಂವರ್ತ ತಚ್ಛೃಣು ।
ನ ಮಾಂ ಕಾಮಯತೇ ಯಾಜ್ಯಂ ಮುನಿರ್ವಾಸವವಾರಿತಃ ॥೧೩॥

ಮರುತ್ತನು ಹೇಳುತ್ತಾನೆ– ಪೂಜ್ಯರೇ, ಈ ಮೊದಲು ನಾನು ಬೃಹಸ್ಪತಿಯ ಬಳಿಯೇ ಹೋಗಿದ್ದೆ. ಅಲ್ಲಿ ನಡೆದ ವೃತ್ತಾಂತವನ್ನು ತಿಳಿಸುವೆನು, ಕೇಳಿರಿ. ಇಂದ್ರನಿಗೆ ಯಾಜಕನಾಗಿರಬೇಕೆಂಬ ಇಚ್ಛೆಯಿಂದ ಬೃಹಸ್ಪತಿಯು ನನ್ನನ್ನು ಯಾಜ್ಯನನ್ನಾಗಿ ಸ್ವೀಕರಿಸಲು ಇಚ್ಛಿಸಲಿಲ್ಲ.

ಅಮರಂ ವಾಸವಂ ಯಾಜ್ಯಂ ಮಹರ್ಷೇ ಮಾ ಸ್ಮ ಮಾನುಷಮ್ ।
ಯಾಜಯೇಥಾ ಮರುತ್ತಂ ತ್ವಂ ಮರ್ತ್ಯಧರ್ಮಾಣಮಿತ್ಯುತ ॥೧೪॥

ದೇವತೆಗಳಿಗೆ ಯಾಜಕನಾದ ನಾನು ಮನುಷ್ಯರಿಗೆ ಯಜ್ಞವನ್ನು ಮಾಡಿಸುವುದಿಲ್ಲ. ಇಷ್ಟಾಗಿ ಮನುಷ್ಯರ ಯಜ್ಞವನ್ನು ಮಾಡಿಸಬಾರದೆಂದು ಇಂದ್ರನಿಂದ ತಡೆಯಲ್ಪಟ್ಟಿದ್ದೇನೆ ಎಂದು ಬೃಹಸ್ಪತಿಯು ನನಗೆ ಹೇಳಿದನು.

ಸ್ಪರ್ಧತೇ ಹಿ ಮಯಾ ವಿಪ್ರ ಸದಾ ಹಿ ಸ ಹಿ ವಾಸವಃ ।
ಏವಮಸ್ತಿ ತ್ವಿ ಚಾಪ್ಯುಕ್ತೋ ಭ್ರಾತ್ರಾ ತೇ ಬಲವೃತ್ರಹಾ ॥೧೫॥

ಇಂದ್ರನಾದರೂ ಬೃಹಸ್ಪತಿಗೆ ಮರುತ್ತನಿಗೆ ನೀನು ಯಜ್ಞವನ್ನು ಮಾಡಿಸಬಾರದು. ಮರುತ್ತ ರಾಜನು ಯಾವಾಗಲೂ ನನ್ನೊಡನೆ ಸ್ಪರ್ಧಿಸುತ್ತಲೇ ಇದ್ದಾನೆ ಎಂದು ಹೇಳಿದಾಗ ನಿನ್ನ ಅಣ್ಣನು ಆಗಲಿ ಎಂದು ಪ್ರತಿವಚನವನ್ನು ನೀಡಿದ್ದಾನೆ.

ಸ ಮಾಮಧಿಗತಂ ಪ್ರೇಮ್ಣಾ ಯಾಜ್ಯತ್ವೇ ನ ಬುಭೂಷತಿ ।
ದೇವರಾಜಂ ಸಮಾಶ್ರಿತ್ಯ ತದ್ವಿದ್ಧಿ ಮುನಿಪುಂಗವ ॥೧೬॥

ಪೂಜ್ಯರೇ, ನಾನು ಅತ್ಯಂತ ಅಭಿಮಾನದಿಂದಲೇ ಬೃಹಸ್ಪತಿಯ ಬಳಿಗೆ ಹೋಗಿ ಯಜ್ಞವನ್ನು ಮಾಡಿಸುವಂತೆ ನಿವೇದಿಸಿಕೊಂಡೆನು. ಆದರೆ ನನ್ನ ಪ್ರಾರ್ಥನೆಯನ್ನು ಆತ ತಿರಸ್ಕರಿಸಿದನು. ಇದು ಸತ್ಯಸಂಗತಿ ಎಂದು ತಿಳಿಯಿರಿ.

ಸೋಽಹಮಿಚ್ಛಾಮಿ ಭವತಾ ಸರ್ವಸ್ವೇನಾಪಿ ಯಾಜಿತುಮ್ ।
ತಂ ಕಾಮಯೇಽತಿಕ್ರಮಿತುಂ ವಾಸವಂ ತ್ವತ್ಕೃತೈರ್ಗುಣೈಃ ॥೧೭॥

ಆದ್ದರಿಂದ ನನ್ನ ಸರ್ವಸ್ವವನ್ನು ತ್ಯಾಗ ಮಾಡಿಯಾದರೂ ನಿಮ್ಮಿಂದಲೇ ಯಜ್ಞ ಮಾಡಿಸಬೇಕೆಂದು ಬಯಸಿದ್ದೇನೆ. ನಿಮ್ಮನ್ನು ಯಾಜಕನನ್ನಾಗಿ ಪಡೆದು ನಾನು ಸಂಪಾದಿಸಿದ ಗುಣಗಳ ಪ್ರಭಾವದಿಂದ ಇಂದ್ರನನ್ನು ಮೀರಲು ಇಚ್ಛಿಸುತ್ತೇನೆ.

ನ ಹಿ ಮೇ ವರ್ತತೇ ಬುದ್ಧಿರ್ಗಂತುಂ ಬ್ರಹ್ಮನ್ ಬೃಹಸ್ಪತಿಮ್ ।
ಪ್ರತ್ಯಾಖ್ಯಾತೋ ಹಿ ತೇನಾಸ್ಮಿ ತಥಾಽನಪಕೃತೇ ಸತಿ ॥೧೮॥

ನಾನು ಯಾವ ಅಪರಾಧ ಮಾಡದಿದ್ದರೂ ನಿಮ್ಮಣ್ಣನಿಂದ ತಿರಸ್ಕೃತನಾದೆನು. ಆದ್ದರಿಂದ ಪುನಃ ಅವನ ಬಳಿ ಹೋಗಿ ಪ್ರಾರ್ಥಿಸಲು ನನ್ನ ಬುದ್ಧಿಯು ಒಪ್ಪುತ್ತಿಲ್ಲ.

ಸಂವರ್ತಃ

ಚಿಕೀರ್ಷಸಿ ಯಥಾಕಾಮಂ ಸರ್ವಮೇತದ್ ತ್ವಯಿ ಧ್ರುವಮ್ ।
ಯದಿ ಸರ್ವಾನಭಿಪ್ರಾಯಾನ್ ಕರ್ತಾಸಿ ಮಮ ಪಾರ್ಥಿವ ॥೧೯॥

ಸಂವರ್ತನು ಹೇಳುತ್ತಾನೆ– ರಾಜನೇ, ನೀನು ನನ್ನ ಮನಸ್ಸಿಗನುಗುಣವಾಗಿ

ವರ್ತಿಸಿದರೆ, ನಾನು ಹೇಳಿದ ಕಾರ್ಯಗಳನ್ನು ಮಾಡಿದರೆ, ನಿನ್ನ ಯಾವ ಅಪೇಕ್ಷೆ ಇದೆಯೋ ಅದು ಖಂಡಿತವಾಗಿಯೂ ಸಿದ್ಧಿಸುತ್ತದೆ. ಇದು ಸತ್ಯ.

ಯಾಜ್ಯಮಾನಂ ಮಯಾ ಹಿ ತ್ವಾಂ ಬೃಹಸ್ಪತಿಪುರಂದರೌ ।
ದ್ವಿಷೇತಾಂ ಸಮಭಿಕ್ರುದ್ಧಾವೇತದೇಕಂ ಸಮರ್ಥಯೇಃ ॥೨೦॥

ನಾನು ನಿಮ್ಮ ಮೂಲಕ ಯಜ್ಞವನ್ನು ಮಾಡಿಸಲು ಪ್ರಾರಂಭಿಸಿದ ಕೂಡಲೇ ಬೃಹಸ್ಪತಿ, ಪುರಂದರರು ನಿನ್ನ ವಿಷಯದಲ್ಲಿ ಸಿಟ್ಟಾಗಿ ದ್ವೇಷಿಸುತ್ತಾರೆ. ಆ ಸಮಯದಲ್ಲಿ ನೀನು ನನ್ನ ಪಕ್ಷವನ್ನು ಸಮರ್ಥಿಸಬೇಕು. ನನ್ನನ್ನು ತ್ಯಾಗ ಮಾಡಬಾರದು.

ಸ್ಥೈರ್ಯಮತ್ರ ಕಥಂ ಮೇ ಸ್ಯಾತ್ ಸ ತ್ವಂ ನಿಃಸಂಶಯಂ ಕುರು ।
ಕುಪಿತಸ್ತಾ ತ್ವಂ ನ ಹೀದಾನೀಂ ಭಸ್ಮ ಕುರ್ಯಾಂ ಸಬಾಂಧವಮ್ ॥೨೧॥

ಬೃಹಸ್ಪತಿ, ಪುರಂದರರು ನನ್ನನ್ನು ದ್ವೇಷ ಮಾಡಿದರೂ ನನಗೆ ಸ್ಥೈರ್ಯ ಹುಟ್ಟುವ ರೀತಿಯಲ್ಲಿ, ಸಂದೇಹಕ್ಕೆ ಅವಕಾಶವಿಲ್ಲದಂತೆ ನೀನು ಕಾರ್ಯವನ್ನು ಮಾಡಬೇಕು. ಒಂದು ವೇಳೆ ಇದಕ್ಕೆ ವಿರುದ್ಧವಾಗಿ ವರ್ತಿಸಿದರೆ ಕ್ರುದ್ಧನಾದ ನಾನು ನಿನ್ನನ್ನು ಬಂಧು-ಬಾಂಧವರ ಸಹಿತವಾಗಿ ಈಗಲೇ ಭಸ್ಮ ಮಾಡಿಬಿಡುತ್ತೇನೆ.

ಮರುತ್ತಃ

ಯಾವತ್ ತಪೇತ್ ಸಹಸ್ರಾಂಶುಃ ತಿಷ್ಠೇರಂಶ್ಚಾಪಿ ಪರ್ವತಾಃ ।
ತಾವಲ್ಲೋಕಾನ್ನ ಲಭೇಯಂ ತ್ಯಜೇಯಂ ಸಂಗತಂ ಯದಿ ॥೨೨॥

ಮರುತ್ತ– ಪೂಜ್ಯರೇ, ನಾನು ನಿಮ್ಮನ್ನು ಪರಿತ್ಯಜಿಸಿದರೆ ಈ ಜಗತ್ತಿನಲ್ಲಿ ಸೂರ್ಯನು ಬೆಳಗುತ್ತಿರುವವರೆಗೂ ಪರ್ವತಗಳೆಲ್ಲ ಸ್ಥಿರವಾಗಿರುವ ತನಕವೂ ನನಗೆ ಉತ್ತಮವಾದ ಲೋಕಗಳು ಲಭಿಸದಿರಲಿ.

ಮಾ ವಾऽಪಿ ಶುಭಬುದ್ಧಿತ್ವಂ ಲಭೇಯಮಿಹ ಕರ್ಹಿಚಿತ್ ।
ಭೋಗೇಷು ಸಮ್ಯಗಜ್ಞಾನಂ ತ್ಯಜೇಯಂ ಸಂಗತಂ ಯದಿ ॥೨೩॥

ನಾನೇನಾದರೂ ನಿಮ್ಮ ಸಹವಾಸವನ್ನು ಬಿಟ್ಟಲ್ಲಿ ಈ ಜಗತ್ತಿನಲ್ಲಿ ನನಗೆ ಯಾವಾಗಲೂ ಶುದ್ಧವಾದ ಬುದ್ಧಿ ಹುಟ್ಟದಿರಲಿ. ವಿಷಯದಲ್ಲಿ ಲಂಪಟನಾಗಿರುವಂತಾಗಲಿ.

ಸಂವರ್ತಃ

ಆವಿಕ್ಷಿತ ಶುಭಾ ಬುದ್ಧಿಃ ಧ್ರಿಯತಾಂ ಸರ್ವಕರ್ಮಸು ।
ಯಾಜನಂ ಹಿ ಮಮಾಪ್ಯೇವಂ ವರ್ತತೇ ತ್ವಯಿ ಪಾರ್ಥಿವ ॥೨೪॥

ಸಂವರ್ತನು ಹೇಳುತ್ತಾನೆ– ಆವೀಕ್ಷಿತನೇ, ನೀನು ಮಾಡುವ ಕರ್ಮಗಳಲ್ಲಿ ನಿನಗೆ ಯಾವಾಗಲೂ ಶುಭವಾದ ಬುದ್ಧಿಯೇ ಇರಲಿ. ನನ್ನ ಮನಸ್ಸಿನಲ್ಲಿಯೂ ನಿನಗೆ ಯಜ್ಞ ಮಾಡಿಸಬೇಕೆಂಬ ಅಪೇಕ್ಷೆ ಉಂಟಾಗಿದೆ.

ಸಂವಿಧಾಸ್ಯೇ ಚ ತೇ ರಾಜನ್ನಕ್ಷಯಂ ದ್ರವ್ಯಮುತ್ತಮಮ್ ।
ಯೇನ ದೇವಾನ್ ಸಗಂಧರ್ವಾನ್ ಶಕ್ರಂ ಚಾಭಿಭವಿಷ್ಯಸಿ ॥೨೫॥

ಆದ್ದರಿಂದ ನಿನಗೆ ನಾನು ಅಕ್ಷಯವಾದ, ಶ್ರೇಷ್ಠವಾದ, ದ್ರವ್ಯವನ್ನು ಪಡೆಯುವ ಉಪಾಯವನ್ನು ಹೇಳುತ್ತೇನೆ. ಅಂತಹ ಶ್ರೇಷ್ಠವಾದ ದ್ರವ್ಯದಿಂದ ಗಂಧರ್ವರಿಂದ ಸಹಿತರಾದ ದೇವತೆಗಳನ್ನೂ ಮತ್ತು ಇಂದ್ರನನ್ನೂ ಮೀರಿ ನಿಲ್ಲುತ್ತೀಯೆ.

ನ ತು ಮೇ ವರ್ತತೇ ಬುದ್ಧಿರ್ಧನೇ ನಾನ್ಯೇಷು ವಾ ಪುನಃ ।
ವಿಪ್ರಿಯಂ ತು ಚಿಕೀರ್ಷಾಮಿ ಭ್ರಾತುಶ್ಚೇಂದ್ರಸ್ಯ ವಾಭಿಭೋ ॥೨೬॥

ನನಗೆ ಯಾಜ್ಯರನ್ನೂ, ಧನವನ್ನೂ ಸಂಗ್ರಹಿಸುವುದರಲ್ಲಿ ಆಸಕ್ತಿಯಿಲ್ಲ. ಆದರೆ ಈಗ ಮಾತ್ರ ನಿನ್ನನ್ನು ಯಾಜ್ಯನನ್ನಾಗಿ ಪರಿಗ್ರಹಿಸಿ, ಇಂದ್ರ-ಬೃಹಸ್ಪತಿಗಳಿಗೂ ಪ್ರಿಯವಲ್ಲದ ಕಾರ್ಯವನ್ನು ಮಾಡುತ್ತೇನೆ.

ಗಮಯಿಷ್ಯಾಮಿ ಚೇಂದ್ರೇಣ ಸಮತಾಮಪಿ ತೇ ಧ್ರುವಮ್ ।
ಪ್ರಿಯಂ ಚ ತೇ ಕರಿಷ್ಯಾಮಿ ಸತ್ಯಮೇತದ್ ಬ್ರವೀಮಿ ತೇ ॥೨೭॥

ನಿಶ್ಚಯವಾಗಿಯೂ ನಾನು ನಿನ್ನನ್ನು ಇಂದ್ರನಿಗೆ ಸದೃಶನನ್ನಾಗಿ ಮಾಡುತ್ತೇನೆ. ನಿನಗೆ ಪ್ರಿಯವಾದುದನ್ನೂ ಮಾಡುತ್ತೇನೆ. ಈ ಸತ್ಯವಚನವನ್ನು ನಿನಗೆ ಹೇಳುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಸಂವರ್ತಪ್ರತಿಜ್ಞಾ ನಾಮ ಸಪ್ತಮೋऽಧ್ಯಾಯಃ ॥

॥ ಆಶ್ವಮೇಧಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ಸಂವರ್ತನಿಂದ ಹಿರಣ್ಯಪ್ರಾಪ್ತಿಗಾಗಿ ಮರುತ್ತನಿಗೆ ಮಹಾದೇವನ
ಸ್ತೋತ್ರೋಪದೇಶ. ಮರುತ್ತಿನಿಂದ ಧನದ ಪ್ರಾಪ್ತಿ.
ಮರುತ್ತನ ಐಶ್ವರ್ಯವನ್ನು ಕಂಡು ಬೃಹಸ್ಪತಿಯ ಚಿಂತೆ.

ಸಂವರ್ತಃ

ಮೇರೌ ಹಿಮವತಃ ಪೃಷ್ಠೇ ಮುಂಜವಾನ್ ನಾಮ ಪರ್ವತಃ ।
ತಪ್ಯತೇ ತತ್ರ ಭಗವಾನ್ ತಪೋ ನಿತ್ಯಮುಮಾಪತಿಃ ॥೧॥

ಸಂವರ್ತನು ಹೇಳುತ್ತಾನೆ– ಮರುತ್ತನೇ, ಹಿಮವದ್ ಪರ್ವತದ ಹಿಂಭಾಗದಲ್ಲಿ ಮೇರು ಶಿಖರದಲ್ಲಿ ಮುಂಜವಂತ ಎಂಬ ಹೆಸರಿನ ಪರ್ವತವಿದೆ. ಆ ಪರ್ವತದಲ್ಲಿ ಪೂಜ್ಯನಾದ ಉಮಾಪತಿಯು ನಿತ್ಯವೂ ತಪೋನಿರತನಾಗಿದ್ದಾನೆ.

ವನಸ್ಪತೀನಾಂ ಮೂಲೇಷು ಶೃಂಗೇಷು ಶಿಖರೇಷು ಚ ।
ಗುಹಾಸು ಶೈಲರಾಜಸ್ಯ ಯಥಾಕಾಮಂ ಯಥಾಸುಖಮ್ ॥೨॥

ಉಮಾಸಹಾಯೋ ಭಗವಾನ್ ಯತ್ರ ನಿತ್ಯಂ ಮಹೇಶ್ವರಃ ।
ಆಸ್ತೇ ಶೂಲೀ ಮಹಾತೇಜಾ ನಾನಾಭೂತಸಮಾವೃತಃ ॥೩॥

ಆ ಪರ್ವತಶ್ರೇಣಿಗಳಲ್ಲಿ ಅನೇಕ ವೃಕ್ಷಗಳಿವೆ. ಅವುಗಳ ಬುಡದಲ್ಲಿ ಹಳ್ಳ-ತಿಟ್ಟುಗಳಿಂದ ಕೂಡಿದ ಶಿಖರಗಳಲ್ಲಿ ಶೈಲರಾಜನಾದ ಹಿಮವಂತನ ಗುಹೆಗಳಲ್ಲಿ ಮಹಾತೇಜಸ್ವಿಯಾದ, ಶೂಲಪಾಣಿಯಾದ, ನಾನಾವಿಧವಾದ ಭೂತಗಳಿಂದ ಕೂಡಿರುವ ಮಹೇಶ್ವರನು ತನ್ನ ಮನದನ್ನೆಯಾದ ಉಮೆಯೊಡನೆ ಯಥೇಚ್ಛವಾಗಿ ಸುಖದಿಂದ ವಿಹರಿಸುತ್ತಾ ಇದ್ದಾನೆ.

ತತ್ರ ರುದ್ರಾಶ್ಚ ಸಾಧ್ಯಾಶ್ಚ ವಿಶ್ವೇ ಚ ವಸವಸ್ತಥಾ ।
ಯಮಶ್ಚ ವರುಣಶ್ಚೈವ ಕುಬೇರಶ್ಚ ಸಹಾನುಗಃ ॥೪॥

ಭೂತಾನಿ ಚ ಪಿಶಾಚಾಶ್ಚ ನಾಸತ್ಯಾವಪಿ ಚಾಶ್ವಿನೌ ।
ಗಂಧರ್ವಾಪ್ಸರಸಶ್ಚೈವ ಯಕ್ಷಾ ದೇವರ್ಷಯಸ್ತಥಾ ॥೫॥

ಆದಿತ್ಯಾ ಮರುತಶ್ಚೈವ ಯಾತುಧಾನಾಶ್ಚ ಸರ್ವಶಃ ।
ಉಪಾಸತೇ ಮಹಾತ್ಮಾನಂ ಬಹುರೂಪಮುಮಾಪತಿಮ್ ॥೬॥

ರಮತೇ ಭಗವಾಂಸ್ತತ್ರ ಕುಬೇರಾನುಚರೈಃ ಸಹ ।
ವಿಕೃತೈರ್ವಿಕೃತಾಕಾರೈಃ ಕ್ರೀಡದ್ಭಿಃ ಪೃಥಿವೀಪತೇ ॥೭॥

ಆ ಸ್ಥಳದಲ್ಲಿ ಏಕಾದಶರುದ್ರರು, ಸಾಧ್ಯರು, ವಿಶ್ವೇದೇವತೆಗಳು, ವಸುಗಳು, ಯಮ, ವರುಣ, ಕುಬೇರ, ಅವನ ಪರಿವಾರದವರು, ಭೂತಗಣಗಳು, ಪಿಶಾಚಗಳು, ನಾಸತ್ಯರೆನಿಸಿದ ಅಶ್ವಿನೀದೇವತೆಗಳು, ಗಂಧರ್ವರು, ಅಪ್ಸರಾಸ್ತ್ರೀಯರು, ದೇವರ್ಷಿಗಳು, ದ್ವಾದಶಾದಿತ್ಯರು, ಮರುದ್ಗಣ, ಯಾತುಧಾನರು - ಇವರೆಲ್ಲರೂ ಮಹಾತ್ಮನಾದ, ಉಮಾಪತಿಯಾದ ಪರಮೇಶ್ವರನನ್ನು ಉಪಾಸನೆ ಮಾಡುತ್ತಿದ್ದಾರೆ. ಪೂಜ್ಯನಾದ ಮಹಾರುದ್ರನು ನಾನಾ ವಿಧವಾದ ಭಯಂಕರವಾದ ಆಕಾರಗಳನ್ನು ಹೊಂದಿರುವ ಕುಬೇರನ ಅನುಚರರೊಂದಿಗೆ ಕ್ರೀಡಾವಿನೋದಗಳಲ್ಲಿ ತೊಡಗಿ ಆನಂದದಿಂದ ಇರುತ್ತಾನೆ.

ಶ್ರಿಯಾ ಜ್ವಲನ್ ದೃಶ್ಯತೇ ವೈ ಬಾಲಾದಿತ್ಯಸಮದ್ಯುತಿಃ ॥೮॥

ಆ ಮಹರುದ್ರನು ಕಾಂತಿಯಿಂದ ಉದಿಸುವ ಸೂರ್ಯನ ಸದೃಶನಾಗಿ ಬೆಳಗುತ್ತಿದ್ದಾನೆ.

ನ ರೂಪಂ ದೃಶ್ಯತೇ ತಸ್ಯ ಸಂಸ್ಥಾನಂ ವಾ ಕಥಂಚನ ।
ನಿರ್ದೇಷ್ಟುಂ ಪ್ರಾಣಿಭಿಃ ಕೈಶ್ಚಿತ್ ಪ್ರಾಕೃತೈರ್ಮಾಂಸಲೋಚನೈಃ ॥೯॥

ಅವನ ತೇಜಸ್ಸನ್ನು ಸಾಮಾನ್ಯರಿಂದ ನೋಡಲಾಗುವುದಿಲ್ಲ. ಅವನ ಮನೆಗಳನ್ನೂ ನೋಡಲಾಗುವುದಿಲ್ಲ. ಮಾಂಸಮಯವಾದ ಕಣ್ಣುಗಳಿಂದ ಕೂಡಿದ ಪ್ರಾಣಿಗಳಿಗೆ ಪರಶಿವನ ರೂಪ, ಆಕಾರಗಳನ್ನು ಕಾಣಲಾಗದು.

ನೋಷ್ಣಂ ನ ಶಿಶಿರಂ ತತ್ರ ನ ವಾಯುರ್ನ ಚ ಭಾಸ್ಕರಃ ।
ನ ಜರಾ ಕ್ಷುತ್ತಿಪಾಸೇ ವಾ ನ ಮೃತ್ಯುರ್ನ ಭಯಂ ನೃಪ ॥೧೦॥

ಮಹಾರಾಜನೇ, ಆ ಮಹಾರುದ್ರನಿರುವ ಸ್ಥಳದಲ್ಲಿ ಅತಿಯಾದ ಬಿಸಿಲೂ ಇಲ್ಲ, ಅತಿಯಾದ ತಂಪೂ ಇರುವುದಿಲ್ಲ. ವಾಯುವಿನ ಪ್ರಕೊಪವಿಲ್ಲ, ಸೂರ್ಯನ

ತೀಕ್ಷ್ಣತೆಯಿಲ್ಲ. ಮುಪ್ಪು, ಹಸಿವು, ನೀರಡಿಕೆಗಳು, ಮೃತ್ಯು, ಭಯಗಳು ಅಲ್ಲಿ ಇರುವುದಿಲ್ಲ.

ತಸ್ಯ ಶೈಲಸ್ಯ ಪಾರ್ಶ್ವೇಷು ಸರ್ವೇಷು ಜಯತಾಂ ವರ ।
ಧಾತವೋ ಜಾತರೂಪಸ್ಯ ರಶ್ಮಯಃ ಸವಿತುರ್ಯಥಾ ॥೧೧॥

ವಿಜಯಿಗಳಲ್ಲಿ ಶ್ರೇಷ್ಠನಾದವನೇ, ಆ ಪರ್ವತದ ನಾಲ್ಕು ಕಡೆಗಳಲ್ಲಿಯೂ ಸೂರ್ಯನ ಕಿರಣಗಳಿಗೆ ಸಮಾನವಾಗಿ ಹೊಳೆಯುವ ಸುವರ್ಣದ ಗಣಿಗಳಿವೆ.

ರಕ್ಷ್ಯಂತೇ ತೇ ಕುಬೇರಸ್ಯ ಸಹಾಯೈರುದ್ಯತಾಯುಧೈಃ ।
ಚಿಕೀರ್ಷದ್ಭಿಃ ಪ್ರಿಯಂ ರಾಜನ್ ಕುಬೇರಸ್ಯ ಮಹಾತ್ಮನಃ ॥೧೨॥

ಆ ಗಣಿಗಳು ಮಹಾತ್ಮನಾದ ಕುಬೇರನಿಗೆ ಪ್ರಿಯವನ್ನುಂಟು ಮಾಡಲು ಬಯಸುವ, ಆಯುಧಗಳನ್ನು ಎತ್ತಿ ಹಿಡಿರುವ ಕುಬೇರನ ಸೇವಕರಿಂದ ರಕ್ಷಿಸಲ್ಪಟ್ಟಿವೆ.

ತತ್ರ ಗತ್ವಾ ತ್ವಮನ್ವಾಸ್ಯ ಮಹಾಯೋಗೇಶ್ವರಂ ಶಿವಮ್ ।
ಕುರು ಪ್ರಣಾಮಂ ರಾಜರ್ಷೇ ಭಕ್ತ್ಯಾ ಪರಮಯಾ ಯುತಃ ॥೧೩॥

ನೀನು ಅಲ್ಲಿಗೆ ತೆರಳಿ ಮಹಾಯೋಗೇಶ್ವರನಾದ ಶಿವನನ್ನು ಪರಮಭಕ್ತಿಯಿಂದ ನಮಸ್ಕರಿಸು.

ತಸ್ಮೈ ಭಗವತೇ ಕೃತ್ವಾ ನಮಃ ಶರ್ವಾಯ ವೇಧಸೇ ।
ಏಭಿಸ್ತಂ ನಾಮಭಿರ್ದೇವಂ ಸರ್ವವಿದ್ಯಾಧರಂ ಸ್ತುಹಿ ॥೧೪॥

ಪೂಜ್ಯನಾದ ಮಹಾರುದ್ರನನ್ನು ನಮಸ್ಕರಿಸಿ ಪೂಜ್ಯನಾದ ಶರ್ವನೆನಿಸಿದ, ಸರ್ವವಿದ್ಯಾಧರನಾದ ಆ ಮಹಾರುದ್ರನನ್ನು ಈ ನಾಮಗಳಿಂದ ಸ್ತುತಿಸು.

ರುದ್ರಾಯ ಶಿತಿಕಂಠಾಯ ಸುರೂಪಾಯ ಸುವರ್ಚಸೇ ।
ಕಪರ್ದಿನೇ ಕರಾಲಾಯ ಹರ್ಯಕ್ಷವರದಾಯ ಚ ॥೧೫॥

ರುದ್ರನೆನಿಸಿದ, ಸಂಸಾರಿಗಳ ದುಃಖಮಿಶ್ರವಾದ ಸುಖವನ್ನು ಪರಿಹರಿಸುವ, ಜ್ಞಾನವನ್ನು ನೀಡುವುದರಿಂದ ಶಿತಿಕಂಠನೆನಿಸಿದ, ಸ್ಫುರದ್ರೂಪಿಯಾದ, ವರ್ಚಸ್ವಿಯಾದ,

ಜಟಾಜೂಟಗಳಿಂದ ಕೂಡಿದ, ಕರಾಲನೆನಿಸಿದ, ವಿಷ್ಣುವಿನಲ್ಲಿಯೇ ದೃಷ್ಟಿಯುಳ್ಳ, ಸಜ್ಜನರಿಗೆ ವರಪ್ರದನಾದ ಮಹಾರುದ್ರನೇ ನಿನಗೆ ನಮಸ್ಕಾರ.

ತ್ರ್ಯಕ್ಷಾಯ ಪೂಷ್ಣೋ ದಂತಭಿದೇ ವಾಮನಾಯ ಶಿವಾಯ ಚ ।
ಯಾಮ್ಯಾಯಾವ್ಯಕ್ತಕೇಶಾಯ ಶರ್ವಾಣೀಶಂಕರಸ್ಯ ಚ ॥೧೬॥

ಮೂರುಕಣ್ಣುಗಳನ್ನು ಹೊಂದಿರುವ, ಪೂಷನ ಹಲ್ಲುಗಳನ್ನು ಮುರಿದಿರುವ, ಸುಂದರನಾದ ಶಿವನೇ, ಭಗವಂತನಿಂದ ನಿಯಮನಕ್ಕೆ ಒಳಪಟ್ಟವನೇ, ಅವ್ಯಕ್ತಕೇಶನೇ, ಶರ್ವಾಣಿ ಶಂಕರನೇ ನಿನಗೆ ನಮಸ್ಕಾರ.

ಕ್ಷೇಮ್ಯಾಯ ಹರಿನೇತ್ರಾಯ ಸ್ಥಾಣವೇ ಪುರುಷಾಯ ಚ ।
ಹರಿಕೇಶಾಯ ಮುಂಡಾಯ ಕ್ರೋಧಾಯೋತ್ತರಣಾಯ ಚ ॥೧೭॥

ಲೋಕಕ್ಷೇಮಕರನೇ, ಹರಿದ್ವರ್ಣದ ಕಣ್ಣುಳ್ಳವನೇ, ಹರಿಯನ್ನೇ ನೋಡುವ ಕಣ್ಣುಳ್ಳವನೇ, ಸ್ಥಾಣು ಎಂದು ಪ್ರಸಿದ್ಧನಾದವನೇ, ಪುರುಷಶ್ರೇಷ್ಠನೇ, ಹೊಂಬಣ್ಣದ ತಲೆಕೂದಲನ್ನು ಉಳ್ಳವನೇ, ಸಂನ್ಯಾಸಿ ಸ್ವರೂಪಿ ಎನಿಸಿದವನೇ (ಶುಕರೂಪದಿಂದ), ಕೋಪಗೊಳ್ಳುವವನಾದ ಸಂಸಾರದಿಂದ ಭಕ್ತರನ್ನು ಉದ್ಧರಿಸುವವನೂ ಆದ ಮಹಾರುದ್ರನೇ ನಿನಗೆ ನಮಸ್ಕಾರ.

ಭಾಸ್ವರಾಯ ಸುತೀರ್ಥಾಯ ದೇವದೇವಾಯ ರಂಹಸೇ ।
ಉಷ್ಣೀಷಿಣೇ ಸುವಕ್ತ್ರಾಯ ಸಹಸ್ರಾಕ್ಷಾಯ ಮೀಢುಷೇ ॥೧೮॥

ಪ್ರಭಾಸಂಪನ್ನನಾದವನೇ, ಪವಿತ್ರ ತೀರ್ಥಸ್ವರೂಪಿ ಎನಿಸಿದವನೇ, ದೇವದೇವನೇ, ವೇದವಂತನಾದವನೇ, ಕಿರೀಟವನ್ನು ಧರಿಸಿದವನೇ ಅಥವಾ ರಾಕ್ಷಸರನ್ನೂ ನಿಯಮನ ಮಾಡಲು ಸಮರ್ಥನಾದವನೇ, ಸುಂದರವಾದ ಮುಖವುಳ್ಳವನೇ, ಸಹಸ್ರಾಕ್ಷನೇ ನಿನಗೆ ನಮಸ್ಕಾರ.

ಗಿರಿಶಾಯ ಪ್ರಶಾಂತಾಯ ಯತಯೇ ಚೀರವಾಸಸೇ ।
ಬಿಲ್ವದಂಡಾಯ ಸಿದ್ಧಾಯ ಸರ್ವದಂಡಧರಾಯ ಚ ॥೧೯॥

ಗಿರೀಶನಾದ, ಪ್ರಶಾಂತಸ್ವರೂಪಿಯಾದ, ಜಿತೇಂದ್ರಿಯನಾದ, ನಾರುಮಡಿಯನ್ನು ಧರಿಸಿದ, ಬಿಲ್ವದಂಡಧಾರಿಯಾದ, ಸಿದ್ಧಪುರುಷನಾದ, ಸಮಸ್ತವಿಧವಾದ ದಂಡಗಳನ್ನು ಧರಿಸಿರುವ (ಅಪರಾಧಕ್ಕೆ ತಕ್ಕಂತೆ ಎಲ್ಲ ವಿಧವಾದ ದಂಡನೆಯನ್ನು ನೀಡುವವನಾದ)

ಮೃಗವ್ಯಾಧಾಯ ಮಹತೇ ಧನ್ವಿನೇ ಚ ಭವಾಯ ಚ ।
ಪರಾಯ ಸೌಮ್ಯವಕ್ತ್ರಾಯ ಸ್ರುವಹಸ್ತಾಯ ವರ್ಷಿಣೇ ॥೨೦॥

ಆರ್ದ್ರಾನಕ್ಷತ್ರ ಸ್ವರೂಪನಾದ, ಮಹಾತ್ಮನಾದ, ಪಿನಾಕ ಧನುಸ್ಸನ್ನು ಧರಿಸಿರುವ, ಭವ ಎನಿಸಿರುವ, ಉತ್ತಮನಾದ, ಸೌಮ್ಯ ಮುಖದ ಕಾಂತಿಯಿಂದ ಕೂಡಿದ, ಸ್ರುವ ಎನ್ನುವ ಯಜ್ಞ ಪದಾರ್ಥವನ್ನು ಧರಿಸಿರುವ, ಭಕ್ತರಿಗೆ ಇಷ್ಟಾರ್ಥವನ್ನು ಸುರಿಸುವ,

ಹಿರಣ್ಯಬಾಹವೇ ರಾಜನ್ ಉಗ್ರಾಯ ಪತಯೇ ದಿಶಾಮ್ ।
ಪಶೂನಾಂ ಪತಯೇ ಚೈವ ಭೂತಾನಾಂ ಪತಯೇ ನಮಃ ॥೨೧॥

ಬಂಗಾರ ಬಣ್ಣದ ತೋಳುಗಳಿಂದ ಕೂಡಿದ, ಉಗ್ರನಾದ, ಹತ್ತುದಿಕ್ಕುಗಳಿಗೂ ಒಡೆಯನಾದ, ಪಶುಪತಿ ಎನಿಸಿದ, ಭೂತಪತಿ ಎನಿಸಿದ ನಿನಗೆ ನಮಸ್ಕಾರ.

ವೃಷಾಯ ಮಾತೃಭಕ್ತಾಯ ಸೇನಾನ್ಯೈ ಮಧ್ಯಮಾಯ ಚ ॥೨೨॥

ಶ್ರೇಷ್ಠನೆನಿಸಿದ, ಮಾತೃಭಕ್ತನೂ ಆದ ಷಣ್ಮುಖನಿಗೆ ಉತ್ತಮನೆನಿಸಿರುವ (ನಿನಗೆ ನಮಸ್ಕಾರ.)

ಅಭಿವಕ್ತ್ರಾಯ ಪತಯೇ ಸರ್ವದೇವಮಯಾಯ ಚ ।
ಅಜಾಯ ಕೃಷ್ಣನೇತ್ರಾಯ ವಿರೂಪಾಕ್ಷಾಯ ಚೈವ ಹ ॥೨೩॥

ಉತ್ತಮವಾದ ಮುಖದಿಂದ ಕೂಡಿರುವ, ವೇದಗಳ ಪಠಣವನ್ನು ಮಾಡುವ ಮುಖದಿಂದ ಕೂಡಿರುವ, ಸರ್ವದೇವಮಯನಾದ, ಅಜನೆನಿಸಿದ, ಕಪ್ಪಾದ ಕಣ್ಣುಗಳಿಂದ ಕೂಡಿದ ನಿನಗೆ ನಮಸ್ಕಾರ.

ತೀಕ್ಷ್ಣದಂಷ್ಟ್ರಾಯ ತೀಕ್ಷ್ಣಾಯ ವೈಶ್ವಾನರಮುಖಾಯ ಚ ।
ಮಹಾದ್ಯುತೇರನಂಗಸ್ಯ ಸರ್ವಕಾಯಪ್ರಮಾಥಿನೇ ॥೨೪॥

ತೀಕ್ಷ್ಣನೂ, ತೀಕ್ಷ್ಣವಾದ ಕೋರೆಯುಳ್ಳವನೂ, ತೀಕ್ಷ್ಣವಾದ ವೈಶ್ವಾನರ ಎಂಬ ಮುಖವುಳ್ಳವನು, ಮಹಾಕಾಂತಿಯಿಂದ ಕೂಡಿದವನೂ, ಮನ್ಮಥನ ದೇಹವನ್ನು ಭಸ್ಮ ಮಾಡಿದವನೂ ಆದ ನಿನಗೆ ನಮಸ್ಕಾರ.

ತಥಾ ರುದ್ರಾಧಿಪತಯೇ ಪೃಥವೇ ಕೃತ್ತಿವಾಸಸೇ ।
ಕಪಾಲಮಾಲಿನೇ ನಿತ್ಯಂ ಸುವರ್ಣಮಕುಟಾಯ ಚ ॥೨೫॥

ರುದ್ರಗಣಗಳಿಗೆ ಅಧಿಪತಿಯಾದ, ಶ್ರೇಷ್ಠನಾದ, ಗಜಚರ್ಮಾಂಬರಧಾರಿಯಾದ, ಕಪಾಲವನ್ನು ಧರಿಸಿರುವ, ನಿತ್ಯವೂ ಬಂಗಾರದ ಕಿರೀಟವನ್ನು ಧರಿಸಿರುವ ನಿನಗೆ ನಮಸ್ಕಾರ.

ಮಹಾದೇವಾಯ ಕೃಷ್ಣಾಯ ತ್ರ್ಯಂಬಕಾಯಾನಘಾಯ ಚ ॥೨೬॥

ಮಹಾದೇವನೆನಿಸಿದ, ಕೃಷ್ಣಎಂಬ ಕಾಲನಿಯಾಮಕವಾದ ಪ್ರಳಯ ರೂಪವನ್ನೂ ದಹಿಸಿರುವತ್ರ್ಯಂಬಕನಾದ, ಅನಘನಾದ ನಿನಗೆ ನಮಸ್ಕಾರ.

ಕ್ರೋಧನಾಯಾನೃಶಂಸಾಯ ಮೃತ್ಯವೇ ಬಾಹುಶಾಲಿನೇ ।
ದಂಡಿನೇ ದೃಪ್ತತಪಸೇ ತಥೈವಾಕ್ರೂರಕರ್ಮಣೇ ॥೨೭॥

ಕ್ರೋಧರೂಪಿಯಾದ, ಶುಭ್ರಚರಿತ್ರೆಯನ್ನು ಹೊಂದಿರುವ, ಮೃತ್ಯು ಎನಿಸಿರುವ ಬಾಹುಶಾಲಿಯಾದ, ದಂಡಧಾರಿಯಾದ, ಭಯಂಕರವಾದ ತಪಸ್ಸಿನಿಂದ ಕೂಡಿರುವ, ಯೋಗ್ಯವಾದ ಕರ್ಮಗಳಲ್ಲಿನಿರತನಾಗಿರುವ ಮಹಾರುದ್ರನೇ ನಿನಗೆ ನಮಸ್ಕಾರ.

ಸಹಸ್ರಶಿರಸೇ ಚೈವ ಸಹಸ್ರಚರಣಾಯ ಚ ।
ವಿರೂಪಾಯ ಸುರೂಪಾಯ ಬಹುರೂಪಾಯ ದಂಷ್ಟ್ರಿಣೇ ॥೨೮॥

ಸಾವಿರಾರು ಶಿರಸ್ಸುಳ್ಳ, ಸಹಸ್ರಾರು ಪಾದಗಳುಳ್ಳ, ವಿರೂಪಾಕ್ಷನೆನಿಸಿದ ಸ್ವರೂಪನೇ, ಬಹುರೂಪನೇ, ದಂಷ್ಟ್ರಿಯೇ ನಿನಗೆ ನಮಸ್ಕಾರ.

ಪಿನಾಕಿನಂ ಮಹಾದೇವಂ ಮಹಾಭೋಗಿನಮವ್ಯಯಮ್ ।
ತ್ರಿಶೂಲಪಾಣಿಂ ವರದಂ ತ್ರ್ಯಂಬಕಂ ಭುವನೇಶ್ವರಮ್ ॥೨೯॥

ಪಿನಾಕ ಧನುಸ್ಸನ್ನು ಧರಿಸಿರುವ, ಮಹಾದೇವನಾದ, ಮಹಾಭೋಗಿ ಎನಿಸಿದ, ಅವ್ಯಯನಾದ, ತ್ರಿಶೂಲಪಾಣಿಯಾದ, ವರದನಾದ, ತ್ರ್ಯಂಬಕನಾದ, ಭುವನೇಶ್ವರನಾದ ಮಹಾರುದ್ರನೇ ನಿನಗೆ ನಮಸ್ಕಾರ.

ತ್ರಿಪುರಘ್ನಂ ತ್ರಿನಯನಂ ತ್ರಿಲೋಕೇಶಂ ಮಹೌಜಸಮ್ ।
ಪ್ರಭವಂ ಸರ್ವಭೂತಾನಾಂ ಧಾತಾರಂ ಧರಣೀಧರಮ್ ॥೩೦॥

ತ್ರಿಪುರಾಸುರನನ್ನು ಸಂಹರಿಸಿದ, ಮೂರುಕಣ್ಣುಗಳನ್ನು ಹೊಂದಿರುವ, ಮೂರುಲೋಕಗಳಿಗೆ ಒಡೆಯನಾದ, ಶ್ರೇಷ್ಠವಾದ ಓಜಸ್ಸಿನಿಂದ ತುಂಬಿರುವ, ಎಲ್ಲ ಜೀವರ ಉತ್ಪತ್ತಿಗೆ ಅಂಶತಃ ಕಾರಣನಾದ, ಧರಣೀಧರನಾದ, ತಂದೆ ಎನಿಸಿದ ಮಹಾರುದ್ರನೇ ನಿನಗೆ ನಮಸ್ಕಾರ.

ಈಶಾನಂ ಶಂಕರಂ ಸರ್ವಂ ಶಿವಂ ವಿಶ್ವೇಶ್ವರಂ ಭವಮ್ ।
ಉಮಾಪತಿಂ ಪಶುಪತಿಂ ವಿಶ್ವರೂಪಂ ಮಹೇಶ್ವರಮ್ ॥೩೧॥

ಎಲ್ಲರನ್ನೂ ನಿಯಮನ ಮಾಡುವ ಸಾಮರ್ಥ್ಯವುಳ್ಳ, ಶಂಕರನೆನಿಸಿದ, ಪ್ರಳಯಕಾರಕನಾಗಿ ಶರ್ವನೆನಿಸಿದ, ಮಂಗಳಕಾರಕನಾಗಿ ಶಿವನೆನಿಸಿದ, ವಿಶ್ವೇಶ್ವರನೆನಿಸಿದ ಭವನೇ, ಉಮಾಪತಿಯೇ, ಪಶುಪತಿಯೇ, ಮಹೇಶ್ವರನೇ ನಿನಗೆ ನಮಸ್ಕಾರ.

ವಿರೂಪಾಕ್ಷಂ ದಶಭುಜಂ ವಿಷ್ಕಂದಂ ಗೋವೃಷಧ್ವಜಮ್ ।
ಉಗ್ರಂ ಸ್ಥಾಣುಂ ಶಿವಂ ಘೋರಂ ಶರ್ವಂ ಗೌರೀಶಮೀಶ್ವರಮ್ ॥೩೨॥

ವಿರೂಪಾಕ್ಷನೇ, ದಶಭುಜನೇ, ಧ್ವಜದಲ್ಲಿ ದಿವ್ಯವಾದ ವೃಷಭನ ಚಿಹ್ನೆಯನ್ನು ಹೊಂದಿರುವವನೇ, ಉಗ್ರನಾದ, ಸ್ಥಿರನಾದ, ಎಲ್ಲ ಪ್ರಾಣಿಗಳನ್ನೂ ಪ್ರಳಯಕಾಲದಲ್ಲಿ ಸಂಹರಿಸುವವನೇ, ಗೌರೀಪತಿಯಾದ ಈಶ್ವರನೇ ನಿನಗೆ ನಮಸ್ಕಾರ.

ಶಿತಿಕಂಠಮಜಂ ಶುಭ್ರಂ ಪೃಥುಂ ಪೃಥುಹರಂ ಶಿವಮ್ ।
ವಿಶ್ವರೂಪಂ ವಿರೂಪಾಕ್ಷಂ ಬಹುರೂಪಮುಮಾಪತಿಮ್ ॥೩೩॥

ಕೃಷ್ಣಕಂಠನಾದ, ಹುಟ್ಟಿಲ್ಲದ, ಶುಭ್ರಸ್ವರೂಪನಾದ, ಪೂರ್ಣತೆಯಿಂದ ತುಂಬಿರುವ ಶಿವನೇ, ಪೂರ್ಣನೇ (ಪೃಥು ಎಂಬ ರಾಕ್ಷಸನನ್ನು ಸಂಹರಿಸಿದವನೇ), ವಿಶ್ವರೂಪನೇ, ವಿರೂಪಾಕ್ಷನೇ, ಬಹುರೂಪಿಯೇ, ಉಮಾಪತಿಯೇ ನಿನಗೆ ನಮಸ್ಕಾರ.

ಪ್ರಣಮ್ಯ ಶಿರಸಾ ದೇವಮನಂಗಾಂಗಹರಂ ಹರಮ್ ।
ಶರಣ್ಯಂ ಶರಣಂ ಯಾಮಿ ಮಹಾದೇವಂ ಚತುರ್ಮುಖಮ್ ॥೩೪॥

ಅನಂಗನ (ಕಾಮನ) ಅಂಗಗಳನ್ನು ಸಂಹರಿಸಿದ, ಶರಣಾರ್ಥಿಗಳಿಗೆ ಶರಣನೆನಿಸಿದ, ಚತುರ್ಮುಖ ಮಹಾದೇವನನ್ನು ಶರಣು ಹೊಂದುತ್ತೇನೆ.

ವಿರೋಚಮಾನಂ ವಪುಷಾ ದಿವ್ಯಾಭರಣಭೂಷಿತಮ್ ।
ಅನಾದ್ಯಂತಮಜಂ ಶಂಭುಂ ಸರ್ವವ್ಯಾಪಿನಮೀಶ್ವರಮ್ ॥೩೫॥

ದೇಹದ ಕಾಂತಿಯಿಂದ ಹೊಳೆಯುವ, ದಿವ್ಯಾಭರಣ ಭೂಷಿತನಾದ, ಆದ್ಯಂತ ರಹಿತನಾದ, ಸರ್ವವ್ಯಾಪಿಯಾದ, ಈಶ್ವರನಾದ ಶಂಭುವನ್ನು ನಮಸ್ಕರಿಸುತ್ತೇನೆ.

ವ್ಯಾಖ್ಯಾನ ವಿಶೇಷ– ಈ ಎಲ್ಲ ಶ್ಲೋಕಗಳು ಪರಮಮುಖ್ಯವೃತ್ತಿಯಿಂದ ಭಗವದ್ವಾಚಕಗಳೇ ಆಗಿವೆ. ಅಮುಖ್ಯವೃತ್ತಿಯಿಂದ ರುದ್ರನನ್ನು ಕೊಂಡಾಡುತ್ತಿವೆ ಎಂದು ತಿಳಿಯಬೇಕು. ಸತ್ಯಧರ್ಮತೀರ್ಥರು ರುದ್ರಪ್ರಶ್ನೆಗೆ ವ್ಯಾಖ್ಯಾನಿಸುತ್ತಾ, ಎಲ್ಲ ಶಬ್ದಗಳು ಭಗವತ್ಪರ ಎಂದು ತಿಳಿಸಿಕೊಟ್ಟಿರುತ್ತಾರೆ. ವೇದೋಕ್ತನಾಮಗಳೇ ಇಲ್ಲಿ ಬಹುತೇಕ ಹೇಳಲ್ಪಟ್ಟಿವೆ. ಆದ್ದರಿಂದ ಅನೇಕ ವಿಶೇಷಣಗಳು ಮುಖ್ಯವಾಗಿ ಭಗವಂತನಿಗೆ ಅನ್ವಯ ಹೊಂದುತ್ತವೆಂದು ತಿಳಿಯಬೇಕು.

ನಿಸ್ತ್ರೈಗುಣ್ಯಂ ನಿರುದ್ವೇಗಂ ನಿರ್ಮಲಂ ನಿಧಿಮೋಜಸಮ್ ।
ಪ್ರಣಮ್ಯ ಪ್ರಾಂಜಲಿಃ ಶರ್ವಂ ಪ್ರಯಾಮಿ ಶರಣಂ ಹರಮ್ ॥೩೬॥

ಯಥಾಯೋಗ್ಯವಾಗಿ ತ್ರಿಗುಣಗಳಿಂದ ರಹಿತನಾದ, ನಿರುದ್ವೇಗನಾದ, ನಿರ್ಮಲನಾದ, ಓಜಸ್ವಿಗಳ ನಿಧಿ ಎನಿಸಿದ, ಶರ್ವನನ್ನು, ಹರನನ್ನು ಪ್ರಾಂಜಲಿಬದ್ಧವಾಗಿ ನಮಸ್ಕರಿಸಿ ಶರಣು ಹೊಂದುತ್ತೇನೆ.

ಸಮ್ಮಾನ್ಯಂ ನಿಶ್ಚಲಂ ನಿತ್ಯಮ್ ಅಕಾರಣಮಲೇಪನಮ್ ।
ಅಧ್ಯಾತ್ಮವೇದಮಾಸಾದ್ಯ ವ್ರಜಾಮಿ ಶರಣಂ ಮುಹುಃ ॥೩೭॥

ಜಗತ್ತಿನಿಂದ ಮಾನ್ಯನಾದ, ಆದರೂ ನಿಶ್ಚಲನಾದ, ನಿತ್ಯನಾದ, ಪರಮಾತ್ಮನಿಂದಲೇ ಹುಟ್ಟನ್ನು ಪಡೆದು ನಿರ್ಲಿಪ್ತನಾಗಿರುವ ಮಹಾರುದ್ರನನ್ನು ಅಧ್ಯಾತ್ಮವೇದವನ್ನು ಹೊಂದಿ ಮತ್ತೆ ಮತ್ತೆ ಶರಣು ಹೊಂದುತ್ತೇನೆ.

ಯಸ್ಯ ನಿತ್ಯಂ ವಿದುಃ ಸ್ಥಾನಂ ಮೋಕ್ಷಮ್ ಅಧ್ಯಾತ್ಮಚಿಂತಕಾಃ ।
ಯೋಗಿನಸ್ತತ್ತ್ವಮಾರ್ಗಸ್ಥಾಃ ಕೈವಲ್ಯಂ ಪದಮಕ್ಷರಮ್ ॥೩೮॥

ಅಧ್ಯಾತ್ಮ ಚಿಂತಕರು ಯಾವ ಮಹಾರುದ್ರನ ಅನುಗ್ರಹದಿಂದ ಮೋಕ್ಷವನ್ನು ಹೊಂದುತ್ತಾರೋ, ತತ್ತ್ವಮಾರ್ಗದಲ್ಲಿರುವ ಯೋಗಿಗಳೆಲ್ಲ ಯಾವ ಮಹಾರುದ್ರನ

ಅನುಗ್ರಹದಿಂದ ಕೈವಲ್ಯನೆನಿಸಿದ ಅಕ್ಷರನಾಮಕನಾದ ಭಗವಂತನನ್ನು ಹೊಂದುತ್ತಾರೋ ಅಂತಹ ಮಹಾರುದ್ರನನ್ನು ನಮಿಸುತ್ತೇನೆ.

ಯಂ ವಿದುಃ ಸಂಗನಿರ್ಮುಕ್ತಾಃ ಸಾಮಾನ್ಯಂ ಸಮದರ್ಶಿನಃ ।
ತಂ ಪ್ರಪದ್ಯೇ ಜಗದ್ಯೋನಿಮ್ ಅಯೋನಿಂ ನಿರ್ಗುಣಾತ್ಮಕಮ್ ॥೩೯॥

ಸಂಗದಿಂದ ನಿರ್ಮುಕ್ತರಾದ ಜ್ಞಾನಿಗಳು ಸಮದರ್ಶಿಗಳಾಗಿದ್ದು, ಅಯೋನಿಯೂ, ನಿರ್ಗುಣನು, ಜಗದ್ಯೋನಿಯು ಆದ ಪರಮಾತ್ಮನನ್ನು ಯಾವ ಮಹಾರುದ್ರನ ಅನುಗ್ರಹದಿಂದ ಹೊಂದುತ್ತಾರೋ, ಅಂತಹ ಮಹಾರುದ್ರನನ್ನು ಹೊಂದುತ್ತೇನೆ.

ಅಸೃಜದ್ ಯಸ್ತು ಭೂರಾದೀನ್ ಸಪ್ತಲೋಕಾನ್ ಸನಾತನಾನ್ ।
ಸ್ಥಿತಃ ಸತ್ಯೋಪರಿ ಸ್ಥಾಣುಂ ತಂ ಪ್ರಪದ್ಯೇ ಸನಾತನಮ್ ॥೪೦॥

ಭೂರಾದಿ ಸಪ್ತಲೋಕಗಳನ್ನು ಯಾವನು ನಿರ್ಮಿಸಿದ್ದಾನೋ, ಸತ್ಯಲೋಕದ ಮೇಲ್ಭಾಗದಲ್ಲಿ ನಿತ್ಯದಲ್ಲಿಯೂ ಯಾವ ಭಗವಂತನಿದ್ದಾನೋ, ಅವನ ಪ್ರಾಪ್ತಿ ಪೂರಕವಾದ ಜ್ಞಾನವನ್ನು ದಾನ ಮಾಡುವ ಮಹಾರುದ್ರನನ್ನು ಹೊಂದುತ್ತೇನೆ.

ಭಕ್ತಾನಾಂ ಸುಲಭಂ ತಂ ಹಿ ದುರ್ಲಭಂ ದೂರಪಾತಿನಾಮ್ ।
ಅದೂರಸ್ಥಮಮುಂ ದೇವಂ ಪ್ರಕೃತೇಃ ಪರತಃ ಸ್ಥಿತಮ್ ॥೪೧॥

ಭಕ್ತರಿಗೆ ಸುಲಭನಾಗಿರುವ, ಅಭಕ್ತರಿಗೆ ದುರ್ಲಭನೂ ಆಗಿರುವ, ಭಕ್ತರ ಪಾಲಿಗೆ ಸಮೀಪಸ್ಥನಾದ, ಪ್ರಕೃತಿಯ ಗುಣಗಳನ್ನು ಮೀರಿ ನಿಂತಿರುವ ರುದ್ರಾಂತರ್ಯಾಮಿ ಪರಮಾತ್ಮನನ್ನು ಹೊಂದುತ್ತೇನೆ.

ನಮಾಮಿ ಸರ್ವಲೋಕಸ್ಥಂ ವ್ರಜಾಮಿ ಶರಣಂ ಶಿವಮ್ ॥೪೨॥

ಎಲ್ಲ ಲೋಕಗಳಲ್ಲಿಯೂ ಅಂತರ್ಯಾಮಿಯಾಗಿರುವ ಶಿವ ಎಂಬ ಭಗವಂತನನ್ನು ನಮಸ್ಕರಿಸುತ್ತೇನೆ.

ಏವಂ ಕೃತ್ವಾ ನಮಸ್ತಸ್ಮೈ ಮಹಾದೇವಾಯ ಶಂಭವೇ ।
ಮಹಾತ್ಮನೇ ಕ್ಷಿತಿಪತೇ ತತ್ ಸುವರ್ಣಮವಾಪ್ಸ್ಯಸಿ ॥೪೩॥

ಪೃಥ್ವೀನಾಥನೇ, ಈ ರೀತಿಯಾಗಿ ಮಹಾದೇವನೆನಿಸಿದ ಶಂಭುವಿಗೆ ನಮಸ್ಕಾರವನ್ನು ಮಾಡಿದ ನಂತರ ಅಕ್ಷಯವಾದ ಸುವರ್ಣವನ್ನು ಹೊಂದುತ್ತಿ .

ವ್ಯಾಖ್ಯಾನವಿಶೇಷ– ಈ ಭಾಗದಲ್ಲಿ ಇರುವ ಎಲ್ಲ ಶ್ಲೋಕಗಳಲ್ಲಿಯೂ ಶಿವನ ಅಂತರ್ಯಾಮಿಯಾದ ಶಿವ ಎಂಬ ಭಗವಂತನ ರೂಪವೇ ಸ್ತುತಿಸಲ್ಪಟ್ಟಿದೆ ಎಂದು ತಿಳಿಯಬೇಕು.

ಲಭಂತೇ ಗಾಣಪತ್ಯಂ ಚ ತದೇಕಾಗ್ರಾ ಹಿ ಮಾನವಾಃ ।
ಕಿಂ ಪುನಃ ಸ್ವರ್ಣಭಾಂಡಾನಿ ತಸ್ಮಾತ್ ತ್ವಂ ಗಚ್ಛ ಮಾ ಚಿರಮ್ ॥೪೪॥

ಈ ಕ್ರಮದಲ್ಲಿ ಸ್ತುತಿಯನ್ನು ಏಕಾಗ್ರ ಬುದ್ಧಿಯಿಂದ ಮಾನವರು ಮಹಾರುದ್ರನನ್ನು ಹೊಂದುತ್ತಾರೆ. ಹೀಗಿರುವಾಗ ಸ್ವರ್ಣಭಾಂಡವನ್ನು ಹೊಂದುವುದು ಆಶ್ಚರ್ಯವೇ ಅಲ್ಲ. ಆದ್ದರಿಂದ ಮರುತ್ತನೇ ತಡಮಾಡದೆ ನೀನು ಆ ಮಹಾರುದ್ರನ ಬಳಿ, ಮೇರು ಶಿಖರದ ಬಳಿ ಸಾಗು.

ಮಹತ್ತರಂ ಹಿ ತೇ ಲಾಭಂ ಹಸ್ಯಶ್ವೋಷ್ಟ್ರಾದಿಭಿಃ ಸಹ ।
ಸುವರ್ಣಮಾಹರಿಷ್ಯಂತಃ ತತ್ರ ಗಚ್ಛಂತು ತೇ ನರಾಃ ॥೪೫॥

ಆ ಮಹಾರುದ್ರನ ಸ್ತೋತ್ರದಿಂದ ಉತ್ಕೃಷ್ಟವಾದ ಲಾಭವನ್ನು ಹೊಂದಿ ಆನೆ, ಕುದುರೆ, ಒಂಟೆಗಳ ಮೂಲಕ ಸುವರ್ಣವನ್ನು ಯಾವ ಮನುಷ್ಯರು ಹೊತ್ತು ತರುತ್ತಾರೋ, ಅಂತಹ ಮಹಾರುದ್ರನ ಕ್ಷೇತ್ರಕ್ಕೆ ನೀನು ಸಾಗು.

ವ್ಯಾಸಃ

ಇತ್ಯುಕ್ತಸ್ತು ವಚಸ್ತಸ್ಯ ಚಕ್ರೇ ಕಾರಂಧಮಾತ್ಮಜಃ ।
ಗಂಗಾಧರಂ ನಮಸ್ಕೃತ್ಯ ಲಬ್ಧವಾನ್ ಧನಮುತ್ತಮಮ್ ॥೪೬॥

ವ್ಯಾಸರು ಹೇಳುತ್ತಾರೆ– ಸಂವರ್ತನಿಂದ ಹೀಗೆ ಹೇಳಿಸಿಕೊಳ್ಳಲ್ಪಟ್ಟ ಕರಂಧಮನ ಮಗನಾದ ಮರುತ್ತನು ಅದರಂತೆಯೇ ನಡೆದುಕೊಂಡು, ಗಂಗಾಧಾರಿಯಾದ ಮಹಾರುದ್ರನನ್ನು ನಮಸ್ಕರಿಸಿ ಉತ್ಕೃಷ್ಟವಾದ ಧನವನ್ನು ಹೊಂದಿದನು.

ಕುಬೇರ ಇವ ತತ್ ಪ್ರಾಪ್ಯ ಮಹಾದೇವಪ್ರಸಾದತಃ ।
ತತೋಽತಿಮಾನುಷಂ ಸರ್ವಂ ಚಕ್ರೇ ಯಜ್ಞಸ್ಯ ಸಂವಿಧಿಮ್ ॥೪೭॥

ಮಹಾದೇವನ ಅನುಗ್ರಹದಿಂದ ಕುಬೇರನಂತೆ ಸಂಪತ್ತನ್ನು ಪಡೆದು ಅತಿಮಾನುಷವಾದ ಯಜ್ಞದ ವಿಧಿಗಳೆಲ್ಲವನ್ನೂ ಮರುತ್ತನು ಮಾಡಿದನು.

ಸೌವರ್ಣಾನಿ ಚ ಭಾಂಡಾನಿ ಸಂಚಕ್ರುಸ್ತಸ್ಯ ಶಿಲ್ಪಿನಃ ।
ಶಾಲಾಶ್ಚ ಸರ್ವಸಂಭಾರಾನ್ ಕೃತೋ ಸಂವರ್ತಶಾಸನಾತ್ ॥೪೮॥

ಸ್ವರ್ಣಕಾರರು ಯಜ್ಞಕ್ಕೆ ಸಮರ್ಪಿಸುವ ಪಾತ್ರೆಗಳೆಲ್ಲವನ್ನೂ ಚಿನ್ನದಿಂದಲೇ ತಯಾರಿಸಿದರು. ಯಜ್ಞದ ಶಾಲೆಗಳು, ಯಜ್ಞದ ಪದಾರ್ಥಗಳೆಲ್ಲವೂ ಸಂವರ್ತನ ಆದೇಶದಂತೆ ರಚಿತವಾದವು.

ಬೃಹಸ್ಪತಿಸ್ತು ತಾಂ ಶ್ರುತ್ವಾ ಮರುತ್ತಸ್ಯ ಮಹೀಪತೇಃ ।
ಸಮೃದ್ಧಿಮಿತಿ ದೇವೇಭ್ಯಃ ಸಂತಾಪಮಕರೋದ್ ಭೃಶಮ್ ॥೪೯॥

ಮರುತ್ತನು ದೇವತೆಗಳನ್ನು ಮೀರಿಸಿದ ಸಂಪತ್ತನ್ನು ಪಡೆದುಕೊಂಡಿದ್ದಾನೆ ಎಂಬ ವಿಷಯವನ್ನು ಕೇಳಿಸಿಕೊಂಡ ಬೃಹಸ್ಪತಿಯು ಅತ್ಯಂತ ದುಃಖವನ್ನು ಹೊಂದಿದನು.

ಸಂತಪ್ಯಮಾನೋ ವೈವರ್ಣ್ಯಂ ಕೃಶತ್ವಂ ಚಾಗಮತ್ ಪರಮ್ ।
ಭವಿಷ್ಯತಿ ಹಿ ಮೇ ಶತ್ರುಃ ಸಂವರ್ತೋ ವಸುಮಾನಿತಿ ॥೫೦॥

ನನ್ನ ಶತ್ರುವಾದ ಸಂವರ್ತನು ವಸುಮಂತನಾದನೆಂದು ಯೋಚಿಸುತ್ತಾ ಸಂತಪ್ಯಮಾನ ಹೃದಯವುಳ್ಳ ಬೃಹಸ್ಪತಿಯ ಮುಖವು ಬಿಳುಚಿಕೊಂಡಿತು. ದೇಹವು ಕೃಶತೆಯನ್ನು ಹೊಂದಿತು.

ತಂ ಶ್ರುತ್ವಾ ಭೃಶಸಂತಪ್ತಂ ದೇವರಾಜೋ ಬೃಹಸ್ಪತಿಮ್ ।
ಅಭಿಗಮ್ಯಾಮರವೃತಃ ಪ್ರೋವಾಚೇದಂ ವಚಸ್ತದಾ ॥೫೧॥

ಬೃಹಸ್ಪತಿಯು ಬಹಳ ದುಃಖಿತನಾಗಿದ್ದಾನೆ ಎಂದು ತಿಳಿದ ಇಂದ್ರದೇವನು ಬೃಹಸ್ಪತಿಯ ಬಳಿಗೆ ಪರಿವಾರದವರಿಂದ ಕೂಡಿಕೊಂಡು ಆಗಮಿಸಿ ಈ ಮಾತುಗಳನ್ನು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಮರುತ್ತಸ್ಯ ವಿತ್ತಾನಯನಂ ನಾಮ ಅಷ್ಟಮೋऽಧ್ಯಾಯಃ ॥

॥ ಅಶ್ವಮೇಧಪರ್ವಣಿ ಅಷ್ಟಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಬೃಹಸ್ಪತಿಯು ಇಂದ್ರನ ಬಳಿ ತನ್ನ ಚಿಂತೆಯ ಕಾರಣವನ್ನು ಹೇಳಿದುದು. ಇಂದ್ರನ ಆದೇಶದಂತೆ ಅಗ್ನಿದೇವನು ಮರುತ್ತನ ಬಳಿ ಸಾಗಿದ. ಸಂವರ್ತನನ್ನು ಕಂಡ ಅಗ್ನಿಯು ಹೆದರಿ ಇಂದ್ರನ ಬಳಿ ಬಂದು ಬೃಹತ್ತೇಜಸ್ಸಿನ ಮಹತ್ವವನ್ನು ತಿಳಿಸಿದುದು.

ಇಂದ್ರಃ

ಕಚ್ಚಿತ್ ಸುಖಂ ಸ್ವಪಿಷಿ ತ್ವಂ ಬೃಹಸ್ಪತೇ
ಕಚ್ಚಿನ್ಮನೋಜ್ಞಾಃ ಪರಿಚಾರಕಾಸ್ತೇ ।
ಕಚ್ಚಿದ್ದೇವಾನಾಂ ಸುಖಕಾಮೋऽಸಿ ವಿಪ್ರ
ಕಚ್ಚಿದೇವಾಸ್ತಾ ತ್ವಂ ಸುಭೃಶಂ ಪಾಲಯಂತಿ ॥೧॥

ಇಂದ್ರನು ಬೃಹಸ್ಪತಿಯನ್ನು ಪ್ರಶ್ನಿಸುತ್ತಾನೆ– ಬೃಹಸ್ಪತಿಯೇ, ನೀನು ಯಾವುದೇ ಚಿಂತೆಗಳಿಲ್ಲದೇ ಸುಖವಾಗಿ ನಿದ್ರಿಸುತ್ತಿರುವಿಯಷ್ಟೆ? ನಿನ್ನ ಸೇವಕರು ನಿನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿದು ಸೇವಿಸುತ್ತಿದ್ದಾರಷ್ಟೆ? ವಿಪ್ರನೇ, ಹಿಂದಿನಂತೆ ನೀನೂ ಕೂಡ ದೇವತೆಗಳಿಗೆ ಸುಖವನ್ನು ಬಯಸುತ್ತಿರುವಿಯಷ್ಟೆ? ದೇವತೆಗಳು ನಿನ್ನನ್ನು ಪೂರ್ಣವಾಗಿ ರಕ್ಷಿಸುತ್ತಿದ್ದಾರಷ್ಟೆ?

ಬೃಹಸ್ಪತಿಃ

ಸುಖಂ ಶಯೇऽಹಂ ಶಯನೇ ಮಹೇಂದ್ರ
ತಥಾ ಮನೋಜ್ಞಾಃ ಪರಿಚಾರಕಾ ಮೇ ।
ತಥಾ ದೇವಾನಾಂ ಸುಖಕಾಮೋऽಸ್ಮಿ ಶಕ್ರ
ದೇವಾಶ್ಚ ಮಾಂ ಸುಭೃಶಂ ಪಾಲಯಂತಿ ॥೨॥

ಬೃಹಸ್ಪತಿಯು ಉತ್ತರಿಸುತ್ತಾನೆ– ಮಹೇಂದ್ರನೇ, ನಾನು ಹಾಸಿಗೆಯಲ್ಲಿ ಸುಖವಾಗಿ ಮಲಗುತ್ತೇನೆ. ಪರಿಚಾರಕರು ತಾವೇ ನನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿದು ಇಷ್ಟವಾದ ಕಾರ್ಯವನ್ನು ಮಾಡುತ್ತಿದ್ದಾರೆ. ನಾನೂ ದೇವತೆಗಳ ಸುಖ ಚಿಂತನೆಯನ್ನೇ ಮಾಡುತ್ತಿದ್ದೇನೆ. ದೇವತೆಗಳೂ ನನ್ನನ್ನು ಚೆನ್ನಾಗಿ ಪಾಲಿಸುತ್ತಿದ್ದಾರೆ.

ಇಂದ್ರಃ

ಕುತೋ ದುಃಖಂ ಮಾನಸಂ ದೇಹಜಂ ವಾ
ಪಾಂಡುರ್ವಿವರ್ಣಶ್ಚ ಕುತಸ್ತ್ವಮದ್ಯ ।
ಆಚಕ್ಷ್ವ ಮೇ ತದ್ ದ್ವಿಜವರ್ಯ ಯಾವತ್
ನಿಹನ್ಮಿ ಸರ್ವಾಂಸ್ತವ ದುಃಖಕರ್ತೃನ್ ॥೩॥

ಇಂದ್ರ– ವಿಪ್ರಶ್ರೇಷ್ಠನೇ, ನಿನ್ನ ದೇಹವು ಬಿಳಚಿಕೊಂಡಿದೆ, ಬಾಡಿಹೋಗಿದೆ. ಇದಕ್ಕೆ ಕಾರಣ ದೈಹಿಕವಾದ ದುಃಖವೇ ಅಥವಾ ಮಾನಸಿಕ ದುಃಖವೇ? ಬ್ರಾಹ್ಮಣೋತ್ತಮನೇ, ನಿನ್ನ ದುಃಖಕ್ಕೆ ಕಾರಣವೇನೆಂಬುದನ್ನು ಹೇಳು. ದುಃಖಕ್ಕೆ ಕಾರಣರಾದ ಎಲ್ಲರನ್ನೂ ಸಂಹರಿಸುತ್ತೇನೆ.

ಬೃಹಸ್ಪತಿಃ

ಮರುತ್ತಮಾಹುರ್ಮಘವನ್ ಯಕ್ಷ್ಯಮಾಣಂ
ಮಹಾಯಜ್ಞೇನೋತ್ತಮದಕ್ಷಿಣೇನ ।
ತಂ ಸಂವರ್ತೋ ಯಾಜಯತೀತಿ ಮೇ ಶ್ರುತಂ
ತದಿಚ್ಛಾಮಿ ನಃ ಸ ನ ತಂ ಯಾಜಯೇತ ॥೪॥

ಬೃಹಸ್ಪತಿ– ಮಘವನ್, ಉತ್ತಮವಾದ ದಕ್ಷಿಣೆಯಿಂದ ಕೂಡಿದ ಮಹಾಯಜ್ಞವನ್ನು ಮರುತ್ತ ಚಕ್ರವರ್ತಿಯು ಆಚರಿಸುತ್ತಿದ್ದಾನೆಂದು ಜನರು ಹೇಳುತ್ತಿದ್ದಾರೆ. ಯಾಜಕನಾಗಿ ನನ್ನ ತಮ್ಮನಾದ ಸಂವರ್ತನೇ ಇದ್ದಾನೆಂದು ಕೇಳಿದ್ದೇನೆ. ಮರುತ್ತನಿಂದ ಸಂವರ್ತನು ಮಹಾಯಜ್ಞವನ್ನು ಮಾಡಿಸಬಾರದೆಂದು ನನ್ನ ಅಪೇಕ್ಷೆಯಾಗಿದೆ.

ಇಂದ್ರಃ

ಸರ್ವಾನ್ ಕಾಮಾನನುಜಾನಾಸಿ ವಿಪ್ರ
ತ್ವಂ ದೇವಾನಾಂ ಮಂತ್ರಯಸೇ ಪುರೋಧಾಃ ।
ಉಭೌ ಚ ತೇ ಜನ್ಮಮೃತ್ಯೂ ವ್ಯತೀತೌ
ಕಿಂ ಸಂವರ್ತಸ್ತವ ಕರ್ತಾऽದ್ಯ ವಿಪ್ರ ॥೫॥

ಇಂದ್ರ– ವಿಪ್ರಶ್ರೇಷ್ಠನೇ, ನೀನು ಮಂತ್ರಜ್ಞನಾದ ಪುರೋಹಿತ. ನಿನ್ನ ಮನಸ್ಸಿನ ಅಪೇಕ್ಷೆಗಳೆಲ್ಲವೂ ಪೂರ್ಣಗೊಂಡಿವೆ. ಮುಪ್ಪು-ಸಾವುಗಳು ನಿನ್ನನ್ನು ಬಿಟ್ಟುಹೋಗಿವೆ. ಹೀಗಿರುವಾಗ ಸಂವರ್ತನು ನಿನಗೆ ಏನು ತಾನೇ ಮಾಡಲು ಸಾಧ್ಯ ?

ಬೃಹಸ್ಪತಿಃ

ದೇವೈಃ ಸಹ ತ್ವಮಸುರಾನ್ ಸಂಪ್ರಣುದ್ಯ
ಜಿಘಾಂಸಸೇ ಚಾಪ್ಯುತ ಸಾನುಬಂಧಾನ್ ।
ಯಂ ಯಂ ಸಮೃದ್ಧಂ ಪಶ್ಯಸಿ ಯತ್ರ ತತ್ರ
ದುಃಖಂ ಸಪತ್ನೇಷು ಸಮೃದ್ಧಭಾವಃ ॥೬॥

ಬೃಹಸ್ಪತಿ– ದೇವರಾಜನೇ, ನೀನು ಯಾವ ಯಾವ ಅಸುರರು ಸಮೃದ್ಧಿ ಹೊಂದಿದ್ದಾರೆಂದು ನೋಡುತ್ತೀಯೋ ಅಲ್ಲಲ್ಲಿಯೇ ಅವರನ್ನು ಆಕ್ರಮಿಸಿ ಬಂಧು ಸಹಿತವಾಗಿ ಅವರನ್ನು ಸಂಹರಿಸುವಿ. ಇದಕ್ಕೆ ಕಾರಣವಿಷ್ಟೆ- ಶತ್ರುಗಳ ಸಮೃದ್ಧಿಯು ದುಃಖಕ್ಕೆ ಕಾರಣವಾಗುತ್ತದೆ.

ಅತೋಽಸ್ಮಿ ದೇವೇಂದ್ರ ವಿವರ್ಣರೂಪಃ
ಸಪತ್ನೋ ಮೇ ವರ್ಧತೇ ತನ್ನಿಶಮ್ಯ ।
ಸರ್ವೋಪಾಯೈರ್ಮಘವಂಸ್ತ್ವಂ ನಿಯಚ್ಛ
ಸಂವರ್ತಂ ವಾ ಪಾರ್ಥಿವಂ ವಾ ಮರುತ್ತಮ್ ॥೭॥

ದೇವೇಂದ್ರನೇ, ಈ ಕಾರಣದಿಂದಲೇ ನಾನು ವಿವರ್ಣರೂಪನಾಗಿದ್ದೇನೆ. ನನ್ನ ಶತ್ರುವು ಸಮೃದ್ಧಿಯನ್ನು ಹೊಂದುತ್ತಿದ್ದಾನೆ ಎಂಬುದನ್ನು ಕೇಳಿ, ನನಗೆ ಅಪಾರವಾದ ಚಿಂತೆಯುಂಟಾಗಿದೆ. ಆದ್ದರಿಂದ ಎಲ್ಲ ಉಪಾಯಗಳಿಂದಲೂ ನೀನು ಮರುತ್ತನು ಯಜ್ಞ ಮಾಡುವುದನ್ನು ನಿಲ್ಲಿಸಬೇಕು. ಅಥವಾ ಸಂವರ್ತನು ಯಜ್ಞ ಮಾಡಿಸುವುದನ್ನಾದರೂ ನಿಲ್ಲಿಸು.

ಇಂದ್ರಃ

ಏಹಿ ಗಚ್ಛ ಪ್ರಹಿತೋ ಜಾತವೇದೋ
ಬೃಹಸ್ಪತಿಂ ಪರಿದಾತುಂ ಮರುತ್ತೇ ।

ಅಯಂ ವೈ ತ್ವಾಂ ಯಾಜಯಿತಾ ಬೃಹಸ್ಪತಿಃ
ತಥಾऽಮರಂ ಚೈವ ಕರಿಷ್ಯತೀತಿ ॥೮॥

ಇಂದ್ರನು ಅಗ್ನಿದೇವನನ್ನು ಕರೆದು ಹೇಳುತ್ತಾನೆ– ಅಗ್ನಿದೇವನೇ, ಇಲ್ಲಿ ಬಾ. ನನ್ನ ಸಂದೇಶವನ್ನು ಹೊತ್ತು ಮರುತ್ತನ ಬಳಿ ಸಾಗು. ಬೃಹಸ್ಪತಿಯನ್ನು ಮರುತ್ತನ ಬಳಿ ಕಳುಹಿಸಿಕೊಡುವ ದೃಷ್ಟಿಯಿಂದ ಅವನ ಬಳಿ ಹೀಗೆ ಹೇಳು- ಮರುತ್ತನೇ, ದೇವಗುರುವಾದ ಈ ಬೃಹಸ್ಪತಿಯೇ ಯಜ್ಞವನ್ನು ಮಾಡಿಸುತ್ತಾನೆ, ನಿನ್ನನ್ನು ಅಮರನನ್ನಾಗಿಯೂ ಮಾಡಿಸುತ್ತಾನೆ.

ಅಗ್ನಿಃ

ಅಹಂ ಗಚ್ಛಾಮಿ ತವ ಶಕ್ರಾದ್ಯ ದೂತೋ
ಬೃಹಸ್ಪತಿಂ ಪರಿದಾತುಂ ಮರುತ್ತೇ ।
ವಾಚಂ ಸತ್ಯಾಂ ತೇ ಪುರುಹೂತ ಕರ್ತುಂ
ಬೃಹಸ್ಪತೇಶ್ಚಾಪಚಿತಿಂ ಚಿಕೀರ್ಷನ್ ॥೯॥

ಇಂದ್ರನ ಮಾತನ್ನು ಕೇಳಿ ಅಗ್ನಿಯು ಹೇಳುತ್ತಾನೆ– ದೇವೇಂದ್ರನೇ, ಮರುತ್ತನಿಗೆ ಬೃಹಸ್ಪತಿಯನ್ನು ಒಪ್ಪಿಸಿಕೊಡುವ ಕಾರಣದಿಂದ ನಿನ್ನ ವಾಣಿಯನ್ನು ಸತ್ಯವಾಣಿಯನ್ನಾಗಿ ಮಾಡುವ ಇಚ್ಛೆಯಿಂದ, ಈ ಮೂಲಕ ಬೃಹಸ್ಪತಿಯನ್ನು ಗೌರವಿಸುವ ಸದಿಚ್ಛೆಯಿಂದ ನಿನ್ನ ದೂತನಾಗಿ ಮರುತ್ತನ ಬಳಿ ಈಗಲೇ ಸಾಗುತ್ತೇನೆ.

ವ್ಯಾಸಃ

ತತಃ ಪ್ರಾಯಾದ್ ಧೂಮಕೇತುರ್ಮಹಾತ್ಮಾ
ವನಸ್ಪತೀನ್ ವೀರುಧಶ್ಚಾವಮೃದ್ನನ್ ।
ಕಾಮಾದ್ದಿಮಾಂತೇ ಪರಿವರ್ಧಮಾನಃ
ಕಾಷ್ಠಾಮೃತೌ ಮಾತರಿಶ್ವೇವ ಮೃದ್ನನ್ ॥೧೦॥

ವ್ಯಾಸರು– ಯುಧಿಷ್ಠಿರನೇ, ಮಹಾತ್ಮನಾದ ಧೂಮಧ್ವಜನಾದ ಅಗ್ನಿದೇವನು ಈ ರೀತಿಯಾಗಿ ಹೇಳಿ ಗಿಡ-ಮರಗಳನ್ನೂ, ಬಳ್ಳಿಗಳನ್ನೂ ನಾಶಗೈಯ್ಯುತ್ತಾ ಸ್ವೇಚ್ಛೆಯಿಂದ ಬೀಸುವ ವಾಯುವಿನಂತೆ ಗರ್ಜನೆ ಮಾಡುತ್ತಾ ಅಲ್ಲಿಂದ ಹೊರಟು ಮರುತ್ತನ ಯಜ್ಞಶಾಲೆಗೆ ಹೋದನು.

ಮರುತ್ತಃ

ಆಶ್ಚರ್ಯಮದ್ಯ ಪಶ್ಯಾಮಿ ರೂಪಿಣಂ ವಹ್ನಿಮಾಗತಮ್ ।
ಆಸನಂ ಸಲ್ಲಿಂ ಪಾದ್ಯಂ ಗಾಂ ಚೋಪಾನಯ ವೈ ಮುನೇ ॥೧೧॥

ಅಗ್ನಿದೇವನು ಆಗಮಿಸಿದ್ದನ್ನು ಕಂಡು ಮರುತ್ತನು ಹೇಳಿದನು– ಆಶ್ಚರ್ಯ! ಇಂತಹ ದೃಶ್ಯವನ್ನು ನನ್ನ ಕಣ್ಣಿನಿಂದ ನೋಡುತ್ತಿದ್ದೇನೆ. ಅಗ್ನಿದೇವನು ಮೂರ್ತಿಮತ್ತಾಗಿ ಇಲ್ಲಿ ಆಗಮಿಸಿದ್ದಾನೆ. ಮಹಾಮುನಿಗಳೇ, ಅತಿಥಿಯಾಗಿ ಆಗಮಿಸುವ ಅಗ್ನಿಯನ್ನು ಸತ್ಕರಿಸಲು ಆಸನ, ಪಾದ್ಯ , ಅರ್ಘ್ಯ , ಗೋವುಗಳು ಇವುಗಳನ್ನು ಹೊತ್ತು ತನ್ನಿರಿ.

ಅಗ್ನಿಃ

ಆಸನಂ ಸಲ್ಲಿಂ ಪಾದ್ಯಂ ಪ್ರತಿನಂದಾಮಿ ತೇಽನಘ ।
ಇಂದ್ರೇಣ ತು ಸಮಾದಿಷ್ಟಂ ವಿದ್ಧಿ ಮಾಂ ದೂತಮಾಗತಮ್ ॥೧೨॥

ಅಗ್ನಿ– ಅನಘನೇ, ನೀನು ನನ್ನನ್ನು ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಲು ಬಯಸಿರುವುದು ಅಭಿನಂದನಾರ್ಹವಾಗಿದೆ. ಆದರೆ ನಾನು ಇಂದ್ರನ ಸಂದೇಶವನ್ನು ಹೊತ್ತು ತಂದಿರುವ ದೂತನೆಂದು ಭಾವಿಸಿಕೊ.

ಮರುತ್ತಃ

ಕಚ್ಚಿಚ್ಛ್ರೀಮಾನ್ ದೇವರಾಜಃ ಸುಖೀ ನಃ
ಕಚ್ಚಿಚ್ಚಾಸ್ಮಾಭಿಃ ಪ್ರೀಯತೇ ಧೂಮಕೇತೋ ।
ಕಚ್ಚಿದ್ದೇವಾಶ್ಚಾಸ್ಯ ವಶೇ ಯಥಾವತ್
ತದ್ ಬ್ರೂಹಿ ತ್ವಂ ಮಮ ಕಾರ್ತ್ಸ್ನ್ಯೇನ ದೇವ ॥೧೩॥

ಮರುತ್ತ– ಕಾಂತಿಯುಕ್ತನಾದ ಇಂದ್ರನು ಸುಖಿಯಾಗಿದ್ದಾನೆಯೇ? ಧೂಮಕೇತುವೇ, ನಮ್ಮ ವಿಷಯದಲ್ಲಿ ಅವನು ಪ್ರಸನ್ನತೆಯಿಂದ ಕೂಡಿದ್ದಾನೆಯೇ? ದೇವತೆಗಳೆಲ್ಲರೂ ಅವನ ಆಜ್ಞೆಯನ್ನು ಪಾಲಿಸುತ್ತಿದ್ದಾರೆಯೇ? ಈ ವಿಷಯವನ್ನು ಯಥಾವತ್ತಾಗಿ ತಿಳಿಸು.

ಅಗ್ನಿಃ

ಶಕ್ರೋ ಭೃಶಂ ಸ ಸುಖೀ ಪಾರ್ಥಿವೇಂದ್ರ
ಪ್ರೀತಿಂ ಚೇಚ್ಛತ್ಯಜರಾಂ ದೇವರಾಜಃ ।

ದೇವಾಶ್ಚ ಸರ್ವೇ ವಶಗಾಸ್ತಸ್ಯ ರಾಜನ್
ಸಂದೇಶಂ ತು ಶೃಣು ಮೇ ದೇವರಾಜ್ಞಃ ॥೧೪॥

ಅಗ್ನಿ– ಪಾರ್ಥಿವೇಂದ್ರನೇ, ಶಕ್ರನು ಅತ್ಯಂತ ಸುಖವಾಗಿಯೇ ಇದ್ದಾನೆ. ನಿನ್ನೊಡನೆ ನಿರಂತರವಾದ ಸ್ನೇಹವನ್ನು ಬೆಳೆಸಲು ಇಚ್ಛಿಸಿದ್ದಾನೆ. ದೇವತೆಗಳೆಲ್ಲರೂ ಅವನ ಅಧೀನದಲ್ಲಿದ್ದಾರೆ. ದೇವರಾಜನ ಸಂದೇಶವೇನೆಂಬುದನ್ನು ನೀನು ಕೇಳಿಸಿಕೊ.

ಯದರ್ಥಂ ವೈ ಪ್ರಾಹಿಣೋತ್ ತ್ವತ್ಸಕಾಶಂ
ಬೃಹಸ್ಪತಿಂ ಪರಿದಾತುಂ ಮರುತ್ತೇ ।
ಅಯಂ ಗುರುರ್ಯಾಜಯತಾಂ ನೃಪ ತ್ವಾಂ
ಮರ್ತ್ಯಂ ಸಂತಮಮರಂ ತ್ವಾಂ ಕರೋತು ॥೧೫॥

ಯಾವ ಕಾರ್ಯಾರ್ಥವಾಗಿ ಇಂದ್ರನು ನನ್ನನ್ನು ಕಳುಹಿಸಿದ್ದಾನೆಂಬುದನ್ನು ಕೇಳಿಸಿಕೊ. ಇಂದ್ರನು ನನ್ನ ಮೂಲಕ ಬೃಹಸ್ಪತಿಯನ್ನು ನಿನ್ನ ಬಳಿಗೆ ಕಳುಹಿಸಲು ಇಚ್ಛಿಸಿದ್ದಾನೆ. ಇದಕ್ಕಾಗಿ ಅವನು ಹೇಳಿದ ಸಂದೇಶ ಇಂತಿದೆ- ಮೊದಲಿನಿಂದಲೂ ಈ ಬೃಹಸ್ಪತಿಯೇ ನಿನ್ನ ಗುರುವಾಗಿದ್ದಾನೆ. ಆದ್ದರಿಂದ ಅವನ ಮೂಲಕವೇ ಯಜ್ಞವನ್ನು ಮಾಡಿಸು. ಈಗ ನೀನು ಮರಣಧರ್ಮವುಳ್ಳ ಮನುಷ್ಯನಾಗಿರುವಿ. ಬೃಹಸ್ಪತಿಯು ತನ್ನ ಪ್ರಭಾವದಿಂದ ನಿನ್ನನ್ನು ಅಮರನನ್ನಾಗಿ ಮಾಡುತ್ತಾನೆ.

ಮರುತ್ತಃ

ಸಂವರ್ತೋ ಮೇ ಯಾಜಯಿತಾ ದ್ವಿಜೋತ್ತಮೋ
ಬೃಹಸ್ಪತೇರಂಜಲಿರೇಷ ತಸ್ಯ ।
ನಾಸೌ ದೇವಂ ಯಾಜಯಿತ್ವಾ ಮಹೇಂದ್ರಂ
ಮರ್ತ್ಯಂ ಸಂತಂ ಯಾಜಯನ್ನದ್ಯ ಶೋಭೇತ್ ॥೧೬॥

ಮರುತ್ತನು ಹೇಳುತ್ತಾನೆ– ಅಗ್ನಿದೇವನೇ, ನನ್ನ ಯಾಗವನ್ನು ವಿಪ್ರಶ್ರೇಷ್ಠನಾದ ಸಂವರ್ತನೇ ಮಾಡಿಸುತ್ತಾನೆ. ಬೃಹಸ್ಪತಿಗೆ ನನ್ನ ನಮಸ್ಕಾರವಿರಲಿ. ಅಮರೇಂದ್ರನಾದ ಮಹೇಂದ್ರನಿಗೆ ಯಜ್ಞವನ್ನು ಮಾಡಿಸುವ ಬೃಹಸ್ಪತಿಯು ನನ್ನಂತಹ ಮರಣಧರ್ಮವಿರುವ ಮನುಷ್ಯನಿಂದ ಯಜ್ಞ ಮಾಡಿಸುವುದು ಶೋಭಿಸುವುದಿಲ್ಲ.

ಅಗ್ನಿಃ

ಯೇ ಯೇ ಲೋಕಾ ದೇವಲೋಕೇ ಮಹಾಂತಃ
ಸಂಪ್ರಾಪ್ಸ್ಯಸೇ ದೇವರಾಜಪ್ರಸಾದಾತ್ ।
ತ್ವಾಂ ಚೇದಸೌ ಯಾಜಯೇದ್ ವೈ ಬೃಹಸ್ಪತಿಃ
ನೂನಂ ಸ್ವರ್ಗಂ ತ್ವಂ ಜಯೇಃ ಕೀರ್ತಿಯುಕ್ತಃ ॥೧೭॥

ತಥಾ ಲೋಕಾ ಮಾನುಷಾ ಯೇ ಚ ದಿವ್ಯಾಃ
ಪ್ರಜಾಪತೇಶ್ಚಾಪಿ ಯೇ ವೈ ಮಹಾಂತಃ
ಏತೇ ಚ ತೇ ದೇವರಾಜ್ಯಂ ಚ ಕೃತ್ಸ್ನಂ
ಬೃಹಸ್ಪತಿಶ್ಚೇದ್ ಯಾಜಯೇತ್ ತ್ವಾಂ ನರೇಂದ್ರ ॥೧೮॥

ಅಗ್ನಿ– ನರೇಂದ್ರನೇ, ಬೃಹಸ್ಪತಿಯೇ ನಿನ್ನ ಯಜ್ಞವನ್ನು ಮಾಡಿಸಿದಲ್ಲಿ ಇಂದ್ರನ ಪ್ರಸನತೆಯನ್ನು ಹೊಂದಿ, ದೇವಲೋಕದಲ್ಲಿರುವ ಉತ್ಕೃಷ್ಟವಾದ ಪುಣ್ಯಲೋಕಗಳನ್ನು ಪಡೆಯುತ್ತಿ. ನೀನು ಯಶೋವಂತನಾಗುವುದಲ್ಲದೆ ಸ್ವರ್ಗಲೋಕವನ್ನೂ ಜಯಿಸುತ್ತಿ. ಇಷ್ಟು ಮಾತ್ರವಲ್ಲ, ಸಮಗ್ರ ಮನುಷ್ಯಲೋಕಗಳು, ಸಮಗ್ರ ದೇವಲೋಕಗಳು, ಪ್ರಜಾಪತಿಯ ಉತ್ಕೃಷ್ಟವಾದ ಲೋಕಗಳು ಎಲ್ಲವೂ ನಿನಗೆ ಲಭಿಸುತ್ತವೆ. ಇಂದ್ರನ ರಾಜ್ಯವೇ ನಿನ್ನ ಅಧೀನವಾಗುತ್ತದೆ. ಆದ್ದರಿಂದ ಬೃಹಸ್ಪತಿಯ ಪೌರೋಹಿತ್ಯದಲ್ಲಿ ಯಜ್ಞವನ್ನು ಮಾಡು.

ಸಂವರ್ತಃ

ಮಾ ಸ್ಮೈವ ತ್ವಂ ಪುನರಾಗಾಃ ಕಥಂಚಿದ್
ಬೃಹಸ್ಪತಿಂ ಪರಿದಾತುಂ ಮರುತ್ತೇ ।
ಮಾ ತ್ವಾ ಧಕ್ಷ್ಯೇ ಚಕ್ಷುಷಾ ದಾರುಣೇನ
ಸಂಕ್ರುದ್ಧೋಽಹಂ ಪಾವಕ ತನ್ನಿಬೋಧ ॥೧೯॥

ಅಗ್ನಿಯ ಮಾತನ್ನು ಕೇಳಿಸಿಕೊಂಡ ಸಂವರ್ತನು ಹೇಳುತ್ತಾನೆ– ಅಗ್ನಿದೇವನೇ, ನನ್ನ ಮಾತನ್ನು ಕೇಳಿಸಿಕೊ. ಇನ್ನು ಮುಂದೆ ಮರುತ್ತನಿಗೆ ಬೃಹಸ್ಪತಿಯನ್ನು ಒಪ್ಪಿಸುವ ಕಾರ್ಯದಲ್ಲಿ ನೀನು ಪಾತ್ರ ವಹಿಸಬೇಡ. ಈ ಕಾರಣದಿಂದ ಇಲ್ಲಿಗೆ ಆಗಮಿಸಬೇಡ. ಒಂದು ವೇಳೆ ಈ ದೃಷ್ಟಿಯಿಂದ ನೀನು ಆಗಮಿಸಿದರೆ ಕ್ರುದ್ಧನಾದ ನಾನು ನನ್ನ ಉಗ್ರದೃಷ್ಟಿಯಿಂದ ನಿನ್ನನ್ನು ಭಸ್ಮ ಮಾಡುತ್ತೇನೆ.

ವ್ಯಾಸಃ

ತತೋ ದೇವಾನಾಗಮದ್ ಧೂಮಕೇತುಃ
ದಾಹಾದ್ ಭೀತೋ ವ್ಯಥಿತೋಽಶ್ವತ್ಥಪರ್ಣವತ್ ।
ತಂ ವೈ ದೃಷ್ಟ್ವಾ ಪ್ರಾಹ ಶಕ್ರೋ ಮಹಾತ್ಮಾ
ಬೃಹಸ್ಪತೇಃ ಸನ್ನಿಧೌ ಹವ್ಯವಾಹಮ್ ॥೨೦॥

ವ್ಯಾಸರು– ಯುಧಿಷ್ಠಿರನೇ, ಸಂವರ್ತನು ಭಸ್ಮ ಮಾಡುತ್ತಾನೆಂಬ ಭಯದಿಂದ ದುಃಖಿತನಾದ ಅಗ್ನಿಯು ಅಶ್ವತ್ಥ ಎಲೆಯಂತೆ ತರತರನೆ ನಡುಗಿ ದೇವತೆಗಳ ಬಳಿ ಓಡಿದ. ಭೀತನಾದ ಅಗ್ನಿದೇವನನ್ನು ಕಂಡು ಇಂದ್ರದೇವನು ಬೃಹಸ್ಪತಿಯ ಬಳಿ ಹೇಳುತ್ತಾನೆ.

ಇಂದ್ರಃ

ಯತ್ ತ್ವಂ ಗತಃ ಪ್ರಹಿತೋ ಜಾತವೇದೋ
ಬೃಹಸ್ಪತಿಂ ಪರಿದಾತುಂ ಮರುತ್ತೇ ।
ತತ್ ಕಿಂ ಪ್ರಾಹ ಸ ನೃಪೋ ಯಕ್ಷ್ಯಮಾಣಃ
ಕಚ್ಚಿದ್ ವಚಃ ಪ್ರತಿಗೃಹ್ಣಾತಿ ತಚ್ಚ ॥೨೧॥

ಜಾತವೇದಸನೇ, ಬೃಹಸ್ಪತಿಯನ್ನು ಮರುತ್ತನಿಗೆ ಒಪ್ಪಿಸುವ ಕಾರ್ಯವನ್ನು ಸಾಧಿಸಲೆಂದು ನಿನ್ನನ್ನು ಮರುತ್ತನ ಬಳಿ ಕಳುಹಿಸಿದೆ. ನನ್ನ ಸಂದೇಶವನ್ನು ಕೇಳಿಸಿಕೊಂಡ ಮರುತ್ತನು ಏನು ಹೇಳಿದನು? ನನ್ನ ಮಾತನ್ನು ಅಂಗೀಕರಿಸಿದನೆ?

ಅಗ್ನಿಃ

ನ ತೇ ವಾಕ್ಯಂ ರೋಚಯತೇ ಮರುತ್ತೋ
ಬೃಹಸ್ಪತೇರಂಜಲಿಂ ಪ್ರಾಹಿಣೋತ್ ಸಃ ।
ಸಂವರ್ತೋ ಮಾಂ ಯಾಜಯಿತೇತ್ಯಭೀಕ್ಷ್ಣಂ
ಪುನಃ ಪುನಃ ಸ ಮಯಾ ಪ್ರೋಚ್ಯಮಾನಃ ॥೨೨॥

ಅಗ್ನಿ– ದೇವರಾಜನೇ, ಮರುತ್ತನಿಗೆ ನೀನು ಕಳುಹಿಸಿದ ಸಂದೇಶವು ಇಷ್ಟವಾಗಲಿಲ್ಲ. ಕೈಜೋಡಿಸಿ ಬೃಹಸ್ಪತಿಗೆ ನಮನಗಳನ್ನು ನನಗೆ ತಿಳಿಸಿದ. ಮತ್ತೆ

ಬೃಹಸ್ಪತಿಯನ್ನು ಯಜ್ಞಕಾರ್ಯದಲ್ಲಿ ನಿಯೋಜಿಸಿಕೊಳ್ಳುವಂತೆ ಹೇಳಿದರೂ ಸಂವರ್ತನೇ ನನಗೆ ಯಜ್ಞವನ್ನು ಮಾಡಿಸುತ್ತಾನೆ ಎಂದು ದೃಢವಾಗಿ ಹೇಳಿದ.

ಉವಾಚೇದಂ ಮಾನುಷಾ ಯೇ ಚ ದಿವ್ಯಾಃ
ಪ್ರಜಾಪತೇರ್ಯೇ ಚ ಲೋಕಾ ಮಹಾಂತಃ ।
ತಾಂಶ್ಚೇಲ್ಲಭೇಯಂ ಸಂವಿದಂ ತೇನ ಕೃತ್ವಾ
ತಥಾऽಪಿ ನೇಚ್ಛೇಯಮಿತಿ ಪ್ರತೀತಃ ॥೨೩॥

ಇಂದ್ರನೊಡನೆ ಸಖ್ಯವನ್ನು ಪಡೆದರೆ, ಬೃಹಸ್ಪತಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡರೆ ಮನುಷ್ಯಲೋಕಗಳು, ದೇವಲೋಕಗಳು, ಪ್ರಜಾಪತಿಯ ಲೋಕಗಳನ್ನೆಲ್ಲ ಪಡೆಯಬಹುದೆಂದು ಹೇಳಿದೆನು. ಇಷ್ಟು ಹೇಳಿದರೂ ಬೃಹಸ್ಪತಿಯನ್ನು ಪುರೋಹಿತನನ್ನಾಗಿ ಅಂಗೀಕರಿಸಲು ಇಚ್ಛಿಸುವುದಿಲ್ಲ ಎಂದೇ ಹೇಳಿದನು.

ಇಂದ್ರಃ

ಪುನರ್ಭವಾನ್ ಪಾರ್ಥಿವಂ ತ್ವಂ ಸಮೇತ್ಯ
ವಾಕ್ಯಂ ಮದೀಯಂ ಪ್ರಾಪಸ್ವಾರ್ಥಯುಕ್ತಮ್ ।
ಪುನರ್ಯದುಕ್ತೋ ನ ಕರಿಷ್ಯತೇ ವಚಃ
ತತೋ ವಜ್ರಂ ಸಂಪ್ರಹರ್ತಾಸ್ಮಿ ತಸ್ಮೈ ॥೨೪॥

ಇಂದ್ರ– ಅಗ್ನಿದೇವನೇ, ಪುನಃ ಮರುತ್ತನ ಬಳಿ ನೀನು ತೆರಳು. ಅರ್ಥಯುಕ್ತವಾದ ನನ್ನ ಸಂದೇಶವನ್ನು ತಲುಪಿಸು. ಎರಡನೆಯ ಬಾರಿಯೂ ನನ್ನ ಸಂದೇಶದಂತೆ ನಡೆಯದಿದ್ದಲ್ಲಿ ಆತನ ಮೇಲೆ ನನ್ನ ವಜ್ರಾಯುಧವನ್ನೇ ಪ್ರಯೋಗಿಸುತ್ತೇನೆ.

ಅಗ್ನಿಃ

ಗಂಧರ್ವರಾಟ್ ಯಾತ್ವಯಂ ತತ್ರ ದೂತೋ
ಬಿಭೇಮ್ಯಹಂ ವಾಸವ ತತ್ರ ಗಂತುಮ್ ।
ಸಂರಬ್ಧೋ ಮಾಮುಕ್ತವಾಂಸ್ತೀಕ್ಷ್ಣರೋಷಃ
ಸಂವರ್ತೋ ವಾಕ್ಯಂ ಚರಿತಬ್ರಹ್ಮಚರ್ಯಃ ॥೨೫॥

ಅಗ್ನಿ– ದೇವರಾಜನೇ, ಗಂಧರ್ವರಾಜನು ಮರುತ್ತನ ಬಳಿ ದೂತನಾಗಿ ಹೋಗಲಿ. ಎರಡನೆಯ ಬಾರಿ ಮರುತ್ತನ ಬಳಿ ಸಾಗಲು ನನಗೆ ಭಯವಿದೆ.

ಬ್ರಹ್ಮಚರ್ಯವ್ರತನಿಷ್ಠನಾದ, ಉಗ್ರರೋಷವುಳ್ಳ ಸಂವರ್ತನು ನನ್ನ ಮಾತನ್ನು ಕೇಳಿ ಕ್ರುದ್ಧನಾಗಿ ಹೀಗೆ ಹೇಳಿದನು.

ಯದ್ಯಾಗಚ್ಛೇಃ ಪುನರೇವಂ ಕಥಂಚಿದ್
ಬೃಹಸ್ಪತಿಂ ಪರಿದಾತುಂ ಮರುತ್ತೇ ।
ದಹೇಯಂ ತ್ವಾಂ ಚಕ್ಷುಷಾ ದಾರುಣೇನ
ಸಂಕ್ರುದ್ಧ ಇತ್ಯೇತದವೇಹಿ ಶಕ್ರ ॥೨೬॥

ಅಗ್ನಿಯೇ, ಮುಂದೇನಾದರೂ ಬೃಹಸ್ಪತಿಯನ್ನು ಮರುತ್ತನಿಗೆ ಒಪ್ಪಿಸುವ ಕಾರ್ಯನಿಮಿತ್ತದಿಂದ ನೀನು ಇಲ್ಲಿಗೆ ಆಗಮಿಸಿದರೆ ಕ್ರುದ್ಧನಾದ ನಾನು ಉಗ್ರವಾದ ಕಣ್ಣಿನಿಂದಲೇ ನಿನ್ನ ಭಸ್ಮ ಮಾಡುತ್ತೇನೆ. ಇಂದ್ರದೇವ ಅವನು ಹೇಳಿದ ಈ ಮಾತನ್ನು ಗಮನಿಸು.

ಇಂದ್ರಃ

ತ್ವಮೇವಾನ್ಯಾನ್ ದಹಸೇ ಜಾತವೇದೋ
ನ ಚ ತ್ವದನ್ಯೋ ವಿದ್ಯತೇ ಭಸ್ಮಕರ್ತಾ ।
ತ್ವತ್ಸಂಸ್ಪರ್ಶಾತ್ ಸರ್ವಲೋಕೋ ಬಿಭೇತಿ
ನ ಶ್ರದ್ಧೇಯಂ ಭಾಷಸೇ ಹವ್ಯವಾಹ ॥೨೭॥

ಇಂದ್ರ– ಹವಿಷ್ಯಾನ್ನವನ್ನು ಒಯ್ಯುವ ಜಾತವೇದಸನೇ, ನಂಬಿಕೆಗೆ ಅರ್ಹವಲ್ಲದ ಮಾತನ್ನು ನೀನು ಆಡುತ್ತಿರುವೆ. ಕಾರಣ ಎಲ್ಲರನ್ನು ದಹಿಸುವ ವ್ಯಕ್ತಿತ್ವ ನಿನ್ನದು. ಸಮಗ್ರ ವಸ್ತುಗಳೂ ನಿನ್ನಿಂದ ಭಸ್ಮವನ್ನು ಹೊಂದುತ್ತವೆ ವಿನಾ ನಿನ್ನನ್ನು ಭಸ್ಮ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ನಿನ್ನ ಸ್ಪರ್ಶಮಾತ್ರದಿಂದ ಲೋಕಗಳು ಭಯ ಹೊಂದುತ್ತವೆ. ಆದ್ದರಿಂದ ಸಂವರ್ತನು ನಿನ್ನನ್ನು ಸುಡಲು ಸಮರ್ಥನಲ್ಲ. ಅವನ ಮಾತಿಗೆ ನೀನು ಭಯಪಡಬೇಕಾಗಿಲ್ಲ.

ಅಗ್ನಿಃ

ದಿವಂ ದೇವೇಂದ್ರ ಪೃಥಿವೀಂ ಚ ಸರ್ವಾಂ
ಸಂವೇಷ್ಟಯೇಸ್ತ್ವಂ ಸ್ವಬಲೇನೈವ ಶಕ್ರ ।

ಏವಂವಿಧಸ್ಯೇಹ ಸ ಯಸ್ತವಾಸೌ
ಕಥಂ ವೃತ್ರಸ್ತ್ರಿದಿವಂ ಪ್ರಾಗ್ಜಹಾರ ॥೨೮॥

ಅಗ್ನಿ– ದೇವೇಂದ್ರನೇ, ನೀನು ನಿನ್ನ ಬಾಹುಬಲದಿಂದ ಸಮಗ್ರ ಭೂಮಂಡಲವನ್ನೂ, ಸ್ವರ್ಗವನ್ನೂ ಚಾಪೆಯಂತೆ ಸುತ್ತಿಕೊಂಡಿರುವೆ. ಇಂತಹ ನಿನ್ನನ್ನೂ ಗೆದ್ದು ವೃತ್ರಾಸುರನು ಸ್ವರ್ಗವನ್ನು ಹೊಂದಿದನು. ಆದ್ದರಿಂದ ಬ್ರಾಹ್ಮಣನ ವಿಷಯದಲ್ಲಿ ನಾನು ಭಯಪಡುತ್ತೇನೆ.

ಇಂದ್ರಃ

ನಾದಂಡಕೋ ದಂಡಯಾನೋಽಸ್ಮ್ಯಲಿಂಗಾನ್
ನ ಕಾರುಸೋಮಂ ಪ್ರಪಿಬಾಮಿ ವಹ್ನೇ ।
ನ ಕಾರುರ್ವೈ ವಿಸೃಜಾಮಿ ವಜ್ರಂ
ಕೋ ಮೇಽಸುಖಾಯ ಪ್ರಹರೇನ್ಮನುಷ್ಯಃ ॥೨೯॥

ಇಂದ್ರ– ನಾನು ದಂಡನೆ ನೀಡುವುದಿಲ್ಲ ಎಂದಿಲ್ಲ. ಅವರವರಿಗೆ ಯೋಗ್ಯವಾದ ಚಿಹ್ನೆಯನ್ನು ಧರಿಸದಿದ್ದಲ್ಲಿ ಅವರನ್ನು ದಂಡಿಸುತ್ತೇನೆ. ಬಡಿಗನಿಂದ ಮುಟ್ಟಲ್ಪಟ್ಟ ಸೋಮರಸವನ್ನು ನಾನೆಂದೂ ಪಾನ ಮಾಡುವುದಿಲ್ಲ. ನನಗೆ ಅಸುಖವನ್ನುಂಟು ಮಾಡಲು ನನ್ನನ್ನು ಪ್ರಹರಿಸುವ ಮನುಷ್ಯರು ಯಾರಿದ್ದಾರೆ? ಬಲಹೀನರ ಮೇಲೆ ವಜ್ರಾಯುಧವನ್ನು ನಾನು ಪ್ರಹರಿಸುವುದಿಲ್ಲ.

ಪ್ರವ್ರಾಜಯೇಯಂ ಕಾಲಕೇಯಾನ್ ಪೃಥಿವ್ಯಾಮ್
ಅಪಾಕರ್ಷನ್ ದಾನವಾನಂತರಿಕ್ಷಾತ್ ।
ದಿವಃ ಪ್ರಹ್ಲಾದಂ ವ್ಯಥಮಾನಂ ನಯೇತ
ಕೋ ಮೇಽಸುಖಾಯ ಪ್ರಹರೇತಾದ್ಯ ಮರ್ತ್ಯಃ ॥೩೦॥

ಕಾಲಕೇಯಾದಿ ರಾಕ್ಷಸರನ್ನು ಆಕಾಶದಿಂದ ಸೆಳೆದು ಭೂಮಿಯ ಮೇಲೆ ಹಾಕಿದೆನು. ಪ್ರಹ್ಲಾದನಿಗೆ ಪ್ರಕೃಷ್ಟವಾದ ಸ್ವರ್ಗ ಸುಖವನ್ನು ನನ್ನನ್ನು ಬಿಟ್ಟು ಬೇರೆ ಯಾರಿಂದ ಕೊಡಲು ಸಾಧ್ಯ ? ಇಂತಹ ನನಗೆ ಅಸುಖವನ್ನು ನೀಡಲು ನನ್ನನ್ನು ಪ್ರಹರಿಸುವ ಮನುಷ್ಯರು ಯಾರಿದ್ದಾರೆ?

ಅಗ್ನಿಃ

ಯತ್ರ ಶರ್ಯಾತಿಂ ಚ್ಯವನೋ ಯಾಜಯಿಷ್ಯನ್
ಸಹಾಶ್ವಿಭ್ಯಾಂ ಸೋಮಮೇಕೋಽಪ್ಯಗೃಹ್ಣಾತ್ ।
ನ ತ್ವಂ ಕ್ರುದ್ಧಃ ಪ್ರತ್ಯಷೇಧೀಃ ಪುರಸ್ತಾತ್
ಶರ್ಯಾತಿಯಜ್ಞಂ ಸ್ಮರ ತಂ ಮಹೇಂದ್ರ ॥೩೧॥

ಅಗ್ನಿ- ಮಹೇಂದ್ರನೇ, ಶರ್ಯಾತಿಯ ಯಜ್ಞವನ್ನು ನೆನಪಿಸಿಕೊ. ಚ್ಯವನನು ಶರ್ಯಾತಿಗೆ ಯಜ್ಞವನ್ನು ಮಾಡಿಸುತ್ತಿದ್ದನು. ಈ ಮೊದಲು ನೀನು ಅಶ್ವಿನೀದೇವತೆಗಳಿಗೆ ಸೋಮರಸವನ್ನು ಯಾರೂ ಅರ್ಪಿಸಬಾರದೆಂದು ನಿಷೇಧ ಹೇರಿದ್ದೆ. ಆದರೆ ಚ್ಯವನನ ಪ್ರಭಾವದಿಂದ ನಿನ್ನನ್ನೂ ಮೀರಿ ಅಶ್ವಿನೀದೇವತೆಗಳು ಸೋಮಪಾನ ಮಾಡಿದ್ದಾರೆ.

ವಜ್ರಂ ಗೃಹೀತ್ವಾ ಚ ಪುರಂದರ ತ್ವಂ
ಸಂಪ್ರಹಾರ್ಷೀಶ್ಚ್ಯವನಸ್ಯಾತಿಘೋರಮ್ ।
ಸ ತೇ ಏಪ್ರಃ ಸಹ ವಜ್ರೇಣ ಬಾಹುಮ್
ಅಪಾಗೃಹ್ಣಾತ್ ತಪಸಾ ಜಾತಮನ್ಯುಃ ॥೩೨॥

ಪುರಂದರನೇ, ನೀನು ಆ ವಿಷಯವನ್ನು ತಿಳಿದು ಕ್ರುದ್ಧನಾಗಿ, ಘೋರವಾದ ವಜ್ರಾಯುಧವನ್ನು ಎತ್ತಿ ಚ್ಯವನರನ್ನು ಪ್ರಹರಿಸಲು ಉದ್ಯುಕ್ತನಾದೆ. ಆದರೆ ಕುಪಿತನಾದ ಬ್ರಹರ್ಷಿಯು ತನ್ನ ತಪಸ್ಸಿನಿಂದ ವಜ್ರಾಯುಧದೊಡನೆ ನಿನ್ನ ತೋಳನ್ನು ಸ್ತಂಭಿಸಿದನು.

ವ್ಯಾಖ್ಯಾನ ವಿಶೇಷ- ಚ್ಯವನರನ್ನು ಮೀರುವ ಸಾಮರ್ಥ್ಯವು ಇಂದ್ರನಲ್ಲಿದ್ದರೂ ಬ್ರಹ್ಮರ್ಷಿಗಳಿಗೆ ಮಹತ್ವವನ್ನು ನೀಡುವ ಉದ್ದೇಶದಿಂದ ಚ್ಯವನರು ತನ್ನ ಬಾಹುಗಳನ್ನು ಸ್ತಂಭಿಸಿದಾಗ ಅವರ ಮಂತ್ರಶಕ್ತಿಯ ಮಹತ್ವವನ್ನು ಸಾರಲು ಇಂದ್ರನು ಸ್ತಬ್ಧನಾದಂತೆ ನಟಿಸಿದನು. ಬ್ರಹ್ಮಬಲಕ್ಕೆ ದೇವತೆಗಳೂ ಮಹತ್ವವನ್ನು ಕನೀಡುತ್ತಾರೆ ವಿನಾ ಚ್ಯವನರಿಂದ ಇಂದ್ರನು ಪರಾಜಿತನಾಗಲಿಲ್ಲ ಎಂದು ಜ್ಞಾನಿಗಳ ಅಭಿಪ್ರಾಯ.

ತತೋ ರೋಷಾತ್ ಸರ್ವತೋ ಘೋರರೂಪಂ
ಸಂವರ್ತಂ ತೇ ಜನಯಾಮಾಸ ಭೂಯಃ ।
ಮದಂ ನಾಮ್ನಾ ಚಾಸುರಂ ವಿಶ್ವರೂಪಂ
ಯಂ ತ್ವಂ ದೃಷ್ಟ್ವಾ ಚಕ್ಷುಷೀ ಸನ್ನ್ಯಮೀಲ್ಯಃ ॥೩೩॥

ಅನಂತರ ಚ್ಯವನರು ರೋಷದಿಂದ ಘೋರರೂಪನಾಗಿ ಕಾಣುತ್ತಿದ್ದ ಪ್ರಳಯ ಸದೃಶನಾದ ಮದನೆಂಬ ಅಸುರ ಶತ್ರುವನ್ನು ಸೃಷ್ಟಿಸಿದರು. ಅವನನ್ನು ನೋಡಿದ ಕೂಡಲೇ ನೀನು ನಿನ್ನ ಕಣ್ಣುಗಳನ್ನು ಮುಚ್ಚಿಕೊಂಡೆ.

ಹನುರೇಕಾ ಜಗತೀಸ್ಥಾ ತಥೈಕಾ
ದಿವಂ ಗತಾ ಮಹತೋ ದಾನವಸ್ಯ ।
ಸಹಸ್ರಂ ದಂತಾನಾಂ ಶತಯೋಜನಾನಾಂ
ಸುತೀಕ್ಷ್ಣಾನಾಂ ಘೋರರೂಪಂ ಬಭೂವ ॥೩೪॥

ಆ ಮದಾಸುರನ ಒಂದು ದವಡೆಯು ಭೂಮಿಯಲ್ಲಿತ್ತು. ಮತ್ತೊಂದು ಸ್ವರ್ಗದಲ್ಲಿತ್ತು. ಆ ರಾಕ್ಷಸನಿಗೆ ಮೂರು ಯೋಜನಗಳಷ್ಟು ಉದ್ದವಾದ ಅತ್ಯಂತ ಉಗ್ರವಾದ ಹಲ್ಲುಗಳಿದ್ದವು. ಆದ್ದರಿಂದಾಗಿ ರಾಕ್ಷಸನ ರೂಪವು ಮತ್ತೂ ಭಯಂಕರವಾಗಿ ಕಾಣಿಸುತ್ತಿತ್ತು.

ವೃತ್ತಾಃ ಸ್ಥೂಲ ರಾಜತಸ್ತಂಭವರ್ಣಾ
ದಂಷ್ಟ್ರಾಶ್ಚತಸ್ರೋ ದ್ವೇ ಶತೇ ಯೋಜನಾನಾಮ್ ।
ಸ ತ್ವಾಂ ದಂತಾನ್ ವಿದಶನ್ನಭ್ಯಧಾವನ್
ಜಿಘಾಂಸಯಾ ಶೂಲಮುದ್ಯಮ್ಯ ಘೋರಮ್ ॥೩೫॥

ಆ ಮದಾಸುರನ ನಾಲ್ಕು ಕೋರೆಹಲ್ಲುಗಳು ದುಂಡಾಗಿಯೂ, ಪ್ರಕಾಶಮಾನವಾಗಿಯೂ ಬೆಳ್ಳಿಕಂಬದಂತೆ ಕಾಣುತ್ತಿದ್ದವು. ಆ ನಾಲ್ಕು ಕೋರೆಹಲ್ಲುಗಳು ಇನ್ನೂರು ಯೋಜನದಷ್ಟು ವಿಸ್ತಾರವಾಗಿದ್ದವು. ಅಂತಹ ರಾಕ್ಷಸನು ಭಯಂಕರವಾದ ತ್ರಿಶೂಲವನ್ನು ಹಿಡಿದು ನಿನ್ನನ್ನು ಸಂಹರಿಸುತ್ತೇನೆ ಎಂಬ ಬಯಕೆಯಿಂದ ಹಲ್ಲುಕಡಿಯುತ್ತಾ ಬೆನ್ನಟ್ಟಿ ಬಂದನು.

ತಂ ನಾಪಶ್ಯಸ್ತ್ವಂ ತದಾ ಘೋರರೂಪಂ
ಸರ್ವೇ ತ್ವದನ್ಯೇ ದದೃಶುರ್ದರ್ಶನೀಯಮ್ ।
ಯಸ್ಮಾದ್ ಭೀತಃ ಪ್ರಾಂಜಲಿಸ್ತ್ವಂ ಮಹರ್ಷಿಂ
ಗಚ್ಛೇಃ ಶೀಘ್ರಂ ಶರಣಂ ದಾನವಘ್ನ ॥೩೬॥

ದಾನವಾಂತಕನೇ, ಆ ಘೋರರೂಪಿಯಾದ ಮದಾಸುರನ ರೂಪವನ್ನು ನಿನ್ನಿಂದ ನೋಡಲಾಗಲಿಲ್ಲ. ಹೆದರಿದ ನಿನ್ನನ್ನು ಎಲ್ಲರೂ ನೋಡುತ್ತಲೇ ಇದ್ದರು. ಮದಾಸುರನಿಂದ ಭಯಗೊಳಿಸಲ್ಪಟ್ಟ ನೀನು ಕೈಜೋಡಿಸಿಕೊಂಡು ಚ್ಯವನ ಮಹರ್ಷಿಗೆ ಶರಣು ಹೋದೆ.

ಕ್ಷಾತ್ರಾದೇವ ಬ್ರಹ್ಮಬಲಂ ಗರೀಯೋ
ನ ಬ್ರಹ್ಮತಃ ಕಿಂಚಿದನ್ಯದ್ ಗರೀಯಃ ।
ಸೋಽಹಂ ಜಾನನ್ ಬ್ರಹ್ಮತೇಜೋ ಯಥಾವತ್
ನ ಸಂವರ್ತಂ ಗಂತುಮಿಚ್ಛಾಮಿ ಶಕ್ರ ॥೩೭॥

ಆದ್ದರಿಂದ ಶಾಸ್ತ್ರಬಲಕ್ಕಿಂತಲೂ ಬ್ರಹ್ಮಬಲವು ಶ್ರೇಷ್ಠವಾದುದು. ಬ್ರಹ್ಮಬಲವನ್ನು ಮೀರುವ ಶಕ್ತಿ ಬೇರೆ ಯಾವ ಶಕ್ತಿಗಳಿಗೂ ಇರುವುದಿಲ್ಲ. ಇಂತಹ ಬ್ರಹ್ಮತೇಜಸ್ಸಿನ ಬಲವನ್ನು ಯಥಾಯೋಗ್ಯವಾಗಿ ತಿಳಿದಿರುವ ನಾನು ಸಂವರ್ತನನ್ನು ಜಯಿಸಲು ಬಯಸುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಗ್ನಿ-ಶಕ್ರಸಂವಾದೋ ನಾಮ ನವಮೋಽಧ್ಯಾಯಃ ॥

॥ ಅಶ್ವಮೇಧಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಇಂದ್ರನು ಗಂಧರ್ವರಾಜನನ್ನು ಕಳುಹಿಸಿ ಹೆದರಿಸಿದುದು.
ಸಂವರ್ತನು ಮಂತ್ರಬಲದಿಂದ ಇಂದ್ರಾದಿದೇವತೆಗಳನ್ನು ಕರೆಸಿ
ಯಜ್ಞವನ್ನು ಸಂಪೂರ್ಣಗೊಳಿಸಿದುದು.

ಇಂದ್ರಃ

ಏವಮೇತದ್ ಬ್ರಹ್ಮಬಲಂ ಗರೀಯೋ
ನ ಬ್ರಹ್ಮತಃ ಕಿಂಚಿದನ್ಯದ್ ಗರೀಯಃ ।

ಆವಿಕ್ಷಿತಸ್ಯೇಹ ಬಲಂ ನ ಮೃಷ್ಯೇ
ವಜ್ರಮಸ್ಯೈ ಪ್ರಹರಿಷ್ಯಾಮಿ ಘೋರಮ್ ॥೧॥

ಇಂದ್ರ– ಅಗ್ನಿದೇವನೇ, ನೀನು ಹೇಳಿದ ಮಾತು ಸತ್ಯ. ಬ್ರಹ್ಮಬಲವೇ ಎಲ್ಲ ಬಲಗಳಿಗಿಂತಲೂ ಮಿಗಿಲಾಗಿದೆ. ಬ್ರಾಹ್ಮಣನಿಗಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲ. ಆದರೆ ಆವಿಕ್ಷಿತನ ಮಗನಾದ ಮರುತ್ತನ ಬಲವನ್ನು ನಾನಂತೂ ಸಹಿಸಲಾರೆ. ಆದ್ದರಿಂದ ಅವನ ಮೇಲೆ ಘೋರವಾದ ಈ ವಜ್ರಾಯುಧವನ್ನು ಪ್ರಯೋಗಿಸುತ್ತೇನೆ.

ಧೃತರಾಷ್ಟ್ರ ಗಚ್ಛ ಪ್ರಹಿತೋ ಮರುತ್ತಂ
ಸಂವರ್ತೇನ ಸಹಿತಂ ತಂ ವದಸ್ವ ।
ಬೃಹಸ್ಪತಿಂ ತ್ವಮುಪಶಿಕ್ಷಸ್ವ ರಾಜನ್
ವಜ್ರಂ ವಾ ತೇ ಪ್ರಹರಿಷ್ಯಾಮಿ ಘೋರಮ್ ॥೨॥

ಇಂದ್ರನು ಹೀಗೆ ಹೇಳಿ ತನ್ನ ಬಳಿ ಇರುವ ಧೃತರಾಷ್ಟ್ರನೆಂಬ ಗಂಧರ್ವನನ್ನು ಕುರಿತು ಹೇಳಿದನು– ಧೃತರಾಷ್ಟ್ರ, ನನ್ನಿಂದ ಕಳುಹಿಸಲ್ಪಟ್ಟ ನೀನು ಈಗಲೇ ಮರುತ್ತನ ಯಜ್ಞ ಮಂಟಪಕ್ಕೆ ಸಾಗು. ಸಂವರ್ತನ ಜೊತೆಯಲ್ಲಿರುವ ಮರುತ್ತನಿಗೆ ನಾನು ಹೇಳಲಿರುವ ಮಾತನ್ನು ಹೇಳು- 'ಮಹಾರಾಜನೇ, ಬೃಹಸ್ಪತಿಯನ್ನು, ಉಪಾಧ್ಯಾಯನನ್ನಾಗಿ ಮಾಡಿಕೊಂಡು ಯಜ್ಞಕರ್ಮದೀಕ್ಷಿತನಾಗು. ಹೀಗೆ ಮಾಡದಿದ್ದಲ್ಲಿ ನಿನ್ನ ಮೇಲೆ ವಜ್ರಾಯುಧವನ್ನು ಪ್ರಯೋಗಿಸುತ್ತೇನೆ' ಎಂದು.

ವ್ಯಾಸಃ

ತತೋ ಗತ್ವಾ ಧೃತರಾಷ್ಟ್ರೋ ನರೇಂದ್ರಂ
ಪ್ರೋವಾಚೇದಂ ವಚನಾದ್ ವಾಸವಸ್ಯ ॥೩॥

ವ್ಯಾಸರು– ನರೇಂದ್ರನೇ, ಇಂದ್ರನ ಮಾತಿನಂತೆ ಧೃತರಾಷ್ಟ್ರನೆಂಬ ಗಂಧರ್ವ ರಾಜನು ಮರುತ್ತನ ಬಳಿ ಹೋಗಿ ಇಂದ್ರನು ಹೇಳಿದ ಮಾತನ್ನು ಹೇಳಿದನು.

ಧೃತರಾಷ್ಟ್ರಃ

ಗಂಧರ್ವಂ ಮಾಂ ಧೃತರಾಷ್ಟ್ರಂ ನಿಬೋಧ
ತ್ವಾಮಾಗತಂ ವಕ್ತುಕಾಮಂ ನರೇಂದ್ರ ।

ಐಂದ್ರಂ ವಾಕ್ಯಂ ಶೃಣು ಮೇ ರಾಜಸಿಂಹ
ಯತ್ಪ್ರಾಹ ಲೋಕಾಧಿಪತಿರ್ಮಹಾತ್ಮಾ ॥೪॥

ಧೃತರಾಷ್ಟ್ರ– ಮರುತ್ತರಾಜನೇ, ನನ್ನನ್ನು ಧೃತರಾಷ್ಟ್ರನೆಂಬ ಹೆಸರಿನ ಗಂಧರ್ವನೆಂದು ತಿಳಿ. ನಿನಗೆ ಒಂದು ವಿಷಯವನ್ನು ತಿಳಿಸುವ ಬಯಕೆಯಿಂದ ನಿನ್ನ ಸನಿಹಕ್ಕೆ ಬಂದಿರುವೆನು. ಲೋಕಾಧಿಪತಿಯಾದ, ಮಹಾತ್ಮನಾದ ಇಂದ್ರನು ನನ್ನ ಬಳಿ ಹೇಳಿರುವ ಮಾತನ್ನು ತಿಳಿಸುತ್ತೇನೆ. ಏಕಾಗ್ರತೆಯಿಂದ ಕೇಳಿಸಿಕೋ

ಬೃಹಸ್ಪತಿಂ ಯಾಜಕಂ ತ್ವಂ ವೃಣೀಷ್ವ
ವಜ್ರಂ ವಾ ತೇ ಪ್ರಹರಿಷ್ಯಾಮಿ ಘೋರಮ್ ।
ವಚಶ್ಚೈದೇತನ್ನ ಕರಿಷ್ಯಸೇ ಮೇ
ಪ್ರಾಹೈತದೇತಾವದಚಿಂತ್ಯಕರ್ಮಾ ॥೫॥

ಬೃಹಸ್ಪತಿಂ ಯಾಜಯಿತುಂ ನ ಚೇಚ್ಛೇದ್
ವಜ್ರಂ ತಸ್ಮೈ ಪ್ರಹರಿಷ್ಯಾಮಿ ಘೋರಮ್ ॥೬॥

ಅಚಿಂತ್ಯಕರ್ಮನಾದ ಇಂದ್ರನು ಹೀಗೆ ಹೇಳಿದ್ದಾನೆ– 'ಮರುತ್ತನೇ, ನೀನು ಬೃಹಸ್ಪತಿಯನ್ನು ಯಾಜಕನನ್ನಾಗಿ ವರಿಸು. ನನ್ನ ಈ ಮಾತನ್ನು ಕೇಳದಿದ್ದಲ್ಲಿ ಘೋರವಾದ ವಜ್ರಾಯುಧವು ನಿನ್ನ ಮೇಲೆ ಪ್ರಯೋಗಿಸಲ್ಪಡುತ್ತದೆ'.

ಮರುತ್ತಃ

ತ್ವಂ ಚೈವ ತದ್ವೇತ್ಥ ಪುರುಹೂತಶ್ಚ ಸಾಧ್ಯಾ
ವಿಶ್ವೇ ದೇವಾ ವಸವಶ್ಚಾಶ್ವಿನೌ ಚ ।
ಮಿತ್ರದ್ರೋಹೇ ನಿಷ್ಕೃತಿರ್ವೈ ಯಥೇಹ
ನಾಸ್ತೀತಿ ಲೋಕೇಷು ಸದೈವ ವಾದಃ ॥೭॥

ಮರುತ್ತ– ಧೃತರಾಷ್ಟ್ರನೇ, ಮಿತ್ರದ್ರೋಹವನ್ನು ಎಸಗಿದವರಿಗೆ ಲೋಕದಲ್ಲಿ ಆ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಬ್ರಹ್ಮಹತ್ಯೆಗೆ ಸಮಾನವಾದ ಮಹಾಪಾತಕವು ಮಿತ್ರದ್ರೋಹವಾಗಿದೆ. ಈ ವಿಷಯವನ್ನು ನೀನು ಅರಿತಿರುವಿ. ಈ ವಿಷಯವು ಪುರಂದರ, ವಿಶ್ವೇದೇವತೆಗಳು, ವಸುಗಳು, ಅಶ್ವಿನೀದೇವತೆಗಳು ಇವರೆಲ್ಲರಿಗೂ ತಿಳಿದಿದೆ.

ಬೃಹಸ್ಪತಿರ್ಯಾಜಯಿತಾ ಮಹೇಂದ್ರಂ
ದೇವಂ ಶ್ರೇಷ್ಠಂ ವಜ್ರಭೃತಾಂ ವರಿಷ್ಠಮ್ ।
ಸಂವರ್ತೋ ಮಾಂ ಯಾಜಯಿತಾऽದ್ಯ ರಾಜನ್
ನ ತೇ ವಾಕ್ಯಂ ತಸ್ಯ ವಾ ರೋಚಯಾಮಿ ॥೮॥

ದೇವಶ್ರೇಷ್ಠನಾದ, ವಜ್ರಧಾರಿಗಳಲ್ಲಿ ವರಿಷ್ಠನಾದ ಮಹೇಂದ್ರನಿಗೆ ಬೃಹಸ್ಪತಿಯು ಯಜ್ಞವನ್ನು ಮಾಡಿಸಲಿ. ಈಗ ಸಂವರ್ತನು ನನಗೆ ಯಜ್ಞವನ್ನು ಮಾಡಿಸುತ್ತಾನೆ. ಇಷ್ಟು ಬಿಟ್ಟು; ನಿನ್ನ ಮಾತಾಗಲಿ, ದೇವೇಂದ್ರನ ಮಾತಾಗಲಿ ನನಗೆ ರುಚಿಸುತ್ತಿಲ್ಲ.

ಧೃತರಾಷ್ಟ್ರಃ

ಘೋರೋ ನಾದಃ ಶ್ರೂಯತೇ ವಾಸವಸ್ಯ
ನಭಸ್ಥಲೇ ಗರ್ಜತೋ ರಾಜಸಿಂಹ ।
ವ್ಯಕ್ತಂ ವಜ್ರಂ ಮೋಕ್ಷ್ಯತೇ ತೇ ಮಹೇಂದ್ರಃ
ಕ್ಷೇಮಂ ರಾಜಂಶ್ಚಿಂತ್ಯತಾಮೇಷ ಕಾಲಃ ॥೯॥

ಧೃತರಾಷ್ಟ್ರ– ರಾಜಸಿಂಹನೇ, ಇಂದ್ರನ ಘೋರವಾದ ನಾದವು ಆಕಾಶದಲ್ಲಿ ಕೇಳಿಬರುತ್ತಿದೆ. ಮಹೇಂದ್ರನು ನಿನ್ನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಲು ಉದ್ಯುಕ್ತನಾಗಿದ್ದಾನೆ. ನಿನ್ನ ಕ್ಷೇಮದ ಬಗ್ಗೆ ಯೋಚಿಸು. ಯೋಚಿಸಿ ಕಾರ್ಯನಿರತನಾಗಲು ಇದು ಸಕಾಲವಾಗಿದೆ.

ವ್ಯಾಸಃ

ಇತ್ಯೇವಮುಕ್ತೋ ಧೃತರಾಷ್ಟ್ರೇಣ ರಾಜನ್
ಶ್ರುತ್ವಾ ನಾದಂ ನದತೋ ವಾಸವಸ್ಯ ।
ತಪೋನಿತ್ಯಂ ಬ್ರಹ್ಮವಿದಾಂ ವರಿಷ್ಠಂ
ಸಂವರ್ತಂ ತಂ ಜ್ಞಾಪಯಾಮಾಸ ಕಾರ್ಯಮ್ ॥೧೦॥

ವ್ಯಾಸರು– ಯುಧಿಷ್ಠಿರನೇ, ಧೃತರಾಷ್ಟ್ರನು ಹೀಗೆ ಹೇಳುತ್ತಿರುವಾಗಲೇ ಇಂದ್ರದೇವನ ಗರ್ಜನೆಯ ಶಬ್ದವನ್ನು ಮರುತ್ತನು ಕೇಳಿಸಿಕೊಂಡು ಸಂವರ್ತನ ಬಳಿ ಸಾಗಿದನು. ಮಾಡಬೇಕಾದ ಕಾರ್ಯವೇನೆಂದು ವಿಜ್ಞಾಪಿಸಿಕೊಂಡನು.

ಮರುತ್ತಃ

ಯಸ್ಯಾತ್ಮಾನಂ ಪ್ಲವಮಾನಂ ತ್ವಮಾರಾದ್
ಅದೂರತೋ ದೇವರಾಜಂ ತ್ವಮದ್ಯ ।
ಪ್ರಪದ್ಯೇಽಹಂ ಶರ್ಮ ವಿಪ್ರೇಂದ್ರ ಭೂಯಃ
ಪ್ರಯಚ್ಛ ತಸ್ಮಾದಭಯಂ ವಿಪ್ರಮುಖ್ಯ ॥೧೧॥

ಅಯಮಾಯಾತಿ ವೈ ವಜ್ರೀ ದಿಶೋ ವಿದ್ಯೋತಯನ್ ದಶ ।
ಅಮಾನುಷೇಣ ನಾದೇನ ಸದಸ್ಯಾನ್ ಭೀಷಯನ್ನಿವ ॥೧೨॥

ಮರುತ್ತ– ವಿಪ್ರಶ್ರೇಷ್ಠನೇ, ಇಂದ್ರದೇವನು ನನ್ನನ್ನು ಇನ್ನೊಂದು ಕ್ರಮದಲ್ಲಿ ಹೆದರಿಸುತ್ತಿದ್ದಾನೆ. ಆಕಾಶದ ಮಾರ್ಗದಲ್ಲಿ ಆಗಮಿಸುತ್ತಿದ್ದಾನೆ. ಈಗ ಅವನು ಕಾಣಿಸುತ್ತಿಲ್ಲ. ವಿಪೇಂದ್ರನೇ, ನಿನ್ನಿಂದ ನನಗೆ ಸುಖವಾಗಬೇಕೆಂದು ಬಿನ್ನವಿಸುತ್ತೇನೆ. ಆದ್ದರಿಂದ ನನಗೆ ಅಭಯಪ್ರದಾನ ಮಾಡು. ಹತ್ತುದಿಕ್ಕುಗಳನ್ನು ಪ್ರಕಾಶಗೊಳಿಸುತ್ತಾ ಪುರಂದರನು ವಜ್ರಾಯುಧಧಾರಿಯಾಗಿ ಆಗಮಿಸುತ್ತಿದ್ದಾನೆ. ಅಮಾನುಷವಾದ, ಘೋರವಾದ ಅವನ ನಿನಾದದಿಂದ ನಮ್ಮ ಯಜ್ಞದ ಸದಸ್ಯರೆಲ್ಲರೂ ಭಯಗ್ರಸ್ಥರಾಗಿದ್ದಾರೆ.

ಸಂವರ್ತಃ

ಭಯಂ ಶಕ್ರಾದ್ ವ್ಯೇತು ತೇ ರಾಜಸಿಂಹ
ಪ್ರಣೋತ್ಸ್ಯೇಽಹಂ ಭಯಮೇತತ್ ಸುಘೋರಮ್ ।
ಸಂಸ್ತಂಭಿನ್ಯಾ ವಿದ್ಯಯಾ ವಜ್ರಮೇವ
ಮಾ ಭೈಸ್ತ್ವಮಸ್ಮಾದ್ ಭವ ಚಾಪಿ ಪ್ರತೀತಃ ॥೧೩॥

ಸಂವರ್ತ– ರಾಜಸಿಂಹನೇ, ಇಂದ್ರನಿಂದ ಉತ್ಪನ್ನವಾದ ನಿನ್ನ ಭಯವು ಉಪಶಮನ ಹೊಂದಲಿ. ಸಂಸ್ತಂಭಿನಿ ಎಂಬ ವಿದ್ಯೆಯಿಂದ ಈ ಕ್ಷಣದಲ್ಲಿಯೇ ಆ ಘೋರವಾದ ನಿನ್ನ ಭಯವನ್ನು ಪರಿಹರಿಸುತ್ತೇನೆ. ನನ್ನನ್ನು ನಂಬು. ಇಂದ್ರನ ಪರಾಭವಕ್ಕೆ ಹೆದರಬೇಡ.

ಅಹಂ ಸಂಸ್ತಂಭಯಿಷ್ಯಾಮಿ ಮಾ ಭೈಸ್ತ್ವಂ ಶಕ್ರತೋ ನೃಪ ।
ಸರ್ವೇಷಾಮೇವ ದೇವಾನಾಂ ಕ್ಷಪಿತಾನ್ಯಾಯುಧಾನಿ ಮೇ ॥೧೪॥

ದಿಶೋ ವಜ್ರಂ ವ್ರಜತಾದ್ ವಾಯುರೇತು
ವರ್ಷಂ ಭೂತ್ವಾ ವರ್ಷತಾತ್ ಕಾನನೇಷು ।
ಆಪಃ ಪ್ಲವಂತ್ವಂತರಿಕ್ಷಾದ್ ದೃಢಾ ಚ
ಸೌದಾಮಿನೀ ವಿದ್ಯತೇ ಮಾ ಬಿಭೇಸ್ತ್ವಮ್ ॥೧೫॥

ನರೇಶ್ವರನೇ, ನಾನು ಇಂದ್ರನನ್ನು ಸ್ತಂಭನಗೊಳಿಸುತ್ತೇನೆ. ಆದ್ದರಿಂದ ನೀನು ಅವನಿಂದ ಭಯಪಡಬೇಕಾಗಿಲ್ಲ. ಎಲ್ಲ ದೇವತೆಗಳ ಆಯುಧವನ್ನೂ ಶಕ್ತಿರಹಿತವನ್ನಾಗಿ ಮಾಡಿದ್ದೇನೆ. ವಜ್ರಾಯುಧವು ಎಲ್ಲ ದಿಕ್ಕುಗಳಿಗೂ ಹೋಗಲಿ. ಗಾಳಿಯು ಬೀಸುವಂತಾಗಲಿ. ಇಂದ್ರನೇ ವೃಷ್ಟಿರೂಪನಾಗಿ ಅರಣ್ಯದಲ್ಲಿ ಮಳೆಯನ್ನು ಸುರಿಸಲಿ. ಅಂತರಿಕ್ಷದಲ್ಲಿ ವ್ಯರ್ಥವಾಗಿ ನೀರು ತುಂಬಿಕೊಳ್ಳಲಿ. ಇವುಗಳ ಜೊತೆಗೆ ಮಿಂಚು ಮಿಂಚಲಿ. ನೀನು ಮಾತ್ರ ಭಯಪಡಬೇಡ.

ಅಧೋ ವಹ್ನಿಸ್ತ್ರಾತ್ತು ವಾ ಸರ್ವಶಸ್ತೇ
ಕಾಮಾದ್ ವರ್ಷಂ ವರ್ಷತು ಕಾಮತೋ ವಾ ।
ವಜ್ರಂ ತಥಾ ಸ್ಥಾಪಯಿತಾ ಚ ವಾಯುಃ
ಮಹಾಘೋರಂ ಪ್ಲವಮಾನಂ ಜಲೌಘೈಃ ॥೧೬॥

ಅಗ್ನಿದೇವನು ನಿನ್ನನ್ನು ಎಲ್ಲ ಕಡೆಯಿಂದಲೂ ರಕ್ಷಿಸಲಿ. ನಿನ್ನ ಕಾಮನೆಗಳನ್ನು ಇಂದ್ರನು ಮಳೆಯಂತೆ ಸುರಿಸಲಿ. ನೀರಿನ ಜೊತೆಗೆ ತೇಲಿಹೋಗುತ್ತಿರುವ ನಿನ್ನನ್ನು ಸಂಹರಿಸಲು ಪ್ರಯೋಗಿಸುತ್ತಿರುವ ವಜ್ರಾಯುಧವನ್ನು ದೇವೇಂದ್ರನು ತನ್ನ ಕೈಯಲ್ಲಿಯೇ ಸ್ಥಿರವಾಗಿ ಧರಿಸುವಂತಾಗಲಿ.

ಮರುತ್ತಃ

ಘೋರಃ ಶಬ್ದಃ ಶ್ರೂಯತೇ ವೈ ಮಹಾಸ್ವನೋ
ವಜ್ರಸ್ಯೈಷ ಸಂಹಿತೋ ಮಾರುತೇನ ।
ಆತ್ಮಾಽಪಿ ಮೇ ಪ್ರವ್ಯಥತೇ ಮುಹುರ್ಮುಹುಃ
ನ ಮೇ ಸ್ವಾಸ್ಥ್ಯಂ ಜಾಯತೇ ಹೃದ್ಯ ವಿಪ್ರ ॥೧೭॥

ಮರುತ್ತ– ವಿಪ್ರಶ್ರೇಷ್ಠನೇ, ಬಿರುಗಾಳಿಯ ಜೊತೆಗೆ ಘನಘೋರವಾದ ವಜ್ರಾಯುಧದ ಮಹತ್ತರವಾದ ಶಬ್ದವು ಕೇಳಿಸುತ್ತಿದೆ. ಈ ಶಬ್ದವನ್ನು ಕೇಳಿಸಿಕೊಂಡ

ನನ್ನ ಹೃದಯವು ಹೆಜ್ಜೆ ಹೆಜ್ಜೆಗೂ ಬಹಳವಾಗಿ ಖಿನ್ನವಾಗುತ್ತಿದೆ. ಮನಸ್ಸಿನಲ್ಲಿ ಶಾಂತಿಯೇ ಇಲ್ಲವಾಗಿದೆ.

ಸಂವರ್ತಃ

ವಜ್ರಾದುಗ್ರಾದ್ ವ್ಯೇತು ಭಯಂ ತವಾದ್ಯ
ವಾತೋ ಭೂತ್ವಾ ಹನ್ಮಿ ನರೇಂದ್ರ ವಜ್ರಮ್ ।
ಭಯಂ ತ್ಯಕ್ತ್ವಾ ವರಮನ್ಯಂ ವೃಣೀಷ್ವ
ಕಂ ತೇ ಕಾಮಂ ತಪಸಾ ಯೋಜಯಾಮಿ ॥೧೮॥

ಸಂವರ್ತ– ಇಂದ್ರನೇ, ವಜ್ರಾಯುಧದಿಂದ ಉಂಟಾದ ಭಯವು ಈ ಕ್ಷಣದಲ್ಲಿಯೇ ದೂರವಾಗಲಿ. ನಾನು ಗಾಳಿರೂಪನಾಗಿ ಈ ಕ್ಷಣದಲ್ಲಿಯೇ ವಜ್ರಾಯುಧವನ್ನು ನಾಶಗೊಳಿಸುತ್ತೇನೆ. ಈ ಭಯವನ್ನು ತ್ಯಜಿಸಿದ ನೀನು ಬೇರೆ ಯಾವುದಾದರೂ ವರವನ್ನು ಕೇಳು. ನಿನ್ನ ಇಚ್ಛೆಯನ್ನು ನನ್ನ ಮನಸ್ಸಂಕಲ್ಪದಿಂದಲೇ ಸಾಧಿಸಿಕೊಡುತ್ತೇನೆ. ಏನೆಂಬುದನ್ನು ಹೇಳು.

ಮರುತ್ತಃ

ಇಂದ್ರಃ ಸಾಕ್ಷಾತ್ ಸಹಸಾऽಭ್ಯೇತು ವಿಪ್ರ
ಹವಿರ್ವಿದ್ವನ್ ಪ್ರತಿಗೃಹ್ಣಾತು ಚೈವ ।
ಸ್ವಂ ಸ್ವಂ ಹವಿಶ್ಚೈವ ಜುಷಂತು ದೇವಾಃ
ಸುತಂ ಸೋಮಂ ಪ್ರತಿಗೃಹ್ಣಂತು ಚೈವ ॥೧೯॥

ಮರುತ್ತ– ಬ್ರಹ್ಮರ್ಷಿಯೇ, ಇಂದ್ರನೇ ಸಾಕ್ಷಾತ್ತಾಗಿ ಇಲ್ಲಿಗೆ ಆಗಮಿಸಿ ನನ್ನ ಯಜ್ಞದ ಹವಿಸ್ಸನ್ನು ಸ್ವೀಕರಿಸಲಿ. ದೇವತೆಗಳೆಲ್ಲರೂ ಅವರವರಿಗೆ ಯೋಗ್ಯವಾದ ಸ್ಥಾನವನ್ನು ಅಲಂಕರಿಸಲಿ. ಆಹುತಿರೂಪದಲ್ಲಿ ಕೊಡುವ ಸೋಮರಸವನ್ನು ಪಾನ ಮಾಡಲಿ.

ಸಂವರ್ತಃ

ಅಯಮಿಂದ್ರೋ ಹರಿಭಿರ್ಯಾತಿ ರಾಜನ್
ದೇವೈಃ ಸರ್ವೈಃ ಸಹಿತೈಃ ಸೋಮಪೀಥೀ ।
ಮಂತ್ರಾಹೂತೋ ಯಜ್ಞಮಿಮಂ ಮಯಾऽದ್ಯ
ಪಶ್ಯಸ್ವೈನಂ ಮಂತ್ರವಿತ್ರಸ್ತಕಾಯಮ್ ॥೨೦॥

ಮರುತ್ತನು ಹೀಗೆ ಹೇಳಿದ ನಂತರ ಸಂವರ್ತನು ತನ್ನ ಮಂತ್ರಬಲದಿಂದ ಸಮಸ್ತ ದೇವತೆಗಳನ್ನು ಆವಾಹಿಸುತ್ತಾ ಹೇಳಿದನು– 'ಮಹಾರಾಜ, ಇಂದ್ರದೇವನು ಸಮಸ್ತ ದೇವತಾ ಪರಿವಾರದಿಂದ ಸ್ತುತಿಸಿಕೊಳ್ಳುತ್ತಾ, ವೇಗದಿಂದ ಚಲಿಸುವ ಕುದುರೆಗಳ ರಥದಲ್ಲಿ ಆಸೀನನಾಗಿ ಆಗಮಿಸುತ್ತಿದ್ದಾನೆ. ಮಂತ್ರಮೂಲಕವಾಗಿ ಆಹ್ವಾನಿತನಾದ ಇಂದ್ರನು ಯಜ್ಞಕ್ಕೆ ಸಮೀಪಿಸಲಿದ್ದಾನೆ. ಮಂತ್ರದಿಂದ ಭಯಗ್ರಸ್ಥನಾದ ಆ ಇಂದ್ರನನ್ನು ನೀನೇ ನೋಡು'.

ತತೋ ದೇವೈಃ ಸಹಿತೋ ದೇವರಾಜೋ
ರಥೇ ಯುಕ್ತ್ವಾ ತಾನ್ ಹರೀನ್ ವಾಜಿಮುಖ್ಯಾನ್ ।
ಆಯಾದ್ಯಜ್ಞಮಥ ರಾಜ್ಞಃ ಪಿಪಾಸುಃ
ಆವಿಕ್ಷಿತಸ್ಯಾಪ್ರಮೇಯಸ್ಯ ಸೋಮಮ್ ॥೨೧॥

ವ್ಯಾಸರು– ಧರ್ಮಜನೇ, ದೇವರಾಜನು ದೇವತೆಗಳಿಂದ ಸಹಿತನಾಗಿ, ಹೊಂಬಣ್ಣದ ಕುದುರೆಗಳಿಂದ ಕೂಡಿದ ರಥದಿಂದ ಆವಿಕ್ಷಿತನ ಮಗನಾದ, ಅಪ್ರಮೇಯನಾದ ಮರುತ್ತನ ಯಜ್ಞಕ್ಕೆ ಸಂಬಂಧಿಸಿದ ಸೋಮರಸವನ್ನು ಪಾನ ಮಾಡಲು ಯಜ್ಞಮಂಟಪಕ್ಕೆ ಆಗಮಿಸಿದನು.

ತಮಾಯಾಂತಂ ಸಹಿತಂ ದೇವಸಂಘೈಃ
ಪ್ರತ್ಯುದ್ಯಯೌ ಸಪುರೋಧಾ ಮರುತ್ತಃ ।
ಚಕ್ರೇ ಪೂಜಾಂ ದೇವರಾಜಾಯ ಚಾಗ್ರ್ಯಾಂ
ಯಥಾಶಾಸ್ತ್ರಂ ವಿಧಿವತ್ ಪ್ರೀಯಮಾಣಃ ॥೨೨॥

ದೇವತಾ ಪರಿವಾರದಿಂದ ಸಹಿತನಾಗಿ ಆಗಮಿಸಿದ ಇಂದ್ರನನ್ನು ಪುರೋಹಿತರಿಂದ ಸಹಿತನಾದ ಮರುತ್ತನು ಸ್ವಾಗತಿಸಿದನು. ಸಂತುಷ್ಟನಾದ ಮರುತ್ತನು ಶಾಸ್ತ್ರವಿಧಿಗೆ ಅನುಗುಣವಾಗಿ ಸುರರಾಜನನ್ನು ಪೂಜಿಸಿದನು. ನಂತರ ಸಂವರ್ತನು ಇಂದ್ರನನ್ನು ಕುರಿತು ಹೇಳುತ್ತಾನೆ.

ಸಂವರ್ತಃ

ಸುಸ್ವಾಗತಂ ತೇ ಪುರುಹೂತೇಹ ವಿದ್ವನ್
ಯಜ್ಞೋಽಪ್ಯಯಂ ಸನ್ನಿಹಿತೇ ತ್ವಯೀಂದ್ರ ।

ಶೋಶುಭ್ಯತೇ ಬಲವೃತ್ರಘ್ನ ಭೂಯಃ
ಪಿಬಸ್ವ ಸೋಮಂ ಸುಖಮುದ್ಯತಂ ಮಯಾ ॥೨೩॥

ಸಂವರ್ತ– ಪುರುಹೂತನೇ, ವಿದ್ವಾಂಸನೇ, ನಿನಗೆ ಸ್ವಾಗತವು. ಇಂದ್ರನೇ, ನಿನ್ನ ದಿವ್ಯವಾದ ಸಾನ್ನಿಧ್ಯದಿಂದ ಈ ಯಜ್ಞವು ಶೋಭಾಯಮಾನವಾಗಿದೆ. ವೃತ್ರಘ್ನನೇ, ನಾನು ಸಂಸ್ಕರಿಸಿದ ಈ ಸೋಮರಸವು ಪಾನಮಾಡಲು ಸಿದ್ಧವಾಗಿದೆ.

ಮರುತ್ತಃ

ಶಿವೇನ ಮಾಂ ಪಶ್ಯ ನಮಶ್ಚ ತೇಽಸ್ತು
ಪ್ರಾಪ್ತೋ ಯಜ್ಞಃ ಸಫಲಂ ಜೀವಿತಂ ಮೇ ।
ಅಯಂ ಯಜ್ಞಂ ಕುರುತೇ ಮೇ ಸುರೇಂದ್ರ
ಬೃಹಸ್ಪತೇರವರೋ ಜನ್ಮನಾ ಚ ॥೨೪॥

ಮರುತ್ತ– ಸುರೇಂದ್ರನೇ, ನಿನಗೆ ನಮಸ್ಕಾರವು. ಮಂಗಳಮಯವಾದ ಕಣ್ಣಿನಿಂದ ನನ್ನನ್ನು ವೀಕ್ಷಿಸು. ನಾನು ಮಾಡಿಸುತ್ತಿರುವ ಈ ಯಜ್ಞಭೂಮಿಗೆ ಆಗಮಿಸಿದ್ದರಿಂದಲೇ ನನ್ನ ಜೀವಿತವೂ ನನ್ನ ಯಜ್ಞವೂ ಸಾಫಲ್ಯವನ್ನು ಹೊಂದಿತು. ಸುರರಾಜನೇ, ನನ್ನ ಯಜ್ಞವನ್ನು ಬೃಹಸ್ಪತಿಯ ಸಹೋದರನಾದ ಬ್ರಾಹ್ಮಣಶ್ರೇಷ್ಠನಾದ ಸಂವರ್ತನು ಮಾಡಿಸುತ್ತಿದ್ದಾನೆ.

ಇಂದ್ರಃ

ಜಾನಾಮಿ ತೇ ಗುರುಮೇತಂ ತಪೋಧನಂ
ಬೃಹಸ್ಪತೇರನುಜಂ ತಿಗ್ಮತೇಜಸಮ್ ।
ಯಸ್ಯಾಹ್ವಾನಾದಾಗತೋಽಹಂ ನರೇಂದ್ರ
ಪ್ರೀತಿರ್ಮೇಽದ್ಯ ತ್ವಯಿ ಮನ್ಯುಃ ಪ್ರಣಷ್ಟಃ ॥೨೫॥

ಇಂದ್ರ– ನರೇಂದ್ರನೇ, ತಪೋಧನನಾದ, ಬೃಹಸ್ಪತಿಯ ಸಹೋದರನಾದ ಉಗ್ರತೇಜಸ್ವಿಯಾದ ಸಂವರ್ತನನ್ನು ನಾನು ಬಲ್ಲವನಾಗಿದ್ದೇನೆ. ಇವನ ಮಂತ್ರ ಪೂರ್ವಕವಾದ ಆಹ್ವಾನದಿಂದಲೇ ಇಲ್ಲಿಗೆ ಆಗಮಿಸಿದ್ದೇನೆ. ನನ್ನ ಕೋಪವು ಉಪಶಮನವಾಗಿದೆ. ನಿನ್ನ ವಿಷಯದಲ್ಲಿ ನನಗೆ ಪ್ರೀತಿಯೇ ಉಂಟಾಗಿದೆ.

ಸಂವರ್ತಃ

ಯದಿ ಪ್ರೀತಸ್ತ್ವಮಸಿ ವೈ ದೇವರಾಜ
ತಸ್ಮಾತ್ ಸ್ವಯಂ ಶಾಧಿ ಯಜ್ಞೇ ವಿಧಾನಮ್ ।
ಸ್ವಯಂ ಸರ್ವಾನ್ ಕುರು ಮಾರ್ಗಾನ್ ಸುರೇಂದ್ರ
ಜಾನಾತ್ವಯಂ ಸರ್ವಲೋಕಶ್ಚ ದೇವ ॥೨೬॥

ಸಂವರ್ತ– ದೇವರಾಜನೇ, ನೀನು ನಮ್ಮ ವಿಷಯದಲ್ಲಿ ನಿಶ್ಚಿತವಾಗಿಯೂ ಕೂಡ ಪ್ರಸನ್ನನಾಗಿದ್ದಲ್ಲಿ ಯಜ್ಞಕ್ಕೆ ಅಪೇಕ್ಷಿತವಾದ ವಿಧಾನಗಳನ್ನು ನೀನೇ ಶಾಸನಮಾಡು. ಯಜ್ಞಕ್ಕೆ ಅಪೇಕ್ಷಿತವಾದ ಪರಿವೇಷಣಾದಿ ಮಾರ್ಗಗಳನ್ನು ನೀನೇ ಬೋಧಿಸು. ಇಲ್ಲಿಗೆ ಆಗಮಿಸಿರುವ ಎಲ್ಲರಿಗೂ ನಿನ್ನ ಪ್ರಸನ್ನತೆಯ ಅನುಭವವು ಉಂಟಾಗಲಿ.

ವ್ಯಾಸಃ

ಏವಮುಕ್ತಸ್ತ್ವಾಂಗಾರಸೇನ ಶಕ್ರಃ
ಸ ವ್ಯಾದಿದೇಶ ಸ್ವಯಮೇವ ದೇವಾನ್ ।
ಸಭಾಃ ಕ್ರಿಯಂತಾಮಾವಸಥಾಶ್ಚ ಮುಖ್ಯಾಃ
ಸಹಸ್ರಶಶ್ಚಿತ್ರಭೌಮಾಃ ಸಮೃದ್ಧಾಃ ॥೨೭॥

ವ್ಯಾಸರು– ಅಂಗಿರಸನ ಮಗನಾದ ಸಂವರ್ತನು ಹೀಗೆ ಪ್ರಾರ್ಥಿಸಿದಾಗ ಇಂದ್ರನು ದೇವತೆಗಳಿಗೆ ಚಿತ್ರ-ವಿಚಿತ್ರವಾಗಿರುವ, ಸಕಲ ವಿಧವಾದ ಸಾಮಗ್ರಿಗಳಿಂದ ಪ್ರವೃದ್ಧಮಾನವಾದ ಸಾವಿರಾರು ಸಭಾಭವನಗಳನ್ನು ನಿರ್ಮಿಸಲು ಆದೇಶಿಸಿದನು.

ಇಂದ್ರಃ

ಕ್ಲೃಪ್ತಾಃ ಸ್ಥೂಣಾಃ ಕುರುತಾರೋಹಣಾನಿ
ಗಂಧರ್ವಾಣಾಮಪ್ಸರಸಾಂ ಚ ಶೀಘ್ರಮ್ ।
ಯೇಷು ನೃತ್ಯಂತ್ಯಪ್ಸರಸಃ ಸಹಸ್ರಶಃ
ಸ್ವರ್ಗೋದ್ದೇಶಃ ಕ್ರಿಯತಾಂ ಯಜ್ಞವಾಟಃ ॥೨೮॥

ಇಂದ್ರ– ದೇವತೆಗಳೇ, ನೀವೆಲ್ಲರೂ ಗಂಧರ್ವಾಪ್ಸರೆಯರಿಗೆ ಯೋಗ್ಯವಾದ ರಂಗಮಂಟಪವನ್ನು ಕೂಡಲೇ ನಿರ್ಮಿಸಿರಿ. ಅದರಲ್ಲಿ ನಿರ್ದಿಷ್ಟ ಸಂಖ್ಯೆಯ

ಸ್ತಂಭಗಳಿರಬೇಕು. ಸೋಪಾನವು ಸುಂದರವಾಗಿರಬೇಕು. ಆ ಮಂಟಪದಲ್ಲಿ ಅಪ್ಸರೆಯರು ನೃತ್ಯಗೈಯ್ಯಬೇಕು. ಯಜ್ಞಮಂಟಪವು ಸ್ವರ್ಗಸದೃಶವಾಗಿರಬೇಕು.

ವ್ಯಾಸಃ

ಇತ್ಯುಕ್ತಾಸ್ತೇ ಚಕ್ರುರಾಶು ಪ್ರತೀತಾ
ದಿವೌಕಸಃ ಶಕ್ರವಾಕ್ಯಾನ್ನರೇಂದ್ರ ।
ತತೋ ವಾಕ್ಯಂ ಪ್ರಾಹ ರಾಜಾನಮಿಂದ್ರಃ
ಪ್ರೀತೋ ರಾಜನ್ ಪೂಜಯಾನೋ ಮರುತ್ತಮ್ ॥೨೯॥

ವ್ಯಾಸರು– ದೇವರಾಜನು ಹೀಗೆ ಹೇಳಿದ ಕೂಡಲೇ ದೇವತೆಗಳೆಲ್ಲರೂ ಸಂತುಷ್ಟರಾಗಿ, ಅವನ ಆದೇಶದಂತೆ ಎಲ್ಲವನ್ನೂ ಸಿದ್ಧಗೊಳಿಸಿದರು. ಇದರಿಂದ ಸುಪ್ರೀತನಾದ ಇಂದ್ರನು ಮರುತ್ತನನ್ನು ಯೋಗ್ಯವಾಗಿ ಸಂಪೂಜಿಸುತ್ತಾ ಹೀಗೆ ಹೇಳಿದನು.

ಇಂದ್ರಃ

ಏಷ ತ್ವಾಹಕಮಿಹ ರಾಜನ್ ಸಮೇತ್ಯ
ಯೇ ಚಾಪ್ಯನ್ಯೇ ತವ ಪೂರ್ವೇ ನರೇಂದ್ರಾಃ ।
ಸರ್ವಾಶ್ಚಾನ್ಯಾ ದೇವತಾಃ ಪ್ರೀಯಮಾಣಾ
ಹವಿಸ್ತ್ವತ್ತಃ ಪ್ರತಿಗೃಹ್ಣಂತು ರಾಜನ್ ॥೩೦॥

ಇಂದ್ರ– ಮರುತ್ತರಾಜನೇ, ನಾನು ಇಲ್ಲಿಗೆ ಬಂದು ನಿನ್ನ ಬಳಿ ಇದ್ದೇನೆ. ನಿನ್ನ ಪೂರ್ವಜರೆಲ್ಲರೂ ಇಲ್ಲಿಗೆ ಆಗಮಿಸಿದ್ದಾರೆ. ದೇವತೆಗಳೂ ಬಂದಿರುತ್ತಾರೆ. ಇವರೆಲ್ಲರೂ ಪ್ರಸನ್ನರಾಗಿ ನಿನ್ನಿಂದ ಕೊಡಲ್ಪಡುವ ಹವಿಷ್ಯವನ್ನು ಸ್ವೀಕರಿಸುವಂತಾಗಲಿ.

ಆಗ್ನೇಯಂ ವೈ ಲೋಹಿತಮಾಲಭಂತಾಂ
ವೈಶ್ವದೇವಂ ಬಹುರೂಪಂ ಚ ರಾಜನ್ ।
ನೀಕಂ ಚೋಕ್ಷಾಣಂ ಮೇಧ್ಯಮದ್ಯಾಲಭಂತಾಂ
ವಿಲೋಭ್ಯ ಚೈತ್ವಾ ಮತ್ಪ್ರತಿಷ್ಠಾಂ ದ್ವಿಜೇಂದ್ರಾಃ ॥೩೧॥

ಮರುತ್ತನೇ, ಹವಿಸ್ಸಿಗಾಗಿ ಅಗ್ನಿದೇವತಾಕವಾದ ಲೋಹಿತಜಾತಿಯ ವೃಷಭವು ಆಲಂಭಿಸಲ್ಪಡಲಿ. ವಿಶ್ವೇದೇವತೆಗಳಿಗೆ ಸಂಬಂಧಿಸಿದ ಹವಿಸ್ಸಿಗಾಗಿ ನೀಲ ಬಣ್ಣದ

ವೃಷಭವು ಆಲಂಭಿಸಲ್ಪಡಲಿ. ನನ್ನ ಆದೇಶದಂತೆ ಆಲಂಭಿತವಾದ ವೃಷಭದ ಮೇಧ್ಯದ ಹವಿಷ್ಯವನ್ನು ತುಂಡರಿಸಿ ನೀಡಲಿ.

ವ್ಯಾಖ್ಯಾನ ವಿಶೇಷ– ಲಕ್ಷಾಲಂಕಾರದಲ್ಲಿ ರಕ್ತಮ್ ಉಕ್ಷಾಣಮ್ ನೀಲಂ ಉಕ್ಷಾಣಮ್ ಆಲಭಂತಾಮ್ ಎಂದು ವಾದಿರಾಜರು ವ್ಯಾಖ್ಯಾನಿಸಿದ್ದಾರೆ. ಇಲ್ಲಿ ಕೆಲವರು ಕೆಂಪು, ನೀಲಿ ಬಣ್ಣದ ಜಿಂಕೆಗಳನ್ನು ಆಲಂಭಿಸಲಿ ಎಂದು ವ್ಯಾಖ್ಯಾನಿಸಿದ್ದಾರೆ. ಉಕ್ಷ ಶಬ್ದಕ್ಕೆ ವೃಷಭ ಎಂದು ಕೋಶಗಳಲ್ಲಿ, ವೇದಗಳಲ್ಲಿ ಉಕ್ತವಾಗಿದೆ. ಆದ್ದರಿಂದ ವೃಷಭವನ್ನೇ ಇಲ್ಲಿ ಪರಿಗ್ರಹಿಸಬೇಕು. **ಪ್ರಮಾಣ–** 'ಉಕ್ಷಾಮಿಮಾತಿ ಪ್ರತಿಯಂತಿ ಧೇನವಃ' – (ಋಗ್ವೇದ ೮.೭೧.೯)

ವ್ಯಾಸಃ

ತತೋ ಯಜ್ಞೋ ವವೃಧೇ ತಸ್ಯ ರಾಜ್ಞೋ
ಯತ್ರ ದೇವಾಃ ಸ್ವಯಮನ್ನಾನಿ ಜಹ್ರುಃ ।
ಯಸ್ಮಿನ್ ಶಕ್ರೋ ಬ್ರಾಹ್ಮಣೈಃ ಪೂಜ್ಯಮಾನಃ
ಸದಸ್ಯೋಽಭೂದ್ಧರಿವಾನ್ ದೇವರಾಜಃ ॥೩೨॥

ವ್ಯಾಸರು– ನಂತರ ಮರುತ್ತರಾಜನ ಯಜ್ಞವು ಸಾಂಗವಾಗಿ ಮುಂದುವರಿಯಿತು. ದೇವತೆಗಳು ಸ್ವೇಚ್ಛೆಯಿಂದ ಹವಿಸ್ಸುಗಳನ್ನು ಸ್ವೀಕರಿಸಿದರು. ಹರಿದ್ವರ್ಣದ ಕುದುರೆಗಳಿಂದ ಕೂಡಿದ ಇಂದ್ರನು ಬ್ರಾಹ್ಮಣರಿಂದ ಪೂಜಿತನಾಗಿ ಯಜ್ಞದ ಸದಸ್ಯನಾದನು.

ತತಃ ಸಂವರ್ತಶ್ಚೈತ್ಯಗತೋ ಮಹಾತ್ಮಾ
ಯಥಾ ವಹ್ನಿಃ ಪ್ರಜ್ವಲಿತೋ ದ್ವಿತೀಯಃ ।
ಹವೀಂಷ್ಯುಚ್ಚೈರಾಹ್ವಯನ್ ದೇವಸಂಘಾನ್
ಜುಹಾವಾಗ್ನೌ ಮಂತ್ರವತ್ ಸುಪ್ರಣೀತೇ ॥೩೩॥

ಅನಂತರ ಸಂವರ್ತನು ಉಜ್ವಲವಾದ ತೇಜಸ್ಸಿನಿಂದ ಯಜ್ಞೇಶ್ವರನಂತೆಯೇ ವಿರಾಜಿಸಿದನು. ಯಜ್ಞಮಂಟಪವನ್ನು ಪ್ರವೇಶಿಸಿ ಅತ್ಯಂತ ಪ್ರಸನ್ನನಾಗಿ ದೇವತೆಗಳ ಸಮೂಹವನ್ನು ಗಟ್ಟಿಯಾದ ಧ್ವನಿಯಿಂದ ಆಹ್ವಾನಿಸುತ್ತಾ ಮಂತ್ರೋಚ್ಚಾರಣೆಯ ಮೂಲಕ ಹವಿಸ್ಸನ್ನು ಅಗ್ನಿಯಲ್ಲಿ ದಾನ ಮಾಡಿದನು.

ತತಃ ಪೀತ್ವಾ ಬಲಭಿತ್ ಸೋಮಮಗ್ರ್ಯಂ
ಯೇ ಚಾಪ್ಯನ್ಯೇ ಸೋಮಪಾ ವೈ ದಿವೌಕಸಃ ।
ಸರ್ವೇऽನುಜ್ಞಾತಾಃ ಪ್ರಯಯುಃ ಪಾರ್ಥಿವೇನ
ತಥಾ ಜೋಷಂ ತರ್ಪಿತಾಃ ಪ್ರೀಯಮಾಣಾಃ ॥೩೪॥

ನಂತರ ಬಲಿಯನ್ನು ನಿಗ್ರಹಿಸಿದ ಇಂದ್ರನೂ ಶ್ರೇಷ್ಠವಾದ ಸೋಮಪಾನಕ್ಕೆ ಅಧಿಕಾರಿಗಳಾದ ದೇವತೆಗಳು ಮಂತ್ರಪೂತವಾದ ಸೋಮರಸವನ್ನು ಪಾನ ಮಾಡಿದರು. ಸಂತೃಪ್ತರಾದ ದೇವತೆಗಳೆಲ್ಲರೂ ಪ್ರಸನ್ನಚಿತ್ತರಾಗಿ ಮರುತ್ತನ ಅನುಮತಿಯನ್ನು ಪಡೆದು ತಮ್ಮ ಲೋಕಗಳಿಗೆ ಪ್ರಯಾಣ ಬೆಳೆಸಿದರು.

ತತೋ ರಾಜಾ ಜಾತರೂಪಸ್ಯ ರಾಶಿಂ
ಪದೇ ಪದೇ ಕಾರಯಾಮಾಸ ಹೃಷ್ಟಃ ।
ದ್ವಿಜಾತಿಭ್ಯೋ ವಿಸೃಜನ್ ಭೂರಿ ವಿತ್ತಂ
ರರಾಜ ವಿತ್ತೇಶ ಇವಾರಿಹಂತಾ ॥೩೫॥

ಆ ಅದ್ಭುತವಾದ ಯಜ್ಞವನ್ನು ಮಾಡಿ ಸಂತುಷ್ಟನಾದ ಮರುತ್ತರಾಜನು ಐಶ್ವರ್ಯವನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ಆ ಸಮಯದಲ್ಲಿ ಶತ್ರುಹಂತಕನಾದ ಮರುತ್ತರಾಜನು ಮತ್ತೊಬ್ಬ ಕುಬೇರನಂತೆಯೇ ಕಂಗೊಳಿಸಿದನು.

ತತೋ ವಿತ್ತಂ ವಿಧಿವತ್ ಸನ್ನಿಧಾಯ
ಯಥೋತ್ಸಾಹಂ ಕಾರಯಿತ್ವಾ ಚ ಕೋಶಮ್ ।
ಅನುಜ್ಞಾತೋ ಗುರುಣಾ ಸನ್ನಿವೃತ್ತ್ಯಂ
ಶಶಾಸ ಗಾಮಖಿಲಾಂ ಸಾಗರಾಂತಾಮ್ ॥೩೬॥

ಅನಂತರ ವಿಧಿಬದ್ಧವಾಗಿ ಸುವರ್ಣರಾಶಿಯನ್ನು ಅನೇಕ ಬ್ರಾಹ್ಮಣರಿಗೆ ದಾನವನ್ನು ಮಾಡಿ, ಉಳಿದ ವಿಧವಿಧವಾದ ಐಶ್ವರ್ಯವೆಲ್ಲವನ್ನೂ ಸಂಗ್ರಹಿಸಿ, ಅದನ್ನು ಭದ್ರವಾಗಿಡಲು ಭಾಂಡಾಗಾರವನ್ನು ಮಾಡಿಸಿದನು. ಗುರುವಾದ ಸಂವರ್ತನ ಅನುಮತಿಯನ್ನು ಪಡೆದು ತನ್ನ ರಾಜಧಾನಿಗೆ ಹಿಂದಿರುಗಿ, ಸಾಗರಾಂತವಾದ ಸಮಗ್ರ ಭೂಮಿಯನ್ನು ಧರ್ಮದಿಂದ ಪರಿಪಾಲಿಸಲು ಆರಂಭಿಸಿದನು.

ಏವಂಗುಣಃ ಸಂಬಭೂವೇಹ ರಾಜಾ
ಯಸ್ಯ ಕ್ರತೌ ತತ್ ಸುವರ್ಣಂ ಪ್ರಭೂತಮ್ ।
ತತ್ ತ್ವಂ ಸಮಾದಾಯ ನರೇಂದ್ರ ವಿತ್ತಂ
ಯಜಸ್ವ ದೇವಾಂಸ್ತಪನೀಯೈರ್ವಿಧಾನೈಃ ॥೩೭॥

ಯುಧಿಷ್ಠಿರನೇ, ಹೀಗೆ ಮರುತ್ತರಾಜನು ಪ್ರಭಾವಶಾಲಿಯಾಗಿದ್ದನು. ಅವನ ಬಳಿ ಹೇರಳವಾದ ಬಂಗಾರವಿತ್ತು. ಅವನು ತನ್ನ ಭಾಂಡಾಗಾರದಲ್ಲಿ ಶೇಖರಿಸಿರುವ ಸುವರ್ಣವನ್ನು ತಂದು, ಆ ಹವಿರ್ಭಾಗಗಳಿಂದ ದೇವತೆಗಳನ್ನು ಸಂತೋಷಗೊಳಿಸುತ್ತಾ ಯಜ್ಞವನ್ನು ಮಾಡು.

ವೈಶಂಪಾಯನಃ

ತತೋ ರಾಜಾ ಪಾಂಡವೋ ಹೃಷ್ಟರೂಪಃ
ಶ್ರುತ್ವಾ ವಾಕ್ಯಂ ಸತ್ಯವತ್ಯಾಃ ಸುತಸ್ಯ ।
ಮನಶ್ಚಕ್ರೇ ತೇನ ವಿತ್ತೇನ ಯಷ್ಟುಂ
ತತೋಽಮಾತ್ಯೈರ್ಮಂತ್ರಯಾಮಾಸ ಭೂಯಃ ॥೩೮॥

ವೈಶಂಪಾಯನ– ಜನಮೇಜಯನೇ, ಸತ್ಯವತೀಸುತರಾದ ವ್ಯಾಸರ ಮಾತನ್ನು ಹಿರಿಯನಾದ ಯುಧಿಷ್ಠಿರನು ಕೇಳಿಸಿಕೊಂಡು ಪ್ರಸನ್ನನಾದನು. ವ್ಯಾಸರು ಹೇಳಿದಂತೆ ಹಿಮವತ್ ಪರ್ವತದ ತಪ್ಪಲಿನಿಂದ ಸುವರ್ಣವನ್ನು ಹೊತ್ತುತಂದು ಅದರಿಂದ ಯಜ್ಞ ಮಾಡಲು ಮನಸ್ಸು ಮಾಡಿದನು. ಅದರ ಬಗ್ಗೆ ಮಂತ್ರಿಗಳಲ್ಲಿ ಪುನಃ ಪುನಃ ಸಮಾಲೋಚನೆಯನ್ನೂ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವಿತ್ತಾನಯನೋಪಾಯಕಥನಂ ನಾಮ ದಶಮೋಽಧ್ಯಾಯಃ ॥

॥ ಆಶ್ವಮೇಧಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಶ್ರೀಕೃಷ್ಣನು ಚಿಂತಾಗ್ರಸ್ತನಾದ ಯುಧಿಷ್ಠಿರನಿಗೆ ಇಂದ್ರನಿಂದ ವೃತ್ರಾಸುರನ ವಧೆಯ ಕ್ರಮವನ್ನು ತಿಳಿಸಿ ಸಮಾಧಾನ ಪಡಿಸಿದುದು.

ವೈಶಂಪಾಯನಃ

ಇತ್ಯುಕ್ತೇ ನೃಪತೌ ತಸ್ಮಿನ್ ವ್ಯಾಸೇನಾದ್ಭುತಕರ್ಮಣಾ ।
ವಾಸುದೇವೋ ಮಹಾತೇಜಾಃ ತತೋ ವಚನಮಾದದೇ ॥೧॥

ವೈಶಂಪಾಯನ– ಜನಮೇಜಯನೇ, ಅದ್ಭುತಕರ್ಮವನ್ನು ಮಾಡುವ ವೇದವ್ಯಾಸರು ಹೀಗೆ ಹೇಳಿದ ನಂತರ ತೇಜಸ್ಸಂಪನ್ನನಾದ ವಾಸುದೇವನೂ ಯುಧಿಷ್ಠಿರನಿಗೆ ಹೀಗೆ ಹೇಳಿದನು.

ತಂ ನೃಪಂ ದೀನಮನಸಂ ನಿಹತಜ್ಞಾತಿಬಾಂಧವಮ್ ।
ಉಪಪ್ಲುತಮಿವಾದಿತ್ಯಂ ಸಧೂಮಮಿವ ಪಾವಕಮ್ ॥೨॥

ವೇದವ್ಯಾಸದೇವರು ಸಮಾಧಾನದ ಮಾತುಗಳನ್ನು ಹೇಳಿದ ನಂತರವೂ ಯುಧಿಷ್ಠಿರನ ಮನಸ್ಸು ದುಃಖಿತವಾಗಿಯೇ ಇತ್ತು. ಜ್ಞಾತಿಗಳನ್ನು ಕಳೆದುಕೊಂಡಿದ್ದ ಯುಧಿಷ್ಠಿರನು ರಾಹುಗ್ರಸ್ಥನಾದ ಸೂರ್ಯನಂತೆ, ಹೊಗೆಯಿಂದ ಕೂಡಿದ ಯಜ್ಞೇಶ್ವರನಂತೆ ಕಾಂತಿಹೀನನಾಗಿದ್ದನು.

ವಿಷಣ್ಣಮನಸಂ ಪಾರ್ಥಂ ಜ್ಞಾತ್ವಾ ವೃಷ್ಣಿಕುಲೋದ್ವಹಃ ।
ಆಶ್ವಾಸಯನ್ ಧರ್ಮಸುತಂ ಪ್ರವಕ್ತುಮುಪಚಕ್ರಮೇ ॥೩॥

ಖೇದಹೊಂದಿರುವ ಮನಸ್ಸಿನಿಂದ ಕೂಡಿರುವ ಧರ್ಮರಾಜನನ್ನು ಕಂಡ ವೃಷ್ಣಿಕುಲದ ಒಡೆಯನಾದ ಶ್ರೀಕೃಷ್ಣನು ಅವನನ್ನು ಪುನಃ ಪುನಃ ಸಮಾಧಾನ ಪಡಿಸಿದನು. ಸಮಾಧಾನಪಡಿಸಲು ಈ ಮಾತುಗಳನ್ನು ಹೇಳಿದನು.

ಶ್ರೀಭಗವಾನ್

ಸರ್ವಂ ಜಿಹ್ಮಂ ಮೃತ್ಯುಪದಮಮೃತಂ ಬ್ರಹ್ಮಣಃ ಪದಮ್ ।
ಏತಾವಾನ್ ಜ್ಞಾನವಿಷಯಃ ಕಿಂ ಪ್ರಾಪಃ ಕರಿಷ್ಯತಿ ॥೪॥

ಶ್ರೀಭಗವಾನ್– ಯುಧಿಷ್ಠಿರನೇ, ಪರಂಬ್ರಹ್ಮನೆನಿಸಿದ ನಾರಾಯಣನ ಮನೆಗಳಾದ ವೈಕುಂಠ, ಶ್ವೇತದ್ವೀಪ, ಅನಂತಾಸನ - ಈ ಮೂರುಲೋಕಗಳು ಮಾತ್ರ ಮರಣವನ್ನು ತಪ್ಪಿಸುವ ಲೋಕಗಳು ಎನಿಸಿವೆ. ಉಳಿದ ಸತ್ಯಲೋಕದಿಂದ ಆರಂಭಿಸಿ ಸಮಸ್ತ ಲೋಕಗಳೂ ಮರಣಕ್ಕೇ ಸ್ಥಾನವೆನಿಸಿವೆ. ಹಾಗಾಗಿ ಮೃತ್ಯುವಿನ ಸ್ಥಾನದಲ್ಲಿ ನಿಂತ ವ್ಯಕ್ತಿಗಳು ಮರಣ ಹೊಂದಿದ್ದಾರೆ ಎಂಬ ವಿಷಯದಲ್ಲಿ ನೀನು ದುಃಖಪಡುವುದು ವ್ಯರ್ಥವಾಗಿದೆ.

ನೈವ ತೇऽನುಷ್ಠಿತಂ ಕರ್ಮ ನೈವ ತೇ ಶತ್ರವೋ ಜಿತಾಃ ।
ಕಥಂ ಶತ್ರುಂ ಶರೀರಸ್ಥಮಾತ್ಮನೋ ನಾವಬುದ್ಧ್ಯಸೇ ॥೫॥

ಯುಧಿಷ್ಠಿರನೇ, ನೀನು ಮಾಡಬೇಕಾಗಿರುವ ಕರ್ತವ್ಯವನ್ನು ಇನ್ನೂ ಮಾಡಿರುವುದಿಲ್ಲ. ಶತ್ರುಗಳನ್ನು ಪೂರ್ಣವಾಗಿ ಇನ್ನೂ ಜಯಿಸಿಲ್ಲ. ಆ ಶತ್ರುವು ನಿನ್ನ ಶರೀರದಲ್ಲೇ ಅಡಗಿ ಕುಳಿತಿದ್ದಾನೆ. ಆ ಶತ್ರುವನ್ನು ನೀನೇಕೆ ತಿಳಿಯುತ್ತಿಲ್ಲ?

ಅತ್ರ ತೇ ವರ್ತಯಿಷ್ಯಾಮಿ ಯಥಾಧರ್ಮಂ ಯಥಾಶ್ರುತಮ್ ।
ಇಂದ್ರಸ್ಯ ಸಹ ವೃತ್ರೇಣ ಯಥಾ ಯುದ್ಧಮವರ್ತತ ॥೬॥

ನಿನಗೆ ಇಂದ್ರ-ವೃತ್ರರಿಗೆ ಪರಸ್ಪರ ನಡೆದ ಯುದ್ಧವೃತ್ತಾಂತವನ್ನು ಹೇಳುತ್ತೇನೆ, ಕೇಳಿಸಿಕೊ.

ವೃತ್ರೇಣ ಪೃಥಿವೀ ವ್ಯಾಪ್ತಾ ಪುರಾ ಕಿಲ ನರಾಧಿಪ ॥೭॥

ದೃಷ್ಟ್ವಾ ಚ ಪೃಥಿವೀಂ ವ್ಯಾಪ್ತಾಂ ಗಂಧಸ್ಯ ವಿಷಯೇ ಹತೇ ।
ಧರಾಹರಣನಿರ್ಗಂಧೋ ವಿಷಯಃ ಸಮಪದ್ಯತ ॥೮॥

ನರಾಧಿಪನೇ, ಹಿಂದೊಮ್ಮೆ ವೃತ್ರಾಸುರನಿಂದಲೇ ಸಮಗ್ರ ಪೃಥಿವಿಯೂ ವ್ಯಾಪ್ತವಾಗಿತ್ತು. ದೇವೇಂದ್ರನು ಸಮಗ್ರ ಭೂಮಂಡಲವು ವೃತ್ರಾಸುರನಿಂದ ವ್ಯಾಪಿಸಿರುವುದನ್ನು, ಅದರ ಜೊತೆಗೆ ಪೃಥಿವಿಯಲ್ಲಿರುವ ತನ್ಮಾತ್ರವೆನಿಸಿದ ಗಂಧವು ಅವನಿಂದ ಅಪಹೃತವಾಗಿರುವುದನ್ನು ತಿಳಿದನು. ಪೃಥಿವಿಯ ಅಂಶವಾದ ಗಂಧವೇ ವೃತ್ರಾಸುರನಿಂದ ಅಪಹರಿಸಲ್ಪಟ್ಟಿದ್ದರಿಂದ ಭೂಮಿಯು ನಿರ್ಗಂಧದಿಂದ ಕೂಡಿತು.

ಶತಕ್ರತುಶ್ಚುಕೋಪಾಥ ಗಂಧಸ್ಯ ವಿಷಯೇ ಹೃತೇ ।
ಶತಕ್ರತುರಭಿಕ್ರುದ್ಧಃ ತತ್ರ ವಜ್ರಮವಾಸೃಜತ್ ॥೯॥

ಅದರಿಂದ ಇಂದ್ರನು ಬಹಳವಾಗಿ ಸಿಟ್ಟುಗೊಂಡನು. ವೃತ್ರಾಸುರನ ವಿಷಯದಲ್ಲಿ ಸಿಟ್ಟುಗೊಂಡ ದೇವೇಂದ್ರನು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು.

ಸ ವಧ್ಯಮಾನೋ ವಜ್ರೇಣ ಸಲಿಲೇ ಭೂರಿತೇಜಸಾ ।
ವಿವೇಶ ಸಹಸಾऽಂಭಾಂಸಿ ಜಗ್ರಾಹ ವಿಷಯಂ ತತಃ ॥೧೦॥

ಮಹಾತೇಜಸ್ಸಿನಿಂದ ಕೂಡಿರುವ ಇಂದ್ರನ ವಜ್ರಾಯುಧದಿಂದ ಹೊಡೆಸಿಕೊಂಡ ವೃತ್ರಾಸುರನು ಕೂಡಲೇ ನೀರಿನೊಳಗೆ ಪ್ರವೇಶ ಮಾಡಿ, ನೀರಿನ ವಿಷಯವೆನಿಸಿದ ರಸವನ್ನು ಅಪಹರಿಸಿದನು.

ವ್ಯಾಪ್ತೇ ಚಾಂಭಸಿ ವೃತ್ರೇಣ ರಸಸ್ಯ ವಿಷಯೇ ಹೃತೇ ।
ಶತಕ್ರತುರಭಿಕ್ರುದ್ಧಃ ತತ್ರ ವಜ್ರಮವಾಸೃಜತ್ ॥೧೧॥

ಸಮಗ್ರ ನೀರಿನಲ್ಲಿ ವೃತ್ರಾಸುರನು ವ್ಯಾಪ್ತನಾಗಿ, ನೀರಿನ ವಿಷಯಭೂತವಾದ ರಸವನ್ನು ಅಪಹರಿಸಿದಾಗ, ಕ್ರುದ್ಧನಾದ ದೇವೇಂದ್ರನು ನೀರಿನಲ್ಲಿ ಅಡಗಿರುವ ವೃತ್ರನ ಮೇಲೆಯೇ ವಜ್ರಾಯುಧವನ್ನು ಪ್ರಯೋಗಿಸಿದನು.

ಸ ವಧ್ಯಮಾನೋ ವಜ್ರೇಣ ಸಲಿಲೇ ಭೂರಿತೇಜಸಾ ।
ವಿವೇಶ ಸಹಸಾ ಜ್ಯೋತಿರ್ಜಗ್ರಾಹ ವಿಷಯಂ ತತಃ ॥೧೨॥

ಅಮಿತವಾದ ತೇಜಸ್ಸಿನಿಂದ ಕೂಡಿದ ವಜ್ರಾಯುಧದಿಂದ ವಧ್ಯಮಾನನಾದ ವೃತ್ರಾಸುರನು ಕೂಡಲೇ ತೇಜಸ್ಸನ್ನು ಪ್ರವೇಶಿಸಿ, ಅದರ ವಿಷಯವಾದ ರೂಪವನ್ನು ಅಪಹರಿಸಿದನು.

ವ್ಯಾಪ್ತೇ ಜ್ಯೋತಿಷಿ ವೃತ್ರೇಣ ರೂಪಸ್ಯ ವಿಷಯೇ ಹೃತೇ ।
ಶತಕ್ರತುರಭಿಕ್ರುದ್ಧಃ ತತ್ರ ವಜ್ರಮವಾಸೃಜತ್ ॥೧೩॥

ತೇಜಸ್ಸು ವೃತ್ರಾಸುರನಿಂದ ವ್ಯಾಪ್ತವಾಗಿ ರೂಪಹೀನವಾಗಿರಲು ಅತ್ಯಂತ ಸಿಟ್ಟಾದ ಅಮರೇಂದ್ರನು ಜ್ಯೋತಿಸ್ಸಿನಲ್ಲಿ ಸೇರಿರುವ ವೃತ್ರನ ಮೇಲೆ ಪುನಃ ವಜ್ರಾಯುಧವನ್ನು ಪ್ರಯೋಗಿಸಿದನು.

ಸ ವಧ್ಯಮಾನೋ ವಜ್ರೇಣ ಸುಭೃಶಂ ಭೂರಿತೇಜಸಾ ।
ವಿವೇಶ ಸಹಸಾ ವಾಯುಂ ಜಗ್ರಾಹ ವಿಷಯಂ ತತಃ ॥೧೪॥

ತೇಜಸ್ಸಿನಲ್ಲಿ ಸೇರಿದ ವೃತ್ರನು ದಿವ್ಯತೇಜಸ್ಸಿನ ವಜ್ರಾಯುಧದಿಂದ ಹತನಾಗಿ ಕೂಡಲೇ ತೇಜಸ್ಸನ್ನು ಬಿಟ್ಟು, ವಾಯುವನ್ನು ವ್ಯಾಪಿಸಿ ಅದರ ವಿಷಯವಾದ ಸ್ಪರ್ಶವನ್ನು ಅಪಹರಿಸಿದನು.

ವ್ಯಾಪ್ತೇ ವಾಯೌ ಚ ವೃತ್ರೇಣ ಸ್ಪರ್ಶಸ್ಯ ವಿಷಯೇ ಹೃತೇ ।
ಶತಕ್ರತುರಭಿಕ್ರುದ್ಧಃ ತತ್ರ ವಜ್ರಮವಾಸೃಜತ್ ॥೧೫॥

ವೃತ್ರನು ವಾಯುವನ್ನು ವ್ಯಾಪಿಸಿ, ಅದರ ವಿಷಯವಾದ ಸ್ಪರ್ಶವನ್ನು ಅಪಹರಿಸಿದ್ದರಿಂದ ಕ್ರುದ್ಧನಾದ ಇಂದ್ರನು ವಾಯುವಿನಲ್ಲಿ ವ್ಯಾಪಿಸಿದ ವೃತ್ರನ ಮೇಲೆ ಪುನಃ ವಜ್ರಾಯುಧವನ್ನು ಪ್ರಯೋಗಿಸಿದನು.

ಸ ವಧ್ಯಮಾನೋ ವಜ್ರೇಣ ತಸ್ಮಿನ್ನಮಿತತೇಜಸಾ ।
ಆಕಾಶಮಭಿದುದ್ರಾವ ತಂ ಶಕ್ರಂ ವಿಷಯಂ ತತಃ ॥೧೬॥

ಅಮಿತತೇಜಸ್ಸಿನಿಂದ ಕೂಡಿದ ವಜ್ರಾಯುಧದಿಂದ ಹೊಡೆಯಲ್ಪಟ್ಟ ವೃತ್ರನು ಕೂಡಲೇ ಆಕಾಶದ ಕಡೆ ನೆಗೆದನು. ಸಮಗ್ರ ಆಕಾಶವನ್ನು ವ್ಯಾಪಿಸಿ ಅದರ ವಿಷಯವಾದ ಶಬ್ದವನ್ನು ಅಪಹರಿಸಿದನು ಅರ್ಥಾತ್ ಜ್ಞಾನವನ್ನೇ ಅಪಹರಿಸಿದನು.

ಆಕಾಶೇ ವೃತ್ರಭೂತೇಽಥ ಶಬ್ದಸ್ಯ ವಿಷಯೇ ಹೃತೇ ।
ಶತಕ್ರತುರಭಿಕ್ರುದ್ಧಃ ತತ್ರ ವಜ್ರಮವಾಸೃಜತ್ ॥೧೭॥

ಆಕಾಶವು ವೃತ್ರನಿಂದ ವ್ಯಾಪ್ತವಾಗಿ ಅದರ ವಿಷಯವಾದ ಶಬ್ದಾಖ್ಯಜ್ಞಾನವು ಅಪಹೃತವಾದಾಗ ಅವನಲ್ಲಿಸಿಟ್ಟಾದ ಇಂದ್ರನು ಪುನಃ ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು.

ಸ ವಧ್ಯಮಾನೋ ವಜ್ರೇಣ ತಸ್ಮಾದಮಿತತೇಜಸಾ ।
ವಿವೇಶ ಸಹಸಾ ಶಕ್ರಂ ಜಗ್ರಾಹ ವಿಷಯಂ ತತಃ ॥೧೮॥

ವಜ್ರಾಯುಧದಿಂದ ಹೊಡೆಯಲ್ಪಟ್ಟ ವೃತ್ರಾಸುರನು ಉಪಾಯ ಕಾಣದೆ ಇಂದ್ರನ ಒಳಗಡೆಯೇ ಪ್ರವೇಶ ಮಾಡಿ, ಇಂದ್ರನ ವೀರ್ಯ-ಶೌರ್ಯಾದಿ ಗುಣಗಳನ್ನೇ ಅಪಹರಿಸಿದನು.

ತಸ್ಯ ವೃತ್ರಗೃಹೀತಸ್ಯ ಮೋಹಃ ಸಮಭವನ್ಮಹಾನ್ ।
ರಥಂತರೇಣ ತಂ ಸಾಮ್ನಾ ವಸಿಷ್ಠಃ ಪ್ರತ್ಯಬೋಧಯತ್ ॥೧೯॥

ವೃತ್ರಾಸುರನಿಂದ ಇಂದ್ರನೇ ವ್ಯಾಪ್ತನಾದ ಕಾರಣ ಇಂದ್ರನಿಗೆ ಮಹಾಮೋಹವು ಆವೃತವಾಯಿತು. ಇದನ್ನು ಕಂಡು ಮಹರ್ಷಿಗಳಾದ ವಸಿಷ್ಠರು ರಥಂತರ ಸಾಮದ ಮೂಲಕ ಇಂದ್ರನಲ್ಲಿದ್ದ ಮೋಹವನ್ನು ಪರಿಹರಿಸಿ ಅವನನ್ನು ಎಚ್ಚರಗೊಳಿಸಿದರು.

ತತೋ ವೃತ್ರಂ ಶರೀರಸ್ಥಂ ಜಗ್ರಾಹ ಭರತರ್ಷಭ ।
ಶತಕ್ರತುರದೃಶ್ಯೇನ ವಜ್ರೇಣೇತೀಹ ನಃ ಶ್ರುತಮ್ ॥೨೦॥

ಅನಂತರ ಇಂದ್ರದೇವನು ತನ್ನ ಶರೀರದಲ್ಲೇ ವ್ಯಾಪಿಸಿರುವ ವೃತ್ರಾಸುರನನ್ನು ಕಂಡು, ಬೇರೆ ಯಾರಿಂದಲೂ ನೋಡಲಾಗದ, ತನ್ನಿಂದ ನೋಡಲ್ಪಡುತ್ತಿರುವ ವಜ್ರಾಯುಧದಿಂದ ವೃತ್ರಾಸುರನನ್ನು ಸಂಹರಿಸಿದನು ಎಂಬ ವಿಷಯವನ್ನು ನಾವು ತಿಳಿದಿದ್ದೇವೆ.

ಇದಂ ಧರ್ಮರಹಸ್ಯಂ ತು ಶಕ್ರೇಣೋಕ್ತಂ ಮಹರ್ಷಿಷು ।
ಋಷಿಭಿಶ್ಚ ಮಮ ಪ್ರೋಕ್ತಂ ತನ್ನಿಬೋಧ ನರಾಧಿಪ ॥೨೧॥

ರಾಜನೇ, ಧರ್ಮಕ್ಕೆ ಸಂಬಂಧಿಸಿದ ಈ ರಹಸ್ಯ ವಿಚಾರವನ್ನು ಇಂದ್ರದೇವನೇ ಋಷಿಗಳಿಗೆ ಹಿಂದೆ ಹೇಳಿದ್ದನು. ಮಹರ್ಷಿಗಳು ನನಗೆ ಹೇಳಿದರು. ಈ ರಹಸ್ಯವನ್ನು ನಿನಗೆ ಹೇಳಿದ್ದೇನೆ, ಮನನ ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೃತ್ರಾಸುರವಧ ಪ್ರಕಾರಕಥನಂ ನಾಮ ಏಕಾದಶೋऽಧ್ಯಾಯಃ ॥

॥ ಆಶ್ವಮೇಧಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹನ್ನೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಮನಸ್ಸನ್ನು ಜಯಿಸಲು ಶ್ರೀಕೃಷ್ಣನಿಂದ ಯುಧಿಷ್ಠಿರನಿಗೆ ಉಪದೇಶ.

ಶ್ರೀಭಗವಾನ್

ದ್ವಿವಿಧೋ ಜಾಯತೇ ವ್ಯಾಧಿಃ ಶಾರೀರೋ ಮಾನಸಸ್ತಥಾ ।
ಪರಸ್ಪರಂ ತಯೋರ್ಜನ್ಮ ನಿರ್ದ್ವಂದ್ವಂ ನೋಪಲಭ್ಯತೇ ॥೧॥

ಶ್ರೀಭಗವಾನ್– ಧರ್ಮರಾಜನೇ, ಎರಡು ವಿಧವಾಗಿ ವ್ಯಾಧಿಯು ಹುಟ್ಟುತ್ತದೆ. ಶಾರೀರಿಕ ವ್ಯಾಧಿ, ಮಾನಸಿಕ ವ್ಯಾಧಿ ಎಂದು. ಈ ಎರಡು ವ್ಯಾಧಿಗಳು ಪರಸ್ಪರ ಸಂಬಂಧವನ್ನು ಹೊಂದಿಯೇ ಹುಟ್ಟುತ್ತವೆ.

ಶರೀರಾಜ್ಜಾಯತೇ ವ್ಯಾಧಿಃ ಶಾರೀರೋ ನಾತ್ರ ಸಂಶಯಃ ।
ಮಾನಸೋ ಜಾಯತೇ ವ್ಯಾಧಿಃ ಮನಸ್ಯೇವೇತಿ ನಿಶ್ಚಯಃ ॥೨॥

ಶರೀರದ ದೆಶೆಯಿಂದ ಶಾರೀರಿಕವಾದ ವ್ಯಾಧಿಯು ಹುಟ್ಟುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಮನಸ್ಸಿನ ದೆಶೆಯಿಂದ ಮಾನಸಿಕ ವ್ಯಾಧಿಯು ಹುಟ್ಟುತ್ತದೆ.

ಶೀತೋಷ್ಣೇ ಚೈವ ವಾಯುಶ್ಚ ಗುಣಾ ರಾಜನ್ ಶರೀರಜಾಃ ।
ತೇಷಾಂ ಗುಣಾನಾಂ ಸಾಮ್ಯಂ ಚೇತ್ ತದಾಹುಃ ಸ್ವಸ್ಥಲಕ್ಷಣಮ್ ॥೩॥

ಉಷ್ಣೇನ ಬಾಧ್ಯತೇ ಶೀತಂ ಶೀತೇನೋಷ್ಣಂ ಚ ಬಾಧ್ಯತೇ ॥೪॥

ಶರೀರದಲ್ಲಿ ಶೀತ, ಉಷ್ಣ, ವಾಯು ಎಂಬ ಮೂರುಗುಣಗಳು ಹುಟ್ಟುತ್ತವೆ (ಕಫ, ಪಿತ್ತ, ವಾತಗಳು). ಈ ಮೂರುಗುಣಗಳ ಸಾಮ್ಯವೇ ಸ್ವಾಸ್ಥ್ಯದಿಂದಿರುವ ಲಕ್ಷಣವೆಂದು ವಿದ್ವಾಂಸರು ಹೇಳುತ್ತಾರೆ. ದೇಹದಲ್ಲಿ ಉಂಟಾಗುವ ಅತಿಯಾದ ಶೈತ್ಯವನ್ನು ಉಷ್ಣವು ಬಾಧಿಸಿ ಸಮತೋಲನವನ್ನು ಕಾಪಾಡಿದರೆ, ದೇಹದಲ್ಲಿ ಉಂಟಾಗುವ ಅತಿಯಾದ ಔಷ್ಣ್ಯವನ್ನು ಶೀತವು ಬಾಧಿಸಿ ಸಮತೋಲನವನ್ನು ಕಾಪಾಡುತ್ತದೆ.

ಸತ್ವಂ ರಜಸ್ತಮಶ್ಚೇತಿ ತ್ರಯಃ ಸ್ವಾತ್ಮಗುಣಾಃ ಸ್ಮೃತಾಃ ।
ತೇಷಾಂ ಗುಣಾನಾಂ ಸಾಮ್ಯಂ ಚೇತ್ ತದಾಹುಃ ಸ್ವಸ್ಥಲಕ್ಷಣಮ್ ॥೫॥

ಸತ್ವ, ರಜಸ್ಸು, ತಮಸ್ಸು ಎಂಬ ಈ ಮೂರುಗುಣಗಳು ಆತ್ಮನ ಗುಣಗಳೆನಿಸಿವೆ. ಈ ಮೂರು ಗುಣಗಳು ಸಮಾನವಾಗಿದ್ದರೆ ಅದನ್ನು ಮನುಷ್ಯನ ಮನಸ್ಸಿನ ಸ್ವಾಸ್ಥ್ಯ ಲಕ್ಷಣ ಎನ್ನುತ್ತಾರೆ.

ತೇಷಾಮನ್ಯತಮೋತ್ಸೇಕೇ ವಿಧಾನಮುಪದಿಶ್ಯತೇ ।
ಹರ್ಷೇಣ ವಧ್ಯತೇ ಶೋಕೋ ಹರ್ಷಃ ಶೋಕೇನ ವಧ್ಯತೇ ॥೬॥

ಈ ತ್ರಿಗುಣಗಳಲ್ಲಿ ಒಂದು ಗುಣವು ಅಧಿಕವಾದರೆ ಆ ಗುಣದೊಡನೆ ಮತ್ತೊಂದು ಗುಣವನ್ನು ಸಮೀಕರಿಸಬೇಕೆಂದು ಮಹರ್ಷಿಗಳು ಉಪದೇಶಿಸುತ್ತಾರೆ. ಸತ್ವಗುಣದ ಉದ್ರೇಕ ಎಂದರೆ ಸಂತೋಷದ ಆಧಿಕ್ಯ. ತಮೋಗುಣದ ಉದ್ರೇಕ ಎಂದರೆ ದುಃಖದ ಆಧಿಕ್ಯ. ದುಃಖವುಂಟಾದಾಗ ಸುಖದ ಸ್ಮರಣೆಯನ್ನು ಮಾಡಿಕೊಳ್ಳುವುದು ರಜೋಗುಣದ ಉದ್ರೇಕವೆನಿಸಿದೆ. ದುಃಖವುಂಟಾದಾಗ ಸುಖವನ್ನು ಸ್ಮರಿಸಿದಲ್ಲಿ ದುಃಖವೂ ಉಪಶಮನ ಹೊಂದುತ್ತದೆ. ಸುಖವುಂಟಾದಾಗ ದುಃಖವನ್ನು ಸ್ಮರಿಸಿದಲ್ಲಿ ಸುಖವೇ ಉಪಶಮನ ಹೊಂದುತ್ತದೆ. ಈ ಗುಣಗಳಿಗೆ ಪರಸ್ಪರ ವಧ್ಯಘಾತಕಭಾವವು ಇದೆ.

ಕಶ್ಚಿದ್ ದುಃಖೇ ವರ್ತಮಾನಃ ಸುಖಸ್ಯ ಸ್ಮರ್ತುಮರ್ಹತಿ ।
ಕಶ್ಚಿತ್ ಸುಖೇ ವರ್ತಮಾನೋ ದುಃಖಸ್ಯ ಸ್ಮರ್ತುಮರ್ಹತಿ ॥೭॥

ನೀನು ದುಃಖದಲ್ಲಿದ್ದಾಗ ಸುಖವನ್ನು ಸ್ಮರಿಸಿಕೊಳ್ಳಲು ಅರ್ಹನಾಗಿದ್ದಿ. ಸುಖದಲ್ಲಿ ಇದ್ದಾಗ ದುಃಖವನ್ನೂ ಸ್ಮರಣೆಗೆ ತಂದುಕೊಳ್ಳಬೇಕು.

ಸ ತ್ವಂ ನ ದುಃಖೀ ದುಃಖಸ್ಯ ನ ಸುಖೀ ತ್ವಂ ಸುಖಸ್ಯ ಚ ।
ಸ್ಮರ್ತುಮಿಚ್ಛಸಿ ಕೌಂತೇಯ ದೈವಂ ಹಿ ಬಲವತ್ತರಮ್ ॥೮॥

ನೀನು ವನವಾಸದಲ್ಲಿ ಬಹು ದುಃಖವುಳ್ಳವನಾಗಿದ್ದಿ. ಅಂತಹ ವನವಾಸದ ದುಃಖವನ್ನು ಈಗ ಸ್ಮರಿಸಿಕೊಳ್ಳಬೇಡ. ಇದರಿಂದ ನಿನ್ನ ಸುಖವು ನಾಶವಾಗುತ್ತದೆ. ಇಂದು ರಾಜ್ಯವನ್ನು ಪಡೆದು ಸುಖವನ್ನು ಹೊಂದಿರುತ್ತಿ. ನ್ಯಾಯಪ್ರಾಪ್ತವಾದ ರಾಜ್ಯಲಾಭ ಸುಖವನ್ನು ಸ್ಮರಿಸಿಕೊಳ್ಳಲು ನೀನು ಇಚ್ಛೆಪಡುತ್ತಿಲ್ಲ. ಈ ಸುಖವನ್ನು ಸ್ಮರಿಸಿಕೊಂಡಲ್ಲಿ ನಿನ್ನ ದುಃಖವು ಉಪಶಮನ ಹೊಂದುತ್ತದೆ. ಏನು ಮಾಡೋಣ? ನಿನ್ನ ವಿಷಯದಲ್ಲಿ ದೈವವು ಪ್ರಬಲವಾಗಿದೆ.

ಅಥವಾ ತೇ ಸ್ವಭಾವೋಽಯಂ ಯೇನ ಪಾರ್ಥಾವಕೃಷ್ಯಸೇ ॥೯॥

ಅಥವಾ ಯುಧಿಷ್ಠಿರನೇ, ದುಃಖವನ್ನು ಹೊಂದುವುದೇ ನಿನ್ನ ಸ್ವಭಾವ ಎನಿಸುತ್ತಿದೆ.

ದೃಷ್ಟ್ವಾ ಸಭಾಗತಾಂ ಕೃಷ್ಣಾಮೇಕವಸ್ತ್ರಾಂ ರಜಸ್ವಲಾಮ್ ।
ಮಿಷತಾಂ ಪಾಂಡವೇಯಾನಾಂ ನ ತತ್ ಸಂಸ್ಮರ್ತುಮರ್ಹಸಿ ॥೧೦॥

ಪಾಂಡವರು ನೋಡುವ ಸಮಯದಲ್ಲಿಯೇ ರಜಸ್ವಲೆಯಾಗಿದ್ದ, ಒಂದೇ ವಸ್ತ್ರವನ್ನು ಧರಿಸಿದ ದ್ರೌಪದಿಯನ್ನು ದುಷ್ಟರು ಸಭೆಗೆ ಎಳೆದು ತಂದ ಪ್ರಕರಣವನ್ನು ನೀನು ಸ್ಮರಿಸಿಕೊಳ್ಳುತ್ತಿಲ್ಲ (ಇದನ್ನು ಸ್ಮರಿಸಿಕೊಂಡಲ್ಲಿ ನಿನಗೆ ಜ್ಞಾತಿಗಳನ್ನು ಸಂಹರಿಸಿದ ದುಃಖವು ಉಂಟಾಗುವುದಿಲ್ಲ).

ಪ್ರವ್ರಾಜನಂ ಚ ನಗರಾದ್ ಅಜಿನೈಶ್ಚ ವಿವಾಸನಮ್ ।
ಮಹಾರಣ್ಯನಿವಾಸಂ ಚ ನ ತಸ್ಯ ಸ್ಮರ್ತುಮರ್ಹಸಿ ॥೧೧॥

ಕಪಟ ದ್ಯೂತಕ್ಕೆ ತುತ್ತಾಗಿ ನಗರದಿಂದ ಹೊರಹೊರಟಿದ್ದು, ಮೃಗಚರ್ಮಗಳನ್ನು ಹೊದ್ದು ಅರಣ್ಯಕ್ಕೆ ಹೋಗಿದ್ದು, ಗೊಂಡಾರಣ್ಯದಲ್ಲಿ ವಾಸ ಮಾಡಿದ್ದು, ಈ ಯಾವ ಹನ್ನೆರಡು ವರ್ಷಗಳ ಕಾಲ ನಡೆದ ಘಟನೆಗಳನ್ನೂ ನೀನು ಸ್ಮರಿಸಿಕೊಳ್ಳುತ್ತಿಲ್ಲ.

ಜಟಾಸುರಾತ್ ಪರಿಕ್ಲೇಶಂ ಚಿತ್ರಸೇನೇನ ಚಾಹವಮ್ ।
ಸೈಂಧವಾಚ್ಚ ಪರಿಕ್ಲೇಶಂ ನ ತಸ್ಯ ಸ್ಮರ್ತುಮಿಚ್ಛಸಿ ॥೧೨॥

ಜಟಾಸುರನಿಂದ ಹೊಂದಿದ ದುಃಖವನ್ನಾಗಲಿ, ಚಿತ್ರಸೇನನೊಡನೆ ಯುದ್ಧ ಮಾಡಿದ ಪ್ರಕರಣವನ್ನಾಗಲಿ, ಸೈಂಧವನಿಂದ ಅನುಭವಿಸಿದ ದುಃಖವನ್ನಾಗಲಿ ನೀನು ಸ್ಮರಿಸಿಕೊಳ್ಳಲು ಇಚ್ಛಿಸುತ್ತಿಲ್ಲ.

ಪುನರಜ್ಞಾತಚರ್ಯಾಯಾಂ ಕೀಚಕೇನ ಪದಾ ವಧಮ್ ।
ಯಾಜ್ಞಸೇನ್ಯಾಸ್ತಥಾ ಪಾರ್ಥ ನ ತಸ್ಯ ಸ್ಮರ್ತುಮಿಚ್ಛಸಿ ॥೧೩॥

ಕುಂತೀಪುತ್ರನೇ, ಅಜ್ಞಾತವಾಸದ ಕಾಲದಲ್ಲಿ ಕೀಚಕನು ದ್ರೌಪದಿಯನ್ನು ಕಾಲಿನಿಂದ ಒದ್ದ ಪ್ರಕರಣವನ್ನು ಸ್ಮರಿಸಿಕೊಳ್ಳಲು ಬಯಸುತ್ತಿಲ್ಲ.

ಯಚ್ಚ ತೇ ದ್ರೋಣಭೀಷ್ಮಾಭ್ಯಾಂ ಯುದ್ಧಮಾಸೀದರಿಂದಮ ।
ಮನಸೈಕೇನ ಬೋದ್ಧವ್ಯಂ ತತ್ ತೇ ಯುದ್ಧಮುಪಸ್ಥಿತಮ್ ॥೧೪॥

ಭೀಷ್ಮ-ದ್ರೋಣರೊಡನೆ ನೀನು ಮಾಡಿದ ಭಯಂಕರ ಯುದ್ಧದ ದೃಶ್ಯವು ಇಂದೂ ನಿನ್ನ ಮನಸ್ಸಿನಲ್ಲಿ ಮೂಡಿರುತ್ತದೆ. ಅಂತಹ ಯುದ್ಧವನ್ನು ನಿನ್ನ ಮನಸ್ಸಿನೊಡನೆಯೇ ಈಗಲೂ ಮಾಡಬೇಕಾಗಿದೆ.

ತಸ್ಮಾದಭ್ಯುಪಗಂತವ್ಯಂ ಯುದ್ಧಾಯ ಭರತರ್ಷಭ ।
ಪಾರಮವ್ಯಕ್ತರೂಪಸ್ಯ ಪರಂ ಮುಕ್ತ್ವಾ ಸ್ವಕರ್ಮಭಿಃ ॥೧೫॥

ಯುಧಿಷ್ಠಿರನೇ, ಮನಸ್ಸಿನೊಡನೆ ಸೆಣೆಸಾಡಬೇಕಾದ ಪ್ರಸಂಗವು ನಿನಗೆ ಒದಗಿ ಬಂದಿದೆ. ಅವ್ಯಕ್ತರೂಪನಾದ ಪರಮಾತ್ಮನ ಸಂಕಲ್ಪವನ್ನು ಅರ್ಥಮಾಡಿಕೊಂಡು, ಮನಸ್ಸನ್ನು ಸಮಾಧಾನಪಡಿಸಿಕೊ ಅಥವಾ ಬೃಹನ್ನಳೆ ರೂಪದಿಂದ ಅವ್ಯಕ್ತ ರೂಪನಾದ ಅರ್ಜುನನು ತನ್ನ ಯುದ್ಧಕೌಶಲದಿಂದ ದುಃಖದ ಬಿಡುಗಡೆಯನ್ನು ಹೊಂದಿದ ಪ್ರಕರಣವನ್ನು ಸ್ಮರಿಸಿಕೊ. ಅವನು ಅನುಭವಿಸಿದ ದುಃಖಗಳನ್ನು ಸ್ಮರಿಸಿ, ನಿನ್ನ ಕರ್ತವ್ಯವು ಸಾಧುವಾಗಿದೆ ಎಂದು ಭಾವಿಸಿಕೊ.

ಯತ್ರ ನೈವ ಶರೈಃ ಕಾರ್ಯಂ ನ ಭೃತ್ಯೈಃ ನ ಚ ಬಂಧುಭಿಃ ।
ಆತ್ಮನೈಕೇನ ಕರ್ತವ್ಯಂ ತತ್ ತೇ ಯುದ್ಧಮುಪಸ್ಥಿತಮ್ ॥೧೬॥

ನಿನ್ನ ಮನಸ್ಸಿನ ಒಟ್ಟಿಗೆ ಮಾಡಬೇಕಾದ ಯುದ್ಧದಲ್ಲಿ ಬಾಣಗಳಿಂದ ಆಗಬೇಕಾದ ಕೆಲಸವೇನಿಲ್ಲ. ಬಂಧು-ಬಾಂಧವರಿಂದಲೂ ಆಗಬೇಕಾದದ್ದೇನಿಲ್ಲ ಅಥವಾ ಗೋಗ್ರಹಣ ಯುದ್ಧದಲ್ಲಿ ಬಾಣಗಳಿಂದ ಮಾಡಬೇಕಾದ ಕಾರ್ಯವೇನಿಲ್ಲ. ಶಮೀ ವೃಕ್ಷದಲ್ಲಿ ಅಜ್ಞಾತವಾಸಕಾಲದಲ್ಲಿ ರಕ್ಷಣೆಗಾಗಿ ಬಾಣಗಳು ಮುಚ್ಚಿಡಲ್ಪಟ್ಟಿದ್ದರಿಂದ ಅರ್ಜುನನು ಭೃತ್ಯರೂ, ಬಂಧುಗಳೂ ಇಲ್ಲದೆ ಏಕಾಕಿಯಾಗಿ ಹೋರಾಡಿ ಯುದ್ಧವನ್ನು ಮಾಡಿದ ಪ್ರಕರಣವನ್ನು ಸ್ಮರಿಸಿಕೊ. ನಿನ್ನ ಮನಸ್ಸಿನಲ್ಲಿಯೇ ದ್ವಂದ್ವಗಳನ್ನು ಸರಿ ಪಡಿಸಿಕೊಂಡು ಜಯಸಂಪಾದನೆ ಮಾಡುವ ಯುದ್ಧದ ಪ್ರಸಂಗವು ನಿನಗೆ ಒದಗಿ ಬಂದಿದೆ.

ತಸ್ಮಿನ್ನನಿರ್ಜಿತೇ ಯುದ್ಧೇ ಕಾಮವಸ್ಥಾಂ ಗಮಿಷ್ಯಸಿ ।
ಏತಜ್ಜ್ಞಾತ್ವಾ ತು ಕೌಂತೇಯ ಕೃತಕೃತ್ಯೋ ಭವಿಷ್ಯಸಿ ॥೧೭॥

ಮನಸ್ಸಿನ ಜೊತೆಗೆ ಮಾಡಲಿರುವ ಯುದ್ಧದಲ್ಲಿ ನೀನು ಜಯಗಳಿಸದಿದ್ದರೆ ಏನು ಅವಸ್ಥೆಯನ್ನು ಹೊಂದುತ್ತಿ ಎಂಬುದನ್ನು ನೀನು ಅರ್ಥಮಾಡಿಕೊಂಡರೆ ಕೃತಕೃತ್ಯನಾಗುತ್ತಿ.

ಏತಾಂ ಬುದ್ಧಿಂ ವಿನಿಶ್ಚಿತ್ಯ ಭೂತಾನಾಮಾಗತಿಂ ಗತಿಮ್ ।
ಪಿತೃಪೈತಾಮಹೇ ವೃತ್ತೇ ಶಾಧಿ ರಾಜ್ಯಂ ಯಥೋಚಿತಮ್ ॥೧೮॥

ಸಮಸ್ತ ಪ್ರಾಣಿಗಳ ಆಗಮನವು ಭಗವಂತನ ಸಂಕಲ್ಪದಿಂದ ನಡೆಯುತ್ತದೆ, ಲಯವೂ ಅವನ ಸಂಕಲ್ಪದಿಂದಲೇ ನಡೆಯುತ್ತದೆ ಎನ್ನುವುದನ್ನು ಬುದ್ಧಿಯಿಂದ ನಿಶ್ಚಯಿಸಿಕೊಂಡು, ನಿನ್ನ ತಾತ-ಮುತ್ತಾತಂದಿರು ನಡೆಸಿಕೊಂಡು ಬಂದಿರುವ ಈ ರಾಜ್ಯವನ್ನು ಯೋಗ್ಯವಾಗಿ ಪರಿಪಾಲಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಕೃಷ್ಣವಚನಂ ನಾಮ ದ್ವಾದಶೋऽಧ್ಯಾಯಃ ॥

॥ ಅಶ್ವಮೇಧಪರ್ವಣಿ ದ್ವಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಶ್ರೀಕೃಷ್ಣನು ಧರ್ಮರಾಜನಿಗೆ ಅಹಂಕಾರ, ಮಮಕಾರವನ್ನು ಬಿಡಲು ಹೇಳುವುದು. ಕಾಮಗೀತೆಯ ಉಲ್ಲೇಖ.
ಯಜ್ಞ ಮಾಡಲು ಯುಧಿಷ್ಠಿರನಿಗೆ ಪ್ರೇರಣೆ.

ಶ್ರೀಭಗವಾನ್

ನ ಬಾಹ್ಯಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ಭಾರತ ।
ಶಾರೀರಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ವಾ ನ ವಾ ॥೧॥

ಶ್ರೀಭಗವಾನ್– ಯುಧಿಷ್ಠಿರನೇ, ಬಾಹ್ಯದ್ರವ್ಯಗಳನ್ನು ಪರಿತ್ಯಾಗ ಮಾಡುವುದರಿಂದ ಸಿದ್ಧಿಯನ್ನು ಹೊಂದಲು ಸಾಧ್ಯವಿಲ್ಲ. ಶರೀರವೆಂಬ ಆಂತರ್ದ್ರವ್ಯವನ್ನು ತಪಸ್ಸೇ ಮೊದಲಾದ ಕ್ಲೇಶಗಳಿಂದ ತ್ಯಾಗ ಮಾಡಿದರೂ ರಾಜರಿಗೆ ಸಿದ್ಧಿಯಾಗುವುದಿಲ್ಲ. ಇದು ಶರೀರವನ್ನು ದಂಡಿಸುವ ವ್ಯಾಪಾರವು, ಬ್ರಾಹ್ಮಣರ ಧರ್ಮ ಎನಿಸಿದೆ. ರಾಜರಿಗೆ

ರಾಜ್ಯಪರಿಪಾಲನೆಯೇ ಪ್ರಧಾನವಾದ ಧರ್ಮ. ಇದನ್ನು ಬಿಟ್ಟು ತಪಸ್ಸನ್ನಾಚರಿಸುವುದು ಅನುಚಿತವಾದ ವರ್ತನೆ ಎನಿಸಿದೆ.

ಬಾಹ್ಯದ್ರವ್ಯವಿಮುಕ್ತಸ್ಯ ಶಾರೀರೇಷು ಚ ಗೃಧ್ಯತಃ ।
ಯೋ ಧರ್ಮೋ ಯತ್ಸುಖಂ ಚೈವ ದ್ವಿಷತಾಮಸ್ತು ತತ್ ತವ ॥೨॥

ಬಾಹ್ಯದ್ರವ್ಯಗಳೆನಿಸಿದ ರಾಜ್ಯ, ಕೋಶಾದಿಗಳಿಂದ ದೂರವಿದ್ದರೂ ಶಾರೀರಿಕವಾದ ಕಾಮೋಪಭೋಗಗಳಲ್ಲಿ ಆಸಕ್ತನಾದವನಿಗೆ ಯಾವ ಸುಖವಿದೆಯೋ, ಧರ್ಮವಿದೆಯೋ ಅಂತಹ ಧರ್ಮ-ಸುಖಗಳು ನಿನ್ನ ಶತ್ರುಗಳಿಗೇ ಇರಲಿ. ನಿನಗೆ ಅಂತಹ ಸುಖವು ಬೇಡ.

ದ್ವ್ಯಕ್ಷರಸ್ತು ಭವೇನ್ಮೃತ್ಯುಃ ತ್ರ್ಯಕ್ಷರಂ ಬ್ರಹ್ಮ ಶಾಶ್ವತಮ್ ।
ಮಮೇತಿ ದ್ವ್ಯಕ್ಷರೋ ಮೃತ್ಯುಃ ನ ಮಮೇತಿ ಚ ಶಾಶ್ವತಮ್ ॥೩॥

ಮೃತ್ಯುವು ಎರಡು ಅಕ್ಷರಗಳಲ್ಲಿ ಇದೆ. ಶಾಶ್ವತವಾದ ಪೂರ್ಣಸುಖವು ಮೂರು ಅಕ್ಷರಗಳಲ್ಲಿ ಇದೆ. 'ಮಮ' ಎಂಬ ಎರಡು ಅಕ್ಷರಗಳೇ ಮೃತ್ಯುವೆನಿಸಿದರೆ, 'ನ ಮಮ' ಎಂಬ ಮೂರು ಅಕ್ಷರಗಳು ಶಾಶ್ವತವಾದ ಸುಖಕ್ಕೆ ಕಾರಣವಾಗಿವೆ.

ಜನ್ಮಮೃತ್ಯೂ ತತೋ ರಾಜನ್ನಾತ್ಮನ್ಯೇವ ವ್ಯವಸ್ಥಿತೌ ।
ಅದೃಶ್ಯಮಾನೌ ಭೂತಾನಿ ಯೋಧಯೇತಾಮಸಂಶಯಮ್ ॥೪॥

ಮಹಾರಾಜನೇ, ಜನ್ಮ-ಮರಣಗಳೆರಡು ಶರೀರದಲ್ಲೇ ಇವೆ. ಕಣ್ಣಿಗೆ ಕಾಣದಂತೆ ಶರೀರದಲ್ಲಿ ಹೊಕ್ಕು ಜೀವದ ಜೊತೆಗೆ ಯುದ್ಧವನ್ನು ಮಾಡುತ್ತಿವೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಅವಿನಾಶೋಽಸ್ಯ ತತ್ತ್ವಸ್ಯ ನಿಯತೋ ಯದಿ ಭಾರತ ।
ಹತ್ವಾ ಶರೀರಂ ಭೂತಾನಾಮಹಿಂಸಾ ಪ್ರತಿಪದ್ಯತೇ ॥೫॥

ಒಂದು ವೇಳೆ ಜೀವನು ಅಮೃತತತ್ವವನ್ನು ಹೊಂದಿದರೆ, ಶರೀರದಿಂದ ಹೊರ ಬಂದಿರುವ ಜೀವನು ಎಂದಿಗೂ ಹಿಂಸಾರೂಪವಾದ ಪಾಪದಿಂದ ಲೇಪವನ್ನು ಹೊಂದುವುದಿಲ್ಲ.

ಲಬ್ಧ್ವಾಪಿ ಪೃಥಿವೀಂ ಸರ್ವಾಂ ಸಹಸ್ಥಾವರಜಂಗಮಾಮ್ ।
ಮಮತ್ವಂ ಯಸ್ಯ ನೈವ ಸ್ಯಾತ್ ಕಿಂ ತಯಾ ಸ ಕರಿಷ್ಯತಿ ॥೬॥

ಸ್ಥಾವರ-ಜಂಗಮಾತ್ಮಕವಾದ ಸಮಗ್ರ ಭೂಮಂಡಲವನ್ನು ಪಡೆದು, ಅವನು ಮಮಕಾರವನ್ನು ಹೊಂದಲಿಲ್ಲವೆಂದರೆ ಆ ಭೂಮಂಡಲದಿಂದ ಏನು ಮಾಡಲು ಸಾಧ್ಯ ? ಆ ಸಮಗ್ರ ಭೂಮಂಡಲದ ಸಂಪತ್ತು ಅವನಿಗೆ ಅನರ್ಥವನ್ನುಂಟು ಮಾಡಲಾರದು.

ಅಥವಾ ವಸತಃ ಪಾರ್ಥ ವನೇ ವನ್ಯೇನ ಜೀವತಃ ।
ಮಮತಾ ಯಸ್ಯ ವಿತ್ತೇಷು ಮೃತ್ಯೋರಾಸ್ಯೇ ಸ ವರ್ತತೇ ॥೭॥

ಯುಧಿಷ್ಠಿರನೇ, ಅಥವಾ ಅರಣ್ಯದಲ್ಲೇ ವಾಸಮಾಡುತ್ತಿದ್ದು ಅರಣ್ಯದಲ್ಲಿ ಸಿಕ್ಕಿದ ಕಂದ-ಮೂಲಾದಿಗಳಿಂದ ಜೀವಿಸುತ್ತಿದ್ದರೂ ಯಾವ ಮನುಷ್ಯನು ಮಮತೆಯಿಂದ ಮುಕ್ತನಾಗಿಲ್ಲವೋ ಅವನು ಮೃತ್ಯುವಿನ ಬಾಯಿಯಲ್ಲೇ ಇದ್ದಾನೆಂದು ತಿಳಿಯಬೇಕು.

ಬಾಹ್ಯಾಂತರಾಣಾಂ ಶತ್ರೂಣಾಂ ಸ್ವಭಾವಂ ಪಶ್ಯ ಭಾರತ ।
ಯೋಽನ್ಯಪಶ್ಯತಿ ತದ್ಭೂತಂ ಮುಚ್ಯತೇ ಸ ಮಹಾಭಯಾತ್ ॥೮॥

ಧರ್ಮರಾಜನೇ, ಬಾಹ್ಯಾಂತರ ಶತ್ರುಗಳ ಸ್ವಭಾವವನ್ನು ಅರ್ಥಮಾಡಿಕೊ. ಯಾವನು ಅಹಂಕಾರ, ಮಮಕಾರಗಳನ್ನು ಬಿಟ್ಟು ಪರಮಾತ್ಮನಲ್ಲಿಯೇ ಮನಸ್ಸನ್ನು ಇಡುತ್ತಾನೋ ಅವನು ಮಹಾಭಯದಿಂದ ಮುಕ್ತನಾಗುತ್ತಾನೆ.

ಕಾಮಾತ್ಮಾನಂ ನ ಪ್ರಶಂಸಂತಿ ಸರ್ವೇ
ನ ಚಾಕಾಮಾತ್ ಕಾಚಿದಸ್ತಿ ಪ್ರವೃತ್ತಿಃ ।
ದಾನಂ ಹಿ ವೇದಾಧ್ಯಯನಂ ತಪಶ್ಚ
ಕಾಮೇನ ಕರ್ಮಾಣಿ ಚ ವೈದಿಕಾನಿ ॥೯॥

ಜಗತ್ತಿನಲ್ಲಿ ಅಸದ್ವಿಷಯಕ ಕಾಮನೆಗಳನ್ನು ಹೊಂದಿದವರನ್ನು ಯಾರೂ ಪ್ರಶಂಸಿಸುವುದಿಲ್ಲ. ಆದರೆ ಪರಲೋಕ ಕಾಮನೆಯೇ ಇಲ್ಲದೆ ಯಾವ ಪ್ರವೃತ್ತಿಯೂ ಕೂಡುವುದಿಲ್ಲ. ದಾನ, ವೇದಾಧ್ಯಯನ, ತಪಸ್ಸು ಎಲ್ಲವೂ ವೇದವಿಹಿತವಾದ ಪರಲೋಕದ ಸಾಧನೆಗಾಗಿ ಎಂಬುದನ್ನು ಅರ್ಥೈಸಿಕೊ.

ವ್ರತಂ ಯಜ್ಞಾನ್ ನಿಯಮಾನ್ ಧ್ಯಾನಯೋಗಾನ್
ಕಾಮೇನ ಯೋ ನಾರಭತೇ ವಿದಿತ್ವಾ ।
ಯದವ್ಯಯಂ ಕಾಮಯತೇ ಸ ಧರ್ಮೋ
ಯೋಽಯಂ ಧರ್ಮೋ ನಿಯಮಸ್ತಸ್ಯ ಮೂಲಮ್ ॥೧೦॥

ವ್ರತಗಳನ್ನಾಗಲಿ, ಯಜ್ಞಗಳನ್ನಾಗಲಿ, ನಿಯಮಗಳನ್ನಾಗಲಿ, ಧ್ಯಾನ-ಯೋಗಗಳನ್ನಾಗಲಿ ಬಾಹ್ಯಕಾಮನೆಗಳಿಂದ ಅನುಷ್ಠಾನ ಮಾಡಬಾರದು. ನಿತ್ಯವಾದ ಕಾಮನೆಗಳನ್ನು ಚಿಂತಿಸುವುದು ಧರ್ಮವೆನಿಸಿದೆ. ಅನಿತ್ಯವಾದ ಕಾಮನೆಗಳನ್ನು ಅಪೇಕ್ಷಿಸಬಾರದು. ಕಾಮನೆಗಳನ್ನು ನಿಗ್ರಹಿಸುವುದೇ ಧರ್ಮವಾಗಿದೆ. ಅದೇ ಮೋಕ್ಷಕ್ಕೆ ಬೀಜವಾಗಿದೆ.

ಅತ್ರ ಗಾಥಾಃ ಕಾಮಗೀತಾಃ ಕೀರ್ತಯಂತಿ ಪುರಾವಿದಃ ।
ಶೃಣು ಸಂಕೀರ್ತ್ಯಮಾನಾಸ್ತಾ ನಿಖಿಲೇನ ನರಾಧಿಪ ॥೧೧॥

ಯುಧಿಷ್ಠಿರನೇ, ಈ ವಿಷಯದಲ್ಲಿ ವಿದ್ವಾಂಸರು ಕಾಮಗೀತೆಯ ವೃತ್ತಾಂತವನ್ನು ತಿಳಿಸುತ್ತಾರೆ. ಆ ಕಾಮಗೀತೆಗಳ ಶ್ಲೋಕಗಳನ್ನು ಹೇಳುತ್ತೇನೆ, ಕೇಳಿಸಿಕೊ.

ಕಾಮಃ

ನಾಹಂ ಶಕ್ಯೋಽನುಪಾಯೇನ ಹಂತುಂ ಭೂತೇನ ಕೇನಚಿತ್ ॥೧೨॥

ಯೋ ಮಾಂ ಪ್ರಯತತೇ ಹಂತುಂ ಜ್ಞಾತ್ವಾ ಪ್ರಹರಣೇ ಬಲಮ್ ।
ತಸ್ಯ ತಸ್ಮಿನ್ ಪ್ರಹರಣೇ ಪುನಃ ಪ್ರಾದುರ್ಭವಾಮ್ಯಹಮ್ ॥೧೩॥

ಕಾಮವು ಹೇಳುತ್ತದೆ– ಉಪಾಯವಿಲ್ಲದೆ ಕಾಮ ಎನಿಸಿದ ನನ್ನನ್ನು ಕೊಲ್ಲಲು ಯಾರಿಂದಲೂ ಸಾಧ್ಯವಿಲ್ಲ. ಯಾವಾತನು ನನ್ನನ್ನು ಅಸ್ತ್ರಪ್ರಹಾರದಲ್ಲಿ ಕುಶಲನೆಂದು ಭಾವಿಸಿಕೊಂಡು ಸಂಹರಿಸಲು ಪ್ರಯತ್ನಿಸುತ್ತಾನೋ ಆ ಪ್ರಹರಣದಲ್ಲಿಯೇ (ಆ ಆಯುಧದಲ್ಲಿಯೇ) ಪುನಃ ನಾನು ಹುಟ್ಟಿಕೊಳ್ಳುತ್ತೇನೆ.

ಯೋ ಮಾಂ ಪ್ರಯತತೇ ಹಂತುಂ ಯಜ್ಞೈರ್ವಿವಿಧದಕ್ಷಿಣೈಃ ।
ಜಂಗಮೇಷ್ವಿವ ಕರ್ಮಾತ್ಮಾ ಪುನಃ ಪ್ರಾದುರ್ಭವಾಮ್ಯಹಮ್ ॥೧೪॥

ನಾನಾ ಮುಖವಾದ ಯಜ್ಞಗಳು, ದಕ್ಷಿಣೆಗಳಿಂದ ನನ್ನನ್ನು ಸಂಹರಿಸಲು ಯಾವನು ಪ್ರಯತ್ನಿಸುವನೋ ಅಂತಹ ವ್ಯಕ್ತಿಯಲ್ಲಿಯೂ ನಾನು ಜಂಗಮಯೋನಿಗಳಲ್ಲಿ ಕರ್ಮಠನು ಹುಟ್ಟುವಂತೆ ಪ್ರಾದುರ್ಭವಿಸುತ್ತೇನೆ (ಕಾಮ್ಯಯಜ್ಞಗಳಿಂದ ಕಾಮನೆಯನ್ನು ನಿಗ್ರಹಿಸಲು ಸಾಧ್ಯವಿಲ್ಲ).

ಯೋ ಮಾಂ ಪ್ರಯತತೇ ಹಂತುಂ ವೇದೈರ್ವೇದ್ಯಂ ನ ಸಾಧಕೈಃ ।
ಸ್ಥಾವರೇಷ್ವಿವ ಶಾಂತಾತ್ಮಾ ಪುನಃ ಪ್ರಾದುರ್ಭವಾಮ್ಯಹಮ್ ॥೧೫॥

ಯಾರು ಕಾಮ್ಯಕರ್ಮ ಪ್ರತಿಪಾದಕವಾದ ವೇದಗಳಿಂದ ಆಪಾತತಃ ತೋರುವ ಅರ್ಥಗಳನ್ನು ಗ್ರಹಿಸಿಕೊಂಡು ನನ್ನನ್ನು ನಿಗ್ರಹಿಸಲು ಬಯಸುತ್ತಾರೋ ತತ್ತ್ವಜ್ಞಾನ ಸಾಧಕವಾದ ವೇದಗಳಿಂದ ನನ್ನನ್ನು ನಿಗ್ರಹಿಸಲು ಬಯಸುವುದಿಲ್ಲವೋ ಅಂತಹವರಲ್ಲಿ ಸ್ಥಾವರ ಪ್ರಾಣಿಗಳಲ್ಲಿ ಇರುವ ಜೀವಾತ್ಮನಂತೆ ಪುನಃ ನಾನು ಪ್ರಕಟನಾಗುತ್ತೇನೆ.

ವ್ಯಾಖ್ಯಾನ ವಿಶೇಷ– ವ್ಯಾಸರು ಗಿಡ-ಮರಗಳಲ್ಲಿರುವ ಜೀವಾತ್ಮನನ್ನು ಶಾಂತಾತ್ಮಾ ಎಂದಿದ್ದಾರೆ. ಎಂದರೆ ಗಿಡ-ಮರಗಳು ಹೊರಗಣ್ಣಿನಿಂದ ನಾವು ನೋಡಿದಾಗ ಯಾವುದೇ ಕಾಮನೆಗಳು ಇಲ್ಲದಂತೆ ಬಿಸಿಲಿನ ತಾಪವನ್ನು ಸಹಿಸಿಕೊಂಡು ನೀರನ್ನೂ ಪಾನ ಮಾಡದೆ ತಪಸ್ವಿಗಳಂತೆ ಕಾಣಿಸಿಕೊಂಡರೂ ತನ್ನ ಬೇರುಗಳಿಂದ ಜಲಪಾನವೇ ಮೊದಲಾದ ಸುಖಗಳನ್ನು ಅನುಭವಿಸುತ್ತವೆ. ಹೀಗೆ ಕೆಲವರು ವೇದೋಕ್ತವಾದ ಕರ್ಮಗಳನ್ನೂ ಅನುಷ್ಠಾನ ಮಾಡಿ ಸಾಧಕರು ಎಂದು ಕಂಡುಬಂದರೂ ಅವರ ಅಂತರಂಗವು ಅನೇಕ ಬಾಹ್ಯಕಾಮನೆಗಳಲ್ಲಿಯೇ ಆಸಕ್ತಿಯನ್ನು ತಾಳಿರುತ್ತದೆ. ಇವರು ಕಾಮಹತರಾಗಿದ್ದಾರೆ ಎಂದೇ ಅಭಿಪ್ರಾಯ.

ಯೋ ಮಾಂ ಪ್ರಯತತೇ ಹಂತುಂ ಧೃತ್ಯಾ ಸತ್ಯಪರಾಕ್ರಮಃ ।
ಭಾವೋ ಭವಾಮಿ ತಸ್ಯಾಹಂ ಸ ಚ ಮಾಂ ನಾವಬುದ್ಧ್ಯತೇ ॥೧೬॥

ಯಾವನು ಸತ್ಯನಿಷ್ಠನಾಗಿ ಧೃತಿಗೆಡದೆ ನನ್ನನ್ನು ಸಂಹರಿಸಲು ಪ್ರಯತ್ನಿಸುತ್ತಾನೋ ಅಂತಹವನ ಪ್ರಯತ್ನದಲ್ಲಿಯೇ ನಾನು ಸೇರಿರುತ್ತೇನೆ. ಅವನ ಮನಸ್ಸಿನ ಭಾವನೆಯಲ್ಲಿಯೇ ಸೇರಿಕೊಂಡು ಕಾಮನೆಗಳನ್ನೇ ಹೊಂದಿಸುತ್ತೇನೆ. ಇದು ಅವನಿಗೆ ತಿಳಿಯುವುದಿಲ್ಲ.

ಯೋ ಮಾಂ ಪ್ರಯತತೇ ಹಂತುಂ ತಪಸಾ ಸಂಶಿತವ್ರತಃ ।
ತತಸ್ತಪಸಿ ತಸ್ಯಾಥ ಪುನಃ ಪ್ರಾದುರ್ಭವಾಮ್ಯಹಮ್ ॥೧೭॥

ಯಾವನು ಕಾಮ್ಯವಾದ ತಪೋನುಷ್ಠಾನಗಳನ್ನು ಮಾಡಿಕೊಂಡು ನನ್ನನ್ನು ನಿಗ್ರಹಿಸಲು ಬಯಸುತ್ತಾನೋ ನಾನು ಅಂತಹ ಕಾಮ್ಯತಪೋನಿರತನ ತಪಸ್ಸಿನಲ್ಲಿಯೇ ಪ್ರಕಟನಾಗುತ್ತೇನೆ.

ಯೋ ಮಾಂ ಪ್ರಯತತೇ ಹಂತುಂ ಮೋಕ್ಷಮಾಸ್ಥಾಯ ಪಂಡಿತಃ ।
ತಸ್ಯ ಮೋಕ್ಷಮತಿಸ್ಥಸ್ಯ ನೃತ್ಯಾಮಿ ಚ ಹಸಾಮಿ ಚ ॥೧೮॥

ಅವಧ್ಯಃ ಸರ್ವಭೂತಾನಾಮಹಮೇಕಃ ಸನಾತನಃ ॥೧೯॥

ಯಾವ ವಿದ್ವಾಂಸನು ಭಗವಂತನ ಅನುಗ್ರಹವಿಲ್ಲದೆ, ತನ್ನ ಪ್ರಯತ್ನವಿಲ್ಲದೆ ಮೋಕ್ಷವನ್ನು ಹೊಂದುತ್ತೇನೆ ಎಂದು ಪ್ರಯತ್ನಶೀಲನಾಗುತ್ತಾನೋ ಅಂತಹ ಮೋಕ್ಷಮತಿಸ್ಥನಾದ ವ್ಯಕ್ತಿಯಲ್ಲಿ ಸೇರಿಕೊಂಡು ನರ್ತನವನ್ನೂ ಮಾಡುತ್ತೇನೆ, ಅಟ್ಟಹಾಸಗೈಯ್ಯುತ್ತೇನೆ. ಆದ್ದರಿಂದ ಸರ್ವಕಾಲದಲ್ಲಿಯೂ ಎಲ್ಲ ಪ್ರಾಣಿಗಳಲ್ಲಿ ಅವಧ್ಯನಾಗಿರುವವನು ನಾನೊಬ್ಬನೇ.

ಶ್ರೀಭಗವಾನ್

ತಸ್ಮಾತ್ ತ್ವಮಪಿ ತಂ ಕಾಮಂ ಯಜ್ಞೈರ್ವಿವಿಧದಕ್ಷಿಣೈಃ ।
ಧರ್ಮೇ ಕುರು ಮಹಾರಾಜ ತತ್ರ ತೇ ನ ಭವಿಷ್ಯತಿ ॥೨೦॥

ಶ್ರೀಭಗವಾನ್– ಯುಧಿಷ್ಠಿರನೇ, ಆದ್ದರಿಂದ ನೀನೂ ಕೂಡ ನಾನಾ ವಿಧವಾದ ದಕ್ಷಿಣೆಗಳನ್ನೊಳಗೊಂಡ ಯಜ್ಞಗಳಿಂದ ಭಗವತ್ಪ್ರೀತಿಯನ್ನು ಉಂಟುಮಾಡುವ ಧರ್ಮಾನುಷ್ಠಾನವನ್ನು ಮಾಡಿ, ಭಗವತ್ಪ್ರೀತಿಯ ಕಾಮನೆಯನ್ನು ಮಾಡು, ಹೊರತು ಯಜ್ಞಗಳಿಂದಾಗುವ ಕಾಮ್ಯವೆನಿಸಿದ ಸ್ವರ್ಗಾದಿ ಫಲಗಳ ಆಸಕ್ತಿಯನ್ನು ತಾಳಬೇಡ.

ಯಜಸ್ವ ವಾಜಿಮೇಧೇನ ವಿಧಿವದ್ ದಕ್ಷಿಣಾವತಾ ।
ಅನ್ಯೈಶ್ಚ ವಿವಿಧೈರ್ಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ ॥೨೧॥

ಮಾ ತೇ ವ್ಯಥಾ ಭೂನ್ನಿಹತಾನ್ ಬಂಧೂನ್ ವೀಕ್ಷ್ಯ ಪುನಃ ಪುನಃ ।
ನ ಶಕ್ಯಾಸ್ತೇ ಪುನರ್ದ್ರಷ್ಟುಂ ಹತಾ ಯೇಽಸ್ಮಿನ್ ರಣಾಜಿರೇ ॥೨೨॥

ಯುಧಿಷ್ಠಿರನೇ, ಅಶ್ವಮೇಧ ಯಜ್ಞದಿಂದ ವಿಧಿವತ್ತಾಗಿ ಭಗವಂತನನ್ನು ಆರಾಧಿಸು. ಸಮೃದ್ಧವಾದ ದಕ್ಷಿಣೆಗಳಿಂದ ಕೂಡಿದ ವಿಧವಿಧವಾದ ಯಜ್ಞಗಳಿಂದ

ದೇವತಾಂತರ್ಯಾಮಿಯಾದ ಹರಿಯನ್ನು ತೃಪ್ತಿಪಡಿಸು. ಯುದ್ಧದಲ್ಲಿ ಮರಣ ಹೊಂದಿದ ಬಂಧುಗಳ ವಿಷಯವಾಗಿ ಪುನಃ ಪುನಃ ದುಃಖಪಡಬೇಡ. ನೀನು ಎಷ್ಟೇ ದುಃಖ ಹೊಂದಿದರೂ ಯುದ್ಧದಲ್ಲಿ ಹತರಾದವರನ್ನು ಪುನಃ ನೋಡಲು ಅಶಕ್ತನಾಗಿರುವಿ.

ಸ ತ್ವಮಿಷ್ಟ್ವಾ ಮಹಾಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ ।
ಲೋಕೇ ಕೀರ್ತಿಂ ಪರಾಂ ಪ್ರಾಪ್ಯ ಗತಿಮಗ್ರ್ಯಾಂ ಗಮಿಷ್ಯಸಿ ॥೨೩॥

ಸಮೃದ್ಧವಾದ, ಪೂರ್ಣವಾದ ದಕ್ಷಿಣೆಗಳಿಂದ ತುಂಬಿದ ಮಹಾಯಜ್ಞದಿಂದ ಭಗವಂತನನ್ನು ಆರಾಧಿಸಿ, ಲೋಕದಲ್ಲಿ ಅಪಾರವಾದ ಕೀರ್ತಿಯನ್ನು ಗಳಿಸಿಕೊ. ಪರಲೋಕದಲ್ಲಿ ಶ್ರೇಷ್ಠವಾದ ಸದ್ಗತಿಯನ್ನು ಹೊಂದುವಂತಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಕಾಮವಿಚಾರೋ ನಾಮ ತ್ರಯೋದಶೋऽಧ್ಯಾಯಃ ॥

॥ ಅಶ್ವಮೇಧಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹದಿಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಋಷಿಗಳು ಉಪದೇಶಿಸಿ ಅದೃಶ್ಯರಾದುದು.
ಭೀಷ್ಮರೇ ಮೊದಲಾದವರಿಗೆ ಔರ್ಧ್ವದೇಹಿಕ ವಿಧಿಗಳನ್ನು
ಪೂರೈಸಿದ ಧರ್ಮರಾಜನು ಹಸ್ತಿನಾವತಿಗೆ ಪ್ರವೇಶಿಸಿದುದು.

ವೈಶಂಪಾಯನಃ

ಏವಂ ಬಹುವಿಧೈರ್ವಾಕ್ಯೈರ್ಮುನಿಭಿಸ್ತೈಸ್ತಪೋಧನೈಃ ।
ಸಮಾಶ್ವಸ್ತಸ್ತು ರಾಜರ್ಷಿರ್ಹತಬಂಧುರ್ಯುಧಿಷ್ಠಿರಃ ॥೧॥

ವೈಶಂಪಾಯನ– ತಪೋಧನರಾದ ಮುನಿಗಳೆಲ್ಲರೂ ಅನೇಕ ವಿಧವಾದ ಮಾತುಗಳಿಂದ ರಾಜರ್ಷಿಯಾದ, ಬಂಧುಗಳನ್ನು ಯುದ್ಧದಲ್ಲಿ ಕಳೆದುಕೊಂಡು ದುಃಖಿಸುತ್ತಿದ್ದ ಯುಧಿಷ್ಠಿರನನ್ನು ಸಂತೈಸಿದರು.

ಸೋಽನುನೀತೋ ಭಗವತಾ ವಿಷ್ವಕ್ಸೇನಸಾ ಸ್ವಯಮ್ ।
ದ್ವೈಪಾಯನೇನ ಕೃಷ್ಣೇನ ದೇವಸ್ಥಾನೇನ ಚೈವ ಹಿ ॥೨॥

ನಾರದೇನಾಥ ಭೀಮೇನ ನಕುಲೇನ ಚ ಪಾರ್ಥಿವ ।
ಕೃಷ್ಣಾಯಾ ಸಹದೇವೇನ ವಿಜಯೇನ ಚ ಧೀಮತಾ ॥೩॥

ಅನ್ಯೈಶ್ಚ ಪುರುಷವ್ಯಾಘ್ರೈರ್ಬ್ರಾಹ್ಮಣೈಃ ಶಾಸ್ತ್ರದೃಷ್ಟಿಭಿಃ ।
ವ್ಯಜಹಾಚ್ಛೋಕಜಂ ದುಃಖಂ ಸಂತಾಪಂ ಚೈವ ಮಾನಸಮ್ ॥೪॥

ಸ್ವಯಂ ಪುಂಡರೀಕಾಕ್ಷನಾದ ಭಗವಂತನಿಂದ ಸಂತೈಸಲ್ಪಟ್ಟ, ವೇದವ್ಯಾಸ ದೇವರಿಂದ ಸಂತೈಸಲ್ಪಟ್ಟ ಯುಧಿಷ್ಠಿರನು ದೇವಸ್ಥಾನವೆಂಬ ಋಷಿಗಳಿಂದ, ನಾರದರಿಂದ, ಭೀಮಸೇನ, ನಕುಲರಿಂದ, ದ್ರೌಪದಿದೇವಿಯರಿಂದ, ಸಹದೇವನಿಂದ, ಬುದ್ಧಿವಂತನಾದ ಅರ್ಜುನನಿಂದ, ಇನ್ನೂ ಉಳಿದ ಶ್ರೇಷ್ಠ ಮಹಾಪುರುಷರಿಂದ, ಬ್ರಾಹ್ಮಣರಿಂದ, ಶಸ್ತ್ರ-ಶಾಸ್ತ್ರಸಂಪನ್ನರಿಂದ ಸಾಂತ್ವನಗೊಳಿಸಲ್ಪಟ್ಟವನಾಗಿ ಶೋಕದಿಂದ ಉಂಟಾದ ದುಃಖವನ್ನು, ಮಾನಸಿಕ ಸಂತಾಪವನ್ನು ತೊರೆದನು.

ಅರ್ಚಯಾಮಾಸ ದೇವಾಂಶ್ಚ ಬ್ರಾಹ್ಮಣಾಂಶ್ಚ ಯುಧಿಷ್ಠಿರಃ ॥೫॥

ಕೃತ್ವಾ ಚ ಪ್ರೇತಕಾರ್ಯಾಣಿ ಸರ್ವೇಷಾಂ ಕುರುನಂದನಃ ।
ಅನ್ವಶಾಸತ ಧರ್ಮಾತ್ಮಾ ಪೃಥಿವೀಂ ಸಾಗರಾಂಬರಾಮ್ ॥೬॥

ಯುಧಿಷ್ಠಿರನು ಬ್ರಾಹ್ಮಣರನ್ನು, ದೇವತೆಗಳನ್ನು ಆರಾಧಿಸಿ, ಗತಿಸಿದವರಿಗೆಲ್ಲ ಪ್ರೇತಕಾರ್ಯಗಳನ್ನು ಯಥಾವಿಧಿಯಾಗಿ ಮಾಡಿ, ಸಮುದ್ರಪರ್ಯಂತವಾದ ಭೂಮಿಯನ್ನು ಪರಿಪಾಲಿಸಲು ಆರಂಭಿಸಿದನು.

ಪ್ರಶಾಂತಚೇತಾಃ ಕೌರವ್ಯಃ ಸ್ವರಾಜ್ಯಂ ಪ್ರಾಪ್ಯ ಕೇವಲಮ್ ।
ವ್ಯಾಸಂ ಚ ನಾರದಂ ಚೈವ ತಾಂಶ್ಚಾನ್ಯಾನಬ್ರವೀನ್ನೃಪಃ ॥೭॥

ಕುರುವಂಶದ ರಾಜಶ್ರೇಷ್ಠನಾದ ಧರ್ಮರಾಜನು ತನ್ನ ರಾಜ್ಯವನ್ನು ಪಡೆದುಕೊಂಡು ಪ್ರಶಾಂತವಾದ ಮನಸ್ಸಿನಿಂದ ಕೂಡಿದವನಾಗಿ ವೇದವ್ಯಾಸದೇವರನ್ನೂ, ನಾರದರನ್ನೂ, ಅಲ್ಲಿ ಉಪಸ್ಥಿತರಾಗಿರುವ ಇತರ ಋಷಿಗಳನ್ನು ಕುರಿತು ಹೀಗೆ ಹೇಳಿದನು.

ಯುಧಿಷ್ಠಿರಃ

ಆಶ್ವಾಸಿತೋಽಹಂ ಪ್ರಾಗ್ವದ್ಭೃಗ್ವದ್ಭಿರ್ಮುನಿಪುಂಗವೈಃ ।
ನ ಸ್ತೋಕಮಪಿ ನಃ ಕಿಂಚಿದ್ ವ್ಯಲೀಕಮಿಹ ವಿದ್ಯತೇ ॥೮॥

ಯುಧಿಷ್ಠಿರ– ಮಹಾನುಭಾವರೇ, ಮುನಿಶ್ರೇಷ್ಠರಾದ, ಜ್ಞಾನವೃದ್ಧರಾದ ನಿಮ್ಮಿಂದ ಸಾಂತ್ವನವನ್ನು ಹೊಂದಿದ್ದೇನೆ. ಈಗ ನನ್ನ ಮನಸ್ಸಿನಲ್ಲಿ ಅಣುವಿನಷ್ಟೂ ದುಃಖವು ಇರುವುದಿಲ್ಲ.

ಅರ್ಥಶ್ಚ ಸುಮಹಾನ್ ಪ್ರಾಪ್ತೋ ಯೇನ ಯಕ್ಷ್ಯಾಮಿ ದೇವತಾಃ ।
ಪುರಸ್ಕೃತ್ಯೇಹ ಭವತಃ ಸಮಾನೇಷ್ಯಾಮ್ಯತೋ ಮಖಿಮ್ ॥೯॥

ನಿಮ್ಮ ಮಾತಿನಂತೆ ಹಿಮವದ್ ಪರ್ವತದ ತಪ್ಪಲಿನಲ್ಲಿ ಐಶ್ವರ್ಯವು ಲಭ್ಯವಾಗಿದೆ. ಆ ಐಶ್ವರ್ಯದಿಂದ ದೇವತೆಗಳನ್ನು, ಅಂತರ್ಯಾಮಿಯಾದ ವಿಷ್ಣುವನ್ನು ಆರಾಧಿಸುತ್ತೇನೆ. ನಿಮ್ಮೆಲ್ಲರನ್ನು ಮುಂದೆ ಮಾಡಿಕೊಂಡು ಹಿಮವದ್ ಪರ್ವತದ ತಪ್ಪಲಿಗೆ ಹೋಗಿ ಆ ಐಶ್ವರ್ಯವನ್ನು ಯಜ್ಞಶಾಲೆಗೆ ತೆಗೆದುಕೊಂಡು ಬರುತ್ತೇನೆ.

ಹಿಮವಂತಂ ತ್ವಯಾ ಗುಪ್ತಾ ಗಮಿಷ್ಯಾಮಃ ಪಿತಾಮಹ ।
ಬಹ್ವಾಶ್ಚರ್ಯೋ ಹಿ ದೇಶಃ ಸ ಶ್ರೂಯತೇ ದ್ವಿಜಸತ್ತಮ ॥೧೦॥

ದ್ವಿಜಶ್ರೇಷ್ಠರೇ, ನಿಮ್ಮೆಲ್ಲರ ಸಹಕಾರದಿಂದ ನಾವೆಲ್ಲರೂ ಹಿಮವದ್ ಪರ್ವತಕ್ಕೆ ಸಾಗೋಣ. ಆ ಪ್ರದೇಶವು ಅನೇಕ ಆಶ್ಚರ್ಯದಿಂದ ಕೂಡಿದೆ ಎಂದು ನಾನು ಕೇಳಿಸಿಕೊಂಡಿದ್ದೇನೆ.

ತಥಾ ಭಗವತಾ ಚಿತ್ರಂ ಕಲ್ಯಾಣಂ ಬಹು ಭಾಷಿತಮ್ ।
ದೇವರ್ಷಿಣಾ ನಾರದೇನ ದೇವಸ್ಥಾನೇನ ಚೈವ ಹ ॥೧೧॥

ಪೂಜ್ಯರಾದ ನಾರದರು, ದೇವಸ್ಥಾನರಾದ ಋಷಿಗಳು ಆಶ್ಚರ್ಯಕರವಾದ, ಕಲ್ಯಾಣಕರವಾದ ಅನೇಕ ಮಾತುಗಳನ್ನು ಹೇಳಿರುವಿರಿ.

ನಾಭಾಗಧೇಯಃ ಪುರುಷಃ ಕಶ್ಚಿದೇವಂವಿಧಾನ್ ಗುರೂನ್ ।
ಭತೇ ವ್ಯಸನಂ ಪ್ರಾಪ್ಯ ಸುಹೃದಃ ಸಾಧುಸಮ್ಮತಾನ್ ॥೧೨॥

ಭಾಗ್ಯವಂತನಲ್ಲದ ಯಾವ ಪುರುಷನೂ ಕಷ್ಟಬಂದಾಗ ಇಂತಹ ಸಾಧು ಸಮ್ಮತರಾದ, ಹಿತೈಷಿಗಳಾದ ಗುರುಗಳನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

ವೈಶಂಪಾಯನಃ

ಏವಮುಕ್ತಾಸ್ತು ತೇ ರಾಜ್ಞಾ ಸರ್ವ ಏವ ಮಹರ್ಷಯಃ ।
ಅಭ್ಯನುಜ್ಞಾಪ್ಯ ರಾಜಾನಂ ತಥೋಭೌ ಕೃಷ್ಣಫಲ್ಗುನೌ ॥೧೩॥

ಪಶ್ಯತಾಮೇವ ಸರ್ವೇಷಾಂ ತತ್ರೈವಾದರ್ಶನಂ ಯಯುಃ ॥೧೪॥

ವೈಶಂಪಾಯನ– ಜನಮೇಜಯನೇ, ಧರ್ಮರಾಜನು ಈ ರೀತಿ ಮಾತುಗಳನ್ನು ಹೇಳಿದ ಬಳಿಕ ಎಲ್ಲ ಮಹರ್ಷಿಗಳೂ ಧರ್ಮರಾಜನಿಂದ ಸಹಿತರಾಗಿ ಕೃಷ್ಣಾರ್ಜುನರ ಅನುಮತಿಯನ್ನು ಪಡೆದು ಎಲ್ಲರೂ ನೋಡುತ್ತಿರುವಂತೆ ಅದೃಶ್ಯರಾದರು.

ತತೋ ಧರ್ಮಸುತೋ ರಾಜಾ ತತ್ರೈವೋಪಾವಿಶತ್ ಪ್ರಭುಃ ।
ಏವಂ ನಾತಿಮಹಾನ್ ಕಾಲಃ ಸ ತೇಷಾಮತ್ಯವರ್ತತ ॥೧೫॥

ಋಷಿಗಳು ಅದೃಶ್ಯರಾದ ಬಳಿಕವೂ ರಾಜನಾದ ಯುಧಿಷ್ಠಿರನು ಸ್ವಲ್ಪ ಸಮಯ ಅಲ್ಲಿಯೇ ಕುಳಿತಿದ್ದನು.

ಕುರ್ವತಾಂ ಶೌಚಕರ್ಮಾಣಿ ಭೀಷ್ಮಸ್ಯ ನಿಧನೇ ತಥಾ ।
ಮಹಾದಾನಾನಿ ವಿಪ್ರೇಭ್ಯೋ ದದತಾಮೌರ್ಧ್ವದೈಹಿಕಮ್ ॥೧೬॥

ಭೀಷ್ಮಾಚಾರ್ಯರ ಅವಸಾನವಾದ ನಂತರ ಮಾಡಬೇಕಾದ ಔರ್ಧ್ವದೈಹಿಕ ಕರ್ಮವನ್ನು ಮಾಡುವುದರಲ್ಲಿ ಪಾಂಡವರು ಸ್ವಲ್ಪ ಕಾಲವನ್ನು ಕಳೆದರು. ನಂತರ ಬ್ರಾಹ್ಮಣರಿಗೆ ಮಹಾದಾನಗಳನ್ನು ಮಾಡಿದರು.

ಭೀಷ್ಮಕರ್ಣಪುರೋಗಾಣಾಂ ಕುರೂಣಾಂ ಕುರುನಂದನ ।
ಸಹಿತೋ ಧೃತರಾಷ್ಟ್ರೇಣ ಸ ದದಾವೌರ್ಧ್ವದೈಹಿಕಮ್ ॥೧೭॥

ತತೋ ದತ್ತ್ವಾ ಬಹು ಧನಂ ವಿಪ್ರೇಭ್ಯಃ ಪಾಂಡುನಂದನಃ ।
ಧೃತರಾಷ್ಟ್ರಂ ಪುರಸ್ಕೃತ್ಯ ವಿವೇಶ ಗಜಸಾಹ್ವಯಮ್ ॥೧೮॥

ಧೃತರಾಷ್ಟ್ರನಿಂದ ಸಹಿತರಾದ ಪಾಂಡವರು ಭೀಷ್ಮ-ಕರ್ಣ ಮೊದಲಾದವರಿಗೆ ಕ್ರಮಬದ್ಧವಾಗಿ ಔರ್ಧ್ವದೈಹಿಕ ವಿಧಿಗಳನ್ನು ಆಚರಿಸಿ, ಬ್ರಾಹ್ಮಣರಿಗೆಲ್ಲ ಬಹು ದಕ್ಷಿಣೆಗಳನ್ನು ದಾನ ಮಾಡಿ, ಧೃತರಾಷ್ಟ್ರನಿಂದ ಸಹಿತನಾಗಿ ಹಸ್ತಿನಾವತಿಯನ್ನು ಧರ್ಮಜನು ಪ್ರವೇಶಿಸಿದನು.

ಸ ಸಮಾಶ್ವಾಸ್ಯ ಪಿತರಂ ಪ್ರಜ್ಞಾಚಕ್ಷುಷಮೀಶ್ವರಮ್ ।
ಅನ್ವಶಾಸತ ಧರ್ಮಾತ್ಮಾ ಪೃಥಿವೀಂ ಭ್ರಾತೃಭಿಃ ಸಹ ॥೧೯॥

ಧರ್ಮಾತ್ಮನಾದ ಯುಧಿಷ್ಠಿರನು ಪ್ರಜ್ಞಾಚಕ್ಷುವೆನಿಸಿದ, ಪ್ರಭುವಾದ, ತಂದೆಯಾದ ಧೃತರಾಷ್ಟ್ರನನ್ನು ಸಮಾಧಾನಗೊಳಿಸುತ್ತಾ ತಮ್ಮಂದಿರೊಂದಿಗೆ ರಾಜ್ಯದ ರಕ್ಷಣೆಯನ್ನು ಮಾಡಲು ಆರಂಭಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಧರ್ಮರಾಜಪುರಪ್ರವೇಶೋ ನಾಮ ಚತುರ್ದಶೋऽಧ್ಯಾಯಃ ॥

॥ ಆಶ್ವಮೇಧಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ವೈಶಂಪಾಯನರಿಂದ ಕುರುವಿಜಯದ ಬಳಿಕ ಹಸ್ತಿನಾಪುರದಲ್ಲಿ ಕೃಷ್ಣಾರ್ಜುನರು ವಿಹರಿಸಿದ ಪ್ರಕಾರದ ವರ್ಣನೆ. ಕೃಷ್ಣನು ಅರ್ಜುನನಿಗೆ ತನ್ನ ದ್ವಾರಕೆಗೆ ಹೊರಡುವ ಅಭಿಪ್ರಾಯವನ್ನು ಯುಧಿಷ್ಠಿರನಿಗೆ ತಿಳಿಸಲು ಹೇಳಿದುದು.

ಜನಮೇಜಯಃ

ವಿಜಿತೇ ಪಾಂಡವೇಯೈಸ್ತು ಪ್ರಶಾಂತೇ ಚ ದ್ವಿಜೋತ್ತಮ ।
ರಾಷ್ಟ್ರೇ ಕಿಂ ಚಕ್ರತುರ್ವೀರೌ ವಾಸುದೇವಧನಂಜಯೌ ॥೧॥

ಜನಮೇಜಯ– ದ್ವಿಜಶ್ರೇಷ್ಠರೇ, ಪಾಂಡವರೆಲ್ಲರೂ ವಿಜಯಿಗಳಾದ ಬಳಿಕ, ಸಮಗ್ರ ರಾಷ್ಟ್ರದಲ್ಲಿ ಪ್ರಶಾಂತ ವಾತಾವರಣ ಸೃಷ್ಟಿಯಾದ ನಂತರ ಕೃಷ್ಣಾರ್ಜುನರು ಏನು ಮಾಡಿದರೆಂದು ತಿಳಿಸಿರಿ.

ವೈಶಂಪಾಯನಃ

ವಿಜಿತೇ ಪಾಂಡವೈ ರಾಜನ್ ಪ್ರಶಾಂತೇ ಚ ವಿಶಾಂಪತೌ ।
ರಾಷ್ಟ್ರೇ ಬಭೂವತುರ್ಹೃಷ್ಟೌ ವಾಸುದೇವಧನಂಜಯೌ ॥೨॥

ವೈಶಂಪಾಯನ– ಪ್ರಜೆಗಳಿಗೆ ಸ್ವಾಮಿಯಾದವನೇ, ಪಾಂಡವರು ವಿಜಯಶಾಲಿಗಳಾದ ಬಳಿಕ ರಾಷ್ಟ್ರದಲ್ಲಿ ಎಲ್ಲೆಡೆಯಲ್ಲಿಯೂ ಪ್ರಶಾಂತ ವಾತಾವರಣ ಸೃಷ್ಟಿಯಾಯಿತು. ಇದರಿಂದ ಕೃಷ್ಣಾರ್ಜುನರು ಪರಮ ಸಂತುಷ್ಟರಾದರು.

ವಿಜಹ್ರಾತೇ ಮುದಾ ಯುಕ್ತೌ ದಿವಿ ದೇವೇಶ್ವರಾವಿವ ॥೩॥

ತೌ ವನೇಷು ವಿಚಿತ್ರೇಷು ಪರ್ವತಾನಾಂ ಚ ಸಾನುಷು ।
ಶೈಲೇಷು ಗಹ್ವರಾರಣ್ಯೇ ಪಲ್ವಲೇಷು ನದೀಷು ಚ ॥೪॥

ಚಂಕ್ರಮ್ಯಮಾಣೌ ಸಂಹೃಷ್ಟಾವಶ್ವಿನಾವಿವ ನಂದನೇ ।
ಇಂದ್ರಪ್ರಸ್ಥೇ ಮಹಾತ್ಮಾನೌ ರೇಮಾತೇ ಕೃಷ್ಣಪಾಂಡವೌ ॥೫॥

ಕೃಷ್ಣಾರ್ಜುನರು ಸ್ವರ್ಗಲೋಕದಲ್ಲಿ ವಿಹರಿಸುವ ದೇವೇಶ್ವರರಂತೆ ಸಂತುಷ್ಟರಾಗಿ ವಿಚಿತ್ರವಾದ ಅರಮನೆಗಳಲ್ಲಿಯೂ, ರಮಣೀಯವಾದ ಪರ್ವತಶ್ರೇಣಿಗಳಲ್ಲಿಯೂ, ಪವಿತ್ರವಾದ ತೀರ್ಥಗಳಲ್ಲಿಯೂ, ನದಿಗಳಲ್ಲಿಯೂ ಸಂಚರಿಸುತ್ತಾ ನಂದನವನದಲ್ಲಿ ವಿಹರಿಸುವ ಅಶ್ವಿನೀದೇವತೆಗಳಂತೆ ಇಂದ್ರಪ್ರಸ್ಥದಲ್ಲಿ ಸಂತುಷ್ಟರಾಗಿ ವಿಹರಿಸುತ್ತಿದ್ದರು.

ಪ್ರವಿಶ್ಯ ತಾಂ ಸಭಾಂ ರಮ್ಯಾಂ ವಿಜಹ್ರಾತೇ ಚ ಭಾರತ ॥೬॥

ಮಹಾತ್ಮರಾದ ಕೃಷ್ಣಾರ್ಜುನರು ಪಾಂಡವರ ಹಿಂದಿನ ರಾಜಧಾನಿಯಾಗಿದ್ದ ಇಂದ್ರಪ್ರಸ್ಥಕ್ಕೆ ಹೋಗಿ, ಮಯನಿಂದ ನಿರ್ಮಿತವಾದ ಸಭಾಭವನದಲ್ಲಿ ಸಂತೋಷದಿಂದ ಕಾಲ ಕಳೆಯುತ್ತಿದ್ದರು.

ತತ್ರ ಯುದ್ಧಕಥಾಶ್ಚಿತ್ರಾಃ ಪರಿಕ್ಲೇಶಾಂಶ್ಚ ಭಾರತ ।
ಕಥಾಯೋಗೇ ಕಥಾಯೋಗೇ ಕಥಯಾಮಾಸತುಃ ಸದಾ ॥೭॥

ಆ ಇಂದ್ರಪ್ರಸ್ಥದಲ್ಲಿಯಾದರೂ ಚಿತ್ರವಿಚಿತ್ರವಾದ ಯುದ್ಧದ ಚರಿತ್ರೆಯನ್ನು, ಹಿಂದೆ ಹೊಂದಿದ ಕ್ಲೇಶಗಳನ್ನು ಪರಸ್ಪರವಾಗಿ ಕಥೆಯ ಮೂಲಕ ಹೇಳಿಕೊಂಡರು.

ಋಷೀಣಾಂ ದೇವತಾನಾಂ ಚ ವಂಶಾನ್ ವ್ಯಾಹರತಾಂ ತದಾ ।
ಪ್ರೀಯಮಾಣೌ ಮಹಾತ್ಮಾನೌ ಪುರಾಣಾವೃಷಿಸತ್ತಮೌ ॥೮॥

ಮಧುರಾಸ್ತು ಕಥಾಶ್ಚಿತ್ರಾಃ ಚಿತ್ರಾರ್ಥಪದನಿಶ್ಚಯಾಃ ।
ನಿಶ್ಚಯಜ್ಞಃ ಸ ಪಾರ್ಥಾಯ ಕಥಯಾಮಾಸ ಕೇಶವಃ ॥೯॥

ಋಷಿಗಳು, ದೇವತೆಗಳು, ಇವರ ವಂಶಗಳ ವಿಸ್ತಾರವಿಚಾರಗಳನ್ನು, ಪ್ರತಿಯೊಂದು ಕಥಾ ಪ್ರಸಂಗಗಳನ್ನು ಸಂತೋಷದಿಂದಲೇ ಹೇಳಿಕೊಳ್ಳುತ್ತಿದ್ದರು. ನರ-ನಾರಾಯಣರೇ ಎನಿಸಿದ ಕೃಷ್ಣಾರ್ಜುನರು ಮಧುರವಾದ, ಚಿತ್ರ-ವಿಚಿತ್ರವಾದ ಕಥೆಗಳನ್ನು ವಿಚಿತ್ರವಾದ ಅರ್ಥಪದಗಳ ನಿಶ್ಚಯದಿಂದ ಹೇಳಿಕೊಳ್ಳುತ್ತಿರಲು ಎಲ್ಲ ಕಥೆಗಳ ಸಾರವನ್ನು ಸಿದ್ಧಾಂತಜ್ಞನಾದ ಕೃಷ್ಣನು ಅರ್ಜುನನಿಗೆ ಬೋಧಿಸಿದನು.

ಪುತ್ರಶೋಕಾಭಿಸಂತಪ್ತಂ ಜ್ಞಾತೀನಾಂ ಚ ಸಹಸ್ರಶಃ ।
ಕಥಾಭಿಃ ಶಮಯಾಮಾಸ ಪಾರ್ಥಂ ಶೌರಿರ್ಜನಾರ್ದನಃ ॥೧೦॥

ವಸುದೇವನ ಮಗನಾದ ಜನಾರ್ದನನು ಪುತ್ರಶೋಕದಿಂದ, ಸಾವಿರಾರು ಜ್ಞಾತಿ ಬಂಧುಗಳ ಮರಣದಿಂದ ಪರಿತಪಿಸುತ್ತಿದ್ದ ಅರ್ಜುನನನ್ನು ಅನೇಕ ಕಥೆಗಳಿಂದ ಸಮಾಧಾನ ಪಡಿಸಿದನು.

ಸ ತಮಾಶ್ವಾಸ್ಯ ವಿಧಿವದ್ ವಿಧಾನಜ್ಞೋ ಮಹಾತಪಾಃ ।
ಅಪಹೃತ್ಯಾತ್ಮನೋ ಭಾರಂ ವಿಶಶ್ರಾಮ ಸಸಾತ್ವತಃ ॥೧೧॥

ಮಹಾತಪಸ್ವಿಯಾದ, ಜ್ಞಾನ-ವಿಜ್ಞಾನಗಳನ್ನು ವಿಧಿವತ್ತಾಗಿ ತಿಳಿದಿರುವ ಶ್ರೀಕೃಷ್ಣನು ಅರ್ಜುನನನ್ನು ಶಾಸ್ತ್ರೋಕ್ತ ಮಾತುಗಳಿಂದ ಸಮಾಧಾನ ಪಡಿಸಿ, ತನ್ನ ಮನಸ್ಸಿನ ಭಾರವನ್ನು ಪರಿಹರಿಸಿಕೊಂಡು ಅರ್ಜುನನ ಜೊತೆಗೆ ವಿಶ್ರಮಿಸಿಕೊಳ್ಳುತ್ತಿರುವನೋ ಎಂಬಂತೆ ಕಂಡನು.

ತತಃ ಕಥಾಂತೇ ಗೋವಿಂದೋ ಗುಡಾಕೇಶಮುವಾಚ ಹ ।
ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಹೇತುಯುಕ್ತಮಿದಂ ವಚಃ ॥೧೨॥

ಅನೇಕ ವಿಚಾರಗಳನ್ನು ಮಾಡಿದ ಬಳಿಕ ಗೋವಿಂದನು ಅರ್ಜುನನಿಗೆ ಸಾಂತ್ವನ ಯುಕ್ತವಾದ, ಸುಮಧುರವಾದ ಮಾತಿನಿಂದ ಯುಕ್ತಿಯುಕ್ತವಾದ ನುಡಿಯೊಂದನ್ನು ನುಡಿದನು.

ಶ್ರೀಭಗವಾನ್

ವಿಜಿತೇಯಂ ಧರಾ ಕೃತ್ಸ್ನಾ ಸವ್ಯಸಾಚಿನ್ ಪರಂತಪ ।
ತ್ವದ್ ಬಾಹುಬಲಮಾಶ್ರಿತ್ಯ ರಾಜ್ಞಾ ಧರ್ಮಸುತೇನ ಹ ॥೧೩॥

ಶ್ರೀಭಗವಾನ್– ಶತ್ರುಗಳನ್ನು ಸದೆಬಡಿಯುವ ಸವ್ಯಸಾಚಿಯೇ, ನಿನ್ನ ಬಾಹುಬಲಗಳನ್ನು ಆಶ್ರಯಿಸಿ ಧರ್ಮಸುತನಾದ ಯುಧಿಷ್ಠಿರನು ಸಮಗ್ರ ಭೂಮಂಡಲವನ್ನು ಜಯಿಸಿಕೊಂಡಿದ್ದಾನೆ.

ಅಸಪತ್ನಾಂ ಮಹೀಂ ಭುಂಕ್ತೇ ಧರ್ಮರಾಜೋ ಯುಧಿಷ್ಠಿರಃ ।
ಭೀಮಸೇನಪ್ರತಾಪೇನ ಯಮಯೋಶ್ಚ ನರೋತ್ತಮ ॥೧೪॥

ಭೀಮಸೇನನ ಮಹಾಪ್ರತಾಪದಿಂದ, ನಕುಲ-ಸಹದೇವರ ಪ್ರಭಾವದಿಂದ ಧರ್ಮರಾಜನು ನಿಷ್ಕಂಟಕವಾದ ಭೂಮಂಡಲವನ್ನು ಅನುಭವಿಸುತ್ತಿದ್ದಾನೆ.

ಧರ್ಮೇಣ ರಾಜ್ಞಾ ಧರ್ಮಜ್ಞ ಪ್ರಾಪ್ತಂ ರಾಜ್ಯಮಕಂಟಕಮ್ ।
ಧರ್ಮೇಣ ನಿಹತಃ ಸಂಖೇ ಸ ಚ ರಾಜಾ ಸುಯೋಧನಃ ॥೧೫॥

ನಿಷ್ಕಂಟಕವಾದ ಈ ರಾಜ್ಯವು ಧರ್ಮರಾಜನ ಧರ್ಮದ ಬಲದಿಂದಲೇ ಒದಗಿ ಬಂದಿದೆ. ದುರ್ಯೋಧನನಾದರೂ ಯುದ್ಧದಲ್ಲಿ ಧರ್ಮದಿಂದಲೇ ಹತನಾಗಿದ್ದಾನೆ.

ಅಧರ್ಮರುಚಯೋ ಲುಬ್ಧಾಃ ಸದಾ ಚಾಪ್ರಿಯವಾದಿನಃ ।
ಧಾರ್ತರಾಷ್ಟ್ರಾ ದುರಾತ್ಮಾನಃ ಸಾನುಬಂಧಾ ನಿಪಾತಿತಾಃ ॥೧೬॥

ಅಧರ್ಮದಲ್ಲಿಯೇ ಆಸಕ್ತಿಯನ್ನು ಹೊಂದಿದ ಧೃತರಾಷ್ಟ್ರನ ಎಲ್ಲ ಮಕ್ಕಳು ಕೃಪಣರಾಗಿದ್ದರು, ಅಪ್ರಿಯವಾದಿಗಳಾಗಿದ್ದರು. ಆದ್ದರಿಂದಲೇ ಬಂಧು-ಬಾಂಧವರಿಂದ ಸಹಿತರಾಗಿ ದುರಾತ್ಮರಾದ ಅವರೆಲ್ಲರೂ ಹತರಾದರು.

ಪ್ರಶಾಂತಾಮಖಿಲಂ ಪಾರ್ಥ ಪೃಥಿವೀಂ ಪೃಥಿವೀಪತಿಃ ।
ಭುಂಕ್ತೇ ಧರ್ಮಸುತೋ ರಾಜಾ ತ್ವಯಾ ಗುಪ್ತಃ ಕುರೂದ್ವಹ ॥೧೭॥

ಕುರುಕುಲಶ್ರೇಷ್ಠನೇ, ಧರ್ಮಪುತ್ರನಾದ, ಭೂಮಿಯ ರಾಜನಾದ ಯುಧಿಷ್ಠಿರನು ನಿನ್ನಿಂದ ರಕ್ಷಿತನಾಗಿ ಖಂಡಿತವಾಗಿಯೂ ಪ್ರಶಾಂತವಾದ ಭೂಮಿಯನ್ನು ಚೆನ್ನಾಗಿ ಅನುಭವಿಸುತ್ತಾನೆ.

ಕೇನ ವಾಹಂ ತ್ವಯಾ ಸಾರ್ಧಮರಣ್ಯೇಷ್ವಿಹ ಪಾಂಡವ ।
ಕಿಮು ಯತ್ರ ಜನೋಽಯಂ ವೈ ವೃಥಾ ಚಾಮಿತ್ರಕರ್ಶನ ॥೧೮॥

ಈ ಧರ್ಮರಾಜನು ಅಕ್ಷಕ್ರೀಡೆಯಲ್ಲಿ ಸ್ವಯಂ ತಾನು ಮೊದಲು ಸೋತು, ನಂತರ ಅರಣ್ಯಕ್ಕೆ ಆಗಮಿಸಿ ಅರಣ್ಯದಲ್ಲಿಯೂ ನಿನ್ನ ಜೊತೆಯಾಗಲಿ ಅಥವಾ ಬೇರೆಯವರ ಜೊತೆಯಲ್ಲಿ ಅಕ್ಷಕ್ರೀಡೆಯನ್ನು ವ್ಯರ್ಥವಾಗಿ ಆಟವಾಡುತ್ತಿದ್ದನು. ಅರಣ್ಯದಲ್ಲಿ ಲೀಲೆಯಿಂದ ಸಂಚರಿಸುವಾಗ ನಿನ್ನ ಜೊತೆಗೆ ಅಕ್ಷಕ್ರೀಡೆಯನ್ನು ಯಾವ ಉದ್ದೇಶದಿಂದಲೂ ಆಡದೆ ವಿನೋದದಿಂದಲೇ ಆಡಿದ್ದೇವೆ. ಆದರೆ ಇನ್ನು ಮುಂದೆ ಯಾವ ಕ್ರೀಡೆಗಳನ್ನಾದರೂ ಧರ್ಮರಾಜನು ಆಡಲಿ. ಅವನೊಂದಿಗೆ ಈ ಅಕ್ಷಕ್ರೀಡೆಯಲ್ಲಿ ಮಾತ್ರ ತೊಡಗಬೇಡ.

ಯತ್ರ ಧರ್ಮಸುತೋ ರಾಜಾ ಯತ್ರ ಭೀಮೋ ಮಹಾಬಲಃ ।
ಯತ್ರ ಮಾದ್ರವತೀಪುತ್ರೌ ರತಿಸ್ತತ್ರ ಪರಾ ಮಮ ॥೧೯॥

ಕುರುನಂದನನೇ, ಎಲ್ಲಿ ಯಮಧರ್ಮನ ಮಗನಾದ ಯುಧಿಷ್ಠಿರನಿದ್ದಾನೋ, ಮಹಾಬಲಶಾಲಿಯಾದ ಭೀಮಸೇನನಿದ್ದಾನೋ, ಮಾದ್ರಿಯ ಮಕ್ಕಳಾದ ನಕುಲ-ಸಹದೇವರಿದ್ದಾರೋ ಅಲ್ಲಿ ನಮಗೆ ಪರಮಾನಂದ ಉಂಟಾಗುತ್ತದೆ.

ತಥೈವ ಸ್ವರ್ಗಕಲ್ಪೇಷು ಸಭೋದ್ದೇಶೇಷು ಭಾರತ ।
ರಮಣೀಯೇಷು ಪುಣ್ಯೇಷು ಸಹಿತಸ್ಯ ತ್ವಯಾಽನಘ ॥೨೦॥

ಪಾಪರಹಿತನಾದ ಕುರುಶ್ರೇಷ್ಠನೇ, ಈ ಸಭಾಭವನದ, ರಮಣೀಯವಾದ, ಪವಿತ್ರವಾದ ಸ್ಥಾನಗಳೆಲ್ಲವೂ ಸ್ವರ್ಗತುಲ್ಯವಾಗಿವೆ.

ಕಾಲೋ ಮಹಾಂಸ್ತ್ವತೀತೋ ಮೇ ಶೂರಪುತ್ರಮಪಶ್ಯತಃ ।
ಬಲದೇವಂ ಚ ಕೌರವ್ಯ ತಥಾಽನ್ಯಾನ್ ವೃಷ್ಣಿಪುಂಗವಾನ್ ॥೨೧॥

ಇಂತಹ ಆನಂದಪ್ರದವಾದ ಸ್ಥಳಗಳಲ್ಲಿ ನಾನು ನಿಮ್ಮೊಂದಿಗೆ ಬಹಳ ಕಾಲ ಕಳೆದಿದ್ದೇನೆ. ನನ್ನ ಅಣ್ಣನಾದ ಬಲದೇವನನ್ನು, ಬೇರೆ ವೃಷ್ಣಿಪುಂಗವರನ್ನು (ಯದುಶ್ರೇಷ್ಠರನ್ನು) ನೋಡಬೇಕೆಂದು ಮನಸ್ಸು ಮಾಡಿದ್ದೇನೆ.

ಸೋಽಹಂ ಗಂತುಮಭೀಪ್ಸಾಮಿ ಪುರೀಂ ದ್ವಾರವತೀಂ ಪ್ರತಿ ।
ರೋಚತಾಂ ಗಮನಂ ತುಭ್ಯಂ ಮಮಾಪಿ ಭರತರ್ಷಭ ॥೨೨॥

ಅರ್ಜುನನೇ, ಆದ್ದರಿಂದ ದ್ವಾರಕೆಯನ್ನು ಕುರಿತು ಹೋಗಬೇಕೆಂದು ಅಪೇಕ್ಷೆ ಉಳ್ಳವನಾಗಿದ್ದೇನೆ. ನನ್ನ ಗಮನದ ವಾರ್ತೆಯು ನಿಮಗೂ ಸಂತೋಷವುಂಟು ಮಾಡಲಿ.

ಉಕ್ತೋ ಬಹುವಿಧಂ ರಾಜಾ ತತ್ರ ತತ್ರ ಯುಧಿಷ್ಠಿರಃ ।
ಸಹ ಭೀಷ್ಮೇಣ ಯದ್ಯುಕ್ತಮಸ್ಮಾಭಿಃ ಶೋಕಕರ್ಶಿತಃ ॥೨೩॥

ಅರ್ಜುನನೇ, ಶೋಕವನ್ನು ಪರಿಹರಿಸುವ ಉದ್ದೇಶದಿಂದ, ಆಯಾ ಕಾಲದಲ್ಲಿ ಯೋಗ್ಯವೆನಿಸಿದ ವಿವೇಕದ ಮಾತುಗಳನ್ನು ಶೋಕದಿಂದ ಕೂಡಿರುವ ಯುಧಿಷ್ಠಿರನಿಗೆ ಭೀಷ್ಮನೂ ಕೂಡ ಹೇಳಿದ್ದಾನೆ, ನಾವೂ ಹೇಳಿದ್ದೇವೆ.

ಶಿಷ್ಟೋ ಯುಧಿಷ್ಠಿರೋಽಸ್ಮಾಭಿಃ ಶಾಸ್ತಾ ಸನ್ನಪಿ ಪಾಂಡವಃ ।
ತೇನ ತಚ್ಚ ವಚಃ ಸಮ್ಯಗ್ ಗೃಹೀತಂ ಸುಮಹಾತ್ಮನಾ ॥೨೪॥

ವಾಸ್ತವಿಕವಾಗಿ ಧರ್ಮರಾಜನು ನಮ್ಮೆಲ್ಲರಿಗೂ ರಾಜನಾಗಿದ್ದರೂ ಮಹಾತ್ಮನಾದ ಅವನು ನಮ್ಮಿಂದ ಶಾಸನ ಮಾಡಲ್ಪಟ್ಟಿದ್ದಾನೆ.

ಧರ್ಮಪುತ್ರೇ ಹಿ ಧರ್ಮಜ್ಞೇ ಕೃತಜ್ಞೇ ಸತ್ಯವಾದಿನಿ ।
ಸತ್ಯಂ ಧರ್ಮೋ ಮತಿಶ್ಚಾಗ್ರ್ಯಾ ಸ್ಥಿತಿಶ್ಚ ಸತತಂ ಸ್ಥಿತೌ ॥೨೫॥

ಧರ್ಮಜ್ಞನಾದ, ಕೃತಜ್ಞನಾದ, ಸತ್ಯವಾದಿಯಾದ ಧರ್ಮರಾಜನಲ್ಲಿ ಸತ್ಯ-ಧರ್ಮ ಉತ್ತಮವಾದ ಬುದ್ಧಿ, ಔನ್ನತ್ಯವು ಸ್ಥಿರವಾಗಿ ಇವೆ.

ತದ್ಗತ್ವಾ ತಂ ಮಹಾತ್ಮಾನಂ ಯದಿ ತೇ ರೋಚತೇಽರ್ಜುನ ।
ಅಸ್ಮದ್ಗಮನಸಂಯುಕ್ತಂ ವಚೋ ಬ್ರೂಹಿ ಜನಾಧಿಪಮ್ ॥೨೬॥

ಅರ್ಜುನನೇ, ಅಂತಹ ಮಹಾತ್ಮನಾದ ಯುಧಿಷ್ಠಿರನ ಬಳಿ ನೀನು ಹೋಗಿ ಉಚಿತವೆನಿಸಿದರೆ ಈಗಲೇ ನಾನು ದ್ವಾರಕೆಗೆ ಪ್ರಯಾಣ ಮಾಡುವ ವಿಷಯವನ್ನು ತಿಳಿಸು.

ನ ಹಿ ತಸ್ಯಾಪ್ರಿಯಂ ಕುರ್ಯಾಂ ಪ್ರಾಣತ್ಯಾಗೇಽಪ್ಯುಪಸ್ಥಿತೇ ।
ಕುತೋ ಗಂತುಂ ಮಹಾಬಾಹೋ ಪುರೀಂ ದ್ವಾರವತೀಂ ಪ್ರತಿ ॥೨೭॥

ಮಹಾಬಾಹುವೇ, ಧರ್ಮರಾಜನಿಗೆ ಅಪ್ರಿಯವಾಗುವುದಾದಲ್ಲಿ ನನಗೆ ಪ್ರಾಣ ಸಂಕಟ ಒದಗಿಬಂದರೂ ಆ ಕಾರ್ಯವನ್ನು ನಾನು ಮಾಡುವುದಿಲ್ಲ. ಆದ್ದರಿಂದ ಧರ್ಮಜನ ಒಪ್ಪಿಗೆಯನ್ನು ಪಡೆದು ದ್ವಾರಾವತಿಗೆ ಹೋಗುತ್ತೇನೆ ವಿನಾ ಅವನ ಅನುಮತಿ ಇಲ್ಲದೆ ಹೋಗಲಾರೆನು.

ಸರ್ವಮೇತದಹಂ ಪಾರ್ಥ ತ್ವತ್ಪ್ರೀತಿಹಿತಕಾಮ್ಯಯಾ ।
ಬ್ರವೀಮಿ ಸತ್ಯಂ ಕೌರವ್ಯ ನ ಮಿಥ್ಯೈತತ್ ಕಥಂಚನ ॥೨೮॥

ಪಾರ್ಥನೇ, ಈ ಎಲ್ಲ ವಿಷಯಗಳನ್ನು ನಿನಗೆ ಸಂತೋಷವಾಗಲಿ ಎಂಬ ಕಾರಣದಿಂದ ಹೇಳುತ್ತಿದ್ದೇನೆ. ನಾನು ನಿನ್ನ ಬಳಿ ಎಂದೂ ಸತ್ಯವನ್ನೇ ಹೇಳಿದ್ದೇನೆ, ಸುಳ್ಳನ್ನು ಎಂದೂ ಹೇಳುವುದಿಲ್ಲ.

ಪ್ರಯೋಜನಂ ಚ ನಿರ್ವೃತ್ತಮಿಹ ವಾಸೇನ ಮೇಽರ್ಜುನ ।
ಧಾರ್ತರಾಷ್ಟ್ರೋ ಹತೋ ರಾಜಾ ಸಬಲಃ ಸಪದಾನುಗಃ ॥೨೯॥

ಅರ್ಜುನನೇ, ನಾನು ಇಲ್ಲಿ ವಾಸ ಮಾಡಿ ಯಾವ ಪ್ರಯೋಜನಗಳನ್ನು ಸಾಧಿಸಿಕೊಳ್ಳಬೇಕೆಂದುಕೊಂಡಿದ್ದೆನೋ ಅವೆಲ್ಲವೂ ಪೂರ್ಣವಾಗಿವೆ. ಧೃತರಾಷ್ಟ್ರನ ಮಗನಾದ ದುರ್ಯೋಧನನು ಸೇನಾಸಹಿತನಾಗಿ ಸೇವಕರೊಡನೆ ಮೃತ್ಯು ಹೊಂದಿದ್ದಾನೆ.

ಪೃಥಿವೀ ಚ ವಶೇ ತಾತ ಧರ್ಮಪುತ್ರಸ್ಯ ಧೀಮತಃ ।
ಸ್ಥಿತಾ ಸಮುದ್ರವಸನಾ ಸಶೈಲವನಕಾನನಾ ॥೩೦॥

ಚಿತಾ ರತ್ನೈರ್ಬಹುವಿಧೈಃ ಕುರುರಾಜಸ್ಯ ಪಾಂಡವ ॥೩೧॥

ನಾನಾ ವಿಧವಾದ ರತ್ನಗಳ ಸಂಗ್ರಹದಿಂದ ಸಂಪನ್ನವಾಗಿರುವ, ಸಮುದ್ರಾಂತವಾದ ಪರ್ವತ, ವನ, ಕಾನನಗಳಿಂದ ಸಮೃದ್ಧವಾದ ಭೂಮಂಡಲವು ಬುದ್ಧಿವಂತನಾದ ಧರ್ಮರಾಜನ ವಶವಾಗಿದೆ.

ಧರ್ಮೇಣ ರಾಜ್ಞಾ ಧರ್ಮಜ್ಞಃ ಪಾತು ಸರ್ವಾಂ ವಸುಂಧರಾಮ್ ।
ಉಪಾಸ್ಯಮಾನೋ ಮುನಿಭಿಃ ಸಿದ್ಧೈಶ್ಚಾಪಿ ಮಹಾತ್ಮಭಿಃ ॥೩॥

ಸಂಸ್ತೂಯಮಾನಃ ಸತತಂ ವಂದಿಭಿರ್ಭರತರ್ಷಭ ॥೩॥

ಧರ್ಮಜ್ಞನಾದ ಯುಧಿಷ್ಠಿರನು ಮಹಾತ್ಮರಾದ ಅನೇಕ ಸಿದ್ಧರಿಂದ ಉಪಾಸಿಸಲ್ಪಡುತ್ತ, ವಂದಿ-ಮಾಗಧರಿಂದ ಸ್ತುತಿಗೆ ಯೋಗ್ಯನಾಗಿ ಭೂಮಿಯನ್ನು ಧರ್ಮದಿಂದಲೇ ಪರಿಪಾಲಿಸುವಂತಾಗಲಿ.

ತ್ವಂ ಮಯಾ ಸಹ ಗತ್ವಾಽದ್ಯ ರಾಜಾನಂ ಕುರುವರ್ಧನಮ್ ।
ಆಪೃಚ್ಛ ಕುರುಶಾರ್ದೂಲಂ ಗಮನಂ ದ್ವಾರಕಾಂ ಪ್ರತಿ ॥೪॥

ಈಗ ನೀನು ನನ್ನೊಡನೆ ರಾಜನ ಬಳಿಗೆ ಬಂದು, ಅವನನ್ನು ಅಭಿನಂದಿಸಿ, ದ್ವಾರಕೆಗೆ ಹೊರಡುವ ವಿಷಯವನ್ನು ಹೇಳಿ ಪ್ರಯಾಣಕ್ಕೆ ಅನುಮತಿಯನ್ನು ಕೊಡಿಸು.

ಇದಂ ಶರೀರಂ ವಸು ಯಚ್ಚ ಮೇ ಗೃಹೇ
ನಿವೇದಿತಂ ಪಾರ್ಥ ಸದಾ ಯುಧಿಷ್ಠಿರೇ ।
ಪ್ರಿಯಶ್ಚ ಮಾನ್ಯಶ್ಚ ಹಿ ಮೇ ಯುಧಿಷ್ಠಿರಃ
ಸದಾ ಕುರೂಣಾಮಧಿಪೋ ಮಹಾಮತಿಃ ॥೫॥

ಈ ನನ್ನ ಶರೀರ, ನನ್ನ ಮನೆಯಲ್ಲಿರುವ ಸಮಗ್ರ ಐಶ್ವರ್ಯ, ಇವೆಲ್ಲವೂ ಸಂಪೂರ್ಣವಾಗಿ ಯುಧಿಷ್ಠಿರನಿಗೆ ಸಮರ್ಪಿತವಾಗಿವೆ. ಕುರುಗಳಿಗೆ ರಾಜನಾದ, ಬುದ್ಧಿಶಾಲಿಯಾದ ಧರ್ಮರಾಜನು ನನಗೆ ನಿತ್ಯವೂ ಪ್ರಿಯನೂ, ಮಾನ್ಯನೂ ಆಗಿದ್ದಾನೆ.

ಪ್ರಯೋಜನಂ ಚಾಪಿ ವಿವಾಸಕಾರಣೇ
ನ ವಿದ್ಯತೇ ಮೇ ತ್ವದೃತೇ ಮಹಾಭುಜೇ ।
ಸ್ಥಿತಾ ಹಿ ಪೃಥ್ವೀ ತವ ಪಾರ್ಥ ಶಾಸನೇ
ಗುರೋಃ ಸುವೃತ್ತಸ್ಯ ಯುಧಿಷ್ಠಿರಸ್ಯ ಹಿ ॥೬॥

ಅರ್ಜುನನೇ, ಇನ್ನು ಮುಂದೆ ನಿನ್ನೊಡನೆ ಸಂತೋಷದಿಂದ ಕಾಲ ಕಳೆಯುವುದನ್ನು ಬಿಟ್ಟು ಬೇರೆ ಯಾವ ಹೆಚ್ಚು ಪ್ರಯೋಜನವು ಇಲ್ಲಿ ಇರುವುದಿಲ್ಲ. ಅರ್ಜುನನೇ, ಈ

ಅಖಂಡ ಭೂಮಂಡಲವು ನಿನ್ನ ಮತ್ತು ಸಚ್ಚಾರಿತ್ರ್ಯಸಂಪನ್ನನಾದ ಯುಧಿಷ್ಠಿರನ ಶಾಸನಕ್ಕೆ ಒಳಪಟ್ಟಿದೆ.

ವೈಶಂಪಾಯನಃ

ಇತೀದಮುಕ್ತಃ ಸ ತದಾ ಮಹಾತ್ಮನಾ
ಜನಾರ್ದನೇನಾಮಿತವಿಕ್ರಮೋऽರ್ಜುನಃ ।
ತಥೇತಿ ಕೃಚ್ಛ್ರಾದಿವ ವಾಚಮೀರಯನ್
ಜನಾರ್ದನಂ ಸಂಪ್ರತಿಪೂಜ್ಯ ಪಾರ್ಥಿವಃ ॥೩೭॥

ವೈಶಂಪಾಯನ– ಜನಮೇಜಯನೇ, ಮಹಾತ್ಮನಾದ ಜನಾರ್ದನನಿಂದ ಹೀಗೆ ಹೇಳಲ್ಪಟ್ಟ, ಪರಾಕ್ರಮಿಯಾದ ಅರ್ಜುನನು ಕೃಷ್ಣನನ್ನು ಸಮಾಧಾನಪಡಿಸುತ್ತಾ ದುಃಖದಿಂದ ಹಾಗೆಯೇ ಆಗಲಿ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಕೃಷ್ಣಸ್ಯ ದ್ವಾರಾವತೀಂ ಪ್ರತಿಗಮನಂ ನಾಮ
ಪಂಚದಶೋऽಧ್ಯಾಯಃ ॥

॥ ಅಶ್ವಮೇಧಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಮ್ ಅಶ್ವಮೇಧಪರ್ವ ॥

★ ★ ★ ★ ★

೨. ಅನುಗೀತಾಪರ್ವ

ಮಹಾಭಾರತತಾತ್ಪರ್ಯನಿರ್ಣಯಃ - ಅಧ್ಯಾಯಃ ೩೦

ಗೀತೋಕ್ತಂ ವಿಸ್ಮೃತಂ ಚಾಸ್ಮೈ ಪುನರ್ವಿಸ್ತರತೋಽವದತ್ ।
ವಾಣೀ ಪ್ರಾಣೋ ವಾಸುದೇವ ಇತ್ಯೇತೈರಖಿಲಂ ತತಮ್ ॥

ಸರ್ವೋತ್ತಮತ್ವಮೇತೇಷಾಂ ಸರ್ವಮೇತದ್ವಶೇ ಜಗತ್ ।
ಉತ್ತರೋತ್ತರಮೇತೇಽಪಿ ಗುಣೋಚ್ಚಾಸ್ತದ್ವಶೇಽಪರೇ ॥

ಅರ್ಜುನನಿಗೆ ಶ್ರೀಕೃಷ್ಣನು ಗೀತೆಯಲ್ಲಿ ಉಪದೇಶಿಸಿದ್ದು ಮರೆತುಹೋಯಿತು. ಅದನ್ನು ಪುನಃ ವಿಸ್ತಾರವಾಗಿ ಅನುಗೀತೆಯಲ್ಲಿ ಶ್ರೀಕೃಷ್ಣ ಉಪದೇಶಿಸಿದನು. ಭಾರತೀ, ಮುಖ್ಯಪ್ರಾಣ, ಶ್ರೀಕೃಷ್ಣ - ಈ ಮೂವರಿಂದಲೇ ಎಲ್ಲ ಜಗತ್ತು ವ್ಯಾಪ್ತವಾಗಿದೆ. ಸರ್ವೋತ್ತಮತ್ವ ಈ ಮೂವರಿಗೆ ಮಾತ್ರ ಇದೆ. ಈ ಎಲ್ಲ ಜಗತ್ತು ಇವರ ವಶದಲ್ಲಿದೆ. ಇವರಲ್ಲಿ ಮೇಲು ಮೇಲಿನವರು ಹೆಚ್ಚು ಹೆಚ್ಚು ಗುಣವಂತರು. ಬೇರೆ ರುದ್ರಾದಿಗಳು ಇವರ ವಶದಲ್ಲಿ ಇರುತ್ತಾರೆ.

ಇತ್ಥಂ ಹರೇರ್ವಶೇ ಸರ್ವಗುಣಪೂರ್ಣಶ್ಚ ಸ ಪ್ರಭುಃ ।
ಏಕ ಏವ ನ ಚಾನ್ಯೋಽಸ್ತಿ ಪ್ರಾಣೋಚ್ಚಾ ತದಧೋ ರಮಾ ॥

'ಹೀಗೆ ಹರಿಯ ವಶದಲ್ಲಿಯೇ ಎಲ್ಲವೂ ಇದೆ. ಗುಣಪೂರ್ಣ ಆ ಪ್ರಭು ಒಬ್ಬನೆ ಹೊರತು ಇನ್ನೊಬ್ಬನಿಲ್ಲ. ಅವನಿಗಿಂತ ಕಡಿಮೆಯವಳು, ಮುಖ್ಯಪ್ರಾಣನಿಗಿಂತ ಹೆಚ್ಚಿನವಳು ರಮೆ.

ಸ ಹುತಾಶ ಇತಿ ಪ್ರೋಕ್ತೋ ಹುತಮತ್ತ್ಯಖಿಲಂ ಯತಃ ।
ವಾಕ್ಪ್ರಾಣಮಧ್ಯಗೋ ನಿತ್ಯಂ ಧಾರಯತ್ಯಖಿಲಂ ಜಗತ್ ॥

ಸ ಈಶೋ ಬ್ರಹ್ಮರುದ್ರಾದ್ಯಾ ಜೀವಾ ಏವ ಪ್ರಕೀರ್ತಿತಾಃ ।
ಯೇ ತಸ್ಯಾನಾದಿಸದ್ಭಕ್ತಾ ಮುಕ್ತಿಯೋಗ್ಯಾ ಹಿ ತೇ ಸ್ಮೃತಾಃ ॥

'ಹೋಮಿಸಿದ್ದನ್ನೆಲ್ಲ ಉಣ್ಣುವುದರಿಂದ ಶ್ರೀಹರಿಯು ಹುತಾಶನೆನಿಸಿದ್ದಾನೆ. ವಾಕ್ ಪ್ರಾಣರ ಹೃದಯಕಮಲದಲ್ಲಿದ್ದು ನಿತ್ಯವೂ ಸಕಲ ಜಗತ್ತನ್ನು ಅವನೇ ಧರಿಸುತ್ತಾನೆ. ಅವನೇ ಈಶ. ಬ್ರಹ್ಮ-ರುದ್ರಾದಿಗಳೆಲ್ಲ ಜೀವರೆಂದೇ ಕರೆಸಿಕೊಂಡಿದ್ದಾರೆ. ಅವನ ಅನಾದಿ ಸದ್ಭಕ್ತರು ಯಾರೋ ಅವರು ಮುಕ್ತಿಯೋಗ್ಯರೆನಿಸುತ್ತಾರೆ.

ಅನಾದಿದ್ವೇಷಿಣೋ ಯೇಽಸ್ಮಿಂಸ್ತಮೋಯೋಗ್ಯಾಃ ಸುಪಾಪಿನಃ ।
ಮಿಶ್ರಾ ಮಧ್ಯಾ ಇತಿ ಜ್ಞೇಯಾಃ ಸಂಸಾರಪರಿವರ್ತಿನಃ ॥

ಏವಂ ಜೀವಾಸ್ತ್ರಿಧಾ ಪ್ರೋಕ್ತಾ ಭವಂತ್ಯೇತೇ ನ ಚಾನ್ಯಥಾ ।
ತಾರತಮ್ಯಂ ಚ ವಿಜ್ಞೇಯಂ ಲಿಂಗೈರ್ದೈಹಿಕಮಾನಸೈಃ ॥

ಶ್ರೀಹರಿಯಲ್ಲಿ ಅನಾದಿ ದ್ವೇಷಿಗಳು ಮಹಾಪಾಪಿಗಳು, ತಮೋಯೋಗ್ಯರು. ಮಿತ್ರರು, ಮಧ್ಯರು, ಸಂಸಾರದಲ್ಲಿರುವವರು ಎಂದು ತಿಳಿಯಬೇಕು. ಹೀಗೆ ಜೀವರು ತ್ರಿವಿಧರೆನಿಸುತ್ತಾರೆ. ಇದಕ್ಕೆ ವ್ಯತ್ಯಾಸವಾಗುವುದಿಲ್ಲ. ಜೀವರಲ್ಲಿ ದೈಹಿಕ ಮತ್ತು ಮಾನಸಿಕ ಚಿಹ್ನೆಗಳಿಂದ ತಾರತಮ್ಯವನ್ನು ತಿಳಿಯಬೇಕು.

ವಿಷ್ಣೋರ್ಲಿಂಗಾನುಸಾರಿತ್ವಾತ್ ತಾರತಮ್ಯಾತ್ ತದೀಕ್ಷಣಮ್ ।
ವಿಷ್ಣೋಸ್ತದನುಗಾನಾಂ ಚ ಪ್ರೀತಿಕೃದ್ ಧರ್ಮ ಈರಿತಃ ॥

ಅಧರ್ಮೋಽನ್ಯ ಇಯಂ ನಿಷ್ಠಾ ಪ್ರಲಾಪಃ ಕಿಂ ಕರಿಷ್ಯತಿ ।
ಏವಮಾದ್ಯನುಶಾಸ್ಯಾಜಃ ಪಾರ್ಥಂ ಪಾರ್ಥೈಃ ಸುಸತ್ಕೃತಃ ॥

'ಈ ದೈಹಿಕ, ಮಾನಸಿಕ ಚಿಹ್ನೆಗಳಿಗೆ ಅನುಗುಣವಾಗಿಯೇ ಶ್ರೀಹರಿ ಅನುಗ್ರಹಿಸುವುದರಿಂದ ಜೀವರನ್ನು ತಾರತಮ್ಯದಿಂದಲೇ ತಿಳಿಯಬೇಕು. ಮತ್ತು ವಿಷ್ಣುವಿಗೂ ಅವನ ಭಕ್ತರಿಗೂ ಸಂತೋಷ ಉಂಟುಮಾಡಬೇಕು. ಇದೇ ಧರ್ಮ. ಬೇರೆ ಎಲ್ಲವೂ ಅಧರ್ಮ. ಇದು ಶಾಸ್ತ್ರನಿರ್ಣಯ. ಪುತ್ರಶೋಕದಿಂದ ಅತ್ತರೆ ಏನು ಫಲ? ಇತ್ಯಾದಿಯಾಗಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿ ಹಸ್ತಿನಾಪುರಕ್ಕೆ ಹೋಗಿ ಅಲ್ಲಿ ಪಾಂಡವರಿಂದ ಬಹಳ ಸತ್ಕಾರ ಹೊಂದಿದ.

ಕಥಂಚಿತ್ ತಾನವಸ್ಥಾಪ್ಯ ಸುದೂರಾನುಗತಾನ್ ಪ್ರಭುಃ ।
ಸುಭದ್ರಾಸಹಿತಃ ಪ್ರಾಯಾದ್ ಯಾನೇನ ದ್ವಾರಕಾಂ ಪುರೀಮ್ ॥

ಬಲುದೂರದವರೆಗೆ ಹಿಂಬಾಲಿಸಿ ಬಂದ ಪಾಂಡವರನ್ನು ಕಷ್ಟದಿಂದ ಹಿಂದೆ ನಿಲ್ಲಿಸಿ ಶ್ರೀಕೃಷ್ಣನು ಸುಭದ್ರಾಸಹಿತನಾಗಿ ರಥದಿಂದ ದ್ವಾರಕಾ ಪಟ್ಟಣಕ್ಕೆ ತೆರಳಿದ.

★ ★ ★ ★ ★

ಹದಿನಾರನೆಯ ಅಧ್ಯಾಯ

ಅರ್ಜುನನು ಕೃಷ್ಣನ ಬಳಿ, ಹಿಂದೆ ಉಪದೇಶ ಮಾಡಿದ ಗೀತೆಯ
ಅರ್ಥವನ್ನು ಪುನಃ ಉಪದೇಶಿಸಲು ಪ್ರಾರ್ಥಿಸಿದುದು.
ಕೃಷ್ಣನು ಅರ್ಜುನನಿಗೆ ತನಗೆ ಬ್ರಾಹ್ಮಣನು ಹೇಳಿದ ಸಿದ್ಧರು
ಮತ್ತು ಕಾಶ್ಯಪರ ಸಂವಾದವನ್ನು ಅನುವಾದಿಸಿದುದು.

ಜನಮೇಜಯಃ

ಸಭಾಯಾಂ ವಸತೋಸ್ತಸ್ಯಾಂ ನಿಹತ್ಯಾರೀನ್ ಮಹಾತ್ಮನೋಃ ।
ಕೇಶವಾರ್ಜುನಯೋಃ ಕಾ ನು ಕಥಾ ಸಮಭವದ್ ದ್ವಿಜ ॥೧॥

ಜನಮೇಜಯ– ಬ್ರಾಹ್ಮಣಶ್ರೇಷ್ಠರೇ, ಮಹಾತ್ಮರಾದ ಕೃಷ್ಣಾರ್ಜುನರು ಇಂದ್ರಪ್ರಸ್ಥದ ದಿವ್ಯಸಭಾಭವನದಲ್ಲಿ ಇದ್ದಾಗ ಪ್ರಸಂಗವಶದಿಂದ ಯಾವ ಮಾತುಕತೆಗಳು ನಡೆದವು?

ವೈಶಂಪಾಯನಃ

ಕೃಷ್ಣೇನ ಸಹಿತಃ ಪಾರ್ಥಃ ಸ್ವರಾಜ್ಯಂ ಪ್ರಾಪ್ಯ ಕೇವಲಮ್ ।
ತಸ್ಯಾಂ ಸಭಾಯಾಂ ರಮ್ಯಾಯಾಂ ವಿಜಹಾರ ಮುದಾ ಯುತಃ ॥೨॥

ವೈಶಂಪಾಯನ– ಜನಮೇಜಯನೇ, ಸಮಸ್ತ ಶತ್ರುಗಳನ್ನು ಸದೆಬಡಿದು, ಸಮಗ್ರ ಸಾಮ್ರಾಜ್ಯವನ್ನು ಧರ್ಮರಾಜನು ಹೊಂದಿದ ನಂತರ ಅರ್ಜುನನು ಕೃಷ್ಣನ ಜೊತೆಗೆ ದಿವ್ಯವಾದ ಸಭಾಮಂಟಪದಲ್ಲಿ ಸಂತೋಷದಿಂದ ವಿಹರಿಸುತ್ತಿದ್ದನು.

ತತಃ ಕಂಚಿತ್ ಸಭೋದ್ದೇಶಂ ಸ್ವರ್ಗೋದ್ದೇಶೋಪಮಂ ನೃಪ ।
ಯದೃಚ್ಛಯಾ ತೌ ಮುದಿತೌ ಜಗ್ಮತುಃ ಸ್ವಜನಾವೃತೌ ॥೩॥

ಹೀಗೆ ಇರಲಾಗಿ ಒಂದು ದಿನ ಅವರಿಬ್ಬರೂ ಬಂಧು-ಬಾಂಧವರಿಂದ ಕೂಡಿದವರಾಗಿ, ಸಂತುಷ್ಟರಾಗಿ ಸ್ವೇಚ್ಛೆಯಿಂದ ಸಂಚರಿಸುತ್ತಾ ಸ್ವರ್ಗಸದೃಶವಾದ ಒಂದು ಸ್ಥಳಕ್ಕೆ ಹೋದರು.

ತತ್ರ ಪ್ರತೀತಃ ಕೃಷ್ಣೇನ ಸಹಿತಃ ಪಾಂಡವೋಽರ್ಜುನಃ ।
ನಿರೀಕ್ಷ್ಯ ತಾಂ ಸಭಾಂ ರಮ್ಯಾಮಿದಂ ವಚನಮಬ್ರವೀತ್ ॥೪॥

ಕೃಷ್ಣನ ಜೊತೆಗೆ ಇರುವ ಅರ್ಜುನನು ಅತಿ ರಮಣೀಯವಾದ ಆ ಸಭಾಭವನವನ್ನು ಕಂಡು ಸಂತುಷ್ಟನಾಗಿ ಈ ಮಾತನ್ನು ಹೇಳಿದನು.

ಅರ್ಜುನಃ

ವಿದಿತಂ ಮೇ ಮಹಾಬಾಹೋ ಸಂಗ್ರಾಮೇ ಸಮುಪಸ್ಥಿತೇ ।
ಮಾಹಾತ್ಮ್ಯಂ ದೇವಕೀಪುತ್ರ ತಚ್ಚ ತೇ ರೂಪಮೈಶ್ವರಮ್ ॥೫॥

ಅರ್ಜುನ– ಮಹಾಬಾಹುವೇ, ದೇವಕೀಪುತ್ರನೇ, ಹಿಂದೆ ಯುದ್ಧವು ಸನ್ನಿಹಿತವಾಗಿದ್ದಾಗ ನಾನು ನಿನ್ನ ಮಾಹಾತ್ಮ್ಯವನ್ನು, ಐಶ್ವರ್ಯಯುಕ್ತವಾದ ರೂಪವನ್ನು ಕಂಡಿದ್ದೇನೆ.

ಯತ್ತು ತದ್ ಭವತಾ ಪ್ರೋಕ್ತಂ ತದಾ ಕೇಶವ ಸೌಹೃದಾತ್ ।
ತತ್ಸರ್ವಂ ಪುರುಷವ್ಯಾಘ್ರ ನಷ್ಟಂ ಮೇ ವ್ಯಗ್ರಚೇತಸಃ ॥೬॥

ಪುರುಷಸಿಂಹನೇ, ಕೇಶವನೇ, ಆ ಸಂದರ್ಭದಲ್ಲಿ ಪೂಜ್ಯನಾದ ನೀನು ನನ್ನ ಮೇಲಿನ ಪ್ರೀತಿಯಿಂದ ಯಾವ ಉಪದೇಶಗಳನ್ನು ಮಾಡಿದೆಯೋ ಅವೆಲ್ಲವೂ ವ್ಯಗ್ರ ಬುದ್ಧಿಯಿಂದ ಮರೆತುಹೋಗಿವೆ.

ಮಮ ಕೌತೂಹಲಂ ತ್ವಸ್ತಿ ತೇಷ್ವರ್ಥೇಷು ಪುನಃ ಪ್ರಭೋ ।
ಭವಾಂಸ್ತು ದ್ವಾರಕಾಂ ಗಂತಾ ನ ಚಿರಾದಿವ ಕೇಶವ ॥೭॥

ಇಂದು ಹಿಂದೆ ಹೇಳಿದ ಆ ವಿಷಯಗಳನ್ನು ಮತ್ತೆ ಮನನ ಮಾಡಬೇಕೆಂಬ ಕುತೂಹಲವೂ ನನ್ನಲ್ಲಿ ಉಂಟಾಗಿದೆ. ನೀನಾದರೋ ಸ್ವಲ್ಪ ಸಮಯದಲ್ಲಿಯೇ ದ್ವಾರಕೆಗೆ ಹೊರಡಲಿರುವಿ. ಆದ್ದರಿಂದ ಯುದ್ಧಕ್ಕೆ ಮೊದಲು ಉಪದೇಶಿಸಿದ ವಿಷಯಗಳನ್ನು ಪುನಃ ಹೇಳಿ ಕೃಪೆ ತೋರು.

ವೈಶಂಪಾಯನಃ

ಏವಮುಕ್ತಸ್ತತಃ ಕೃಷ್ಣಃ ಫಲ್ಗುನಂ ಪ್ರತ್ಯಭಾಷತ ।
ಪರಿಷ್ವಜ್ಯ ಮಹಾತೇಜಾ ವಚನಂ ವದತಾಂ ವರಃ ॥೮॥

ವೈಶಂಪಾಯನ– ಜನಮೇಜಯನೇ, ಅರ್ಜುನನು ಹೀಗೆ ಹೇಳಿದಾಗ ಮಹಾತೇಜಸ್ವಿಯಾದ, ವಾಗ್ಮಿಶ್ರೇಷ್ಠನಾದ ಕೃಷ್ಣನು ಅರ್ಜುನನನ್ನು ಆಲಿಂಗಿಸಿಕೊಂಡು ಹೀಗೆ ಹೇಳಿದನು.

ಶ್ರೀಭಗವಾನ್

ಶ್ರಾವಿತಸ್ತ್ವಂ ಮಯಾ ಗುಹ್ಯಂ ಜ್ಞಾಪಿತಶ್ಚ ಸನಾತನಮ್ ।
ಧರ್ಮಸ್ವರೂಪಿಣಂ ಪಾರ್ಥ ಸರ್ವಲೋಕಾಂಶ್ಚ ಶಾಶ್ವತಾನ್ ॥೯॥

ಶ್ರೀಭಗವಾನ್– ಅರ್ಜುನನೇ, ನಾನು ಹಿಂದೆ ಅತ್ಯಂತ ರಹಸ್ಯವಾದ, ಸನಾತನವಾದ ಜ್ಞಾನದ ಸ್ವರೂಪವನ್ನು, ಧರ್ಮಸ್ವರೂಪವನ್ನು, ಪುರುಷೋತ್ತಮನ ತತ್ತ್ವವನ್ನು, ಶಾಶ್ವತಗಳಾದ ಲೋಕದ ಮಹಿಮೆಗಳನ್ನು ಹೇಳಿದ್ದೇನೆ.

ಅಬುದ್ಧ್ಯಾ ಯನ್ನ ಗೃಹ್ಣೀಥಾಸ್ತನ್ಮೇ ಸುಮಹದಪ್ರಿಯಮ್ ।
ನೂನಮಶ್ರದ್ದಧಾನೋಽಸಿ ದುರ್ಮೇಧಾಶ್ಚಾಸಿ ಪಾಂಡವ ॥೧೦॥

ಆದರೆ ನಿನ್ನ ತಿಳಿಗೇಡಿತನದಿಂದ ಅಂತಹ ಪರತತ್ವವನ್ನು ಗ್ರಹಿಸದೆ ನೀನು ನನಗೆ ಅಸಮಾಧಾನವನ್ನೇ ಉಂಟುಮಾಡಿರುವೆ. ಅಶ್ರದ್ಧೆಯನ್ನು ಹೊಂದಿದ ನೀನು ಉತ್ಕೃಷ್ಟವಾದ ಬುದ್ಧಿಯನ್ನು ಹೊಂದಲಿಲ್ಲ.

ಸ ಹಿ ಧರ್ಮಃ ಸುಪರ್ಯಾಪ್ತೋ ಬ್ರಹ್ಮಣಃ ಪದವೇದನೇ ।
ನ ಶಕ್ಯಂ ತನ್ಮಯಾ ಭೂಯಸ್ತಥಾ ವಕ್ತುಮಶೇಷತಃ ॥೧೧॥

ಭಗವಂತನ ಸ್ವರೂಪವನ್ನು ತಿಳಿಸುವುದರಲ್ಲಿ ಹಿಂದೆ ಉಪದೇಶಿಸಿದ ಗೀತಾಧರ್ಮವು ಪರಿಪೂರ್ಣವಾಗಿದ್ದಿತು. ಆ ಗೀತೆಯನ್ನು ಪುನಃ ಸಮಗ್ರವಾಗಿ ನನ್ನಿಂದಲೂ ಉಪದೇಶಿಸಲು ಸಮಯವಿಲ್ಲ.

ಪರಂ ಹಿ ಬ್ರಹ್ಮ ಕಥಿತಂ ಯೋಗಯುಕ್ತೇನ ತನ್ಮಯಾ ।
ಇತಿಹಾಸಂ ತು ವಕ್ಷ್ಯಾಮಿ ತಸ್ಮಿನ್ನರ್ಥೇ ಪುರಾತನಮ್ ॥೧೨॥

ನಾನು ಪರಬ್ರಹ್ಮನ ತತ್ವವನ್ನು ಯೋಗಯುಕ್ತವಾದ ಮನಸ್ಸಿನಿಂದ ಹೇಳಿದ್ದೆನು. ಆದರೆ ಅದೇ ಪರತತ್ವದ ವಿಷಯವಾಗಿ ಒಂದು ಪುರಾತನವಾದ ಇತಿಹಾಸವನ್ನು ಹೇಳುತ್ತೇನೆ.

ಯಥಾ ತಾಂ ಬುದ್ಧಿಮಾಸ್ಥಾಯ ಗತಿಮಗ್ರ್ಯಾಂ ಗಮಿಷ್ಯಸಿ ।
ಶೃಣು ಧರ್ಮಭೃತಾಂ ಶ್ರೇಷ್ಠ ಗದತಃ ಸರ್ವಮೇವ ಮೇ ॥೧೩॥

ನಾನು ಹೇಳಿದ ಈ ಇತಿಹಾಸವನ್ನು ಸರಿಯಾಗಿ ತಿಳಿದಲ್ಲಿ ಸರಿಯಾದ ಗತಿಯನ್ನು ಹೊಂದುವಿ. ಧರ್ಮವನ್ನು ಧರಿಸುವವರಲ್ಲಿ ಶ್ರೇಷ್ಠನಾದವನೇ, ನಾನು ಹೇಳುವ ವಿಚಾರವನ್ನು ಕೇಳಿಸಿಕೊ.

ಆಗಚ್ಛದ್ ಬ್ರಾಹ್ಮಣಃ ಕಶ್ಚಿತ್ ಸ್ವರ್ಗಲೋಕಾದರಿಂದಮ ।
ಬ್ರಹ್ಮಲೋಕಾಚ್ಚ ದುರ್ಧರ್ಷಃ ಸೋಽಸ್ಮಾಭಿಃ ಪೂಜಿತೋಽವಸತ್ ॥೧೪॥

ಅರಿಂದಮನೇ, ಹಿಂದೆ ಸ್ವರ್ಗಲೋಕದಿಂದ ಒಬ್ಬ ಬ್ರಾಹ್ಮಣನು ಆಗಮಿಸಿದನು. ಬ್ರಹ್ಮಲೋಕದಿಂದ ಆಗಮಿಸಿದ ಆ ಬ್ರಾಹ್ಮಣನು ಸ್ವರ್ಗಲೋಕದಿಂದ ಭೂಮಿಗೆ ಆಗಮಿಸಿ ನನ್ನಿಂದ ಪೂಜಿತನಾಗಿ ನನ್ನ ಬಳಿಯೇ ವಾಸಿಸಿದನು.

ಪರಿಪೃಷ್ಟಶ್ಚ ಸ ತದಾ ಯದಾಹ ದ್ವಿಜಸತ್ತಮಃ ।
ದಿವ್ಯೇನ ವಿಧಿನಾ ಪಾರ್ಥ ತಚ್ಛೃಣುಷ್ವಾವಿಚಾರಯನ್ ॥೧೫॥

ಆ ಬ್ರಾಹ್ಮಣಶ್ರೇಷ್ಠನನ್ನು ನಾನು ಪ್ರಶ್ನಿಸಿದೆನು. ದಿವ್ಯವಾದ ವಿಧಿಯಿಂದ ಕೇಳಿದ ಅವನು ಪ್ರಶ್ನಿಸಿದ, ಉತ್ತರಿಸಿದ ಕ್ರಮವನ್ನು ತಿಳಿಸುವೆನು, ತಿಳಿದುಕೊ.

ಬ್ರಾಹ್ಮಣಃ

ಮೋಕ್ಷಧರ್ಮಂ ಸಮಾಶ್ರಿತ್ಯ ಕೃಷ್ಣ ಯನ್ಮಾಽನುಪೃಚ್ಛಸಿ ।
ಭೂತಾನಾಮನುಕಂಪಾರ್ಥಂ ಮನ್ಮೋಹಚ್ಛೇದನಂ ಪ್ರಭೋ ॥೧೬॥

ಬ್ರಾಹ್ಮಣ– ಮೋಕ್ಷಧರ್ಮವನ್ನು ಆಶ್ರಯಿಸಿ ಕೃಷ್ಣನೇ, ಯಾವ ವಿಚಾರವನ್ನು ನನ್ನ ಬಳಿ ಕೇಳಿದ್ದೀಯೋ ಈ ನಿನ್ನ ಪ್ರಶ್ನೆಯು ಸಮಗ್ರ ಜಗತ್ತಿನ ಮೇಲಿನ ಕರುಣೆಯಿಂದ ನನ್ನ ಅಜ್ಞಾನವನ್ನು ಪರಿಹರಿಸುವ ದೃಷ್ಟಿಯಿಂದ ಎಂದು ತಿಳಿದಿದ್ದೇನೆ.

ತತ್ ತೇಽಹಂ ಸಂಪ್ರವಕ್ಷ್ಯಾಮಿ ಯಥಾವನ್ಮಧುಸೂದನ ।
ಶೃಣುಷ್ವಾವಹಿತೋ ಭೂತ್ವಾ ಗದತೋ ಮಮ ಮಾಧವ ॥೧೭॥

ನೀನು ಕೇಳಿದ ಪ್ರಶ್ನೆಗೆ ನಾನು ತಿಳಿದಂತೆ, ಮಧುಸೂದನನೇ ಉತ್ತರಿಸುತ್ತೇನೆ. ನಾನು ಹೇಳುವ ಮಾತುಗಳನ್ನು ಮಾಧವನೇ ಏಕಾಗ್ರತೆಯಿಂದ ಕೇಳಿಸಿಕೊ.

ಕಶ್ಚಿದ್ ವಿಪ್ರಸ್ತಪೋಯುಕ್ತಃ ಕಾಶ್ಯಪೋ ನಾಮ ಧರ್ಮವಿತ್ ।
ಆಸಸಾದ ದ್ವಿಜಂ ಕಂಚಿದ್ ಧರ್ಮಾಣಾಮಾಗಮಾಗಮಮ್ ॥೧೮॥

ಹಿಂದೊಮ್ಮೆ ತಪೋಯುಕ್ತನಾದ, ವೇದವೇತ್ಯನಾದ, ಕಶ್ಯಪನೆಂಬ ಹೆಸರಿನ ಬ್ರಾಹ್ಮಣನು ಧರ್ಮದ ವಿಷಯದಲ್ಲಿ ಶಾಸ್ತ್ರಗಳಲ್ಲಿ ಹೇಳಿದ ರಹಸ್ಯಗಳನ್ನು ಸಮಗ್ರವಾಗಿ ಅರಿತಿದ್ದನು.

ಗತಾಗಮಂ ಸುಬಹುಶೋ ಜ್ಞಾನವಿಜ್ಞಾನಪಾರಗಮ್ ।
ಲೋಕತತ್ತ್ವಾರ್ಥಕುಶಲಂ ಜ್ಞಾತಾರಂ ಸುಖದುಃಖಯೋಃ ॥೧೯॥

ಹಿಂದೆ ಆಗಿದ್ದು, ಮುಂದೆ ಆಗುವುದನ್ನೂ ತಿಳಿದಿದ್ದ, ಜ್ಞಾನ-ವಿಜ್ಞಾನಗಳಲ್ಲಿ ಪ್ರವೀಣನಾಗಿದ್ದ, ಲೋಕತತ್ತ್ವಗಳಲ್ಲಿ ಕುಶಲನಾಗಿದ್ದ, ಸುಖ-ದುಃಖಗಳ ರಹಸ್ಯಗಳನ್ನು ಬಲ್ಲವನಾಗಿದ್ದ.

ಜಾತಿಸ್ಮರಣತತ್ತ್ವಜ್ಞಂ ಕೋವಿದಂ ಪಾಪಪುಣ್ಯಯೋಃ ।
ದ್ರಷ್ಟಾರಮುಚ್ಚನೀಚಾನಾಂ ಕರ್ಮಭಿರ್ದೇಹಿನಾಂ ಗತಿಮ್ ॥೨೦॥

ಹುಟ್ಟು-ಸಾವುಗಳ ರಹಸ್ಯವನ್ನು ತಿಳಿದ, ಪುಣ್ಯ-ಪಾಪಗಳ ಮರ್ಮವನ್ನು ಅರಿತ, ಉಚ್ಚ-ನೀಚ ಪ್ರಾಣಿಗಳ ಕರ್ಮಾನುಗುಣವಾಗಿ ಗತಿಯ ಕ್ರಮವನ್ನು ತಿಳಿದಿದ್ದ ಒಬ್ಬ ಬ್ರಾಹ್ಮಣ ಶ್ರೇಷ್ಠನನ್ನು ಸಂಧಿಸಿದನು.

ಚರಂತಂ ಮುಕ್ತವತ್ ಸಿದ್ಧಂ ಪ್ರಶಾಂತಂ ಸಂಯತೇಂದ್ರಿಯಮ್ ।
ದೀಪ್ಯಮಾನಂ ಶ್ರಿಯಾ ಬ್ರಾಹ್ಮ್ಯಾ ಕ್ರಮಮಾಣಂ ಚ ಸರ್ವಶಃ ॥೨೧॥

ಸಂಸಾರದಿಂದ ಮುಕ್ತನಾದವನಂತಿರುವ, ಎಲ್ಲ ಕಡೆಯೂ ಸ್ವಚ್ಛಂದವಾಗಿ ಸಂಚರಿಸುವಂತಿದ್ದ, ಪ್ರಶಾಂತ ಮನಸ್ಕನಾದ, ಜಿತೇಂದ್ರಿಯನಾದ, ದೇದೀಪ್ಯಮಾನವಾದ ಬ್ರಹ್ಮಕಾಂತಿಯಿಂದ ಎಲ್ಲಕಡೆಯಲ್ಲಿಯೂ ಸಂಚರಿಸುವ ಸಿದ್ಧ ಪುರುಷನು ಆತನು.

ಅಂತರ್ಧಾನಗತಿಜ್ಞಂ ಚ ಶ್ರುತ್ವಾ ತತ್ತ್ವೇನ ಕಾಶ್ಯಪಃ ।
ತಥೈವಾಂತರ್ಹಿತೈಃ ಸಿದ್ಧೈರ್ಯಾತ ಚಕ್ರಧರೈಃ ಸಹ ॥೨೨॥

ಅವನು ಅಂತರ್ಧಾನಶಕ್ತಿಯನ್ನು ಹೊಂದಿದ್ದನು. ಅದೃಶ್ಯರಾಗಿರುವ, ಶಂಖ-ಚಕ್ರಧಾರಿಗಳಾದ ವೈಷ್ಣವರ ಜೊತೆಗೆ ಸಂಚರಿಸುತ್ತಾ, ಅವರೊಡನೆ ಏಕಾಂತದಲ್ಲಿ ಸಂಭಾಷಣೆಯನ್ನು ಮಾಡುತ್ತಿದ್ದನು.

ಸಂಭಾಷಮಾಣಮೇಕಾಂತೇ ಸಮಾಸೀನಂ ಚ ತೈಃ ಸಹ ।
ಯದೃಚ್ಛಯಾ ಚ ಗಚ್ಛಂತಮಸಕ್ತಂ ಪವನಂ ಯಥಾ ॥೨೩॥

ಹೀಗೆ ಏಕಾಂತದಲ್ಲಿ ವಿಷ್ಣುಭಕ್ತರ ಜೊತೆಗೆ ಕುಳಿತುಕೊಂಡು ಸಂಭಾಷಣೆಯನ್ನು ಮಾಡುತ್ತಿರುವ, ಯದೃಚ್ಛೆಯಿಂದ ಸಂಚರಿಸುವಂತಹ, ನಿರ್ಲಿಪ್ತವಾದ ವಾಯುವಿನಂತಿರುವ ಸಿದ್ಧಪುರುಷನನ್ನು ಕಶ್ಯಪನು ನೋಡಿದನು.

ತಂ ಸಮಾಸಾದ್ಯ ಮೇಧಾವೀ ಸ ತದಾ ದ್ವಿಜಸತ್ತಮಃ ।
ಚರಣೌ ಧರ್ಮಕಾಮೋ ವೈ ಸ ತಸ್ಯ ಸುಸಮಾಹಿತಃ ॥೨೪॥

ಪ್ರತಿಪೇದೇ ಯಥಾನ್ಯಾಯಂ ಭಕ್ಯಾ ಪರಮಯಾ ಯುತಃ ॥೨೫॥

ಮೇಧಾವಿಯಾದ, ದ್ವಿಜಶ್ರೇಷ್ಠನಾದ, ಧರ್ಮಕಾಮನಾದ, ತಪಸ್ವಿಯಾದ ಕಾಶ್ಯಪನು ಸಿದ್ಧಪುರುಷನ ಬಳಿ ಹೋಗಿ, ಯಥಾವಿಧಿಯಾಗಿ ಬುದ್ಧಿಯನ್ನು ನಿಗ್ರಹಿಸಿಕೊಂಡು, ಅವನ ಕಾಲುಗಳಿಗೆ ಭಕ್ತಿಯಿಂದ ಎರಗಿದನು.

ವಿಸ್ಮಿತಶ್ಚಾದ್ಭುತಂ ದೃಷ್ಟ್ವಾ ಕಾಶ್ಯಪಸ್ತಂ ದ್ವಿಜೋತ್ತಮಮ್ ।
ಪರಿಚಾರೇಣ ಮಹತಾ ಗುರುಂ ವೈ ಪರ್ಯತೋಷಯತ್ ॥೨೬॥

ಬ್ರಾಹ್ಮಣಶ್ರೇಷ್ಠನಾದ ಸಿದ್ಧಪುರುಷನು ಅದ್ಭುತವಾದ ತೇಜಸ್ಸಿನಿಂದ ಕೂಡಿದ ಸಂತನಾಗಿದ್ದನು. ಇಂತಹ ಗುರುವನ್ನು ಹೊಂದಿದ ಕಾಶ್ಯಪನು ಪರಮಗುರುವೇ ದೊರೆತನೆಂದು ಸಂತುಷ್ಟನಾದನು.

ಉಪಸನ್ನಶ್ಚ ಧರ್ಮಾತ್ಮಾ ಶ್ರುತಚಾರಿತ್ರಸಂಯುತಃ ।
ಭಾವೇನಾತೋಷಯತ್ ತಂ ವೈ ಗುರುವೃತ್ತಿಂ ಸಮಾಶ್ರಿತಃ ॥೨೭॥

ಸರ್ವಗುಣಗಳಿಂದಲೂ ಪೂರ್ಣನಾದ, ವಿದ್ಯೆ-ಚಾರಿತ್ರ್ಯಸಂಪನ್ನನಾದ ಸಿದ್ಧಪುರುಷನ ದರ್ಶನದಿಂದಲೇ ವಿಸ್ಮಿತನಾದ ಕಾಶ್ಯಪನು ಅವನನ್ನೇ ಗುರುವನ್ನಾಗಿ ಮಾಡಿಕೊಂಡು, ಅವನ ಸೇವಾನಿರತನಾದನು. ತನ್ನ ಶುಶ್ರೂಷೆಯಿಂದ, ಗುರುಭಕ್ತಿಯಿಂದ ಅವನನ್ನು ಸಂತೋಷಪಡಿಸಿದನು.

ತಸ್ಮೈ ತುಷ್ಟಃ ಸ ಶಿಷ್ಯಾಯ ಯತ್ ಪ್ರಸನ್ನೋಽಬ್ರವೀದ್ ಗುರುಃ ।
ಸಿದ್ಧಿಂ ಪರಾಮಭಿಪ್ರೇಕ್ಷ್ಯ ಶೃಣು ತನ್ಮೇ ಜನಾರ್ದನ ॥೨೮॥

ಜನಾರ್ದನನೇ, ಕಾಶ್ಯಪನ ವಿಷಯದಲ್ಲಿ ಸಂತುಷ್ಟನಾದ ಸಿದ್ಧಪುರುಷನು ಶಿಷ್ಯನಿಗೆ ಉತ್ಕೃಷ್ಟವಾದ ಸಿದ್ಧಿಯ ವಿಷಯವಾಗಿ ಉಪದೇಶ ಮಾಡಿದ ವಿಷಯವನ್ನೇ ನಿನಗೆ ಹೇಳುತ್ತೇನೆ, ಕೇಳಿಸಿಕೊ.

ಸಿದ್ಧಃ

ವಿವಿಧೈಃ ಕರ್ಮಭಿಸ್ತಾತ ಪುಣ್ಯಯೋಗೈಶ್ಚ ಕೇವಲೈಃ ।
ಗಚ್ಛಂತೀಹ ಗತಿಂ ಮರ್ತ್ಯಾ ದೇವಲೋಕೇ ಚ ವಾ ಸ್ಥಿತಿಮ್ ॥೨೯॥

ಸಿದ್ಧಪುರುಷ– ಮಗು ಕಶ್ಯಪನೇ, ಮನುಷ್ಯರು ನಾನಾ ವಿಧವಾದ ಕರ್ಮಗಳನ್ನು ಅನುಷ್ಠಾನ ಮಾಡಿ, ಆ ಕರ್ಮಗಳ ಪುಣ್ಯದ ಫಲವನ್ನು ಹೊಂದಿ, ಉತ್ತಮ ಲೋಕಗಳನ್ನು, ದೇವಲೋಕದಲ್ಲಿ ಸ್ಥಾನವನ್ನೂ ಪಡೆದುಕೊಳ್ಳುತ್ತಾರೆ.

ನ ಕ್ವಚಿತ್ ಸುಖಮತ್ಯಂತಂ ನ ಕ್ವಚಿಚ್ಚಾಶ್ವತೀ ಸ್ಥಿತಿಃ ।
ಸ್ಥಾನಾಚ್ಚ ಮಹತೋ ಭ್ರಂಶೋ ದುಃಖಿಲಬ್ಧಾದ್ ಪುನಃ ಪುನಃ ॥೩೦॥

ಇಷ್ಟಾದರೂ ಜೀವನಿಗೆ ಯಾವ ಲೋಕಗಳಲ್ಲಿಯೂ ಶಾಶ್ವತವಾದ ಸುಖವು ದೊರೆಯುವುದಿಲ್ಲ. ಯಾವ ಲೋಕಗಳೂ ಅವನಿಗೆ ಸ್ಥಿರವಲ್ಲ. ಬಹಳ ಕಷ್ಟದಿಂದ ತಪಸ್ಸು ಮಾಡಿ ಸಂಪಾದಿಸಿದ ಶ್ರೇಷ್ಠ ಲೋಕಗಳು ಅಸ್ಥಿರವಾಗಿವೆ. ಅಲ್ಲಿಂದ ಜೀವನು ಪುನಃ ಕೆಳಗಿಳಿಯುತ್ತಾನೆ.

ಅಶುಭಾ ಗತಯಃ ಪ್ರಾಪ್ತಾಃ ಕಷ್ಟಾ ಮೇ ಪಾಪಸೇವನಾತ್ ।
ಕಾಮಮನ್ಯುಪರೀತೇನ ತೃಷ್ಣಯಾ ಮೋಹಿತೇನ ಚ ॥೩೧॥

ಕಾಮ-ಕ್ರೋಧಗಳಿಂದ ಕೂಡಿರುವ, ಆಸೆಯಿಂದ ಮೋಹಿತನಾದ, ಪಾಪ ಕರ್ಮಗಳನ್ನೇ ಆಶ್ರಯಿಸಿದ ಕಾರಣದಿಂದ ಅಶುಭ ಗತಿಗಳು ನನಗೆ ಉಂಟಾದವು.

ಪುನಃ ಪುನಶ್ಚ ಮರಣಂ ಜನ್ಮ ಚೈವ ಪುನಃ ಪುನಃ ।
ಆಹಾರಾ ವಿವಿಧಾ ಭುಕ್ತಾಃ ಪೀತಾ ನಾನಾವಿಧಾಃ ಸ್ತನಾಃ ॥೩೨॥

ಪುನಃ ಪುನಃ ಜನನ-ಮರಣಗಳನ್ನು ಹೊಂದುತ್ತಲೇ ಇದ್ದೆನು. ಅನೇಕ ಜನ್ಮಗಳಲ್ಲಿ ಬಗೆಬಗೆಯ ಆಹಾರಗಳನ್ನು ಸೇವಿಸಿ, ಅನೇಕ ತಾಯಂದಿರ ಸ್ತನ್ಯಗಳನ್ನು ಪಾನ ಮಾಡುತ್ತಿದ್ದೆನು.

ಮಾತರೋ ವಿವಿಧಾ ದೃಷ್ಟಾಃ ಪಿತರಶ್ಚ ಪೃಥಗ್ ವಿಧಾಃ ।
ಸುಖಾನಿ ಚ ವಿಚಿತ್ರಾಣಿ ದುಃಖಾನಿ ಚ ಮಯಾऽನಘ ॥೩೩॥

ಅನಘನೇ, ಇಲ್ಲಿಯ ತನಕ ಅನೇಕ ತಾಯಂದಿರನ್ನು ನೋಡಿದ್ದೇನೆ. ನಾನಾ ವಿಧವಾದ ಸ್ವಭಾವಗಳಿಂದ ಕೂಡಿದ ತಂದೆಗಳನ್ನೂ ಕಂಡಿದ್ದೇನೆ. ಚಿತ್ರ-ವಿಚಿತ್ರ ಸುಖಗಳನ್ನು ಅನುಭವಿಸಿದ್ದೇನೆ.

ಪ್ರಿಯೈರ್ವಿವಾಸೋ ಬಹುಶಃ ಸಂವಾಸಶ್ಚಾಪ್ರಿಯೈಃ ಸಹ ।
ಧನನಾಶಶ್ಚ ಸಂಪ್ರಾಪ್ತೋ ಲಬ್ಧ್ವಾ ದುಃಖೇನ ತದ್ಧನಮ್ ॥೩೪॥

ಹಲವು ಬಾರಿ ಪ್ರೀತಿಪಾತ್ರರಾದವರ ವಿಯೋಗವನ್ನು ಅನೇಕ ಜನ್ಮಗಳಲ್ಲಿ ಹೊಂದಿದ್ದೇನೆ. ಅಪ್ರಿಯವಾದವರ ಸಹವಾಸವನ್ನೂ ಮಾಡಿದ್ದೇನೆ. ಬಹಳ ದುಃಖದಿಂದ ಸಂಪಾದಿಸಿದ ಧನವು ನನ್ನ ಕಣ್ಣಮುಂದೆಯೇ ನಾಶ ಹೊಂದಿದೆ.

ಅವಮಾನಾಃ ಸುಕಷ್ಟಾಶ್ಚ ಪರತಃ ಸ್ವಜನಾತ್ ತಥಾ ।
ಶಾರೀರಾ ಮಾನಸಾಶ್ಚಾಪಿ ವೇದನಾ ಭೃಶದಾರುಣಾಃ ॥೩೫॥

ಅವಮಾನಗಳು, ಕಷ್ಟಗಳು ಬಂಧುಜನರಿಂದ ಅನೇಕ ಬಾರಿ ಒದಗಿಬಂದಿವೆ. ಈ ಕಾರಣದಿಂದ ನನ್ನ ಶರೀರಕ್ಕೂ ಮನಸ್ಸಿಗೂ ಅತಿಯಾದ ದಾರುಣ ವೇದನೆಗಳು ಉಂಟಾಗಿವೆ.

ಪತನಂ ನಿರಯೇ ಚೈವ ಯಾತನಾಶ್ಚ ಯಮಕ್ಷಯೇ ।
ಪ್ರಾಪ್ತಾ ವಿಮಾನನಾಶ್ಚೋಗ್ರಾ ವಧಂ ಬಂಧಾಶ್ಚ ದಾರುಣಾಃ ॥೩೬॥

ನರಕಗಳಲ್ಲಿ ಬಿದ್ದಿದ್ದೇನೆ. ಅನೇಕ ಯಾತನೆಗಳನ್ನು ಅನುಭವಿಸಿದ್ದೇನೆ. ಎಷ್ಟೋ ಬಾರಿ ಅವಮಾನ ಹೊಂದಿದ್ದೇನೆ. ಪ್ರಾಣದಂಡಕ್ಕೆ ತುತ್ತಾಗಿದ್ದೇನೆ. ದಾರುಣವಾದ ಬಂಧನಗಳಿಗೂ ತುತ್ತಾಗಿದ್ದೇನೆ.

ಜರಾ ರೋಗಾಶ್ಚ ಸತತಂ ವ್ಯಸನಾನಿ ಚ ಭೂರಿಶಃ ।
ಲೋಕೇಽಸ್ಮಿನ್ನನುಭೂತಾನಿ ದ್ವಂದ್ವಜಾನಿ ಭೃಶಂ ಮಯಾ ॥೩೭॥

ನಿರಂತರವೂ ಅನೇಕ ಜನ್ಮಗಳನ್ನು ತಾಳಿ ಮುಪ್ಪಿನಿಂದ, ರೋಗಗಳಿಂದ ಬಳಲಿದ್ದೇನೆ. ವ್ಯಸನಗಳನ್ನೂ ಅನುಭವಿಸಿದ್ದೇನೆ. ಸುಖ-ದುಃಖಗಳ ದ್ವಂದ್ವಗಳನ್ನು ಅನುಭವಿಸಿದ್ದೇನೆ.

ತತಃ ಕದಾಚಿನ್ನಿರ್ವೇದಾನ್ನಿರಾಕಾರಾಶ್ರಿತೇನ ಚ ।
ಲೋಕತಂತ್ರಂ ಪರಿತ್ಯಕ್ತಂ ದುಃಖಾರ್ತೇನ ಭೃಶಂ ಮಯಾ ॥೩೮॥

ಹೀಗೆ ಇರುತ್ತಿರುವಾಗ ಅತ್ಯಂತ ನಿರಾಸೆಯನ್ನು ಹೊಂದಿದ ನಾನು ರಹಸ್ಯನಾದ, ಅವ್ಯಕ್ತ ಸ್ವಭಾವನಾದ ಪರಮಾತ್ಮನನ್ನು ಆಶ್ರಯಿಸಿದೆನು. ಅತ್ಯಂತ ದುಃಖಪೀಡಿತನಾದ ನಾನು ಶೋಕವ್ಯವಹಾರವನ್ನೇ ಪೂರ್ಣವಾಗಿ ತ್ಯಜಿಸಿದೆನು.

ತತಃ ಸಿದ್ಧಿರಿಯಂ ಪ್ರಾಪ್ತಾ ಪ್ರಸಾದಾದಾತ್ಮನೋ ಮಯಾ ॥೩೯॥

ನಾಹಂ ಪುನರಿಹಾಗಂತಾ ಲೋಕಾನಾಲೋಕಯಾಮ್ಯಹಮ್ ॥೪೦॥

ಆ ಬ್ರಹ್ಮತತ್ವವನ್ನು ಆಶ್ರಯಿಸಿದ ಕಾರಣದಿಂದ ಅವನ ಅನುಗ್ರಹವನ್ನು ಪಡೆದು ಈ ಸಿದ್ಧಿಯನ್ನು ಪಡೆದುಕೊಂಡಿದ್ದೇನೆ. ನಾನು ಪುನಃ ಇನ್ನು ಮುಂದೆ ಸಂಸಾರಕ್ಕೆ ಬರುವವನಲ್ಲ.

ಆಸಿದ್ದೇರಾಪ್ರಜಾಸರ್ಗಾದಾತ್ಮನೋಽಪಿ ಗತೀಃ ಶುಭಾಃ ।
ಉಪಲಬ್ಧಾ ದ್ವಿಜಶ್ರೇಷ್ಠ ತಥೇಯಂ ಸಿದ್ಧಿರುತ್ತಮಾ ॥೪೧॥

ಎಲ್ಲಿಯ ತನಕ ಸೃಷ್ಟಿಕಾರ್ಯವು ನಡೆಯುತ್ತಲೇ ಇರುತ್ತದೋ, ನಾನು, ನನ್ನ ಮತ್ತು ಇತರ ಜೀವರ ಶುಭಗತಿಯನ್ನು ನೋಡುತ್ತಲೇ ಇರುತ್ತೇನೆ. ಇಂತಹ ಉತ್ತಮ ಸಿದ್ಧಿಯು ಭಗವಂತನ ಅನುಗ್ರಹದಿಂದ ನನಗೆ ಪ್ರಾಪ್ತವಾಗಿದೆ.

ಇತಃ ಪರಂ ಗಮಿಷ್ಯಾಮಿ ತತಃ ಪರತರಂ ಮಹತ್ ।
ಬ್ರಹ್ಮಣಃ ಪದಮವ್ಯಗ್ರಂ ಮಾಂ ತೇಽಭೂದತ್ರ ಸಂಶಯಃ ॥೪೨॥

ಇಂದು ಆ ಭಗವಂತನ ಅನುಗ್ರಹದಿಂದ ಉತ್ತಮ ಸಿದ್ಧಿಯು ಪ್ರಾಪ್ತವಾಗಿದೆ. ಲೋಕಯಾತ್ರೆಯನ್ನು ಮುಗಿಸಿ ಇದಕ್ಕಿಂತಲೂ ಉತ್ತಮವಾದ ಲೋಕಕ್ಕೆ ಹೋಗುತ್ತೇನೆ. ಗುಣಪರಿಪೂರ್ಣನಾದ, ಯಾವ ದೋಷಗಳೂ ಇಲ್ಲದ ಭಗವಂತನ ಸ್ಥಾನವನ್ನು ಹೊಂದುತ್ತೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ನಾಹಂ ಪುನರಿಹಾಗಂತಾ ಮರ್ತ್ಯಲೋಕಂ ದ್ವಿಜೋತ್ತಮ ।
ಪ್ರೀತೋಽಸ್ಮಿ ತೇ ಮಹಾಪ್ರಾಜ್ಞ ಬ್ರೂಹಿ ಕಿಂ ಕರವಾಣಿ ತೇ ॥೪೩॥

ಪುನಃ ಈ ಲೋಕಕ್ಕೆ ನಾನು ಮರಳಿ ಬರುವುದಿಲ್ಲ. ನಿನ್ನ ವಿಷಯದಲ್ಲಿ ಪ್ರೀತನಾಗಿದ್ದೇನೆ. ಏನು ಮಾಡಲಿ? ಹೇಳು.

ಯದೀಪ್ಸರೂಪಸಂಪನ್ನಂ ತಸ್ಯ ಕಾಲೋಽಯಮಾಗತಃ ।
ಅಭಿಜಾನೇ ಚ ತದಹಂ ಯದರ್ಥಂ ಮಾಂ ತ್ವಮಾಗತಃ ॥೪೪॥

ಅಚಿರಾತ್ ತು ಗಮಿಷ್ಯಾಮಿ ಯೇನಾಹಂ ತ್ವಾಮಚೂಚುದಮ್ ॥೪೫॥

ನೀನು ಯಾವ ವಸ್ತುವನ್ನು ಹೊಂದಲು ಅಪೇಕ್ಷಿಸಿ ನನ್ನ ಬಳಿ ಬಂದಿರುವೆಯೋ ಆ ವಸ್ತುವನ್ನು ಪಡೆದುಕೊಳ್ಳಲು ಈಗ ಯೋಗ್ಯವಾದ ಕಾಲವಾಗಿದೆ. ನೀನು ಯಾವ

ಉದ್ದೇಶದಿಂದ ಬಂದಿರುವಿ ಎಂಬುದನ್ನು ನಾನು ತಿಳಿದಿದ್ದೇನೆ. ನಾನು ಇಲ್ಲಿ ಹೆಚ್ಚು ಸಮಯ ಇರುವುದಿಲ್ಲ. ಆದ್ದರಿಂದ ಬೇಕಾದ್ದನ್ನು ಪ್ರಾರ್ಥಿಸು, ನೀಡುತ್ತೇನೆ.

ಭೃಶಂ ಪ್ರೀತೋಽಸ್ಮಿ ಭವತಃ ಚಾರಿತ್ರೇಽಥ ವಿಚಕ್ಷಣ ।
ಪರಿಪೃಚ್ಛ ಯಾವದ್ ಭವತೋ ಭಾಷೇ ಯದ್ಯತ್ ತವೇಪ್ಸಿತಮ್ ॥೪೬॥

ವಿದ್ವಾಂಸನೇ, ನಿನ್ನ ಉತ್ತಮವಾದ ಆಚರಣೆಯಿಂದ ಬಹಳ ಸಂತುಷ್ಟನಾಗಿದ್ದೇನೆ. ನಿನ್ನ ಶ್ರೇಯಸ್ಸಿನ ವಿಷಯವಾಗಿ ಪ್ರಶ್ನಿಸು. ಇಷ್ಟವಾದ ನಿನ್ನ ಪ್ರಶ್ನೆಗೆ ಉತ್ತರಿಸುತ್ತೇನೆ.

ಬಹು ಮನ್ಯೇ ಚ ಬುದ್ಧಿಂ ತೇ ಭೃಶಂ ಸಂಪೂಜಯಾಮಿ ಚ ।
ಯೇನಾಹಂ ಭವತಾ ಬುದ್ಧೋ ಮೇಧಾವೀ ಹ್ಯಸಿ ಕಾಶ್ಯಪ ॥೪೭॥

ಕಾಶ್ಯಪನೇ, ನಾನು ನಿನ್ನ ಸಾತ್ವಿಕವಾದ ಶ್ರದ್ಧೆ, ಬುದ್ಧಿಯನ್ನು ಸನ್ಮಾನಿಸುತ್ತೇನೆ. ಕಾರಣ ನಾನು ಅತ್ಯಂತ ನಿಗೂಢನಾಗಿ ಸಂಚರಿಸುತ್ತಿದ್ದರೂ ನನ್ನನ್ನು ನೀನು ಗುರುತಿಸಿದ್ದಿ. ನಿಶ್ಚಯವಾಗಿಯೂ ನೀನು ಮೇಧಾವಿಯಾಗಿರುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಕಾಶ್ಯಪಬ್ರಾಹ್ಮಣಸಮಾಗಮೋ ನಾಮ ಷೋಡಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹದಿನಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಬ್ರಾಹ್ಮಣನು ಕೃಷ್ಣನನ್ನು ಕುರಿತು ಸಕಲ ಪ್ರಾಣಿಗಳ ಜನನ-ಮರಣಾದಿ ಪ್ರತಿಪಾದಕವಾದ ಸಿದ್ಧ-ಕಾಶ್ಯಪರ ಸಂವಾದವನ್ನು ಅನುವಾದಿಸಿದುದು.

ವಾಸುದೇವಃ

ತತಸ್ತಸ್ಯೋಪಸಂಗೃಹ್ಯ ಪಾದೌ ಸ ದ್ವಿಜಸತ್ತಮಃ ।
ಪ್ರಶ್ನಾಂಶ್ಚೈತಾನ್ ಸ ಧರ್ಮಾತ್ಮಾ ಪ್ರಾಹ ಧರ್ಮಭೃತಾಂ ವರಃ ॥೧॥

ವಾಸುದೇವ– ಅರ್ಜುನನೇ, ಸಿದ್ಧಪುರುಷನು ಹೀಗೆ ಹೇಳಿದ ಬಳಿಕ ಶ್ರೇಷ್ಠನಾದ ಬ್ರಾಹ್ಮಣನು ಸಿದ್ಧಪುರುಷನ ಎರಡು ಕಾಲುಗಳನ್ನು ಹಿಡಿದುಕೊಂಡು ನಮಸ್ಕರಿಸಿ ಈ ಪ್ರಶ್ನೆಗಳನ್ನು ಕೇಳಿದನು. ಬುದ್ಧಿವಂತನಾದ ಸಿದ್ಧಪುರುಷನು ಆ ಪ್ರಶ್ನೆಗಳಿಗೆ ಉತ್ತರಿಸಿದನು.

ಕಾಶ್ಯಪಃ

ಕಥಂ ಶರೀರಾಚ್ಚ್ಯವತೇ ಕಥಂ ಚೈವೋಪಪದ್ಯತೇ ।
ಕಥಂ ಕಷ್ಟಾಚ್ಚ ಸಂಸಾರಾತ್ ಸಂಸಾರೀ ಪರಿಮುಚ್ಯತೇ ॥೨॥

ಕಾಶ್ಯಪ– ಮಹಾತ್ಮನೇ, ಈ ಶರೀರವು ಹೇಗೆ ನಾಶ ಹೊಂದುತ್ತದೆ? ಹೇಗೆ ಮತ್ತೆ ಜೀವನಿಗೆ ಸಂಬಂಧವನ್ನು ಹೊಂದುತ್ತದೆ? ಈ ಕಷ್ಟಕರವಾದ ಸಂಸಾರದಿಂದ ಸಂಸಾರಿ ಎನಿಸಿದ ಜೀವನು ಹೇಗೆ ಬಿಡುಗಡೆಯನ್ನು ಹೊಂದುತ್ತಾನೆ?

ಆತ್ಮಾನಂ ವಾ ಕಥಂ ಯುಕ್ತಂ ತಚ್ಛರೀರಂ ವಿಮುಚ್ಯತೇ ।
ಶರೀರೇ ತಚ್ಚ ನಿರ್ಮುಕ್ತೋ ಕಥಮನ್ಯತ್ ಪ್ರಪದ್ಯತೇ ॥೩॥

ಜೀವಾತ್ಮನು ಮೂಲ ಪ್ರಕೃತಿಯಿಂದ ಸೇರಿದ ಈ ಶರೀರವನ್ನು ಹೇಗೆ ಬಿಟ್ಟುಹೋಗುತ್ತಾನೆ? ಶರೀರದಿಂದ ಮುಕ್ತನಾದ ಬಳಿಕ ಮತ್ತೊಂದು ಶರೀರವನ್ನು ಹೊಂದುವ ಬಗೆ ಹೇಗೆ?

ಕಥಂ ಶುಭಾಶುಭೇ ಚಾಯಂ ಕರ್ಮಣೇ ಸಜ್ಜತೇ ನರಃ ।
ಉಪಭುಂಕ್ತೇ ಕ್ವ ವಾ ಕರ್ಮ ಏದೇಹಸ್ಯೋಪತಿಷ್ಠತಿ ॥೪॥

ಜೀವನು ತಾನು ಮಾಡಿದ ಒಳ್ಳೆಯ ಮತ್ತು ಕೆಟ್ಟ ಕರ್ಮಗಳನ್ನು ಹೇಗೆ ಅನುಭವಿಸುತ್ತಾನೆ? ದೇಹವನ್ನು ಬಿಟ್ಟ ಬಳಿಕ ಶರೀರರಹಿತನಾಗಿರುವ ಜೀವನ ಕರ್ಮವು ಎಲ್ಲಿ ಇರುತ್ತದೆ?

ಏವಂ ಸಂಚೋದಿತಃ ಸಿದ್ಧಃ ಪ್ರಶ್ನಾಂಸ್ತಾನ್ ಪ್ರತ್ಯಭಾಷತ ।
ಆನುಪೂರ್ವ್ಯೇಣ ವಾರ್ಷ್ಣೇಯ ಯಥಾ ತನ್ಮೇ ವಚಃ ಶೃಣು ॥೫॥

ಈ ರೀತಿಯಾಗಿ ಕಾಶ್ಯಪನು ಪ್ರಶ್ನಿಸಿದಾಗ ಸಿದ್ಧಪುರುಷನು ಅವನ ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರಿಸಿದನು. ಅದನ್ನೇ ನಿನಗೆ ಹೇಳುತ್ತೇನೆ, ಕೇಳು.

ಸಿದ್ಧಃ

ಅಸ್ಮಿನ್ನೇವಾಶು ಫಲದಾ ಆಯುಷ್ಯಾಸ್ತು ಕ್ರಿಯಾಃ ಸ್ಮೃತಾಃ ।
ಆಯುಃಕೃತ್ಯಕರಾಣೀಹ ಯಾನಿ ಕರ್ಮಾಣಿ ಸೇವತೇ ॥೬॥

ಸಿದ್ಧಪುರುಷ– ಆಯುಷ್ಯವನ್ನು ಅಭಿವೃದ್ಧಿ ಮಾಡುವ ಶುಭಕರ್ಮಗಳನ್ನು ಏನು ಆಚರಿಸುತ್ತಾನೋ ಆ ಶುಭಕರ್ಮಗಳು ಇದೇ ಜನ್ಮದಲ್ಲಿಯೇ ಆಯುಷ್ಯವನ್ನು ಅಭಿವೃದ್ಧಿ ಪಡಿಸುವ ಫಲವನ್ನು ಕೊಡುವ ಶುಭಕರ್ಮಗಳೆಂದು ಪ್ರಸಿದ್ಧವಾಗಿವೆ.

ಶರೀರಗ್ರಹಣೇऽನ್ಯಸ್ಮಿನ್ ತೇಷು ಕ್ಷೀಣೇಷು ಸರ್ವಶಃ ।
ಆಯುಃಕ್ಷಯಪರೀತಾತ್ಮಾ ವಿಪರೀತಾನಿ ಸೇವತೇ ॥೭॥

ಇಂತಹ ಶುಭಕರ್ಮಗಳಿಂದ ಇನ್ನೊಂದು ಶರೀರವನ್ನು ಪಡೆದುಕೊಳ್ಳುತ್ತಾನೆ. ಆ ಶರೀರದಲ್ಲಿ ಮಾಡಿದ ಶುಭಕರ್ಮಗಳು ಕ್ಷಯ ಹೊಂದಿದಾಗ ಆಯುಷ್ಯವು ಕ್ಷೀಣತೆಯನ್ನು ಹೊಂದುತ್ತದೆ. ಅಂತಹ ಅವಸ್ಥೆಯಲ್ಲಿ ವಿಪರೀತವಾದ ಧರ್ಮ ಅಸಮ್ಮತವಾದ ಕರ್ಮಗಳನ್ನೇ ಜೀವನು ಮಾಡುತ್ತಾನೆ.

ಬುದ್ಧಿರ್ವ್ಯಾವರ್ತತೇ ಚಾಸ್ಯ ವಿನಾಶೇ ಪ್ರತ್ಯುಪಸ್ಥಿತೇ ॥೮॥

ವಿನಾಶಕಾಲವು ಸಮೀಪಿಸಿದಾಗ ಜೀವನ ಬುದ್ಧಿಯು ವ್ಯತ್ಯಾಸವನ್ನೇ ಹೊಂದುತ್ತದೆ.

ಸತ್ತ್ವಂ ಬಲಂ ಚ ಕಾಲಂ ಚಾಪ್ಯವಿದಿತ್ವಾऽऽತ್ಮನಸ್ತಥಾ ।
ಅತಿವೇಲಮುಪಾಶ್ನಾತಿ ತೈರ್ವಿರುದ್ಧಾನ್ಯನಾತ್ಮವಾನ್ ॥೯॥

ವಿನಾಶಕಾಲದಲ್ಲಿ ತನ್ನ ಸತ್ವವನ್ನೂ, ಬಲವನ್ನೂ, ಕಾಲವನ್ನೂ ತಿಳಿದವನಾಗಿದ್ದರೂ ಮನೋನಿಗ್ರಹವನ್ನು ತಿಳಿಯದ ಕಾರಣ ಪ್ರಕೃತಿಗೆ ವಿರುದ್ಧವಾದ ವಿಷಯಗಳನ್ನು ಅಧಿಕವಾಗಿ ಸ್ವೀಕರಿಸುತ್ತಾನೆ.

ಯದಾऽಯಮತಿಕಷ್ಟಾನಿ ಸರ್ವಾಣ್ಯುಪನಿಷೇವತೇ ।
ಅತ್ಯರ್ಥಮಪಿ ವಾ ಭುಂಕ್ತೇ ನ ವಾ ಭುಂಕ್ತೇ ಕದಾಚನ ॥೧೦॥

ಮನೋನಿಗ್ರಹವಿಲ್ಲದೆ ಶರೀರಕ್ಕೆ ಹಾನಿಯುಂಟು ಮಾಡುವ ವಿಷಯಗಳನ್ನು ಸೇವಿಸುತ್ತಾನೆ. ಕೆಲವೊಮ್ಮೆ ಅಧಿಕವಾಗಿ ಊಟ ಮಾಡುತ್ತಾನೆ, ಕೆಲವೊಂದು ಸಮಯದಲ್ಲಿ ಏನನ್ನೂ ತಿನ್ನದೆ ಇರುತ್ತಾನೆ.

ದುಷ್ಟಾನ್ನಂ ವಿಷಮಾನ್ನಂ ವಾ ಸಾತ್ವತೇನ ವಿರೋಧಿ ಚ ।
ಗುರು ವಾऽಪಿ ಸಮಂ ಭುಂಕ್ತೇ ನಾತಿಜೀರ್ಣೇऽಪಿ ವಾ ಪುನಃ ॥೧೧॥

ಕೆಲವೊಮ್ಮೆ ದೂಷಿತವಾದ ನಿಷಿದ್ಧವಾದ ಅನ್ನ ಉಣ್ಣುವ ಕೆಲವೊಮ್ಮೆ ಹಳಸಿದ ಅನ್ನವನ್ನು ತಿನ್ನುತ್ತಾನೆ. ಕೆಲವೊಮ್ಮೆ ಶಾಸ್ತ್ರವಿರುದ್ಧವಾದ ಅನ್ನವನ್ನು ಉಣ್ಣುತ್ತಾನೆ. ಕೆಲವೊಮ್ಮೆ ಜೀರ್ಣವಾಗದ ಆಹಾರವನ್ನು ಸ್ವೀಕರಿಸುತ್ತಾನೆ. ಕೆಲವೊಮ್ಮೆ ಜೀರ್ಣವಾಗುವ ಮುನ್ನವೇ ಊಟ ಮಾಡುತ್ತಾನೆ.

ವ್ಯಾಯಾಮಮತಿಮಾತ್ರಂ ವಾ ವ್ಯವಾಯಂ ವೋಪಸೇವತೇ ।
ಸತತಂ ಕರ್ಮಲೋಭಾದ್ವಾ ಪ್ರಾಪ್ತವೇಗವಿಧಾರಣಮ್ ॥೧೨॥

ತನ್ನ ದೈಹಿಕಸಾಮರ್ಥ್ಯವನ್ನು ಅರಿಯದೆ ಅತಿಯಾದ ವ್ಯಾಯಾಮಗಳನ್ನು ಮಾಡುತ್ತಾನೆ. ಮಿತಿ ಮೀರಿದ ಸ್ತ್ರೀಸಂಗವನ್ನು ಮಾಡುತ್ತಾನೆ. ನಿರಂತರವೂ ಚಟುವಟಿಕೆಯಿಂದಿರಬೇಕೆಂಬ ಏಕಾಗ್ರತೆಯಲ್ಲಿ ಮಲ-ಮೂತ್ರಗಳ ವೇಗವನ್ನು ತಡೆದುಕೊಳ್ಳುತ್ತಾನೆ.

ರಸಾನುಯುಕ್ತಮನ್ನಂ ವಾ ದಿವಾ ಸ್ವಪ್ನಂ ನಿಷೇವತೇ ।
ಅಪಕ್ವಾನ್ನಂ ಗತೇ ಕಾಲೇ ಸ್ವಯಂ ದೋಷಾನ್ ಪ್ರಕೋಪಯೇತ್ ॥೧೩॥

ಅತ್ಯಂತ ರಸಭರಿತವಾದ ಅನ್ನವನ್ನು ತಿನ್ನುತ್ತಾನೆ. ಹಗಲೆಲ್ಲ ಮಲಗಿರುತ್ತಾನೆ. ಕಾಲ ಮೀರಿದ ಮೇಲೆ ಪಕ್ವವಾಗದೆ ಇರುವ ಆಹಾರವನ್ನು ತಿಂದು, ಶರೀರದಲ್ಲಿರುವ ವಾತಾದಿ ದೋಷಗಳು ಕೆರಳುವಂತೆ ಮಾಡಿಕೊಳ್ಳುತ್ತಾನೆ.

ಸ್ವದೋಷಕೋಪನಾದ್ ರೋಗಂ ಲಭತೇ ಮರಣಾಂತಿಕಮ್ ॥೧೪॥

ಕೆಟ್ಟ ಆಹಾರಸೇವನೆಯ ಪರಿಣಾಮವಾಗಿ ಕಫ-ವಾತಾದಿಗಳು ಕೆರಳುವಂತೆ ಮಾಡಿ ಮನುಷ್ಯನು ಮಾರಣಾಂತಿಕವಾದ ರೋಗವನ್ನು ಹೊಂದುತ್ತಾನೆ.

ಅಥ ಚೇದ್ಬಂಧನಾದೀನಿ ಪರೀತಾನಿ ವ್ಯವಸ್ಯತಿ ।
ತಸ್ಯ ತೈಃ ಕಾರಣೈರ್ಜಂತೋಃ ಶರೀರಾಚ್ಚ್ಯವತೇ ಯಥಾ ॥೧೫॥

ಮಾರಣಾಂತಿಕವಾದ ರೋಗವನ್ನು ಅನುಭವಿಸಲಾಗದೆ ಶಾಸ್ತ್ರವಿರುದ್ಧವಾದ ಮಾರ್ಗವನ್ನಾಶ್ರಯಿಸಿಯಾದರೂ ದೇಹತ್ಯಾಗವನ್ನು ಮಾಡಿಕೊಳ್ಳುತ್ತಾನೆ. ಇಂತಹ ಅನೇಕ ಕಾರಣಗಳಿಂದ ಜೀವನ ಶರೀರವು ನಾಶವನ್ನು ಹೊಂದುತ್ತದೆ.

ಜೀವಿತಂ ಪ್ರೋಚ್ಯಮಾನಂ ತದ್ ಯಥಾವದುಪಧಾರಯ ॥೧೬॥

ಹೀಗೆ ಜೀವನ ಜೀವಿತ ಎಂದು ಯಾವುದು ಹೇಳಲ್ಪಟ್ಟಿರುವುದೋ ಅದನ್ನು ತಿಳಿದುಕೊ.

ಊಷ್ಮಾ ಪ್ರಕುಪಿತಃ ಕಾಯೇ ತೀವ್ರವಾಯುಸಮೀರಿತಃ ।
ಶರೀರಮನುಪರ್ಯೇತ್ಯ ಸರ್ವಾನ್ ಪ್ರಾಣಾನ್ ರುಣದ್ಧಿ ಚ ॥೧೭॥

ಶರೀರದಲ್ಲಿ ತೀಕ್ಷ್ಣವಾದ ವಾಯುವಿನಿಂದ ಪ್ರೇರಿತವಾಗಿ ಪಿತ್ತವು ಕೆರಳುತ್ತದೆ. ಅಂತಹ ಪಿತ್ತವು ಶರೀರವನ್ನೆಲ್ಲ ವ್ಯಾಪಿಸಿ, ಪ್ರಾಣಿಗಳ ಸಹಜವಾದ ಕ್ರಿಯೆಗಳನ್ನು ತಡೆಯುತ್ತದೆ.

ಅತ್ಯರ್ಥಂ ಬಲವಾನೂಷ್ಮಾ ಶರೀರೇ ಪರಿಕೋಪಿತಃ ।
ಭಿನತ್ತಿ ಜೀವಸ್ಥಾನಾನಿ ತಾನಿ ಮರ್ಮಾಣಿ ವಿದ್ಧಿ ಚ ॥೧೮॥

ಈ ಶರೀರದಲ್ಲಿ ಅತ್ಯಂತ ಪ್ರಬಲವಾದ ಪಿತ್ತದ ಪ್ರಕೋಪದಿಂದ ಜೀವನ ಮರ್ಮಸ್ಥಳಗಳೇ ಸೀಳಿ ಹೋಗುತ್ತವೆ. ಈ ವಿಷಯವನ್ನು ಯಥಾರ್ಥವಾಗಿ ತಿಳಿದುಕೊ.

ತತಃ ಸವೇದನಃ ಸದ್ಯೋ ಜೀವಃ ಪ್ರಚ್ಯವತೇ ಕ್ಷರನ್ ।
ಶರೀರಂ ತ್ಯಜತೇ ಜಂತುಶ್ಛಿದ್ಯಮಾನೇಷು ಮರ್ಮಸು ॥೧೯॥

ವೇದನಾಭಿಃ ಪರೀತಾತ್ಮಾ ತದ್ವಿದ್ಧಿ ದ್ವಿಜಸತ್ತಮ ॥೨೦॥

ಬ್ರಾಹ್ಮಣನೇ, ಪ್ರಕೋಪ ಹೊಂದಿದ ಪಿತ್ತದಿಂದ ಜೀವನ ಮರ್ಮಸ್ಥಾನಗಳು ಛಿನ್ನ-ಭಿನ್ನವಾದ ಬಳಿಕ ವೇದನೆಯನ್ನು ತಡೆಯಲಾರದ ಜೀವವು ಈ ಶರೀರದಿಂದ ಹೊರಟು ದೇಹವನ್ನು ಸಂಪೂರ್ಣವಾಗಿ ತ್ಯಜಿಸುತ್ತದೆ.

ಜನೀಮರಣಸಂವಿಗ್ನಾನ್ ಸತತಂ ಸರ್ವಜಂತವಃ ।
ದೃಶ್ಯಂತೇ ಸಂತ್ಯಜಂತಶ್ಚ ಶರೀರಾಣಿ ದ್ವಿಜರ್ಷಭ ॥೨೧॥

ಗರ್ಭಸಂಕ್ರಮಣೇ ಚಾಪಿ ಗರ್ಭಾಣಾಮಪಸರ್ಪಣೇ ।
ತಾದೃಶೀಮೇವ ಲಭತೇ ವೇದನಾಂ ಮಾನವಃ ಪುನಃ ॥೨೨॥

ಭಿನ್ನಸಂಧಿರಥ ಕ್ಲೇದಮದ್ಭಿಃ ಸ ಲಭತೇ ನರಃ ॥೨೩॥

ಹೀಗೆ ಜನನ-ಮರಣಗಳ ದುಃಖದಿಂದ ಎಲ್ಲ ಜಂತುಗಳು ಉದ್ವಿಗ್ನವಾಗಿರುತ್ತವೆ. ಎಲ್ಲ ಜೀವರು ಶರೀರವನ್ನು ಬಿಟ್ಟು ಹೋಗುವಾಗ, ಗರ್ಭದಿಂದ ಹೊರಗೆ ಬರುವಾಗಲೂ ಉಲ್ಬಣವಾದ ವೇದನೆಯನ್ನು ಅನುಭವಿಸಿಯೇ ತೀರುತ್ತಾರೆ. ಈ ವೇದನೆಯು ಯೋಗಿಗಳಿಗೂ ಬಿಟ್ಟಿದ್ದಲ್ಲ. ಹೀಗಿರಲು ಮಾನವರ ಅವಸ್ಥೆಯನ್ನು ಹೇಳುವುದೇನು? ಮರಣಕಾಲದಲ್ಲಿ ಶರೀರದಲ್ಲಿರುವ ಸಂಧಿಗಳೆಲ್ಲ ಒಡೆದು ಹೋಗುತ್ತಿರಲು ವೇದನೆ ಉಂಟಾಗುತ್ತದೆ. ಉತ್ಪತ್ತಿಯ ಸಮಯದಲ್ಲಿ ಗರ್ಭಸ್ಥವಾದ ನೀರಿನಿಂದ ಉಪದ್ರವ ಹೊಂದುತ್ತಾನೆ.

ಅಥ ಪಂಚಸು ಭೂತೇಷು ಸಂಶ್ರಿತತ್ವಂ ನಿಗಚ್ಛತಿ ।
ಶ್ಲೇಷ್ಮಾ ಪ್ರಕುಪಿತಃ ಕಾಯೇ ತೀವ್ರವಾಯುಸಮೀರಿತಃ ॥೨೪॥

ಜೀವನು ಪಂಚಭೂತಗಳಲ್ಲಿ ಸೇರಿದ್ದಾನೆ. ತೀವ್ರವಾದ ವಾಯುವಿನಿಂದ ಪ್ರೇರಿತನಾಗಿ ದೇಹದಲ್ಲಿ ಶ್ಲೇಷ್ಮವು ಪ್ರಕುಪಿತವಾದಾಗ ಜೀವನು ಪಂಚಭೂತಗಳಲ್ಲಿ ಸೇರಿಹೋಗುತ್ತಾನೆ.

ಯಸ್ಯ ಪಂಚಸು ಭೂತೇಷು ಪ್ರಾಣಾಪಾನೌ ವ್ಯವಸ್ಥಿತೌ ।
ಸ ಗಚ್ಛತ್ಯೂರ್ಧ್ವಗೋ ವಾಯುಃ ಕೃಚ್ಛ್ರಾನ್ಮುಕ್ತ್ವಾ ಶರೀರಿಣಮ್ ॥೨೫॥

ಶರೀರಂ ಚ ಜಹಾತ್ಯೇವ ನಿರುಚ್ಛ್ವಾಸಶ್ಚ ದೃಶ್ಯತೇ ॥೨೬॥

ಈ ಪಂಚಭೂತದ ದೇಹದಲ್ಲಿ ಪ್ರಾಣ, ಅಪಾನ, ವಾಯುಗಳ ಸಂಚಾರವಿದೆ. ಪ್ರಾಣವಾಯುವು ಜೀವನನ್ನು ಬಹಳ ಕಷ್ಟದಿಂದ ಪರಿತ್ಯಜಿಸಿ ಮೇಲಕ್ಕೆ ಹೊರಟು ಹೋಗುತ್ತದೆ. ಜೀವವು ಶರೀರವನ್ನು ಬಿಟ್ಟ ಬಳಿಕ ಆ ಶರೀರವು ಶ್ವಾಸೋಚ್ಛ್ವಾಸ ರಹಿತವಾಗುತ್ತದೆ.

ಸ ನಿರೂಷ್ಮಾ ನಿರುಚ್ಛ್ವಾಸೋ ನಿಃಶ್ರೀಕೋ ಗತಚೇತನಃ ।
ಬ್ರಹ್ಮಣಾ ಸಂಪರಿತ್ಯಕ್ತೋ ಮೃತ ಇತ್ಯುಚ್ಯತೇ ನರಃ ॥೨೭॥

ಬಳಿಕ ಆ ಶರೀರವು ಉಷ್ಣತೆಯಿಂದ ಉಚ್ಛ್ವಾಸದಿಂದಲೂ, ಕಾಂತಿಯಿಂದಲೂ, ಜೀವನಿಂದಲೂ ವಿಹೀನವಾಗುತ್ತದೆ. ಭಗವಂತನಿಂದ ಬಿಡಲ್ಪಟ್ಟ ವ್ಯಕ್ತಿಯನ್ನು ಮೃತ ಎಂದು ಕರೆಯುತ್ತಾರೆ.

ಸ್ರೋತೋಭಿರ್ಯೈರ್ವಿಜಾನಾತಿ ತ್ವಿಂದ್ರಿಯಾರ್ಥಾನ್ ಶರೀರಭೃತ್ ।
ತೈರೇವ ನಾಭಿಜಾನಾತಿ ಪ್ರಾಣಮಾಹಾರಸಂಭವಮ್ ॥೨೮॥

ತತ್ಕೈವ ಕುರುತೇ ಕಾಯೇ ಯಃ ಸ ಜೀವನ್ ಸನಾತನಃ ॥೨೯॥

ದೇಹವನ್ನು ಧರಿಸಿದ ಜೀವನು ಇಂದ್ರಿಯಗಳ ಮೂಲಕ ರೂಪ, ರಸ, ಗಂಧ ಮೊದಲಾದ ವಿಷಯಗಳನ್ನು ಅನುಭವಿಸುತ್ತಾನೆ. ಪುನಃ ಅದೇ ಇಂದ್ರಿಯದ ಮೂಲಕ ಆಹಾರವನ್ನು ಸೇವಿಸಿ ಪುಷ್ಟಿಯನ್ನು ಹೊಂದುವ ಪ್ರಾಣಗಳನ್ನು ಜೀವನು ತಿಳಿದಿರುವುದಿಲ್ಲ. ಅಂತಹ ಶರೀರದಲ್ಲೇ ಇದ್ದುಕೊಂಡು ಕರ್ಮಗಳನ್ನು ಮಾಡುತ್ತಾ ಇರುವವನೇ ಸನಾತನನಾದ ಜೀವ ಎನಿಸಿದ್ದಾನೆ.

ತೇಷಾಂ ಯದ್ಯದ್ ಭವೇದ್ಯುಕ್ತಂ ಸನ್ನಿಪಾತೇ ಕ್ವಚಿತ್ ಕ್ವಚಿತ್ ।
ತತ್ತನ್ಮರ್ಮ ವಿಜಾನೀಹಿ ಶಾಸ್ತ್ರದೃಷ್ಟಂ ಹಿ ತತ್ ತಥಾ ॥೩೦॥

ಜೀವನ ಸಂಧಿಸ್ಥಾನಗಳಲ್ಲಿ ಯಾವ ಯಾವ ಅಂಗಗಳು ಸೇರಿವೆಯೋ ಆ ಅಂಗಗಳ ಸಂಧಿಸ್ಥಾನವನ್ನು ಮರ್ಮಸ್ಥಾನಗಳೆಂದು ತಿಳಿ. ಮರ್ಮಸ್ಥಾನಗಳ ಲಕ್ಷಣಗಳು ಶಾಸ್ತ್ರಗಳಲ್ಲಿ ಕಂಡುಬರುತ್ತವೆ.

ತೇಷು ಮರ್ಮಸು ಭಿನ್ನೇಷು ತತಃ ಸ ಸಮುದೀರಯನ್ ।
ಆವಿಶ್ಯ ಹೃದಯಂ ಜಂತೋಃ ಸತ್ತ್ವಂ ಚಾಶು ರುಣದ್ಧಿ ವೈ ॥೩೧॥

ಆ ಮರ್ಮಸ್ಥಾನಗಳು ಭಿನ್ನವಾದ ಬಳಿಕ ದೇಹಸ್ಥ ವಾಯುವು ಊರ್ಧ್ವಗಮನವನ್ನು ಹೊಂದುತ್ತಾ, ಜೀವನ ಹೃದಯವನ್ನು ಪ್ರವೇಶಿಸಿ ಕೂಡಲೇ ಆ ಜೀವನ ಬುದ್ಧಿಯನ್ನು ತಡೆದುಬಿಡುತ್ತದೆ.

ತತಃ ಸಚೇತನೋ ಧಾತುಂ ನಾಭಿಜಾನಾತಿ ಕಿಂಚನ ॥೩೨॥

ತಮಸಾ ಸಂವೃತಜ್ಞಾನಂ ಸಂವೃತೇಷ್ವಥ ಮರ್ಮಸು ।
ಸ ಜೀವೋ ನಿರಧಿಷ್ಠಾನಶ್ಚಾಲ್ಯತೇ ಮಾತರಿಶ್ವನಾ ॥೩೩॥

ನಂತರ ಅಂತ್ಯಕಾಲವು ಸನ್ನಿಹಿತವಾದಾಗ ಈ ಶರೀರದಲ್ಲಿ ಚೇತನ ಇದ್ದರೂ ಆ ಜೀವನಿಗೆ ಯಾವ ಸಮಯದಲ್ಲೂ ಇರುವುದಿಲ್ಲ. ಅಜ್ಞಾನದಿಂದ ಅವನ ಜ್ಞಾನಶಕ್ತಿಯು ಮುಚ್ಚಿಹೋಗಿರುತ್ತದೆ. ಅಂತಹ ಅವಸ್ಥೆಯಲ್ಲಿ ಶರೀರದಿಂದ ಹೊರಬರುವ ಜೀವನು ಆಶ್ರಯವನ್ನು ಪಡೆಯದೆ ಮುಖ್ಯಪ್ರಾಣನ ಮೂಲಕ ಮೇಲೆ ಒಯ್ಯಲ್ಪಡುತ್ತಾನೆ.

ತತಃ ಸ ತಂ ಮಹೋಚ್ಛ್ವಾಸಂ ಭೃಶಮುಚ್ಛ್ವಸ್ಯ ದಾರುಣಮ್ ।
ನಿಷ್ಕ್ರಾಮನ್ ಕಂಪಯತ್ಯಾಶು ತಚ್ಛರೀರಮಚೇತನಮ್ ॥೩೪॥

ಪ್ರಾಣೋತ್ಕ್ರಮಣ ಸಮಯದಲ್ಲಿ ಜೀವನು ಭಯಂಕರವಾದ ಉಚ್ಛ್ವಾಸವನ್ನು ಬಿಡುತ್ತಾನೆ. ಉಚ್ಛ್ವಾಸವನ್ನು ಬಿಡುತ್ತಲೆ ದೇಹದಿಂದ ಹೊರಬರುತ್ತಿರುತ್ತಾನೆ. ಚೇತನ ರಹಿತವಾದ ಜಡ ಶರೀರವನ್ನು ಭಯಂಕರವಾದ ವಾಯುವು ಅಲ್ಲಾಡಿಸಿಬಿಡುತ್ತದೆ.

ಸ ಜೀವಃ ಪ್ರಚ್ಯುತಃ ಕಾಯಾತ್ ಕರ್ಮಭಿಃ ಸ್ವೈಃ ಸಮಾವೃತಃ ।
ಅಭಿತಃ ಸ್ವೈಃ ಶುಭೈಃ ಪುಣ್ಯೈಃ ಪಾಪೈರ್ವಾऽಪ್ಯುಪಪದ್ಯತೇ ॥೩೫॥

ಶರೀರದಿಂದ ಜೀವನು ಹೊರಬಂದ ಬಳಿಕ ಶರೀರವನ್ನು ಬಿಟ್ಟರೂ ಆ ಶರೀರದಲ್ಲಿ ತಾನು ಮಾಡಿದ ಕರ್ಮಗಳಿಂದ ಜೀವನು ಆವೃತನಾಗುತ್ತಾನೆ. ಯಾವಾಗಲೂ ಜೀವನು ಪುಣ್ಯಕರ್ಮಗಳಿಂದಲೂ ಪಾಪಕರ್ಮಗಳಿಂದಲೂ ಕೂಡಿಕೊಂಡೇ ಇರುತ್ತಾನೆ.

ಬ್ರಾಹ್ಮಣಾ ಜ್ಞಾನಸಂಪನ್ನಾ ಯಥಾವಚ್ಛ್ರುತನಿಶ್ಚಯಾಃ ।
ಇತರಂ ಕೃತಪುಣ್ಯಂ ವಾ ತಂ ವಿಜಾನಂತಿ ಲಕ್ಷಣೈಃ ॥೩೬॥

ಯಾವ ಜೀವನು ವೇದ-ಶಾಸ್ತ್ರಗಳ ಸಿದ್ಧಾಂತವನ್ನು ಯಥಾವತ್ತಾಗಿ ಅಧ್ಯಯನ ಮಾಡಿ ಜ್ಞಾನಸಂಪನ್ನನಾಗಿರುತ್ತಾನೋ ಅಂತಹವನು ಪ್ರಾಣೋತ್ಕ್ರಮಣ ಕಾಲದ ಲಕ್ಷಣವನ್ನು ಪುಣ್ಯಜೀವನು ಯಾರು, ಪಾಪ ಜೀವನು ಯಾರು ಎಂಬುದನ್ನು ತಿಳಿದುಕೊಳ್ಳುತ್ತಾನೆ.

ಯಥಾऽಂಧಕಾರೇ ಖದ್ಯೋತಂ ದೀಪ್ಯಮಾನಂ ತತಸ್ತತಃ ।
ಚಕ್ಷುಷ್ಮಂತಃ ಪ್ರಪಶ್ಯಂತಿ ತಥಾ ತಂ ಜ್ಞಾನಚಕ್ಷುಷಃ ॥೩೭॥

ಪಶ್ಯಂತ್ಯೇವಂವಿಧಾಃ ಸಿದ್ಧಾ ಜೀವಂ ದಿವ್ಯೇನ ಚಕ್ಷುಷಾ ।
ಕ್ಷರಂತಂ ಜಾಯಮಾನಂ ಚ ಯೋನಿಂ ಚಾನುಪ್ರವೇಶಿತಮ್ ॥೩೮॥

ಯಾವ ರೀತಿಯಲ್ಲಿ ಕಣ್ಣನ್ನು ಹೊಂದಿರುವ ಮನುಷ್ಯನು ಕತ್ತಲು ಕವಿದಿರುವಾಗ ಆ ಕತ್ತಲಿನಲ್ಲಿ ಸಂಚರಿಸುವ ಮಿಣುಕು ಹುಳವನ್ನು ನೋಡುತ್ತಾನೋ ಅದೇ ರೀತಿ ಜ್ಞಾನ ದೃಷ್ಟಿಯನ್ನು ಹೊಂದಿರುವ ಸಿದ್ಧರು ತಮ್ಮ ದಿವ್ಯದೃಷ್ಟಿಯಿಂದ ಶರೀರದಿಂದ ಹೊರಬರುವ, ಶರೀದ ಒಳಗೆ ಪ್ರವೇಶಿಸುವ ಜೀವರನ್ನು ತಿಳಿದುಕೊಳ್ಳುತ್ತಾರೆ.

ತಸ್ಯ ಸ್ಥಾನಾನಿ ದೃಷ್ಟಾನಿ ವಿವಿಧಾನೀಹ ಶಾಸ್ತ್ರತಃ ।
ಕರ್ಮಭೂಮಿರಿಯಂ ಭೂಮಿಃ ಯತ್ರ ತಿಷ್ಠಂತಿ ಜಂತವಃ ॥೩೯॥

ಶಾಸ್ತ್ರದಲ್ಲಿ ಹೇಳಿದಂತೆ ಜೀವರಿಗೆ ಸ್ವರ್ಗಲೋಕ, ಮನುಷ್ಯಲೋಕ, ನರಕಲೋಕ-ಗಳೆಂಬ ಮೂರು ಸ್ಥಾನಗಳಿವೆ. ಎಲ್ಲ ಪ್ರಾಣಿಗಳಿಗೂ ವಾಸಸ್ಥಾನವಾಗಿರುವ ಈ ಲೋಕವನ್ನು ಕರ್ಮಭೂಮಿ ಎಂದು ಕರೆಯುತ್ತಾರೆ.

ಇತಃ ಶುಭಾಶುಭಂ ಕೃತ್ವಾ ಲಭಂತೇ ಕರ್ಮ ದೇಹಿನಃ ।
ಇಹೈವೋಚ್ಚಾವಚಾನ್ ಭೋಗಾನ್ ಪ್ರಾಪ್ನುವಂತಿ ಸ್ವಕರ್ಮಭಿಃ ॥೪೦॥

ಈ ಕರ್ಮಭೂಮಿಯಿಂದ ಶುಭಾಶುಭ ಕರ್ಮಗಳನ್ನು ಆಚರಿಸಿ, ಆ ಕರ್ಮಕ್ಕೆ ಅನುಗುಣವಾಗಿ ದೇಹಗಳನ್ನು, ಸುಖ-ದುಃಖಭೋಗಗಳನ್ನು ಅನುಭವಿಸುತ್ತಾರೆ.

ಇಹೈವಾಶುಭಕರ್ಮಾ ತು ಕರ್ಮಭಿರ್ನಿರಯಂ ಗತಃ ।
ಅವಾಕ್ ಸ ನಿರಯೇ ಪಾಪೋ ಮಾನವಃ ಪಾತ್ಯತೇ ಭೃಶಮ್ ॥೪೧॥

ತಸ್ಮಾತ್ ಸುದುರ್ಲಭೋ ಮೋಕ್ಷ ಆತ್ಮಾ ರಕ್ಷ್ಯೋ ಭೃಶಂ ತತಃ ॥೪೨॥

ಇಲ್ಲಿ ಪಾಪಕರ್ಮವನ್ನು ಮಾಡುವ ಮನುಷ್ಯರು ಆ ಪಾಪಕರ್ಮಗಳಿಗೆ ಅನುಸಾರವಾಗಿ ನರಕಕ್ಕೆ ಹೋಗುತ್ತಾರೆ. ಪಾಪಕರ್ಮದಿಂದ ಲಭಿಸುವ ಅಧೋಗತಿಯ ನಿಲಯವು ಅತ್ಯಂತ ಕ್ಲೇಶದಾಯಕವಾದುದು. ಪಾಪಿಷ್ಠನಾದ ಮನುಷ್ಯನನ್ನು ನರಕದಲ್ಲಿ

ಉಗ್ರವಾಗಿ ಶಿಕ್ಷಿಸುತ್ತಾರೆ. ಆದ್ದರಿಂದ ಈ ನರಕದಿಂದ ಬಿಡುಗಡೆಯನ್ನು ಹೊಂದುವುದು ಬಹಳ ಕಷ್ಟಸಾಧ್ಯವು. ಈ ನರಕಕ್ಕೆ ಹೋಗದಂತೆ ತನ್ನನ್ನು ಪ್ರಯತ್ನಪೂರ್ವಕವಾಗಿ ರಕ್ಷಿಸಿಕೊಳ್ಳಬೇಕು.

ಊರ್ಧ್ವಂ ತು ಜಂತವೋ ಗತ್ವಾ ಯೇಷು ಸ್ಥಾನೇಷ್ವವಸ್ಥಿತಾಃ ।
ಕೀರ್ತ್ಯಮಾನಾನಿ ತಾನೀಹ ತತ್ತ್ವತಃ ಸನ್ನಿಬೋಧ ಮೇ ॥೪೩॥

ತಚ್ಚ್ರುತ್ವಾ ನೈಷ್ಠಿಕೀಂ ಬುದ್ಧಿಂ ಬುದ್ಧ್ಯೇಥಾಃ ಕರ್ಮನಿಶ್ಚಯಾತ್ ॥೪೪॥

ಸ್ವರ್ಗಲೋಕವೇ ಮೊದಲಾದ ಊರ್ಧ್ವಲೋಕಗಳಿಗೆ ಹೋಗುವ ಜೀವರು ಯಾವ ಯಾವ ಸ್ಥಾನಗಳಲ್ಲಿ ಇರುತ್ತಾರೆ ಎಂಬುದನ್ನು ಯಥಾವತ್ತಾಗಿ ನಿರೂಪಿಸಿದ್ದೇನೆ. ಏಕಾಗ್ರತೆಯಿಂದ ಈ ವಿಷಯವನ್ನು ತಿಳಿದುಕೊ. ಈ ವಿಷಯವನ್ನು ಕೇಳುವುದರಿಂದ ಕರ್ಮಗಳ ನಿಶ್ಚಯ ಗತಿಯನ್ನು ತಿಳಿದುಕೊಳ್ಳುತ್ತಿ.

ತಾರಾರೂಪಾಣಿ ಸರ್ವಾಣಿ ಯತ್ಕೈತಚ್ಚಂದ್ರಮಂಡಲಮ್ ।
ಯಚ್ಚ ವಿಭ್ರಾಜತೇ ಲೋಕೇ ಸ್ವಭಾಸಾ ಸೂರ್ಯಮಂಡಲಮ್ ॥೪೫॥

ಸ್ಥಾನಾನ್ಯೇತಾನಿ ಜಾನೀಹಿ ನರಾಣಾಂ ಪುಣ್ಯಕರ್ಮಣಾಮ್ ॥೪೬॥

ಯಾವ ಅಂತರಿಕ್ಷ ಲೋಕದಲ್ಲಿ ಎಲ್ಲ ನಕ್ಷತ್ರಗಳೂ, ಚಂದ್ರಮಂಡಲವೂ ಪ್ರಕಾಶಿಸುತ್ತಿವೆಯೋ, ಎಲ್ಲಿ ಸೂರ್ಯಮಂಡಲವು ತನ್ನ ಪ್ರಭೆಯಿಂದ ವಿಶೇಷವಾಗಿ ಪ್ರಕಾಶಿಸುತ್ತಿರುವುದೋ ಆ ಎಲ್ಲ ಸ್ಥಾನಗಳು ಪುಣ್ಯಕರ್ಮಿಗಳಿಗೆ ಲಭಿಸುವ ಸ್ಥಾನಗಳು. ಪುಣ್ಯಾತ್ಮರಾದ ಮನುಷ್ಯರು ಅಂತಹ ಪುಣ್ಯಲೋಕಗಳಿಗೆ ಹೋಗಿ ಸತ್ಫಲವನ್ನು ಅನುಭವಿಸುತ್ತಾರೆಂದು ತಿಳಿ.

ಕರ್ಮಕ್ಷಯಾಚ್ಚ ತೇಭ್ಯೋ ಹಿ ಚ್ಯವಂತೇ ವೈ ಪುನಃ ಪುನಃ ।
ತತ್ರಾಪಿ ಚ ವಿಶೇಷೋಽಸ್ತಿ ದಿವಿ ನೀಚೋಚ್ಚಮಧ್ಯಮಃ ॥೪೭॥

ಪುಣ್ಯಜೀವಿಗಳ ಪುಣ್ಯಫಲವು ಮುಗಿದ ಕೂಡಲೆ ಅವರು ಆ ಲೋಕದಿಂದ ಕ್ರಮವಾಗಿ ಕೆಳಗಿನ ಲೋಕಗಳಲ್ಲಿ ಇಳಿದು ಬರುತ್ತಾರೆ. ಪುನಃ ಇಲ್ಲಿ ಕರ್ಮಗಳನ್ನು ಮಾಡಿ ಪುನಃ ಊರ್ಧ್ವಲೋಕಗಳಿಗೆ ಹೋಗುತ್ತಾರೆ. ಈ ಗಮನಾಗಮನಗಳು ನಿರಂತರ

ನಡೆಯುತ್ತಲೇ ಇರುತ್ತವೆ. ಸ್ವರ್ಗದಲ್ಲಿಯೂ ಸ್ಥಾನಗಳಲ್ಲಿ ತಾರತಮ್ಯವಿದೆ. ಅವರವರ ಸತ್ಕರ್ಮಕ್ಕೆ ಅನುಗುಣವಾಗಿ ಉತ್ತಮ, ಮಧ್ಯಮ, ನೀಚ ಎಂಬ ಸ್ಥಾನಗಳು ಅಲ್ಲಿಯೂ ದೊರೆಯುತ್ತವೆ.

ನ ತತ್ರಾಪ್ಯಸ್ತಿ ಸಂತೋಷೋ ದೃಷ್ಟ್ವಾ ದೀಪ್ತಾಂ ಪರಶ್ರಿಯಮ್ ।
ಇತ್ಯೇತಾ ಗತಯಃ ಸರ್ವಾ ಪೃಥಕ್ ತೇ ಸಮುದೀರಿತಾಃ ॥೪೮॥

ಸ್ವರ್ಗಲೋಕಕ್ಕೆ ಹೋದರೂ ಉತ್ತರಲ್ಲಿರುವ ಐಶ್ವರ್ಯವನ್ನು ನೋಡಿದಾಗ ಜೀವನಿಗೆ ಸಂತೋಷವುಂಟಾಗುವುದಿಲ್ಲ. ತನಗಿಲ್ಲ ಎಂಬ ದುಃಖ ಅಲ್ಲಿಯೂ ಉಂಟಾಗುತ್ತದೆ. ಈ ರೀತಿಯಾದ ಎಲ್ಲ ವಿಧವಾದ ಗತಿಗಳು ಪ್ರತ್ಯೇಕವಾಗಿ ನಿನಗೆ ಹೇಳಲ್ಪಟ್ಟಿವೆ.

ಉಪಪತ್ತಿಂ ತು ಗರ್ಭಸ್ಯ ವಕ್ಷ್ಯಾಮ್ಯಹಮತಃಪರಮ್ ।
ಯಥಾವತ್ ತಾಂ ನಿಗದತಃ ಶೃಣುಷ್ವಾವಹಿತೋ ದ್ವಿಜ ॥೪೯॥

ಬ್ರಾಹ್ಮಣಶ್ರೇಷ್ಠನೇ, ಇನ್ನು ಮುಂದೆ ಜೀವನು ಯಾವ ಕ್ರಮದಲ್ಲಿ ಗರ್ಭವನ್ನು ಪ್ರವೇಶಿಸುತ್ತಾನೆ, ಉತ್ಪತ್ತಿಯನ್ನು ಪಡೆಯುತ್ತಾನೆ ಎಂದು ಹೇಳುತ್ತೇನೆ. ಏಕಾಗ್ರ ಬುದ್ಧಿಯಿಂದ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಗತಿಪ್ರಕಾರಕಥನಂ ನಾಮ ಸಪ್ತದಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹದಿನೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ಬ್ರಾಹ್ಮಣನು ಕೃಷ್ಣನನ್ನು ಕುರಿತು ಜೀವನ ಗರ್ಭಪ್ರವೇಶ, ಕರ್ಮಫಲದ ಅನಿವಾರ್ಯತೆ, ಸಂಸಾರ ದಾಟುವ ಉಪಾಯಗಳನ್ನು ಕಾಶ್ಯಪ-ಸಿದ್ಧಪುರುಷರ ಸಂವಾದದ ಉಲ್ಲೇಖದ ಮೂಲಕ ತಿಳಿಸಿದುದು.

ಬ್ರಾಹ್ಮಣಃ

ಶುಭಾನಾಮಶುಭಾನಾಂ ಚ ನೇಹ ನಾಶೋऽಸ್ತಿ ಕರ್ಮಣಾಮ್ ।
ಪ್ರಾಪ್ಯ ಪ್ರಾಪ್ಯ ತು ಪಚ್ಯಂತೇ ಕ್ಷೇತ್ರಂ ಕ್ಷೇತ್ರಂ ತಥಾ ತಥಾ ॥೧॥

ಬ್ರಾಹ್ಮಣ– ಕಾಶ್ಯಪನೇ, ಲೋಕದಲ್ಲಿ ಜೀವರು ಮಾಡುವ ಪುಣ್ಯಪಾಪಗಳ ಫಲಗಳನ್ನು ಅವರು ಅನುಭವಿಸಿಯೇ ತೀರಬೇಕು. ಅನುಭವಿಸದೆ ಆ ಕರ್ಮಗಳು ನಾಶ ಹೊಂದುವುದಿಲ್ಲ. ಆ ಕರ್ಮಗಳ ಫಲವಾಗಿಯೇ ಜೀವನು ಅನೇಕ ಯೋನಿಗಳಲ್ಲಿ ಹುಟ್ಟುತ್ತಲೇ ಇರುತ್ತಾನೆ. ಪ್ರತಿ ಯೋನಿಗಳಲ್ಲಿಯೂ ಕರ್ಮದ ಫಲಗಳನ್ನು ಅನುಭವಿಸುತ್ತಲೇ ಇರುತ್ತಾನೆ.

ಯಥಾ ಪ್ರಸೂಯಮಾನಸ್ತು ಸಮಾದದ್ಯಾತ್ ಫಲಂ ಬಹು ।
ತಥಾ ಸ್ಯಾದ್ ವಿಪುಲಂ ಪುಣ್ಯಂ ಶುದ್ಧೇನ ಮನಸಾ ಕೃತಮ್ ॥೨॥

ಯಾವ ರೀತಿಯಾಗಿ ಫಲಗಳನ್ನು ಕೊಡುವ ಮರವು ಫಲ ನೀಡುವ ಸಂದರ್ಭದಲ್ಲಿ ಸಾವಿರಾರು ಫಲಗಳನ್ನು ಏಕಕಾಲದಲ್ಲಿಯೇ ನೀಡುತ್ತದೋ ಅದರಂತೆ ಶುದ್ಧವಾದ ಮನಸ್ಸಿನಿಂದ ಮಾಡಿದ ಪುಣ್ಯಕಾರ್ಯವು ಫಲಿಸುವ ಕಾಲವು ಒದಗಿ ಬಂದಾಗ ನಿರೀಕ್ಷೆಯನ್ನೂ ಮೀರಿ ಅತ್ಯಧಿಕವಾದ ಫಲವನ್ನೇ ನೀಡುತ್ತದೆ.

ಪಾಪಂ ಚಾಪಿ ತಥೈವ ಸ್ಯಾತ್ ಪಾಪೇನ ಮನಸಾ ಕೃತಮ್ ।
ಪುರೋಧಾಯ ಮನೋ ಹೀಹ ಕರ್ಮಣ್ಯಾತ್ಮಾ ಪ್ರವರ್ತತೇ ॥೩॥

ಅದರಂತೆ ಕಲುಷಿತವಾದ ಮನಸ್ಸಿನಿಂದ ಮಾಡಿದ ಪಾಪಕರ್ಮವು ಫಲಿಸುವ ಕಾಲ ಒದಗಿಬಂದಾಗ ನಿರೀಕ್ಷೆಗೂ ಮೀರಿದ ಅಧಿಕವಾದ ಪಾಪಫಲವನ್ನೇ ನೀಡುತ್ತದೆ. ಆದ್ದರಿಂದ ಪ್ರತಿಯೊಬ್ಬ ಜೀವನು ಮನಸ್ಸನ್ನು ಮುಂದೆ ಮಾಡಿಕೊಂಡೇ ಶುಭಾಶುಭ ಕರ್ಮಗಳಲ್ಲಿ ಪ್ರವೃತ್ತನಾಗುತ್ತಾನೆ.

ಯಥಾ ಕರ್ಮಸಮಾವಿಷ್ಟಃ ಕಾಮಮನ್ಯುಸಮಾವೃತಃ ।
ನರೋ ಗರ್ಭಂ ಪ್ರವಿಶತಿ ತತ್ರಾಪಿ ಶೃಣು ಚೋತ್ತರಮ್ ॥೪॥

ಜೀವನು ಅನಾದಿಯಾದ ಕಾಮ, ಕ್ರೋಧಗಳಿಗೆ ತುತ್ತಾಗಿ, ಕರ್ಮವೆಂಬ ಬಲೆಯಲ್ಲಿ ಬಂಧಿತನಾಗಿ, ಆ ಕರ್ಮಕ್ಕನುಗುಣವಾದ ಯೋನಿಯಲ್ಲಿ ಹೇಗೆ ಪ್ರವೇಶಿಸುತ್ತಾನೆ ಎಂಬುದನ್ನು ಹೇಳುತ್ತೇನೆ, ಕೇಳು.

ಶುಕ್ರಂ ಶೋಣಿತಸಂಯುಕ್ತಂ ಸ್ತ್ರಿಯಾ ಗರ್ಭಾಶಯಂ ಗತಮ್ ।
ಕ್ಷೇತ್ರಧರ್ಮಮವಾಪ್ನೋತಿ ಶುಭಂ ವಾ ಯದಿ ವಾऽಶುಭಮ್ ॥೫॥

ಜೀವನು ಪುರುಷನ ವೀರ್ಯದ ಮೂಲಕ ಸ್ತ್ರೀಯ ರಜಸ್ಸಿನ ಜೊತೆಗೆ ಬೆರೆತು ಆಕೆಯ ಗರ್ಭವನ್ನು ಸೇರುತ್ತಾನೆ. ಗರ್ಭಾಶಯವನ್ನು ಸೇರಿದ ಜೀವನು ಪಡೆಯುವ ಕ್ಷೇತ್ರವು ಶ್ರೇಷ್ಠವೂ ಆಗಿರಬಹುದು, ನೀಚವೂ ಆಗಿರಬಹುದು. ಈ ಶುಭಾಶುಭ ಕ್ಷೇತ್ರಗಳು ಕರ್ಮಕ್ಕನುಗುಣವಾಗಿಯೇ ದೊರೆಯುತ್ತವೆ.

ಸೌಕ್ಷ್ಮ್ಯಾದವ್ಯಕ್ತಭಾವಾಚ್ಚ ನ ಸ ಕ್ವಚನ ಸಜ್ಜತಿ ।
ಸಂಪ್ರಾಪ್ಯ ಬ್ರಹ್ಮಣಃ ಕಾಯಂ ತಸ್ಮಾತ್ ತದ್ ಬ್ರಹ್ಮ ಶಾಶ್ವತಮ್ ॥೬॥

ತದ್ಬೀಜಂ ಸರ್ವಜಂತೂನಾಂ ತೇನ ಜೀವಂತಿ ಜಂತವಃ ॥೭॥

ಜೀವನು ತನ್ನ ಜೊತೆಗೆ ಇರುವ ಸೂಕ್ಷ್ಮನಾದ ಅವ್ಯಕ್ತ ಸ್ವಭಾವನಾದ ಪರಮಾತ್ಮನನ್ನು ಅರಿಯುವುದೇ ಇಲ್ಲ. ಅವನು ಕೊಟ್ಟಿರುವ ಶರೀರವನ್ನು ಅವನ ದೆಸೆಯಿಂದಲೇ ಹೊಂದಿದ್ದರೂ ಆ ಗುಣಪರಿಪೂರ್ಣವಾದ ವಸ್ತುವನ್ನು ಅರಿಯದೆ ಆ ಶರೀರವನ್ನು ಪ್ರವೇಶಿಸುತ್ತಾನೆ. ಎಲ್ಲ ಜೀವರಾಶಿಗಳಿಗೂ ಗುಣಪರಿಪೂರ್ಣವಾದ ವಸ್ತುವೇ ಕಾರಣವಾಗಿದೆ. ಆ ಭಗವಂತನಿಂದಲೇ ಎಲ್ಲ ಜೀವರೂ ಜೀವಿಸುತ್ತಿದ್ದಾರೆ.

ಸ ಜೀವಃ ಸರ್ವಜಂತೂನಾಂ ಗರ್ಭಮಾವಿಶ್ಯ ಭಾಗಶಃ ।
ಸ ಯಾತಿ ತೇಜಸಾ ಸಮ್ಯಕ್ ಪ್ರಾಣಸ್ಥಾನೇಷ್ವವಸ್ಥಿತಃ ॥೮॥

ಆ ಗರ್ಭವನ್ನು ಪ್ರವೇಶಿಸಿದ ಜೀವಾತ್ಮನು ಗರ್ಭದ ಎಲ್ಲ ಅವಯವಗಳನ್ನು ಭಾಗಶಃ ಆವರಿಸಿ, ಪ್ರಾಣಸ್ಥಾನಗಳಲ್ಲಿ ಇದ್ದುಕೊಂಡು ತೇಜಸ್ಸಿನ ಮೂಲಕವಾಗಿ ಪುಷ್ಟಿಯನ್ನು ಹೊಂದುತ್ತಾನೆ.

ತತಃ ಸ್ಪಂದಯತೇಽಂಗಾನಿ ಸ ಗರ್ಭಶ್ಚೇತನಾನ್ವಿತಃ ॥೯॥

ಚೇತನಾಯುಕ್ತವಾದ ಗರ್ಭವು ಎಲ್ಲ ಅವಯವಗಳನ್ನು ಸಂಚಾಲನಗೊಳಿಸುತ್ತದೆ.

ಯಥಾಲೋಹಿತವಿಷ್ಯಂದೋ ನಿಷಿಕ್ತೋ ಬಿಂಬವಿಗ್ರಹಮ್ ।
ಉಪೈತಿ ತದ್ವಜ್ಜಾನೀಹಿ ಗರ್ಭೇ ಜೀವಪ್ರವೇಶನಮ್ ॥೧೦॥

ಯಾವ ರೀತಿಯಾಗಿ ಕಾಯಿಸಿದ ಲೋಹದ ದ್ರವವು ಎರಕದ ಅಚ್ಚನ್ನು ಪ್ರವೇಶ ಮಾಡಿ, ಆ ಎರಕದ ಅಚ್ಚಿನ ರೂಪವನ್ನೇ ಹೊಂದುತ್ತದೋ ಅದರಂತೆ ಜೀವನು ರೇತಸ್ಸಿನ ರೂಪವಾಗಿ ಗರ್ಭವನ್ನು ಪ್ರವೇಶಿಸಿ, ಆ ಯೋನಿಗೆ ಅನುಗುಣವಾದ ಆಕಾರವನ್ನು ಪಡೆಯುತ್ತಾನೆ.

ಲೋಹಪಿಂಡಂ ಯಥಾ ವಹ್ನಿಃ ಸ ಪ್ರವಿಶ್ಯಾತಿತಾಪಯೇತ್ ।
ತಥಾ ತ್ವಮಪಿ ಜಾನೀಹಿ ಗರ್ಭೇ ಜೀವೋಪಪಾದನಮ್ ॥೧೧॥

ಯಾವ ರೀತಿಯಲ್ಲಿ ಕಬ್ಬಿಣದ ಗುಂಡನ್ನು ಪ್ರವೇಶಿಸಿದ ಬೆಂಕಿಯು ಆ ಕಬ್ಬಿಣದ ಪಿಂಡವನ್ನು ಅಧಿಕವಾಗಿ ತಾಪಯುಕ್ತವನ್ನಾಗಿ ಮಾಡುತ್ತದೋ, ಅದೇ ರೀತಿ ಗರ್ಭಪಿಂಡದಲ್ಲಿ ಪ್ರವೇಶಿಸಿದ ಜೀವನು ಅದನ್ನು ಚೈತನ್ಯಗೊಳಿಸುತ್ತಾನೆ.

ಯಥಾ ಚ ದೀಪಃ ಶರಣಂ ದೀಪ್ಯಮಾನಃ ಪ್ರಕಾಶಯೇತ್ ।
ಏವಮೇವ ಶರೀರಾಣಿ ಪ್ರಕಾಶಯತಿ ಚೇತನಾ ॥೧೨॥

ಹೇಗೆ ದೇವರ ಮನೆಯಲ್ಲಿ ಹಚ್ಚಿಟ್ಟ ದೀಪವು ಆ ಕೋಣೆಯನ್ನು ಬೆಳಗುತ್ತದೋ, ಅದರಂತೆ ಚೇತನವು ಶರೀರವನ್ನು ಬೆಳಗುತ್ತಾನೆ.

ಯದ್ಯಚ್ಚ ಕುರುತೇ ಕರ್ಮ ಶುಭಂ ವಾ ಯದಿ ವಾಽಶುಭಮ್ ।
ಪೂರ್ವದೇಹಕೃತಂ ಸರ್ವಮವಶ್ಯಮುಪಭುಜ್ಯತೇ ॥೧೩॥

ಪುಣ್ಯಕರ್ಮಗಳನ್ನಾಗಲಿ, ಪಾಪಕರ್ಮಗಳನ್ನಾಗಲಿ ಯಾವ ಜೀವನು ಆಚರಿಸುತ್ತಾನೋ ಆ ಎಲ್ಲ ಕರ್ಮಗಳು ಹಿಂದಿನ ಜನ್ಮದ ದೇಹದಲ್ಲಿ ಮಾಡಲ್ಪಟ್ಟ ಕರ್ಮಗಳನ್ನು ಅನುಸರಿಸಿಕೊಂಡು ಬಂದಿರುತ್ತವೆ. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳೆಲ್ಲವನ್ನೂ ಇಂದಿನ ಜನ್ಮದಲ್ಲಿ ಅನುಭವಿಸಲೇಬೇಕು.

ತತಸ್ತು ಕ್ಷೀಯತೇ ಚೈವ ಪುನಶ್ಚಾನ್ಯತ್ ಪ್ರಚೀಯತೇ ।
ಯಾವತ್ ತು ಮೋಕ್ಷಯೋಗಸ್ಥಂ ಧರ್ಮಂ ನೈವಾವಬುಧ್ಯತೇ ॥೧೪॥

ಪಾಪಕರ್ಮಗಳ ಫಲವಾಗಲಿ, ಪುಣ್ಯಕರ್ಮಗಳ ಫಲವಾಗಲಿ ಭೋಗಿಸುತ್ತಾ ಕ್ಷೀಣಿಸುತ್ತದೆ. ಅದರ ಜೊತೆಗೆ ಈ ಜನ್ಮದಲ್ಲಿ ಮಾಡುವ ಕರ್ಮಫಲಗಳ ಸಂಚಯವು ಉಂಟಾಗುತ್ತಿರುತ್ತದೆ. ಆದ್ದರಿಂದ ಮನುಷ್ಯನು ಎಲ್ಲಿಯ ತನಕ ಮೋಕ್ಷಫಲಪ್ರಾಪ್ತಿಗೆ ಸಹಾಯಕವಾದ ಧರ್ಮವನ್ನು ಅರಿತುಕೊಳ್ಳುವುದಿಲ್ಲವೋ ಅಲ್ಲಿಯತನಕ ಈ ಕರ್ಮಚಕ್ರದಿಂದ ಹೊರಗೆ ಬರುವುದೇ ಇಲ್ಲ.

ತತ್ ತೇ ಧರ್ಮಂ ಪ್ರವಕ್ಷ್ಯಾಮಿ ಸುಖೀ ಭವತಿ ಯೇನ ವೈ ।
ಆವರ್ತಮಾನೋ ಜಾತೀಷು ಯಥಾऽನ್ಯೋನ್ಯಾಸು ಸತ್ತಮ ॥೧೫॥

ಆ ಮೋಕ್ಷಕ್ಕೆ ಯೋಗ್ಯವಾದ ಧರ್ಮಗಳ್ಯಾವವು ಎಂಬುದನ್ನು ನಿನಗೆ ಹೇಳುತ್ತೇನೆ. ಇವುಗಳನ್ನು ಕೇಳಿದ ಮಾತ್ರದಿಂದ ಸುಖವನ್ನು ಹೊಂದುತ್ತಿ. ಭಿನ್ನ ಭಿನ್ನವಾದ ಯೋನಿಗಳಲ್ಲಿ ಹುಟ್ಟಿ-ಸಾಯುವ ಮನುಷ್ಯನು ಯಾವ ಯಾವ ಕರ್ಮಗಳ ಅನುಷ್ಠಾನದಿಂದ ಸುಖಿಯಾಗುತ್ತಾನೆಂಬುದನ್ನು ತಿಳಿದುಕೊ.

ದಾನಂ ವ್ರತಂ ಬ್ರಹ್ಮಚರ್ಯಂ ಯಥೋಕ್ತವ್ರತಧಾರಣಮ್ ।
ದಮಃ ಪ್ರಶಾಂತತಾ ಚೈವ ಭೂತಾನಾಂ ಚಾನುಕಂಪನಮ್ ॥೧೬॥

ಸಂಯಮಶ್ಚಾನೃಶಂಸ್ಯಂ ಚ ಪರಸ್ವಾದಾನವರ್ಜನಮ್ ।
ವ್ಯಲೀಕಾನಾಮಕರಣಂ ಭೂತಾನಾಮನುಕಂಪನಮ್ ॥೧೭॥

ಮಾತಾಪಿತ್ರೋಶ್ಚ ಶುಶ್ರೂಷಾ ದೇವತಾತಿಥಿಪೂಜನಮ್ ।
ಗುರುಪೂಜಾ ಘೃಣಾ ಶೌಚಂ ನಿತ್ಯಮಿಂದ್ರಿಯಸಂಯಮಃ ॥೧೮॥

ಪ್ರವರ್ತನಂ ಶುಭಾನಾಂ ಚ ತತ್ ಸತಾಂ ವ್ರತಮುಚ್ಯತೇ ।
ತತೋ ಧರ್ಮಃ ಪ್ರಭವತಿ ಯಃ ಪ್ರಜಾಃ ಪಾತಿ ಶಾಶ್ವತಮ್ ॥೧೯॥

ದಾನ, ವ್ರತ, ಬ್ರಹ್ಮಚರ್ಯ, ಶಾಸ್ತ್ರವಿಧಾನದಲ್ಲಿ ಹೇಳಿದ ವೇದಗಳ ಸ್ವೀಕಾರ, ಇಂದ್ರಿಯನಿಗ್ರಹ, ಪ್ರಶಾಂತಚಿತ್ತತೆ, ಭೂತದಯಾ, ಚಿತ್ತಸಂಯಮ, ದಯಾಪರತೆ,

ಇತರರ ಸಂಪತ್ತಿನಲ್ಲಿ ಅನಾಸಕ್ತಿ, ಪ್ರಪಂಚದಲ್ಲಿರುವ ಪ್ರಾಣಿಗಳ ವಿಷಯದಲ್ಲಿ ಮಾನಸಿಕವಾಗಿಯೂ ಅಹಿತವನ್ನು ಬಯಸದಿರುವುದು, ತಂದೆ-ತಾಯಿಗಳ ಸೇವೆ, ದೇವತಾ ಪೂಜೆ, ಅತಿಥಿ ಸತ್ಕಾರ, ಗುರುಜನರ ಪೂಜೆ, ದಯೆ, ಶೌಚ, ಇಂದ್ರಿಯಗಳಲ್ಲಿ ನಿಗ್ರಹ, ಬೇರೆಯವರನ್ನು ಶುಭಕರ್ಮಗಳಲ್ಲಿ ತೊಡಗುವಂತೆ ಪ್ರೇರಿಸುವುದು- ಇವೆಲ್ಲವೂ ಕೂಡ ಸತ್ಪುರುಷರ ಆಚರಣೆಗಳೆಂದು ಜ್ಞಾನಿಗಳು ಹೇಳುತ್ತಾರೆ. ಇವುಗಳ ಅನುಷ್ಠಾನದಿಂದ ಧರ್ಮವು ಉತ್ಪನ್ನವಾಗುತ್ತದೆ. ಈ ಧರ್ಮವೇ ಸಮಸ್ತ ಪ್ರಜೆಗಳನ್ನು ರಕ್ಷಿಸುತ್ತದೆ.

ಸದ್ಭಿರಾಚರಿತೋ ಧರ್ಮಃ ಸದಾಚಾರೇ ಪ್ರತಿಷ್ಠಿತಃ ।
ಉಭಯಾರ್ಥೋ ಭವತ್ಯೇವ ಸ್ವರ್ಗಾರ್ಥೋ ಮೋಕ್ಷದಸ್ತಥಾ ॥೨೦॥

ಧರ್ಮವು ಸದಾಚಾರದಲ್ಲಿ ಸನ್ನಿಹಿತವಾಗಿದೆ. ಸಜ್ಜನರು ಇದನ್ನು ಆಚರಿಸುತ್ತಾರೆ. ಈ ಸದ್ಧರ್ಮಾಚರಣೆಯು ಸ್ವರ್ಗಫಲವನ್ನೂ ನೀಡುತ್ತದೆ, ಕಾಲಕ್ರಮದಲ್ಲಿ ಹರಿಪ್ರೀತಿ ಜನಕಗಳಾಗಿ ಮೋಕ್ಷವನ್ನೂ ನೀಡುತ್ತದೆ.

ಏವಂ ಸತ್ಸು ಸದಾ ಪಶ್ಯೇತ್ ತತ್ರ ಹ್ಯೇಷಾ ಧ್ರುವಾ ಸ್ಥಿತಿಃ ।
ಆಚಾರೋ ಧರ್ಮಮಾಚಷ್ಟೇ ಯಸ್ಮಿನ್ ಸಂತೋ ವ್ಯವಸ್ಥಿತಾಃ ॥೨೧॥

ಸತ್ಪುರುಷರಲ್ಲಿ ಇಂತಹ ಸದಾಚಾರಗಳನ್ನು ನಾವು ಯಾವಾಗಲೂ ಕಾಣಬಹುದಾಗಿದೆ. ಅವರಲ್ಲಿ ಈ ಧರ್ಮಗಳು ಶಾಶ್ವತ ಸ್ಥಾನಗಳನ್ನು ಅಲಂಕರಿಸಿರುತ್ತವೆ. ನಮ್ಮ ಸದಾಚಾರವೇ ಧರ್ಮದ ಪರಿಚಯವನ್ನು ಮಾಡಿಕೊಡುತ್ತದೆ. ಆದ್ದರಿಂದ ಸಜ್ಜನರು ಸದಾಚಾರಗಳಲ್ಲೇ ನಿರತರಾಗಿರುತ್ತಾರೆ.

ತೇಷು ತದ್ಧರ್ಮನಿಕ್ಷಿಪ್ತೋ ಯಃ ಸ ಧರ್ಮಃ ಸನಾತನಃ ।
ಯಸ್ತಂ ಸಮಭಿಪದ್ಯೇತ ನ ಸ ದುರ್ಗತಿಮಾಪ್ನುಯಾತ್ ॥೨೨॥

ಅಂತಹ ಸತ್ಪುರುಷರಲ್ಲಿ ನಾನು ಹೇಳಿದ ದಾನ, ವ್ರತ, ಬ್ರಹ್ಮಚರ್ಯಾದಿ ಧರ್ಮಗಳು ಇಡಲ್ಪಟ್ಟಿವೆ. ಅನೂಚಾನವಾಗಿ ನಡೆದುಬಂದ ಈ ಧರ್ಮಗಳನ್ನೇ ಸನಾತನ ಎನ್ನುತ್ತಾರೆ. ಯಾವನು ಈ ಸನಾತನ ಧರ್ಮವನ್ನು ಆಶ್ರಯಿಸುತ್ತಾನೋ ಅವನು ಎಂದೂ ದುರ್ಗತಿಯನ್ನು ಹೊಂದುವುದಿಲ್ಲ.

ಅತೋ ನಿಯಮ್ಯತೇ ಲೋಕಃ ಪ್ರಮುಹ್ಯನ್ ಧರ್ಮವರ್ತ್ಮಸು ।
ಯಸ್ತು ಯೋಗೀ ಚ ಮುಕ್ತಶ್ಚ ಸ ವೈ ತೇಭ್ಯೋ ವಿಶಿಷ್ಯತೇ ॥೨೩॥

ಸಮಾಜವು ಧರ್ಮಮಾರ್ಗದಿಂದ ಭ್ರಷ್ಟವಾಗುತ್ತಿರುವಾಗ ಸತ್ಪುರುಷರು ಮಾಡಿದ ಸನಾತನ ಧರ್ಮ, ಸತ್ಕರ್ಮಗಳ ಅನುಷ್ಠಾನವು ಧರ್ಮಭ್ರಷ್ಟವಾಗದಂತೆ ತಡೆಯುತ್ತದೆ. ಯಾವ ವ್ಯಕ್ತಿಯು ಈ ಧರ್ಮಾಚರಣೆಗಳ ಪೂರ್ಣಫಲಗಳನ್ನು ಪಡೆದಿದ್ದಾನೋ ಅವನು ಯೋಗಿ ಎನಿಸಿದ್ದಾನೆ, ಮುಕ್ತನಾಗುತ್ತಾನೆ. ಅನುಷ್ಠಾನಶೀಲರಿಗಿಂತಲೂ, ಸದಾಚಾರಿಗಳಿಗಿಂತಲೂ ಇವನು ಶ್ರೇಷ್ಠನೆನಿಸುತ್ತಾನೆ.

ವರ್ತಮಾನಸ್ಯ ಧರ್ಮೇಣ ಪುರುಷಸ್ಯ ಯಥಾ ತಥಾ ।
ಸಂಸಾರತಾರಣಂ ಯಸ್ಯ ಕಾಲೇನ ಮಹತಾ ಭವೇತ್ ॥೨೪॥

ಯಾವ ವ್ಯಕ್ತಿಯು ನಿರಂತರವೂ ಧರ್ಮಮಾರ್ಗದಲ್ಲಿಯೇ ವ್ಯವಹಾರವನ್ನು ಮಾಡುತ್ತಾನೋ ಅವನು ಎಲ್ಲ ಸ್ಥಿತಿಗಳಲ್ಲಿಯೂ ಶುಭಫಲಗಳನ್ನೇ ಪಡೆಯುತ್ತಾನೆ. ಕಾಲಾಂತರದಲ್ಲಿ ಅವನು ಈ ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಏವಂ ಪೂರ್ವಕೃತಂ ಕರ್ಮ ಸರ್ವೋ ಜಂತುರ್ನಿಷೇವತೇ ।
ಸರ್ವಂ ತತ್ ಕಾರಣಂ ಯೇನ ನಿಕೃತೋಽಯಮಿಹಾಗತಃ ॥೨೫॥

ಈ ರೀತಿಯಾಗಿ ಎಲ್ಲ ಜೀವರು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲಗಳನ್ನೇ ಇಂದು ಅನುಭವಿಸುತ್ತಾರೆ. ಆ ಕರ್ಮವನ್ನು ನಿಯಮಿಸುವ ಭಗವಂತನ ಅಧೀನವಾಗಿ ಜೀವನು ನಿರ್ವಿಕಾರ ಸ್ವರೂಪಿಯಾಗಿದ್ದರೂ ಈ ವಿಕಾರಾತ್ಮಕವಾದ ಜಗತ್ತಿನಲ್ಲಿ ಹುಟ್ಟು ಸಾವುಗಳನ್ನು ಪಡೆಯುತ್ತಿದ್ದಾನೆ. ಇದಕ್ಕೆ ಮೂಲಕಾರಣ ಅನಾದಿಕರ್ಮ.

ಶರೀರಗ್ರಹಣಂ ಚಾಸ್ಯ ಕೇನ ಪೂರ್ವಂ ಪ್ರಕಲ್ಪಿತಮ್ ।
ಇತ್ಯೇವಂ ಸಂಶಯೇ ಲೋಕೇ ತಚ್ಚ ವಕ್ಷ್ಯಾಮ್ಯತಃಪರಮ್ ॥೨೬॥

ಈ ಆತ್ಮನಿಗೆ ಶರೀರವು ಹೇಗೆ ಒದಗಿತು? ಇದನ್ನು ತಂದೊಡ್ಡಿದವರು ಯಾರು? ಈ ರೀತಿಯಾದ ಸಂಶಯವು ಎಲ್ಲರಿಗೂ ಹುಟ್ಟುತ್ತದೆ. ಇದು ಸಹಜವಾದ ಸಂಶಯ. ಈ ಸಂಶಯವನ್ನು ಮುಂದೆ ಪರಿಹರಿಸುತ್ತೇನೆ.

ಶರೀರಮಾತ್ಮನಃ ಕೃತ್ವಾ ಸರ್ವಲೋಕಪಿತಾಮಹಃ ।
ತ್ರೈಲೋಕ್ಯಮಸೃಜದ್ ಬ್ರಹ್ಮಾ ಕೃತ್ಸ್ನಂ ಸ್ಥಾವರಜಂಗಮಮ್ ॥೨೭॥

ಸಮಸ್ತ ಜಗತ್ತಿಗೆ ಪಿತಾಮಹನೆನಿಸಿದ ಚತುರ್ಮುಖಬ್ರಹ್ಮನು ತನ್ನ ಶರೀರವನ್ನೇ ನೆಪಮಾಡಿಕೊಂಡು ಸ್ಥಾವರ-ಜಂಗಮಾತ್ಮಕವಾದ ಈ ಹದಿನಾಲ್ಕು ಲೋಕಗಳನ್ನು ಸೃಷ್ಟಿ ಮಾಡಿದನು.

ತತಃ ಪ್ರಧಾನಮಸೃಜದ್ ಚೇತನಾನಾಂ ಶರೀರಿಣಾಮ್ ।
ಮಯಾ ಸರ್ವಮಿದಂ ವ್ಯಾಪ್ತಂ ಯಾಂ ಲೋಕೇ ಪರಮಾಂ ವಿದುಃ ॥

ಆ ಚತುರ್ಮುಖ ಬ್ರಹ್ಮನು ಪ್ರಧಾನವೆಂಬ ತತ್ತ್ವವನ್ನು ಸೃಷ್ಟಿಸಿದನು. ಅದನ್ನೇ ಜೀವರ ಪ್ರಕೃತಿ ಎಂದು ಕರೆಯುತ್ತಾರೆ. ಆ ಪ್ರಕೃತಿಯಿಂದಲೇ ಜಗತ್ತೆಲ್ಲವೂ ವ್ಯಾಪ್ತವಾಗಿದೆ. ಆ ಪ್ರಕೃತಿಯನ್ನೇ ಮೂಲಪ್ರಕೃತಿ ಎಂದು ಹೇಳುತ್ತಾರೆ.

ಇಹ ತತ್ ಕ್ಷರಮಿತ್ಯುಕ್ತಂ ಪರಂ ತ್ವಮೃತಮಕ್ಷರಮ್ ।
ತ್ರಯಾಣಾಂ ಮಿಥುನಂ ಸರ್ವಮ್ ಏಕೈಕಸ್ಯ ಪೃಥಕ್ ಪೃಥಕ್ ॥೨೯॥

ಈ ಪ್ರಾಕೃತವಾದ ಜಗತ್ತು ಕ್ಷರ ಎಂದು ಕರೆಸಿಕೊಳ್ಳುತ್ತದೆ. ಈ ಜಗತ್ತನ್ನು, ಈ ಚತುರ್ಮುಖಬ್ರಹ್ಮನನ್ನು ಮೀರಿನಿಂತ ಭಗವಂತನು ಪರತತ್ತ್ವ, ಅಮೃತತತ್ತ್ವ, ಅಕ್ಷರತತ್ತ್ವಎನಿಸಿದ್ದಾನೆ. ಎಲ್ಲವನ್ನೂ ಮೀರಿನಿಂತ ಭಗವಂತ, ಮೂಲಪ್ರಕೃತಿ, ಜೀವ. ಈ ಮೂರರ ಸಮಾವೇಶವು ಜಗತ್ತಿನ ಎಲ್ಲ ಜೀವರಾಶಿಗಳಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಇದೆ.

ಅಸೃಜತ್ ಸರ್ವಭೂತಾನಾಂ ಪೂರ್ವಸೃಷ್ಟಿಂ ಪ್ರಜಾಪತಿಃ ।
ಸ್ಥಾವರಾಣಿ ಚ ಬೀಜಾನಿ ಇತ್ಯೇಷಾ ಪೌರ್ವಿಕೀ ಶ್ರುತಿಃ ॥೩೦॥

ಚತುರ್ಮುಖ ಬ್ರಹ್ಮನು ಹಿಂದೆ ಆದ ಸೃಷ್ಟಿಯನ್ನೇ ಎಲ್ಲ ಜೀವರಾಶಿಗಳ ಪಾಲಿಗೆ ಮತ್ತೆ ಮಾಡಿದನು. ಸ್ಥಾವರ-ಜಂಗಮಾತ್ಮಕವಾದ ಪ್ರಾಣಿಗಳನ್ನು ಸೃಷ್ಟಿಸಿದನು ಎಂಬುದು ಪುರಾತನ ಶ್ರುತಿಯು.

ತಸ್ಯ ಕಾಲಪರೀಣಾಮಮಕರೋತ್ ಸ ಪಿತಾಮಹಃ ।
ಭೂತೇಷು ಪರಿವೃತ್ತಿಂ ಚ ಪುನರಾವೃತ್ತಿಮೇವ ಚ ॥೩೧॥

ಪಿತಾಮಹನಾದ ಚತುರ್ಮುಖಬ್ರಹ್ಮನು ಜೀವರಿಗೆ ಯೋಗ್ಯವಾದ ಕಾಲದ ತನಕ ಶರೀರವನ್ನು ಧಾರಣೆ ಮಾಡಿಕೊಂಡಿರುವುದಕ್ಕೆ, ಭಿನ್ನ ಭಿನ್ನ ಯೋನಿಗಳಲ್ಲಿ ಹುಟ್ಟುವುದಕ್ಕೆ, ಪರಲೋಕಕ್ಕೆ ಹೋಗಿ ಪುನಃ ಈ ಲೋಕಕ್ಕೆ ಆಗಮಿಸುವುದಕ್ಕೆ ವ್ಯವಸ್ಥೆಯನ್ನು ಕಲ್ಪಿಸಿರುತ್ತಾನೆ.

ಯಥಾऽತ್ರ ಕಶ್ಚಿನ್ಮೇಧಾವೀ ದೃಷ್ಟ್ವಾ ಕರ್ಮ ತು ಪೂರ್ವಕಮ್ ।
ಯತ್ ಪ್ರವಕ್ಷ್ಯಾಮಿ ತತ್ಸರ್ವಂ ಯಥಾವದುಪಪದ್ಯತೇ ॥೩೨॥

ಹಿಂದಿನ ಜನ್ಮದಲ್ಲಿ ಆತ್ಮಸಾಕ್ಷಾತ್ಕಾರವನ್ನು ಸಾಧಿಸಿಕೊಂಡು ಒಬ್ಬ ಮೇಧಾವಿಯು ಸಂಸಾರದ ಅನಿತ್ಯತೆಯ ವಿಷಯದಲ್ಲಿ ಯಾವ ಮಾತನ್ನು ಹೇಳಿದ್ದಾನೋ ಅದನ್ನೇ ನಿನಗೆ ಹೇಳುತ್ತೇನೆ.

ಸುಖಂ ದುಃಖಂ ಯಥಾ ಸಮ್ಯಗನಿತ್ಯೇ ಯಃ ಪ್ರಪಶ್ಯತಿ ।
ಕಾಯಂ ಚಾಮೇಧ್ಯಸಂಘಾತಂ ವಿನಾಶಂ ಕರ್ಮಸಂಹಿತಮ್ ॥೩೩॥

ಯಾವ ಮನುಷ್ಯನು ಜೀವನದಲ್ಲಿ ಒದಗಿ ಬರುವ ಸುಖ-ದುಃಖಗಳೆರಡನ್ನೂ ಅನಿತ್ಯವೆಂದು ತಿಳಿಯುತ್ತಾನೋ, ಶರೀರವನ್ನು ಹೊಲಸು ವಸ್ತುಗಳ ಸಂಘಾತವೆಂದು, ನಾಶಹೊಂದುತ್ತದೆ ಎಂದು, ಕರ್ಮದ ಹಿನ್ನೆಲೆಯಲ್ಲಿ ಒದಗಿಬಂದಿದೆ ಎಂದು, ಆತ್ಮನಿಗಿಂತ ಭಿನ್ನವೆಂದು ತಿಳಿಯುತ್ತಾನೋ;

ಯಚ್ಚ ಕಿಂಚಿತ್ ಸುಖಂ ದೃಷ್ಟಂ ತಚ್ಚ ದುಃಖಮಿತಿ ಸ್ಮರನ್ ।
ಸಂಸಾರಸಾಗರಂ ಘೋರಂ ತರಿಷ್ಯತಿ ಸುದುಸ್ತರಮ್ ॥೩೪॥

ಈ ದೇಹದಲ್ಲಿ ಅನುಭವಿಸುವ ಅಲ್ಪವಾದ ಸುಖದಂತೆ ಕಾಣುವ ಸುಖವನ್ನು ದುಃಖವೆಂದೇ ತಿಳಿಯುತ್ತಾನೋ ಅಂತಹ ಮನುಷ್ಯನು ಸಾಮಾನ್ಯರಿಂದ ದಾಟಲು ಅಸಾಧ್ಯವಾದ ಈ ಘೋರವಾದ ಸಂಸಾರವನ್ನು ದಾಟುತ್ತಾನೆ.

ಜನೀಮರಣರೋಗೈಶ್ಚ ಸಮಾವಿಷ್ಟಃ ಪ್ರಧಾನವಿತ್ ।
ಚೇತನಾವತ್ಸು ಚೈತನ್ಯಂ ಸಮಂ ಭೂತೇಷು ಪಶ್ಯತಿ ॥೩೫॥

ಯಾವ ಮನುಷ್ಯನು ಜನನ-ಮರಣ, ರೋಗಗಳಿಂದ ಕೂಡಿರುವ ಈ ದೇಹದ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಂಡಿರುತ್ತಾನೋ, ಎಲ್ಲ ಜೀವರಲ್ಲಿ ಇರುವ

ಪರಬ್ರಹ್ಮನನ್ನು ಅರ್ಥಮಾಡಿಕೊಂಡಿರುತ್ತಾನೋ, ಆ ಪರಬ್ರಹ್ಮನಲ್ಲಿ ವ್ಯತ್ಯಾಸವಿಲ್ಲವೆಂದು ಅರ್ಥ ಮಾಡಿಕೊಂಡಿರುತ್ತಾನೋ ಅವನು ಈ ಸಂಸಾರವನ್ನು ದಾಟುತ್ತಾನೆ.

ನಿರ್ವಿದ್ಯತೇ ಸ್ವತಃ ಕಶ್ಚಿನ್ಮಾರ್ಗಮಾಣಃ ಪರಂ ಪದಮ್ ।
ತಸ್ಯೋಪದೇಶಂ ವಕ್ಷ್ಯಾಮಿ ಯಾಥಾತಥ್ಯೇನ ಸತ್ತಮ ॥೩೬॥

ಸ್ವತಃ ಯಾವ ಮನುಷ್ಯನು ಈ ಜೀವನದಲ್ಲಿ ಪರಬ್ರಹ್ಮ ವಸ್ತುವನ್ನೇ ಅನ್ವೇಷಣೆ ಮಾಡುತ್ತಾ ಇರುತ್ತಾನೋ ಅದನ್ನು ಯೋಚಿಸುತ್ತಾ ನಿರ್ಲಿಪ್ತನಾಗಿರುತ್ತಾನೋ ಅಂತಹ ವ್ಯಕ್ತಿಯ ಉಪದೇಶವನ್ನು ಯಥಾವತ್ತಾಗಿ ಹೇಳುತ್ತೇನೆ, ತಿಳಿದುಕೊ.

ಶಾಶ್ವತಸ್ಯಾವ್ಯಯಸ್ಯಾಥ ಪದಸ್ಯ ಜ್ಞಾನಮುತ್ತಮಮ್ ।
ಪ್ರೋಚ್ಯಮಾನಂ ಮಯಾ ವಿಪ್ರ ನಿಬೋಧೇದಮಶೇಷತಃ ॥೩೭॥

ಅಂತಹ ನಿರ್ಲಿಪ್ತನಾದ ಜ್ಞಾನಿಗೆ ಯಾವ ಸನಾತನವಾದ, ಎಂದೂ ನಾಶವನ್ನು ಹೊಂದದ ಪರಮಾತ್ಮನ ಉತ್ತಮವಾದ ಜ್ಞಾನವು ಇಷ್ಟವಾಗಿದೆಯೋ ಅಂತಹ ಜ್ಞಾನವನ್ನೇ ಹೇಳುತ್ತೇನೆ. ನಾನು ಹೇಳುವ ಜ್ಞಾನೋಪದೇಶವನ್ನು ಸಮಾಧಾನಚಿತ್ತದಿಂದ ಆಲಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಗರ್ಭವಿಚಾರಕಥನಂ ನಾಮ ಅಷ್ಟಾದಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಮಾಡಿದ ಮೋಕ್ಷಸಾಧನ ಮೊದಲಾದವುಗಳನ್ನು ಪ್ರತಿಪಾದಿಸುವ ಸಿದ್ಧ-ಕಾಶ್ಯಪರ ಸಂವಾದರೂಪವಾದ ಅನುಗೀತೆಯ ಉಪದೇಶ.

ಬ್ರಾಹ್ಮಣಃ

ಯಸ್ಮಾದೇಕಾಂತಮಾಸೀನಃ ತೂಷ್ಣೀಂ ಕಿಂಚಿದಚಿಂತಯನ್ ।
ಪೂರ್ವಂ ಪೂರ್ವಂ ಪರಿತ್ಯಜ್ಯ ಸ ನಿರಾರಂಭಕೋ ಭವೇತ್ ॥೧॥

ಬ್ರಾಹ್ಮಣ– ಕಾಶ್ಯಪನೇ, ಯಾವ ಮನುಷ್ಯನು ಏಕಾಂತದಲ್ಲಿ ಕುಳಿತುಕೊಂಡು, ಬಾಹ್ಯವಾದ ಯಾವ ವಿಚಾರಗಳನ್ನೂ ಮಾಡದೆ, ಹಿಂದೆ ನಡೆದ ಘಟನೆಗಳನ್ನು ಪರಿತ್ಯಾಗ ಮಾಡುತ್ತಾ, ಅಭಿಮಾನವನ್ನು ಪರಿತ್ಯಾಗ ಮಾಡಿದಲ್ಲಿ ಅವನು ಸಂಸಾರಕ್ಕೆ ಕಾರಣವಾದ ಕರ್ಮಗಳನ್ನು ಮಾಡುವುದಿಲ್ಲ.

ಸರ್ವಮಿತ್ರಃ ಸರ್ವಸಹಃ ಸಮರಕ್ರೋ ಜಿತೇಂದ್ರಿಯಃ ।
ವ್ಯಪೇತಭಯಮನ್ಯುಶ್ಚ ಕಾಮಹಾ ಮುಚ್ಯತೇ ನರಃ ॥೨॥

ಎಲ್ಲರಲ್ಲಿಯೂ ಮೈತ್ರಿಭಾವವುಳ್ಳ, ಎಲ್ಲವನ್ನೂ ಸಹಿಸಿಕೊಳ್ಳುವ ಸ್ವಭಾವವುಳ್ಳ, ಎಲ್ಲ ಕಡೆಗಳಲ್ಲಿಯೂ ಭಗವಂತನಿದ್ದಾನೆ ಎಂದು ಅವನಲ್ಲಿಯೇ ರತಿಯುಳ್ಳ, ಜಿತೇಂದ್ರಿಯನಾದ, ಭಯದಿಂದ ಮುಕ್ತನಾದ, ಕ್ರೋಧದಿಂದ ಮುಕ್ತನಾದ, ಕಾಮನೆಯನ್ನು ಗೆದ್ದಿರುವ ಮನುಷ್ಯನು ಸಂಸಾರದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಆತ್ಮವತ್ ಸರ್ವಭೂತೇಷು ಯಶ್ಚರೇನ್ನಿಯತಃ ಶುಚಿಃ ।
ನಿತ್ಯಮೇವ ಯಥಾನ್ಯಾಯಂ ಯಶ್ಚರೇನ್ನಿಯತೇಂದ್ರಿಯಃ ॥೩॥

ಯಾರು ಜಿತೇಂದ್ರಿಯನಾಗಿ, ಶುಚಿಯಾಗಿ, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ತನ್ನಂತೆಯೇ ಸುಹೃದ್ಭಾವನೆಯಿಂದ ಕಾಣುತ್ತಾನೋ, ಯಾವಾಗಲೂ ಅವರವರ ಅರ್ಹತೆಯನ್ನು ನೋಡಿ ವರ್ತಿಸುತ್ತಾನೋ ಇಂತಹ ಜಿತೇಂದ್ರಿಯನಾದ ವ್ಯಕ್ತಿಯು ಸಂಸಾರ ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಅಮಾನೀ ನಿರಭಿಮಾನಃ ಸರ್ವತೋ ಮುಕ್ತ ಏವ ಸಃ ॥೪॥

ಯಾರು ಸನ್ಮಾನಗಳಿಗೆ ಅಪೇಕ್ಷೆಪಡುವುದಿಲ್ಲವೋ, ಅತಿಯಾದ ಆತ್ಮಾಭಿಮಾನವನ್ನು ಹೊಂದಿರುವುದಿಲ್ಲವೋ ಅವನು ಎಲ್ಲ ಬಂಧನಗಳಿಂದಲೂ ಬಿಡುಗಡೆ ಹೊಂದಿದಂತೆಯೇ ಸರಿ.

ಜೀವಿತಂ ಮರಣಂ ಚೋಭೇ ಸುಖದುಃಖೇ ತಥೈವ ಚ ।
ಲಾಭಾಲಾಭೌ ಪ್ರಿಯದ್ವೇಷ್ಯೌ ಯಸ್ಯ ಸಾಮ್ಯೇನ ವರ್ತತೇ ॥೫॥

ಯಾರಿಗೆ ಹುಟ್ಟು-ಸಾವುಗಳು, ಸುಖ-ದುಃಖಗಳು, ಲಾಭ-ನಷ್ಟಗಳು, ಪ್ರೀತಿಪಾತ್ರರು ದ್ವೇಷಿಗಳು ಸಮಾನವಾಗಿ ಕಾಣಿಸುತ್ತಾರೋ ಅವನು ಮುಕ್ತನಾದಂತೆಯೇ.

ಕಂಚಿನ್ನ ತು ಸ್ಪೃಹಯೇತ ನಾಭಿಜಾನಾತಿ ಕಿಂಚನ ।
ನಿರ್ದ್ವಂದ್ವೋ ವೀತರಾಗಾತ್ಮಾ ಸರ್ವತೋ ಮುಕ್ತ ಏವ ಸಃ ॥೬॥

ಯಾವನು ಮತ್ತೊಬ್ಬರ ಧನಕ್ಕೆ ಆಸೆಪಡುವುದಿಲ್ಲವೋ, ಮತ್ತೊಬ್ಬರನ್ನು ತಿರಸ್ಕಾರ ಬುದ್ಧಿಯಿಂದ ನೋಡುವುದಿಲ್ಲವೋ, ಸುಖ-ದುಃಖಗಳ ಪ್ರಭಾವಕ್ಕೆ ತುತ್ತಾಗುವುದಿಲ್ಲವೋ, ಜಗತ್ತಿನ ವಿಷಯಗಳಲ್ಲಿ ಆಸಕ್ತಿರಹಿತನಾದ ಮನಸ್ಸಿನಿಂದ ಕೂಡಿದ್ದಾನೋ ಅಂತಹವನು ಮುಕ್ತನೇ ಸರಿ.

ಅನಮಿತ್ರೋ ನ ಬದ್ಧಶ್ಚಾಪ್ಯನಪತ್ಯಶ್ಚ ಯಃ ಕ್ವಚಿತ್ ।
ತ್ಯಕ್ತಧರ್ಮಾರ್ಥಕಾಮಶ್ಚ ನಿರಾಕಾಂಕ್ಷೀ ಸ ಮುಚ್ಯತೇ ॥೭॥

ಯಾವನು ಶತ್ರುರಹಿತನಾಗಿದ್ದಾನೋ, ಬಂಧುಗಳಲ್ಲಿ, ಪುತ್ರರಲ್ಲಿ ಮಮತಾ ತ್ಯಾಗ ಮಾಡಿದ್ದಾನೋ, ಧರ್ಮಾರ್ಥಕಾಮಗಳೆಂಬ ಪುರುಷಾರ್ಥಗಳನ್ನು ಸ್ವಾರ್ಥಕ್ಕಾಗಿ ವಿನಿಯೋಗಿಸಿಕೊಳ್ಳುವುದಿಲ್ಲವೋ ಅವನು ಸಂಸಾರದಿಂದ ಮುಕ್ತನಾದಂತೆಯೇ ಸರಿ.

ನೈವ ಧರ್ಮೀ ನ ಚಾಧರ್ಮೀ ಪೂರ್ವೋಪಚಿತಹಾ ಚ ಯಃ ।
ಕ್ಷೀಣಧಾತುಃ ಪ್ರಶಾಂತಶ್ಚ ನಿರ್ದ್ವಂದ್ವಃ ಸ ವಿಮುಚ್ಯತೇ ॥೮॥

ಯಾವನು ಕಾಮ್ಯಧರ್ಮಗಳನ್ನು ಆಚರಿಸುವುದಿಲ್ಲವೋ, ಅಧರ್ಮಾಚರಣೆಯಲ್ಲಿ ರತನಾಗಿರುವುದಿಲ್ಲವೋ, ಪೂರ್ವಸಂಚಿತವಾದ ಕರ್ಮಭೋಗಗಳನ್ನು ಕಳೆದುಕೊಂಡಿದ್ದಾನೋ, ಶಬ್ದಾದಿ ವಿಷಯಗಳ ಬಯಕೆಯಿಂದ ಮುಕ್ತನಾಗಿದ್ದಾನೋ, ಪ್ರಶಾಂತ ಮನಸ್ಕನಾಗಿದ್ದಾನೋ, ಸುಖ-ದುಃಖಗಳಲ್ಲಿ ಸಮತೋಲನ ಕಂಡಿದ್ದಾನೋ ಅವನು ಬಿಡುಗಡೆಯನ್ನು ಹೊಂದುತ್ತಾನೆ.

ಅಕರ್ಮಾ ಚಾವಿಕಾಂಕ್ಷಶ್ಚ ಪಶ್ಯನ್ ಜಗದಶಾಶ್ವತಮ್ ।
ಅಸ್ವಸ್ಥಮವಶಂ ನಿತ್ಯಂ ಜನ್ಮಸಂಸಾರಮೋಹಿತಮ್ ॥೯॥

ಯಾರು ತನ್ನಿಂದ ಕರ್ಮ ನಡೆಯುತ್ತಿರುವಾಗಲೂ ಇದು ಭಗವಂತನಿಂದ ನಡೆಯುವ ಕರ್ಮ ಎಂದು ಅನುಸಂಧಾನ ಮಾಡುತ್ತಾನೋ, ಆ ಕರ್ಮದ ಫಲವನ್ನು ಬಯಸುವುದಿಲ್ಲವೋ, ಜಗತ್ತಿನ ಸುಖಗಳಲ್ಲಿ ಅಶಾಶ್ವತ ಬುದ್ಧಿಯನ್ನು ಹೊಂದಿದ್ದಾನೋ,

ಜಗತ್ತು ಅಸ್ವತಂತ್ರವು, ನಿತ್ಯವೂ ಭಗವಂತನ ವಶವು, ಜನ್ಮ-ಸಂಸಾರಗಳ ಬಂಧನವುಳ್ಳದ್ದು ಎಂದು ತಿಳಿದಿದ್ದಾನೋ ಅವನು ಬಂಧನದಿಂದ ಮುಕ್ತನಾದಂತೆಯೇ ಸರಿ.

ವೈರಾಗ್ಯಬುದ್ಧಿಃ ಸತತಂ ತಾಪದೋಷವ್ಯಪೇಕ್ಷಕಃ ।
ಆತ್ಮಬಂಧವಿನಿರ್ಮೋಕ್ಷಂ ಸ ಕರೋತ್ಯಚಿರಾದಿವ ॥೧೦॥

ಯಾವನು ವೈರಾಗ್ಯಬುದ್ಧಿಯುಳ್ಳವನಾಗಿದ್ದಾನೋ, ಸಂಸಾರದ ತಾಪತ್ರಯ ದೋಷಗಳನ್ನು ಅರಿತವನಾಗಿದ್ದಾನೋ ಅವನು ಆತ್ಮಬಂಧನದಿಂದ ಬಿಡುಗಡೆ ಹೊಂದಿ ಕೂಡಲೇ ಮುಕ್ತನಾಗುತ್ತಾನೆ.

ಅಗಂಧರಸಮಸ್ಪರ್ಶಮಶಬ್ದಮಪರಿಗ್ರಹಮ್ ।
ಅರೂಪಮನಭಿಜ್ಞೇಯಂ ದೃಷ್ಟ್ವಾ ऽऽತ್ಮಾನಂ ವಿಮುಚ್ಯತೇ ॥೧೧॥

ಗಂಧ-ರಸ-ಸ್ಪರ್ಶ-ಶಬ್ದ-ರೂಪಗಳಿಗೆ ಗೋಚರವಲ್ಲದ, ಬಾಹ್ಯವಾದ ರೂಪ ರಹಿತವಾದ, ಸಂಪೂರ್ಣವಾಗಿ ತಿಳಿಯಲು ಅಶಕ್ಯವಾದ, ಹೃದಯಗೃಹ ವಾಸಿಯಾದ ಪರಮಾತ್ಮನನ್ನು ನೋಡಿದ ಕೂಡಲೇ ಬಿಡುಗಡೆ ಹೊಂದುತ್ತಾನೆ.

ಪಂಚಭೂತಗುಣೈರ್ಭಗ್ನಮಮೂರ್ತಿಮವಿಲೇಪನಮ್ ।
ಅಗುಣಂ ಗುಣಭೋಕ್ತಾರಂ ಯಃ ಪಶ್ಯತಿ ಸ ಮುಚ್ಯತೇ ॥೧೨॥

ಪಂಚಭೂತಗುಣಗಳಿಂದ ರಹಿತನಾದ, ಬಾಹ್ಯವಾದ ಮಾನವರ ರೂಪಗಳಂತೆ ಇಲ್ಲದ, ಯಾವ ಪ್ರಕೃತಿಯ ಸಂಬಂಧಗಳಿಂದಲೂ ಲಿಪ್ತನಾಗದ, ಸತ್ವ-ರಜಸ್-ತಮೋ ಗುಣಗಳಿಂದ ದೂರನಾದ, ಜೀವರ ಸ್ವರೂಪಗುಣದ ಸುಖವನ್ನು ಅನುಭವಿಸುವ ಪರಮಾತ್ಮನನ್ನು ಯಾವನು ನೋಡುತ್ತಾನೋ ಅವನು ಬಂಧನದಿಂದ ಬಿಡುಗಡೆ ಹೊಂದುತ್ತಾನೆ.

ವಿಹಾಯ ಸರ್ವಸಂಕಲ್ಪಾನ್ ಬುದ್ಧ್ಯಾ ಶಾರೀರಮಾನಸಾನ್ ।
ಶನೈರ್ನಿರ್ವಾಣಮಾಪ್ನೋತಿ ನಿರಿಂಧನ ಇವಾನಲಃ ॥೧೩॥

ಯಾವನು ಬುದ್ಧಿಯಿಂದ ವಿಚಾರ ಮಾಡಿ ಶಾರೀರಿಕವಾಗಿ, ಮಾನಸಿಕವಾಗಿ ನಡೆಯುವ ಎಲ್ಲ ಸಂಕಲ್ಪಗಳನ್ನು (ಬಂಧಕವಾದ ಕಾಮನೆಗಳನ್ನು) ಕ್ರಮವಾಗಿ ಪರಿತ್ಯಾಗ

ಮಾಡುತ್ತಾನೋ ಅವನು ಕಟ್ಟಿಗೆಯಿಲ್ಲದ ಅಗ್ನಿಯಂತೆ ಕಾಲಾನುಕ್ರಮವಾಗಿ ಶಾಂತಿಯನ್ನು ಹೊಂದುತ್ತಾನೆ.

ವಿಮುಕ್ತಃ ಸರ್ವಸಂಸ್ಕಾರೈಸ್ತತೋ ಬ್ರಹ್ಮ ಸನಾತನಮ್ ।
ಪರಮಾಪ್ನೋತಿ ವೈ ಶಾಂತೋ ಹ್ಯಚಲಂ ದಿವ್ಯಮಕ್ಷರಮ್ ॥೧೪॥

ಎಲ್ಲ ವಿಧವಾದ ಸಂಸ್ಕಾರಗಳಿಂದ ವಿಮುಕ್ತನಾದ (ಪ್ರಕೃತಿಯ ವಾಸನಾ ಸಂಸ್ಕಾರಗಳಿಂದ ಬಿಡುಗಡೆ ಹೊಂದಿದ), ಶಾಂತಾತ್ಮನಾದ ಸಾಧಕನು, ಸನಾತನನಾದ, ಗುಣಪರಿಪೂರ್ಣನಾದ, ಅಚಲನಾದ, ದಿವ್ಯ ಮತ್ತು ಅಕ್ಷರನೆನಿಸಿದ ಪರಬ್ರಹ್ಮನನ್ನು ಯಾವಾಗ ಹೊಂದುತ್ತಾನೋ ಆಗ ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ.

ಅತಃ ಪರಂ ಪ್ರವಕ್ಷ್ಯಾಮಿ ಯೋಗಶಾಸ್ತ್ರಮನುತ್ತಮಮ್ ।
ಯಜ್ಜ್ಞಾತ್ವಾ ಸಿದ್ಧಮಾತ್ಮಾನಂ ಲೋಕೇ ಪಶ್ಯಂತಿ ಯೋಗಿನಃ ॥೧೫॥

ಕಾಶ್ಯಪನೇ, ಇನ್ನು ಮುಂದೆ ನಿನಗೆ ಶ್ರೇಷ್ಠವಾದ ಯೋಗಶಾಸ್ತ್ರವನ್ನು ಹೇಳುತ್ತೇನೆ. ಯಾವ ಯೋಗಾಭ್ಯಾಸವನ್ನು ಸಾಧಿಸಿಕೊಂಡ ಸಿದ್ಧಪುರುಷರು ಪರಮಾತ್ಮನನ್ನು ಹೇಗೆ ನೋಡುತ್ತಾರೆ ಎಂಬುದನ್ನು ತಿಳಿಸುತ್ತೇನೆ.

ತಸ್ಯೋಪದೇಶಂ ವಕ್ಷ್ಯಾಮಿ ಯಥಾವತ್ ತನ್ನಿಬೋಧ ಮೇ ।
ಯೈರ್ಯೋಗೈರ್ಭಾವಯನ್ ನಿತ್ಯಂ ಪಶ್ಯತ್ಯಾತ್ಮಾನಮಾತ್ಮನಿ ॥೧೬॥

ಸಿದ್ಧಪುರುಷನು ಮಾಡಿದ ಉಪದೇಶವನ್ನು ಯಥಾವತ್ತಾಗಿ ನಿನಗೆ ತಿಳಿಸುತ್ತೇನೆ, ಅದನ್ನು ತಿಳಿದುಕೊ. ಯಾವ ಯೋಗಗಳನ್ನು ನಿತ್ಯವೂ ಅನುಸಂಧಾನ ಮಾಡುತ್ತಾ, ಹೃದಯದಲ್ಲಿ ಪರಮಾತ್ಮನನ್ನು ಕಾಣುವೆಯೋ ಅಂತಹ ತತ್ತ್ವದ ಬಗ್ಗೆ ತಿಳಿಸುತ್ತೇನೆ.

ಇಂದ್ರಿಯಾಣ್ಯುಪಸಂಹೃತ್ಯ ಮನ ಆತ್ಮನಿ ಧಾರಯೇತ್ ।
ತೀವ್ರಂ ತಪ್ತ್ವಾ ತಪಃ ಪೂರ್ವಂ ತತೋ ಯೋಕ್ತುಮುಪಕ್ರಮೇತ್ ॥೧೭॥

ಬಾಹ್ಯವಾದ ವಿಷಯಪದಾರ್ಥಗಳ ಕಡೆ ಸಾಗುವ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿಕೊಳ್ಳಬೇಕು. ಹೀಗೆ ಉಗ್ರವಾದ ತಪಸ್ಸನ್ನು ಮಾಡಿ ನಂತರ ಮೋಕ್ಷ ಸಾಧನೆಯ ಉಪಾಯವನ್ನು ಆಶ್ರಯಿಸಬೇಕು.

ತಪಸ್ವೀ ನಿತ್ಯಸಂಕಲ್ಪೋ ದಂಭಾಹಂಕಾರವರ್ಜಿತಃ ।
ಮನೀಷೀ ಮನಸಾ ವಿಪ್ರಃ ಪಶ್ಯತ್ಯಾತ್ಮಾನಮಾತ್ಮನಿ ॥೧೮॥

ವಿದ್ವಾಂಸನಾದ ಬ್ರಾಹ್ಮಣನು ನಿರಂತರ ತಪಸ್ಸನ್ನು ಮಾಡುತ್ತಾ ಜಂಬ, ಅಹಂಕಾರಗಳನ್ನು ದೂರೀಕರಿಸಿ, ಜ್ಞಾನಿಯಾಗಿ ಮನಸ್ಸಿನಿಂದ ಪರಮಾತ್ಮನನ್ನು ಕಂಡುಕೊಳ್ಳುತ್ತಾನೆ.

ನ ಚೇಚ್ಛಕ್ನೋತ್ಯಯಂ ಸಾಧುರ್ಯೋಕ್ತುಮಾತ್ಮಾನಮಾತ್ಮನಿ ।
ತತ ಏಕಾಂತಶೀಲಃ ಸನ್ ಪಶ್ಯತ್ಯಾತ್ಮಾನಮಾತ್ಮನಿ ॥೧೯॥

ಏಕಾಂತವನ್ನು ಬಯಸುವ ಸಾಧಕನು ತನ್ನ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸುವ ಪ್ರಯತ್ನದಲ್ಲಿ ಸಾಫಲ್ಯವನ್ನು ಹೊಂದಿದರೆ ನಿಶ್ಚಿತವಾಗಿಯೂ ತನ್ನ ಶರೀರದಲ್ಲಿಯೇ ಪರಮಾತ್ಮನ ದರ್ಶನವನ್ನು ಹೊಂದುತ್ತಾನೆ.

ಸಂಯತಃ ಸತತಂ ಯುಕ್ತ ಆತ್ಮವಾನ್ ನಿಯತೇಂದ್ರಿಯಃ ।
ಯಥಾऽಯಮಾತ್ಮನ್ಯಾತ್ಮಾನಂ ಸಾಧು ಯುಕ್ತಃ ಪ್ರಪಶ್ಯತಿ ॥೨೦॥

ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರುವ, ಯೋಗಯುಕ್ತನಾದ, ದೃಢವಾದ ಮನಸ್ಸುಳ್ಳ, ಜಿತೇಂದ್ರಿಯನಾದ, ಸಮಾಧಿಸ್ಥನಾದ ಸಾಧಕನು ಬುದ್ಧಿಯ ಮೂಲಕವಾಗಿ ಪರಮಾತ್ಮನನ್ನು ಚೆನ್ನಾಗಿ ನೋಡುತ್ತಾನೆ.

ಯಥಾ ಹಿ ಪುರುಷಂ ಸ್ವಪ್ನೇ ದೃಷ್ಟ್ವಾ ಪಶ್ಯತ್ಯಸಾವಿತಿ ।
ತಥಾರೂಪಮಿವಾತ್ಮಾನಂ ಸಾಧು ಯುಕ್ತಃ ಪ್ರಪಶ್ಯತಿ ॥೨೧॥

ಯಾವ ರೀತಿಯಾಗಿ ಸ್ವಪ್ನ ಕಾಣುವ ಪುರುಷನು ಸ್ವಪ್ನದಲ್ಲಿ ಯಾರನ್ನಾದರೂ ಕಂಡರೆ ಅವನು ಎಚ್ಚರದಲ್ಲಿ ಪುನಃ ಅವನೇ ಇವನೆಂದು ಗುರುತಿಸುತ್ತಾನೋ, ಅದೇ ರೀತಿಯಾಗಿ ಸಾಧನಾನುಷ್ಠಾನವನ್ನು ಮಾಡುವ ಯೋಗಿಯು ಸೌಂದರ್ಯ-ಲಾವಣ್ಯಗಳಿಂದ ಕೂಡಿರುವ ಆಕಾರವನ್ನು ಮಾಂಸದ ಕಣ್ಣಿನಿಂದ ನೋಡುವಂತೆ ಅಂತರಂಗದ ಕಣ್ಣಿನಿಂದಲೂ ನೋಡಲು ಸಮರ್ಥನಾಗುತ್ತಾನೆ.

ಇಷೀಕಾಂ ವಾ ಯಥಾ ಮುಂಜಾತ್ ಕಶ್ಚಿನ್ನಿಹೃತ್ಯ ದರ್ಶಯೇತ್ ।
ಯೋಗೀ ನಿವಿಷ್ಟಮಾತ್ಮಾನಂ ತಥಾ ಸಂಪಶ್ಯತೇ ತನೌ ॥೨೨॥

ಮಾಡುತ್ತಾನೋ ಅವನು ಕಟ್ಟಿಗೆಯಿಲ್ಲದ ಅಗ್ನಿಯಂತೆ ಕಾಲಾನುಕ್ರಮವಾಗಿ ಶಾಂತಿಯನ್ನು ಹೊಂದುತ್ತಾನೆ.

ವಿಮುಕ್ತಃ ಸರ್ವಸಂಸ್ಕಾರೈಸ್ತತೋ ಬ್ರಹ್ಮ ಸನಾತನಮ್ ।
ಪರಮಾಪ್ನೋತಿ ವೈ ಶಾಂತೋ ಹ್ಯಚಲಂ ದಿವ್ಯಮಕ್ಷರಮ್ ॥೧೪॥

ಎಲ್ಲ ವಿಧವಾದ ಸಂಸ್ಕಾರಗಳಿಂದ ವಿಮುಕ್ತನಾದ (ಪ್ರಕೃತಿಯ ವಾಸನಾ ಸಂಸ್ಕಾರಗಳಿಂದ ಬಿಡುಗಡೆ ಹೊಂದಿದ), ಶಾಂತಾತ್ಮನಾದ ಸಾಧಕನು, ಸನಾತನನಾದ, ಗುಣಪರಿಪೂರ್ಣನಾದ, ಅಚಲನಾದ, ದಿವ್ಯ ಮತ್ತು ಅಕ್ಷರನೆನಿಸಿದ ಪರಬ್ರಹ್ಮನನ್ನು ಯಾವಾಗ ಹೊಂದುತ್ತಾನೋ ಆಗ ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ.

ಅತಃ ಪರಂ ಪ್ರವಕ್ಷ್ಯಾಮಿ ಯೋಗಶಾಸ್ತ್ರಮನುತ್ತಮಮ್ ।
ಯಜ್ಜ್ಞಾತ್ವಾ ಸಿದ್ಧಮಾತ್ಮಾನಂ ಲೋಕೇ ಪಶ್ಯಂತಿ ಯೋಗಿನಃ ॥೧೫॥

ಕಾಶ್ಯಪನೇ, ಇನ್ನು ಮುಂದೆ ನಿನಗೆ ಶ್ರೇಷ್ಠವಾದ ಯೋಗಶಾಸ್ತ್ರವನ್ನು ಹೇಳುತ್ತೇನೆ. ಯಾವ ಯೋಗಾಭ್ಯಾಸವನ್ನು ಸಾಧಿಸಿಕೊಂಡ ಸಿದ್ಧಪುರುಷರು ಪರಮಾತ್ಮನನ್ನು ಹೇಗೆ ನೋಡುತ್ತಾರೆ ಎಂಬುದನ್ನು ತಿಳಿಸುತ್ತೇನೆ.

ತಸ್ಯೋಪದೇಶಂ ವಕ್ಷ್ಯಾಮಿ ಯಥಾವತ್ ತನ್ನಿಬೋಧ ಮೇ ।
ಯೈರ್ಯೋಗೈರ್ಭಾವಯನ್ ನಿತ್ಯಂ ಪಶ್ಯತ್ಯಾತ್ಮಾನಮಾತ್ಮನಿ ॥೧೬॥

ಸಿದ್ಧಪುರುಷನು ಮಾಡಿದ ಉಪದೇಶವನ್ನು ಯಥಾವತ್ತಾಗಿ ನಿನಗೆ ತಿಳಿಸುತ್ತೇನೆ, ಅದನ್ನು ತಿಳಿದುಕೊ. ಯಾವ ಯೋಗಗಳನ್ನು ನಿತ್ಯವೂ ಅನುಸಂಧಾನ ಮಾಡುತ್ತಾ, ಹೃದಯದಲ್ಲಿ ಪರಮಾತ್ಮನನ್ನು ಕಾಣುವೆಯೋ ಅಂತಹ ತತ್ತ್ವದ ಬಗ್ಗೆ ತಿಳಿಸುತ್ತೇನೆ.

ಇಂದ್ರಿಯಾಣ್ಯುಪಸಂಹೃತ್ಯ ಮನ ಆತ್ಮನಿ ಧಾರಯೇತ್ ।
ತೀವ್ರಂ ತಪ್ತ್ವಾ ತಪಃ ಪೂರ್ವಂ ತತೋ ಯೋಕ್ತುಮುಪಕ್ರಮೇತ್ ॥೧೭॥

ಬಾಹ್ಯವಾದ ವಿಷಯಪದಾರ್ಥಗಳ ಕಡೆ ಸಾಗುವ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿಕೊಳ್ಳಬೇಕು. ಹೀಗೆ ಉಗ್ರವಾದ ತಪಸ್ಸನ್ನು ಮಾಡಿ ನಂತರ ಮೋಕ್ಷ ಸಾಧನೆಯ ಉಪಾಯವನ್ನು ಆಶ್ರಯಿಸಬೇಕು.

ತಪಸ್ವೀ ನಿತ್ಯಸಂಕಲ್ಪೋ ದಂಭಾಹಂಕಾರವರ್ಜಿತಃ ।
ಮನೀಷೀ ಮನಸಾ ವಿಪ್ರಃ ಪಶ್ಯತ್ಯಾತ್ಮಾನಮಾತ್ಮನಿ ॥೧೮॥

ವಿದ್ವಾಂಸನಾದ ಬ್ರಾಹ್ಮಣನು ನಿರಂತರ ತಪಸ್ಸನ್ನು ಮಾಡುತ್ತಾ ಜಂಬ, ಅಹಂಕಾರಗಳನ್ನು ದೂರೀಕರಿಸಿ, ಜ್ಞಾನಿಯಾಗಿ ಮನಸ್ಸಿನಿಂದ ಪರಮಾತ್ಮನನ್ನು ಕಂಡುಕೊಳ್ಳುತ್ತಾನೆ.

ನ ಚೇಚ್ಛಕ್ನೋತ್ಯಯಂ ಸಾಧುರ್ಯೋಕ್ತುಮಾತ್ಮಾನಮಾತ್ಮನಿ ।
ತತ ಏಕಾಂತಶೀಲಃ ಸನ್ ಪಶ್ಯತ್ಯಾತ್ಮಾನಮಾತ್ಮನಿ ॥೧೯॥

ಏಕಾಂತವನ್ನು ಬಯಸುವ ಸಾಧಕನು ತನ್ನ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸುವ ಪ್ರಯತ್ನದಲ್ಲಿ ಸಾಫಲ್ಯವನ್ನು ಹೊಂದಿದರೆ ನಿಶ್ಚಿತವಾಗಿಯೂ ತನ್ನ ಶರೀರದಲ್ಲಿಯೇ ಪರಮಾತ್ಮನ ದರ್ಶನವನ್ನು ಹೊಂದುತ್ತಾನೆ.

ಸಂಯತಃ ಸತತಂ ಯುಕ್ತ ಆತ್ಮವಾನ್ ನಿಯತೇಂದ್ರಿಯಃ ।
ಯಥಾऽಯಮಾತ್ಮನ್ಯಾತ್ಮಾನಂ ಸಾಧು ಯುಕ್ತಃ ಪ್ರಪಶ್ಯತಿ ॥೨೦॥

ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರುವ, ಯೋಗಯುಕ್ತನಾದ, ದೃಢವಾದ ಮನಸ್ಸುಳ್ಳ, ಜಿತೇಂದ್ರಿಯನಾದ, ಸಮಾಧಿಸ್ಥನಾದ ಸಾಧಕನು ಬುದ್ಧಿಯ ಮೂಲಕವಾಗಿ ಪರಮಾತ್ಮನನ್ನು ಚೆನ್ನಾಗಿ ನೋಡುತ್ತಾನೆ.

ಯಥಾ ಹಿ ಪುರುಷಂ ಸ್ವಪ್ನೇ ದೃಷ್ಟ್ವಾ ಪಶ್ಯತ್ಯಸಾವಿತಿ ।
ತಥಾರೂಪಮಿವಾತ್ಮಾನಂ ಸಾಧು ಯುಕ್ತಃ ಪ್ರಪಶ್ಯತಿ ॥೨೧॥

ಯಾವ ರೀತಿಯಾಗಿ ಸ್ವಪ್ನ ಕಾಣುವ ಪುರುಷನು ಸ್ವಪ್ನದಲ್ಲಿ ಯಾರನ್ನಾದರೂ ಕಂಡರೆ ಅವನು ಎಚ್ಚರದಲ್ಲಿ ಪುನಃ ಅವನೇ ಇವನೆಂದು ಗುರುತಿಸುತ್ತಾನೋ, ಅದೇ ರೀತಿಯಾಗಿ ಸಾಧನಾನುಷ್ಠಾನವನ್ನು ಮಾಡುವ ಯೋಗಿಯು ಸೌಂದರ್ಯ-ಲಾವಣ್ಯಗಳಿಂದ ಕೂಡಿರುವ ಆಕಾರವನ್ನು ಮಾಂಸದ ಕಣ್ಣಿನಿಂದ ನೋಡುವಂತೆ ಅಂತರಂಗದ ಕಣ್ಣಿನಿಂದಲೂ ನೋಡಲು ಸಮರ್ಥನಾಗುತ್ತಾನೆ.

ಇಷೀಕಾಂ ವಾ ಯಥಾ ಮುಂಜಾತ್ ಕಶ್ಚಿನ್ನಿಹೃತ್ಯ ದರ್ಶಯೇತ್ ।
ಯೋಗೀ ನಿವಿಷ್ಟಮಾತ್ಮಾನಂ ತಥಾ ಸಂಪಶ್ಯತೇ ತನೌ ॥೨೨॥

ಒಬ್ಬಾತನು ಯಾವ ವಿಧವಾಗಿ ಮುಂಜದ ಹುಲ್ಲಿನಿಂದ ಅದರಲ್ಲಿರುವ ಇಷೀಕವನ್ನು ತೆಗೆದು ತೋರಿಸುತ್ತಾನೋ ಅದೇ ರೀತಿಯಾಗಿ ಯೋಗಿಯಾದವನು ತನ್ನ ದೇಹದಿಂದ ವಿಭಿನ್ನನಾದ ಪರಮಾತ್ಮನನ್ನು ಪೃಥಕ್ಕರಿಸಿ ನೋಡುತ್ತಾನೆ.

ಮುಂಜಂ ಶರೀರಂ ತಸ್ಯಾಹುರಿಷೀಕಾಮಾತ್ಮನಿ ಶ್ರಿತಾಮ್ ।
ಏತನ್ನಿದರ್ಶನಂ ಪ್ರೋಕ್ತಂ ಯೋಗವಿದ್ಭಿರನುತ್ತಮಮ್ ॥೨೩॥

ಮುಂಜವನ್ನೇ ಶರೀರವೆಂದು ಹೇಳುತ್ತಾರೆ. ಪರಮಾತ್ಮನನ್ನು ಆಶ್ರಯಿಸಿಕೊಂಡಿರುವ ಜೀವನನ್ನು ಇಷೀಕ ಎನ್ನುತ್ತಾರೆ. ಈ ದೇಹ ಮತ್ತು ಆತ್ಮಗಳು ಪೃಥಕ್ಕಾಗಿವೆ ಎಂಬುದನ್ನು ಯೋಗವಿದ್ಯೆಯನ್ನು ತಿಳಿದ ವಿದ್ವಾಂಸರು ಈ ಉತ್ತಮವಾದ ನಿದರ್ಶನವನ್ನು ಹೇಳಿರುತ್ತಾರೆ.

ಯದಾ ಹಿ ಯುಕ್ತಮಾತ್ಮಾನಂ ಸಮ್ಯಕ್ ಪಶ್ಯತಿ ದೇಹಭೃತ್ ।
ತದಾऽಸ್ಯ ಕೇಶವೇ ಭಕ್ತಿಸ್ತ್ರೈಲೋಕ್ಯಸ್ಯಾಪಿ ಯಃ ಪ್ರಭುಃ ॥೨೪॥

ದೇಹವನ್ನು ಧರಿಸಿರುವ ಪುರುಷನು ಯೋಗದ ಮೂಲಕ ಪರಮಾತ್ಮನನ್ನು ಒಳಗಣ್ಣಿನಿಂದ ಚೆನ್ನಾಗಿ ನೋಡುತ್ತಾನೋ ಆ ಸಮಯದಲ್ಲಿ ಮೂರು ಲೋಕಗಳಿಗೂ ಒಡೆಯನಾಗಿರುವ ಸ್ವಾಮಿಯನ್ನೇ ಅರ್ಥಮಾಡಿಕೊಂಡ ಬಳಿಕ ಶ್ರೀಹರಿಯನ್ನು ಬಿಟ್ಟು ತನಗೆ ಮತ್ತೊಬ್ಬರು ನಿಯಾಮಕರಿಲ್ಲ ಎಂಬುದನ್ನು ಅರ್ಥಮಾಡಿಕೊಂಡಿರುತ್ತಾನೆ. ಕೇಶವನಲ್ಲಿ ಭಕ್ತಿಯೂ ದೃಢವಾಗುತ್ತದೆ.

ಅನ್ಯಾ ಅನ್ಯಾಶ್ಚ ತನವೋ ಯಥೇಷ್ಟಂ ಪ್ರತಿಪದ್ಯತೇ ।
ವಿನಿರ್ಧಿದ್ಯ ಜರಾಂ ಮೃತ್ಯುಂ ನ ಹೃಷ್ಯತಿ ನ ಶೋಚತಿ ॥೨೫॥

ಯೋಗಿಯಾದವನು ತನ್ನ ಇಚ್ಛೆಗನುಗುಣವಾಗಿ ನಾನಾ ವಿಧ ಶರೀರಗಳನ್ನು ಪಡೆಯುತ್ತಾನೆ. ಮುಪ್ಪು-ಸಾವುಗಳನ್ನೂ ಗೆಲ್ಲುತ್ತಾನೆ. ಅವನು ಶೋಕಿಸುವುದೂ ಇಲ್ಲ, ಬಾಹ್ಯಸುಖಗಳಿಂದ ಸಂತುಷ್ಟನಾಗುವುದೂ ಇಲ್ಲ.

ದೇವಾನಾಮಪಿ ದೇವತ್ವಂ ಯುಕ್ತಃ ಕಾರಯತೇ ವಶೀ ।
ಬ್ರಹ್ಮ ಚಾವ್ಯಯಮಾಪ್ನೋತಿ ಹಿತ್ವಾ ದೇಹಮಶಾಶ್ವತಮ್ ॥೨೬॥

ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವ ಸಿದ್ಧಪುರುಷನು ದೇವತೆಗಳಿಗೂ ದೇವತೆಯಾಗಬಲ್ಲನು. ಅನಿತ್ಯವಾದ ಶರೀರವನ್ನು ತ್ಯಾಗ ಮಾಡಿ, ಅವ್ಯಯನಾದ ಪರಬ್ರಹ್ಮನ ಪದವನ್ನು ಹೊಂದುತ್ತಾನೆ.

ವಿನಶ್ಯತ್ಸ್ವಪಿ ಲೋಕೇಷು ನ ಭಯಂ ತಸ್ಯ ಜಾಯತೇ ।
ಕ್ಲಿಶ್ಯಮಾನೇಷು ಭೂತೇಷು ನ ಸ ಕ್ಲಿಶ್ಯತಿ ಕೇನಚಿತ್ ॥೨೭॥

ಯೋಗಸಿದ್ಧಿಯನ್ನು ಪಡೆದ ವ್ಯಕ್ತಿಗೆ ಸಮಸ್ತ ಪ್ರಾಣಿಗಳು ನಾಶ ಹೊಂದಿದರೂ ಭಯವಾಗುವುದಿಲ್ಲ. ಎಲ್ಲರೂ ಕ್ಲೇಶವನ್ನು ಹೊಂದುತ್ತಿದ್ದರೂ ಅವನಿಗೆ ಯಾವುದೇ ವಿಧವಾದ ಕ್ಲೇಶವಿರುವುದಿಲ್ಲ.

ದುಃಖಶೋಕಮಲೈಶ್ಚೋರ್ಯೈಃ ಸಂಗಸ್ನೇಹಸಮುದ್ಭವೈಃ ।
ನ ವಿಚಾಲ್ಯೇತ ಯುಕ್ತಾತ್ಮಾ ನಿಸ್ಪೃಹಃ ಶಾಂತಮಾನಸಃ ॥೨೮॥

ಯೋಗಯುಕ್ತನಾದ, ಶಾಂತಚಿತ್ತನಾದ, ಸಮಸ್ತ ಬಾಹ್ಯ ಆಕಾಂಕ್ಷೆಗಳನ್ನು ಗೆದ್ದಿರುವ ಸಿದ್ಧಪುರುಷನು ಮೋಹ-ಸ್ನೇಹಗಳಿಂದ ಒದಗಿ ಬರುವ ದುಃಖ-ಶೋಕ-ಭಯಗಳಿಂದ ವಿಚಲಿತನಾಗುವುದಿಲ್ಲ.

ನೈನಂ ಶಸ್ತ್ರಾಣಿ ವಿಧ್ಯಂತೇ ನ ಮೃತ್ಯುಶ್ಚಾಸ್ಯ ವಿದ್ಯತೇ ।
ನಾತಃ ಸುಖತರಂ ಕಿಂಚಿಲ್ಲೋಕೇ ಕ್ವಚನ ವಿದ್ಯತೇ ॥೨೯॥

ಯೋಗಿಯನ್ನು ಶಸ್ತ್ರಗಳೂ ಭೇದಿಸವು. ಮರಣ ಬಾಧಿಸದು. ಪ್ರಪಂಚದಲ್ಲಿ ಅವನಷ್ಟು ಸುಖಿಗಳಾದವರು ಬೇರೆ ಯಾರೂ ಕಾಣರು.

ಸಮ್ಯಗ್ಯುಕ್ತೋ ಯದಾऽऽತ್ಮಾನಮಾತ್ಮನ್ಯೇವ ಪ್ರಪಶ್ಯತಿ ।
ತದೈವ ನ ಸ್ಪೃಹಯತಿ ಸಾಕ್ಷಾದಪಿ ಮರುತ್ಪತೇಃ ॥೩೦॥

ಯೋಗಿಯು ತನ್ನ ಬುದ್ಧಿಯನ್ನು ಪರಮಾತ್ಮನಲ್ಲಿ ಸಮರ್ಪಿಸಿ, ಅವನಲ್ಲೇ ರತನಾಗಿರುತ್ತಾನೆ. ಸುಖ-ದುಃಖಗಳನ್ನು ದೂರೀಕರಿಸಿಕೊಂಡು ಉತ್ತಮವಾದ ಸ್ಥಾನಗಳು ಸಿಕ್ಕಿದರೂ ಅಪೇಕ್ಷಿಸದೆ ಸುಖವಾಗಿ ಇರುತ್ತಾನೆ.

ನಿರ್ವೇದಸ್ತು ನ ಗಂತವ್ಯೋ ಯುಂಜಾನೇನ ಕಥಂಚನ ॥೩೧॥

ಯೋಗಜನಿತವಾದ ಐಶ್ವರ್ಯವನ್ನು ಉಪಭೋಗಿಸುವ ಯೋಗಿಯು ಯಾವುದೇ ಕಾರಣದಿಂದ ಯೋಗದಿಂದ ವಿರಕ್ತನಾಗಬಾರದು.

ಯೋಗಮೇಕಾಂತಶೀಲಸ್ತು ಯಥಾ ವಿಂದತಿ ತಚ್ಛೃಣು ॥೩೨॥

ಏಕಾಂತಶೀಲನಾದ ವ್ಯಕ್ತಿಯು ಯೋಗವನ್ನು ಹೇಗೆ ಹೊಂದುತ್ತಾನೆ ಎಂದು ಹೇಳುತ್ತೇನೆ, ಕೇಳಿಸಿಕೊ.

ದೃಷ್ಟಪೂರ್ವಾಂ ದಿಶಂ ಧ್ಯಾತ್ವಾ ಯಸ್ಮಿನ್ ಸನ್ನಿವಸೇತ್ ಪುರೇ ।
ಪುರಸ್ಯಾಭ್ಯಂತರೇ ತಸ್ಯ ಮನಶ್ಚಾರ್ಯಂ ನ ಬಾಹ್ಯತಃ ॥೩೩॥

ಹಿಂದೆ ಗುರುಗಳಿಂದ ಉಪದಿಷ್ಟವಾದಾಗ ಕಂಡ ಸೂಕ್ಷ್ಮವಾದ ಮಾರ್ಗವನ್ನು ಧ್ಯಾನಿಸುತ್ತಾ, ಪರಮಾತ್ಮನು ಯಾವ ಶರೀರದ ಸ್ಥಳದಲ್ಲಿ ಇದ್ದಾನೋ ಅಲ್ಲಿಯೇ ಮನಸ್ಸನ್ನು ಸಂಯೋಜಿಸಬೇಕು. ಶರೀರದಿಂದ ಹೊರಗಿರುವ ಪ್ರಪಂಚದಲ್ಲಿ ಸಂಚಲನಶೀಲವಾದ ಮನಸ್ಸನ್ನು ಹರಿಬಿಡಬಾರದು.

ಪುರಸ್ಯಾಭ್ಯಂತರೇ ತಿಷ್ಠನ್ ಯಸ್ಮಿನ್ನಾವಸಥೇ ವಸೇತ್ ।
ತಸ್ಮಿನ್ನಾವಸಥೇ ಚಾರ್ಯಂ ನ ಬಾಹ್ಯಾಭ್ಯಂತರೇ ಮನಃ ॥೩೪॥

ಶರೀರದಲ್ಲಿರುವ ಜೀವನು ವಿಷಯಗಳನ್ನು ಇಂದ್ರಿಯಗಳಲ್ಲಿಯೂ, ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ ನೆಲೆಗೊಳಿಸಿ, ಮನಸ್ಸನ್ನು ಪರಮಾತ್ಮನು ಸನ್ನಿಹಿತನಾಗಿರುವ ಮೂಲಾಧಾರಾದಿ ಚಕ್ರಗಳಲ್ಲಿ ನೆಲೆಗೊಳಿಸಬೇಕು.

ಪ್ರಚಿಂತ್ಯಾವಸಥಂ ಕೃತ್ಸ್ನಂ ಯಸ್ಮಿನ್ ಕಾಯೇऽವತಿಷ್ಠತೇ ।
ತಸ್ಮಿನ್ ಕಾಯೇ ಮನಶ್ಚಾರ್ಯಂ ನ ಕಥಂಚನ ಬಾಹ್ಯತಃ ॥೩೫॥

ಪರಮಾತ್ಮನಿರುವ ಮೂಲಾಧಾರವೇ ಮೊದಲಾದ ಚಕ್ರಗಳಲ್ಲಿ ಮನಸ್ಸನ್ನು ಸಂಪೂರ್ಣವಾಗಿ ವಿಲೀನಗೊಳಿಸಿ ಧ್ಯಾನ ಮಾಡುತ್ತಿರುವಾಗ ಯಾವ ಕಾಲದಲ್ಲಿ ಶ್ರೀಹರಿಯ ದರ್ಶನವಾಗುವುದೋ ಆ ಸಮಯದಲ್ಲಿಯೇ ಬಾಹ್ಯ ಸುಖಗಳ್ಯಾವುವೂ ಮನಸ್ಸಿನಲ್ಲಿ ಗೋಚರಿಸುವುದಿಲ್ಲ. ಮನಸ್ಸು ಶುಭ್ರವಾದ ಕನ್ನಡಿಯಂತಾಗುತ್ತದೆ. ಆ ಶುಭ್ರತೆ ಇದ್ದಾಗಲೇ ಪರಮಾತ್ಮನ ದರ್ಶನವು ಸಿದ್ಧಿಸುತ್ತದೆ.

ಸನ್ನಿಯಮ್ಯೇಂದ್ರಿಯಗ್ರಾಮಂ ನಿಘೋರ್ಷೇ ನಿರ್ಜನೇ ಶುಭೇ ।
ಕಾಯಮಭ್ಯಂತರೇ ಕೃತ್ಸ್ನಮೇಕಾಗ್ರಃ ಪರಿಚಿಂತಯೇತ್ ॥೩೬॥

ಇಂದ್ರಿಯಗಳ ಸಮುದಾಯವನ್ನು ನಿಯಂತ್ರಣಗೊಳಿಸಿ, ಶಬ್ದರಹಿತವಾದ ಜನರಿಂದ ದೂರವಾದ ಏಕಾಂತ ಸ್ಥಳದಲ್ಲಿ ಅವಿತುಕೊಂಡು ದೇಹದ ಒಳಗಡೆಯೇ ಇರುವ ಪರಮಾತ್ಮನನ್ನು ಏಕಾಗ್ರ ಬುದ್ಧಿಯಿಂದ ಧ್ಯಾನ ಮಾಡಬೇಕು.

ದಂತಾಂಸ್ತಾಲು ಚ ಜಿಹ್ವಾಂ ಚ ಗಲಂ ಗ್ರೀವಾಂ ತಥೈವ ಚ ।
ಹೃದಯಂ ಚಿಂತಯೇಚ್ಚಾಪಿ ತಥಾ ಹೃದಯಬಂಧನಮ್ ॥೩೭॥

ಹಲ್ಲುಗಳು, ದವಡೆಗಳು, ನಾಲಿಗೆ, ಗಂಟಲು, ಕುತ್ತಿಗೆ, ಹೃದಯಬಂಧನ- ಇವುಗಳಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನಿಸಬೇಕು.

ಇತ್ಯುಕ್ತಃ ಸ ಮಯಾ ಶಿಷ್ಯೋ ಮೇಧಾವೀ ಮಧುಸೂದನ ।
ಪಪ್ರಚ್ಛ ಪುನರೇವೇಮಂ ಮೋಕ್ಷಧರ್ಮಂ ಸುದುರ್ವಚಮ್ ॥೩೮॥

ಈ ರೀತಿಯಾಗಿ ಮೇಧಾವಿಯಾದ ಸಿದ್ಧಪುರುಷನು ಅನೇಕ ತತ್ತ್ವಗಳನ್ನು ಉಪದೇಶಿಸಿದ ಬಳಿಕ ಪುನಃ ಯಾರೂ ತಿಳಿಸದ ಮೋಕ್ಷಧರ್ಮದ ಬಗ್ಗೆ ಕಾಶ್ಯಪನು ಪ್ರಶ್ನಿಸಿದನು.

ಶಿಷ್ಯಃ

ಭುಕ್ತಂ ಭುಕ್ತಂ ಕಥಮಿದಮನ್ನಂ ಕೋಷ್ಠೇ ವಿಪಚ್ಯತೇ ।
ಕಥಂ ರಸತ್ವಂ ವ್ರಜತಿ ಶೋಣಿತಂ ಜಾಯತೇ ಕಥಮ್ ॥೩೯॥

ಶಿಷ್ಯ– ಪ್ರತಿದಿನವೂ ಮನುಷ್ಯನು ತಿನ್ನುವ ಆಹಾರವು ಹೊಟ್ಟೆಯನ್ನು ಸೇರಿದ ಮೇಲೆ ಹೇಗೆ ಜೀರ್ಣವಾಗುತ್ತದೆ? ಜೀರ್ಣವಾದ ಬಳಿಕ ಹೇಗೆ ರಸರೂಪವನ್ನು ಹೊಂದುತ್ತದೆ? ಹೇಗೆ ರಕ್ತರೂಪದಲ್ಲಿ ಪರಿಣಾಮವನ್ನು ಹೊಂದುತ್ತದೆ?

ಕಥಂ ಮಾಂಸಂ ಚ ಮೇದಶ್ಚ ಸ್ನಾಯ್ವಸ್ಥೀನಿ ಚ ಪೋಷಯೇತ್ ।
ಕಥಮೇತಾನಿ ಸರ್ವಾಣಿ ಶರೀರಾಣಿ ಶರೀರಿಣಾಮ್ ॥೪೦॥

ಹೇಗೆ ಮಾಂಸವಾಗುತ್ತದೆ? ಮೇದಸ್ಸಾಗುತ್ತದೆ? ಸ್ನಾಯು, ಅಸ್ಥಿಗಳಾಗಿ ದೇಹವನ್ನು ಪೋಷಿಸುತ್ತದೆ? ದೇಹಧಾರಿಗಳಾದ ಎಲ್ಲರ ಶರೀರಗಳು ಹೇಗೆ ವೃದ್ಧಿಯನ್ನು ಹೊಂದುತ್ತವೆ?

ವರ್ಧಂತೇ ವರ್ಧಮಾನಸ್ಯ ವರ್ಧತೇ ಚ ಕಥಂ ಬಲಮ್ ।
ನಿರಾಸನಂ ನಿಷ್ಕಸನಂ ಮಲಾನಾಂ ಚ ಪೃಥಕ್ ಪೃಥಕ್ ॥೪೧॥

ವೃದ್ಧಿಯನ್ನು ಹೊಂದುತ್ತಿರುವ ಮನುಷ್ಯನ ಬಲವು ಹೇಗೆ ವೃದ್ಧಿಯನ್ನು ಹೊಂದುತ್ತದೆ? ಸುತ್ತಲೂ ತಡೆಯಲ್ಪಟ್ಟ ಮಲ-ಮೂತ್ರಾದಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಶರೀರದಿಂದ ಹೇಗೆ ಹೊರಗೆ ಹೋಗುತ್ತವೆ?

ಕುತೋ ವಾಯುಃ ಪ್ರಶ್ವಸಿತಿ ಉಚ್ಛ್ವಸಿತ್ಯಪಿ ವಾ ಪುನಃ ।
ಕಥಂ ದೇಹಮಧಿಷ್ಠಾಯ ತಿಷ್ಠತ್ಯಾತ್ಮಾऽಯಮಾತ್ಮನಿ ॥೪೨॥

ಜೀವಾತ್ಮನು ಯಾರ ದೆಸೆಯಿಂದ ಉಸಿರು ಬಿಡುತ್ತಿದ್ದಾನೆ? ಯಾರ ದೆಸೆಯಿಂದ ಉಸಿರನ್ನು ಸೆಳೆದುಕೊಳ್ಳುತ್ತಾನೆ? ಪರಮಾತ್ಮನು ಮನುಷ್ಯನಲ್ಲಿ ಯಾವ ಸ್ಥಾನವನ್ನು ಆಶ್ರಯಿಸಿ ನೆಲೆಸಿದ್ದಾನೆ?

ಜೀವಃ ಕಾಯಂ ವಹತಿ ಚೇಚ್ಚೇಷ್ಟಮಾನಃ ಕಲೇಬರಮ್ ।
ಕಿಂವರ್ಣಃ ಕೀದೃಶಶ್ಚೈವ ನಿವೇಶಯತಿ ವೈ ಮನಃ ॥೪೩॥

ಯಾಥಾತಥ್ಯೇನ ಭಗವನ್ ವಕ್ತುಮರ್ಹಸಿ ಮೇऽನಘ ॥೪೪॥

ಜೀವಾತ್ಮನು ಈ ಶರೀರದಲ್ಲಿ ವ್ಯಾಪಾರ ಮಾಡುತ್ತಾ ಶರೀರವನ್ನು ಹೇಗೆ ಧಾರಣ ಮಾಡಿಕೊಳ್ಳುತ್ತಾನೆ? ಹೇಗಿದ್ದಾನೆ? ಅವನ ಬಣ್ಣ ಯಾವುದು? ನಿಷ್ಪಾಪನೇ, ಪೂಜ್ಯನೇ? ಇದನ್ನು ಯಥಾವತ್ತಾಗಿ ನನಗೆ ಹೇಳಲು ಅರ್ಹರಾಗಿದ್ದೀರಿ.

ಬ್ರಾಹ್ಮಣಃ

ಇತಿ ಸಂಪರಿಪೃಷ್ಟೋऽಹಂ ತೇನ ವಿಪ್ರೇಣ ಮಾಧವ ।
ಪ್ರತ್ಯಬ್ರವಂ ಮಹಾಪ್ರಾಜ್ಞ ಯಥಾಶ್ರುತಮರಿಂದಮ ॥೪೫॥

ಬ್ರಾಹ್ಮಣ– ಮಾಧವನೇ, ಅರಿಂದಮನೇ, ಮಹಾಪ್ರಾಜ್ಞನೇ, ಆ ಬ್ರಾಹ್ಮಣನಿಂದ ಪ್ರಶ್ನಿಸಲ್ಪಟ್ಟ ನಾನು ಹಿಂದೆ ಹೇಗೆ ಹೇಳಿದ್ದೆನೋ ಹಾಗೆಯೇ ಉತ್ತರಿಸಿದೆನು.

ಯಥಾ ಶ್ವಗೋಷ್ಠೇ ಪ್ರಕ್ಷಿಪ್ಯ ನಷ್ಟೇ ಭಾಂಡಮನಾ ಭವೇತ್ ॥೪೬॥

ತಥಾ ಸ್ವಕಾಯಂ ಪ್ರಕ್ಷಿಪ್ಯ ಮನೋದ್ವಾರೈರನಿಶ್ಚಲೈಃ ।
ಆತ್ಮಾನಂ ತತ್ರ ಮಾರ್ಗೇತ ಪ್ರಮಾದಂ ಪರಿವರ್ಜಯೇತ್ ॥೪೭॥

ಯಾವ ರೀತಿಯಾಗಿ ಒಬ್ಬ ಮನುಷ್ಯನು ಧನಾದಿಗಳ ಭಾಂಡವನ್ನು ತನ್ನ ಕೋಣೆಯಲ್ಲಿಟ್ಟಿದ್ದರೂ ಅದರ ಬಗ್ಗೆಯೇ ಯೋಚಿಸುತ್ತಿರುವನೋ ಅದೇ ರೀತಿಯಲ್ಲಿ ಸಾಧಕನು ಚಂಚಲವಾದ ಇಂದ್ರಿಯಗಳ ಮೂಲಕ ಮನಸ್ಸನ್ನು ತನ್ನ ಶರೀರದಲ್ಲಿರಿಸಿ ಅಲ್ಲಿರುವ ನಿಧಿರೂಪನಾದ ಪರಮಾತ್ಮನನ್ನು ಚಿಂತಿಸುತ್ತಿರಬೇಕು. ಪರಮಾತ್ಮನನ್ನು ಚಿಂತಿಸುತ್ತಿರುವಾಗ ಲೌಕಿಕ ವಿಷಯಗಳ ಪ್ರಮಾದಕ್ಕೆ ವಶನಾಗಬಾರದು, ಜಾಗೃತನಾಗಿರಬೇಕು.

ಏವಂ ಸತತಮುದ್ಯುಕ್ತಃ ಪ್ರೀತಾತ್ಮಾ ನಚಿರಾತ್ ಸ ಚ ।
ಆಸಾದಯತಿ ತದ್ ಬ್ರಹ್ಮ ಯದ್ ದೃಷ್ಟ್ವಾ ಸ್ಯಾತ್ ಪ್ರಧಾನವಿತ್ ॥೪೮॥

ಹೀಗೆ ನಿರಂತರ ಧ್ಯಾನಪರನಾಗಿರುವವನು ಬಹಳ ಬೇಗ ಪ್ರಸನ್ನವಾದ ಮನಸ್ಸನ್ನು ಹೊಂದಿ, ಹೃದಯಗುಹೆಯಲ್ಲಿರುವ ಪರಬ್ರಹ್ಮನನ್ನು ಕಂಡುಕೊಳ್ಳುತ್ತಾನೆ. ಆತ್ಮಸಾಕ್ಷಾತ್ಕಾರವನ್ನು ಹೊಂದಿದ ಅವನಿಗೆ ತನಗೆ ಬಂಧಕವಾದ ಪ್ರಕೃತಿಯ ಎಚ್ಚರವೂ ಉಂಟಾಗುತ್ತದೆ.

ನ ತ್ವಸೌ ಚಕ್ಷುಷಾ ಗ್ರಾಹ್ಯೋ ನ ಚ ಸರ್ವೈರಪೀಂದ್ರಿಯೈಃ ।
ಮನಸಾ ತು ಪ್ರದೀಪೇನ ಮಹಾನಾತ್ಮಾ ಪ್ರದೃಶ್ಯತೇ ॥೪೯॥

ಆ ಹೃದಯಾಂತರ್ಗತನಾದ ಪರಬ್ರಹ್ಮನಾದರೂ ಕಣ್ಣಿಗೆ ಕಾಣುವವನಲ್ಲ, ಯಾವ ಇಂದ್ರಿಯಗಳಿಗೂ ಗೋಚರನಾಗುವವನಲ್ಲ. ದೀಪದಂತಿರುವ ಮನಸ್ಸಿನಿಂದ ಮಾತ್ರವೇ ಪರಬ್ರಹ್ಮನ ದರ್ಶನವು ಉಂಟಾಗುತ್ತದೆ.

ಸರ್ವತಃ ಪಾದಪಾಣಿಂ ತಂ ಸರ್ವತೋಕ್ಷಿಶಿರೋಮುಖಿಮ್ ।
ಜೀವೋ ನಿಷ್ಕ್ರಾಂತಮಾತ್ಮಾನಂ ಶರೀರಾತ್ ಸಂಪ್ರಪಶ್ಯತಿ ॥೫೦॥

ಆ ಪರಬ್ರಹ್ಮನು ಎಲ್ಲೆಡೆಯಲ್ಲಿಯೂ ಕಾಲು, ಕೈ, ಕಿವಿ, ಕಣ್ಣು, ತಲೆ, ಮುಖಗಳನ್ನು ಹೊಂದಿರುವವನಾಗಿದ್ದಾನೆ. ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಂಡು ಜೀವನು ತನ್ನ ಶರೀರದಲ್ಲಿರುವ ಭಗವಂತನನ್ನು ಅನುಭವದಿಂದ ತಿಳಿಯುತ್ತಾನೆ.

ಸ ತಮುತ್ಸೃಜ್ಯ ದೇಹಂ ತತ್ ಪ್ರಧ್ಯಾಯದ್ ಬ್ರಹ್ಮ ಕೇವಲಮ್ ।
ಆತ್ಮಾನಮಾಲೋಕಯತಿ ಮನಸಾ ಪ್ರಹಸನ್ನಿವ ॥೫೧॥

ಇಂತಹ ಜೀವನು ಶರೀರದಲ್ಲಿಯೇ ಇದ್ದರೂ ಶರೀರಸಂಬಂಧವಾದ ಬಂಧಕ ಸಂಸ್ಕಾರಗಳನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಪರಮಾತ್ಮನನ್ನೇ ಮನಸ್ಸಿನಿಂದ ಧ್ಯಾನ ಮಾಡುತ್ತಾನೆ.

ಇದಂ ಸರ್ವಂ ರಹಸ್ಯಂ ತೇ ಮಯೋಕ್ತಂ ದ್ವಿಜಸತ್ತಮ ।
ಆಪೃಚ್ಛೇ ಸಾಧಯಿಷ್ಯಾಮಿ ಗಚ್ಛ ವಿಪ್ರ ಯಥಾಸುಖಮ್ ॥೫೨॥

ಈ ಎಲ್ಲ ರಹಸ್ಯಗಳು ಬ್ರಾಹ್ಮಣಶ್ರೇಷ್ಠನೇ, ನಿನಗೆ ನನ್ನಿಂದ ಹೇಳಲ್ಪಟ್ಟವು. ನಾನಿನ್ನು ಪ್ರಯಾಣ ಮಾಡಲು ನಿನ್ನ ಅನುಮತಿಯನ್ನು ಬೇಡುತ್ತೇನೆ. ನೀನೂ ಸುಖವಾಗಿ ನಿನ್ನ ನಿವಾಸಕ್ಕೆ ಹೊರಡು.

ಇತ್ಯುಕ್ತಃ ಸ ತದಾ ಕೃಷ್ಣ ಮಯಾ ಶಿಷ್ಯೋ ಮಹಾತಪಾಃ ।
ಅಗಚ್ಛದ್ ವೈ ಯಥಾಕಾಮಂ ಬ್ರಾಹ್ಮಣಶ್ಚಿನ್ನಸಂಶಯಃ ॥೫೩॥

ಈ ರೀತಿಯಾಗಿ ಹೇಳಿದ ಬಳಿಕ ಕಠೋರವ್ರತನಿಷ್ಠನಾದ, ಮಹಾತಪಸ್ವಿಯಾದ, ಶಿಷ್ಯನಾದ ಕಾಶ್ಯಪಬ್ರಾಹ್ಮಣನು ಸಂಶಯಗಳನ್ನೆಲ್ಲ ಪರಿಹರಿಸಿ, ತನ್ನ ಸಂಕಲ್ಪಕ್ಕನುಗುಣವಾಗಿ ಹೊರಟು ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಏಕೋನವಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಅನುಗೀತೆಯ ರಹಸ್ಯವನ್ನು ಹೇಳಿದುದು.

ಶ್ರೀಭಗವಾನ್

ಇತ್ಯುಕ್ತ್ವಾ ಸ ತದಾ ಪಾರ್ಥ ವಾಕ್ಯಂ ಮಾಂ ದ್ವಿಜಪುಂಗವಃ ।
ಮೋಕ್ಷಧರ್ಮಾಶ್ರಿತಂ ಸಮ್ಯಕ್ ತತ್ರೈವಾಂತರಧೀಯತ ॥೧॥

ಶ್ರೀಭಗವಾನ್– ಮೋಕ್ಷಧರ್ಮವನ್ನೇ ಸಂಪೂರ್ಣವಾಗಿ ಆಶ್ರಯಿಸಿದ್ದ ಬ್ರಾಹ್ಮಣ ಶ್ರೇಷ್ಠನು ನನಗೆ ಈ ರೀತಿಯಾದ ಮಾತುಗಳನ್ನು ಹೇಳಿ ಅಂತರ್ಧಾನ ಹೊಂದಿದನು.

ಕಚ್ಚಿದೇತತ್ ತ್ವಯಾ ಪಾರ್ಥ ಶ್ರುತಮೇಕಾಗ್ರಚೇತಸಾ ।
ತದಾऽಪಿ ಹಿ ರಥಸ್ಥಸ್ತ್ವಂ ಶ್ರುತವಾನೇತದೇವ ಹಿ ॥೨॥

ಪಾರ್ಥನೇ, ಈಗಲಾದರೂ ನಾನು ಹೇಳಿದ ವಿಚಾರವನ್ನು ಏಕಾಗ್ರಚಿತ್ತನಾಗಿ ಕೇಳಿಸಿಕೊಂಡೆಯಾ? ಯುದ್ಧದ ಸಮಯದಲ್ಲಿಯೂ ಈ ಪರಬ್ರಹ್ಮವಿಚಾರವನ್ನೇ ರಥಾರೂಢನಾಗಿ ಕೇಳಿರುವಿ.

ನೈತತ್ ಪಾರ್ಥ ಸುವಿಜ್ಞೇಯಂ ವ್ಯಾಮಿಶ್ರೇಣೇತಿ ಮೇ ಮತಿಃ ।
ನರೇಣಾಕೃತಸಂಗೇನಾವಿದಗ್ಧೇನಾಕೃತಾತ್ಮನಾ ॥೩॥

ಅರ್ಜುನನೇ, ಬುದ್ಧಿಯು ಗೊಂದಲಕ್ಕೀಡಾಗಿದ್ದಾಗ ಈ ಪರಬ್ರಹ್ಮತತ್ತ್ವವು ತಿಳಿಯಲು ಕಷ್ಟವಾದುದು. ಯಾರು ಸ್ವಚ್ಛವಾದ ಅಂತಃಕರಣವುಳ್ಳವನೋ, ಅಸಂಗನಾಗಿರುವನೋ, ವಿಷಯಪದಾರ್ಥಗಳಿಂದ ಮನಸ್ಸು ದಗ್ಧವಾಗಿಲ್ಲವೋ ಅಂತಹ ಸತ್ಕರ್ಮಶೀಲನಿಗೆ ಈ ಪರಬ್ರಹ್ಮ ತತ್ತ್ವವು ತಿಳಿಯುತ್ತದೆ.

ಸರಹಸ್ಯಮಿದಂ ಪ್ರೋಕ್ತಂ ದೇವಾನಾಂ ಭರತರ್ಷಭ ।
ಕಚ್ಚಿನ್ನೇದಂ ಶ್ರುತಂ ಪಾರ್ಥ ಮನ್ಯೇ ನಾನ್ಯೇನ ಕೇನಚಿತ್ ॥೪॥

ಈ ಪರಬ್ರಹ್ಮತತ್ತ್ವವು ಅತ್ಯಂತ ರಹಸ್ಯವಾದುದು. ದೇವತೆಗಳಿಗೆ ಮಾತ್ರ ಹೇಳಲ್ಪಟ್ಟಿದೆ. ಈ ತತ್ತ್ವವನ್ನು ಮನುಷ್ಯಲೋಕದಲ್ಲಿ ಯಾರೂ ಪೂರ್ಣವಾಗಿ ತಿಳಿದಿರುವುದಿಲ್ಲ.

ನ ಹ್ಯೇತಚ್ಛ್ರೋತುಮರ್ಹೋಽನ್ಯೋ ಮನುಷ್ಯಸ್ತ್ವದೃತೇಽನಘ ।
ನೈತದನ್ಯಸ್ಯ ವಿಜ್ಞೇಯಂ ವ್ಯಾಮಿಶ್ರೇಣಾಂತರಾತ್ಮನಾ ॥೫॥

ನಿಷ್ಪಾಪನೇ, ಮನುಷ್ಯರಲ್ಲಿ ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರೂ ಈ ಪರಬ್ರಹ್ಮ ತತ್ತ್ವವನ್ನು ಕೇಳಲು ಅರ್ಹರಲ್ಲ. ಸಂದೇಹಗ್ರಸ್ತವಾದ ಮನುಷ್ಯನು ಈ ಪರಬ್ರಹ್ಮ ತತ್ತ್ವವನ್ನು ಅರಿಯಲಾರನು.

ಕ್ರಿಯಾವದ್ಭಿರ್ಹಿ ಕೌಂತೇಯ ದೇವಲೋಕಃ ಸಮಾವೃತಃ ।
ನ ಚೈತದಿಷ್ಟಂ ದೇವಾನಾಂ ಮರ್ತ್ಯೈರುಪರಿ ವರ್ತನಮ್ ॥೬॥

ಕುಂತೀಸುತನೇ, ಸತ್ಕರ್ಮವಂತರಾದ ದೇವತೆಗಳಿಂದ ದೇವಲೋಕವು ತುಂಬಿಹೋಗಿದೆ. ಮರಣಶೀಲರಾದ ಮನುಷ್ಯರು ದೇವಲೋಕದಲ್ಲಿ ಅಮರರಾಗಿ ಸಂಚರಿಸುವುದು ದೇವತೆಗಳಿಗೆ ಇಷ್ಟವಾದುದಲ್ಲ.

ಪರಾ ಹಿ ಸಾ ಗತಿಃ ಪಾರ್ಥ ಯತ್ತದ್ಬ್ರಹ್ಮ ಸನಾತನಮ್ ।
ಯತ್ರಾಮೃತತ್ವಂ ಪ್ರಾಪ್ನೋತಿ ತ್ಯಕ್ತ್ವಾ ದುಃಖಂ ಸದಾ ಸುಖೀ ॥೭॥

ಅರ್ಜುನನೇ, ಸನಾತನವಾದ ಈ ಪರಬ್ರಹ್ಮನೇ ಜೀವರಿಗೆ ಪರಮಗತಿ ಎನಿಸಿದ್ದಾನೆ. ಜ್ಞಾನಿಯಾದವನು ದೇಹವನ್ನು ತ್ಯಾಗ ಮಾಡಿದ ಬಳಿಕ ಪರಬ್ರಹ್ಮನ ಧ್ಯಾನದ ಫಲವಾಗಿ ಅಮೃತತ್ವವನ್ನು ಹೊಂದುತ್ತಾನೆ. ದುಃಖದಿಂದ ಬಿಡುಗಡೆ ಹೊಂದಿ ಸುಖೀಪುರುಷ ಎನಿಸುತ್ತಾನೆ.

ಏವಂ ಹಿ ಧರ್ಮಮಾಸ್ಥಾಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥೮॥

ಈ ಪರಬ್ರಹ್ಮನನ್ನು ತಿಳಿಯುವ ರಹಸ್ಯಯೋಗವನ್ನು ಆಶ್ರಯಿಸಿದ ಯಾವುದೇ ಯೋನಿಯ ವ್ಯಕ್ತಿಗಳಾಗಲಿ, ಸ್ತ್ರೀಯರಾಗಲಿ, ವೈಶ್ಯರಾಗಲಿ, ಶೂದ್ರರಾಗಲಿ ಪರಮ ಗತಿಯನ್ನು ನಿಶ್ಚಿತವಾಗಿ ಹೊಂದುತ್ತಾರೆ.

ಕಿಂ ಪುನರ್ಬ್ರಾಹ್ಮಣಾಃ ಪಾರ್ಥ ಕ್ಷತ್ರಿಯಾ ವಾ ಬಹುಶ್ರುತಾಃ ।
ಸ್ವಧರ್ಮರತಯೋ ನಿತ್ಯಂ ಬ್ರಹ್ಮಲೋಕಪರಾಯಣಾಃ ॥೯॥

ಹೀಗಿರುವಾಗ ಸ್ವಧರ್ಮನಿರತರಾದ ಬ್ರಾಹ್ಮಣರು, ಅನೇಕ ಶಾಸ್ತ್ರಗಳನ್ನು ಶ್ರವಣ ಮಾಡಿದ ಕ್ಷತ್ರಿಯರು, ಬ್ರಹ್ಮಲೋಕಪರಾಯಣರಾದ, ಸ್ವಧರ್ಮರತರಾದ ಇವರು ಖಂಡಿತವಾಗಿಯೂ ಪರಮಗತಿಯನ್ನು ಪಡದೇ ತೀರುತ್ತಾರೆ.

ಹೇತುಮತ್ ಚೈತದುದ್ದಿಷ್ಟಮುಪಾಯಾಶ್ಚಾಸ್ಯ ಸಾಧನೇ ।
ಸಿದ್ಧೌ ಫಲಂ ಚ ಮೋಕ್ಷಶ್ಚ ದುಃಖಸ್ಯ ಚ ವಿನಿರ್ಣಯಃ ॥೧೦॥

ಅರ್ಜುನನೇ, ನಿನಗೆ ಮೋಕ್ಷಧರ್ಮದ ಉಪಾಯಗಳನ್ನು ಯುಕ್ತಿಯುಕ್ತವಾಗಿ ಉಪದೇಶಿಸಿದ್ದೇನೆ. ಅದರ ಸಾಧನೋಪಾಯಗಳನ್ನೂ ಹೇಳಿದ್ದೇನೆ. ಸಿದ್ಧಿ, ಫಲ, ಮೋಕ್ಷ, ದುಃಖ - ಇವುಗಳ ಸ್ವರೂಪವನ್ನೂ ವಿಮರ್ಶಿಸಿ ಹೇಳಿದ್ದೇನೆ.

ಅತಃ ಪರಂ ಸುಖಂ ತ್ವನ್ಯತ್ ಕಿಂ ನು ಸ್ಯಾದ್ ಭರತರ್ಷಭ ।
ಶ್ರುತವಾನ್ ಶ್ರದ್ದಧಾನಶ್ಚ ಪಾರಗಂತಾ ಚ ಪಾಂಡವ ॥೧೧॥

ಇದಕ್ಕಿಂತಲೂ ಮಿಗಿಲಾದ ಸುಖವನ್ನು ತಂದೊಡ್ಡುವ ಧರ್ಮವು ಬೇರೆ ಯಾವುದೂ ಇರುವುದಿಲ್ಲ. ಬುದ್ಧಿವಂತನಾದ, ಶ್ರದ್ಧಾಳುವಾದ, ಸಂಸಾರದ ದಡವನ್ನು ಮುಟ್ಟುವ ಬಯಕೆಯುಳ್ಳ ಸಾಧಕನು ಈ ಪರಬ್ರಹ್ಮನನ್ನು ಹೊಂದಬಲ್ಲನು.

ಯಃ ಪರಿತ್ಯಜ್ಯತೇ ಮರ್ತ್ಯೋ ಲೋಕತಂತ್ರಮಸಾರವತ್ ।
ಏತೈರುಪಾಯೈಃ ಸ ಕ್ಷಿಪ್ರಂ ಪರಾಂ ಗತಿಮವಾಪ್ನುತೇ ॥೧೨॥

ಯಾವ ಸಾಧಕನು ಲೋಕದ ದೃಷ್ಟಿಯಿಂದ ಕಾಣುವ ಲೌಕಿಕ ಸುಖವನ್ನು ಸಾರಹೀನವೆಂದು ಅರಿತು, ಎಲ್ಲವನ್ನೂ ಪರಿತ್ಯಾಗ ಮಾಡಿ, ನಾನು ಹೇಳುವ ಉಪಾಯದಿಂದ ಸಾಧನೆಯನ್ನು ಮಾಡುತ್ತಾನೋ ಅವನು ಬೇಗ ಪರಮಗತಿಯನ್ನು ಹೊಂದುತ್ತಾನೆ.

ಏತಾವದೇವ ವಕ್ತವ್ಯಂ ನ ತೇ ಭೂಯೋऽಸ್ತಿ ಕಿಂಚನ ।
ಷಣ್ಮಾಸಾನ್ ನಿತ್ಯಯುಕ್ತಸ್ಯ ಯೋಗಃ ಪಾರ್ಥ ಪ್ರವರ್ತತೇ ॥೧೩॥

ಅರ್ಜುನನೇ, ಪರಮಾತ್ಮನ ಸಾಕ್ಷಾತ್ಕಾರದ ವಿಷಯದಲ್ಲಿ ಇಷ್ಟು ಮಾತ್ರ ಹೇಳಬಹುದಾಗಿದೆ. ಇದಕ್ಕಿಂತಲೂ ಹೆಚ್ಚು ಹೇಳಬೇಕಾದುದು ಯಾವುದೂ

ಇರುವುದಿಲ್ಲ. ಯಾವನು ಈ ನನ್ನ ಉಪದೇಶವನ್ನು ನಿರಂತರ ಆರು ತಿಂಗಳು ಕಾಲ ಅಭ್ಯಾಸ ಮಾಡುತ್ತಾನೋ ಅವನು ಯೋಗಸಿದ್ಧಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಕೃಷ್ಣನು ಅರ್ಜುನನನ್ನು ಕುರಿತು ಭೂತ-ಪ್ರಾಣಾದಿ ಸೃಷ್ಟಿ ಮೊದಲಾದವುಗಳನ್ನು ಪ್ರತಿಪಾದಿಸುವ ಬ್ರಾಹ್ಮಣದಂಪತಿಗಳ ಸಂವಾದವನ್ನು ಅನುವಾದಿಸಿದುದು.

ಶ್ರೀಭಗವಾನ್

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ದಂಪತ್ಯೋಃ ಪಾರ್ಥ ಸಂವಾದಮಭಯಂ ನಾಮ ನಾಮತಃ ॥೧॥

ಶ್ರೀಭಗವಾನ್– ಅರ್ಜುನನೇ, ಹಿಂದೆ ಹೇಳಿದ ವಿಷಯದಲ್ಲಿ ಪತಿ-ಪತ್ನಿಯರ ಸಂವಾದರೂಪವಾದ, ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಬ್ರಾಹ್ಮಣೇ ಬ್ರಾಹ್ಮಣಂ ಕಂಚಿತ್ ಜ್ಞಾನವಿಜ್ಞಾನಪಾರಗಮ್ ।
ದೃಷ್ಟ್ವಾ ವಿವಿಕ್ತ ಆಸೀನಂ ಭಾರ್ಯಾ ಭರ್ತಾರಮಬ್ರವೀತ್ ॥೨॥

ಜ್ಞಾನ-ವಿಜ್ಞಾನ ಪಾರಂಗತನಾದ ಬ್ರಾಹ್ಮಣನೊಬ್ಬನು ನಿರ್ಜನವಾದ ಅರಣ್ಯದಲ್ಲಿ ಕುಳಿತಿರುವಾಗ ಅವನ ಭಾರ್ಯೆಯು ಪತಿಯ ಬಳಿ ಹೋಗಿ ವಿನಯದಿಂದ ಪ್ರಶ್ನಿಸುತ್ತಾಳೆ.

ಬ್ರಾಹ್ಮಣೀ

ಕಂ ನು ಲೋಕಂ ಗಮಿಷ್ಯಾಮಿ ತ್ವಾಮಹಂ ಪತಿಮಾಶ್ರಿತಾ ।
ನ್ಯಸ್ತಕರ್ಮಾಣಮಾಸೀನಂ ಕೀನಾಶಮವಿಚಕ್ಷಣಮ್ ॥೩॥

ಭಾರ್ಯಾಃ ಪತಿಕೃತಾನ್ ಲೋಕಾನ್ ಆಪ್ನುವಂತೀಹ ನಃ ಶ್ರುತಮ್ ।
ತ್ವಾಮಹಂ ಪತಿಮಾಸಾದ್ಯ ಕಾಂ ಗಮಿಷ್ಯಾಮಿ ವೈ ಗತಿಮ್ ॥೪॥

ಬ್ರಾಹ್ಮಣೇ– ಪ್ರಾಣನಾಥನೇ, ಯಾವ ಬಾಹ್ಯಕಾರ್ಯವನ್ನು ಮಾಡದೆ ಕುಳಿತಿರುವ, ದುರ್ಬಲನಾದ, ಅವಿದ್ವಾಂಸನಾದ ನಿನ್ನನ್ನು ಪತಿಯಾಗಿ ಹೊಂದಿರುವ ನಾನು ಯಾವ ಲೋಕಕ್ಕೆ ಹೋಗುತ್ತೇನೆ? ಗಂಡಂದಿರು ಹೋಗುವ ಲೋಕಗಳಿಗೆ ಪತ್ನಿಯರೂ ಹೋಗುತ್ತಾರೆ ಎಂಬುದಾಗಿ ಕೇಳಿದ್ದೇನೆ. ನನಗೆ ಯಾವ ಗತಿಯು ಸಿಕ್ಕುತ್ತದೆ ಎಂದು ಉತ್ತರಿಸು.

ಶ್ರೀಭಗವಾನ್

ಏವಮುಕ್ತಃ ಸ ಶಾಂತಾತ್ಮಾ ತಾಮುವಾಚ ಹಸನ್ನಿವ ॥೫॥

ಶ್ರೀಭಗವಾನ್– ಪತ್ನಿಯು ಹೀಗೆ ಕೇಳಲಾಗಿ ಶಾಂತಾತ್ಮನಾದ ಬ್ರಾಹ್ಮಣನು ನಗುತ್ತಿರುವನೋ ಎಂಬ ಮುಖಭಾವದಿಂದ ಹೀಗೆ ಉತ್ತರಿಸಿದನು.

ಬ್ರಾಹ್ಮಣಃ

ಸುಭಗೇ ನಾಭ್ಯಸೂಯಾಮಿ ವಾಕ್ಯಸ್ಯಾಸ್ಯ ತವಾನಘೇ ॥೬॥

ಗ್ರಾಹ್ಯಂ ದೃಶ್ಯಂ ತಥಾ ಶ್ರಾವ್ಯಂ ಯದಿದಂ ಕರ್ಮ ವಿದ್ಯತೇ ।
ಏತದೇವ ವ್ಯವಸ್ಯಂತಿ ಕರ್ಮ ಕರ್ಮೇತಿ ಕರ್ಮಿಣಃ ॥೭॥

ಬ್ರಾಹ್ಮಣ– ಸುಭಗೇ, ಪಾಪರಹಿತಳೇ, ನೀನು ಹೇಳುತ್ತಿರುವ ಮಾತುಗಳು ದೋಷಯುಕ್ತವಾಗಿವೆ ಎಂದು ನಾನು ಭಾವಿಸುವುದಿಲ್ಲ. ಲೋಕದ ಜನರು ದೀಕ್ಷಾ, ವ್ರತಾದಿಗಳನ್ನು ಏನು ಸ್ವೀಕರಿಸುತ್ತಾರೋ ಅವುಗಳು ಕಣ್ಣಿಗೆ ಕಾಣಿಸುವ ಸ್ಥೂಲ ಕರ್ಮಗಳು ಎನಿಸುತ್ತವೆ. ಅವುಗಳನ್ನೇ ಕರ್ಮ ಎನ್ನುತ್ತಾರೆ. ಇಂತಹ ಸ್ಥೂಲಕರ್ಮಗಳನ್ನು ಮಾಡುವವರು ಕರ್ಮಠರಾಗುತ್ತಾರೆ.

ಮೋಹಮೇವ ನಿಗಚ್ಛಂತಿ ಕರ್ಮಿಣೋ ಜ್ಞಾನವರ್ಜಿತಾಃ ।
ನೈಷ್ಕರ್ಮ್ಯಂ ನ ಚ ಲೋಕೇಽಸ್ಮಿನ್ ಮೌರ್ತಮಿತ್ಯುಪಲಭ್ಯತೇ ॥೮॥

ತಿಳುವಳಿಕೆ ಇಲ್ಲದ ವ್ಯಕ್ತಿಗಳು ಇಂತಹ ಸ್ಥೂಲಕರ್ಮಗಳನ್ನು ಆಚರಿಸಿ ಮೋಹವನ್ನೇ ಹೊಂದುತ್ತಾರೆ. ಭಗವಂತನ ಬಗ್ಗೆ ಅಂತರಂಗದ ಆಲೋಚನೆಗಳಿಲ್ಲದೆ, ಪ್ರವೃತ್ತಿ

ಕರ್ಮಗಳಲ್ಲಿಯೇ ರತರಾಗಿ, ಮುಂದೆ ಹೇಳುವ ಕ್ರಮದಲ್ಲಿ ಭಗವಂತನ ಮೂರ್ತಿಗಳನ್ನು ಲೌಕಿಕ ಕಾಮನೆಗಳಿಗೋಸ್ಕರ ಉಪಾಸಿಸುತ್ತಾ ಕರ್ಮಠರೇ ಎನಿಸಿಕೊಳ್ಳುತ್ತಾರೆ. ಶ್ರದ್ಧಾರಹಿತರಾಗಿ ಸಂಪಾದಿಸುವ ಕರ್ಮಗಳು ಬಂಧಕವಾಗುತ್ತವೆಯೇ ವಿನಾ ಮೋಕ್ಷ ಸಾಧಕವಾದ ಜ್ಞಾನವು ಈ ಲೋಕದಲ್ಲಿ ಪ್ರಾಯಶಃ ದೊರಕುವುದಿಲ್ಲ.

ಕರ್ಮಣಾ ಮನಸಾ ವಾಚಾ ಶುಭಂ ವಾ ಯದಿ ವಾऽಶುಭಮ್ ।
ಜನ್ಮಾದಿ ಮೂರ್ತಿಭೇದಾದ್ವೈ ಕರ್ಮ ಭೂತೇಷು ವರ್ತತೇ ॥೯॥

ಕರ್ಮಗಳಿಂದ, ಮನಸ್ಸಿನಿಂದ, ಮಾತುಗಳಿಂದ ನಡೆಯುವ ಶುಭಾಶುಭ ಕರ್ಮಗಳು ಬ್ರಾಹ್ಮಣ-ಕ್ಷತ್ರಿಯಾದಿ ಜಾತಿಗೆ ಅನುಗುಣವಾಗಿ ಎಲ್ಲ ಪ್ರಾಣಿಗಳಿಂದಲೂ ಅನುಷ್ಠಾನ ಮಾಡಲ್ಪಡುತ್ತವೆ. ಎಲ್ಲರೂ ಕೂಡ ತಮ್ಮ ಜಾತಿಗನುಸಾರವಾಗಿ ಕರ್ಮಗಳನ್ನು ಆಚರಿಸುತ್ತಾ, ಬಂಧಕವಾದ ಪ್ರವೃತ್ತಿಕರ್ಮದಲ್ಲಿಯೇ ರತರಾಗಿರುತ್ತಾರೆ.

ರಕ್ಷೋಭಿರ್ವಧ್ಯಮಾನೇಷು ದೃಶ್ಯಾದೃಶ್ಯೇಷು ಕರ್ಮಸು ।
ಆತ್ಮಸ್ಥಮಾತ್ಮನಾ ತೇನ ದೃಷ್ಟಮಾಯತನಂ ಮಯಾ ॥೧೦॥

ಹಾದಿ-ಬೀದಿಗಳಲ್ಲಿ ಯಜ್ಞದ ಸಾಮಗ್ರಿಗಳನ್ನು ರಾಕ್ಷಸರು ಧ್ವಂಸ ಮಾಡತೊಡಗಿದರು. ಬಾಹ್ಯವಾದ ಕರ್ಮಗಳು ಆ ರಾಕ್ಷಸರಿಂದ ಹತವಾಗುತ್ತವೆ. ಅದನ್ನು ನೋಡಿದ ನಾನು ಬಾಹ್ಯವಾದ ಕರ್ಮಗಳನ್ನು ಮಾಡದೆ ನನ್ನ ಅಂತರ್ಯಾಮಿಯಾಗಿರುವ ಭಗವಂತನ ವಿಶೇಷಾನುಗ್ರಹವನ್ನು ಪಡೆದುಕೊಂಡು, ಬ್ರಹ್ಮಾದಿ ಸಕಲ ಜಗತ್ತಿಗೂ ಆಧಾರಭೂತನಾದ ಅವನ ಸ್ವರೂಪವನ್ನೇ ನಾನು ನೋಡಿದ್ದೇನೆ. ಆದ್ದರಿಂದ ನಾನು ಜ್ಞಾನನಿಷ್ಠನಾಗಿರುವುದರಿಂದ ಪ್ರವೃತ್ತಿ ಕರ್ಮಗಳಲ್ಲಿ ಶ್ರದ್ಧೆಯನ್ನು ತೋರಿಸುವುದಿಲ್ಲ. ನೀನಾದರೂ ದಡ್ಡ ಜನರಂತೆ ಬಾಹ್ಯಕರ್ಮಗಳನ್ನು ಮಾಡುತ್ತಾ, ಜ್ಞಾನಮಾರ್ಗವನ್ನು ತೊರೆದು ನನ್ನನ್ನು ದುರ್ಬಲ, ಅಪಂಡಿತ ಎಂದು ಅಪಹಾಸ್ಯ ಮಾಡುತ್ತಿರುವಿ.

ಯತ್ರ ತದ್ ಬ್ರಹ್ಮ ನಿರ್ದ್ವಂದ್ವಂ ಯತ್ರ ಸೋಮಃ ಸಹಾಗ್ನಿನಾ ।
ವ್ಯವಾಯಂ ಕುರುತೇ ನಿತ್ಯಂ ಧೀರೋ ಭೂತಾನಿ ಧಾರಯನ್ ॥೧೧॥

ಯಾವ ಪರಬ್ರಹ್ಮನನ್ನು ಹೊಂದಿದ ಮುಕ್ತಚೇತನರು ಸುಖ-ದುಃಖಗಳ ಪೀಡೆಗಳಿಗೆ ಎಂದಿಗೂ ತುತ್ತಾಗುವುದಿಲ್ಲ. ಆ ಪರಬ್ರಹ್ಮ ವಸ್ತುವಿನ ಸ್ವರೂಪವೇ ಅಂತಹದು. ಮುಕ್ತಿಯಲ್ಲಿ ಮುಕ್ತನಾಗಿರುವಂತಹ ಚಂದ್ರನ ಜೊತೆಗೆ ಅಗ್ನಿಯು ಮುಕ್ತಜೀವರಿಗೆ ಹಿತವನ್ನೇ ಬಗೆಯುತ್ತಾನೆ. ಮುಕ್ತರಾದ ಚಂದ್ರ-ಅಗ್ನಿಗಳಲ್ಲಿ ಸ್ವಭಾವದ ಗುಣಗಳ ವಿರೋಧವಿರುವುದಿಲ್ಲ. ಅಗ್ನಿಯು ದಹಿಸಲಾರ, ಚಂದ್ರನು ಶೈತ್ಯನೀಡಲಾರ. ಈರ್ವರೂ ಮುಕ್ತರಿಗೆ ಸುಖದಾಯಕರಾಗಿಯೇ ಕಾಣಿಸುತ್ತಾರೆ. ಹೀಗೆ ವಿರುದ್ಧಗುಣಧರ್ಮಗಳನ್ನೇ ತೊರೆದು ಸುಖವಾಗಿ ವಾಸಿಸುವ ಸ್ಥಳ ಮುಕ್ತಿ ಎನಿಸಿದೆ. ಇಂತಹ ಸ್ಥಾನನಿಯಾಮಕನು ಪರಬ್ರಹ್ಮನಾಗಿದ್ದಾನೆ.

ಯತ್ರ ಬ್ರಹ್ಮಾದಯೋ ಯುಕ್ತಾಃ ತದಕ್ಷರಮುಪಾಸತೇ ।
ವಿದ್ವಾಂಸಃ ಸುವ್ರತಾ ಯತ್ರ ಶಾಂತಾತ್ಮಾನೋ ಜಿತೇಂದ್ರಿಯಾಃ ॥೧೨॥

ಯಾವ ಮುಖ್ಯಲೋಕಗಳಲ್ಲಿ ಬ್ರಹ್ಮಾದಿ ದೇವತೆಗಳು ಬಂಧಮುಕ್ತರಾಗಿ ಇದ್ದರೂ ಸಹ ಅಕ್ಷರನಾದ ಅವನನ್ನು ಉಪಾಸಿಸುತ್ತಾರೆ. ಎಲ್ಲರೂ ವ್ರತಾಚರಣಶೀಲರಾಗಿರುತ್ತಾರೆ, ವಿದ್ವಾಂಸರಾಗಿರುತ್ತಾರೆ, ಜಿತೇಂದ್ರಿಯರೂ, ಶಾಂತಾತ್ಮರಾಗಿರುತ್ತಾರೆ.

ಘ್ರಾಣೇನ ನ ತದಾಘ್ರೇಯಂ ನ ಚಾಸ್ವಾದ್ಯಂ ಚ ಜಿಹ್ವಯಾ ।
ಸ್ಪರ್ಶನೇನ ಚ ತದತ್ಸ್ಪರ್ಶ್ಯಂ ಮನಸಾ ನಾವಗಮ್ಯತೇ ॥೧೩॥

ಚಕ್ಷುಷಾ ನ ವಿಷಹ್ಯಂ ಚ ಯತ್ ಕಿಂಚಿಚ್ಛ್ರವಣಾತ್ ಪರಮ್ ।
ಅಗಂಧರಸಮಸ್ಪರ್ಶಮ್ ಅರೂಪಂ ಶಬ್ದವರ್ಜಿತಮ್ ॥೧೪॥

ಯತಃ ಪ್ರವರ್ತತೇ ತಂತ್ರಂ ಯತ್ರ ಚ ಪ್ರತಿತಿಷ್ಠತಿ ।
ತತಃ ಪ್ರವರ್ತತೇ ತಂತ್ರಂ ತತ್ರ ಚ ಪ್ರತಿತಿಷ್ಠತಿ ॥೧೫॥

ಆ ಪರಬ್ರಹ್ಮ ಸ್ವರೂಪವಾದರೂ ಘ್ರಾಣೇಂದ್ರಿಯದಿಂದ ಆಘ್ರಾಣಿಸಲ್ಪಡುವುದಿಲ್ಲ. ಜಿಹ್ವೇಂದ್ರಿಯದಿಂದ ಆಸ್ವಾದ್ಯವಲ್ಲ. ತ್ವಗಿಂದ್ರಿಯದಿಂದ ಸ್ಪರ್ಶನಕ್ಕೆ ಅರ್ಹವಲ್ಲ. ಮನಸ್ಸಿನಿಂದಲೂ ತಿಳಿಯಲಾಗದು. ಚಕ್ಷುರಿಂದ್ರಿಯಕ್ಕೆ ಗೋಚರವಾಗುವುದಿಲ್ಲ. ಶ್ರವಣೇಂದ್ರಿಯದಿಂದಲೂ ತಿಳಿಯಲ್ಪಡುವುದಿಲ್ಲ. ಪ್ರಾಕೃತಿಕವಾದ ಗಂಧ-ರಸ-ಸ್ಪರ್ಶ-ರೂಪ-ಶಬ್ದಗಳಿಂದ ಸ್ಥೂಲವಾದುದು. ಪ್ರಾಕೃತ ಗಂಧಾದಿಗಳನ್ನು ಗ್ರಹಿಸುವ

ಇಂದ್ರಿಯಗಳು ಮುಕ್ತಿಯಲ್ಲಿರುವುದಿಲ್ಲವಾದ್ದರಿಂದ, ಭಗವಂತನಲ್ಲಿ ಪ್ರಕೃತಿಯಲ್ಲಿ ಇರುವುದಿಲ್ಲವಾದ್ದರಿಂದಲೂ ಪ್ರಾಕೃತ ಇಂದ್ರಿಯಗಳಿಗೆ ಭಗವಂತನು ಅಗೋಚರನೇ ಆಗಿದ್ದಾನೆ. ಜಗತ್ತೆಲ್ಲವನ್ನೂ ಅವನೇ ನಿಯಮನ ಮಾಡುತ್ತಿದ್ದಾನೆ. ಅವನಲ್ಲಿಯೇ ಜಗತ್ತು ನೆಲೆಗೊಂಡಿದೆ. ಅವನಿಂದಲೇ ಪ್ರವೃತ್ತಿಯನ್ನು ಹೊಂದುತ್ತದೆ. ಅವನಲ್ಲಿಯೇ ಲಯವನ್ನೂ ಹೊಂದುತ್ತದೆ.

ಪ್ರಾಣೋಪಾನಃ ಸಮಾನಶ್ಚ ವ್ಯಾನಶ್ಚೋದಾನ ಏವ ಚ ।
ತತ ಏವ ಪ್ರವರ್ತಂತೇ ತಮೇವ ಪ್ರವಿಶಂತಿ ಚ ॥೧೬॥

ಪ್ರಾಣ-ಅಪಾನ-ಸಮಾನ-ವ್ಯಾನ-ಉದಾನ ಈ ಪಂಚಪ್ರಾಣರು ಈ ಸೃಷ್ಟಿಯಲ್ಲಿ ಅವನಿಂದಲೇ ಪ್ರವೃತ್ತಿಯನ್ನು ಹೊಂದುತ್ತಾರೆ. ಅವನಲ್ಲಿಯೇ ಲಯವನ್ನು ಹೊಂದುತ್ತಾರೆ.

ಸಮಾನವ್ಯಾನಯೋರ್ಮಧ್ಯೇ ಪ್ರಾಣಾಪಾನೌ ವಿಚೇರತುಃ ।
ತಸ್ಮಿನ್ ಸುಪ್ತೇ ಪ್ರಲೀಯಂತೇ ಸಮಾನೋ ವ್ಯಾನ ಏವ ಚ ॥೧೭॥

ಸಮಾನ-ವ್ಯಾನರ ಮಧ್ಯದಲ್ಲಿ ಪ್ರಾಣಾಪಾನರ ಸಂಚಾರವಾಗುತ್ತದೆ. ಪ್ರಾಣಾಪಾನರು ಲಯ ಹೊಂದಿದರೆ ಸಮಾನ-ವ್ಯಾನರೂ ಪ್ರಾಣರಲ್ಲಿಯೇ ಲಯ ಹೊಂದುತ್ತಾರೆ.

ಅಪಾನಪ್ರಾಣಯೋರ್ಮಧ್ಯೇ ಉದಾನೋ ವ್ಯಾಪ್ಯ ತಿಷ್ಠತಿ ।
ತಸ್ಮಾಚ್ಚಯಾನಂ ಪುರುಷಂ ಪ್ರಾಣಾಪಾನೌ ನ ಮುಂಚತಃ ॥೧೮॥

ಅಪಾನ-ಪ್ರಾಣವಾಯುಗಳ ಮಧ್ಯದಲ್ಲಿ ಉದಾನವು ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತದೆ. ಈ ಕಾರಣದಿಂದಲೇ ಮಲಗಿರುವ ಮನುಷ್ಯನನ್ನು ಪ್ರಾಣಾಪಾನಗಳೆರಡೂ ಬಿಟ್ಟಿರುವುದಿಲ್ಲ.

ಪ್ರಾಣೋ ನೋಪಹತೇ ಯತ್ತು ತಮುದಾನಂ ಪ್ರಚಕ್ಷತೇ ।
ತಸ್ಮಾತ್ ತಪೋ ವ್ಯವಸ್ಯಂತಿ ತದ್ಭವಂ ಬ್ರಹ್ಮವಾದಿನಃ ॥೧೯॥

ಯಾವ ವಾಯುವಿನಿಂದ ಪ್ರಾಣವು ಮಲಗಿಕೊಳ್ಳುವುದಿಲ್ಲವೋ, ನಾಶ ಹೊಂದುವುದಿಲ್ಲವೋ, ಅಂಥ ಪ್ರಾಣಕ್ಕೆ ಆಧಾರವಾದ ವಾಯುವನ್ನೇ

ಉದಾನವೆನ್ನುತ್ತಾರೆ. ಪ್ರಾಣಾದಿಗಳು ಉದಾನಾದಿಗಳಲ್ಲಿ ಹೊಂದುವ ಅಂತರ್ಧಾನವನ್ನೇ ಬ್ರಹ್ಮಜ್ಞಾನಿಗಳು ತಪಸ್ಸೆಂದು ಭಾವಿಸುತ್ತಾರೆ.

ತೇಷಾಮನ್ಯೋನ್ಯಭಕ್ತಾನಾಂ ಸರ್ವೇಷಾಂ ದೇಹಚಾರಿಣಾಮ್ ।
ಅಗ್ನಿರ್ವೈಶ್ವಾನರೋ ಮಧ್ಯೇ ಸಪ್ತಧಾ ವಿಹಿತೋಽಂತರಾ ॥೨೦॥

ಒಂದರಲ್ಲಿ ಮತ್ತೊಂದನ್ನು ಲಯಗೊಳಿಸುವ ಸ್ವಭಾವವುಳ್ಳ ಎಲ್ಲ ಪ್ರಾಣಿಗಳ ದೇಹದಲ್ಲಿಯೂ ಸಂಚರಿಸುವ ಪ್ರಾಣವಾಯುಗಳ ಮಧ್ಯದಲ್ಲಿ ನಾಭಿಮಂಡಲದಲ್ಲಿ ಸಮಾನವಾಯುವಿದೆ. ಅದರ ಮಧ್ಯದಲ್ಲಿರುವ ವೈಶ್ವಾನರಾಗ್ನಿಯು ಏಳು ರೂಪಗಳಾಗಿ ಪ್ರಕಾಶಿಸುತ್ತಿದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ ಚ ಶ್ರೋತ್ರಂ ಚ ಪಂಚಮೀ ।
ಮನೋ ಬುದ್ಧಿಶ್ಚ ಸಪ್ತೈತಾ ಜಿಹ್ವಾ ವೈಶ್ವಾನರಾರ್ಚಿಷಃ ॥೨೧॥

ಧ್ಮೇಯಂ ಪೇಯಂ ಚ ದೃಶ್ಯಂ ಚ ಸ್ಪ್ರಶ್ಯಂ ಶ್ರಾವ್ಯಂ ತಥೈವ ಚ ।
ಮಂತವ್ಯಮವಬೋದ್ಧವ್ಯಂ ತಾಃ ಸಪ್ತ ಸಮಿಧೋ ಮತಾಃ ॥೨೨॥

ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ, ಮನಸ್ಸು, ಬುದ್ಧಿ - ಇವು ವೈಶ್ವಾನರ ಅಗ್ನಿಗೆ ಏಳು ನಾಲಿಗೆಗಳಾಗಿವೆ. ಆಘ್ರಾಣಿಸಲು ಯೋಗ್ಯವಾದ ಗಂಧ, ನೋಡಲು ಯೋಗ್ಯವಾದ ರೂಪ, ಪಾನ ಮಾಡಲು ಯೋಗ್ಯವಾದ ರಸ, ಮುಟ್ಟಲು ಯೋಗ್ಯವಾದ ಸ್ಪರ್ಶ, ಕೇಳಲು ಯೋಗ್ಯವಾದ ಶಬ್ದ, ಮನನ ಮಾಡಲು ಯೋಗ್ಯವಾದ ಬುದ್ಧಿಯ ಮೂಲಕ ತಿಳಿದುಕೊಳ್ಳಲು ಯೋಗ್ಯವಾದ ವಿಷಯ - ಈ ಏಳು ವೈಶ್ವಾನರಾಗ್ನಿಗೆ ಸಮಿತ್ತುಗಳಂತಿವೆ.

ಘ್ರಾತಾ ಭಕ್ಷಯಿತಾ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಚ ಪಂಚಮಃ ।
ಮಂತಾ ಬೋದ್ಧಾ ಚ ಸಪ್ತೈತೇ ಭವಂತಿ ಪರಮರ್ತ್ವಿಜಃ ॥೨೩॥

ಆಘ್ರಾಣಿಸುವವನು, ತಿನ್ನುವವನು, ನೋಡುವವನು, ಮುಟ್ಟುವವನು, ಕೇಳುವವನು, ಮನನ ಮಾಡುವವನು, ತಿಳಿದುಕೊಳ್ಳುವವನು - ಈ ಏಳು ಮಂದಿ ವೈಶ್ವಾನರಾಗ್ನಿಗೆ ಸಂಬಂಧಿಸಿದ ಯಜ್ಞದಲ್ಲಿ ಶ್ರೇಷ್ಠರಾದ ಋತ್ವಿಜರು ಎಂದು ಭಾವಿಸಬೇಕು.

ಘ್ರೇಯೇ ಪೇಯೇ ಚ ದೃಶ್ಯೇ ಚ ಸ್ಪ್ರಶ್ಯೇ ಶ್ರಾವ್ಯೇ ತಥೈವ ಚ ।
ಮಂತವ್ಯೇಷ್ಯವಬೋದ್ಧವ್ಯೇ ಸುಭಗೇ ಪಶ್ಯ ಸರ್ವದಾ ॥೨೪॥

ಸೌಭಾಗ್ಯವತಿಯೇ, ಆಘ್ರಾಣಿಸಲು ಯೋಗ್ಯವಾದ, ಆಸ್ವಾದಿಸಲು ಯೋಗ್ಯವಾದ, ನೋಡಲು ಯೋಗ್ಯವಾದ, ಮುಟ್ಟಲು ಯೋಗ್ಯವಾದ, ಕೇಳಲು ಯೋಗ್ಯವಾದ ಐದು ಇಂದ್ರಿಯಗಳು ಹೊರಗಡೆಯಿಂದ ವ್ಯಾಪಾರಗಳನ್ನು ನಡೆಸಿದರೆ, ಮನನ ಮಾಡಲು ಯೋಗ್ಯವಾದ, ತಿಳಿಯಲು ಯೋಗ್ಯವಾದ ಇಂದ್ರಿಯಗಳು ಒಳಮುಖವಾದ ಇಂದ್ರಿಯಗಳೆನಿಸಿವೆ. ಇವುಗಳನ್ನೇ ಹವಿಸ್ಸುಗಳನ್ನಾಗಿ ಚಿಂತಿಸಬೇಕು.

ಹವೀಂಷ್ಯಗ್ನಿಷು ಹೋತಾರಃ ಸಪ್ತಧಾ ಸಪ್ತ ಸಪ್ತಸು ।
ಸಮ್ಯಕ್ ಪ್ರಕ್ಷಿಪ್ಯ ವಿದ್ವಾಂಸೋ ಜನಯಂತಿ ಸ್ವಯೋನಿಷು ॥೨೫॥

ಘಾತಾ, ಭಕ್ಷಯಿತಾ ಮೊದಲಾದ ಏಳು ಹೋತೃಗಳ ಜೊತೆಗೆ ಕೂಡಿಕೊಂಡು ಘ್ರೇಯ, ದೃಶ್ಯ ಮೊದಲಾದ ಏಳು ಸಮಿತ್ತುಗಳನ್ನು ಘ್ರಾಣ, ಜಿಹ್ವೆ ಮೊದಲಾದ ವೈಶ್ವಾನರ ನಾಲಿಗೆಗಳಲ್ಲಿ ವಿದ್ವಾಂಸರು ಹೋಮ ಮಾಡಿ, ಪೃಥಿವ್ಯಾದಿಗಳಲ್ಲಿ ಶಬ್ದಾದಿ ವಿಷಯಗಳನ್ನು ಉತ್ಪತ್ತಿ ಮಾಡುತ್ತಾರೆ. ಪ್ರತಿಕ್ಷಣದಲ್ಲಿ ಇಂದ್ರಿಯಗಳಿಂದ ನಡೆಯುವ ವ್ಯಾಪಾರವನ್ನು ವೈಶ್ವಾನರನಿಗೆ ನಡೆಯುವ ಆಹುತಿ ಎಂದು ಚಿಂತಿಸುತ್ತಾ, ಕ್ರಿಯೆಗಳನ್ನು ನಡೆಸುತ್ತಾರೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಮನೋ ಬುದ್ಧಿಶ್ಚ ಸಪ್ತೈತೇ ಯೋನಿರಿತ್ಯೇವ ಶಬ್ದಿತಾಃ ॥೨೬॥

ಪೃಥಿವೀ, ವಾಯು, ಆಕಾಶ, ಜಲ, ಜ್ಯೋತಿ, ಮನ, ಬುದ್ಧಿ - ಇವುಗಳನ್ನು ಸಪ್ತಯೋನಿಗಳು ಎಂದು ಹೇಳುತ್ತಾರೆ.

ಹವಿರ್ಗತಾ ಗುಣಾಃ ಸರ್ವೇ ಪ್ರವಿಶಂತ್ಯಗ್ನಿಮುನ್ಮುಖಮ್ ।
ಅಂತರ್ವಾಸಮುಷಿತ್ವಾ ಚ ಜಾಯಂತೇ ಸ್ವಾಸು ಯೋನಿಷು ॥೨೭॥

ಪೃಥಿವಿಯೇ ಮೊದಲಾದ ಯಾವ ಗಂಧಾದಿ ಗುಣಗಳಿವೆಯೋ ಇವುಗಳು ಹವಿಷ್ಯ ರೂಪವೆನಿಸಿವೆ. ಅವೆಲ್ಲವೂ ವೈಶ್ವಾನರಾಗ್ನಿಯಿಂದಲೇ ಹುಟ್ಟನ್ನು ಪಡೆದ ಬುದ್ಧಿಯನ್ನು ಪ್ರವೇಶಿಸುತ್ತದೆ. ಆ ಗುಣಗಳೆಲ್ಲವೂ ಬುದ್ಧಿಯಲ್ಲಿ ಸೇರಿಕೊಂಡು, ಯೋಗ್ಯವಾದ

ಕಾಲದಲ್ಲಿ ತಮ್ಮ ಸ್ಥಾನಗಳಲ್ಲಿ ಅಭಿವ್ಯಕ್ತಿಯನ್ನು ಹೊಂದುತ್ತವೆ. ಗಂಧವು ಮೂಗಿನಲ್ಲಿ, ರಸವು ನಾಲಿಗೆಯಲ್ಲಿ, ರೂಪವು ಕಣ್ಣಿನಲ್ಲಿ ಮುಂತಾಗಿ.

ತತ್ರೈವ ಚ ನಿರುದ್ಧ್ಯಂತೇ ಪ್ರಲಯೇ ಭೂತಭಾವನೇ ।
ತತಃ ಸಂಜಾಯತೇ ಗಂಧಃ ತತಃ ಸಂಜಾಯತೇ ರಸಃ ॥೨೮॥

ಜೀವರ ಮರಣದ ಸಮಯದಲ್ಲಿ ಈ ಗುಣಗಳು ಜೀವನ ಬುದ್ಧಿಯಲ್ಲಿಯೇ ಬಂಧಿಸುತ್ತವೆ. ಪ್ರಾಣಿಗಳ ಸೃಷ್ಟಿಯ ಸಮಯದಲ್ಲಿ ಜೀವನ ಜೊತೆಗೆ ಇರುವ ಬುದ್ಧಿಯಲ್ಲಿ ಸಂಸ್ಕಾರರೂಪದಲ್ಲಿರುವ ಈ ಗುಣಗಳು ಪುನಃ ಪ್ರಾಕಟ್ಯವನ್ನು ಹೊಂದುತ್ತವೆ.

ತತಃ ಸಂಜಾಯತೇ ರೂಪಂ ತತಃ ಸ್ಪರ್ಶೋಽಭಿಜಾಯತೇ ।
ತತಃ ಸಂಜಾಯತೇ ಶಬ್ದಃ ಸಂಶಯಸ್ತತ್ರ ಜಾಯತೇ ॥೨೯॥

ತತಃ ಸಂಜಾಯತೇ ನಿಷ್ಠಾ ಜನ್ಮೈತತ್ ಸಪ್ತಧಾ ವಿದುಃ ॥೩೦॥

ರೂಪ, ಸ್ಪರ್ಶ, ಶಬ್ದ, ಸಂಶಯ, ನಿಶ್ಚಯಾತ್ಮಕವಾದ ಬುದ್ಧಿ - ಇವೆಲ್ಲವೂ ಜೀವನ ಜೊತೆಗೆ ಇರುವ ಬುದ್ಧಿಯ ಮೂಲಕ ಅಭಿವ್ಯಕ್ತಿಯನ್ನು ಹೊಂದುತ್ತವೆ. ಹೀಗೆ ಈ ಗುಣಗಳು ಏಳು ಪ್ರಕಾರವಾಗಿ ಹುಟ್ಟುವನೆಂದು ವಿದ್ವಾಂಸರು ತಿಳಿಯುತ್ತಾರೆ.

ಅನೇನೈವ ಪ್ರಕಾರೇಣ ಪ್ರಗೃಹೀತಾಃ ಪುರಾತನೈಃ ।
ಪೂರ್ಣಾಹುತಿಭಿರಾಪೂರ್ಣಾಸ್ತೈಃ ಪೂರ್ಯಂತೇ ಮಹಾಜನಾಃ ॥೩೧॥

ಈ ಪ್ರಕಾರವಾಗಿಯೇ ಪುರಾತನರಾದ ಋಷಿಗಳು ಜ್ಞಾನವೇ ಮುಂತಾದವುಗಳ ಸ್ವರೂಪವನ್ನು ಗ್ರಹಣ ಮಾಡಿದ್ದಾರೆ. ತಿಳಿಯುವ ವ್ಯಕ್ತಿ, ತಿಳಿಯುವ ವಿಷಯ, ತಿಳಿಯುವ ಜ್ಞಾನ - ಈ ಮೂರರ ಪೂರ್ಣಾಹುತಿಯಿಂದಲೇ ಸಮಸ್ತ ಲೋಕಗಳು ವ್ಯಾಪ್ತವಾಗಿವೆ. ಈ ತತ್ವಗಳಿಂದಲೇ ಸಮಸ್ತ ಲೋಕಗಳೂ ತುಂಬಿಹೋಗಿವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಪಂಚಪ್ರಾಣೇ ಸ್ಥಿತಿಕಥನಂ ನಾಮ ಏಕವಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಹತ್ತು ಇಂದ್ರಿಯಗಳ ಗುಣಾದಿಗಳನ್ನು ಪ್ರತಿಪಾದಿಸುವ ಬ್ರಾಹ್ಮಣದಂಪತಿಗಳ ಸಂವಾದವನ್ನು ಹೇಳಿದುದು.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಿಬೋಧ ದಶಹೋತ್ಯೃಣಾಂ ವಿಧಾನಮಿಹ ಯಾದೃಶಮ್ ॥೧॥

ಬ್ರಾಹ್ಮಣ– ಪ್ರಿಯಳೇ, ಈ ವಿಷಯದಲ್ಲಿ ಪುರಾತನವಾದ ಇತಿಹಾಸವನ್ನು ಯಾವ ವಿದ್ವಾಂಸರು ಉದಾಹರಿಸುತ್ತಾ, ಹತ್ತು ಮಂದಿ ಹೋತೃಗಳು ಸೇರಿ ಯಾವ ರೀತಿಯಲ್ಲಿ ಯಜ್ಞ ಮಾಡುತ್ತಾರೆ ಎಂದು ಹೇಳುತ್ತಾರೋ ಅದನ್ನು ತಿಳಿಸುತ್ತೇನೆ, ಕೇಳು.

ಶ್ರೋತ್ರಂ ತ್ವಕ್ ಚಕ್ಷುಷೀ ಜಿಹ್ವಾ ನಾಸಿಕಾ ಚರಣೌ ಕರೌ ।
ಉಪಸ್ಥಃ ಪಾಯುರಿತಿ ವಾ ಹೋತ್ರಾಣಿ ದಶ ಭಾಮಿನಿ ॥೨॥

ಭಾಮಿನಿಯೇ, ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು, ಎರಡು ಕಾಲುಗಳು, ಕೈಗಳು, ಜನನೇಂದ್ರಿಯ, ಪಾಯು - ಇವುಗಳೇ ನಾನು ಹೇಳಿದ ಹತ್ತು ಮಂದಿ ಹೋತೃಗಳು.

ಶಬ್ದಸ್ಪರ್ಶೌ ರೂಪರಸೌ ಗಂಧೋ ವಾಕ್ಯಂ ಕ್ರಿಯಾ ಗತಿಃ ।
ರೇತೋಮೂತ್ರಪುರೀಷಾಣಾಂ ತ್ಯಾಗೋ ದಶ ಹವೀಂಷಿ ಚ ॥೩॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ, ವಾಣಿ, ಕ್ರಿಯೆ, ಗತಿ, ವೀರ್ಯಮೂತ್ರ ತ್ಯಾಗ, ಮಲತ್ಯಾಗ - ಈ ವಿಷಯಗಳೇ ಹತ್ತು ಹವಿಸ್ಸುಗಳು.

ದಿಶೋ ವಾಯೂ ರವಿಶ್ಚಂದ್ರಃ ಪೃಥ್ಯಗ್ನೀ ವಿಷ್ಣುರೇವ ಚ ।
ಇಂದ್ರಃ ಪ್ರಜಾಪತಿರ್ಮಿತ್ರಮಗ್ನಯೋ ದಶ ಭಾಮಿನಿ ॥೪॥

ಭಾಮಿನಿಯೇ, ದಿಕ್ಕು, ವಾಯು, ಸೂರ್ಯ, ಚಂದ್ರ, ಪೃಥಿವೀ, ಅಗ್ನಿ, ವಿಷ್ಣು, ಇಂದ್ರ, ಪ್ರಜಾಪತಿ, ಮಿತ್ರ - ಈ ಹತ್ತು ದೇವತೆಗಳೇ ಅಗ್ನಿಗಳು.

ದಶೇಂದ್ರಿಯಾಣಿ ಹೋತ್ರಾಣಿ ಹವೀಂಷಿ ದಶ ಭಾಮಿನಿ ।
ವಿಷಯಾ ನಾಮ ಸಮಿಧೋ ಹೂಯಂತೇ ತು ದಶಾಗ್ನಿಷು ॥೫॥

ಭಾಮಿನಿಯೇ, ಇಂದ್ರಿಯರೂಪರಾದ ಹೋತೃಗಳು ದಿಕ್ಕು ಮೊದಲಾದ ಹತ್ತು ಅಗ್ನಿಗಳಲ್ಲಿ ಶಬ್ದ ಮೊದಲಾದ ಹತ್ತು ಹವಿಸ್ಸುಗಳನ್ನು ಹೋಮ ಮಾಡುತ್ತಾರೆ.

ಚಿತ್ರಂ ಸ್ರುವಶ್ಚ ವಿತ್ತಂ ಚ ಪವಿತ್ರಂ ಜ್ಞಾನಮುತ್ತಮಮ್ ।
ಸುವಿಭಕ್ತಮಿದಂ ಸರ್ವಂ ಜಗದಾಸೀದಿತಿ ಶ್ರುತಮ್ ॥೬॥

ಈ ದೇಹಪ್ರಾಪ್ತಿಯ ಯಜ್ಞದಲ್ಲಿ ಚಿತ್ತವೇ ಹೋಮ ಮಾಡುವ ಸ್ರುವ ಎನಿಸಿದೆ. ಪವಿತ್ರವೂ ಶ್ರೇಷ್ಠವಾದ ಜ್ಞಾನವು ವಿತ್ತ ಎನಿಸಿದೆ. ಈ ಎಲ್ಲ ಜಗತ್ತು ಹಿಂದೆ ಚೆನ್ನಾಗಿ ವಿಭಾಗಿಸಲ್ಪಟ್ಟಿದೆ ಎಂದು ನಾವು ಕೇಳಿದ್ದೇವೆ.

ಸರ್ವಮೇವಾತ್ರ ವಿಜ್ಞೇಯಂ ಚಿತ್ತಂ ಜ್ಞಾನಮವೇಕ್ಷತೇ ॥೭॥

ತಿಳಿಯಲ್ಪಡಬೇಕಾಗಿರುವ ಎಲ್ಲ ಜಗತ್ತು ಚಿತ್ತರೂಪವಾಗಿಯೇ ಇದೆ. ಚಿತ್ತ ಸ್ವಾಭಾವಿಕವಾಗಿ ಜ್ಞಾನವನ್ನು ಅಪೇಕ್ಷಿಸುತ್ತದೆ.

ಚೇತಃ ಶರೀರಭೋಕ್ತಾ ಯೋ ವಿಜ್ಞಾತಾ ತು ಶರೀರಭೃತ್ ।
ಶರೀರಭೃದ್ ಗಾರ್ಹಪತ್ಯಸ್ತಸ್ಮಾದನ್ಯಃ ಪ್ರಣೀಯತೇ ॥೮॥

ತತಶ್ಚಾಹವನೀಯಸ್ತು ತಸ್ಮಿನ್ ಪ್ರಕ್ಷಿಪ್ಯತೇ ಹವಿಃ ।
ತತೋ ವಾಚಸ್ಪತಿರ್ಯಜ್ಞೇ ಮನಸಾ ಪರ್ಯವೇಕ್ಷತೇ ॥೯॥

ಚಿತ್ತಾಭಿಮಾನಿಯಾದ ಚತುರ್ಮುಖ ಬ್ರಹ್ಮನು ಶರೀರದಲ್ಲಿದ್ದು, ಸಾರಭೋಕ್ತೃವಾದ ನಾರಾಯಣನು, ವಿಜ್ಞಾನತತ್ತ್ವಾಭಿಮಾನಿಯಾದ ಸರಸ್ವತೀ, ಪಾರ್ವತೀ ಮೊದಲಾದವರು, ಶರೀರಧಾರಕನಾದ ಮುಖ್ಯಪ್ರಾಣ - ಇವರು ಐದು ಮಂದಿ ಅಂತಃಕರಣ ದೇವತೆಗಳೆನಿಸಿದ್ದಾರೆ. ಇವರಲ್ಲಿ ಶರೀರಭೃನ್ನಾಮಕನಾದ ಮುಖ್ಯಪ್ರಾಣನೇ ಗಾರ್ಹಪತ್ಯ ಅಗ್ನಿಸ್ಥಾನನಾಗಿದ್ದಾನೆ. ಈ ಮುಖ್ಯಪ್ರಾಣನಿಗಿಂತ ಭಿನ್ನರಾದ ವಿಜ್ಞಾನತತ್ತ್ವಾಭಿ- ಮಾನಿನಿಯರು ಅಗ್ನಿಸ್ಥಾನೀಯರಾಗಿದ್ದಾರೆ. ಇವರ ದೆಶೆಯಿಂದ ಅವಹನ ಯೋಗ್ಯವಾದ ಜಠರಾಗ್ನಿಯು ಹುಟ್ಟುತ್ತದೆ. ಅದರ ದೆಶೆಯಿಂದ ವಾಗಭಿಮಾನಿ

ದೇವನು ಅನಂತರ ಮನಸ್ಸಿನ ಮೂಲಕ ನೋಡುತ್ತಾನೆ. ಮನಸ್ಸಿನ ಮೂಲಕ ತಿಳಿಯುವ ಅಭಿಮಾನಿಯ ದೆಶೆಯಿಂದಲೇ ಧ್ಯಾನಯೋಗ್ಯವಾದ ಭಗವಂತನ ಮೂರ್ತಿಗಳು ಕಾಣಲ್ಪಡುತ್ತವೆ. ಪ್ರಾಣಭೃನ್ನಾಮಕನಾದ ಮುಖ್ಯಪ್ರಾಣನು ಪ್ರಾಣಾಪಾನಾದಿ ದೇವದತ್ತಾದಿ ರೂಪಗಳಿಂದ ಚಿಂತಿಸಿದಾಗ ದಶಹೋತೃಗಳು ಆಗುತ್ತಾರೆ.

ರೂಪಂ ಭವತಿ ವೈ ವಕ್ತ್ರಂ ತದನುದ್ರವತೇ ಮನಃ ॥೧೦॥

ಅನಂತರ ರೂಪದ ಪ್ರಾದುರ್ಭಾವವಾಗುತ್ತದೆ. ರೂಪವು ಮನಸ್ಸಿನ ಕಡೆ ಧಾವಿಸುತ್ತದೆ.

ಬ್ರಾಹ್ಮಣೇ

ಕಸ್ಮಾದ್ ವಾಗಭವತ್ ಪೂರ್ವಂ ಕಸ್ಮಾತ್ ಪಶ್ಚಾನ್ಮನೋऽಭವತ್ ।
ಮನಸಾ ಚಿಂತಿತಂ ಪೂರ್ವಂ ವಾಕ್ಯಂ ಸಮಭಿಪದ್ಯತೇ ॥೧೧॥

ಬ್ರಾಹ್ಮಣ– ಪ್ರಿಯತಮನೇ, ಯಾವ ಕಾರಣದಿಂದ ವಾಗಿಂದ್ರಿಯವು ಮೊದಲು ಹುಟ್ಟಿತು? ವಾಗಿಂದ್ರಿಯದ ನಂತರವೇ ಏಕೆ ಮನಸ್ಸು ಹುಟ್ಟಿತು? ಕಾರಣ ವ್ಯವಹಾರದಲ್ಲಿ ಮನಸ್ಸು ಯೋಚಿಸಿದ ನಂತರವೇ ಮಾತು ಹೊರಬರುತ್ತದಲ್ಲವೇ?

ಕೇನ ವಿಜ್ಞಾನಯೋಗೇನ ಮತಿಶ್ಚಿತ್ತಂ ಸಮಾಪ್ನುತೇ ।
ಸಮುನ್ನೀತಾ ನಾಧಿಗಚ್ಛೇತ್ ಕೋ ವೈನಾಂ ಪ್ರತಿಷೇಧತಿ ॥೧೨॥

ಯಾವ ವಿಜ್ಞಾನದ ಪ್ರಭಾವದಿಂದ ಬುದ್ಧಿಯು ಚಿತ್ತವನ್ನು ಆಶ್ರಯಿಸಿದೆ? ಬುದ್ಧಿಯು ಲಯ ಹೊಂದಿದಾಗ ಸುಷುಪ್ತಿಯ ಅವಸ್ಥೆಯಲ್ಲಿ ವಿಷಯಗಳ ಕಡೆ ಏಕೆ ಸಾಗುವುದಿಲ್ಲ? ಸಾಗದಿರುವಂತೆ ಯಾರು ನಿಯಮಿಸುತ್ತಾರೆ?

ಬ್ರಾಹ್ಮಣಃ

ತಾಮುದಾನಃ ಪತಿರ್ಭೂತ್ವಾ ತಸ್ಮಾತ್ ಪ್ರೇಕ್ಷತ್ಯಪಾನಿತಿ ।
ತಾಂ ಮತಿಂ ಮನಸಃ ಪ್ರಾಹುರ್ಮನಸ್ತಸ್ಮಾದವೇಕ್ಷತೇ ॥೧೩॥

ಬ್ರಾಹ್ಮಣ– ಬುದ್ಧಿತತ್ವಕ್ಕೆ ಉದಾನವಾಯುವು ಸ್ವಾಮಿಯಾಗಿ ಯಾವಾಗಲೂ ನೋಡುತ್ತಿರುತ್ತಾನೆ. ಅಪಾನವಾಯುವನ್ನು ಕೆಳಮುಖವಾಗಿಯೇ ಸಂಚರಿಸುವಂತೆ

ಮಾಡುತ್ತಾನೆ. ಆ ಬುದ್ಧಿಯು ಮನಸ್ಸಿನ ದೆಸೆಯಿಂದ ಹುಟ್ಟಿದೆ ಎಂದು ಹೇಳುತ್ತಾರೆ. ಉದಾನವಾಯುವಿನ ದೆಸೆಯಿಂದ ಮನಸ್ಸು ವಿಷಯಗಳನ್ನು ನೋಡುತ್ತದೆ.

ಪ್ರಶ್ನಂ ತು ವೈ ವಾಙ್ಮನಸೋರ್ಯಸ್ಮಾತ್ ತ್ವಮನುಪೃಚ್ಛಸಿ ।
ತಸ್ಮಾತ್ ತೇ ವರ್ತಯಿಷ್ಯಾಮಿ ತಯೋರೇವ ಸಮಾಹ್ವಯಮ್ ॥೧೪॥

ಭಾಮಿನಿಯೇ, ನೀನು ಹಿಂದೆ ವಾಙ್ಮನಸ್ಸುಗಳ ಬಗ್ಗೆ ಏನು ಪ್ರಶ್ನಿಸಿದೆಯೋ ನಾನು ಅವೆರಡಕ್ಕೂ ಸಂಬಂಧಪಟ್ಟಂತೆ ಹಿಂದೆ ನಡೆದ ಒಂದು ಸಂವಾದವನ್ನು ಹೇಳುತ್ತೇನೆ. ಆ ಸಂವಾದದಲ್ಲಿ ನಿನಗೆ ಉತ್ತರ ಸಿಗುತ್ತದೆ.

ಉಭೇ ವಾಙ್ಮನಸೀ ಗತ್ವಾ ಭೂತಾತ್ಮಾನಮಪೃಚ್ಛತಾಮ್ ।
ಆವಯೋಃ ಶ್ರೇಷ್ಠಮಾಚಕ್ಷ್ವ ಚ್ಛಿಂಧಿ ನೌ ಸಂಶಯಂ ವಿಭೋ ॥೧೫॥

ಒಮ್ಮೆ ವಾಕ್ ಮತ್ತು ಮನಸ್ಸು ಎರಡೂ ಜೀವಾತ್ಮನ ಬಳಿ ಹೋಗಿ- 'ಪ್ರಭುವೇ, ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು? ಇದನ್ನು ತಿಳಿಸಿ ನಮ್ಮ ಸಂಶಯವನ್ನು ಪರಿಹರಿಸು' ಎಂದು ಪ್ರಾರ್ಥಿಸಿದವು.

ಮನ ಇತ್ಯೇವ ಭಗವಾನ್ ತದಾ ಪ್ರಾಹ ಸರಸ್ವತೀಮ್ ।
ಅಹಂ ವೈ ಕಾಮಧುಕ್ ತುಭ್ಯಮಿತಿ ತಂ ಪ್ರಾಹ ವಾಗಥ ॥೧೬॥

ಇದಕ್ಕೆ ಉತ್ತರವಾಗಿ ಜೀವನು ಮನಸ್ಸೇ ಶ್ರೇಷ್ಠವೆಂದು ಉತ್ತರಿಸಿದನು. ಆ ಮಾತನ್ನು ಕೇಳಿ ವಾಗಭಿಮಾನಿಯಾದ ಸರಸ್ವತಿಯು- 'ಜೀವೇಶ್ವರನೇ, ನಾನು ನಿನಗೆ ಕಾಮಧೇನುವಾಗಿ ನಿಂತು ಎಲ್ಲವನ್ನೂ ಒದಗಿಸಿಕೊಡುತ್ತಿದ್ದೇನೆ. ಹೀಗಿರುವಾಗ ನಾನು ಶ್ರೇಷ್ಠಳಾಗುವುದು ಬಿಟ್ಟು ಮನಸ್ಸು ಶ್ರೇಷ್ಠವೆಂದು ಹೇಗೆ ಹೇಳಿದೆ?' ಎಂದು ಅವನನ್ನು ಕುರಿತು ಹೇಳಿದಳು. ಅದಕ್ಕೆ ಜೀವಾಭಿಮಾನಿಯಾದ ಪ್ರಜಾಪತಿಯು ಉತ್ತರಿಸುತ್ತಾನೆ.

ಪ್ರಜಾಪತಿಃ

ಸ್ಥಾವರಂ ಜಂಗಮಂ ಚೈವ ವಿದ್ಧ್ಯಭೇ ಮನಸೀ ಮಮ ।
ಸ್ಥಾವರಂ ಮತ್ಸಕಾಶೇ ವೈ ಜಂಗಮಂ ವಿಷಯೇ ತವ ॥೧೭॥

ಪ್ರಜಾಪತಿ– ಸ್ಥಾವರ-ಜಂಗಮ ಎರಡು ನನ್ನ ಮನಸ್ಸಿನಿಂದ ಸೃಷ್ಟಿಯನ್ನು ಹೊಂದಿರುವುದರಿಂದ, ಜ್ಞಾನಹೇತುವಾಗಿರುವುದರಿಂದ ನನ್ನ ಮನಸ್ಸೇ ಎನಿಸಿವೆ.

ಸ್ಥಾವರವು ಮನೋನಿಯಾಮಕನಾದ ನನ್ನ ಬಳಿ ಇದೆ, ಜಂಗಮವು ವಾಗಭಿಮಾನಿಯಾದ ನಿನ್ನ ಬಳಿ ಇದೆ.

ವ್ಯಾಖ್ಯಾನ ವಿಶೇಷ– ಇಲ್ಲಿ ಸ್ಥಾವರ ಎಂದರೆ ಮುಖ್ಯಪ್ರಾಣ ಎಂದು ಅರ್ಥ. ಜಂಗಮ ಶಬ್ದಕ್ಕೆ ವರ್ಣ-ಮಂತ್ರ-ಸ್ವರಾದಿಗಳಿಂದ ಕೂಡಿದ ವೇದಗಳು ಎಂದು ಅರ್ಥ. ಇವೆರಡೂ ಚತುರ್ಮುಖ ಬ್ರಹ್ಮನ ಸಮೀಪ ಇವೆ ಎಂದು ಅರ್ಥ. ಮುಖ್ಯಪ್ರಾಣನು ಸ್ಥಿರನಾಗಿರುವುದರಿಂದ ಸ್ಥಾವರ ಶಬ್ದವಾಚ್ಯನಾಗಿದ್ದಾನೆ. ಅವನು ಚತುರ್ಮುಖಬ್ರಹ್ಮನ ಲೋಕದಲ್ಲಿಯೇ ಇದ್ದಾನೆ. ಚತುರ್ಮುಖ ಬ್ರಹ್ಮನಂತೆ ಪೂಜ್ಯನೂ ಆಗಿದ್ದಾನೆ. ಇನ್ನೊಬ್ಬರನ್ನು ಅನುಸರಿಸಲಾರ. ಸ್ಥಿರನಾಗಿರುವುದರಿಂದ ಸ್ಥಾವರ ಎನಿಸಿಕೊಳ್ಳುತ್ತಾನೆ. 'ಜಂಗಮ' ಶಬ್ದಕ್ಕೆ 'ಜಂ' ಎಂದರೆ ಪ್ರತಿಕಲ್ಪದಲ್ಲಿಯೂ ಮನ್ವಂತರ ಮನ್ವಂತರದಲ್ಲಿಯೂ ಹುಟ್ಟನ್ನು ಪಡೆಯುವ ಇಂದ್ರಾದಿಗಳು ಎಂದರ್ಥ. ಅವರನ್ನು ಅನುಸರಿಸಿ ಇರುವ ವರ್ಣ-ಮಂತ್ರ-ಸ್ವರಾದಿಗಳನ್ನು ಜಂಗಮ ಎನ್ನಲಾಗಿದೆ. ಈ ವರ್ಣ-ಮಂತ್ರ-ಸ್ವರಾದಿ ಸಮುದಾಯಾತ್ಮಕವಾದ ವೇದಗಳು ನಿನ್ನ ಸಮೀಪದಲ್ಲಿ, ಅಧೀನದಲ್ಲಿವೆ. ನೀನಾದರೂ ನನ್ನ ಅಧೀನದಲ್ಲಿರುವಿ.

ಯತ್ತು ತೇ ವಿಷಯಂ ಗಚ್ಛನ್ ಮಂತ್ರೋ ವರ್ಣಃ ಸ್ವರೋಽಪಿ ವಾ ।
ತನ್ಮನೋ ಜಂಗಮಂ ನಾಮ ತಸ್ಮಾದಪಿ ಗರೀಯಸೀ ॥೧೮॥

ಮಂತ್ರವಾಗಲಿ, ವರ್ಣವಾಗಲಿ, ಸ್ವರವಾಗಲಿ ಇಂದ್ರಿಯಾತೀತವಾದ ಸ್ವರ್ಗಾದಿಗಳಿಗೆ ಹೋದುದೇ ಆದರೆ ಮನಸ್ಸು ಅದನ್ನೇ ಅನುಸರಿಸಿ ಹೋಗುತ್ತದೆ. ಇಲ್ಲಿ ಅಭಿಮಾನಿಗಳನ್ನು ಗ್ರಹಿಸಬೇಕು. ಅತೀಂದ್ರಿಯಜ್ಞಾನವನ್ನು ಪಡೆಯುವ ಮನಸ್ಸಿಗೂ ಜಂಗಮವೆಂಬ ಹೆಸರೇ ಬರುತ್ತದೆ. ಹೀಗೆ ಮನಸ್ಸು ವಾಕ್‌ನಿಂದಲೇ ಇಂದ್ರಿಯಾತೀತವಾದ ಸ್ವರ್ಗಾದಿಗಳಿಗೆ ಹೋಗುವುದರಿಂದ ಮನಸ್ಸಿಗಿಂತಲೂ ಶ್ರೇಷ್ಠಳಾಗಿರುವಿ.

ಯಸ್ಮಾದಿದಂ ತು(ತ್ವಂ) ಮಾ ವೋಚಃ ಸ್ವಯಮಭ್ಯೇತ್ಯ ಶೋಭನೇ ।
ತಸ್ಮಾದುಚ್ಚಾವಚಸಮಾಸಾದ್ಯ ಮಾ ವಕ್ಷ್ಯಸಿ ಸರಸ್ವತಿ ॥೧೯॥

ಶೋಭನಮಯಳಾದ ಸರಸ್ವತಿಯೇ, ನೀನು ನಿನ್ನ ಅಭಿಮಾನಿಯಾದ ವಾಯುವಿನ ಸಹಾಯವನ್ನು ಪಡೆಯದೆ ನನ್ನ ಬಳಿ ಬಂದು ಸಕಲ ವಸ್ತುಗಳನ್ನೂ ಕಾಮಧೇನುವಿನಂತೆ ಒದಗಿಸಿಕೊಡುತ್ತಿದ್ದೇನೆ ಎಂದು ನಿನ್ನ ಪಕ್ಷವನ್ನು ಪುಷ್ಟೀಕರಿಸುವ ಮಾತನ್ನಾಡಿರುವಿ.

ನೀನು ಇಲ್ಲಿಗೆ ಬಂದು ಮೇಲ್ಮುಖದ ಶ್ವಾಸವನ್ನು ಆಶ್ರಯಿಸಿಕೊಂಡು ನನಗೆ ಹೇಳಿರುವಿ. ಊರ್ಧ್ವಶ್ವಾಸದ ಸಮಯದಲ್ಲಿ ನಿನ್ನ ಪ್ರವೃತ್ತಿಯು ಉಂಟಾಗಲು ಸಾಧ್ಯವಿಲ್ಲ.

ಪ್ರಾಣಾಪಾನಾಂತರೇ ತಸ್ಮಾದ್ ಆವಾಂ ನಿತ್ಯಂ ಪ್ರತಿಷ್ಠಿತಾಮ್ ।
ಪ್ರೀಯಮಾಣಂ ಮಹಾಭಾಗೇ ವಿನಾ ಪ್ರಾಣಮಪಾನಿತಿ ॥೨೦॥

ಭಾಗ್ಯಶಾಲಿನಿಯೇ, ಪ್ರಾಣ ಮತ್ತು ಅಪಾನಗಳ ಮಧ್ಯದಲ್ಲಿ ನೀನು ಯಾವಾಗಲೂ ಉಪಸ್ಥಿತಳಾಗಿರುತ್ತಿ. ಪ್ರಾಣಪ್ರೇರಣೆಯಿಲ್ಲದೆ ವಾಗ್ದೇವಿಯಾದ ನೀನು ಯಾವಾಗ ಅಪಾನದ ಕಡೆ ಹೋಗುತ್ತೀಯೋ ಆಗ ಅಲ್ಲಿರುವ ಪ್ರಜಾಪತಿಯ ಬಳಿ ಹೋಗಿ ಭಗವಂತನೇ ನೀನು ಪ್ರಸನ್ನನಾಗು ಎಂದು ಪ್ರಾರ್ಥಿಸುತ್ತಿ.

ಪ್ರಜಾಪತಿಮುಪಾಧಾವತ್ ಪ್ರಸೀದ ಭಗವನ್ನಿತಿ ॥೨೧॥

ತತಃ ಪ್ರಾಣಃ ಪ್ರಾದುರಭೂದ್ ವಾಚಮಾಪ್ಯಾಯಯನ್ನಪಿ ।
ತಸ್ಮಾದುಚ್ಛ್ವಾಸಮಾಸಾದ್ಯ ನ ವಾಗ್ವದತಿ ಕರ್ಹಿಚಿತ್ ॥೨೨॥

ಆ ಸಮಯದಲ್ಲಿ ವಾಗ್ದೇವಿಗೆ ಸಹಕಾರವನ್ನು ನೀಡುವ ದೃಷ್ಟಿಯಿಂದ ಪ್ರಾಣವು ಮತ್ತೆ ಪ್ರಕಟವಾಗುತ್ತದೆ. ಆದ್ದರಿಂದಲೇ ಉಸಿರನ್ನು ಎಳೆದುಕೊಳ್ಳುವ ಸಮಯದಲ್ಲಿ ಯಾವುದೇ ಮಾತು ಹೊರಡುವುದಿಲ್ಲ.

ಘೋಷಿಣೀ ಜಾತನಿರ್ಘೋಷಾ ನಿತ್ಯಮೇಷಾ ಪ್ರವರ್ತತೇ ।
ತಯೋರಪಿ ಚ ಘೋಷಿಣ್ಯಾ ನಿರ್ಘೋಷ್ಯೈವ ಗರೀಯಸೀ ॥೨೩॥

ವಾಗ್ದೇವಿಯೇ, ನೀನು ಎರಡು ಪ್ರಕಾರವಾಗಿರುವಿ. ಪ್ರಾಣನಿಂದ ಪ್ರೇರಿತಳಾಗಿ ಅಲ್ಪಘೋಷವುಳ್ಳವಳಾಗಿರುವಿ. ಪ್ರಾಣನಿಂದ ಪ್ರೇರಿತಳಾಗಿ ಉತ್ಕೃಷ್ಟವಾದ ಶಬ್ದವುಳ್ಳವಳೂ ಆಗಿರುವಿ. ಪ್ರಾಣನಿಂದ ಪ್ರೇರಿತಳಾಗಿ ನಡೆಯುವ ಈ ಚೇಷ್ಟೆಗಳಲ್ಲಿ ಅಲ್ಪಶಬ್ದಕ್ಕಿಂತ ನಿರ್ಘೋಷವೆನಿಸಿದ (ನಿತರಾಂ ಘೋಷ) ಗಟ್ಟಿಯಾದ ಶಬ್ದವೇ ಶ್ರೇಷ್ಠವೆನಿಸಿದೆ.

ಗೌರಿವ ಪ್ರಸ್ರವತ್ಯರ್ಥಾನ್ ರಸಮುತ್ತಮಪಾಲಿನೀ ।
ಸತತಂ ಸ್ಯಂದತೇ ಹ್ಯೇಷಾ ಶಾಶ್ವತೀ ಬ್ರಹ್ಮವಾದಿನೀ ॥೨೪॥

ದಿವ್ಯಾ ದಿವ್ಯಪ್ರಭಾವೇಣ ಭಾರತೀ ಗೌಃ ಶುಚಿಸ್ಮಿತಾ ।
ಏತಯೋರಂತರಂ ಪಶ್ಯ ಸೂಕ್ಷ್ಮಯೋಃ ಸ್ಯಂದಮಾನಯೋಃ ॥೨೫॥

ಶುಚಿಸ್ಮಿತಳೇ, ಘೋಷಯುಕ್ತವಾದ ವೈದಿಕವಾಣಿಯು ಉತ್ತಮಗುಣಗಳಿಂದ ಶೋಭಿತಳಾಗಿದ್ದಾಳೆ. ವೇದವಾಣಿಯು ಹಾಲನ್ನು ಕೊಡುವ ಹಸುವಿನಂತೆಯೇ ಮನುಷ್ಯನಿಗೆ ಯಾವಾಗಲೂ ಉತ್ತಮವಾದ ರಸವನ್ನೂ, ಮನೋವಾಂಛಿತವಾದ ಉತ್ತಮವಾದ ಪದಾರ್ಥಗಳನ್ನು ಸುರಿಸುತ್ತದೆ. ಬ್ರಹ್ಮನನ್ನು ಪ್ರತಿಪಾದಿಸುವ ಉಪನಿಷದ್ವಾಣಿಯು ಶಾಶ್ವತ ಪರಬ್ರಹ್ಮವಸ್ತುವಿನ ವಿಷಯವಾಗಿ ಬೋಧಿಸುತ್ತದೆ. ಪ್ರಾಣ ಪ್ರೇರಣೆಯಿಂದ ಜ್ಞಾನ ರಸವನ್ನು, ಜೀವನನ್ನು ಪಾಲನೆ ಮಾಡುತ್ತಾಳೆ. ಈ ಪ್ರಾಣ-ಭಾರತಿಯರನ್ನು ನಿಯಮನ ಮಾಡುವವಳು ವೇದಾಭಿಮಾನಿನಿಯಾದ ಲಕ್ಷ್ಮೀದೇವಿಯಾಗಿದ್ದಾಳೆ. ಹೀಗೆ ದೇವತೆಗಳ ಪ್ರಭಾವದಿಂದ ವಾಗಭಿಮಾನಿಯಾದ ಭಾರತಿಯು ಗೋವಿನಂತೆ ಅಭೀಷ್ಟಗಳನ್ನು ಪದಾರ್ಥವನ್ನು ಸುರಿಸುವವಳಾಗಿದ್ದಾಳೆ. ಈ ವಾಕ್ ಮತ್ತು ಮನಸ್ಸುಗಳ ಸೂಕ್ಷ್ಮವಾದ ಅಂತರವನ್ನು ನೀನೇ ತಿಳಿದುಕೊ.

ಬ್ರಾಹ್ಮಣೀ

ಅನುತ್ಪನ್ನೇಷು ವಾಕ್ಯೇಷು ಚೋದ್ಯಮಾನಾ ಸಿಸೃಕ್ಷಯಾ ।
ಕಿಂ ನು ಪೂರ್ವಂ ತತೋ ದೇವೀ ವ್ಯಾಜಹಾರ ಸರಸ್ವತೀ ॥೨೬॥

ಬ್ರಾಹ್ಮಣೀ– ಪ್ರಾಣನಾಥನೇ, ವಾಕ್‌ಗಳೇ ಹುಟ್ಟದಿದ್ದಾಗ ಏನನ್ನಾದರೂ ಹೇಳಬೇಕೆಂದು ಪ್ರೇರಿತಳಾದ ಸರಸ್ವತೀದೇವಿಯು ಎಲ್ಲಕ್ಕಿಂತಲೂ ಮೊದಲು ಯಾವ ಮಾತನ್ನು ಹೇಳಿದಳು?

ಬ್ರಾಹ್ಮಣಃ

ಪ್ರಾಣೇನ ಯಾ ಸಂಶ್ರಯತೇ ಶರೀರೇ
ಪ್ರಾಣಾದಪಾನಂ ಪ್ರತಿಪದ್ಯತೇ ತು ।
ಉದಾನಭೂತಾ ಚ ವಿಸೃಜ್ಯ ದೇಹಂ
ವ್ಯಾನೇನ ಸರ್ವಾಂ ದಿವಮಾವೃಣೋತಿ ॥೨೭॥

ಬ್ರಾಹ್ಮಣ– ಪ್ರಿಯಳೇ, ವಾಗ್ದೇವಿಯು ಪ್ರಾಣನ ಮೂಲಕವಾಗಿ ಶರೀರದಲ್ಲಿ ಪ್ರಕಟಳಾಗುತ್ತಾಳೆ. ಪ್ರಾಣನಿಂದಲೇ ಅಪಾನಭಾವವನ್ನು ಹೊಂದುತ್ತಾಳೆ. ನಂತರ

ಉದಾನಸ್ವರೂಪಳಾಗಿ ಶರೀರವನ್ನು ಬಿಟ್ಟು ವ್ಯಾನದಿಂದ ಸಂಪೂರ್ಣವಾದ ಆಕಾಶವನ್ನು ವ್ಯಾಪಿಸುತ್ತಾಳೆ.

ತತಃ ಸಮಾನೇ ಪ್ರತಿತಿಷ್ಠತೀಹ
ಇತ್ಯೇವ ಸರ್ವಂ ಪ್ರಜಜಲ್ಪ ವಾಗಪಿ ।
ತಸ್ಮಾನ್ಮನಃ ಸ್ಥಾವರತ್ವಾತ್ ವಿಶಿಷ್ಟಃ
ತಥಾ ದೇವೀ ಜಂಗಮತ್ವಾದ್ ವಿಶಿಷ್ಟಾ ॥೨೮॥

ಹೀಗೆ ವಾಗ್ದೇವಿಯು ಸಮಾನವಾಯುವಿನಲ್ಲಿ ಪ್ರತಿಷ್ಠಿತಳಾಗಿರುತ್ತಾಳೆ. ಈ ರೀತಿಯಾಗಿ ಪಂಚವಿಧ ಪ್ರಾಣರನ್ನು ಅನುಸರಿಸಿಕೊಂಡೇ ಸರಸ್ವತಿಯ ಪ್ರವೃತ್ತಿಯು. ಸ್ವೇಚ್ಛೆಯಿಂದ ಈ ಸರಸ್ವತಿಯು ಪ್ರವೃತ್ತಿಯನ್ನು ಹೊಂದಲಾರಳು ಎಂದು ಚತುರ್ಮುಖ ಬ್ರಹ್ಮನನ್ನು ಕುರಿತು ಸರಸ್ವತಿಯು ಹೇಳಿದಳು. ಆದ್ದರಿಂದ ಮನಃಶಬ್ದವಾಚ್ಯನಾದ ಮುಖ್ಯಪ್ರಾಣನು ಮತ್ತೊಬ್ಬರನ್ನು ಅನುಸರಿಸದೆ ಸ್ಥಿರನಾಗಿರುವುದರಿಂದ ವಾಗ್ರೂಪಳಾದ ಭಾರತಿಯ ಪ್ರವೃತ್ತಿಗೆ ಕಾರಣನಾಗಿರುವುದರಿಂದಲೂ ಎಲ್ಲ ಜೀವರಿಗಿಂತಲೂ ಉತ್ಕೃಷ್ಟನಾಗಿದ್ದಾನೆ. ಇದರಂತೆ ವಾಗ್ದೇವಿಯು ಎಲ್ಲರಿಂದಲೂ ಅಪೇಕ್ಷಿತವಾದ ಮಂತ್ರ-ಸ್ವರ-ವರ್ಣ ಇವುಗಳಿಗೆ ಪ್ರೇರಕಳಾಗಿರುವುದರಿಂದ, ಮುಖ್ಯಪ್ರಾಣನ ಅನಂತರವೇ ಸ್ಥಾನವನ್ನು ಹೊಂದಿರುವುದರಿಂದ ಎಲ್ಲ ಜೀವರಿಗಿಂತಲೂ ವಿಶಿಷ್ಟಳಾಗಿದ್ದಾಳೆ ಎಂದು ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವಾಙ್ಮನೋವಿಹಾರಕಥನಂ ನಾಮ ದ್ವಾವಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ಕೃಷ್ಣನು ಅರ್ಜುನನನ್ನು ಕುರಿತು ಘ್ರಾಣ ಮೊದಲಾದ ಇಂದ್ರಿಯ ಗುಣಗಳನ್ನು ಪ್ರತಿಪಾದಿಸುವ ಬ್ರಾಹ್ಮಣ ದಂಪತಿಗಳ ಸಂವಾದವನ್ನು ಅನುವಾದಿಸಿದುದು.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸುಭಗೇ ಸಪ್ತಹೋತ್ರ್ಣಾಂ ವಿಧಾನಮಿಹ ಯಾದೃಶಮ್ ॥೧॥

ಬ್ರಾಹ್ಮಣ– ಸೌಭಾಗ್ಯವತಿಯೇ, ಈ ವಿಷಯದಲ್ಲಿ ಪುರಾತನವಾದ ಇತಿಹಾಸವೊಂದನ್ನು ಜ್ಞಾನಿಗಳು ಹೇಳಿರುತ್ತಾರೆ. ಏಳು ಹೋತೃಗಳ ಯಜ್ಞದ ವಿಧಾನವು ಹೇಗೆಂಬುದನ್ನು ಆ ಇತಿಹಾಸವು ಹೇಳಿದೆ. ಅದನ್ನೇ ನಿನಗೂ ಹೇಳುತ್ತೇನೆ, ಕೇಳಿಸಿಕೊ.

ಘ್ರಾಣಂ ಚಕ್ಷುಶ್ಚ ಜಿಹ್ವಾ ಚ ತ್ವಕ್ ಶ್ರೋತ್ರಂ ಚೈವ ಪಂಚಮಮ್ ।
ಮನೋ ಬುದ್ಧಿಶ್ಚ ಸಪ್ತೈತೇ ಹೋತಾರಃ ಪೃಥಗಾಶ್ರಿತಾಃ ॥೨॥

ಸೂಕ್ಷ್ಮೇಽವಕಾಶೇ ಸಂತಪ್ತೇ ನ ಪಶ್ಯಂತೀತರೇತರಮ್ ।
ಏಷಾಂ ಚ ಸಪ್ತಹೋತ್ರ್ಣಾಂ ವಿಧಾನಾಂ ವಿದ್ಧಿ ಶೋಭನೇ ॥೩॥

ಶೋಭನಳೇ, ಮೂಗು-ಕಣ್ಣು-ಕಿವಿ-ನಾಲಿಗೆ-ಚರ್ಮ-ಮನಸ್ಸು-ಬುದ್ಧಿ - ಈ ಏಳು ಹೋತೃಗಳು ಪ್ರತ್ಯೇಕ ಪ್ರತ್ಯೇಕವಾಗಿ ಇರುತ್ತವೆ. ಸೂಕ್ಷ್ಮ ಶರೀರದಲ್ಲಿ ಏಳು ಹೋತೃಗಳಿದ್ದರೂ ಒಂದು ಮತ್ತೊಂದನ್ನು ನೋಡುವುದಿಲ್ಲ. ಏಳು ಮಂದಿ ಹೋತೃಗಳನ್ನು ನೀನು ಅವುಗಳ ಸ್ವಭಾವದಿಂದಲೇ ತಿಳಿಯಬಹುದಾಗಿದೆ.

ಬ್ರಾಹ್ಮಣೀ

ಸೂಕ್ಷ್ಮೇಽವಕಾಶೇ ಸಂತಪ್ತೇ ಕಥಂ ನಾನ್ಯೋನ್ಯದರ್ಶಿನಃ ।
ಕಥಂ ಸ್ವಭಾವಾದ್ ಭಗವನ್ ಏತದಾಚಕ್ಷ್ವ ಮೇ ವಿಭೋ ॥೪॥

ಬ್ರಾಹ್ಮಣೀ– ಪೂಜ್ಯನೇ, ಪ್ರಭುವೇ, ಈ ಏಳು ಹೋತೃಗಳು ಒಂದೇ ಶರೀರದಲ್ಲಿದ್ದರೂ ಒಂದು ಮತ್ತೊಂದನ್ನು ಏಕೆ ನೋಡುವುದಿಲ್ಲ? ಅವುಗಳ ಸ್ವಭಾವವೇನು? ಈ ವಿಷಯವನ್ನು ವಿಷದಪಡಿಸಿ.

ಬ್ರಾಹ್ಮಣಃ

ಗುಣಜ್ಞಾನಮಭಿಜ್ಞಾನಂ ಗುಣಜ್ಞಾನಾಮಭಿಜ್ಞತಾ ।
ಪರಸ್ಪರಂ ಗುಣಾನೇತೇ ನ ವಿಜಾನಂತಿ ಕರ್ಹಿಚಿತ್ ॥೫॥

ಬ್ರಾಹ್ಮಣ– ಗುಣಗಳನ್ನು ತಿಳಿದುಕೊಳ್ಳದಿದ್ದರೆ ಜೊತೆಯಲ್ಲಿದ್ದ ಅವನನ್ನು ತಿಳಿದುಕೊಂಡಿಲ್ಲವೆಂದೇ ಅರ್ಥ. ಗುಣಗಳನ್ನು ತಿಳಿದುಕೊಂಡರೆ ತಿಳಿದಂತೆ. ಇದರಂತೆ ಈ ಏಳು ಮಂದಿ ಹೋತೃಗಳು ಅವರವರ ಯೋಗ್ಯವಾದ ಗುಣವನ್ನು ಅರಿತಿದ್ದಾರೆ. ಅವರ ಗುಣಜ್ಞಾನದ ಜೊತೆಗೆ ಇನ್ನೊಬ್ಬರ ಗುಣಜ್ಞಾನವನ್ನು ಹೊಂದಿಲ್ಲ. ಕಣ್ಣಿನ ಗುಣವನ್ನು ಮೂಗು ತಿಳಿದಿಲ್ಲ, ಮೂಗಿನ ಗುಣವನ್ನು ಕಣ್ಣು ತಿಳಿದಿಲ್ಲ. ಹೀಗೆ ಪರಸ್ಪರವಾಗಿ ಗುಣಗಳನ್ನು ಈ ಏಳು ಹೋತೃಗಳು ತಿಳಿದಿರುವುದಿಲ್ಲ.

ಜಿಹ್ವಾ ಚಕ್ಷುಸ್ತಥಾ ಶ್ರೋತ್ರಂ ತ್ವಙ್ಮನೋ ಬುದ್ಧಿರೇವ ಚ ।
ನ ಗಂಧಾನಧಿಗಚ್ಛಂತಿ ಘ್ರಾಣಸ್ತಾನಧಿಗಚ್ಛತಿ ॥೬॥

ನಾಲಿಗೆ, ಕಣ್ಣು, ಕಿವಿ, ತ್ವಕ್, ಮನಸ್ಸು, ಬುದ್ಧಿ ಇವುಗಳು ಗಂಧಗಳನ್ನು ತಿಳಿದಿರುವುದಿಲ್ಲ. ಆದರೆ ಮೂಗಿಗೆ ಗಂಧದ ಆಸ್ವಾದನೆಯೇ ಮುಂತಾದ ಸ್ವಯೋಗ್ಯವಾದ ಗುಣವನ್ನು ಗ್ರಹಿಸುವ ಜ್ಞಾನವಿದೆ. ಆದ್ದರಿಂದ ಮೂಗು ಗಂಧವನ್ನು ಆಘ್ರಾಣಿಸುತ್ತದೆ.

ಘ್ರಾಣಂ ಚೈವ ಚ ಚಕ್ಷುಃ ತ್ವಕ್ ಶ್ರೋತ್ರಂ ಚ ಮನ ಏವ ಚ ।
ನ ರಸಾನಧಿಗಚ್ಛಂತಿ ವಿನಾ ಜಿಹ್ವಾಂ ತಥೈವ ಚ ॥೭॥

ಮೂಗು, ಕಣ್ಣು, ಕಿವಿ, ಚರ್ಮ, ಮನಸ್ಸು, ಬುದ್ಧಿಗಳು ರಸದ ಆಸ್ವಾದನೆಯನ್ನು ಮಾಡವು. ಆದರೆ ನಾಲಿಗೆಗೆ ತನಗೆ ಯೋಗ್ಯವಾದ ರಸಗುಣಜ್ಞಾನವು ಇರುತ್ತದೆ. ರಸವನ್ನು ಆಸ್ವಾದಿಸುತ್ತದೆ.

ಘ್ರಾಣಂ ಜಿಹ್ವಾ ತಥಾ ಶ್ರೋತ್ರಂ ತ್ವಙ್ಮನೋ ಬುದ್ಧಿರೇವ ಚ ।
ನ ರೂಪಾಣ್ಯಧಿಗಚ್ಛಂತಿ ಚಕ್ಷುಸ್ತದಧಿಗಚ್ಛತಿ ॥೮॥

ಮೂಗು, ನಾಲಿಗೆ, ಕಿವಿ, ತ್ವಕ್, ಮನಸ್ಸು, ಬುದ್ಧಿ ಇವುಗಳು ರೂಪವನ್ನು ನೋಡಲಾರವು. ಆದರೆ ಕಣ್ಣಿಗೆ ತನಗೆ ಯೋಗ್ಯವೆನಿಸಿದ ರೂಪಗ್ರಹಣ ಜ್ಞಾನವು ಇರುತ್ತದೆ. ಆದ್ದರಿಂದ ಕಣ್ಣು ರೂಪವನ್ನು ನೋಡುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ಶ್ರೋತ್ರಂ ಬುದ್ಧಿರ್ಮನಸ್ತಥಾ ।
ನ ಸ್ಪರ್ಶಾನಧಿಗಚ್ಛಂತಿ ತ್ವಕ್ಚ ತಾನಧಿಗಚ್ಛತಿ ॥೯॥

ಮೂಗು, ನಾಲಿಗೆ, ಕಣ್ಣು, ಕಿವಿ, ಬುದ್ಧಿ, ಮನಸ್ಸುಗಳು ಸ್ಪರ್ಶವನ್ನು ಅನುಭವಿಸಲಾರವು. ಆದರೆ ಚರ್ಮಕ್ಕೆ ಸ್ಪರ್ಶಾನುಭವವು ತನಗೆ ಯೋಗ್ಯವಾದ ಗುಣವೆನಿಸಿದೆ. ಆ ಜ್ಞಾನವನ್ನು ಸ್ಪರ್ಶವು ಹೊಂದಿರುವುದರಿಂದ ಸ್ಪರ್ಶಾನುಭವವನ್ನು ಪಡೆದುಕೊಳ್ಳುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಜ್ಞೋ ಬುದ್ಧಿರೇವ ಚ ।
ನ ಶಬ್ದಾನಧಿಗಚ್ಛಂತಿ ಶ್ರೋತ್ರಂ ತಾನಧಿಗಚ್ಛತಿ ॥೧೦॥

ಮೂಗು, ನಾಲಿಗೆ, ಕಣ್ಣು, ಚರ್ಮ, ಮನಸ್ಸು, ಬುದ್ಧಿ ಶಬ್ದಗಳನ್ನು ಕೇಳಲಾರವು. ಆದರೆ ಕಿವಿಗೆ ಶಬ್ದವನ್ನು ಕೇಳುವುದು ಸ್ವಾಭಾವಿಕ ಗುಣವೆನಿಸಿದೆ. ಆದ್ದರಿಂದ ಕಿವಿಯು ಶಬ್ದವನ್ನು ತಿಳಿಯುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ ಶ್ರೋತ್ರಂ ಬುದ್ಧಿರೇವ ಚ ।
ಸಂಕಲ್ಪಾನ್ನಾಧಿಗಚ್ಛಂತಿ ಮನಸ್ತಾನಧಿಗಚ್ಛತಿ ॥೧೧॥

ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ, ಬುದ್ಧಿ ಇವು ಸಂಶಯವನ್ನು ಹೊಂದುವುದಿಲ್ಲ. ಸಂಶಯವನ್ನು ಹೊಂದುವುದು, ಸಂಕಲ್ಪ-ವಿಕಲ್ಪವನ್ನು ಹೊಂದುವುದು ಮನಸ್ಸಿನ ಸ್ವಾಭಾವಿಕವಾದ ಗುಣವೆನಿಸಿದೆ. ಆದ್ದರಿಂದ ಮನಸ್ಸು ಸಂಶಯವನ್ನು ಹೊಂದುತ್ತದೆ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ ಶ್ರೋತ್ರಂ ಮನ ಏವ ಚ ।
ನ ನಿಷ್ಠಾಮಧಿಗಚ್ಛಂತಿ ಬುದ್ಧಿಸ್ತಾಮಧಿಗಚ್ಛತಿ ॥೧೨॥

ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ, ಮನಸ್ಸು ನಿಶ್ಚಯಾತ್ಮಕವಾದ ಜ್ಞಾನವನ್ನು ಹೊಂದಲಾರವು. ಇದು ಬುದ್ಧಿಯ ಗುಣ. ಬುದ್ಧಿಯು ನಿಶ್ಚಯಜ್ಞಾನವನ್ನು ಹೊಂದುತ್ತದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಇಂದ್ರಿಯಾಣಾಂ ಚ ಸಂವಾದಂ ಮನಸಶ್ಚೈವ ಭಾಮಿನಿ ॥೧೩॥

ಭಾಮಿನಿಯೇ, ಈ ವಿಷಯದಲ್ಲಿ ಇಂದ್ರಿಯಗಳಿಗೂ ಮನಸ್ಸಿಗೂ ನಡೆದ ಪುರಾತನವಾದ ಸಂವಾದವೊಂದನ್ನು ಅಭಿಜ್ಞರು ಉದಾಹರಿಸುತ್ತಾರೆ. ನಿನಗೆ ಹೇಳುತ್ತೇನೆ, ಕೇಳು.

ಒಮ್ಮೆ ಇಂದ್ರಿಯಗಳಿಗೂ ಮನಸ್ಸಿಗೂ ಯಾರು ಶ್ರೇಷ್ಠರೆಂದು ವಿವಾದ ಉಂಟಾದಾಗ ಮನಸ್ಸು ಇಂದ್ರಿಯಗಳಿಗೆ ಹೇಳುತ್ತದೆ.

ಮನಃ

ನಾಘ್ರಾತಿ ಮಾಮೃತೇ ಘ್ರಾಣಂ ರಸಂ ಜಿಹ್ವಾ ನ ವೇತ್ತಿ ಚ ।
ರೂಪಂ ಚಕ್ಷುರ್ನ ಗೃಹ್ಣಾತಿ ತ್ವಕ್ ಸ್ಪರ್ಶಂ ನಾವಬುಧ್ಯತೇ ॥೧೪॥

ನ ಶ್ರೋತ್ರಂ ಶ್ರುಣುಯಾತ್ ಶಬ್ದಂ ಮಯಾ ಹೀನಂ ಕಥಂಚನ ।
ಪ್ರವರಂ ಸರ್ವಭೂತಾನಾಮಹಮಸ್ಮಿ ಸನಾತನಮ್ ॥೧೫॥

ಮನಸ್ಸು– ನನ್ನ ಸಂಬಂಧವಿಲ್ಲದೆ ಯಾವ ಹೇತುವಿನಿಂದಲೂ ಘ್ರಾಣೇಂದ್ರಿಯವು ಆಘ್ರಾಣಿಸುವುದಿಲ್ಲ. ನಾಲಿಗೆಯು ರುಚಿಯನ್ನು ಸವಿಯುವುದಿಲ್ಲ. ಕಣ್ಣು ರೂಪವನ್ನೂ, ಚರ್ಮವು ಸ್ಪರ್ಶವನ್ನೂ, ಕಿವಿಯು ಶಬ್ದವನ್ನೂ ತಿಳಿಯುವುದಿಲ್ಲ. ಆದ್ದರಿಂದ ಎಲ್ಲ ಪ್ರಾಣಿಗಳಲ್ಲಿ ನಾನೇ ಶ್ರೇಷ್ಠನು, ಶಾಶ್ವತನು.

ಅಗಾರಾಣೀವ ಶೂನ್ಯಾನಿ ಶಾಂತಾರ್ಚಿಷ ಇವಾಗ್ನಯಃ ।
ಇಂದ್ರಿಯಾಣಿ ನ ಭಾಸಂತೇ ಮಯಾ ಹೀನಾನಿ ನಿತ್ಯಶಃ ॥೧೬॥

ಶೂನ್ಯವಾದ ಮನೆಗಳಂತೆ, ಜ್ವಾಲೆಯು ಆರಿಹೋದ ಅಗ್ನಿಯಂತೆ ನನ್ನ ಸಂಬಂಧವಿಲ್ಲದೆ ಯಾವ ಇಂದ್ರಿಯವೂ ಬೆಳಗವು.

ಕಾಷ್ಠಾನೀವಾರ್ದ್ರಶುಷ್ಕಾನಿ ಯತಮಾನೈರಪೀಂದ್ರಿಯೈಃ ।
ಗುಣಾರ್ಥಾನ್ನಾಧಿಗಚ್ಛಂತಿ ಮಾಮೃತೇ ಸರ್ವಜಂತವಃ ॥೧೭॥

ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳು ಇಂದ್ರಿಯಗಳ ಮೂಲಕ ವಿಷಯವನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದರೂ ಮನಸ್ಸಿನ ಸಂಬಂಧವಿಲ್ಲದಿದ್ದರೆ ಹಸಿಯಾದ, ಟೊಳ್ಳಾದ ಕಟ್ಟಿಗೆಯಂತೆ ವಿಷಯಾನುಭವವನ್ನು ಹೊಂದವು.

ಇದಕ್ಕೆ ಉತ್ತರವಾಗಿ ಇಂದ್ರಿಯಗಳು ಹೇಳುತ್ತವೆ–

ಇಂದ್ರಿಯಾಣಿ

ಏವಮೇತದ್ ಭವೇತ್ ಸತ್ಯಂ ಯದ್ಭೈತನ್ಮನ್ಯತೇ ಭವಾನ್ ।
ಋತೇಸ್ಮಾನಸ್ಮದರ್ಥಾಂಸ್ತ್ವಂ ಭೋಗಾನ್ ಭುಂಕ್ತೇ ಭವಾನ್ ಯದಿ ॥

ಮಹಾಶಯನೇ, ಇಂದ್ರಿಯಗಳ ಸಂಬಂಧವಿಲ್ಲದೆ ವಿಷಯಭೋಗಗಳನ್ನು ನಿನ್ನಿಂದ ಅನುಭವಿಸಲು ಸಾಧ್ಯವಾಗಿದ್ದರೆ ನೀನು ತಿಳಿದಿರುವುದು, ಹೇಳುತ್ತಿರುವುದು ಸತ್ಯವಾಗಬಹುದು.

ಯದ್ಯಸ್ಮಾಸು ಪ್ರಲೀನೇಷು ತರ್ಪಣಂ ಪ್ರಾಣಧಾರಣಮ್ ।
ಭೋಗಾನ್ ಭುಂಕ್ತೇ ಭವಾನ್ ಸತ್ಯಂ ಯದ್ಭೈತನ್ಮನ್ಯತೇ ತಥಾ ॥೧೯॥

ಇಂದ್ರಿಯಗಳು ತಾಟಸ್ಥ್ಯವನ್ನು ಹೊಂದಿದರೆ, ಇಂದ್ರಿಯಗಳು ಲಯಹೊಂದಿದ ಬಳಿಕವೂ ನೀನು ತೃಪ್ತನಾಗುವುದಾದರೆ, ನಿನ್ನ ಕ್ರಿಯೆಗಳನ್ನು ತೋರಿಸಿಕೊಡುವುದಾದಲ್ಲಿ, ಎಲ್ಲ ವಿಧವಾದ ಭೋಗಗಳನ್ನು ಅನುಭವಿಸಲು ಸಾಧ್ಯವಾದಲ್ಲಿ ನೀನು ನಿನ್ನನ್ನು ಸನಾತನನೆಂದು ಭಾವಿಸಿಕೊಂಡಿರುವುದು ಸತ್ಯವಾಗುತ್ತಿತ್ತು.

ಅಥವಾಽಸ್ಮಾಸು ಲೀನೇಷು ತಿಷ್ಠತ್ಸು ವಿಷಯೇಷು ಚ ।
ಯದಿ ಸಂಕಲ್ಪಮಾತ್ರೇಣ ಭುಂಕ್ತೇ ಭೋಗಾನ್ಯಥಾರ್ಥವತ್ ॥೨೦॥

ಅಥ ಚೇನ್ಮನ್ಯಸೇ ಸಿದ್ಧಿಮಸ್ಮದರ್ಥೇಷು ನಿತ್ಯದಾ ।
ಘ್ರಾಣೇನ ರೂಪಮಾದತ್ಸ್ವ ರಸಮಾದತ್ಸ್ವ ಚಕ್ಷುಷಾ ॥೨೧॥

ಶ್ರೋತ್ರೇಣ ಗಂಧಾನಾದತ್ಸ್ವ ಸ್ಪರ್ಶಾನಾದತ್ಸ್ವ ಜಿಹ್ವಯಾ ।
ತ್ವಚಾ ಚ ಶಬ್ದಮಾದತ್ಸ್ವ ಬುದ್ಧ್ಯಾ ಸ್ಪರ್ಶಮಥಾಪಿ ಚ ॥೨೨॥

ಅಥವಾ ಶಬ್ದ-ಸ್ಪರ್ಶಾದಿಗಳು ಇದ್ದಾಗ ಸಂಕಲ್ಪಮಾತ್ರದಿಂದಲೇ ಆ ಭೋಗಗಳನ್ನು ನೀನು ಅನುಭವಿಸುವುದಾಗಿದ್ದಲ್ಲಿ ನೀನು ಭಾವಿಸಿರುವುದು ಸತ್ಯವಾಗುತ್ತಿತ್ತು. ಇಂದ್ರಿಯಗಳ ವಿಷಯದಲ್ಲಿ ನಿನಗೆ ಸದಾ ಸಿದ್ಧಿ ಇರುವುದಾದಲ್ಲಿ ನೀನು ಮೂಗಿನಿಂದ ರೂಪವನ್ನು ಗ್ರಹಿಸು, ಕಣ್ಣಿನಿಂದ ರಸವನ್ನು ಆಸ್ವಾದಿಸು, ಕಿವಿಯಿಂದ ಗಂಧವನ್ನು ಆಘ್ರಾಣಿಸು, ನಾಲಿಗೆಯಿಂದ ಸ್ಪರ್ಶಸುಖವನ್ನು ಅನುಭವಿಸು, ತ್ವಗಿಂದ್ರಿಯದಿಂದ

ಶಬ್ದವನ್ನು ಕೇಳಿಸಿಕೊ, ಬುದ್ಧಿಯ ಮೂಲಕ ಸ್ಪರ್ಶ ಸುಖವನ್ನು ಅನುಭವಿಸು. ಹೀಗೆ ಮಾಡಲು ನಿನ್ನಿಂದ ಸಾಧ್ಯವೇ?

ಬಲವಂತೋ ಹ್ಯನಿಯಮಾ ನಿಯಮಾ ದುರ್ಬಲೀಯಸಾಮ್ ।
ಭೋಗಾನಪೂರ್ವಾನಾದತ್ಸ್ವ ನೋಚ್ಛಿಷ್ಟಂ ಭೋಕ್ತುಮರ್ಹತಿ ॥೨೩॥

ಬಲಿಷ್ಠರಿಗೆ ನಿಯಮಗಳಿಲ್ಲ. ದುರ್ಬಲರಿಗೆ ನೀತಿ-ನಿಯಮಗಳು ವಿಧಿಸಲ್ಪಟ್ಟಿವೆ. ನೀನು ಬಲಿಷ್ಠನಾಗಿದ್ದಲ್ಲಿ ಇನ್ನು ಮುಂದೆ ನಮ್ಮ ಸಹಕಾರವಿಲ್ಲದೆ ಅಪೂರ್ವವಾದ ಭೋಗಗಳನ್ನು ಅನುಭವಿಸು. ನಾವು ಅನುಭವಿಸಿದ ನಂತರ ಉಪಭೋಗವನ್ನು ಹೊಂದಬೇಡ.

ಯಥಾ ಹಿ ಶಿಷ್ಯಃ ಶಾಸ್ತಾರಂ ಶ್ರುತ್ಯರ್ಥಮಭಿಧಾವತಿ ।
ತತಃ ಶ್ರುತಮುಪಾದಾಯ ಶ್ರುತ್ಯರ್ಥಮುಪತಿಷ್ಠತಿ ॥೨೪॥

ವಿಷಯಾನೇವಮಸ್ಮಾಭಿರ್ದರ್ಶಿತಾನಭಿಮನ್ಯಸೇ ।
ಅನುಭೂತಾನತೀತಾಂಶ್ಚ ಸ್ವಪ್ನೇ ಜಾಗರಣೇ ತಥಾ ॥೨೫॥

ಯಾವ ರೀತಿ ಶಿಷ್ಯನು ಶ್ರುತಿಯ ಅರ್ಥವನ್ನು ತಿಳಿಯುವ ದೃಷ್ಟಿಯಿಂದ ಗುರುವನ್ನು ಉಪಾಶ್ರಥಯಿಸಿ, ಅವನಿಂದ ಉಪದೇಶವನ್ನು ಪಡೆದ ಬಳಿಕ ಅವನಲ್ಲಿಯೇ ಆಸಕ್ತನಾಗಿರುವಂತೆ ಸ್ವಪ್ನದಲ್ಲೇ ಆಗಲಿ, ಜಾಗ್ರದವಸ್ಥೆಯಲ್ಲಾಗಲಿ ನಮ್ಮಿಂದಲೇ ತೋರಿಸಿದ ವಿಷಯಗಳನ್ನು ನೀನು ನೋಡಿ ಅಭಿಮಾನಪಟ್ಟುಕೊಳ್ಳುತ್ತಿರುವೆ.

ವೈಮನಸ್ಯಂ ಗತಾನಾಂ ಚ ಜಂತೂನಾಮಲ್ಪಚೇತಸಾಮ್ ।
ಅಸ್ಮದರ್ಥೇ ಕೃತೇ ಕಾರ್ಯೇ ದೃಶ್ಯತೇ ಪ್ರಾಣಧಾರಣಮ್ ॥೨೬॥

ಮನಸ್ಸೇ ಇಲ್ಲದ ಅಲ್ಪ ಪ್ರಾಣಿಗಳೇ ಆಗಿದ್ದರೂ ನಮ್ಮನ್ನು ತೃಪ್ತಿ ಪಡಿಸುವ ದೃಷ್ಟಿಯಿಂದ ಮಾಡುವ ಕಾರ್ಯಗಳಿಂದಲೇ ಅವು ಬದುಕಿವೆ ಎಂದು ಕಂಡುಬರುತ್ತದೆ. ಮನಸ್ಸಿಲ್ಲದಿದ್ದಾಗಲೂ ಊಟ ಮಾಡುವುದು ಕಂಡುಬಂದಿದೆ. ಮನಸ್ಸಿಲ್ಲದೆಯೂ ಮಾಡಿದ ಇಂದ್ರಿಯಗಳ ವ್ಯಾಪಾರಗಳು ಕಂಡುಬಂದಿದೆ.

ಬಹೂನಪಿ ಹಿ ಸಂಕಲ್ಪಾನ್ಕೃತ್ವಾ ಸ್ವಪ್ನಾನುಪಾಸ್ಯ ಚ ।
ಬುಭುಕ್ಷಯಾ ಪೀಡ್ಯಮಾನೋ ವಿಷಯಾನೇವ ಧಾವತಿ ॥೨೭॥

ಇದಕ್ಕೆ ಉತ್ತರವಾಗಿ ಇಂದ್ರಿಯಗಳು ಹೇಳುತ್ತವೆ–

ಇಂದ್ರಿಯಾಣಿ

ಏವಮೇತದ್ ಭವೇತ್ ಸತ್ಯಂ ಯದ್ಭೈತನ್ಮನ್ಯತೇ ಭವಾನ್ ।
ಋತೇಸ್ಮಾನಸ್ಮದರ್ಥಾಂಸ್ತ್ವಂ ಭೋಗಾನ್ ಭುಂಕ್ತೇ ಭವಾನ್ ಯದಿ ॥

ಮಹಾಶಯನೇ, ಇಂದ್ರಿಯಗಳ ಸಂಬಂಧವಿಲ್ಲದೆ ವಿಷಯಭೋಗಗಳನ್ನು ನಿನ್ನಿಂದ ಅನುಭವಿಸಲು ಸಾಧ್ಯವಾಗಿದ್ದರೆ ನೀನು ತಿಳಿದಿರುವುದು, ಹೇಳುತ್ತಿರುವುದು ಸತ್ಯವಾಗಬಹುದು.

ಯದ್ಯಸ್ಮಾಸು ಪ್ರಲೀನೇಷು ತರ್ಪಣಂ ಪ್ರಾಣಧಾರಣಮ್ ।
ಭೋಗಾನ್ ಭುಂಕ್ತೇ ಭವಾನ್ ಸತ್ಯಂ ಯದ್ಭೈತನ್ಮನ್ಯತೇ ತಥಾ ॥೧೯॥

ಇಂದ್ರಿಯಗಳು ತಾಟಸ್ಥ್ಯವನ್ನು ಹೊಂದಿದರೆ, ಇಂದ್ರಿಯಗಳು ಲಯಹೊಂದಿದ ಬಳಿಕವೂ ನೀನು ತೃಪ್ತನಾಗುವುದಾದರೆ, ನಿನ್ನಕ್ರಿಯೆಗಳನ್ನು ತೋರಿಸಿಕೊಡುವುದಾದಲ್ಲಿ, ಎಲ್ಲ ವಿಧವಾದ ಭೋಗಗಳನ್ನು ಅನುಭವಿಸಲು ಸಾಧ್ಯವಾದಲ್ಲಿ ನೀನು ನಿನ್ನನ್ನು ಸನಾತನನೆಂದು ಭಾವಿಸಿಕೊಂಡಿರುವುದು ಸತ್ಯವಾಗುತ್ತಿತ್ತು.

ಅಥವಾಽಸ್ಮಾಸು ಲೀನೇಷು ತಿಷ್ಠತ್ಸು ವಿಷಯೇಷು ಚ ।
ಯದಿ ಸಂಕಲ್ಪಮಾತ್ರೇಣ ಭುಂಕ್ತೇ ಭೋಗಾನ್ಯಥಾರ್ಥವತ್ ॥೨೦॥

ಅಥ ಚೇನ್ಮನ್ಯಸೇ ಸಿದ್ಧಿಮಸ್ಮದರ್ಥೇಷು ನಿತ್ಯದಾ ।
ಘ್ರಾಣೇನ ರೂಪಮಾದತ್ಸ್ವ ರಸಮಾದತ್ಸ್ವ ಚಕ್ಷುಷಾ ॥೨೧॥

ಶ್ರೋತ್ರೇಣ ಗಂಧಾನಾದತ್ಸ್ವ ಸ್ಪರ್ಶಾನಾದತ್ಸ್ವ ಜಿಹ್ವಯಾ ।
ತ್ವಚಾ ಚ ಶಬ್ದಮಾದತ್ಸ್ವ ಬುದ್ಧ್ಯಾ ಸ್ಪರ್ಶಮಥಾಪಿ ಚ ॥೨೨॥

ಅಥವಾ ಶಬ್ದ-ಸ್ಪರ್ಶಾದಿಗಳು ಇದ್ದಾಗ ಸಂಕಲ್ಪಮಾತ್ರದಿಂದಲೇ ಆ ಭೋಗಗಳನ್ನು ನೀನು ಅನುಭವಿಸುವುದಾಗಿದ್ದಲ್ಲಿ ನೀನು ಭಾವಿಸಿರುವುದು ಸತ್ಯವಾಗುತ್ತಿತ್ತು. ಇಂದ್ರಿಯಗಳ ವಿಷಯದಲ್ಲಿ ನಿನಗೆ ಸದಾ ಸಿದ್ಧಿ ಇರುವುದಾದಲ್ಲಿ ನೀನು ಮೂಗಿನಿಂದ ರೂಪವನ್ನು ಗ್ರಹಿಸು, ಕಣ್ಣಿನಿಂದ ರಸವನ್ನು ಆಸ್ವಾದಿಸು, ಕಿವಿಯಿಂದ ಗಂಧವನ್ನು ಆಘ್ರಾಣಿಸು, ನಾಲಿಗೆಯಿಂದ ಸ್ಪರ್ಶಸುಖವನ್ನು ಅನುಭವಿಸು, ತ್ವಗಿಂದ್ರಿಯದಿಂದ

ಶಬ್ದವನ್ನು ಕೇಳಿಸಿಕೊ, ಬುದ್ಧಿಯ ಮೂಲಕ ಸ್ಪರ್ಶ ಸುಖವನ್ನು ಅನುಭವಿಸು. ಹೀಗೆ ಮಾಡಲು ನಿನ್ನಿಂದ ಸಾಧ್ಯವೇ?

ಬಲವಂತೋ ಹ್ಯನಿಯಮಾ ನಿಯಮಾ ದುರ್ಬಲೀಯಸಾಮ್ ।
ಭೋಗಾನಪೂರ್ವಾನಾದತ್ಸ್ವ ನೋಚ್ಛಿಷ್ಟಂ ಭೋಕ್ತುಮರ್ಹತಿ ॥೨೩॥

ಬಲಿಷ್ಠರಿಗೆ ನಿಯಮಗಳಿಲ್ಲ. ದುರ್ಬಲರಿಗೆ ನೀತಿ-ನಿಯಮಗಳು ವಿಧಿಸಲ್ಪಟ್ಟಿವೆ. ನೀನು ಬಲಿಷ್ಠನಾಗಿದ್ದಲ್ಲಿ ಇನ್ನು ಮುಂದೆ ನಮ್ಮ ಸಹಕಾರವಿಲ್ಲದೆ ಅಪೂರ್ವವಾದ ಭೋಗಗಳನ್ನು ಅನುಭವಿಸು. ನಾವು ಅನುಭವಿಸಿದ ನಂತರ ಉಪಭೋಗವನ್ನು ಹೊಂದಬೇಡ.

ಯಥಾ ಹಿ ಶಿಷ್ಯಃ ಶಾಸ್ತಾರಂ ಶ್ರುತ್ಯರ್ಥಮಭಿಧಾವತಿ ।
ತತಃ ಶ್ರುತಮುಪಾದಾಯ ಶ್ರುತ್ಯರ್ಥಮುಪತಿಷ್ಠತಿ ॥೨೪॥

ವಿಷಯಾನೇವಮಸ್ಮಾಭಿರ್ದರ್ಶಿತಾನಭಿಮನ್ಯಸೇ ।
ಅನುಭೂತಾನತೀತಾಂಶ್ಚ ಸ್ವಪ್ನೇ ಜಾಗರಣೇ ತಥಾ ॥೨೫॥

ಯಾವ ರೀತಿ ಶಿಷ್ಯನು ಶ್ರುತಿಯ ಅರ್ಥವನ್ನು ತಿಳಿಯುವ ದೃಷ್ಟಿಯಿಂದ ಗುರುವನ್ನು ಉಪಾಶ್ರಥಿಯಿಸಿ, ಅವನಿಂದ ಉಪದೇಶವನ್ನು ಪಡೆದ ಬಳಿಕ ಅವನಲ್ಲಿಯೇ ಆಸಕ್ತನಾಗಿರುವಂತೆ ಸ್ವಪ್ನದಲ್ಲೇ ಆಗಲಿ, ಜಾಗ್ರದವಸ್ಥೆಯಲ್ಲಾಗಲಿ ನಮ್ಮಿಂದಲೇ ತೋರಿಸಿದ ವಿಷಯಗಳನ್ನು ನೀನು ನೋಡಿ ಅಭಿಮಾನಪಟ್ಟುಕೊಳ್ಳುತ್ತಿರುವೆ.

ವೈಮನಸ್ಯಂ ಗತಾನಾಂ ಚ ಜಂತೂನಾಮಲ್ಪಚೇತಸಾಮ್ ।
ಅಸ್ಮದರ್ಥೇ ಕೃತೇ ಕಾರ್ಯೇ ದೃಶ್ಯತೇ ಪ್ರಾಣಧಾರಣಮ್ ॥೨೬॥

ಮನಸ್ಸೇ ಇಲ್ಲದ ಅಲ್ಪ ಪ್ರಾಣಿಗಳೇ ಆಗಿದ್ದರೂ ನಮ್ಮನ್ನು ತೃಪ್ತಿ ಪಡಿಸುವ ದೃಷ್ಟಿಯಿಂದ ಮಾಡುವ ಕಾರ್ಯಗಳಿಂದಲೇ ಅವು ಬದುಕಿವೆ ಎಂದು ಕಂಡುಬರುತ್ತದೆ. ಮನಸ್ಸಿಲ್ಲದಿದ್ದಾಗಲೂ ಊಟ ಮಾಡುವುದು ಕಂಡುಬಂದಿದೆ. ಮನಸ್ಸಿಲ್ಲದೆಯೂ ಮಾಡಿದ ಇಂದ್ರಿಯಗಳ ವ್ಯಾಪಾರಗಳು ಕಂಡುಬಂದಿದೆ.

ಬಹೂನಪಿ ಹಿ ಸಂಕಲ್ಪಾನ್ಕೃತ್ವಾ ಸ್ವಪ್ನಾನುಪಾಸ್ಯ ಚ ।
ಬುಭುಕ್ಷಯಾ ಪೀಡ್ಯಮಾನೋ ವಿಷಯಾನೇವ ಧಾವತಿ ॥೨೭॥

ಕೆಲವನ್ನು ಮನಸ್ಸು ಅನೇಕ ಸಂಕಲ್ಪಗಳನ್ನು ಮನಸ್ಸಿನಲ್ಲಿಯೇ ಹೊಂದುತ್ತದೆ. ಅನೇಕ ಭೋಗಗಳನ್ನು ಮನಸ್ಸಿನಲ್ಲಿಯೇ ಸಂಕಲ್ಪಿಸಿದರೂ ಸ್ವಪ್ನಗಳಲ್ಲಿ ಆ ಭೋಗಗಳನ್ನು ಅನುಭವಿಸಿದ್ದರೂ (ಸ್ವಪ್ನದಲ್ಲಿ ಊಟ ಮಾಡಿದ್ದರೂ) ಹಸಿವೆಯಿಂದ ಪೀಡಿತನಾದಲ್ಲಿ ಊಟ ಮಾಡುವ ದೃಷ್ಟಿಯಿಂದ ಪ್ರವೃತ್ತಿಯನ್ನು ಮಾಡುತ್ತಾನೆ. ನಾಲಿಗೆಗೆ ಆಹಾರವನ್ನು ಹಾಕುತ್ತಾನೆ. ಮನಸ್ಸು ಉಪಭೋಗಿಸಿದ ಮಾತ್ರಕ್ಕೆ ಇಂದ್ರಿಯಗಳ ಸಹಕಾರದ ಅಪೇಕ್ಷೆ ಇಲ್ಲದೆ ಬದುಕಲಾಗುವುದಿಲ್ಲ.

ಅಗಾರಮದ್ವಾರಮಿವ ಪ್ರವಿಶ್ಯ
ಸಂಕಲ್ಪಭೋಗಾನ್ ವಿಷಯಾನವಿಂದನ್ ।
ಪ್ರಾಣಕ್ಷಯೇ ಶಾಂತಿಮುಪೈತಿ ನಿತ್ಯಂ
ದಾರುಕ್ಷಯೇಽಗ್ನಿರ್ಜ್ವಲಿತೋ ಯಥೈವ ॥೨೮॥

ಬಾಗಿಲೇ ಇಲ್ಲದ ಮನೆಯನ್ನು ಪ್ರವೇಶಿಸುವಂತೆ ಇಂದ್ರಿಯಗಳ ಸಹಕಾರವೇ ಇಲ್ಲದ ಭೋಗಗಳನ್ನು ಮನಸ್ಸು ಅನುಭವಿಸುತ್ತದೆ. ಆದರೆ ಇವುಗಳಿಂದ ತೃಪ್ತಿ ಉಂಟಾಗದು. ಕಟ್ಟಿಗೆಯು ಉರಿದ ಬಳಿಕ ಅಗ್ನಿಯು ಶಾಂತವಾಗುವಂತೆ ಪ್ರಾಣ ಹೊರಟ ಬಳಿಕ ಮನಸ್ಸೂ ಶಾಂತವಾಗುತ್ತದೆ.

ಕಾಮಂ ತು ಸ್ವಪ್ನೇಷು ಗುಣೇಷು ಸಂಗಃ
ಕಾಮಂ ಚ ನಾನ್ಯೋನ್ಯಗುಣೋಪಲಬ್ಧಿಃ ।
ಅಸ್ಮಾನ್ ವಿನಾ ನಾಸ್ತಿ ತಪೋಪಲಬ್ಧಿಃ
ತಾಮಪ್ಯೃತೇ ತ್ವಾಂ ನ ಭಜೇತ್ ಪ್ರಹರ್ಷಃ ॥೨೯॥

ನಮ್ಮ ನಮ್ಮ ವಿಷಯದಲ್ಲಿ ನಮಗೆ ಆಸಕ್ತಿ ಇರಬಹುದು. ಪರಸ್ಪರವಾಗಿ ಒಬ್ಬರ ಗುಣವನ್ನು ಮತ್ತೊಬ್ಬರು ಅರಿಯದಿರಬಹುದು. ಆದರೆ ನಮ್ಮ ಸಹಯೋಗವಿಲ್ಲದೆ ಮನಸ್ಸಿಗೆ ವಿಷಯಗಳ ಅನುಭವವಾಗುವುದಿಲ್ಲ ಎಂಬುದು ಸತ್ಯ. ಆದರೆ ಮನಸ್ಸೇ ನಿನ್ನ ಸಹಯೋಗವು ನಮಗಿಲ್ಲದಿದ್ದರೆ ನಾವು ಸಂತೋಷದಿಂದ ವಂಚಿತರಾಗುವುದು ಸತ್ಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾಲ್ಕನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಪ್ರಾಣಾಪಾನಾದಿಗಳ ಸಂವಾದವನ್ನು
ಬ್ರಾಹ್ಮಣ ದಂಪತಿಗಳ ಸಂವಾದದ ಮೂಲಕ ಅನುವಾದಿಸಿದುದು.
ಅಲ್ಲೂ ವಾಯುಗಳು ಶ್ರೇಷ್ಠವೆಂದು ಬ್ರಹ್ಮನು ನಿರ್ಣಯ ಮಾಡಿದ ಪ್ರಸಂಗ.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸುಭಗೇ ಪಂಚಹೋತ್ರ್ಣಾಂ ವಿಧಾನಮಿಹ ಯಾದೃಶಮ್ ॥೧॥

ಬ್ರಾಹ್ಮಣ– ಪಂಚಹೋತೃಗಳ ಯಜ್ಞವಿಧಾನವು ಯಾವ ರೀತಿಯಾಗಿದೆ ಎನ್ನಲು ಪುರಾತನ ಇತಿಹಾಸವನ್ನು ವಿದ್ವಾಂಸರು ಹೇಳಿರುತ್ತಾರೆ.

ಪ್ರಾಣಾಪಾನಾವುದಾನಶ್ಚ ಸಮಾನೋ ವ್ಯಾನ ಏವ ಚ ।
ಪಂಚಹೋತ್ರ್ಯಾನಥೈತಾನ್ ವೈ ಪರಂ ಭಾವಂ ವಿದುರ್ಬುಧಾಃ ॥೨॥

ಪ್ರಾಣ, ಅಪಾನ, ಉದಾನ, ಸಮಾನ, ವ್ಯಾನ - ಈ ಐವರು ಪಂಚಹೋತೃರು ಎನಿಸಿದ್ದಾರೆ. ವಿದ್ವಾಂಸರು ಎಲ್ಲಕ್ಕಿಂತಲೂ ಶ್ರೇಷ್ಠವಾದ ಭಾವಗಳು ಈ ಐದು ಎನ್ನುತ್ತಾರೆ.

ಬ್ರಾಹ್ಮಣೀ

ಸ್ವಭಾವಾತ್ ಸಪ್ತ ಹೋತಾರ ಇತಿ ತೇ ಪೂರ್ವಿಕಾ ಮತಿಃ ।
ಯಥಾ ವೈ ಪಂಚ ಹೋತಾರಃ ಪರೋ ಭಾವಸ್ತಥೋಚ್ಯತಾಮ್ ॥೩॥

ಬ್ರಾಹ್ಮಣೀ– ಸ್ವಾಭಾವಿಕವಾಗಿ ಏಳು ಹೋತೃಗಳಿದ್ದಾರೆ ಎಂದು ತಿಳಿದಿದ್ದೇವೆ. ನೀನು ಪಂಚ ಹೋತೃಗಳು ಎಂದು ಹೇಳಿದೆ. ಏಳು ಐದಾದದ್ದು ಹೇಗೆ? ಹೇಳು.

ಬ್ರಾಹ್ಮಣಃ

ಪ್ರಾಣೇನ ಸಂಭೃತೋ ವಾಯುರಪಾನೇ ಜಾಯತೇ ತತಃ ।
ಅಪಾನೇ ಸಂಭೃತೋ ವಾಯುಸ್ತತೋ ವ್ಯಾನಃ ಪ್ರವರ್ತತೇ ॥೪॥

ತೇऽಪೃಚ್ಛಂತ ಪುರೋ ಗತ್ವಾ ಪೂರ್ವಜಾತಂ ಪ್ರಜಾಪತಿಮ್ ।
ಯೋ ನೋ ಜ್ಯೇಷ್ಠಸ್ತದಾಚಕ್ಷ್ವ ಸ ನಃ ಶ್ರೇಷ್ಠೋ ಭವಿಷ್ಯತಿ ॥೫॥

ಬ್ರಾಹ್ಮಣ– ಪ್ರಾಣನಿಂದ ಪುಷ್ಟಿಗೊಂಡ ವಾಯುವು ಅಪಾನ ಎನಿಸುತ್ತಾನೆ. ಅಪಾನನಿಂದ ಪುಷ್ಟಿಗೊಂಡ ವಾಯು ವ್ಯಾನ. ವ್ಯಾನನಿಂದ ಪುಷ್ಟಿಗೊಂಡ ವಾಯುವು ಉದಾನ. ಉದಾನನಿಂದ ಪುಷ್ಟಿಗೊಂಡ ವಾಯುವು ಸಮಾನ. ಈ ಐದು ವಾಯುಗಳು ಪೂರ್ವಜನಾದ ಚತುರ್ಮುಖ ಬ್ರಹ್ಮನ ಬಳಿ ಹೋಗಿ ಪೂಜ್ಯನೇ, ಪ್ರಾಣನು ಧರಿಸಿರುವ ನಮ್ಮಲ್ಲಿ ಶ್ರೇಷ್ಠರು ಯಾರೆಂದು ಹೇಳು. ಯಾರ ಪ್ರವೃತ್ತಿಯಿಂದ ಜೀವರ ಪ್ರವೃತ್ತಿ ಉಂಟಾಗುತ್ತದೆ? ನೀನು ಯಾರನ್ನು ಶ್ರೇಷ್ಠನೆಂದು ಹೇಳುತ್ತೀಯೋ ಅವನೇ ಶ್ರೇಷ್ಠನೆಂದು ಹೇಳಿದಾಗ, ಬ್ರಹ್ಮನು ಉತ್ತರಿಸಿದನು.

ಪ್ರಜಾಪತಿಃ

ಯಸ್ಮಿನ್ ಪ್ರಲೀನೇ ಪ್ರಲಯಂ ವ್ರಜಂತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಯಸ್ಮಿನ್ ಪ್ರವೃತ್ತೇ ಚ ಪುನಶ್ಚರಂತಿ
ಸ ವಃ ಶ್ರೇಯಾನ್ ಗಚ್ಛತ ಯತ್ರ ಕಾಮಃ ॥೬॥

ಪ್ರಜಾಪತಿ– ಪ್ರಾಣಗಳನ್ನು ಧರಿಸಿರುವ ಶರೀರದಲ್ಲಿ ನಿಮ್ಮಲ್ಲಿ ಯಾರು ಲಯ ಹೊಂದಿದ ಬಳಿಕ ಉಳಿದ ಎಲ್ಲ ಪ್ರಾಣಗಳು ಲಯವನ್ನು ಹೊಂದುತ್ತವೋ, ಯಾವ ವಾಯು ಚಲಿಸಿದಾಗ ಯಾವ ಪ್ರಾಣಿಗಳಿಗೂ ಚಲನೆ ಉಂಟಾಗುತ್ತದೋ ಅವನೇ ಶ್ರೇಷ್ಠತಮನು. ಅವನು ಯಾರೆಂದು ನೀವೇ ನಿಶ್ಚಯಿಸಿಕೊಂಡು ನಿಮ್ಮ ಸ್ಥಾನಗಳಿಗೆ ತೆರಳಿರಿ ಎಂದು ಬ್ರಹ್ಮನು ಹೇಳಿದಾಗ,

ಪ್ರಾಣವಾಯುವು ಹೇಳುತ್ತಾನೆ–

ಪ್ರಾಣಃ

ಮಯಿ ಪ್ರಲೀನೇ ಪ್ರಲಯಂ ವ್ರಜಂತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರವೃತ್ತೇ ಚ ಪುನಶ್ಚರಂತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾ ಪ್ರಲೀನಮ್ ॥೭॥

ವಾಯುಗಳೇ, ಪ್ರಾಣಿಗಳ ಶರೀರದಲ್ಲಿ ನಾನು ಲಯಹೊಂದಿದರೆ ಪ್ರಾಣಗಳು ಲಯ ಹೊಂದುತ್ತದೆ. ನಾನು ಚಲಿಸಿದಲ್ಲಿ ಪ್ರಾಣಗಳು ಚಲಿಸುತ್ತವೆ. ಆದ್ದರಿಂದ ನಾನೇ

ಶ್ರೇಷ್ಠ. ನನ್ನ ಶ್ರೇಷ್ಠತೆಯನ್ನು ನೀವು ನೋಡಿರಿ. ನಾನು ಲಯ ಹೊಂದುತ್ತೇನೆ, ನೀವು ಲಯ ಹೊಂದುತ್ತೀರಿ.

ಬ್ರಾಹ್ಮಣಃ

ಪ್ರಾಣಃ ಪ್ರಾಲೀಯತ ತತಃ ಪುನಶ್ಚ ಪ್ರಚಚಾರ ಸಃ ।
ಸಮಾನಶ್ಚಾಪ್ಯುದಾನಶ್ಚ ವಚೋಽಬ್ರೂತಾಂ ಪುನಃ ಶುಭೇ ॥೮॥

ಬ್ರಾಹ್ಮಣ– ಶುಭಾಂಗಿಯೇ, ಹೀಗೆ ಪ್ರಾಣವಾಯುವು ಸ್ವಲ್ಪ ಸಮಯ ಲಯ ಹೊಂದಿತು. ಕೂಡಲೇ ಅಪಾನವೂ ಲಯ ಹೊಂದಿತು. ಸ್ವಲ್ಪ ಸಮಯದ ಬಳಿಕ ಪ್ರಾಣವು ಚಲಿಸಿತು, ಆ ಸಮಯದಲ್ಲಿ ಸಮಾನ-ಉದಾನ ವಾಯುಗಳು ಹೇಳಿದವು.

ಸಮಾನೋದಾನೌ

ನ ತ್ವಂ ಸರ್ವಮಿದಂ ಪ್ರಾಪ್ಯ ತಿಷ್ಠಸ್ಯುತ ಯಥಾ ವಯಮ್ ।
ನ ತ್ವಂ ಶ್ರೇಷ್ಠೋ ಹಿ ನಃ ಪ್ರಾಣ ಅಪಾನೋ ಹಿ ವಶೇ ತವ ॥೯॥

ಪ್ರಾಣವಾಯುವೇ, ನಾವು ಪ್ರಾಣಿಗಳ ಶರೀರವನ್ನು ವ್ಯಾಪಿಸಿರುವಂತೆ ನೀನು ವ್ಯಾಪಿಸಿಲ್ಲ. ಆದ್ದರಿಂದ ನಮಗಿಂತ ನೀನು ಅಧಿಕನಲ್ಲ. ಆದರೆ ಅಪಾನ ವಾಯುವು ನಿನಗೆ ಅಧೀನವಾಗಿದ್ದಾನೆ. ಇದು ಸತ್ಯ .

ಬ್ರಾಹ್ಮಣಃ

ಪ್ರಚಚಾರ ತತಃ ಪ್ರಾಣಃ ತತೋಽಪಾನೋಽಭ್ಯಭಾಷತ ॥೧೦॥

ಬ್ರಾಹ್ಮಣ– ಪ್ರಾಣವಾಯುವು ಚಲಿಸಲಾರಂಭಿಸಿದ ಬಳಿಕ ಅಪಾನ ವಾಯುವು ಹೇಳುತ್ತದೆ.

ಅಪಾನಃ

ಮಯಿ ಪ್ರಲೀನೇ ಪ್ರಲಯಂ ವ್ರಜಂತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರವೃತ್ತೇ ಚ ಪುನಶ್ಚರಂತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾ ಪ್ರಲೀನಮ್ ॥೧೧॥

ಅಪಾನ– ಪ್ರಾಣಿಗಳ ಶರೀರದಲ್ಲಿ ನಾನು ಲಯ ಹೊಂದಿದರೆ ಉಳಿದೆಲ್ಲ ಪ್ರಾಣಗಳು ಲಯಹೊಂದುತ್ತವೆ. ನಾನು ಚಲಿಸಿದರೆ ಇತರ ಪ್ರಾಣಗಳ ಚಲನೆ. ಆದ್ದರಿಂದ ನಾನೇ ಶ್ರೇಷ್ಠ. ಈಗ ನೀವು ನೋಡಿ, ನಾನು ಲಯ ಹೊಂದುವೆ. ನನ್ನೊಡನೆ ನೀವು ಲಯ ಹೊಂದುತ್ತೀರಿ ಎಂದು ಹೇಳಿ ಅಪಾನವು ಲಯಹೊಂದಿತು. ಅದರೊಡನೆ ಪ್ರಾಣವೂ ಲಯಹೊಂದಿತು. ಪುನಃ ಅಪಾನವು ಚಲಿಸಿತು.

ಬ್ರಾಹ್ಮಣಃ

ವ್ಯಾನಶ್ಚ ತಮುದಾನಶ್ಚ ಭಾಷಮಾಣಮಥೋಚತುಃ ॥೧೨॥

ಹೀಗೆ ನಾನೇ ಶ್ರೇಷ್ಠನೆಂದು ಅಪಾನ ವಾಯುವು ಹೇಳಿದಾಗ ವ್ಯಾನ, ಉದಾನ ವಾಯುಗಳು ಹೇಳಿದವು.

ವ್ಯಾನೋದಾನೌ

ಅಪಾನ ನ ತ್ವಂ ಶ್ರೇಷ್ಠೋ ನಃ ಪ್ರಾಣೋ ಹಿ ವಶಗಸ್ತವ ॥೧೩॥

ಅಪಾನವಾಯುವೇ, ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಲ್ಲ. ಅವನು ನಿನ್ನ ವಶದಲ್ಲಿರುವುದು ನಿಜ.

ಬ್ರಾಹ್ಮಣಃ

ಅಪಾನಃ ಪ್ರಚಚಾರಾಥ ವ್ಯಾನಸ್ತಂ ಪುನರಬ್ರವೀತ್ ॥೧೪॥

ಬ್ರಾಹ್ಮಣ– ಅಪಾನವು ಚಲಿಸಿದಾಗ ವ್ಯಾನವಾಯುವು ಅಪಾನವಾಯುವನ್ನು ಕುರಿತು ಪುನಃ ಹೇಳಿತು.

ವ್ಯಾನಃ

ಶ್ರೇಷ್ಠೋಽಹಮಸ್ಮಿ ಸರ್ವೇಷಾಂ ಶ್ರೂಯತಾಂ ಯೇನ ಹೇತುನಾ ॥೧೫॥

ವ್ಯಾನ– ಅಪಾನವಾಯುವೇ, ನಾನು ಎಲ್ಲರಿಗಿಂತ ಶ್ರೇಷ್ಠನಾಗಿದ್ದೇನೆ. ಕಾರಣವನ್ನು ಹೇಳುತ್ತೇನೆ, ಕೇಳಿಸಿಕೊ.

ಮಯಿ ಪ್ರಲೀನೇ ಪ್ರಲಯಂ ವ್ರಜಂತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।

ಮಯಿ ಪ್ರವೃತ್ತೇ ಚ ಪುನಶ್ಚರಂತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾ ಪ್ರಲೀನಮ್ ॥೧೬॥

ನಾನು ಪ್ರಾಣಿಗಳ ಶರೀರದಲ್ಲಿ ಲಯವನ್ನು ಹೊಂದಿದರೆ ಎಲ್ಲ ಪ್ರಾಣಗಳು ಚಲಿಸುತ್ತವೆ. ಆದ್ದರಿಂದ ನಾನೇ ಪ್ರಾಣ ಧರಿಸಿದವರಲ್ಲಿ ಶ್ರೇಷ್ಠ. ನಾನು ಲಯ ಹೊಂದಿದರೆ ಏನಾಗುತ್ತದೆ ಎಂಬುದನ್ನು ನೋಡಿರಿ. ನನ್ನೊಡನೆ ನೀವೆಲ್ಲ ಲಯ ಹೊಂದುತ್ತೀರಿ.

ಬ್ರಾಹ್ಮಣಃ

ಪ್ರಾಲೀಯತ ತತೋ ವ್ಯಾನಃ ಪುನಶ್ಚ ಪ್ರಚಚಾರ ಹ ।
ಪ್ರಾಣಾಪಾನಾವುದಾನಶ್ಚ ಸಮಾನಶ್ಚ ತಮಬ್ರುವನ್ ॥೧೭॥

ಬ್ರಾಹ್ಮಣ– ಹೀಗೆ ಹೇಳಿ ವ್ಯಾನವು ಸ್ವಲ್ಪ ಕಾಲ ಲಯವನ್ನು ಹೊಂದಿತು. ವ್ಯಾನ ವಾಯುವಿನ ಜೊತೆ ಸಮಾನ ವಾಯುವು ಲಯ ಹೊಂದಿತು. ಪುನಃ ವ್ಯಾನ ವಾಯುವು ಚಲಿಸಿತು.

ಆ ಸಂದರ್ಭದಲ್ಲಿ ಪ್ರಾಣ, ಅಪಾನ, ಉದಾನ, ಸಮಾನ ವ್ಯಾನಕ್ಕೆ ಹೇಳಿದವು–

ಪ್ರಾಣೋಪಾನೋದಾನಸಮಾನಃ

ನ ತ್ವಂ ಶ್ರೇಷ್ಠೋಽಸಿ ನೋ ವ್ಯಾನ ಸಮಾನೋ ಹಿ ವಶೇ ತವ ॥೧೮॥

ವ್ಯಾನವಾಯುವೇ, ನೀನು ನಮಗಿಂತಲೂ ಶ್ರೇಷ್ಠನಲ್ಲ. ಆದರೆ ಸಮಾನ ವಾಯುವು ನಿನ್ನ ವಶದಲ್ಲಿದ್ದಾನೆ ಎಂಬುದು ಮಾತ್ರ ನಿಜ.

ಬ್ರಾಹ್ಮಣಃ

ಪ್ರಚಚಾರ ತತೋ ವ್ಯಾನಃ ಸಮಾನಃ ತಮಥಾಬ್ರವೀತ್ ॥೧೯॥

ಬ್ರಾಹ್ಮಣ– ಹಿಂದೆ ಹೇಳಿದಂತೆ ವ್ಯಾನವು ಚಲಿಸತೊಡಗಿತು. ಸಮಾನವು ಹೇಳಿತು.

ಸಮಾನಃ

ಶ್ರೇಷ್ಠೋಽಹಮಸ್ಮಿ ಸರ್ವೇಷಾಂ ಶ್ರೂಯತಾಂ ಯೇನ ಹೇತುನಾ ॥೨೦॥

ಸಮಾನ– ನಿಮ್ಮೆಲ್ಲರಿಗಿಂತಲೂ ನಾನೇ ಶ್ರೇಷ್ಠನಾಗಿದ್ದೇನೆ. ಯಾವ ಕಾರಣದಿಂದ ಶ್ರೇಷ್ಠನೆಂದು ಕೇಳಿಸಿಕೊಳ್ಳಿರಿ.

ಮಯಿ ಪ್ರಲೀನೇ ಪ್ರಲಯಂ ವ್ರಜಂತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರವೃತ್ತೇ ಚ ಪುನಶ್ಚರಂತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾ ಪ್ರಲೀನಮ್ ॥೨೧॥

ನಾನು ಪ್ರಾಣಿಗಳ ಶರೀರದಲ್ಲಿ ಲಯ ಹೊಂದಿದಲ್ಲಿ ಎಲ್ಲ ಪ್ರಾಣಗಳು ಲಯ ಹೊಂದುತ್ತವೆ. ನಾನು ಚಲಿಸಿದರೆ ಚಲನೆ. ಆದ್ದರಿಂದ ನಾನೇ ಶ್ರೇಷ್ಠ. ಈಗ ನಾನು ಲಯ ಹೊಂದಿದರೆ ಎಂದು ಅನುಭವಿಸಿ ನೋಡಿ. ಅನಿವಾರ್ಯವಾಗಿ ನೀವು ನನ್ನೊಡನೆ ಲಯ ಹೊಂದುವಿರಿ.

ಬ್ರಾಹ್ಮಣಃ

ತತಃ ಸಮಾನಃ ಪ್ರಾಲೀಲ್ಯೇ ಪುನಶ್ಚ ಪ್ರಚಚಾರ ಹ ।
ಪ್ರಾಣಾಪಾನಾವುದಾನಶ್ಚ ವ್ಯಾನಶ್ಚೈವ ತಮಬ್ರುವನ್ ॥೨೨॥

ಬ್ರಾಹ್ಮಣ– ಹೀಗೆ ಹೇಳಿ ಸಮಾನ ವಾಯುವು ಲಯ ಹೊಂದಿತು. ಅದರ ಜೊತೆಗೆ ವ್ಯಾನವೂ ಲಯ ಹೊಂದಿತು. ಪುನಃ ಸಮಾನವಾಯುವು ಚಲಿಸಿತು. ಈ ಸಮಯದಲ್ಲಿ ಪ್ರಾಣ, ಅಪಾನ, ಉದಾನ, ವ್ಯಾನಗಳು ಸಮಾನನಿಗೆ ಹೇಳಿದವು.

ಪ್ರಾಣಾಪಾನವ್ಯಾನೋದಾನಾಃ

ನ ತ್ವಂ ಸಮಾನ ಶ್ರೇಷ್ಠೋಽಸಿ ಉದಾನೋ ಹಿ ವಶೇ ತವ ॥೨೩॥

ಸಮಾನವಾಯುವೇ, ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಲ್ಲ. ಆದರೆ ವ್ಯಾನ ವಾಯುವು ನಿನ್ನ ವಶದಲ್ಲಿರುವುದು ಸತ್ಯ .

ಬ್ರಾಹ್ಮಣಃ

ಸಮಾನಃ ಪ್ರಚಚಾರಾಥ ಉದಾನಸ್ತಮುವಾಚ ಹ ॥೨೪॥

ಬ್ರಾಹ್ಮಣ– ಹೀಗೆ ಹೇಳಿದ ಬಳಿಕ ಸಮಾನ ವಾಯುವು ಚಲಿಸಿತು. ಆಗ ಉದಾನ ವಾಯುವು ಇತರ ವಾಯುಗಳನ್ನು ಕುರಿತು ಹೇಳಿತು.

ಉದಾನಃ

ಶ್ರೇಷ್ಠೋಽಹಮಸ್ಮಿ ಸರ್ವೇಷಾಂ ಶ್ರೂಯತಾಂ ಯೇನ ಹೇತುನಾ ॥೨೫॥

ಉದಾನ– ಪ್ರಾಣರೇ, ನಿಮ್ಮೆಲ್ಲರಿಗಿಂತ ನಾನು ಶ್ರೇಷ್ಠ. ಕಾರಣ ಕೇಳಿರಿ.

ಮಯಿ ಪ್ರಲೀನೇ ಪ್ರಲಯಂ ವ್ರಜಂತಿ
ಸರ್ವೇ ಪ್ರಾಣಾಃ ಪ್ರಾಣಭೃತಾಂ ಶರೀರೇ ।
ಮಯಿ ಪ್ರವೃತ್ತೇ ಚ ಪುನಶ್ಚರಂತಿ
ಶ್ರೇಷ್ಠೋ ಹ್ಯಹಂ ಪಶ್ಯತ ಮಾ ಪ್ರಲೀನಮ್ ॥೨೬॥

ಪ್ರಾಣಿಗಳ ಶರೀರದಲ್ಲಿ ನಾನು ಲಯ ಹೊಂದಿದರೆ ಪ್ರಾಣಗಳು ಲಯ ಹೊಂದುತ್ತವೆ. ನಾನು ಚಲಿಸಿದರೆ ಚಲನೆ. ಆದ್ದರಿಂದ ನಾನೇ ಶ್ರೇಷ್ಠ. ನನ್ನ ಲಯದ ಪರಿಣಾಮ ಏನೆಂಬುದನ್ನು ನೋಡಿದರೆ ನನ್ನ ಜೊತೆಗೆ ನೀವೆಲ್ಲ ಲಯ ಹೊಂದುವಿರಿ.

ಬ್ರಾಹ್ಮಣಃ

ತತಃ ಪ್ರಾಲೀಯತೋದಾನಃ ಪುನಶ್ಚ ಪ್ರಚಚಾರ ಹ ।
ಪ್ರಾಣಾಪಾನೌ ಸಮಾನಶ್ಚ ವ್ಯಾನಶ್ಚೈವ ತಮಬ್ರುವನ್ ॥೨೭॥

ಬ್ರಾಹ್ಮಣ– ನಂತರ ಉದಾನವಾಯುವು ಲಯ ಹೊಂದಿತು. ಅದರ ಜೊತೆ ವ್ಯಾನವೂ ಲಯ ಹೊಂದಿತು. ಉದಾನವು ಚಲಿಸಿತು. ನಂತರ ಪ್ರಾಣ, ಅಪಾನ, ಸಮಾನ, ವ್ಯಾನಗಳು ಉದಾನವಾಯುವನ್ನು ಕುರಿತು ಹೇಳಿದವು.

ಪ್ರಾಣಾಪಾನವ್ಯಾನಸಮಾನಾಃ

ಉದಾನ ನ ತ್ವಂ ಶ್ರೇಷ್ಠೋಽಸಿ ಸಮಾನೋ ಹಿ ವಶೇ ತವ ॥೨೮॥

ಉದಾನ ವಾಯುವೇ, ನೀನು ನಮ್ಮೆಲ್ಲರಿಗಿಂತಲೂ ಶ್ರೇಷ್ಠನಲ್ಲ. ವ್ಯಾನನು ಮಾತ್ರ ನಿನ್ನ ವಶದಲ್ಲಿದ್ದಾನೆ ಎಂಬುದು ಸತ್ಯ.

ಬ್ರಾಹ್ಮಣಃ

ತತಸ್ತಾನಬ್ರವೀತ್ ಸರ್ವಾನ್ ಸ್ಮಯಮಾನಃ ಪ್ರಜಾಪತಿಃ ॥೨೯॥

ಬ್ರಾಹ್ಮಣ– ಹೀಗೆ ವಾಯುಗಳೆಲ್ಲವೂ ತಮ್ಮ ತಮ್ಮ ಶಕ್ತಿಗಳನ್ನು ಪ್ರದರ್ಶಿಸಿದ ಬಳಿಕ ಪುನಃ ಒಟ್ಟಾಗಿ ಚತುರ್ಮುಖ ಬ್ರಹ್ಮನ ಬಳಿ ಎಲ್ಲರೂ ಆಗಮಿಸಿದರು.

ನಿರ್ಣಯ ಮಾಡಿಕೊಳ್ಳದೆ ಬಂದಿರುವ ವಾಯುಗಳನ್ನು ಕುರಿತು ಬ್ರಹ್ಮನು ಹೇಳಿದನು–

ಬ್ರಹ್ಮಾ

ಸರ್ವೇ ಶ್ರೇಷ್ಠಾ ನ ವಾ ಶ್ರೇಷ್ಠಾಃ ಸರ್ವೇ ಚಾನ್ಯೋನ್ಯರಕ್ಷಿಣಃ ।
ಸರ್ವೇ ಸ್ವವಿಷಯೇ ಶ್ರೇಷ್ಠಾಃ ಸರ್ವೇ ಚಾನ್ಯೋನ್ಯರಕ್ಷಿಣಃ ॥೩೦॥

ಬ್ರಹ್ಮ– ವಾಯುಗಳೇ, ನೀವೆಲ್ಲರೂ ಶ್ರೇಷ್ಠರಾಗಿಯೇ ಇದ್ದೀರಿ ಅಥವಾ ಯಾರೂ ಶ್ರೇಷ್ಠರಲ್ಲ. ನಿಮ್ಮೆಲ್ಲರಲ್ಲಿಯೂ ಇರುವ ಧರ್ಮವು ಒಂದನ್ನು ಇನ್ನೊಂದು ಆಶ್ರಯಿಸಿದೆ. ನಿಮ್ಮ ನಿಮ್ಮ ಸ್ಥಾನಗಳಲ್ಲಿ ನೀವು ಶ್ರೇಷ್ಠರು. ಪರಸ್ಪರ ಧರ್ಮವುಳ್ಳವರಾಗಿದ್ದೀರಿ. ಒಬ್ಬನಲ್ಲಿ ಇರುವ ಧರ್ಮವು ಮತ್ತೊಬ್ಬನಲ್ಲಿಯೂ ಇದೆ. ನಿಮ್ಮ ಕಾರ್ಯಗಳು ಇನ್ನೊಬ್ಬರ ಅಪೇಕ್ಷೆಯಿಂದ ನಡೆಯುತ್ತವೆ.

ಬ್ರಾಹ್ಮಣಃ

ಇತಿ ತಾನಬ್ರವೀತ್ ಸರ್ವಾನ್ ಸಮವೇತಾನ್ ಪ್ರಜಾಪತಿಃ ॥೩೧॥

ಬ್ರಾಹ್ಮಣ– ಹೀಗೆ ಆಗಮಿಸಿದ ಪ್ರಾಣರನ್ನು ಕುರಿತು ಚತುರ್ಮುಖ ಬ್ರಹ್ಮನು ಹೀಗೆ ಹೇಳಿದನು.

ಬ್ರಹ್ಮಾ

ಏಕಃ ಸ್ಥಿರಶ್ಚರಾಶ್ಚಾನ್ಯೇ ವಿಶೇಷಾತ್ ಪಂಚ ವಾಯವಃ ।
ಏಕ ಏವ ಮಮೈವಾತ್ಮಾ ಬಹುಧಾऽಪ್ಯುಪಚೀಯತೇ ॥೩೨॥

ಬ್ರಹ್ಮ– ಮುಖ್ಯಪ್ರಾಣನೇ ಬ್ರಹ್ಮಪದವಿಗೆ ಯೋಗ್ಯನಾಗಿರುವುದರಿಂದ ಮುಖ್ಯಪ್ರಾಣನನ್ನೇ ಆತ್ಮ ಎಂದು ಕರೆಯುತ್ತಾರೆ. ಪಂಚರೂಪಗಳೂ ಕೂಡ ಮುಖ್ಯಪ್ರಾಣನೇ ಆಗಿದ್ದಾನೆ. ಆ ಮುಖ್ಯಪ್ರಾಣನು ಮುಂದಿನ ಕಲ್ಪದ ಬ್ರಹ್ಮನಾಗಿದ್ದಾನೆ. ಆದ್ದರಿಂದ ಕಲಹವನ್ನು ಮಾಡಬೇಡಿರಿ.

ಪರಸ್ಪರಸ್ಯ ಸುಹೃದೋ ಭಾವಯಂತಃ ಪರಸ್ಪರಮ್ ।
ಸ್ವಸ್ತಿ ವ್ರಜತ ಭದ್ರಂ ವೋ ಧಾರಯಧ್ವಂ ಪರಸ್ಪರಮ್ ॥೩೩॥

ವಾಯುಗಳೇ, ನೀವೆಲ್ಲರೂ ಪರಸ್ಪರವಾಗಿ ಒಬ್ಬರಲ್ಲಿ ಮತ್ತೊಬ್ಬರು ವಿಶ್ವಾಸವಿಟ್ಟು

ಮೈತ್ರಿಯಿಂದ ಒಬ್ಬರು ಮತ್ತೊಬ್ಬರನ್ನು ಪೋಷಿಸಿರಿ. ನಿಮಗೆ ಮಂಗಳವಾಗಲಿ. ನೀವಿನ್ನು ಹೋಗಿ ಬನ್ನಿರಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು ಇಂದ್ರಿಯಾಣಾಂ ಪರಸ್ಪರಸಂವಾದೋ ನಾಮ ಚತುರ್ವಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ನವಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ, ಬ್ರಾಹ್ಮಣನು ಬ್ರಾಹ್ಮಣಿಯನ್ನು ಕುರಿತು ಹೇಳಿದ ಸೃಷ್ಟ್ಯಾದಿ ಪ್ರತಿಪಾದಕವಾದ ನಾರದ ಮತ್ತು ದೇವತಮನ ಸಂವಾದವನ್ನು ಉಪದೇಶಿಸಿದುದು.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಾರದಸ್ಯ ಚ ಸಂವಾದಮೃಷೇರ್ದೇವತಮಸ್ಯ ಚ ॥೧॥

ಬ್ರಾಹ್ಮಣ– ಪ್ರಿಯಳೇ, ಈ ವಿಷಯದಲ್ಲಿ ದೇವರ್ಷಿಗಳಾದ ನಾರದರಿಗೂ, ದೇವತಮನೆಂಬ ಮುನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಹೇಳುತ್ತಾರೆ.

ನಾರದರು ದೇವತಮನನ್ನು ಸಂಧಿಸಿದಾಗ ದೇವತಮನು ನಾರದರ ಬಳಿ ಪ್ರಶ್ನಿಸುತ್ತಾನೆ–

ದೇವತಮಃ

ಜಂತೋಃ ಸಂಜಾಯಮಾನಸ್ಯ ಕಿಂ ನು ಪೂರ್ವಂ ಪ್ರವರ್ತತೇ ।
ಪ್ರಾಣೋಽಪಾನಃ ಸಮಾನೋ ವಾ ವ್ಯಾನೋ ವೋದಾನ ಏವ ಚ ॥

ದೇವತಮ– ನಾರದರೇ, ಜೀವನು ಹುಟ್ಟುವ ಸಮಯದಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಪಂಚವಾಯುಗಳಲ್ಲಿ ಯಾವ ವಾಯುವು ಮೊದಲು ತಾಯಿಯ ಶರೀರದಲ್ಲಿ ಪ್ರವೃತ್ತವಾಗುತ್ತದೆ.

ನಾರದಃ

ಯೇನಾಯಂ ಸೃಜ್ಯತೇ ಜಂತುಸ್ತತೋಽನ್ಯಃ ಪೂರ್ವಮೇತಿ ತಮ್ ।
ಪ್ರಾಣದ್ವಂದ್ವಂ ಚ ವಿಜ್ಞೇಯಂ ತಿರ್ಯಗೂರ್ಧ್ವಂ ಗತಂ ಚ ಯತ್ ॥೩॥

ನಾರದ– ದೇವತಮನೇ, ಒಂದು ಜೀವ ಯಾವ ಕಾರಣದಿಂದ ಹುಟ್ಟನ್ನು ಪಡೆಯುವುದೋ ಅದೇ ಕಾರಣದಿಂದ ಅದಕ್ಕಿಂತಲೂ ಭಿನ್ನವಾದ ಮತ್ತೊಂದು ಪದಾರ್ಥವು ಆ ಜೀವನು ಹುಟ್ಟುವ ಮೊದಲೇ ಕಾರಣರೂಪದಿಂದ ಇರುತ್ತದೆ. ಅದಕ್ಕೆ ಪ್ರಾಣದ್ವಂದ್ವ ಎಂದು ಹೆಸರು. ಅದು ಮನುಷ್ಯಲೋಕದಲ್ಲಿಯೂ ದೇವಲೋಕದಲ್ಲಿಯೂ ವ್ಯಾಪಿಸಿರುತ್ತದೆ.

ದೇವತಮಃ

ಕೇನಾಯಂ ಸೃಜ್ಯತೇ ಜಂತುಃ ಕಶ್ಚಾನ್ಯಃ ಪೂರ್ವಮೇತಿ ತಮ್ ।
ಪ್ರಾಣದ್ವಂದ್ವಂ ಚ ಮೇ ಬ್ರೂಹಿ ತಿರ್ಯಗೂರ್ಧ್ವಂ ಚ ನಿಶ್ಚಯಾತ್ ॥೪॥

ದೇವತಮ– ನಾರದರೇ, ಯಾವ ಕಾರಣದಿಂದ ಜೀವನ ಸೃಷ್ಟಿಯಾಗುತ್ತದೆ? ಜೀವನು ಹುಟ್ಟಲು ಮೊದಲೇ ಇರುವ ಕಾರಣವಸ್ತುವು ಯಾವುದು? ಪ್ರಾಣದ್ವಂದ್ವ ಎಂದರೇನು? ದೇವ, ಮನುಷ್ಯ, ಪಾತಾಳಲೋಕದಲ್ಲಿ ವ್ಯಾಪ್ತವಾದುದು ಯಾವುದು?

ನಾರದಃ

ಸಂಕಲ್ಪಾಜ್ಜಾಯತೇ ಹರ್ಷಃ ಶಬ್ದಾದಪಿ ಚ ಜಾಯತೇ ।
ರಸಾತ್ ಸಂಜಾಯತೇ ಚಾಪಿ ರೂಪಾದಪಿ ಚ ಜಾಯತೇ ॥೫॥

ನಾರದ– ದೇವತಮನೇ, ಸಂಕಲ್ಪದಿಂದ ಸಂತೋಷವುಂಟಾಗುತ್ತದೆ. ಶಬ್ದವನ್ನು ಕೇಳುವುದರಿಂದಲೂ, ರಸವನ್ನು ಆಸ್ವಾದಿಸುವುದರಿಂದಲೂ, ರೂಪದ ದರ್ಶನದಿಂದಲೂ ಸಂತೋಷವುಂಟಾಗುತ್ತದೆ.

ಸ್ಪರ್ಶಾತ್ ಸಂಜಾಯತೇ ಚಾಪಿ ಗಂಧಾದಪಿ ಚ ಜಾಯತೇ ।
ಏತದ್ರೂಪಮುದಾನಸ್ಯ ಹರ್ಷೋ ಮಿಥುನಮಂತರಾ ॥೬॥

ಸ್ಪರ್ಶದಿಂದ ಹರ್ಷವುಂಟಾಗುತ್ತದೆ. ಗಂಧವನ್ನು ಆಘ್ರಾಣಿಸುವುದರಿಂದ, ಪರಸ್ಪರ ಸೇರುವಿಕೆಯಿಂದ ಹರ್ಷವು ಉಂಟಾಗುತ್ತದೆ. ಈ ಹರ್ಷವು ಉದಾನದ ವ್ಯಾಪಾರವಾಗಿದೆ.

ಕಾಮಾತ್ ಸಂಜಾಯತೇ ಶುಕ್ಲಃ ಕಾಮಾತ್ ಸಂಜಾಯತೇ ರಜಃ ।
ಸಮಾನವ್ಯಾನಜನಿತೇ ಸಮಾನೇ ಶುಕ್ಲಶೋಣಿತೇ ॥೭॥

ಪ್ರವೃತ್ತಿಯ ಮೂಲವಾದ ಕಾಮದಿಂದ ವೀರ್ಯವು ಹುಟ್ಟುತ್ತದೆ. ವೀರ್ಯದಿಂದ ರಜಸ್ಸಿನ ಉತ್ಪತ್ತಿಯಾಗುತ್ತದೆ. ಈ ಎಲ್ಲರಲ್ಲಿಯೂ ಶುಕ್ಲ-ಶೋಣಿತವು, ಸಮಾನ ಮತ್ತು ವ್ಯಾನ ವಾಯುಗಳಿಂದ ಹುಟ್ಟನ್ನು ಪಡೆಯುತ್ತದೆ.

ಶುಕ್ಲಾಚ್ಛೋಣಿತಸಂಸೃಷ್ಟಾತ್ ಪೂರ್ವಂ ಪ್ರಾಣಃ ಪ್ರವರ್ತತೇ ।
ಪ್ರಾಣೇನ ವಿಕೃತೇ ಶುಕ್ಲೇ ತತೋಽಪಾನಃ ಪ್ರವರ್ತತೇ ॥೮॥

ರಜಸ್ಸಿನಿಂದ ಮಿಶ್ರವಾದ ವೀರ್ಯದಿಂದ ಮೊದಲು ಪ್ರಾಣವು ಹುಟ್ಟಿ ಅದರಲ್ಲಿ ಕಾರ್ಯವನ್ನು ಆರಂಭಿಸುತ್ತದೆ. ಪ್ರಾಣವಾಯುವಿನ ಕಾರ್ಯದಿಂದ ವೀರ್ಯವು ವಿಕಾರವನ್ನು ಪಡೆದು ಅಪಾನವಾಯುವಿನ ಕಾರ್ಯವು ಆರಂಭವಾಗುತ್ತದೆ.

ಶುಕ್ಲಾತ್ ಸಂಜಾಯತೇ ಚಾಪಿ ರಸಾದಪಿ ಚ ಜಾಯತೇ ।
ಪ್ರಾಣಾಪಾನಾವಿಮೌ ದ್ವಂದ್ವಮರ್ವಾಕ್ ಚೋರ್ಧ್ವಂ ಚ ಗಚ್ಛತಃ ॥೯॥

ವ್ಯಾನಃ ಸಮಾನಶ್ಚೈವೋಭೌ ವಹ್ನಿಶ್ಚೈವ ಪ್ರವರ್ತತೇ ॥೧೦॥

ಈ ವಾಯುವು ಶುಕ್ಲದಿಂದ ರಸದಿಂದಲೂ ಉಂಟಾಗುತ್ತದೆ. ಈ ಪ್ರಾಣ-ಅಪಾನ ವಾಯುಗಳು ಊರ್ಧ್ವಲೋಕ, ಅಧೋಲೋಕಗಳಲ್ಲಿಯೂ ಸಂಚರಿಸುತ್ತವೆ. ವ್ಯಾನ, ಸಮಾನ ವಾಯುಗಳು ಜಾಠರಾಗ್ನಿಯನ್ನು ಅಭಿವೃದ್ಧಿಗೊಳಿಸುತ್ತವೆ.

ಅಗ್ನಿರ್ವೈ ದೇವತಾಃ ಸರ್ವಾ ಇತಿ ದೇವಸ್ಯ ಶಾಸನಾತ್ ।
ಸಂಜಾಯತೇ ಹಿ ಪ್ರಾಣೇಷು ಜ್ಞಾನಂ ಬುದ್ಧಿಸಮನ್ವಿತಮ್ ॥೧೧॥

ತಸ್ಯ ಧೂಮಃ ತಮೋ ರೂಪಂ ರಜೋ ಭಸ್ಮ ಸುರೇತಸಃ ।
ಸತ್ತ್ವಂ ಸಂಜಾಯತೇ ತಸ್ಯ ಯತ್ರ ಪ್ರಕ್ಷಿಪ್ಯತೇ ಹವಿಃ ॥೧೨॥

ಅಗ್ನಿಯೇ ಸಕಲ ದೇವತೆಗಳಿಗೆ ಆಹುತಿಯನ್ನು ಪ್ರದಾನ ಮಾಡುವವನು. ಆದ್ದರಿಂದ ಎಲ್ಲ ದೇವತೆಗಳ ಸ್ಥಿತಿಯನ್ನು ಅಗ್ನಿಯಲ್ಲಿ ಚಿಂತನೆ ಮಾಡಬೇಕು ಎಂಬುದು ವೇದದ ಶಾಸನವಾಗಿದೆ. ಆದ್ದರಿಂದ ಅಗ್ನಿಯಿಂದಲೇ ಬ್ರಾಹ್ಮಣನಿಗೆ ಸತ್ವ ಬುದ್ಧಿಯಿಂದ ಕೂಡಿದ ಜ್ಞಾನವುಂಟಾಗುತ್ತದೆ.

ವ್ಯಾಖ್ಯಾನ ವಿಶೇಷ– ಈ ಪದ್ಯಕ್ಕೆ ವಾದಿರಾಜ ಗುರುಸಾರ್ವಭೌಮರು ಹೀಗೆ ವಿವರಿಸಿದ್ದಾರೆ: ಅಗ್ನಿಯು ಸಮಸ್ತ ದೇವತೆಗಳಿಗೂ ಆಹುತಿಯನ್ನು ಕೊಡುವ ಮೂಲಕ ತೃಪ್ತಿಯನ್ನು ಉಂಟು ಮಾಡುವವನು. ಆದ್ದರಿಂದ ಅಗ್ನಿಯನ್ನೇ ಸರ್ವಾದೇವತಾ ಎಂದು ಹೇಳಿದ್ದಾರೆ. ಆದ್ದರಿಂದ ಬ್ರಾಹ್ಮಣರಿಗೆ ಜಠರಸ್ಥವಾದ ವೈಶ್ವಾನರ ಅಗ್ನಿಯೂ ಕೂಡ ಪ್ರಾಣಾಗ್ನಿ ಹೋತ್ರದಿಂದ ಸಕಲ ಇಂದ್ರಿಯಾಭಿಮಾನಿದೇವತೆಗಳಿಗೆ ಅನ್ನ-ರಸ-ಆಹುತಿಗಳನ್ನು ಕೊಡುವ ಮೂಲಕ ತೃಪ್ತಿ ಕಾರಣನಾಗಿರುವುದರಿಂದ ನಮ್ಮ ದೇಹದಲ್ಲಿಯೂ ಅಗ್ನಿಯನ್ನು 'ಸರ್ವಾದೇವತಾ' ಎಂದು ಕರೆಯುತ್ತಾರೆ. ಈ ರೀತಿಯಾಗಿ ಅಗ್ನಿಯು ಮನಸ್ಸೇ ಮೊದಲಾದ ಎಲ್ಲ ಇಂದ್ರಿಯಗಳನ್ನು ಪೋಷಿಸುತ್ತಿರಲು ಮೊದಲು ನಾನು ಈ ಕರ್ಮವನ್ನು ಮಾಡುತ್ತೇನೆ, ಆ ಕರ್ಮವನ್ನು ಮಾಡುತ್ತೇನೆ, ಈ ಕರ್ಮವನ್ನು ಮಾಡಲೋ, ಆ ಕರ್ಮವನ್ನು ಮಾಡಲೋ ಎಂಬ ಸಂಶಯಾತ್ಮಕವಾದ ಬುದ್ಧಿಯು ಉತ್ಪನ್ನವಾಗುತ್ತದೆ. ಪುನಃ ಬುದ್ಧಿಯು ಇದೇ ಕರ್ಮವನ್ನು ಮಾಡುತ್ತೇನೆ ಎಂದು ನಿಶ್ಚಯವನ್ನು ಪಡೆಯುತ್ತದೆ. ಆದ್ದರಿಂದ ಅಗ್ನಿಯು ಧೂಮದಂತೆ ಇದೆ. ಬುದ್ಧಿಯು ಶುಕ್ಲ-ಭಾಸ್ವರ ರೂಪಸ್ಥಾನೀಯವಾಗಿದೆ. ಸರ್ವದೇವಾತ್ಮಕನಾದ ಅಗ್ನಿಯು ಧೂಮರೂಪನು, ತಪೋರೂಪನು ಎಂದು ಭಾವಿಸಬಹುದು. ಭಸ್ಮವು ರಜೋರೂಪವಾಗಿದೆ. ಆದ್ದರಿಂದ ಯಾವ ಅಗ್ನಿಯಲ್ಲಿ ಹವಿಸ್ಸು ಹಾಕಲ್ಪಡುವುದೋ ಅದರಿಂದ ಸತ್ವವು ಹುಟ್ಟುತ್ತದೆ. ಇಲ್ಲಿ ಸುರೇತಸಃ ಎಂದರೆ ಪುತ್ರೋತ್ಪಾದನ ಯೋಗ್ಯವಾದ ರೇತಸ್ಸು ಎಂದು ಅರ್ಥ. ರಜಸ್ಸು ಎಂದರೆ ಅನ್ನದಿಂದ ಉತ್ಪನ್ನವಾದ ಕಣಗಳು. ಅದನ್ನೇ ಭಸ್ಮ ಎಂದಿದ್ದಾರೆ. ಆ ರಜಸ್ಸು ದೇಹಕ್ಕೆ ಬಲವನ್ನು ನೀಡುವ ಮೂಲಕ ಸಂತಾನ ರೂಪದಿಂದ ಜೀವಾತ್ಮನ ಉತ್ಪತ್ತಿಯಾಗುತ್ತದೆ. ಆ ಕಾರಣದಿಂದ ಯಾವ ಜಾಠರಾಗ್ನಿಯಲ್ಲಿ ಹವಿಷ್ಯ ಪದಾರ್ಥಗಳನ್ನು ಹಾಕುತ್ತೇವೋ ಆ ಜಾಠರಾಗ್ನಿಯಲ್ಲಿರುವ ಅಗ್ನಿದೇವನು ಸಮಾನ, ವ್ಯಾನ ಎಂಬ ವಾಯುಗಳ ಅಧೀನನಾಗಿ ಇದ್ದಾನೆ. ಅಧಿಕವಾದ ರಸವನ್ನು ಜಾಠರದಲ್ಲಿ ದಾನ ಮಾಡಿದಾಗ ಅಧಿಕವಾಗಿ ಅಗ್ನಿಯು ಶಾಂತನಾಗುತ್ತಾನೆ. ಆದ್ದರಿಂದ ಈ ಅಜೀರ್ಣ ರೋಗ ಬಾರದಿರುವಂತೆ ಸಮಾನನು ಅವನನ್ನು ರಕ್ಷಿಸುತ್ತಾನೆ. ಎಲ್ಲ ನಾಡಿಗಳಲ್ಲಿ ಜಾಠರಾಗ್ನಿಯ ಶಿಖೆಯ ಸಂಚಾರಕ್ಕಾಗಿ ವ್ಯಾನನ ಅಪೇಕ್ಷೆಯು ಇದೆ. ಆದ್ದರಿಂದಲೇ ಜಾಠರದಲ್ಲಿ ಬಿದ್ದ ಆಹಾರವು ಅಗ್ನಿಶಿಖಾ ರೂಪವಾಗಿ ಇಂದ್ರಿಯಗಳ ದ್ವಾರಾ ಚೈತನ್ಯವನ್ನು ಹುಟ್ಟಿಸುತ್ತದೆ.

ಹವಿಃ ಸಮಾನೋ ವ್ಯಾನಶ್ಚ ಇತಿ ಯಜ್ಞವಿದೋ ವಿದುಃ ।
ಪ್ರಾಣಾಪಾನಾವಾಜ್ಯಭಾಗೌ ತಯೋರ್ಮಧ್ಯೇ ಹುತಾಶನಃ ॥೧೩॥

ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೪॥

ಸಮಾನ-ವ್ಯಾನರನ್ನು ಯಜ್ಞವೇತ್ತೃಗಳು ಹವಿಸ್ಸು ಎಂದೂ, ಪ್ರಾಣಾಪಾನರನ್ನು ಆಜ್ಯರೆಂದೂ, ಅವರಿಬ್ಬರ ಮಧ್ಯದಲ್ಲಿ ಅಗ್ನಿ ಇದ್ದಾನೆಂದು, ಇದು ಉದಾನನ ಉತ್ಕೃಷ್ಟವಾದ ರೂಪವೆಂದು ಬ್ರಾಹ್ಮಣರು ತಿಳಿದಿದ್ದಾರೆ.

ನಿರ್ದ್ವಂದ್ವಮಿತಿ ಯತ್ತ್ವೇತತ್ ತನ್ಮೇ ನಿಗದತಃ ಶೃಣು ॥೧೫॥

ಸಮಾನಾದಿ ಚತುಷ್ಟಯವು ಉದಾನನ ರೂಪವು. ಎಲ್ಲೆಡೆಯೂ ಇರುವಂತಹ ಈ ರೂಪವೇನಿದೆಯೋ ಅದರ ಬಗ್ಗೆ ನಾನು ವಿವರಿಸುತ್ತೇನೆ, ತಿಳಿದುಕೊ.

ಅಹೋರಾತ್ರಮಿದಂ ದ್ವಂದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೬॥

ರಾತ್ರಿಯು ಕಳೆದಾಗ ಹಗಲು ಆರಂಭವಾಗುತ್ತದೆ. ಹಗಲಿನ ಬಳಿಕ ಸಾಯಂಕಾಲವಾಗುತ್ತದೆ. ಹಗಲೆಲ್ಲ ಕಳೆದು ರಾತ್ರಿಯ ಆರಂಭದಲ್ಲಿ ಅಗ್ನಿಯನ್ನು ಸೇವಿಸುವುದರಿಂದ ಹಗಲು-ರಾತ್ರಿಗಳ ನಡುವೆ ಹುತಾಶನನು ಇದ್ದಾನೆ. ಇದು ಉದಾನನ ರೂಪವೆಂದು ಬ್ರಾಹ್ಮಣರು ತಿಳಿದಿದ್ದಾರೆ.

ಉಭೇ ಚೈವಾಯನೇ ದ್ವಂದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೭॥

ದಕ್ಷಿಣಾಯನದ ನಂತರ ಉತ್ತರಾಯಣವು ಆರಂಭವಾಗುತ್ತದೆ. ಉತ್ತರಾಯಣದ ಆರಂಭದಲ್ಲಿ ಯಜ್ಞಾದಿಗಳ ಆರಂಭವು ಆಗುವುದರಿಂದ ಯಜ್ಞರೂಪದಲ್ಲಿ ಅಗ್ನಿಯು ಇರುತ್ತಾನೆ. ಉತ್ತರಾಯಣ ಕಳೆದ ನಂತರ ಬಿಸಿ ರೂಪದಲ್ಲಿ ಅಗ್ನಿಯು ಇರುವುದರಿಂದ ಉತ್ತರಾಯಣ, ದಕ್ಷಿಣಾಯನ ಮಧ್ಯದಲ್ಲಿ ಅಗ್ನಿದೇವ ಇದ್ದಾನೆ. ಇದನ್ನು ಉದಾನನ ರೂಪವೆಂದು ಬ್ರಾಹ್ಮಣರು ತಿಳಿದಿದ್ದಾರೆ.

ಉಭೇ ಸತ್ಯಾನೃತೇ ದ್ವಂದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೮॥

ಸತ್ಯವು ಸಂಹಾರವಾಗಲು ಸುಳ್ಳು ಹುಟ್ಟಿಕೊಳ್ಳುತ್ತದೆ. ಸುಳ್ಳಿನಿಂದ ನರಕ ರೂಪ ಅಗ್ನಿಯುಂಟಾಗುತ್ತದೆ. ಸುಳ್ಳು ದಾಟಿ ಸತ್ಯಾರಂಭದಲ್ಲಿ ತೇಜೋಮಯ ಲೋಕಪ್ರಾಪ್ತಿಯು ಅಗ್ನಿ ಎನಿಸಿದೆ. ಇದು ಉದಾನನ ರೂಪವೆನಿಸಿದೆ ಎಂದು ಬ್ರಾಹ್ಮಣರು ತಿಳಿದಿದ್ದಾರೆ.

ಉಭೇ ಶುಭಾಶುಭೇ ದ್ವಂದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೧೯॥

ಶುಭವು ಕಳೆದ ಮೇಲೆ ಅಶುಭವು ಉಂಟಾಗುತ್ತದೆ. ಅಶುಭದ ಆರಂಭದಲ್ಲಿ ಅಗ್ನಿ ಇದ್ದಾನೆ. ಈ ಶುಭಾಶುಭಗಳ ನಡುವೆ ಇರುವ ಹುತಾಶನರೂಪವು ಉದಾನ ಎಂದು ಬ್ರಾಹ್ಮಣರಿಂದ ತಿಳಿಯಲ್ಪಟ್ಟಿದೆ.

ಸಚ್ಚಾಸಚ್ಚೈವ ತದ್ ದ್ವಂದ್ವಂ ತಯೋರ್ಮಧ್ಯೇ ಹುತಾಶನಃ ।
ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೨೦॥

ಸತ್ ಮತ್ತು ಅಸತ್ ಎರಡನ್ನೂ ದ್ವಂದ್ವವೆನ್ನುತ್ತಾರೆ. ಈ ಎರಡರ ಮಧ್ಯದಲ್ಲಿ ಅಗ್ನಿ ಇದ್ದಾನೆ. ಬ್ರಾಹ್ಮಣರು ಇದನ್ನು ಉದಾನನ ಪರಮರೂಪವೆಂದು ಕೊಂಡಾಡುತ್ತಾರೆ.

ಪೂರ್ವಂ ಸಮಾನೋ ವ್ಯಾನೋಽಥ ವ್ಯಸ್ಯತೇ ಕಿಂ ನ ಕರ್ಮಕೃತ್ ।
ತೃತೀಯಂ ತು ಸಮಾನೇನ ಪುನರೇವ ವ್ಯವಸ್ಯತೇ ॥೨೧॥

ಮೊದಲು ಸಮಾನ-ವ್ಯಾನ ವಾಯುಗಳು ಭಗವಂತನ ಸಂಕಲ್ಪದಿಂದ ಪರಿವರ್ತನೆ ಹೊಂದುತ್ತವೆ. ಅವುಗಳಿಂದ ಕರ್ಮದ ವಿಸ್ತಾರವು ಉಂಟಾಗುತ್ತದೆ. ಈ ಸಮಾನ ವಾಯುವಿನಿಂದ ಸ್ವಪ್ನಕ್ಕಿಂತ ಅತಿರಿಕ್ತವಾದ ಮೂರನೆಯ ಸುಷುಪ್ತಿಯ ಅವಸ್ಥೆಯು ನಿಶ್ಚಿತವಾಗುತ್ತದೆ.

ಶಾಂತ್ಯರ್ಥಂ ವಾಮದೇವಶ್ಚ ಶಾಂತಿರ್ಬ್ರಹ್ಮ ಸನಾತನಮ್ ।
ಏತದ್ ರೂಪಮುದಾನಸ್ಯ ಪರಮಂ ಬ್ರಾಹ್ಮಣಾ ವಿದುಃ ॥೨೨॥

ಶಾಂತಿಗೋಸ್ಕರವೇ ವಾಮದೇವ ಎಂಬ ಋಷಿವರ್ಗವಿದೆ. ಸನಾತನವಾದ ವೇದವರ್ಗಗಳು ಶಾಂತಿಗೋಸ್ಕರ ಉತ್ಪನ್ನವಾಗಿವೆ. ಶಮಾಖ್ಯ ಗುಣವನ್ನು ಕೊಡುವುದರಿಂದಲೇ ಶಾಂತಿ ಎಂದು ಕರೆದಿದ್ದಾರೆ. ಇದು ಉದಾನನ ರೂಪವೆಂದು ಬ್ರಹ್ಮಜ್ಞಾನಿಗಳು ತಿಳಿದಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ನಾರದ-ದೇವತಮಸಂವಾದೋ ನಾಮ
ಪಂಚವಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ದಶಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಕೃಷ್ಣನು ಅರ್ಜುನನನ್ನು ಕುರಿತು ಕರ್ತೃ-ಕರ್ಮ ಮೊದಲಾದವುಗಳನ್ನು ಪ್ರತಿಪಾದಿಸುವ ಬ್ರಾಹ್ಮಣದಂಪತಿಗಳ ಸಂವಾದವನ್ನು ಅನುವಾದಿಸಿದುದು.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಚಾತುರ್ಹೋತ್ರವಿಧಾನಸ್ಯ ವಿಧಾನಮಿಹ ಯಾದೃಶಮ್ ॥೧॥

ಬ್ರಾಹ್ಮಣ– ಪ್ರಿಯಳೇ, ನಾಲ್ಕು ಹೋತೃಗಳಿಂದ ಸಂಪನ್ನವಾಗುವ ಯಜ್ಞವು ಯಾವ ರೀತಿಯಾಗಿರುತ್ತದೆ ಎನ್ನುವ ವಿಷಯದಲ್ಲಿ ವಿದ್ವಾಂಸರು ಹೇಳುವ ಒಂದು ಇತಿಹಾಸವನ್ನು ಹೇಳುತ್ತೇನೆ, ಕೇಳು.

ತಸ್ಯ ಸರ್ವಸ್ಯ ವಿಧಿವದ್ ವಿಧಾನಮುಪದೇಕ್ಷ್ಯತೇ ।
ಶೃಣು ಮೇ ಗದತೋ ಭದ್ರೇ ರಹಸ್ಯಮಿದಮುತ್ತಮಮ್ ॥೨॥

ಎಲ್ಲದರ ವಿಧಾನವು ವಿಧಿವತ್ತಾಗಿ ಉಪದೇಶಿಸಲ್ಪಟ್ಟಿದೆ. ಮಂಗಳ ಸ್ವರೂಪಳೇ, ಅದ್ಭುತವೂ ರಹಸ್ಯವೂ ಆದ ನಾನು ಹೇಳುವ ವಿಷಯವನ್ನು ಕೇಳಿಸಿಕೊ.

ಕರಣಂ ಕರ್ಮ ಕರ್ತಾ ಚ ಮೋಕ್ಷ ಇತ್ಯೇವ ಭಾಮಿನಿ ।
ಚತ್ವಾರ ಏತೇ ಹೋತಾರೋ ಯೈರಿದಂ ಜಗದಾವೃತಮ್ ॥೩॥

ಹೋತೄಣಾಂ ಸಾಧನಂ ಚೈವ ಶೃಣು ಸರ್ವಂ ಸಮಾಹಿತಃ ॥೪॥

ಕರಣ, ಕರ್ಮ, ಕರ್ತಾ, ಮೋಕ್ಷ- ಈ ನಾಲ್ಕು ಹೋತೃಗಳು ಎನಿಸಿವೆ. ಈ ನಾಲ್ಕರಿಂದಲೇ ಜಗತ್ತು ಸಂಪೂರ್ಣವಾಗಿ ಆವೃತವಾಗಿವೆ. ಈ ನಾಲ್ಕು ಹೋತೃಗಳ ಸಾಧನವು ಯಾವುದೆಂಬುದನ್ನು ಹೇಳುತ್ತೇನೆ, ಕೇಳಿಸಿಕೊ.

ಘ್ರಾಣಂ ಜಿಹ್ವಾ ಚ ಚಕ್ಷುಶ್ಚ ತ್ವಕ್ ಶ್ರೋತ್ರಂ ಚ ಪಂಚಮಮ್ ।
ಮನೋ ಬುದ್ಧಿಶ್ಚ ಸಪ್ತೈತೇ ಜ್ಞೇಯಾಃ ಕರಣಹೇತವಃ ॥೫॥

ಮೂಗು, ನಾಲಿಗೆ, ಕಣ್ಣು, ಚರ್ಮ, ಐದನೆಯದ್ದಾದ ಕಿವಿ, ಮನಸ್ಸು, ಬುದ್ಧಿ ಎಂಬ ಏಳು ಹೋತೃಗಳು ಕರಣಹೇತುಗಳು ಎಂದು ತಿಳಿಯಬೇಕು.

ಗಂಧೋ ರಸಶ್ಚ ರೂಪಂ ಚ ಸ್ಪರ್ಶಃ ಶಬ್ದಶ್ಚ ಪಂಚಮಃ ।
ಮಂತವ್ಯಮವಬೋದ್ಧವ್ಯಂ ಸಪ್ಯೈತೇ ಕರ್ಮಹೇತವಃ ॥೬॥

ಗಂಧ-ರಸ-ರೂಪ-ಶಬ್ದ ಐದನೆಯದ್ದಾದ ಸ್ಪರ್ಶ, ಮನನ ಮಾಡುವುದು, ತಿಳಿದುಕೊಳ್ಳುವುದು - ಈ ಏಳು ಕರ್ಮಹೇತುಗಳು ಎಂದು ತಿಳಿಯಬೇಕು.

ಘ್ರಾತಾ ಭಕ್ಷಯಿತಾ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಚ ಪಂಚಮಃ ।
ಮಂತಾ ಬೋದ್ಧಾ ಚ ಸಪ್ಯೈತೇ ವಿಜ್ಞೇಯಾಃ ಕರ್ತೃಹೇತವಃ ॥೭॥

ಆಘ್ರಾಣಿಸುವುದು, ತಿನ್ನುವುದು, ನೋಡುವುದು, ಸ್ಪರ್ಶಿಸುವುದು, ಐದನೆಯದ್ದಾದ ಕೇಳುವುದು, ಮನನ ಮಾಡುವುದು, ತಿಳಿಯುವುದು - ಈ ಏಳು ಕರ್ತೃರೂಪವಾದ ಕಾರಣವೆಂದು ಹೇಳುತ್ತಾರೆ.

ಸ್ವಗುಣಂ ಭಕ್ಷಯಂತ್ಯೇತೇ ಗುಣವಂತಃ ಶುಭಾಶುಭಾನ್ ।
ಅಹಂ ತು ನಿರ್ಗುಣೋऽತ್ರೇತಿ ಸಪ್ಯೈತೇ ಮೋಕ್ಷಹೇತವಃ ॥೮॥

ಈ ಏಳು ಕರ್ತೃಹೇತುಗಳು ಇಂದ್ರಿಯಗುಣವುಳ್ಳವುಗಳು. ಇವುಗಳು ಶುಭಾಶುಭಗಳಿಂದ ಕೂಡಿರುವ ತಮ್ಮ ತಮ್ಮ ಗುಣಗಳನ್ನು ಅನುಭವಿಸುತ್ತವೆ. ಕರಣ ಹೇತು, ಕರ್ಮಹೇತು, ಕರ್ತೃಹೇತು ಇವುಗಳ ಮಧ್ಯದಲ್ಲಿ ಅಹಂ ಶಬ್ದವಾಚ್ಯನಾದ ಜೀವನು ಉಪದೇಶಕನಾದ, ಆಶಾರಹಿತನಾದ, ಬ್ರಾಹ್ಮಣನಾದ ನನ್ನಂತೆ ಯಾವಾಗ ವಿರಕ್ತನಾಗಿರುತ್ತಾನೋ ಆಗ ಈ ಏಳು ಹೇತುಗಳು ಮೋಕ್ಷಕ್ಕೆ ಕಾರಣವಾಗುತ್ತವೆ.

ವಿದುಷಾಂ ಬುಧ್ಯಮಾನಾನಾಂ ಸ್ವಂ ಸ್ವಂ ಸ್ಥಾನಂ ಯಥಾವಿಧಿ ।
ಗುಣಾಸ್ತೇ ದೇವತಾ ಭೂತ್ವಾ ಸತತಂ ಭುಂಜತೇ ಹವಿಃ ॥೯॥

ವಿದ್ವಾಂಸರಿಗೆ ಈ ಗುಣಗಳೇ ದೇವತಾಸ್ವರೂಪವಾಗಿ ಹವಿಸ್ಸನ್ನು ಸೇವಿಸುತ್ತವೆ ಎಂಬ ಜ್ಞಾನವಿದೆ. ಇವುಗಳಿಗೆ ಅಭಿಮಾನಿಗಳಾದ ದೇವತೆಗಳು ಗುಣಪ್ರವರ್ತಕರಾಗಿ ನಾನಾ ಗುಣಗಳನ್ನು ಆಸ್ವಾದಿಸುವುದರಿಂದ ಉಂಟಾದ ಸುಖವೆಂಬ ಹವಿಷ್ಯವನ್ನು ನಿರಂತರವೂ ಸ್ವೀಕರಿಸುತ್ತಾರೆ.

ಅದನ್ ಹ್ಯವಿದ್ವಾನನ್ನಾನಿ ಮಮತ್ವೇನೋಪಹನ್ಯತೇ ।
ಆತ್ಮಾರ್ಥೇ ಪಾಚಯನ್ನಿತ್ಯಂ ಮಮತ್ವೇನೋಪಹನ್ಯತೇ ॥೧೦॥

ಯಾವನು ಈ ಏಳು ಕರಣಗಳ ಮೂಲಕ ಆಹಾರವನ್ನು ಸ್ವೀಕರಿಸುವಾಗ ಅವುಗಳಲ್ಲಿನ ಯಜ್ಞಾನುಸಂಧಾನವನ್ನು ಮಾಡದೆ ಮಮಕಾರದಿಂದಲೇ ಅನ್ನವನ್ನು ತಿನ್ನುತ್ತಾನೋ, ಆ ತಿಂದ ಅನ್ನವೇ ಅವನನ್ನು ಕೊಲ್ಲುತ್ತದೆ. ಯಾವನು ಸ್ವಾರ್ಥಕ್ಕೋಸ್ಕರ ಅಡುಗೆ ಮಾಡಿ ನನಗೆಂದು ಊಟ ಮಾಡುತ್ತಾನೋ ಅವನು ತಿನ್ನುವ ಅನ್ನವೇ ಪಾಪರೂಪವಾಗಿ ಅವನನ್ನು ಕೊಲ್ಲುತ್ತದೆ.

ಅಭಕ್ಷ್ಯಭಕ್ಷಣಂ ಚೈವ ಅನ್ನಪಾನಂ ಚ ಹಂತಿ ತಮ್ ।
ಸ ಚಾನ್ನಂ ಹಂತಿ ತಚ್ಚಾನ್ನಂ ಸ ಬುಧ್ವಾ ಹನ್ಯತೇ ಬುಧಃ ॥೧೧॥

ತಿನ್ನಬಾರದ್ದನ್ನು ತಿನ್ನುವುದು, (ಮದ್ಯಪಾನ ಮಾಡುವುದು), ಅಭಕ್ಷ್ಯವಾದ ಅನ್ನ-ಪಾನಗಳಲ್ಲಿ ರತನಾಗಿದ್ದಾಗ ಆ ಅಭಕ್ಷ್ಯಭಕ್ಷಣವೇ ಅವನನ್ನು ಕೊಲ್ಲುತ್ತದೆ. ಆದ್ದರಿಂದ ಮೊದಲು ಅನ್ನವನ್ನು ತಿಂದು ಅದನ್ನು ವಿನಾಶಗೊಳಿಸುತ್ತಾನೆ, ಅನ್ನವು ವ್ಯಸನಿಯಾದ ಅವನನ್ನು ಕೊಲ್ಲುತ್ತದೆ.

ಮಾದ್ಯಮನ್ನಮದನ್ ವಿದ್ವಾನ್ ಪುನರ್ಜನಯತೀಶ್ವರಃ ।
ಸ ಚಾನ್ನಾಜ್ಜಾಯತೇ ತಸ್ಮಿನ್ ಸೂಕ್ಷ್ಮೋ ನಾಮ ವ್ಯತಿಕ್ರಮಃ ॥೧೨॥

ಸಂತೋಷಕರವಾದ ಜ್ಞಾನಿಗಳಿಗೆ ಕೊಡಲ್ಪಟ್ಟ ಅನ್ನವು ಪರಮಾತ್ಮನಿಗೆ ಕೊಟ್ಟ ಅನ್ನದಂತೆ. ಪರಮಾತ್ಮನು ಜ್ಞಾನಿಗೆ ಅನ್ನ ಕೊಟ್ಟಾಗ ಪುನಃ ಪುನಃ ಅನ್ನವನ್ನು ಅಭಿವೃದ್ಧಿಗೊಳಿಸುತ್ತಾನೆ. ಅನ್ನವನ್ನು ಅಕ್ಷಯ ಮಾಡಿಸುತ್ತಾನೆ. ಆ ಜ್ಞಾನಿಯು ತಿನ್ನಲ್ಪಟ್ಟ ಅನ್ನದಿಂದ ಬಾಹ್ಯವಾದ ದೇಹದ ಸಂಬಂಧವನ್ನೇ ಪರಿಹರಿಸಿಕೊಳ್ಳುತ್ತಾನೆ. ತುತ್ತು-ತುತ್ತಿಗೂ ಭಗವಂತನ ನಾಮಸಂಕೀರ್ತನೆಯನ್ನು ಮಾಡುತ್ತಾ ಅನ್ನವನ್ನು ತಿಂದಾಗ ಸಮಸ್ತ ದುರಿತಗಳು ನಾಶವಾಗುತ್ತವೆ. ಹೀಗಾಗಿ ತಿಂದ ಅನ್ನವೇ ಯಜ್ಞರೂಪವಾಗಿ ಬಂಧಕವಾದ ದೇಹಗಳನ್ನು ನಾಶ ಮಾಡುತ್ತದೆ. ನಂತರ ಜ್ಞಾನಿಯಾದ ಆ ವ್ಯಕ್ತಿಯು ಪರಮಾತ್ಮನ ದೆಸೆಯಿಂದ ಉತ್ತಮ ಯೋನಿಗಳಲ್ಲಿ ಉತ್ಪತ್ತಿಯನ್ನು ಪಡೆಯುತ್ತಾನೆ.

ಮನಸಾ ಮನ್ಯತೇ ಯಚ್ಚ ಯಚ್ಚ ಬುದ್ಧ್ಯಾ ನಿರುದ್ಧ್ಯತೇ ।
ಶ್ರೋತ್ರೇಣ ಶ್ರೂಯತೇ ಯಚ್ಚ ಚಕ್ಷುಷಾ ಯಚ್ಚ ದೃಶ್ಯತೇ ॥೧೩॥

ಸ್ಪರ್ಶೇನ ಸ್ಪೃಶ್ಯತೇ ಯಚ್ಚ ಘ್ರಾಣೇನ ಘ್ರಾಯತೇ ಚ ಯತ್ ॥೧೪॥

ಗಂಧೋ ರಸಶ್ಚ ರೂಪಂ ಚ ಸ್ಪರ್ಶಃ ಶಬ್ದಶ್ಚ ಪಂಚಮಃ ।
ಮಂತವ್ಯಮವಬೋದ್ಧವ್ಯಂ ಸಪ್ತೈತೇ ಕರ್ಮಹೇತವಃ ॥೬॥

ಗಂಧ-ರಸ-ರೂಪ-ಶಬ್ದ, ಐದನೆಯದ್ದಾದ ಸ್ಪರ್ಶ, ಮನನ ಮಾಡುವುದು, ತಿಳಿದುಕೊಳ್ಳುವುದು - ಈ ಏಳು ಕರ್ಮಹೇತುಗಳು ಎಂದು ತಿಳಿಯಬೇಕು.

ಘ್ರಾತಾ ಭಕ್ಷಯಿತಾ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಚ ಪಂಚಮಃ ।
ಮಂತಾ ಬೋದ್ಧಾ ಚ ಸಪ್ತೈತೇ ವಿಜ್ಞೇಯಾಃ ಕರ್ತೃಹೇತವಃ ॥೭॥

ಆಘ್ರಾಣಿಸುವುದು, ತಿನ್ನುವುದು, ನೋಡುವುದು, ಸ್ಪರ್ಶಿಸುವುದು, ಐದನೆಯದ್ದಾದ ಕೇಳುವುದು, ಮನನ ಮಾಡುವುದು, ತಿಳಿಯುವುದು - ಈ ಏಳು ಕರ್ತೃರೂಪವಾದ ಕಾರಣವೆಂದು ಹೇಳುತ್ತಾರೆ.

ಸ್ವಗುಣಂ ಭಕ್ಷಯಂತ್ಯೇತೇ ಗುಣವಂತಃ ಶುಭಾಶುಭಾನ್ ।
ಅಹಂ ತು ನಿರ್ಗುಣೋಽತ್ರೇತಿ ಸಪ್ತೈತೇ ಮೋಕ್ಷಹೇತವಃ ॥೮॥

ಈ ಏಳು ಕರ್ತೃಹೇತುಗಳು ಇಂದ್ರಿಯಗುಣವುಳ್ಳವುಗಳು. ಇವುಗಳು ಶುಭಾಶುಭಗಳಿಂದ ಕೂಡಿರುವ ತಮ್ಮ ತಮ್ಮ ಗುಣಗಳನ್ನು ಅನುಭವಿಸುತ್ತವೆ. ಕರಣ ಹೇತು, ಕರ್ಮಹೇತು, ಕರ್ತೃಹೇತು ಇವುಗಳ ಮಧ್ಯದಲ್ಲಿ ಅಹಂ ಶಬ್ದವಾಚ್ಯನಾದ ಜೀವನು ಉಪದೇಶಕನಾದ, ಆಶಾರಹಿತನಾದ, ಬ್ರಾಹ್ಮಣನಾದ ನನ್ನಂತೆ ಯಾವಾಗ ವಿರಕ್ತನಾಗಿರುತ್ತಾನೋ ಆಗ ಈ ಏಳು ಹೇತುಗಳು ಮೋಕ್ಷಕ್ಕೆ ಕಾರಣವಾಗುತ್ತವೆ.

ವಿದುಷಾಂ ಬುಧ್ಯಮಾನಾನಾಂ ಸ್ವಂ ಸ್ವಂ ಸ್ಥಾನಂ ಯಥಾವಿಧಿ ।
ಗುಣಾಸ್ತೇ ದೇವತಾ ಭೂತ್ವಾ ಸತತಂ ಭುಂಜತೇ ಹವಿಃ ॥೯॥

ವಿದ್ವಾಂಸರಿಗೆ ಈ ಗುಣಗಳೇ ದೇವತಾಸ್ವರೂಪವಾಗಿ ಹವಿಸ್ಸನ್ನು ಸೇವಿಸುತ್ತವೆ ಎಂಬ ಜ್ಞಾನವಿದೆ. ಇವುಗಳಿಗೆ ಅಭಿಮಾನಿಗಳಾದ ದೇವತೆಗಳು ಗುಣಪ್ರವರ್ತಕರಾಗಿ ನಾನಾ ಗುಣಗಳನ್ನು ಆಸ್ವಾದಿಸುವುದರಿಂದ ಉಂಟಾದ ಸುಖವೆಂಬ ಹವಿಷ್ಯವನ್ನು ನಿರಂತರವೂ ಸ್ವೀಕರಿಸುತ್ತಾರೆ.

ಅದನ್ ಹ್ಯವಿದ್ವಾನನ್ನಾನಿ ಮಮತ್ವೇನೋಪಹನ್ಯತೇ ।
ಆತ್ಮಾರ್ಥೇ ಪಾಚಯನ್ನಿತ್ಯಂ ಮಮತ್ವೇನೋಪಹನ್ಯತೇ ॥೧೦॥

ಯಾವನು ಈ ಏಳು ಕರಣಗಳ ಮೂಲಕ ಆಹಾರವನ್ನು ಸ್ವೀಕರಿಸುವಾಗ ಅವುಗಳಲ್ಲಿನ ಯಜ್ಞಾನುಸಂಧಾನವನ್ನು ಮಾಡದೆ ಮಮಕಾರದಿಂದಲೇ ಅನ್ನವನ್ನು ತಿನ್ನುತ್ತಾನೋ, ಆ ತಿಂದ ಅನ್ನವೇ ಅವನನ್ನು ಕೊಲ್ಲುತ್ತದೆ. ಯಾವನು ಸ್ವಾರ್ಥಕ್ಕೋಸ್ಕರ ಅಡುಗೆ ಮಾಡಿ ನನಗೆಂದು ಊಟ ಮಾಡುತ್ತಾನೋ ಅವನು ತಿನ್ನುವ ಅನ್ನವೇ ಪಾಪರೂಪವಾಗಿ ಅವನನ್ನು ಕೊಲ್ಲುತ್ತದೆ.

ಅಭಕ್ಷ್ಯಭಕ್ಷಣಂ ಚೈವ ಅನ್ನಪಾನಂ ಚ ಹಂತಿ ತಮ್ ।
ಸ ಚಾನ್ನಂ ಹಂತಿ ತಚ್ಚಾನ್ನಂ ಸ ಬುಧ್ವಾ ಹನ್ಯತೇ ಬುಧಃ ॥೧೧॥

ತಿನ್ನಬಾರದ್ದನ್ನು ತಿನ್ನುವುದು, (ಮದ್ಯಪಾನ ಮಾಡುವುದು), ಅಭಕ್ಷ್ಯವಾದ ಅನ್ನ-ಪಾನಗಳಲ್ಲಿ ರತನಾಗಿದ್ದಾಗ ಆ ಅಭಕ್ಷ್ಯಭಕ್ಷಣವೇ ಅವನನ್ನು ಕೊಲ್ಲುತ್ತದೆ. ಆದ್ದರಿಂದ ಮೊದಲು ಅನ್ನವನ್ನು ತಿಂದು ಅದನ್ನು ವಿನಾಶಗೊಳಿಸುತ್ತಾನೆ, ಅನ್ನವು ವ್ಯಸನಿಯಾದ ಅವನನ್ನು ಕೊಲ್ಲುತ್ತದೆ.

ಮಾದ್ಯಮನ್ನಮದನ್ ವಿದ್ವಾನ್ ಪುನರ್ಜನಯತೀಶ್ವರಃ ।
ಸ ಚಾನ್ನಾಜ್ಜಾಯತೇ ತಸ್ಮಿನ್ ಸೂಕ್ಷ್ಮೋ ನಾಮ ವ್ಯತಿಕ್ರಮಃ ॥೧೨॥

ಸಂತೋಷಕರವಾದ ಜ್ಞಾನಿಗಳಿಗೆ ಕೊಡಲ್ಪಟ್ಟ ಅನ್ನವು ಪರಮಾತ್ಮನಿಗೆ ಕೊಟ್ಟ ಅನ್ನದಂತೆ. ಪರಮಾತ್ಮನು ಜ್ಞಾನಿಗೆ ಅನ್ನ ಕೊಟ್ಟಾಗ ಪುನಃ ಪುನಃ ಅನ್ನವನ್ನು ಅಭಿವೃದ್ಧಿಗೊಳಿಸುತ್ತಾನೆ. ಅನ್ನವನ್ನು ಅಕ್ಷಯ ಮಾಡಿಸುತ್ತಾನೆ. ಆ ಜ್ಞಾನಿಯು ತಿನ್ನಲ್ಪಟ್ಟ ಅನ್ನದಿಂದ ಬಾಹ್ಯವಾದ ದೇಹದ ಸಂಬಂಧವನ್ನೇ ಪರಿಹರಿಸಿಕೊಳ್ಳುತ್ತಾನೆ. ತುತ್ತು-ತುತ್ತಿಗೂ ಭಗವಂತನ ನಾಮಸಂಕೀರ್ತನೆಯನ್ನು ಮಾಡುತ್ತಾ ಅನ್ನವನ್ನು ತಿಂದಾಗ ಸಮಸ್ತ ದುರಿತಗಳು ನಾಶವಾಗುತ್ತವೆ. ಹೀಗಾಗಿ ತಿಂದ ಅನ್ನವೇ ಯಜ್ಞರೂಪವಾಗಿ ಬಂಧಕವಾದ ದೇಹಗಳನ್ನು ನಾಶ ಮಾಡುತ್ತದೆ. ನಂತರ ಜ್ಞಾನಿಯಾದ ಆ ವ್ಯಕ್ತಿಯು ಪರಮಾತ್ಮನ ದೆಸೆಯಿಂದ ಉತ್ತಮ ಯೋನಿಗಳಲ್ಲಿ ಉತ್ಪತ್ತಿಯನ್ನು ಪಡೆಯುತ್ತಾನೆ.

ಮನಸಾ ಮನ್ಯತೇ ಯಚ್ಚ ಯಚ್ಚ ಬುದ್ಧ್ಯಾ ನಿರುದ್ಧ್ಯತೇ ।
ಶ್ರೋತ್ರೇಣ ಶ್ರೂಯತೇ ಯಚ್ಚ ಚಕ್ಷುಷಾ ಯಚ್ಚ ದೃಶ್ಯತೇ ॥೧೩॥

ಸ್ಪರ್ಶೇನ ಸ್ಪೃಶ್ಯತೇ ಯಚ್ಚ ಘ್ರಾಣೇನ ಘ್ರಾಯತೇ ಚ ಯತ್ ॥೧೪॥

ಮನಃ ಷಷ್ಠಾನಿ ಸಂಯಮ್ಯ ಹವೀಂಷ್ಯೇತಾನಿ ಸರ್ವಶಃ ।
ಗುಣವಿತ್ ಪಾವಕೋ ಮಹ್ಯಂ ದೀಪ್ಯತೇ ಹವ್ಯವಾಹನಃ ॥೧೫॥

ಮನಸ್ಸಿನಿಂದ ಯಾವುದು ಮನನ ಮಾಡಲ್ಪಡುತ್ತದೋ, ಮಾತಿನಿಂದ ಯಾವುದು ಹೇಳಲ್ಪಡುವುದೋ, ಕಿವಿಯಿಂದ ಯಾವುದು ಕೇಳಲ್ಪಡುವುದೋ, ಕಣ್ಣಿನಿಂದ ಯಾವುದನ್ನು ನೋಡುತ್ತೇವೋ, ತ್ವಕ್‌ನಿಂದ ಯಾವುದನ್ನು ಮುಟ್ಟುತ್ತೇವೋ, ಮೂಗಿನಿಂದ ಯಾವುದನ್ನು ಮೂಸುತ್ತೇವೋ ಇವೆಲ್ಲವೂ ಆರನೆಯದ್ದಾದ ಮನಸ್ಸಿನ ಮೂಲಕ ಇಂದ್ರಿಯವ್ಯಾಪಾರಗಳನ್ನು ಪರಮಾತ್ಮನಿಗೆ ಹವಿಷ್ಯರೂಪವಾಗಿ ಶರೀರದ ಮಧ್ಯದಲ್ಲಿರುವ ಅಗ್ನಿಯಲ್ಲಿ ಹೋಮ ಮಾಡಬೇಕು. ಇಂದ್ರಿಯದ ಮೂಲಕ ಅನುಭವಿಸುವ ವಿಷಯ ಸುಖಗಳನ್ನು ಪರಮಾತ್ಮನಿಗೆ ಸಮರ್ಪಿಸಬೇಕು. ಪರಮಾತ್ಮನ ಸ್ವಾತಂತ್ರ್ಯವೆಂಬ ಗುಣವನ್ನು ತಿಳಿದು ಸತ್ಕರ್ಮಗಳನ್ನು ಮಾಡುವ ಜ್ಞಾನಿಯು ಅಗ್ನಿದೇವನಂತೆ ಬೆಳಗುತ್ತಾನೆ.

ಯೋಗಯಜ್ಞಃ ಪ್ರವೃತ್ತೋ ಮೇ ಜ್ಞಾನಬ್ರಹ್ಮಮನೋಭವಃ ॥೧೬॥

ಪ್ರೀತಿಪಾತ್ರಳೇ, ಯೋಗರೂಪವಾದ ನನ್ನ ಯಜ್ಞದ ಅನುಷ್ಠಾನವು ಜ್ಞಾನದಾಯಕ ಆಗಿರುವುದರಿಂದಲೇ ಮನನದಿಂದ ಉತ್ಪತ್ತಿಯನ್ನು ಪಡೆದಿದೆ. ಯೋಗಯಜ್ಞವು ಜ್ಞಾನರೂಪವಾದ ಅಗ್ನಿಯನ್ನು ಪ್ರಕಾಶಗೊಳಿಸುತ್ತದೆ.

ಪ್ರಾಣಸ್ತೋತ್ರೋಽಪಾನಶಸ್ತ್ರಃ ಸರ್ವತ್ಯಾಗಸು ದಕ್ಷಿಣಃ ।
ಕರ್ತಾಽನುಮಂತಾ ಬ್ರಹ್ಮಾತ್ಮಾ ಕರ್ತಾಽಧ್ವರ್ಯುಃ ಕೃತಸ್ತುತಿಃ ॥೧೭॥

ಕೃತಃ ಪ್ರಶಸ್ತಾ ತಚ್ಛಸ್ತ್ರಮಪವರ್ಗೋಽಸ್ಯ ದಕ್ಷಿಣಾ ॥೧೮॥

ಈ ಯಜ್ಞದಲ್ಲಿ ಪ್ರಾಣವೇ ಸ್ತೋತ್ರವಾಗಿದೆ, ಅಪಾನವೇ ಶಸ್ತ್ರವಾಗಿದೆ, ಸರ್ವ ಪರಿತ್ಯಾಗವೇ ದಕ್ಷಿಣೆಯಾಗಿದೆ. ಕರ್ತಾ, ಅನುಮಂತಾ ಎಂದರೆ ಯೋಗಯಜ್ಞವನ್ನು ಮಾಡುವ ನನಗೆ ಸರ್ವಕರ್ತನಾದ ವಿಷ್ಣುವೇ ನಿಯಾಮಕನಾಗಿದ್ದಾನೆ. 'ಓಶ್ರಾವಯ, ಅಸ್ತು, ಶ್ರೌಷಟ್, ವಾಯುಮುಪಬ್ರೂಹಿ, ವಿಷ್ಣುಮುಪಬ್ರೂಹಿ' ಇತ್ಯಾದಿ ಮಂತ್ರಗಳಿಂದ ಅನುಮತಿಯನ್ನು ನೀಡುವ ಋತ್ವಿಗ್ವಿಶೇಷನು ಕರ್ತೃವಾದ ನಾರಾಯಣನೇ ಆಗಿದ್ದಾನೆ. ಬ್ರಹ್ಮನೆಂಬ ಋತ್ವಿಕ್ ಕೂಡ ಸರ್ವಕರ್ತೃವಾದ ನಾರಾಯಣನೇ ಆಗಿದ್ದಾನೆ. ಅಧ್ವರ್ಯುಗಳಲ್ಲಿ ಕರ್ಮವನ್ನು ಮಾಡುವವನು

ನಾರಾಯಣನೇ ಆಗಿದ್ದಾನೆ. 'ಕೃತಸ್ತುತಿಃ' ಯಾರಿಂದ ಭಗವಂತನು ಸ್ತುತಿಸಿಕೊಳ್ಳಲ್ಪಡುತ್ತಾನೋ ಅಂತಹ ಉದ್ಗಾತೃವೂ ಕೂಡ ನಾರಾಯಣನೇ ಆಗಿದ್ದಾನೆ. ಮಾಡಿದ ಕರ್ಮವನ್ನು ಉತ್ಕೃಷ್ಟವಾಗಿ ಶಾಸನ ಮಾಡುವ ಆಚಾರ್ಯಪುರುಷನು ನಾರಾಯಣನೇ ಆಗಿದ್ದಾನೆ. ಕರ್ಮಮೀಮಾಂಸಾಶಾಸ್ತ್ರವು ನಾರಾಯಣನೇ ಆಗಿದ್ದಾನೆ. ಯೋಗಯಜ್ಞಫಲೀಭೂತವಾದ ಮೋಕ್ಷವು ನಾರಾಯಣನೇ ಆಗಿದ್ದಾನೆ. ಯಜ್ಞದ ದಕ್ಷಿಣೆಯೂ ಕೂಡ ನಾರಾಯಣನೇ ಆಗಿದ್ದಾನೆ. ಎಂದರೆ ಎಲ್ಲವೂ ನಾರಾಯಣನ ಅಧೀನವಾಗಿಯೇ ಇದೆ ಎಂದರ್ಥ.

ಋಚಶ್ಚಾಪ್ಯತ್ರ ಶಂಸಂತಿ ನಾರಾಯಣವಿದೋ ಜನಾಃ ।
ನಾರಾಯಣಾಯ ದೇವಾಯ ಯದಬಧ್ನಂ ಪಶುಂ ಪುರಾ ॥೧೯॥

ಯೋಗಯಜ್ಞದಲ್ಲಿ ಎಲ್ಲ ಮಂತ್ರಗಳಿಂದಲೂ ನಾರಾಯಣನನ್ನು ಚೆನ್ನಾಗಿ ತಿಳಿದ ಜ್ಞಾನಿಗಳು ಪ್ರಶಂಸೆ ಮಾಡುತ್ತಾರೆ. 'ಅಬಧ್ನನ್ ಪುರುಷಂ ಪಶುಮ್' ಮುಂತಾದ ಯಾವ ಋಕ್‌ಗಳಿವೆಯೋ ಅವುಗಳಿಂದ ನಾರಾಯಣನಾದ ಪರಮಾತ್ಮನಿಗೋಸ್ಕರ ಹಿಂದೆ ಪುರುಷ ಎಂಬ ಪಶುವನ್ನು ಬಂಧ ಮಾಡಿದವು.

ತತ್ರ ಸಾಮಾನಿ ಗಾಯಂತಿ ತಾನಿ ಚಾಹುರ್ನಿದರ್ಶನಮ್ ।
ದೇವಂ ನಾರಾಯಣಂ ಭೀರು ಸರ್ವಾತ್ಮಾನಂ ನಿಬೋಧ ಮೇ ॥೨೦॥

ಭಗವತ್ಪ್ರಾಪ್ತಿಯಾದ ಬಳಿಕ ಪೂರ್ಣತೆಯನ್ನು ಪಡೆದ ಸಾಮಗಾನವನ್ನು ಮಾಡುತ್ತಾರೆ. ಈ ಸಾಮಗಾನವು ನಾರಾಯಣ ಜ್ಞಾನಕ್ಕೆ ನಿದರ್ಶನವಾಗಿದೆ. ಎಲೌ ಬ್ರಾಹ್ಮಣಿಯೇ, ನೀನೂ ಕೂಡ ಸರ್ವಸ್ವಾಮಿಯಾದ ನಾರಾಯಣನನ್ನೇ ನನ್ನ ಅಂತರ್ಯಾಮಿಯಾಗಿದ್ದಾನೆ, ನನ್ನ ಮನಸ್ಸಿನಲ್ಲಿದ್ದಾನೆ ಎಂದು ತಿಳಿದುಕೊ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು
ಚತುರ್ಹೋತ್ರವಿಧಾನಕಥನಂ ನಾಮ ಷಡ್‌ವಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಏಕಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಚತುರ್ಮುಖ ಬ್ರಹ್ಮನಿಂದ ಒಂದೇ ಶಬ್ದದಿಂದ ಪರಬ್ರಹ್ಮನನ್ನು ಉಪದೇಶಿಸಲಾಗಿ ದೇವರ್ಷಿ ಮೊದಲಾದ ಸಾಧಕರಿಗೆ ತಮ್ಮ ತಮ್ಮ ಯೋಗ್ಯತೆಗನುಗುಣವಾಗಿ ಬೇರೆ ಬೇರೆ ಅರ್ಥಗಳಿಂದ ತಿಳಿಯಲ್ಪಟ್ಟನು ಎಂಬ ವಿಚಾರವು ಬ್ರಾಹ್ಮಣದಂಪತಿಗಳ ಸಂವಾದದ ಮೂಲಕ ಉಪದೇಶಿಸಿದುದು.

ಬ್ರಾಹ್ಮಣಃ

ಏಕಃಶಾಸ್ತಾ ನ ದ್ವಿತೀಯೋಽಸ್ತಿ ಶಾಸ್ತಾ
ಯೋ ಹೃಚ್ಛಯಸ್ತಮಹಮನು ಬ್ರವೀಮಿ ।
ತೇನೈವ ಯುಕ್ತಃ ಪ್ರವಣಾದಿವೋದಕಂ
ಯಥಾ ನಿಯುಕ್ತೋಽಸ್ಮಿ ತಥಾ ವಹಾಮಿ ॥೧॥

ಬ್ರಾಹ್ಮಣ– ಪ್ರಿಯಳೇ, ಈ ಸಮಸ್ತ ಜಗತ್ತಿಗೆ ಒಬ್ಬನೇ ನಿಯಾಮಕನು. ಎರಡನೆಯ ನಿಯಾಮಕನು ಇಲ್ಲ. ಎಲ್ಲರ ಹೃದಯದಲ್ಲಿ ಸನ್ನಿಹಿತನಾಗಿರುವ ಆ ಪರಮಾತ್ಮನನ್ನೇ ನಿಯಾಮಕನೆಂದು ಹೇಳುತ್ತೇನೆ. ತಗ್ಗಾದ ಪ್ರದೇಶಕ್ಕೆ ಗುಡ್ಡದಿಂದ ನೀರು ಹರಿದು ಬರಲು ಹವಣಿಸುವಂತೆ ಪರಮಾತ್ಮನ ಗುಣಚಿಂತನೆಯಲ್ಲಿಯೇ ನನ್ನ ಮನಸ್ಸು ಹವಣಿಸುತ್ತಿದೆ. ಅವನು ಹೇಗೆ ನನ್ನನ್ನು ನಿಯಮಿಸುತ್ತಾನೋ ಹಾಗೆ ನಡೆದುಕೊಳ್ಳುತ್ತೇನೆ.

ಏಕೋ ಗುರುರ್ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮನು ಪ್ರಬ್ರವೀಮಿ ।
ಯೇನಾನುಶಿಷ್ಟಾ ಗುರುಣಾ ಸದೈವ
ಪುರಾ ಹತಾ ದಾನವಾಃ ಸರ್ವ ಏವ ॥೨॥

ಜಗತ್ತಿಗೆ ಅವನೊಬ್ಬನೇ ಗುರು. ಎರಡನೆಯ ಗುರುವೇ ಇಲ್ಲ. ಯಾವ ಭಗವಂತನು ಸಮಸ್ತ ಜೀವರ ಹೃದಯಗುಹೆಯಲ್ಲಿ ನೆಲೆಸಿರುವನೋ ಆ ನಾರಾಯಣನನ್ನೇ ಅನುಸರಿಸಿ ಪ್ರವಚನವನ್ನು ಮಾಡುತ್ತೇನೆ. ಆ ಭಗವಂತನಿಂದಲೇ ಎಲ್ಲ ದಾನವರು ಪರಾಜಿತರಾಗಿದ್ದಾರೆ. ಅವನ ಶಾಸನವು ಅಷ್ಟು ಪ್ರಬಲವಾದುದು.

ಏಕೋ ಬಂಧುರ್ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನು ಬ್ರವೀಮಿ ।
ತೇನಾನುಶಿಷ್ಟಾ ಬಾಂಧವಾ ಬಂಧುಮಂತಃ
ಸಪ್ತರ್ಷಯಶ್ಚೈವ ದಿವಿ ಪ್ರಭಾಂತಿ ॥೩॥

ನಾರಾಯಣನೇ ನಮಗೆಲ್ಲ ಬಂಧುವು. ಅವನಿಗಿಂತ ಮಿಗಿಲಾದ ಇನ್ನೊಬ್ಬ ಬಂಧುವು ಇರುವುದಿಲ್ಲ. ಯಾವ ನಾರಾಯಣನು ಎಲ್ಲ ಪ್ರಾಣಿಗಳ ಹೃದಯ ಗುಹೆಯಲ್ಲಿಯೂ ಸನ್ನಿಹಿತನಾಗಿರುವನೋ ಅವನನ್ನೇ ಬಂಧುವೆಂದು ಹೇಳುತ್ತೇನೆ. ಅವನ ಸಂಕಲ್ಪದಿಂದಲೇ ಬಂಧು-ಬಾಂಧವರು ಒದಗಿ ಬರುತ್ತಾರೆ. ಅವನ ಉಪದೇಶವನ್ನು ಪಡೆದು ಸಪ್ತರ್ಷಿಗಳು ಉತ್ಕೃಷ್ಟವಾದ ಸ್ಥಾನವನ್ನು ಪಡೆದು ಆಕಾಶದಲ್ಲಿ ಬೆಳಗುತ್ತಿದ್ದಾರೆ.

ಏಕಃ ಶ್ರೋತಾ ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನು ಬ್ರವೀಮಿ ।
ತಸ್ಮಿನ್ ಗುರೌ ಗುರುವಾಸಂ ನಿರೂಪ್ಯ
ಶಕ್ರೋ ಗತಃ ಸರ್ವಲೋಕಾಮರತ್ವಮ್ ॥೪॥

ಜಗತ್ತಿನಲ್ಲಿ ಕೇಳುವವನೂ ಅವನೇ, ಎರಡನೆಯವನಲ್ಲ. ಸಮಸ್ತ ಪ್ರಾಣಿಗಳ ಹೃದಯದಲ್ಲಿ ಯಾವ ಶ್ರೀಹರಿಯನ್ನು ನೆಲೆಸಿದ್ದಾನೋ ಅವನನ್ನೇ ಶ್ರೋತ್ರವೆಂದು ಕರೆಯುತ್ತೇನೆ. ಇಂದ್ರನು ಹೃದಯಸ್ಥನಾದ ಶ್ರೀಹರಿಯನ್ನೇ ಗುರುವನ್ನಾಗಿ ಸ್ವೀಕರಿಸಿ ಗುರುಕುಲವಾಸವನ್ನು ನಿಯಮಬದ್ಧವಾಗಿ ಪೂರೈಸಿ, ಶ್ರೀಹರಿಯನ್ನೇ ಶರಣು ಹೊಂದಿದನು. ಅದರಿಂದ ಇಂದ್ರದೇವನು ಸುರರಾಜನಾಗಿ ಅಮರತ್ವವನ್ನು ಹೊಂದಿದನು.

ಏಕೋ ದ್ವೇಷ್ಟಾ ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನು ಬ್ರವೀಮಿ ।
ತೇನಾನುಶಿಷ್ಟಾ ಗುರುಣಾ ಸದೈವ
ಲೋಕೇ ದ್ವಿಷ್ಟಾಃ ಪನ್ನಗಾಃ ಸರ್ವ ಏವ ॥೫॥

ಲೋಕದಲ್ಲಿ ದುಷ್ಟರಿಗೆ ಶತ್ರುವಾಗಿ ಇರುವವನೂ ಅವನೊಬ್ಬನೇ. ಯಾವ ಹರಿಯು ಎಲ್ಲ ಜೀವರ ಹೃದಯದಲ್ಲಿ ನೆಲೆಸಿದ್ದಾನೋ ಆ ಪರಮಾತ್ಮನನ್ನೇ ನಾನು ದುಷ್ಟರ ಪಾಲಿನ ಶತ್ರುವೆಂದು ಭಾವಿಸಿದ್ದೇನೆ. ಶ್ರೀಹರಿಯ ಆದೇಶಕ್ಕನುಸಾರವಾಗಿಯೇ ಜಗತ್ತಿನ ಸರ್ಪಗಳೆಲ್ಲವೂ ಮತ್ತೊಬ್ಬರನ್ನು ಕಚ್ಚುವ ದ್ವೇಷವನ್ನು ಹೊಂದಿವೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪ್ರಜಾಪತೇಃ ಪನ್ನಗಾನಾಂ ದೇವರ್ಷೀಣಾಂ ಚ ಸಂವಿದಮ್ ॥೬॥

ಸೌಭಾಗ್ಯಶೀಲಳೇ, ಈ ವಿಷಯದಲ್ಲಿ ಚತುರ್ಮುಖ ಬ್ರಹ್ಮನಿಗೂ ಸರ್ಪಗಳಿಗೂ ಮತ್ತು ನಾರದರಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ಬಲ್ಲವರು ಹೇಳುತ್ತಾರೆ, ಕೇಳಿಸಿಕೊ.

ದೇವರ್ಷಯಶ್ಚ ನಾಗಾಶ್ಚಾಪ್ಯಸುರಾಶ್ಚ ಪ್ರಜಾಪತಿಮ್ ।
ಪರ್ಯಪೃಚ್ಛನ್ನುಪಾಸೀನಾಃ ಶ್ರೇಯೋ ನಃ ಪ್ರೋಚ್ಯತಾಮಿತಿ ॥೭॥

ಒಮ್ಮೆ ದೇವತೆಗಳು, ಋಷಿಗಳು, ನಾಗಗಳು, ಅಸುರರು ಚತುರ್ಮುಖ ಬ್ರಹ್ಮನ ಬಳಿಯಲ್ಲಿ ಕುಳಿತು ತಮ್ಮ ಶ್ರೇಯಸ್ಸಿನ ಬಗ್ಗೆ ತಿಳಿಸಬೇಕೆಂದು ಪ್ರಾರ್ಥಿಸಿದರು.

ತೇಷಾಂ ಪ್ರೋವಾಚ ಭಗವಾನ್ ಶ್ರೇಯಃ ಸಮನುಪೃಚ್ಛತಾಮ್ ।
ಓಮಿತ್ಯೇಕಾಕ್ಷರಂ ಬ್ರಹ್ಮ ತೇ ಶ್ರುತ್ವಾ ಪ್ರಾದ್ರವನ್ ದಿಶಃ ॥೮॥

ಅವರಿಗೆ ಪೂಜ್ಯನಾದ ಚತುರ್ಮುಖ ಬ್ರಹ್ಮನು ಶ್ರೀಹರಿಯ ಸ್ವರೂಪವೆನಿಸಿದ 'ಓಂ' ಎಂಬ ಒಂದು ಅಕ್ಷರವನ್ನು ಉಪದೇಶಿಸಿದನು. ಆ ಒಂದು ಅಕ್ಷರದ ಉಪದೇಶವನ್ನು ಪಡೆದ ಅವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು.

ತೇಷಾಂ ಪ್ರದ್ರವತಾಮೇವ ಉಪದೇಶಾರ್ಥಮಾತ್ಮನಃ ।
ಸರ್ಪಾಣಾಂ ದಂಶನೇ ಭಾವಃ ಪ್ರವೃತ್ತಃ ಪೂರ್ವಮೇವ ತು ॥೯॥

ಹೀಗೆ ಅವರು ತಮ್ಮ ಸ್ಥಾನಗಳಿಗೆ ಹೋಗುತ್ತಿರುವಾಗ ಪ್ರತಿಯೊಬ್ಬರೂ ಬ್ರಹ್ಮದೇವರ ಓಂಕಾರದ ಉಪದೇಶದ ಅರ್ಥವನ್ನು ಚಿಂತಿಸತೊಡಗಿದರು. ಓಂ ಎಂದರೆ ಅಂಗೀಕಾರ ಎಂದೂ ಅರ್ಥ. ಬ್ರಹ್ಮನು ಹೇಳುವ ಓಂಕಾರಕ್ಕೆ ಮೊದಲೇ ಕಚ್ಚುವ ಸ್ವಭಾವವುಳ್ಳ

ಸರ್ಪಗಳು ನಾವು ಇನ್ನೊಬ್ಬರನ್ನು ಕಚ್ಚಬೇಕು ಎಂದು ತಿಳಿದು ಆ ಪ್ರವೃತ್ತಿಯಲ್ಲಿಯೇ ನಿರತವಾದವು.

ಅಸುರಾಣಾಂ ಪ್ರವೃತ್ತಸ್ತು ದರ್ಪೋ ಭಾವಃ ಸ್ವಭಾವಜಃ ।
ದಾನಂ ದೇವಾ ವ್ಯವಸಿತಾ ದಮಮೇವ ಮಹರ್ಷಯಃ ॥೧೦॥

ಅಸುರರು ತಮ್ಮ ಸ್ವಭಾವಕ್ಕನುಗುಣವಾದ ಅಹಂಕಾರದ ಪ್ರವೃತ್ತಿಯಲ್ಲಿ ತೊಡಗಬೇಕೆಂದು ಓಂಕಾರದ ಅರ್ಥವೆಂದು ಭಾವಿಸಿದರು. ದೇವತೆಗಳು ದಾನ ಮಾಡುವ ಬುದ್ಧಿಯಲ್ಲಿ ಪ್ರವೃತ್ತಿಯನ್ನು ಹೊಂದಬೇಕೆಂದು ಭಾವಿಸಿದರು. ಮಹರ್ಷಿಗಳು ಇಂದ್ರಿಯನಿಗ್ರಹವನ್ನು ಸಾಧಿಸಿಕೊಳ್ಳಬೇಕೆಂದು ಅರ್ಥೈಸಿಕೊಂಡರು. ಹೀಗೆ ತಮ್ಮ ತಮ್ಮ ಸ್ವಭಾವಕ್ಕನುಗುಣವಾಗಿ ಬ್ರಹ್ಮನ ಉಪದೇಶವನ್ನು ಅರ್ಥೈಸಿಕೊಂಡರು.

ಏಕಂ ವಕ್ತಾರಮಾಸಾದ್ಯ ಶಬ್ದೇನೈಕೇನ ಸತ್ಕೃತಾಃ ।
ಏವಂ ಧರ್ಮಂ ವ್ಯವಸಿತಾಃ ಸರ್ವೇ ದೇವರ್ಷಿದಾನವಾಃ ॥೧೧॥

ಉಪದೇಶಿಸಿದವನು ಒಬ್ಬನೇ ಗುರುವಾಗಿದ್ದರೂ ಒಂದೇ ಶಬ್ದವಾಗಿದ್ದರೂ ಅವರವರ ಸ್ವಭಾವಕ್ಕೆ ಅನುಗುಣವಾಗಿ ನಾನಾ ವಿಧವಾದ ಭಾವನೆಗಳನ್ನು ಅಳವಡಿಸಿಕೊಂಡರು. ಗುರುವು ಒಬ್ಬನೇ ಆಗಿದ್ದರೂ, ಮಂತ್ರವು ಒಂದೇ ವಿಧವಾಗಿದ್ದರೂ, ಆಯಾ ಅಧಿಕಾರಿಗಳ ಸ್ವಭಾವವು ವಿಭಿನ್ನವಾಗಿರುವುದರಿಂದ ಅವರ ಪ್ರವೃತ್ತಿಗಳೂ, ಅವರಿಗೆ ದೊರಕುವ ಫಲಗಳೂ ವೈಚಿತ್ರ್ಯದಿಂದಲೇ ಕೂಡಿರುತ್ತವೆ.

ಶೃಣೋತ್ಯಯಂ ಪ್ರೋಚ್ಯಮಾನಂ ಗೃಹ್ಣಾತಿ ಚ ಯಥಾತಥಮ್ ।
ಪೃಚ್ಛತಸ್ತಾವತೋ ಭೂಯೋ ಗುರೋರನ್ಯೋಽನುಮನ್ಯತೇ ॥೧೨॥

ಯೋಗ್ಯನಾದ ಶಿಷ್ಯನು ಗುರುವಿನಿಂದ ಉಪದೇಶ ಮಾಡಿದ ಅಭಿಪ್ರಾಯವನ್ನು ಯಥಾರ್ಥವಾಗಿ ಸ್ವೀಕರಿಸುತ್ತಾನೆ. ತನಗೆ ಎಷ್ಟು ಅರ್ಥಗಳ ಅಪೇಕ್ಷೆ ಇದೆಯೋ ಅಷ್ಟನ್ನು ಗುರುವಿನ ಮೂಲಕ ಸ್ವೀಕರಿಸುತ್ತಾನೆ. ಈ ಗುರು-ಶಿಷ್ಯರ ಸಂವಾದವನ್ನು ಕೇಳಿಸಿಕೊಂಡ ಒಬ್ಬ ತಟಸ್ಥ ವ್ಯಕ್ತಿಯು ಶ್ರದ್ಧಾವಂತನಾಗಿದ್ದಲ್ಲಿ ಯೋಗ್ಯವಾದ ಆ ವಿಚಾರವನ್ನು ಅನುಷ್ಠಾನಕ್ಕೆ ತರುತ್ತಾನೆ.

ತಸ್ಯ ಚಾನುಮತೇ ಕರ್ಮ ತತಃ ಪಶ್ಚಾತ್ ಪ್ರವರ್ತತೇ ।
ಗುರುರ್ಬಂಧುಶ್ಚ ಶತ್ರುಶ್ಚ ದ್ವೇಷ್ಟಾ ಚ ಹೃದಿ ಸಂಸ್ಥಿತಃ ॥೧೩॥

ಗುರುವಾದವನು ಶಿಷ್ಯನಿಗೆ ಕರ್ತವ್ಯಗಳನ್ನು ಮಾಡಲು ಉಪದೇಶಿಸುತ್ತಾನೆ. ಶಿಷ್ಯನು ಅದರಂತೆ ಕಾರ್ಯಪ್ರವೃತ್ತನಾಗುತ್ತಾನೆ. ಹೀಗೆ ಪ್ರತಿಯೊಬ್ಬರ ಹೃದಯದಲ್ಲಿ ಉಪದೇಶಕನಾಗಿರುವ ಭಗವಂತನೇ ಗುರುವಾಗಿದ್ದಾನೆ, ಬಂಧುವಾಗಿದ್ದಾನೆ, ಅನಾದಿಯಾದ ಕಾಮ-ಕ್ರೋಧಾದಿಗಳಿಗೆ ಶತ್ರುವಾಗಿದ್ದಾನೆ, ಕಲ್ಯಾದಿಗಳಿಗೆ ದ್ವೇಷಿಯಾಗಿದ್ದಾನೆ. ಆದ್ದರಿಂದ ಹೃದಿಸ್ಥನಾದ ಶ್ರೀಹರಿಯೇ ಮುಖ್ಯಗುರುವಾಗಿದ್ದಾನೆ. ಉಳಿದೆಲ್ಲ ಗುರುಗಳು ಅಮುಖ್ಯ ಗುರುಗಳು ಎನಿಸಿದ್ದಾರೆ.

ಪಾಪೇನ ವಿಚರನ್ ಲೋಕೇ ಪಾಪಚಾರೀ ಭವತ್ಯಯಮ್ ।
ಶುಭೇನ ವಿಚರನ್ ಲೋಕೇ ಶುಭಚಾರೀ ಭವತ್ಯುತ ॥೧೪॥

ಪ್ರಪಂಚದಲ್ಲಿ ಯಾವ ಪುರುಷನು ಪಾಪವನ್ನಾಚರಿಸುತ್ತಾ ಸಂಚರಿಸುತ್ತಾನೆಯೋ ಅವನು ಪಾಪಚಾರಿ ಎನಿಸುತ್ತಾನೆ. ಪುಣ್ಯಕರ್ಮಗಳನ್ನೇ ಆಚರಿಸುವವನು ಶುಭಚಾರಿ ಎನಿಸುತ್ತಾನೆ.

ಕಾಮಚಾರೀ ತು ಕಾಮೇನ ಯ ಇಂದ್ರಿಯಸುಖೇ ರತಃ ।
ವ್ರತಚಾರೀ ಸದೈವೈಷ ಯ ಇಂದ್ರಿಯಜಯೇ ರತಃ ॥೧೫॥

ಹೀಗೆಯೇ ಅನೇಕ ಕಾಮನೆಗಳ ಮೂಲಕ ಇಂದ್ರಿಯಸುಖವನ್ನೇ ಬಯಸುವ ವ್ಯಕ್ತಿಯು ಕಾಮಚಾರಿ ಎಂದೂ, ಇಂದ್ರಿಯ ಜಯದಲ್ಲಿ ಆಸಕ್ತನಾದ ವ್ಯಕ್ತಿಯು ವ್ರತಚಾರಿ ಎಂದೂ ಕರೆಸಿಕೊಳ್ಳುತ್ತಾನೆ.

ಅಪೇತವ್ರತಕರ್ಮಾ ತು ಕೇವಲಂ ಬ್ರಹ್ಮಣಿ ಸ್ಥಿತಃ ।
ಬ್ರಹ್ಮಭೂತಶ್ಚರನ್ ಲೋಕೇ ಬ್ರಹ್ಮಚಾರೀ ಭವತ್ಯಯಮ್ ॥೧೬॥

ಯಾವನು ವ್ರತ ಮತ್ತು ಕರ್ಮಗಳನ್ನು ಭಗವಂತನಲ್ಲಿಯೇ ಸಮರ್ಪಣ ಬುದ್ಧಿಯಿಂದ ಆಚರಿಸುತ್ತಾರೋ, ಭಗವನ್ನಿಷ್ಠರಾಗಿ ಸಂಚರಿಸುತ್ತಾರೋ ಅವನು ಬ್ರಹ್ಮಚಾರಿ ಎನಿಸಿಕೊಳ್ಳುತ್ತಾನೆ.

ಬ್ರಹ್ಮೈವ ಸಮಿಧಸ್ತಸ್ಯ ಬ್ರಹ್ಮಾಗ್ನಿರ್ಬ್ರಹ್ಮಸಂಸ್ತರಃ ।
ಆಪೋ ಬ್ರಹ್ಮ ಗುರುರ್ಬ್ರಹ್ಮ ಸ ಬ್ರಹ್ಮಣಿ ಸಮಾಹಿತಃ ॥೧೭॥

ಜ್ಞಾನಯಜ್ಞರತನಾದ ಸಾಧಕನಿಗೆ ಬ್ರಹ್ಮನೇ ಸಮಿತ್ತಾಗಿರುತ್ತಾನೆ, ಬ್ರಹ್ಮನೇ ಅಗ್ನಿಯಾಗಿರುತ್ತಾನೆ, ಸಂಸ್ತರಣವೂ ಬ್ರಹ್ಮನೇ ಆಗಿರುತ್ತಾನೆ. ಬ್ರಹ್ಮನೇ ಯಜ್ಞಕ್ಕೆ ಯೋಗ್ಯವಾದ ನೀರು ಆಗಿರುತ್ತಾನೆ. ಎಲ್ಲವೂ ಬ್ರಹ್ಮನೇ ಆಗಿದ್ದಾನೆ. ಆ ಸಾಧಕನ ಮನಸ್ಸು ಬ್ರಹ್ಮನಲ್ಲಿಯೇ ಆಸಕ್ತವಾಗಿರುತ್ತದೆ.

ಏತದೇವೇದೃಶಂ ಸೂಕ್ಷ್ಮಂ ಬ್ರಹ್ಮಚರ್ಯಂ ವಿದುರ್ಬುಧಾಃ ।
ವಿದಿತ್ವಾ ಚಾನ್ವಪದ್ಯಂತ ಕ್ಷೇತ್ರಜ್ಞೇನಾನುದರ್ಶಿನಾ ॥೧೮॥

ಜ್ಞಾನಿಗಳಾದವರು ಸೂಕ್ಷ್ಮವಾದ ಬ್ರಹ್ಮಚರ್ಯವು ಇದೇ ಆಗಿದೆ ಎಂದು ತಿಳಿದಿದ್ದಾರೆ. ಇಂತಹ ಸೂಕ್ಷ್ಮವಾದ ಬ್ರಹ್ಮಚರ್ಯಜ್ಞಾನವನ್ನು ತಿಳಿದುಕೊಂಡು ಸರ್ವಜ್ಞನಾದ ಭಗವಂತನಿಂದ ಪ್ರೇರಿತನಾಗಿ, ಬಾಹ್ಯವಾದ ವ್ಯಾಪಾರಗಳಲ್ಲಿ ಪ್ರವೃತ್ತಿಯನ್ನು ಹೊಂದುತ್ತಾರೆ. ಆದ್ದರಿಂದಲೇ ಬ್ರಹ್ಮಯಜ್ಞದಲ್ಲಿ ಅಧಿಕಾರಿಗಳು ಆಗಿರುತ್ತಾರೆ. ಅವನ ಪ್ರೇರಣೆಯಿಲ್ಲದೆ ಯಾವುದೂ ನಡೆಯಲು ಸಾಧ್ಯವಿಲ್ಲ. ಈ ರೀತಿಯಾಗಿ ಆಂತರಬ್ರಹ್ಮಯಜ್ಞದಲ್ಲಿ ಆಸಕ್ತನಾಗಿರುವ ನನಗೆ ಯಾವ ಯಜ್ಞದಲ್ಲಿಯೂ ಆಸಕ್ತಿಯಿಲ್ಲ ಎಂದು ನೀನು ಭಾವಿಸಬೇಡ. ಅದು ನಿನ್ನ ಭ್ರಮೆ ಎನಿಸುತ್ತದೆ ಎಂದು ಬ್ರಾಹ್ಮಣನು ತನ್ನ ಹೆಂಡತಿಯನ್ನು ಕುರಿತು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು

ಬ್ರಹ್ಮಪನ್ನಗದೇವರ್ಷಿಸಂವಾದೋ ನಾಮ ಸಪ್ತವಿಂಶೋಧ್ಯಾಯಃ ॥

॥ ಅನುಗೀತಾಪರ್ವಣಿ ದ್ವಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಕೃಷ್ಣನು ಅರ್ಜುನನನ್ನು ಕುರಿತು ವಿದ್ಯಾಬ್ರಹ್ಮರಿಗೆ ಅರಣ್ಯತ್ವವನ್ನು ನಿರೂಪಣೆ ಮಾಡುವ ಬ್ರಾಹ್ಮಣ ದಂಪತಿಗಳ ಸಂವಾದವನ್ನು ಅನುವಾದಿಸಿದುದು.

ಬ್ರಾಹ್ಮಣಃ

ಸಂಕಲ್ಪದಂಶಮಶಕಂ ಶೋಕಹರ್ಷಹಿಮಾತಪಮ್ ।
ಮೋಹಾಂಧಕಾರತಿಮಿರಂ ಲೋಭವ್ಯಾಧಿಸರೀಸೃಪಮ್ ॥೧॥

ವಿಷಯೈಕಾಂತ್ಯಕಾಧ್ವಾನಂ ಕಾಮಕ್ರೋಧವಿರೋಧಕಮ್ ।
ತದತೀತ್ಯ ಮಹಾದುರ್ಗಂ ಪ್ರವಿಷ್ಟೋಽಸ್ಮಿ ಮಹದ್ವನಮ್ ॥೨॥

ಬ್ರಾಹ್ಮಣ– ಸುಭಗೇ, ಯಾವ ಸ್ಥಳದಲ್ಲಿ ಸಂಕಲ್ಪ ರೂಪದ ಕಾಡು ನೊಣಗಳು, ಸೊಳ್ಳೆಗಳು ಅಧಿಕವಾಗಿವೆಯೋ, ಶೋಕ-ಹರ್ಷ ಎಂಬ ಛಳಿ ಮತ್ತು ಬಿಸಿಲುಗಳಿವೆಯೋ, ಮೋಹ-ಅಂಧಕಾರವೆಂಬ ಕತ್ತಲೆಯು ಕವಿದಿದೆಯೋ, ಲೋಭ-ವ್ಯಾಧಿಗಳೆಂಬ ಸರ್ಪಗಳು ಸಂಚರಿಸುತ್ತಿವೆಯೋ ವಿಷಯಗಳೆಂಬ ಪ್ರತಿಬಂಧಕವಾದ ಮಾರ್ಗಗಳಿಂದ ಕೂಡಿದೆಯೋ, ಕಾಮ-ಕ್ರೋಧಗಳೆಂಬ ಕೆಟ್ಟ ವೈರಿಗಳಿಂದ ಕೂಡಿದ ಮಾರ್ಗವು ಎದುರಾಗಿದೆಯೋ ಇಂತಹ ಕಷ್ಟಕರವಾದ ದುರ್ಗಮವಾದ ಸಂಸಾರರೂಪವಾದ ಅರಣ್ಯವನ್ನು ದಾಟಿ ನಾನು ಮಹಾವಸ್ತುವನ್ನು ಪ್ರವೇಶಿಸಿದ್ದೇನೆ.

ಬ್ರಾಹ್ಮಣೀ

ಕ್ವ ತದ್ ವನಂ ಮಹಾಪ್ರಾಜ್ಞ ಕೇ ವೃಕ್ಷಾಃ ಸರಿತಶ್ಚ ಕಾಃ ।
ಕಿಯಂತಃ ಪರ್ವತಾಶ್ಚೈವ ಕಿಯತ್ಯಧ್ವನಿ ತದ್ವನಮ್ ॥೩॥

ಬ್ರಾಹ್ಮಣೀ– ಪ್ರಾಜ್ಞನೇ, ನೀನು ಹೇಳಿದ ಆ ವನ ಎಲ್ಲಿದೆ? ಎಷ್ಟು ದೂರವಾಗಿದೆ? ವೃಕ್ಷಗಳು ಯಾವುವು? ನದಿ-ಗಿರಿ-ಪರ್ವತಗಳು ಎಲ್ಲಿವೆ? ಇವುಗಳನ್ನು ತಿಳಿಸು.

ಬ್ರಾಹ್ಮಣಃ

ನೈತದಸ್ತಿ ಪೃಥಗ್ಭಾವೇ ಮಂದಸ್ಯ ಚ ತತಃ ಸುಖಮ್ ॥೪॥

ನ ತದಸ್ತ್ಯಪೃಥಗ್ಭಾವೇ ಕಿಂಚಿದ್ ದೂರತರಂ ತತಃ ।
ತಸ್ಮಾದ್ ಹ್ರಸ್ವತರಂ ನಾಸ್ತಿ ನ ತತೋಽನ್ಯದ್ ಬೃಹತ್ತರಮ್ ॥೫॥

ನಾಸ್ತಿ ತಸ್ಮಾದ್ ದುಃಖಿತರಂ ನಾನ್ಯನ್ಯತ್ ತತ್ಸಮಂ ಸುಖಿಮ್ ॥೬॥

ಬ್ರಾಹ್ಮಣ– ಬ್ರಾಹ್ಮಣೇ, ಮೋಕ್ಷವೆಂಬ ಈ ವನವು ಜೀವ-ಬ್ರಹ್ಮರಿಗೆ ಭೇದವನ್ನು ಅಂಗೀಕರಿಸಿದ ವ್ಯಕ್ತಿಗೂ ಅವನು ದಡ್ಡನಾಗಿದ್ದಲ್ಲಿ ದೊರೆಯುವುದಿಲ್ಲ. ಮಂದನಾದವನ ಬುದ್ಧಿಯು ಭೇದದಲ್ಲಿ ಸ್ಥಿರವಾಗಿರುವುದಿಲ್ಲವಾದ್ದರಿಂದ ಆ ಮಧ್ಯಮ ಜೀವನಿಗೆ ಅರ್ಥಾತ್ ನಿತ್ಯಸಂಸಾರಿಗೆ ಮೋಕ್ಷವು ದೊರೆಯುವುದಿಲ್ಲ. ಯಾರು ಜೀವರಲ್ಲಿ ಐಕ್ಯವನ್ನು ಅಂಗೀಕರಿಸಿದ್ದಾರೋ ಅವರಿಗಂತೂ ಮೋಕ್ಷವು ಬಹಳ ದೂರ. ಅಂತಹ ಜೀವರು ಅಧಮರಾಗಿರುವುದರಿಂದ ಅವರಿಗೆ ಅಂಧಂತಮಸ್ಸೇ ಗತಿ. ಅಂಧಂತಮಸ್ಸಿಗೂ ವೈಕುಂಠಕ್ಕೂ ಬಹಳ ಅಂತರವಿದೆ. ಆದ್ದರಿಂದಲೇ ಬಹಳ ದೂರ. ಅದಕ್ಕಿಂತಲೂ ಮಧ್ಯಮ ಜೀವನು ಸ್ವರ್ಗ-ನರಕ-ಭೂಮಿಗಳಲ್ಲಿ ಸಂಚರಿಸುವುದರಿಂದ ಸ್ವಲ್ಪ ದೂರದಲ್ಲಿದ್ದಾನೆ ಎಂದು ಹೇಳಬಹುದು. 'ಅಣೋರಣೀಯಾನ್ಮಹತೋ ಮಹೀಯಾನ್' ಎಂಬ ಶ್ರುತಿಯಂತೆ ಭಗವಂತನಿಗಿಂತ ಅಣುವಾದ ವ್ಯಕ್ತಿ, ಬೃಹತ್ತಾದ ವ್ಯಕ್ತಿಯು ಇರುವುದಿಲ್ಲ. ಶ್ರೀಹರಿಯು ಭಕ್ತರನ್ನು ದುಃಖದಿಂದ ದಾಟಿಸುವಂತೆ ದುಃಖದಿಂದ ಪಾರು ಮಾಡುವ ವ್ಯಕ್ತಿಯು ಇರುವುದಿಲ್ಲ. ಅವನು ಸುಖ ನೀಡುವಂತೆ ಸುಖ ನೀಡುವ ವ್ಯಕ್ತಿಗಳು ಇರುವುದಿಲ್ಲ.

ನ ತತ್ರಾವಿಶ್ಯ ಶೋಚಂತಿ ನ ಪ್ರಹೃಷ್ಯಂತಿ ಚ ದ್ವಿಜಾಃ ।
ನ ಚ ಬಿಭ್ಯತಿ ಕೇಭ್ಯಶ್ಚಿನ್ನೈಭ್ಯೋ ಬಿಭ್ಯತಿ ಕೇಚನ ॥೭॥

ಆ ಪರಬ್ರಹ್ಮನಲ್ಲಿ ಆಸಕ್ತರಾದ ವ್ಯಕ್ತಿಗಳಿಗೆ ಎಂದಿಗೂ ದುಃಖವೆಂಬುದೇ ಇಲ್ಲ. ಎಂದೂ ಸಂತೋಷಪಡುವುದಿಲ್ಲ ಎಂದಿಲ್ಲ. ಎಂದೆಂದಿಗೂ ಸಂತುಷ್ಟರಾಗಿಯೇ ಇರುತ್ತಾರೆ. ಯಾವುದೇ ಪ್ರಾಣಿಗಳ ಭಯವಿರುವುದಿಲ್ಲ. ಅವರಿಂದಲೂ ಪ್ರಾಣಿಗಳಿಗೆ ಭಯವಿರುವುದಿಲ್ಲ.

ತಸ್ಮಿನ್ ವನೇ ಸಪ್ತ ಮಹಾದ್ರುಮಾ ಹಿ
ಫಲಾನಿ ಸಪ್ತಾತಿಥಯಶ್ಚ ಸಪ್ತ ।
ಸಪ್ತಾಶ್ರಮಾಃ ಸಪ್ತ ಸಮಾಧಯಶ್ಚ
ದೀಕ್ಷಾಶ್ಚ ಸಪ್ತೈತದರಣ್ಯರೂಪಮ್ ॥೮॥

ಆ ಮಹಾರಣ್ಯದಲ್ಲಿ ಏಳು ಮಹಾಮರಗಳಿದ್ದಾವೆ. ಅಗ್ನಿಷ್ಟೋಮ, ಗಾರ್ಹಪತ್ಯ, ಆಹವನೀಯ ಮುಂತಾದ ಏಳು ಕ್ರತು(ಯಜ್ಞ)ಗಳೇ ಮಹಾಮರಗಳು. ಈ ಕ್ರತುಗಳ ಮೂಲಕ ಕೃಷ್ಣಾರ್ಪಣ ಬುದ್ಧಿಯಿಂದ ಭಗವಂತನನ್ನು ಆರಾಧಿಸಿದರೆ ಆ ಮಹಾಮರಗಳು ಫಲಗಳನ್ನು ಕೊಡುತ್ತವೆ ಎಂದು ಭಾವ. ಈ ಮರದಲ್ಲಿ ಫಲಗಳು ಏಳು (ಗಂಧ, ರಸ, ರೂಪ, ಸ್ಪರ್ಶ, ಶಬ್ದ, ಮಂತ್ರ, ಬೋಧ). ಅತಿಥಿಗಳು ಏಳು (ಘ್ರಾತ, ಭಕ್ಷಯಿತ, ದ್ರಷ್ಟ, ವಕ್ತ, ಶ್ರೋತ, ಮಂತ, ಬೋದ್ಧ). ಸಪ್ತರ್ಷಿಗಳ ಆಶ್ರಮಗಳು ಇದ್ದಾವೆ. ಏಳು ದೀಕ್ಷೆಗಳಿದ್ದಾವೆ (ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಶಾಂತಿ, ಅಪೈಶುನ). ಈ ರೀತಿಯಾದ ಏಳರಿಂದ ಕೂಡಿದ ಭಗವದ್ರೂಪವಾದ ಅರಣ್ಯವು ಸಾಧಕರಿಂದ ಹೊಂದಲು ಯೋಗ್ಯವಾಗಿದೆ.

ಪಂಚ ಪರ್ವಾಣಿ ದಿವ್ಯಾನಿ ಪುಷ್ಪಾಣಿ ಚ ಫಲಾನಿ ಚ ।
ಸೃಜಂತಃ ಪಾದಪಾಸ್ತತ್ರ ವ್ಯಾಪ್ಯ ತಿಷ್ಠಂತಿ ತದ್ವನಮ್ ॥೯॥

ಭಗವಂತನೆಂಬ ಈ ಮಹಾವೃಕ್ಷವು ಪಂಚರಾತ್ರದಲ್ಲಿ ಹೇಳಲ್ಪಟ್ಟ ಪಂಚ ಪರ್ವಗಳಿಂದ ಕೂಡಿದೆ. ಪುಷ್ಪಗಳನ್ನು, ಫಲಗಳನ್ನು ಸೃಷ್ಟಿಸುತ್ತಾ ತನ್ನನ್ನು ಆಶ್ರಯಿಸಿಕೊಂಡಿರುವ ಮುಕ್ತರನ್ನು ರಕ್ಷಿಸುತ್ತಾ ವ್ಯಾಪಿಸಿದೆ.

ಸುರಭೀಣ್ಯೇವ ಪರ್ಣಾನಿ ಪುಷ್ಪಾಣಿ ಚ ಫಲಾನಿ ಚ ।
ಸೃಜಂತಃ ಪಾದಪಾಸ್ತತ್ರ ವ್ಯಾಪ್ಯ ತಿಷ್ಠಂತಿ ತದ್ವನಮ್ ॥೧೦॥

ಮುಕ್ತಿಯಲ್ಲಿ ಮಂದಾರ, ಪಾರಿಜಾತ ಮೊದಲಾದ ವೃಕ್ಷರೂಪದಲ್ಲಿ ಮುಕ್ತ ಜೀವರು ವಿಹರಿಸುತ್ತಾರೆ. ಈ ವೃಕ್ಷಗಳ ಎಲೆಗಳು, ಪುಷ್ಪಗಳು, ಫಲಗಳು ಎಲ್ಲವೂ ಪರಿಮಳ ಯುಕ್ತವಾಗಿವೆ. ಇಂತಹ ಮರಗಳಿಂದ ತುಂಬಿದ ಬೃಹದ್ವನವೇ ಮುಕ್ತಿ ಎನಿಸಿದೆ.

ಶಂಕರಾಣಿ ತ್ರಿವರ್ಣಾನಿ ಪುಷ್ಪಾಣಿ ಚ ಫಲಾನಿ ಚ ।
ಸೃಜಂತಃ ಪಾದಪಾಸ್ತತ್ರ ವ್ಯಾಪ್ಯ ತಿಷ್ಠಂತಿ ತದ್ವನಮ್ ॥೧೧॥

ಸುಖವನ್ನು ನೀಡುವ ಸುಂದರವಾದ ತ್ರಿವರ್ಣದಿಂದ ಕೂಡಿದ ಪುಷ್ಪಗಳು, ಫಲಗಳಿಂದ ತುಂಬಿರುವ ಮರಗಳು ಫಲ-ಪುಷ್ಪಗಳನ್ನು ಸೃಷ್ಟಿಸುತ್ತಾ, ಮುಕ್ತರಿಗೆ ಆನಂದವನ್ನು ಕೊಡುತ್ತಾ ವೈಕುಂಠಲೋಕದಲ್ಲಿ ತುಂಬಿಕೊಂಡಿವೆ.

ಏಕೋ ಹ್ಯಗ್ನಿಃ ಸುಮನಾ ಬ್ರಾಹ್ಮಣೋಽತ್ರ
ಸಪ್ತೇ(ಪಂಚೇ)ಂದ್ರಿಯಾಣಿ ಸಮಿಧಶ್ಚಾತ್ರ ಸಂತಿ ।
ತೇಭ್ಯೋ ಮೋಕ್ಷಾತ್ ಸಪ್ತ ಫಲಂತಿ ದೀಕ್ಷಾ
ಗುಣಾಃ ಫಲಾನ್ಯತಿಥಯಃ ಫಲಾಶಾಃ ॥೧೨॥

ಆ ಅರಣ್ಯದಲ್ಲಿ ಭಗವಂತನಿಗೆ ಸಂಬಂಧಿಸಿದ ಶ್ರೇಷ್ಠವಾದ ಒಂದೇ ಜ್ಞಾನವೆಂಬ ಅಗ್ನಿಯು ವ್ಯಾಪಾರ ಮಾಡುತ್ತವೆ. ಸ್ವರೂಪಭೂತಗಳಾದ ಏಳು ಇಂದ್ರಿಯಗಳೇ ಸಮಿತ್ತುಗಳಾಗಿರುತ್ತದೆ. ಮೋಕ್ಷ ಲಭಿಸಿದ ಬಳಿಕ ಇಂದ್ರಿಯಗಳ ಮೂಲಕ ಜ್ಞಾನಾದಿ ಗುಣಗಳು ನಾನಾ ವಿಧವಾದ ಸುಖವೆಂಬ ಫಲಗಳನ್ನು ನೀಡುತ್ತವೆ. ಆ ಸುಖಗಳನ್ನು ಅನುಭವಿಸುವ ಜೀವರು ಪರಸ್ಪರ ಅತಿಥಿಗಳಂತೆ ಭಗವಂತನೆಂಬ ಸಂತೋಷದ ವನವನ್ನು ಪ್ರವೇಶ ಮಾಡಿ, ಎಲ್ಲೆಡೆಯೂ ಸಂಚಾರ ಮಾಡುತ್ತಾರೆ. ಅಂತಹ ಭಗವಂತನೆಂಬ ವನವನ್ನು ನಾನು ಪ್ರವೇಶಿಸಿರುತ್ತೇನೆ.

ಆತಿಥ್ಯಂ ಪ್ರತಿಗೃಹ್ಣಂತಿ ತತ್ರ ಸಪ್ತ ಮಹರ್ಷಯಃ ।
ಅರ್ಚಿತೇಷು ವ್ಯತೀತೇಷು ತೇಷ್ವನ್ಯದ್ ರೋಚತೇ ವನಮ್ ॥೧೩॥

ಮೋಕ್ಷದಲ್ಲಿ ಭಗವಂತನ ರೂಪಗಳನ್ನು ಪರಸ್ಪರ ಆರಾಧಿಸುತ್ತಾರೆ. ಆಯಾ ಅಧಿಷ್ಠಾನಗಳಲ್ಲಿ ಭಗವಂತನ ಆರಾಧನೆಯು ಮುಗಿಯುತ್ತಿರಲು ಭಗವಂತನನ್ನು ಪೂಜಿಸಲು ಯೋಗ್ಯವಾದ ಇನ್ನೊಂದು ರೂಪವನ್ನು ಹೊಂದುತ್ತಾರೆ.

ಪ್ರತಿಜ್ಞಾವೃಕ್ಷಮ್ ಅಫಲಂ ಶಾಂತಿಚ್ಛಾಯಾಸಮನ್ವಿತಮ್ ।
ಜ್ಞಾನಾಶ್ರಯಂ ತೃಪ್ತಿತೋಯಂ ತಮಃ ಕ್ಷೇತ್ರಜ್ಞಭಾಸ್ಕರಮ್ ॥೧೪॥

ಯೇಽಧಿಗಚ್ಛಂತಿ ತತ್ ಸಂತಸ್ತೇಷಾಂ ನಾಸ್ತಿ ಪುನರ್ಭವಃ ।
ಊರ್ಧ್ವಂ ಚಾಧಶ್ಚ ತಿರ್ಯಕ್ ಚ ತಸ್ಯ ನಾಂತೋಽಧಿಗಮ್ಯತೇ ॥೧೫॥

ಆ ಮೋಕ್ಷವೆಂಬ ವನದಲ್ಲಿ ತಮ್ಮ ಹೃದಯದಲ್ಲಿರುವ ಬಿಂಬರೂಪವನ್ನು ಮುಕ್ತರು ಯಾವಾಗಲೂ ನೋಡುತ್ತಿರುತ್ತಾರೆ. ಆದ್ದರಿಂದಲೇ ಅವರೆಂದಿಗೂ ಸಂಸಾರವೆಂಬ ಬಂಧನಕ್ಕೆ ತುತ್ತಾಗುವುದಿಲ್ಲ. ಭಗವಂತನ ರೂಪವು ಸಂಸಾರವನ್ನು ಛೇದಿಸುವ ವೃಕ್ಷವೆನಿಸಿದೆ. ಕಾಮ್ಯಫಲಗಳ ವಿರೋಧಿ ಎನಿಸಿದೆ. ಶಾಂತಿ ಎಂಬ ನೆರಳಿನಿಂದ ಕೂಡಿದೆ.

ಜ್ಞಾನಕ್ಕೆ ಆಶ್ರಯವಾಗಿದೆ. ಪೃಥಿವಿ ಎಂಬ ನೀರನ್ನು ನೀಡುತ್ತಿದೆ. ಕತ್ತಲೆಯಿಂದ ಕುರುಡಾಗಿರುವ ಜೀವನಿಗೆ ನಿರಂತರವೂ ತತ್ತ್ವಜ್ಞಾನವನ್ನು ಉಂಟುಮಾಡುತ್ತಿದೆ. ಇಂತಹ ನಾರಾಯಣನೆಂಬ ವನವನ್ನು ಯಾರು ಪ್ರವೇಶಿಸುತ್ತಾರೋ ಅವರೇ ಸಜ್ಜನರು, ಅವರಿಗೆ ಎಂದಿಗೂ ಸಂಸಾರವಿರುವುದಿಲ್ಲ.

ಸಪ್ತ ಸ್ತ್ರಿಯಸ್ತತ್ರ ಚರಂತಿ ಸತ್ಯಾಃ
ತ್ವಾಜ್ಮುಖಾ ಭಾನುಮತ್ಯೋ ಜನಿತ್ಯಃ ।
ಊರ್ಧ್ವಂ ರಸಾನಾದದತೇ ಪ್ರಜಾಭ್ಯಃ
ಸರ್ವಾನ್ ಯಥಾ ನಿತ್ಯಮನಿತ್ಯತಾ ಚ ॥೧೬॥

ಆ ವೈಕುಂಠದಲ್ಲಿ ಕಾಲಿಂದಿ, ಮಿತ್ರವಿಂದಾ, ಭದ್ರಾ, ಲಕ್ಷಣಾ, ಜಾಂಬವತೀ, ಸತ್ಯಾ ಎಂಬ ಷಣ್ಮಹಿಷಿಯರ ಜೊತೆಯಲ್ಲಿ ಲಕ್ಷ್ಮೀದೇವಿಯು ಸೇರಿಕೊಂಡು ಏಳು ಜನ ಸ್ತ್ರೀಯರ ಜೊತೆಯಲ್ಲಿ ಭಗವಂತನು ವಿಹರಿಸುತ್ತಾನೆ. ಆ ಎಲ್ಲ ಸ್ತ್ರೀಯರು ಜಗತ್ತಿನ ತಾಯಂದಿರಾಗಿ, ಕಾಂತಿಯುಕ್ತರಾಗಿ ಲಜ್ಜೆಯಿಂದ ತಗ್ಗಿಸಿದ ಮುಖವುಳ್ಳವರಾಗಿ ಇರುತ್ತಾರೆ. ಸಸ್ತ್ರೀಕನಾದ ಭಗವಂತನಿಗೆ ಅರ್ಪಿಸಿದ ಷಡ್ರಸಗಳನ್ನು ಉತ್ಕೃಷ್ಟವಾಗುವ ರೀತಿಯಲ್ಲಿ ಸ್ವೀಕರಿಸುತ್ತಾರೆ. ಇವರೆಲ್ಲರನ್ನೂ ಮೀರಿ ಶ್ರೀಹರಿಯು ಆ ರಸಗಳನ್ನು ಸ್ವೀಕರಿಸುತ್ತಾನೆ. ಅದರ ಸ್ವಾಖ್ಯ ಸುಖಭೋಗವನ್ನು ಅನುಭವಿಸುತ್ತಾನೆ. ಇಲ್ಲಿ ಅನುಭವಿಸುವ ಸುಖಗಳೆಲ್ಲವೂ ಅನಿತ್ಯವೆನಿಸಿದರೆ, ಅಲ್ಲಿ ಅನುಭವಿಸುವ ಸುಖಗಳೆಲ್ಲವೂ ನಿತ್ಯ ಎನಿಸಿವೆ.

ತತ್ರೈವ ಪ್ರತಿತಿಷ್ಠಂತಿ ಪುನಸ್ತತ್ರೋದಯಂತಿ ಚ ।
ತೇ ಚ ಸಪ್ತರ್ಷಯಃ ಸಿದ್ಧಾ ವಸಿಷ್ಠಪ್ರಮುಖೈಸ್ತಿ ಷ್ಠಹ ॥೧೭॥

ಸಿದ್ಧಪುರುಷರು ಎನಿಸಿದ ಸಪ್ತರ್ಷಿಗಳು, ವಸಿಷ್ಠರೇ ಮೊದಲಾದವರು ಈ ಲೋಕದಲ್ಲಿಯೇ ಮುಕ್ತರಾದ ಬಳಿಕ ಸ್ಥಿರವಾಗಿ ಇರುತ್ತಾರೆ. ಇಲ್ಲಿಯೇ ಪ್ರಕಟರಾಗುತ್ತಾರೆ. ಹುಟ್ಟು-ಸಾವುಗಳಿಂದ ಮುಕ್ತರಾಗಿರುತ್ತಾರೆ.

ಯಶೋ ವರ್ಚೋ ಭಗಶ್ಚೌಜೋ ವಿಜಯಃ ಸಿದ್ಧತೇಜಸೀ ।
ಏವಮೇವಾನುವರ್ತಂತೇ ಸಪ್ತ ಜ್ಯೋತೀಂಷಿ ಭಾಸ್ಕರಮ್ ॥೧೮॥

ಅದರಂತೆ ಯಶಸ್ಸು, ಪ್ರಭೆ, ಐಶ್ವರ್ಯ, ಕಾಂತಿ, ವಿಜಯ, ಸಿದ್ಧಿ ಮತ್ತು ತೇಜಸ್ಸು - ಈ ಏಳು ಜ್ಯೋತಿಗಳು ಸೂರ್ಯಸದೃಶನಾದ ಪರಮಾತ್ಮನನ್ನು ಅನುಸರಿಸಿ ಹೋಗುತ್ತವೆ.

ಋಷಯಃ ಪರ್ವತಾಶ್ಚೈವ ಸಂತಿ ತತ್ರ ಸಮಾಸತಃ ।
ನದ್ಯಶ್ಚ ಪರ್ವತೋ ವಾರಿ ವಹಂತ್ಯೋ ಬ್ರಹ್ಮಸಂಭವಮ್ ॥೧೯॥

ಋಷಿಗಳು, ಪರ್ವತಗಳು ಆ ಲೋಕದಲ್ಲಿ ಇವೆ. ನದಿಗಳು, ಪರ್ವತಗಳು, ನೀರು ಎಲ್ಲವೂ ಬ್ರಹ್ಮನಿಂದಲೇ ಸೃಷ್ಟವಾಗಿ ಹರಿಯುತ್ತವೆ.

ನದೀನಾಂ ಸಂಗಮಸ್ತತ್ರ ವೈತಾನೇ ಸಮುಪಹ್ವರೇ ।
ಸ್ವಾತ್ಮತೃಪ್ತಾ ಯತೋ ಯಾಂತಿ ಸಾಕ್ಷಾದ್ ದಾಂತಾಃ ಪಿತಾಮಹಮ್ ॥

ಪ್ರಾಕೃತಿಕ ಲೇಪವಿಲ್ಲದ ಮುಕ್ತವಾದ ನದಿಗಳ ಸಂಚಾರ ಮೋಕ್ಷದಲ್ಲಿದೆ. ಆ ನದಿಗಳ ಹತ್ತಿರದಲ್ಲಿ ಮುಕ್ತರಾದ ಬ್ರಹ್ಮರುಗಳಿದ್ದಾರೆ. ಸ್ವಾತ್ಮತೃಪ್ತರಾದ, ಪೂರ್ಣತೆಯನ್ನು ಪಡೆದ ಮುಕ್ತಚೇತನರೆಲ್ಲರೂ ಕೂಡ ಆ ಮುಕ್ತಬ್ರಹ್ಮರುಗಳ ಬಳಿ ಸಾಗುತ್ತಾರೆ.

ಕೃಶಾಂಗಾಃ ಸುವ್ರತಾಃ ಶಾಂತಾಃ ತಪಸಾ ದಗ್ಧಕಿಲ್ಬಿಷಾಃ ।
ಆತ್ಮನ್ಯಾತ್ಮಾನಮಾವೇಶ್ಯ ಬ್ರಾಹ್ಮಣಾಸ್ತಮುಪಾಸತೇ ॥೨೧॥

ಸೂಕ್ಷ್ಮಚೇತನರಾದ, ಉತ್ತಮವ್ರತನಿಷ್ಠರಾದ, ಶಾಂತರಾದ, ತಪಸ್ಸಿನಿಂದ ಪಾಪಗಳನ್ನು ಕಳೆದುಕೊಂಡಿರುವ, ಕೃಶಕಾಯರಾದ ಸಚ್ಚೇತನರು ತಮ್ಮ ಹೃದಯದಲ್ಲಿ ಪರಮಾತ್ಮನನ್ನು ಸ್ಥಿರಗೊಳಿಸಿ ಅವನನ್ನೇ ಉಪಾಸನೆ ಮಾಡುತ್ತಾರೆ.

ಋಚಮಪ್ಯತ್ರ ಶಂಸಂತಿ ವಿದ್ಯಾರಣ್ಯವಿದೋ ಜನಾಃ ।
ತದರಣ್ಯಮಭಿಪ್ರೇತ್ಯ ಕಥಾ ಕಥಮಜಾಯತ ॥೨೨॥

ಜ್ಞಾನಸ್ವರೂಪವಾದ ಈ ಅರಣ್ಯವನ್ನು ತಿಳಿದ ಜನರು ವೇದದ ಸ್ತೋತ್ರಗಳನ್ನು ಪಠಣ ಮಾಡುತ್ತಿರುತ್ತಾರೆ. ಈ ಅರಣ್ಯವನ್ನು ಉದ್ದೇಶವಾಗಿಟ್ಟುಕೊಂಡೇ ಸಮಸ್ತ ವೇದ- ಪುರಾಣ-ಇತಿಹಾಸಗಳು ಪ್ರವೃತ್ತವಾಗಿವೆ.

ಏತದೇವೇದೃಶಂ ದಿವ್ಯಮರಣ್ಯಂ ಬ್ರಾಹ್ಮಣಾ ವಿದುಃ ।
ವಿದಿತ್ವಾ ಚಾನುತಿಷ್ಠಂತಿ ಕ್ಷೇತ್ರಜ್ಞೇನಾನುದರ್ಶಿನಾ ॥೨೩॥

ಇಂತಹ ದಿವ್ಯವಾದ, ಪವಿತ್ರವಾದ ಅರಣ್ಯವನ್ನು ಬ್ರಹ್ಮಜ್ಞಾನಿಗಳು ಅರಿತಿರುತ್ತಾರೆ. ಈ ಬ್ರಹ್ಮವನವನ್ನು ಯಥಾರ್ಥವಾಗಿ ತಿಳಿದುಕೊಂಡು, ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲು ಶಮ-ದಮಾದಿಗಳ ಅನುಷ್ಠಾನವನ್ನು ಮಾಡುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು
ಸಂಸಾರವರ್ಣನಂ ನಾಮ ಅಷ್ಟಾವಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ಕೃಷ್ಣನು ಅರ್ಜುನನನ್ನು ಕುರಿತು ಯಾಗೀಯ ಹಿಂಸೆಯು ಅಧರ್ಮವಾಗುವುದಿಲ್ಲ ಎಂದು ಪ್ರತಿಪಾದಿಸಲು ಅಧ್ವರ್ಯು ಮತ್ತು ಯತಿ ಎಂಬ ವ್ಯಕ್ತಿಗಳಿಗೆ ನಡೆದ ಸಂವಾದವನ್ನು ಅನುವಾದಿಸುತ್ತಾನೆ.

ಬ್ರಾಹ್ಮಣಃ

ಗಂಧಾನ್ ನ ಜಿಘ್ರಾಮಿ ರಸಾನ್ ನ ವೇದ್ಮಿ
ರೂಪಂ ನ ಪಶ್ಯಾಮಿ ನ ಚ ಸ್ಪೃಶಾಮಿ ।
ನ ಚಾಪಿ ಶಬ್ದಾನ್ ವಿವಿಧಾನ್ ಶೃಣೋಮಿ
ನ ಚಾಪಿ ಸಂಕಲ್ಪಮುಪೈಮಿ ಕಂಚಿತ್ ॥೧॥

ಬ್ರಾಹ್ಮಣ– ನಾನು ಗಂಧವನ್ನು ಆಘ್ರಾಣಿಸುವುದಿಲ್ಲ. ರಸವನ್ನು ಆಸ್ವಾದಿಸುವುದಿಲ್ಲ. ರೂಪಗಳನ್ನು ನೋಡುವುದಿಲ್ಲ. ಪದಾರ್ಥಗಳನ್ನು ಮುಟ್ಟುವುದಿಲ್ಲ. ಶಬ್ದಗಳ ಬಗ್ಗೆ ಆಸಕ್ತನಾಗಿಲ್ಲ. ಯಾವುದೇ ವಿಧವಾದ ಸಂಕಲ್ಪವನ್ನೂ ಮಾಡುವುದಿಲ್ಲ.

ಅರ್ಥಾನಿಷ್ಟಾನ್ ಕಾಮಯತೇ ಸ್ವಭಾವಃ
ಸರ್ವಾನ್ ದ್ವೇಷ್ಯಾನ್ ದ್ವೇಷ್ಟಿ ಚೈವ ಸ್ವಭಾವಃ ।
ಕಾಮದ್ವೇಷಾವುದ್ಭವತಃ ಸ್ವಭಾವಾತ್
ಪ್ರಾಣಾಪಾನೌ ಜಂತುದೇಹಾದಿವೈತ್ಯ ॥೨॥

ನಮ್ಮ ನಮ್ಮ ಸ್ವಭಾವಗಳೇ ಇಷ್ಟವಾದ ಪದಾರ್ಥಗಳನ್ನು ಬಯಸುತ್ತವೆ. ಸ್ವಭಾವವೇ ಯಾವುದನ್ನು ದ್ವೇಷಿಸಬೇಕೋ ಅದನ್ನು ದ್ವೇಷಿಸುತ್ತದೆ. ಪ್ರಾಣಾಪಾನಗಳು ಸ್ವಾಭಾವಿಕವಾಗಿಯೇ ದೇಹದಲ್ಲಿದ್ದು ಪಚನಾದಿ ಕ್ರಿಯೆಗಳನ್ನು ಮಾಡುತ್ತವೆ. ರಾಗ-ದ್ವೇಷಗಳು ಸ್ವಭಾವದಿಂದಲೇ ಹುಟ್ಟುತ್ತವೆ.

ತೇಭ್ಯಶ್ಚಾನ್ಯಾಂಸ್ತೇಷ್ವನನ್ಯಾಂಶ್ಚ ಭಾವಾನ್
ಭೂತಾತ್ಮಾನಂ ಲಕ್ಷಯೇಽಹಂ ಶರೀರೇ ।
ತಸ್ಮಿಂಸ್ತಿಷ್ಠನ್ ನಾಸ್ತಿ ಶಕ್ತಃ ಕಥಂಚಿತ್
ಕಾಮಕ್ರೋಧಾಭ್ಯಾಂ ಜರಯಾ ಮೃತ್ಯುನಾ ಚ ॥೩॥

ಆ ಪ್ರಾಣಾಪಾನಾದಿಗಳಿಗಿಂತ ಬೇರೆಯಾದ ಪಂಚಭೂತಗಳು, ಅವುಗಳಲ್ಲಿ ಬೇರೆಯಾದ ಪಂಚತನ್ಮಾತ್ರೆಗಳು, ಇವುಗಳೆಲ್ಲದಕ್ಕೂ ನಿಯಾಮಕನಾದ ಪರಮಾತ್ಮ ಈ ಶರೀರದಲ್ಲಿ ಸನ್ನಿಹಿತರಾಗಿದ್ದಾರೆ. ನಾನು ಈ ಶರೀರದಲ್ಲಿ ಎಲ್ಲದಕ್ಕೂ ನಿಯಾಮಕನಾದ ಪರಮಾತ್ಮನನ್ನೇ ನೋಡುತ್ತಿದ್ದೇನೆ. ಆದ್ದರಿಂದ ನನ್ನ ಈ ಶರೀರದಲ್ಲಿ ಉತ್ಪನ್ನವಾಗುವ ಆಯಾ ಮನೋವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದರೂ ಅವುಗಳ ವಿಕಾರಗಳಿಗೆ ನಾನು ತುತ್ತಾಗುತ್ತಿಲ್ಲ. ಕಾಮ-ಕ್ರೋಧಗಳಿಗಾಗಲಿ, ಜರಾ-ಮರಣಗಳಿಗಾಗಲಿ ತುತ್ತಾಗಿರುವುದಿಲ್ಲ.

ಅನಿಶ್ಚಿತಶ್ಚೈವ ಹಿ ಸರ್ವಕಾಮಾನ್
ಅವಿದ್ವಿಷಾಣಸ್ಯ ಚ ಸರ್ವದೋಷಾನ್ ।
ನ ಮೇ ಸ್ವಭಾವೇಷು ಭವಂತಿ ಲೇಪಾಃ
ತೋಯಸ್ಯ ಬಿಂದೋರಿವ ಪುಷ್ಕರೇಷು ॥೪॥

ಯಾವುದೇ ಕಾಮನ ಪದಾರ್ಥಗಳನ್ನು ಕಾಮಿಸದಿರುವ, ದ್ವೇಷ್ಯವಸ್ತುಗಳನ್ನು ದ್ವೇಷಿಸದಿರುವ ನನ್ನ ಸ್ವಭಾವವು ಅಸಂಗವಾಗಿದೆ. ಕಮಲದ ಎಲೆಗಳಲ್ಲಿ ನೀರಿನ ಕಣಗಳು ಲಿಪ್ತವಾಗದಿರುವಂತೆ ಯಾವ ವಿಧವಾದ ದೋಷಗಳು ನನ್ನ ಮನಸ್ಸಿನಲ್ಲಿ ಅಂಟಿರುವುದಿಲ್ಲ.

ನಿರಸ್ಯ ಚೈತಸ್ಯ ಭವಂತಿ ನಿತ್ಯಾ
ನಿರೀಕ್ಷಮಾಣಸ್ಯ ಬಹುಸ್ವಭಾವಾನ್ ।

ನ ಸಜ್ಜತೇ ಕರ್ಮಸು ಭೋಗಜಾಲಂ
ದಿವೀವ ಸೂರ್ಯಸ್ಯ ಮಯೂಖಿಜಾಲಮ್ ॥೫॥

ಎಲ್ಲ ಜೀವರೂ ಒಂದು ಬಾರಿ ವಿಷಯಪದಾರ್ಥಗಳನ್ನು ಮನಸ್ಸಿನಿಂದ ನಿರಾಕರಿಸಿ ಇದ್ದರೂ ವಿಷಯಪದಾರ್ಥಗಳು ಪುನಃ ಪುನಃ ಮನಸ್ಸನ್ನು ಮುತ್ತಿ ಪೀಡಿಸುತ್ತಿರುತ್ತವೆ. ಆದರೆ ಪರಬ್ರಹ್ಮನಲ್ಲಿ ನೆಟ್ಟ ಮನಸ್ಸುಳ್ಳ ನನಗೆ ಬಹುಸ್ವಭಾವಗಳನ್ನು ನೋಡುತ್ತಿದ್ದರೂ ವಿಷಯಪದಾರ್ಥಗಳ ಆಸಕ್ತಿಯು ಹುಟ್ಟುತ್ತಿಲ್ಲ. ಆಕಾಶದಲ್ಲಿ ಸೂರ್ಯನ ಕಿರಣಗಳ ಸಮುದಾಯವು ಸೂರ್ಯನನ್ನು ಹೇಗೆ ಲೇಪಗೊಳಿಸಲು ಸಮರ್ಥವಾಗುವುದಿಲ್ಲವೋ ಹಾಗೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅಧ್ವರ್ಯುಯತಿಸಂವಾದಂ ತಂ ನಿಬೋಧ ಯಶಸ್ವಿನಿ ॥೬॥

ಯಶಸ್ವಿನಿಯೇ, ಈ ವಿಷಯದಲ್ಲಿ ಅಧ್ವರ್ಯು ಮತ್ತು ಯತಿ ಇವರಿಗೆ ನಡೆದ ಸಂವಾದವನ್ನು ವಿದ್ವಾಂಸರು ಹೇಳುತ್ತಾರೆ. ಅದನ್ನು ವಿವರಿಸುತ್ತೇನೆ, ಕೇಳು.

ಪ್ರೋಕ್ಷ್ಯಮಾಣಂ ಪಶುಂ ದೃಷ್ಟ್ವಾ ಯಜ್ಞಕರ್ಮಣ್ಯಥಾಬ್ರವೀತ್ ।
ಯತಿರಧ್ವರ್ಯುಮಾಸೀನೋ ಹಿಂಸೇಯಮಿತಿ ಕುತ್ಸಯನ್ ॥೭॥

ಒಂದು ಯಜ್ಞದಲ್ಲಿ ಯಜ್ಞಪಶುವನ್ನು ವಧಿಸುತ್ತಿರುವುದನ್ನು ಕಂಡು ಅಲ್ಲಿಯೇ ಕುಳಿತಿದ್ದ ಯತಿಯು ಆ ಕಾರ್ಯವನ್ನು ಧಿಕ್ಕರಿಸುತ್ತಾನೆ. ಇದು ಹಿಂಸಾಕರ್ಮವಾಗಿದೆ, ಇದನ್ನು ಮಾಡಬಾರದು ಎಂದು ಹೇಳುತ್ತಾನೆ.

ತಮಧ್ವರ್ಯುಃ ಪ್ರತ್ಯುವಾಚ ನಾಯಂ ಛಾಗೋ ವಿನಶ್ಯತಿ ।
ಶ್ರೇಯಸಾ ಯೋಕ್ಷ್ಯತೇ ಜಂತುಃ ಯಜ್ಞಸ್ತುತಿರಿಯಂ ತಥಾ ॥೮॥

ಅದಕ್ಕೆ ಅಧ್ವರ್ಯುವು ಉತ್ತರಿಸುತ್ತಾನೆ. ಈ ಯಜ್ಞದಲ್ಲಿ ವಧಿಸುವ ಈ ಪಶುವು ಆಡು ವಿನಾಶವನ್ನು ಹೊಂದುವುದಿಲ್ಲ. ವೇದವಾಕ್ಯಗಳು ಸತ್ಯವಾದರೆ ಈ ಪ್ರಾಣಿಯು ಶ್ರೇಯಸ್ಸನ್ನೇ ಹೊಂದುತ್ತದೆ.

ವ್ಯಾಖ್ಯಾನ ವಿಶೇಷ– 'ಪಶುರ್ವೈ ನಿಯಾಮಾನಃ ಸ ಮೃತ್ಯುಂ ಪ್ರಾಪಷ್ಯತ್ ಸ ದೇವಾನ್ನಾಸ್ಕಾಮಯತ ಏತು ತಂ ದೇವಾ ಅಬ್ರುವನ್ ಏಹಿ ಸ್ವರ್ಗಂ ವೈ ತ್ವಾ ಲೋಕಂ ಗಮಿಶ್ಯಾಮಃ' (೫-೭-೮೦).

ಯೋ ಹ್ಯಸ್ಯ ಪಾರ್ಥಿವೋ ಭಾವಃ ಪೃಥಿವೀಂ ಸ ಗಮಿಷ್ಯತಿ ।
ಯದಸ್ಯ ವಾರಿಜಂ ಕಿಂಚಿದ್ ಅಪಸ್ತತ್ ಪ್ರತಿಪದ್ಯತೇ ॥೯॥

ಯಜ್ಞದಲ್ಲಿ ಖಂಡಿತವಾದ ಪ್ರಾಣಿಯ ಶರೀರದ ಪಾರ್ಥಿವಭಾಗವು ಭೂಮಿಯಲ್ಲಿ ಸೇರಿ ಹೋಗುತ್ತದೆ. ಈ ಶರೀರದಲ್ಲಿರುವ ನೀರಿನ ಭಾಗವು ನೀರಿನಲ್ಲಿ ಸೇರಿಹೋಗುತ್ತದೆ.

ಸೂರ್ಯಂ ಚಕ್ಷುರ್ದಿಶಂ ಶ್ರೋತ್ರೇ ಪ್ರಾಣೋಽಸ್ಯ ದಿವಮೇವ ಚ ।
ಆಗಮೇ ವರ್ತಮಾನಸ್ಯ ನ ಮೇ ದೋಷೋಽಸ್ತಿ ಕಶ್ಚನ ॥೧೦॥

ಈ ಪ್ರಾಣಿಯ ಕಣ್ಣುಗಳು ಸೂರ್ಯನಲ್ಲಿಯೇ, ಕಿವಿಗಳು ದಿಕ್ಕುಗಳಲ್ಲಿಯೂ, ಪ್ರಾಣಗಳು ಅಂತರಿಕ್ಷದಲ್ಲಿಯೂ ಲೀನವಾಗುತ್ತವೆ. ಶಾಸ್ತ್ರೀಯವಾದ ವ್ಯವಹಾರದಲ್ಲಿ ರತನಾದ ನನಗೆ ಇದರಿಂದ ಯಾವ ದೋಷಗಳೂ ಬರುವುದಿಲ್ಲ.

ಯತಿಃ

ಪ್ರಾಣೈರ್ವಿಯೋಗೇ ಚ್ಛಾಗಸ್ಯ ಯದಿ ಶ್ರೇಯಃ ಪ್ರಪಶ್ಯತಿ ।
ಛಾಗಾರ್ಥೇ ವರ್ತತೇ ಯಜ್ಞೋ ಭವತಃ ಕಿಂ ಪ್ರಯೋಜನಮ್ ॥೧೧॥

ಯತಿ– ಅಧ್ವರ್ಯುವೇ, ನೀನು ಈ ಆಡಿನ ಪ್ರಾಣಗಳ ವಿಯೋಗದ ಜೊತೆಗೆ ಆಡಿಗೆ ಶ್ರೇಯಸ್ಸುಂಟಾಗುವುದನ್ನು ನೋಡುತ್ತಿರುವಿಯಾದರೆ ಆ ಶ್ರೇಯಸ್ಸು ಆಡಿಗೆ ಉಂಟಾಯಿತು. ಇದರಿಂದ ನಿನಗೇನು ಪ್ರಯೋಜನವಾಯಿತು?

ಅನು ತ್ವಾಂ ಮನ್ಯತೇ ಮಾತಾ ಅನು ತ್ವಾಂ ಮನ್ಯತೇ ಪಿತಾ ।
ಮಂತ್ರಮಸ್ಯೈವಮುನ್ನೀಯ ಪರವಂತಂ ವಿಶೇಷತಃ ॥೧೨॥

ಆಗಮೋಕ್ತ ವಿಧಿಯಲ್ಲಿ ವರ್ತಿಸುವುದಾದಲ್ಲಿ ಪಶುವಿನ ವಿಷಯದಲ್ಲಿ ಹೇಳುವ ಮಂತ್ರದಂತೆ ವರ್ತಿಸಬೇಕು. **'ಅನ್ವೇವಂ ಮಾತಾ ಅನುಮನ್ಯತ ಅನುಪಿತಾ ಅನುಭ್ರಾತಾ ಸಗರ್ಭ್ಯೋ ಅನುಸಖಾ ಸಯೂಥ್ಯಃ'**. ಈ ಮಂತ್ರದಲ್ಲಿ ಪಶುವೇ ಈ ಯಜ್ಞಕಾರ್ಯಕ್ಕೆ ನಿನ್ನ ತಾಯಿ, ತಂದೆ, ಅಣ್ಣ, ತಮ್ಮ, ಸ್ನೇಹಿತ, ಸಂಗಡಿಗರು ಎಲ್ಲರೂ ಅನುಮೋದನೆಯನ್ನು ನೀಡಲಿ ಎಂದರ್ಥ. ಈ ಶ್ರುತಿಗೆ ಅನುಗುಣವಾಗಿ ಇದಕ್ಕೂ ಒಬ್ಬ ನಾಥನಿದ್ದಾನೆ ಎಂದು ಅರ್ಥವಾಗುತ್ತದೆ. ಆದ್ದರಿಂದ ವಿಶೇಷವಾಗಿ ಈ ಮಂತ್ರೋಚ್ಚಾರಣೆಯನ್ನು ಮಾಡಿ ಹನನಕ್ಕೆ ಅನುಮತಿಯನ್ನು ಪಡೆದುಕೊಳ್ಳಬೇಕು. ಇಲ್ಲವಾದಲ್ಲಿ ಪಶುಹಿಂಸೆಯು ದೋಷವಾಗಿಯೇ ತೀರುವುದು.

ಯ ಏವಮನುಮನ್ಯೇರನ್ ತಾನ್ ಭವಾನ್ ಪ್ರಷ್ಟುಮರ್ಹತಿ ।
ತೇಷಾಮನುಮತಿಂ ಶ್ರುತ್ವಾ ಶಕ್ಯಾ ಕರ್ತುಂ ವಿಚಾರಣಾ ॥೧೩॥

ನೀನು ಪಶುವಿನ ಸಂಬಂಧಿಗಳನ್ನು ಪ್ರಾರ್ಥಿಸಿ, ಅವರು ಅನುಮತಿಯನ್ನು ನೀಡಿದ ಬಳಿಕ ಯಜ್ಞದಲ್ಲಿ ಹನನ ಮಾಡುವ ವಿಚಾರವನ್ನು ಮಾಡಬಹುದು.

ಅಧ್ವರ್ಯುಃ

ಪ್ರಾಣಾ ಅಪ್ಯಸ್ಯ ಚ್ಛಾಗಸ್ಯ ಪ್ರಾಪಿತಾಸ್ತೇ ಸ್ವಯೋನಿಷು ।
ಶರೀರಂ ಕೇವಲಂ ಶಿಷ್ಟಂ ನಿಶ್ಚೇಷ್ಟಮಿತಿ ಮೇ ಮತಿಃ ॥೧೪॥

ಅಧ್ವರ್ಯು– 'ಸೂರ್ಯಂ ತೇ ಚಕ್ಷುರ್ಗಮಯತಾ ವಾತಂ ಪ್ರಾಣಮನ್ವವ ಸೃಜತಾತ್' ಎಂಬ ಮಂತ್ರವನ್ನು ಉಚ್ಚಾರಣೆ ಮಾಡಿ, ತ್ಯಾಗವನ್ನು ಅಭಿಮಂತ್ರಿಸಿ ಅವುಗಳ ಇಂದ್ರಿಯಗಳನ್ನು ಆಯಾ ಲೋಕಕ್ಕೆ ಕಳುಸಿರುವಿಯಾದಲ್ಲಿ ದುಷ್ಕರ್ಮದಿಂದ ಆಡು ಆಗಿ ಹುಟ್ಟಿರುವ ಈ ಚೇತನವು ಈ ಕರ್ಮಬಂಧನವನ್ನು ಬಿಡಿಸಿಕೊಂಡು ತನ್ನ ಸಹಜ ಯೋನಿಯಲ್ಲಿ ಉತ್ಪತ್ತಿಯನ್ನು ಪಡೆಯುವುದು. ವೇದಗಳು ಪ್ರಮಾಣವಾಗಿರುವುದರಿಂದ ಮಂತ್ರಪೂರ್ವವಾಗಿ ಪ್ರೋಕ್ಷಿಸಲ್ಪಟ್ಟ ಈ ಛಾಗದ ಶರೀರವು ಇಲ್ಲಿ ಉಳಿದುಕೊಂಡಿದೆ. ಆ ಚೇತನವು ಸದ್ಗತಿಯನ್ನು ಹೊಂದುತ್ತದೆ ಎಂದು ನನ್ನ ಅಭಿಪ್ರಾಯ.

ಯತಿಃ

ಇಂಧನಸ್ಯ ತು ತುಲ್ಯೇನ ಶರೀರೇಣ ವಿಚೇತಸಾ ।
ಹಿಂಸಾಂ ನಿರ್ವೇಷ್ಟುಕಾಮಾನಾಮಿಂಧನಂ ಪಶುಸಂಜ್ಞಿತಮ್ ॥೧೫॥

ಯತಿ– ಅಧ್ವರ್ಯುವೇ, ನೀನು ಯಜ್ಞದಲ್ಲಿ ಆಹುತಿಯನ್ನು ನೀಡುತ್ತಿರುವುದು ಕೇವಲ ಜಡವಾದ ಈ ಮೇಕೆಯ ಪಾರ್ಥಿವ ಶರೀರದ ಆಹುತಿಯಷ್ಟೆ! ಮೇಕೆಯು ಗತಪ್ರಾಣವಾಗಿದೆ. ಪ್ರಾಣಿಗಳ ಜಡವಾದ ಈ ದೇಹವು ಅವುಗಳ ಸುಖಕ್ಕೆ ಆಶ್ರಯವಾಗಿದೆ. ಪ್ರತಿಯೊಂದು ಪ್ರಾಣಿಗಳಿಗೂ ಭೋಗಾಯತನವಾದ ಶರೀರವು ನಾಶವಾಗುವುದು ಬೇಡ ಎಂಬ ಅಭಿಪ್ರಾಯವಿರುತ್ತದೆ. ಕಟ್ಟಿಗೆಯಂತಿರುವ ಶರೀರವೇ ಪಶುರೂಪ ಜೀವ ಎಂದು ಕರೆಯಲ್ಪಟ್ಟಿದೆ. ಆ ಪಶುವಾದರೂ ತನ್ನ ದೇಹನಾಶವನ್ನೇ

ತನ್ನ ನಾಶ ಎಂದು ತಿಳಿಯುತ್ತದೆ. ಆದ್ದರಿಂದ ನೀನು ಅದರ ದೇಹವನ್ನು ಹಿಂಸೆ ಪಡಿಸಿದರೂ ಆ ಮೇಕೆಯನ್ನು ಹಿಂಸೆ ಪಡಿಸಿದಂತೆಯೇ ಆಗುತ್ತದೆ. ಇಂತಹ ಹಿಂಸೆಯು ಅಪ್ರಾಮಾಣಿಕವಾಗಿದೆ. ಮಂತ್ರದ ಅಭಿಮಂತ್ರಣದಿಂದ ಜಡವಾದ ಶರೀರವನ್ನು ಹೋಮಿಸಿ ನಿನ್ನ ಅಭಿಲಾಷೆಯನ್ನು ಹೊಂದುತ್ತೀ ಎಂದಾದರೆ ಕಟ್ಟಿಗೆಗೆ ಸಮಾನವಾದ ಶರೀರದಿಂದ ಅಭೀಷ್ಟವನ್ನು ಪಡೆಯುವ ನೀನು ಕಟ್ಟಿಗೆಯಿಂದಲೇ ಯಾಕೆ ಹೋಮಿಸಬಾರದು. ಪ್ರಾಣಿ ಹಿಂಸೆಯನ್ನು ಏಕೆ ಮಾಡುತ್ತಿ ? ಅರ್ಥವಾಗುತ್ತಿಲ್ಲ.

ಅಹಿಂಸಾ ಸರ್ವಭೂತಾನಾಮಿತಿ ವೃದ್ಧಾನುಶಾಸನಮ್ ।
ಯದಹಿಂಸ್ರಂ ಭವೇತ್ ಕರ್ಮ ತತ್ ಕಾರ್ಯಮಿತಿ ವಿದ್ಮಹೇ ॥೧೬॥

ಎಲ್ಲ ಧರ್ಮಗಳಿಗಿಂತಲೂ ಅಹಿಂಸಾಧರ್ಮವೇ ಶ್ರೇಷ್ಠವಾದುದು ಎಂದು ಜ್ಞಾನವೃದ್ಧರ ಅನುಶಾಸನವು. ಯಾವ ಕಾರ್ಯವು ಹಿಂಸಾರಹಿತವಾಗಿದೆಯೋ ಅದೇ ಮಾಡಲು ಯೋಗ್ಯವಾದ ಕಾರ್ಯ ಎಂದು ತಿಳಿಯುತ್ತೇವೆ.

ಅಹಿಂಸೇತಿ ಪ್ರತಿಜ್ಞೇಯಂ ಯದಿ ವಕ್ಷ್ಯಾಮ್ಯತಃ ಪರಮ್ ।
ಶಕ್ಯಂ ಬಹುವಿಧಂ ವಕ್ತುಂ ಭವತಃ ಕಾರ್ಯದೂಷಣಮ್ ॥೧೭॥

ನಾನು ಏನಾದರೂ ಹೇಳಲು ಬಯಸಿದರೆ ಒಂದು ಮಾತನ್ನು ಹೇಳುತ್ತೇನೆ. ನಾನು ಅಹಿಂಸಾಧರ್ಮವನ್ನು ಪಾಲಿಸುತ್ತೇನೆ ಎಂಬ ಪ್ರತಿಜ್ಞೆಯನ್ನು ಮಾಡಿಸಬೇಕಾಗಿದೆ. ಹೀಗೆ ಮಾಡಿಸದಿದ್ದರೆ ನಿಮ್ಮ ಮೂಲಕ ಅನೇಕ ಹಿಂಸಾಕಾರ್ಯಗಳು ನಡೆಯಲು ಸಾಧ್ಯವಿದೆ.

ಅಹಿಂಸಾ ಸರ್ವಭೂತಾನಾಮಸ್ಮಭ್ಯಂ ರೋಚತೇ ಸದಾ ।
ಪ್ರತ್ಯಕ್ಷತಃ ಸಾಧಯಾಮೋ ನ ಪರೋಕ್ಷಮುಪಾಸ್ಮಹೇ ॥೧೮॥

ಯಾವುದೇ ಪ್ರಾಣಿಗಳನ್ನು ಹಿಂಸೆ ಮಾಡದಿರುವುದು ನಮಗೆ ಪ್ರಿಯವಾದುದು. ಅದನ್ನು ಪ್ರತ್ಯಕ್ಷವಾಗಿಯೇ ಸಾಧಿಸೋಣ. ಸ್ವರ್ಗಾದಿಗಳ ಉಪಾಸನೆಯನ್ನು ಮಾಡಲು ಈ ಪ್ರಾಣಿಗಳನ್ನು ಕೊಲ್ಲುವುದು ಬೇಡ.

ಅಧ್ವರ್ಯುಃ

ಭೂಮೇರ್ಗಂಧಗುಣಾನ್ ಭುಂಕ್ಷ್ಯೇ ಪಿಬಸ್ಯಾಪೋಮಯಾನ್ ರಸಾನ್।
ಜ್ಯೋತಿಷಾಮೀಕ್ಷಸೇ ರೂಪಂ ಸ್ಪರ್ಶಸ್ಯನಿಲಜಾನ್ ಗುಣಾನ್ ॥೧೯॥

ಶೃಣೋಷ್ಯಾಕಾಶಜಂ ಶಬ್ದಂ ಮನಸಾ ಮನ್ಯಸೇ ಮತಿಮ್ ।
ಸರ್ವಾಣ್ಯೇತಾನಿ ಭೂತಾನಿ ಪ್ರಾಣಾ ಇತಿ ಚ ಮನ್ಯಸೇ ॥೨೦॥

ಅಧ್ವರ್ಯು– ಯತೀಶ್ವರನೇ, ನೀನು ಭೂಮಿಯಲ್ಲಿರುವ ಗಂಧವನ್ನು ಭೋಗಿಸುತ್ತಿ. ರಸವನ್ನು ಆಸ್ವಾದಿಸುವಿ. ತೇಜಸ್ಸಿನ ಗುಣವಾದ ರೂಪವನ್ನು, ವಾಯುವಿನ ಗುಣವಾದ ಸ್ಪರ್ಶವನ್ನು, ಆಕಾಶದಿಂದ ಹುಟ್ಟುವ ಶಬ್ದವನ್ನು ಸ್ವೀಕರಿಸುತ್ತಿ. ಮನಸ್ಸಿನಿಂದ ಬುದ್ಧಿಯನ್ನು ಹೊಂದುತ್ತಿ. ಆದರೆ ಎಲ್ಲ ಪ್ರಾಣಿಗಳನ್ನು ಪ್ರಾಣ ಉಳ್ಳವುಗಳು ಎಂದು ತಿಳಿದಿರುವಿ. ಅರ್ಥಾತ್ ಪ್ರಾಣವುಳ್ಳ ಭೂತಗಳಿಂದ ಆಯಾ ಗುಣಗಳನ್ನು ಸ್ವೀಕರಿಸಿದರೆ ಅದೂ ಹಿಂಸೆ ಎಂದೇ ಪರಿಗಣಿತವಾಗುವುದಿಲ್ಲವೇ? ಎಂದು ಅಧ್ವರ್ಯುವಿನ ಭಾವ.

ಪ್ರಾಣಾದಾನೇ ನಿವೃತ್ತೋಸಿ ಹಿಂಸಾಯಾಂ ವರ್ತತೇ ಭವಾನ್ ।
ನಾಸ್ತಿ ಚೇಷ್ಟಾ ವಿನಾ ಹಿಂಸಾ ಕಿಂ ವಾ ತ್ವಂ ಮನ್ಯಸೇ ದ್ವಿಜ ॥೨೧॥

ನೀನು ಪ್ರಾಣಿಗಳ ಪ್ರಾಣವನ್ನು ತೆಗೆಯಬಾರದು ಎಂದು ಕೇಳುತ್ತಿರುವೆ. ಆದರೆ ಪ್ರಾಣಿಗಳಲ್ಲಿರುವ ಗುಣಗಳನ್ನು ಸ್ವೀಕರಿಸುತ್ತಿರುವೆ. ಅದು ಹಿಂಸೆ ಎಂದೇ ಅನಿಸಿದೆ. ಹಿಂಸೆ ಮಾಡಬಾರದೆಂದು ಹೇಳುತ್ತಾ ಹಿಂಸಾ ಕರ್ಮದಲ್ಲಿ ನಿರತನಾದ ಯತಿವರ್ಯನೇ, ಯಾವ ಚೇಷ್ಟೆಗಳು, ಹಿಂಸೆ ಇಲ್ಲದೆ ನಡೆಯುವುದಿಲ್ಲ ಎಂದು ತಿಳಿದುಕೊ. ಹೂವು ಕಿತ್ತಿದಾಗ ಗಿಡಕ್ಕೆ ಹಿಂಸೆಯಾಗುತ್ತದೆ. ನೀರು ಕುಡಿದಾಗ, ಅಗ್ನಿಯನ್ನು ಮಥಿಸಿದಾಗ, ಗಾಳಿಯನ್ನು ಸ್ವೀಕರಿಸಿದಾಗಲೂ ಅಲ್ಲಲ್ಲಿ ಸನ್ನಿಹಿತವಾಗಿರುವ ಪ್ರಾಣಿಗಳ ಹಿಂಸೆಯು ನಿಶ್ಚಿತವಾಗಿಯೂ ಆಗುತ್ತದೆ ಎಂದು ಭಾವಿಸುತ್ತೇನೆ.

ಯತಿಃ

ಅಕ್ಷರಂ ಚ ಕ್ಷರಂ ಚೈವ ದ್ವೈಧೀಭಾವೋಽಯಮಾತ್ಮನಃ ।
ಅಕ್ಷರಂ ತತ್ರ ತದ್ಭಾವಃ ಸ್ವಭಾವಃ ಕ್ಷರ ಉಚ್ಯತೇ ॥೨೨॥

ಯತಿ– ಅಧ್ವರ್ಯುವೇ, ಈ ಜೀವರಲ್ಲಿ ಕ್ಷರಭಾವ, ಅಕ್ಷರಭಾವ ಎಂಬ ಎರಡು ಸ್ವಭಾವಗಳಿವೆ. ಕ್ಷರಭಾವ, ಅಕ್ಷರಭಾವಗಳಲ್ಲಿ ಅಕ್ಷರಭಾವಗಳನ್ನು ತೊಡೆದುಕೊಂಡು ಕ್ಷರಭಾವವನ್ನು ಹೊಂದಬೇಕು. ಅಕ್ಷರಭಾವವೆಂದರೆ ವಿಷಯಪದಾರ್ಥಗಳಲ್ಲಿ ಯಾವಾಗಲೂ ಆಸಕ್ತಿಯನ್ನು ಹೊಂದಿ ವೈರಾಗ್ಯವನ್ನು ತಾಳದಿರುವುದು ಅಕ್ಷರಭಾವ ಎನಿಸುತ್ತದೆ. ಕ್ಷರಭಾವವೆಂದರೆ ವಿಷಯವನ್ನು ಪರಿತ್ಯಜಿಸಿ ಸ್ವತಂತ್ರನಾದ ಪರಮಾತ್ಮನಲ್ಲಿ

ಆಸಕ್ತನಾಗಿರುವುದು. ಪರಮಾತ್ಮನಲ್ಲಿ ಆಸಕ್ತನಾಗಿ ವಿಷಯಗಳನ್ನು ಭುಂಜಿಸಿದಾಗ ಹಿಂಸೆ ಎನಿಸುವುದಿಲ್ಲ ಎಂಬುದು ಯತಿಯ ಅಭಿಪ್ರಾಯವಾಗಿದೆ.

ಘ್ರಾಣಂ ಜಿಹ್ವಾ ಮನಃ ಸತ್ತ್ವಂ ಸ್ವಭಾವೋ ರಾಜಸೋ ಗುಣಃ ॥೨೩॥

ಭಾವೈರೇತೈರ್ವಿಯುಕ್ತಸ್ಯ ನಿರ್ದ್ವಂದ್ವಸ್ಯ ನಿರಾಶಿಷಃ ।
ಸಮಸ್ಯ ಸರ್ವಭೂತೇಷು ನಿರ್ಮಮಸ್ಯ ಜಿತಾತ್ಮನಃ ॥೨೪॥

ಸಮಂತಾತ್ ಪರಿಮುಕ್ತಸ್ಯ ನ ಭಯಂ ವಿದ್ಯತೇ ಕ್ವಚಿತ್ ॥೨೫॥

ಘ್ರಾಣೇಂದ್ರಿಯ, ಜಿಹ್ವೆ, ಮನಸ್ಸು, ಸತ್ತ್ವ, ಸ್ವಭಾವ - ಇವುಗಳಲ್ಲಿ ಸಹಜವಾಗಿ ನಡೆಯುವ ಪ್ರವೃತ್ತಿಗಳು ರಾಜಸ ಸ್ವಭಾವ ಎನಿಸುತ್ತವೆ. ಈ ರಾಜಸ ಸ್ವಭಾವಗಳಿಂದ ಮುಕ್ತನಾಗಿ ಸುಖ-ದುಃಖಗಳನ್ನು ನೆನೆಯದೆ, ಅತಿಯಾದ ಆಕಾಂಕ್ಷೆಗಳನ್ನು ಹೊಂದದೆ, ಎಲ್ಲೆಡೆಯೂ ಪರಮಾತ್ಮನೇ ಇದ್ದಾನೆ ಎಂದು ಚಿಂತಿಸುತ್ತಾ, ಮಮತೆಯನ್ನು ತ್ಯಾಗ ಮಾಡಿ, ಜಿತೇಂದ್ರಿಯನಾಗಿದ್ದು, ಎಲ್ಲೆಡೆಯೂ ಅಸಂಗನಾಗಿಯೇ ವರ್ತಿಸುವ ವ್ಯಕ್ತಿಗೆ ಎಂದಿಗೂ ಭಯವಿರುವುದಿಲ್ಲ.

ಅಧ್ವರ್ಯುಃ

ಸದ್ಭಿರೇವೇಹ ಸಂವಾಸಃ ಕಾರ್ಯೋ ಮತಿಮತಾಂ ವರ ।
ಭವತಾಂ ಕಥಿತಂ ಶ್ರುತ್ವಾ ಪ್ರತಿಭಾತಿ ಮತಿರ್ಮಮ ॥೨೬॥

ಅಧ್ವರ್ಯು– ಬುದ್ಧಿವಂತರಲ್ಲಿ ಶ್ರೇಷ್ಠನಾದ ಯತಿಯೇ, ನಿನ್ನ ಅಭಿಪ್ರಾಯವನ್ನು ಕೇಳಿಸಿಕೊಂಡ ಬಳಿಕ ನನಗೆ ಹೀಗೆ ಎನಿಸುತ್ತಿದೆ- ನಿಶ್ಚಿತವಾಗಿಯೂ ಸತ್ಪುರುಷರ ಸಹವಾಸವನ್ನೇ ಮಾಡಬೇಕು ಎಂದು.

ಭಗವನ್ ಭಗವದ್‌ಬುದ್ಧ್ಯಾ ಪ್ರತಿಬುದ್ಧೋ ಬ್ರವೀಮ್ಯಹಮ್ ।
ಮತಂ ಮಂತುಃ ಕ್ರತುಃ ಕರ್ತುಃ ನಾಪರಾಧ್ಯೋಽಸ್ತಿ ಮೇ ದ್ವಿಜ ॥೨೭॥

ಪೂಜ್ಯನೇ, ಭಗವಂತನ ಪ್ರಜ್ಞೆಯಿಂದ ನನ್ನನ್ನು ಚೆನ್ನಾಗಿ ಬೋಧಿಸಿದೆ. ಇದನ್ನು ಅರ್ಥ ಮಾಡಿಕೊಂಡು ನಾನು ಹೀಗೆ ಹೇಳುತ್ತೇನೆ- ಮನನಶೀಲನಾದ ಮುನಿಗೆ ಮನನ ವಿಷಯಭೂತವಾದ ಪರಮಾತ್ಮಸ್ವರೂಪವೇ ಹೊಂದಲು ಯೋಗ್ಯವಾಗುತ್ತದೆ.

ಯಾಗವನ್ನು ಮಾಡುವ ಕರ್ತೃವಿಗೆ ಯಜ್ಞದಿಂದ ಪೂಜಿತನಾದ ಪರಮಾತ್ಮನು ಹೊಂದಲು ಯೋಗ್ಯನಾಗುತ್ತಾನೆ. ಪ್ರವೃತ್ತಿ ಕರ್ಮದಲ್ಲಿ ಮಾಡಲ್ಪಡುವ ಹಿಂಸೆಗಳು ತನ್ನ ಸ್ವಾರ್ಥಫಲದಲ್ಲಿ ಕೂಡಿರುವುದರಿಂದ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಮಾಡುವ ಕರ್ಮವಾದುದರಿಂದ ಹಿಂಸೆಯೇ ಆಗುತ್ತದೆ. ನಿವೃತ್ತಿಕರ್ಮದಲ್ಲಿ ನಿರತನಾಗಿ ಮಾಡುವ ಕರ್ಮಗಳು ವಿಷ್ಣುಪೂಜಾಂಗವಾಗುವುದರಿಂದ ಹಿಂಸೆಯಾಗುವುದಿಲ್ಲ ಎಂದು ಅಭಿಪ್ರಾಯ. ಆದ್ದರಿಂದ ಬ್ರಾಹ್ಮಣನೇ, ವಿಷ್ಣುಪೂಜೆಯಾದ ಕರ್ಮವನ್ನು ಮಾಡಿ ಹಿಂಸಾ ರೂಪವಾದ ಅಪರಾಧದಿಂದ ಮುಕ್ತನಾಗು ಎಂದು ನಿನ್ನ ಅಭಿಪ್ರಾಯ ಎಂದು ಭಾವಿಸುತ್ತೇನೆ.

ಬ್ರಾಹ್ಮಣಃ

ಉಪಪತ್ಯಾ ಯತಿಸ್ತೂಷ್ಣೀಂ ವರ್ತಮಾನಸ್ತತಃ ಪರಮ್ ।
ಅಧ್ವರ್ಯುರಪಿ ನಿರ್ಮೋಹಃ ಪ್ರಚಚಾರ ಮಹಾಮಖೇ ॥೨೮॥

ಬ್ರಾಹ್ಮಣ– ಅಧ್ವರ್ಯುವು ಹೇಳಿದ ಯುಕ್ತಿಯುಕ್ತವಾದ ಮಾತನ್ನು ಕೇಳಿಸಿಕೊಂಡ ಯತಿಯು ಮುಂದೆ ಯಾವ ಮಾತನ್ನೂ ಆಡದೆ ಮೌನವಹಿಸಿದನು. ಅಧ್ವರ್ಯುವೂ ಮೋಹರಹಿತನಾಗಿದ್ದು ಮಹಾಯಾಗದಲ್ಲಿ ತನ್ನನ್ನು ತೊಡಗಿಸಿಕೊಂಡನು.

ಏವಮೇತಾದೃಶಂ ಮೋಕ್ಷಂ ಸುಸೂಕ್ಷ್ಮಂ ಬ್ರಾಹ್ಮಣಾ ವಿದುಃ ।
ವಿದಿತ್ವಾ ಚಾನುತಿಷ್ಠಂತಿ ಕ್ಷೇತ್ರಜ್ಞೇನಾನುದರ್ಶಿನಾ ॥೨೯॥

ಹೀಗೆ ಮೋಕ್ಷವು ಅತ್ಯಂತ ಸೂಕ್ಷ್ಮಸ್ವರೂಪವಾದದ್ದೆಂದು ಬ್ರಾಹ್ಮಣರು ಹೇಳುತ್ತಾರೆ. ಸಾಧಕರು, ತತ್ತ್ವದರ್ಶನವುಳ್ಳ ಸತ್ಪುರುಷರು ಈ ಉಪದೇಶಕ್ಕನುಗುಣವಾಗಿ ಮೋಕ್ಷ ಧರ್ಮವನ್ನು ತಿಳಿದುಕೊಂಡು ಅನುಷ್ಠಾನ ಮಾಡುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅಶ್ವಮೇಧಿಕಪರ್ವಣಿ ಅನುಗೀತಾಸು ಯತಿ-ಅಧ್ವರ್ಯುಸಂವಾದೋ ನಾಮ ಏಕೋನತ್ರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅಶ್ವಮೇಧಿಕಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಬ್ರಾಹ್ಮಣನು ತನ್ನ ಪತ್ನಿಯನ್ನು ಕುರಿತು ಹಿಂಸೆ ಮಾಡಬಾರದೆಂಬ ವಿಷಯದಲ್ಲಿ ಮಹರ್ಷಿಗಳ ಮಾತುಗಳನ್ನು ಪ್ರಮಾಣವನ್ನಾಗಿ ಹೇಳಲು, ಪರಶುರಾಮನ ಚರಿತ್ರೆಯನ್ನು ಹೇಳಿದುದು. ಪರಶುರಾಮನು ಕಾರ್ತವೀರ್ಯನನ್ನು ಸಂಹರಿಸಿದ ಬಳಿಕ ಅವನ ಬಂಧುಗಳು ಜಮದಗ್ನಿಯನ್ನು ಸಂಹರಿಸಿದುದು. ಅದರಿಂದ ಕ್ರುದ್ಧನಾದ ಪರಶುರಾಮನು ಇಪ್ಪತ್ತೊಂದು ಬಾರಿ ಭೂಮಂಡಲವನ್ನು ಸಂಚರಿಸಿ, ಕ್ಷತ್ರಿಯರನ್ನು ಸಂಹರಿಸುತ್ತಿರಲು ಪರಶುರಾಮನ ಪಿತೃಗಳು ರಾಮನನ್ನು ಸಾಂತ್ವನಗೊಳಿಸಿದ ಪ್ರಸಂಗವನ್ನು ಕೃಷ್ಣನು ಅರ್ಜುನನಿಗೆ ಉಪದೇಶಿಸಿದುದು.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಕಾರ್ತವೀರ್ಯಸ್ಯ ಸಂವಾದಂ ಸಮುದ್ರಸ್ಯ ಚ ಭಾಮಿನಿ ॥೧॥

ಬ್ರಾಹ್ಮಣ– ಭಾಮಿನಿಯೇ, ಈ ವಿಷಯದಲ್ಲಿ ಕಾರ್ತವೀರ್ಯನಿಗೂ, ಸಮುದ್ರರಾಜನಿಗೂ ನಡೆದ ಸಂವಾದರೂಪವಾದ ಹಿಂದೆ ನಡೆದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹುಸಹಸ್ರವಾನ್ ।
ಯೇನ ಸಾಗರಪರ್ಯಂತಾ ಧನುಷಾ ನಿರ್ಜಿತಾ ಮಹೀ ॥೨॥

ಹಿಂದೆ ಕಾರ್ತವೀರ್ಯನೆಂಬ ಸಹಸ್ರಬಾಹುಗಳುಳ್ಳ ರಾಜನು ಇದ್ದನು. ಅವನು ಸಾಗರಪರ್ಯಂತವಾದ ಭೂಮಿಯನ್ನು ತನ್ನ ಧನುಸ್ಸಿನ ಸಹಾಯದಿಂದ, ಆತ್ಮಬಲದಿಂದ ಜಯಿಸಿದ್ದನು.

ಸ ಕದಾಚಿತ್ ಸಮುದ್ರಾಂತೇ ವಿಚರನ್ ಬಲದರ್ಪಿತಃ ।
ಅವಾಕಿರಚ್ಛರಶತೈಃ ಸಮುದ್ರಮಿತಿ ನಃ ಶ್ರುತಮ್ ॥೩॥

ಅವನು ಒಂದು ಬಾರಿ ಬಲದಿಂದ ಅಹಂಕಾರಗೊಂಡು ಸಮುದ್ರದ ತೀರದ ಪ್ರದೇಶದಲ್ಲಿ ಸಂಚಾರ ಮಾಡುತ್ತಾ ನೂರಾರು ಬಾಣಗಳಿಂದ ಸಮುದ್ರವನ್ನೇ ಮುಚ್ಚಿಬಿಟ್ಟನು. ಈ ಕಥೆಯನ್ನು ನಾವು ಕೇಳಿದ್ದೇವೆ.

ತಂ ಸಮುದ್ರಂ ನಮಸ್ಕೃತ್ಯ ಕೃತಾಂಜಲಿರುವಾಚ ಹ ॥೪॥

ಆ ಸಮಯದಲ್ಲಿ ಸಮುದ್ರರಾಜನು ಕಾರ್ತವೀರ್ಯನ ಬಳಿ ಬಂದು ಕೈಮುಗಿದು ಇಂತು ಹೇಳಿದನು.

ಸಮುದ್ರಃ

ಮಾ ಮುಂಚ ವೀರ ನಾರಾಚಾನ್ ಬ್ರೂಹಿ ಕಿಂ ಕರವಾಣಿ ತೇ ॥೫॥

ಮದಾಶ್ರಯಾಣಿ ಭೂತಾನಿ ತ್ವದುತ್ಸೃಷ್ಟೈರ್ಮಹೇಷುಭಿಃ ।
ವಧ್ಯಂತೇ ರಾಜಶಾರ್ದೂಲ ವಿಭ್ಯೋ ದೇಹ್ಯಭಯಂ ಪ್ರಭೋ ॥೬॥

ಸಮುದ್ರ– ವೀರನೇ, ನನ್ನ ಮೇಲೆ ಬಾಣಗಳನ್ನು ಹೂಡಬೇಡ. ನಾನು ನಿನಗಾಗಿ ಏನು ಮಾಡಬೇಕೆಂಬುದನ್ನು ಹೇಳು. ನನ್ನ ಆಶ್ರಯದಲ್ಲಿ ಇರುವ ಅನೇಕ ಪ್ರಾಣಿಗಳು ನಿನ್ನಿಂದ ಹತವಾಗಿವೆ. ವಿಭುವೇ, ಆ ಪ್ರಾಣಿಗಳಿಗೆ ಕೃಪೆದೋರಿ ಅಭಯವನ್ನು ನೀಡಲು ಅರ್ಹನಾಗಿರುವಿ.

ಅರ್ಜುನಃ

ಮತ್ಸಮೋ ಯದಿ ಸಂಗ್ರಾಮೇ ಶರಾಸನಧರಃ ಕ್ವಚಿತ್ ।
ವಿದ್ಯತೇ ತಂ ಸಮಾಚಕ್ಷ್ವ ಯಃ ಸಮೋ ಹಿ ಮಹಾಮೃಧೇ ॥೭॥

ಕಾರ್ತವೀರ್ಯಾರ್ಜುನ– ಸಮುದ್ರರಾಜನೇ, ಈ ಪ್ರಪಂಚದಲ್ಲಿ ಯುದ್ಧದಲ್ಲಿ ಎಲ್ಲಿಯಾದರೂ ನನಗೆ ಸಮಾನನಾದ ಧನುರ್ಧಾರಿಯು ಇದ್ದಾನೆಯೇ? ಒಂದು ವೇಳೆ ಇದ್ದಲ್ಲಿ ನನ್ನೆದುರು ನಿಂತು ಆತ ಯುದ್ಧ ಮಾಡುವನೆ? ಅಂತಹ ವ್ಯಕ್ತಿ ಇದ್ದರೆ ಅವನ್ಯಾರೆಂದು ತಿಳಿಸು.

ಸಮುದ್ರಃ

ಮಹರ್ಷಿರ್ಜಮದಗ್ನಿಸ್ತೇ ಯದಿ ರಾಜನ್ ಪರಿಶ್ರುತಃ ।
ತಸ್ಯ ಪುತ್ರಸ್ತವಾತಿಥ್ಯಂ ಯಥಾವತ್ ಕರ್ತುಮರ್ಹತಿ ॥೮॥

ಸಮುದ್ರ– ಅರ್ಜುನನೇ, ನೀನು ಮಹರ್ಷಿ ಜಮದಗ್ನಿಯ ಹೆಸರನ್ನು ಕೇಳಿರುವೆಯಾ? ನಿನಗೆ ಅವನ ಪರಿಚಯವಿದ್ದಲ್ಲಿ ಅವನ ಆಶ್ರಮಕ್ಕೆ ಹೋಗಿ, ಅವನ ಮಗನಾದ ಪರಶುರಾಮನು ನೀಡುವ ವಿಧಿವತ್ತಾದ ಆತಿಥ್ಯವನ್ನು ಸ್ವೀಕರಿಸು.

ಬ್ರಾಹ್ಮಣಃ

ತತಃ ಸ ರಾಜಾ ಪ್ರಯಯೌ ಕ್ರೋಧೇನ ಮಹತಾऽನ್ವಿತಃ ।
ಸ ತಮಾಶ್ರಮಮಾಗಮ್ಯ ರಾಮಮೇವಾನ್ವಪದ್ಯತ ॥೯॥

ಬ್ರಾಹ್ಮಣನು– ನಂತರ ಕ್ರೋಧಾವಿಷ್ಟನಾದ ಕಾರ್ತವೀರ್ಯನು ಜಮದಗ್ನಿಯ ಆಶ್ರಮಕ್ಕೆ ಆಗಮಿಸಿ ಪರಶುರಾಮನನ್ನು ಸಂಧಿಸಿದನು.

ಸ ರಾಮಪ್ರತಿಕೂಲಾನಿ ಚಕಾರ ಸಹ ಬಂಧುಭಿಃ ।
ಆಯಾಸಂ ಜನಯಾಮಾಸ ರಾಮಸ್ಯ ಚ ಮಹಾತ್ಮನಃ ॥೧೦॥

ಪರಿವಾರ, ಬಂಧುಗಳೊಡನೆ ಆಗಮಿಸಿದ ಕಾರ್ತವೀರ್ಯನು ಪರಶುರಾಮನಿಗೆ ಪ್ರತಿಕೂಲವಾಗಿಯೇ ವರ್ತಿಸಿದನು. ತನ್ನ ಕೃಚ್ಛ್ರವಾದ ಕರ್ಮಗಳಿಂದ ಮಹಾತ್ಮನಾದ ಪರಶುರಾಮನ ಮನಸ್ಸಿನಲ್ಲಿ ಉದ್ವೇಗವನ್ನು ಹುಟ್ಟಿಸಿದನು.

ತತಸ್ತೇಜಃ ಪ್ರಜಜ್ವಾಲ ರಾಮಸ್ಯಾಮಿತತೇಜಸಃ ।
ಪ್ರದಹನ್ ರಿಪುಸೈನ್ಯಾನಿ ತದಾ ಕಮಲಲೋಚನೇ ॥೧೧॥

ಮಹಾತೇಜಸ್ವಿಯಾದ ಪರಶುರಾಮನ ತೇಜಸ್ಸು ಕೂಡಲೇ ಭಯಂಕರವಾಗಿ ಪ್ರಜ್ವಲಿಸಲು ಆರಂಭಿಸಿತು. ಆ ಸಮಯದಲ್ಲಿ ಪರಶುರಾಮನು ತನ್ನ ತೇಜಸ್ಸಿನಿಂದಲೇ ಅವನ ಸಹಿತವಾಗಿ ಪರಿವಾರವನ್ನು ಸುಡಲು ಇಚ್ಛಿಸಿದನು.

ತತಃ ಪರಶುಮಾದಾಯ ಸ ತಂ ಬಾಹುಸಹಸ್ರಿಣಮ್ ।
ಚಿಚ್ಛೇದ ಸಹಸಾ ರಾಮೋ ಬಹುಶಾಖಮಿವ ದ್ರುಮಮ್ ॥೧೨॥

ಬಳಿಕ ಪರಶುರಾಮನು ಕೊಡಲಿಯನ್ನು ಹಿಡಿದುಕೊಂಡು ಕಾರ್ತವೀರ್ಯನ ಬಾಹುಗಳನ್ನು ನೂರಾರು ಕೊಂಬೆಗಳುಳ್ಳ ಮರವನ್ನು ಕಡಿಯುವಂತೆ ಕತ್ತರಿಸಿ ಹಾಕಿದನು.

ತಂ ಹತಂ ಪತಿತಂ ದೃಷ್ಟ್ವಾ ಸಮೇತಾಃ ಸರ್ವಬಾಂಧವಾಃ ।
ಅಸೀನಾದಾಯ ಶಕ್ತೀಶ್ಚ ಭಾರ್ಗವಂ ಪರ್ಯವಾರಯನ್ ॥೧೩॥

ಕಾರ್ತವೀರ್ಯನು ಗತಪ್ರಾಣನಾಗಿ ಭೂಮಿಯಲ್ಲಿ ಬಿದ್ದದ್ದನ್ನು ಕಂಡ ಬಾಂಧವೆಲ್ಲರೂ ಒಟ್ಟಾಗಿ ಪರಶುರಾಮನನ್ನು ಶಕ್ತ್ಯಾಯುಧಗಳನ್ನು ಹಿಡಿದು ಹೊಡೆಯಲು ಸುತ್ತುಗಟ್ಟಿದರು.

ಸ ರಾಮೋ ರಥಮಾರುಹ್ಯ ಧನುರಾದಾಯ ಸತ್ವರಃ ।
ವಿಸೃಜನ್ ಶರವರ್ಷಾಣಿ ವ್ಯಧಮತ್ ಪಾರ್ಥಿವಂ ಬಲಮ್ ॥೧೪॥

ವೇದವಂತನಾದ ಪರಶುರಾಮನು ರಥದಲ್ಲಿ ಕುಳಿತುಕೊಂಡು, ಧನುಸ್ಸನ್ನು ಹಿಡಿದು ಬಾಣಗಳ ಮಳೆಗರೆಯುತ್ತಾ ರಾಜನ ಸೈನಿಕರನ್ನೆಲ್ಲ ಧ್ವಂಸ ಮಾಡಿದನು.

ತತಸ್ತು ಕ್ಷತ್ರಿಯಾಃ ಕೇಚಿತ್ ಜಮದಗ್ನಿಂ ನಿಹತ್ಯ ಹಿ ।
ವಿವಿಶುರ್ಗಿರಿದುರ್ಗಾಣಿ ಮೃಗಾಃ ಸಿಂಹಾರ್ದಿತಾ ಇವ ॥೧೫॥

ಪರಶುರಾಮನ ಭಯದಿಂದ ಜಮದಗ್ನಿಗಳನ್ನು ಹೊಂದಿರುವ ಆ ಕ್ಷತ್ರಿಯರೆಲ್ಲರೂ ಗಿರಿ-ದುರ್ಗಗಳನ್ನು ಹೆದರಿ ಆಶ್ರಯಿಸಿದರು. ಸಿಂಹದ ಪೀಡೆಗೆ ತುತ್ತಾದ ಮೃಗಗಳು ಹೆದರಿ ಓಡಿಹೋಗುವಂತೆ, ಗಿರಿ-ದುರ್ಗಗಳನ್ನು ಆಶ್ರಯಿಸುವಂತೆ ಪರಶುರಾಮರಿಂದ ಹೆದರಿದ ಸೈನ್ಯವೆಲ್ಲವೂ ಚದುರಿಹೋಯಿತು.

ತೇಷಾಂ ಸ್ವವಿಹಿತಂ ಕರ್ಮ ತದ್ಭಯಾನ್ನಾನುತಿಷ್ಠತಾಮ್ ।
ಪ್ರಜಾ ವೃಷಲತಾಂ ಪ್ರಾಪ್ತಾ ಬ್ರಾಹ್ಮಣಾನಾಮದರ್ಶನಾತ್ ॥೧೬॥

ಪರಶುರಾಮನ ಭಯದಿಂದ ಕ್ಷತ್ರಿಯರು ಸ್ವವರ್ಣಾಶ್ರಮವಿಹಿತವಾದ ಕರ್ಮಗಳನ್ನೇ ತ್ಯಾಗ ಮಾಡಿದರು. ಅನೇಕ ವರ್ಷಗಳ ತನಕ ಬ್ರಾಹ್ಮಣರನ್ನೇ ಕಾಣದಿರುವ ಅವರೆಲ್ಲರೂ ಕರ್ಮಭ್ರಷ್ಟರಾಗಿ ಶೂದ್ರತ್ವವನ್ನೇ ಹೊಂದಿದರು.

ತ ಏತೇ ದ್ರಮಿಳಾಃ ಆಭೀರಾ ಪುಂಡ್ರಾಶ್ಚ ಶಬರೈಃ ಸಹ ।
ವೃಷಲತ್ವಂ ಪರಿಗತಾ ವ್ಯುತ್ಥಾನಾತ್ ಕ್ಷತ್ರಧರ್ಮಿಣಃ ॥೧೭॥

ಈ ರೀತಿಯಾಗಿ ಕ್ಷತ್ರಿಯರು ದ್ರವಿಡ, ಆಭೀರ, ಪುಂಡ್ರ , ಶಬರರ ಸಹವಾಸದಲ್ಲಿದ್ದು ಕ್ಷತ್ರಧರ್ಮ ಪರಿತ್ಯಾಗದಿಂದ ಶೂದ್ರತ್ವವನ್ನೇ ಪಡೆದರು.

ತತಸ್ತು ಹತವೀರಾಸ್ತು ಕ್ಷತ್ರಿಯಾಸು ಪುನಃ ಪುನಃ ।
ದ್ವಿಜೈರುತ್ಪಾದಿತಂ ಕ್ಷತ್ರಂ ನ್ಯಕೃಂತಜ್ಜಮದಗ್ನಿಜಃ ॥೧೮॥

ಕ್ಷತ್ರಿಯವೀರರೆಲ್ಲರೂ ಪರಶುರಾಮರಿಂದ ಪುನಃ ಪುನಃ ಹತರಾಗಿ ಬ್ರಾಹ್ಮಣರು ಕ್ಷತ್ರಿಯ ಸ್ತ್ರೀಯರಲ್ಲಿ ನಿಯೋಗ ಪದ್ಧತಿಯಂತೆ ಸಂತಾನವನ್ನು ಪಡೆದರು.

ಏಕವಿಂಶತಿಕೇ ಯಾತೇ ರಾಮಂ ವಾಗಶರೀರಿಣೀ ।
ದಿವ್ಯಾ ಪ್ರೋವಾಚ ಮಧುರಾ ಸರ್ವಲೋಕಪರಿಶ್ರುತಾ ॥೧೯॥

ನಂತರ ಪರಶುರಾಮನು ಭೂಮಂಡಲದಲ್ಲಿರುವ ಕ್ಷತ್ರಿಯರನ್ನು ಇಪ್ಪತ್ತೊಂದು ಬಾರಿ ಪ್ರದಕ್ಷಿಣೆ ಮಾಡಿ ಸಂಹರಿಸಿದ ಬಳಿಕ ಸಮಸ್ತ ಜನರಿಗೆ ಕೇಳುವಂತಹ ದಿವ್ಯವಾದ, ಮಧುರವಾದ ಅಶರೀರವಾಣಿಯು ಹೀಗೆ ಹೇಳಿತು.

ರಾಮ ರಾಮ ನಿವರ್ತಸ್ವ ಕಂ ಗುಣಂ ತತ್ರ ಪಶ್ಯಸಿ ।
ಕ್ಷತ್ರಬಂಧೂನಿಮಾನ್ ಪ್ರಾಣೈರ್ವಿಯೋಜ್ಯ ಚ ಪುನಃ ಪುನಃ ॥೨೦॥

ಪರಶುರಾಮನೇ, ರಾಮನೇ, ಇಂತಹ ಭಯಂಕರವಾದ ಹನನಕರ್ಮದಿಂದ ವಿಶ್ರಾಂತಿಯನ್ನು ಪಡೆ. ಕ್ಷತ್ರಬಂಧುಗಳನ್ನು ಪುನಃ ಪುನಃ ಸಂಹರಿಸುವುದರಿಂದ ಯಾವ ಪ್ರಯೋಜನವನ್ನು ಪಡೆಯುತ್ತಿರುವಿ?

ತಥೈವ ತಂ ಮಹಾತ್ಮಾನಮೃಚೀಕಪ್ರಮುಖಾಸ್ತಥಾ ।
ಪಿತಾಮಹಾ ಮಹಾಭಾಗ ನಿವರ್ತಸ್ವೇತ್ಯಥಾಬ್ರುವನ್ ॥೨೧॥

ಅಶರೀರವಾಣಿಯು ಹೀಗೆ ಕೇಳಿ ಬಂದ ಬಳಿಕ ಭಾಗ್ಯಶಾಲಿಯಾದ ಪರಶುರಾಮರ ಪಿತಾಮಹರಾದ ಋಚೀಕನೇ ಮೊದಲಾದ ಮಹರ್ಷಿಗಳು ಪರಶುರಾಮನಿಗೆ ಕ್ಷತ್ರ ಹನನದಿಂದ ವಿಮುಖನಾಗುವಂತೆ ಉಪದೇಶಿಸಿದರು.

ಪಿತುರ್ವಧಮಮೃಷ್ಯಂಶ್ಚ ರಾಮಃ ಪ್ರೋವಾಚ ತಾನೃಷೀನ್ ।
ನಾರ್ಹಂತೀಹ ಭವಂತೋ ಮಾಂ ನಿವಾರಯಿತುಮಿತ್ಯುತ ॥೨೨॥

ಜಮದಗ್ನಿಯ ವಧೆಯಿಂದ ಕ್ರುದ್ಧನಾದ ಪರಶುರಾಮನು ಪಿತಾಮಹರನ್ನು ಕುರಿತು ಹೇಳಿದನು- ಪಿತಾಮಹರೇ, ನೀವು ನನ್ನನ್ನು ದುಷ್ಟಕ್ಷತ್ರಿಯರನ್ನು ಸಂಹರಿಸುವ ಕಾರ್ಯದಿಂದ ವಿಮುಖನನ್ನಾಗಿಸುವುದು ಸೂಕ್ತವಲ್ಲ.

ಪಿತರಃ

ನಾರ್ಹಸಿ ಕ್ಷತ್ರಬಂಧೂನ್ ತ್ವಂ ನಿಹಂತುಂ ಜಯಕಾಂಕ್ಷಯಾ ।
ನ ಹಿ ಯುಕ್ತಂ ತ್ವಯಾ ಹಂತುಂ ಬ್ರಾಹ್ಮಣೇನ ಸತಾ ನೃಪಾನ್ ॥೨೩॥

ಪಿತೃಗಳು– ವಿಜಯಿಗಳಲ್ಲಿ ಶ್ರೇಷ್ಠನಾದವನೇ, ಕ್ಷತ್ರಬಂಧುಗಳನ್ನು ನಿರಂತರ ಸಂಹರಿಸುವುದು ನಿನಗೆ ಯೋಗ್ಯವಾಗುವುದಿಲ್ಲ. ಬ್ರಾಹ್ಮಣನಾದ ನೀನು ರಾಜರನ್ನು ಸಂಹರಿಸುವುದು ನಿಶ್ಚಿತವಾಗಿಯೂ ಯೋಗ್ಯವಾದುದಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ರಾಮ-ಕಾರ್ತವೀರ್ಯಯುದ್ಧೇ
ಪ್ರತಿಸಾಮವಚನಕಥನಂ ನಾಮ ತ್ರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಪರಶುರಾಮನನ್ನು ಕುರಿತು ಪಿತಾಮಹರು ಕ್ಷತ್ರಿಯ ವಧೆಯಿಂದ ನಿವೃತ್ತನಾಗು ಎಂದು ಹೇಳಲು ಅಲರ್ಕೋಪಾಖ್ಯಾನವನ್ನು ಹೇಳಿದುದು. ಇದನ್ನು ಕೇಳಿಸಿಕೊಂಡ ಪರಶುರಾಮನು ಯುದ್ಧದಿಂದ ನಿವೃತ್ತನಾದುದು.

ಪಿತರಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಶ್ರುತ್ವಾ ಚ ತತ್ ತಥಾ ಕಾರ್ಯಂ ಭವತಾ ದ್ವಿಜಸತ್ತಮ ॥೧॥

ಪಿತೃಗಳು– ದ್ವಿಜಶ್ರೇಷ್ಠನೇ, ಈ ವಿಷಯದಲ್ಲಿ ಪುರಾತನ ಇತಿಹಾಸವೊಂದನ್ನು ವಿದ್ವಾಂಸರು ಉಲ್ಲೇಖಿಸುತ್ತಾರೆ. ಅದನ್ನು ಕೇಳಿಸಿಕೊಂಡು ಹಾಗೆ ಆಚರಿಸು.

ಅಲರ್ಕೋ ನಾಮ ರಾಜರ್ಷಿರಭವತ್ ಸುಮಹಾತಪಾಃ ।
ಧರ್ಮಜ್ಞಃ ಸತ್ಯಸಂಧಶ್ಚ ಮಹಾತ್ಮಾ ಸುಮಹಾವ್ರತಃ ॥೨॥

ಹಿಂದೆ ಅಲರ್ಕ ಎಂಬ ಹೆಸರಿನ ಮಹಾತಪಸ್ವಿಯಾದ ರಾಜರ್ಷಿ ಇದ್ದನು. ಮಹಾತಪಸ್ವಿಯೂ ಧರ್ಮಜ್ಞನೂ ಸತ್ಯಸಂಧನೂ ದೃಢಪ್ರತಿಜ್ಞನೂ ಆಗಿದ್ದನು.

ಸ ಸಾಗರಾಂತಾಂ ಧನುಷಾ ವಿನಿರ್ಜಿತ್ಯ ಮಹೀಮಿಮಾಮ್ ।
ಕೃತ್ವಾ ಸುದುಷ್ಕರಂ ಕರ್ಮ ಮನಃ ಸೂಕ್ಷ್ಮೇ ಸಮಾದಧೇ ॥೩॥

ಅವನು ಸಮಗ್ರ ಭೂಮಂಡಲವನ್ನು ತನ್ನ ಧನುಸ್ಸಿನಿಂದ ಜಯಿಸಿಕೊಂಡು, ಯಾರಿಂದಲೂ ಮಾಡಲಾಗದ ಕರ್ಮವನ್ನು ಮಾಡಿ ಅನಂತರ ಪರಮಾತ್ಮನಲ್ಲಿ ತನ್ನ ಮನಸ್ಸನ್ನು ನೆಲೆಗೊಳಿಸಿದನು.

ಸ್ಥಿತಸ್ಯ ವೃಕ್ಷಮೂಲೋಽಥ ತಸ್ಯ ಚಿಂತಾ ಬಭೂವ ಹ ।
ಉತ್ಸೃಜ್ಯ ಸುಮಹದ್ ರಾಜ್ಯಂ ಸೂಕ್ಷ್ಮಂ ಪ್ರತಿ ಮಹಾಮತೇ ॥೪॥

ಮಹಾಮತಿಯೇ, ಯುದ್ಧ ಮಾಡಿ ರಾಜ್ಯವನ್ನು ಕಟ್ಟುವ ಮಹಾಕರ್ಮಗಳನ್ನು ಮಾಡಬೇಕಾದ ಅಲರ್ಕನು ಪರಮಾತ್ಮನನ್ನು ಅರಸುತ್ತಾ ವೃಕ್ಷದ ಬುಡದಲ್ಲಿ ಕುಳಿತಿರುವಾಗ ಹೀಗೆ ಯೋಚನೆಯೊಂದು ಮೂಡಿತು.

ಅಲರ್ಕಃ

ಮನಸೋ ಮೇ ಬಲಂ ಜಾತಂ ಮನೋ ಜಿತ್ವಾ ಧ್ರುವೋ ಜಯಃ ।
ಅನ್ಯತ್ರ ಬಾಣಾನ್ ದಾಸ್ಯಾಮಿ ಶತ್ರುಭಿಃ ಪರಿವಾರಿತಃ ॥೫॥

ಅಲರ್ಕ– ನನ್ನ ಮನಸ್ಸಿಗೆ ಅಧಿಕವಾದ ಬಲವು ಬಂದಿದೆ. ಮನೋಬಲವೇ ಪ್ರಬಲವಾಗಿದೆ. ಇಂತಹ ಮನಸ್ಸನ್ನು ಜಯಿಸಿದರೆ ಶಾಶ್ವತ ಜಯ ಸಿಕ್ಕಿದಂತೆ. ನಾನು ಇಂದ್ರಿಯರೂಪದ ಶತ್ರುಗಳನ್ನು ಜಯಿಸಬೇಕು. ಆದ್ದರಿಂದ ಬಾಹ್ಯ ಯುದ್ಧಕ್ಕಿಂತ ಅಂತರಂಗದಲ್ಲಿ ಅಡಗಿದ ಶತ್ರುಗಳ ಕಡೆಗೆ ತಿರುಗಿ ಬಾಣ ಹೂಡುತ್ತೇನೆ.

ಯದಿದಂ ಚಾಪಲಾತ್ ಕರ್ಮ ಸರ್ವಮೇತದ್ ವಿಕರ್ಷತಿ ।
ಮನಃ ಪ್ರತಿ ಸುತೀಕ್ಷ್ಣಾಗ್ರಾನ್ ಅಹಂ ಮೋಕ್ಷ್ಯಾಮಿ ಸಾಯಕಾನ್ ॥೬॥

ಚಿತ್ತಚಾಂಚಲ್ಯದಿಂದಲೇ ಜೀವರೆಲ್ಲರೂ ಬಹುಮುಖದ ಕರ್ಮಗಳನ್ನು ಮಾಡುತ್ತಿರುತ್ತಾರೆ. ಈ ಚಾಂಚಲ್ಯವನ್ನು ಬಿಟ್ಟು ಸ್ಥಿರತೆಯನ್ನು ಹೊಂದಬೇಕು. ಆದ್ದರಿಂದ ನಾನು ಮನಸ್ಸಿನ ಮೇಲೆಯೇ ಗುರಿ ಇಟ್ಟು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತೇನೆ.

ಮನಃ

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ಭಿನ್ನಮರ್ಮಾ ಮರಿಷ್ಯಸಿ ॥೭॥

ಮನಸ್ಸು– ಅಲರ್ಕನೇ, ನಿನ್ನ ಯಾವ ಬಾಣಗಳೂ ನನ್ನನ್ನು ಮುಟ್ಟಲಾರವು. ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಇದರಿಂದ ನೀನೇ ಮರಣಕ್ಕೆ ತುತ್ತಾಗುತ್ತಿ.

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೮॥

ಆದ್ದರಿಂದ ನನ್ನನ್ನು ನಾಶಪಡಿಸಲು ಸಮರ್ಥವಾದ ಬೇರೆ ಯಾವುದಾದರೂ ಬಾಣವಿದ್ದರೆ ಪರಿಶೀಲಿಸು.

ಪಿತರಃ

ತಚ್ಛ್ರುತ್ವಾ ಸ ವಿಚಿಂತ್ಯಾಥ ತತೋ ವಚನಮಬ್ರವೀತ್ ॥೯॥

ಪಿತೃಗಳು– ಮನಸ್ಸು ಹೇಳಿದ ಮಾತನ್ನು ಕೇಳಿಸಿಕೊಂಡ ಅಲರ್ಕನು ಸ್ವಲ್ಪ ಹೊತ್ತು ಯೋಚಿಸಿ ಹೀಗೆ ಹೇಳಿದನು.

ಅಲರ್ಕಃ

ಆಘ್ರಾಯ ಸುಬಹೂನ್ ಗಂಧಾನ್ ತಾನೇವ ಪ್ರತಿ ಗೃಧ್ಯತಿ ।
ತಸ್ಮಾದ್ ಘ್ರಾಣಂ ಪ್ರತಿ ಶರಾನ್ ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೧೦॥

ಅಲರ್ಕ– ನನ್ನ ಈ ಘ್ರಾಣೇಂದ್ರಿಯವು ಅನೇಕ ಪರಿಮಳದ್ರವ್ಯಗಳನ್ನು ಆಘ್ರಾಣಿಸಿದರೂ ಪುನಃ ಪುನಃ ನೂತನ ಗಂಧಗಳನ್ನು ಬಯಸುತ್ತಿದೆ. ಆದ್ದರಿಂದ ಈ ಮೂಗಿನ ಕಡೆಯೇ ಗುರಿಯಿಟ್ಟು ಬಾಣಪ್ರಯೋಗಿಸುತ್ತೇನೆ.

ಘ್ರಾಣಃ

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ಭಿನ್ನಮರ್ಮಾ ಮರಿಷ್ಯಸಿ ॥೧೧॥

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೧೨॥

ಘ್ರಾಣೇಂದ್ರಿಯ– ಅಲರ್ಕನೇ, ನೀನು ಬಿಡುವ ಬಾಣಗಳು ಯಾವುದೇ ಕ್ರಮದಿಂದ ನನ್ನನ್ನು ಮುಟ್ಟಲಾರವು. ಅವು ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳವು ಭಗ್ನವಾದೊಡನೆ ನೀನು ಮರಣವನ್ನಪ್ಪುವೆ. ಆದ್ದರಿಂದ ನನ್ನನ್ನು ನಾಶಪಡಿಸಲು ಬೇರೆ ಯಾವುದಾದರೂ ಬಾಣಗಳಿದ್ದಲ್ಲಿ ಪರಿಶೀಲಿಸು.

ಅಲರ್ಕಃ

ಇಯಂ ಸ್ವಾದೂನ್ ರಸಾನ್ ಭುಕ್ತ್ವಾ ತಾನೇವ ಪ್ರತಿ ಗೃಧ್ಯತಿ ।
ತಸ್ಮಾಜ್ಜಿಹ್ವಾ ಪ್ರತಿ ಶರಾನ್ ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೧೩॥

ಅಲರ್ಕ– ಈ ನನ್ನ ನಾಲಿಗೆಯು ರಸಭರಿತವಾದ ಪದಾರ್ಥಗಳ ರಸವನ್ನು ಸವಿಯುತ್ತಿದ್ದರೂ ಪುನಃ ಅಂತಹ ರಸವನ್ನೇ ಬಯಸುತ್ತಿದೆ. ಆದ್ದರಿಂದ ಈ ನಾಲಿಗೆಯ ಕಡೆಯೇ ಗುರಿಯಿಟ್ಟು ಬಾಣ ಪ್ರಯೋಗಿಸುತ್ತೇನೆ.

ಜಿಹ್ವಾ

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ತತೋ ಹಾಸ್ಯಸಿ ಜೀವಿತಮ್ ॥೧೪॥

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೧೫॥

ನಾಲಿಗೆ– ಅಲರ್ಕನೇ, ನೀನು ಬಿಡುವ ಬಾಣವು ನನ್ನನ್ನು ಮುಟ್ಟವು. ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಮರ್ಮಸ್ಥಳ ಭಗ್ನವಾದಲ್ಲಿ ನೀನು ಮರಣ ಹೊಂದುವಿ. ಆದ್ದರಿಂದ ಬೇರೆ ಬಾಣಗಳನ್ನು ಯೋಚಿಸು.

ಅಲರ್ಕಃ

ಸ್ಪೃಷ್ಟ್ವಾ ತ್ವಗ್ ವಿವಿಧಾನ್ ಸ್ಪರ್ಶಾನ್ ತಾನೇವ ಪ್ರತಿ ಗೃಧ್ಯತಿ ।
ತಸ್ಮಾತ್ ತಾನ್ ಸೂದಯಿಷ್ಯೇಽಹಂ ವಿವಿಧೈಃ ಕಂಕಪತ್ರಿಭಿಃ ॥೧೬॥

ಅಲರ್ಕ– ನನ್ನ ತ್ವಗಿಂದ್ರಿಯವು ಅನೇಕ ವಿಧವಾದ ಸುಖವಸ್ತುವನ್ನು ಮುಟ್ಟುತ್ತಾ ಸ್ಪರ್ಶಸುಖವನ್ನು ಅನುಭವಿಸುತ್ತಲೇ ಇದೆ. ಆದರೆ ಇದಕ್ಕೆ ತೃಪ್ತಿಯಿಲ್ಲ. ಆದ್ದರಿಂದ ಈ ತ್ವಗಿಂದ್ರಿಯದ ಮೇಲೆ ರಣಹದ್ದುಗಳ ರೆಕ್ಕೆಗಳನ್ನು ಹೊಂದಿರುವ ಬಾಣಗಳನ್ನು ಹೂಡುತ್ತೇನೆ. ತ್ವಗಿಂದ್ರಿಯವನ್ನು ಸೀಳುತ್ತೇನೆ.

ತ್ವಕ್

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ತತೋ ಹಾಸ್ಯಸಿ ಜೀವಿತಮ್ ॥೧೭॥

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೧೮॥

ತ್ವಗಿಂದ್ರಿಯ– ಅಲರ್ಕನೇ, ನಿನ್ನ ಯಾವುದೇ ಬಾಣಗಳು ನನ್ನನ್ನು ಮುಟ್ಟಲಾರವು. ನಿನ್ನ ಮರ್ಮವನ್ನೇ ಭೇದಿಸುತ್ತವೆ. ನಂತರ ನೀನು ಸಾಯುವಿ. ಆದ್ದರಿಂದ ಬೇರೆ ಬಾಣಗಳನ್ನು ಯೋಚಿಸು.

ಅಲರ್ಕಃ

ಶ್ರುತ್ವಾ ವೈ ವಿವಿಧಾನ್ ಶಬ್ದಾನ್ ತಾನೇವ ಪ್ರತಿ ಗೃಧ್ಯತಿ ।
ತಸ್ಮಾಚ್ಛ್ರೋತ್ರಂ ಪ್ರತಿ ಶರಾನ್ ಮೋಕ್ಷಯಿಷ್ಯಾಮ್ಯಹಂ ಶಿತಾನ್ ॥೧೯॥

ಅಲರ್ಕ– ನನ್ನ ಈ ಕಿವಿಯು ಬಹು ಬಗೆಯ ಶಬ್ದಗಳನ್ನು ಕೇಳುತ್ತಿದ್ದರೂ ಪುನಃ ಶಬ್ದಗಳ ಬಯಕೆಯಲ್ಲಿಯೂ ಹಾತೊರೆಯುತ್ತಿದೆ. ಆದ್ದರಿಂದ ಕಿವಿಗೇ ಗುರಿಯಿಟ್ಟು ತೀಕ್ಷ್ಣ ಬಾಣಗಳನ್ನು ಪ್ರಯೋಗಿಸುತ್ತೇನೆ.

ಶ್ರೋತ್ರಮ್

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ತತೋ ಹಾಸ್ಯಸಿ ಜೀವಿತಮ್ ॥೨೦॥

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೨೧॥

ಶ್ರೋತ್ರೇಂದ್ರಿಯ– ಈ ಬಾಣಗಳು ನನ್ನನ್ನು ಯಾವುದೇ ಕಾರಣದಿಂದ ಮುಟ್ಟಲಾರವು. ನಿನ್ನ ಮರ್ಮವನ್ನೇ ಭೇದಿಸುತ್ತವೆ. ಇದರಿಂದ ನಿನ್ನ ಪ್ರಾಣ ಹೊರಟು ಹೋಗುವುದು. ಆದ್ದರಿಂದ ನನ್ನನ್ನು ಕೊಲ್ಲಲು ಸಮರ್ಥವಾದ ಬೇರೆ ಬಾಣಗಳನ್ನು ಪರಿಶೀಲಿಸು.

ಅಲರ್ಕಃ

ದೃಷ್ಟ್ವೈವ ವಿವಿಧಾನ್ ಭಾವಾನ್ ತಾನೇವ ಪ್ರತಿ ಗೃಧ್ಯತಿ ।
ತಸ್ಮಾಚ್ಚಕ್ಷುಃ ಪ್ರತಿ ಶರಾನ್ ಮೋಕ್ಷಯಿಷ್ಯಾಮ್ಯಹಂ ಶಿತಾನ್ ॥೨೨॥

ಅಲರ್ಕ– ಅನೇಕ ರೂಪಗಳನ್ನು ಸಾವಿರಾರು ಬಾರಿ ನೋಡಿದರೂ ನನ್ನ ಕಣ್ಣು ಪುನಃ ಪುನಃ ವಿಧವಿಧ ರೂಪಗಳನ್ನು ನೋಡಬೇಕೆಂದು ಬಯಸುತ್ತದೆ. ಆದ್ದರಿಂದ ತೀಕ್ಷ್ಣವಾದ ಬಾಣಗಳಿಂದ ಕಣ್ಣನ್ನೇ ಸಂಹರಿಸುತ್ತೇನೆ.

ಚಕ್ಷುಃ

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ಭಿನ್ನಮರ್ಮಾ ಮರಿಷ್ಯಸಿ ॥೨೩॥

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೨೪॥

ಚಕ್ಷುರಿಂದ್ರಿಯ– ಅಲರ್ಕನೇ, ನಿನ್ನ ಬಾಣಗಳು ಯಾವುದೇ ಕಾರಣದಿಂದ ಗುರಿ ಮುಟ್ಟವು. ನಿನ್ನ ಮರ್ಮಸ್ಥಳವನ್ನೇ ಭೇದಿಸುತ್ತವೆ. ಬಳಿಕ ನೀನು ಮರಣ ಹೊಂದುವಿ. ಆದ್ದರಿಂದ ನನ್ನನ್ನು ಕೊಲ್ಲಲು ಸಮರ್ಥವಾದ ಬೇರೆ ಬಾಣಗಳನ್ನು ಪರಿಶೀಲಿಸು.

ಅಲರ್ಕಃ

ಇಯಂ ನಿಷ್ಠಾ ಬಹುವಿಧಾಃ ಪ್ರಜ್ಞಯಾ ತ್ವಧ್ಯವಸ್ಯತಿ ।
ತಸ್ಮಾತ್ ಬುದ್ಧಿಂ ಪ್ರತಿ ಶರಾನ್ ಪ್ರತಿಮೋಕ್ಷ್ಯಾಮ್ಯಹಂ ಶಿತಾನ್ ॥೨೫॥

ಅಲರ್ಕ– ಈ ನನ್ನ ಬುದ್ಧಿಯು ಜ್ಞಾನಶಕ್ತಿಯಿಂದ ಅನೇಕ ನಿಶ್ಚಯಗಳನ್ನು ಹೊಂದುತ್ತದೆ. ಅನೇಕ ನಿರ್ಣಯಗಳನ್ನು ಮಾಡುವ ಈ ಬುದ್ಧಿಯನ್ನೇ ಸಂಹರಿಸುತ್ತೇನೆ. ಇದರ ಮೇಲೆ ಬಾಣಗಳನ್ನು ಪ್ರಯೋಗಿಸುತ್ತೇನೆ.

ಬುದ್ಧಿಃ

ನೇಮೇ ಬಾಣಾಸ್ತರಿಷ್ಯಂತಿ ಮಾಮಲರ್ಕ ಕಥಂಚನ ।
ತವೈವ ಮರ್ಮ ಭೇತ್ಸ್ಯಂತಿ ಭಿನ್ನಮರ್ಮಾ ಮರಿಷ್ಯಸಿ ॥೨೬॥

ಅನ್ಯಾನ್ ಬಾಣಾನ್ ಸಮೀಕ್ಷಸ್ವ ಯೈಸ್ತ್ವಂ ಮಾಂ ಸೂದಯಿಷ್ಯಸಿ ॥೨೭॥

ಬುದ್ಧಿ– ಅಲರ್ಕನೇ, ನಿನ್ನ ಬಾಣಗಳು ಯಾವ ಕಾರಣದಿಂದಲೂ ನನ್ನನ್ನು ಮುಟ್ಟವು. ನಿನ್ನ ಮರ್ಮಸ್ಥಳ ಭೇದಿಸುವ ಮೂಲಕ ನಿನ್ನನ್ನೇ ಸಾಯಿಸುತ್ತವೆ. ಆದ್ದರಿಂದ ನನ್ನನ್ನು ನಾಶಗೊಳಿಸಲು ಬೇರೆ ಯಾವುದಾದರೂ ಬಾಣಗಳಿದ್ದರೆ ಪರಿಶೀಲಿಸು.

ಪಿತರಃ

ತತೋऽಲರ್ಕಸ್ತಪೋ ಘೋರಮಾಸ್ಥಾಯ ತು ಸುದುಷ್ಕರಮ್ ।
ನಾಭ್ಯಗಚ್ಛತ್ ಪರಂ ಶಕ್ತ್ಯಾ ಬಾಣಮೇತೇಷು ಸಪ್ತಸು ॥೨೮॥

ಪಿತೃಗಳು– ನಂತರ ಅಲರ್ಕನು ಪಂಚೇಂದ್ರಿಯಗಳನ್ನು, ಬುದ್ಧಿಯನ್ನು, ಮನಸ್ಸನ್ನು ಕೊಲ್ಲಲು ಸಮರ್ಥವಾದ ಬಾಣಗಳ ಪ್ರಾಪ್ತಿಗೆ ಆ ವೃಕ್ಷದ ಬುಡದಲ್ಲಿ ಕುಳಿತು ದುಷ್ಕರವಾದ ತಪಸ್ಸನ್ನಾಚರಿಸಿದನು.

ಸುಸಮಾಹಿತಚೇತಾಸ್ತು ಸತತಂ ಚಿಂತಯತ್ ಪ್ರಭುಃ ॥೨೯॥

ಸ ವಿಚಿಂತ್ಯ ಚಿರಂ ಕಾಲಮಲರ್ಕೋ ದ್ವಿಜಸತ್ತಮ ।
ನಾಧ್ಯಗಚ್ಛತ್ ಪರಂ ಶ್ರೇಯೋ ಯೋಗಾನ್ ಮತಿಮತಾಂ ವರಃ ॥೩೦॥

ಮನಸ್ಸನ್ನು ಏಕಾಗ್ರತೆಗೊಳಿಸಿಕೊಂಡು ಯಾವಾಗಲೂ ಚಿಂತಿಸುತ್ತಿದ್ದರೂ ಅವುಗಳನ್ನು ವಿನಾಶಗೊಳಿಸುವಂತಹ ಬಾಣಗಳು ಅವನಿಗೆ ದೊರೆಯಲೇ ಇಲ್ಲ.

ಸ ಏಕಾಗ್ರಂ ಮನಃ ಕೃತ್ವಾ ನಿಶ್ಚಲೋ ಯೋಗಮಾಸ್ಥಿತಃ ।
ಇಂದ್ರಿಯಾಣಿ ಜಘಾನಾಶು ಬಾಣೇನೈಕೇನ ವೀರ್ಯವಾನ್ ॥೩೧॥

ಪರಶುರಾಮನೇ, ಬಳಿಕ ಅಲರ್ಕನು ಏಕಾಗ್ರಚಿತ್ತದಿಂದ ಬಹಳ ಕಾಲದವರೆಗೆ ಯೋಚಿಸಿದ ಬಳಿಕ ಬುದ್ಧಿವಂತನಾದ ಅಲರ್ಕನಿಗೆ ಶ್ರೇಯಃಪ್ರಾಪ್ತಿಗೆ ಯೋಗಕ್ಕಿಂತಲೂ ಮಿಗಿಲಾದ ಸಾಧನ ಯಾವುದೂ ಕಂಡುಬರಲಿಲ್ಲ. ಮನಸ್ಸನ್ನು ಏಕಾಗ್ರಗೊಳಿಸಿ ಆಸನದಲ್ಲಿ ಸ್ಥಿರವಾಗಿ ಕುಳಿತು ಧ್ಯಾನಯೋಗವನ್ನು ಹೊಂದಿದನು. ಈ ಪರಮಾತ್ಮನ ಧ್ಯಾನಯೋಗದ ಒಂದೇ ಬಾಣದಿಂದ ಸಮಸ್ತ ಇಂದ್ರಿಯಗಳನ್ನು ವಿನಾಶಗೊಳಿಸಿದನು.

ಯೋಗೇನಾತ್ಮಾನಮಾವಿಶ್ಯ ಸ ಸಿದ್ಧಿಂ ಪರಮಂ ಯಯೌ ।
ವಿಸ್ಮಿತಶ್ಚಾಪಿ ರಾಜರ್ಷಿಃ ಇಮಾಂ ಗಾಥಾಂ ಜಗಾದ ಹ ॥೩೨॥

ಧ್ಯಾನಯೋಗದಿಂದ ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸಿ ಶ್ರೇಷ್ಠವಾದ ಸಿದ್ಧಿಯನ್ನು ಹೊಂದಿದನು. ಧ್ಯಾನಯೋಗ ಒಂದರಿಂದಲೇ ಎಲ್ಲ ಇಂದ್ರಿಯಗಳು ಪರಾಜಯ ಹೊಂದಿದ್ದನ್ನು ಕಂಡ ಅಲರ್ಕನು ಆಶ್ಚರ್ಯಚಕಿತನಾಗಿ ಈ ಮಾತನ್ನು ಹೇಳಿದನು.

ಅಲರ್ಕಃ

ಅಹೋ ಕಷ್ಟಂ ಯದಸ್ಮಾಭಿಃ ಪೂರ್ವಂ ರಾಜ್ಯಮನುಷ್ಠಿತಮ್ ।
ಅತಃ ಪಶ್ಚಾನ್ಮಯಾ ಜ್ಞಾತಂ ಯೋಗಾನ್ನಾಸ್ತಿ ಪರಂ ಸುಖಮ್ ॥೩೩॥

ಕಷ್ಟ-ಕಷ್ಟ. ನಾವು ಇಲ್ಲಿಯ ತನಕ ಬಾಹ್ಯಕರ್ಮಗಳಲ್ಲಿಯೇ ಆಸಕ್ತಿಹೊಂದಿದ್ದೇವೆ. ಭೋಗದ ಬಯಕೆಯಿಂದ ತುಂಬಿರುವ ನಾವು ರಾಜ್ಯವನ್ನೇ ಬಯಸುತ್ತಿದ್ದೇವೆ. ಸುಖ ಬೇಕೆಂದರೆ ಧ್ಯಾನಯೋಗಕ್ಕೆ ಸಾಗಬೇಕು. ಇದಕ್ಕಿಂತ ಮಿಗಿಲಾದ ಸಾಧನವು ಬೇರೆ ಯಾವುದೂ ಇಲ್ಲವೆಂದು ಬಹಳ ಕಾಲದ ಬಳಿಕ ನನಗೆ ತಿಳಿದಿದೆ.

ಪಿತರಃ

ಇತಿ ತ್ವಮಪಿ ಜಾನೀಹಿ ರಾಮ ಮಾ ಕ್ಷತ್ರಿಯಾನ್ ವಧೀಃ ।
ತಪೋ ಘೋರಮುಪಾತಿಷ್ಠ ತತಃ ಶ್ರೇಯೋऽಭಿಪತ್ಸ್ಯಸೇ ॥೩೪॥

ಪಿತೃಗಳು– ಪರಶುರಾಮನೇ, ಈ ವಿಷಯವನ್ನು ನೀನೂ ಚೆನ್ನಾಗಿ ತಿಳಿದುಕೊ. ಇನ್ನು ಮುಂದೆ ಕ್ಷತ್ರಿಯರನ್ನು ಸಂಹರಿಸಬೇಡ. ಘೋರವಾದ ತಪಸ್ಸನ್ನು ಆಚರಿಸು, ಶ್ರೇಯಸ್ಸನ್ನು ಹೊಂದುವಿ.

ಬ್ರಾಹ್ಮಣಃ

ಇತ್ಯುಕ್ತಃ ಪಿತೃಭಿಃ ಸೋऽಥ ತಪೋ ಘೋರಂ ಸಮಾಸ್ಥಿತಃ ।
ಜಾಮದಗ್ನ್ಯೋ ಮಹಾಭಾಗೇ ಸಿದ್ಧಿಂ ಚ ಪರಮಾಂ ಗತಃ ॥೩೫॥

ಬ್ರಾಹ್ಮಣ– ಸುಭಗೇ, ಪಿತೃಗಳಿಂದ ಹೀಗೆ ಹೇಳಿಸಿಕೊಂಡ ಸೌಭಾಗ್ಯಶಾಲಿಯಾದ ಜಾಮದಗ್ನಿಯು ಘೋರವಾದ ತಪಸ್ಸನ್ನು ಮಾಡಿ ಸಾಮಾನ್ಯರಿಂದ ಹೊಂದಲಾರದ ಸಿದ್ಧಿಯನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಅಲರ್ಕಚರಿತ್ರಕಥನಂ ನಾಮ
ಏಕತ್ರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆರಡನೆಯ ಅಧ್ಯಾಯ

ಬ್ರಾಹ್ಮಣನು ಬ್ರಾಹ್ಮಣಗೆ ಕಾಮ-ಕ್ರೋಧಗಳನ್ನು ಬಿಟ್ಟು ಭಗವಂತನನ್ನು ಚಿಂತಿಸಬೇಕು. ಇದೇ ಪರಮಪುರುಷಾರ್ಥ ಎಂದು ತಿಳಿಸಲು ಅಂಬರೀಶ ಹಾಡಿದ ಆಧ್ಯಾತ್ಮಿಕ ಸ್ವಾರಾಜ್ಯಗೀತೆಯನ್ನು ಉಪದೇಶಿಸಿದುದು.

ಬ್ರಾಹ್ಮಣಃ

ತ್ರಯೋ ವೈ ರಿಪವೋ ಲೋಕೇ ನವಧಾ ಗುಣತಃ ಸ್ಮೃತಾಃ ।
ಹರ್ಷಃ ಸ್ತಂಭೋಽತಿಮಾನಶ್ಚ ತ್ರಯಸ್ತೇ ಸಾತ್ವಿಕಾ ಗುಣಾಃ ॥೧॥

ಜಗತ್ತಿನಲ್ಲಿ ಮಾನವರಿಗೆ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಶತ್ರುಗಳಿದ್ದಾರೆ. ಮೂರು ಗುಣಗಳ ಪ್ರಭೇದದಿಂದಲೇ ಒಂಬತ್ತು ಪ್ರಕಾರವಾಗಿ ವಿಂಗಡಿಸಲ್ಪಟ್ಟಿವೆ. ಸತ್ವಗುಣವು ಜ್ಞಾನಜನಕವೆನಿಸಿದೆ. ಜ್ಞಾನದ ಮೂಲಕ ಮನಸ್ಸನ್ನು ನಿಗ್ರಹಿಸಿಕೊಳ್ಳದಿದ್ದಲ್ಲಿ ನಾನೇ ವಿದ್ವಾಂಸನು ಎಂಬ ಅಹಂಕಾರ, ಜಗತ್ತಿನ ವಿಷಯಸುಖಗಳಲ್ಲಿಯೇ ಸಂತೋಷ, ಜಂಭ ಇವುಗಳು ಉಂಟಾಗುತ್ತವೆ.

ಶೋಕಃ ಕ್ರೋಧೋಽಭಿಸಂರಂಭೋ ರಾಜಸಾಸ್ತೇ ಗುಣಾಃ ಸ್ಮೃತಾಃ ।
ಸ್ವಪ್ನಸ್ತಂದ್ರೀ ಚ ಮೋಹಶ್ಚ ತ್ರಯಸ್ತೇ ತಾಮಸಾ ಗುಣಾಃ ॥೨॥

ರಜೋಗುಣದಿಂದ ಹುಟ್ಟುವ ದುರ್ಗುಣಗಳು ಶೋಕ, ಕ್ರೋಧ, ಅತಿಯಾದ ದ್ವೇಷಭಾವ. ತಮೋಗುಣದಿಂದ ಹುಟ್ಟುವ ಗುಣಗಳು ಸ್ವಪ್ನ, ಆಲಸ್ಯ, ಮೋಹ.

ಏತಾನ್ ನಿಕೃತ್ಯ ಧೃತಿಮಾನ್ ಬಾಣಸಂಘೈರತಂದ್ರಿತಃ ।
ಜಿತ್ವಾ ಪರಾನುತ್ಸಹತೇ ಪ್ರಶಾಂತಃ ಸ್ಯಾಜ್ಜಿತೇಂದ್ರಿಯಃ ॥೩॥

ಜಿತೇಂದ್ರಿಯನಾದ, ಪ್ರಶಾಂತ ಮನಸ್ಕನಾದ, ಆಲಸ್ಯರಹಿತನಾದ ಧೀರಪುರುಷನು ಶಮ-ದಮಾದಿಗಳೆಂಬ ಬಾಣಗಳ ಮೂಲಕ ಸತ್ವಾದಿ ಗುಣಗಳನ್ನು ಕತ್ತರಿಸಿದರೆ ಶತ್ರುಗಳನ್ನು ಗೆಲ್ಲಬಹುದು.

ಅತ್ರ ಗಾಥಾಃ ಕೀರ್ತಯಂತಿ ಪುರಾಕಲ್ಪವಿದೋ ಜನಾಃ ।
ಅಂಬರೀಷೇಣ ಯಾ ಗೀತಾ ರಾಜ್ಞಾ ರಾಜ್ಯಂ ಪ್ರಶಾಸತಾ ॥೪॥

ಈ ವಿಷಯದಲ್ಲಿ ಹಿಂದಿನ ಕಲ್ಪವನ್ನು ತಿಳಿದ ಜನರು ಕೆಲವು ಶ್ಲೋಕವನ್ನು ಹೇಳುತ್ತಾರೆ. ಶಾಂತಿಯಲ್ಲಿ ಆಸಕ್ತನಾದ ಅಂಬರೀಶ ರಾಜನು ಪಠಿಸಿದ ಶ್ಲೋಕಗಳಿವು.

ಸಮುದೀರ್ಣೇಷು ದುಷ್ಟೇಷು ವಧ್ಯಮಾನೇಷು ಸರ್ವಶಃ ।
ಜಗ್ರಾಹ ತರಸಾ ರಾಜ್ಯಮಂಬರೀಷ ಇತಿ ಶ್ರುತಿಃ ॥೫॥

ಲೋಕದಲ್ಲಿ ಅಪರಾಧಗಳು ಅಧಿಕವಾಗುತ್ತಿರಲು, ಅವುಗಳಿಂದ ಸಜ್ಜನರಿಗೆ ಪೀಡೆಯುಂಟಾಗುತ್ತಿರಲು ಯಶೋವಂತನಾದ ಅಂಬರೀಶ ಚಕ್ರವರ್ತಿಯು ಈ ತನ್ನ ಪ್ರಜ್ಞಾವಂತಿಕೆಯಿಂದ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡನು.

ಸನ್ನಿಗೃಹ್ಯ ಮಹಾದೋಷಾನ್ ಸಾಧೂನ್ ಸಮಭಿಪೂಜ್ಯ ಚ ।
ಜಗಾಮ ಮಹತೀಂ ಸಿದ್ಧಿಂ ಗಾಥಾಶ್ಚೇಮಾ ಜಗಾದ ಹ ॥೬॥

ಅದಕ್ಕಿಂತ ಮೊದಲು ಅವನು ತನ್ನಲ್ಲಿರುವ ದೋಷಗಳನ್ನೆಲ್ಲ ಪರಿಹರಿಸಿಕೊಂಡು, ಆ ದೇಶದಲ್ಲಿರುವ ಅಪರಾಧಗಳನ್ನು ತಡೆಗಟ್ಟಿ, ಸತ್ಪುರುಷರನ್ನು ಗೌರವಿಸಿ ಸತ್ಕರಿಸಿ ಮಹಾಸಿದ್ಧಿಯನ್ನು ಪಡೆದುಕೊಂಡನು. ಈ ಪ್ರಸಂಗದಲ್ಲಿ ಅವನು ಹೇಳಿದ ನುಡಿಗಳು.

ಅಂಬರೀಷಃ

ಭೂಯಿಷ್ಠಂ ಮೇ ಜಿತಾ ದೋಷಾ ನಿಹತಾಃ ಸರ್ವಶತ್ರವಃ ।
ಏಕೋ ದೋಷೋऽವಶಿಷ್ಟಸ್ತು ವಧ್ಯೇಷ್ವನಿಹತೋ ಮಯಾ ॥೭॥

ನನ್ನಲ್ಲಿ ಅನೇಕ ದೋಷಗಳಿದ್ದವು. ಅದೆಲ್ಲವನ್ನೂ ನಾನು ಪರಿಹರಿಸಿಕೊಂಡು ಬಳಿಕ ಶತ್ರುಗಳನ್ನು ನಿಗ್ರಹಿಸಿದೆನು. ಆದರೂ ನನ್ನಲ್ಲಿ ಒಂದು ದೊಡ್ಡ ದೋಷವು ಹಾಗೆಯೇ ಉಳಿದುಕೊಂಡಿದೆ. ಅದನ್ನು ಸಂಹರಿಸಲು ನನ್ನಿಂದ ಸಾಧ್ಯವಾಗಲಿಲ್ಲ.

ಯೇನ ಯುಕ್ತೋ ಜಂತುರಯಂ ತೃಷ್ಣಾಮೇವಾಧಿಗಚ್ಛತಿ ।
ತೃಷಾರ್ತ ಇವ ನಿಮ್ನಾನಿ ಪರಿಧಾವತಿ ನಿತ್ಯದಾ ॥೮॥

ಈ ದೋಷದಿಂದ ಕೂಡಿದ ವೈರಾಗ್ಯವನ್ನು ಪಡೆಯುವುದಿಲ್ಲ. ಆಸೆಗೆ ವಶನಾದ ಮಾನವನು ಜಗತ್ತಿನಲ್ಲಿ ಅತ್ಯಂತ ಕೆಟ್ಟದ್ದಾದ ಕರ್ಮಗಳನ್ನು ಮಾಡಲು ಮುಂದಾಗುತ್ತಾನೆ. ನಾನು ಈ ಪ್ರಶ್ನೆಗೆ ತುತ್ತಾಗಿ ಹೀನಕರ್ಮಗಳನ್ನು ಮಾಡುತ್ತಿದ್ದೇನೆ. ಅವನು ಅರಿಯುವುದೇ ಇಲ್ಲ.

ಅಕಾರ್ಯಮಪಿ ಯೇನೇಹ ಪ್ರಯುಕ್ತಃ ಸೇವತೇ ನರಃ ।
ತಂ ಲೋಭಮಸಿಭಿಸ್ತೀಕ್ಷ್ಣೈರ್ನಿಕೃತ್ಯ ಸುಖಮೇಧತೇ ॥೯॥

ಲೋಭದಿಂದ ಪ್ರೇರಿತನಾದ ಮಾನವನು ಮಾಡಬಾರದ ಕರ್ಮಗಳನ್ನೇ ಮಾಡುತ್ತಾನೆ. ಅಂತಹ ಲೋಭವೆಂಬ ದೋಷವನ್ನು ತೀಕ್ಷ್ಣವಾದ ಜ್ಞಾನವೆಂಬ ಕತ್ತಿಯಿಂದ ತುಂಡರಿಸಿದ ವ್ಯಕ್ತಿಯು ಸುಖವನ್ನು ಹೊಂದುತ್ತಾನೆ.

ಲೋಭಾದ್ಧಿ ಜಾಯತೇ ತೃಷ್ಣಾ ತತಶ್ಚಿತ್ತಂ ಪ್ರಸಜ್ಯತೇ ।
ಸ ಲಿಪ್ಸಮಾನೋ ಲಭತೇ ಭೂಯಿಷ್ಠಂ ರಾಜಸಾನ್ ಗುಣಾನ್ ॥೧೦॥

ತದವಾಪ್ತೌ ತು ಲಭತೇ ಭೂಯಿಷ್ಠಂ ತಾಮಸಾನ್ ಗುಣಾನ್ ॥೧೧॥

ಲೋಭದಿಂದ ತೃಷ್ಣೆಯು, ತೃಷ್ಣೆಯಿಂದ ಚಿಂತೆಯು ಹುಟ್ಟುತ್ತದೆ. ಈ ತೃಷ್ಣೆಯ ಆದಿಕ್ಯವೇ ಧನ-ಕನಕಾದಿಗಳ ಅಪೇಕ್ಷೆಯನ್ನು ಹುಟ್ಟಿಸುತ್ತದೆ. ಇವುಗಳ ಲೋಭದ ಆಧಿಕ್ಯವು ರಜೋಗುಣವನ್ನು ಅಭಿವೃದ್ಧಿಗೊಳಿಸುತ್ತದೆ. ಇದರಿಂದ ತಾನು ಅಪೇಕ್ಷಿಸಿದ ವಸ್ತುಗಳೆಲ್ಲವನ್ನೂ ಪಡೆದುಕೊಂಡು ಬಳಿಕ ತಾಮಸ ಗುಣದ ಕಡೆ ಸಾಗುತ್ತಾನೆ.

ಸ ತೈರ್ಗುಣೈಃ ಸಂಹತದೇಹಬಂಧನಃ
ಪುನಃ ಪುನರ್ಜಾಯತಿ ಕರ್ಮ ಚೇಹತೇ ।
ಜನಕ್ಷಯೇ ಭಿನ್ನವಿಕೀರ್ಣದೇಹೋ
ಪುನರ್ಮರ್ತ್ಯಂ ಗಚ್ಛತಿ ಜನ್ಮನಿ ಸ್ವೇ ॥೧೨॥

ಆದ್ದರಿಂದ ಮನುಷ್ಯನು ಈ ಮೂರುಗುಣಗಳ ಮೂಲಕವಾಗಿಯೇ ಸಂಸಾರದ ಬಂಧನಕ್ಕೆ ತುತ್ತಾಗಿದ್ದಾನೆ. ಪುನಃ ಪುನಃ ಹುಟ್ಟುತ್ತಾನೆ. ಅನೇಕ ವಿಧವಾದ ಕರ್ಮಗಳನ್ನು ಮಾಡುತ್ತಿರುತ್ತಾನೆ. ಒಂದು ಜನ್ಮವು ನಾಶವಾದ ಬಳಿಕ ಆ ದೇಹವನ್ನು ಕಳೆದುಕೊಂಡು ಪಂಚಭೂತಗಳಲ್ಲಿ ಆ ದೇಹವು ಲಯ ಹೊಂದಿದರೂ ನಿತ್ಯನಾದ ಚೇತನನು ಕರ್ಮವನ್ನು ಕಳೆದುಕೊಂಡು ಜನ್ಮವನ್ನು ಪುನಃ ಪಡೆಯುತ್ತಾನೆ, ಪುನಃ ಸಾಯುತ್ತಾನೆ. ಜನನ-ಮರಣಗಳೆಂಬ ಚಕ್ರದಲ್ಲಿ ಸಂಚರಿಸುತ್ತಲೇ ಇರುತ್ತಾನೆ.

ತಸ್ಮಾದೇನಂ ಸಮ್ಯಗವೇಕ್ಷ್ಯ ಲೋಭಂ
ನಿಗೃಹ್ಯ ಧೃತ್ಯಾऽऽತ್ಮನಿ ರಾಜ್ಯಮಿಚ್ಛೇತ್ ।

ಏತದ್ ರಾಜ್ಯಂ ನಾನ್ಯದಸ್ತೀತಿ ವಿದ್ಯಾತ್
ಯಸ್ತೇನ ರಾಜ್ಞಾ ವಿಜಿತೋಽಮುಯೈಕಃ ॥೧೩॥

ಆದ್ದರಿಂದ ಲೋಭದ ಸ್ವರೂಪವನ್ನು ಅರ್ಥೈಸಿಕೊಂಡು ಧೈರ್ಯದಿಂದ ಇದನ್ನು ನಿಗ್ರಹಿಸಿ ಪರಮಾತ್ಮನ ಚಿಂತನೆಯಲ್ಲಿ ಸಾಮ್ರಾಜ್ಯವನ್ನು ಕಟ್ಟಲು ಬಯಸಬೇಕು. ಅದೇ ನಿಜವಾದ ರಾಜ್ಯವೆನಿಸಿದೆ. ಜೀವನಿಗೆ ಸಂಬಂಧಿಸಿದ ಈ ರಾಜ್ಯವನ್ನು ಬಿಟ್ಟು ಬೇರೆ ಯಾವುದೂ ಇಲ್ಲ. ಯಾವನು ತನ್ನನ್ನು ಗೆದ್ದುಕೊಂಡು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡಿದ್ದಾನೋ ಅವನೇ ನಿಜವಾದ ರಾಜನು.

ಬ್ರಾಹ್ಮಣಃ

ಇತಿ ರಾಜ್ಞಾಽಂಬರೀಷೇಣ ಗಾಥಾ ಗೀತಾ ಯಶಸ್ವಿನೀ ।
ಆಧಿರಾಜ್ಯಂ ಪುರಸ್ಕೃತ್ಯ ಲೋಭಮೇಕಂ ನಿಕೃಂತತಾ ॥೧೪॥

ಬ್ರಾಹ್ಮಣ– ಬ್ರಾಹ್ಮಣಿ, ಈ ರೀತಿಯಾಗಿ ಪರಮಾತ್ಮನೆಂಬ ರಾಜ್ಯವನ್ನು ಮುಂದೆ ಮಾಡಿಕೊಂಡು ಪರಮಶತ್ರುವಾದ ಲೋಭವನ್ನು ನಿಗ್ರಹಿಸಿದ ಯಶೋವಂತನಾದ ಅಂಬರೀಶ ರಾಜನು ಹಾಡಿದ ಶ್ಲೋಕಗಳು ಇವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಅಂಬರೀಷಚರಿತ್ರಕಥನಂ ನಾಮ
ದ್ವಾತ್ರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ಮೂರನೆಯ ಅಧ್ಯಾಯ

ಬ್ರಾಹ್ಮಣನು ತನ್ನ ಪತ್ನಿಗೆ ಮಮತೆಯನ್ನು ತ್ಯಾಗ ಮಾಡಲು ದೃಷ್ಟಾಂತವಾಗಿ ಬ್ರಾಹ್ಮಣ–ಜನಕಸಂವಾದವನ್ನು ಹೇಳಿದುದು.

ಬ್ರಾಹ್ಮಣಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಬ್ರಾಹ್ಮಣಸ್ಯ ಚ ಸಂವಾದಂ ಜನಕಸ್ಯ ಚ ಭಾಮಿನಿ ॥೧॥

ಬ್ರಾಹ್ಮಣ– ಬ್ರಾಹ್ಮಣೆ, ಈ ವಿಷಯದಲ್ಲಿ ಬ್ರಾಹ್ಮಣನಿಗೂ ಜನಕರಾಜನಿಗೂ ನಡೆದ ಸಂವಾದ ರೂಪ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಬ್ರಾಹ್ಮಣಂ ಜನಕೋ ರಾಜಾ ಸನ್ನಂ ಕಸ್ಮಿಂಶ್ಚಿದಾಗಸಿ ।
ವಿಷಯೇ ಮೇ ನ ವಸ್ತವ್ಯಮಿತಿ ಶಿಷ್ಯಾರ್ಥಮಬ್ರವೀತ್ ॥೨॥

ಜನಕರಾಜನ ಆಸ್ಥಾನದಲ್ಲಿ ಪಾಠಕನಾಗಿರುವ ಬ್ರಾಹ್ಮಣನು ಯಾವುದೋ ಒಂದು ಅಪರಾಧವನ್ನು ಮಾಡಿ ಸಿಕ್ಕಿಬಿದ್ದ. ಅವನನ್ನು ಶಿಕ್ಷಿಸುವ ದೃಷ್ಟಿಯಿಂದ ಜನಕರಾಜನು ಇನ್ನು ಮುಂದೆ ನೀನು ನನ್ನ ದೇಶದಲ್ಲಿ ಇರಬಾರದು ಎಂದು ಆದೇಶಿಸಿದನು.

ಇತ್ಯುಕ್ತಃ ಪ್ರತ್ಯುವಾಚಾಥ ಬ್ರಾಹ್ಮಣೋ ರಾಜಸತ್ತಮಃ ॥೩॥

ಈ ರೀತಿ ಜನಕರಾಜನು ಹೇಳಿದಾಗ ಅವನಿಂದ ಆಜ್ಞಪ್ತನಾದ ಬ್ರಾಹ್ಮಣನು ಜನಕರಾಜನನ್ನು ಕುರಿತು ಪ್ರಶ್ನಿಸಿದನು.

ಆಚಕ್ಷ್ವ ವಿಷಯಾನ್ ರಾಜನ್ ಯಾನ್ ಯಾಂಸ್ತವ ವಶೇ ಸ್ಥಿತಾನ್ ।
ಸೋಽನ್ಯಸ್ಯ ವಿಷಯೇ ರಾಜ್ಞೋ ವಸ್ತುಮಿಚ್ಛಾಮ್ಯಹಂ ವಿಭೋ ॥೪॥

ವಚಸ್ತೇ ಕರ್ತುಮಿಚ್ಛಾಮಿ ಯಥಾಶಾಸ್ತ್ರಂ ಮಹೀಪತೇ ॥೫॥

ಜನಕರಾಜನೇ, ನಿನ್ನ ರಾಜ್ಯದ ಗಡಿ ಎಷ್ಟು ಎಂಬುದನ್ನು ಹೇಳು. ಇದನ್ನು ತಿಳಿದುಕೊಂಡು ಇನ್ನೊಂದು ರಾಜ್ಯಕ್ಕೆ ತೆರಳುತ್ತೇನೆ. ನೀನು ಹೇಳಿದಂತೆ ನಡೆದುಕೊಳ್ಳಲು ಬಯಸುತ್ತೇನೆ.

ಬ್ರಾಹ್ಮಣಃ

ಇತ್ಯುಕ್ತಸ್ತು ತದಾ ರಾಜಾ ಬ್ರಾಹ್ಮಣೇನ ಯಶಸ್ವಿನಾ ।
ಮುಹುರುಷ್ಣಂ ಚ ನಿಃಶ್ವಸ್ಯ ನ ಸ ತಂ ಪ್ರತ್ಯಭಾಷತ ॥೬॥

ಬ್ರಾಹ್ಮಣ– ಸುಭಗಳೇ, ಈ ರೀತಿಯಾಗಿ ಬ್ರಾಹ್ಮಣನು ಹೇಳಲು ಜನಕರಾಜನು ಬಿಸಿ ಉಸಿರನ್ನು ದುಃಖದಿಂದ ಬಿಟ್ಟು ಸ್ವಲ್ಪ ಸಮಯ ಬ್ರಾಹ್ಮಣನನ್ನು ಕುರಿತು ಯಾವ ಮಾತುಗಳನ್ನೂ ಹೇಳಲಿಲ್ಲ.

ತಮಾಸೀನಂ ಧ್ಯಾಯಮಾನಂ ರಾಜಾನಮಮಿತೌಜಸಮ್ ।
ಕಶ್ಮಲಂ ಸಹಸಾऽಗಚ್ಛದ್ ಭಾನುಮಂತಮಿವ ಗ್ರಹಃ ॥೭॥

ಬಹಳ ಕಾಲ ಚಿಂತಿಸುತ್ತಿರುವ ರಾಜನನ್ನು ರಾಹುವೆಂಬ ಕಶ್ಮಲವು ಸೂರ್ಯನನ್ನು ಆವರಿಸುವಂತೆ ಮೋಹವು ರಾಜನನ್ನು ಆವರಿಸಿತು.

ತಮಾಶ್ವಾಸ್ಯ ತತೋ ರಾಜಾ ವ್ಯಪೇತೇ ಕಶ್ಮಲೇ ತದಾ ।
ತತೋ ಮುಹೂರ್ತಾದಿವ ತಂ ಬ್ರಾಹ್ಮಣಂ ವಾಕ್ಯಮಬ್ರವೀತ್ ॥೮॥

ಮುಹೂರ್ತಕಾಲ ಸೈರಿಸಿಕೊಂಡ ರಾಜನು ಮೋಹವು ಪರಿಹಾರವಾದ ಮೇಲೆ ಬ್ರಾಹ್ಮಣನನ್ನು ಕುರಿತು ಹೀಗೆ ನುಡಿದನು.

ಜನಕಃ

ಪಿತೃಪೈತಾಮಹೇ ರಾಜ್ಯೇ ವಶ್ಯೇ ಜನಪದೇ ಸತಿ ।
ವಿಷಯಂ ನಾಧಿಗಚ್ಛಾಮಿ ವಿಚಿನ್ವನ್ ಪೃಥಿವೀಮಿಮಾಮ್ ॥೯॥

ಜನಕರಾಜ– ಬ್ರಾಹ್ಮಣನೇ, ಇದೇ ರಾಜ್ಯಕ್ಕೆ ನನ್ನ ತಂದೆ, ನನ್ನ ಮುತ್ತಾತಂದಿರು ರಾಜರಾಗಿದ್ದರು. ಅವರು ಗತಿಸಿದ ಬಳಿಕ ಅವರಿಗೆ ಈ ರಾಜ್ಯವು ಸಂಬಂಧ ಪಡಲಿಲ್ಲ. ಅದರಂತೆ ಈ ರಾಜ್ಯವು ಇಂದಲ್ಲ ನಾಳೆ ನನ್ನಿಂದಲೂ ತ್ಯಾಗವಾಗುವುದರಿಂದ ನನ್ನ ರಾಜ್ಯ ಎಂಬುದು ಈ ಭೂಮಂಡಲದಲ್ಲಿ ಹುಡುಕಿದರೂ ಯಾವುದೂ ಕಾಣಿಸುತ್ತಿಲ್ಲ.

ವ್ಯಾಖ್ಯಾನ ವಿಶೇಷ– ಸಮಗ್ರದೇಶವು ಜನಕರಾಜನ ದೇಶವೇ ಆಗಿದೆ. ಜನಕರಾಜನ ದೇಶವಲ್ಲದ ತುಣುಕು ಭೂಮಿಯು ಇರುವುದಿಲ್ಲ ಎಂದು ಜನಕರಾಜನು ಸ್ವಲ್ಪ ಸಮಯ ಆಲೋಚಿಸಿ, ಎಲ್ಲವೂ ನನ್ನದೇ ಆಗಿದೆ ಎಂದು ಬ್ರಾಹ್ಮಣನಿಗೆ ಹೇಳಿದನು ಎಂಬುದಾಗಿ ಕೆಲವರು ವ್ಯಾಖ್ಯಾನಿಸಿದ್ದಾರೆ. ಆದರೆ ಜನಕರಾಜನು ಪರಮಬ್ರಹ್ಮಜ್ಞಾನಿಯಾದುದರಿಂದ ಮೋಹವನ್ನು ತ್ಯಾಗ ಮಾಡಿ, ನನಗೆ ಸಂಬಂಧಿಸಿದ ರಾಜ್ಯವೇ ಇಲ್ಲ ಎಂಬುದನ್ನು ಅರ್ಥೈಸಿಕೊಂಡನು ಎಂಬುದು ವ್ಯಾಸರ ಹಿಂದಿನ, ಮುಂದಿನ ಮಾತುಗಳಿಗೆ ಯೋಗ್ಯವಾದ ಅನ್ವಯವಾಗುತ್ತದೆ. ಲಕ್ಷಾಲಂಕಾರದ ವ್ಯಾಖ್ಯಾನ ಅರ್ಥವತ್ತಾಗಿದೆ.

ನಾಧ್ಯಗಚ್ಛಂ ಯದಾ ಪೃಥ್ವ್ಯಾಂ ಮಿಥಿಲಾ ಮಾರ್ಗಿತಾ ಮಯಾ ।
ನಾಧ್ಯಗಚ್ಛಂ ಯದಾ ತಸ್ಯಾಂ ಸ್ವಪ್ರಜಾ ಮಾರ್ಗಿತಾ ಮಯಾ ॥೧೦॥

ಅಖಂಡಭೂಮಂಡಲದಲ್ಲಿ ನನ್ನ ದೇಶವು ಯಾವುದೆಂಬುದನ್ನು ನನಗೆ ಗುರುತಿಸಲಾಗದಿದ್ದಾಗ ಮಿಥಿಲಾಪ್ರಾಂತದಲ್ಲಿಯೇ ನನ್ನ ದೇಶ ಯಾವುದೆಂದು ಹುಡುಕಿದೆ.

ನಾಧ್ಯಗಚ್ಛಂ ಯದಾ ತಾಸು ತತೋ ಮೇ ಕಶ್ಮಲೋಽಭವತ್ ।
ತತೋ ಮೇ ಕಶ್ಮಲಸ್ಯಾಂತೇ ಮತಿಃ ಪುನರುಪಸ್ಥಿತಾ ॥೧೧॥

ಆ ಮಿಥಿಲಾ ಪಟ್ಟಣದಲ್ಲಿಯೂ ನನ್ನ ಅಧಿಕಾರಕ್ಕೊಳಪಟ್ಟ ಪ್ರದೇಶವು ಸಿಕ್ಕದೆ ಇದ್ದುದರಿಂದ ಪ್ರಜೆಗಳ ಮೇಲಾದರೂ ನನ್ನ ಅಧಿಕಾರವಿದೆಯೇ ಎಂಬುದನ್ನು ಪುನಃ ವಿಚಾರ ಮಾಡಿದೆ. ಪ್ರಜೆಗಳ ಮೇಲೂ ನನ್ನ ಅಧಿಕಾರವಿಲ್ಲ ಎಂದು ತಿಳಿದ ಕೂಡಲೆ ನಾನು ಮೋಹವಶನಾದೆನು. ಬಹಳ ಸಮಯ ವಿಚಾರ ಮಾಡುತ್ತಾ ನನ್ನ ಮೋಹವನ್ನು ಕಳೆದು ಕೊಂಡೆನು. ನನ್ನ ಬುದ್ಧಿಯು ಪುನಃ ಸ್ಥಿಮಿತಕ್ಕೆ ಬಂದಿತು.

ತಯಾ ನ ವಿಷಯಂ ಮನ್ಯೇ ಸರ್ವೋ ವಾ ವಿಷಯೋ ಮಮ ।
ಆತ್ಮಾಽಪಿ ಚಾಯಂ ನ ಮಮ ಸರ್ವಾ ವಾ ಪೃಥಿವೀ ಮಮ ॥೧೨॥

ಬುದ್ಧಿಯಿಂದ ವಿಚಾರ ಮಾಡಿದಾಗ ಯಾವ ಪ್ರದೇಶವೂ ನನ್ನದಲ್ಲ ಎಂದು ಅರ್ಥ ಮಾಡಿಕೊಂಡೆ. ಕಾರಣ ಮರಣದ ಸಮಯದಲ್ಲಿ ಯಾವ ರಾಜ್ಯವೂ ನಮ್ಮ ಜೊತೆಗೆ ಬರುವುದಿಲ್ಲ. ಕೇವಲ ದೇಶಗಳಿಗೆ ಹೋಗಿ ಬರುವುದು, ಸಂಚರಿಸುವುದು ಇಷ್ಟು ಮಾತ್ರದಿಂದ ನನ್ನ ರಾಜ್ಯ ಎಂದು ಹೇಳುವುದಾದರೆ ಸಮಗ್ರ ಭೂಮಂಡಲಕ್ಕೂ ನಾನೇ ರಾಜನಾಗುತ್ತೇನೆ. ಆದ್ದರಿಂದ ದೇಹಕ್ಕೇ ರಾಜನಲ್ಲದ ನಾನು ದೇಶಕ್ಕೆ ಹೇಗೆ ರಾಜನಾಗುತ್ತೇನೆ?

ಯಥಾ ಮಮ ತಥಾಽನ್ಯೇಷಾಮಿತಿ ಮನ್ಯೇ ದ್ವಿಜೋತ್ತಮ ।
ಉಷ್ಯತಾಂ ಯಾವದುತ್ಸಾಹಂ ಭುಜ್ಯತಾಂ ಯಾವದಿಷ್ಯತೇ ॥೧೩॥

ಈ ರಾಜ್ಯವು ಇಂದು ನನ್ನ ರಾಜ್ಯ ಎಂದು ಹೇಗೋ ಹಾಗೆ ಇನ್ನೊಂದು ಸಮಯ ಬೇರೆಯವರದ್ದೂ ಆಗಿದೆ. ಆದ್ದರಿಂದ ಬ್ರಾಹ್ಮಣನೇ, ನೀನು ನಿನ್ನ ಕರ್ತವ್ಯ-ಕರ್ಮ ಮುಗಿಯುವ ತನಕವೂ ಎಲ್ಲ ದೇಶಗಳಲ್ಲಿಯೂ ವಾಸ ಮಾಡಬಹುದು. ಎಷ್ಟು ಕಾಲ ಕರ್ಮ ಮಾಡುತ್ತಾ ಇರಬಹುದೋ ಅಷ್ಟು ಕಾಲ ಆ ದೇಶದಲ್ಲಿದ್ದು ಸುಖಭೋಗಗಳನ್ನು ಅನುಭವಿಸು.

ಬ್ರಾಹ್ಮಣಃ

ಪಿತೃಪೈತಾಮಹೇ ರಾಜ್ಯೇ ವಶ್ಯೇ ಜನಪದೇ ಸತಿ ।
ಬ್ರೂಹಿ ಕಾಂ ಬುದ್ಧಿಮಾಸ್ಥಾಯ ಮಮತ್ವಂ ವರ್ಜಿತಂ ತ್ವಯಾ ॥೧೪॥

ಬ್ರಾಹ್ಮಣ– ಜನಕರಾಜನೇ, ಪಿತೃ-ಪಿತಾಮಹರ ಈ ರಾಜ್ಯದಲ್ಲಿ ಸಮಗ್ರ ದೇಶವೇ ನಿನ್ನ ಅಧೀನದಲ್ಲಿರುವಾಗ ಇಂತಹ ಮಮತ್ವವನ್ನು ಯಾವ ಬುದ್ಧಿಬಲದಿಂದ ತ್ಯಾಗ ಮಾಡಿದೆ ಎಂಬುದನ್ನು ನನಗೆ ಹೇಳು.

ಕಾಲಂ ವೈ ಬುದ್ಧಿಂ ವಿನಿಶ್ಚಿತ್ಯ ಸರ್ವೋ ವೈ ವಿಷಯಸ್ತವ ।
ನಾವೈಷಿ ವಿಷಯಂ ಯೇನ ಸರ್ವೋ ವಾ ವಿಷಯಸ್ತವ ॥೧೫॥

ಸಮಗ್ರ ದೇಶವೆಲ್ಲವೂ ನಿನ್ನದೇ ಆಗಿದೆ. ಆದರೂ ಯಾವ ಬುದ್ಧಿಯನ್ನಾಶ್ರಯಿಸಿ ನನಗೆ ರಾಜ್ಯವೆಂಬುದೇ ಇಲ್ಲ ಎಂದು ಹೇಳಿದೆ? ಯಾವ ಬುದ್ಧಿಯನ್ನು ಆಶ್ರಯಿಸಿ ನನ್ನ ರಾಜ್ಯವೂ ಆಗಿದೆ ಎಂದು ಹೇಳಿದೆ.

ಜನಕಃ

ಅಭವಂತ ಇಹಾರಂಭಾಃ ವಿದಿತಾಃ ಸರ್ವಕರ್ಮಸು ।
ನಾಧ್ಯಗಚ್ಛಮಹಂ ತಸ್ಮಾನ್ಮಮೇದಮಿತಿ ಯದ್ ಭವೇತ್ ॥೧೬॥

ಜನಕರಾಜ– ಈ ಪ್ರಪಂಚದಲ್ಲಿ ಕರ್ಮದಿಂದ ಪ್ರಾಪ್ತವಾಗುವ ಎಲ್ಲ ಕರ್ಮಗಳಲ್ಲಿಯೂ ಕರ್ಮಗಳ ಆರಂಭವನ್ನು ಅರ್ಥಮಾಡಿಕೊಳ್ಳುತ್ತೇವೆಯೇ ವಿನಾ ಅದರ ಕೊನೆಯನ್ನು ಹೇಗೆಂದು ತಿಳಿಯಲಾರೆವು. ಅದರಂತೆ ಈ ಪ್ರಪಂಚ ಯಾರಿಗೆ ಸಂಬಂಧಿಸಿದೆ ಎಂಬುದನ್ನು ಯಾರಿಂದಲೂ ಹೇಳಲಾಗದು ಎಂಬುದಾಗಿ ವೇದ ವಚನವೇ ಇದೆ.

ಕಸ್ಯೇದಮಿತಿ ಕಸ್ಯ ಸ್ವಮಿತಿ ವೇದವಚಃ ಸದಾ ।
ನಾಧ್ಯಗಚ್ಛಮಹಂ ಬುದ್ಧ್ಯಾ ಮಮೇದಮಿತಿ ಯದ್ ಭವೇತ್ ॥೧೭॥

ಇದು ಯಾರ ಸ್ವತ್ತು? ಇದು ಯಾರ ಧನ? ಎಂಬ ವೇದವಚನವಿದೆ. ಈ ಕಾರಣದಿಂದ ನಾನು ಬುದ್ಧಿಯಿಂದ ವಿಚಾರಿಸಿದಾಗ ಇದು ನನ್ನದು ಎಂದು ಹೇಳಿಕೊಳ್ಳುವ ಯಾವ ಪದಾರ್ಥವೂ ನನಗೆ ತಿಳಿಯುತ್ತಿಲ್ಲ.

ಏತಾಂ ಬುದ್ಧಿಂ ವಿನಿಶ್ಚಿತ್ಯ ಮಮತ್ವಂ ವರ್ಜಿತಂ ಮಯಾ ।
ಶೃಣು ಬುದ್ಧಿಂ ತು ಯಾಂ ಶ್ರುತ್ವಾ ಸರ್ವಸ್ತು ವಿಷಯೋ ಮಮ ॥೧೮॥

ಈ ವಿಧವಾದ ಬುದ್ಧಿಯನ್ನು ಆಶ್ರಯಿಸಿ ನಾನು ಮಮತ್ವವನ್ನು ತ್ಯಾಗ ಮಾಡಿದ್ದೇನೆ. ಇನ್ನು ಯಾವ ಬುದ್ಧಿಯನ್ನು ಆಶ್ರಯಿಸಿ ಎಲ್ಲವೂ ನನ್ನ ದೇಶವೇ ಆಗಿದೆ ಎಂದು ಹೇಳಿದೆನು ಎಂಬುದನ್ನು ಹೇಳುತ್ತೇನೆ, ಕೇಳು.

ನಾಹಮಾತ್ಮಾರ್ಥಮಿಚ್ಛಾಮಿ ಗಂಧಾನ್ ಘ್ರಾಣಗತಾನಪಿ ।
ತಸ್ಮಾನ್ಮೇ ನಿರ್ಜಿತಾ ಭೂಮಿರ್ವಶೇ ತಿಷ್ಠತಿ ನಿತ್ಯಶಃ ॥೧೯॥

ನನ್ನ ಘ್ರಾಣೇಂದ್ರಿಯದ ಒಳಗೆ ಪರಿಮಳವು ಹೊಕ್ಕರೂ ಅದನ್ನು ಆತ್ಮಸುಖಕ್ಕಾಗಿ ನಾನು ಆಘ್ರಾಣಿಸುವುದಿಲ್ಲ. ಆದ್ದರಿಂದಲೇ ಗಂಧಕ್ಕೆ ಜನಕವಾದ ಭೂಮಿಯನ್ನು ಜಯಿಸಿದಂತಾಗುತ್ತದೆ. ಆ ಭೂಮಿಯ ಗಂಧದ ವಶಕ್ಕೆ ನಾನು ತುತ್ತಾಗದಿರುವುದರಿಂದ ಭೂಮಿಯ ವಶಕ್ಕೆ ನಾನು ತುತ್ತಾಗಲಿಲ್ಲ, ಭೂಮಿಯೇ ನನ್ನ ವಶದಲ್ಲಿದೆ.

ನಾಹಮಾತ್ಮಾರ್ಥಮಿಚ್ಛಾಮಿ ರಸಾನಾಸ್ಯೇऽಪಿ ವರ್ತತಃ ।
ಆಪೋ ಮೇ ನಿರ್ಜಿತಾಸ್ತಸ್ಮಾದ್ ವಶೇ ತಿಷ್ಠಂತಿ ನಿತ್ಯಶಃ ॥೨೦॥

ನನ್ನ ನಾಲಿಗೆಯಲ್ಲಿ ಬಿದ್ದಿರುವ ಪದಾರ್ಥದ ರಸವನ್ನು ನನ್ನ ತೃಪ್ತಿಗಾಗಿ ನಾನು ಆಸ್ವಾದಿಸುವುದಿಲ್ಲ. ಆದ್ದರಿಂದ ರಸದ ಉಗಮಸ್ಥಾನವಾದ ನೀರನ್ನು ನಾನು ಜಯಿಸಿದ್ದೇನೆ. ಅದರ ಅಧೀನಕ್ಕೆ ನಾನು ಒಳಪಡದ ಕಾರಣ ಜಲತತ್ವವು ಯಾವಾಗಲೂ ನನ್ನ ಅಧೀನವಾಗಿದೆ. ಹೀಗೆ ಗಂಧ-ರಸಗಳನ್ನು ನನ್ನ ಭೋಗಕ್ಕೋಸ್ಕರ ನಾನು ಅನುಭವಿಸುವುದಿಲ್ಲ. ಹರಿಯ ಪೂಜಾನಿಮಿತ್ತವಾಗಿಯೇ ಇದನ್ನು ಸ್ವೀಕರಿಸುತ್ತೇನೆ. ಆದ್ದರಿಂದ ಹರಿಯ ಅನುಗ್ರಹದಿಂದ ಎಲ್ಲ ವಿಷಯಗಳು ನನಗೆ ಶ್ರೇಯಸ್ಸನ್ನೇ ಉಂಟು ಮಾಡುತ್ತಿವೆ.

ನಾಹಮಾತ್ಮಾರ್ಥಮಿಚ್ಛಾಮಿ ರೂಪಂ ಜ್ಯೋತಿಶ್ಚ ಚಕ್ಷುಷಃ ।
ತಸ್ಮಾನ್ಮೇ ನಿರ್ಜಿತಂ ಜ್ಯೋತಿರ್ವಶೇ ತಿಷ್ಠತಿ ನಿತ್ಯದಾ ॥೨೧॥

ನನ್ನ ಕಣ್ಣುಗಳು ನೋಡುವ ರೂಪಗಳನ್ನು, ಜ್ಯೋತಿಗಳನ್ನು ನನ್ನ ಸುಖಕ್ಕಾಗಿ ನೋಡುವುದಿಲ್ಲ. ಪರಮಾತ್ಮನ ಪ್ರೀತಿಗಾಗಿ ನೋಡುತ್ತೇನೆ. ಆದ್ದರಿಂದಲೇ ಜ್ಯೋತಿಯು ಯಾವಾಗಲೂ ನನ್ನ ವಶವಾಗಿದೆ.

ನಾಹಮಾತ್ಮಾರ್ಥಮಿಚ್ಛಾಮಿ ಸ್ಪರ್ಶಾಂಸ್ತ್ವಚಿ ಗತಾಶ್ಚ ಯೇ ।
ತಸ್ಮಾನ್ಮೇ ನಿರ್ಜಿತೋ ವಾಯುರ್ವಶೇ ತಿಷ್ಠತಿ ನಿತ್ಯದಾ ॥೨೨॥

ತ್ವಕ್‌ನಲ್ಲಿ ಸಂಬಂಧ ಹೊಂದಿದ ಎಲ್ಲ ಪದಾರ್ಥಗಳನ್ನು ನಾನು ನನ್ನ ಸುಖಕ್ಕಾಗಿ ಸ್ಪರ್ಶಿಸುವುದಿಲ್ಲ. ಪರಮಾತ್ಮನ ಪ್ರೀತಿಗೋಸ್ಕರ ಮುಟ್ಟುತ್ತೇನೆ. ಆದ್ದರಿಂದ ಸ್ಪರ್ಶಕ್ಕೆ ಉಗಮ ಸ್ಥಾನವಾದ ವಾಯುವು ಯಾವಾಗಲೂ ನನ್ನ ಅಧೀನದಲ್ಲಿದೆ.

ನಾಹಮಾತ್ಮಾರ್ಥಮಿಚ್ಛಾಮಿ ಶಬ್ದಾನ್ ಶ್ರೋತ್ರಗತಾನಪಿ ।
ಆಕಾಶಂ ಮೇ ಜಿತಂ ತಸ್ಮಾದ್ ವಶೇ ತಿಷ್ಠತಿ ನಿತ್ಯಶಃ ॥೨೩॥

ನನ್ನ ಕಿವಿಗಳಲ್ಲಿ ಇಂಪಾದ ಶಬ್ದಗಳನ್ನು ನನ್ನ ಸುಖಕ್ಕಾಗಿ ಕೇಳಲು ಬಯಸುವುದಿಲ್ಲ. ಭಗವಂತನ ಪ್ರೀತಿಗೋಸ್ಕರ ಶಬ್ದಗಳನ್ನು ಕೇಳಿಸಿಕೊಳ್ಳುತ್ತೇನೆ. ಆದ್ದರಿಂದ ಶಬ್ದಕ್ಕೆ ಉಗಮ ಸ್ಥಾನವಾದ ಆಕಾಶವು ನನ್ನ ಅಧೀನದಲ್ಲಿದೆ.

ನಾಹಮಾತ್ಮಾರ್ಥಮಿಚ್ಛಾಮಿ ಮನೋ ನಿತ್ಯಂ ಮನೋಂತರೇ ।
ಮನೋ ಮೇ ನಿರ್ಜಿತಂ ತಸ್ಮಾದ್ ವಶೇ ತಿಷ್ಠತಿ ನಿತ್ಯಶಃ ॥೨೪॥

ನನ್ನ ಮನಸ್ಸಿನಲ್ಲಿ ಹುಟ್ಟುವ ವಿಷಯಗಳನ್ನು ನನ್ನ ಸುಖಕ್ಕಾಗಿ ನಾನು ಬಯಸುವುದಿಲ್ಲ. ಮನಸ್ಸಿನಲ್ಲಿ ಹುಟ್ಟುವ ಸಂಕಲ್ಪ-ವಿಕಲ್ಪಗಳನ್ನು ಭಗವಂತನಿಗೆ ಸಮರ್ಪಿಸುತ್ತೇನೆ. ಆದ್ದರಿಂದಲೇ ನನ್ನ ಮನಸ್ಸನ್ನು ನಾನು ಜಯಿಸಿದ್ದು, ಮನಸ್ಸು ನನ್ನ ಅಧೀನದಲ್ಲಿ ಯಾವಾಗಲೂ ಇರುತ್ತದೆ.

ದೇವೇಭ್ಯಶ್ಚ ಪಿತೃಭ್ಯಶ್ಚ ಭೂತೇಭ್ಯೋಽತಿಥಿಭಿಃ ಸಹ ।
ಭುಕ್ತ್ಯರ್ಥಂ ಸರ್ವ ಏವೇಮೇ ಸಮಾರಂಭಾ ಭವಂತಿ ವೈ ॥೨೫॥

ನನ್ನ ಸಮಸ್ತ ವಿಧವಾದ ಕಾರ್ಯಗಳು ದೇವತೆಗಳ, ಪಿತೃಗಳ, ಭೂತಗಳ, ಅತಿಥಿಗಳ ಅಂತರ್ಯಾಮಿಯಾದ ಭಗವಂತನ ತೃಪ್ತಿಗೋಸ್ಕರವೇ ಆರಂಭವಾಗುತ್ತವೆ.

ಬ್ರಾಹ್ಮಣಃ

ತತಃ ಪ್ರಹಸ್ಯ ಜನಕಂ ಬ್ರಾಹ್ಮಣಃ ಪುನರಬ್ರವೀತ್ ।
ತ್ವಜ್ಜಿಜ್ಞಾಸಾರ್ಥಮದ್ಯೇಹ ವಿದ್ಧಿ ಮಾಂ ಧರ್ಮಮಾಗತಮ್ ॥೨೬॥

ತ್ವಮದ್ಯ ಬ್ರಹ್ಮಭಾವಸ್ಯ ಬುದ್ಧಾವಪ್ಯನಿವರ್ತಿನಃ ।
ಸತ್ವನೇಮಿನಿರುದ್ಧಸ್ಯ ಚಕ್ರಸ್ಯೈವ ಪ್ರವರ್ತಕಃ ॥೨೭॥

ಬ್ರಾಹ್ಮಣ– ಬ್ರಾಹ್ಮಣಿಯೇ, ಜನಕನು ಹೇಳಿದ ಈ ಮಾತುಗಳನ್ನು ಕೇಳಿದ ಕೂಡಲೇ ಬ್ರಾಹ್ಮಣನು ನಸುನಕ್ಕು ಜನಕನಿಗೆ ಪುನಃ ಹೇಳುತ್ತಾನೆ. ಜನಕರಾಜನೇ, ಪರಮಾತ್ಮನ ವಿಷಯದಲ್ಲಿ ನಿನ್ನ ಬುದ್ಧಿಯು ಹೇಗೆ ರತವಾಗಿದೆ ಎಂದು ತಿಳಿದುಕೊಳ್ಳುವ ಅಭಿಪ್ರಾಯದಿಂದ ಆಗಮಿಸಿರುವ ನನ್ನನ್ನು ಯಮಧರ್ಮನೇ ಎಂದು ತಿಳಿ. ಪ್ರಪಂಚದಲ್ಲಿ ಸತ್ವಗುಣವೆಂಬ ನೇಮಿಯಿಂದ ತಡೆಯಲ್ಪಟ್ಟ ದುರ್ಲಭವಾದ ಬ್ರಹ್ಮನಲ್ಲಿ ಸ್ಥಿರವಾದ ಮನಸ್ಸೆಂಬ ಚಕ್ರವನ್ನು ತಿರುಗಿಸುವವನು ನೀನೊಬ್ಬನೇ ಆಗಿದ್ದಿ ಎಂದು ಭಾವಿಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಜನಕ-ಬ್ರಾಹ್ಮಣಸಂವಾದೋ ನಾಮ
ತ್ರಯಸ್ತ್ರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾಲ್ಕನೆಯ ಅಧ್ಯಾಯ

ಬ್ರಾಹ್ಮಣನು ಬ್ರಾಹ್ಮಣಿಗೆ ತನ್ನ ಮಹಿಮೆಯನ್ನು ತೋರಿಸಿದುದು.

ಬ್ರಾಹ್ಮಣಃ

ನಾಹಂ ತಥಾ ಭೀರು ಚರಾಮಿ ಲೋಕೇ
ಯಥಾ ತ್ವಂ ಮಾಂ ತರ್ಕಯಸೇ ಸ್ವಬುದ್ಧ್ಯಾ ।
ವಿಪ್ರೋಽಸ್ಮಿ ಮುಕ್ತೋಽಸ್ಮಿ ವನೇಚರೋಽಸ್ಮಿ
ಗೃಹಸ್ಥಧರ್ಮಾ ಬ್ರಹ್ಮಚಾರೀ ತಥಾಽಸ್ಮಿ ॥೧॥

ನಾಹಮಸ್ಮಿ ಯಥಾ ಮಾಂ ತ್ವಮೀಕ್ಷಸೇ ಚಕ್ಷುಷಾ ಶುಭೇ ।
ಮಯಾ ವ್ಯಾಪ್ತಮಿದಂ ಸರ್ವಂ ಯತ್ ಕಿಂಚಿಜ್ಜಗತೀಗತಮ್ ॥೨॥

ಬ್ರಾಹ್ಮಣ– ಭೀರುವೇ, ನೀನು ನನ್ನ ಪತಿಯು ಹೇಗೇಗೋ ಇದ್ದಾನೆಂದು ತಿಳಿದು ನನ್ನನ್ನು ಭಯಪಡಿಸುತ್ತಿರುವೆಯಲ್ಲವೆ? ಆದರೆ ನಾನು ನೀನು ತಿಳಿದಂತೆ ಇಲ್ಲ. ಇತರ ದೇಹಾಭಿಮಾನ ಪಡೆದ ಮನುಷ್ಯರಂತೆ ನನ್ನ ಆಚರಣೆಗಳಿಲ್ಲ. ನೀನು ಎಲ್ಲರಂತೆ ನನ್ನನ್ನು ಪಾಪ-ಪುಣ್ಯಗಳಲ್ಲಿ ಆಸಕ್ತನಾದ ಮನುಷ್ಯನೆಂದು ಭಾವಿಸಿರುವೆ. ಆದರೆ ನಾನು ಯಾವುದೇ ಕರ್ಮಗಳಲ್ಲಿಯೂ ಆಸಕ್ತನಾಗಿರುವುದಿಲ್ಲ. ನಾನು ಬ್ರಾಹ್ಮಣನೂ ಆಗಿದ್ದೇನೆ, ಜೀವನ್ಮುಕ್ತನಾಗಿದ್ದೇನೆ, ಕಾಡಿನಲ್ಲಿ ಸಂಚರಿಸುವ ವಾನಪ್ರಸ್ಥನಾಗಿದ್ದೇನೆ, ಗೃಹಸ್ಥ ಧರ್ಮಗಳನ್ನೂ ಅನುಸರಿಸುವವನಾಗಿದ್ದೇನೆ, ಬ್ರಹ್ಮಜ್ಞಾನಿಯಾಗಿದ್ದೇನೆ, ವ್ರತನಿಷ್ಠನಾಗಿದ್ದೇನೆ, ಭೂತ-ಭವಿಷ್ಯತ್-ವರ್ತಮಾನಗಳಲ್ಲಿ ಬುದ್ಧಿಯುಳ್ಳವನಾಗಿದ್ದೇನೆ.

ಯೇ ಕೇಚಿದಿಹ ವೈ ಲೋಕೇ ಜಂಗಮಾಃ ಸ್ಥಾವರಾಶ್ಚ ಹ ।
ತೇಷಾಮಂತರ್ಗತಂ ವಿದ್ಧಿ ದಾರೂಣಾಮಿವ ಪಾವಕಮ್ ॥೩॥

ಪ್ರಪಂಚದಲ್ಲಿ ಸ್ಥಾವರ-ಜಂಗಮಗಳನ್ನು ನಾಶಮಾಡುವ ಮೃತ್ಯುದೇವತೆಯಾದ ನಾನು ಕಟ್ಟಿಗೆಗಳನ್ನು ಭಸ್ಮ ಮಾಡುವ ಅಗ್ನಿಯಂತೆ ನಿನ್ನ ಮುಂದೆ ಇದ್ದೇನೆ ಎಂದು ತಿಳಿ.

ರಾಜ್ಯಂ ಪೃಥಿವ್ಯಾಂ ಸರ್ವಸ್ಯಾಮಥವಾ ಯತ್ ತ್ರಿವಿಷ್ಟಪೇ ।
ತನ್ಮೇ ಬುದ್ಧಿರಿಯಂ ವೇತ್ತಿ ಬುದ್ಧಿರೇವ ಧನಂ ಮಮ ॥೪॥

ಅಖಂಡ ಭೂಮಂಡಲದಲ್ಲಿ ಸ್ವರ್ಗದಲ್ಲಿಯೂ ಯಾವ ರಾಜ್ಯವಿದೆಯೋ ಆ ರಾಜ್ಯವನ್ನು ನನ್ನ ಬುದ್ಧಿಯು ತಿಳಿದಿದೆ. ಆದ್ದರಿಂದ ಬುದ್ಧಿಯೇ ನನ್ನ ಧನವಾಗಿದೆ.

ಏಕಃ ಪಂಥಾ ಬ್ರಾಹ್ಮಣಾನಾಂ ಯೇನ ಗಚ್ಛಂತಿ ತದ್ವಿದಃ ।
ಗೃಹೇಷು ವನವಾಸೇಷು ಗುರುವಾಸೇಷು ಭಿಕ್ಷುಷು ॥೫॥

ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರು ನಾಲ್ಕು ಆಶ್ರಮಗಳಲ್ಲಿ ಯಾವುದನ್ನು ಅನುಸರಿಸಿದರೂ ಅವರಿಗೆ ಜ್ಞಾನವೇ ಮುಖ್ಯಮಾರ್ಗವೆನಿಸಿದೆ. ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ, ಬ್ರಹ್ಮಚರ್ಯ ಎಲ್ಲ ಆಶ್ರಮಗಳು ಜ್ಞಾನಮಾರ್ಗವನ್ನು ತಿಳಿಸುವ ದೃಷ್ಟಿಯಿಂದಲೇ ಪ್ರವೃತ್ತವಾಗಿವೆ.

ಲಿಂಗೈರ್ಬಹುಭಿರವ್ಯಗ್ರೈರೇಕಾ ಬುದ್ಧಿರುಪಾಸ್ಯತೇ ।
ನಾನಾಲಿಂಗಾಶ್ರಮಸ್ಥಾನಾಂ ಯೇಷಾಂ ಬುದ್ಧಿಃ ಶಮಾತ್ಮಿಕಾ ॥೬॥

ತೇ ಭಾವಮೇಕಮಾಯಾಂತಿ ಸರಿತಃ ಸಾಗರಂ ಯಥಾ ॥೭॥

ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಗಳೆಂಬ ಯಾವ ಚಿಹ್ನೆಯನ್ನು ಹೊಂದಿದ್ದರೂ ಬ್ರಹ್ಮಜ್ಞಾನಿಗಳ ಬುದ್ಧಿಯು ಶಮ, ಭಗವನ್ನಿಷ್ಠವಾದ ಬುದ್ಧಿಯಿಂದ ಕೂಡಿರುತ್ತದೆ. ಅವರು ನಾನಾ ವಿಧವಾದ ಚಿಹ್ನೆಗಳನ್ನು ಹೊಂದಿದ್ದರೂ, ಬ್ರಹ್ಮಚರ್ಯಾದಿ ಆಶ್ರಮದಲ್ಲಿದ್ದರೂ ಭಗವತ್ತತ್ತ್ವಜ್ಞೆಯಲ್ಲಿಯ ಸಾಧನೆಯಲ್ಲಿ ಸ್ಥಿರತೆಯನ್ನು ಹೊಂದಿರುತ್ತಾರೆ. ನದಿಗಳೆಲ್ಲವೂ ಸಮುದ್ರವನ್ನೇ ಸೇರುವಂತೆ ಯಾವ ಆಶ್ರಮರೂಪವಾಗಿ ಭಗವತ್ಪೂಜಾ ರೂಪವಾಗಿ ಕರ್ಮವನ್ನು ಮಾಡುವವರು ಪರಬ್ರಹ್ಮನನ್ನೇ ಹೊಂದುತ್ತಾರೆ.

ಬುದ್ಧ್ಯಾऽಯಂ ಗಮ್ಯತೇ ಮಾರ್ಗಃ ಶರೀರೇಣ ನ ಗಮ್ಯತೇ ।
ಆದ್ಯಂತವಂತಿ ಕರ್ಮಾಣಿ ಶರೀರಂ ಕರ್ಮಬಂಧನಮ್ ॥೮॥

ಇಂತಹ ಗಮ್ಯವಾದ ಮುಕ್ತಿಮಾರ್ಗವು ಬುದ್ಧಿಯಿಂದಲೇ ಹೊಂದಬೇಕೇ ವಿನಾ ಶರೀರದಿಂದ ಹೊಂದಲು ಸಾಧ್ಯವಿಲ್ಲ. ಎಲ್ಲ ಕರ್ಮಗಳಿಗೂ ಆದ್ಯಂತಗಳಿದೆ. ಈ ಶರೀರವು ಕರ್ಮಬಂಧನಕ್ಕೆ ತುತ್ತಾಗಿದೆ.

ತಸ್ಮಾನ್ಮೇ ಸುಭಗೇ ನಾಸ್ತಿ ಪರಲೋಕಕೃತಂ ಭಯಮ್ ।
ಮದ್ಭಾವಭಾವನಿರತಾ ಮಮೈವಾತ್ಮಾನಮೇಷ್ಯತಿ ॥೯॥

ಸುಭಗೇ, ಆದ್ದರಿಂದ ಕಾಮ-ಕ್ರೋಧಾದಿ ಶತ್ರುಜನರಿಂದ ಉಂಟಾಗಬಹುದಾದ ಯಾವ ಭಯಗಳೂ ನನಗಿರುವುದಿಲ್ಲ. ನನ್ನ ಸ್ವರೂಪವನ್ನು ಧ್ಯಾನ ಮಾಡುವ ನೀನು ನನ್ನನ್ನೇ ಹೊಂದುತ್ತಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ವಿಪ್ರಾಣಾಂ ಸನ್ಮಾರ್ಗಕಥನಂ ನಾಮ
ಚತುಃತ್ರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಏಕೋನವಿಂಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಬ್ರಾಹ್ಮಣ-ಬ್ರಾಹ್ಮಣಿಶಬ್ದಗಳಿಂದ ನಿರ್ದಿಷ್ಟವಾದ ಬುದ್ಧಿ ಮತ್ತು ಮನಸ್ಸುಗಳ ವಿಚಾರವನ್ನು ಹೇಳಿದುದು.

ಬ್ರಾಹ್ಮಣೀ

ನೇದಮಲಾತ್ಮನಾ ಶಕ್ಯಂ ವೇದಿತುಂ ನಾಕೃತಾತ್ಮನಾ ।
ಬಹು ಚಾಲ್ಪಂ ಚ ಸಂಕ್ಷಿಪ್ತಂ ವಿಸ್ಮಿತಂ ಚ ಮನೋ ಮಮ ॥೧॥

ಬ್ರಾಹ್ಮಣೀ– ಪ್ರಿಯನೇ, ನೀನು ಹೇಳಿದ ಬ್ರಹ್ಮಜ್ಞಾನವನ್ನು ಅಜಿತೇಂದ್ರಿಯಳಾದ, ಅಲ್ಪಬುದ್ಧಿಯವಳಾದ ನಾನು ಗ್ರಹಿಸಲು ಅಶಕ್ತಳಾಗಿದ್ದೇನೆ. ಪರಬ್ರಹ್ಮನ ವಿಷಯವಾಗಿ ಬಹಳ ಸಂಕ್ಷಿಪ್ತವಾಗಿ ಹೇಳಿದೆ. ಇದರಿಂದ ನನಗೆ ಮತ್ತೂ ಗೊಂದಲವುಂಟಾಗಿದೆ ಎನಿಸುತ್ತಿದೆ.

ಉಪಾಯಂ ತು ಮಮ ಬ್ರೂಹಿ ಯೇನೈಷಾ ಲಭ್ಯತೇ ಮತಿಃ ।
ತನ್ಮನ್ಯೇ ಕಾರಣತಮಂ ಯತ ಏಷಾ ಪ್ರವರ್ತತೇ ॥೨॥

ಆದ್ದರಿಂದ ನನ್ನ ಬುದ್ಧಿಯು ನಿನ್ನಂತೆ ಪರಬ್ರಹ್ಮನ ವಿಷಯದಲ್ಲಿ ಏಕಾಗ್ರತೆಯನ್ನು ಹೊಂದಲು ಯಾವುದಾದರೂ ಒಂದು ಉಪಾಯವನ್ನು ತಿಳಿಸು. ನನಗೆ ಬೇಕಾದ ಉಪಾಯವನ್ನು ನೀನು ಹೇಳಬಹುದೆಂದು ನನಗೆ ವಿಶ್ವಾಸವಿದೆ.

ಬ್ರಾಹ್ಮಣಃ

ಅರಣೇಂ ಬ್ರಾಹ್ಮಣೀ ವಿದ್ಧಿ ಗುರುರಸ್ಯೋತ್ತರಾರಣಿಃ ।
ತಪಃ ಶ್ರುತೇಽಥ ಮಥಿತೇ ಜ್ಞಾನಾಗ್ನಿರ್ಜಾಯತೇ ತತಃ ॥೩॥

ಬ್ರಾಹ್ಮಣ– ಸುಭಗೇ, ನೀನು ನಿನ್ನ ಬುದ್ಧಿಯನ್ನು ಕೆಳಗಿನ ಅರಣಿ ಎಂದು ಭಾವಿಸು. ಅರ್ಥಾತ್ ನನ್ನ ಬಳಿ ಶಿಷ್ಯತ್ವವನ್ನು ವಹಿಸು. ನನ್ನನ್ನು ಮೇಲಿನ ಅರಣಿಯನ್ನಾಗಿ ಭಾವಿಸು. ಅಗ್ನಿ ಉತ್ಪತ್ತಿಯಾಗಬೇಕಾದಲ್ಲಿ ಎರಡು ಅರಣಿಗಳು ಹೇಗೆ ಬೇಕೋ, ಇದರಂತೆ ಗುರು-ಶಿಷ್ಯರೆಂಬ ಅರಣಿಗಳಿಂದ ಮಥಿಸಲ್ಪಟ್ಟಾಗ ತಪಸ್ಸು, ವೇದಾಂತ ಪಠನ, ಮನನಗಳ ಮೂಲಕವಾಗಿ ಶಿಷ್ಯನ ಬುದ್ಧಿ ಎಂಬ ಅರಣಿಯನ್ನು ಗುರುವು ತನ್ನ ಬುದ್ಧಿ ಎಂಬ ಅರಣಿಯಿಂದ ಮಥನ ಮಾಡಿದರೆ ಬ್ರಹ್ಮಜ್ಞಾನವೆಂಬ ಅಗ್ನಿಯು ಹುಟ್ಟುತ್ತದೆ.

ಬ್ರಾಹ್ಮಣೇ

ಯದಿದಂ ಬ್ರಹ್ಮಣೋ ಲಿಂಗಂ ಕ್ಷೇತ್ರಜ್ಞ ಇತಿ ಸಂಜ್ಞಿತಮ್ ।
ಗ್ರಹೀತುಂ ಯೇನ ತಚ್ಚಕ್ಯಂ ಲಕ್ಷಣಂ ತಸ್ಯ ತದ್ವದ ॥೪॥

ಬ್ರಾಹ್ಮಣೇ– ಗುಣಪರಿಪೂರ್ಣನಾದ ಪರಬ್ರಹ್ಮನ ಗುರುತನ್ನು ಕ್ಷೇತ್ರಜ್ಞ ಎಂಬ ಹೆಸರಿನಿಂದ ಹೇಳಲಾಗುತ್ತಿದೆ. ಅದನ್ನು ಯಾವ ಲಕ್ಷಣದಿಂದ ಗ್ರಹಿಸಬೇಕು? ಹೇಗೆ ಅದನ್ನು ತಿಳಿಯಲು ಸಾಧ್ಯವಾಗುತ್ತದೆ ಎಂಬುದನ್ನು ಹೇಳು.

ಬ್ರಾಹ್ಮಣಃ

ಅಲಿಂಗೋ ನಿರ್ಗುಣಶ್ಚೈವ ಕಾರಣಂ ನಾಸ್ಯ ವಿದ್ಮಹೇ ।
ಉಪಾಯಂ ತು ಪ್ರವಕ್ಷ್ಯಾಮಿ ಯೇನ ಗೃಧ್ಯೇತ ಮಾನವಃ ॥೫॥

ಬ್ರಾಹ್ಮಣ– ಈ ಗುಣಪರಿಪೂರ್ಣನಾದ ಬ್ರಹ್ಮನಿಗೆ ನಿರ್ದಿಷ್ಟವಾದ ಹೇತುವೆಂಬುದು ಇರುವುದಿಲ್ಲ. ಪ್ರಾಕೃತ ಗುಣರಹಿತನಾದ ಕಾರಣದಿಂದ ಈ ಮಾಂಸದ ಕಣ್ಣಿನಿಂದಲೂ ಅವನನ್ನು ತಿಳಿಯಲು ಸಾಧ್ಯವಿಲ್ಲ. ಇದಕ್ಕೆ ನಾನೊಂದು ಉಪಾಯವನ್ನು ಹೇಳುತ್ತೇನೆ. ಈ ಉಪಾಯದಿಂದ ಮಾನವನು ಅವನನ್ನು ಗ್ರಹಿಸಬಹುದು.

ಸಮ್ಯಗಪ್ಯುಪದಿಷ್ಟಸ್ಯ ಅಮೃತಸ್ಯೇವ ತೃಪ್ಯಸೇ ।
ಕರ್ಮಭುಗ್ ಬುದ್ಧಿಪೂರ್ವಃ ಸ್ಯಾತ್ ಜ್ಞಾನಲಿಂಗೈರಧಿಷ್ಠಿತಃ ॥೬॥

ದುಂಬಿಗಳು ವಾಸನೆಯಿಂದ ಪುಷ್ಪರಸವಿದೆ ಎಂದು ತಿಳಿಯುವಂತೆ ಬ್ರಹ್ಮನ ಸ್ವರೂಪವನ್ನು ಗುರುಗಳ ಉಪದೇಶದಿಂದ, ಸಂಸ್ಕಾರಗಳಿಂದ ತಿಳಿಯಬಹುದು. ಕರ್ಮಗಳನ್ನೇ ಭೋಗಿಸುವಂತಹ ವ್ಯಕ್ತಿಯು ಜ್ಞಾನದ ಚಿಹ್ನೆಗಳನ್ನು ಅಳವಡಿಸಿಕೊಂಡಲ್ಲಿ ಕ್ಷೇತ್ರಜ್ಞನಾದ ಬ್ರಹ್ಮನನ್ನು ತಿಳಿಯಬಹುದು.

ಇದಂ ಕಾರ್ಯಮಿದಂ ನೇತಿ ನ ಮೋಕ್ಷೇಷೂಪದಿಶ್ಯತೇ ।
ಪಶ್ಯತಃ ಶೃಣ್ವತೋ ಬುದ್ಧಿಃ ಆತ್ಮನ್ಯೇವೋಪಜಾಯತೇ ॥೭॥

ಮೋಕ್ಷಸಾಧನದ ಉಪಾಯಗಳಲ್ಲಿ ಇದನ್ನು ಮಾಡಬೇಕು, ಇದನ್ನು ಮಾಡಬಾರದು ಎಂದು ವಿಧಿ-ನಿಷೇಧಗಳನ್ನು ಹೇರುವುದಿಲ್ಲ. ಕಾರಣ ಪರಮಾತ್ಮನ ವಿಷಯದಲ್ಲಿ

ನಿರಂತರ ಶ್ರವಣವನ್ನು ಮಾಡುತ್ತಿದ್ದರೆ ಬುದ್ಧಿಯು ಪರಮಾತ್ಮನಲ್ಲಿಯೇ ರತವಾಗಿರುತ್ತದೆ.

ಯಾವಂತ ಇವ ಶಕ್ಯೇರನ್ ತಾವತೋಂಶಾನ್ ಪ್ರಕಲ್ಪಯೇತ್ ।
ವ್ಯಕ್ತಾನವ್ಯಕ್ತರೂಪಾಂಶ್ಚ ಶತಶೋಽಥ ಸಹಸ್ರಶಃ ॥೮॥

ಬುದ್ಧಿಯನ್ನು ಪರಬ್ರಹ್ಮನ ವಿಷಯದಲ್ಲಿ ಎಷ್ಟು ಸಾಧ್ಯವೋ ಅಷ್ಟು ವ್ಯಯಿಸಬೇಕು. ಭಗವಂತನ ಪ್ರಕಟವಾದ ಅನೇಕ ರೂಪ, ಪ್ರಕಟವಾಗದೆ ಇರುವ ಸಾವಿರಾರು ರೂಪಗಳನ್ನು ಬುದ್ಧಿಯಿಂದ ಮನನ ಮಾಡಬೇಕು.

ಸರ್ವಾನುಮಾನಯುಕ್ತಾಂಶ್ಚ ಸರ್ವಾನ್ ಪ್ರತ್ಯಕ್ಷಹೇತುಕಾನ್ ॥೯॥

ಯತಃ ಪರಂ ನ ವಿದ್ಯೇತ ತರ್ಹ್ಯಾಕಾಶಂ ಭವಿಷ್ಯತಿ ॥೧೦॥

ಎಲ್ಲ ಯುಕ್ತಿಗಳನ್ನು, ಎಲ್ಲ ವಿಧವಾದ ಪ್ರತ್ಯಕ್ಷಗಳನ್ನು ಪರಬ್ರಹ್ಮನ ಜ್ಞಾನಕ್ಕೆ ಉಪಯೋಗಿಸಿಕೊಳ್ಳಬೇಕು. ನೂರಾರು ಯುಕ್ತಿ-ಪ್ರತ್ಯಕ್ಷಗಳು ತಲೆಯಲ್ಲಿದ್ದರೂ ಪರಬ್ರಹ್ಮನನ್ನು ತಿಳಿಯದಿದ್ದರೆ ಅದನ್ನು ಆಕಾಶದಂತೆ ಬರಿದಾದ ಬುದ್ಧಿ ಎಂದೇ ಹೇಳುತ್ತಾರೆ.

ಶ್ರೀಭಗವಾನ್

ತತಸ್ತು ತಸ್ಯಾ ಬ್ರಾಹ್ಮಣ್ಯಾ ಮತಿಃ ಕ್ಷೇತ್ರಜ್ಞಸಂಶಯೇ ।
ಕ್ಷೇತ್ರಜ್ಞಾದೇವ ಪರತಃ ಕ್ಷೇತ್ರಜ್ಞೋಽನ್ಯಃ ಪ್ರವರ್ತತೇ ॥೧೧॥

ಶ್ರೀಭಗವಾನ್– ಬ್ರಾಹ್ಮಣನು ಹೀಗೆ ಹೇಳಿದ ನಂತರ ಬ್ರಾಹ್ಮಣಿಯು ಕ್ಷೇತ್ರಜ್ಞನಾದ ಪರಮಾತ್ಮನಲ್ಲಿ ತನ್ನ ಬುದ್ಧಿಯನ್ನು ನೆಲೆಗೊಳಿಸಿದಳು. ನಂತರ ಆ ಕ್ಷೇತ್ರಜ್ಞನಾದ ಪರಮಾತ್ಮನಿಂದಲೇ ತಾನು ನಿಯಮ್ಯಳು ಎಂಬ ನಿಶ್ಚಯವು ಉಂಟಾಯಿತು.

ಅರ್ಜುನಃ

ಕ್ವ ನು ಸಾ ಬ್ರಾಹ್ಮಣೇ ಕ್ಷುಣ್ಣಾ ಕ್ವ ಚಾಸೌ ಬ್ರಾಹ್ಮಣರ್ಷಭಃ ।
ಯಥಾ ಸಿದ್ಧಿರಿಯಂ ಪ್ರಾಪ್ತಾ ತಾವುಭೌ ವದ ಮೇಽಚ್ಯುತ ॥೧೨॥

ಅರ್ಜುನ– ಕೃಷ್ಣನೇ, ಪರಬ್ರಹ್ಮನಲ್ಲಿ ಸಿದ್ಧಿಯನ್ನು ಪಡೆದ ದಂಪತಿಗಳಲ್ಲಿ ಬ್ರಾಹ್ಮಣಿ ಯಾರು? ಬ್ರಾಹ್ಮಣ ಯಾರು? ಅವರ ಪರಿಚಯವನ್ನು ಹೇಳು.

ಶ್ರೀಭಗವಾನ್

ಮನೋ ಮೇ ಬ್ರಾಹ್ಮಣಂ ವಿದ್ಧಿ ಬುದ್ಧಿಂ ಮೇ ಬ್ರಾಹ್ಮಣೀಮಥ ।
ಕ್ಷೇತ್ರಜ್ಞ ಇತಿ ಯಶ್ಚೋಕ್ತಃ ಸೋಽಹಮೇವ ಧನಂಜಯ ॥೧೩॥

ಶ್ರೀಭಗವಾನ್– ಧನಂಜಯನೇ, ನನ್ನ ಮನಸ್ಸೇ ಬ್ರಾಹ್ಮಣ, ನನ್ನ ಬುದ್ಧಿಯೇ ಬ್ರಾಹ್ಮಣಿ. ಕ್ಷೇತ್ರಜ್ಞನೆಂದು ಹೇಳಲ್ಪಟ್ಟಿರುವವನು ನಾನೇ ಆಗಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅಶ್ವಮೇಧಿಕಪರ್ವಣಿ ಅನುಗೀತಾಸು ತತ್ವರಹಸ್ಯಕಥನಂ ನಾಮ ಪಂಚತ್ರಿಂಶೋಽಧ್ಯಾಯಃ॥

॥ ಅನುಗೀತಾಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅಶ್ವಮೇಧಿಕಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾರನೆಯ ಅಧ್ಯಾಯ

ಕೃಷ್ಣನು ಅರ್ಜುನನಿಗೆ ಪರಬ್ರಹ್ಮಸ್ವರೂಪವನ್ನು ಹೊಂದಲು ಯೋಗ್ಯವಾದ, ಸಾಧನೆಯನ್ನು ಪ್ರತಿಪಾದನೆ ಮಾಡುವ ಗುರು-ಶಿಷ್ಯರ ಸಂವಾದವನ್ನು ಉಪದೇಶಿಸುತ್ತಾನೆ.

ಅರ್ಜುನಃ

ಬ್ರಹ್ಮ ಯತ್ ಪರಮಂ ವೇದ್ಯಂ ತನ್ಮೇ ವ್ಯಾಖ್ಯಾತುಮರ್ಹಸಿ ।
ಭವತೋ ಹಿ ಪ್ರಸಾದೇನ ಸುಸೂಕ್ಷ್ಮೇ ರಮತೇ ಮತಿಃ ॥೧॥

ಅರ್ಜುನ– ಗುಣಪರಿಪೂರ್ಣನಾದ, ಸರ್ವೋತ್ಕೃಷ್ಟನಾದ, ಸಾಧಕರು ತಿಳಿಯಲು ಯೋಗ್ಯವಾದ ಪರಬ್ರಹ್ಮ ಸ್ವರೂಪವನ್ನು ತಿಳಿಯಬೇಕೆಂದು ನನ್ನ ಬುದ್ಧಿಯು ಆಸಕ್ತವಾಗಿದೆ. ಆದ್ದರಿಂದ ಆ ಪರಬ್ರಹ್ಮ ಸ್ವರೂಪವನ್ನು ಹೇಳುವ ಕೃಪೆ ತೋರು.

ಶ್ರೀಭಗವಾನ್

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸಂವಾದಂ ಮೋಕ್ಷಸಂಯುಕ್ತಂ ಶಿಷ್ಯಸ್ಯ ಗುರುಣಾ ಸಹ ॥೨॥

ಶ್ರೀಭಗವಾನ್– ಅರ್ಜುನನೇ, ಈ ವಿಷಯದಲ್ಲಿ ಗುರು-ಶಿಷ್ಯರಿಗೆ ನಡೆದ ಮೋಕ್ಷ ವಿಷಯಕ ಸಂವಾದವು ಹಿಂದೆ ನಡೆದಿದೆ. ಈ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಕಂಚಿದ್ ಬ್ರಾಹ್ಮಣಮಾಸೀನಮಾಚಾರ್ಯಂ ಸಂಶಿತವ್ರತಮ್ ।
ಶಿಷ್ಯಃ ಪಪ್ರಚ್ಛ ಮೇಧಾವೀ ಕಿಂಸ್ವಿಚ್ಛ್ರೇಯಃ ಪರಂತಪ ॥೩॥

ಶತ್ರುಸಂತಾಪಕನೇ, ಮೇಧಾವಿಯಾದ ಒಬ್ಬ ಶಿಷ್ಯನು ಸುಖಾಸನದಲ್ಲಿ ಕುಳಿತಿದ್ದ ನಿಯಮನಿಷ್ಠನಾದ, ಆಚಾರ್ಯನಾದ ಬ್ರಾಹ್ಮಣನನ್ನು ಪ್ರಶ್ನಿಸಿದನು.

ಭಗವಂತಂ ಪ್ರಪನ್ನೋಽಹಂ ನಿಃಶ್ರೇಯಸಪರಾಯಣಃ ।
ಯಾಚೇ ತ್ವಾಂ ಶಿರಸಾ ವಿಪ್ರ ಯದ್ ಬ್ರೂಯಾಂ ತದ್ ವಿಚಕ್ಷ್ವ ಮೇ ॥

ಪೂಜ್ಯರೇ, ಶಾಶ್ವತವಾದ ಮೋಕ್ಷಸುಖದಲ್ಲಿಯೇ ಆಸಕ್ತಿಯನ್ನು ಹೊಂದಿದ ನಾನು ಅದರ ಬಗ್ಗೆ ತಿಳಿದುಕೊಳ್ಳಲು ನಿಮ್ಮ ಬಳಿ ಬಂದಿದ್ದೇನೆ. ತಲೆಬಾಗಿ ನಮಸ್ಕರಿಸುತ್ತಾ ಬೇಡಿಕೊಳ್ಳುತ್ತೇನೆ. ಶ್ರೇಯಸ್ಸಿನ ಬಗ್ಗೆ ತಿಳಿಸಿರಿ.

ಶ್ರೀಭಗವಾನ್

ತಮೇವಂವಾದಿನಂ ಪಾರ್ಥ ಶಿಷ್ಯಂ ಗುರುರುವಾಚ ಹ ॥೫॥

ಶ್ರೀಭಗವಾನ್– ಅರ್ಜುನ, ಹೀಗೆ ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಂಡ ಶಿಷ್ಯನಿಗೆ ಗುರುವು ಹೇಳುತ್ತಾನೆ.

ಗುರುಃ

ಕಥಯಸ್ವ ಪ್ರವಕ್ಷ್ಯಾಮಿ ಯತ್ರ ತೇ ಸಂಶಯೋ ದ್ವಿಜ ॥೬॥

ಗುರು– ಬ್ರಾಹ್ಮಣನೇ, ನಿನಗೆ ಯಾವ ವಿಷಯದಲ್ಲಿ ಸಂಶಯವಿದೆ, ಹೇಳು. ಪರಿಹರಿಸುತ್ತೇನೆ.

ಶ್ರೀಭಗವಾನ್

ಇತ್ಯುಕ್ತಃ ಸ ಕುರುಶ್ರೇಷ್ಠ ಗುರುಣಾ ಗುರುವತ್ಸಲಃ ।
ಪ್ರಾಂಜಲಿಃ ಪರಿಪಪ್ರಚ್ಛ ಯತ್ ತಚ್ಛೃಣು ಮಹಾಮತೇ ॥೭॥

ಶ್ರೀಭಗವಾನ್– ಮಹಾಮತಿಯೇ, ಕುರುಶ್ರೇಷ್ಠನೇ, ಗುರುಪ್ರಿಯನಾದ ಆ ಶಿಷ್ಯನಿಗೆ ಗುರುವು ಹೀಗೆ ಹೇಳಿದಾಗ, ಆ ಶಿಷ್ಯನು ಕರಮುಗಿದು ಯಾವ ಪ್ರಶ್ನೆಗಳನ್ನು ಕೇಳಿದನೆಂದು ಹೇಳುತ್ತೇನೆ, ಕೇಳು.

ಶಿಷ್ಯಃ

ಕುತಶ್ಚಾಹಂ ಕುತಶ್ಚ ತ್ವಂ ತತ್ ಸರ್ವಂ ಬ್ರೂಹಿ ಯತ್ ಪರಮ್ ।
ಕುತೋ ಜಾತಾನಿ ಭೂತಾನಿ ಚರಾಣಿ ಸ್ಥಾವರಾಣಿ ಚ ॥೮॥

ಶಿಷ್ಯ– ವಿಪ್ರಶ್ರೇಷ್ಠರೇ, ನಾನು ಎಲ್ಲಿಂದ ಬಂದೆ? ನೀವು ಎಲ್ಲಿಂದ ಬಂದಿರುವಿರಿ? ಜಗತ್ತಿನ ಎಲ್ಲ ಚರಾಚರ ಪ್ರಾಣಿಗಳು ಯಾರಿಂದ ಹುಟ್ಟನ್ನು ಪಡೆದಿವೆ? ಪರಮ ತತ್ತ್ವವು ಯಾವುದು? ಇದನ್ನು ಯಥಾವತ್ತಾಗಿ ಹೇಳಿರಿ.

ಕೇನ ಜೀವಂತಿ ಜಾತಾನಿ ತೇಷಾಮಾಯುಃ ಕಿಮಾತ್ಮಕಮ್ ।
ಕಿಂ ಸತ್ಯಂ ಕಿಂ ತಪೋ ವಿಪ್ರ ಕೇ ಗುಣಾಃ ಸದ್ಭಿರೀರಿತಾಃ ॥೯॥

ಪ್ರಾಣಿಗಳು ಯಾರನ್ನಾಶ್ರಯಿಸಿಕೊಂಡು ಜೀವಿಸುತ್ತಿವೆ? ಅವುಗಳ ಆಯುಸ್ಸು ಎಷ್ಟು? ಸತ್ಯ ಮತ್ತು ತಪಸ್ಸೆಂದರೇನು? ಸತ್ಪುರುಷರನ್ನು ಪ್ರಶಂಸಿಸುವ ಗುಣಗಳು ಯಾವುವು?

ಕೇ ಪಂಥಾನಃ ಶಿವಾಃ ಸಂತಿ ಸುಕೃತಂ ಕಿಂ ಚ ದುಷ್ಕೃತಮ್ ॥೧೦॥

ಏತಾನ್ ಮೇ ಭಗವನ್ ಪ್ರಶ್ನಾನ್ ಯಾಥಾತಥ್ಯೇನ ಸತ್ತಮ ।
ವಕ್ತುಮರ್ಹಸಿ ವಿಪ್ರರ್ಷೇ ಯಥಾವದಿಹ ತತ್ತ್ವತಃ ॥೧೧॥

ಮಂಗಳಕರವಾದ ಮಾರ್ಗಗಳು ಯಾವುವು? ಸುಖ ಎಂದರೇನು? ಪಾಪ ಎಂದರೇನು? ವ್ರತನಿಷ್ಠರಾದ ವಿಪ್ರರ್ಷಿಗಳೇ, ಪೂಜ್ಯರೇ, ಈ ಪ್ರಶ್ನೆಗಳಿಗೆ ಯಥಾವತ್ತಾಗಿ ಉತ್ತರವನ್ನು ಹೇಳುವ ಕೃಪೆ ತೋರಿ.

ಶ್ರೀಭಗವಾನ್

ತಸ್ಮೈ ಸಂಪ್ರತಿಪನ್ನಾಯ ಯಥಾವತ್ ಪರಿಪೃಚ್ಛತೇ ।
ಶಿಷ್ಯಾಯ ಗುಣಯುಕ್ತಾಯ ಶಾಂತಾಯ ಪ್ರಿಯವರ್ತಿನೇ ॥೧೨॥

ಛಾಯಾಭೂತಾಯ ದಾಂತಾಯ ಯತಯೇ ಬ್ರಹ್ಮಚಾರಿಣೇ ।
ತಾನ್ ಪ್ರಶ್ನಾನಬ್ರವೀತ್ ಪಾರ್ಥ ಮೇಧಾವೀ ಸುದೃಢವ್ರತಃ ॥೧೩॥

ಗುರುಃ ಕುರುಕುಲಶ್ರೇಷ್ಠ ಸಮ್ಯಕ್ ಸರ್ವಾನಶೇಷತಃ ॥೧೪॥

ಶ್ರೀಭಗವಾನ್– ಕುರುಕುಲಶ್ರೇಷ್ಠನೇ, ಶತ್ರುನಿಗ್ರಹ ಸಮರ್ಥನೇ, ಅರ್ಜುನನೇ, ಅತ್ಯಂತ ವಿನೀತನಾಗಿ, ಉಚಿತವಾದ ಪ್ರಶ್ನೆಗಳನ್ನು ಕೇಳಿದ ಗುಣವಂತನೂ, ಶಾಂತನೂ, ಗುರುವಿನ ಆಜ್ಞೆಯ ಪರಿಪಾಲಕನೂ ಆಗಿರುವ, ಗುರುವಿಗೆ ಪ್ರಿಯವಾದ ರೀತಿಯಲ್ಲಿ ವರ್ತಿಸುವ, ಜಿತೇಂದ್ರಿಯನೂ, ಪ್ರಯತ್ನಶೀಲನೂ, ಬ್ರಹ್ಮಚಾರಿಯೂ, ಮೇಧಾವಿಯೂ ಆದ ಶಿಷ್ಯನಿಗೆ ವ್ರತನಿಷ್ಠನಾದ ಗುರುವು ಸಮಂಜಸವಾದ ಉತ್ತರವನ್ನು ಹೀಗೆ ಹೇಳಿದನು.

ಗುರುಃ

ಬ್ರಹ್ಮಪ್ರೋಕ್ತಮಿದಂ ಧರ್ಮಮೃಷಿಪ್ರವರಸೇವಿತಮ್ ।
ವೇದವಿದ್ಯಾಸಮಾವಾಪ್ತಂ ತತ್ತ್ವಭೂತಾರ್ಥಭಾವನಮ್ ॥೧೫॥

ಗುರು– ವೇದೋಕ್ತವಾದ ಧರ್ಮವು ಇದು. ಋಷಿಗಳು ಸೇವಿಸಿದ ಧರ್ಮವು ಇದು. ಗುಣಪರಿಪೂರ್ಣನಾದ ಬ್ರಹ್ಮನ ಉಪದೇಶವು ಇದು. ಋಷಿಶ್ರೇಷ್ಠರೆಲ್ಲರೂ ಆ ಬ್ರಹ್ಮತತ್ತ್ವವನ್ನೇ ಆಶ್ರಯಿಸಿದ್ದಾರೆ.

ಭೂತಭವ್ಯಭವಿಷ್ಯಾದಿಧರ್ಮಕಾಮಾರ್ಥನಿಶ್ಚಯಮ್ ।
ಸಿದ್ಧಸಂಘಪರಿಜ್ಞಾತಂ ಪುರಾಕಲ್ಪಂ ಸನಾತನಮ್ ॥೧೬॥

ಪ್ರವಕ್ಷ್ಯಾಮಿ ಮಹಾಪ್ರಾಜ್ಞ ಪರಮುತ್ತಮಮದ್ಯ ತೇ ।
ಬುದ್ಧ್ಯಾ ಯದಿಹ ಸಂಸಿದ್ಧಾ ಭವಂತೀಹ ಮನೀಷಿಣಃ ॥೧೭॥

ಮಹಾಪ್ರಾಜ್ಞನೇ, ಯಾವುದು ಭೂತ-ಭವಿಷ್ಯತ್-ವರ್ತಮಾನಗಳಿಗೆ ಸೇರಿದ, ಧರ್ಮಾರ್ಥ-ಕಾಮಗಳ ನಿಶ್ಚಯವನ್ನು ಹುಟ್ಟಿಸುವ, ಸಿದ್ಧರ ಸಮುದಾಯದಿಂದ ತಿಳಿದು ಬಂದಿರುವ ಶ್ರೇಷ್ಠವೂ, ಸನಾತನವೂ ಆದ ಧರ್ಮವನ್ನು ನಿನಗೆ ಹೇಳುತ್ತೇನೆ. ಈ ಧರ್ಮವನ್ನು ನಿನ್ನಿಂದ ಕೇಳಿಸಿಕೊಂಡವರು ವಿದ್ವಾಂಸರೂ, ಸಿದ್ಧಿಯನ್ನು ಹೊಂದುವವರೇ ಆಗುತ್ತಾರೆ.

ಉಪಾಗಮ್ಯರ್ಷಯಃ ಪೂರ್ವಂ ಜಿಜ್ಞಾಸಂತಃ ಪರಸ್ಪರಮ್ ॥೧೮॥

ಬೃಹಸ್ಪತಿರ್ಭರದ್ವಾಜೋ ಗೌತಮೋ ಭಾರ್ಗವಸ್ತಥಾ ।
ವಸಿಷ್ಠಃ ಕಶ್ಯಪಶ್ಚೈವ ವಿಶ್ವಾಮಿತ್ರೋಽತ್ರಿರೇವ ಚ ॥೧೯॥

ಮಾರ್ಗಾನ್ ಸರ್ವಾನ್ ಪರಿಕ್ರಮ್ಯ ಪರಿಶ್ರಾಂತಾಃ ಸ್ವಕರ್ಮಭಿಃ ॥೨೦॥

ಹಿಂದೆ ಸಮಸ್ತ ಋಷಿಗಳು ಈ ಧರ್ಮಗಳ ಬಗ್ಗೆಯೇ ಪರಸ್ಪರ ಜಿಜ್ಞಾಸೆಯನ್ನು ಮಾಡಿದರು. ಬೃಹಸ್ಪತಿ, ಭರದ್ವಾಜ, ಗೌತಮ, ಭೃಗುವಿನ ಮಗನಾದ ಶುಕ್ರ, ವಸಿಷ್ಠ, ಕಶ್ಯಪ, ವಿಶ್ವಾಮಿತ್ರ, ಅತ್ರಿ - ಇವರೆಲ್ಲ ತಮ್ಮ ಕರ್ಮಗಳ ಮೂಲಕ ಸಮಸ್ತ ಮಾರ್ಗಗಳನ್ನೂ ಸುತ್ತುತ್ತಾ ಬಹಳವಾಗಿ ಆಯಾಸಗೊಂಡರು.

ಋಷಿಮಾಂಗಿರಸಂ ವೃದ್ಧಂ ಪುರಸ್ಕೃತ್ಯ ತು ತೇ ದ್ವಿಜಾಃ ।
ದದೃಶುರ್ಬ್ರಹ್ಮಭವನೇ ಬ್ರಹ್ಮಾಣಂ ವೀತಕಲ್ಮಷಮ್ ॥೨೧॥

ನಂತರ ಅವರೆಲ್ಲರೂ ನಿರ್ಣಯಕ್ಕೆ ಬರಲಾಗದೆ, ವೃದ್ಧನಾದ ಆಂಗಿರಸ ಮುನಿಯನ್ನು ಮುಂದೆ ಮಾಡಿಕೊಂಡು, ಬ್ರಹ್ಮನ ಲೋಕಕ್ಕೆ ಸಾಗಿ ದೋಷದೂರನಾದ ಬ್ರಹ್ಮನನ್ನು ಸಂದರ್ಶಿಸಿದರು.

ತಂ ಪ್ರಣಮ್ಯ ಮಹಾತ್ಮಾನಂ ಸುಖಾಸೀನಂ ಮಹರ್ಷಯಃ ।
ಪಪ್ರಚ್ಛುರ್ವಿನಯೋಪೇತಾ ನೈಃಶ್ರೇಯಸಮಿದಂ ಪರಮ್ ॥೨೨॥

ಸುಖಾಸನದಲ್ಲಿ ಮಂಡಿಸಿದ ಮಹಾತ್ಮನಾದ ಬ್ರಹ್ಮನಿಗೆ ಮಹರ್ಷಿಗಳೆಲ್ಲರೂ ವಿನಯ ಪೂರ್ವಕವಾಗಿ ನಮಸ್ಕರಿಸಿ, ಕಲ್ಯಾಣಸಾಧನವಾದ ಪ್ರಶ್ನೆಯನ್ನು ಕೇಳಿದರು.

ಋಷಯಃ

ಕಥಂ ಕರ್ಮ ಕೃತಂ ಸಾಧು ಕಥಂ ಮುಚ್ಯೇತ ಕಿಲ್ಬಿಷಾತ್ ।
ಕೇ ನೋ ಮಾರ್ಗಾಃ ಶಿವಾಶ್ಚ ಸ್ಯುಃ ಕಿಂ ಸತ್ಯಂ ಕಿಂ ಚ ದುಷ್ಕೃತಮ್ ॥

ಋಷಿಗಳು– ಪಿತಾಮಹರೇ, ಯಾವ ಕರ್ಮ ಮಾಡಿದಲ್ಲಿ ಒಳ್ಳೆಯದಾಗುತ್ತದೆ? ಪಾಪಗಳಿಂದ ಬಿಡುಗಡೆಯನ್ನು ಹೊಂದುವ ಕರ್ಮ ಯಾವುದು? ಯಾವ ಮಾರ್ಗದಿಂದ ನಮಗೆ ಕಲ್ಯಾಣವಾಗುತ್ತದೆ? ಸತ್ಯವೆಂದರೇನು? ಪಾಪವೆಂದರೇನು?

ಕೌ ವೇಮೌ ಕರ್ಮಪಂಥಾನೌ ಮಹತ್ತ್ವಂ ಕೇನ ವಿಂದತಿ ।
ನಿರಯಂ ಚಾಪವರ್ಗಂ ಚ ಭೂತಾನಾಂ ಪ್ರಭವಾಪ್ಯಯೌ ॥೨೪॥

ಕರ್ಮಗಳ ಎರಡು ಮಾರ್ಗಗಳು ಯಾವುವು? ಯಾವ ಮಾರ್ಗದಲ್ಲಿ ಮಹತ್ವವನ್ನು ಹೊಂದುತ್ತಾನೆ? ಮೋಕ್ಷ ಎಂದರೇನು? ನಿರಯ ಎಂದರೇನು? ಪ್ರಾಣಿಗಳ ಹುಟ್ಟು-ಸಾವುಗಳು ಹೇಗೆ ಉಂಟಾಗುತ್ತವೆ?

ಗುರುಃ

ಇತ್ಯುಕ್ತಃ ಸ ಮುನಿಶ್ರೇಷ್ಠೈರ್ಯದಾಹ ಪ್ರಪಿತಾಮಹಃ ।
ತತ್ ತೇಽಹಂ ಸಂಪ್ರವಕ್ಷ್ಯಾಮಿ ಶೃಣು ಶಿಷ್ಯ ಯಥಾತಥಮ್ ॥೨೫॥

ಗುರು– ಈ ರೀತಿಯಾಗಿ ಪ್ರಶ್ನಿಸಿದಾಗ ಬ್ರಹ್ಮನು ಶಾಸ್ತ್ರಾನುಸಾರವಾಗಿ ಅವರಿಗೆ ಹೇಳಿದುದನ್ನು ನಿನಗೂ ಸಮಗ್ರವಾಗಿ ಹೇಳುತ್ತೇನೆ, ಕೇಳು.

ಚತುರ್ಮುಖ ಬ್ರಹ್ಮನು ಹೇಳುತ್ತಾನೆ–

ಬ್ರಹ್ಮಾ

ಸತ್ಯಾದ್ ಭೂತಾನಿ ಜಾತಾನಿ ಸ್ಥಾವರಾಣಿ ಚರಾಣಿ ಚ ।
ತಪಸಾ ತಾನಿ ಜೀವಂತಿ ಜೀವಿತಂ ತದ್ಧಿ ಸುವ್ರತಮ್ ॥೨೬॥

ಉತ್ತಮ ವ್ರತಗಳನ್ನು ಪರಿಪಾಲಿಸುವ ಋಷಿಗಳೇ, ಚರಾಚರ ಪ್ರಾಣಿ ಪ್ರಪಂಚವು ಸತ್ಯನಾಮಕನಾದ ನಾರಾಯಣನಿಂದಲೇ ಉತ್ಪತ್ತಿಯನ್ನು ಪಡೆಯುತ್ತದೆ. ಅವನ ತಪೋರೂಪವಾದ ಕರ್ಮಗಳಿಂದ ಜೀವಿಸುತ್ತವೆ. ತಮ್ಮ ಉತ್ಪತ್ತಿಗೆ ನಾರಾಯಣನನ್ನೇ ಕಾರಣನನ್ನಾಗಿ ಹೊಂದಿವೆ.

ಸ್ವಾಂ ಯೋನಿಂ ಪುನರಾಗಮ್ಯ ವರ್ತಂತೇ ಯೇನ ಕರ್ಮಣಾ ॥೨೭॥

ಆದರೆ ಆ ಪರಮಾತ್ಮನನ್ನು ಮರೆತು ತಮ್ಮ ತಮ್ಮ ಕರ್ಮಕ್ಕನುಗುಣವಾಗಿ ಪುನಃ ಈ ಹುಟ್ಟು-ಸಾವುಗಳೆಂಬ ಚಕ್ರದಲ್ಲಿ ಸುತ್ತುತ್ತಿರುತ್ತಾರೆ.

ಸತ್ಯಂ ಹಿ ಗುಣಸಂಯುಕ್ತಂ ನಿಯತಂ ಪಂಚಲಕ್ಷಣಮ್ ॥೨೮॥

ಗುಣಗಳಿಂದ ಯುಕ್ತವಾದ ಸತ್ಯವು ಐದು ಲಕ್ಷಣದಿಂದ ಕೂಡಿದೆ.

ಬ್ರಹ್ಮ ಸತ್ಯಂ ತಪಃ ಸತ್ಯಂ ಸತ್ಯಂ ಚೈವ ಪ್ರಜಾಪತಿಃ ।
ಸತ್ಯಾದ್ ಭೂತಾನಿ ಜಾತಾನಿ ಭೂತಂ ಸತ್ಯಮಯಂ ಮಹತ್ ॥೨೯॥

ಬ್ರಹ್ಮವೂ ಸತ್ಯವಾಗಿದೆ, ತಪಸ್ಸೂ ಸತ್ಯವಾಗಿದೆ, ಚತುರ್ಮುಖ ಬ್ರಹ್ಮನೂ ಸತ್ಯನಾಗಿದ್ದಾನೆ, ಸತ್ಯದಿಂದಲೇ ಎಲ್ಲ ಪ್ರಾಣಿಗಳು ಹುಟ್ಟುತ್ತವೆ, ಈ ಭೌತಿಕ ಜಗತ್ತು ಸತ್ಯಸ್ವರೂಪವಾಗಿಯೇ ಇದೆ.

ವ್ಯಾಖ್ಯಾನ ವಿಶೇಷ– ಇಲ್ಲಿ 'ಬ್ರಹ್ಮ ಸತ್ಯಂ' ಎಂದರೆ ವೇದವು ಸತ್ಯವಾಗಿವೆ ಎಂದು ಹೇಳಬಹುದು. ಗುಣಪರಿಪೂರ್ಣನಾದ ನಾರಾಯಣನೂ ಸತ್ಯ. ಸತ್ಯನಾಮಕನಾದ ಪರಮಾತ್ಮನೇ ತಪೋರೂಪನು. ಚತುರ್ಮುಖ ಬ್ರಹ್ಮನಲ್ಲಿಯೂ ಸತ್ಯನಾಮಕನಾದ ಭಗವಂತನು ಸನ್ನಿಹಿತನಾಗಿದ್ದಾನೆ. ಸತ್ಯನಾಮಕನಾದ ನಾರಾಯಣನಿಂದಲೇ ಭೂತಗಳ ಉತ್ಪತ್ತಿ, ಸತ್ಯನಾಮಕನಾದ ಭಗವಂತನೇ ಜಗತ್ತಿನಲ್ಲಿ ಅಂತರ್ಯಾಮಿಯಾಗಿದ್ದಾನೆ ಎಂದು ಅಂತರ್ಯಾಮಿ ತತ್ವವನ್ನು ವಿವಕ್ಷೆ ಮಾಡಿ ವ್ಯಾಖ್ಯಾನಿಸಿದ್ದಾರೆ.

ತಸ್ಮಾತ್ ಸತ್ಯಾಶ್ರಯಾ ವಿಪ್ರಾ ನಿತ್ಯಂ ಯೋಗಪರಾಯಣಾಃ ।
ಅತೀತಕ್ರೋಧಸಂತಾಪಾ ನಿಯತಾ ಧರ್ಮಸೇತವಃ ॥೩೦॥

ಆದ್ದರಿಂದಲೇ ಯೋಗವನ್ನು ಆಶ್ರಯಿಸಿರುವ, ಕ್ರೋಧ-ಸಂತಾಪಗಳಿಂದ ದೂರವಿರುವ, ನಿಯಮ ಪರಿಪಾಲಕರಾದ ಬ್ರಾಹ್ಮಣರು ಧರ್ಮವನ್ನು ಸೇವಿಸುವ ದೃಷ್ಟಿಯಿಂದ ಸತ್ಯನಾಮಕನಾದ ನಾರಾಯಣನನ್ನೇ ಆಶ್ರಯಿಸಿರುತ್ತಾರೆ.

ಅನ್ಯೋನ್ಯನಿಯತಾನ್ ವೈದ್ಯಾನ್ ಧರ್ಮಸೇತುಪ್ರವರ್ತಕಾನ್ ।
ತಾನಹಂ ಸಂಪ್ರವಕ್ಷ್ಯಾಮಿ ಶಾಶ್ವತಾನ್ ಲೋಕಭಾವನಾನ್ ॥೩೧॥

ಧರ್ಮಭೀರುಗಳಾದ, ಪರಸ್ಪರ ಸಾಮರಸ್ಯದಿಂದಿರುವ ಜ್ಞಾನಿಗಳಾದ ಧರ್ಮವೆಂಬ ಸೇತುವೆಯನ್ನು ಪ್ರವೃತ್ತಿಗೊಳಿಸುವ ಬ್ರಾಹ್ಮಣರನ್ನು ಲೋಕ-ಕಲ್ಯಾಣಕಾರಕರು ಎಂದು ಹೇಳುತ್ತೇನೆ.

ಚಾತುರ್ವೈದ್ಯಾಂಸ್ತಥಾ ವರ್ಣಾನ್ ಆಶ್ರಮಾಂಶ್ಚ ಪೃಥಕ್ ಪೃಥಕ್ ।
ಧರ್ಮಮೇಕಂ ಚತುಷ್ಪಾದಂ ನಿತ್ಯಮಾಹುರ್ಮನೀಷಿಣಃ ॥೩೨॥

ಇದರಂತೆ ಪ್ರತ್ಯೇಕವಾದ ನಾಲ್ಕು ವರ್ಣಗಳ, ನಾಲ್ಕು ಆಶ್ರಮಗಳಿಗೆ ಸಂಬಂಧಿಸಿದ ನಾಲ್ಕು ವಿದ್ಯೆಗಳನ್ನು ವಿವರಿಸುತ್ತೇನೆ, ಕೇಳಿ.

ಪಂಥಾನಂ ವಃ ಪ್ರವಕ್ಷ್ಯಾಮಿ ಶಿವಂ ಕ್ಷೇಮಕರಂ ದ್ವಿಜಾಃ ।
ನಿತ್ಯಂ ಬ್ರಹ್ಮವಿದಾಮಿಷ್ಟಂ ಗತಂ ಪೂರ್ವಮಹರ್ಷಿಭಿಃ ॥೩೩॥

ವಿದ್ವಾಂಸರು ನಿತ್ಯವಾದ ಧರ್ಮವೇ ನಾಲ್ಕು ಪಾದಗಳುಳ್ಳದ್ದೆಂದು ಹೇಳುತ್ತಾರೆ. ದ್ವಿಜಶ್ರೇಷ್ಠರೇ, ವಿದ್ವಾಂಸರು ಭಗವಂತನನ್ನು ಹೊಂದಲು ಕ್ಷೇಮಕರವಾದ ಯಾವ ಮಂಗಳ ಮಾರ್ಗವನ್ನು ಅನುಸರಿಸುತ್ತಿದ್ದರೆಂದು ಹೇಳುತ್ತೇನೆ, ಕೇಳಿ.

ಗದತಸ್ತು ಮಮಾದ್ಯೇಹ ಪಂಥಾನಂ ದುರ್ವಿದಂ ಪರಮ್ ।
ನಿಬೋಧತ ಮಹಾಭಾಗಾ ನಿಖಿಲೇನ ಪರಂ ಪದಮ್ ॥೩೪॥

ಭಾಗ್ಯವಂತರಾದ ಮುನಿಗಳೇ, ನಾನೀಗ ಹೇಳುವ, ತಿಳಿದುಕೊಳ್ಳಲು ಕಷ್ಟವಾದ, ಶ್ರೇಷ್ಠವಾದ ಪರಮಾತ್ಮನ ಸ್ವರೂಪವನ್ನು ಕೇಳಿಸಿಕೊಳ್ಳಿರಿ.

ಬ್ರಹ್ಮಚಾರಿಕಮೇವಾಹುರಾಶ್ರಮಂ ಪರಮಂ ಪದಮ್ ।
ದ್ವಿತೀಯಂ ಗಾರ್ಹಪತ್ಯಂ ತು ವಾನಪ್ರಸ್ಥಮತಃ ಪರಮ್ ॥೩೫॥

ತತಃ ಪರಂ ತು ವಿಜ್ಞೇಯಮ್ ಅಧ್ಯಾತ್ಮಂ ಪರಮಂ ಪದಮ್ ॥೩೬॥

ನಾಲ್ಕು ಆಶ್ರಮಗಳಲ್ಲಿ ಬ್ರಹ್ಮಚರ್ಯಾಶ್ರಮವು ಮೊದಲೆಯದ್ದು, ನಂತರ ಗೃಹಸ್ಥಾಶ್ರಮ, ವಾನಪ್ರಸ್ಥವು ಮೂರನೆಯದ್ದು. ನಾಲ್ಕನೆಯದ್ದೇ ಆಧ್ಯಾತ್ಮಿಕವೂ, ಶ್ರೇಷ್ಠ ಗತಿಯೂ ಆಗಿರುವ ಸಂನ್ಯಾಸಾಶ್ರಮವು.

ಜ್ಯೋತಿರಾಕಾಶಮಾದಿತ್ಯೋ ವಾಯುರಿಂದ್ರಃ ಪ್ರಜಾಪತಿಃ ।
ನೋಪೈತಿ ಯಾವದಧ್ಯಾತ್ಮಂ ತಾವದೇತಾನ್ ನ ಪಶ್ಯತಿ ॥೩೭॥

ಎಲ್ಲಿಯ ತನಕ ಪರಬ್ರಹ್ಮನ ಜ್ಞಾನವನ್ನು ಮನುಷ್ಯನು ಹೊಂದುವುದಿಲ್ಲವೋ ಅಷ್ಟರವರೆಗೆ ಜ್ಯೋತಿ, ಆಕಾಶ, ವಾಯು, ಸೂರ್ಯ, ಇಂದ್ರ, ಪ್ರಜಾಪತಿ - ಇವುಗಳ ನಿಜರೂಪವನ್ನು ಅವನು ತಿಳಿಯುವುದಿಲ್ಲ. ಬ್ರಹ್ಮಜ್ಞಾನದಿಂದಲೇ ಇವುಗಳ ಜ್ಞಾನ ಉಂಟಾಗುತ್ತದೆ.

ತಸ್ಯ ರೂಪಂ ಪ್ರವಕ್ಷ್ಯಾಮಿ ಪುರಸ್ತಾತ್ ತಂ ನಿಬೋಧತ ॥೩೮॥

ಫಲಮೂಲಾಶನವತಾಂ ಮುನೀನಾಂ ವಸತಾಂ ವನೇ ।
ವಾನಪ್ರಸ್ಥಂ ದ್ವಿಜಾತೀನಾಂ ತ್ರಯಾಣಾಮುಪದಿಶ್ಯತೇ ॥೩೯॥

ಸರ್ವೇಷಾಮೇವ ವರ್ಣಾನಾಂ ಗೃಹಸ್ಥೋಽಯಂ ವಿಶಿಷ್ಯತೇ ॥೪೦॥

ಆದ್ದರಿಂದ ಅಧ್ಯಾತ್ಮಜ್ಞಾನದ ಉಪಾಯವನ್ನು ಹೇಳುತ್ತೇನೆ, ಕೇಳಿರಿ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ - ಈ ಮೂರು ವರ್ಗದವರಿಗೂ ವಾನಪ್ರಸ್ಥಾಶ್ರಮವು ವಿಹಿತವಾಗಿದೆ. ಮುನಿವೃತ್ತಿಯನ್ನು ಆಶ್ರಯಿಸಿ, ಕಂದ-ಮೂಲಗಳಲ್ಲಿ ಜೀವಿಕೆಯನ್ನು ನಡೆಸುತ್ತಾ, ಗಾಳಿಯನ್ನು ಆಹಾರವನ್ನಾಗಿ ಸ್ವೀಕರಿಸಿ ಅರಣ್ಯದಲ್ಲಿ ವಾಸಿಸುವುದೇ ವಾನಪ್ರಸ್ಥವೆನಿಸಿದೆ. ನಾಲ್ಕು ವರ್ಣದವರಿಗೂ ಗೃಹಸ್ಥಾಶ್ರಮವು ವಿಹಿತವಾಗಿದೆ.

ನೈಷ್ಠಿಕೋಽಥ ಯತಿರ್ವಾಽಪಿ ವಿರಕ್ತೋ ಬ್ರಹ್ಮದರ್ಶನೇ ।
ಶ್ರದ್ಧಾಲಕ್ಷಣಮಿತ್ಯೇವಂ ಧರ್ಮಂ ಧೀರಾಃ ಪ್ರಚಕ್ಷತೇ ॥೪೧॥

ಸದೇವಯಾನಾಃ ಪಂಥಾನಃ ಪಂಥಾನಃ ಪರಿಕೀರ್ತಿತಾಃ ॥೪೨॥

ನಿಷ್ಠಾವಂತನಾದ, ವಿರಕ್ತನಾದ ಯತಿಯು ಬ್ರಹ್ಮದರ್ಶನಕ್ಕೆ ಅರ್ಹನಾಗಿದ್ದಾನೆ. ವಿದ್ವಾಂಸರು ಶ್ರದ್ಧೆಯೇ ಧರ್ಮದ ಮುಖ್ಯಲಕ್ಷಣ ಎಂದು ಹೇಳುತ್ತಾರೆ. ಮುಕ್ತಿಗೆ ಹೋಗುವ ದಾರಿಗಳಲ್ಲಿ ದೇವಯಾನ ದಾರಿಯು ಶ್ರೇಷ್ಠ ಎಂದು ಪರಿಗಣಿಸಲ್ಪಟ್ಟಿದೆ.

ಸದ್ಭಿರಧ್ಯಾಸಿತಾ ಧೀರೈಃ ಕರ್ಮಭಿರ್ಧರ್ಮಸೇತವಃ ।
ಏತೇಷಾಂ ಪೃಥಗಧ್ಯಾಸ್ತೇ ಯೋ ಧರ್ಮಂ ಸಂಶಿತವ್ರತಃ ।
ಕಾಲಾತ್ ಪಶ್ಯತಿ ಭೂತಾನಾಂ ಸತಾಂ ಹಿ ಪ್ರಭವಾಪ್ಯಯೌ ॥೪೩॥

ಧೀರರಾದ ಸತ್ಪುರುಷರು ತಮ್ಮ ಕರ್ಮಗಳಿಂದ ಧರ್ಮದ ಮರ್ಯಾದೆಯಾಗಿರುವ ಈ ಮಾರ್ಗವನ್ನು ಪರಿಪಾಲಿಸುತ್ತಾರೆ. ಕಠೋರನಿಷ್ಠನಾದ ಯಾವನು ಈ ಧರ್ಮಗಳಲ್ಲಿ ಯಾವುದಾದರೊಂದನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತಾನೋ ಅವನು ಕಾಲಕ್ರಮದಲ್ಲಿ ಎಲ್ಲ ಪ್ರಾಣಿಗಳ ಹುಟ್ಟು-ಸಾವುಗಳನ್ನು ಪ್ರತ್ಯಕ್ಷವಾಗಿಯೇ ನೋಡಲು ಅರ್ಹನಾಗುತ್ತಾನೆ.

ಅತಸ್ತತ್ತ್ವಾನಿ ವಕ್ಷ್ಯಾಮಿ ಯಾಥಾತಥ್ಯೇನ ಹೇತುನಾ ।
ವಿಷಯಸ್ಥಾನಿ ಸರ್ವಾಣಿ ವರ್ತಮಾನಾನಿ ಭಾಗಶಃ ॥೪೪॥

ಈಗ ನಾನು ಯಥಾರ್ಥವಾದ ಯುಕ್ತಿಗಳ ಮೂಲಕ ವಿಷಯಗಳನ್ನು ವಿಭಾಗಿಸಿ ಸಂಪೂರ್ಣವಾಗಿ ತತ್ತ್ವಗಳನ್ನು ನಿರೂಪಿಸುತ್ತೇನೆ.

ಮಹಾನಾತ್ಮಾ ತಥಾऽವ್ಯಕ್ತಮಹಂಕಾರಸ್ತಥೈವ ಚ ।
ಇಂದ್ರಿಯಾಣಿ ದಶೈಕಂ ಚ ಮಹಾಭೂತಾನಿ ಪಂಚ ಚ ॥೪೫॥

ವಿಶೇಷಾಃ ಪಂಚಭೂತಾನಾಮಿತ್ಯೇಷಾ ವೈದಿಕೀ ಶ್ರುತಿಃ ।
ಚತುರ್ವಿಂಶತಿರೇಷಾ ವೈ ತತ್ತ್ವಾನಾಂ ಸಂಪ್ರಕೀರ್ತಿತಾ ॥೪೬॥

ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರ ತತ್ತ್ವ, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಮನಸ್ಸು, ಪಂಚಮಹಾಭೂತಗಳು, ಶಬ್ದ-ಸ್ಪರ್ಶಾದಿ ಮಹಾಭೂತಗಳ ವಿಶೇಷ ಗುಣಗಳು - ಈ ಇಪ್ಪತ್ನಾಲ್ಕು ಸನಾತನ ಸೃಷ್ಟಿಯಾಗಿದೆ. ಜೀವಾತ್ಮನನ್ನೂ ಸೇರಿಸಿದಲ್ಲಿ ಇಪ್ಪತ್ತೈದು ತತ್ತ್ವಗಳ ಸೃಷ್ಟಿಯಾಗುತ್ತದೆ.

ತತ್ತ್ವಾನಾಮಥ ಯೋ ವೇದ ಸರ್ವೇಷಾಂ ಪ್ರಭವಾಪ್ಯಯೌ ।
ಸ ಧೀರಃ ಸರ್ವಭೂತೇಷು ನ ಮೋಹಮಧಿಗಚ್ಛತಿ ॥೪೭॥

ಯಾವನು ಈ ತತ್ತ್ವಗಳ ಉತ್ಪತ್ತಿ ಮತ್ತು ಲಯಗಳನ್ನು ಚೆನ್ನಾಗಿ ಬಲ್ಲನೋ ಅವನು ಪ್ರಾಣಿಗಳಲ್ಲಿ ಧೀರನೆನಿಸುತ್ತಾನೆ. ಅವನಿಗೆ ಎಂದೂ ಮೋಹವುಂಟಾಗುವುದಿಲ್ಲ.

ತತ್ತ್ವಾನಿ ಯೋ ವೇದಯತೇ ಯಥಾತಥಂ
ಗುಣಾಂಶ್ಚ ಸರ್ವಾನಖಿಲಾಂ ಚ ದೇವತಾಃ ।
ವಿಧೂತಪಾಪ್ಮಾ ಹಿ ವಿಮುಚ್ಯ ಬಂಧನಂ
ಸ ಸರ್ವಲೋಕಾನಮಲಾನ್ ಸಮಶ್ನುತೇ ॥೪೮॥

ಯಾವನು ಈ ತತ್ತ್ವಗಳನ್ನು ಸಂಪೂರ್ಣವಾಗಿ ತಿಳಿಯುತ್ತಾನೋ, ಗುಣಗಳನ್ನು ಮತ್ತು ದೇವತೆಗಳನ್ನು ಯಥಾವತ್ತಾಗಿ ಅರ್ಥೈಸಿಕೊಳ್ಳುತ್ತಾನೋ ಅವನು ಎಲ್ಲ ಪಾಪಗಳನ್ನೂ ತೊಡೆದುಕೊಂಡು ಭವಬಂಧನದಿಂದ ಮುಕ್ತನಾಗಿ ಸಮಸ್ತ ಲೋಕದ ದಿವ್ಯಸುಖಗಳನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು ಗುರು-ಶಿಷ್ಯಸಂವಾದೇ ತತ್ತ್ವಕಥನಂ ನಾಮ ಷಟ್‌ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಸರ್ವೇಷಾಮೇವ ವರ್ಣಾನಾಂ ಗೃಹಸ್ಥೋಽಯಂ ವಿಶಿಷ್ಯತೇ ॥೪೦॥

ಆದ್ದರಿಂದ ಅಧ್ಯಾತ್ಮಜ್ಞಾನದ ಉಪಾಯವನ್ನು ಹೇಳುತ್ತೇನೆ, ಕೇಳಿರಿ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ - ಈ ಮೂರು ವರ್ಗದವರಿಗೂ ವಾನಪ್ರಸ್ಥಾಶ್ರಮವು ವಿಹಿತವಾಗಿದೆ. ಮುನಿವೃತ್ತಿಯನ್ನು ಆಶ್ರಯಿಸಿ, ಕಂದ-ಮೂಲಗಳಲ್ಲಿ ಜೀವಿಕೆಯನ್ನು ನಡೆಸುತ್ತಾ, ಗಾಳಿಯನ್ನು ಆಹಾರವನ್ನಾಗಿ ಸ್ವೀಕರಿಸಿ ಅರಣ್ಯದಲ್ಲಿ ವಾಸಿಸುವುದೇ ವಾನಪ್ರಸ್ಥವೆನಿಸಿದೆ. ನಾಲ್ಕು ವರ್ಣದವರಿಗೂ ಗೃಹಸ್ಥಾಶ್ರಮವು ವಿಹಿತವಾಗಿದೆ.

ನೈಷ್ಠಿಕೋಽಥ ಯತಿರ್ವಾಽಪಿ ವಿರಕ್ತೋ ಬ್ರಹ್ಮದರ್ಶನೇ ।
ಶ್ರದ್ಧಾಲಕ್ಷಣಮಿತ್ಯೇವಂ ಧರ್ಮಂ ಧೀರಾಃ ಪ್ರಚಕ್ಷತೇ ॥೪೧॥

ಸದೇವಯಾನಾಃ ಪಂಥಾನಃ ಪಂಥಾನಃ ಪರಿಕೀರ್ತಿತಾಃ ॥೪೨॥

ನಿಷ್ಠಾವಂತನಾದ, ವಿರಕ್ತನಾದ ಯತಿಯು ಬ್ರಹ್ಮದರ್ಶನಕ್ಕೆ ಅರ್ಹನಾಗಿದ್ದಾನೆ. ವಿದ್ವಾಂಸರು ಶ್ರದ್ಧೆಯೇ ಧರ್ಮದ ಮುಖ್ಯಲಕ್ಷಣ ಎಂದು ಹೇಳುತ್ತಾರೆ. ಮುಕ್ತಿಗೆ ಹೋಗುವ ದಾರಿಗಳಲ್ಲಿ ದೇವಯಾನ ದಾರಿಯು ಶ್ರೇಷ್ಠ ಎಂದು ಪರಿಗಣಿಸಲ್ಪಟ್ಟಿದೆ.

ಸದ್ಭಿರಧ್ಯಾಸಿತಾ ಧೀರೈಃ ಕರ್ಮಭಿರ್ಧರ್ಮಸೇತವಃ ।
ಏತೇಷಾಂ ಪೃಥಗಧ್ಯಾಸ್ತೇ ಯೋ ಧರ್ಮಂ ಸಂಶಿತವ್ರತಃ ।
ಕಾಲಾತ್ ಪಶ್ಯತಿ ಭೂತಾನಾಂ ಸತಾಂ ಹಿ ಪ್ರಭವಾಪ್ಯಯೌ ॥೪೩॥

ಧೀರರಾದ ಸತ್ಪುರುಷರು ತಮ್ಮ ಕರ್ಮಗಳಿಂದ ಧರ್ಮದ ಮರ್ಯಾದೆಯಾಗಿರುವ ಈ ಮಾರ್ಗವನ್ನು ಪರಿಪಾಲಿಸುತ್ತಾರೆ. ಕಠೋರನಿಷ್ಠನಾದ ಯಾವನು ಈ ಧರ್ಮಗಳಲ್ಲಿ ಯಾವುದಾದರೊಂದನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತಾನೋ ಅವನು ಕಾಲಕ್ರಮದಲ್ಲಿ ಎಲ್ಲ ಪ್ರಾಣಿಗಳ ಹುಟ್ಟು-ಸಾವುಗಳನ್ನು ಪ್ರತ್ಯಕ್ಷವಾಗಿಯೇ ನೋಡಲು ಅರ್ಹನಾಗುತ್ತಾನೆ.

ಅತಸ್ತತ್ತ್ವಾನಿ ವಕ್ಷ್ಯಾಮಿ ಯಾಥಾತಥ್ಯೇನ ಹೇತುನಾ ।
ವಿಷಯಸ್ಥಾನಿ ಸರ್ವಾಣಿ ವರ್ತಮಾನಾನಿ ಭಾಗಶಃ ॥೪೪॥

ಈಗ ನಾನು ಯಥಾರ್ಥವಾದ ಯುಕ್ತಿಗಳ ಮೂಲಕ ವಿಷಯಗಳನ್ನು ವಿಭಾಗಿಸಿ ಸಂಪೂರ್ಣವಾಗಿ ತತ್ತ್ವಗಳನ್ನು ನಿರೂಪಿಸುತ್ತೇನೆ.

ಮಹಾನಾತ್ಮಾ ತಥಾऽವ್ಯಕ್ತಮಹಂಕಾರಸ್ತಥೈವ ಚ ।
ಇಂದ್ರಿಯಾಣಿ ದಶೈಕಂ ಚ ಮಹಾಭೂತಾನಿ ಪಂಚ ಚ ॥೪೫॥

ವಿಶೇಷಾಃ ಪಂಚಭೂತಾನಾಮಿತ್ಯೇಷಾ ವೈದಿಕೀ ಶ್ರುತಿಃ ।
ಚತುರ್ವಿಂಶತಿರೇಷಾ ವೈ ತತ್ತ್ವಾನಾಂ ಸಂಪ್ರಕೀರ್ತಿತಾ ॥೪೬॥

ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರ ತತ್ತ್ವ, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಮನಸ್ಸು, ಪಂಚಮಹಾಭೂತಗಳು, ಶಬ್ದ-ಸ್ಪರ್ಶಾದಿ ಮಹಾಭೂತಗಳ ವಿಶೇಷ ಗುಣಗಳು - ಈ ಇಪ್ಪತ್ನಾಲ್ಕು ಸನಾತನ ಸೃಷ್ಟಿಯಾಗಿದೆ. ಜೀವಾತ್ಮನನ್ನೂ ಸೇರಿಸಿದಲ್ಲಿ ಇಪ್ಪತ್ತೈದು ತತ್ತ್ವಗಳ ಸೃಷ್ಟಿಯಾಗುತ್ತದೆ.

ತತ್ತ್ವಾನಾಮಥ ಯೋ ವೇದ ಸರ್ವೇಷಾಂ ಪ್ರಭವಾಪ್ಯಯೌ ।
ಸ ಧೀರಃ ಸರ್ವಭೂತೇಷು ನ ಮೋಹಮಧಿಗಚ್ಛತಿ ॥೪೭॥

ಯಾವನು ಈ ತತ್ತ್ವಗಳ ಉತ್ಪತ್ತಿ ಮತ್ತು ಲಯಗಳನ್ನು ಚೆನ್ನಾಗಿ ಬಲ್ಲನೋ ಅವನು ಪ್ರಾಣಿಗಳಲ್ಲಿ ಧೀರನೆನಿಸುತ್ತಾನೆ. ಅವನಿಗೆ ಎಂದೂ ಮೋಹವುಂಟಾಗುವುದಿಲ್ಲ.

ತತ್ತ್ವಾನಿ ಯೋ ವೇದಯತೇ ಯಥಾತಥಂ
ಗುಣಾಂಶ್ಚ ಸರ್ವಾನಖಿಲಾಂ ಚ ದೇವತಾಃ ।
ವಿಧೂತಪಾಪ್ಮಾ ಹಿ ವಿಮುಚ್ಯ ಬಂಧನಂ
ಸ ಸರ್ವಲೋಕಾನಮಲಾನ್ ಸಮಶ್ನುತೇ ॥೪೮॥

ಯಾವನು ಈ ತತ್ತ್ವಗಳನ್ನು ಸಂಪೂರ್ಣವಾಗಿ ತಿಳಿಯುತ್ತಾನೋ, ಗುಣಗಳನ್ನು ಮತ್ತು ದೇವತೆಗಳನ್ನು ಯಥಾವತ್ತಾಗಿ ಅರ್ಥೈಸಿಕೊಳ್ಳುತ್ತಾನೋ ಅವನು ಎಲ್ಲ ಪಾಪಗಳನ್ನೂ ತೊಡೆದುಕೊಂಡು ಭವಬಂಧನದಿಂದ ಮುಕ್ತನಾಗಿ ಸಮಸ್ತ ಲೋಕದ ದಿವ್ಯಸುಖಗಳನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು ಗುರು-ಶಿಷ್ಯಸಂವಾದೇ ತತ್ತ್ವಕಥನಂ ನಾಮ ಷಟ್‌ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೇಳನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಕಶ್ಯಪಾದಿ ಮಹರ್ಷಿಗಳನ್ನು ಕುರಿತು ತಮೋಗುಣದ ಕಾರ್ಯವನ್ನು ನಿರೂಪಿಸಿದುದು.

ಬ್ರಹ್ಮಾ

ತದವ್ಯಕ್ತಮನುದ್ರಿಕ್ತಂ ಸರ್ವವ್ಯಾಪಿ ಧ್ರುವಂ ಸ್ಥಿರಮ್ ।
ನವದ್ವಾರಂ ಪುರಂ ವಿದ್ಯಾತ್ ತ್ರಿಗುಣಂ ಪಂಚಧಾತುಕಮ್ ॥೧॥

ಬ್ರಹ್ಮಾ– ಮಹರ್ಷಿಗಳೇ, ಉದ್ರೇಕಗೊಳ್ಳದ, ಸರ್ವವ್ಯಾಪಿಯಾದ, ಸ್ಥಿರವಾಗಿರುವ ತತ್ತ್ವವು ಅವ್ಯಕ್ತತತ್ತ್ವ ಎನಿಸಿದೆ. ಈ ಅವ್ಯಕ್ತ ತತ್ತ್ವದ ಮೂಲಕ ಸತ್ವ-ರಜಸ್-ತಮೋ ಗುಣಗಳು ಅಭಿವ್ಯಕ್ತಿಯನ್ನು ಪಡೆದು, ಪಂಚಭೂತಗಳ ಮೂಲಕ ನವದ್ವಾರಗಳುಳ್ಳ ಶರೀರವು ಉತ್ಪನ್ನವಾಗುತ್ತದೆ.

ಏಕಾದಶಪರಿಕ್ಷೇಪಂ ಮನೋವ್ಯಾಕರಣಾತ್ಮಕಮ್ ।
ಬುದ್ಧಿಸ್ವಾಮಿಕಮಿತ್ಯೇತತ್ ಪರಮೇಕಾದಶಾದ್ ಭವೇತ್ ॥೨॥

ಈ ದೇಹವೆಂಬ ಪಟ್ಟಣದಲ್ಲಿ ಜೀವಾತ್ಮನನ್ನು ವಿಷಯಪದಾರ್ಥಗಳ ಕಡೆಗೆ ಪ್ರೇರಿಸುವ ಮನಸ್ಸಿನಿಂದ ಕೂಡಿದ ಹನ್ನೊಂದು ಇಂದ್ರಿಯಗಳಿವೆ. ಈ ಇಂದ್ರಿಯಗಳ ಅಭಿವ್ಯಕ್ತಿಯು ಮನಸ್ಸಿನ ಮೂಲಕವೇ ಆಗುತ್ತದೆ. ಈ ಶರೀರದಲ್ಲಿ ಹನ್ನೊಂದು ಇಂದ್ರಿಯಗಳಿಗೆ ಬುದ್ಧಿಯೇ ಅರಸ. ಹನ್ನೊಂದೆಯನದ್ದಾದ ಮನಸ್ಸೇ ಹತ್ತು ಇಂದ್ರಿಯಗಳಿಗಿಂತ ಶ್ರೇಷ್ಠವಾದುದು.

ತ್ರೀಣಿ ಸ್ರೋತಾಂಸಿ ಯಾನ್ಯಸ್ಮಿನ್ನಾಪ್ಯಾಯಂತೇ ಪುನಃ ಪುನಃ ।
ಪ್ರನಾಡ್ಯಸ್ತಿಸ್ರ ಏತೇಷಾಂ ಪ್ರವರ್ತಂತೇ ಗುಣಾತ್ಮಿಕಾಃ ॥೩॥

ಈ ದೇಹದಲ್ಲಿ ಸಾತ್ವಿಕ, ರಾಜಸ, ತಾಮಸ ದೇಹದಿಂದ ಮೂರು ಪ್ರವಾಹಗಳು ಹರಿಯುತ್ತಿವೆ. ಮೂರು ಗುಣಗಳು ಪುನಃ ಪುನಃ ಈ ಜೀವನಿಗೆ ಸಂಬಂಧಿಸಿ ಹರಿಯುತ್ತಲೇ ಇರುತ್ತವೆ. ಸತ್ವ-ರಜಸ್-ತಮೋಗುಣಗಳ ಪ್ರವಾಹಗಳು ಮನಸ್ಸಿನಲ್ಲಿ ನಿರಂತರ ಹರಿಯುತ್ತಲೇ ಇರುತ್ತವೆ.

ತಮೋ ರಜಸ್ತಥಾ ಸತ್ವಂ ಗುಣಾನೇತಾನ್ ಪ್ರಚಕ್ಷತೇ ।
ಅನ್ಯೋನ್ಯಮಿಥುನಾಃ ಸರ್ವೇ ತಥಾऽನ್ಯೋನ್ಯಾನುಜೀವಿನಃ ॥೪॥

ಅನ್ಯೋನ್ಯಾಶ್ರಯಿಣಶ್ಚೈವ ತಥಾऽನ್ಯೋನ್ಯಾನುವರ್ತಿನಃ ।
ಅನ್ಯೋನ್ಯವ್ಯತಿಷಕ್ತಾಶ್ಚ ತ್ರಿಗುಣಾಃ ಪಂಚಧಾತವಃ ॥೫॥

ಸತ್ವ, ರಜಸ್ಸು, ತಮಸ್ಸು - ಈ ಮೂರನ್ನು ಗುಣಗಳೆಂದು ಕರೆಯುತ್ತಾರೆ. ಇವುಗಳು ಪರಸ್ಪರ ಸಂಬದ್ಧವಾಗಿವೆ. ಪರಸ್ಪರ ಆಶ್ರಯ-ಆಶ್ರಯಿ ಭಾವವಿದೆ. ಪರಸ್ಪರ ಪೋಷಕಗಳಾಗಿವೆ. ಪರಸ್ಪರ ಅನುಸರಿಸುವ ಸ್ವಭಾವವುಳ್ಳವುಗಳು. ಒಂದು ಗುಣವು ಮತ್ತೊಂದು ಗುಣದೊಡನೆ ಸೇರುತ್ತದೆ. ಪಂಚಮಹಾಭೂತಗಳು ಈ ತ್ರಿಗುಣಗಳಿಂದ ಸಂಬದ್ಧವಾಗಿವೆ.

ತಮಸೋ ಮಿಥುನಂ ಸತ್ವಂ ಸತ್ವಸ್ಯ ಮಿಥುನಂ ರಜಃ ।
ರಜಸಶ್ಚಾಪಿ ಸತ್ವಂ ಸ್ಯಾತ್ ಸತ್ವಸ್ಯ ಮಿಥುನಂ ತಮಃ ॥೬॥

ಸತ್ವಗುಣವು ತಮೋಗುಣದ ಜೊತೆಯಾಗಿರುತ್ತದೆ. ಸತ್ವಕ್ಕೆ ರಜಸ್ಸು ಜೊತೆಯಾಗಿರುತ್ತದೆ. ರಜಸ್ಸಿಗೆ ಸತ್ವವು ಜೊತೆಯಾಗಿರುತ್ತದೆ. ಸತ್ವಕ್ಕೆ ತಮಸ್ಸು ಜೊತೆಯಾಗಿರುತ್ತದೆ.

ನಿಯಮ್ಯತೇ ತಮೋ ಯತ್ರ ರಜಸ್ತತ್ರ ಪ್ರವರ್ತತೇ ।
ನಿಯಮ್ಯತೇ ರಜೋ ಯತ್ರ ಸತ್ವಂ ತತ್ರ ಪ್ರವರ್ತತೇ ॥೭॥

ತಮೋಗುಣಕ್ಕೆ ತಡೆಯುಂಟಾದರೆ ರಜೋಗುಣವು ಹುಟ್ಟುತ್ತದೆ. ರಜೋಗುಣಕ್ಕೂ ತಡೆಯುಂಟಾದರೆ ಸತ್ವಗುಣವು ಅಭಿವ್ಯಕ್ತಿಯನ್ನು ಹೊಂದುತ್ತದೆ.

ನೈಶಾತ್ಮಕಂ ತಮೋ ವಿದ್ಯಾತ್ ತ್ರಿಗುಣಂ ಮೋಹಸಂಜ್ಞಿತಮ್ ।
ಅಧರ್ಮಲಕ್ಷಣಂ ಚೈವ ನಿಯತಂ ಪಾಪಕರ್ಮಸು ॥೮॥

ತಮೋಗುಣವು ಅಂಧಕಾರರೂಪವಾಗಿದೆ, ತ್ರಿಗುಣಮಯವಾಗಿದೆ. ಮೋಹವೆಂಬ ಇನ್ನೊಂದು ಹೆಸರಿದೆ. ಅಧರ್ಮಲಕ್ಷಣವಾಗಿದೆ. ಪಾಪಕರ್ಮಿಗಳಲ್ಲಿ ನಿಯಮೇನ ಇರುತ್ತದೆ.

ಮೂವತ್ತೇಳನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಕಶ್ಯಪಾದಿ ಮಹರ್ಷಿಗಳನ್ನು ಕುರಿತು ತಮೋಗುಣದ ಕಾರ್ಯವನ್ನು ನಿರೂಪಿಸಿದುದು.

ಬ್ರಹ್ಮಾ

ತದವ್ಯಕ್ತಮನುದ್ರಿಕ್ತಂ ಸರ್ವವ್ಯಾಪಿ ಧ್ರುವಂ ಸ್ಥಿರಮ್ ।
ನವದ್ವಾರಂ ಪುರಂ ವಿದ್ಯಾತ್ ತ್ರಿಗುಣಂ ಪಂಚಧಾತುಕಮ್ ॥೧॥

ಬ್ರಹ್ಮಾ- ಮಹರ್ಷಿಗಳೇ, ಉದ್ರೇಕಗೊಳ್ಳದ, ಸರ್ವವ್ಯಾಪಿಯಾದ, ಸ್ಥಿರವಾಗಿರುವ ತತ್ತ್ವವು ಅವ್ಯಕ್ತತತ್ತ್ವ ಎನಿಸಿದೆ. ಈ ಅವ್ಯಕ್ತ ತತ್ತ್ವದ ಮೂಲಕ ಸತ್ವ-ರಜಸ್-ತಮೋ ಗುಣಗಳು ಅಭಿವ್ಯಕ್ತಿಯನ್ನು ಪಡೆದು, ಪಂಚಭೂತಗಳ ಮೂಲಕ ನವದ್ವಾರಗಳುಳ್ಳ ಶರೀರವು ಉತ್ಪನ್ನವಾಗುತ್ತದೆ.

ಏಕಾದಶಪರಿಕ್ಷೇಪಂ ಮನೋವ್ಯಾಕರಣಾತ್ಮಕಮ್ ।
ಬುದ್ಧಿಸ್ವಾಮಿಕಮಿತ್ಯೇತತ್ ಪರಮೇಕಾದಶಾದ್ ಭವೇತ್ ॥೨॥

ಈ ದೇಹವೆಂಬ ಪಟ್ಟಣದಲ್ಲಿ ಜೀವಾತ್ಮನನ್ನು ವಿಷಯಪದಾರ್ಥಗಳ ಕಡೆಗೆ ಪ್ರೇರಿಸುವ ಮನಸ್ಸಿನಿಂದ ಕೂಡಿದ ಹನ್ನೊಂದು ಇಂದ್ರಿಯಗಳಿವೆ. ಈ ಇಂದ್ರಿಯಗಳ ಅಭಿವ್ಯಕ್ತಿಯು ಮನಸ್ಸಿನ ಮೂಲಕವೇ ಆಗುತ್ತದೆ. ಈ ಶರೀರದಲ್ಲಿ ಹನ್ನೊಂದು ಇಂದ್ರಿಯಗಳಿಗೆ ಬುದ್ಧಿಯೇ ಅರಸ. ಹನ್ನೊಂದೆಯನದ್ದಾದ ಮನಸ್ಸೇ ಹತ್ತು ಇಂದ್ರಿಯಗಳಿಗಿಂತ ಶ್ರೇಷ್ಠವಾದುದು.

ತ್ರೀಣಿ ಸ್ರೋತಾಂಸಿ ಯಾನ್ಯಸ್ಮಿನ್ನಾಪ್ಯಾಯಂತೇ ಪುನಃ ಪುನಃ ।
ಪ್ರಸಾದ್ಯಸ್ತಿಸ್ರ ಏತೇಷಾಂ ಪ್ರವರ್ತಂತೇ ಗುಣಾತ್ಮಿಕಾಃ ॥೩॥

ಈ ದೇಹದಲ್ಲಿ ಸಾತ್ವಿಕ, ರಾಜಸ, ತಾಮಸ ದೇಹದಿಂದ ಮೂರು ಪ್ರವಾಹಗಳು ಹರಿಯುತ್ತಿವೆ. ಮೂರು ಗುಣಗಳು ಪುನಃ ಪುನಃ ಈ ಜೀವನಿಗೆ ಸಂಬಂಧಿಸಿ ಹರಿಯುತ್ತಲೇ ಇರುತ್ತವೆ. ಸತ್ವ-ರಜಸ್-ತಮೋಗುಣಗಳ ಪ್ರವಾಹಗಳು ಮನಸ್ಸಿನಲ್ಲಿ ನಿರಂತರ ಹರಿಯುತ್ತಲೇ ಇರುತ್ತವೆ.

ತಮೋ ರಜಸ್ತಥಾ ಸತ್ವಂ ಗುಣಾನೇತಾನ್ ಪ್ರಚಕ್ಷತೇ ।
ಅನ್ಯೋನ್ಯಮಿಥುನಾಃ ಸರ್ವೇ ತಥಾऽನ್ಯೋನ್ಯಾನುಜೀವಿನಃ ॥೪॥

ಅನ್ಯೋನ್ಯಾಶ್ರಯಿಣಶ್ಚೈವ ತಥಾऽನ್ಯೋನ್ಯಾನುವರ್ತಿನಃ ।
ಅನ್ಯೋನ್ಯವ್ಯತಿಷಕ್ತಾಶ್ಚ ತ್ರಿಗುಣಾಃ ಪಂಚಧಾತವಃ ॥೫॥

ಸತ್ವ, ರಜಸ್ಸು, ತಮಸ್ಸು - ಈ ಮೂರನ್ನು ಗುಣಗಳೆಂದು ಕರೆಯುತ್ತಾರೆ. ಇವುಗಳು ಪರಸ್ಪರ ಸಂಬದ್ಧವಾಗಿವೆ. ಪರಸ್ಪರ ಆಶ್ರಯ-ಆಶ್ರಯಿ ಭಾವವಿದೆ. ಪರಸ್ಪರ ಪೋಷಕಗಳಾಗಿವೆ. ಪರಸ್ಪರ ಅನುಸರಿಸುವ ಸ್ವಭಾವವುಳ್ಳವುಗಳು. ಒಂದು ಗುಣವು ಮತ್ತೊಂದು ಗುಣದೊಡನೆ ಸೇರುತ್ತದೆ. ಪಂಚಮಹಾಭೂತಗಳು ಈ ತ್ರಿಗುಣಗಳಿಂದ ಸಂಬದ್ಧವಾಗಿವೆ.

ತಮಸೋ ಮಿಥುನಂ ಸತ್ವಂ ಸತ್ವಸ್ಯ ಮಿಥುನಂ ರಜಃ ।
ರಜಸಶ್ಚಾಪಿ ಸತ್ವಂ ಸ್ಯಾತ್ ಸತ್ವಸ್ಯ ಮಿಥುನಂ ತಮಃ ॥೬॥

ಸತ್ವಗುಣವು ತಮೋಗುಣದ ಜೊತೆಯಾಗಿರುತ್ತದೆ. ಸತ್ವಕ್ಕೆ ರಜಸ್ಸು ಜೊತೆಯಾಗಿರುತ್ತದೆ. ರಜಸ್ಸಿಗೆ ಸತ್ವವು ಜೊತೆಯಾಗಿರುತ್ತದೆ. ಸತ್ವಕ್ಕೆ ತಮಸ್ಸು ಜೊತೆಯಾಗಿರುತ್ತದೆ.

ನಿಯಮ್ಯತೇ ತಮೋ ಯತ್ರ ರಜಸ್ತತ್ರ ಪ್ರವರ್ತತೇ ।
ನಿಯಮ್ಯತೇ ರಜೋ ಯತ್ರ ಸತ್ವಂ ತತ್ರ ಪ್ರವರ್ತತೇ ॥೭॥

ತಮೋಗುಣಕ್ಕೆ ತಡೆಯುಂಟಾದರೆ ರಜೋಗುಣವು ಹುಟ್ಟುತ್ತದೆ. ರಜೋಗುಣಕ್ಕೂ ತಡೆಯುಂಟಾದರೆ ಸತ್ವಗುಣವು ಅಭಿವ್ಯಕ್ತಿಯನ್ನು ಹೊಂದುತ್ತದೆ.

ನೈಶಾತ್ಮಕಂ ತಮೋ ವಿದ್ಯಾತ್ ತ್ರಿಗುಣಂ ಮೋಹಸಂಜ್ಞಿತಮ್ ।
ಅಧರ್ಮಲಕ್ಷಣಂ ಚೈವ ನಿಯತಂ ಪಾಪಕರ್ಮಸು ॥೮॥

ತಮೋಗುಣವು ಅಂಧಕಾರರೂಪವಾಗಿದೆ, ತ್ರಿಗುಣಮಯವಾಗಿದೆ. ಮೋಹವೆಂಬ ಇನ್ನೊಂದು ಹೆಸರಿದೆ. ಅಧರ್ಮಲಕ್ಷಣವಾಗಿದೆ. ಪಾಪಕರ್ಮಿಗಳಲ್ಲಿ ನಿಯಮೇನ ಇರುತ್ತದೆ.

ಪ್ರಕೃತ್ಯಾತ್ಮಕಮೇವಾಭೂದ್ ರಜಃ ಪರ್ಯಾಯಕಾರಣಮ್ ।
ಪ್ರವೃತ್ತಂ ಸರ್ವಭೂತೇಷು ಪಶ್ಯತ್ಯುತ್ಪತ್ತಿಲಕ್ಷಣಮ್ ॥೯॥

ರಜೋಗುಣವನ್ನು ಪ್ರಕೃತಿರೂಪ ಎನ್ನುತ್ತಾರೆ. ಇದು ಸೃಷ್ಟಿಗೆ ಕಾರಣವಾಗಿದೆ. ಪ್ರಾಣಿಗಳಲ್ಲಿಯೂ ರಜೋಗುಣದ ಪ್ರವೃತ್ತಿಯು ಹೆಚ್ಚಿರುತ್ತದೆ. ಪ್ರಪಂಚವೆಲ್ಲವೂ ರಜೋಗುಣ ಸ್ವರೂಪವಾಗಿದೆ. ಉತ್ಪತ್ತಿ-ಪ್ರವೃತ್ತಿಗಳು ರಜೋಗುಣದ ಲಕ್ಷಣ.

ಪ್ರಕಾಶಂ ಸರ್ವಭೂತೇಷು ಲಾಘವಂ ಶ್ರದ್ಧಧಾನತಾ ।
ಸಾತ್ವಿಕಂ ರೂಪಮೇವಂ ತು ಲಾಘವಂ ಸಾಧುಸಮ್ಮಿತಮ್ ॥೧೦॥

ಎಲ್ಲ ಭೂತಗಳಲ್ಲಿ ಅಂತರಂಗದಲ್ಲಿರುವ ಪ್ರಕಾಶವೇ ಸತ್ವ ಎನಿಸಿದೆ. ಲಾಘವ, ಶ್ರದ್ಧೆ ಇವುಗಳು ಸತ್ವಗುಣದ ಕ್ರಿಯೆಗಳು. ನಿರಾಡಂಬರತೆಯನ್ನು ಸಾಧುಸಮ್ಮತವಾದ ಸತ್ವಗುಣವೆಂದು ಪ್ರಶಂಸಿಸುತ್ತಾರೆ.

ಏತೇಷಾಂ ಗುಣತತ್ತ್ವಂ ಹಿ ವಕ್ಷ್ಯತೇ ಪ್ರಾಪ್ತಹೇತುಭಿಃ ।
ಸಮಾಸವ್ಯಾಸಯುಕ್ತಾನಿ ತತ್ತ್ವತಸ್ತಾನಿ ವಿತ್ತ ಮೇ ॥೧೧॥

ಮಹರ್ಷಿಗಳೇ, ನಾನು ತಾತ್ವಿಕವಾದ ಯುಕ್ತಿಯಿಂದ ಸಂಕ್ಷಿಪ್ತವಾಗಿ ಮತ್ತು ವಿಸ್ತಾರವಾಗಿಯೂ ಮೂರು ಗುಣಗಳ ಕಾರ್ಯವನ್ನು ಯಥಾವತ್ತಾಗಿ ಹೇಳುತ್ತೇನೆ, ಕೇಳಿರಿ.

ಸಮ್ಮೋಹೋ ಮನಸಸ್ತ್ಯಾಗಃ ಕರ್ಮಣಾಮವಿನಿರ್ಣಯಃ ।
ಸಪ್ತಃ ಸ್ತಂಭೋ ಭಯಂ ಲೋಭಃ ಶೋಕಃ ಸುಕೃತದೂಷಣಮ್ ॥೧೨॥

ವಿಸ್ಮೃತಿಶ್ಚಾವಿವೇಕಶ್ಚ ನಾಸ್ತಿಕ್ಯಂ ಭಿನ್ನವೃತ್ತಿತಾ ।
ನಿರ್ವಿಶೇಷತ್ವಮಂಧತ್ವಂ ಜಘನ್ಯಗುಣವೃತ್ತಿತಾ ॥೧೩॥

ಅಕೃತೇ ಕೃತಮಾನಿತ್ವಮಜ್ಞಾನೇ ಜ್ಞಾನಮಾನಿತಾ ।
ಅಮೈತ್ರೀ ವಿಕೃತೋ ಭಾವೋ ಹ್ಯಶ್ರದ್ಧಾ ಗೂಢಭಾವನಾ ॥೧೪॥

ಅನಾರ್ಜವಮಸಂಜ್ಞತ್ವಂ ಕರ್ಮ ಪಾಪಮಚೇತನಾ ।
ಗುರುತ್ವಂ ಸನ್ನಭಾವತ್ವಮಶೀತತ್ವಮವಾಗ್ಗತಿಃ ॥೧೫॥

ಸರ್ವ ಏತೇ ಗುಣಾಶ್ಚೈವ ತಾಮಸಾಃ ಪರಿಕೀರ್ತಿತಾಃ ॥೧೬॥

ಮೋಹ, ಅಜ್ಞಾನ, ಅತ್ಯಾಗ, ಕರ್ಮಗಳ ಬಗ್ಗೆ ಅನಿಶ್ಚಿತತೆ, ನಿದ್ರಾ, ಗರ್ವ, ಭಯ, ಲೋಭ, ಸತ್ಕರ್ಮಗಳ ದೂಷಣೆ, ವಿಸ್ಮರಣೆ, ಕಾರ್ಯದ ಪರಿಣಾಮವನ್ನು ಯೋಚಿಸದೆ ಇರುವುದು, ನಾಸ್ತಿಕತೆ, ದುಶ್ಚರಿತೆ, ಅವಿವೇಕ, ಇಂದ್ರಿಯ ಶೈಥಿಲ್ಯ, ಕೀಳುಮಟ್ಟದ ಅಭಿರುಚಿ, ಕರ್ಮ ಮಾಡದಿದ್ದರೂ ದುರಭಿಮಾನ ಪಡುವುದು, ಅಜ್ಞಾನಿಯಾಗಿದ್ದರೂ ಜ್ಞಾನಿಯೆಂಬ ವಿಭ್ರಮ, ಎಲ್ಲರೊಡನೆ ಕದನ, ಶತ್ರುತ್ವ, ಮಾಡಬೇಕಾದ ಕೆಲಸದಲ್ಲಿ ಅನಾಸಕ್ತಿ, ಮಾಡುವ ಕೆಲಸವನ್ನು ಅಶ್ರದ್ಧೆಯಿಂದ ಮಾಡುವುದು, ಗೂಢಭಾವ, ಕುಟಿಲತೆ, ತಿಳಿಗೇಡಿತನ, ಪಾಪಕರ್ಮಾಸಕ್ತಿ, ಅಜ್ಞಾನ-ಆಲಸ್ಯಗಳಿಂದ ಮೈ-ಮನಸ್ಸುಗಳನ್ನು ಜಡವಾಗಿಸುವುದು, ಸದ್ಭಾವ ಇಲ್ಲದಿರುವಿಕೆ, ಇಂದ್ರಿಯಗಳ ವಶವಾಗಿರುವುದು, ನೀಚಕರ್ಮಾಸಕ್ತಿ - ಈ ಎಲ್ಲ ದುಷ್ಕಾರ್ಯಗಳು ತಮೋಗುಣದ ಕಾರ್ಯವೆಂದು ಹೇಳಲ್ಪಟ್ಟಿವೆ. ಇದಲ್ಲದೆ ಲೋಕದಲ್ಲಿ ಮೋಹ-ಭಾವಗಳು ಯಾವವು ಇವೆ ಅವೆಲ್ಲ ತಾಮಸಿಕ ಗುಣವೆಂದು ನಿರ್ಣಯಿಸಲ್ಪಟ್ಟಿವೆ.

ಯೇ ಚಾನ್ಯೇ ನಿಯತಾ ಭಾವಾ ಲೋಕೇऽಸ್ಮಿನ್ ಮೂಢಸಂಜ್ಞಿತಾಃ ।
ತತ್ರ ತತ್ರ ನಿಯಮ್ಯಂತೇ ಸರ್ವೇ ತೇ ತಾಮಸಾ ಗುಣಾಃ ॥೧೭॥

ಪರಿವಾದಕಥಾ ನಿತ್ಯಂ ದೇವಬ್ರಾಹ್ಮಣವೈರಿತಾ ।
ಅತ್ಯಾಗಶ್ಚಾತಿಮಾನಶ್ಚ ಮೋಹೋ ಮನ್ಯುಸ್ತಥಾಕ್ಷಮಾ ॥೧೮॥

ಮತ್ಸರಶ್ಚೈವ ಭೂತೇಷು ತಾಮಸಂ ವೃತ್ತಮಿಷ್ಯತೇ ॥೧೯॥

ದೇವ-ಬ್ರಾಹ್ಮಣರನ್ನು, ವೇದಗಳನ್ನು ನಿಂದಿಸುವುದು, ದಾನ ಮಾಡದಿರುವುದು, ಅತ್ಯಂತ ಅಭಿಮಾನ ಪಡುವುದು, ಮೋಹ-ಕೋಪ-ಅಸಹನೆ-ಹೊಟ್ಟೆಕಿಚ್ಚು - ಇವು ತಾಮಸಿಕ ವ್ಯವಹಾರವೆಂದು ಹೇಳಲ್ಪಟ್ಟಿವೆ.

ವೃಥಾऽऽರಂಭಾ ಹಿ ಯೇ ಕೇಚಿದ್ ವೃಥಾ ದಾನಾನಿ ಯಾನಿ ಚ ।
ವೃಥಾ ಭಕ್ಷಣಮಿತ್ಯೇತತ್ ತಾಮಸಂ ವೃತ್ತಮಿಷ್ಯತೇ ॥೨೦॥

ಶಾಸ್ತ್ರನಿಷಿದ್ಧವಾದ ಕರ್ಮಗಳಲ್ಲಿ ಉತ್ಸಾಹ, ದೇಶ-ಪಾತ್ರ ವಿವೇಚನೆ ಇಲ್ಲದ ಜಂಬದ ದಾನ, ಹರಿ ಅನರ್ಪಿತ ಭೋಜನ - ಇವುಗಳು ತಾಮಸ ವೃತ್ತಿಗಳು.

ಅತಿವಾದೋಽತಿತಿಕ್ಷಾ ಚ ಮಾತ್ಸರ್ಯಮತಿಮಾನಿತಾ ।
ಅಶ್ರದ್ಧಧಾನತಾ ಚೈವ ತಾಮಸಂ ವೃತ್ತಮಿಷ್ಯತೇ ॥೨೧॥

ಹೆಚ್ಚು ಮಾತನಾಡುವುದು, ಕ್ಷಮೆ ಇಲ್ಲದಿರುವುದು, ಮಾತ್ಸರ್ಯ, ಅಹಂಕಾರ, ಅಶ್ರದ್ಧೆ - ಇವುಗಳು ತಾಮಸ ಪ್ರವೃತ್ತಿಗಳು ಎನಿಸಿವೆ.

ಏವಂವಿಧಾಸ್ತು ಯೇ ಕೇಚಿಲ್ಲೋಕೇಽಸ್ಮಿನ್ ಪಾಪಕರ್ಮಿಣಃ ।
ಮನುಷ್ಯಾ ಭಿನ್ನಮರ್ಯಾದಾಸ್ತೇ ಸರ್ವೇ ತಾಮಸಾ ಜನಾಃ ॥೨೨॥

ಈ ರೀತಿ ಪಾಪಕರ್ಮಿಗಳಾದ, ಧರ್ಮದ ಮರ್ಯಾದೆಯನ್ನು ಮೀರಿರುವ ಜನರನ್ನು ತಾಮಸರೆಂದು ಹೇಳಲಾಗುತ್ತದೆ. ಅಂತಹ ಮನುಷ್ಯರು ವಿಧಿಯನ್ನು ಉಲ್ಲಂಘಿಸಿದ ಪ್ರಭಾವದಿಂದ ಅಧಃಪತನವನ್ನು ಹೊಂದುತ್ತಾರೆ.

ತೇಷಾಂ ಯೋನಿಂ ಪ್ರವಕ್ಷ್ಯಾಮಿ ನಿಯತಾಂ ಪಾಪಕರ್ಮಿಣಾಮ್ ॥೨೩॥

ಪಾಪಕರ್ಮಿಗಳಿಗೆ ನಿಯತವಾದ ಯೋನಿಗಳು ಯಾವುವೆಂದು ಹೇಳುತ್ತೇನೆ, ಕೇಳಿಸಿಕೊ.

ಅವಾಙ್ನಿರಯಭಾಗಾ ವೈ ತಿರ್ಯಙ್ನಿರಯಗಾಮಿನಃ ॥೨೪॥

ತಾಮಸಯೋನಿಯವರು ಅಧೋಲೋಕವೆನಿಸಿದ ನರಕಗಳಿಗೆ ಭಾಗಿಗಳಾಗುತ್ತಾರೆ. ಪ್ರಾಣಿ-ಪಕ್ಷಿಗಳೆಂಬ ನರಕ ಯೋನಿಗಳಲ್ಲಿ ಹುಟ್ಟುತ್ತಾರೆ.

ಸ್ಥಾವರಾಣಿ ಚ ಭೂತಾನಿ ಪಶವೋ ವಾಹನಾನಿ ಚ ।
ಕ್ರವ್ಯಾದಾ ದಂದಶೂಕಾಶ್ಚ ಕೃಮಿಕೀಟವಿಹಂಗಮಾಃ ॥೨೫॥

ಅಪರೇ ಜಂತವೋ ಯೇ ಚ ಸರ್ವೇ ಚಾಪಿ ಚತುಷ್ಪದಾಃ ।
ಉನ್ಮತ್ತಾ ಬಧಿರಾ ಮೂಕಾ ಯೇ ಚಾನ್ಯೇ ಪಾಪರೋಗಿಣಃ ॥೨೬॥

ವೃಕ್ಷ-ಪರ್ವತಾದಿ ಸ್ಥಾವರ ಜೀವಿಗಳು, ಪಶುಗಳು, ಆನೆ-ಕುದುರೆ ಮೊದಲಾದ ವಾಹನಗಳು, ರಾಕ್ಷಸರು, ಮಾಂಸಭಕ್ಷಕ ಜಂತುಗಳು, ಕ್ರಿಮಿ-ಕೀಟ-ಪಕ್ಷಿಗಳು, ಉಳಿದ ಜಂತು ಎಂಬ ಹೆಸರಿನಿಂದ ಕರೆಸಿಕೊಳ್ಳುವ ಪ್ರಾಣಿಗಳು, ನಾಲ್ಕು ಕಾಲಿನ ಪ್ರಾಣಿಗಳು,

ಹುಚ್ಚರು, ಕಿವುಡರು, ಮೂಕರು, ಪಾಪರೋಗಗ್ರಸ್ಥರು - ಇವರೆಲ್ಲರೂ ತಮೋಗುಣದಲ್ಲೇ ಮುಳುಗಿರುತ್ತಾರೆ.

ಮಗ್ನಾಸ್ತಮಸಿ ದುರ್ವೃತ್ತಾಃ ಸ್ವಕರ್ಮಕೃತಲಕ್ಷಣಾಃ ।
ಅರ್ವಾಕ್ ಸ್ರೋತಸ ಇತ್ಯೇತೇ ಮಗ್ನಾಸ್ತಮಸಿ ತಾಮಸಾಃ ॥೨೭॥

ತಮೋಗುಣಗಳಲ್ಲಿ ಮುಳುಗಿರುವ ಇವರು ತಮ್ಮ ಕರ್ಮಾನುಸಾರ ದುರ್ಲಕ್ಷಣಗಳನ್ನು ಹೊಂದಿ ದುರಾಚಾರಿಗಳಾಗಿ, ಕೀಳು ಅಭಿರುಚಿಗಳಿಂದ ಅಧೋ ಯೋನಿಗಳಲ್ಲೇ ಉತ್ಪತ್ತಿಯನ್ನು ಪಡೆಯುತ್ತಾರೆ. ಇವರನ್ನು ಅರ್ವಾಕ್ ಸ್ರೋತಸರು ಎಂದು ಕರೆಯುತ್ತಾರೆ. ತಮೋಗುಣದಲ್ಲಿ ಮುಳುಗಿರುವ ಎಲ್ಲ ಪ್ರಾಣಿಗಳನ್ನೂ ತಾಮಸರೆಂದೇ ಕರೆಯಲಾಗಿದೆ.

ತೇಷಾಮುತ್ಕರ್ಷಮುದ್ರೇಕಂ ವಕ್ಷ್ಯಾಮ್ಯಹಮತಃ ಪರಮ್ ।
ಯಥಾ ತೇ ಸುಕೃತಾನ್ ಲೋಕಾನ್ ಲಭಂತೇ ಪುಣ್ಯಕರ್ಮಣಾಮ್ ॥

ತಾಮಸ ಪ್ರಾಣಿಗಳೂ ಉನ್ನತಿಯನ್ನು, ಸಮೃದ್ಧಿಯನ್ನು ಪುಣ್ಯ-ಕರ್ಮಗಳ ಮೂಲಕ ಹೇಗೆ ಹೊಂದಬಹುದು, ಪುಣ್ಯಲೋಕಗಳನ್ನು ಹೇಗೆ ಹೊಂದುತ್ತಾರೆ ಎಂಬುದನ್ನು ಹೇಳುತ್ತೇನೆ, ಕೇಳಿಸಿಕೊಳ್ಳಿ.

ಅನ್ಯಥಾ ಪ್ರತಿಪನ್ನಾಸ್ತು ವಿವೃದ್ಧಾ ಯೇ ಚ ಕರ್ಮಸು ॥೨೯॥

ಸ್ವಕರ್ಮನಿರತಾನಾಂ ಚ ಬ್ರಾಹ್ಮಣಾನಾಂ ಶುಭೈಷಿಣಾಮ್ ।
ಸಂಸ್ಕಾರೇಣೋರ್ಧ್ವಮಾಯಾಂತಿ ಯತಮಾನಾಃ ಸಲೋಕತಾಮ್ ॥೩೦॥

ಸ್ವರ್ಗಂ ಗಚ್ಛಂತಿ ದೇವಾನಾಮಿತ್ಯೇಷಾ ವೈದಿಕೀ ಶ್ರುತಿಃ ॥೩೧॥

ತಿರ್ಯಕ್ ಸ್ಥಾವರಯೋನಿಗಳನ್ನು ಪಡೆದ ಪ್ರಾಣಿಗಳನ್ನು ಬ್ರಾಹ್ಮಣರ ಮೂಲಕ ಅಗ್ನಿಹೋತ್ರಾದಿ ಕರ್ಮಗಳಿಗೆ ಸೇವಾರೂಪವಾಗಿ ಬಳಸಿಕೊಂಡಾಗ ಉತ್ತಮ ಸಂಸ್ಕಾರಗಳಿಂದ ಊರ್ಧ್ವಲೋಕಗಳಿಗೆ ಹೋಗಬಹುದು. ಸ್ವಕರ್ಮನಿರತರಾದ, ಶುಭಕರ್ಮಗಳನ್ನು ಮಾಡುವ ಬ್ರಾಹ್ಮಣರಲ್ಲಿ ಪ್ರಾಣಿಗಳಾಗಿಯೋ, ಅಧಮ ಕರ್ಮಿಗಳಾಗಿಯೋ ಹುಟ್ಟುವ ಮೂಲಕ ಅವರನ್ನು ಸತತವಾಗಿ ಸೇವಿಸಿ ಕೊನೆಗೆ ಸ್ವರ್ಗಲೋಕದ ಸುಖವನ್ನು ಹೊಂದಬಹುದು ಎಂದು ವೇದವಚನವೇ ಇದೆ.

ಅನ್ಯಥಾ ಪ್ರತಿಪನ್ನಾಸ್ತು ವಿಬುದ್ಧಾಃ ಸ್ವೇಷು ಕರ್ಮಸು ।
ಪುನರಾವೃತ್ತಿಧರ್ಮಾಣಸ್ತೇ ಭವಂತೀಹ ಮಾನುಷಾಃ ॥೩೨॥

ಹೀಗೆ ದೇವಲೋಕದಲ್ಲಿ ಸ್ವಲ್ಪ ಕಾಲ ವಾಸಿಸಿದ ಅವರು ಕರ್ಮಾನುಗುಣವಾಗಿ ತಮ್ಮ ಕರ್ತವ್ಯಗಳಲ್ಲಿ ಪ್ರಜ್ಞೆಯನ್ನು ಹೊಂದಿ, ಪುನರಾವೃತ್ತಿ ಧರ್ಮವುಳ್ಳ ಮನುಷ್ಯರಾಗಿ ಈ ಲೋಕದಲ್ಲಿ ಹುಟ್ಟುತ್ತಾರೆ.

ಪಾಪಯೋನಿಂ ಸಮಾಪನ್ನಾಶ್ಚಂಡಾಲಾ ವೃಕಚೂಚುಕಾಃ ।
ವರ್ಣಾನ್ ಪರ್ಯಾಯತಶ್ಚೈವ ಪ್ರಾಪ್ನುವನ್ಯುತ್ತರೋತ್ತರಮ್ ॥೩೩॥

ಅವರಲ್ಲಿ ಕೆಲವರು ನೀಚಯೋನಿಗಳಲ್ಲಿ ಹುಟ್ಟಿ ಚಂಡಾಲ, ಮೂಕರು ಆಗುತ್ತಾರೆ. ತೊದಲು ಮಾತುಗಳನ್ನು ಆಡುವವರಾಗುತ್ತಾರೆ. ಇಂತಹವರು ಕ್ರಮವಾಗಿ ಉಚ್ಚ ವರ್ಣಗಳಲ್ಲಿ ಜನಿಸುತ್ತಾರೆ.

ಶೂದ್ರಯೋನಿಮತಿಕ್ರಮ್ಯ ಯೇ ಚಾನ್ಯೇ ತಾಮಸಾ ಗುಣಾಃ ।
ಸ್ರೋತೋಮಧ್ಯಮಥಾಗಮ್ಯ ವರ್ತಂತೇ ತಾಮಸೇ ಗುಣೇ ॥೩೪॥

ಶೂದ್ರಯೋನಿಯನ್ನು ದಾಟಿ ಮುಂದಿನ ಉಚ್ಚವರ್ಣದಲ್ಲಿ ಹುಟ್ಟಿದರೂ ಯಾರು ತಾಮಸ ಗುಣವನ್ನೇ ಹೊಂದಿರುತ್ತಾರೋ ಅವರು ಗುಣತ್ರಯಗಳ ಪ್ರವಾಹದಲ್ಲಿ ಬಿದ್ದು ತಾಮಸಿಕ ಫಲವನ್ನೇ ಹೊಂದುತ್ತಾರೆ.

ಅಭಿಷ್ವಂಗಸ್ತು ಕಾಮೇಷು ಮಹಾಮೋಹ ಇತಿ ಸ್ಮೃತಃ ।
ಋಷಯೋ ಮುನಯೋ ದೇವಾ ಮುಹ್ಯಂತ್ಯತ್ರ ಸುಖೇಪ್ಸವಃ ॥೩೫॥

ಕಾಮಭೋಗಗಳಲ್ಲೇ ಆಸಕ್ತಿಯನ್ನು ಹೊಂದುವುದು ಮಹಾಮೋಹವೆನಿಸುತ್ತದೆ. ಋಷಿ-ಮುನಿಗಳು, ದೇವತೆಗಳೂ ಕೂಡ ಮಹಾಮೋಹದಲ್ಲಿ, ಕೆಲವೊಮ್ಮೆ ಸುಖಕ್ಕಾಗಿ ಸಿಕ್ಕಿಬಿದ್ದು ದುಃಖಪಡುತ್ತಾರೆ.

ತಮೋ ಮೋಹೋ ಮಹಾಮೋಹಃ ತಾಮಿಸ್ರೋ ಹ್ಯಂಧಸಂಜ್ಞಿತಃ ।
ಮರಣಂ ತ್ವಂಧತಾಮಿಸ್ರಸ್ತಾಮಿಸ್ರಃ ಕ್ರೋಧ ಉಚ್ಯತೇ ॥೩೬॥

ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂದು ಐದು

ಮುಖದ ತಮೋಗುಣದ ಅಜ್ಞಾನಗಳಿವೆ. ಇವುಗಳಲ್ಲಿ ಅಂಧತಾಮಿಸ್ರವು ಮೃತ್ಯು ಸ್ವರೂಪವಾಗಿದೆ. ಕ್ರೋಧವನ್ನೇ ತಾಮಿಸ್ರ ಎನ್ನುತ್ತಾರೆ.

ಭಾವತೋ ಗುಣತಶ್ಚೈವ ಯೋನಿತಶ್ಚೈವ ತತ್ತ್ವತಃ ।
ಸರ್ವಮೇತತ್ ತಮೋ ವಿಪ್ರಾಃ ಕೀರ್ತಿತಂ ವೋ ಯಥಾವಿಧಿ ॥೩೭॥

ಸ್ವಭಾವದಿಂದ, ಗುಣದಿಂದ, ಯೋನಿಯಿಂದ, ತತ್ತ್ವದಿಂದ ತಮೋಗುಣದ ವ್ಯಾಪಾರವನ್ನು ವಿಧಿವತ್ತಾಗಿ ಹೇಳಿದ್ದೇನೆ.

ಕೋ ನ್ವೇತದ್ ಬುಧ್ಯತೇ ಸಾಧು ಕೋನ್ವೇತತ್ ಸಾಧು ಪಶ್ಯತಿ ।
ಅತತ್ತ್ವೇ ತತ್ತ್ವದರ್ಶೀ ಯಸ್ತಮಸಸ್ತಚ್ಚ ಲಕ್ಷಣಮ್ ॥೩೮॥

ಇಂತಹ ಅತತ್ತ್ವದಲ್ಲೇ ತತ್ತ್ವದೃಷ್ಟಿಯುಳ್ಳವನು ಯಾವನು ತಾನೇ ಬ್ರಹ್ಮತತ್ತ್ವವನ್ನು ಸರಿಯಾಗಿ ತಿಳಿಯುತ್ತಾನೆ? ಕಂಡುಕೊಳ್ಳುತ್ತಾನೆ? ತಮೋಗುಣದಲ್ಲಿ ಪ್ರವೃತ್ತರಾದವರಿಗೆ ಬ್ರಹ್ಮಜ್ಞಾನವು ಲಭಿಸುವುದಿಲ್ಲ.

ತಮೋಗುಣಾ ವೋ ಬಹವೋಽನುಕೀರ್ತಿತಾ
ಯಥಾವದುಕ್ತಂ ಚ ತಮಃ ಪರಾವರಮ್ ।
ನರೋ ಹಿ ಯೋ ವೇದ ಗುಣಾನಿಮಾನ್ ಸದಾ
ಸ ತಾಮಸೈಃ ಸರ್ವಗುಣೈರ್ವಿಮುಚ್ಯತೇ ॥೩೯॥

ಬ್ರಾಹ್ಮಣಶ್ರೇಷ್ಠರೇ, ತಮೋಗುಣದ ಸ್ವರೂಪ, ಅದರ ಪ್ರಕಾರ, ತಮೋಗುಣದಿಂದ ಪ್ರಾಪ್ತವಾಗುವ ಉಚ್ಚ-ನೀಚ ಯೋನಿಗಳು ಎಲ್ಲವನ್ನೂ ಯಥಾವತ್ತಾಗಿ ತಿಳಿಸಿದ್ದೇನೆ. ತಮೋಗುಣದಿಂದ ಆಗುವ ದುರ್ದಶೆಯನ್ನು ತಿಳಿದುಕೊಂಡು ಯಾವನು ಜಾಗೃತನಾಗುತ್ತಾನೋ ಅವನು ತಾಮಸಗುಣದಿಂದ ಬಿಡುಗಡೆ ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ತಮೋಗುಣವಿಚಾರಕಥನಂ ನಾಮ
ಸಪ್ತತ್ರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ರಜೋಗುಣದ ಕಾರ್ಯವನ್ನು ನಿರೂಪಿಸಿದುದು.

ಬ್ರಹ್ಮಾ

ರಜೋಽಹಂ ವೈ ಪ್ರವಕ್ಷ್ಯಾಮಿ ಯಾಥಾತಥ್ಯೇನ ಸತ್ತಮಾಃ ।
ನಿಬೋಧತ ಮಹಾಭಾಗಾ ಗುಣವೃತ್ತಂ ಚ ಸರ್ವಶಃ ॥೧॥

ಬ್ರಹ್ಮಾ– ಮಹಾಭಾಗ್ಯಶಾಲಿಗಳಾದ ಮುನಿಶ್ರೇಷ್ಠರೇ, ನಿಮಗೆ ರಜೋಗುಣದ ವಿಷಯವನ್ನು ನಾನು ಯಥಾರ್ಥವಾಗಿ ತಿಳಿಸುತ್ತೇನೆ. ರಜೋಗುಣಕ್ಕೆ ಸಂಬಂಧಿಸಿದ ಗುಣವೃತ್ತವನ್ನು ಸಮಗ್ರವಾಗಿ ಕೇಳಿರಿ.

ಸಂಕಲ್ಪೋ ರೂಪಮಾಯಾಸಃ ಸುಖದುಃಖೇ ಹಿಮಾತಪೌ ।
ಐಶ್ವರ್ಯಂ ವಿಗ್ರಹಃ ಸಿದ್ಧಿರ್ಹೇತುವಾದೋಽರತಿಃ ಕ್ಷಮಾ ॥೨॥

ಬಲಂ ಶೌರ್ಯಂ ಮದೋ ರೋಷೋ ವ್ಯಾಯಾಮಕಲಹಾವಪಿ ।
ಈರ್ಷ್ಯಾಪೈಶುನಂ ಯುದ್ಧಂ ಮಮತ್ವಂ ಪರಿಪಾಲನಮ್ ॥೩॥

ವಧಬಂಧಪರಿಕ್ಲೇಶಾಃ ಕ್ರಯೋ ವಿಕ್ರಯ ಏವ ಚ ।
ನಿಕೃಂತ ಚ್ಛಿಂಧಿ ಭಿಂಧೀತಿ ಪರಮರ್ಮಾವಕರ್ತನಮ್ ॥೪॥

ಉಗ್ರಂ ದಾರುಣಮಾಕ್ರೋಶಃ ಪರವಿತ್ತಾನುರಾಗಿತಾ ।
ಲೋಕಚಿಂತಾ ವಿಚಿಂತಾ ಚ ಮತ್ಸರಃ ಪರಿಭಾಷಣಮ್ ॥೫॥

ವೃಥಾ ಶಾಸ್ತ್ರ ಮೃಷಾವಾದೋ ವಿಕಲ್ಪಪರಿಭಾಷಣಮ್ ।
ನಿಂದಾ ಸ್ತುತಿಃ ಪ್ರಶಂಸಾ ಚ ಪ್ರತಾಪಃ ಪರಿತರ್ಪಣಮ್ ॥೬॥

ಪರಿಚರ್ಯಾ ಚ ಶುಶ್ರೂಷಾ ಸೇವಾ ತೃಷ್ಣಾ ವ್ಯಪಾಶ್ರಯಃ ।
ವ್ಯೂಹೋ ನಯಃ ಪ್ರಮಾದಶ್ಚ ಪರಿತಾಪಃ ಪರಿಗ್ರಹಃ ॥೭॥

ಸಂಕಲ್ಪ, ರೂಪ, ಆಯಾಸ, ಸುಖ-ದುಃಖಗಳು, ಚಳಿ, ಬಿಸಿಲು, ಐಶ್ವರ್ಯ, ಕಲಹ, ಸಿದ್ಧಿಗಳು, ಕುತರ್ಕ, ಸಹನೆ, ಅಪ್ರಸನ್ನತೆ, ಬಲ, ಶೌರ್ಯ, ಮದ, ರೋಷ,

ವ್ಯಾಯಾಮ, ಕಲಹಗಳು, ಈರ್ಷ್ಯೆ, ಆಸೆ, ಚಾಡಿ ಹೇಳುವಿಕೆ, ಯುದ್ಧ ಮಾಡುವಿಕೆ, ಮಮತ್ವ, ಕುಟುಂಬ ಪಾಲನೆ, ವಧೆ, ಬಂಧನ, ಕ್ಲೇಶ, ಕ್ರಯ, ವಿಕ್ರಯ, ಕತ್ತರಿಸುವುದು, ಹೊಡೆಯುವುದು, ಸೀಳುವುದು, ಮರ್ಮಸ್ಥಳಗಳನ್ನು ಭೇದಿಸುವುದು, ಉಗ್ರತೆ, ನಿಷ್ಠುರತೆ, ಕೂಗಾಟ, ಇತರರ ಸ್ವತ್ತಿನಲ್ಲಿ ಆಸಕ್ತಿ, ಶೋಕ, ಚಿಂತೆ, ತಿರಸ್ಕಾರ, ಮತ್ಸರ, ಸಾಂಸಾರಿಕ ಭಾವನೆಯಿಂದ ಮಾತನಾಡುವುದು, ಬೇಡವಾದ ಪುರಾಣಗಳನ್ನು ಓದುವುದು, ಸುಳ್ಳು ಹೇಳುವುದು, ಸಂಶಯದಿಂದ ಮಾತನಾಡುವುದು, ನಿಂದಾ, ಸ್ತುತಿ, ಪ್ರಶಂಸೆ, ಪ್ರತಾಪ, ಮತ್ತೊಬ್ಬರನ್ನು ಸಂತೋಷ ಪಡಿಸುವುದು, ಸೇವಿಸುವುದು, ಚಾಕರಿ, ಸೇವೆ, ತೃಷ್ಣಾ, ವ್ಯಪಾಶ್ರಯ, ವ್ಯೂಹ, ಪ್ರಮಾದ, ನಯ, ಪ್ರಮಾದ, ಪರಿತಾಪ, ಪರಿಗ್ರಹ.

ಸಂಸ್ಕಾರಾ ಯೇ ಚ ಲೋಕೇಽಸ್ಮಿನ್ ಪ್ರವರ್ತಂತೇ ವೃಥಾ ಪೃಥಕ್ ।
ನೃಷು ನಾರೀಷು ಭೂತೇಷು ದ್ರವ್ಯೇಷು ಶರಣೇಷು ಚ ॥೮॥

ಪ್ರಪಂಚದಲ್ಲಿ ಸ್ತ್ರೀಯರು, ಪುರುಷರು, ಪ್ರಾಣಿಗಳು, ದ್ರವ್ಯ, ಮನೆ - ಇವುಗಳಿಗೆ ಯಾವ ಸಂಸ್ಕಾರಗಳಾಗುತ್ತವೋ ಅವೆಲ್ಲವೂ ರಜೋಗುಣದ ಪ್ರೇರಣೆಯಿಂದಲೇ ಆಗುತ್ತವೆ.

ಸಂತಾಪೋಽಪ್ರತ್ಯಯಶ್ಚೈವ ವ್ರತಾನಿ ನಿಯಮಾಶ್ಚ ಯೇ ।
ಪ್ರಮದಾ ಶೀಲಯುಕ್ತಾ ಚ ಸತತಂ ಮೇ ಭವಿಷ್ಯತಿ ॥೯॥

ಸ್ವಧಾಕಾರೋ ನಮಸ್ಕಾರಃ ಸ್ವಾಹಾಕಾರೋ ವಷಟ್‌ಕ್ರಿಯಾ ।
ಯಾಜನಾಧ್ಯಾಪನೇ ಚೋಭೇ ತಥೈವಾಹುಃ ಪ್ರತಿಗ್ರಹಮ್ ॥೧೦॥

ಸಂತಾಪ, ಅವಿಶ್ವಾಸ, ವ್ರತ, ನಿಯಮ, ಇಷ್ಟವಾದುದನ್ನು ಪ್ರಾರ್ಥಿಸುವುದು, ಪ್ರಮದೆಯರಲ್ಲಿ ಆಸಕ್ತಿ, ಸ್ವಧಾಕಾರ, ನಮಸ್ಕಾರ, ಸ್ವಾಹಾಕಾರ, ವಷಟ್‌ಕ್ರಿಯಾ, ಯಜನ, ಅಧ್ಯಾಪನ, ಪ್ರತಿಗ್ರಹ - ಇವೆಲ್ಲವೂ ರಜೋಗುಣದಿಂದಲೇ ಉಂಟಾಗುತ್ತವೆ.

ಇದಂ ಮೇ ಸ್ಯಾದಿದಂ ಮೇ ಸ್ಯಾತ್ ಸ್ನೇಹೋ ಗುಣಸಮುದ್ಭವಃ ॥೧೧॥

ಇದು ನನಗೆ ಒದಗಲಿ, ಇದು ನನಗೆ ಸಿಕ್ಕಲಿ ಎಂಬ ಸ್ನೇಹ, ಇವೆಲ್ಲವೂ ರಜೋಗುಣದಿಂದ ಉತ್ಪನ್ನವಾಗುತ್ತವೆ.

ಅಭಿದ್ರೋಹಸ್ತಥಾ ಮಾಯಾ ನಿಕೃತಿರ್ಮಾನ ಏವ ಚ ।
ಸ್ತೇಯಂ ಹಿ ಸಂಪರೀವಾದಃ ಪರಿತಾಪಃ ಪ್ರಜಾಗರಃ ॥೧೨॥

ದಂಭೋ ದರ್ಪೋऽಥ ರಾಗಶ್ಚ ಭಕ್ತಿಃ ಪ್ರೀತಿಃ ಪ್ರಮೋದನಮ್ ।
ದ್ಯೂತಂ ಚ ಜನವಾದಶ್ಚ ಸಂಬಂಧಾಃ ಸ್ತ್ರೀಕೃತಾಶ್ಚ ಯೇ ॥೧೩॥

ನೃತ್ತವಾದಿತ್ರಗೀತಾನಿ ಪ್ರಸಂಗಾ ಯೇ ಚ ಕಿಂಚನ ।
ಸರ್ವ ಏತೇ ಗುಣಾ ವಿಪ್ರಾ ರಾಜಸಾಃ ಸಂಪ್ರಕೀರ್ತಿತಾಃ ॥೧೪॥

ದ್ರೋಹ, ಮಾಯಾ, ತಿರಸ್ಕಾರ, ವಂಚನೆ, ಮಾನ, ಕಳ್ಳತನ, ಅಪವಾದ, ಪರಿತಾಪ, ಜಾಗರಣ, ದಂಭ, ದರ್ಪ, ರಾಗ, ಭಕ್ತಿ , ಪ್ರೀತಿ, ಪ್ರಮೋದ, ದ್ಯೂತ ಕ್ರೀಡೆ, ಲೋಕವಿವಾದ, ಸ್ತ್ರೀಜನರ ಸಂಬಂಧ, ನೃತ್ಯ-ವಾದ್ಯ-ಗಾಯನಗಳಲ್ಲಿ ಆಸಕ್ತಿ - ಇವೆಲ್ಲವೂ ರಾಜಸಕರ್ಮಗಳೆಂದು ಹೇಳಲ್ಪಟ್ಟಿವೆ.

ಭೂತಭವ್ಯಭವಿಷ್ಯಾಣಾಂ ಭೂತಾನಾಂ ಭುವಿ ಭಾವನಾತ್ ।
ತ್ರಿವರ್ಗನಿರತಾ ನಿತ್ಯಂ ಧರ್ಮೋऽರ್ಥಃ ಕಾಮ ಇತ್ಯಪಿ ॥೧೫॥

ಕಾಮವೃತ್ತಾಃ ಪ್ರಮೋದಂತೇ ಸರ್ವಕಾಮಸಮೃದ್ಧಿಭಿಃ ।
ಅರ್ವಾಕ್ಸ್ರೋತಸ ಇತ್ಯೇತೇ ತೇ ಜನಾ ರಾಜಸಾಃ ಸ್ಮೃತಾಃ ॥೧೬॥

ಪ್ರಪಂಚದಲ್ಲಿ ಹಿಂದಿನದ್ದು, ಈಗಿನದ್ದು, ಮುಂದಿನದ್ದನ್ನು ಯಾರು ಯೋಚಿಸುತ್ತಾರೋ, ಧರ್ಮ-ಅರ್ಥ-ಕಾಮ ಸೇವನೆಯಲ್ಲಿ ರತರಾಗಿರುತ್ತಾರೋ, ಸ್ವೇಚ್ಛಾಚಾರಿಗಳಾಗಿ ಭೋಗಸಮೃದ್ಧಿಯಿಂದಲೇ ಆನಂದ ಪಡುತ್ತಾರೋ ಅವರೇ ರಜೋಗುಣದಿಂದ ಆವೃತರಾದ ಮನುಷ್ಯರು. ಅವರು ಭೂಮಿಯಿಂದ ಕೆಳಮುಖವಾಗಿಯೇ ಗಮನವುಳ್ಳವರು.

ಅಸ್ಮಿನ್ ಲೋಕೇ ಪ್ರಮೋದಂತೇ ಜಾಯಮಾನಾಃ ಪುನಃ ಪುನಃ ॥೧೭॥

ಪ್ರೇತ್ಯಭಾವಿಕಮಿಚ್ಛಂತಿ ಐಹಲೌಕಿಕಮೇವ ಚ ।
ದಾನಾನಿ ಪ್ರತಿಗೃಹ್ಣಂತಿ ತೃಪ್ಯಂತ್ಯಥ ಚ ಜುಹ್ವತಿ ॥೧೮॥

ಇಂತಹ ಜನರು ಭೂಲೋಕದಲ್ಲಿ ಪುನಃ ಹುಟ್ಟುತ್ತಾ, ವಿಷಯಸುಖದಲ್ಲಿಯೇ ಮಗ್ನರಾಗಿರುತ್ತಾರೆ. ಈ ಲೋಕದಲ್ಲಿ, ಪರಲೋಕದಲ್ಲಿ ಸುಖವನ್ನು ಪಡೆಯಲು

ಕರ್ಮಗಳನ್ನು ಮಾಡಿ ಪ್ರಯತ್ನಿಸುತ್ತಾರೆ. ಆದ್ದರಿಂದಲೇ ಕಾಮನೆಯ ಹಿನ್ನೆಲೆಯಲ್ಲಿಯೇ ದಾನ ಮಾಡುತ್ತಾರೆ, ದಾನವನ್ನು ಸ್ವೀಕರಿಸುತ್ತಾರೆ, ಅತಿಥಿಗಳನ್ನು ತೃಪ್ತಿಗೊಳಿಸುತ್ತಾರೆ, ಯಜ್ಞಗಳನ್ನು ಮಾಡುತ್ತಾರೆ.

ರಜೋಗುಣಾ ವೋ ಬಹುಧಾऽನುಕೀರ್ತಿತಾ
ಯಥಾವದುಕ್ತಂ ಗುಣವೃತ್ತಮೇವ ಚ ।
ನರೋ ಹಿ ಯೋ ವೇದ ಗುಣಾನಿಮಾನ್ ಸದಾ
ಸ ರಾಜಸೈಃ ಸರ್ವಗುಣೈರ್ವಿಮುಚ್ಯತೇ ॥೧೯॥

ಮುನಿಶ್ರೇಷ್ಠರೇ, ನಿಮಗೆ ರಜೋಗುಣದ ಅನೇಕ ಪ್ರಕಾರಗಳನ್ನು, ಸ್ವರೂಪಗಳನ್ನು, ಅದರಿಂದ ನಡೆಯುವ ಕರ್ಮಗಳನ್ನು ಯಥಾವತ್ತಾಗಿ ಹೇಳಿದ್ದೇನೆ. ಯಾವ ಮನುಷ್ಯನು ರಜೋಗುಣಕ್ಕೆ ಸಂಬಂಧಿಸಿದ ಈ ಗುಣಗಳನ್ನು ತಿಳಿದುಕೊಳ್ಳುತ್ತಾನೋ ಅವನು ರಜೋಗುಣದಿಂದ ಬಿಡುಗಡೆಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ರಜೋಗುಣಲಕ್ಷಣಕಥನಂ ನಾಮ
ಅಷ್ಟತ್ರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ತ್ರಯೋವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು
ಸತ್ವಗುಣದ ಕಾರ್ಯವನ್ನು ನಿರೂಪಿಸಿದುದು.

ಬ್ರಹ್ಮಾ

ಅತಃ ಪರಂ ಪ್ರವಕ್ಷ್ಯಾಮಿ ತೃತೀಯಂ ಗುಣಮುತ್ತಮಮ್ ।
ಸರ್ವಭೂತಹಿತಂ ಲೋಕೇ ಸತಾಂ ಧರ್ಮಮನಿಂದಿತಮ್ ॥೧॥

ಬ್ರಹ್ಮಾ– ಮಹರ್ಷಿಗಳೇ, ಇನ್ನು ಮುಂದೆ ಸಕಲ ಪ್ರಾಣಿಗಳಿಗೆ ಹಿತಕರವಾದ, ಅನಿಂದ್ಯವಾದ, ಸಜ್ಜನರು ಆಶ್ರಯಿಸಲು ಅರ್ಹವಾದ, ಮೂರನೆಯದ್ದಾದ ಸತ್ವಗುಣದ ಮಹತ್ವವನ್ನು ವಿವರಿಸುತ್ತೇನೆ.

ಆನಂದಃ ಪ್ರೀತಿರುದ್ರೇಕಃ ಪ್ರಾಕಾಶ್ಯಂ ಸುಖಮೇವ ಚ ।
ಅಕಾರ್ಪಣ್ಯಮಸಂರಂಭಃ ಸಂತೋಷಃ ಶ್ರದ್ದಧಾನತಾ ॥೨॥

ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ ।
ಅಕ್ರೋಧಶ್ಚಾನಸೂಯಾ ಚ ಶೌಚಂ ದಾಕ್ಷ್ಯಂ ಪರಾಕ್ರಮಃ ॥೩॥

ಆನಂದ, ಪ್ರೀತಿ, ಉನ್ನತಿ, ಪ್ರಕಾಶ, ಸುಖ, ಕೃಪಣತೆ (ಜಿಪುಣತೆ) ಇಲ್ಲದಿರುವಿಕೆ, ನಿರ್ಭಯತೆ, ನಿರಂತರ ಕಾರ್ಯಚಟುವಟಿಕೆ, ಸಂತೋಷ, ಶ್ರದ್ಧೆ, ಕ್ಷಮೆ, ಧೈರ್ಯ, ಅಹಿಂಸೆ, ಸಮತ್ವ, ಸತ್ಯ , ಸರಳತೆ, ಅಕ್ರೋಧ, ಅಮಾತ್ಸರ್ಯ, ಪಾವಿತ್ರ್ಯ , ಚತುರತೆ, ಪರಾಕ್ರಮ - ಇವುಗಳು ಸತ್ವಗುಣದ ಕಾರ್ಯವಾಗಿವೆ.

ಮುಧಾ ಜ್ಞಾನಂ ಮುಧಾ ವೃತ್ತಂ ಮುಧಾ ಸೇವಾ ಮುಧಾ ಶ್ರಮಃ ।
ಏವಂ ಯೋ ಯುಕ್ತಧರ್ಮಃ ಸ್ಯಾತ್ ಸೋऽಮುತ್ರಾನಂತ್ಯಮಶ್ನುತೇ ॥

ಪ್ರಯೋಜನವಿಲ್ಲದೆ ಜ್ಞಾನವನ್ನು ಆಕಾಂಕ್ಷಿಸುವುದು, ಪ್ರಯೋಜನದ ಅಪೇಕ್ಷೆ ಇಲ್ಲದೆ ಭಗವತ್ಪ್ರೀತಿಗಾಗಿ ಕರ್ಮಗಳನ್ನು ಮಾಡುವುದು, ಭಗವಂತನನ್ನು ಸೇವಿಸುವುದು, ಭಗವಂತನಿಗಾಗಿಯೇ ಶ್ರಮ ಹೊಂದುವುದು - ಈ ರೀತಿಯಾದ ಸತ್ವಗುಣದ ಧರ್ಮದಲ್ಲಿ ಯಾವನು ನಿರತನಾಗಿರುತ್ತಾನೋ ಅಂತಹವನು ಪರಲೋಕದಲ್ಲಿ ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ಅಥವಾ ಈ ಶ್ಲೋಕವನ್ನು ಇನ್ನೊಂದು ಕ್ರಮದಲ್ಲಿಯೂ ವ್ಯಾಖ್ಯಾನಿಸಬಹುದು. ವ್ಯರ್ಥವಾದ ಜ್ಞಾನವನ್ನು ಪಡೆಯದೆ ಲೌಕಿಕ ವ್ಯವಹಾರವನ್ನು ವ್ಯರ್ಥ ಎಂದು ಪರಿಗಣಿಸಿ, ವ್ಯರ್ಥವಾದ ಅನೀತಿವಂತರ ಸೇವೆಯನ್ನು ಮಾಡದೆ ಭೌತಿಕ ಸುಖಗಳು ವ್ಯರ್ಥವೆಂದು ಭಾವಿಸಿ ಯಾವನು ಯೋಗ್ಯಧರ್ಮಗಳನ್ನು ಅನುಷ್ಠಾನ ಮಾಡುತ್ತಾನೋ ಅವನು ಪರಲೋಕದಲ್ಲಿ ಸುಖ ಅನುಭವಿಸುತ್ತಾನೆ.

ನಿರ್ಮಮೋ ನಿರಹಂಕಾರೋ ನಿರಾಶೀಃ ಸರ್ವತಃ ಸಮಃ ।
ಅಕಾಮಹತ ಇತ್ಯೇಷ ಸತಾಂ ಧರ್ಮಃ ಸನಾತನಃ ॥೫॥

ಮಮತೆಯನ್ನು ಬಿಟ್ಟು, ಅಹಂಕಾರ ವರ್ಜಿಸಿ, ಆಶಾರಹಿತನಾಗಿ, ಎಲ್ಲರಲ್ಲಿಯೂ ಭಗವಂತನನ್ನು ಕಾಣುತ್ತಾ, ನಿಷ್ಕಾಮಭಾವದಿಂದ ಇರುವುದೇ ಸತ್ಪುರುಷರ ಸನಾತನ ಧರ್ಮವಾಗಿದೆ.

ವಿಸ್ರಂಭೋ ಹ್ರೀಸ್ತಿತಿಕ್ಷಾ ಚ ತ್ಯಾಗಃ ಶೌಚಮತಂದ್ರಿತಾ ।
ಆನೃಶಂಸ್ಯಮಸಮ್ಮೋಹೋ ದಯಾ ಭೂತೇಷ್ವಪೈಶುನಮ್ ॥೬॥

ಹರ್ಷಸ್ತುಷ್ಟಿರ್ವಿಸ್ಮಯಶ್ಚ ವಿನಯಃ ಸಾಧುವೃತ್ತಿತಾ ।
ಶಾಂತಿಃ ಕರ್ಮವಿಶುದ್ಧಿಶ್ಚ ಶುಭಾ ಬುದ್ಧಿರ್ವಿಮೋಚನಮ್ ॥೭॥

ಉಪೇಕ್ಷಾ ಬ್ರಹ್ಮಚರ್ಯಂ ಚ ಪರಿತ್ಯಾಗಶ್ಚ ಸರ್ವಶಃ ।
ನಿರ್ಮಮತ್ವಮನಾಶೀಷ್ಟ್ವಮ್ ಅಪರಿಕ್ಷತಧರ್ಮತಾ ॥೮॥

ವಿಶ್ವಾಸ, ಲಜ್ಜೆ, ಸಹನೆ, ತ್ಯಾಗ, ಪಾವಿತ್ರ್ಯ, ಉತ್ಸಾಹ, ಕಾರುಣ್ಯ, ಯಥಾರ್ಥ ಜ್ಞಾನ, ಪ್ರಾಣಿದಯಾ, ಸತ್ಯವಚನ, ಹರ್ಷ, ಪುಷ್ಟಿ, ನಿಗರ್ವ, ವಿನಯ, ಪ್ರಾಮಾಣಿಕ ವ್ಯವಹಾರ, ಶಾಂತಿ-ಕರ್ಮಗಳಲ್ಲಿ ಶುದ್ಧ ಮನಸ್ಸು, ಉತ್ತಮ ಬುದ್ಧಿ, ಸಂಸಾರ ಬಿಡುಗಡೆಯ ಯೋಚನೆ, ಲೌಕಿಕ ವ್ಯವಹಾರದಲ್ಲಿ ಉಪೇಕ್ಷೆ, ಬ್ರಹ್ಮಚರ್ಯ, ಸರ್ವ ಸಂಗ ಪರಿತ್ಯಾಗ, ನಿರ್ಮಮತೆ, ನಿಷ್ಕಾಮನೆ, ನಿರಂತರ ಧರ್ಮಕಾರ್ಯಗಳಲ್ಲಿ ಆಸಕ್ತಿ - ಇವುಗಳು ಸತ್ವಗುಣದ ಕಾರ್ಯಗಳು.

ಮುಧಾ ದಾನಂ ಮುಧಾ ಯಜ್ಞೋ ಮುಧಾऽಧೀತಂ ಮುಧಾ ವ್ರತಮ್ ।
ಮುಧಾ ಪ್ರತಿಗ್ರಹಶ್ಚೈವ ಮುಧಾ ಧರ್ಮೋ ಮುಧಾ ತಪಃ ॥೯॥

ಏವಂ ವೃತ್ತಾಸ್ತು ಯೇ ಕೇಚಿಲ್ಲೋಕೇऽಸ್ಮಿನ್ ಸತ್ವಸಂಶ್ರಯಾಃ ।
ಬ್ರಾಹ್ಮಣಾ ಬ್ರಹ್ಮಯೋನಿಸ್ಥಾಸ್ತೇ ಧೀರಾಃ ಸಾಧುದರ್ಶಿನಃ ॥೧೦॥

ಸಕಾಮದ ದಾನ, ಸಕಾಮದ ಯಜ್ಞ, ಸಕಾಮದ ಅಧ್ಯಯನ, ಸಕಾಮ ವ್ರತ, ಸಕಾಮ ಪರಿಗ್ರಹ, ಸಕಾಮ ಧರ್ಮ, ತಪಸ್ಸುಗಳು ವ್ಯರ್ಥವಾದುವೆಂದು ತಿಳಿದು

ಯಾರು ನಿಷ್ಕಾಮದಿಂದ ಧರ್ಮಗಳನ್ನು ಆಚರಿಸುತ್ತಾರೋ, ಸತ್ವಗುಣವನ್ನೇ ಆಶ್ರಯಿಸಿಕೊಂಡು ಪರಬ್ರಹ್ಮನಲ್ಲಿ ಆಸಕ್ತರಾಗಿ ಕರ್ಮಗಳನ್ನು ಮಾಡುತ್ತಾರೋ ಅವರು ಸಾಧುದರ್ಶಿಗಳು, ಧೀರರು ಎಂದು ಕರೆಸಿಕೊಳ್ಳುತ್ತಾರೆ.

ಜಿತ್ವಾ ಸರ್ವಾಣಿ ಪಾಪಾನಿ ನಿಃಶೋಕಾ ಹ್ಯಜರಾಮರಾಃ ।
ದಿವ್ಯಂ ಪ್ರಾಪ್ಯ ತು ತೇ ಧೀರಾಃ ಕುರ್ವತೇ ವೈ ತತಸ್ತನೂಃ ॥೧೧॥

ಎಲ್ಲ ಪಾಪಕರ್ಮಗಳನ್ನು ಶೋಕದಿಂದ ದಾಟಿ, ಅಜರಾಮರರಾಗಿ, ಅನೇಕ ಭೋಗ ಯೋಗ್ಯವಾದ ಶರೀರಗಳನ್ನು ಧರಿಸಿ, ದಿವ್ಯಲೋಕಕ್ಕೆ ಹೋಗಿ ವಿಹರಿಸುತ್ತಾರೆ.

ಈಶಿತ್ವಂ ಚ ವಶಿತ್ವಂ ಚ ಲಘುತ್ವಂ ಚಾಣುತಾ ತಥಾ ।
ವಿಕುರ್ವಂತೋ ಮಹಾತ್ಮಾನೋ ದೇವಾಸ್ತ್ರಿದಿವಗಾ ಇವ ॥೧೨॥

ಸತ್ವಗುಣಸಂಪನ್ನರಾದ ಮಹಾತ್ಮರು ಸ್ವರ್ಗಸ್ಥ ದೇವತೆಗಳಂತೆ ಈಶಿತ್ವ, ವಶಿತ್ವ, ಲಘುತ್ವ, ಅಣುತ್ವ ಇವುಗಳ ಸಿದ್ಧಿಯನ್ನು ಪಡೆದು ದೇವತೆಗಳಂತೆ ವಿಹರಿಸುತ್ತಾರೆ.

ಊರ್ಧ್ವಸ್ರೋತಸ ಇತ್ಯೇತೇ ದೇವಾ ವೈಕಾರಿಕಾಃ ಸ್ಮೃತಾಃ ।
ವಿಕುರ್ವಂತಃ ಪ್ರಕೃತ್ಯಾ ವೈ ದಿವಂ ಪ್ರಾಪ್ತಾಸ್ತತಸ್ತತಃ ॥೧೩॥

ಯದ್ಯದಿಚ್ಛಂತಿ ತತ್ಸರ್ವಂ ಭಜಂತೇ ವಿಭಜಂತಿ ಚ ॥೧೪॥

ಊರ್ಧ್ವಸ್ರೋತ ಎಂದು ಕರೆಸಿಕೊಳ್ಳಲ್ಪಡುವ ಇವರು ವೈಕಾರಿಕ ದೇವತೆಗಳೆಂದೂ ಕರೆಸಿಕೊಳ್ಳುತ್ತಾರೆ. ಯೋಗಬಲದಿಂದ ಸ್ವರ್ಗಕ್ಕೆ ತೆರಳಿ, ಅಲ್ಲಿಯ ಭೋಗಜನಕವಾದ ಸಂಸ್ಕಾರಗಳಿಂದ ಅವರ ಮನಸ್ಸು ವಿಕಾರಗೊಳ್ಳುತ್ತದೆ. ಅಲ್ಲಿ ಏನೇನನ್ನು ಬಯಸುತ್ತಾರೋ ಅವೆಲ್ಲವನ್ನೂ ಹೊಂದುತ್ತಾರೆ, ಮತ್ತೊಬ್ಬರಿಗೂ ದಾನ ಮಾಡುತ್ತಾರೆ.

ಇತ್ಯೇತತ್ ಸಾತ್ವಿಕಂ ವೃತ್ತಂ ಕಥಿತಂ ವೋ ದ್ವಿಜರ್ಷಭಾಃ ।
ಏತದ್ ವಿಜ್ಞಾಯ ವಿಧಿವತ್ ಲಭತೇ ಯದ್ಯದಿಚ್ಛತಿ ॥೧೫॥

ಬ್ರಾಹ್ಮಣರೇ, ಸತ್ವಗುಣದ ಕಾರ್ಯವನ್ನು ನಿಮಗೆ ಹೇಳಿದ್ದೇನೆ. ಯಾರು ಈ ಗುಣದ ಕಾರ್ಯವನ್ನು ಚೆನ್ನಾಗಿ ತಿಳಿಯುತ್ತಾರೋ ಅವರು ಅಪೇಕ್ಷಿಸಿದ ವಸ್ತುಗಳೆಲ್ಲವನ್ನೂ ಪಡೆದುಕೊಳ್ಳುತ್ತಾರೆ.

ಪ್ರಕೀರ್ತಿತಾಃ ಸತ್ತ್ವಗುಣಾ ವಿಶೇಷತೋ
ಯಥಾವದುಕ್ತಂ ಗುಣವೃತ್ತಮೇವ ಚ ।
ನರಸ್ತು ಯೋ ವೇದ ಗುಣಾನಿಮಾನ್ ಸದಾ
ಗುಣಾನ್ ಸ ಭುಂಕ್ತೇ ನ ಗುಣೈಸ್ತು ಭುಜ್ಯತೇ ॥೧೬॥

ಸತ್ವಗುಣದ ವಿಷಯವಾಗಿ ಅನೇಕ ವಿಷಯವನ್ನು ಹೇಳಿದ್ದೇನೆ. ಅದರ ಕಾರ್ಯವನ್ನು ಹೇಳಿದ್ದೇನೆ. ಯಾವ ಮನುಷ್ಯನು ಈ ಗುಣವನ್ನು ತಿಳಿದುಕೊಳ್ಳುತ್ತಾನೋ ಅವನು ಸತ್ವಗುಣ ಯೋಗ್ಯವಾದ ಫಲವನ್ನೇ ಹೊಂದುತ್ತಾನೆ. ತ್ರಿಗುಣಗಳ ಬಂಧನವು ಇವನಿಗಿರುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಸತ್ವಗುಣವಿಚಾರೋ ನಾಮ
ಏಕೋನಚತ್ವಾರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಮೂವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು
ಸತ್ವಾದಿಗುಣತ್ರಯವನ್ನು ನಿರೂಪಿಸಿದುದು.

ಬ್ರಹ್ಮಾ

ನ ವೈ ಶಕ್ಯಾ ಮಯಾ ವಕ್ತುಂ ಪೃಥಕ್ತ್ವೇನೈವ ಸರ್ವಶಃ ।
ಅವಿಚ್ಛಿನ್ನಾನಿ ದೃಶ್ಯಂತೇ ರಜಃ ಸತ್ವಂ ತಮಸ್ತಥಾ ॥೧॥

ಬ್ರಹ್ಮಾ– ಮಹರ್ಷಿಗಳೇ, ಮೂರುಗುಣಗಳ ಬಗ್ಗೆ ಪ್ರತ್ಯೇಕ, ಪ್ರತ್ಯೇಕವಾಗಿ ನಿರೂಪಿಸುವುದು ಅಶಕ್ಯವಾದುದು. ಕಾರಣ ಈ ಮೂರುಗುಣಗಳು ಯಾವಾಗಲೂ ಮನುಷ್ಯರಲ್ಲಿ ಅವಿಚ್ಛಿನ್ನವಾಗಿ ವ್ಯಾಪಾರ ಮಾಡುತ್ತಲೇ ಇರುತ್ತವೆ.

ಅನ್ಯೋನ್ಯೇನಾನುರಜ್ಯಂತೇ ತ್ವನ್ಯೋನ್ಯೇನಾನುಜೀವಿನಃ ।
ಅನ್ಯೋನ್ಯಾಪಾಶ್ರಯಾಃ ಸರ್ವೇ ತಥಾऽನ್ಯೋನ್ಯಾನುವರ್ತಿನಃ ॥೨॥

ಈ ಗುಣಗಳು ಪರಸ್ಪರ ಒಂದಕ್ಕೊಂದು ಸೇರಿಕೊಂಡೇ ಸಂತೋಷಪಡುತ್ತವೆ. ಒಂದಕ್ಕೊಂದು ಸೇರಿಕೊಂಡು ಜೀವಿಸುತ್ತವೆ. ಎಲ್ಲ ಗುಣಗಳು ಪರಸ್ಪರವಾಗಿ ಒಂದನ್ನು ಇನ್ನೊಂದು ಆಶ್ರಯಿಸಿಯೇ ಇರುತ್ತವೆ. ಒಂದನ್ನು ಇನ್ನೊಂದು ಅನುಸರಿಸಿಯೇ ಹೋಗುತ್ತದೆ.

ಯಾವತ್ ಸತ್ವಂ ರಜಸ್ತಾವದ್ ವರ್ತತೇ ನಾತ್ರ ಸಂಶಯಃ ।
ಯಾವತ್ ತಮಶ್ಚ ಸತ್ವಂ ಚ ರಜಸ್ತಾವದಿಹೋಚ್ಯತೇ ॥೩॥

ಎಲ್ಲಿಯ ತನಕ ಜಗತ್ತಿನಲ್ಲಿ ಸತ್ವಗುಣವಿರುತ್ತದೋ ಅಲ್ಲಿಯ ತನಕವೂ ರಜೋಗುಣವು ಇದ್ದೇ ಇರುತ್ತದೆ. ಇದರಲ್ಲಿ ಯಾವ ಸಂಶಯವೂ ಬೇಡ. ಇದರಂತೆ ಎಷ್ಟರವರೆಗೆ ತಮಸ್ಸು, ಸತ್ವಗುಣಗಳು ಇರುತ್ತವೋ ಅಲ್ಲಿಯ ತನಕ ರಜೋಗುಣವು ಇರುತ್ತದೆ.

ಸಂಹತ್ಯ ಕುರ್ವತೇ ಯಾತ್ರಾಂ ಸಹಿತಾಃ ಸಂಘಚಾರಿಣಃ ।
ಸಂಘಾತವೃತ್ತಯೋ ಹ್ಯೇತೇ ವರ್ತಂತೇ ಹೇತ್ವಹೇತುಭಿಃ ॥೪॥

ಈ ಮೂರು ಗುಣಗಳು ಒಟ್ಟಾಗಿ ಸಂಘಟಿತವಾಗಿ ಯಾತ್ರೆಯನ್ನು ಮಾಡುತ್ತವೆ. ಒಟ್ಟಾಗಿ ಸೇರಿಕೊಂಡೇ ಸಂಚರಿಸುತ್ತವೆ. ಪರಸ್ಪರ ಸೇರಿಕೊಂಡೇ ಶರೀರದಲ್ಲಿ ಇರುತ್ತವೆ.

ಉದ್ರೇಕವ್ಯತಿರಿಕ್ತಾನಾಂ ತೇಷಾಮನ್ಯೋನ್ಯವರ್ತಿನಾಮ್ ।
ವರ್ತತೇ ಯದ್ಯಥಾऽನ್ಯೂನಂ ವ್ಯತಿರಿಕ್ತಂ ಚ ಸರ್ವಶಃ ॥೫॥

ಈ ಗುಣಗಳು ಪರಸ್ಪರವಾಗಿ ಹೊಂದಾಣಿಕೆಯಿಂದ ಇದ್ದರೂ ಅಧಿಕವಾಗಿ ಕೆಲವೊಮ್ಮೆ ಒಂದೊಂದು ಗುಣವು ಉನ್ನತಿಯನ್ನು ಹೊಂದುತ್ತದೆ. ಒಂದು ಗುಣವು ಮತ್ತೊಂದು ಗುಣವನ್ನು ಅನುಸರಿಸಿಕೊಂಡಿದ್ದರೂ ಒಂದು ಗುಣಕ್ಕಿಂತ ಮತ್ತೊಂದು ಗುಣವು ಹೆಚ್ಚಾಗಿರುವುದು ಕಂಡುಬರುತ್ತದೆ.

ವ್ಯತಿರಿಕ್ತಂ ತಮೋ ಯತ್ರ ತಿರ್ಯಗ್ಭಾವಗತಂ ಭವೇತ್ ।
ಅಲ್ಪಂ ತತ್ರ ರಜೋ ಜ್ಞೇಯಂ ಸತ್ವಮಲ್ಪತರಂ ತಥಾ ॥೬॥

ಪಶು-ಪಕ್ಷ್ಯಾದಿಗಳಲ್ಲಿ ತಮೋಗುಣವು ಅಧಿಕವಾಗಿರುತ್ತದೆ. ಅವುಗಳಲ್ಲಿ ರಜಸ್ಸು ಮತ್ತು ಸತ್ವಗುಣಗಳು ಅಲ್ಪವಾಗಿರುತ್ತವೆ.

ಉದ್ರಿಕ್ತಂ ತು ರಜೋ ಯತ್ರ ಮಧ್ಯಸ್ಥೋತೋಗತಂ ಭವೇತ್ ।
ಅಲ್ಪಂ ತತ್ರ ತಮೋ ಜ್ಞೇಯಂ ಸತ್ವಂ ಚಾಲ್ಪತರಂ ತತಃ ॥೭॥

ಮನುಷ್ಯರಲ್ಲಿ ರಜೋಗುಣವು ಅಧಿಕವಾಗಿರುತ್ತದೆ, ತಮೋಗುಣವು ಅಲ್ಪವಾಗಿರುತ್ತದೆ, ಸತ್ವಗುಣವು ಮತ್ತೂ ಅಲ್ಪವಾಗಿಯೇ ಇರುತ್ತದೆ.

ಉದ್ರಿಕ್ತಂ ತು ಯದಾ ಸತ್ವಮೂರ್ಧ್ವಸ್ರೋತೋಗತಂ ಭವೇತ್ ।
ಅಲ್ಪಂ ತತ್ರ ತಮೋ ಜ್ಞೇಯಂ ರಜಶ್ಚಾಲ್ಪತರಂ ತಥಾ ॥೮॥

ಭಗವಂತನನ್ನೇ ಚಿಂತಿಸುವ ಯೋಗಿಯಲ್ಲಿ ಸತ್ವಗುಣವು ಅಧಿಕವಾಗಿ, ರಜೋಗುಣವು ಅಲ್ಪವಾಗಿ, ತಮೋಗುಣವು ಅತ್ಯಲ್ಪವಾಗಿ ಇರುತ್ತದೆ.

ಸತ್ವಂ ವೈಕಾರಿಕೀ ಯೋನಿರಿಂದ್ರಿಯಾಣಾಂ ಪ್ರಕಾಶಿಕಾ ।
ನ ಹಿ ಸತ್ವಾತ್ ಪರೋ ಭಾವಃ ಕಶ್ಚಿದನ್ಯೋ ವಿಧೀಯತೇ ॥೯॥

ಸತ್ವಗುಣವು ಇಂದ್ರಿಯಗಳಿಗೆ ಕಾರಣವಾಗಿದೆ. ಇಂದ್ರಿಯಗಳನ್ನು ಪ್ರಕಾಶಗೊಳಿಸುವುದು, ಅವುಗಳ ಸ್ವಭಾವವನ್ನು ಬದಲಿಸುವುದು ಸತ್ವಗುಣದ ವ್ಯಾಪಾರ. ಇದಕ್ಕಿಂತ ಅಧಿಕವಾದ ಧರ್ಮವು ಬೇರೆ ಯಾವುದೂ ಇಲ್ಲ.

ಊರ್ಧ್ವಂ ಗಚ್ಛಂತಿ ಸತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣಸಂಯುಕ್ತಾ ಯಾಂತ್ಯಧಸ್ತಾಮಸಾ ಜನಾಃ ॥೧೦॥

ಸತ್ವಗುಣವು ಅಧಿಕವಾಗಿರುವ ಜೀವರು ಸ್ವರ್ಗಾದಿ ಊರ್ಧ್ವಲೋಕಗಳಿಗೆ ಹೋಗುತ್ತಾರೆ. ರಜೋಗುಣವು ಅಧಿಕವಾಗಿರುವ ಜೀವರು ಮನುಷ್ಯಲೋಕದಲ್ಲೇ ಸಂಚರಿಸುತ್ತಾರೆ. ತಮೋಗುಣವು ಅಧಿಕವಾಗಿರುವ ಜೀವರು ನಿದ್ರಾಲಸ್ಯಗಳಿಗೆ ತುತ್ತಾಗಿ ಕ್ರಮವಾಗಿ ಹೀನಯೋನಿಗಳಲ್ಲಿ ಹುಟ್ಟಿ ಅಧೋಗತಿಯನ್ನು ಹೊಂದುತ್ತಾರೆ.

ತಮಃ ಶೂದ್ರೇ ರಜಃ ಕ್ಷತ್ರೇ ಬ್ರಾಹ್ಮಣೇ ಸತ್ವಮುತ್ತಮಮ್ ।
ಇತ್ಯೇವಂ ತ್ರಿಷು ವರ್ಣೇಷು ವಿವರ್ತಂತೇ ಗುಣಾಸ್ತ್ರಯಃ ॥೧೧॥

ಶೂದ್ರನಲ್ಲಿ ತಮೋಗುಣವು, ಕ್ಷತ್ರಿಯನಲ್ಲಿ ರಜೋಗುಣವು, ಬ್ರಾಹ್ಮಣನಲ್ಲಿ ಸತ್ವಗುಣವು ಪ್ರಧಾನವಾಗಿರುತ್ತದೆ. ಹೀಗೆ ಮೂರುವರ್ಣದವರಲ್ಲಿ ಮೂರು ಗುಣಗಳು ವಿಶೇಷವಾಗಿ ಕಾಣುತ್ತವೆ.

ದೂರಾದಪಿ ಚ ದೃಶ್ಯಂತೇ ಸಹಿತಾಃ ಸಂಘಚಾರಿಣಃ ।
ತಮಃ ಸತ್ವಂ ರಜಶ್ಚೈವ ಪೃಥಕ್ತ್ವಂ ನಾನುಶುಶ್ರುಮ ॥೧೨॥

ಈ ಮೂರು ಗುಣಗಳು ಪರಸ್ಪರ ಒಟ್ಟಾಗಿ ಸಂಚರಿಸುವುದನ್ನು ನಾವು ದೂರದಿಂದಲೂ ಕಾಣಬಹುದು. ಈ ಗುಣಗಳು ಪ್ರತ್ಯೇಕವಾಗಿ ಇರುವುದನ್ನು ನಾವು ಕೇಳಿಯೇ ಇಲ್ಲ.

ದೃಷ್ಟ್ವಾ ಚಾದಿತ್ಯಮುದ್ಯಂತಂ ಕುಚೋರಾಣಾಂ ಭಯಂ ಭವೇತ್ ।
ಅಧ್ವಗಾಃ ಪರಿತಪ್ಯೇರನ್ ತೃಷ್ಣಾರ್ತಾ ದುಃಖಭಾಗಿನಃ ॥೧೩॥

ಕೆಟ್ಟಕರ್ಮಗಳಲ್ಲೇ ಆಸಕ್ತರಾದ ಕಳ್ಳರಿಗೆ ಸೂರ್ಯನ ಉದಯವೇ ಭಯಜನಕವಾಗುತ್ತದೆ. ಪ್ರಯಾಣ ಮಾಡುವ ವ್ಯಕ್ತಿಗಳು ಸೂರ್ಯನ ಪ್ರಖರತೆಯಿಂದ ಪೀಡಿತರಾಗಿ ಪರಿತಪಿಸುತ್ತಾರೆ.

ಆದಿತ್ಯಃ ಸತ್ವಮುದ್ದಿಷ್ಟಃ ಕುಚೋರಾಸ್ತು ಯಥಾ ತಮಃ ।
ಪರಿತಾಪೋಽಧ್ವಗಾನಾಂ ಚ ರಾಜಸೋ ಗುಣ ಉಚ್ಯತೇ ॥೧೪॥

ಇಲ್ಲಿ ಸೂರ್ಯೋದಯವೆಂಬುದೇ ಸತ್ವಗುಣದ ಆವಿರ್ಭಾವ. ದುರಾಚಾರಿಗಳ ಭಯವೇ ತಮೋಗುಣದ ಕಾರ್ಯ. ಪಯಣಿಗರ ಪರಿತಾಪವೇ ರಜೋಗುಣದ ವ್ಯಾಪಾರ.

ಪ್ರಕಾಶಃ ಸತ್ವಮಾದಿತ್ಯೇ ಸಂತಾಪೋ ರಾಜಸೋ ಗುಣಃ ।
ಉಪಪ್ಲವಸ್ತು ವಿಜ್ಞೇಯಃ ತಾಮಸಸ್ತಸ್ಯ ಪರ್ವಸು ॥೧೫॥

ಸೂರ್ಯನಲ್ಲಿರುವ ಪ್ರಕಾಶಗುಣವು ಸತ್ವ ಎನಿಸಿದೆ. ಅವನಿಂದ ಉಂಟಾಗುವ ಸಂತಾಪ ರಜಸ್ಸು ಎನಿಸಿದೆ. ಸೂರ್ಯೋಪರಾಗದಲ್ಲಿ ಆಗುವ ಗ್ರಹಣವು ತಮೋಗುಣವೆನಿಸಿದೆ.

ಏವಂ ಜ್ಯೋತಿಷ್ಷು ಸರ್ವೇಷು ಪ್ರವರ್ತಂತೇ ಗುಣಾಸ್ತ್ರಯಃ ।
ಪರ್ಯಾಯೇಣ ಚ ವರ್ತಂತೇ ತತ್ರ ತತ್ರ ತಥಾ ತಥಾ ॥೧೬॥

ಹೀಗೆ ಸೂರ್ಯನ ಜ್ಯೋತಿಗಳಲ್ಲಿ ಮೂರು ಗುಣಗಳು ಕ್ರಮವಾಗಿ ಒಟ್ಟಿಗೆ ಪ್ರಾಕಟ್ಯವನ್ನು ಹೊಂದುತ್ತವೆ ಮತ್ತು ಲೀನವಾಗುತ್ತವೆ (ಇದನ್ನೇ ದೂರದಿಂದಲೂ ಮೂರುಗುಣಗಳ ಸಂಚಾರವನ್ನು ನೋಡಬಹುದು ಎಂದು ಹಿಂದೆ ಹೇಳಿದ್ದಾರೆ).

ಸ್ಥಾವರೇಷು ಚ ಭೂತೇಷು ತಿರ್ಯಗ್ಯೋನಿಗತಂ ತಮಃ ।
ರಾಜಸಾಸ್ತು ವಿವರ್ಧಂತೇ ಸ್ನೇಹಭಾವಾತ್ತು ಸಾತ್ವಿಕಾಃ ॥೧೭॥

ಸ್ಥಾವರ ಪ್ರಾಣಿಗಳಲ್ಲಿ ತಮೋಗುಣವು ಅಧಿಕ. ಬದಲಾವಣೆ ಇಲ್ಲದ ಗುಣವೇ ರಾಜಸ ಗುಣ. ಸ್ನೇಹಭಾವವು ಸಾತ್ವಿಕ ಗುಣ.

ಅಹಸ್ತ್ರಿಧಾ ತು ವಿಜ್ಞೇಯಂ ತ್ರಿಧಾ ರಾತ್ರಿರ್ವಿಧೀಯತೇ ।
ಮಾಸಾರ್ಧಮಾಸವರ್ಷಾಣಿ ಋತವಃ ಸಂಧಯಸ್ತಥಾ ॥೧೮॥

ಗುಣಗಳ ಪ್ರಭೇದದಿಂದ ಹಗಲು ಮೂರು ಪ್ರಕಾರವಾಗಿದೆ, ರಾತ್ರಿಯೂ ಮೂರು ಪ್ರಕಾರವಾಗಿದೆ. ಮಾಸ, ವರ್ಷ, ಋತು, ಇವುಗಳ ಸಂಧಿಭಾಗಗಳೂ ಮೂರು ಪ್ರಕಾರವಾಗಿರುತ್ತವೆ.

ವ್ಯಾಖ್ಯಾನ ವಿಶೇಷ– ಪ್ರಾತಃಕಾಲವು ಸಾತ್ವಿಕವೆನಿಸಿದೆ. ಮಧ್ಯಾಹ್ನವು ರಾಜಸವೆನಿಸಿದೆ. ಸಾಯಂಕಾಲವು ಆಲಸ್ಯದಿಂದ ತುಂಬಿರುವುದರಿಂದ ತಾಮಸವೆನಿಸಿದೆ. ಇದರಂತೆ ರಾತ್ರಿಯಲ್ಲಿಯೂ ಮೊದಲನೆಯ ರಾತ್ರಿಯ ಕಾಲವು ರಾಜಸವೆನಿಸಿದೆ, ಮಧ್ಯರಾತ್ರಿಯ ಕಾಲವು ತಾಮಸವೆನಿಸಿದೆ. ಅಪರರಾತ್ರಿಯ ಕಾಲವು ಪ್ರಸನ್ನವಾಗಿರುವ ಕಾರಣದಿಂದ ಸಾತ್ವಿಕವೆನಿಸಿದೆ. ಇದೇ ರೀತಿಯಾಗಿ ಮಾಸ, ಅರ್ಧಮಾಸಾದಿಗಳಲ್ಲಿಯೂ ಶುಕ್ಲಪಕ್ಷದ ಕೊನೆಯ ಭಾಗವು ಸಾತ್ವಿಕವೆನಿಸಿದೆ. ಕೃಷ್ಣ ಪಕ್ಷದ ಕೊನೆಯ ಭಾಗವು ತಾಮಸವೆನಿಸಿದೆ. ಅಷ್ಟಮಿಯ ತನಕ ಎರಡೂ ಪಕ್ಷಗಳಲ್ಲಿ ಬೆಳಕು-ಕತ್ತಲುಗಳು ಇರುವುದರಿಂದ ರಾಜಸವೆನಿಸಿದೆ. ಎರಡು ಪಕ್ಷದಲ್ಲಿಯೂ ಕೂಡ ಹುಣ್ಣಿಮೆ, ಅಮಾವಾಸ್ಯೆ ಇವುಗಳು ಸಾತ್ವಿಕ-ತಾಮಸವೆನಿಸಿವೆ. ಪಕ್ಷದ ಆರಂಭದಲ್ಲಿ ಕೃಷ್ಣಪಕ್ಷದ ಆರಂಭವು ಸಾತ್ವಿಕವೆನಿಸಿದೆ. ಕೊನೆಯದ್ದು ರಾಜಸವೆನಿಸಿದೆ. ಶುಕ್ಲಪಕ್ಷದಲ್ಲಿ ಆರಂಭದ ಭಾಗವು ತಾಮಸವೆನಿಸಿದೆ, ಮಧ್ಯಭಾಗವು ರಾಜಸವೆನಿಸಿದೆ. ವರ್ಷದಲ್ಲಿಯೂ ಉತ್ತರಾಯಣ ಸಾತ್ವಿಕವೆನಿಸಿದೆ, ದಕ್ಷಿಣಾಯನ ತಾಮಸವೆನಿಸಿದೆ. ಉತ್ತರಾಯಣ-ದಕ್ಷಿಣಾಯನಗಳ ಕೊನೆಯ ಭಾಗವು ರಾಜಸವೆನಿಸಿದೆ.

ತ್ರಿಧಾ ದಾನಾನಿ ದೀಯಂತೇ ತ್ರಿಧಾ ಯಜ್ಞಃ ಪ್ರವರ್ತತೇ ।
ತ್ರಿಧಾ ಲೋಕಾಸ್ತ್ರಿಧಾ ದೇವಾಸ್ತ್ರಿಧಾ ವಿದ್ಯಾಸ್ತ್ರಿಧಾ ಗತಿಃ ॥೧೯॥

ಈ ಗುಣಭೇದಕ್ಕೆ ಅನುಗುಣವಾಗಿ ಮೂರು ವಿಧದ ದಾನಗಳು ಮಾಡಲ್ಪಡುತ್ತವೆ. ಯಜ್ಞಗಳೂ ಮೂರು ಪ್ರಕಾರ ಇವೆ. ಮೂರುಗುಣಗಳಿಗೆ ಅನುಗುಣವಾಗಿ ಮೂರು ಲೋಕಗಳು ಇವೆ. ಮೂರು ಪ್ರಕಾರವಾದ ದೇವತೆಗಳಿದ್ದಾರೆ. ಮೂರು ಪ್ರಕಾರವಾದ ವಿದ್ಯೆಗಳಿವೆ. ಮೂರು ಪ್ರಕಾರವಾದ ಮಾರ್ಗಗಳೂ ಇವೆ.

ಭೂತಂ ಭವ್ಯಂ ಭವಿಷ್ಯಂ ಚ ಧರ್ಮೋಽರ್ಥಃ ಕಾಮ ಇತ್ಯಪಿ ।
ಪ್ರಾಣಾಪಾನಾವುದಾನಶ್ಚಾಪ್ಯೇತ ಏವ ತ್ರಯೋ ಗುಣಾಃ ॥೨೦॥

ಭೂತ-ಭವಿಷ್ಯತ್-ವರ್ತಮಾನ, ಧರ್ಮ-ಅರ್ಥ-ಕಾಮ, ಪ್ರಾಣ-ಅಪಾನ-ಉದಾನ - ಇವುಗಳು ತ್ರಿಗುಣಾತ್ಮಕವಾಗಿಯೇ ಇವೆ.

ಯತ್ ಕಿಂಚಿದಿಹ ವೈ ಲೋಕೇ ಸರ್ವಮೇಷ್ವೇವ ತು ತ್ರಿಷು ।
ತ್ರಯೋ ಗುಣಾಃ ಪ್ರವರ್ತಂತೇ ಹ್ಯವ್ಯಕ್ತಾ ನಿತ್ಯಮೇವ ತು ॥೨೧॥

ಈ ಲೋಕದಲ್ಲಿ ಯಾವ ವಸ್ತುವನ್ನು ಕಂಡರೂ ಅಲ್ಲಿಯೂ ಮೂರು ಗುಣಗಳು ಇದ್ದೇ ಇವೆ. ಮೂರು ಗುಣಗಳು ಪ್ರತಿಯೊಂದು ಕಾರ್ಯದಲ್ಲಿಯೂ ತೊಡಗಿರುತ್ತವೆ.

ಸತ್ವಂ ರಜಸ್ತಮಶ್ಚೈವ ಗುಣಸರ್ಗಃ ಸನಾತನಃ ।
ತದವ್ಯಕ್ತಂ ಶಿವಂ ನಿತ್ಯಮಜಂ ಯೋನಿಂ ಸನಾತನಮ್ ॥೨೨॥

ಪ್ರಕೃತಿರ್ವಿಕಾರಾಃ ಪ್ರಯಂ ಪ್ರಧಾನಂ ಪ್ರಭವಾಪ್ಯಯಮ್ ।
ಅನುದ್ರಿಕ್ತಮನೂನಂ ಚ ವ್ಯಕ್ತಮಪ್ಯಚಲಂ ಧ್ರುವಮ್ ॥೨೩॥

ಸದಸಚ್ಚೈವ ತತ್ ಸರ್ವಮವ್ಯಕ್ತಂ ತ್ರಿಗುಣಂ ಸ್ಮೃತಮ್ ।
ಜ್ಞೇಯಾನಿ ನಾಮಧೇಯಾನಿ ನರೈರಧ್ಯಾತ್ಮಚಿಂತಕೈಃ ॥೨೪॥

ಸತ್ವ-ರಜಸ್-ತಮೋಗುಣಗಳ ಸೃಷ್ಟಿಯು ಅನಾದಿಯಾದುದು. ಪ್ರಕೃತಿಗೆ ತಮಸ್ಸು, ಅವ್ಯಕ್ತ, ಶಿವ, ಭಾವ, ನಿತ್ಯ, ಅಜ, ಯೋನಿ, ಸನಾತನ, ಪ್ರಕೃತಿ, ವಿಕಾರ, ಪ್ರಲಯ, ಪ್ರಧಾನ, ಪ್ರಭವ, ನಾಶ, ಅನುದ್ರಿಕ, ನೂನ, ವ್ಯಕ್ತ, ಅಚಲ, ಧ್ರುವ, ಸತ್, ಅಸತ್, ಅವ್ಯಕ್ತ ಎಂಬ ನಾಮಗಳು ತ್ರಿಗುಣಗಳ ನಾಮಗಳು. ಅಧ್ಯಾತ್ಮಚಿಂತಕರು ಈ ನಾಮಗಳನ್ನು ತಿಳಿದುಕೊಂಡಿರಬೇಕು.

ಅವ್ಯಕ್ತನಾಮಾನಿ ಗುಣಾಂಶ್ಚ ತತ್ತ್ವತೋ
ಯೋ ವೇದ ಸರ್ವಾಣಿ ಗತೀಶ್ಚ ಕೇವಲಾಃ ।
ವಿಮುಕ್ತದೇಹಃ ಪ್ರವಿಭಾಗತತ್ತ್ವವಿತ್
ಸ ಮುಚ್ಯತೇ ಸರ್ವಗುಣೈರ್ನಿರಾಮಯಃ ॥೨೫॥

ಯಾವ ಮನುಷ್ಯನು ಮೂಲಪ್ರಕೃತಿಯ ಈ ನಾಮಗಳನ್ನು, ಸತ್ವಾದಿಗುಣಗಳನ್ನು, ವಿಶುದ್ಧವಾದ ಗತಿಗಳನ್ನು ಚೆನ್ನಾಗಿ ಬಲ್ಲವನಾಗಿರುವನೋ, ಅಂತಹ ಗುಣವಿಭಾಗನಾದ, ತತ್ತ್ವಜ್ಞನಾದ ಸಾಧಕನು ಯಾವ ವಿಧವಾದ ಸಾಂಸಾರಿಕ ಉಪದ್ರವಗಳಿಗೂ ತುತ್ತಾಗದೆ ಮೃತನಾದ ಬಳಿಕ ತ್ರಿಗುಣಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಗುಣತ್ರಯಾಶ್ರಯಕಥನಂ ನಾಮ
ಚತ್ವಾರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂದನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು
ಮಹತತ್ತ್ವವನ್ನು ನಿರೂಪಿಸಿದುದು.

ಬ್ರಹ್ಮಾ

ಅವ್ಯಕ್ತಾತ್ ಪೂರ್ವಮುತ್ಪನ್ನೋ ಮಹಾನಾತ್ಮಾ ಮಹಾಮತಿಃ ।
ಅನಿರ್ಗುಣಾನಾಂ ಸರ್ವೇಷಾಂ ಪ್ರಥಮಃ ಸರ್ಗ ಉಚ್ಯತೇ ॥೧॥

ಬ್ರಹ್ಮಾ– ಮಹರ್ಷಿಗಳೇ, ಅವ್ಯಕ್ತ ಪ್ರಕೃತಿಯು ಹುಟ್ಟುವುದಕ್ಕಿಂತ ಮೊದಲು ಪರಮಚೇತನನಾದ, ಸರ್ವಜ್ಞನಾದ ಪರಮಾತ್ಮನು ಪ್ರಾಕೃತಿಕ ಗುಣರಹಿತರಲ್ಲಿ ಮೊದಲಿಗನೆಂದು ಕರೆಸಿಕೊಂಡು ಇದ್ದಾನೆ. ಪ್ರಕೃತಿಯ ಕಾರ್ಯಗಳು ನಡೆಯುವುದಕ್ಕಿಂತ ಮೊದಲೇ ಹುಟ್ಟಿಲ್ಲದ ಪರಮಾತ್ಮನ ಅಸ್ತಿತ್ವವನ್ನು ಉಲ್ಲೇಖಿಸಿದ್ದಾರೆ.

ಮಹಾನಾತ್ಮಾ ವಿಭುರ್ವಿಷ್ಣುರ್ಜಿಷ್ಣುಃ ಶಮ್ಭುಶ್ಚ ವೀರ್ಯವಾನ್ ।
ಬುದ್ಧಿಃ ಪ್ರಜ್ಞೋಪಲಬ್ಧಿಶ್ಚ ತಥಾ ಖ್ಯಾತಿರ್ಧೃತಿಃ ಸ್ಮೃತಿಃ ॥೨॥

ಪರ್ಯಾಯವಾಚಕೈಃ ಶಬ್ದೈರ್ಮಹಾನಾತ್ಮಾ ವಿಭಾವ್ಯತೇ ।
ತಜ್ಜ್ಞಾನಾದ್ ಬ್ರಾಹ್ಮಣೋ ವಿದ್ವಾನ್ ಪ್ರಮೋಹಂ ನೈವ ಗಚ್ಛತಿ ॥೩॥

ಪರಮಾತ್ಮನು ಅನೇಕ ಅವತಾರಗಳನ್ನು ತಾಳುತ್ತಾನೆ. ವ್ಯಾಪ್ತನಾಗಿದ್ದಾನೆ, ಜಯಶೀಲನಾಗಿದ್ದಾನೆ. ವೀರ್ಯವಂತನಾಗಿ ಭಕ್ತರಿಗೆ ಸುಖವನ್ನು ಉತ್ಪತ್ತಿ ಮಾಡುವವನಾಗಿ, ಬುದ್ಧಿ, ಪ್ರಜ್ಞಾ, ಉಪಲಬ್ಧಿ, ಖ್ಯಾತಿ, ಧೃತಿ, ಸ್ಮೃತಿ ಮುಂತಾದ ಪರ್ಯಾಯವಾಚಕ ಶಬ್ದಗಳಿಂದ ಪರಮಚೇತನನಾದ ಪರಮಾತ್ಮನು ಕೊಂಡಾಡಲ್ಪಡುತ್ತಾನೆ. ಇಂತಹ ಪರಮಾತ್ಮನ ತತ್ತ್ವವನ್ನು ತಿಳಿದ ವಿದ್ವಾಂಸನಾದ ಬ್ರಾಹ್ಮಣನು ಎಂದೂ ಮೋಹವನ್ನು ಹೊಂದುವುದಿಲ್ಲ.

ಸರ್ವತಃ ಪಾಣಿಪಾದಂ ಚ ಸರ್ವತೋಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೪॥

ಪರಮಾತ್ಮನ ಕೈ, ಕಾಲು, ಕಣ್ಣು, ತಲೆ, ಮುಖ, ಕಿವಿ ಎಲ್ಲವೂ ಜಗತ್ತಿನ ತುಂಬಾ ವ್ಯಾಪಿಸಿಕೊಂಡಿದೆ.

ಮಹಾನ್ ಪ್ರಭಾಭಿಃ ಪುರುಷಃ ಸರ್ವಸ್ಯ ಹೃದಿ ಸಂಶ್ರಿತಃ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನೋ ಜ್ಯೋತಿರವ್ಯಯಃ ॥೫॥

ಪರಮಾತ್ಮನು ಪ್ರತಿಯೊಬ್ಬ ಜೀವರ ಹೃದಯಗುಹೆಯಲ್ಲಿ ಅನಂತ ತೇಜೋರೂಪನಾಗಿ ಬೆಳಗುತ್ತಿದ್ದಾನೆ. ಅಣಿಮಾ, ಲಘಿಮಾ, ಪ್ರಾಪ್ತಿ, ಈಷಿತ್ವ, ಜ್ಯೋತಿ, ಅವ್ಯಯ ಮುಂತಾದ ಗುಣಗಳಿಂದ ಪೂರ್ಣನಾಗಿದ್ದಾನೆ.

ಯೇ ತು ಬುದ್ಧಿಮತಾಂ ಲೋಕೇ ಸನ್ನ್ಯಾಸನಿರತಾಶ್ಚ ಯೇ ।
ಧ್ಯಾನಿನೋ ನಿತ್ಯಯೋಗಾಶ್ಚ ಸತ್ಯಸಂಧಾ ಜಿತೇಂದ್ರಿಯಾಃ ॥೬॥

ಜ್ಞಾನವಂತಶ್ಚ ಯೇ ಕೇಚಿದ್ ಅಲುಬ್ಧಾ ಜಿತಮನ್ಯವಃ ।
ಪ್ರಸನ್ನಮನಸೋ ಧೀರಾ ನಿರ್ಮಮಾ ನಿರಹಂಕೃತಾಃ ॥೭॥

ವಿಮುಕ್ತಾಃ ಸರ್ವ ಏವೈತೇ ಮಹತ್ತ್ವಮುಪಯಾಂತಿ ವೈ ॥೮॥

ಆತ್ಮನೋ ಮಹತೋ ವೇದ ಯಃ ಪುಣ್ಯಾಂ ಗತಿಮುತ್ತಮಾಮ್ ।
ಸ ಧೀರಃ ಸರ್ವಲೋಕೇಷು ನ ಮೋಹಮಧಿಗಚ್ಛತಿ ॥೯॥

ಜಗತ್ತಿನಲ್ಲಿ ಬುದ್ಧಿವಂತರು, ಸಾತ್ವಿಕ ಭಕ್ತಿನಿರತರು, ಜ್ಞಾನಯೋಗನಿಷ್ಣಾತರು, ನಿತ್ಯಯೋಗಿಗಳು, ಸತ್ಯಸಂಧರು, ಜಿತೇಂದ್ರಿಯರು, ಅಜ್ಞಾನರಹಿತರು, ಕ್ರೋಧ ಮುಕ್ತರು, ಪ್ರಸನ್ನ ಮನಸ್ಕರು, ಧೀರರು, ಮಮಕಾರರಹಿತರು, ಅಹಂಕಾರ ದೂರರು ಆಗಿರುವ ಸಜ್ಜನರು ಮುಕ್ತಿಗಾಗಿ ಈ ಪರಮಾತ್ಮನನ್ನೇ ಆಶ್ರಯಿಸುತ್ತಾರೆ. ಯಾರು ಈ ಪರಮಾತ್ಮನ ಶ್ರೇಷ್ಠವಾದ ಮಹಿಮೆಯನ್ನು ತಿಳಿದುಕೊಳ್ಳುತ್ತಾರೋ ಅವರು ಪುಣ್ಯದಾಯಕವಾದ ಉತ್ತಮ ಗತಿಯನ್ನೇ ಹೊಂದುತ್ತಾರೆ. ಧೀರರಾಗಿ ಸಕಲ ಲೋಕಗಳಲ್ಲಿಯೂ ಮೋಹದಿಂದ ದೂರರಾಗಿರುತ್ತಾರೆ.

ವಿಷ್ಣುರೇವಾದಿಸರ್ಗೇಷು ಸ್ವಯಂಭೂರ್ಭವತಿ ಪ್ರಭುಃ ॥೧೦॥

ಈ ಸರ್ವೋತ್ತಮನಾದ ವಿಷ್ಣುವೇ ಸೃಷ್ಟಿಯ ಆರಂಭದಲ್ಲಿ ಸ್ವಯಂಭೂ, ಪ್ರಭು ಎಂದು ಕರೆಸಿಕೊಂಡಿದ್ದಾನೆ.

ಏವಂ ಹಿ ಯೋ ವೇದ ಗುಹಾಶಯಂ ಪ್ರಭುಂ
ನವಂ ಪುರಾಣಂ ಪುರುಷಂ ವಿಶ್ವರೂಪಮ್ ।
ಹಿರಣ್ಮಯಂ ಬುದ್ಧಿಮತಾಂ ಪರಾಂ ಗತಿಂ
ಸ ಬುದ್ಧಿಮಾನ್ ಬುದ್ಧಿಮತೀತ್ಯ ತಿಷ್ಠತಿ ॥೧೧॥

ಯಾವಾತನು ಈ ಹೃದಯಗುಹೆಯಲ್ಲಿರುವ ಸರ್ವೋತ್ತಮನಾದ, ಪುರಾಣ ಪುರುಷೋತ್ತಮನಾದ, ನೂತನನಾದ, ವಿಶ್ವರೂಪಿಯಾದ, ಹಿರಣ್ಮಯನಾದ ಪರಮಾತ್ಮನ ಸ್ವರೂಪವನ್ನು ತಿಳಿಯುತ್ತಾನೋ ಅಂತಹವನು ಬುದ್ಧಿವಂತರ ಗುಂಪಿನಲ್ಲಿ ಅತ್ಯಂತ ಬುದ್ಧಿವಂತನಾಗಿ ಬುದ್ಧಿಯ ಮಿತಿಯನ್ನೇ ಮೀರಿ ನಿಲ್ಲುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಅವ್ಯಕ್ತಮಹತ್ಸರ್ಗಕಥನಂ ನಾಮ
ಏಕಚತ್ವಾರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಷಡ್‌ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆರಡನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು
ಅಹಂಕಾರತತ್ತ್ವವನ್ನು ನಿರೂಪಿಸುತ್ತಾನೆ.

ಬ್ರಹ್ಮಾ

ಯ ಉತ್ಪನ್ನೋ ಮಹಾನ್ ಪೂರ್ವಮಹಂಕಾರಃ ಸ ಉಚ್ಯತೇ ।
ಅಹಮಿತ್ಯೇವ ಸಂಭೂತೋ ದ್ವಿತೀಯಃ ಸರ್ಗ ಉಚ್ಯತೇ ॥೧॥

ಬ್ರಹ್ಮಾ– ಈ ಸೃಷ್ಟಿಯ ಆರಂಭದಲ್ಲಿ ಮೊದಲಿಗೆ ಯಾವ ತತ್ತ್ವವು ಉತ್ಪನ್ನವಾಯಿತೋ ಅದು ಶ್ರೇಷ್ಠವಾದ ಮಹತತ್ತ್ವವೆನಿಸಿತು. ಮಹತತ್ತ್ವಕ್ಕೆ ಚತುರ್ಮುಖನು ಅಭಿಮಾನಿ. ಈ ಮಹತತ್ತ್ವದ ದೆಸೆಯಿಂದ ಉತ್ಪನ್ನವಾದ ತತ್ತ್ವವು ಎರಡನೆಯದಾದ ಅಹಂಕಾರ ತತ್ತ್ವ ಎನಿಸಿತು. ಅಹಂಕಾರ ತತ್ತ್ವಕ್ಕೆ ಮಹಾರುದ್ರನು ಅಭಿಮಾನಿ.

ಅಹಂಕಾರಸ್ತು ಭೂತಾದಿರ್ವೈಕಾರಿಕ ಇತಿ ಸ್ಮೃತಃ ।
ತೈಜಸಶ್ಚೇತನಾ ಧಾತುಃ ಪ್ರಜಾಸರ್ಗಃ ಪ್ರಜಾಪತಿಃ ॥೨॥

ಅಹಂಕಾರವು ಪ್ರಾಣಿಗಳ ಸೃಷ್ಟಿಗೆ ಕಾರಣವಾಗಿದೆ. ಪಂಚಭೂತಗಳಿಗೆ ಮೂಲ ಕಾರಣವಾಗಿದೆ. ಇದನ್ನು ವೈಕಾರಿಕ ಎಂದು ಕರೆದಿದ್ದಾರೆ. ಮನಸ್ಸು, ಇಂದ್ರಿಯಾಭಿಮಾನಿ ದೇವತೆಗಳು ದೇಹವನ್ನು ಹುಟ್ಟಿಸುವ ಸಾಮರ್ಥ್ಯ ವೈಕಾರಿಕ ಅಹಂಕಾರ ತತ್ತ್ವಕ್ಕೆ ಇದೆ. ತೈಜಸವೆನಿಸಿದ ಇಂದ್ರಿಯಗಳನ್ನು ಹುಟ್ಟಿಸುವ ಸಾಮರ್ಥ್ಯ ತೈಜಸ ಅಹಂಕಾರದ ಶಕ್ತಿ. ಜೀವರನ್ನು ಸೃಷ್ಟಿ ಮಾಡುವ ಚತುರ್ಮುಖ ಬ್ರಹ್ಮನು ಧಾತು ಎನಿಸಿದ್ದಾನೆ.

ದೇವಾನಾಂ ಪ್ರಥಮೋ ದೇವೋ ಮನಸಶ್ಚ ತ್ರಿಲೋಕಕೃತ್ ।
ಅಹಮಿತ್ಯೇವ ತತ್ಸರ್ವಮಭಿಮಂತಾ ಸ ಉಚ್ಯತೇ ॥೩॥

ಅಹಂಕಾರ ತತ್ತಾಭಿಮಾನಿ ದೇವನು ದೇವತೆಗಳಿಗೆ ಮೊದಲಿಗನೆನಿಸಿದ್ದಾನೆ. ಮನಸ್ಸಿಗೆ ಜನಕನಾಗಿದ್ದಾನೆ. ಮನಸ್ಸುಳ್ಳ ಲೋಕಗಳಿಗೆಲ್ಲ ನಿಯಾಮಕನಾಗಿದ್ದಾನೆ. ಜಗತ್ತಿನಲ್ಲಿ ಜೀವರು 'ಅಹಂ' ಎಂದು ನಿತ್ಯವೂ ಅನುವ್ಯವಸಾಯವನ್ನು ಹೊಂದುತ್ತಿದ್ದಾರೆ. ಆ ಜ್ಞಾನವನ್ನು ತಂದುಕೊಡುವವ ಅಭಿಮಂತನೆನಿಸಿದ ಮಹಾರುದ್ರನಾಗಿದ್ದಾನೆ.

ಅಧ್ಯಾತ್ಮಜ್ಞಾನತೃಪ್ತಾನಾಂ ಮುನೀನಾಂ ಭಾವಿತಾತ್ಮನಾಮ್ ।
ಸ್ವಾಧ್ಯಾಯಕ್ರತುಸಿದ್ಧಾನಾಮೇಷ ಲೋಕಃ ಸನಾತನಃ ॥೪॥

ಅಧ್ಯಾತ್ಮ ಜ್ಞಾನದಿಂದ ತೃಪ್ತರಾದ, ಅಧ್ಯಾತ್ಮ ಚಿಂತನೆ ಮಾಡುವ ಸ್ವಾಧ್ಯಾಯನ ಯಜ್ಞದಲ್ಲಿ ಸಿದ್ಧಿಯನ್ನು ಹೊಂದಿದ ಮುನಿಗಳಿಗೆ ಸನಾತನನಾದ ಚತುರ್ಮುಖ ಬ್ರಹ್ಮನು ಜ್ಞಾನವನ್ನು ನೀಡುತ್ತಾನೆ (ಇಲ್ಲಿ ಲೋಕ ಎಂದರೆ ಜ್ಞಾನಪ್ರದ ಎಂದು ಅರ್ಥ).

ಅಹಂಕಾರೇಣಾಹರತೋ ಗುಣಾನಿಮಾನ್
ಭೂತಾದಿರೇವಂ ಸೃಜತೇ ಸ ಭೂತಕೃತ್ ।
ವೈಕಾರಿಕಃ ಸರ್ವಮಿದಂ ವಿಚೇಷ್ಟತೇ
ಸ್ವತೇಜಸಾ ರಂಜಯತೇ ಜಗತ್ ತಥಾ ॥೫॥

ಅಹಂಕಾರ ತತ್ತ್ವದಿಂದ ಪ್ರಕೃತಿಯ ಗುಣಗಳನ್ನು ಸ್ವೀಕರಿಸಿಕೊಂಡು ಜೀವನ ಉತ್ಪತ್ತಿಯಾಗುತ್ತದೆ. ಆದ್ದರಿಂದ ಅಹಂಕಾರ ತತ್ತ್ವವನ್ನು ಭೂತಾದಿ ಎಂದು ಕರೆಯುತ್ತಾರೆ. ಪ್ರಾಣಿಗಳ ಉತ್ಪತ್ತಿಗೆ ನಿಯಾಮಕ. ವೈಕಾರಿಕ ಅಹಂಕಾರ ತತ್ತ್ವವೇ ಈ ಜಗತ್ತೆಲ್ಲವನ್ನೂ ವ್ಯಾಪಾರವುಳ್ಳದ್ದನ್ನಾಗಿ ಮಾಡುತ್ತದೆ. ತನ್ನ ಶಕ್ತಿಯ ಪ್ರಭಾವದಿಂದ ಜಗತ್ತನ್ನು ಸಂತೋಷಗೊಳಿಸುತ್ತಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಮಹದಹಂಕಾರಸರ್ಗಕಥನಂ ನಾಮ
ದ್ವಿಚತ್ವಾರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ಮೂರನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಅಹಂಕಾರತತ್ತ್ವದಿಂದ ಪಂಚಭೂತ ಮೊದಲಾದ ಸೃಷ್ಟಿ ಪ್ರಕಾರವನ್ನು ಹೇಳಿದುದು.

ಬ್ರಹ್ಮಾ

ಅಹಂಕಾರಾತ್ ಪ್ರಸೂತಾನಿ ಮಹಾಭೂತಾನಿ ಪಂಚ ವೈ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ॥೧॥

ಬ್ರಹ್ಮಾ– ಮಹರ್ಷಿಗಳೇ, ಅಹಂಕಾರದಿಂದ ಉತ್ಪತ್ತಿಯನ್ನು ಪಂಚಭೂತಗಳು ಹೊಂದಿವೆ. ಪೃಥಿವಿ, ವಾಯು, ಆಕಾಶ, ಜಲ, ಐದನೆಯದ್ದಾದ ಜ್ಯೋತಿ ಹೀಗೆ ಪಂಚಭೂತಗಳು.

ತೇಷು ಭೂತಾನಿ ಮುಹ್ಯಂತಿ ಮಹಾಭೂತೇಷು ಪಂಚಸು ।
ಶಬ್ದಸ್ಪರ್ಶನರೂಪೇಷು ರಸಗಂಧಕ್ರಿಯಾಸು ಚ
ಸರ್ವಪ್ರಾಣಭೃತಾಂ ಧೀರಾ ಮಹದುತ್ಪದ್ಯತೇ ಭಯಮ್ ॥೩॥

ಆ ಪಂಚಭೂತಗಳಲ್ಲಿ ಎಲ್ಲ ಪ್ರಾಣಿಗಳಿಗೂ ಮೋಹವಿದೆ. ಅರ್ಥಾತ್ ಪಂಚಭೂತಗಳಿಂದ ಉತ್ಪತ್ತಿಯನ್ನು ಪಡೆದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಲ್ಲಿ ಎಲ್ಲಪ್ರಾಣಿಗಳು ಆಸಕ್ತವಾಗಿವೆ.

ಯದ್ ಯಸ್ಮಾಜ್ಜಾಯತೇ ಭೂತಂ ತತ್ರ ತತ್ ಪ್ರವಿಲೀಯತೇ ।
ಲೀಯಂತೇ ಪ್ರತಿಲೋಮಾನಿ ಜಾಯಂತೇ ಚೋತ್ತರೋತ್ತರಮ್ ॥೪॥

ಪಂಚಮಹಾಭೂತಗಳೆಲ್ಲವೂ ವಿಕಾರವನ್ನು ಪಡೆದು ನಾಶ ಹೊಂದಿದ ಬಳಿಕ ಪ್ರಲಯದ ಕಾಲವು ಸನ್ನಿಹಿತವಾಗುತ್ತದೆ. ಆ ಸಂದರ್ಭದಲ್ಲಿ ಎಲ್ಲ ಪ್ರಾಣಿಗಳಿಗೂ ದೊಡ್ಡ ಭಯವು ಉಂಟಾಗುತ್ತದೆ.

ತತಃ ಪ್ರಲೀನೇ ಸರ್ವಸ್ಮಿನ್ ಭೂತೇ ಸ್ಥಾವರಜಂಗಮೇ ।
ಸ್ಮೃತಿಮಂತಸ್ತತೋ ಧೀರಾ ನ ಲೀಯಂತೇ ಕಥಂಚನ ॥೫॥

ಯಾವ ಭೂತವು ಯಾವ ತತ್ತ್ವದ ದೆಸೆಯಿಂದ ಉತ್ಪತ್ತಿಯನ್ನು ಪಡೆದಿದೆಯೋ ಆದರಲ್ಲಿಯೇ ಲಯವನ್ನು ಹೊಂದುತ್ತದೆ. ಅನುಲೋಮ ಕ್ರಮದಿಂದ ಹುಟ್ಟನ್ನು ಪಡೆದ ಪಂಚಭೂತಗಳು ವಿಲೋಮಕ್ರಮದಿಂದ ತಮ್ಮ ಕಾರಣದಲ್ಲಿ ಲಯವನ್ನು ಹೊಂದುತ್ತವೆ. ಉದಾಹರಣೆ– ಜಲತತ್ತ್ವದಿಂದ ಉತ್ಪನ್ನವಾದ ಪೃಥಿವಿತತ್ತ್ವವು ಜಲತತ್ತ್ವದಲ್ಲಿಯೇ ಲಯವನ್ನು ಹೊಂದುತ್ತದೆ. ಚರಾಚರ ಪ್ರಾಣಿಗಳೆಲ್ಲವೂ ಲಯಗೊಂಡರೂ ಸ್ಮರಣ ಶಕ್ತಿಸಂಪನ್ನರಾದ, ಧೀರರಾದ ಯೋಗಿಪುರುಷರು ಲಯ ಹೊಂದುವುದಿಲ್ಲ.

ಶಬ್ದಃ ಸ್ಪರ್ಶಸ್ತಥಾ ರೂಪಂ ರಸೋ ಗಂಧಶ್ಚ ಪಂಚಮಃ ।
ಕ್ರಿಯಾಃ ಕಾರಣಯುಕ್ತಾಃ ಸ್ಯುರನಿತ್ಯಾ ಮೋಹಸಂಜ್ಞಿತಾಃ ॥೬॥

ಶಬ್ದ, ಸ್ಪರ್ಶ, ರೂಪ, ರಸ, ಐದನೆಯದ್ದಾದ ಗಂಧ ಇವುಗಳ ಕ್ರಿಯೆಗಳು ಕಾರಣ ರೂಪದಿಂದ ನಿತ್ಯವಾಗಿರುತ್ತವೆ. ಸ್ಥೂಲಪದಾರ್ಥಗಳು ಅನಿತ್ಯವಾದವುಗಳು. ಇವುಗಳಿಗೆ ಮೋಹವೆಂದು ಹೆಸರು.

ವ್ಯಾಖ್ಯಾನ ವಿಶೇಷ– ಪ್ರಕೃತಿಯು ನಿತ್ಯಾನಿತ್ಯವೆಂಬ ವಿಭಾಗದಿಂದ ಕೂಡಿದೆ. ಕಾರಣರೂಪವು ನಿತ್ಯವಾಗಿದೆ, ಸ್ಥೂಲರೂಪವು ಅನಿತ್ಯವಾಗಿದೆ ಎಂದು ತಿಳಿಯಬೇಕು.

ಲೋಕಪ್ರಜನಸಂಯುಕ್ತಾ ನಿರ್ವಿಶೇಷಾ ಹ್ಯಕಿಂಚನಾಃ ।
ಮಾಂಸಶೋಣಿತಸಂಘಾತಾ ಅನ್ಯೋನ್ಯಸ್ಯೋಪಜೀವಿನಃ ॥೭॥

ಬಹಿರಾತ್ಮಾನ ಇತ್ಯೇತೇ ಕ್ರೂರಾಃ ಕೃಪಣವೃತ್ತಯಃ ॥೮॥

ಆತ್ಮನ ಹೊರಭಾಗದಲ್ಲಿ ಸ್ತ್ರೀ-ಪುರುಷರ ಲೋಭ-ಸಂಯೋಗಗಳಿಂದ ಉತ್ಪನ್ನವಾದ ಸಮಾನವಾಗಿ ಸಹಕಾರದಿಂದ ಬೆಳೆಯುವ ಮಾಂಸ-ರಕ್ತ ಸಮೂಹಗಳು ಈ ಶರೀರದಲ್ಲಿ ಅಡಕವಾಗಿವೆ. ಇವೆಲ್ಲವೂ ಸ್ಥೂಲವಾದುದರಿಂದ ಅನಿತ್ಯವೆನಿಸಿವೆ. ಆದ್ದರಿಂದಲೇ ಇವುಗಳನ್ನು ದೀನ, ಕೃಪಣ ಶಬ್ದಗಳಿಂದ ಕರೆಯಲಾಗುತ್ತದೆ.

ಪ್ರಾಣಾಪಾನಾವುದಾನಶ್ಚ ಸಮಾನೋ ವ್ಯಾನ ಏವ ಚ ।
ಅಂತರಾತ್ಮೇತಿ ಚಾಪ್ಯೇತೇ ನಿಯತಾಃ ಪಂಚ ವಾಯವಃ ॥೯॥

ವಾಙ್ಮನೋಬುದ್ಧಿರಿತ್ಯೇಭಿಃ ಸಾರ್ಧಮಷ್ಟಾತ್ಮಕಂ ಜಗತ್ ॥೧೦॥

ಪ್ರಾಣ, ಅಪಾನ, ಉದಾನ, ಸಮಾನ, ವ್ಯಾನ ಎಂಬ ಪಂಚಪ್ರಾಣರು ಪರಮಾತ್ಮನಿಂದ ಜೀವರ ದೇಹದಲ್ಲಿ ನಿಯತರಾಗಿದ್ದಾರೆ. ಮನಸ್ಸು, ಮಾತು, ಬುದ್ಧಿ ಇವುಗಳೂ ಸೇರಿಕೊಂಡಾಗ ಪಂಚಪ್ರಾಣರಿಂದ ಯುಕ್ತವಾದ ಸೂಕ್ಷ್ಮ ಜಗತ್ತು ಎಂಟು ವಿಧವಾಗುತ್ತದೆ.

ತ್ವಗ್‌ಘ್ರಾಣಶ್ರೋತ್ರಚಕ್ಷೂಂಷಿ ರಸನಂ ವಾಕ್ ಚ ಸಂಯತಾಃ ।
ವಿಶುದ್ಧಂ ಚ ಮನೋ ಯಸ್ಯ ಬುದ್ಧಿಶ್ಚಾವ್ಯಭಿಚಾರಿಣೀ ॥೧೧॥

ಅಷ್ಟೌ ಯಸ್ಯಾಗ್ನಯೋ ಹ್ಯೇತೇ ದಹಂತ್ಯೇವಂ ಕ್ರಿಯಾಃ ಸದಾ ।
ಸ ತದ್ ಬ್ರಹ್ಮ ಶುಭಂ ಯಾತಿ ಯಸ್ಮಾದ್ ಭೂಯೋ ನ ವಿದ್ಯತೇ ॥

ತ್ವಕ್, ಘ್ರಾಣ, ಶ್ರೋತ್ರ, ಚಕ್ಷುಸ್ಸು, ರಸನ, ಮಾತು, ಇಂದ್ರಿಯಗಳು ಯಾರ ವಶದಲ್ಲಿವೆಯೋ, ಯಾರ ಮನಸ್ಸು ಅವ್ಯಭಿಚರಿತವಾಗಿದೆಯೋ, ವಿಷಯಗಳಲ್ಲಿ ಅನಾಸಕ್ತವಾಗಿದೆಯೋ, ಯಾರ ಮನಸ್ಸನ್ನು ಈ ತ್ವಗಿಂದ್ರಿಯ, ಚಕ್ಷುರಿಂದ್ರಿಯ, ಶ್ರೋತ್ರೇಂದ್ರಿಯ, ಘ್ರಾಣೇಂದ್ರಿಯ ಮೊದಲಾದವುಗಳು ಸಂತಾಪಗೊಳಿಸುವುದಿಲ್ಲವೋ ಅಂತಹ ಶ್ರೇಷ್ಠನಾದ ಪುರುಷನು ಕಲ್ಯಾಣಕ್ರಮವಾದ, ಗುಣಪರಿಪೂರ್ಣನಾದ ಪರಬ್ರಹ್ಮನ ಪಾದವನ್ನು ಹೊಂದಲು ಅರ್ಹನಾಗುತ್ತಾನೆ. ಆ ಗುಣಪರಿಪೂರ್ಣನಾದ ಭಗವಂತನಿಗಿಂತಲೂ ಶ್ರೇಷ್ಠವಾದ ವಸ್ತುವು ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ.

ಏಕಾದಶ ಚ ಯಾನ್ಯಾಹುರಿಂದ್ರಿಯಾಣಿ ವಿಶೇಷತಃ ।
ಅಹಂಕಾರಾತ್ ಪ್ರಸೂತಾನಿ ತಾನಿ ವಕ್ಷ್ಯಾಮ್ಯಹಂ ದ್ವಿಜಾಃ ॥೧೩॥

ಬ್ರಾಹ್ಮಣಶ್ರೇಷ್ಠರೇ, ಅಹಂಕಾರದಿಂದ ಉತ್ಪನ್ನವಾದ, ಮನಸ್ಸಿನಿಂದ ಸಹಿತವಾದ ಏಕಾದಶ ಇಂದ್ರಿಯಗಳ ವೈಶಿಷ್ಟ್ಯವನ್ನು ಹೇಳುತ್ತೇನೆ, ಕೇಳಿ.

ಶ್ರೋತ್ರಂ ತ್ವಕ್ ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಂಚಮೀ ।
ಪಾದೌ ಪಾಯುರುಪಸ್ಥಂ ಚ ಹಸ್ತೌ ವಾಗ್ ದಶಮೀ ಭವೇತ್ ॥೧೪॥

ಇಂದ್ರಿಯಗ್ರಾಮ ಇತ್ಯೇತನ್ಮನ ಏಕಾದಶಂ ಭವೇತ್ ।
ಏತದ್ ಗ್ರಾಮಂ ಜಯೇತ್ ಪೂರ್ವಂ ತತೋ ಬ್ರಹ್ಮ ಪ್ರಕಾಶತೇ ॥೧೫॥

ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವೆ, ಘ್ರಾಣ, ಕೈ-ಕಾಲುಗಳು, ಗುದ-ಉಪಸ್ಥ, ವಾಗಿಂದ್ರಿಯ - ಈ ಹತ್ತು ಇಂದ್ರಿಯಗಳ ಸಮೂಹಕ್ಕೆ ಇಂದ್ರಿಯಗ್ರಾಮವೆಂದು ಹೆಸರು. ಇದರ ಜೊತೆಗೆ ಮನಸ್ಸು ಸೇರಿದಾಗ ಹನ್ನೊಂದು ಆಗುತ್ತವೆ. ಈ ಇಂದ್ರಿಯ ಗ್ರಾಮವನ್ನು ಯಾರು ಜಯಿಸುತ್ತಾರೋ ಅವರ ಹೃದಯದಲ್ಲಿ ಬ್ರಹ್ಮನು ಕಾಣಿಸುತ್ತಾನೆ.

ಬುದ್ಧೀಂದ್ರಿಯಾಣಿ ಪಂಚಾಹುಃ ಪಂಚ ಕರ್ಮೇಂದ್ರಿಯಾಣಿ ಚ ।
ಶ್ರೋತ್ರಾದೀನಿ ತು ಪಂಚಾಹುರ್ಬುದ್ಧಿಯುಕ್ತಾನಿ ತತ್ತ್ವತಃ ॥೧೬॥

ಅವಿಶೇಷಾಣಿ ಚಾನ್ಯಾನಿ ಕರ್ಮಯುಕ್ತಾನಿ ತಾನಿ ತು ।
ಉಭಯತ್ರ ಮನೋ ಜ್ಞೇಯಂ ಬುದ್ಧಿಸ್ತು ದ್ವಾದಶೀ ಭವೇತ್ ॥೧೭॥

ಈ ಹತ್ತು ಇಂದ್ರಿಯಗಳಲ್ಲಿ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಇವೆ. ಶ್ರೋತ್ರ, ಚರ್ಮ, ಚಕ್ಷುಸ್ಸು, ಜ್ಞಾನ - ಇವುಗಳೇ ಜ್ಞಾನೇಂದ್ರಿಯಗಳು, ಉಳಿದವು ಕರ್ಮೇಂದ್ರಿಯಗಳು. ಈ ಹತ್ತು ಇಂದ್ರಿಯಗಳಿಗೂ ಮನಸ್ಸಿನ ಸಂಬಂಧವಿದೆ. ಈ ಮನಸ್ಸನ್ನು ನಿಯಂತ್ರಿಸುವ ಹನ್ನೆರಡನೆಯ ಇಂದ್ರಿಯ ಬುದ್ಧಿ ಎಂದು ಕರೆಯಲ್ಪಟ್ಟಿದೆ.

ಇತ್ಯುಕ್ತಾನೀಂದ್ರಿಯಾಣ್ಯೇತಾನ್ಯೇಕಾದಶ ತಥಾ ಕ್ರಮಾತ್ ।
ಮನ್ಯಂತೇ ಕೃತಮಿತ್ಯೇವ ವಿಜಿತ್ಯೈತಾನಿ ಪಂಡಿತಾಃ ॥೧೮॥

ಹೀಗೆ ಕ್ರಮವಾಗಿ ಹನ್ನೊಂದು ಇಂದ್ರಿಯಗಳ ಬಗ್ಗೆ ತಿಳಿಸಿದ್ದೇನೆ. ಇಂದ್ರಿಯ ಗ್ರಾಮವನ್ನು ಅರ್ಥೈಸಿಕೊಂಡ ವಿದ್ವಾಂಸರು ಕೃತಕೃತ್ಯರೆಂದು ಭಾವಿಸುತ್ತಾರೆ. ಇನ್ನು ಮುಂದೆ ಇಂದ್ರಿಯಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿರೂಪಿಸುತ್ತೇನೆ.

ಆಕಾಶಂ ಪ್ರಥಮಂ ಭೂತಂ ಶ್ರೋತ್ರಮಧ್ಯಾತ್ಮಮಿಷ್ಯತೇ ।
ಅಧಿಭೂತಂ ತಥಾ ಶಬ್ದೋ ದಿಶಶ್ಚಾತ್ರಾಧಿದೈವತಮ್ ॥೧೯॥

ಪಂಚಭೂತಗಳಲ್ಲಿ ಆಕಾಶವು ಮೊದಲನೆಯದ್ದು. ಶ್ರೋತ್ರೇಂದ್ರಿಯವು ಆಕಾಶದಿಂದ ಉತ್ಪನ್ನವಾದ ಇಂದ್ರಿಯವಾಗಿದೆ. ಶಬ್ದವೇ ಅಧಿಭೂತವೆನಿಸಿದ ಅದರ ವಿಷಯ. ದಿಕ್ಕುಗಳೇ ಆಕಾಶಕ್ಕೆ ಅಧಿದೈವವೆನಿಸಿದೆ.

ದ್ವಿತೀಯಂ ಮಾರುತಂ ಭೂತಂ ತ್ವಗಧ್ಯಾತ್ಮಂ ಚ ವಿಶ್ರುತಮ್ ।
ಸ್ಪ್ರಷ್ಟವ್ಯಮಧಿಭೂತಂ ತು ವಿದ್ಯುತ್ ತತ್ರಾಧಿದೈವತಮ್ ॥೨೦॥

ಎರಡನೆಯ ಭೂತವು ವಾಯು ಎನಿಸಿದೆ. ತ್ವಗಿಂದ್ರಿಯವು ಇದರ ಅಧ್ಯಾತ್ಮ, ಸ್ಪರ್ಶವು ಅಧಿಭೂತ, ವಿದ್ಯುತ್ ಇದರ ಅಧಿದೈವ.

ತೃತೀಯಂ ಜ್ಯೋತಿರಿತ್ಯಾಹುಶ್ಚಕ್ಷುರಧ್ಯಾತ್ಮಮಿಷ್ಯತೇ ।
ಅಧಿಭೂತಂ ತತೋ ರೂಪಂ ಸೂರ್ಯಸ್ತತ್ರಾಧಿದೈವತಮ್ ॥೨೧॥

ಮೂರನೆಯದ್ದು ತೇಜೋಭೂತವೆನಿಸಿದೆ. ಕಣ್ಣು ಅಧ್ಯಾತ್ಮ, ರೂಪ ಅಧಿಭೂತ, ಸೂರ್ಯದೇವನೇ ಅಧಿದೈವ.

ಚತುರ್ಥಮಾಪೋ ವಿಜ್ಞೇಯಂ ಜಿಹ್ವಾ ಚಾಧ್ಯಾತ್ಮಮಿಷ್ಯತೇ ।
ಅಧಿಭೂತಂ ರಸಶ್ಚಾತ್ರ ಸೋಮಸ್ತತ್ರಾಧಿದೈವತಮ್ ॥೨೨॥

ನಾಲ್ಕನೆಯ ಭೂತ ಜಲತತ್ತ್ವವಾಗಿದೆ. ಜಿಹ್ವೆ ಅಧ್ಯಾತ್ಮ, ರಸ ಅಧಿಭೂತ, ಸೋಮ ಅಧಿದೈವ ಎನಿಸಿದ್ದಾನೆ.

ಪೃಥಿವೀ ಪಂಚಮಂ ಭೂತಂ ಘ್ರಾಣಮಧ್ಯಾತ್ಮಮಿಷ್ಯತೇ ।
ಅಧಿಭೂತಂ ತತೋ ಗಂಧೋ ವಾಯುಸ್ತತ್ರಾಧಿದೈವತಮ್ ॥೨೩॥

ಏಷು ಪಂಚಸು ಭೂತೇಷು ಚತುಷ್ಟಯವಿಧಿಃ ಸ್ಮೃತಃ ।
ಅತಃ ಪರಂ ಪ್ರವಕ್ಷ್ಯಾಮಿ ಸರ್ವಂ ತ್ರಿವಿಧಮಿಂದ್ರಿಯಮ್ ॥೨೪॥

ಪೃಥಿವಿಯು ಐದನೆಯ ತತ್ತ್ವ. ಘ್ರಾಣವು ಅಧ್ಯಾತ್ಮ, ಗಂಧವು ಅಧಿಭೂತ, ವಾಯುವು ಅಧಿದೈವ. ಹೀಗೆ ಪಂಚಭೂತಗಳಲ್ಲಿ ಅಧ್ಯಾತ್ಮ, ಅಧಿಭೂತ, ಅಧಿದೈವಗಳೆಂಬ ಮೂರು ಪ್ರಭೇದಗಳು ಇವೆ. ಇನ್ನು ಮುಂದೆ ಕರ್ಮೇಂದ್ರಿಯಗಳ ವಿಷಯವನ್ನು ನಿರೂಪಿಸುತ್ತೇನೆ.

ಪದಾವಧ್ಯಾತ್ಮಮಿತ್ಯಾಹುರ್ಬ್ರಾಹ್ಮಣಾಸ್ತತ್ತ್ವದರ್ಶಿನಃ ।
ಅಧಿಭೂತಂ ತು ಗಂತವ್ಯಂ ವಿಷ್ಣುಸ್ತತ್ರಾಧಿದೈವತಮ್ ॥೨೫॥

ಜ್ಞಾನಿಗಳು ಎರಡು ಪಾದಗಳನ್ನು ಅಧ್ಯಾತ್ಮವೆಂದೂ, ಗಂತವ್ಯವಾದ ಸ್ಥಾನವನ್ನು ಅಧಿಭೂತವೆಂದೂ, ವಿಷ್ಣುವು ಈ ಪಾದಗಳಿಗೆ ಅಧಿದೈವವೆಂದು ಎನಿಸಿದ್ದಾನೆ.

ಅವಾಗ್ಗತಿರಪಾನಶ್ಚ ವಾಯುರಧ್ಯಾತ್ಮಮಿಷ್ಯತೇ ।
ಅಧಿಭೂತಂ ವಿಸರ್ಗಶ್ಚ ಮಿತ್ರಸ್ತತ್ರಾಧಿದೈವತಮ್ ॥೨೬॥

ಕೆಳಮುಖವಾಗಿ ಸಂಚರಿಸುವ ವಾಯುವಿಗೆ ಅಪಾನವೆಂದೂ, ಅಧ್ಯಾತ್ಮವೆಂದು ಹೆಸರು. ಮಲ-ಮೂತ್ರ ತ್ಯಾಗಗಳೇ ವಿಸರ್ಗವೆನಿಸಿದೆ. ಮಿತ್ರನು ಅಧಿದೈವ ಎನಿಸಿದ್ದಾನೆ.

ಪ್ರಜನಃ ಸರ್ವಭೂತಾನಾಮುಪಸ್ಥೋऽಧ್ಯಾತ್ಮಮಿಷ್ಯತೇ ।
ಅಧಿಭೂತಂ ತಥಾ ಶುಕ್ಲಂ ದೈವತಂ ಚ ಪ್ರಜಾಪತಿಃ ॥೨೭॥

ಸಕಲ ಪ್ರಾಣಿಗಳ ಉತ್ಪತ್ತಿಗೆ ಕಾರಣವಾದ ಸ್ತ್ರೀ-ಪುರುಷರ ಜನನೇಂದ್ರಿಯಗಳು ಅಧ್ಯಾತ್ಮವೆನಿಸಿದೆ, ವೀರ್ಯವೇ ಅಧಿಭೂತ, ಚತುರ್ಮುಖ ಬ್ರಹ್ಮನು ಅಧಿದೈವ.

ಹಸ್ತಾವಧ್ಯಾತ್ಮಮಿತ್ಯಾಹುರಧ್ಯಾತ್ಮವಿದುಷೋ ಜನಾಃ ।
ಅಧಿಭೂತಂ ತು ಕರ್ಮಾಣಿ ಶಕ್ರಸ್ತತ್ರಾಧಿದೈವತಮ್ ॥೨೮॥

ಕೈಗಳ ಮೂಲಕ ನಡೆಯುವ ಕಾರ್ಯವನ್ನು ಅಧಿಭೂತವೆಂದೂ, ಕೈಗಳನ್ನು ಅಧ್ಯಾತ್ಮವೆಂದೂ, ಇದಕ್ಕೆ ಇಂದ್ರನೇ ಅಧಿದೈವವೆಂದೂ ಅಧ್ಯಾತ್ಮವನ್ನರಿತ ಜ್ಞಾನಿಗಳು ಹೇಳುತ್ತಾರೆ.

ವೈಶ್ವದೇವೀ ಮನಃಪೂರ್ವಾ ವಾಗಧ್ಯಾತ್ಮಮಿಹೋಚ್ಯತೇ ।
ವಕ್ತವ್ಯಮಧಿಭೂತಂ ಚ ವಹ್ನಿಸ್ತತ್ರ ದ್ವಿದೈವತಮ್ ॥೨೯॥

ಸಮಸ್ತ ದೇವತಾಮಂತ್ರಗಳನ್ನು ಆವೃತ್ತಿ ಮಾಡುವ ಮನಸ್ಸಿನ ಸಹಾಯವನ್ನು ಪಡೆದ ವಾಗಿಂದ್ರಿಯವನ್ನು ಅಧ್ಯಾತ್ಮ ಎಂದು ಕರೆಯುತ್ತಾರೆ. ಯಾವುದನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾನೋ ಅದನ್ನು ಮಾತಿನಲ್ಲಿ ಹೇಳುತ್ತಾನೆ. ಹೇಳುವಂತಹ ಮಾತು ಅಧಿಭೂತವೆನಿಸಿದೆ. ಈ ಮಾತಿಗೆ ಜೀವಾಂತರ್ಯಾಮಿ, ದೇಹಾಂತರ್ಯಾಮಿ ಎಂಬ ಇಬ್ಬರು ಅಧಿದೈವವೆನಿಸಿದ್ದಾರೆ.

ಅಧ್ಯಾತ್ಮಂ ಮನ ಇತ್ಯಾಹುಃ ಪಂಚಭೂತಾನುಕಾರಕಮ್ ।
ಅಧಿಭೂತಂ ಚ ಮಂತವ್ಯಂ ಚಂದ್ರಮಾಶ್ಚಾಧಿದೈವತಮ್ ॥೩೦॥

ಪಂಚಭೂತಗಳನ್ನೂ ಕಾರ್ಯನಿರತವನ್ನಾಗಿ ಮಾಡಿಸುವ ಮನಸ್ಸನ್ನು ಅಧ್ಯಾತ್ಮ ಎನ್ನುತ್ತಾರೆ. ಸಂಕಲ್ಪವೇ ಮನಸ್ಸಿಗೆ ಅಧಿಭೂತ, ಚಂದ್ರನೇ ಅಧಿದೇವತೆ.

ಅಧ್ಯಾತ್ಮಂ ಬುದ್ಧಿರಿತ್ಯಾಹುಃ ಷಡಿಂದ್ರಿಯವಿಚಾರಿಣೀ ।
ಅಧಿಭೂತಂ ಚ ವಿಜ್ಞೇಯಂ ಮಹತ್ ತತ್ರಾಧಿದೈವತಮ್ ॥೩೧॥

ಮನಸ್ಸಿನಿಂದ ಕೂಡಿರುವ ಆರು ಇಂದ್ರಿಯಗಳನ್ನು ತಿಳಿಯುವ ಬುದ್ಧಿಯನ್ನು ಅಧ್ಯಾತ್ಮವೆನ್ನುತ್ತಾರೆ. ತಿಳಿಯಲ್ಪಡುವಿಕೆಯೇ ಅಧಿಭೂತವು. ಬ್ರಹ್ಮನೇ ಅಧಿದೇವತೆ ಎನಿಸಿದ್ದಾನೆ.

ತ್ರೀಣಿ ಸ್ಥಾನಾನಿ ಭೂತಾನಾಂ ಚತುರ್ಥಂ ನೋಪಪದ್ಯತೇ ।
ಸ್ಥಲಮಾಪಸ್ತಥಾऽऽಕಾಶಂ ಜನ್ಮ ಚಾಪಿ ಚತುರ್ವಿಧಮ್ ॥೩॥

ಅಂಡಜೋದ್ಭಿಜ್ಜಸಂಸ್ವೇದಜರಾಯುಜಮಥಾಪಿ ಚ ।
ಚತುರ್ಧಾ ಜನ್ಮ ಇತ್ಯೇತದ್ ಭೂತಗ್ರಾಮಸ್ಯ ವಕ್ಷ್ಯತೇ ॥೩॥

ಪ್ರಾಣಿಗಳು ವಾಸ ಮಾಡಲು ಇರುವ ಮೂರು ಸ್ಥಾನಗಳು ಭೂಮಿ, ನೀರು, ಆಕಾಶವೆನಿಸಿವೆ. ನಾಲ್ಕನೆಯ ಸ್ಥಾನವೇ ಇರುವುದಿಲ್ಲ. ಪ್ರಾಣಿಗಳಿಗೆ ಅಂಡಜಾ, ಉದ್ಭಿಜ, ಸ್ವೇದಜ, ಜರಾಯುಜ ಎಂಬ ಜನ್ಮವಿದೆ. ಪ್ರಾಣಿಗಳಿಗೆ ಮಾತ್ರ ಈ ನಾಲ್ಕು ವಿಧವಾದ ಜನ್ಮಗಳು ಕಂಡುಬರುತ್ತವೆ.

ಅಚರಾಣ್ಯಪಿ ಭೂತಾನಿ ಖೇಚರಾಣಿ ತಥೈವ ಚ ।
ಅಂಡಜಾನಿ ವಿಜಾನೀಯಾತ್ ಸರ್ವಾಂಶ್ಚೈವ ಸರೀಸೃಪಾನ್ ॥೪॥

ಹುಟ್ಟಿದ ಕೂಡಲೇ ಸಂಚರಿಸಲಾಗದ, ಮೊಟ್ಟೆಯನ್ನು ಒಡೆದು ಹುಟ್ಟುವ ಅಂಡಜಗಳು ಆಕಾಶದಲ್ಲಿ ಸಂಚರಿಸುವ ಹಕ್ಕಿಗಳು ಮತ್ತು ಭೂಮಿಯಲ್ಲಿ ಸಂಚರಿಸುವವು ಸರ್ಪಗಳು ಎಂದು ತಿಳಿಯಬೇಕು.

ಸ್ವೇದಜಾಃ ಕೃಮಯಃ ಪ್ರೋಕ್ತಾ ಜಂತವಶ್ಚ ತಥಾವಿಧಾಃ ।
ಜನ್ಮ ದ್ವಿತೀಯಮಿತ್ಯೇತತ್ ಜಘನ್ಯತರಮುಚ್ಯತೇ ॥೫॥

ಬೆವರಿನಿಂದ ಹುಟ್ಟುವ ಪ್ರಾಣಿಗಳನ್ನು ಕ್ರಿಮಿಗಳು ಎಂದೂ, ಜಂತುಗಳು ಎಂದೂ ಕರೆಯುತ್ತಾರೆ. ಕ್ರಿಮಿಯ ಜನ್ಮಕ್ಕಿಂತಲೂ ಜಂತುವಿನ ಜನ್ಮವು ನೀಚವಾದುದು.

ಭಿತ್ತ್ವಾ ತು ಪೃಥಿವೀಂ ಯಾನಿ ಜಾಯಂತೇ ಕಾಲಪರ್ಯಯಾತ್ ।
ಉದ್ಭಿಜ್ಜಾನೀತಿ ತಾನ್ಯಾಹುಃ ಭೂತಾನಿ ದ್ವಿಜಸತ್ತಮಾಃ ॥೬॥

ಕಾಲವು ಪಕ್ವವಾದ ಬಳಿಕ ಭೂಮಿಯನ್ನು ಭೇದಿಸಿಕೊಂಡು ಹೊರ ಬರುವ ಮರ, ಗಿಡ, ಬಳ್ಳಿಗಳನ್ನು ಉಭಿಜವೆನ್ನುತ್ತಾರೆ.

ದ್ವಿಪಾದಬಹುಪಾದಾನಿ ತಿರ್ಯಗ್ಗತಮತೀನಿ ಚ ।
ಜರಾಯುಜಾನಿ ಭೂತಾನಿ ವಿತತಾನ್ಯಪಿ ಸತ್ತಮಾಃ ॥೭॥

ಬ್ರಾಹ್ಮಣರೇ, ಎರಡು ಪಾದವುಳ್ಳವುಗಳು, ಬಹುಪಾದವುಳ್ಳವುಗಳು, ವಕ್ರ ಗತಿಯುಳ್ಳವುಗಳು, ವಕ್ರಬುದ್ಧಿಯುಳ್ಳವುಗಳು, ವಿಕಾರರೂಪವುಳ್ಳ ಪ್ರಾಣಿಗಳು ಇವೆಲ್ಲವೂ ಜರಾಯುಜ ಎನಿಸಿವೆ.

ವಿವಿಧಾನೀಹ ವಿಜ್ಞೇಯಾ ಬ್ರಹ್ಮ ಯೋನಿಃ ಸನಾತನಮ್ ।
ತಪಃ ಕರ್ಮ ಚ ಯತ್ ಪುಣ್ಯಮಿತ್ಯೇಷ ವಿದುಷಾಂ ನಯಃ ॥೩೮॥

ಬ್ರಾಹ್ಮಣ್ಯಕ್ಕೆ ಕಾರಣವಾದ ಎರಡು ಪ್ರಕಾರಗಳೆಂದರೆ ತಪಸ್ಸು ಮತ್ತು ಪುಣ್ಯಕರ್ಮಗಳ ಅನುಷ್ಠಾನ. ಇದರಿಂದ ಬ್ರಾಹ್ಮಣತ್ವವು ಪ್ರಾಪ್ತವಾಗುತ್ತದೆ ಎನ್ನುತ್ತಾರೆ ಬಲ್ಲವರು.

ದ್ವಿವಿಧಂ ಕರ್ಮ ವಿಜ್ಞೇಯಮಿಜ್ಯಾ ದಾನಂ ಚ ತನ್ಮಖೇ ।
ಜ್ಞಾನಂ ಸ್ವಾಧ್ಯಾಯಜನನಮಿತಿ ವೃದ್ಧಾನುಶಾಸನಮ್ ॥೩೯॥

ಕರ್ಮಗಳಲ್ಲಿ ಎರಡು ವಿಧವಿದೆ. ಅಗ್ನಿಮುಖದಲ್ಲಿ ದಾನ ಮಾಡುವುದು, ಸ್ವಾಧ್ಯಾಯ (ಅಧ್ಯಯನ ಮಾಡುವುದು) ಎಂಬುದಾಗಿ. ಸ್ವಾಧ್ಯಾಯ ಜ್ಞಾನಯಜ್ಞವು ವೃದ್ಧರ ಅನುಶಾಸನವೆನಿಸಿದೆ.

ಏತದ್ ಯೋ ವೇದ ವಿಧಿವತ್ ಸ ಮುಕ್ತಃ ಸ್ಯಾದ್ ದ್ವಿಜರ್ಷಭಾಃ ।
ವಿಮುಕ್ತಃ ಸರ್ವಪಾಪೇಭ್ಯ ಇತಿ ಚೈವ ನಿಬೋಧತ ॥೪೦॥

ದ್ವಿಜಶ್ರೇಷ್ಠರೇ, ಯಾವ ಮನುಷ್ಯನು ಈ ವಿಷಯಗಳನ್ನು ವಿಧಿವತ್ತಾಗಿ ತಿಳಿಯುವನೋ ಅವನು ಎಲ್ಲ ಪಾಪಗಳಿಂದ ವಿಮುಕ್ತನಾಗಿ ಯೋಗಿ ಎನಿಸುತ್ತಾನೆ.

ಯಥಾವದಧ್ಯಾತ್ಮವಿಧಿರೇಷ ವಃ ಕೀರ್ತಿತೋ ಮಯಾ ।
ಜ್ಞಾನಮಸ್ಯ ಹಿ ಧರ್ಮಜ್ಞಾಃ ಪ್ರಾಪ್ತಂ ಬುದ್ಧಿಮತಾಮಿಹ ॥೪೧॥

ಹೀಗೆ ಅಧ್ಯಾತ್ಮವಿಧಿಯನ್ನು ನಿಮಗೆ ವಿಧಿವತ್ತಾಗಿ ತಿಳಿಸಿದ್ದೇನೆ. ಜ್ಞಾನಿಗಳಾದ ನಿಮಗೆ ಈ ವಿಷಯಕಜ್ಞಾನವು ಚೆನ್ನಾಗಿ ಉಂಟಾಗಿದೆ.

ಇಂದ್ರಿಯಾಣೀಂದ್ರಿಯಾರ್ಥಾಶ್ಚ ಮಹಾಭೂತಾನಿ ಪಂಚ ಚ ।
ಸರ್ವಾಣ್ಯೇತಾನಿ ಸಂಧಾಯ ಮನಸಾ ಸಂಪ್ರಧಾರಯೇತ್ ॥೪೨॥

ಇಂದ್ರಿಯಗಳು, ಇಂದ್ರಿಯಗಳ ವಿಷಯಗಳು, ಐದು ಭೂತಗಳು ಎಲ್ಲವನ್ನೂ ಸೇರಿಸಿಕೊಂಡು ಮನಸ್ಸಿನಲ್ಲಿ ಚೆನ್ನಾಗಿ ಧಾರಣೆ ಮಾಡಿಕೊಳ್ಳಬೇಕು.

ಕ್ಷೀಣೇ ಮನಸಿ ಸರ್ವಸ್ಮಿನ್ ನ ಜನ್ಮಸುಖಮಿಷ್ಯತೇ ।
ಜ್ಞಾನಸಂಪನ್ನಸತ್ತ್ವಾನಾಂ ತತ್ಸುಖಂ ವಿದುಷಾಂ ಹಿತಮ್ ॥೪೩॥

ಇಂದ್ರಿಯ ಸಂಬದ್ಧವಾದ ವಿಷಯದಿಂದ ಮನಸ್ಸು ಸಂಬಂಧ ಹೊಂದಿದೆ. ಮನಸ್ಸು ಕ್ಷೀಣವಾದರೆ ಜ್ಞಾನಸಂಪನ್ನ ಮನಸ್ಸಿನಿಂದ ಜ್ಞಾನಪೂರ್ವಕವಾಗಿ ಹುಟ್ಟುವ ಸುಖವೇ ಸುಖವೆನಿಸಿದೆ.

ಅತಃ ಪರಂ ಪ್ರವಕ್ಷ್ಯಾಮಿ ಸೂಕ್ಷ್ಮಭಾವಕರಂ ಶಿವಮ್ ।
ನಿವೃತ್ತಂ ಸರ್ವಭೂತೇಷು ಮೃದುನಾ ದಾರುಣೇನ ವಾ ॥೪೪॥

ಇನ್ನು ಮುಂದೆ ಎಲ್ಲ ಪ್ರಾಣಿಗಳಲ್ಲಿಯೂ ಇರುವ ಪರಮಮಂಗಳವಾದ ಮನಸ್ಸಿನ ಸೂಕ್ಷ್ಮಭಾವವನ್ನು, ಮೃದು-ಕಠಿಣ ಭಾವಗಳನ್ನು, ನಿವೃತ್ತಿಯ ವಿಷಯವನ್ನು ತಿಳಿಸುತ್ತೇನೆ.

ಗುಣಾಗುಣಮನಾಸಂಗಮೇಕಚರ್ಯಮ್ ಅನಂತರಮ್ ।
ಏತದ್ ಬ್ರಾಹ್ಮಣಜಂ ವೃತ್ತಮಾಹುರೇಕಪದಂ ಸುಖಮ್ ॥೪೫॥

ಬ್ರಾಹ್ಮಣರಲ್ಲಿ ಅಹಂಕಾರಕ್ಕೆ ಕಾರಣವಾದ ಗುಣಗಳಿದ್ದರೂ, ದುರ್ಗುಣಗಳಿದ್ದರೂ ಅವುಗಳಲ್ಲಿ ಅಸಂಗನಾಗದೆ, ಪರಬ್ರಹ್ಮವಸ್ತುವನ್ನೇ ಅರಸುವ ವ್ಯಕ್ತಿತ್ವವುಳ್ಳ ವ್ಯಾಪಾರವನ್ನು ಬ್ರಾಹ್ಮಣನ ಗುಣವೆನ್ನುತ್ತಾರೆ. ಪರಮಾತ್ಮನ ಪಾದವನ್ನು ಧ್ಯಾನಿಸುವುದೇ ಸುಖ ಎಂದು ತಿಳಿದವನು ಬ್ರಾಹ್ಮಣ.

ವಿದ್ವಾನ್ ಕೂರ್ಮ ಇವಾಂಗಾನಿ ಕಾಮಾನ್ ಸಂಹೃತ್ಯ ಸರ್ವಶಃ ।
ವಿರಜಾಃ ಸರ್ವತೋ ಮುಕ್ತೋ ಯೋ ನರಃ ಸ ಸುಖೀ ಸದಾ ॥೪೬॥

ಆಮೆಯು ತನ್ನ ಅವಯವಗಳನ್ನು ಒಳಕ್ಕೆ ಸೆಳೆದುಕೊಳ್ಳುವಂತೆ ವಿದ್ವಾಂಸನು ಇಂದ್ರಿಯ ಕಾಮನೆಗಳನ್ನು ಸಂಕೋಚಗೊಳಿಸಿಕೊಂಡು, ರಜೋಗುಣದಿಂದ ರಹಿತನಾಗಿ ಸಮಸ್ತ ಬಂಧನಗಳಿಂದಲೂ ಮುಕ್ತನಾಗಿ ಯಾವಾಗಲೂ ಸುಖಿಯಾಗಿರುತ್ತಾನೆ.

ಕಾಮಾನಾತ್ಮನಿ ಸಂಯಮ್ಯ ಕ್ಷೀಣತೃಷ್ಣಃ ಸಮಾಹಿತಃ ।
ಸರ್ವಭೂತಸುಹೃನ್ನೈತ್ರೋ ಬ್ರಹ್ಮಭೂಯಾಯ ಕಲ್ಪತೇ ॥೪೭॥

ಯಾವನು ಕಾಮನೆಗಳನ್ನು ನಿಗ್ರಹಿಸಿಕೊಂಡು, ತೃಷ್ಣಾರಹಿತನಾಗಿ, ಎಲ್ಲ ಪ್ರಾಣಿಗಳಿಗೂ ಸುಹೃನ್ಮಿತ್ರನಾಗಿ, ಏಕಾಗ್ರತೆಯಿಂದ ಬ್ರಹ್ಮನನ್ನೇ ಧ್ಯಾನಿಸುತ್ತಾನೋ ಅವನು ಹರಿಪದವನ್ನೇ ಸೇರುತ್ತಾನೆ.

ಇಂದ್ರಿಯಾಣಾಂ ನಿರೋಧೇನ ಸರ್ವೇಷಾಂ ವಿಷಯೈಷಿಣಾಮ್ ।
ಮುನೇರ್ಜನಪದತ್ಯಾಗಾದ್ ಅಧ್ಯಾತ್ಮಾಗ್ನಿಃ ಸಮಿಧ್ಯತೇ ॥೪೮॥

ವಿಷಯಸುಖವನ್ನು ಅಪೇಕ್ಷಿಸುವ ಇಂದ್ರಿಯಗಳನ್ನು ಮನಸ್ಸಿನ ಮೂಲಕ ನಿಗ್ರಹಿಸಿಕೊಂಡು, ಜನರ ಸಮುದಾಯದಲ್ಲಿ ವಾಸ ಮಾಡದೆ, ಏಕಾಂತದಲ್ಲಿದ್ದು ಹರಿಯನ್ನು ಧ್ಯಾನಿಸುವವನಿಗೆ ಅಧ್ಯಾತ್ಮ ಎಂಬ ಅಗ್ನಿಯು ಚೆನ್ನಾಗಿ ಉರಿಯುತ್ತದೆ.

ಯಥಾऽಗ್ನಿರಿಂಧನೈರಿದ್ಧೋ ಮಹಾಜ್ಯೋತಿಃ ಪ್ರಕಾಶತೇ ।
ತಥೇಂದ್ರಿಯನಿರೋಧೇನ ಮಹಾನಾತ್ಮಾ ಪ್ರಕಾಶತೇ ॥೪೯॥

ಹೇಗೆ ಕಟ್ಟಿಗೆಗಳಿಂದ ಅಗ್ನಿಯು ಜ್ಯೋತಿಯಾಗಿ ಉರಿಯುತ್ತಾ ಪ್ರಕಾಶಿಸುವುದೋ ಇದರಂತೆ ಇಂದ್ರಿಯಗಳನ್ನು ನಿರೋಧಿಸುವುದರಿಂದ ಪರಮಾತ್ಮನು ಹೃದಯದಲ್ಲಿ ಪ್ರಕಾಶ ಹೊಂದುತ್ತಾನೆ.

ಯದಾ ಪಶ್ಯತಿ ಭೂತಾನಿ ಪ್ರಸನ್ನಾತ್ಮಾऽऽತ್ಮನೋ ಹೃದಿ ।
ಸ್ವಯಂ ಜ್ಯೋತಿಸ್ತದಾ ಸೂಕ್ಷ್ಮಾತ್ ಸೂಕ್ಷ್ಮಮಾಪ್ನೋತ್ಯನುತ್ತಮಮ್ ॥೫೦॥

ಯಾವಾಗ ಯೋಗಿಯು ಪ್ರಸನ್ನ ಮನಸ್ಕನಾಗಿ, ಸ್ವಯಂ ಜ್ಯೋತಿರೂಪನಾದ, ಸಕಲ ಪ್ರಾಣಿಗಳಿಗೂ ಅಂತರ್ಯಾಮಿಯಾದ, ಸೂಕ್ಷ್ಮರೂಪಿಯಾದ ಶ್ರೀಹರಿಯನ್ನು ಹೃದಯ ಗುಹೆಯಲ್ಲಿ ಕಾಣುತ್ತಾನೋ ಆ ಪುಣ್ಯದಿಂದ ಅವನನ್ನೇ ಹೊಂದುತ್ತಾನೆ.

ಅಗ್ನೇ ರೂಪಂ ರಸಂ ಸ್ರೋತೋ ವಾತಃ ಸ್ಪರ್ಶನಮೇವ ಚ ।
ಮಹೀ ಗಂಧಧರಾ ಘ್ರಾಣಮಾಕಾಶಃ ಶ್ರವಣಂ ತಥಾ ॥೫೧॥

ದೃಶ್ಯಮಾದಿತ್ಯಮೇವಾಹುರಧ್ಯಾತ್ಮವಿದುಷೋ ಜನಾಃ ॥೫೨॥

ಜ್ಞಾನಿಗಳು ದೇಹದಲ್ಲಿರುವ ಪಂಚಭೂತಗಳಲ್ಲಿ ಅಧ್ಯಾತ್ಮ ಚಿಂತನೆಯನ್ನು ಹೀಗೆ ಮಾಡಿದ್ದಾರೆ: ದೇಹದಲ್ಲಿರುವ ಅಗ್ನಿಯೇ ಬಾಹ್ಯಪ್ರಪಂಚದಲ್ಲಿ ಕಾಣುವ ರೂಪ ಎನಿಸಿದೆ. ರಸವು ಹರಿಯುವ ನದಿ ಎನಿಸಿದೆ. ಸ್ಪರ್ಶವು ಬೀಸುವ ಗಾಳಿ ಎನಿಸಿದೆ. ಗಂಧವನ್ನು ಧರಿಸುವ ಘ್ರಾಣವು ಕಣ್ಣಿಗೆ ಕಾಣುವ ಪೃಥಿವಿ ಎನಿಸಿದೆ. ಶಬ್ದಶ್ರವಣವು ಆಕಾಶವೆನಿಸಿದೆ. ಹೃದಯದಲ್ಲಿ ಕಾಣುವ ಪರಮಾತ್ಮನು ಬಾಹ್ಯಪ್ರಪಂಚದಲ್ಲಿ ಕಾಣುವ ಸೂರ್ಯನೆನಿಸಿದ್ದಾನೆ. ಹೀಗೆ ಪಿಂಡಾಂಡದಲ್ಲಿ ಬ್ರಹ್ಮಾಂಡವನ್ನು ಕಾಣಬಹುದು.

ರೋಗಶೋಕಸಮಾವಿಷ್ಟಂ ಪಂಚಸ್ರೋತಃ ಸಮಾವೃತಮ್ ।
ಪಂಚಭೂತಸಮಾಯುಕ್ತಂ ನವದ್ವಾರಂ ದ್ವಿಜೋತ್ತಮಾಃ ॥೫೩॥

ರಜಸ್ವಲಮಥಾದೃಶ್ಯಂ ತ್ರಿಗುಣಂ ಸಪ್ತಧಾತುಕಮ್ ।
ಸಂಸರ್ಗಾಭಿರತಂ ಮೂಢಂ ಶರೀರಮಿತಿ ಧಾರಣಾ ॥೫೪॥

ರೋಗ-ಶೋಕಗಳಿಂದ ಸುತ್ತುವರಿದ, ಪ್ರವಾಹರೂಪವಾದ ಐದು ಇಂದ್ರಿಯಗಳಿಂದ ಕೂಡಿರುವ, ಪಂಚಭೂತಗಳಿಂದ ತುಂಬಿರುವ, ಒಂಬತ್ತು ಬಾಗಿಲುಗಳುಳ್ಳ, ರಜೋಗುಣಗಳಿಂದ ತುಂಬಿರುವ, ತ್ರಿಗುಣಾತ್ಮಕವಾದ, ಸಪ್ತ ಧಾತುಗಳಿಂದ ಕೂಡಿರುವ, ಬಾಹ್ಯ ಭೋಗಗಳಲ್ಲಿಯೇ ಆಸಕ್ತವಾಗಿರುವ ಈ ದೇಹವನ್ನೇ ಶರೀರ ಎಂದು ಕರೆಯುತ್ತಾರೆ.

ದುಸ್ತರಂ ಪ್ರತಿಲೋಕೇಽಸ್ಮಿನ್ ಸತ್ವಂ ಪ್ರತಿ ಸಮಾಶ್ರಿತಮ್ ।
ಏತದೇವ ಹಿ ಲೋಕೇಽಸ್ಮಿನ್ ಕಾಲಚಕ್ರಂ ಪ್ರವರ್ತತೇ ॥೫೫॥

ಪ್ರತಿಯೊಬ್ಬ ಜೀವರನ್ನು ಆಶ್ರಯಿಸಿಕೊಂಡಿರುವ ಯಾವ ಶರೀರವಿದೆಯೋ ಇದನ್ನೇ ವಿದ್ವಾಂಸರು ಕಾಲಚಕ್ರ ಎನ್ನುತ್ತಾರೆ. ಬಾಲ್ಯಾದಿ ಅವಸ್ಥೆಗಳಿಂದ ಕೂಡಿದ ಈ ಶರೀರವೇ ಕಾಲ ಎನಿಸಿದೆ. ಇದೇ ಕಾಲಚಕ್ರವನ್ನು ನಡೆಸುತ್ತಿರುತ್ತದೆ.

ಏತನ್ಮಹಾರ್ಣವಂ ಘೋರಮಗಾಧಂ ಮೋಹಸಂಜ್ಞಿತಮ್ ।
ವಿಸೃಜನ್ ಸಂಕ್ಷಿಪಂಶ್ಚೈವ ಮೋಹಯನ್ ಸ್ವಾಪಯನ್ ಜಗತ್ ॥೫೬॥

ಈ ಶರೀರವೆಂಬ ಕಾಲಚಕ್ರವು ಘೋರವಾದ, ಅಗಾಧವಾದ ದೊಡ್ಡ ಸಮುದ್ರದಂತಿದೆ. ಈ ಶರೀರವನ್ನು ಮೋಹ ಎಂದು ಕರೆಯುತ್ತಾರೆ. ಈ ಶರೀರವು ಜಗತ್ತನ್ನು ಸಂಕ್ಷೇಪಗೊಳಿಸುತ್ತದೆ, ಮೋಹಗೊಳಿಸುತ್ತದೆ, ಮಲಗುವಂತೆ ಮಾಡುತ್ತದೆ.

ಕಾಮಕ್ರೋಧೌ ಭಯಂ ಮೋಹಮಭಿದ್ರೋಹಮಥಾನೃತಮ್ ।
ಇಂದ್ರಿಯಾಣಾಂ ನಿರೋಧೇನ ಸದಾ ತ್ಯಜತಿ ದುಸ್ತ್ಯಜಾನ್ ॥೫೭॥

ಮನುಷ್ಯನು ಕಾಮ, ಕ್ರೋಧ, ಭಯ, ಮೋಹ, ದ್ರೋಹ, ಅಸತ್ಯ - ಇವೆಲ್ಲ ದುರ್ಗುಣಗಳನ್ನು ಇಂದ್ರಿಯಗಳನ್ನು ನಿಗ್ರಹಿಸುವುದರಿಂದ ಬಿಡಲು ಸಮರ್ಥನಾಗುತ್ತಾನೆ.

ಯಸ್ಯೈತೇ ನಿರ್ಜಿತಾ ಲೋಕೇ ತ್ರಿಗುಣಾಃ ಪಂಚ ಧಾತವಃ ।
ವ್ಯೋಮ್ನಿ ತಸ್ಯ ಪರಂ ಸ್ಥಾನಮನಂತಮುಪಲಭ್ಯತೇ ॥೫೮॥

ಯಾವನಿಂದ ಸತ್ವ-ರಜಸ್-ತಮೋಗುಣಗಳಿಂದ ಕೂಡಿದ ಶರೀರದ ಅಭಿಮಾನವು ತೊರೆಯಲ್ಪಟ್ಟಿದೆಯೋ ಅವನ ಹೃದಯಾಕಾಶದಲ್ಲಿ ಅನಂತಕಲ್ಯಾಣಗುಣ- ಪರಿಪೂರ್ಣನಾದ ಪರಬ್ರಹ್ಮನು ನಿತ್ಯವೂ ನೆಲೆಗೊಳ್ಳುತ್ತಾನೆ. ಇದರಿಂದ ಜೀವನು ನಿತ್ಯಸುಖವನ್ನು ಹೊಂದುತ್ತಾನೆ.

ಕಾಲಕೂಲಮಪಾರಾಂತಾಂ ಮನಃ ಸ್ರೋತೋ ಭಯಾವಹಾಮ್ ।
ನದೀಂ ದುರ್ಗಹ್ರದಾಂ ತೀರ್ಣಃ ಕಾಮಕ್ರೋಧಾವುಭೌ ಜಯೇತ್॥೫೯॥

ಸರ್ವದೋಷವಿನಿರ್ಮುಕ್ತಸ್ತತಃ ಪಶ್ಯತಿ ತತ್ಪರಮ್ ।
ಮನೋ ಮನಸಿ ಸಂಧಾಯ ಪಶ್ಯತ್ಯಾತ್ಮಾನಮಾತ್ಮನಿ ॥೬೦॥

ಸರ್ವವಿತ್ ಸರ್ವಭೂತೇಷು ದ್ರಕ್ಷ್ಯತ್ಯಾತ್ಮಾನಮಾತ್ಮನಿ ॥೬೧॥

ಕೊನೆಯೇ ಇಲ್ಲದ ಕಾಲವೆಂಬ ದಡದಿಂದ ಕೂಡಿದ, ಪರಮಾತ್ಮ-ಜಗತ್ತು ಎಂದು ಎರಡು ಕಡೆ ಹರಿಯುವ ಮನಸ್ಸುಳ್ಳ, ಭಯಂಕರವಾದ ಕಷ್ಟಗಳೆಂಬ ನದಿಗಳಿಂದ ಕೂಡಿದ ಈ ಶರೀರವನ್ನು ದಾಟಿದವನು ಕಾಮ-ಕ್ರೋಧಗಳನ್ನು ಜಯಿಸುತ್ತಾನೆ. ಇವುಗಳನ್ನು ಜಯಿಸಿದ ಬಳಿಕ ಎಲ್ಲ ದೋಷಗಳಿಂದ ಮುಕ್ತನಾಗುತ್ತಾ

ಸರ್ವೋತ್ತಮನಾದ ಪರಮಾತ್ಮನನ್ನು ನೋಡುತ್ತಾನೆ. ಯಾವನು ತನ್ನ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ, ಹೃದಯಗುಹಾವಾಸಿಯಾದ ಪರಮಾತ್ಮನನ್ನೇ ನೋಡುತ್ತಾನೋ ಅವನು ಸರ್ವಜ್ಞನಾಗಿ ಎಲ್ಲ ಭೂತಗಳಲ್ಲೂ ಅಂತರ್ಯಾಮಿಯಾದ ಪರಮಾತ್ಮನನ್ನು ತನ್ನ ಅಂತರ್ಯಾಮಿಯನ್ನು ಕಾಣುವಂತೆ ಕಾಣುತ್ತಾನೆ.

ಏಕಧಾ ಬಹುಧಾ ಚೈವ ವಿಕುರ್ವಾಣಸ್ತತಸ್ತತಃ ।
ಧ್ರುವಂ ಪಶ್ಯತಿ ರೂಪಾಣಿ ದೀಪಾದ್ ದೀಪಶತಂ ಯಥಾ ॥೬೨॥

ಸ ವೈ ವಿಷ್ಣುಶ್ಚ ರುದ್ರಶ್ಚ ವರುಣೋಗ್ನೀ(ಗ್ನಿಃ) ಪ್ರಜಾಪತಿಃ ।
ಸ ಹಿ ಧಾತಾ ವಿಧಾತಾ ಚ ಸ ಪ್ರಭುಃ ಸರ್ವತೋಮುಖಃ ॥೬೩॥

ಯಾವ ಪರಮಾತ್ಮನ ದೆಸೆಯಿಂದ ಒಂದು ವಿಧವಾಗಿ, ಅನಂತ ವಿಧವಾಗಿ ವಿಕಾರವನ್ನು ಹೊಂದುವ ಜೀವನು ತನಗೆ ಉಂಟಾಗುವ ಮನುಷ್ಯ , ಪಶು-ಪಕ್ಷ್ಯಾದಿ ರೂಪಗಳನ್ನು ಒಂದು ದೀಪದಿಂದ ನೂರಾರು ದೀಪ ಉರಿಸಿದಂತೆ ಯಥಾವತ್ತಾಗಿ ನೋಡುತ್ತಾನೆ. ಒಬ್ಬನೇ ಜೀವನಿಗೆ ಆಗಮಿಸಿದ ಅನೇಕ ಉಪಾಧಿಗಳನ್ನು ನೋಡುತ್ತಾನೆ. ನಾನಾ ಯೋನಿಗಳನ್ನು ತಂದೊಡ್ಡುವ ಪರಮಾತ್ಮನು ವಿಷ್ಣು-ರುದ್ರ-ವರುಣ-ಅಗ್ನಿ-ಪ್ರಜಾಪತಿ-ಧಾತಾ-ವಿಧಾತಾ ಹೀಗೆ ಅನೇಕ ಶಬ್ದಗಳಿಂದ ಕರೆಸಿಕೊಳ್ಳುತ್ತಾನೆ. ಎಲ್ಲ ನಾಮಗಳು ಪರಮಾತ್ಮನ ನಾಮಗಳೇ ಆಗಿವೆ. ವ್ಯಕ್ತಿಗಳು ಬೇರೆ. ಎಲ್ಲರ ಅಂತರ್ಯಾಮಿಯು ಸರ್ವಶಕ್ತನಾಗಿ ಎಲ್ಲೆಡೆಯೂ ವ್ಯಾಪಾರಗಳನ್ನು ಮಾಡುತ್ತಿದ್ದಾನೆ.

ಹೃದಯಂ ಸರ್ವಭೂತಾನಾಂ ಮಹಾನಾತ್ಮಾ ಪ್ರಕಾಶತೇ ॥೬೪॥

ಎಲ್ಲ ಜೀವರ ಹೃದಯದಲ್ಲಿಯೂ ಜ್ಞಾನಿಗಳಿಗೆ ಸರ್ವೋತ್ತಮನಾದ ಪರಮಾತ್ಮನು ಕಾಣಿಸುತ್ತಾನೆ.

ತಂ ವಿಪ್ರಸಂಘಾಶ್ಚ ಸುರಾಸುರಾಶ್ಚ
ಯಕ್ಷಾಃ ಪಿಶಾಚಾಃ ಪಿತರೋ ವಯಾಂಸಿ ।
ರಕ್ಷೋಗಣಾ ಭೂತಗಣಾಶ್ಚ ಸರ್ವೇ
ಮಹರ್ಷಯಶ್ಚೈವ ಸದಾ ಸ್ತುವಂತಿ ॥೬೫॥

ಬ್ರಾಹ್ಮಣರ ಸಮುದಾಯವು, ದೇವತೆಗಳು, ಅಸುರರು, ಯಕ್ಷ-ಪಿಶಾಚಿಗಳು, ಪಿತೃಗಳು, ಪಕ್ಷಿಗಳು, ರಾಕ್ಷಸರು, ಭೂತಗಣಗಳು, ಎಲ್ಲ ಮಹರ್ಷಿಗಳು ಈ ಸರ್ವೋತ್ತಮನಾದ ಪರಮಾತ್ಮನನ್ನೇ ಸ್ತೋತ್ರ ಮಾಡುತ್ತಿರುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಪಂಚಭೂತವಿಚಾರಕಥನಂ ನಾಮ
ತ್ರಿಚತ್ವಾರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ನಾಲ್ಕನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು, ಮನುಷ್ಯರು ಕ್ಷತ್ರಿಯರು ರಜೋಗುಣ ಕಾರ್ಯದ ಬಲವನ್ನು ಪ್ರಧಾನವಾಗಿ ಹೊಂದಿರುವುದರಿಂದ ಸತ್ವಗುಣ ಪ್ರಧಾನರಾದ ಬ್ರಾಹ್ಮಣರನ್ನು ರಕ್ಷಿಸುವುದು ಕರ್ತವ್ಯವಾಗಿದೆ ಎಂದು ಹೇಳುವ ಮೂಲಕ ಬ್ರಾಹ್ಮಣ ಜಾತಿಯ ಶ್ರೇಷ್ಠತ್ವವನ್ನು ಹೇಳಿದುದು. ಇದರಂತೆ ಅಹಿಂಸಾದಿ ಧರ್ಮಗಳನ್ನು ಪ್ರತಿಪಾದಿಸಿದುದು.

ಬ್ರಹ್ಮಾ

ಮನುಷ್ಯಾಣಾಂ ತು ರಾಜನ್ಯಃ ಕ್ಷತ್ರಿಯೋ ಮಧ್ಯಮೋ ಗುಣೈಃ ।
ಕುಂಜರೋ ವಾಹನಾನಾಂ ತು ಸಿಂಹಶ್ಚಾರಣ್ಯವಾಸಿನಾಮ್ ॥೧॥

ಬ್ರಹ್ಮಾ– ಮನುಷ್ಯರಲ್ಲಿ ರಜೋಗುಣಯುಕ್ತರಾದ ಕ್ಷತ್ರಿಯ ರಾಜನು ಶ್ರೇಷ್ಠನು. ಕುದುರೆ, ಆನೆ, ಹೇಸರಗತ್ತೆ ಮುಂತಾದ ವಾಹನಗಳಲ್ಲಿ ಆನೆಯು ಶ್ರೇಷ್ಠವಾದುದು. ಅರಣ್ಯವಾಸಿ ಪ್ರಾಣಿಗಳಲ್ಲಿ ಸಿಂಹವು ಶ್ರೇಷ್ಠವಾದುದು.

ಅವಿಃ ಪಶೂನಾಂ ಸರ್ವೇಷಾಮಾಖುಶ್ಚ ಬಿಲವಾಸಿನಾಮ್ ।
ಗವಾಂ ಗೋವೃಷಭಶ್ಚೈವ ಸ್ತ್ರೀಣಾಂ ಪುರುಷ ಏವ ಚ ॥೨॥

ಪಶುಗಳಲ್ಲಿ ಕುರಿಗಳು ಶ್ರೇಷ್ಠವಾದವು. ಬಿಲದಲ್ಲಿ ವಾಸ ಮಾಡುವ ಪ್ರಾಣಿಗಳಲ್ಲಿ ಸರ್ಪವು (ಇಲಿಯು), ಗೋವುಗಳಲ್ಲಿ ವೃಷಭವು ಶ್ರೇಷ್ಠವಾದುದು. ಸ್ತ್ರೀ-ಪುರುಷರಲ್ಲಿ ಪುರುಷನೇ ಶ್ರೇಷ್ಠನು.

ನ್ಯಗ್ರೋಧೋ ಜಂಬುವೃಕ್ಷಶ್ಚ ಪಿಪ್ಪಲಃ ಶಾಲ್ಮಲಿಸ್ತಥಾ ।
ಶಿಂಶುಪಾ ಮೇಷಶೃಂಗಶ್ಚ ತಥಾ ಕೀಚಕವೇಣವಃ ॥೩॥

ಏತೇ ದ್ರುಮಾಣಾಮಧಿಕಾ ಲೋಕೇಽಸ್ಮಿನ್ ನಾತ್ರ ಸಂಶಯಃ ॥೪॥

ಆಲದ ಮರ, ನೇರಳೆಯ ಮರ, ಅರಳಿ, ಬೂರುಗ, ಅಗರು, ಕುರುಟಿಗ, ಬಿದಿರು ಈ ವೃಕ್ಷಗಳು ಜಗತ್ತಿನ ಎಲ್ಲ ವೃಕ್ಷಗಳಿಗಿಂತಲೂ ಶ್ರೇಷ್ಠವಾದವುಗಳು.

ಹಿಮವಾನ್ ಪಾರಿಯಾತ್ರಶ್ಚ ಸಹ್ಯೋ ವಿಂಧ್ಯಸ್ತ್ರಿಕೂಟವಾನ್ ।
ಶ್ವೇತೋ ನೀಲಶ್ಚ ಭಾಸಶ್ಚ ಕ್ರೌಷ್ಟವಾಂಶ್ಚೈವ ಪರ್ವತಃ ॥೫॥

ಶುಭಸ್ಕಂದೋ ಮಹೇಂದ್ರಶ್ಚ ಮಾಲ್ಯವಾನ್ ಪರ್ವತಸ್ತಥಾ ।
ಏತೇ ಪರ್ವತರಾಜಾನೋ ಗಣಾನಾಂ ಮರುತಸ್ತಥಾ ॥೬॥

ಹಿಮವಂತ, ಪಾರಿಯಾತ್ರ, ಸಹ್ಯ, ವಿಂಧ್ಯ, ತ್ರಿಕೂಟ, ಶ್ವೇತ, ನೀಲ, ಭಾಸ, ಕ್ರೌಷ್ಟವಾನ್ ಎಂಬ ಪರ್ವತ, ಶುಭಸ್ಕಂದ, ಮಹೇಂದ್ರ, ಮಾಲ್ಯವಾನ್ ಎಂಬ ಪರ್ವತಗಳು ಇವೆಲ್ಲ ಪರ್ವತಶ್ರೇಷ್ಠಗಳೆಂದೂ, ಇಂದ್ರಿಯಗಣಗಳಲ್ಲಿ ಪಂಚಪ್ರಾಣರು ಶ್ರೇಷ್ಠರೆಂದು ಕರೆಸಿಕೊಳ್ಳುತ್ತಾರೆ.

ಸೂರ್ಯೋ ಗ್ರಹಾಣಾಮಧಿಪೋ ನಕ್ಷತ್ರಾಣಾಂ ಚ ಚಂದ್ರಮಾಃ ।
ಯಮಃ ಪಿತೃಣಾಮಧಿಪಃ ಸರಿತಾಮಥ ಸಾಗರಃ ॥೭॥

ಅಂಭಸಾಂ ವರುಣೋ ರಾಜಾ ಸತ್ತ್ವಾನಾಂ ಮಿತ್ರ ಉಚ್ಯತೇ ॥೮॥

ಗ್ರಹಗಳಿಗೆ ಸೂರ್ಯನು, ನಕ್ಷತ್ರಗಳಿಗೆ ಚಂದ್ರನು, ಪಿತೃಗಳಿಗೆ ಯಮನು, ನದಿಗಳಿಗೆ ಸಮುದ್ರನು, ಜಲಾಶಯಗಳಿಗೆ ವರುಣನು, ಇಂದ್ರಿಯಗಳಿಗೆ ಮಿತ್ರನು ಒಡೆಯರಾಗಿದ್ದಾರೆ.

ಅರ್ಕೋಽಧಿಪತಿರುಷ್ಣಾನಾಂ ಜ್ಯೋತಿಷಾಮಿಂದುರುಚ್ಯತೇ ।
ಅಗ್ನಿರ್ಭೂತಪತಿರ್ನಿತ್ಯಂ ಬ್ರಾಹ್ಮಣಾನಾಂ ಬೃಹಸ್ಪತಿಃ ॥೯॥

ಉಷ್ಣಪದಾರ್ಥಗಳಿಗೆ ಸೂರ್ಯನು ಅಧಿಪತಿಯು. ಚಂದ್ರನು ನಕ್ಷತ್ರಗಳಿಗೆ, ಎಲ್ಲ ಪ್ರಾಣಿಗಳಿಗೆ ಅಗ್ನಿಯು, ಬ್ರಾಹ್ಮಣರಿಗೆ ಬೃಹಸ್ಪತಿಯು ಅಧಿಪತಿಯು.

ಓಷಧೀನಾಂ ಪತಿಃ ಸೋಮೋ ವಿಷ್ಣುರ್ಬಲವತಾಂ ವರಃ ।
ತ್ವಷ್ಟಾಽಧಿರಾಜೋ ರೂಪಾಣಾಂ ಪಶೂನಾಮೀಶ್ವರಃ ಶಿವಃ ॥೧೦॥

ಓಷಧಿಗಳಿಗೆ ಚಂದ್ರನು, ಬಲಿಷ್ಠರಿಗೆ ವಿಷ್ಣುವು, ಶಿಲ್ಪಿಗಳಿಗೆ ವಿಶ್ವಕರ್ಮನು, ರೂಪಗಳಲ್ಲಿ ಸೂರ್ಯನು ಅಥವಾ ಪಶುಗಳಿಗೆ ಶಿವನು ಒಡೆಯನಾಗಿದ್ದಾನೆ.

ದಕ್ಷಿಣಾನಾಂ ತಥಾ ಯಜ್ಞೋ ವೇದಾನಾಂ ಸಾಮ ಏವ ಚ ।
ದಿಶಾಮುದೀಚೀ ವಿಪ್ರಾಣಾಂ ಸೋಮೋ ರಾಜಾ ಪ್ರತಾಪವಾನ್ ॥೧೧॥

ಯಜ್ಞಗಳಲ್ಲಿ ದಕ್ಷಿಣೆಯು, ವೇದಗಳಲ್ಲಿ ಸಾಮವೇದವು, ದಿಕ್ಕುಗಳಲ್ಲಿ ಉತ್ತರ ದಿಕ್ಕು, ಪ್ರತಾಪಗಳಲ್ಲಿ ಸೋಮನೇ ರಾಜಶ್ರೇಷ್ಠನಾಗಿದ್ದಾನೆ.

ಕುಬೇರಃ ಸರ್ವಯಕ್ಷಾಣಾಂ ದೇವತಾನಾಂ ಪುರಂದರಃ ।
ಏಷ ಭೂತಾಧಿಕಃ ಸರ್ಗಃ ಪ್ರಜಾನಾಂ ಚ ಪ್ರಜಾಪತಿಃ ॥೧೨॥

ಸರ್ವಯಕ್ಷರಲ್ಲಿ ಕುಬೇರನು, ದೇವತೆಗಳಿಗೆ ಪುರಂದರನು ಸ್ವಾಮಿಯು. ಪ್ರಜೆಗಳಿಗೆ ಪ್ರಜಾಪತಿಯು ಸ್ವಾಮಿಯಾಗಿದ್ದಾನೆ. ಇದು ಪ್ರಾಣಿಗಳ ಅಧಿಪತಿಗಳ ಸೃಷ್ಟಿ ಎನಿಸಿದೆ.

ಸರ್ವೇಷಾಮೇವ ಭೂತಾನಾಮಹಂ ಬ್ರಹ್ಮಮಯೋ ಮಹಾನ್ ।
ಭೂತಂ ಪರತರಂ ಮತ್ತೋ ವಿಷ್ಣೋರ್ವಾऽಪಿ ನ ವಿದ್ಯತೇ ॥೧೩॥

ಹೀಗೆ ಸೃಷ್ಟಿಯನ್ನು ಪಡೆಯುವ ಅಧಿಕಾರಿಗಳಲ್ಲಿ ನನ್ನಷ್ಟು ಶ್ರೇಷ್ಠರು ಯಾರೂ ಇರುವುದಿಲ್ಲ (ಚತುರ್ಮುಖ ಬ್ರಹ್ಮನಷ್ಟು). ನನಗಿಂತಲೂ ಅನಂತ ಗುಣಗಳಿಂದ ಶ್ರೇಷ್ಠನಾದವನು ವಿಷ್ಣುವಾಗಿದ್ದಾನೆ. ಇವನೇ ಪರತರ. ಸಮಗ್ರ ಪ್ರಪಂಚದಲ್ಲಿ ಇವನಿಗಿಂತ ಮಿಗಿಲಾದವರು ಯಾರೂ ಇರುವುದಿಲ್ಲ.

ರಾಜಾಧಿರಾಜಃ ಸರ್ವೇಷಾಂ ವಿಷ್ಣುರ್ಬ್ರಹ್ಮಮಯೋ ಮಹಾನ್ ।
ಈಶ್ವರಂ ತಂ ವಿಜಾನೀಮಃ ಸ ವಿಭುಃ ಸ ಪ್ರಜಾಪತಿಃ ॥೧೪॥

ಮಹಾವಿಷ್ಣುವೇ ಗುಣಪರಿಪೂರ್ಣನಾದವನು. ಇವನೇ ರಾಜಾಧಿರಾಜನೂ, ಸರ್ವೇಶ್ವರನೂ, ಎಲ್ಲದಕ್ಕೂ ಕರ್ತೃವೂ, ಇವನಿಗೆ ಯಾರೂ ಕರ್ತೃಗಳು ಇರುವುದಿಲ್ಲ.

ನರಕಿನ್ನರಯಕ್ಷಾಣಾಂ ಗಂಧರ್ವೋರಗರಕ್ಷಸಾಮ್ ।
ದೇವದಾನವನಾಗಾನಾಂ ಸರ್ವೇಷಾಮೀಶ್ವರೋ ಹಿ ಸಃ ॥೧೫॥

ಮನುಷ್ಯರು, ಕಿನ್ನರರು, ಯಕ್ಷರು, ಗಂಧರ್ವರು, ರಾಕ್ಷಸರು, ದೇವತೆಗಳು, ದಾನವರು, ಸರ್ಪಗಳು - ಇವರೆಲ್ಲರಿಗೂ ನಿಯಾಮಕನು ವಿಷ್ಣುವೇ ಆಗಿದ್ದಾನೆ.

ಭದ್ರಾದೇವಾನುಯಾತಾನಾಂ ಸರ್ವಾಸಾಂ ವಾಮಲೋಚನಾ ।
ಮಾಹೇಶ್ವರೀ ಮಹಾದೇವೀ ಪ್ರೋಚ್ಯತೇ ಪಾರ್ವತೀ ತ್ರಿಧಾ ॥೧೬॥

ಉಮಾಂ ದೇವೀಂ ವಿಜಾನೀತ ನಾರೀಣಾಮುತ್ತಮಾಂ ಶುಭಾಮ್ ।
ರತೀನಾಂ ವಸುಮತ್ಯಸ್ತು ಸ್ತ್ರೀಣಾಮಪ್ಸರಸಸ್ತಥಾ ॥೧೭॥

ಪರಮಮಂಗಳರಾದ ದೇವತೆಗಳನ್ನು ಅನುಸರಿಸುವ ವಾಮಲೋಚನೆಯರಾದ ಸಮಸ್ತ ಸ್ತ್ರೀಯರಿಗೂ ಮಾಹೇಶ್ವರಿ ಎನಿಸಿದ ಮಹಾದೇವಿಯಾದ ಪಾರ್ವತಿಯು ಶ್ರೇಷ್ಠಳೆಂದು ಕರೆಸಿಕೊಳ್ಳುತ್ತಾಳೆ. ಉಮಾದೇವಿಯು ನಾರಿಯರಲ್ಲೇ ಉತ್ತಮಳೆಂದು ತಿಳಿದುಕೊಳ್ಳಿರಿ. ರತಿಯರಲ್ಲಿ, ಆಭರಣಭೂಷಿತರಾದ ಸ್ತ್ರೀಯರಲ್ಲಿ ಅಪ್ಸರೆಯರನ್ನು ಶ್ರೇಷ್ಠರೆಂದು ತಿಳಿಯಿರಿ.

ಧರ್ಮಕಾಮಾಶ್ಚ ರಾಜಾನೋ ಬ್ರಾಹ್ಮಣಾ ಧರ್ಮಲಕ್ಷಣಾಃ ।
ತಸ್ಮಾದ್ ರಾಜಾ ದ್ವಿಜಾತೀನಾಂ ಪ್ರಯತೇತೇಹ ರಕ್ಷಣೇ ॥೧೮॥

ರಾಜರುಗಳು ಧರ್ಮ-ಕಾಮಗಳ ಲಕ್ಷಣವುಳ್ಳವರು. ಬ್ರಾಹ್ಮಣರು ಧರ್ಮದ ಲಕ್ಷಣವುಳ್ಳವರು. ಆದ್ದರಿಂದ ರಾಜರು ಧರ್ಮವೇ ಸೇತುವೆಯಾಗಿ ಉಳ್ಳ ಬ್ರಾಹ್ಮಣರನ್ನು ರಕ್ಷಿಸಲು ಪ್ರಯತ್ನಿಸಬೇಕು.

ರಾಜ್ಞಾಂ ಹಿ ವಿಷಯೇ ಯೇಷಾಮವಸೀದಂತಿ ಸಾಧವಃ ।
ಹೀನಾಸ್ತೇ ಸ್ವಗುಣೈಃ ಸರ್ವೈಃ ಪ್ರೇತ್ಯಾರ್ವಾಙ್ಮಾರ್ಗಗಾಮಿನಃ ॥೧೯॥

ಯಾವ ರಾಜನ ರಾಜ್ಯದಲ್ಲಿ ಸಾಧುಗಳಾದ ಬ್ರಾಹ್ಮಣರು ದುಃಖಿತರಾಗಿದ್ದಾರೋ, ಅಸಮಾಧಾನವನ್ನು ಹೊಂದಿದ್ದಾರೋ ಅಂತಹ ಬ್ರಾಹ್ಮಣರ ಅಸಮಾಧಾನಕ್ಕೆ ತುತ್ತಾದ ರಾಜರು ತಮ್ಮ ರಾಜೋಚಿತವಾದ ಗುಣಗಳಿಂದ ಹೀನರಾಗಿ ಸತ್ತ ಬಳಿಕ ದುರ್ಗತಿಯನ್ನು ಹೊಂದುತ್ತಾರೆ.

ರಾಜ್ಞಾಂ ತು ವಿಷಯೇ ಯೇಷಾಂ ಸಾಧವಃ ಪರಿರಕ್ಷಿತಾಃ ।
ತೇಽಸ್ಮಿನ್ ಲೋಕೇ ಪ್ರಮೋದಂತೇ ಪ್ರೇತ್ಯ ಚಾನಂತ್ಯಮೇವ ಚ ॥೨೦॥

ಪ್ರಾಪ್ನುವಂತಿ ಮಹಾತ್ಮಾನ ಇತಿ ವಿತ್ತ ದ್ವಿಜರ್ಷಭಾಃ ।
ಅತ ಊರ್ಧ್ವಂ ಪ್ರವಕ್ಷ್ಯಾಮಿ ನಿಯತಂ ಧರ್ಮಲಕ್ಷಣಮ್ ॥೨೧॥

ಬ್ರಾಹ್ಮಣರೇ, ಯಾವ ರಾಜನ ವಿಷಯದಲ್ಲಿ ಬ್ರಾಹ್ಮಣರು ರಕ್ಷಕರಾಗಿ ನಿಲ್ಲುತ್ತಾರೋ ಆ ರಾಜರು ಲೋಕದಲ್ಲಿಯೂ ಆನಂದ ಹೊಂದುತ್ತಾರೆ, ಗತಿಸಿದ ಬಳಿಕವೂ ಸದ್ಗತಿಯನ್ನು ಹೊಂದುತ್ತಾರೆ. ಇನ್ನು ಮುಂದೆ ನಿಯತವಾದ ಧರ್ಮದ ಲಕ್ಷಣವನ್ನು ಹೇಳುತ್ತೇನೆ, ಕೇಳಿ.

ಅಹಿಂಸಾಲಕ್ಷಣೋ ಧರ್ಮೋ ಹಿಂಸಾ ಚಾಧರ್ಮಲಕ್ಷಣಾ ।
ಪ್ರಕಾಶಲಕ್ಷಣಾ ದೇವಾ ಮನುಷ್ಯಾಃ ಕರ್ಮಲಕ್ಷಣಾಃ ॥೨೨॥

ಅಹಿಂಸೆಯೇ ಶ್ರೇಷ್ಠವಾದ ಧರ್ಮವೆನಿಸಿದೆ. ಯಜ್ಞಾದಿ ಕರ್ಮಗಳನ್ನು ಮಾಡುವುದು ಮನುಷ್ಯರ ಲಕ್ಷಣವೆನಿಸಿದೆ. ಹಿಂಸೆಯು ಅಧರ್ಮವೆನಿಸಿದರೆ ಅಹಿಂಸೆಯು ಧರ್ಮವೆನಿಸಿದೆ.

ಶಬ್ದಲಕ್ಷಣಮಾಕಾಶಂ ವಾಯುಸ್ತು ಸ್ಪರ್ಶಲಕ್ಷಣಃ ।
ಜ್ಯೋತಿಷಾಂ ಲಕ್ಷಣಂ ರೂಪಮಾಪಶ್ಚ ರಸಲಕ್ಷಣಾಃ ॥೨೩॥

ಶಬ್ದವು ಆಕಾಶದ ಲಕ್ಷಣವು. ಸ್ಪರ್ಶವು ವಾಯುವಿನ ಲಕ್ಷಣವು. ರೂಪವು ತೇಜಸ್ಸಿನ ಲಕ್ಷಣವು. ರಸವು ನೀರಿನ ಲಕ್ಷಣವು.

ಧರಣೀ ಸರ್ವಭೂತಾನಾಂ ಪೃಥಿವೀ ಗಂಧಲಕ್ಷಣಾ ।
ಸ್ವರವ್ಯಂಜನಸಂಸ್ಕಾರಾ ಭಾರತೀ ಸತ್ಯಲಕ್ಷಣಾ ॥೨೪॥

ಸಮಸ್ತ ಪ್ರಾಣಿಗಳನ್ನು ಧರಿಸಿರುವ ಭೂಮಿಯು ಗಂಧದ ಲಕ್ಷಣವನ್ನು ಹೊಂದಿದೆ. ಸ್ವರ-ವ್ಯಂಜನಗಳಿಂದ ಸಂಸ್ಕೃತವಾದ ಮಾತು ಶಬ್ದವೆಂಬ ಲಕ್ಷಣವನ್ನು ಹೊಂದಿದೆ.

ಮನಸೋ ಲಕ್ಷಣಂ ಚಿಂತಾ ತಥೋಕ್ತಾ ಬುದ್ಧಿರನ್ವಯಾ ।
ಮನಸಾ ಚಿಂತಯಾನೋಽರ್ಥಾನ್ ಬುದ್ಧ್ಯಾ ಚೈವ ವ್ಯವಸ್ಯತಿ ॥೨೫॥

ಚಿಂತೆಯು ಯುಕ್ತಾಯುಕ್ತ ಮನಸ್ಸಿನ ಲಕ್ಷಣವಾಗಿದೆ. ಪದಾರ್ಥಗಳಿಗೆ ಅನುಸಾರವಾಗಿ ಜ್ಞಾನವನ್ನು ಹೊಂದುವುದು ಬುದ್ಧಿಯ ಲಕ್ಷಣವಾಗಿದೆ. ಮನಸ್ಸಿನಿಂದ ಪದಾರ್ಥಗಳ ಬಗ್ಗೆ ಯೋಚಿಸುತ್ತಾ, ಪದಾರ್ಥಗಳನ್ನು ಬುದ್ಧಿಯಿಂದ ನಿರ್ಣಯಿಸಿಕೊಳ್ಳುತ್ತಾನೆ.

ಬುದ್ಧಿರ್ಹಿ ವ್ಯವಸಾಯೇನ ಲಕ್ಷ್ಯತೇ ನಾತ್ರ ಸಂಶಯಃ ।
ಲಕ್ಷಣಂ ಮಹತೋ ಧ್ಯಾನಮವ್ಯಕ್ತಂ ಸಾಧುಲಕ್ಷಣಮ್ ॥೨೬॥

ಕಾರ್ಯಶೀಲತೆಯಿಂದ ಬುದ್ಧಿಯು ಲಕ್ಷ್ಯಕ್ಕೆ ಬರುತ್ತದೆ. ಇದರಲ್ಲಿ ಯಾವ ಸಂಶಯವೂ ಬೇಡ. ಬುದ್ಧಿಯ ಮತ್ತೊಂದು ಲಕ್ಷಣವೇ ಧ್ಯಾನ. ಬಾಹ್ಯ ಪ್ರಪಂಚವನ್ನು ಮೀರಿ ಅವ್ಯಕ್ತ ಪ್ರಪಂಚವೆನಿಸಿದ ಪರಮಾತ್ಮನನ್ನು ಧ್ಯಾನಿಸುವುದೇ ಸಜ್ಜನರ ಲಕ್ಷಣವೆನಿಸಿದೆ.

ಪ್ರವೃತ್ತಿಲಕ್ಷಣೋ ಯೋಗೋ ಜ್ಞಾನಂ ಸನ್ನ್ಯಾಸಲಕ್ಷಣಮ್ ।
ತಸ್ಮಾಜ್ಜ್ಞಾನಂ ಪುರಸ್ಕೃತ್ಯ ಸನ್ನ್ಯಸೇದಿಹ ಬುದ್ಧಿಮಾನ್ ॥೨೭॥

ಪ್ರವೃತ್ತಿಯು ಕರ್ಮಯೋಗದ ಲಕ್ಷಣವಾಗಿದೆ. ಜ್ಞಾನವು ಸಂನ್ಯಾಸದ ಲಕ್ಷಣವಾಗಿದೆ. ಆದ್ದರಿಂದ ಬುದ್ಧಿವಂತನಾದವನು ಜ್ಞಾನಲಕ್ಷಣವನ್ನು ಆಶ್ರಯಿಸಿ ಸಂನ್ಯಾಸವನ್ನು ಸ್ವೀಕರಿಸಬೇಕು.

ಸನ್ನ್ಯಾಸೀ ಜ್ಞಾನಸಂಯುಕ್ತಃ ಪ್ರಾಪ್ನೋತಿ ಪರಮಾಂ ಗತಿಮ್ ।
ಅತೀತದ್ವಂದ್ವಮಭ್ಯೇತಿ ತಮೋಮೃತ್ಯುಜರಾತಿಗಮ್ ॥೨೮॥

ಜ್ಞಾನಯುಕ್ತನಾದ ಸಂನ್ಯಾಸಿಯು ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ಅತೀತನಾಗಿ, ಅಜ್ಞಾನ, ಮುಪ್ಪು, ಸಾವುಗಳನ್ನು ದಾಟಿ, ಸರ್ವೋತ್ತಮನಾದ ಭಗವಂತನನ್ನು ಹೊಂದುತ್ತಾನೆ.

ಧರ್ಮಲಕ್ಷಣಸಂಯುಕ್ತಮುಕ್ತಂ ವೋ ವಿಧಿವತ್ ತಥಾ ॥೨೯॥

ಹೀಗೆ ಲಕ್ಷಣಸಂಯುಕ್ತವಾದ ಧರ್ಮದ ಮಹತ್ವವನ್ನು ವಿಧಿವತ್ತಾಗಿ ತಿಳಿಸಿದ್ದೇನೆ.

ಗುಣಾನಾಂ ಗ್ರಹಣಂ ಸಮ್ಯಗ್ ವಕ್ಷ್ಯಾಮ್ಯಹಮತಃ ಪರಮ್ ॥೩೦॥

ಇನ್ನು ಮುಂದೆ ಯಾವ ಯಾವ ಗುಣಗಳನ್ನು ಯಾವ ಯಾವ ಇಂದ್ರಿಯಗಳು ಗ್ರಹಿಸುತ್ತವೆ ಎಂಬುದನ್ನು ಹೇಳುತ್ತೇನೆ.

ಪಾರ್ಥಿವೋ ಯಸ್ತು ಗಂಧೋ ವೈ ಘ್ರಾಣೇನೈವ ಸ ಗೃಹ್ಯತೇ ।
ಘ್ರಾಣಸ್ಥಶ್ಚ ತಥಾ ವಾಯುರ್ಗಂಧಜ್ಞಾನೇ ವಿಧೀಯತೇ ॥೩೧॥

ಪೃಥಿವಿಯ ಗುಣವಾದ ಗಂಧವನ್ನು ಮೂಗು ಗ್ರಹಿಸುತ್ತದೆ. ಮೂಗಿನಲ್ಲಿರುವ ವಾಯುವು ಗಂಧವನ್ನು ಆಘ್ರಾಣಿಸಲು ಅನುವು ಮಾಡಿಕೊಡುತ್ತದೆ.

ಅಬಾಶ್ರಯೋ ರಸೋ ನಿತ್ಯಂ ಜಿಹ್ವಯಾ ಸ ತು ಗೃಹ್ಯತೇ ।
ಜಿಹ್ವಾಸ್ಥಶ್ಚ ತಥಾ ಸೋಮೋ ರಸಜ್ಞಾನೇ ವಿಧೀಯತೇ ॥೩೨॥

ರಸವು ನೀರನ್ನು ಆಶ್ರಯಿಸಿಕೊಂಡಿದೆ. ಆ ರಸವು ಜಿಹ್ವೇಂದ್ರಿಯದಿಂದ ಗ್ರಹಿಸಲ್ಪಡುತ್ತದೆ. ಆ ಜಿಹ್ವೆಗೆ ಚಂದ್ರನು ನಿಯಾಮಕನಾಗಿ ರಸಜ್ಞಾನಕ್ಕೆ ಅನುವು ಮಾಡಿಕೊಡುತ್ತಾನೆ.

ಜ್ಯೋತಿಷಶ್ಚ ಗುಣೋ ರೂಪಂ ಚಕ್ಷುಷಾ ತಚ್ಚ ಗೃಹ್ಯತೇ ।
ಚಕ್ಷುಸ್ಥಶ್ಚ ತಥಾऽऽದಿತ್ಯೋ ರೂಪಜ್ಞಾನೇ ವಿಧೀಯತೇ ॥೩೩॥

ರೂಪವು ತೇಜಸ್ಸಿನ ಗುಣವಾಗಿದೆ. ಅದನ್ನು ಕಣ್ಣು ಗ್ರಹಿಸುತ್ತದೆ. ಕಣ್ಣಿನಲ್ಲಿರುವ ಸೂರ್ಯನು ರೂಪಜ್ಞಾನವನ್ನು ಹೊಂದಲು ಸಹಾಯ ಮಾಡುತ್ತಾನೆ.

ವಾಯವ್ಯಶ್ಚ ತಥಾ ಸ್ಪರ್ಶಸ್ತ್ವಚಾ ಪ್ರಜ್ಞಾಯತೇ ಚ ಸಃ ।
ತ್ವಕ್ಸ್ಥಶ್ಚೈವ ತಥಾ ವಾಯುಃ ಸ್ಪರ್ಶಜ್ಞಾನೇ ವಿಧೀಯತೇ ॥೩೪॥

ವಾಯುವು ಸ್ಪರ್ಶವೆಂಬ ಗುಣವನ್ನು ಹೊಂದಿದೆ. ಚರ್ಮವು ಅದನ್ನು ಗ್ರಹಿಸುತ್ತದೆ. ಚರ್ಮದಲ್ಲಿರುವ ಅಹಂಕಾರಿಕ ವಾಯುವು ಸ್ಪರ್ಶಾನುಭವಕ್ಕೆ ಅನುವು ಮಾಡಿಕೊಡುತ್ತಾನೆ.

ಆಕಾಶಸ್ಯ ಗುಣೋ ಘೋಷಃ ಶ್ರೋತ್ರೇಣ ಸ ತು ಗೃಹ್ಯತೇ ।
ಶ್ರೋತ್ರಸ್ಥಾಶ್ಚ ದಿಶಃ ಸರ್ವಾಃ ಶಬ್ದಜ್ಞಾನೇ ಪ್ರಕೀರ್ತಿತಾಃ ॥೩೫॥

ಆಕಾಶದ ಗುಣವು ಶಬ್ದವು. ಕಿವಿಯು ಶಬ್ದವನ್ನು ಗ್ರಹಿಸುತ್ತದೆ. ಕಿವಿಯಲ್ಲಿರುವ ದಿಗ್ದೇವತೆಗಳು ಶಬ್ದಜ್ಞಾನವನ್ನು ಹೊಂದಲು ಸಹಾಯ ಮಾಡುತ್ತಾರೆ.

ಮನಸಸ್ತು ಗುಣಶ್ಚಿಂತಾ ಪ್ರಜ್ಞಯಾ ಸಾ ತು ಗೃಹ್ಯತೇ ।
ಹೃದಿಸ್ಥಶ್ಚೇತನಾಧಾತುಃ ಮನೋಜ್ಞಾನೇ ವಿಧೀಯತೇ ॥೩೬॥

ಚಿಂತಿಸುವುದು ಮನಸ್ಸಿನ ಗುಣವಾಗಿದೆ. ಬುದ್ಧಿಯು ಅದನ್ನು ಗ್ರಹಿಸುತ್ತದೆ. ಹೃದಯದಲ್ಲಿರುವ ಆತ್ಮನು ಚಿಂತನೆಯ ಕಾರ್ಯದಲ್ಲಿ ಸಹಾಯ ಮಾಡುತ್ತಾನೆ.

ಬುದ್ಧಿರಧ್ಯವಸಾಯೇನ ಧ್ಯಾನೇನ ಚ ಮಹಾಂಸ್ತಥಾ ।
ನಿಶ್ಚಿತ್ಯ ಗ್ರಹಣಂ ನಿತ್ಯಮವ್ಯಕ್ತಂ ನಾತ್ರ ಸಂಶಯಃ ॥೩೭॥

ನಿರ್ಣಯದ ಮೂಲಕವಾಗಿ ಎಂದರೆ ಸಕಲ ಜಗತ್ತಿಗೆ ಮೂಲಕಾರಣವನ್ನು ನಿಶ್ಚಯಿಸಿ ಗ್ರಹಿಸುವುದು ಬುದ್ಧಿಯ ಲಕ್ಷಣವಾಗಿದೆ. ನಿರ್ಣಯಿಸುವುದು, ಧ್ಯಾನ ಮಾಡುವುದು ಬುದ್ಧಿ ತತ್ತ್ವದ ಗುಣವಾಗಿದ್ದರೆ, ಇದನ್ನು ನಿಯಮಿಸುವುದು ಪ್ರಕೃತಿ ತತ್ತ್ವವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಅಲಿಂಗಗ್ರಹಣೋ ನಿತ್ಯಃ ಕ್ಷೇತ್ರಜ್ಞೋ ನಿರ್ಗುಣಾತ್ಮಕಃ ।
ತಸ್ಮಾದಲಿಂಗ ಕ್ಷೇತ್ರಜ್ಞಃ ಕೇವಲಂ ಜ್ಞಾನಲಕ್ಷಣಃ ॥೩೮॥

ಪರಮಾತ್ಮನನ್ನು ನಿಶ್ಚಿತವಾದ ಹೇತುವಿನಿಂದ ತಿಳಿಯಲಾಗುವುದಿಲ್ಲ. ಕ್ಷೇತ್ರಜ್ಞನೆನಿಸಿದ ಪರಮಾತ್ಮನು ಪ್ರಕೃತಿಯ ಯಾವ ಗುಣಗಳಿಂದಲೂ ನಿರ್ಣಯಿಸಲ್ಪಡುವವನಲ್ಲ. ಆದ್ದರಿಂದ ಅಲಿಂಗ ಎಂದು ಕ್ಷೇತ್ರಜ್ಞನ ಹೆಸರು. ಕೇವಲ ಜ್ಞಾನದಿಂದಲೇ ಗಮ್ಯನಾಗಿದ್ದಾನೆ.

ಅವ್ಯಕ್ತಂ ಕ್ಷೇತ್ರಮುದ್ದಿಷ್ಟಂ ಗುಣಾನಾಂ ಪ್ರಭವಾಪ್ಯಯಮ್ ।
ಸದಾ ಪಶ್ಯಾಮ್ಯಹಂ ಲೀನಂ ವಿಜಾನಾಮಿ ಶೃಣೋಮಿ ಚ ॥೩೯॥

ಅವ್ಯಕ್ತ ತತ್ತ್ವದಲ್ಲಿ ಅಡಗಿದ ಮಹದಾದಿ ಜಗತ್ತನ್ನು ಚತುರ್ಮುಖ ಬ್ರಹ್ಮನಾದ ನಾನು ಯಾವಾಗಲೂ ನೋಡುತ್ತಿದ್ದೇನೆ, ಇದರ ಬಗ್ಗೆ ಕೇಳುತ್ತಿದ್ದೇನೆ. ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ಭಗವಂತನ ಅನುಗ್ರಹದಿಂದ ನೋಡುವವನು ನಾನೇ.

ಪುರುಷಸ್ತದ್ವಿಜಾನೀತೇ ತಸ್ಮಾತ್ ಕ್ಷೇತ್ರಜ್ಞ ಉಚ್ಯತೇ ।
ಗುಣವೃತ್ತಂ ತಥಾ ಕೃತ್ಸ್ನಂ ಕ್ಷೇತ್ರಜ್ಞಃ ಪರಿಪಶ್ಯತಿ ॥೪೦॥

ನನಗಿಂತಲೂ ಮಿಗಿಲಾದ, ಅವ್ಯಕ್ತ ತತ್ತ್ವಾಭಿಮಾನಿನಿಯಾದ ಲಕ್ಷ್ಮೀದೇವಿಯನ್ನು ನಾರಾಯಣನು ತಿಳಿದಿದ್ದಾನೆ. ಆದ್ದರಿಂದಲೇ ಭಗವಂತನಿಗೆ ಕ್ಷೇತ್ರಜ್ಞ ಎಂದು ಹೆಸರು. ಸಮಗ್ರ ಗುಣಾತ್ಮಕವಾದ ಪ್ರಪಂಚವನ್ನು ಕ್ಷೇತ್ರಜ್ಞನೊಬ್ಬನೇ ಚೆನ್ನಾಗಿ ನೋಡುತ್ತಾನೆ.

ಆದಿಮಧ್ಯಾವಸಾನಂ ತಂ ಸೃಜ್ಯಮಾನಮಚೇತನಮ್ ।
ನ ಗುಣಾ ವಿದುರಾತ್ಮಾನಂ ಸೃಜ್ಯಮಾನಾಃ ಪುನಃ ಪುನಃ ॥೪೧॥

ಮತ್ತೂ ಮತ್ತೂ ಭಗವಂತನಿಂದ ಸೃಷ್ಟಿಯನ್ನು ಪಡೆಯುವ ಆದಿ, ಮಧ್ಯ, ಅವಸಾನಗಳಿಂದ ತುಂಬಿರುವ ಜಡಪ್ರಪಂಚದ ಗುಣಗಳು ಜಡವಾಗಿರುವುದರಿಂದಲೇ ತಮ್ಮ ಬಗ್ಗೆ ಅರಿವನ್ನು ಹೊಂದಿರುವುದಿಲ್ಲ.

ನ ಸತ್ತ್ವಂ ವೇತ್ತಿ ವೈ ಕಶ್ಚಿತ್ ಕ್ಷೇತ್ರಜ್ಞಸ್ತ್ವೇವ ವಿಂದತಿ ।
ಗುಣಾನಾಂ ಗುಣಭೂತಾನಾಂ ಯತ್ ಪರಂ ಪರತೋ ಮಹತ್ ॥

ಪ್ರಾಣಿಗಳ ಯಾವ ಸಮುದಾಯವೂ ಸತ್ತ್ವಾದಿ ಗುಣಗಳಿಂದ ಉತ್ಪನ್ನವಾದ ಮಹದಾದಿ ತತ್ತ್ವಗಳನ್ನು ತಿಳಿಯಲು ಸಮರ್ಥವಾಗಿರುವುದಿಲ್ಲ. ಪರಬ್ರಹ್ಮನೊಬ್ಬನೇ ಈ ಎಲ್ಲ ವ್ಯಾಪಾರಗಳನ್ನು ತಿಳಿದಿದ್ದಾನೆ. ಆ ಪರಬ್ರಹ್ಮನು ಮುಕ್ತ ಬ್ರಹ್ಮಾದಿ ದೇವತೆಗಳಿಗಿಂತಲೂ ಶ್ರೇಷ್ಠನೆನಿಸಿದ್ದಾನೆ.

ತಸ್ಮಾದ್ ಗುಣಾಂಶ್ಚ ತತ್ತ್ವಂ ಚ ಪರಿತ್ಯಜ್ಯೇಹ ತತ್ತ್ವವಿತ್ ।
ಕ್ಷೀಣದೋಷೋ ಗುಣಾನ್ ಹಿತ್ವಾ ಕ್ಷೇತ್ರಜ್ಞಂ ಪ್ರವಿಶತ್ಯಥ ॥೪೩॥

ಆ ಭಗವಂತನ ಅನುಗ್ರಹದಿಂದಲೇ ಯೋಗ್ಯನಾದ ಚೇತನನು ಪ್ರಾಕೃತಿಕ ಗುಣಗಳನ್ನು, ಪಂಚಭೂತಗಳ ದೇಹವನ್ನು ತ್ಯಾಗ ಮಾಡಿ, ದೋಷಗಳಿಂದ ಮುಕ್ತನಾಗಿ ಭಗವಂತನ ಅನುಗ್ರಹದಿಂದ ಅವನನ್ನೇ ಹೊಂದುತ್ತಾನೆ.

ನಿರ್ದ್ವಂದ್ವೋ ನಿರ್ನಮಸ್ಕಾರೋ ನಿಃಸ್ವಧಾಕಾರ ಏವ ಚ ।
ಅಚಲಶ್ಚಾನಿಕೇತಶ್ಚ ಕ್ಷೇತ್ರಜ್ಞಃ ಸ ಪರೋ ಭುವಿ ॥೪೪॥

ಎಂದಿಗೂ ದ್ವಂದ್ವಕ್ಕೆ ಸಿಲುಕದ, ಯಾರಿಗೂ ನಮಸ್ಕರಿಸಲು ಅರ್ಹನಲ್ಲದ, ಸ್ವಾಹಾ, ಸ್ವಧಾಕಾರಗಳನ್ನು ಮಾಡಬೇಕೆಂಬ ವಿಧಿಯಿಂದ ಮುಕ್ತನಾದ, ಅಚಲನಾದ, ಮತ್ತೊಬ್ಬರ ಆಶ್ರಯವನ್ನು ಪಡೆಯದಿರುವ, ಕ್ಷೇತ್ರಜ್ಞನೆನಿಸಿದ ಪರಮಾತ್ಮನೇ ಈ ಜಗತ್ತಿನಲ್ಲಿ ಸರ್ವೋತ್ತಮನೆನಿಸಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಕ್ಷೇತ್ರಜ್ಞಕಥನಂ ನಾಮ
ಚತುಶ್ಚತ್ವಾರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೈದನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು, ತಮ್ಮ ತಮ್ಮ ಜಾತಿಗಳಲ್ಲಿ ಶ್ರೇಷ್ಠ ವಸ್ತು ಯಾವುದು ಎಂಬುದನ್ನು ಪ್ರತಿಪಾದನೆ ಮಾಡುವ ಮೂಲಕ ಜ್ಞಾನದ ನಿತ್ಯತ್ವವನ್ನು, ಭಗವದ್ಧ್ಯಾನವೇ ಶ್ರೇಯಸ್ಸಾಧನ ಎಂದೂ ನಿರೂಪಿಸಿದುದು.

ಬ್ರಹ್ಮಾ

ಯದಾದಿಮಧ್ಯಪರ್ಯಂತಂ ಗ್ರಹಣೋಪಾಯಮೇವ ಚ ।
ನಾಮಲಕ್ಷಣಸಂಯುಕ್ತಂ ಸರ್ವಂ ವಕ್ಷ್ಯಾಮಿ ತತ್ತ್ವತಃ ॥೧॥

ಬ್ರಹ್ಮಾ– ಮಹರ್ಷಿಗಳೇ, ನಿಮ್ಮನ್ನು ಕುರಿತು ನಾನು ಸಮಸ್ತ ಪದಾರ್ಥಗಳ ನಾಮ ಲಕ್ಷಣಸಹಿತವಾದ ಆದಿ, ಮಧ್ಯ, ಅಂತಗಳನ್ನು, ಅವುಗಳನ್ನು ಗ್ರಹಿಸುವ ಉಪಾಯವನ್ನು ವಿಧಿವತ್ತಾಗಿ ಹೇಳುತ್ತೇನೆ.

ಅಹಂ ಪೂರ್ವಂ ತತೋ ರಾತ್ರಿರ್ಮಾಸಾಃ ಶುಕ್ಲಾದಯಃ ಸ್ಮೃತಾಃ ।
ಶ್ರವಿಷ್ಠಾದೀನಿಚರ್ಕ್ಷಾಣಿ ಋತವಃ ಶಿಶಿರಾದಯಃ (ಶ್ರವಣಾದೀನಿ) ॥೨॥

ಹಗಲು ಮೊದಲು ಹುಟ್ಟಿತು, ಅನಂತರ ರಾತ್ರಿ ಹುಟ್ಟಿತು. ಮಾಸಗಳು ಶುಕ್ಲ ಪಕ್ಷದಿಂದ ಆರಂಭವಾದವು. ನಕ್ಷತ್ರಗಳು ಶ್ರವಣಾ ನಕ್ಷತ್ರದಿಂದ ಪ್ರಾರಂಭಗೊಂಡವು. ಋತುಗಳು ಶಿಶಿರ ಋತುವಿನಿಂದ ಪ್ರಾರಂಭವಾದವು.

ಭೂಮಿರಾದಿಸ್ತು ಗಂಧಾನಾಂ ರಸಾನಾಮಾಪ ಏವ ಚ ।
ರೂಪಾಣಾಮಾದಿರಗ್ನಿಸ್ತು ಸ್ಪರ್ಶಾದಿರ್ವಾಯುರುಚ್ಯತೇ ॥೩॥

ಶಬ್ದಸ್ಯಾದಿಸ್ತಥಾऽऽಕಾಶಮೇಷ ಭೂತಗುಣೋತ್ತರಃ ॥೪॥

ಗಂಧಗಳಿಗೆ ಮೂಲಕಾರಣವಾದುದು ಭೂಮಿಯು. ರಸಗಳಿಗೆ ಮೂಲವಾದುದು ನೀರು. ರೂಪಗಳಿಗೆ ಮೂಲ ಜ್ಯೋತಿರೂಪನಾದ ಆದಿತ್ಯ. ಸ್ಪರ್ಶಗಳಿಗೆ ಆದಿಕಾರಣವಾಯು. ಶಬ್ದಗಳಿಗೆ ಆದಿ ಕಾರಣ ಆಕಾಶ. ಹೀಗೆ ತನ್ಮಾತ್ರಗಳೆಲ್ಲವೂ ಪಂಚಭೂತಗಳಿಂದ ಉತ್ಪನ್ನವಾಗಿವೆ.

ಅತಃ ಪರಂ ಪ್ರವಕ್ಷ್ಯಾಮಿ ಭೂತಾನಾಮಾದಿಮುತ್ತಮಮ್ ॥೫॥

ಇನ್ನು ಮುಂದೆ ಭೂತಗಳ ಉತ್ತಮವಾದ ಗುಣಗಳನ್ನು, ಆದಿಯನ್ನೂ ಹೇಳುತ್ತೇನೆ.

ಆದಿತ್ಯೋ ಜ್ಯೋತಿಷಾಮಾದಿರಗ್ನಿರ್ಭೂತಾದಿರುಚ್ಯತೇ ।
ಸಾವಿತ್ರೀ ಸರ್ವವಿದ್ಯಾನಾಂ ದೇವತಾನಾಂ ಪ್ರಜಾಪತಿಃ ॥೬॥

ಸಮಸ್ತ ತೇಜಸ್ಸುಗಳಿಗೆ ಸೂರ್ಯನೇ ಆದಿಯು. ಎಲ್ಲ ಭೂತಗಳಿಗೆ ಜಠರಾಗ್ನಿಯು ಆದಿಯು. ಎಲ್ಲ ವಿದ್ಯೆಗಳಿಗೂ ಸಾವಿತ್ರಿಯೇ ಆದಿಯು. ಸಕಲ ದೇವತೆಗಳಿಗೂ ಚತುರ್ಮುಖ ಬ್ರಹ್ಮನೇ ಆದಿಯಾಗಿದ್ದಾನೆ.

ಓಂಕಾರಃ ಸರ್ವವೇದಾನಾಂ ವಚಸಾಂ ಪ್ರಾಣ ಉಚ್ಯತೇ ।
ಇತ್ಯಸ್ಮಿನ್ ನಿಧನಂ ಲೋಕೇ ಸರ್ವಂ ಸಾವಿತ್ರ್ಯನೂಚ್ಯತೇ ॥೭॥

ವೇದಗಳಿಗೆ ಓಂಕಾರ, ವಾಕ್‌ಗಳಿಗೆ ಪ್ರಾಣ ಆದಿಯಾಗಿದೆ. ಪ್ರಪಂಚದಲ್ಲಿ ನಿಯತವಾದ ಯಾವ ಉಚ್ಚಾರಣೆ ಇದೆಯೋ ಅದೆಲ್ಲದಕ್ಕೂ ಸಾವಿತ್ರಿ ಎನ್ನುತ್ತಾರೆ.

ಗಾಯತ್ರೀ ಚ್ಛಂದಸಾಮಾದಿಃ ಪಶೂನಾಮಜ ಉಚ್ಯತೇ ।
ಗಾವಶ್ಚತುಷ್ಪದಾಮಾದಿರ್ಮನುಷ್ಯಾಣಾಂ ದ್ವಿಜಾತಯಃ ॥೮॥

ಛಂದಸ್ಸುಗಳಲ್ಲಿ ಗಾಯತ್ರಿ ಛಂದಸ್ಸು ಮೊದಲನೆಯದ್ದು. ಪ್ರಜೆಗಳಿಗೆ ಸೃಷ್ಟಿಯೇ ಮೊದಲನೆಯದ್ದು. ನಾಲ್ಕು ಕಾಲುಗಳುಳ್ಳ ಪ್ರಾಣಿಗಳಿಗೆ ಗೋವು ಮೊದಲನೆಯದು. ಮನುಷ್ಯರಿಗೆ ಬ್ರಾಹ್ಮಣರು ಶ್ರೇಷ್ಠರು.

ಶ್ಯೇನಃ ಪತತ್ರಿಣಾಮಾದಿರ್ಯಜ್ಞಾನಾಂ ಹೋತ್ರಮುತ್ತಮಮ್ ।
ಪ್ರಸರ್ಪಿಣಾಂ ತು ಸರ್ವೇಷಾಂ ಶ್ರೇಷ್ಠಃ ಸರ್ಪೋ ದ್ವಿಜೋತ್ತಮಾಃ ॥೯॥

ಬ್ರಾಹ್ಮಣಶ್ರೇಷ್ಠರೇ, ಪಕ್ಷಿಗಳಲ್ಲಿ ಗಿಡುಗ, ಯಜ್ಞಗಳಲ್ಲಿ ಅಗ್ನಿಹೋತ್ರ, ತೆವಳಿ ನಡೆಯುವ ಪ್ರಾಣಿಗಳಲ್ಲಿ ಸರ್ಪವು ಶ್ರೇಷ್ಠವು.

ಕೃತಮಾದಿರ್ಯುಗಾನಾಂ ಚ ಸರ್ವೇಷಾಂ ನಾತ್ರ ಸಂಶಯಃ ।
ಹಿರಣ್ಯಂ ಸರ್ವರತ್ನಾನಾಮೋಷಧೀನಾಂ ಯವಾಸ್ತಥಾ ॥೧೦॥

ಯುಗಗಳಲ್ಲಿ ಕೃತಯುಗವು, ರತ್ನಗಳಲ್ಲಿ ಸುವರ್ಣವು, ಓಷಧಿಗಳಲ್ಲಿ ಗೋಧಿಯು ಶ್ರೇಷ್ಠವಾದುದು. ಇದರಲ್ಲಿ ಸಂಶಯವಿಲ್ಲ.

ಸರ್ವೇಷಾಂ ಭಕ್ಷ್ಯಭೋಜ್ಯಾನಾಮನ್ನಂ ಪರಮಮುಚ್ಯತೇ ।
ದ್ರವಾಣಾಂ ಚೈವ ಸರ್ವೇಷಾಂ ಪೇಯಾನಾಮಾಪ ಉತ್ತಮಾಃ ॥೧೧॥

ಭಕ್ಷ್ಯ-ಭೋಜ್ಯಗಳಲ್ಲಿ ಅನ್ನವು ಶ್ರೇಷ್ಠ, ದ್ರವಪದಾರ್ಥಗಳಲ್ಲಿ ಮತ್ತು ಪಾನೀಯಗಳಲ್ಲಿ ನೀರೇ ಶ್ರೇಷ್ಠವಾದುದು.

ಸ್ಥಾವರಾಣಾಂ ಚ ಭೂತಾನಾಂ ಸರ್ವೇಷಾಮವಿಶೇಷತಃ ।
ಬ್ರಹ್ಮವೃಕ್ಷಃ ಸದಾ ಪುಣ್ಯಃ ಪ್ಲಕ್ಷಃ ಪ್ರಥಮಜಃ ಸ್ಮೃತಃ ॥೧೨॥

ಸ್ಥಾವರಗಳಲ್ಲಿ ಪುಷ್ಕರ ಕ್ಷೇತ್ರ ಅಥವಾ ಬ್ರಹ್ಮವೃಕ್ಷವು, ದ್ವೀಪಗಳಲ್ಲಿ ಪ್ಲಕ್ಷವು ಪ್ರಥಮತಃ ಉತ್ಪನ್ನವಾದುದು.

ಅಹಂ ಪ್ರಜಾಪತೀನಾಂ ಚ ಸರ್ವೇಷಾಂ ನಾತ್ರ ಸಂಶಯಃ ।
ಮಮ ವಿಷ್ಣೂರಚಿಂತ್ಯಾತ್ಮಾ ಸ್ವಯಂಭೂರಿತಿ ಸಂಸ್ಮೃತಃ ॥೧೩॥

ಪ್ರಜಾಪತಿಗಳಿಗೆ ನಾನು ಮೊದಲಿಗನು, ಇದರಲ್ಲಿ ಯಾವ ಸಂಶಯವೂ ಇಲ್ಲ. ನನಗಿಂತಲೂ ಮೊದಲಿಗನಾದವನು ಅಚಿಂತ್ಯ ಮಹಿಮನಾದ ವಿಷ್ಣುವೇ ಆಗಿದ್ದಾನೆ. ಸ್ವಯಂಭೂ ಶಬ್ದದಿಂದ ಕರೆಯಲು ಅವನೇ ಅರ್ಹನಾಗಿದ್ದಾನೆ.

ಪರ್ವತಾನಾಂ ಮಹಾಮೇರುಃ ಸರ್ವೇಷಾಮಗ್ರಜಃ ಸ್ಮೃತಃ ।
ದಿಶಾಂ ಚೋಪದಿಶಾಂ ಚೋರ್ಧ್ವಂ ದಿಗ್ಜಾತಾ ಪ್ರಥಮಾ ತಥಾ ॥೧೪॥

ಪರ್ವತಗಳಲ್ಲಿ ಮೇರುಪರ್ವತವು ಮೊದಲನೆಯದ್ದು. ಆದುದರಿಂದಲೇ ಮಹಾಮೇರುವಿಗೆ ಪರ್ವತಗಳ ಅಗ್ರಜನೆಂದು ಹೇಳುತ್ತಾರೆ. ದಿಕ್ಕುಗಳಲ್ಲಿ ಪೂರ್ವ ದಿಕ್ಕು ಶ್ರೇಷ್ಠವಾದುದು ಮತ್ತು ಮೊದಲನೆಯದ್ದು.

ತಥಾ ಗಂಗಾ ನದೀನಾಂ ತು ಸರ್ವಾಸಾಮಗ್ರಜಾ ಸ್ಮೃತಾ ।
ಸರಸಾಂ ಸೋದಪಾನಾನಾಂ ಸರ್ವೇಷಾಂ ಸಾಗರಃ ಸ್ಮೃತಃ ॥೧೫॥

ನದಿಗಳಲ್ಲಿ ಗಂಗೆಯು ಎಲ್ಲ ನದಿಗಳಿಗಿಂತ ಶ್ರೇಷ್ಠವೆನಿಸಿದೆ. ಸರೋವರಗಳಲ್ಲಿ, ಜಲಾಶಯಗಳಲ್ಲಿ ಸಾಗರವು ಶ್ರೇಷ್ಠವೆನಿಸಿದೆ.

ದೇವದಾನವಭೂತಾನಾಂ ಪಿಶಾಚೋರಗರಾಕ್ಷಸಾಮ್ ।
ನರಕಿನ್ನರಯಕ್ಷಾಣಾಂ ಸರ್ವೇಷಾಮೀಶ್ವರಃ ಪ್ರಭುಃ ॥೧೬॥

ದೇವ-ದಾನವ-ಭೂತ-ಪಿಶಾಚ-ಉರಗ-ರಾಕ್ಷಸ-ಮನುಷ್ಯ-ಕಿನ್ನರ-ಯಕ್ಷ ಇವರೆಲ್ಲರಿಗೂ ಶಂಕರನೇ ನಿಯಾಮಕನಾಗಿದ್ದಾನೆ.

ಆದಿರ್ವಿಶ್ವಸ್ಯ ಜಗತೋ ವಿಷ್ಣುರ್ಬ್ರಹ್ಮಮಯೋ ಮಹಾನ್ ।
ಭೂತಂ ಪರತರಂ ತಸ್ಮಾತ್ ತ್ರೈಲೋಕ್ಯೇ ನೇಹ ವಿದ್ಯತೇ ॥೧೭॥

ಗುಣಪರಿಪೂರ್ಣನಾದ ವಿಷ್ಣುವು ಸಮಸ್ತ ಜಗತ್ತಿಗೆ ಆದಿಕಾರಣನು. ಮೂರು ಲೋಕಗಳಲ್ಲಿಯೂ ವಿಷ್ಣುವಿಗಿಂತ ಅಧಿಕರಾದವರು ಬೇರೆ ಯಾರೂ ಇರುವುದಿಲ್ಲ.

ಆಶ್ರಮಾಣಾಂ ಚ ಸರ್ವೇಷಾಂ ಗಾರ್ಹಸ್ಥ್ಯಂ ನಾತ್ರ ಸಂಶಯಃ ।
ಲೋಕಾನಾಮಾದಿರವ್ಯಕ್ತಃ ಸರ್ವಸ್ಯಾಂತಸ್ತದೇವ ಚ ॥೧೮॥

ಛಂದಸ್ಸುಗಳಲ್ಲಿ ಗಾಯತ್ರಿ ಛಂದಸ್ಸು ಮೊದಲನೆಯದ್ದು. ಪ್ರಜೆಗಳಿಗೆ ಸೃಷ್ಟಿಯೇ ಮೊದಲನೆಯದ್ದು. ನಾಲ್ಕು ಕಾಲುಗಳುಳ್ಳ ಪ್ರಾಣಿಗಳಿಗೆ ಗೋವು ಮೊದಲನೆಯದು. ಮನುಷ್ಯರಿಗೆ ಬ್ರಾಹ್ಮಣರು ಶ್ರೇಷ್ಠರು.

ಶ್ಯೇನಃ ಪತತ್ರಿಣಾಮಾದಿರ್ಯಜ್ಞಾನಾಂ ಹೋತ್ರಮುತ್ತಮಮ್ ।
ಪ್ರಸರ್ಪಿಣಾಂ ತು ಸರ್ವೇಷಾಂ ಶ್ರೇಷ್ಠಃ ಸರ್ಪೋ ದ್ವಿಜೋತ್ತಮಾಃ ॥೯॥

ಬ್ರಾಹ್ಮಣಶ್ರೇಷ್ಠರೇ, ಪಕ್ಷಿಗಳಲ್ಲಿ ಗಿಡುಗ, ಯಜ್ಞಗಳಲ್ಲಿ ಅಗ್ನಿಹೋತ್ರ, ತೆವಳಿ ನಡೆಯುವ ಪ್ರಾಣಿಗಳಲ್ಲಿ ಸರ್ಪವು ಶ್ರೇಷ್ಠವು.

ಕೃತಮಾದಿರ್ಯುಗಾನಾಂ ಚ ಸರ್ವೇಷಾಂ ನಾತ್ರ ಸಂಶಯಃ ।
ಹಿರಣ್ಯಂ ಸರ್ವರತ್ನಾನಾಮೋಷಧೀನಾಂ ಯವಾಸ್ತಥಾ ॥೧೦॥

ಯುಗಗಳಲ್ಲಿ ಕೃತಯುಗವು, ರತ್ನಗಳಲ್ಲಿ ಸುವರ್ಣವು, ಓಷಧಿಗಳಲ್ಲಿ ಗೋಧಿಯು ಶ್ರೇಷ್ಠವಾದುದು. ಇದರಲ್ಲಿ ಸಂಶಯವಿಲ್ಲ.

ಸರ್ವೇಷಾಂ ಭಕ್ಷ್ಯಭೋಜ್ಯಾನಾಮನ್ನಂ ಪರಮಮುಚ್ಯತೇ ।
ದ್ರವಾಣಾಂ ಚೈವ ಸರ್ವೇಷಾಂ ಪೇಯಾನಾಮಾಪ ಉತ್ತಮಾಃ ॥೧೧॥

ಭಕ್ಷ್ಯ-ಭೋಜ್ಯಗಳಲ್ಲಿ ಅನ್ನವು ಶ್ರೇಷ್ಠ, ದ್ರವಪದಾರ್ಥಗಳಲ್ಲಿ ಮತ್ತು ಪಾನೀಯಗಳಲ್ಲಿ ನೀರೇ ಶ್ರೇಷ್ಠವಾದುದು.

ಸ್ಥಾವರಾಣಾಂ ಚ ಭೂತಾನಾಂ ಸರ್ವೇಷಾಮವಿಶೇಷತಃ ।
ಬ್ರಹ್ಮವೃಕ್ಷಃ ಸದಾ ಪುಣ್ಯಃ ಪ್ಲಕ್ಷಃ ಪ್ರಥಮಜಃ ಸ್ಮೃತಃ ॥೧೨॥

ಸ್ಥಾವರಗಳಲ್ಲಿ ಪುಷ್ಕರ ಕ್ಷೇತ್ರ ಅಥವಾ ಬ್ರಹ್ಮವೃಕ್ಷವು, ದ್ವೀಪಗಳಲ್ಲಿ ಪ್ಲಕ್ಷವು ಪ್ರಥಮತಃ ಉತ್ಪನ್ನವಾದುದು.

ಅಹಂ ಪ್ರಜಾಪತೀನಾಂ ಚ ಸರ್ವೇಷಾಂ ನಾತ್ರ ಸಂಶಯಃ ।
ಮಮ ವಿಷ್ಣುರಚಿಂತ್ಯಾತ್ಮಾ ಸ್ವಯಂಭೂರಿತಿ ಸಂಸ್ಮೃತಃ ॥೧೩॥

ಪ್ರಜಾಪತಿಗಳಿಗೆ ನಾನು ಮೊದಲಿಗನು, ಇದರಲ್ಲಿ ಯಾವ ಸಂಶಯವೂ ಇಲ್ಲ. ನನಗಿಂತಲೂ ಮೊದಲಿಗನಾದವನು ಅಚಿಂತ್ಯ ಮಹಿಮನಾದ ವಿಷ್ಣುವೇ ಆಗಿದ್ದಾನೆ. ಸ್ವಯಂಭೂ ಶಬ್ದದಿಂದ ಕರೆಯಲು ಅವನೇ ಅರ್ಹನಾಗಿದ್ದಾನೆ.

ಪರ್ವತಾನಾಂ ಮಹಾಮೇರುಃ ಸರ್ವೇಷಾಮಗ್ರಜಃ ಸ್ಮೃತಃ ।
ದಿಶಾಂ ಚೋಪದಿಶಾಂ ಚೋರ್ಧ್ವಂ ದಿಗ್ಜಾತಾ ಪ್ರಥಮಾ ತಥಾ ॥೧೪॥

ಪರ್ವತಗಳಲ್ಲಿ ಮೇರುಪರ್ವತವು ಮೊದಲನೆಯದ್ದು. ಆದುದರಿಂದಲೇ ಮಹಾಮೇರುವಿಗೆ ಪರ್ವತಗಳ ಅಗ್ರಜನೆಂದು ಹೇಳುತ್ತಾರೆ. ದಿಕ್ಕುಗಳಲ್ಲಿ ಪೂರ್ವ ದಿಕ್ಕು ಶ್ರೇಷ್ಠವಾದುದು ಮತ್ತು ಮೊದಲನೆಯದ್ದು.

ತಥಾ ಗಂಗಾ ನದೀನಾಂ ತು ಸರ್ವಾಸಾಮಗ್ರಜಾ ಸ್ಮೃತಾ ।
ಸರಸಾಂ ಸೋದಪಾನಾನಾಂ ಸರ್ವೇಷಾಂ ಸಾಗರಃ ಸ್ಮೃತಃ ॥೧೫॥

ನದಿಗಳಲ್ಲಿ ಗಂಗೆಯು ಎಲ್ಲ ನದಿಗಳಿಗಿಂತ ಶ್ರೇಷ್ಠವೆನಿಸಿದೆ. ಸರೋವರಗಳಲ್ಲಿ, ಜಲಾಶಯಗಳಲ್ಲಿ ಸಾಗರವು ಶ್ರೇಷ್ಠವೆನಿಸಿದೆ.

ದೇವದಾನವಭೂತಾನಾಂ ಪಿಶಾಚೋರಗರಾಕ್ಷಸಾಮ್ ।
ನರಕಿನ್ನರಯಕ್ಷಾಣಾಂ ಸರ್ವೇಷಾಮೀಶ್ವರಃ ಪ್ರಭುಃ ॥೧೬॥

ದೇವ-ದಾನವ-ಭೂತ-ಪಿಶಾಚ-ಉರಗ-ರಾಕ್ಷಸ-ಮನುಷ್ಯ-ಕಿನ್ನರ-ಯಕ್ಷ ಇವರೆಲ್ಲರಿಗೂ ಶಂಕರನೇ ನಿಯಾಮಕನಾಗಿದ್ದಾನೆ.

ಆದಿರ್ವಿಶ್ವಸ್ಯ ಜಗತೋ ವಿಷ್ಣುರ್ಬ್ರಹ್ಮಮಯೋ ಮಹಾನ್ ।
ಭೂತಂ ಪರತರಂ ತಸ್ಮಾತ್ ತ್ರೈಲೋಕ್ಯೇ ನೇಹ ವಿದ್ಯತೇ ॥೧೭॥

ಗುಣಪರಿಪೂರ್ಣನಾದ ವಿಷ್ಣುವು ಸಮಸ್ತ ಜಗತ್ತಿಗೆ ಆದಿಕಾರಣನು. ಮೂರು ಲೋಕಗಳಲ್ಲಿಯೂ ವಿಷ್ಣುವಿಗಿಂತ ಅಧಿಕರಾದವರು ಬೇರೆ ಯಾರೂ ಇರುವುದಿಲ್ಲ.

ಆಶ್ರಮಾಣಾಂ ಚ ಸರ್ವೇಷಾಂ ಗಾರ್ಹಸ್ಥ್ಯಂ ನಾತ್ರ ಸಂಶಯಃ ।
ಲೋಕಾನಾಮಾದಿರವ್ಯಕ್ತಃ ಸರ್ವಸ್ಯಾಂತಸ್ತದೇವ ಚ ॥೧೮॥

ಸಮಸ್ತ ಆಶ್ರಮಗಳಿಗೆ ಮೊದಲನೆಯದ್ದು ಶ್ರೇಷ್ಠವಾದ ಗೃಹಸ್ಥಾಶ್ರಮವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಸಮಸ್ತ ಜಗತ್ತುಗಳೂ ಕೂಡ ಮೂಲ ಪ್ರಕೃತಿಯಿಂದ ಅಭಿವ್ಯಕ್ತಿಯನ್ನು ಹೊಂದುವುದರಿಂದ, ಮೂಲಪ್ರಕೃತಿಯಲ್ಲಿಯೇ ನಾಶವನ್ನು ಹೊಂದುವುದರಿಂದ ಸಮಸ್ತ ಜಗತ್ತಿಗೂ ಅವ್ಯಕ್ತ ತತ್ತ್ವವೆನಿಸಿದ ಮೂಲ ಪ್ರಕೃತಿಯು ಶ್ರೇಷ್ಠವೆನಿಸಿದೆ.

ಅಹಾನ್ಯಸ್ತಮಯಾಂತಾನಿ ಉದಯಾಂತಾ ಚ ಶರ್ವರೀ ।
ಸುಖಸ್ಯಾಂತಂ ತಥಾ ದುಃಖಂ ದುಃಖಸ್ಯಾಂತಂ ತಥಾ ಸುಖಮ್ ॥೧೯॥

ಹಗಲಿಗೆ ಸೂರ್ಯಾಸ್ತಮಾನವೇ ಕೊನೆ ಎನಿಸಿದೆ. ರಾತ್ರಿಗೆ ಸೂರ್ಯೋದಯವೇ ಕೊನೆ ಎನಿಸಿದೆ. ಸುಖದ ಅಂತ ದುಃಖವು, ದುಃಖದ ಅಂತವೇ ಸುಖವು.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ॥೨೦॥

ಎಲ್ಲ ವಿಧವಾದ ಸಂಗ್ರಹಗಳಿಗೂ ವಿನಾಶವಿದೆ. ಉನ್ನತ ಸ್ಥಿತಿಗೆ ಅಧಃಪತನವೇ ಕೊನೆ ಎನಿಸಿದೆ. ಸೇರುವಿಕೆಗೆ ವಿಯೋಗವು ಕೊನೆ ಎನಿಸಿದೆ. ಜೀವನಕ್ಕೆ ಮರಣವೇ ಕೊನೆ ಎನಿಸಿದೆ.

ಸರ್ವಂ ಕೃತಂ ವಿನಾಶಾಂತಂ ಜಾತಸ್ಯ ಮರಣಂ ಧ್ರುವಮ್ ।
ಅಶಾಶ್ವತಂ ಹಿ ಲೋಕೇಽಸ್ಮಿನ್ ಸದಾ ಸ್ಥಾವರಜಂಗಮಮ್ ॥೨೧॥

ಸೃಷ್ಟಿಯನ್ನು ಪಡೆದ ವಸ್ತುಗಳೆಲ್ಲವೂ ವಿನಾಶದಲ್ಲಿಯೇ ಪರ್ಯವಸಾನ ಹೊಂದುತ್ತವೆ. ಹುಟ್ಟಿದವನಿಗೆ ಮರಣವು ನಿಶ್ಚಯ. ಜಗತ್ತಿನಲ್ಲಿರುವ ಸ್ಥಾವರ-ಜಂಗಮ, ಎಲ್ಲವೂ ಅಶಾಶ್ವತ.

ಇಷ್ಟಂ ದತ್ತಂ ತಪೋಽಧೀತಂ ವ್ರತಾನಿ ನಿಯಮಾಶ್ಚ ಯೇ ।
ಸರ್ವಮೇತದ್ ವಿನಾಶಾಂತಂ ಜ್ಞಾನಸ್ಯಾಂತೋ ನ ವಿದ್ಯತೇ ॥೨೨॥

ಯಜ್ಞ, ದಾನ, ಅಧ್ಯಯನ, ವ್ರತ, ನಿಯಮ - ಇವೆಲ್ಲವೂ ವಿನಾಶ ಹೊಂದುತ್ತವೆ. ಆದರೆ ಜ್ಞಾನಕ್ಕೆ ಕೊನೆಯಿಲ್ಲ.

ತಸ್ಮಾಜ್ಜ್ಞಾನೇನ ಶುದ್ಧೇನ ಪ್ರಸನ್ನಾತ್ಮಾ ಸಮಾಹಿತಃ ।
ನಿರ್ಮಮೋ ನಿರಹಂಕಾರೋ ಮುಚ್ಯತೇ ಸರ್ವಪಾಪ್ಮಭಿಃ ॥೨೩॥

ಆದ್ದರಿಂದ ಪ್ರಶಾಂತಮನಸ್ಕನಾಗಿ ಯಾವನು ಜಿತೇಂದ್ರಿಯನಾಗಿ, ಅಹಂಕಾರ ರಹಿತನಾಗಿ, ಶುದ್ಧಾತ್ಮನೆನಿಸಿದ ಪರಮಾತ್ಮನ ಜ್ಞಾನವನ್ನು ಸಂಗ್ರಹಿಸಿಕೊಳ್ಳುತ್ತಾನೋ ಅವನು ಸಮಸ್ತ ವಿಧವಾದ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಜ್ಞಾನಸ್ಯೋತ್ತಮತ್ವಕಥನಂ ನಾಮ
ಪಂಚಚತ್ವಾರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತಾರನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಋಷಿಗಳನ್ನು ಕುರಿತು ಶರೀರವು ಕಾಲಚಕ್ರದಂತೆ ಸರ್ವನಾಶಕವಾಗಿದೆ ಎಂದು ಹೇಳುವ ಮೂಲಕ ಗೃಹಸ್ಥಧರ್ಮವು ಶ್ರೇಯಸ್ಸಾಧನವೆಂದು ನಿರೂಪಿಸಿದುದು.

ಬ್ರಹ್ಮಾ

ಬುದ್ಧ್ಯಾಧಾರಂ ಮನಸ್ತಂಭಮಿಂದ್ರಿಯಗ್ರಾಮವರ್ಧನಮ್ ।
ಮಹಾಭೂತಾರವಿಷ್ಕಂಭಂ ನಿಮೇಷಪರಿವೇಷಣಮ್ ॥೧॥

ಬ್ರಹ್ಮಾ– ಮಹರ್ಷಿಗಳೇ, ಬುದ್ಧಿಯೇ ಆಧಾರವಾಗುಳ್ಳ, ಮನಸ್ಸೆಂಬ ಸ್ತಂಭವುಳ್ಳ, ಇಂದ್ರಿಯಗಳೆಂಬ ಅಭಿವೃದ್ಧಿಯುಳ್ಳ, ಪಂಚಮಹಾಭೂತಗಳ ಅಲೆಗಳ ತಡೆಗಳುಳ್ಳ, ನಿಮೇಷವೆಂಬ ಸುತ್ತಳತೆಯಿಂದ ಕೂಡಿದ;

ಜರಾಶೋಕಸಮಾವಿಷ್ಟಂ ವ್ಯಾಧಿವ್ಯಸನಪಂಜರಮ್ ।
ದೇಶಕಾಲವಿಚಾರೀದಂ ಶ್ರಮವ್ಯಾಯಾಮನಿಃಸ್ವನಮ್ ॥೨॥

ಮುಪ್ಪು-ಶೋಕಗಳಿಂದ ಆವೃತವಾದ, ರೋಗಗಳಿಗೂ ವ್ಯಸನಗಳಿಗೂ ಆಶ್ರಯ ಪಂಜರದಂತಿರುವ, ದೇಶ-ಕಾಲಗಳಿಗೆ ಅನುಸಾರವಾಗಿ ಸಂಚರಿಸುತ್ತಿರುವ, ಶ್ರಮ ಮತ್ತು ವ್ಯಾಯಾಮಗಳೆಂಬ ಶಬ್ದಗಳಿಂದ ತುಂಬಿರುವ;

ಅಹೋರಾತ್ರಪರಿಕ್ಷೇಪಂ ಶೀತೋಷ್ಣಪರಿಮಂಡಲಮ್ ।
ಸುಖದುಃಖಸಮಶ್ಲೇಷಂ ಕ್ಷುತ್ಪಿಪಾಸಾವಕೀಲನಮ್ ॥೩॥

ರಾತ್ರಿ ಮತ್ತು ಹಗಲು ಎಂಬ ಸಂಚಲನ ಶಕ್ತಿಯಿಂದ ಕೂಡಿದ, ಶೀತೋಷ್ಣಗಳಿಂದ ಆವೃತವಾದ, ಸುಖ-ದುಃಖಗಳೆಂಬ ಬಂಧನವುಳ್ಳ, ಹಸಿವು-ಬಾಯಾರಿಕೆಗಳೆಂಬ ಕೀಲುಗಳಿಂದ ಕೂಡಿರುವ;

ಛಾಯಾತಪವಿಲೇಖಿಂ ಚ ನಿಮೇಷೋನ್ಮೇಷವಿಹ್ವಲಮ್ ।
ಶೋಕಮೋಹಜರಾಕೀರ್ಣಂ ವರ್ತಮಾನಮಚೇತನಮ್ ॥೪॥

ಛಾಯೆ ಮತ್ತು ಆತಪಗಳೆಂಬ (ನೆರಳು-ಬಿಸಿಲು) ಕೆತ್ತನೆಯುಳ್ಳ, ಕಣ್ಣುಮುಚ್ಚುವಿಕೆ ತೆರೆಯುವಿಕೆ ಎಂಬ ವ್ಯಾಕುಲತೆಗಳುಳ್ಳ, ಶೋಕ-ಮೋಹ-ಜರೆಗಳಿಂದ ಕೆದರಿದ, ಅಚೇತನವಾಗಿದ್ದರೂ ಚಲಿಸುತ್ತಿರುವ;

ಮಾಸಾರ್ಧಮಾಸಗುಣಿತಂ ವಿಷಮಂ ಲೋಕಸಂಚರಮ್ ।
ತಮೋನಿಯತಪಂಕಂ ಚ ರಜೋವೇಗಪ್ರವರ್ತಕಮ್ ॥೫॥

ಪಕ್ಷ-ಮಾಸಗಳ ಮೂಲಕ ಗಣನೆಯಾಗುತ್ತಿರುವ, ಯಾವಾಗಲೂ ವಿಷಮಾವಸ್ಥೆಯಲ್ಲಿ ಸಂಚರಿಸುತ್ತಿರುವ, ತಮೋಗುಣದ ಕೆಸರಿನಲ್ಲಿ ಮುಳುಗಿರುವ, ರಜೋಗುಣದಿಂದ ವೇಗವಾಗಿ ಸಂಚರಿಸುತ್ತಿರುವ;

ಸತ್ತ್ವಾಲಂಕಾರದೀಪ್ತಂ ಚ ಗುಣಸಂಘಾತಮಂಡಲಮ್ ।
ಸಾರವಿಗ್ರಹನಾಭೀಕಂ ಶೋಕಂಸಘಾತವರ್ತಕಮ್ ॥೬॥

ಸತ್ತ್ವಗುಣವೆಂಬ ಅಲಂಕಾರದಿಂದ ಬೆಳಗುತ್ತಿರುವ, ತ್ರಿಗುಣಗಳ ಸಮುದಾಯ ಮಂಡಲದಿಂದ ಶೋಭಿತವಾದ, ಸೌಂದರ್ಯದಿಂದ ಕೂಡಿದಮ ವಿಗ್ರಹವೆಂಬ ನಾಭಿಯಿಂದ ಸಹಿತವಾದ, ಶೋಕಗಳ ಸಮುದಾಯವೆಂಬ ಸುಳಿಗಳುಳ್ಳ;

ಕ್ರಿಯಾಕಾರಣಸಂಯುಕ್ತಂ ರಾಗವಿಸ್ತಾರಮಾಯತಮ್ ।
ಲೋಭೇಪ್ಸಾಪರಸಂಘಾತ-ವಿವಿಕ್ತಜ್ಞಾನಸಂಭವಮ್ ॥೭॥

ಕ್ರಿಯೆಗಳು- ಅದಕ್ಕೆ ಸಂಬಂಧಪಟ್ಟ ಕಾರಣಗಳಿಂದ ತುಂಬಿರುವ, ಮೋಹಗಳೆಂಬ ವಿಸ್ತಾರವಾದ ಪ್ರದೇಶವುಳ್ಳ, ಲೋಭ-ತೃಷ್ಣೆಗಳೆಂಬ ಮಹಾಹೊಡೆತಗಳಿಂದ ವಿಭಿನ್ನವಾದ ಜ್ಞಾನಗಳನ್ನು ಪಡೆದು ಹುಟ್ಟನ್ನು ಪಡೆಯುತ್ತಿರುವ;

ಭಯಮೋಹಪರೀವಾರಂ ಭೂತಸಮ್ಮೋಹಕಾರಕಮ್ ।
ಆನಂದಪ್ರೀತಿಚಾರಂ ಚ ಕಾಮಕ್ರೋಧಪರಿಗ್ರಹಮ್ ॥೮॥

ಭಯ ಮತ್ತು ಮೋಹಗಳೆಂಬ ಪರಿವಾರಗಳಿಂದ ಕೂಡಿರುವ, ಪ್ರಾಣಿಗಳನ್ನು ಮೋಹಗೊಳಿಸುವ ಶಕ್ತಿಯುಳ್ಳ, ಆನಂದ ಮತ್ತು ಪ್ರೀತಿಯ ವಿಷಯವಾಗಿ ಸಂಚರಿಸುತ್ತಿರುವ, ಕಾಮ-ಕ್ರೋಧಗಳೆಂಬ ಸ್ವೀಕಾರಗಳುಳ್ಳ;

ಮಹದಾದಿವಿಶೇಷಾಂತಮಸಕ್ತಂ ಪ್ರಭವಾಪ್ಯಯಮ್ ।
ಮನೋಜವಮವಿಶ್ರಾಂತಂ ಕಾಲಚಕ್ರಂ ಪ್ರವರ್ತತೇ ॥೯॥

ಮಹತತ್ತ್ವೇ ಮೊದಲಾದ ವಿಶೇಷ ಗುಣಗಳಿಂದ ಕೊನೆಗೊಳ್ಳುವ, ಅಸಕ್ತವಾದ, ಹುಟ್ಟು-ಸಾವುಗಳಿಗೆ ತುತ್ತಾಗುವ, ಮನಸ್ಸಿನ ವೇಗವುಳ್ಳ, ಯಾವಾಗಲೂ ಸಾವನ್ನು ಹೊಂದದ, ಕಾಲಚಕ್ರವು ಪ್ರವೃತ್ತಿಯನ್ನು ಹೊಂದುತ್ತಿರುತ್ತದೆ.

ಏತದ್ ದ್ವಂದ್ವಸಮಾಯುಕ್ತಂ ಕಾಲಚಕ್ರಮಚೇತನಮ್ ।
ವಿಸೃಜನ್ ಸಂಕ್ಷಿಪಂಶ್ಚಾಪಿ ಬೋಧಯನ್ ಸ್ವಾಪಯನ್ ಜಗತ್ ॥೧೦॥

ಈ ರಾಗ-ದ್ವೇಷಾದಿ ದ್ವಂದ್ವಗಳಿಂದ ಕೂಡಿದ ಜಡವೆಂಬ ದೇಹದ ಕಾಲಚಕ್ರವು ದೇವತೆಗಳೇ ಮೊದಲಾದ ಜಗತ್ತನ್ನು ಸೃಷ್ಟಿಸುತ್ತದೆ, ನಾಶಪಡಿಸುತ್ತದೆ, ಬೋಧಿಸುತ್ತದೆ, ಜಗತ್ತಿಗೆ ಅಜ್ಞಾನವನ್ನೂ ನೀಡುತ್ತದೆ.

ಕಾಲಚಕ್ರಪ್ರವೃತ್ತಿಂ ಚ ನಿವೃತ್ತಿಂ ಚೈವ ತತ್ತ್ವತಃ ।
ಯಸ್ತು ವೇದ ನರೋ ನಿತ್ಯಂ ನ ಸ ಭೂತೇಷು ಮುಹ್ಯತಿ ॥೧೧॥

ಯಾವ ಮನುಷ್ಯನು ಕಾಲಚಕ್ರದ ಪ್ರವೃತ್ತಿಯನ್ನು, ನಿವೃತ್ತಿಯನ್ನು ತಾತ್ವಿಕವಾಗಿ ಮನನ ಮಾಡುತ್ತಾನೋ ಅವನು ಎಂದಿಗೂ ಮೋಹಕ್ಕೆ ತುತ್ತಾಗುವುದಿಲ್ಲ.

ವಿಮುಕ್ತಃ ಸರ್ವಸಂಕ್ಲೇಶೈಃ ಸರ್ವದ್ವಂದ್ವಾತಿಗೋ ಮುನಿಃ ।
ವಿಮುಕ್ತಃ ಸರ್ವಪಾಪೇಭ್ಯಃ ಪ್ರಾಪ್ನೋತಿ ಪರಮಾಂ ಗತಿಮ್ ॥೧೨॥

ಕಾಲಚಕ್ರದ ಪ್ರವೃತ್ತಿ-ನಿವೃತ್ತಿಗಳನ್ನು ಅರಿತ ವ್ಯಕ್ತಿಯು ಎಲ್ಲ ವಿಧವಾದ ಸುಖ-ದುಃಖಾದಿ ದ್ವಂದ್ವಗಳಿಂದ, ಸಮಸ್ತ ಪಾಪಗಳಿಂದ ಮುಕ್ತನಾಗಿ ಪರಮಶ್ರೇಷ್ಠವಾದ ಮುಕ್ತಿಯನ್ನೇ ಹೊಂದುತ್ತಾನೆ.

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋಽಥ ಭಿಕ್ಷುಕಃ ।
ಚತ್ವಾರ ಆಶ್ರಮಾಃ ಪ್ರೋಕ್ತಾಃ ಸರ್ವೇ ಗಾರ್ಹಸ್ಥ್ಯಮೂಲಕಾಃ ॥೧೩॥

ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬ ನಾಲ್ಕು ಆಶ್ರಮಗಳು ಏನು ಹಿಂದೆ ಹೇಳಲ್ಪಟ್ಟಿವೆ, ಇವೆಲ್ಲಾ ಆಶ್ರಮಗಳಿಗೂ ಮೂಲವಾದದ್ದು ಗೃಹಸ್ಥಾಶ್ರಮವು.

ಯಃ ಕಶ್ಚಿದಿಹ ಲೋಕೇ ಚ ಹ್ಯಾಶ್ರಮಃ ಸಂಪ್ರಕೀರ್ತಿತಃ ।
ತಸ್ಯಾಂತಗಮನಂ ಜ್ಞೇಯಂ ಕೀರ್ತಿರೇಷಾ ಸನಾತನೀ ॥೧೪॥

ಈ ಜಗತ್ತಿನಲ್ಲಿ ಯಾವ ಯಾವ ಆಶ್ರಮಗಳಿವೆಯೋ ಆ ಆಶ್ರಮಗಳ ಗುರಿಯನ್ನು ತಿಳಿಯಬೇಕು. ಗುರಿ ತಿಳಿಯುವುದೇ ಜೀವನದ ಶ್ರೇಷ್ಠವಾದ ಕೀರ್ತಿ ಎನಿಸಿದೆ.

ಸಂಸ್ಕಾರೈಃ ಸಂಸೃತಃ ಪೂರ್ವಂ ಯಥಾವಚ್ಚರಿತವ್ರತಃ ।
ಜಾತೌ ಗುಣವಿಶಿಷ್ಟಾಯಾಂ ಸಮಾವರ್ತೇತ ವೇದವಿತ್ ॥೧೫॥

ಉಪನಯನವೇ ಮೊದಲಾದ ಎಲ್ಲ ವಿಧವಾದ ಸಂಸ್ಕಾರಗಳಿಂದ ಕೂಡಿ, ವೇದೋಕ್ತವಾದ ವಿಧಿಯಿಂದ ಅಧ್ಯಯನವನ್ನು ಮಾಡಿ, ಗುಣಗಳಿಂದ ತುಂಬಿದ ಜಾತಿಯಲ್ಲಿ ಹುಟ್ಟಿದವನಾಗಿ, ವೇದಾಧ್ಯಯನವನ್ನು ಮಾಡಿ, ಯೋಗ್ಯವಾದ ಕಾಲದಲ್ಲಿ ಕನ್ಯೆಯನ್ನು ವಿವಾಹ ಮಾಡಿಕೊಳ್ಳಬೇಕು.

ಸ್ವದಾರನಿರತೋ ನಿತ್ಯಂ ಶಿಷ್ಟಾಚಾರೋ ಜಿತೇಂದ್ರಿಯಃ ।
ಪಂಚಭಿಶ್ಚ ಮಹಾಯಜ್ಞೈಃ ಶ್ರದ್ಧಾನೋ ಯಜೇದಿಹ ॥೧೬॥

ನಂತರ ತನ್ನ ಪತ್ನಿಯಲ್ಲಿ ಅನುರಾಗದಿಂದ ಇರುತ್ತಾ, ಜಿತೇಂದ್ರಿಯನಾಗಿ, ಶಿಷ್ಟಾಚಾರಯುಕ್ತನಾಗಿ, ದೇವ-ಪಿತೃ-ಅತಿಥಿ-ಋಷಿ-ಭೂತ ಎಂಬ ಐದು ಯಜ್ಞಗಳ ಮೂಲಕ ಭಗವಂತನನ್ನು ಆರಾಧಿಸಬೇಕು.

ದೇವತಾತಿಥಿಶಿಷ್ಟಾಶೀ ನಿರತೋ ವೇದಕರ್ಮಸು ।
ಇಜ್ಯಾಪ್ರದಾನಯುಕ್ತಶ್ಚ ಯಥಾಶಕ್ತಿ ಯಥಾವಿಧಿ ॥೧೭॥

ಗೃಹಸ್ಥನಾದವನು ಮೊದಲು ದೇವತೆಗಳಿಗೆ ನಿವೇದನ ಮಾಡಿ, ಬಳಿಕ ಅತಿಥಿಗಳಿಗೆ ಸತ್ಕರಿಸಿ, ಉಳಿದ ಅನ್ನವನ್ನು ಊಟ ಮಾಡಬೇಕು. ವೇದೋಕ್ತವಾದ ಕರ್ಮಗಳಲ್ಲಿ ನಿರತನಾಗಿರಬೇಕು. ತನ್ನ ಶಕ್ತ್ಯನುಗುಣವಾಗಿ ಸಂತೋಷದಿಂದ ಯಜ್ಞವನ್ನಾಚರಿಸಬೇಕು. ಯಥಾಶಕ್ತಿ ದಾನ ಮಾಡಬೇಕು.

ನ ಪಾಣಿಪಾದಚಪಲೋ ನ ನೇತ್ರಚಪಲೋ ಮುನಿಃ ।
ನ ಚ ವಾಗಂಗಚಪಲ ಇತಿ ಶಿಷ್ಟಸ್ಯ ಗೋಚರಃ ॥೧೮॥

ಮನನಶೀಲನಾದ ಗೃಹಸ್ಥನು ಕೈ-ಕಾಲು-ಕಣ್ಣು-ಮಾತು-ಶರೀರಗಳ ಮೂಲಕ ಆಗುವ ಚಪಲತೆಗಳನ್ನು ತ್ಯಾಗ ಮಾಡಿ, ಭಗವನ್ಮುಖವಾದ ವ್ಯಾಪಾರಗಳಲ್ಲಿ ನಿರತನಾಗಬೇಕು.

ನಿತ್ಯಂ ಯಜ್ಞೋಪವೀತೀ ಸ್ಯಾತ್ ಶುಕ್ಲವಾಸಾಃ ಶುಚಿವ್ರತಃ ।
ನಿಯತೋ ದಮದಾನಾಭ್ಯಾಂ ಸದಾ ಶಿಷ್ಟೈಶ್ಚ ಸಂವಿಶೇತ್ ॥೧೯॥

ಗೃಹಸ್ಥನು ಯಜ್ಞೋಪವೀತವನ್ನು ಎಂದಿಗೂ ತ್ಯಜಿಸಬಾರದು. ಶುದ್ಧವಾದ ಬಿಳಿಯಾದ ವಸ್ತ್ರವನ್ನು ಧರಿಸಬೇಕು. ಉತ್ತಮ ವ್ರತಾನುಷ್ಠವನ್ನು ಮಾಡಬೇಕು. ಶೌಚ, ಸಂತೋಷ ಮೊದಲಾದ ನಿಯಮಗಳನ್ನೂ, ಸತ್ಯ , ಅಹಿಂಸೆ ಮೊದಲಾದ ಯಮಗಳನ್ನು ಪರಿಪಾಲಿಸುತ್ತಾ, ಯಥಾಶಕ್ತಿ ದಾನ ಮಾಡುತ್ತಿರಬೇಕು. ಯಾವಾಗಲೂ ಸತ್ಪುರುಷರ ಜೊತೆಗೆ ತತ್ತ್ವವಿಚಾರಗಳನ್ನು ಮಾಡುತ್ತಿರಬೇಕು.

ಜಿತಶಿಶ್ನೋದರೋ ಮೈತ್ರಃ ಶಿಷ್ಟಾಚಾರಸಮಾಹಿತಃ ।
ವೈಣವೀಂ ಧಾರಯೇದ್ ಯಷ್ಟಿಂ ಸೋದಕಂ ಚ ಕಮಂಡಲುಮ್ ॥

ಜಿಹ್ವೆ-ಉಪಸ್ಥಗಳನ್ನು ನಿಗ್ರಹಿಸಿಕೊಂಡು, ಮೈತ್ರಿಭಾವದಿಂದ ಶಿಷ್ಟಾಚಾರಯುಕ್ತನಾಗಿ, ಬಿದಿರಿನ ದಂಡವನ್ನು ನೀರು. ತುಂಬಿದ ಕಮಂಡಲವನ್ನು ಧರಿಸಬೇಕು.

ತ್ರೀಣಿ ಧಾರಯತೇ ನಿತ್ಯಂ ಕಮಂಡಲುಮತಂದ್ರಿತಃ ॥೨೧॥

ಮೂರು ಕಮಂಡಲುಗಳನ್ನು ಜಿತೇಂದ್ರಿಯನಾಗಿ ಯಾವಾಗಲೂ ಧರಿಸಿರಬೇಕು.

ಏಕಮಾಚಮನಾರ್ಥಾಯ ಏಕಂ ವೈ ಪಾದಧಾವನಮ್ ।
ಏಕಂ ಶೌಚವಿಧಾನಾರ್ಥಮಿತ್ಯೇತತ್ ತ್ರಿತಯಂ ತಥಾ ॥೨೨॥

ಒಂದು ಕಮಂಡಲನ್ನು ಆಚಮನಕ್ಕಾಗಿ ಉಪಯೋಗಿಸಬೇಕು. ಮತ್ತೊಂದು ಕಮಂಡಲಿನ ನೀರನ್ನು ಪಾದವನ್ನು ತೊಳೆಯುವುದಕ್ಕೆ ಉಪಯೋಗಿಸಿಕೊಳ್ಳಬೇಕು. ಮತ್ತೊಂದು ಕಮಂಡಲಿನ ನೀರನ್ನು ಶುಚಿಗಾಗಿ ಧರಿಸಬೇಕು. ಹೀಗೆ ಮೂರು ಕಮಂಡಲುಗಳನ್ನು ಧರಿಸಬೇಕು.

ಅಧೀತ್ಯಾಧ್ಯಾಪನಂ ಕುರ್ಯಾತ್ ತಥಾ ಯಜನಯಾಜನೇ ।
ದಾನಂ ಪ್ರತಿಗ್ರಹಂ ಚೈವ ಷಡ್ಗುಣಾಂ ವೃತ್ತಿಮಾಚರೇತ್ ॥೨೩॥

ಬ್ರಾಹ್ಮಣನು ಅಧ್ಯಯನವನ್ನೂ ಮಾಡಬೇಕು, ಅಧ್ಯಾಪನವನ್ನೂ ಮಾಡಬೇಕು. ಯಜನ-ಯಾಜನಗಳನ್ನು ಮಾಡಬೇಕು. ದಾನ-ಪ್ರತಿಗ್ರಹವನ್ನು ಮಾಡಬೇಕು. ಹೀಗೆ ಬ್ರಾಹ್ಮಣನಿಗೆ ಷಟ್ಕರ್ಮವೃತ್ತಿಯು ವಿಹಿತವಾಗಿದೆ.

ತ್ರೀಣಿ ಕರ್ಮಾಣಿ ಯಾನೀಹ ಬ್ರಾಹ್ಮಣಾನಾಂ ತು ಜೀವಿಕಾಃ ।
ಯಾಜನಾಧ್ಯಾಪನೇ ಚೋಭೇ ಶುದ್ಧಾಚ್ಚಾಪಿ ಪ್ರತಿಗ್ರಹಃ ॥೨೪॥

ಈ ಷಟ್ಕರ್ಮಗಳ ನಡುವೆ ಯಜ್ಞ ಮಾಡಿಸುವುದು, ಅಧ್ಯಯನ ಮಾಡಿಸುವುದು, ದಾನ ಸ್ವೀಕರಿಸುವುದು - ಈ ಮೂರು ಬ್ರಾಹ್ಮಣನ ಬದುಕಿಗೆ ಆಧಾರವಾದ ವೃತ್ತಿಗಳೆನಿಸಿವೆ. ದಾನವು ಶುದ್ಧನಾದ ವ್ಯಕ್ತಿಯಿಂದಲೇ ಸ್ವೀಕರಿಸಲು ಯೋಗ್ಯವಾಗಿದೆ.

ಅವಶೇಷಾಣಿ ಚಾನ್ಯಾನಿ ತ್ರೀಣಿ ಕರ್ಮಾಣಿ ಯಾನ್ಯುತ ।
ದಾನಮಧ್ಯಯನಂ ಯಜ್ಞೋ ಧರ್ಮಯುಕ್ತಾನಿ ತಾನಿ ತು ॥೨೫॥

ಉಳಿದಿರುವ ದಾನ, ಅಧ್ಯಯನ, ಯಜ್ಞಾನುಷ್ಠಾನ ಎಂಬ ಮೂರು ಕರ್ಮಗಳು ಧರ್ಮಯುಕ್ತವಾಗಿವೆ. ಇವು ಧರ್ಮೋಪಾಸನೆಗೆ ಸಾಧಕವಾಗಿವೆ. ಹೊರತು ಜೀವಿಕೆಗೆ ಯೋಗ್ಯವಾಗಿರುವುದಿಲ್ಲ.

ತೇಷ್ವಪ್ರಮಾದಂ ಕುರ್ವೀತ ತ್ರಿಷು ಕರ್ಮಸು ಕರ್ಮವಿತ್ ।
ದಾಂತೋ ಮೈತ್ರಃ ಕ್ಷಮಾಯುಕ್ತಃ ಸರ್ವಭೂತೇಷು ವೈ ಮುನಿಃ ॥೨೬॥

ಸರ್ವಮೇತದ್ ಯಥಾಶಕ್ತಿ ವಿಪ್ರೋ ನಿರ್ವರ್ತಯೇಚ್ಛುಚಿಃ ।
ಏವಂ ಯುಕ್ತೋ ಜಯೇತ್ ಸ್ವರ್ಗಂ ಗೃಹಸ್ಥಃ ಸಂಶಿತವ್ರತಃ ॥೨೭॥

ಧರ್ಮವನ್ನು ತಿಳಿದಿರುವ ಬ್ರಾಹ್ಮಣನು ಅಧ್ಯಯನ, ದಾನ, ಯಜ್ಞ ಎಂಬ ಈ ಕರ್ಮಗಳನ್ನು ಮಾಡುವುದರಲ್ಲಿ ಆಲಸ್ಯ ಹೊಂದಬಾರದು. ಜಿತೇಂದ್ರಿಯನಾಗಿರುವ, ಸಮಸ್ತ ಪ್ರಾಣಿಗಳಲ್ಲಿ ಮೈತ್ರಿಭಾವವಿರುವ, ಕ್ಷಮಾವಂತನಾದ, ಎಲ್ಲರಲ್ಲಿಯೂ ಭಗವಂತನನ್ನು ಕಾಣುವ, ಮನನಶೀಲನಾದ, ಕಠೋರವ್ರತನಿಷ್ಠನಾದ, ಪವಿತ್ರಾತ್ಮ ಎನಿಸಿದ ಗೃಹಸ್ಥನು ತನ್ನ ಶಕ್ತಿಗೆ ಅನುಗುಣವಾಗಿ ನಿಯಮವನ್ನು ಪರಿಪಾಲಿಸುತ್ತಿದ್ದರೆ ಸ್ವರ್ಗಲೋಕವನ್ನೂ ಜಯಿಸುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ತ್ರಿಕರ್ಮಶಂಸನಂ ನಾಮ
ಷಟ್‌ಚತ್ವಾರಿಂಶೋಽಧ್ಯಾಯಃ ॥

॥ ಅನುಗೀತಾಪರ್ವಣಿ ಏಕತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೇಳನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಬ್ರಹ್ಮಚರ್ಯ, ವಾನಪ್ರಸ್ಥ ಧರ್ಮಗಳನ್ನು ನಿರೂಪಣೆ ಮಾಡುವ ಮೂಲಕ ಆ ಧರ್ಮಗಳ ಅನುಷ್ಠಾನವು ಶ್ರೇಯಸ್ಸಾಧನವಾಗಿದೆ ಎಂದು ಹೇಳಿದುದು. ಸಂನ್ಯಾಸಧರ್ಮವನ್ನು ನಿರೂಪಿಸಿದುದು.

ಬ್ರಹ್ಮಾ

ಏವಮೇತೇನ ಮಾರ್ಗೇಣ ಪೂರ್ವೋಕ್ತೇನ ಯಥಾವಿಧಿ ।
ಅಧೀತವಾನ್ ಯಥಾಶಕ್ತಿ ತಥೈವ ಬ್ರಹ್ಮಚರ್ಯವಾನ್ ॥೧॥

ಬ್ರಹ್ಮಾ– ಮಹರ್ಷಿಗಳೇ, ಹಿಂದೆ ಹೇಳಿದ ಮಾರ್ಗಗಳಲ್ಲಿ ಬ್ರಹ್ಮಚಾರಿಯು ವಿಧಿವತ್ತಾಗಿ ಕರ್ಮಗಳನ್ನಾಚರಿಸಬೇಕು. ಯಥಾಶಕ್ತಿ ಅಧ್ಯಯನವನ್ನು ಮಾಡುತ್ತಾ ಬ್ರಹ್ಮಚರ್ಯ ಪರಿಪಾಲನೆಯನ್ನು ಮಾಡಬೇಕು.

ಸ್ವಧರ್ಮನಿರತೋ ವಿದ್ವಾನ್ ಸರ್ವೇಂದ್ರಿಯಯತೋ ಮುನಿಃ ।
ಗುರೋಃ ಪ್ರಿಯಹಿತೇ ಯುಕ್ತಃ ಸತ್ಯಧರ್ಮಪರಃ ಶುಚಿಃ ॥೨॥

ಸ್ವಧರ್ಮನಿಷ್ಠನಾದ ವಿದ್ವಾಂಸನು ಇಂದ್ರಿಯನಿಗ್ರಹವನ್ನು ಸಂಪಾದಿಸಿಕೊಂಡು, ಮನನಶೀಲನಾಗಿ ಗುರುವಿಗೆ ಹಿತವನ್ನೂ, ಪ್ರಿಯವನ್ನು ಉಂಟು ಮಾಡುವುದರಲ್ಲಿಯೇ ಆಸಕ್ತನಾಗಿ, ಸತ್ಯ-ಧರ್ಮರತನೂ, ಶುಚಿಯೂ ಆಗಿರಬೇಕು.

ಗುರುಣಾ ಸಮನುಜ್ಞಾತೋ ಭುಂಜೀತಾನ್ನಮಕುತ್ಸಯನ್ ।
ಹವಿಷ್ಯಭೈಕ್ಷ್ಯಭುಗ್ವಾಽಪಿ ಸ್ಥಾನಾಸನವಿಹಾರವಾನ್ ॥೩॥

ಗುರುವಿನ ಆಜ್ಞೆಯನ್ನು ಪಡೆದು ಊಟ ಮಾಡಬೇಕು. ಊಟ ಮಾಡುವಾಗ ಅನ್ನವನ್ನು ನಿಂದಿಸಬಾರದು. ಬೇಡಿ ತಂದ ಅನ್ನವನ್ನು ಹವಿಷ್ಯವೆಂದು ಭಾವಿಸಬೇಕು. ಸರಿಯಾದ ಸ್ಥಳದಲ್ಲಿ ಕುಳಿತುಕೊಳ್ಳಬೇಕು. ಸರಿಯಾದ ಆಸನ ಚಿಹ್ನೆ ಇರಬೇಕು. ಶುದ್ಧ ಆಚಾರವುಳ್ಳವನಾಗಿರಬೇಕು.

ದ್ವಿಕಾಲಮಗ್ನಿಂ ಜುಹುಯಾತ್ ಶುಚಿರ್ಭೂತ್ವಾ ಸಮಾಹಿತಃ ।
ಧಾರಯೇತ ಸದಾ ದಂಡಂ ಬೈಲ್ವಂ ಪಾಲಾಶಮೇವ ವಾ ॥೪॥

ಶುಚಿಯಾಗಿ, ಏಕಾಗ್ರಚಿತ್ತನಾಗಿ, ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಅಗ್ನಿಯಲ್ಲಿ ಆಹುತಿಯನ್ನು ನೀಡಬೇಕು. ಮುತ್ತುಗ ಅಥವಾ ಬಿಲ್ವದಂಡವನ್ನು ಬ್ರಹ್ಮಚಾರಿಯು ಯಾವಾಗಲೂ ಧರಿಸಿರಬೇಕು.

ಕ್ಷೌಮಂ ಕಾರ್ಪಾಸಿಕಂ ವಾऽಪಿ ಮೃಗಾಜಿನಮಥಾಪಿ ವಾ ।
ಸರ್ವಕಾಷಾಯರಕ್ತಂ ಸ್ಯಾದ್ ವಾಸೋ ವಾऽಪಿ ದ್ವಿಜಸ್ಯ ಹ ॥೫॥

ಬ್ರಹ್ಮಚಾರಿಯು ರೇಷ್ಮೆ, ಹತ್ತಿ ಅಥವಾ ಕೃಷ್ಣಾಜಿನ ವಸ್ತ್ರಗಳನ್ನು ಧಾರಣೆ ಮಾಡಬೇಕು. ಬ್ರಾಹ್ಮಣನು ಪೂರ್ಣವಾಗಿ ಕಾವಿ ಹಾಕಿದ ವಸ್ತ್ರವನ್ನಾದರೂ ಧರಿಸಬಹುದು.

ಮೇಖಲಾ ಚ ಭವೇನ್ಮೌಂಜೀ ಜಟೀ ನಿತ್ಯೋದಕೀ ತಥಾ ।
ಯಜ್ಞೋಪವೀತೀ ಸ್ವಾಧ್ಯಾಯೀ ಅಲುಪ್ತನಿಯಮವ್ರತಃ ॥೬॥

ಬ್ರಹ್ಮಚಾರಿಯು ಮುಂಜ ಎಂಬ ಹುಲ್ಲಿನಿಂದ (ನಜೆಯಿಂದ) ಉಡಿದಾರವನ್ನು ರಚಿಸಿ ಸೊಂಟಕ್ಕೆ ಕಟ್ಟಿಕೊಳ್ಳಬೇಕು. ಜಟಾಧಾರಿಯಾಗಿರಬೇಕು. ನಿತ್ಯಸ್ನಾನವನ್ನು ಆಚರಿಸಬೇಕು. ಸರ್ವದಾ ಯಜ್ಞೋಪವೀತವನ್ನು ಧರಿಸಿ, ಸ್ವಾಧ್ಯಾಯ ನಿರತನಾಗಿ, ನಿಯಮಗಳನ್ನು ಉಲ್ಲಂಘಿಸದೆ ವರ್ತಿಸಬೇಕು.

ಪೂತಾಭಿಃ ಸಪವಿತ್ರಾಭಿರದ್ಭಿರ್ದೇವತತರ್ಪಣಮ್ ।
ಭಾವೇನ ನಿಯಮಂ ಕುರ್ವನ್ ಬ್ರಹ್ಮಚಾರೀ ಪ್ರಶಸ್ಯತೇ ॥೭॥

ಪವಿತ್ರವನ್ನು ಧರಿಸಿ, ಪವಿತ್ರವಾದ ನೀರಿನಿಂದ ದೇವತೆಗಳನ್ನು ತೃಪ್ತಿಪಡಿಸಬೇಕು. ಇಂತಹ ಬ್ರಹ್ಮಚಾರಿಯು ಪ್ರಶಂಸೆಗೆ ಪಾತ್ರನಾಗುತ್ತಾನೆ.

ಏವಂ ಯುಕ್ತೋ ಜಯೇತ್ ಸ್ವರ್ಗಮೂರ್ಧ್ವರೇತಾಃ ಸಮಾಹಿತಃ ।
ನ ಸಂಸರತಿ ಜಾತೀಷು ಪರಮಂ ಸ್ಥಾನಮಾಶ್ರಿತಃ ॥೮॥

ಹೀಗೆಯೇ ಮುಂದೆ ಹೇಳುವ ಉತ್ತಮಗುಣದಿಂದ ಕೂಡಿದ, ಜಿತೇಂದ್ರಿಯನಾದ, ವಾನಪ್ರಸ್ಥನಾದ ಪುರುಷನು ಉತ್ತಮ ಲೋಕಗಳನ್ನು ಹೊಂದುತ್ತಾನೆ. ಅನಂತರ ಸಂಸಾರದಲ್ಲಿ ಮರುಹುಟ್ಟನ್ನು ಪಡೆಯುವುದಿಲ್ಲ.

ಸಂಸ್ಕೃತಃ ಸರ್ವಸಂಸ್ಕಾರೈಸ್ತಥೈವ ಬ್ರಹ್ಮಚರ್ಯವಾನ್ ।
ಗ್ರಾಮಾನ್ನಿಷ್ಕ್ರಮ್ಯ ಚಾರಣ್ಯಂ ಮುನಿಃ ಪ್ರವ್ರಜಿತೋ ವಸೇತ್ ॥೯॥

ಸಂಸ್ಕಾರಗಳಿಂದ ಸಂಸ್ಕೃತನಾದ, ಬ್ರಹ್ಮಚರ್ಯನಿಷ್ಠನಾದ ವಾನಪ್ರಸ್ಥನು ಸಂಸಾರದ ಮೋಹವನ್ನು ತೊರೆದು, ಗ್ರಾಮದಿಂದ ಅರಣ್ಯಕ್ಕೆ ಹೋಗಿ ವಾಸ ಮಾಡಬೇಕು.

ಚರ್ಮವಲ್ಕಲಸಂವೀತಃ ಸಾಯಂ ಪ್ರಾತರುಪಸ್ಪೃಶೇತ್ ।
ಅರಣ್ಯಗೋಚರೋ ನಿತ್ಯಂ ನ ಗ್ರಾಮಂ ಪ್ರವಿಶೇತ್ ಪುನಃ ॥೧೦॥

ವಾನಪ್ರಸ್ಥಾಶ್ರಮಿಯು ಜಿಂಕೆಯ ಚರ್ಮವನ್ನು ಅಥವಾ ನಾರುಮಡಿಯನ್ನು ಧರಿಸಬೇಕು. ಬೆಳಿಗ್ಗೆ, ಸಾಯಂಕಾಲ ಸ್ನಾನ ಮಾಡಬೇಕು. ಅರಣ್ಯದಲ್ಲೇ ವಾಸ ಮಾಡಿ ಬದುಕನ್ನು ಅಲ್ಲಿಯೇ ಪೂರ್ಣಗೊಳಿಸಬೇಕು. ಎಂದಿಗೂ ವಾನಪ್ರಸ್ಥಾಶ್ರಮ ಎಂದು ಹೊರಟ ವ್ಯಕ್ತಿಯು ಮರಳಿ ಗ್ರಾಮಕ್ಕೆ ಪ್ರವೇಶಿಸಬಾರದು.

ಅರ್ಚಯನ್ನತಿಥೀನ್ ಕಾಲೇ ದತ್ತ್ವಾ ಚಾಪಿ ಪ್ರತಿಶ್ರಯಮ್ ।
ಫಲಪತ್ರಚಯೈರ್ವನ್ಯೈಃ ಶ್ಯಾಮಾಕೇನ ಚ ವರ್ತಯನ್ ॥೧೧॥

ಅರಣ್ಯದಲ್ಲಿರುವಾಗ ಅತಿಥಿಗಳಾಗಿ ಬಂದವರಿಗೆ ಆಶ್ರಯ ನೀಡಬೇಕು. ಅವರನ್ನು ಸತ್ಕರಿಸಬೇಕು. ಅರಣ್ಯದಲ್ಲಿ ಸಿಗುವ ಹಣ್ಣು, ಗೆಡ್ಡೆ-ಗೆಣಸು, ಎಲೆಗಳು, ಶ್ಯಾಮೆ ಅಕ್ಕಿ ಇವುಗಳನ್ನೇ ಆಹಾರವನ್ನಾಗಿಸಿಕೊಂಡು ಜೀವನ ಕಳೆಯಬೇಕು.

ಸ ನಿತ್ಯಮುದಕಂ ವಾಯುಂ ಸರ್ವಂ ವಾನ್ಯಂ ತಥಾ ತೃಣಮ್ ।
ಪ್ರಾಶ್ನೀಯಾದಾನುಪೂರ್ವ್ಯೇಣ ಯಥಾದೀಕ್ಷಮತಂದ್ರಿತಃ ॥೧೨॥

ವಾನಪ್ರಸ್ಥಾಶ್ರಮಿಯು ಯಾವಾಗಲೂ ನೀರು, ಗಾಳಿ ಅಥವಾ ಅರಣ್ಯದಲ್ಲಿ ಸಿಗುವ ಪದಾರ್ಥಗಳು, ಹುಲ್ಲು ಇವುಗಳನ್ನೇ ಆಶ್ರಯಿಸಿಕೊಂಡಿರಬೇಕು. ದೀಕ್ಷಾಬದ್ಧನಾಗಿ, ಜಿತೇಂದ್ರಿಯನಾಗಿ ವರ್ತಿಸಬೇಕು.

ಅಮೂಲಫಲಶಾಕಾದ್ಯೈರರ್ಚೇದತಿಥಿಮಾಗತಮ್ ।
ಯದ್ ಭಕ್ಷ್ಯಃ ಸ್ಯಾತ್ ತತೋ ದದ್ಯಾದ್ ಭಿಕ್ಷಾಂ ನಿತ್ಯಮತಂದ್ರಿತಃ ॥

ಆಶ್ರಮಕ್ಕೆ ಆಗಮಿಸಿದ ಅತಿಥಿಯನ್ನು ಹಣ್ಣುಗಳಿಂದ, ಗೆಡ್ಡೆ-ಗೆಣಸುಗಳಿಂದ ಸತ್ಕರಿಸಬೇಕು. ತಾನು ತಿನ್ನುವ ಪದಾರ್ಥವನ್ನು ಅತಿಥಿಗೆ ಕೊಟ್ಟು, ಆಲಸ್ಯ ತೋರಿಸದೆ ಸತ್ಕರಿಸಿ ನಂತರ ತಾನು ಸ್ವೀಕರಿಸಬೇಕು.

ದೇವತಾತಿಥಿಪೂಜಾಂ ಚ ಕೃತ್ವಾ ಭುಂಜೀತ ವಾಗ್ಯತಃ ।
ಅಸ್ಕಂದಿತಮನಾಶ್ಚೈವ ಲಘ್ವಾಶೀ ದೇವತಾಶ್ರಯಃ ॥೧೪॥

ಪ್ರತಿದಿನವೂ ದೇವತೆಗಳಿಗೆ ನೈವೇದ್ಯ ಮಾಡಿ, ಅತಿಥಿಗಳನ್ನೂ ಸತ್ಕರಿಸಿ, ಮೌನಿಯಾಗಿ ಭೋಜನ ಮಾಡಬೇಕು. ಮಾನಸಿಕವಾಗಿಯೂ ಯಾರ ಜೊತೆಗೂ ಸ್ಪರ್ಧೆಯನ್ನು ತಾಳದೆ, ಅಲ್ಪ ಆಹಾರಿಯಾಗಿ, ಭಗವಂತನನ್ನೇ ಆಶ್ರಯಿಸಿ ಬದುಕು ಸಾಗಿಸಬೇಕು.

ದಾಂತೋ ಮೈತ್ರಃ ಕ್ಷಮಾಯುಕ್ತಃ ಕೇಶಶ್ಮಶ್ರೂಣಿ ಧಾರಯೇತ್ ।
ಜುಹ್ವನ್ ಸ್ವಾಧ್ಯಾಯಶೀಲಶ್ಚ ಸತ್ಯಧರ್ಮಪರಾಯಣಃ ॥೧೫॥

ಇಂದ್ರಿಯನಿಗ್ರಹ ಸಂಪಾದಿಸಿಕೊಂಡು, ಮೈತ್ರೀಭಾವದಿಂದ ಕೂಡಿದವನಾಗಿ, ಕ್ಷಮಾಶೀಲನಾಗಿ, ಗಡ್ಡ-ಮೀಸೆ-ತಲೆಕೂದಲುಗಳನ್ನು ಧರಿಸಿಕೊಂಡು, ಸ್ವಾಧ್ಯಾಯ ಶೀಲನಾಗಿ, ಸತ್ಯಧರ್ಮಪರಾಯಣನಾಗಿ, ಅಗ್ನಿಹೋತ್ರನಿರತನಾಗಿ ಕಾಲ ಕಳೆಯಬೇಕು.

ತ್ಯಕ್ತದೇಹಃ ಸದಾ ದಕ್ಷೋ ವನೇ ನಿತ್ಯಂ ಸಮಾಹಿತಃ ।
ಏವಂ ಯುಕ್ತೋ ವ್ರಜೇತ್ ಸ್ವರ್ಗಂ ವಾನಪ್ರಸ್ಥೋ ಜಿತೇಂದ್ರಿಯಃ ॥೧೬॥

ದೇಹಾಭಿಮಾನವನ್ನು ತ್ಯಾಗ ಮಾಡಿ, ಧರ್ಮಕಾರ್ಯಗಳಲ್ಲಿ ಕುಶಲನಾಗಿ, ವನದಲ್ಲೇ ಸಂಚರಿಸುತ್ತಾ, ಜಿತೇಂದ್ರಿಯನಾಗಿ ಇರುವ ವಾನಪ್ರಸ್ಥಾಶ್ರಮಿಯು ಸ್ವರ್ಗವನ್ನು ಜಯಿಸುತ್ತಾನೆ.

ಗೃಹಸ್ಥೋ ಬ್ರಹ್ಮಚಾರೀ ಚ ವಾನಪ್ರಸ್ಥೋಽಪಿ ವಾ ಪುನಃ ।
ಯ ಇಚ್ಛೇನ್ಮೋಕ್ಷಮಾದಾತುಮುತ್ತಮಾಂ ವೃತ್ತಿಮಾವ್ರಜೇತ್ ॥೧೭॥

ಮೋಕ್ಷವನ್ನು ಬಯಸುವ ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ ಈ ಮೂರು ಆಶ್ರಮಗಳಿಗಿಂತ ಉತ್ತಮವಾದ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು.

ಅಭಯಂ ಸರ್ವಭೂತೇಭ್ಯೋ ದತ್ತ್ವಾ ನೈಷ್ಕರ್ಮ್ಯಮಾಚರೇತ್ ।
ಸರ್ವಭೂತಹಿತೋ ಮೈತ್ರಃ ಸರ್ವೇಂದ್ರಿಯಯತೋ ಮುನಿಃ ॥೧೮॥

ಸಮಸ್ತ ಪ್ರಾಣಿಗಳಿಗೆ ಅಭಯವನ್ನು ನೀಡಿ, ಕರ್ಮತ್ಯಾಗರೂಪವಾದ ಅರ್ಥಾತ್ ಸ್ವಾರ್ಥವಿಲ್ಲದೆ ಭಗವತ್ಪ್ರೀತಿಯಿಂದ ಸಂನ್ಯಾಸ ಧರ್ಮವನ್ನು ಆಚರಿಸಬೇಕು. ಎಲ್ಲ ಪ್ರಾಣಿಗಳಿಗೂ ಸುಖವನ್ನೇ ಬಯಸಬೇಕು. ಎಲ್ಲರಿಗೂ ಮಿತ್ರನಾಗಿ, ಸಮಸ್ತ ಇಂದ್ರಿಯಗಳನ್ನೂ ನಿಗ್ರಹಿಸಿ ಮುನಿವೃತ್ತಿಯನ್ನು ಆಶ್ರಯಿಸಬೇಕು.

ಅಯಾಚಿತಮಸಂಕ್ಲೃಪ್ತಮುಪಪನ್ನಂ ಯದೃಚ್ಛಯಾ ।
ಜೋಷಯೇತ ಸದಾ ಭೋಜ್ಯಂ ಗ್ರಾಸಮಾಗತಮಸ್ಪೃಹಃ ॥೧೯॥

ಯಾತ್ರಾಮಾತ್ರಂ ಚ ಭುಂಜೀತ ಕೇವಲಂ ಪ್ರಾಣಯಾತ್ರಿಕಮ್ ।
ಧರ್ಮಲಬ್ಧಂ ತಥಾऽಶ್ನೀಯಾತ್ ನ ಕಾಮಮನುವರ್ತಯೇತ್ ॥೨೦॥

ಯಾರ ಬಳಿಯೂ ಯಾಚನೆ ಮಾಡಬಾರದು. ಕೂಡಿಡಬಾರದು. ಭಗವತ್ ಸಂಕಲ್ಪದಿಂದ ದೊರೆತ ಪದಾರ್ಥವನ್ನು ಸ್ವೀಕರಿಸಬೇಕು. ದೊರೆತ ತುತ್ತನ್ನು ಭಗವದರ್ಪಣ ಬುದ್ಧಿಯಿಂದ ಸ್ವೀಕರಿಸಬೇಕು. ದೇಹದ ಯಾತ್ರೆ ನಡೆಯುವಷ್ಟು ಆಹಾರವನ್ನು ಮಾತ್ರ ಸ್ವೀಕರಿಸಬೇಕು. ಪ್ರಾಣಧಾರಣೆಗಿಂತ ಅಧಿಕವಾದ ಆಹಾರವನ್ನು ಸ್ವೀಕರಿಸಬಾರದು. ಆ ಆಹಾರವು ಧರ್ಮದಿಂದ ಪ್ರಾಪ್ತವಾಗಿರಬೇಕು. ಸ್ವಚ್ಛಂದವಾಗಿ ಸಂನ್ಯಾಸಿಯು ಎಂದೂ ವರ್ತಿಸಬಾರದು.

ಗ್ರಾಸಾದಾಚ್ಛಾದನಾದನ್ಯನ್ನ ಗೃಹ್ಣೀಯಾತ್ ಕದಾಚನ ।
ಯಾವದಾಹಾರಯೇತ್ ತಾವತ್ ಪ್ರತಿಗೃಹ್ಣೀತ ನಾನ್ಯಥಾ ॥೨೧॥

ಹೊತ್ತಿಗೆ ಬೇಕಾದ ತುತ್ತು, ಮೈಮುಚ್ಚಲು ಬೇಕಾದ ವಸ್ತ್ರ ಇಷ್ಟನ್ನು ಬಿಟ್ಟು ಬೇರೆ ಯಾವ ಪದಾರ್ಥಗಳನ್ನೂ ಸ್ವೀಕರಿಸಿ, ಸಂಗ್ರಹಿಸಿ ಇಡಬಾರದು. ಎಷ್ಟು ಆಹಾರಕ್ಕೆ ಯೋಗ್ಯವೋ ಅಷ್ಟನ್ನೇ ಸ್ವೀಕರಿಸಬೇಕು. ಬೇರೆ ರೀತಿ ವರ್ತಿಸಬಾರದು.

ಪರೇಭ್ಯೋ ನ ಪ್ರತಿಗ್ರಾಹ್ಯಂ ನ ಚಾದೇಯಂ ಕಥಂಚನ ।
ದದ್ಯಾತ್ ತು ಸರ್ವಭೂತಾನಾಂ ಸಂವಿಭಾಗಂ ಸಮಾಚರೇತ್ ॥೨೨॥

ಮತ್ತೊಬ್ಬರಿಂದ ದಾನ ತೆಗೆದುಕೊಳ್ಳಬಾರದು. ಎಂದೂ ಯಾವ ಕಾರಣದಿಂದಲೂ ದಾನ ಸ್ವೀಕಾರ ಮಾಡಲು ಯೋಗ್ಯವಾಗಿರುವುದಿಲ್ಲ. ತನಗೆ ಯದೃಚ್ಛಾಲಾಭದಿಂದ ಬಂದ ಪದಾರ್ಥವನ್ನೇ ವಿಭಾಗಿಸಿ ದಾನ ಮಾಡಬೇಕು.

ನಾದದೀತ ಪರಸ್ವಾನಿ ನ ಗೃಹ್ಣೀಯಾದಯಾಚಿತಮ್ ।
ನ ಕಿಂಚಿದ್ ವಿಷಯಂ ಭುಕ್ತ್ವಾ ಸ್ಪಹಯೇತ್ ತಸ್ಯ ವೈ ಪುನಃ ॥೨೩॥

ಮತ್ತೊಬ್ಬರ ಸಂಪತ್ತನ್ನು ಸ್ವೀಕರಿಸಲು ಬಯಸಬಾರದು. ದಾನ ಮಾಡುವ ವ್ಯಕ್ತಿಯಿಂದ ನಾನು ಇದನ್ನು ಸ್ವೀಕರಿಸಲೇಬೇಕು ಎಂಬ ಭಾವನೆಯನ್ನು ತಾಳಿ ಯಾವುದನ್ನೂ ಸ್ವೀಕರಿಸಬಾರದು. ವಿಷಯಪದಾರ್ಥಗಳನ್ನು ಎಂದಿಗೂ ಅಪೇಕ್ಷಿಸದೆ ಭಗವದ್ಧ್ಯಾನ ನಿರತನಾಗಿರಬೇಕು.

ಮೃದಮಾಪಸ್ತಥಾನ್ನಾನಿ ಪತ್ರಂ ಪುಷ್ಪಂ ಫಲಾನಿ ಚ ।
ಅಸಂವೃತಾನಿ ಗೃಹ್ಣೀಯಾತ್ ಪ್ರವೃತ್ತಾನಿ ಚ ಕಾರ್ಯವಾನ್ ॥೨೪॥

ನೀರಾಗಲಿ, ಮಣ್ಣಾಗಲಿ, ಅನ್ನವಾಗಲಿ, ಪತ್ರ-ಪುಷ್ಪ-ಫಲಗಳೇ ಆಗಲಿ, ಯಾರಿಗಾದರೂ ತೆಗೆದಿಟ್ಟಿದ್ದಲ್ಲಿ ಅದನ್ನು ಸ್ವೀಕರಿಸಬಾರದು. ಯಾರ ಸ್ವಾಮಿತ್ವವೂ ಇಲ್ಲದೆ ಭಗವತ್ಸ್ವಾಮಿತ್ವದಲ್ಲಿ ಇದ್ದ ಪದಾರ್ಥಗಳನ್ನು ಜೀವನದ ನಿರ್ವಹಣೆಗೆ ಅಗತ್ಯವಿದ್ದಷ್ಟು ಸ್ವೀಕರಿಸಬಹುದು.

ನ ಶಿಲ್ಪಜೀವಿಕಾಂ ಜೀವೇದ್ ವಿರಾಮಂ ಕಾಮಯೀತ ಚ ।
ನ ದ್ವೇಷ್ಟಾ ನೋಪದೇಷ್ಟಾ ಚ ಭವೇಚ್ಚ ನಿರುಪಸ್ಕೃತಃ ॥೨೫॥

ಸಂನ್ಯಾಸಿಯಾದವನು ಶಿಲ್ಪಕಾರ್ಯವನ್ನು ಮಾಡಿ, ಅದರ ಮೂಲಕ ಜೀವನ ನಿರ್ವಹಣೆ ಮಾಡಬಾರದು. ಎಂದಿಗೂ ವಿಶೇಷವಾದ ಕ್ರೀಡೆಗಳಲ್ಲಿ, ಸ್ತ್ರೀಸಂಗ ಇತ್ಯಾದಿಗಳಲ್ಲಿ ಆಸಕ್ತಿಯನ್ನು ಹೊಂದಲೇ ಬಾರದು. ಯಾರನ್ನೂ ದ್ವೇಷಿಸಬಾರದು, ಅಯೋಗ್ಯರಿಗೆ ಉಪದೇಶಿಸಬಾರದು, ಅಲಂಕಾರಗಳನ್ನು ಮಾಡಿಕೊಳ್ಳಬಾರದು ಅಥವಾ ಯಾವುದೇ ಪದಾರ್ಥಗಳನ್ನು, ಉಪಕರಣಗಳನ್ನು ಸಂಗ್ರಹಿಸಿಕೊಳ್ಳಬಾರದು.

ಶ್ರದ್ಧಾಪೂತಾನಿ ಭುಂಜೀತ ನಿಮಿತ್ತಾನಿ ವಿವರ್ಜಯೇತ್ ।
ಮುಧಾವೃತ್ತಿರಸಕ್ತಿಶ್ಚ ಸರ್ವಭೂತೈರಸಂದಿತಃ ॥೨೬॥

ಶ್ರದ್ಧೆಯಿಂದ ಪವಿತ್ರವಾದ ಅನ್ನವನ್ನು ಸ್ವೀಕರಿಸಬೇಕು. ಶ್ರಾದ್ಧಾದಿ ಕ್ರಿಯೆಗಳಲ್ಲಿ ಭೋಜನಕ್ಕೆ ಹೋಗಬಾರದು. ಯಾವುದೇ ಪ್ರಯೋಜನದ ಉದ್ದೇಶವಿಲ್ಲದೆ ಸತ್ಕರ್ಮಗಳನ್ನು ಆಚರಿಸಬೇಕು. ಯಾವುದೇ ಪ್ರಾಣಿಗಳನ್ನಾಗಲಿ ಅತಿಯಾಗಿ ಪರಿಚಯ ಮಾಡಿಕೊಳ್ಳಬಾರದು.

ಕೃತ್ವಾ ಪ್ರಾಹ್ಣೇ ಚರೇದ್ ಭೈಕ್ಷ್ಯಂ ವಿಧೂಮೇ ಭುಕ್ತವಜ್ಜನೇ ।
ವೃತ್ತೇ ಧಾರಾವಸಂಪಾತೇ ಭೈಕ್ಷ್ಯಂ ಲಿಪ್ಸೇತ ಮೋಕ್ಷವಿತ್ ॥೨೭॥

ಪೂರ್ವಾಹ್ಣದಲ್ಲಿ ಭಿಕ್ಷೆಯನ್ನು ಬೇಡಬೇಕು. ಭಿಕ್ಷೆ ಬೇಡುವ ಮನೆಯಲ್ಲಿ ಎಲ್ಲ ಜನರು ಊಟ ಮಾಡಿದ ಬಳಿಕ, ಅಡುಗೆ ಮನೆಯ ಹೊಗೆ ಎಲ್ಲವೂ ನಿಂತ ಬಳಿಕ ಭಿಕ್ಷೆಯನ್ನು ಬೇಡಬೇಕು. ಯಾವ ಗ್ರಾಮದಲ್ಲಿ ಯಥೇಷ್ಟವಾದ ಮಳೆ ಉಂಟಾಗಿದೆಯೋ ಅಂತಹ ಗ್ರಾಮದಲ್ಲಿ ಮಾತ್ರ ಭಿಕ್ಷಾಟನೆಯನ್ನು ಮಾಡಬೇಕು. ಮಳೆಯಿಲ್ಲದೆ, ಧಾನ್ಯಗಳ ಅಭಿವೃದ್ಧಿಯಿಲ್ಲದೆ ಕಷ್ಟಪಡುತ್ತಿರುವ ಗ್ರಾಮದಲ್ಲಿ ಸಂನ್ಯಾಸಿಯು ಭಿಕ್ಷೆ ಬೇಡಬಾರದು.

ಲಾಭೇನ ಚ ನ ಹೃಷ್ಯೇತ ನಾಲಾಭೇ ವಿಮನಾ ಭವೇತ್ ।
ಮಾತ್ರಾಶೀ ಕಾಲಾಕಾಂಕ್ಷನ್ ಚರೇದ್ ಭೈಕ್ಷ್ಯಂ ಸಮಾಹಿತಃ ॥೨೮॥

ಸಂನ್ಯಾಸಿಯು ಲಾಭ ದೊರೆತಾಗ ಸಂತುಷ್ಟನಾಗಬಾರದು, ದೊರೆಯದಿದ್ದಾಗ ದುಃಖ ಹೊಂದಬಾರದು. ಸ್ವಲ್ಪ ಮಾತ್ರ ಊಟ ಮಾಡಬೇಕು. ಕಾಲವನ್ನು ನಿರೀಕ್ಷಿಸಿ ಭಿಕ್ಷೆಯನ್ನು ಬೇಡಬೇಕು.

ಲಾಭಂ ಸಾಧಾರಣಂ ನೇಚ್ಛೇನ್ನ ಭುಂಜೀತಾಭಿಪೂಜಿತಃ ।
ಅಭಿಪೂಜಿತಲಾಭಾದ್ಧಿ ವಿಜುಗುಪ್ಸೇತ ಪಂಡಿತಃ ॥೨೯॥

ಸಾಧಾರಣವಾದ ಲಾಭಗಳನ್ನೂ ಇಚ್ಛಿಸಬಾರದು. ತುಂಬಾ ಸನ್ಮಾನಿಸಿ, ಸತ್ಕರಿಸುವ ಜಾಗದಲ್ಲಿ ಊಟ ಮಾಡಬಾರದು. ಬಹಳ ಚೆನ್ನಾಗಿ ಪೂಜಿಸಿ, ಸತ್ಕರಿಸುವ ಜನರಿಂದ ವಿದ್ವಾಂಸನಾದ ಸಂನ್ಯಾಸಿಯು ಜುಗುಪ್ಸಿತನೇ ಆಗಿರಬೇಕು.

ಶುಕ್ತಾನ್ಯಮ್ಲಾನಿ ತಿಕ್ತಾನಿ ಕಷಾಯಕಟುಕಾನಿ ಚ ।
ನಾಸ್ವಾದಯೀತ ಭುಂಜಾನೋ ರಸಾಂಶ್ಚ ಮಧುರಾಂಸ್ತಥಾ ॥೩೦॥

ನರಕ ಶೋಕದಿಂದ ತುಂಬಿದ ಅರ್ಥಾತ್ ಪಾಪಸಾಧನವೆನಿಸಿದ ಬದನೆಕಾಯಿ ಮೊದಲಾದವುಗಳನ್ನು, ಅತಿಯಾದ ಪಿತ್ತ, ಕಷಾಯ, ಕಟುಗಳನ್ನು, ಮಧುರವಾದ ರಸಗಳನ್ನು ಎಂದಿಗೂ ಸಂನ್ಯಾಸಿಯು ಆಸ್ವಾದಿಸಬಾರದು.

ಯಾತ್ರಾಮಾತ್ರಂ ಚ ಭುಂಜೀತ ಕೇವಲಂ ಪ್ರಾಣಧಾರಣಮ್ ।
ಅಸಂರೋಧೇನ ಭೂತಾನಾಂ ವೃತ್ತಿಂ ಲಿಪ್ಸೇತ ಮೋಕ್ಷವಿತ್ ॥೩೧॥

ದೇಹಧಾರಣೆಗೆ ಯೋಗ್ಯವಾಗುವಷ್ಟು ಮಾತ್ರ ಊಟ ಮಾಡಬೇಕು. ಎಲ್ಲ ಪ್ರಾಣಿಗಳನ್ನು ಮನಸ್ಸಿನಲ್ಲಿ ನೆನೆದು, ಅವುಗಳ ಬದುಕಿಗೆ ಹಿಂಸೆಯಾಗದಿರುವಂತೆ ಮುಕ್ತಿಯನ್ನು ಬಯಸುವ ಸಂನ್ಯಾಸಿಯು ಬದುಕನ್ನು ಸಾಗಿಸಬೇಕು.

ನ ಚಾನ್ಯಮನುವೀಕ್ಷೇತ ಭಿಕ್ಷಮಾಣಃ ಕಥಂಚನ ।
ನ ಸನ್ನಿಕಾಶಯೇದ್ ಧರ್ಮಂ ವಿವಿಕ್ತೇ ಚಾರಜಾಶ್ಚರೇತ್ ॥೩೨॥

ಊಟ ಮಾಡುವಾಗ ಯಾರನ್ನೂ ನೋಡಬಾರದು. ಖಂಡಿತವಾಗಿಯೂ ಧರ್ಮಶೀಲನೆಂದು ತೋರಿಸಿಕೊಳ್ಳಬಾರದು. ಏಕಾಂತದಲ್ಲಿ ರಜೋಗುಣ ರಹಿತನಾಗಿ ಬದುಕನ್ನು ಸಾಗಿಸಬೇಕು.

ಶೂನ್ಯಾಗಾರಮರಣ್ಯಂ ವಾ ವೃಕ್ಷಮೂಲಂ ನದೀಂ ತಥಾ ।
ಪ್ರತಿಶ್ರಯಾರ್ಥಂ ಸೇವೇತ ಪಾರ್ವತೀಂ ವಾ ಪುನರ್ಗುಹಾಮ್ ॥೩೩॥

ಶೂನ್ಯಾಗಾರವನ್ನಾಗಲಿ, ಅರಣ್ಯವನ್ನಾಗಲಿ, ಮರದ ಬುಡವನ್ನಾಗಲಿ, ನದಿಯನ್ನಾಗಲಿ ಆಶ್ರಯಕ್ಕಾಗಿ ಸೇವಿಸಬೇಕು. ಅಥವಾ ಪರ್ವತದಲ್ಲಿರುವ ಗುಹೆಗಳಲ್ಲಿಯೂ ವಾಸ ಮಾಡಬಹುದು.

ಗ್ರಾಮ್ಯೈಕರಾತ್ರಿಕೋ ಗ್ರೀಷ್ಮೇ ವರ್ಷಾಸ್ವೇಕತ್ರ ವಾ ವಸೇತ್ ।
ಬುದ್ಧ್ವಾ ಸೂರ್ಯೇಣ ನಿರ್ದಿಷ್ಟಂ ಕೀಟವಚ್ಚ ಚರೇನ್ಮಹೀಮ್ ॥೩೪॥

ದಯಾರ್ಥಂ ಚೈವ ಭೂತಾನಾಂ ಸಮೀಕ್ಷ್ಯ ಪೃಥಿವೀಂ ಚರೇತ್ ।
ಸಂಚಯಾಂಶ್ಚ ನ ಕುರ್ವೀತ ಸ್ನೇಹಭಾಗಂ ಚ ವರ್ಜಯೇತ್ ॥೩೫॥

ಗ್ರೀಷ್ಮ ಋತುವಿನಲ್ಲಿ ಒಂದು ಗ್ರಾಮದಲ್ಲಿ ಒಂದು ರಾತ್ರಿಗಿಂತಲೂ ಅಧಿಕ ಕಾಲ ತಂಗಬಾರದು. ವರ್ಷಾಋತುವಿನಲ್ಲಿ ಮಾತ್ರ ಚಾತುರ್ಮಾಸ್ಯವ್ರತಕ್ಕಾಗಿ ಉಳಿದುಕೊಳ್ಳಬಹುದು. ಹಗಲಿನಲ್ಲಿ ಸೂರ್ಯನು ಮಾರ್ಗದರ್ಶನ ಮಾಡುವಾಗ ಸಂನ್ಯಾಸಿಯು ಸಂಚರಿಸಬಹುದು. ಈ ಮಾರ್ಗದಲ್ಲಿ ಪ್ರಾಣಿಗಳು ಇಲ್ಲ, ನೀನು ಕಾಲಿಟ್ಟಲ್ಲಿ ಅವುಗಳ ಸಂಹಾರವಾಗುವುದಿಲ್ಲ ಎಂದು ಸೂರ್ಯನು ಬೆಳಕಿನಿಂದ ತೋರಿಸಿದಾಗ ಸಂನ್ಯಾಸಿಯು ಹಿಂಸೆಯಾಗದಂತೆ ಹಗಲಿನಲ್ಲಿ ಹೆಜ್ಜೆಗಳನ್ನು ಹಾಕಬಹುದು. ಸಂನ್ಯಾಸಿಯು ಸೂರ್ಯಾಸ್ತಮಾನವಾದ ಬಳಿಕ ಸಂಚರಿಸಬಾರದು. ಪ್ರಾಣಿಗಳ ದಯದಿಂದಲೇ ಭೂಮಿಯನ್ನು ಸರಿಯಾಗಿ ನೋಡಿಕೊಂಡು, ಕ್ರಿಮಿ-ಕೀಟಗಳಿಗೆ ಹಿಂಸೆಯಾಗದಂತೆ ಸಂಚರಿಸಬೇಕು. ಸಂಚಾರಸಮಯದಲ್ಲಿ ಗ್ರಾಮದಲ್ಲಿ ಸಿಗುವ ದ್ರವ್ಯಗಳಲ್ಲಿ ಸ್ನೇಹವನ್ನಾಗಲಿ, ಸಂಗ್ರಹ ಬುದ್ಧಿಯನ್ನಾಗಲಿ ಮಾಡಬಾರದು.

ಪೂತೇನ ಚಾಂಭಸಾ ನಿತ್ಯಂ ಕಾರ್ಯಂ ಕುರ್ವೀತ ಮಂತ್ರವಿತ್ ।
ಉಪಸ್ಪೃಶೇದುದ್ಧತಾಭಿರದ್ಭಿಶ್ಚೈವ ನರೋತ್ತಮಃ ॥೩೬॥

ಮಂತ್ರಜ್ಞನಾದ ಸಂನ್ಯಾಸಿಯು ಪವಿತ್ರವಾದ ನೀರಿನಿಂದ ಸತ್ಕರ್ಮಗಳನ್ನು ಆಚರಿಸಬೇಕು. ಬಾವಿಯ ನೀರಿನಿಂದ ಅಥವಾ ಹರಿಯುವ ನದಿಯ ನೀರಿನಿಂದ ಸತ್ಕರ್ಮಗಳನ್ನು ಆಚರಿಸಬೇಕು.

ಅಹಿಂಸಾ ಬ್ರಹ್ಮಚರ್ಯಂ ಚ ಸತ್ಯಮಾರ್ಜವಮೇವ ಚ ।
ಅಕ್ರೋಧಶ್ಚಾನಸೂಯಾ ಚ ದಮೋ ನಿತ್ಯಮಪೈಶುನಮ್ ॥೩೭॥

ಏಷ್ವೇತೇಷು ಯುಕ್ತಃ ಸ್ಯಾದ್ ವ್ರತೇಷು ನಿಯತೇಂದ್ರಿಯಃ ॥೩೮॥

ಅಹಿಂಸೆ, ಬ್ರಹ್ಮಚರ್ಯ, ಸತ್ಯ, ಸರಳತೆ, ಅಕ್ರೋಧ, ದೋಷದೃಷ್ಟಿ ಇಲ್ಲದಿರುವುದು, ಇಂದ್ರಿಯಸಂಯಮ, ಚಾಡಿ ಹೇಳದಿರುವುದು - ಈ ಎಂಟು ವ್ರತಗಳಲ್ಲಿ ಆಸಕ್ತನಾಗಿರಬೇಕು. ಇಂದ್ರಿಯನಿಗ್ರಹವುಳ್ಳವನಾಗಿರಬೇಕು.

ಅಪಾಪ್ಯಾನಂ ಶಠಂ ವೃತ್ತಮಜಿಹ್ಮಂ ನಿತ್ಯಮಾಚರೇತ್ ॥೩೯॥

ತಾಪರಹಿತವಾದ, ಮೋಸವಿಲ್ಲದ, ಕುಟಿಲತೆ ಇಲ್ಲದ ವ್ಯವಹಾರವನ್ನೇ ಯಾವಾಗಲೂ ಮಾಡಬೇಕು.

ಆಶೀರ್ಯುಕ್ತಾನಿ ಕರ್ಮಾಣಿ ಹಿಂಸಾಯುಕ್ತಾನಿ ಯಾನಿ ಚ ।
ಕಾಲಸಂಗ್ರಹಧರ್ಮಂ ಚ ನೈವ ಕುರ್ಯಾನ್ನ ಕಾರಯೇತ್ ॥೪೦॥

ಸಂನ್ಯಾಸಿಯು ಕಾಮ್ಯಕರ್ಮಗಳನ್ನು, ಹಿಂಸಾಕರ್ಮಗಳನ್ನು, ಕಾಲಸಂಗ್ರಹ ಧರ್ಮಗಳನ್ನು ಎಂದಿಗೂ ಮಾಡಬಾರದು, ಬೇರೆಯವರಿಂದ ಮಾಡಿಸಬಾರದು.

ಸರ್ವಾನೇತಾನತಿಕ್ರಮ್ಯ ಲಘುಮಾತ್ರಪರಿಗ್ರಹಃ ।
ಸಮಃ ಸರ್ವೇಷು ಭೂತೇಷು ಸ್ಥಾವರೇಷು ಚರೇಷು ಚ ॥೪೧॥

ಸಂನ್ಯಾಸಿಯು ಸಮಸ್ತ ಪದಾರ್ಥಗಳಲ್ಲಿಯೂ ಮೋಹವನ್ನು ತ್ಯಜಿಸಿ, ಅಲ್ಪತೃಪ್ತನಾಗಿ, ಭೂಮಿಯಲ್ಲಿ ಎಲ್ಲ ಕಡೆಯೂ ಸಂಚರಿಸುತ್ತಾ, ಚರಾಚರ ಪ್ರಾಣಿಗಳಲ್ಲಿ ಭಗವಂತನೇ ಇದ್ದಾನೆ ಎಂದು ಭಾವಿಸುತ್ತಿರಬೇಕು.

ಪರಂ ನೋದ್ವೇಜಯೇತ್ ಕಂಚಿನ್ನ ಚ ಕಸ್ಮಾಚ್ಚಿದುದ್ವಿಜೇತ್ ।
ವಿಶಸ್ತಃ ಸರ್ವಭೂತಾನಾಮೈಕಾಗ್ರ್ಯಂ ಮೋಕ್ಷ ಉಚ್ಯತೇ ॥೪೨॥

ಯಾವುದೇ ಪ್ರಾಣಿಗಳಿಗೂ ಉದ್ವೇಗವನ್ನು ಉಂಟು ಮಾಡಬಾರದು. ತಾನೂ ಉದ್ವೇಗಕ್ಕೆ ತುತ್ತಾಗಬಾರದು. ಎಲ್ಲರಲ್ಲೂ ವಿಶ್ವಾಸ ಹೊಂದಬೇಕು. ಇಂಥವನನ್ನೇ ಶ್ರೇಷ್ಠನೆಂದೂ, ಮೋಕ್ಷಧರ್ಮವನ್ನು ತಿಳಿದವನೆಂದೂ ಹೇಳುತ್ತಾರೆ.

ಅನಾಗತಂ ಚ ನ ಧ್ಯಾಯೇನ್ನಾತೀತಮನುಚಿಂತಯೇತ್ ।
ವರ್ತಮಾನಮುಪೇಕ್ಷೇತ ಕಾಲಕಾಂಕ್ಷೀ ಸಮಾಹಿತಃ ॥೪೩॥

ಸಂನ್ಯಾಸಿಯು ಭವಿತವ್ಯವನ್ನು ಚಿಂತಿಸಬಾರದು. ಭೂತವನ್ನು ಯೋಚಿಸಬಾರದು. ವರ್ತಮಾನ ಕಾಲದಲ್ಲಿಯೂ ಅತಿಯಾದ ಉತ್ಸಾಹ ತಾಳಬಾರದು. ಯಾವಾಗಲೂ ಪರಮಾತ್ಮನ ಅಪರೋಕ್ಷಜ್ಞಾನದ ಪ್ರಾಪ್ತಿಗೆ ಕಾಲವನ್ನು ಪ್ರತೀಕ್ಷಿಸುತ್ತಾ ಧ್ಯಾನದಲ್ಲಿಯೇ ನಿರತನಾಗಿರಬೇಕು.

ನ ಚಕ್ಷುಷಾ ನ ಮನಸಾ ನ ವಾಚಾ ದೂಷಯೇತ್ ಕ್ವಚಿತ್ ।
ನ ಪ್ರತ್ಯಕ್ಷಂ ಪರೋಕ್ಷಂ ವಾ ಕಿಂಚಿದ್ ದುಷ್ಟಂ ಸಮಾಚರೇತ್ ॥೪೪॥

ಕಣ್ಣಿನಿಂದಾಗಲಿ, ಮನಸ್ಸಿನಿಂದಾಗಲಿ, ಮಾತಿನಿಂದಾಗಲಿ ಯಾರನ್ನೂ ದೂಷಿಸಬಾರದು. ಪ್ರತ್ಯಕ್ಷ-ಪರೋಕ್ಷದಲ್ಲಾಗಲಿ ಕೆಟ್ಟ ಕೆಲಸಗಳನ್ನು ಮಾಡಬಾರದು.

ಇಂದ್ರಿಯಾಣ್ಯುಪಸಂಹೃತ್ಯ ಕೂರ್ಮೋಽಂಗಾನೀವ ಸರ್ವಶಃ ।
ಕ್ಷೀಣೇಂದ್ರಿಯಮನೋಬುದ್ಧಿಃ ನಿರೀಕ್ಷೇತ ಜಿತೇಂದ್ರಿಯಃ ॥೪೫॥

ಕೂರ್ಮದಂತೆ ಸಂನ್ಯಾಸಿಯು ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರಬೇಕು. ಮನಸ್ಸಿಗೆ ವಿಷಯಪದಾರ್ಥಗಳ ಸಂಸ್ಕಾರವನ್ನು ನೀಡದೆ, ಮನಸ್ಸು-ಬುದ್ಧಿಗಳನ್ನು ವಿಷಯಪದಾರ್ಥಗಳಿಂದ ದುರ್ಬಲಗೊಳಿಸಿ, ಬ್ರಹ್ಮನ ವಿಷಯದಲ್ಲಿ ಪ್ರಬಲಗೊಳಿಸಿಕೊಳ್ಳಬೇಕು.

ನಿರ್ದ್ವಂದ್ವೋ ನಿರ್ನಮಸ್ಕಾರೋ ನಿಃಸ್ವಾಹಾಕಾರ ಏವ ಚ ।
ನಿರ್ಮಮೋ ನಿರಹಂಕಾರೋ ನಿರ್ಯೋಗಕ್ಷೇಮ ಆತ್ಮವಾನ್ ॥೪೬॥

ಸಂನ್ಯಾಸಿಯಾದವನು ಸುಖ-ದುಃಖಾದಿ ದ್ವಂದ್ವಗಳನ್ನು ತ್ಯಜಿಸಬೇಕು. ಇನ್ನೊಬ್ಬರ ನಮಸ್ಕಾರದ ಮೋಹವನ್ನು, ಅಪೇಕ್ಷೆಯನ್ನು ಹೊಂದಬಾರದು. ಅಗ್ನಿಹೋತ್ರಾದಿಗಳನ್ನು ಅನುಷ್ಠಾನ ಮಾಡಬಾರದು. ಮಮಕಾರರಹಿತನಾಗಿ, ಅಹಂಕಾರರಹಿತನಾಗಿ ತನ್ನ ಯೋಗಕ್ಷೇಮದ ಬಗ್ಗೆ ತಲೆಕೆಡಿಸಿಕೊಳ್ಳದೆ ಬ್ರಹ್ಮನಿಷ್ಠನಾಗಿ ವರ್ತಿಸಬೇಕು.

ನಿರಾಶೀಃ ಸರ್ವಭೂತೇಷು ನಿರಾಸಂಗೋ ನಿರಾಶ್ರಯಃ ।
ಸರ್ವಜ್ಞಃ ಸರ್ವತೋ ಮುಕ್ತೋ ಮುಚ್ಯತೇ ನಾತ್ರ ಸಂಶಯಃ ॥೪೭॥

ನಿಷ್ಕಾಮನೂ, ನಿಸ್ಸಂಗನೂ, ಯಾವ ವ್ಯಕ್ತಿಯನ್ನೂ ಆಶ್ರಯಿಸದವನೂ, ಸರ್ವಜ್ಞನೂ, ಎಲ್ಲಕಡೆಯಿಂದಲೂ ಮುಕ್ತನಾದವನು ಸಂಸಾರಬಂಧನದಿಂದ ಬಿಡುಗಡೆ ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಅಪಾಣಿಪಾದಪೃಷ್ಠಂ ತದ್ ಅಶಿರಸ್ಕಮನೂದರಮ್ ।
ಅಭಿನ್ನಗುಣಕರ್ಮಾಣಂ ಕೇವಲಂ ವಿಮಲಂ ಸ್ಥಿರಮ್ ॥೪೮॥

ಪ್ರಾಕೃತವಾದ ಕೈ-ಕಾಲುಗಳಿಲ್ಲದ, ಪ್ರಾಕೃತವಾದ ತಲೆ ಇಲ್ಲದ, ಮನುಷ್ಯರ ಉದರದಂತೆ ಉದರವಿಲ್ಲದ, ಮನುಷ್ಯರ ಗುಣ-ಕರ್ಮಗಳಿಗೆ ಅನುಗುಣವಾದ ವ್ಯಾಪಾರವಿಲ್ಲದ, ನಿರ್ಮಲನಾದ, ಸ್ಥಿರನಾದ, ಕೇವಲನೆನಿಸಿದ;

ಅಗಂಧರಸಮಸ್ಪರ್ಶಮರೂಪಾಶಬ್ದಮೇವ ಚ ।
ಅನಸ್ಥಿಮನಸ್ಯಜ್ಜಮ್ ಅಮಾಂಸಮಪಿ ಚೈವ ಹಿ ॥೪೯॥

ಪ್ರಾಕೃತ ಗಂಧರಹಿತನಾದ, ಪ್ರಾಕೃತ ಸ್ಪರ್ಶರಹಿತನಾದ, ಪ್ರಾಕೃತ ರೂಪರಹಿತನಾದ, ಪ್ರಾಕೃತ ಶಬ್ದ ಅಭೇದ್ಯನಾದ, ಅಸ್ಥಿ, ಮಾಂಸ, ಮಜ್ಜ ಮುಂತಾದವುಗಳಿಂದ ರಹಿತನಾದ;

ಅಚಿಂತ್ಯಮವ್ಯಯಂ ದಿವ್ಯಂ ಕೂಟಸ್ಥಮಪಿ ನಿತ್ಯದಾ ।
ಸರ್ವಭೂತಸ್ಥಮಾತ್ಮಾನಂ ಯೇ ಪಶ್ಯಂತಿ ನ ತೇ ಮೃತಾಃ ॥೫೦॥

ಅಚಿಂತ್ಯನಾದ, ನಾಶರಹಿತನಾದ, ದಿವ್ಯನಾದ, ಅವ್ಯಾಕೃತಾಕಾಶದಂತೆ ಎಂದಿಗೂ ನಿರ್ವಿಕಾರನಾದ, ಸಮಸ್ತ ಪ್ರಾಣಿಗಳ ಅಂತರ್ಯಾಮಿಯಾದ ಪರಮಾತ್ಮನನ್ನು ನಿತ್ಯವೂ ಧ್ಯಾನಿಸುವವರಿಗೆ ಎಂದಿಗೂ ಸಾವು ಉಂಟಾಗದು.

ನ ತತ್ರ ಕ್ರಮತೇ ಬುದ್ಧಿರ್ನೇಂದ್ರಿಯಾಣಿ ನ ದೇವತಾಃ ।
ವೇದಾ ಯಜ್ಞಾಶ್ಚ ಲೋಕಾಶ್ಚ ನ ತಪೋ ನ ಪರಾಕ್ರಮಃ ॥೫೧॥

ಭಗವಂತನ ವಿಷಯದಲ್ಲಿ ಬುದ್ಧಿಯಾಗಲಿ, ಇಂದ್ರಿಯವಾಗಲಿ, ದೇವ-ವೇದ-ಯಜ್ಞ-ಲೋಕ-ತಪ-ಪರಾಕ್ರಮಗಳಾಗಲಿ ಚಲಿಸಲು ಶಕ್ಯವಾದವುಗಳಲ್ಲ.

ಯತ್ರ ಜ್ಞಾನವತಾಂ ಪ್ರಾಪ್ತಿರಲಿಂಗಗ್ರಹಣೇ ಸ್ಮೃತೇ ॥೫೨॥

ಪರಮಾತ್ಮನ ಸ್ವರೂಪವನ್ನು ಕುತರ್ಕಗಳಿಂದ ತಿಳಿಯಲು ಸಾಧ್ಯವಿಲ್ಲ. ಜ್ಞಾನವಂತರ ಶ್ರದ್ಧಾ-ಭಕ್ತಿಗಳಿಗೆ ಒಲಿಯುವವನು ಶ್ರೀಹರಿಯು.

ತಸ್ಮಾದಲಿಂಗಧರ್ಮಜ್ಞೋ ಧರ್ಮತತ್ವಮುಪಾಚರೇತ್ ।
ಗೂಢಧರ್ಮಾಶ್ರಿತೋ ವಿದ್ವಾನ್ ಅಜ್ಞಾತಚರಿತಂ ಚರೇತ್ ॥೫೩॥

ಆದ್ದರಿಂದ ಪರಬ್ರಹ್ಮನ ಚಿಂತನೆಯನ್ನು ಕುತರ್ಕಗಳನ್ನು ತ್ಯಾಗ ಮಾಡಿ ವೇದೋಕ್ತವಾದ ತತ್ತ್ವದಿಂದಲೇ ತಿಳಿಯಬೇಕು. ರಹಸ್ಯವಾದ ಉಪನಿಷತ್ತಿನ ವಿದ್ಯೆಗಳನ್ನು ಬಲ್ಲವನಾಗಿ ಯಾರೂ ತಿಳಿಯದಂತೆ ಅವನನ್ನು ಧ್ಯಾನಿಸಬೇಕು.

ಅಗೂಢೋ ಗೂಢರೂಪೇಣ ಚರೇದ್ ಧರ್ಮಮದೂಷಯನ್ ॥೫೪॥

ಎಂದಿಗೂ ಧರ್ಮವನ್ನು ನಿಂದಿಸದೆ ಅಂತರಂಗದಲ್ಲಿ ಭಗವದ್ಜ್ಞಾನವನ್ನು ಹೊಂದಿ ಗೂಢನಾಗಿದ್ದು, ಬಾಹ್ಯವಾಗಿ ದೇಹವ್ಯಾಪಾರಗಳನ್ನು ಮಾಡುತ್ತಾ ಸಂಚರಿಸಬೇಕು.

ಯಚ್ಚೈನಮವಮನ್ಯೇರನ್ ಪರೇ ಸತತಮೇವ ಹಿ ।
ತಥಾವೃತ್ತಶ್ಚರೇದ್ ಧರ್ಮಂ ಸತಾಂ ಧರ್ಮಮದೂಷಯನ್ ॥೫೫॥

ಸಜ್ಜನರ ಧರ್ಮವನ್ನು ದೂಷಿಸದೆ, ಭಗವದ್ಧರ್ಮಕ್ಕೆ ಅವಮಾನವಾಗದಂತೆ ಸಂನ್ಯಾಸಿಯಾದವನು ತನ್ನ ಬದುಕಿನ ಆಚರಣೆಯನ್ನು ನಡೆಸಿಕೊಂಡು ಹೋಗಬೇಕು.

ಯೋಽಪ್ಯೇವಂ ವೃತ್ತಸಂಪನ್ನಃ ಸ ಮುನಿಃ ಶ್ರೇಷ್ಠ ಉಚ್ಯತೇ ॥೫೬॥

ಈ ರೀತಿಯಾಗಿ ಸಚ್ಚಾರಿತ್ರ್ಯಸಂಪನ್ನನಾದ ಸಂನ್ಯಾಸಿಯೇ ಮುನಿಶ್ರೇಷ್ಠನೆಂದು ಕರೆಸಿಕೊಳ್ಳುತ್ತಾನೆ.

ಇಂದ್ರಿಯಾಣೀಂದ್ರಿಯಾರ್ಥಾಂಶ್ಚ ಮಹಾಭೂತಾನಿ ಪಂಚ ಚ ।
ಮನೋ ಬುದ್ಧಿಮಥಾತ್ಮಾನಮವ್ಯಕ್ತಂ ಪುರುಷಂ ತಥಾ ॥೫೭॥

ಸರ್ವಮೇತತ್ ಪ್ರಸಂಖ್ಯಾಯ ಸಮ್ಯಕ್ ಸಂಪೂಜ್ಯ ನಿರ್ಮಲಃ ।
ತತಃ ಸ್ವರ್ಗಮವಾಪ್ನೋತಿ ವಿಮುಕ್ತಃ ಸರ್ವಬಂಧನೈಃ ॥೫೮॥

ಯಾವ ಮನುಷ್ಯನು ಇಂದ್ರಿಯಗಳು, ಅವುಗಳಿಗೆ ಸಂಬಂಧಿಸಿದ ವಿಷಯಗಳು, ಪಂಚಮಹಾಭೂತಗಳು, ಮನಸ್ಸು, ಬುದ್ಧಿ, ಅಹಂಕಾರಗಳು, ಅವ್ಯಕ್ತ ಪ್ರಕೃತಿ, ಪುರುಷ ಈ ಎಲ್ಲವನ್ನೂ ಚೆನ್ನಾಗಿ ವಿಚಾರ ಮಾಡಿ, ಅವುಗಳನ್ನು ಯಥಾರ್ಥವಾಗಿ ತಿಳಿದು ಅಂತರ್ಯಾಮಿಯನ್ನು ನಿರ್ಮಲವಾದ ಮನಸ್ಸಿನಿಂದ ಆರಾಧಿಸಿದಾಗ ಸಮಸ್ತ ವಿಧವಾದ ಬಂಧಗಳಿಂದ ಮುಕ್ತನಾಗಿ ಸ್ವರ್ಗಕ್ಕೆ ಹೋಗುತ್ತಾನೆ.

ಏತದೇವಾಂತವೇಲಾಯಾಂ ಪರಿಸಂಖ್ಯಾಯ ತತ್ತ್ವವಿತ್ ।
ಧ್ಯಾಯೇದೇಕಾಂತಮಾಸ್ಥಾಯ ಮುಚ್ಯತೇಽಥ ನಿರಾಶ್ರಯಃ ॥೫೯॥

ನಿರ್ಮುಕ್ತಃ ಸರ್ವಸಂಗೇಭ್ಯೋ ವಾಯುರಾಕಾಶಗೋ ಯಥಾ ।
ಕ್ಷೀಣಶೋಕೋ ನಿರಾತಂಕಃ ಪ್ರಾಪ್ನೋತಿ ಪರಮಾಂ ಗತಿಮ್ ॥೬೦॥

ಈ ಬ್ರಹ್ಮತತ್ತ್ವವನ್ನು ತಿಳಿದ ಯಾವ ಮನುಷ್ಯನು ತನ್ನ ಕೊನೆಯ ಕಾಲದಲ್ಲಿ ನಿಯಮಬದ್ಧವಾಗಿ, ಏಕಾಂತದಲ್ಲಿ ಕುಳಿತು ಹೃದಯದಲ್ಲಿರುವ ಶ್ರೀಹರಿಯನ್ನು ಧ್ಯಾನಿಸುತ್ತಾನೋ ಅಂತಹ ವ್ಯಕ್ತಿಯು ಸಮಸ್ತ ಸಂಗಗಳಿಂದ ಮುಕ್ತನಾಗಿ, ನಿಸ್ಸಂಗವಾಗಿ ಸಂಚರಿಸುವ ವಾಯುವಿನಂತೆ, ಯಾವುದೇ ಶೋಕವಿಲ್ಲದೆ ನಿರಾತಂಕನಾಗಿ ಪರಬ್ರಹ್ಮಗತಿಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಜ್ಞಾನವರ್ತನಕಥನಂ ನಾಮ
ಸಪ್ತಚತ್ವಾರಿಂಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆಂಟನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಋಷಿಗಳನ್ನು ಕುರಿತು ಸಂನ್ಯಾಸ, ಜ್ಞಾನ, ತಪಸ್ಸುಗಳನ್ನು ಪರಮಪುರುಷಾರ್ಥಸಾಧನ ಎಂದು ಹೇಳಿದುದು.

ಬ್ರಹ್ಮಾ

ಸನ್ನ್ಯಾಸಂ ತಪ ಇತ್ಯಾಹುರ್ವ್ಯದ್ಧಾ ನಿಶ್ಚಿತದರ್ಶಿನಃ ।
ಬ್ರಾಹ್ಮಣಾ ಬ್ರಹ್ಮಯೋನಿಸ್ಥಾ ಜ್ಞಾನಂ ಬ್ರಹ್ಮ ಪರಂ ವಿದುಃ ॥೧॥

ಬ್ರಹ್ಮಾ– 'ಇದಮಿತ್ಥಂ' ಎಂದು ನಿರ್ಣಯ ಮಾಡಿ ಹೇಳಲು ಸಮರ್ಥರಾದ, ವೇದಜ್ಞರಾದ, ಪರಮಾತ್ಮನಲ್ಲೇ ನೆಲೆಗೊಳಿಸಿದ ಮನಸ್ಸುಳ್ಳ ಜ್ಞಾನವೃದ್ಧರು ಸಂನ್ಯಾಸವನ್ನೇ ತಪಸ್ಸೆಂದು ಹೇಳುತ್ತಾರೆ. ಪರಬ್ರಹ್ಮನ ಜ್ಞಾನವೇ ಶ್ರೇಷ್ಠವಾದುದೆಂದು ಹೇಳುತ್ತಾರೆ.

ಅತಿದೂರಾತ್ಮಕಂ ಬ್ರಹ್ಮ ವೇದವಿದ್ಯಾವ್ಯಪಾಶ್ರಯಮ್ ।
ನಿರ್ದ್ವಂದ್ವಂ ನಿರ್ಗುಣಂ ನಿತ್ಯಮಚಿಂತ್ಯಂ ಗುಹ್ಯಮುತ್ತಮಮ್ ॥೨॥

ವೇದವಿದ್ಯೆಗಳನ್ನು ಆಶ್ರಯಿಸದೆ ಬ್ರಹ್ಮನ ಸ್ವರೂಪವನ್ನು ನಿರೂಪಿಸಲಾಗದು. ವೇದವಿದ್ಯೆಗಳಿಲ್ಲದಿದ್ದಲ್ಲಿ ಬ್ರಹ್ಮನು ದೂರನಾಗುತ್ತಾನೆ. ಪರಬ್ರಹ್ಮನು ದ್ವಂದ್ವರಹಿತನು, ಪ್ರಾಕೃತಗುಣರಹಿತನು, ನಿತ್ಯವೂ ಅಚಿಂತ್ಯನು, ಶ್ರೇಷ್ಠವಾದ ರಹಸ್ಯತತ್ತ್ವವೂ ಆಗಿದ್ದಾನೆ.

ಧ್ಯಾನೇನ ತಪಸಾ ಚೈವ ಧೀರಾಃ ಪಶ್ಯಂತಿ ತತ್ಪದಮ್ ॥೩॥

ಇವನನ್ನು ಧ್ಯಾನ, ತಪಸ್ಸು ಇವುಗಳಿಂದ ಜ್ಞಾನಿಗಳು ನೋಡಲು ಬಯಸುತ್ತಾರೆ.

ನಿರ್ಮುಕ್ತತಮಸಃ ಪೂತಾ ವ್ಯುತ್ಕ್ರಾಂತರಜಸೋಽಮಲಾಃ ।
ತಪಸಾ ಕ್ಷೇಮಮಧ್ವಾನಂ ಗಚ್ಛಂತೀತಿ ಮನೀಷಿಣಃ ।
ಸನ್ನ್ಯಾಸನಿರತಾ ನಿತ್ಯಂ ಯೇ ಚ ಬ್ರಹ್ಮವಿದೋ ಜನಾಃ ॥೪॥

ಅಜ್ಞಾನದಿಂದ ಮುಕ್ತರಾದ, ಶುದ್ಧಮನಸ್ಕರಾದ, ರಜೋಗುಣದಿಂದ ರಹಿತರಾದ, ನಿರ್ಮಲರಾದ ತಪಸ್ವಿಗಳು ತಮ್ಮ ತಪಸ್ಸಿನಿಂದ ಕ್ಷೇಮಕರವಾದ ಮಾರ್ಗವನ್ನು ಅನುಸರಿಸಿ, ಸಂನ್ಯಾಸಧರ್ಮನಿರತರಾಗಿ ನಿತ್ಯವೂ ಪರಬ್ರಹ್ಮನನ್ನು ತಿಳಿಯುತ್ತಾರೆ.

ತಪಃ ಪ್ರದೀಪ ಇತ್ಯಾಹುರಾಚಾರೋ ಧರ್ಮಸಾಧಕಃ ।
ಜ್ಞಾನಂ ತ್ವೇವ ಪರಂ ವಿದ್ಮಃ ಸನ್ನ್ಯಾಸಂ ತಪ ಉತ್ತಮಮ್ ॥೫॥

ಜ್ಞಾನಿಗಳು ತಪಸ್ಸನ್ನು ಬೆಳಕು ಎಂದೂ, ಆಚಾರವು ಧರ್ಮಸಾಧಕವು ಎಂದೂ, ಪರತತ್ತ್ವವನ್ನು ಜ್ಞಾನವೆಂದೂ ತಿಳಿದಿದ್ದಾರೆ. ಸಂನ್ಯಾಸವೇ ಉತ್ತಮವಾದ ತಪಸ್ಸು ಎನಿಸಿದೆ.

ಯಸ್ತು ವೇದ ನಿರಾಬಾಧಂ ಜ್ಞಾನಂ ತತ್ತ್ವವಿನಿಶ್ಚಯಾತ್ ।
ಸರ್ವಭೂತಸ್ಥಮಾತ್ಮಾನಂ ಸ ಸರ್ವವಿದಿಹೋಚ್ಯತೇ ॥೬॥

ಯಾವನು ಯಾವುದೇ ತಡೆಯಿಲ್ಲದ ಬ್ರಹ್ಮಜ್ಞಾನವನ್ನು ಹೊಂದಿದ್ದಾನೋ ಅವನಿಗೆ ತತ್ತ್ವನಿಶ್ಚಯವಾದುದರಿಂದ ಪರಮಾತ್ಮನನ್ನು ಎಲ್ಲ ಪ್ರಾಣಿಗಳ ಅಂತರ್ಯಾಮಿಯನ್ನಾಗಿ ನೋಡುತ್ತಾನೆ. ಅವನನ್ನು ಸರ್ವಜ್ಞನೆಂದೇ ಹೇಳುತ್ತಾರೆ.

ಯೋ ವಿದ್ವಾನ್ ಸಹವಾಸಂ ಚ ವಿವಾಸಂ ಚೈವ ಪಶ್ಯತಿ ।
ತಥೈವೈಕತ್ವನಾನಾತ್ವೇ ಸ ದುಃಖಾತ್ ಪ್ರತಿಮುಚ್ಯತೇ ॥೭॥

ಯಾವನು ಜ್ಞಾನಿಯಾಗಿ ಮುನಿಗಳ ಸಹವಾಸವನ್ನು ಮಾಡುತ್ತಾನೋ, ಮನೆ-ಬಂಧು-ಜನರಲ್ಲಿ ಸಂಗವನ್ನು ತೊರೆದಿದ್ದಾನೋ, ಪರಬ್ರಹ್ಮನ ಗುಣ-ಕ್ರಿಯಾಗಳಲ್ಲಿ ಏಕತ್ವವನ್ನೇ ನೋಡುತ್ತಾನೋ, ಜೀವರಲ್ಲಿ ಭೇದಗಳನ್ನೇ ಕಾಣುತ್ತಾನೋ ಅವನು ದುಃಖದಿಂದ ಬಿಡುಗಡೆ ಹೊಂದುತ್ತಾನೆ.

ಯೋ ನ ಕಾಮಯತೇ ಕಿಂಚಿನ್ನ ಕಿಂಚಿದಿತಿ ಮನ್ಯತೇ ।
ಇಹ ಲೋಕಸ್ಥ ಏವೈಷ ಬ್ರಹ್ಮಭೂಯಾಯ ಕಲ್ಪತೇ ॥೮॥

ಯಾವನು ಯಾವ ವಸ್ತುವನ್ನೂ ಅಪೇಕ್ಷಿಸದೆ, ಯಾವ ವ್ಯಕ್ತಿಗಳನ್ನೂ ಅವಮಾನ ಮಾಡದೆ ಇದ್ದಾನೋ ಅಂತಹ ವ್ಯಕ್ತಿಯು ಈ ಲೋಕದಲ್ಲಿ ಇದ್ದುಕೊಂಡೇ ಪರಬ್ರಹ್ಮನನ್ನು ಹೊಂದಬಹುದು.

ಪ್ರಧಾನಗುಣತತ್ತ್ವಜ್ಞಃ ಸರ್ವಭೂತವಿಧಾನವಿತ್ ।
ನಿರ್ಮಮೋ ನಿರಹಂಕಾರೋ ಮುಚ್ಯತೇ ನಾತ್ರ ಸಂಶಯಃ ॥೯॥

ಯಾವನು ಸಮಸ್ತ ಪ್ರಾಣಿಗಳಿಗೆ ನಿಯಾಮಕನಾದ ಪರಬ್ರಹ್ಮನನ್ನು ತಿಳಿದಿದ್ದಾನೋ, ಪ್ರಧಾನವಾದ ವಿಷ್ಣುವಿನ ಗುಣಗಳನ್ನು ಯಥಾರ್ಥವಾಗಿ ಬಲ್ಲವನಾಗಿದ್ದಾನೋ ಇಂತಹ ಮಮಕಾರ-ಅಹಂಕಾರ ರಹಿತನಾದ ವ್ಯಕ್ತಿಯು ಸಂಶಯವಿಲ್ಲದೆ ಬಂಧ ಮುಕ್ತನಾಗುತ್ತಾನೆ.

ನಿರ್ದ್ವಂದ್ವೋ ನಿರ್ನಮಸ್ಕಾರೋ ನಿಃಸ್ವಧಾಕಾರ ಏವ ಚ ।
ನಿರ್ದ್ವಂದ್ವಂ ನಿರ್ಗುಣಂ ನಿತ್ಯಂ ಪ್ರಶಮೇನೈವ ಗಚ್ಛತಿ ॥೧೦॥

ಸುಖ-ದುಃಖಾದಿ ದ್ವಂದ್ವರಹಿತನಾಗಿ, ಮತ್ತೊಬ್ಬರ ನಮಸ್ಕಾರದ ಅಭಿಮಾನವನ್ನು ಹೊಂದದೆ, ಸ್ವಾಹಾ-ಸ್ವಧಾಕಾರವರ್ಜಿತನಾಗಿ, ದ್ವಂದ್ವರಹಿತನಾದ, ಪ್ರಾಕೃತಗುಣ ರಹಿತನಾದ, ನಿತ್ಯನಾದ ಪರಮಾತ್ಮನನ್ನು ತನ್ನ ಶಾಂತ ಸಂನ್ಯಾಸಗುಣದಿಂದಲೇ ಹೊಂದುತ್ತಾನೆ.

ಹಿತ್ವಾ ಗುಣಮಯಂ ಸರ್ವಂ ಕರ್ಮ ಜಂತುಃ ಶುಭಾಶುಭಮ್ ।
ಉಭೇ ಸತ್ಯಾನೃತೇ ಹಿತ್ವಾ ಮುಚ್ಯತೇ ನಾತ್ರ ಸಂಶಯಃ ॥೧೧॥

ಯಾವ ಸಂನ್ಯಾಸಿಯು ಬಂಧಕವಾದ ಸಮಸ್ತ ಕರ್ಮಗಳನ್ನು ತ್ಯಜಿಸಿ, ಶುಭಾಶುಭ ಕರ್ಮಗಳನ್ನು ತ್ಯಾಗ ಮಾಡಿ, ನಾನು ಕೊಡುವುದಿಲ್ಲ, ನಾನು ಕೊಡುತ್ತೇನೆ ಎಂಬ ಮಾತುಗಳನ್ನೂ ತ್ಯಾಗ ಮಾಡಿ ವಿರಕ್ತನಾಗಿರುತ್ತಾನೋ ಅಂತಹ ವ್ಯಕ್ತಿಯು ಬಂಧನದಿಂದ ಬಿಡುಗಡೆ ಹೊಂದುತ್ತಾನೆ.

ಅವ್ಯಕ್ತಬುದ್ಧಿಪ್ರಭವೋ ಬುದ್ಧಿಸ್ಕಂಧಮಯೋ ಮಹಾನ್ ।
ಮಹಾಹಂಕಾರವಿಟಪ ಇಂದ್ರಿಯಾಂತರಕೋಟರಃ ॥೧೨॥

ಬಾಲ್ಯದ ಬುದ್ಧಿಯು ಅಲ್ಪವಾದುದರಿಂದ ಪ್ರೌಢಿಮೆಯು ಬೆಳೆಯದೆ ಇದ್ದಾಗ ಶೈಶವಾವಸ್ಥೆಯಲ್ಲಿ ಅಂಕುರದಂತೆ ಉತ್ಪನ್ನವಾದ ಅರ್ಥಾತ್ ಅಲ್ಪಬುದ್ಧಿಯಿಂದ ಉತ್ಪನ್ನವಾದ ನಂತರ ವಿಸ್ತಾರವೆಂಬ ಬುದ್ಧಿಯೆಂಬ ಶಾಖೆಗಳಿಂದ ಕೂಡಿದ, ಮಹಾ ಅಹಂಕಾರವೆಂಬ ರೆಂಬೆಯಿಂದ ಕೂಡಿದ, ಇಂದ್ರಿಯಗಳೆಂಬ ಪೊಟರೆಗಳಿಂದ ತುಂಬಿರುವ;

ಮಹಾಭೂತವಿಶಾಖಶ್ಚ ವಿಶೇಷಪ್ರತಿಶಾಖವಾನ್ ।
ಸದಾ ಪತ್ರಃ ಸದಾ ಪುಷ್ಪಃ ಶುಭಾಶುಭಫಲೋದಯಃ ॥೧೩॥

ಮಹಾಭೂತಗಳೆಂಬ ಶಾಖೋಪಶಾಖೆಗಳಿಂದ ಕೂಡಿದ, ಆಶ್ರಮವಿಶೇಷಗಳೆಂಬ ಪ್ರತಿಶಾಖೆಗಳಿಂದಲೂ ಕೂಡಿದ, ಯಾವಾಗಲೂ ಸಂಕಲ್ಪರೂಪವಾದ ಎಲೆಗಳು, ಕಾಮರೂಪವಾದ ಪುಷ್ಪಗಳು, ಶುಭಾಶುಭಗಳೆಂಬ ಫಲೋದಯಗಳಿಂದಲೂ ತುಂಬಿರುವ;

ಆಜೇವ್ಯಃ ಸರ್ವಭೂತಾನಾಂ ಬ್ರಹ್ಮವೃಕ್ಷಃ ಸನಾತನಃ ।
ಏನಂ ಛಿತ್ತ್ವಾ ಚ ಛಿತ್ತ್ವಾ ಚ ತತ್ತ್ವಜ್ಞಾನಾಸಿನಾ ಬುಧಃ ॥೧೪॥

ಸಮಸ್ತ ಜೀವರಿಗೂ ಬದುಕಲು ಆಶ್ರಯಸ್ಥಾನವಾದ, ಸನಾತನವಾದ, ಸಮಿತ್ತುಗಳನ್ನು ಸ್ವೀಕರಿಸಲು ಬ್ರಾಹ್ಮಣರಿಗೆ ಯೋಗ್ಯವೆನಿಸಿದ ಅಶ್ವತ್ಥವೃಕ್ಷದಂತೆ ಇರುವ ಈ ಸಂಸಾರವೆಂಬ ಅಶ್ವತ್ಥವೃಕ್ಷವನ್ನು ತತ್ತ್ವಜ್ಞಾನವೆಂಬ ಕೊಡಲಿಯಿಂದ ಜ್ಞಾನಿಯಾದವನು ತುಂಡರಿಸಿ, ಛಿನ್ನ-ಭಿನ್ನವನ್ನಾಗಿಸಿ;

ಹಿತ್ವಾ ಸಂಗಮಯಾನ್ ಪಾಶಾನ್ ಮೃತ್ಯುಜನ್ಮಜರೋದಯಾನ್ ।
ನಿರ್ಮಮೋ ನಿರಹಂಕಾರೋ ಮುಚ್ಯತೇ ನಾತ್ರ ಸಂಶಯಃ ॥೧೫॥

ಪುಣ್ಯ-ಪಾಪಗಳನ್ನು ತ್ಯಾಗ ಮಾಡಿ, ಸಂಗವೆಂಬ ಪಾಶಗಳನ್ನು ತೊರೆದು, ಜನನ-ಮರಣಗಳೆಂಬ ಜರಾದಿಗಳನ್ನೂ ನಿರ್ಮಮನಾಗಿ, ನಿರಹಂಕಾರನಾಗಿ ತ್ಯಜಿಸಿದಲ್ಲಿ ಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ದ್ವಾವೇತೌ ಪಕ್ಷಿಣೌ ನಿತ್ಯೌ ಸಂಕ್ಷೇಪೌ ಚಾಪ್ಯಚೇತನೌ ।
ಏತಾಭ್ಯಾಂ ತು ಪರೋ ಯೋನ್ಯಃ ಚೇತನಾವಾನ್ ಸ ಉಚ್ಯತೇ ॥೧೬॥

ನಿತ್ಯವೂ ಈ ದೇಹವೆಂಬ ವೃಕ್ಷದಲ್ಲಿ ಬದ್ಧವಾಗಿ, ಜೀವ-ದೇಹವೆಂಬ ಎರಡು ಪಕ್ಷಿಗಳು ಇವೆ. ಇವುಗಳು ಕ್ರಿಯಾಶೀಲವಾಗಿದ್ದರೂ ಅಚೇತನಗಳಾಗಿವೆ. ಇವುಗಳಿಂದ ಉತ್ತಮನೆನಿಸಿದ ಪರಮಾತ್ಮನು ಚೇತನ, ಜ್ಞಾನಸ್ವರೂಪಿ ಎಂದು ಕರೆಸಿಕೊಳ್ಳುತ್ತಾನೆ.

ವ್ಯಾಖ್ಯಾನ ವಿಶೇಷ– ಈ ಪದ್ಯದಲ್ಲಿ ವ್ಯಾಸರು ಜೀವನಿಗೂ ಅಚೇತನ ಎಂದಿದ್ದಾರೆ. ಇದರ ಅರ್ಥ ಅಚೇತನವಾದ ದೇಹಸಂಬಂಧದಿಂದ ಸ್ವರೂಪಭೂತವಾದ ಜೀವನ ಜ್ಞಾನವು ತಿರಸ್ಕೃತವಾದುದರಿಂದ ಜೀವನೂ ಅಚೇತನನೆಂದೇ ಕರೆಸಿಕೊಂಡಿದ್ದಾನೆ ಎಂದು ತಿಳಿಯಬೇಕು.

ಅಚೇತನಃ ಸತ್ವಸಂಘಾತಯುಕ್ತಃ
ಸತ್ತ್ವಾತ್ ಪರಂ ಚೇತಯತೇऽಂತರಾತ್ಮಾ ।
ಸ ಕ್ಷೇತ್ರಜ್ಞಃ ಸತ್ವಸಂಘಾತಬುದ್ಧಿಃ
ಗುಣಾತಿಗೋ ಮುಚ್ಯತೇ ಮೃತ್ಯುಪಾಶಾತ್ ॥೧೭॥

ಈ ಅಚೇತನನೆನಿಸಿದ ಜೀವಾತ್ಮನು ಅಂತಃಕರಣ, ಪಂಚಭೂತಗಳು ಇವುಗಳಿಂದ ಕೂಡಿದ್ದಾನೆ. ಇಂತಹ ಅಂತರಾತ್ಮನೆನಿಸಿದ ಜೀವನು ಸಮಸ್ತ ಪ್ರಾಣಿಗಳ ಸಮುದಾಯಕ್ಕಿಂತ ಪರಬ್ರಹ್ಮನನ್ನು ವಿಲಕ್ಷಣನನ್ನಾಗಿ ತಿಳಿಯುತ್ತಾನೆ. ಆ ಶ್ರೀಮನ್ನಾರಾಯಣನು ಸಂಸಾರವೆಂಬ ವೃಕ್ಷವನ್ನು ನಾಶಪಡಿಸುವುದರಿಂದ ಕ್ಷೇತ್ರ ಎನಿಸಿದ್ದಾನೆ. 'ಕ್ಷಿ ಕ್ಷಯೇ' ಎಂಬ ಧಾತುವು ನಾಶ ಎಂದು ಅರ್ಥವನ್ನು ಹೇಳುತ್ತದೆ. ಅಥವಾ ಕ್ಷೇತ್ರ ಎಂದರೆ ನಾರಾಯಣ. ಅವನನ್ನು ತಿಳಿದ ಜೀವನು ಕ್ಷೇತ್ರಜ್ಞನಾಗಿದ್ದಾನೆ. ಅಥವಾ ಕ್ಷೇತ್ರ ಎಂದರೆ ನಾಶ ಹೊಂದುವ ದೇಹ ಎಂದೂ ಅರ್ಥ. ಈ ದೇಹವು ನನ್ನದಲ್ಲ ಎಂಬ ಜ್ಞಾನವುಳ್ಳವನು ಕ್ಷೇತ್ರಜ್ಞನಾಗುತ್ತಾನೆ. ಇಂತಹ ಜೀವನು ಸಮಸ್ತ ಗುಣಗಳಿಗೆ ಆಶ್ರಯನಾದ ಪರಮಾತ್ಮನಲ್ಲಿ ನೆಲೆಗೊಂಡ ಬುದ್ಧಿಯುಳ್ಳವನಾಗಿ, ತ್ರಿಗುಣಗಳ ಸಂಬಂಧವನ್ನು ದಾಟಿ ಮೃತ್ಯುಪಾಶದಿಂದ ಬಿಡುಗಡೆಯನ್ನು ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು ಬ್ರಹ್ಮವೃಕ್ಷವರ್ಣನಂ ನಾಮ ಅಷ್ಟಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ಚತುರ್ಮುಖ ಬ್ರಹ್ಮನು ಮಹರ್ಷಿಗಳನ್ನು ಕುರಿತು ಜೀವಾತ್ಮ-ಪರಮಾತ್ಮರ ಸ್ವರೂಪವನ್ನು ಹೇಳಿದುದು.

ಬ್ರಹ್ಮಾ

ಕೇಚಿದ್ ಬ್ರಹ್ಮಮಯಂ ವೃಕ್ಷಂ ಕೇಚಿದ್ ಬ್ರಹ್ಮಮಯಂ ಮಹತ್ ।
ಕೇಚಿತ್ ಪರಮಮವ್ಯಕ್ತಂ ಕೇಚಿತ್ ಪರಮನಾಮಯಮ್ ॥೧॥

ಮನ್ಯಂತೇ ಸರ್ವಮಪ್ಯೇತದ್ ಅವ್ಯಕ್ತಪ್ರಭವಾಪ್ಯಯಮ್ ॥೨॥

ಬ್ರಹ್ಮಾ- ಕೆಲವು ಜ್ಞಾನಿಗಳು, ಪ್ರಾಣಬಿಡುವ ಸಮಯದಲ್ಲಿ ದೇಹಾಭಿಮಾನವನ್ನು ತ್ಯಾಗ ಮಾಡುವುದರಿಂದ ಯೋಗಿಗಳಿಗೆ ವೃಕ್ಷ ಎಂದು ಹೆಸರು ಎನ್ನುತ್ತಾರೆ. ಇನ್ನು ಕೆಲವು ಜ್ಞಾನಿಗಳು ಶ್ವಾಸವಾಯುವು ತನ್ನ ಶರೀರದಲ್ಲಿರುವ ಉದಾನವಾಯುವಿನಲ್ಲಿ ಪ್ರವೇಶ ಹೊಂದುತ್ತಿರಲು ಕಣ್ಣನ್ನು ಮುಚ್ಚುವ ಸಮಯದಲ್ಲಿ ಕೇವಲ ಪರಬ್ರಹ್ಮನನ್ನೇ ಚಿಂತಿಸುತ್ತಾ, ದೇಹಾಭಿಮಾನವನ್ನು ಬಿಟ್ಟು ದೇಹತ್ಯಾಗವನ್ನು ಮಾಡುವುದರಿಂದ ಹಿಂದಿನ ಯೋಗಿಗಿಂತಲೂ ಮಹತ್ವವುಳ್ಳವನಾದುದರಿಂದ ಯೋಗಿಯ ಸ್ವರೂಪವು ಮಹನ್ನಾಮಕ ಎಂದು ಹೇಳುತ್ತಾರೆ. ಇನ್ನು ಕೆಲವರು ದೇಹವಿದ್ದಾಗಲೂ ಪುನಃ ಪುನಃ ಪ್ರಾಣಾಯಾಮಗಳ ಮೂಲಕ ಮನಸ್ಸಿನ ಎಲ್ಲ ವಿಧವಾದ ಕಶ್ಮಲವನ್ನು ಪರಿಹರಿಸಿಕೊಂಡು, ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡು ಯಾವ ವ್ಯಕ್ತಿಗಳಿಗೂ ಕಣ್ಣಿಗೆ ಕಾಣಿಸಿಕೊಳ್ಳದೆ ಇರುತ್ತಾರೆ. ಆದ್ದರಿಂದ ಇವರು ಅವ್ಯಕ್ತ ಯೋಗಿಗಳು ಎಂದು ಕರೆಸಿಕೊಳ್ಳುತ್ತಾರೆ. ಇನ್ನು ಕೆಲವರು ಲಕ್ಷ್ಮೀತತ್ತ್ವಕ್ಕಿಂತ ಶ್ರೇಷ್ಠನಾದ ನಾರಾಯಣನನ್ನು ಹೊಂದಿ, ಸಂಸಾರದಿಂದ ಬಿಡುಗಡೆ ಹೊಂದುವುದರಿಂದ ಈ ಮುಕ್ತರು ತಮ್ಮ ಯೋಗ್ಯತೆಗೆ ಅನುಗುಣವಾಗಿ ಸುಖವನ್ನು ಹೊಂದುವುದರಿಂದ ಪರ ಎಂದು ಕರೆಸಿಕೊಳ್ಳುತ್ತಾರೆ. ಈ ರೀತಿಯಾಗಿ ಮುಕ್ತಿಗೆ ಹೋಗುವ ವಿಷ್ಣುಭಕ್ತರಲ್ಲಿಯೇ ಅವಸ್ಥಾ ಭೇದದಿಂದ ನಾಲ್ಕು ವಿಧವು ಇದೆ ಎಂದು ಹೇಳುತ್ತಾರೆ. ಇದೆಲ್ಲವೂ ಯೋಗ್ಯಜೀವರಲ್ಲಿ ಇರುವ ವಿಭಾಗ. ಬೇರೆ ಯಾರಿಂದಲೂ ತಿಳಿಯಲಾಗದ ಸ್ವಭಾವವು ಉತ್ಕೃಷ್ಟವಾಗಿದೆ. ಆದ್ದರಿಂದ ಪ್ರಭವಾ ಎನಿಸಿಕೊಂಡಿದೆ. ಸಂಸಾರದಿಂದ ಬಿಡುಗಡೆಯನ್ನು ಹೊಂದುವುದರಿಂದ ಅಪ್ಯಯ ಎನಿಸಿಕೊಂಡಿದೆ.

ಉಚ್ಛ್ವಾಸಮಾತ್ರಮಪಿ ಚೇದ್ ಯೋಽಂತಕಾಲೇ ಸಮೋ ಭವೇತ್ ।
ಆತ್ಮಾನಮುಪಸಂಗಮ್ಯ ಸೋಽಮೃತತ್ವಾಯ ಕಲ್ಪತೇ ॥೩॥

ಯಾವ ಮನುಷ್ಯನು ಮರಣಸಮಯದಲ್ಲಿ ಉಸಿರನ್ನು ಸೆಳೆದುಕೊಳ್ಳುವಷ್ಟು ಕಾಲವಾದರೂ ಬುದ್ಧಿಯನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ, ಪರಮಾತ್ಮನ ಅಪರೋಕ್ಷವನ್ನು ಹೊಂದಿ, ದೇಹತ್ಯಾಗವನ್ನು ಮಾಡುತ್ತಾನೋ ಅವನು ಮುಕ್ತಿಗೆ ಹೋಗುತ್ತಾನೆ.

ನಿಮೇಷಮಾತ್ರಮಪಿ ಚ ಪಶ್ಯತ್ಯಾತ್ಮಾನಮಾತ್ಮನಿ ।
ಗಚ್ಛತ್ಯಾತ್ಮಪ್ರಸಾದೇನ ವಿದುಷಾಂ ಪ್ರಾಪ್ತಿಮವ್ಯಯಾಮ್ ॥೪॥

ಯಾವನು ಕಣ್ಣುಮುಚ್ಚಿತೆಗೆಯುವಷ್ಟು ಕಾಲವಾದರೂ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿದ್ದೇ ಆದರೆ ಆ ಪರಮಾತ್ಮನನ್ನು ಕಂಡ ಸುಖದಿಂದಲೇ ನಾಶರಹಿತವಾದ, ಅಕ್ಷಯವಾದ ಗತಿಯನ್ನು ಹೊಂದುತ್ತಾನೆ.

ಪ್ರಾಣಾಯಾಮೈರಥ ಪ್ರಾಣಾನ್ ಸಂಯಮ್ಯ ಚ ಪುನಃ ಪುನಃ ।
ದಶದ್ವಾದಶಭಿರ್ವಾऽಪಿ ಚತುರ್ವಿಂಶಾತ್ ಸಮಂತತಃ ॥೫॥

ಯಾವ ಸಾಧಕನು ಹತ್ತು ಅಥವಾ ಹನ್ನೆರಡು ಪ್ರಾಣಾಯಾಮಗಳ ಮೂಲಕ ಪುನಃ ಪುನಃ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಪರಮಾತ್ಮನನ್ನು ಧ್ಯಾನಿಸುತ್ತಾನೋ ಅವನು ಇಪ್ಪತ್ನಾಲ್ಕು ತತ್ತ್ವಗಳಿಂದ ಆಚೆಗಿರುವ ಇಪ್ಪತ್ತೈದನೆಯ ತತ್ತ್ವವೆನಿಸಿದ ಪರಮಾತ್ಮನನ್ನು ಹೊಂದುತ್ತಾನೆ.

ಏವಂ ಪೂರ್ವಂ ಪ್ರಸನ್ನಾತ್ಮಾ ಲಭತೇ ಯದ್ಯದಿಚ್ಛತಿ ।
ಅವ್ಯಕ್ತಾತ್ ಸತ್ತ್ವಮುದ್ರಿಕ್ತಮಮೃತತ್ವಾಯ ಕಲ್ಪತೇ ॥೬॥

ಹೀಗೆ ಮೊದಲು ಯಾವನು ಪ್ರಸನ್ನವಾದ ಮನಸ್ಸುಳ್ಳವನಾಗಿ ಭಗವಂತನನ್ನು ಸಂತೋಷಗೊಳಿಸಿ, ಲಕ್ಷ್ಯೀತತ್ತ್ವಕ್ಕಿಂತ ಶ್ರೇಷ್ಠವೆನಿಸಿದ, ಸತ್ತ್ವಗುಣಪ್ರವರ್ತಕನಾದ, ಶೋಭನ ಗುಣಸ್ವರೂಪಿಯಾದ ನಾರಾಯಣನನ್ನು ಹೊಂದುತ್ತಾನೋ ಅವನು ತಾನು ಬಯಸಿದ ವಸ್ತುಗಳೆಲ್ಲವನ್ನೂ ಪಡೆಯುತ್ತಾನೆ.

ಸತ್ತ್ವತ್ ಪರತರಂ ನಾನ್ಯತ್ ಪ್ರಶಂಸಂತೀಹ ತದ್ವಿದಃ ।
ಅನುಮಾನಾದ್ ವಿಜಾನೀಮಃ ಪುರುಷಂ ಸತ್ವಮಾಶ್ರಿತಮ್ ॥೭॥

ಸತ್ತ್ವಗುಣಪ್ರವರ್ತಕನಾದ ಅಥವಾ ಶೋಭನ ಗುಣಾತ್ಮಕನಾದ ನಾರಾಯಣನಿಗಿಂತ ಶ್ರೇಷ್ಠವಾದ ವಸ್ತುವು ಬೇರೆ ಯಾವುದೂ ಇರುವುದಿಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ. ಇಂತಹ ಪರಮಾತ್ಮನನ್ನು ವೇದದಿಂದ ಉಪೋದ್ಬಲಿತವಾದ ಅನುಮಾನದಿಂದ ಸತ್ತ್ವರೂಪವಾದ ಪ್ರಕೃತಿಯನ್ನು ಆಶ್ರಯಿಸಿದ ಪುರುಷ ಎಂದು ತಿಳಿಯುತ್ತೇವೆ.

ನ ಶಕ್ಯಮನ್ಯಥಾ ಗಂತುಂ ಪುರುಷಂ ತಮಧೋ ದ್ವಿಜಾಃ ॥೮॥

ಈ ತತ್ತ್ವವನ್ನು ತಿಳಿಯದೆ ಪುರುಷನನ್ನು ತಿಳಿಯಲು ಶಕ್ಯವಿಲ್ಲ.

ಕ್ಷಮಾ ಧೃತಿರಹಿಂಸಾ ಚ ಸಂತೋಷಃ ಸತ್ಯಮಾರ್ಜವಮ್ ।
ಜ್ಞಾನಂ ತ್ಯಾಗೋऽಥ ಸನ್ನ್ಯಾಸಃ ಸಾತ್ವಿಕಂ ವ್ರತಮಿಷ್ಯತೇ ॥೯॥

ಕ್ಷಮಾ, ಧೈರ್ಯ, ಅಹಿಂಸೆ, ಸಂತೋಷ, ಸತ್ಯ, ಸರಳತೆ, ಜ್ಞಾನ, ತ್ಯಾಗ, ಸಂನ್ಯಾಸ -ಇವುಗಳನ್ನು ಸಾತ್ವಿಕ ವ್ರತವೆಂದು ಹೇಳುತ್ತಾರೆ.

ಏತೇನೈವಾನುಮಾನೇನ ಮನ್ಯಂತೇऽಥ ಮನೀಷಿಣಃ ।
ಸತ್ವಂ ಚ ಪುರುಷಶ್ಚೈವ ತತ್ರ ನಾಸ್ತಿ ವಿಚಾರಣಾ ॥೧೦॥

ವಿದ್ವಾಂಸರಾದ ಪುರುಷರು ಯುಕ್ತಿಗಳಿಂದ ಸತ್ತ್ವ-ಪುರುಷ ಎಂಬ ಎರಡು ತತ್ತ್ವಗಳನ್ನು ತಿಳಿಯುತ್ತಾರೆ. ಇಲ್ಲಿ ವಿಚಾರ ಮಾಡಬೇಕಾದ ಪ್ರಮೇಯವು ಇರುವುದಿಲ್ಲ.

ಆಹುರೇತೇ ಮಹಾತ್ಮಾನೋ ಯೇ ಜ್ಞಾನೇಷು ಪ್ರತಿಷ್ಠಿತಾಃ ।
ಕ್ಷೇತ್ರಜ್ಞಸತ್ವಯೋರೈಕ್ಯಮಿತ್ಯೇತನ್ನೋಪಪದ್ಯತೇ ॥೧೧॥

ಜ್ಞಾನದಲ್ಲಿಯೇ ಮುಳುಗಿರುವ ಕೆಲವು ವಿದ್ವಾಂಸರು ಹಿಂದೆ ಹೇಳಿದಂತೆ ಯೋಗಿಗಳಲ್ಲಿ ನಾಲ್ಕು ಪ್ರಕಾರಗಳನ್ನು ಹೇಳುತ್ತಾ, ಬ್ರಹ್ಮ-ಜೀವರಲ್ಲಿ ಐಕ್ಯ ಇದೆ ಎಂಬ ಮತವನ್ನು ಅವರು ಅಂಗೀಕರಿಸುವುದಿಲ್ಲ.

ಪೃಥಗ್ಭೂತಂ ತತೋ ನಿತ್ಯಮಿತ್ಯೇತದಪಿ ವಾರಿತಮ್ ।
ಪೃಥಗ್ಭಾವಶ್ಚ ವಿಜ್ಞೇಯಃ ಸಹಜಶ್ಚಾಪಿ ತತ್ತ್ವತಃ ॥೧೨॥

ನಿತ್ಯವೂ ಈ ಜಗತ್ತು ಪರಮಾತ್ಮನಿಗಿಂತ ಭಿನ್ನವಾಗಿ, ಅನಿತ್ಯವಾಗಿದೆ. ಈಶ್ವರನಿಂದ ಪೃಥಕ್ ಆಗಿ ಇದೆ. ಪರಮಾತ್ಮನ ಅಪೇಕ್ಷೆಗಿಂತ ಮಿಥ್ಯಾ ಎನಿಸಿದೆ. ಈ ಕ್ಷೇತ್ರಜ್ಞನೆನಿಸಿದ ಜೀವನಿಗೂ ಸತ್ತ್ವ ಎನಿಸಿದ ಪರಮಾತ್ಮನಿಗೂ ಸ್ವಾಭಾವಿಕವಾದ ಭೇದವೇ ಇದೆ. ಆದ್ದರಿಂದ ಪರಮಾತ್ಮನ ದೆಸೆಯಿಂದ ಜಗತ್ತನ್ನು ಪೃಥಕ್ ಆಗಿಯೇ ತಿಳಿಯಬೇಕು. ಹಿಂದಿನ ಪದ್ಯದಲ್ಲಿ ಸ್ಪಷ್ಟವಾಗಿ ಐಕ್ಯವನ್ನು ನಿಷೇಧಿಸಿ, ಈ ಪದ್ಯದಲ್ಲಿ ಭೇದವನ್ನು ಸಮರ್ಥನೆ ಮಾಡುವುದರಿಂದ ಮೇಲ್ನೋಟದಲ್ಲಿ ತೋರುವ ಈ ಪದದ ಅರ್ಥಗಳನ್ನು ಸ್ವೀಕರಿಸಬಾರದು. ಐಕ್ಯವನ್ನು ನಿಷೇಧಿಸಿ ಭೇದ ಸತ್ಯ ಎಂಬ ಅರ್ಥವನ್ನೇ ಇಲ್ಲಿ ಸ್ವೀಕರಿಸಬೇಕು. ಒಂದು ವೇಳೆ ಹೀಗೆ ಅರ್ಥವನ್ನು ಹೇಳದಿದ್ದಲ್ಲಿ '**ಅಹಂ ಬ್ರಾಹ್ಮಣಃ**' '**ನಾಹಂ ಬ್ರಾಹ್ಮಣಃ**' ಎಂಬ ವಾಕ್ಯಗಳು ಪರಸ್ಪರ ವಿರುದ್ಧವಾಗುವಂತೆ '**ಪೃಥಕ್ ಭಾವಃ ನ**' '**ಪೃಥಕ್ ಭಾವೋಽಪಿ ವಿಜ್ಞೇಯಃ**' ಎಂಬ ವಾಕ್ಯಗಳಲ್ಲಿ ಪರಸ್ಪರ ವಿರೋಧ ಉಂಟಾಗಿ ವ್ಯಾಹತಿ ದೋಷವು ಬಂದೀತು. ಎಲ್ಲಿ ಐಕ್ಯವನ್ನು ನಿಷೇಧಿಸುತ್ತಾರೋ ಅಲ್ಲಿ ನಿಯಮೇನ ಭೇದವನ್ನು ಸಾಧಿಸಲೇಬೇಕು. ಇಲ್ಲದಿದ್ದಲ್ಲಿ ಪ್ರಕ್ರಮವಿರೋಧವು ಉಂಟಾಗುತ್ತದೆ. ಆದ್ದರಿಂದಲೇ ಹಿಂದೆ '**ಯೇ ಜ್ಞಾನೇಷು ಪ್ರತಿಷ್ಠಿತಾಃ, ಏತೇ ಮಹಾತ್ಮಾನಃ**' ಮುಂತಾದ ವಾಕ್ಯಗಳಲ್ಲಿ ಮೀಮಾಂಸಾ ನಿಪುಣರಾದ ಮಹಾಪುರುಷರನ್ನು ಸಂಗ್ರಹಿಸಲು ಈ ವಿಶೇಷಣವನ್ನು ನೀಡಿದ್ದಾರೆ.

ಮುಂದಿನ ಪದ್ಯದಲ್ಲಿ ಸಮಸ್ತ ಸಕಲ ಜೀವರಿಗೆ ಆಧಾರವಾಗಿರುವ, ಜೀವರ ಹೃದಯದಲ್ಲಿರುವ ಭಗವಂತನ ರೂಪಗಳಲ್ಲಿ ಭೇದಗಳನ್ನು ತಿಳಿಯಬಾರದು. ಹೊರತು ಸ್ವಗತಭೇದ ವರ್ಜಿತನಾದ ನಾರಾಯಣನಿಂದ ನಿಯಮ್ಯರಾದ ಜೀವರಲ್ಲಿ ಭೇದವನ್ನೇ ಹೇಳಬೇಕು ಎಂದು ತಿಳಿಸಲು ದೃಷ್ಟಾಂತವನ್ನು ನೀಡುತ್ತಾರೆ.

ತಥಾ ವೈಕತ್ವನಾನಾತ್ವಮಿಷ್ಯತೇ ವಿದುಷಾಂ ನಯಾತ್ ।
ಮಶಕೌದುಂಬರೇ ತ್ವೈಕ್ಯಂ ಪೃಥಗ್ಭಾವಶ್ಚ ದೃಶ್ಯತೇ ॥೧೩॥

'**ಮಶಕೌದುಂಬರಮ್**' ಎಂಬಲ್ಲಿ ದ್ವಂದ್ವೈಕವದ್ಭಾವವನ್ನು ತಿಳಿಯಬೇಕು. ಸೊಳ್ಳೆಗಳಿಗೆ ಆಧಾರವಾದ ಅತ್ತಿಯ ಹಣ್ಣಿನಲ್ಲಿ ಐಕ್ಯವನ್ನು ಹೇಳಿದಂತೆ ಇಲ್ಲಿ ಆಧೇಯ

ಎನಿಸಿದ ಸೊಳ್ಳೆಗಳಿಗೆ ಅತ್ತಿಹಣ್ಣಿನಿಂದ ಅತ್ಯಂತ ಭೇದವೇ ಇದೆ. ಆ ಅತ್ತಿಯ ಹಣ್ಣಿನ ಒಳಗಡೆ ಇರುವ ಸೊಳ್ಳೆಗಳಲ್ಲಿ ಪರಸ್ಪರ ಭೇದವಿದೆ. ಆ ಸೊಳ್ಳೆಗಳು ಅನೇಕ ಸಂಖ್ಯೆಯಲ್ಲಿ ಇರುವುದರಿಂದ ನಾನಾತ್ವವೂ ಇದೆ. ಹೀಗೆ ಅತ್ತಿ ಹಣ್ಣಿಗೂ ಸೊಳ್ಳೆಗಳಿಗೂ ಬಹುಸಂಖ್ಯಾಕವಾದ್ದರಿಂದ ನಾನಾತ್ವವು ಎಂಬುದಾಗಿ ಪೃಥಕ್ ಭಾವವು ಮೂರು ವಿಧವಾಗಿದೆ. ಸೊಳ್ಳೆಗಳಿಗೂ ಮತ್ತು ಅತ್ತಿಹಣ್ಣಿಗೂ ಆಧಾರ-ಆಧೇಯ ಭಾವರೂಪ ಸಂಬಂಧವು ಚೆನ್ನಾಗಿ ತೋರುತ್ತಿದೆ. ಇಲ್ಲಿ ಜಡವಾದ ಅತ್ತಿಹಣ್ಣಿಗೂ ಚೇತನವಾದ ಸೊಳ್ಳೆಗಳಿಗೂ ಐಕ್ಯವನ್ನು ಹೇಳಲಾಗುವುದಿಲ್ಲ. ಇದರಿಂದ ಪರಮಾತ್ಮನೆಂಬ ಅತ್ತಿಯ ಹಣ್ಣನ್ನು ಆಶ್ರಯವಾಗಿ ಪಡೆದಿರುವ ಜೀವರಿಗೂ, ಪರಮಾತ್ಮನಿಗೂ ಪರಸ್ಪರ ಭೇದವೇ ಕಾಣಿಸುತ್ತದೆ ಎಂದು ತಾತ್ಪರ್ಯ.

ಮತ್ಸ್ಯೋ ಯಥಾऽನ್ಯಃ ಸ್ಯಾದ್ ಅಪ್ಸು ಸಂಪ್ರಯೋಗಸ್ತಥಾನಯೋಃ ।
ಸಂಬಂಧತೋಯಬಿಂದೂನಾಂ ಪರ್ಣೈಃ ಕೋಕನದಸ್ಯ ಚ ॥೧೪॥

ನೀರಿನಲ್ಲಿರುವ ಮತ್ಸ್ಯಕ್ಕೂ, ನೀರಿಗೂ ಆಧಾರ-ಆಧೇಯ ಭಾವವಿರುವುದರಿಂದ ಹೇಗೆ ಐಕ್ಯವಿರುವುದಿಲ್ಲವೋ ಪೃಥಕ್ತ್ವವೇ ಇದೆಯೋ ಮತ್ಸ್ಯ-ಜಲಗಳಿಗೆ ಆಧಾರ-ಆಧೇಯ ಭಾವರೂಪಸಂಬಂಧವು ತೋರುತ್ತಿದೆಯೋ ಇದರಂತೆ ಜೀವ-ಪರಮಾತ್ಮರಿಗೆ ಪರಸ್ಪರ ಆಧಾರ-ಆಧೇಯ ಭಾವರೂಪ ಸಂಬಂಧ ಇರುವುದರಿಂದ ಜಡವಾದ ನೀರಿಗೂ ಚೇತನವಾದ ಮತ್ಸ್ಯಕ್ಕೂ ಐಕ್ಯ ಹೇಳಲು ಬಾರದಂತೆ ಜೀವನಿಗೂ ಪರಮಾತ್ಮನಿಗೂ ವೈಲಕ್ಷಣ್ಯ ಇರುವುದರಿಂದ ಐಕ್ಯವನ್ನು ಹೇಳಲು ಬರುವುದಿಲ್ಲ. ನೀಲ ಕಮಲದ ಎಲೆಗೂ, ಆ ಎಲೆಯಲ್ಲಿ ಇರುವ ನೀರಿಗೂ ಹೇಗೆ ಆಧಾರ-ಆಧೇಯದಿಂದ ಭೇದವಿದೆಯೋ ಇದರಂತೆ ಜೀವಾತ್ಮನಿಗೂ ಪರಮಾತ್ಮನಿಗೂ ಭೇದವೇ ಇದೆ.

ವ್ಯಾಖ್ಯಾನ ವಿಶೇಷ– ಭಾಸ್ಕರರು ಆಧಾರಭೂತನಾದ ಬ್ರಹ್ಮನಿಗೂ ಆಧೇಯನೆನಿಸಿದ ಜೀವನಿಗೂ ಭೇದಾಭೇದವಿದೆ ಎಂದು ಹೇಳುತ್ತಾರೆ. ಈ ದೃಷ್ಟಾಂತಗಳನ್ನು ತಿಳಿದಾಗ ಭೇದಾಭೇದವೆಂಬ ಮತವು ನಿರಾಕೃತವಾಗಿದೆ ಎಂದು ತಿಳಿಯುತ್ತದೆ. ಸೊಳ್ಳೆಗಳಿಗೂ-ಅತ್ತಿಯ ಹಣ್ಣಿಗೂ, ನೀರಿಗೂ-ಮತ್ಸ್ಯಗಳಿಗೂ, ನೀಲಕಮಲಕ್ಕೂ-ನೀಲಕಮಲದಲ್ಲಿರುವ ನೀರಿನ ಹನಿಗೂ ಭೇದಾಭೇದವನ್ನು ಹೇಳಲು ಸಾಧ್ಯವಿಲ್ಲ. ಈ ದೃಷ್ಟಾಂತವನ್ನು ಹೊಂದಾಣಿಕೆ ಮಾಡಬೇಕಾದಲ್ಲಿ ಪರಸ್ಪರ ಭೇದವನ್ನೇ ಹೇಳಬೇಕೇ ವಿನಾ ಜೀವ-ಪರಮಾತ್ಮರಿಗೆ ಐಕ್ಯವನ್ನು ಹೇಳಲಾಗದು. ಇನ್ನು ಭೂತ-ಭವಿಷ್ಯತ್-ವರ್ತಮಾನ ಕಾಲಗಳಲ್ಲಿ ಇರುವ ದೇಹಗಳಲ್ಲಿ ಜೀವನು ಒಬ್ಬನೇ

ಸಂಚರಿಸುತ್ತಾನೆ, ದೇಹಗಳು ಮಾತ್ರ ಭಿನ್ನ-ಭಿನ್ನವಾಗಿರುತ್ತವೆ. ಆದ್ದರಿಂದ ಎಲ್ಲರ ದೇಹದಲ್ಲಿರುವ ಆತ್ಮನು ಒಬ್ಬನೇ ಎಂದು ಕೆಲವರು ಹೇಳುತ್ತಾರೆ. ಇದೂ ಸರಿಯಲ್ಲ. ಹೀಗೆ ಹೇಳಿದರೆ '**ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಪರಾಣಿ**' ಮುಂತಾಗಿ ಗೀತೆಯಲ್ಲಿ ಕೃಷ್ಣ ಹೇಳಿದಂತೆ ಪಟಗಳಲ್ಲಿ ಅನೇಕತ್ವವಿದೆ. ಆ ಬಟ್ಟೆಯನ್ನು ಧರಿಸುವ ಜೀವನಲ್ಲಿ ಏಕತ್ವವೇ ಇದೆ ಎಂದು ಹೇಳಿದಂತಾಗುತ್ತದೆ. ನೀವು ತಿಳಿಸಿದಂತೆ ಹೇಳುವುದಾಗಿದ್ದಲ್ಲಿ ಮಹಾಭಾರತವು ಈ ರೀತಿಯಾದ ದೃಷ್ಟಾಂತವನ್ನು ಹೇಳದೆ ಒಂದೇ ಸರ್ಪವು ಅನೇಕ ಪೊರೆಗಳನ್ನು ಬಿಡುವಂತೆ ಒಬ್ಬನೇ ಚೇತನನು ಅನೇಕ ದೇಹಗಳನ್ನು ಪಡೆಯುತ್ತಾನೆ, ನಾಶಪಡಿಸಿಕೊಳ್ಳುತ್ತಾನೆ ಎಂದು ಸರ್ಪದ ದೃಷ್ಟಾಂತವನ್ನು ಹೇಳಬೇಕಾಗಿತ್ತು. ಇಲ್ಲಿ ಅತ್ತಿಹಣ್ಣು-ಸೊಳ್ಳೆಗಳು ಎಂದು ದೃಷ್ಟಾಂತವನ್ನು ಹೇಳಿರುವುದರಿಂದ ಆಧಾರವಾದ ಹಣ್ಣು ಒಂದೇ ಆಗಿದೆ. ಅದನ್ನು ಆಶ್ರಯಿಸಿದ ಸೊಳ್ಳೆಗಳು ಒಂದೇ ಸಮಯದಲ್ಲಿ ಅನೇಕವಾಗಿ ಭಿನ್ನಭಿನ್ನವಾಗಿವೆ ಎಂದು ಹೇಳುವ ಮೂಲಕ ಒಬ್ಬನೇ ಪರಬ್ರಹ್ಮನನ್ನು ಆಶ್ರಯಿಸಿದ ಅನಂತ ಜೀವರಲ್ಲಿ ಭೇದವೂ, ನಾನಾತ್ವವೂ ಇದೆ ಎಂದು ಹೇಳಿದಂತಾಯಿತು. ದೃಷ್ಟಾಂತದಲ್ಲಿ ಹೇಳಿದ್ದನ್ನು ಸಂಪೂರ್ಣವಾಗಿ ದ್ರಾಷ್ಟಾಂತಿಕದಲ್ಲಿಯೂ ಅನ್ವಯ ಮಾಡಿಕೊಳ್ಳಬೇಕು. ಆಧಾರಭೂತನಾದ ಬ್ರಹ್ಮನು ಒಬ್ಬನಾಗಿದ್ದಾನೆ, ಆಧೇಯರಾದ ಜೀವರು ಒಂದೇ ಕಾಲದಲ್ಲಿ ನಾನಾ ವಿಧವಾಗಿ ಆಶ್ರಯವನ್ನು ಹೊಂದಿದ್ದಾರೆ ಎಂದಾಗ ಈ ದೃಷ್ಟಾಂತವು ಸರಿಯಾಗುತ್ತದೆ. ಇಲ್ಲವಾದಲ್ಲಿ ದೃಷ್ಟಾಂತವೇ ತಪ್ಪಾಗುತ್ತದೆ. ಆದ್ದರಿಂದ ಜೀವರ ಏಕತ್ವ, ದೇಹಗಳ ನಾನಾತ್ವ ಎಂಬ ಯೋಜನೆಯು ಅಪ್ರಾಮಾಣಿಕವೇ ಆಗಿದೆ. ಆದ್ದರಿಂದ ಕ್ಷೇತ್ರಜ್ಞನಾದ ಪರಮಾತ್ಮ, ಜೀವರ ನಡುವೆ ಆಧಾರಭೂತನಾದ ಬ್ರಹ್ಮನನ್ನು ಒಬ್ಬನನ್ನಾಗಿ, ಅವನ ಉದರದ ಮಧ್ಯದಲ್ಲಿ ಜೀವರನ್ನು ನಾನಾ ವಿಧವಾಗಿ; ಆಧಾರಭೂತನಾದ ಬ್ರಹ್ಮನು ಭಿನ್ನನಾಗಿದ್ದಾನೆಂದು, ಆಧೇಯರಾದ ಜೀವರು ಪರಸ್ಪರ ಭೇದವನ್ನು ಹೊಂದಿದ್ದಾರೆಂದೂ; ಜೀವರು ಬಹುಸಂಖ್ಯೆಯಲ್ಲಿರುವುದರಿಂದ ನಾನಾತ್ವವು ಇದೆ ಎಂದು ಮೂರು ವಿಧವಾದ ನಾನಾತ್ವವು ಹೇಳಲ್ಪಟ್ಟಿದೆ. ಬ್ರಹ್ಮನಿಗೂ ಜೀವರಿಗೂ ಆಧಾರ-ಆಧೇಯಭಾವರೂಪವಾದ ಸಂಬಂಧವೂ ಹೇಳಲ್ಪಟ್ಟಂತಾಗಿದೆ. ಮುಕ್ತಿಯಲ್ಲಿಯೂ ಕೂಡ ಈ ಭೇದವು ಸತ್ಯವಾಗಿದೆ ಎಂದು ತಿಳಿಸಲು ವ್ಯಾಸರು ಶ್ಲೋಕದಲ್ಲಿ 'ಯೋಗ' ಎಂದು ಇಷ್ಟೇ ಹೇಳದೆ 'ಸಂಪ್ರಯೋಗ' ಎಂದು ಎರಡು ಉಪಸರ್ಗಗಳನ್ನು ಹೇಳಿದ್ದಾರೆ. ಸರ್ವಜ್ಞನಾದ ಪರಮಾತ್ಮನಿಗೂ ಅಲ್ಪಜ್ಞನಾದ ಜೀವನಿಗೂ ಐಕ್ಯವನ್ನು ಹೇಳಲಾಗುವುದಿಲ್ಲ. ಇದನ್ನು ಸೂಚಿಸಲು ಹಿಂದೆ ಬ್ರಹ್ಮನಲ್ಲಿ ಕ್ಷೇತ್ರಜ್ಞ ಪದವನ್ನು ಜೀವರಲ್ಲಿ ಜಂತುಸಾಧಾರಣವಾದ ಸತ್ತ್ವ ಪದವನ್ನು ಹೇಳಿದ್ದಾರೆ. ಇಲ್ಲದಿದ್ದಲ್ಲಿ ಜೀವ-ಬ್ರಹ್ಮ ಎಂದು ಹೇಳಬೇಕಾಗಿತ್ತು. '**ನೇಹ ನಾನಾಸ್ತಿ ಕಿಂಚನ**' '**ದ್ವಾಸುಪರ್ಣಾ ಸಯುಜಾ ಸಖಾಯ**' ಇತ್ಯಾದಿ ವಾಕ್ಯಗಳನ್ನು ವಿಚಾರ ಮಾಡುವವರು ವಿದ್ವಾಂಸರೇ ಆದುದರಿಂದ '**ವಿದುಷಾಂ ನಯಾತ್ ಇಷ್ಯತೇ**' ಎಂದು ವ್ಯಾಸರು ಹೇಳಿದ್ದಾರೆ. ಅಥವಾ '**ಶಾರೀರಶ್ಚೋಭಯೇಪಿ ಹಿ ಭೇದೇನೈನಮಧೀಯತೇ**' ಎಂಬ ಬ್ರಹ್ಮಸೂತ್ರನ್ಯಾಯವನ್ನು ಸೂಚಿಸುವ ಶಬ್ದ '**ನಯಾತ್**' ಎಂಬ ಶಬ್ದ. '**ವಿದುಷಾಂ ನಯಾತ್**' ಎಂದರೆ ಜ್ಞಾನಿಗಳು ಹೇಳುವ ಬ್ರಹ್ಮಸೂತ್ರ ನ್ಯಾಯದಿಂದಲೂ ಎಂದು ಅರ್ಥ. ಆದ್ದರಿಂದ ಜೀವ-ಬ್ರಹ್ಮರಿಗೆ ಸಹಜವಾದ ಭೇದವನ್ನು, ಪರಬ್ರಹ್ಮನ ಮಹತ್ವವನ್ನು ತಿಳಿದ ಯೋಗಿಯು ಮುಕ್ತನಾಗುತ್ತಾನೆ ಎಂದು ಭಾವ.

ಗುರುರುವಾಚ

ಇತ್ಯುಕ್ತವಂತಸ್ತೇ ವಿಪ್ರಾಸ್ತದಾ ಲೋಕಪಿತಾಮಹಮ್ ।
ಪುನಃ ಸಂಶಯಮಾಪನ್ನಾಃ ಪಪ್ರಚ್ಛುರ್ಮುನಿಸತ್ತಮಾಃ ॥೧೫॥

ಗುರು– ಹೀಗೆ ಹೇಳಿದ ನಂತರ ಅವನ ಸುತ್ತಲೂ ಇದ್ದ (ದಕ್ಷಪ್ರಜಾಪತಿಯೇ ಮೊದಲಾದ) ಮುನಿಶ್ರೇಷ್ಠರು ಪುನಃ ಸಂಶಯಗೊಂಡವರಾಗಿ ಬ್ರಹ್ಮನನ್ನು ಪ್ರಶ್ನಿಸಿದರು.

ಕೋ ವಾ ಸ್ವಿದಿಹ ಧರ್ಮಾಣಾಮನುಷ್ಠೇಯತಮೋ ಮತಃ ।
ವ್ಯಾಹತಾಮಿವ ಪಶ್ಯಾಮೋ ಧರ್ಮಸ್ಯ ವಿವಿಧಾಂ ಗತಿಮ್ ॥೧೬॥

ದೇವಶ್ರೇಷ್ಠನೇ, ಜಗತ್ತಿನಲ್ಲಿರುವ ಧರ್ಮಗಳಲ್ಲಿ ಯಾವ ಧರ್ಮವು ಅನುಷ್ಠಾನ ಮಾಡಲು ಉತ್ತಮವಾಗಿದೆ ಎಂದು ತಿಳಿಸು. ಧರ್ಮದ ಮಾರ್ಗಗಳು ಪರಸ್ಪರ ವ್ಯಾಹತವಾಗಿವೆ ಎಂದು, ಅನೇಕ ಗತಿಯುಳ್ಳವುಗಳು ಎಂದು ನಾವು ತಿಳಿದಿದ್ದೇವೆ.

ಊರ್ಧ್ವಂ ದೇಹಾದ್ ವದಂತ್ಯೇಕೇ ನೈತದಸ್ತೀತಿ ಚಾಪರೇ ।
ಕೇಚಿತ್ ಸಂಶಯಿತಂ ಸರ್ವಂ ನಿಃಸಂಶಯಮಥಾಪರೇ ॥೧೭॥

ಕೆಲವರು ನಾಸ್ತಿಕರಿಗಿಂತ ಭಿನ್ನರಾದ ಆಸ್ತಿಕ ಪುರುಷರು ದೇಹದ ಪತನದ ನಂತರವೂ ಪರಲೋಕಾದಿಗಳು ಇದೆ ಎಂದು ಹೇಳುತ್ತಾರೆ. ಚಾರ್ವಾಕಾದಿಗಳು ಪರಲೋಕಾದಿಗಳು ಇಲ್ಲ ಎಂದು ಹೇಳುತ್ತಾರೆ. ಮಧ್ಯಮ ಜೀವರು ಸಜ್ಜನರ ಸಮಾಗಮವಾದಾಗ ಪರಲೋಕವು ಇವೆ ಎಂದು ಹೇಳುತ್ತಾರೆ. ದುರ್ಜನರ ಸಮಾಗಮವಾದಾಗ ಪರಲೋಕ ಇಲ್ಲ ಎಂದು ಹೇಳುತ್ತಾರೆ. ಉತ್ತಮ ಜೀವರು ನಿಸ್ಸಂಶಯವಾಗಿ ಭಗವಂತನ ಸರ್ವೋತ್ತಮತ್ವಾದಿಗಳನ್ನೇ ಹೇಳುತ್ತಾರೆ. ಅಧಮ ಜೀವರು ನಿಸ್ಸಂಶಯವಾಗಿ ಐಕ್ಯಾದಿಗಳನ್ನೇ ಹೇಳುತ್ತಾರೆ.

ಅನಿತ್ಯಂ ನಿತ್ಯಮಿತ್ಯೇಕೇ ನಾಸ್ತ್ಯಸ್ತೀತ್ಯಪಿ ಚಾಪರೇ ।
ತ್ರಿಧೇತ್ಯೇಕೇ ದ್ವಿಧೇತ್ಯೇಕೇ ವ್ಯಾಕೀರ್ಣಮಿತಿ ಚಾಪರೇ ॥೧೮॥

ಮನ್ಯಂತೇ ಬ್ರಾಹ್ಮಣಾ ಏವ ಪ್ರೌಢಸ್ತತ್ತ್ವಾರ್ಥದರ್ಶಿನಃ ।
ಏವಮೇಕೇ ಪೃಥಕ್ ಚಾನ್ಯೇ ಬಹುತ್ವಮಿತಿ ಚಾಪರೇ ॥೧೯॥

ಬೌದ್ಧಧರ್ಮೀಯರು ಎಲ್ಲವನ್ನೂ ಅನಿತ್ಯವೆಂದೂ, ಕ್ಷಣಿಕವೆಂದೂ ಹೇಳುತ್ತಾರೆ. ಸತ್ಕಾರ್ಯವಾದಿಗಳು ಎಲ್ಲವೂ ನಿತ್ಯವೆಂದು ಹೇಳುತ್ತಾರೆ. ಮಾಯಾವಾದಿಗಳು ಜಗತ್ತು ಪಾರಮಾರ್ಥಿಕವಾಗಿ ಇರುವುದಿಲ್ಲ, ವ್ಯಾವಹಾರಿಕವಾಗಿ ಇದೆ ಎಂದು ಹೇಳುತ್ತಾರೆ. ಆ ಮಾಯಾವಾದಿಗಳಲ್ಲೇ ಕೆಲವರು ಬ್ರಹ್ಮಚೈತನ್ಯ, ಜೀವಚೈತನ್ಯ ಎಂಬ ಎರಡು ವಿಧವಾದ ಚೈತನ್ಯವನ್ನು ಕಲ್ಪಿಸಿ ಹೇಳುತ್ತಾರೆ. ಇನ್ನು ಕೆಲವರು ಜೀವ-ಈಶ್ವರ-ನಿರ್ಗುಣ ಬ್ರಹ್ಮ ರೂಪದಿಂದ ಮೂರು ವಿಧವಾಗಿ ಬ್ರಹ್ಮನು ಇದ್ದಾನೆ ಎಂದು ಹೇಳುತ್ತಾರೆ. ಮಾಯಾವಾದಿಗಳಲ್ಲೇ ಕೆಲವರು ಅಜ್ಞಾನ ಬ್ರಹ್ಮ ಎಂದು ಹೇಳುತ್ತಾರೆ. ಅಜ್ಞಾನ ಶಬಲ ಬ್ರಹ್ಮ, ಮಾಯಾ ಶಬಲ ಬ್ರಹ್ಮ ಎಂಬುದು ಮಾಯಾವಾದಿಗಳ ವಾದ. ಜ್ಞಾನಿಗಳು ನನ್ನಿಂದ ಹೇಳಲ್ಪಟ್ಟ ಅರ್ಥವೇ ನಿಜವಾದ ತತ್ತ್ವಾರ್ಥವೆಂದು ಸತ್ತರ್ಕಗಳ ಮೂಲಕವೂ, ದುಷ್ಟತರ್ಕಗಳ ಮೂಲಕವೂ ಯುಕ್ತಿಬದ್ಧವಾಗಿಯೇ ಸಮರ್ಥಿಸುತ್ತಾರೆ.

ದೇಶಕಾಲಾವುಭೌ ಕೇಚಿನ್ನೈತದಸ್ತೀತಿ ಚಾಪರೇ ।
ಜಟಾಜಿನಧರಾಶ್ಚಾನ್ಯೇ ಮುಂಡಾಃ ಕೇಚಿದಸಂವೃತಾಃ ॥೨೦॥

ಪುಣ್ಯದೇಶ, ಪುಣ್ಯಕಾಲ ಇದೆ ಎಂದು ಕೆಲವರು ಹೇಳುತ್ತಾರೆ. ನಾಸ್ತಿಕರು ಪುಣ್ಯಕಾಲಾದಿಗಳು ಎಂಬುವೇ ಇಲ್ಲ ಎಂದು ಹೇಳುತ್ತಾರೆ. ಕೆಲವರು ಜಟೆಯನ್ನು ಧರಿಸಿರುತ್ತಾರೆ, ಕೆಲವರು ಜಿಂಕೆಯ ತೊಗಲನ್ನು ಧರಿಸಿರುತ್ತಾರೆ, ಕೆಲವರು ತಲೆಯನ್ನು ಮುಂಡನ ಮಾಡಿಸಿಕೊಂಡಿರುತ್ತಾರೆ, ಕೆಲವರು ದಿಗಂಬರರಾಗಿರುತ್ತಾರೆ.

ಅಸ್ನಾನಂ ಕೇಚಿದಿಚ್ಛಂತಿ ಸ್ನಾನಮಪ್ಯಪರೇ ಜನಾಃ ।
ಮನ್ಯಂತೇ ಬ್ರಾಹ್ಮಣಾ ದೇವಾ ಬ್ರಹ್ಮಜ್ಞಾಸ್ತತ್ತ್ವದರ್ಶಿನಃ ॥೨೧॥

ಕೆಲವರು ಸ್ನಾನವೇ ಬೇಕಿಲ್ಲ ಎಂದು ಹೇಳುತ್ತಾರೆ. ವೇದಜ್ಞರಾದ, ತತ್ತ್ವವೇತ್ತೃಗಳಾದ ಬ್ರಾಹ್ಮಣರು ಸ್ನಾನ ಮಾಡುವುದು ಶ್ರೇಷ್ಠ ಎಂದು ಹೇಳುತ್ತಾರೆ.

ಆಹಾರಂ ಕೇಚಿದಿಚ್ಛಂತಿ ಕೇಚಿಚ್ಚಾನಶನೇ ರತಾಃ ।
ಕರ್ಮ ಕೇಚಿತ್ ಪ್ರಶಂಸಂತಿ ಪ್ರಶಾಂತಿಂ ಚಾಪರೇ ಜನಾಃ ॥೨೨॥

ಕೆಲವರು ಭೋಜನ ಮಾಡುವುದು ಒಳ್ಳೆಯದೆಂದು ಹೇಳುತ್ತಾರೆ. ಕೆಲವರು ಭೋಜನ ಮಾಡದೆ ಇರುವುದರಲ್ಲಿಯೇ ಅಭಿರುಚಿಯನ್ನು ಹೊಂದಿರುತ್ತಾರೆ. ಕೆಲವರು ಕರ್ಮಗಳನ್ನು ಪ್ರಶಂಸಿಸುತ್ತಾರೆ, ಕೆಲವರು ಪರಮ ಶಾಂತಿಯನ್ನೇ ಪ್ರಶಂಸೆ ಮಾಡುತ್ತಾರೆ.

ಕೇಚಿನ್ಮೋಕ್ಷಂ ಪ್ರಶಂಸಂತಿ ಕೇಚಿದ್ ಭೋಗಾನ್ ಪೃಥಗ್ವಿಧಾನ್ ।
ಧನಾನಿ ಕೇಚಿದಿಚ್ಛಂತಿ ನಿರ್ಧನತ್ವಮಥಾಪರೇ ।
ಉಪಾಸ್ಯಾಂ ಸಾಧಯಂತ್ಯೇಕೇ ನೈತದಸ್ತೀತಿ ಚಾಪರೇ ॥೨೩॥

ಕೆಲವರು ಮೋಕ್ಷವನ್ನು ಪ್ರಶಂಸಿಸುತ್ತಾರೆ. ಕೆಲವರು ನಾನಾ ವಿಧವಾದ ಭೋಗಗಳನ್ನೇ ಹೊಗಳುತ್ತಾರೆ. ಕೆಲವರು ಧನಗಳನ್ನು ಅಪೇಕ್ಷಿಸುತ್ತಾರೆ. ಕೆಲವರು ದಾರಿದ್ರ್ಯವನ್ನೇ ಬಯಸುತ್ತಾರೆ. ಕೆಲವರು ದೇವತೆಗಳ ಉಪಾಸನೆಯನ್ನು ಮಾಡುತ್ತಾರೆ. ಕೆಲವರು ಈ ಉಪಾಸನೆಗೆ ಅರ್ಥವಿಲ್ಲ ಎಂದು ಹೇಳುತ್ತಾರೆ.

ಅಹಿಂಸಾನಿರತಾಶ್ಚಾನ್ಯೇ ಕೇಚಿದ್ ಹಿಂಸಾಪರಾಯಣಾಃ ।
ಪುಣ್ಯೇನ ಯಶಸಾ ಚಾನ್ಯೇ ನೈತದಸ್ತೀತಿ ಚಾಪರೇ ॥೨೪॥

ಕೆಲವರು ಅಹಿಂಸಾವ್ರತ ಪರಾಯಣರಾಗಿರುತ್ತಾರೆ. ಕೆಲವರು ಹಿಂಸೆಯೇ ಬದುಕಿನ ಧರ್ಮವೆನ್ನುತ್ತಾರೆ. ಕೆಲವರು ಯಶಸ್ಸಿನಿಂದಲೂ, ಪುಣ್ಯದಿಂದಲೂ ಸಂಪನ್ನರಾಗಿರುತ್ತಾರೆ. ಇನ್ನು ಕೆಲವರು ಯಶಸ್ಸು, ಪುಣ್ಯಗಳನ್ನು ನಿರಾಕರಿಸುತ್ತಾರೆ.

ಸದ್ಭಾವನಿರತಾಶ್ಚಾನ್ಯೇ ಕೇಚಿತ್ಸಂಶಯಿತೇ ಸ್ಥಿತಾಃ ।
ದುಃಖಾದನ್ಯೇ ಸುಖಾದನ್ಯೇ ಧ್ಯಾನಮಿತ್ಯಪರೇ ಜನಾಃ ॥೨೫॥

ಕೆಲವರು ಉತ್ತಮ ಸ್ವಭಾವ ಹೊಂದಿರುತ್ತಾರೆ. ಕೆಲವರು ಮಿಶ್ರಸ್ವಭಾವವನ್ನು ಹೊಂದಿರುತ್ತಾರೆ. ಕೆಲವರು ತಪಸ್ವಿಗಳು ಕಾಯಕ್ಲೇಶದ ದುಃಖಗಳನ್ನೂ ತಪಸ್ಸು ಎಂದು ಭಾವಿಸುತ್ತಾರೆ. ಕೆಲವರು ಧ್ಯಾನವನ್ನು ಹೇಳುತ್ತಾರೆ.

ಯಜ್ಞ ಇತ್ಯಪರೇ ವಿಪ್ರಾಃ ಪ್ರದಾನಮಿತಿ ಚಾಪರೇ ।
ತಪಸ್ತ್ವನ್ಯೇ ಪ್ರಶಂಸಂತಿ ಸ್ವಾಧ್ಯಾಯಮಪರೇ ಜನಾಃ ॥೨೬॥

ಕೆಲವು ಬ್ರಾಹ್ಮಣರು ಯಜ್ಞವನ್ನು ಶ್ರೇಷ್ಠವೆನ್ನುತ್ತಾರೆ, ಕೆಲವರು ದಾನವನ್ನು ಶ್ರೇಷ್ಠವೆನ್ನುತ್ತಾರೆ. ಕೆಲವರು ತಪಸ್ಸನ್ನು ಪ್ರಶಂಸೆ ಮಾಡಿದರೆ, ಕೆಲವರು ಸ್ವಾಧ್ಯಾಯವೇ ಶ್ರೇಷ್ಠವೆನ್ನುತ್ತಾರೆ.

ಜ್ಞಾನಂ ಸನ್ನ್ಯಾಸಮಿತ್ಯೇಕೇ ಸ್ವಭಾವಂ ಭೂತಚಿಂತಕಾಃ ।
ಸರ್ವಮೇಕೇ ಪ್ರಶಂಸಂತಿ ನ ಸರ್ವಮಿತಿ ಚಾಪರೇ ॥೨೭॥

ಕೆಲವರು ಜ್ಞಾನವೇ ಸಂನ್ಯಾಸ ಎಂದರೆ, ಭೌತಿಕವಿಚಾರವುಳ್ಳ ಜನರು ಸ್ವಭಾವವೇ ಮುಖ್ಯ ಎನ್ನುತ್ತಾರೆ. ಕೆಲವರು ಎಲ್ಲವೂ ಸರಿ ಎನ್ನುತ್ತಾರೆ, ಕೆಲವರು ಎಲ್ಲವೂ ಸರಿಯಲ್ಲ ಎನ್ನುತ್ತಾರೆ.

ಏವಂ ವ್ಯುತ್ಥಾಪಿತೇ ಧರ್ಮೇ ಬಹುಧಾ ವಿಪ್ರಬೋಧಿತೇ ।
ನಿಶ್ಚಯಂ ನಾಧಿಗಚ್ಛಾಮಃ ಶ್ರೇಯಃ ಕಿಮಿತಿ ಸತ್ತಮ ॥೨೮॥

ಚತುರ್ಮುಖನೇ, ಹೀಗೆ ಧರ್ಮದ ವ್ಯವಸ್ಥೆಯು ಪರಸ್ಪರ ವಿರುದ್ಧವಾಗಿ ಅನೇಕ ವಿಧವಾಗಿ ಹೇಳಲ್ಪಟ್ಟಿರುವುದರಿಂದ ನಮಗೆ ಶ್ರೇಯಸ್ಸಾಧನ ಯಾವುದು ಎಂದು ತಿಳಿಯಲು ನಿಶ್ಚಯ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಇದಂ ಶ್ರೇಯ ಇದಂ ಶ್ರೇಯ ಇತ್ಯೇವಂ ವ್ಯುತ್ಥಿತೋ ಜನಃ ।
ಯೋ ಹಿ ಯಸ್ಮಿನ್ ರತೋ ಧರ್ಮೇ ಸ ತಂ ಪೂಜಯತೇ ಸದಾ ॥

ಈ ಮಾರ್ಗವೇ ಶ್ರೇಯಸ್ಕರವಾದುದು, ಈ ಮಾರ್ಗವೇ ಶ್ರೇಯಸ್ಕರವಾದುದು ಎಂದು ಹೇಳಿಕೊಂಡು ಅನೇಕ ಜನರು ಒಬ್ಬರ ಧರ್ಮವನ್ನು ಮತ್ತೊಬ್ಬರು ವಿರೋಧಿಸುತ್ತಿದ್ದಾರೆ. ಯಾವನು ಯಾವ ಧರ್ಮದಲ್ಲಿ ನಿರತನಾಗಿರುತ್ತಾನೋ ಅವನು ಆ ಧರ್ಮವನ್ನು ಮಾತ್ರ ಪೂಜಿಸುತ್ತಾನೆ.

ತೇನ ನೋಽವಹಿತಾ ಪ್ರಜ್ಞಾ ಮನಶ್ಚ ಬಹುಲೀಕೃತಮ್ ।
ಏತದಾಖ್ಯಾತುಮಿಚ್ಛಾಮಃ ಶ್ರೇಯಃ ಕಿಮಿತಿ ಸತ್ತಮ ॥೩೦॥

ಈ ಕಾರಣದಿಂದ ನಮ್ಮ ಬುದ್ಧಿಯಲ್ಲಿ ಗೊಂದಲವುಂಟಾಗಿದೆ. ಮನಸ್ಸು ಸಂಕಲ್ಪ-ವಿಕಲ್ಪವನ್ನು ಮಾಡುತ್ತಾ ಗೊಂದಲಕ್ಕೀಡಾಗಿದೆ. ಆದ್ದರಿಂದ ನಿನ್ನ ಮುಖದಿಂದ ನಮ್ಮ ಬದುಕಿನ ಶ್ರೇಯಸ್ಸು ಏನೆಂದು ತಿಳಿದುಕೊಳ್ಳಲು ಬಯಸುತ್ತೇವೆ.

ಅತಃ ಪರಂ ತು ಯದ್ ಗುಹ್ಯಂ ತದ್ ಭವಾನ್ ವಕ್ತುಮರ್ಹತಿ ।
ಸತ್ತ್ವಕ್ಷೇತ್ರಜ್ಞಯೋಶ್ಚೈವ ಸಂಬಂಧಃ ಕೇನ ಹೇತುನಾ ॥೩೧॥

ಈ ಎಲ್ಲ ಮಾರ್ಗಗಳಿಗಿಂತ ಶ್ರೇಷ್ಠವಾದ, ಗುಹ್ಯತಮವಾದ ರಹಸ್ಯವನ್ನು ನೀನು ಹೇಳಲು ಅರ್ಹನಾಗಿದ್ದಿ. ಸತ್ತ್ವ ಪದದಿಂದ ಉಪಲಕ್ಷಿತನಾದ ಗುಣತ್ರಯಾತ್ಮಕ ದೇಹವುಳ್ಳ ಜೀವನಿಗೂ ಕ್ಷೇತ್ರಜ್ಞ ಪದದಿಂದಲೂ ಹೇಳಲ್ಪಟ್ಟಿರುವ ಪರಮಾತ್ಮನಿಗೂ ಸಂಬಂಧವು ಏನು ಎಂಬುದಾಗಿ ತಿಳಿಸು.

ಏವಮುಕ್ತಃ ಸ ತೈರ್ವಿಪ್ರೈಃ ಭಗವಾನ್ ಲೋಕಭಾವನಃ ।
ತೇಭ್ಯಃ ಶಶಂಸ ಧರ್ಮಾತ್ಮಾ ಯಾಥಾತಥ್ಯೇನ ಬುದ್ಧಿಮಾನ್ ॥೩೨॥

ಹೀಗೆ ದಕ್ಷಪ್ರಜಾಪತಿಯೇ ಮೊದಲಾದ ಬ್ರಾಹ್ಮಣರು ಚತುರ್ಮುಖ ಬ್ರಹ್ಮನಲ್ಲಿ ಪ್ರಶ್ನಿಸಲಾಗಿ, ಪೂಜ್ಯನಾದ, ಸೃಷ್ಟಿಕಾರಣನಾದ, ಧರ್ಮಾತ್ಮನಾದ, ಬುದ್ಧಿವಂತನಾದ ಬ್ರಹ್ಮನು ಅವರ ಪ್ರಶ್ನೆಗಳಿಗೆಲ್ಲ ಯಥಾವತ್ತಾಗಿ ಉತ್ತರಿಸತೊಡಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು ಋಷೀಣಾಂ ಪುನಃ ಪ್ರಶ್ನಕರಣಂ ನಾಮ ಏಕೋನಪಂಚಾಶೋऽಧ್ಯಾಯಃ ॥

॥ ಅನುಗೀತಾಪರ್ವಣಿ ಚತುಃತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತನೆಯ ಅಧ್ಯಾಯ

ಚತುರ್ಮುಖ ಬ್ರಹ್ಮದೇವರು ಮಹರ್ಷಿಗಳನ್ನು ಕುರಿತು, ಧರ್ಮಪ್ರದರ್ಶನ ಪೂರ್ವಕವಾಗಿ ಅದನ್ನು ಅನುಷ್ಠಾನ ಮಾಡಿದಾಗ ಉಂಟಾಗುವ ಜ್ಞಾನವೇ ಪರಮಪುರುಷಾರ್ಥ ಸಾಧನವಾಗುತ್ತದೆ ಎಂದು ಹೇಳುತ್ತಾ, ದೃಷ್ಟಾಂತವನ್ನು ನೀಡಿದುದು. ಇದರಂತೆ ಕ್ಷೇತ್ರ-ಕ್ಷೇತ್ರಜ್ಞರ ಸಂಬಂಧವನ್ನು ಹೇಳಿದುದು. ಹಾಗೆ ಪೃಥಿವ್ಯಾದಿ ಪಂಚಭೂತಗಳ ಗುಣಗಳನ್ನು ಪ್ರತಿಪಾದಿಸಿದುದು.

ಬ್ರಹ್ಮಾ

ಹಂತ ವಃ ಸಂಪ್ರವಕ್ಷ್ಯಾಮಿ ಯನ್ಮಾಂ ಪೃಚ್ಛಥ ಸತ್ತಮಾಃ ।
ಸಮಸ್ತಮಿಹ ತತ್ತ್ವೇನ ಶ್ರುತ್ವಾ ಚೈವಾವಧಾರ್ಯತಾಮ್ ॥೧॥

ಬ್ರಹ್ಮಾ– ಋಷಿಶ್ರೇಷ್ಠರೇ, ನೀವು ಯಾವ ವಿಷಯವಾಗಿ ಪ್ರಶ್ನೆ ಮಾಡಿದ್ದೀರೋ ಆ ಎಲ್ಲ ಪ್ರಶ್ನೆಗಳಿಗೂ ನಿಮಗೆ ಉತ್ತರಿಸುತ್ತೇನೆ. ಏಕಾಗ್ರತೆಯಿಂದ ಶ್ರವಣ ಮಾಡಿರಿ.

ಅಹಿಂಸಾ ಸರ್ವಭೂತಾನಾಮೇತತ್ ಕೃತ್ಯತಮಂ ಮತಮ್ ।
ಏತತ್ಪದಮನುದ್ವಿಗ್ನಂ ವರಿಷ್ಠಂ ಧರ್ಮಲಕ್ಷಣಮ್ ॥೨॥

ಯಾವುದೇ ಪ್ರಾಣಿಗಳನ್ನಾಗಲಿ ಹಿಂಸೆ ಮಾಡದಿರುವುದು ಶ್ರೇಷ್ಠವಾದ ಕರ್ತವ್ಯ ಎನಿಸಿದೆ. ಅಹಿಂಸಾ ವ್ರತವು ಯಾವುದೇ ಉದ್ವೇಗವಿಲ್ಲದೆ ಶ್ರೇಷ್ಠವೆನಿಸಿದ ಧರ್ಮದ ಲಕ್ಷಣವಾಗಿದೆ.

ಜ್ಞಾನಾನ್ನಿಃಶ್ರೇಯಸಂ ಪ್ರಾಹುರ್ವೃದ್ಧಾ ನಿಶ್ಚಯದರ್ಶಿನಃ ।
ತಸ್ಮಾಜ್ಜ್ಞಾನೇನ ಶುದ್ಧೇನ ಮುಚ್ಯತೇ ಸರ್ವಕಿಲ್ಬಿಷೈಃ ॥೩॥

ಬ್ರಹ್ಮಸೂತ್ರದಲ್ಲಿ ಹೇಳಿದ ಪ್ರಕಾರದಂತೆ, ಉಪಕ್ರಮಾದಿ ಲಿಂಗಗಳಿಂದ ಸಕಲ ಗುಣಪೂರ್ಣನಾದ, ನಿರ್ದುಷ್ಟನಾದ, ಸಕಲ ಜಗತ್ತಿಗಿಂತ ಭಿನ್ನನಾದ ನಾರಾಯಣನನ್ನು ಶ್ರುತಿವಾಕ್ಯಗಳು ನಿಶ್ಚಯ ಮಾಡಿವೆ. ಅಂತಹ ನಿಶ್ಚಯನಾದ ಪರಮಾತ್ಮನನ್ನು ಕಾಣುವ ಜ್ಞಾನವೇ ಶ್ರೇಷ್ಠವಾದ ಕಲ್ಯಾಣ ಸಾಧನ ಎಂದು ನಿಶ್ಚಯ ಜ್ಞಾನ ಹೊಂದಿದ ಜ್ಞಾನಿಗಳು, ದೇವತೆ-ಋಷಿ ಮುಂತಾದವರು ಹೇಳುತ್ತಾರೆ. 'ತಮೇವಂ ವಿದ್ವಾನ್' ಮುಂತಾದ ಶ್ರುತಿಯಲ್ಲಿ ಹೇಳಿದ ರೀತಿಯಲ್ಲಿ ಪುರುಷಸೂಕ್ತಪ್ರತಿಪಾದ್ಯನಾದ ನಾರಾಯಣನ ಜ್ಞಾನವನ್ನು ಹೊಂದಿದರೆ ಸಮಸ್ತ ಪಾಪಗಳಿಂದ ಮುಕ್ತರಾಗಿ ಮೋಕ್ಷ ಹೊಂದುತ್ತಾರೆ.

ಹಿಂಸಾಪರಾಶ್ಚ ಲೋಕೇ ಯೇ ಯೇ ಚ ನಾಸ್ತಿಕವೃತ್ತಯಃ ।
ಲೋಭಮೋಹಸಮಾಯುಕ್ತಾಸ್ತೇ ವೈ ನಿರಯಗಾಮಿನಃ ॥೪॥

ಯಾರು ಜಗತ್ತಿನಲ್ಲಿ ಪ್ರಾಣಿ ಹಿಂಸಕರೋ, ನಾಸ್ತಿಕರೋ, ಅಂಥವರು ಲೋಭ-ಮೋಹದಿಂದ ತುಂಬಿದ ಅವರು ನರಕದಲ್ಲಿ ಬೀಳುತ್ತಾರೆ.

ಆಶೀರ್ಯುಕ್ತಾನಿ ಕರ್ಮಾಣಿ ಕುರ್ವತೇ ಯೇ ತ್ವತಂದ್ರಿತಾಃ ।
ತೇಽಸ್ಮಿನ್ ಲೋಕೇ ಪ್ರಮೋದಂತೇ ಜಾಯಮಾನಾಃ ಪುನಃ ಪುನಃ ॥೫॥

ಯಾರು ಆಲಸ್ಯವಿಲ್ಲದೆ ಸಕಾಮ ಕರ್ಮಗಳನ್ನೇ ಅನುಷ್ಠಾನ ಮಾಡುತ್ತಿರುತ್ತಾರೋ ಅವರು ಈ ಲೋಕದಲ್ಲಿ ಪುನಃ ಪುನಃ ಹುಟ್ಟಿ ಆನಂದವಾಗಿರುತ್ತಾರೆ.

ಕುರ್ವತೇ ಯೇ ತು ಕರ್ಮಾಣಿ ಶ್ರದ್ದಧಾನಾ ವಿಪಶ್ಚಿತಃ ।
ಅನಾಶೀರ್ಯೋಗಸಂಯುಕ್ತಾಸ್ತೇ ಧೀರಾಃ ಸಾಧುದರ್ಶಿನಃ ॥೬॥

ಯಾರು ವಿದ್ವಾಂಸರಾಗಿ, ನಿಷ್ಕಾಮಕರ್ಮದಲ್ಲಿ ಆಸಕ್ತರಾಗಿ, ಧ್ಯಾನಯೋಗ ರತರಾಗಿರುತ್ತಾರೋ ಅವರೇ ಸಜ್ಜನರು, ಧೀರರು ಎನಿಸಿಕೊಳ್ಳುತ್ತಾರೆ.

ಪೀಠಿಕೆ– ಜೀವನಿಗೂ ದೇಹಕ್ಕೂ ಆಕಾಶಕ್ಕೂ ದೇಹಕ್ಕೂ ಇರುವ ಸಂಬಂಧದಂತೆ ಕೇವಲ ದೇಹದ ಸಂಬಂಧವು ಮಾತ್ರ ಇರುವುದಲ್ಲ, ಹೊರತು ಅಭಿಮಾನವಿಶೇಷವು ಈ ದೇಹದ ಸಂಬಂಧದಿಂದ ಉಂಟಾಗುತ್ತದೆ ಎಂದು ಹಿಂದೆ ನಿರೂಪಿಸಿ, ಪುನಃ ದೇಹ ವಿಯೋಗವೆಂಬ ಮೋಕ್ಷವು ಯಾವಾಗ ಆಗುತ್ತದೆ ಎಂದು ಆಶಂಕಿಸಿಕೊಂಡು, ಆವರಕವಾದ ಅತ್ತಿ ಹಣ್ಣು ಸೊಳ್ಳೆಗಳ ಪಾಲಿಗೆ ಆಹಾರವೆನಿಸಿದೆ. ಆ ಅತ್ತಿಹಣ್ಣಿನಲ್ಲಿರುವ ಸೊಳ್ಳೆಗಳು ತಮ್ಮಿಂದ ಉಪಭೋಜ್ಯವಾದ ಅತ್ತಿಯ ಹಣ್ಣನ್ನು ನಾಶಗೊಳಿಸಿದ ಬಳಿಕ ಅಲ್ಲಿಂದ ಬಿಡುಗಡೆಯಾಗುವಂತೆ ಜೀವರು ಉಪಭೋಗ್ಯವೆನಿಸಿದ ಈ ಶರೀರದ ನಾಶವಾದ ಬಳಿಕ ಬಿಡುಗಡೆಯನ್ನು ಹೊಂದುತ್ತಾರೆ ಎಂದು ಹಿಂದೆ ಹೇಳಿದ್ದರು. ಈಗ ಅದನ್ನೇ ದೃಷ್ಟಾಂತವನ್ನಾಗಿ ಹೇಳುತ್ತಾ, ಮೋಕ್ಷದ ಪ್ರಕಾರವನ್ನು ವಿಸ್ತಾರವಾಗಿ ಹೇಳಲು ಆರಂಭಿಸುತ್ತಾರೆ-

ಅತಃ ಪರಂ ಪ್ರವಕ್ಷ್ಯಾಮಿ ಸತ್ತಕ್ಷೇತ್ರಜ್ಞಯೋರ್ಯಥಾ ।
ಸಂಯೋಗೋ ವಿಪ್ರಯೋಗಶ್ಚ ತನ್ನಿಬೋಧತ ಸತ್ತಮಾಃ ॥೭॥

ಇನ್ನು ಮುಂದೆ ನಾನು ಸತ್ತ್ವಪದ ಉಪಲಕ್ಷಿತ ತ್ರಿಗುಣಾತ್ಮಕ ದೇಹಕ್ಕೂ, ಕ್ಷೇತ್ರಜ್ಞನೆನಿಸಿದ ಜೀವನಿಗೂ ಹೇಗೆ ಹಿಂದೆ ಸಂಬಂಧಗಳನ್ನು ವಿವರಿಸಿದ್ದೆನೋ ಅದರಂತೆ 'ದ್ವಾಸುಪರ್ಣಾ ಸಯುಜಾ ಸಖಾಯೌ' ಎಂಬ ಶ್ರುತಿಯಲ್ಲಿ ಹೇಳಿದ ಜೀವ-ಬ್ರಹ್ಮರ ಸಂಬಂಧ-ವಿಯೋಗಗಳ ಬಗ್ಗೆ ಇಲ್ಲಿ ವಿವರಿಸುತ್ತೇನೆ, ಕೇಳಿಸಿಕೊಳ್ಳಿರಿ.

ವಿಷಯೋ ವಿಷಯಿತ್ವಂ ಚ ಸಂಬಂಧೋऽಯಮಿಹೋಚ್ಯತೇ ।
ವಿಷಯೀ ಪುರುಷೋ ನಿತ್ಯಂ ಸತ್ತ್ವಂ ಚ ವಿಷಯಃ ಸ್ಮೃತಃ ॥೮॥

ವ್ಯಾಖ್ಯಾತಂ ಪೂರ್ವಕಲ್ಪೇನ ಮಶಕೋದುಂಬರಂ ಯಥಾ ।
ಭುಜ್ಯಮಾನಂ ನ ಜಾನೀತೇ ನಿತ್ಯಂ ಸತ್ತ್ವಮಚೇತನಮ್ ॥೯॥

ಯಸ್ತ್ವೇವಂ ತಂ ವಿಜಾನೀತೇ ಯೋ ಭುಂಕ್ತೇ ಯಚ್ಚ ಭುಜ್ಯತೇ ।
ಅನಿತ್ಯಂ ದ್ವಂದ್ವಸಂಯುಕ್ತಂ ಸತ್ತ್ವಮಾಹುರ್ಮನೀಷಿಣಃ ॥೧೦॥

ಹಿಂದೆ ಅತ್ತಿಹಣ್ಣು-ಸೊಳ್ಳೆಗಳು ಎಂದು ಜೀವೇಶ್ವರದ ಭೇದ ವಿಷಯದಲ್ಲಿ ಹೇಗೆ ದೃಷ್ಟಾಂತವನ್ನು ಹೇಳಿದ್ದರೋ ಅದರಂತೆ ಈ ದೇಹಕ್ಕೂ ಜೀವರಿಗೂ ಇದೇ ದೃಷ್ಟಾಂತವಾಗುತ್ತದೆ. ಈ ದೇಹದಲ್ಲಿ ಕುಳಿತು ಅನೇಕ ಸುಖಗಳನ್ನು ಜೀವನು ಅನುಭವಿಸುತ್ತಿದ್ದರೂ ತನ್ನಿಂದ ಭಿನ್ನವಾದ ಈ ದೇಹವನ್ನು ಮಮತೆಯಿಂದ ಭಿನ್ನವೆಂದು

ತಿಳಿಯುವುದಿಲ್ಲ. ಯಾವ ಜೀವನು ಈ ದೇಹವನ್ನು ತಿಳಿದಿರುವುದಿಲ್ಲವೋ, ಯಾವ ದೇಹದಲ್ಲಿ ವಿಷಯಸುಖಗಳನ್ನು ಅನುಭವಿಸುತ್ತಾನೋ, ಅಂತಹ ದೇಹವು ತ್ರಿಗುಣಾತ್ಮಕವಾಗಿದೆ, ದ್ವಂದ್ವಸಂಯುಕ್ತವಾಗಿದೆ, ಅಯುಕ್ತವಾಗಿದೆ ಎಂದು ಜ್ಞಾನಿಗಳು ಹೇಳುತ್ತಾರೆ.

ವ್ಯಾಖ್ಯಾನವಿಶೇಷ– ಇಲ್ಲಿ ದೇಹಾದಿಗಳು ವಿಷಯ. ತನ್ನ ಸಾಕ್ಷಿಯಿಂದ ಆ ದೇಹಾದಿಗಳನ್ನು ನನ್ನದು ಎಂದು ನೋಡುವ ಜೀವಾತ್ಮನು ವಿಷಯೀ. ಈ ಸಂಸಾರವೇ ದೇಹಕ್ಕೂ, ಜೀವಕ್ಕೂ ಇರುವ ಸಂಬಂಧ ಹೊರತು ಕಾಲ-ಆಕಾಶಾದಿಗಳಂತೆ ಸಾಧಾರಣವಾದ ಸಂಯೋಗವೆಂಬ ಸಂಬಂಧವನ್ನು ಇಲ್ಲಿಗ್ರಹಿಸಬಾರದು. ಹಿಂದಿನಂತೆ ಇಲ್ಲಿಯೂ ಜೀವೇಶ್ವರ ವಿಷಯದಲ್ಲಿ ಅತ್ತಿಹಣ್ಣು-ಸೊಳ್ಳೆಗಳು ಎಂಬ ದೃಷ್ಟಾಂತವನ್ನೇ ಇಟ್ಟುಕೊಳ್ಳಬೇಕು. ಅತ್ತಿಹಣ್ಣು ಸೊಳ್ಳೆಗಳಿಗೆ ಆಧಾರವಾಗಿದೆ. ಅದರಂತೆ ಭಗವಂತನು ಜೀವರಿಗೆ ಆಧಾರವಾಗಿದ್ದಾನೆ ಎಂದು ಹಿಂದೆ ದೃಷ್ಟಾಂತವನ್ನು ನೀಡಿದ್ದರು. ಅತ್ತಿಹಣ್ಣು ರಸದ ಮೂಲಕ ಸೊಳ್ಳೆಗಳಿಗೆ ಸುಖಕ್ಕೆ ಆಶ್ರಯವಾಗಿರುವುದರಿಂದ, ಸೊಳ್ಳೆಗಳಿಗೆ ಆವರಕವೂ ಆಗಿರುವುದರಿಂದ ಜೀವದೇಹದಂತೆ ಇರುವ ದೇಹಕ್ಕೂ ದೃಷ್ಟಾಂತವಾಗುತ್ತದೆ. ಹೀಗೆ ಎರಡು ಪಕ್ಷಗಳನ್ನು ಸೂಚಿಸಲು 'ಪೂರ್ವಕಲ್ಪೇನ' ಹಿಂದೆ ಹೇಳುವ ರೀತಿ, ಈಗ ಹೇಳುವ ರೀತಿ ಎಂದು ತಿಳಿಸಿದ್ದಾರೆ. ಹಿಂದೆ ಈಶ್ವರ-ಜೀವರಿಗೆ ಭೇದವನ್ನು ಹೇಳಿದ್ದಾರೆ. ಈಗ ದೇಹಕ್ಕೂ ಜೀವರಿಗೂ ಭೇದವನ್ನು ತಿಳಿಸುತ್ತಿದ್ದಾರೆ. ಹಿಂದೆ ಏಕಕಾಲದಲ್ಲಿಯೇ ಏಕತ್ವವನ್ನೂ, ನಾನಾತ್ವವನ್ನೂ ಜೀವದೇಹ ವಿಷಯದಲ್ಲಿ ಹೇಳಲು ಬರುವುದಿಲ್ಲವಾದ್ದರಿಂದ ಬಹುಜೀವಾಶ್ರಯನಾಗಿರುವ ಭಗವಂತನೇ ಅಲ್ಲಿ ನಿರೂಪಿತನಾಗಿದ್ದಾನೆ. ಇಲ್ಲಿಯಾದರೂ ಏಕತ್ವ-ನಾನಾತ್ವಗಳ ಪ್ರಸ್ತಾವವು ಮೂಲದಲ್ಲಿ ಹೇಳದಿರುವುದರಿಂದ ದೇಹ-ದೇಹಿಗಳ ಸಂಯೋಗ-ವಿಯೋಗಗಳನ್ನೇ ಹೇಳಿರುವುದರಿಂದ ಜೀವ ಮತ್ತು ದೇಹದ ವಿಷಯದಲ್ಲಿಯೇ ವಿವಕ್ಷಾಭೇದದಿಂದ ಅತ್ತಿಹಣ್ಣು-ಸೊಳ್ಳೆಗಳ ದೃಷ್ಟಾಂತವನ್ನು ಕೊಟ್ಟಿದ್ದಾರೆಂದು ತಿಳಿಯಬೇಕು.

ನಿರ್ದ್ವಂದ್ವೋ ನಿಷ್ಕಲೋ ನಿತ್ಯಂ ಕ್ಷೇತ್ರಜ್ಞೋ ನಿಷ್ಕಲಾತ್ಮಕಃ ।
ಸಮಾಸಜ್ಞಾನತತ್ತ್ವೇನ ಯದಾ ಸರ್ವತ್ರ ದೃಶ್ಯತೇ ॥೧೧॥

ಕ್ಷೇತ್ರಜ್ಞನೆನಿಸಿದ ಈ ದೇಹದಲ್ಲಿ ಜೀವಾಂತರ್ಯಾಮಿಯಾಗಿರುವ ಪರಮಾತ್ಮನು ನಿಷ್ಕಲನೆನಿಸಿದ್ದಾನೆ. ಅರ್ಥಾತ್ ಪ್ರಾಕೃತ-ಷೋಡಶ ಕಲೆಗಳಿಂದ ರಹಿತನಾಗಿದ್ದಾನೆ. ಶೀತೋಷ್ಣಾದಿ ದ್ವಂದ್ವಗಳಿಂದ ದೂರನಾಗಿದ್ದಾನೆ. ಇವನ ಸ್ವರೂಪವನ್ನು ಬ್ರಹ್ಮಸೂತ್ರದಲ್ಲಿ ಸಂಕ್ಷಿಪ್ತವಾಗಿ ತಿಳಿಸಿಕೊಟ್ಟಿದ್ದಾರೆ. ಅಂತಹ ಬ್ರಹ್ಮಸೂತ್ರೋಕ್ತ ತತ್ತ್ವದಿಂದ ಅಣುರೇಣು ತೃಣ-ಕಾಷ್ಠಗಳಲ್ಲಿ ಸನ್ನಿಹಿತನಾದ ಪರಮಾತ್ಮನನ್ನು ಜೀವನು ಯಾವಾಗ ನೋಡುತ್ತಾನೋ

ಆಗ ಈ ದೇಹದ ಅಭಿಮಾನವನ್ನು ಬಿಡುತ್ತಾನೆ. ಕಮಲದ ಎಲೆಯ ಮೇಲೆ ಅಸಂಗವಾಗಿ ಕುಳಿತ ನೀರಿನ ಹನಿಯಂತೆ ಈ ದೇಹದಲ್ಲಿ ಅಸಂಗನಾಗಿ ವಾಸಿಸುತ್ತಾನೆ.

ನ ಸಜ್ಜತೇ ತದಾ ಸತ್ತ್ವಮಾಪಃ ಪುಷ್ಕರಪತ್ರವತ್ ।
ಸರ್ವೈರಪಿ ಗುಣೈರ್ವಿದ್ವಾನ್ ವ್ಯತಿಷಕ್ತೋ ನ ಲಿಪ್ಯತೇ ॥೧೨॥

ಕಮಲಪತ್ರದ ಎಲೆಯ ಮೇಲೆ ಕುಳಿತಿರುವ ನೀರು ಆ ಪತ್ರದ ಸಂಬಂಧವನ್ನು ಹೇಗೆ ಹೊಂದಿರುವುದಿಲ್ಲವೋ ಹಾಗೆ ಈ ದೇಹದಲ್ಲಿ ಸನ್ನಿಹಿತನಾಗಿದ್ದರೂ ದೇಹಾಭಿಮಾನ ಹೊಂದಿರುವುದಿಲ್ಲ. ಪ್ರಾಕೃತರೂಪಾದಿ ಗುಣಗಳನ್ನು ಸ್ವೀಕರಿಸುತ್ತಿದ್ದರೂ ಪರಮಾತ್ಮನ ಜ್ಞಾನವನ್ನು ಹೊಂದಿದ ಸಾಧಕನು ದೇಹದ ಸಂಬಂಧದಲ್ಲಿ ಲಿಪ್ತನಾಗುವುದಿಲ್ಲ.

ಜಲಬಿಂದುರ್ಯಥಾ ಲೋಲಃ ಪದ್ಮಿನೀಪತ್ರಸಂಸ್ಥಿತಃ ।
ಏವಮೇವಾಪ್ಯಸಂಯುಕ್ತಃ ಪುರುಷಃ ಸ್ಯಾನ್ನ ಸಂಶಯಃ ॥೧೩॥

ಯಾವ ರೀತಿಯಾಗಿ ಕಮಲದ ಪತ್ರದ ಮೇಲೆ ಬಿದ್ದಿರುವ ಚಂಚಲವಾದ ನೀರಿನ ಹನಿಯು ಕಮಲಪತ್ರದಲ್ಲಿ ಇದ್ದರೂ ಲೇಪವನ್ನು ಹೊಂದಿರುವುದಿಲ್ಲವೋ ಅದೇ ರೀತಿಯಾಗಿ ಸಮಸ್ತ ಗುಣಗಳ ಸಂಬಂಧವನ್ನಿಟ್ಟುಕೊಂಡಿದ್ದರೂ ಅವುಗಳಿಂದ ಲಿಪ್ತನಾಗುವುದಿಲ್ಲ. ಇದರಲ್ಲಿ ಯಾವ ಸಂಶಯವೂ ಇಲ್ಲ.

ದ್ರವ್ಯಮಾತ್ರಮಭೂತ್ ಸತ್ತ್ವಂ ಪುರುಷಸ್ಯೇತಿ ನಿಶ್ಚಯಃ ।
ಯಥಾ ದ್ರವ್ಯಂ ಚ ಕರ್ತಾ ಚ ಸಂಯೋಗೋಽಪ್ಯನಯೋಸ್ತಥಾ ॥೧೪॥

ಜೀವನು ಉಪಭೋಗಿಸಲು ಅರ್ಹವಾದ ಧನ-ಕನಕಾದಿ ದ್ರವ್ಯಗಳಿಗೆ ಸತ್ತ್ವ ಎಂದು ಹೆಸರು. ದ್ರವ್ಯಕ್ಕೂ ಕರ್ತೃವಿಗೂ ಯಾವ ಸಂಬಂಧವಿದೆಯೋ ಅದೇ ಸಂಬಂಧವು ಪುರುಷನಿಗೂ ದೇಹಕ್ಕೂ ಇದೆ. ಸಂಯೋಗವೇ ಸಂಬಂಧವಾಗಿ ಇದೆ. ಹಿಂದೆ ಹೇಳಿದ ಆಕಾಶದ ಸಂಬಂಧದಂತೆ ಎಂದು ತಿಳಿಯಬೇಕು.

ಯಥಾ ಪ್ರದೀಪಮಾದಾಯ ಕಶ್ಚಿತ್ ತಮಸಿ ಗಚ್ಛತಿ ।
ತಥಾ ಸತ್ತ್ವಪ್ರದೀಪೇನ ಗಚ್ಛಂತಿ ಪರಮೈಷಿಣಃ ॥೧೫॥

ಭಗವದ್ಗೀತೆಯಲ್ಲಿ 'ಸತ್ತಾ ತ್ ಸಂಜ್ಞಾಯತೇ ಜ್ಞಾನಮ್' ಎಂದು ಶ್ರೀಕೃಷ್ಣನ ವಚನವಿದೆ. ಸತ್ತ್ವಗುಣದಿಂದ ಉತ್ಪನ್ನವಾದ ಜ್ಞಾನವೆಂಬ ದೀಪವನ್ನು ಸ್ವೀಕರಿಸಿ ಅಜ್ಞಾನದ ಮಾರ್ಗವನ್ನು ದಾಟುತ್ತಾನೆ. ಕತ್ತಲಿನಲ್ಲಿ ದೀಪವನ್ನು ಹಿಡಿದು ಸಂಚರಿಸುವಂತೆ ಸತ್ತ್ವಗುಣೋತ್ಪನ್ನವೆಂಬ ಜ್ಞಾನವೆಂಬ ದೀಪದಿಂದ ಜ್ಞಾನಿಗಳು ಪ್ರಯಾಣ ಮಾಡುತ್ತಾರೆ.

ಯಾವದ್ ದ್ರವ್ಯಂ ಗುಣಸ್ತಾವತ್ ಪ್ರದೀಪಃ ಸಂಪ್ರಕಾಶತೇ ।
ಕ್ಷೀಣೇ ದ್ರವ್ಯೇ ಗುಣೇ ಜ್ಯೋತಿರಂತರ್ಧಾನಾಯ ಗಚ್ಛತಿ ॥೧೬॥

ಎಲ್ಲಿಯವರೆಗೆ ದೀಪದಲ್ಲಿ ಎಣ್ಣೆ-ಬತ್ತಿಗಳಿವೆಯೋ ಅಲ್ಲಿಯವರೆಗೂ ದೀಪವು ಬೆಳಗುತ್ತಲೇ ಇರುತ್ತದೆ. ದ್ರವ್ಯಗುಣಗಳು ಕ್ಷೀಣಿಸಿದ ಬಳಿಕ ಜ್ಯೋತಿಯು ನಂದಿ ಹೋಗುತ್ತದೆ. ಇದರಂತೆ ದೇಹದಲ್ಲಿ ಪಂಚಭೂತಗಳು ಎಂಬ ದ್ರವ್ಯವು, ರೂಪ-ರಸಾದಿಗಳೆಂಬ ಗುಣಗಳು ದಂಡಪಟಗಳಂತೆ ಎಲ್ಲಿಯ ತನಕ ಇದ್ದಾವೋ ಅಲ್ಲಿಯ ತನಕವೂ ಜ್ಯೋತಿರೂಪನಾದ ಜೀವನು ಬೆಳಗುತ್ತಿರುತ್ತಾನೆ. ಈ ಪಂಚಭೂತಗಳಿಂದ ವಿಹೀನವಾದ ಬಳಿಕ ಆತ್ಮನಲ್ಲಿಯೇ ಜ್ಞಾನವು ಸುಪ್ತವಾಗಿರುತ್ತದೆ.

ವ್ಯಕ್ತಃ ಸತ್ತ್ವಗುಣಸ್ತ್ವೇವಂ ಪುರುಷೋ ದ್ರವ್ಯಮುಚ್ಯತೇ ।
ಏತದ್ ವಿಪ್ರಾ ವಿಜಾನೀತ ಹಂತ ಭೂಯೋ ಬ್ರವೀಮಿ ವಃ ॥೧೭॥

ಗುಣಾತ್ಮಕವಾದ ದೇಹವು ಯಾವನಿಗೆ ಇದೆಯೋ ಅಂತಹ ಪುರುಷನು ಸತ್ತ್ವಗುಣನೂ, ವ್ಯಕ್ತನೂ, ದ್ರವ್ಯನೂ ಎಂದು ಕರೆಸಿಕೊಳ್ಳುತ್ತಾನೆ. ಈ ವಿಷಯದಲ್ಲಿ ಮಹರ್ಷಿಗಳೇ, ಇನ್ನೂ ಹೆಚ್ಚಾಗಿ ಹೇಳುತ್ತೇನೆ, ತಿಳಿದುಕೊಳ್ಳಿರಿ.

ಸಹಸ್ರೇಣಾಪಿ ದುರ್ಮೇಧಾ ನ ಬುದ್ಧಿಮಧಿಗಚ್ಛತಿ ।
ಚತುರ್ಥೇನಾಪ್ಯಥಾಂಶೇನ ಬುದ್ಧಿಮಾನ್ ಸುಖಮೇಧತೇ ॥೧೮॥

ಮಂದಬುದ್ಧಿಯುಳ್ಳವನು ಸಹಸ್ರ ಉಪದೇಶದಿಂದಲೂ, ಉಪಾಯದಿಂದಲೂ ತತ್ತ್ವಜ್ಞಾನವನ್ನು ಹೊಂದಲಾರ. ಯಾವನು ಬುದ್ಧಿವಂತನಾದ ಮೂವತ್ತೆರಡು ತುತ್ತುಗಳನ್ನು ನಾಲ್ಕರಿಂದ ಭಾಗಿಸಿ ಎಂಟು ತುತ್ತಿನಲ್ಲಿ ಜೀವನವನ್ನು ನಿರ್ವಹಿಸುತ್ತಿರುತ್ತಾನೋ ಅಂತಹವನು ಈ ಜ್ಞಾನವನ್ನು ಪಡೆದು ಸುಖವನ್ನು ಹೊಂದುತ್ತಾನೆ. ಅರ್ಥಾತ್ ವಿರಕ್ತನಾದ ಸಂನ್ಯಾಸಿ ತತ್ತ್ವಜ್ಞಾನವನ್ನು ಪಡೆದು ಸುಖ ಹೊಂದುತ್ತಾನೆ ಎಂದು ಭಾವ.

ಏವಂ ಧರ್ಮಸ್ಯ ವಿಜ್ಞೇಯಂ ಸಂಸಾಧನಮುಪಾಯತಃ ।
ಉಪಾಯಜ್ಞೋ ಹಿ ಮೇಧಾವೀ ಸುಖಮತ್ಯಂತಮಶ್ನುತೇ ॥೧೯॥

ಹೀಗೆ ವಿಚಾರ ಮಾಡಿ ಯಾವುದಾದರೂ ಉಪಾಯದಿಂದ ಧರ್ಮಸಾಧನೆಯ ಜ್ಞಾನವನ್ನು ಪಡೆದುಕೊಳ್ಳಬೇಕು. ಉಪಾಯವನ್ನು ತಿಳಿದ ಮೇಧಾವಿ ಪುರುಷನು ಪರಮ ಸುಖವನ್ನು ಹೊಂದುತ್ತಾನೆ.

ಯಥಾऽಧಾನ್ಯಮುಪಾದೇಯಂ ಪ್ರವಪನ್ ಮಾನವಃ ಕ್ವಚಿತ್ ।
ಕ್ಲೇಶೇನ ಯಾತಿ ಮಹತಾ ವಿನಶ್ಯತ್ಯಂತರಾऽಪಿ ಚ ॥೨೦॥

ಹೇಗೆ ಒಬ್ಬ ಯಾತ್ರಿಕನು ಆಹಾರದ ಬುದ್ಧಿಯನ್ನು ಸ್ವೀಕರಿಸದೆ ಪ್ರಯಾಣಕ್ಕೆ ಹೊರಟರೆ ದುಃಖಕ್ಕೆ ತುತ್ತಾಗುತ್ತಾನೋ, ಆಹಾರವನ್ನು ಸ್ವೀಕರಿಸದೆ ಮಾರ್ಗದ ಮಧ್ಯದಲ್ಲಿ ವಿನಾಶವನ್ನು ಹೊಂದುತ್ತಾನೋ, ಇದರಂತೆ ಕರ್ಮಫಲವನ್ನು ತಿಳಿಯದ ಮನುಷ್ಯನು ದುಃಖಕ್ಕೆ ಈಡಾಗುತ್ತಾನೆ. ಅಥವಾ ಕ್ಷೇತ್ರಗಳಲ್ಲಿ ಬಿತ್ತನೆ ಮಾಡಲು ಯೋಗ್ಯವಾದ ಬೀಜವನ್ನು ಬಿತ್ತಿದರೂ ತಡೆಗಳು ಬಂದಾಗ ಆ ಬೀಜದ ಫಲವನ್ನು ಹೇಗೆ ಹೊಂದುವುದಿಲ್ಲವೋ ಅದರಂತೆ ಯೋಗ್ಯವಾದ ಕರ್ಮಗಳನ್ನು ಕಷ್ಟಪಟ್ಟು ಆಚರಿಸಿದರೂ ಕರ್ಮಮಾರ್ಗದಲ್ಲಿ ತಡೆಗಳು ಬಂದಾಗ ಉದ್ದಿಷ್ಟವಾದ ಫಲವನ್ನು ಪಡೆಯುವುದಿಲ್ಲ. ಹೀಗಾಗಿ ಜ್ಞಾನಮಾರ್ಗವೇ ಶ್ರೇಯಸ್ಸಾಧನವೆನಿಸಿದೆ.

ತಥಾ ಕರ್ಮಸು ವಿಜ್ಞೇಯಂ ಫಲಂ ಭವತಿ ವಾ ನ ವಾ ।
ಪುರುಷಸ್ಯಾತ್ಮನಿಃಶ್ರೇಯಃ ಶುಭಾಶುಭನಿದರ್ಶನಮ್ ॥೨೧॥

ಶುಭಾಶುಭ ಕರ್ಮಗಳಲ್ಲಿ ಫಲವಾಗುತ್ತದೆಯೋ ಇಲ್ಲವೋ ಎಂದು ಜೀವನಿಗೆ ತಿಳಿಯುವುದಿಲ್ಲ.

ಯಥಾ ಚ ದೀರ್ಘಮಧ್ವಾನಂ ಪದ್ಭ್ಯಾಮೇವ ಪ್ರವರ್ತತೇ ।
ಅದೃಷ್ಟಪೂರ್ವಂ ಸಹಸಾ ತತ್ತ್ವದರ್ಶನವರ್ಜಿತಃ ॥೨೨॥

ಯಾವ ರೀತಿಯಲ್ಲಿ ಹಿಂದೆ ಎಂದೂ ನೋಡದ, ಸುದೀರ್ಘವಾದ ದಾರಿಯನ್ನು ಕಾಲ್ನಡಿಗೆಯಲ್ಲಿಯೇ ಪ್ರಯಾಣ ಮಾಡಿ ಹೋಗಬೇಕೆಂದು ಹೊರಟು, ಸ್ಥಾನವನ್ನು ತಲುಪಲು ಕಷ್ಟ ಹೊಂದುವನೋ ಇದೇ ರೀತಿ ತತ್ತ್ವಜ್ಞಾನರಹಿತನಾದವನು ತಲುಪಬೇಕಾದ ಕರ್ಮಫಲವನ್ನು ಕರ್ಮಮಾರ್ಗದಿಂದ ಹೊಂದಲಾಗುವುದಿಲ್ಲ.

ತಮೇವ ಚ ಯಥಾऽಧ್ವಾನಂ ರಥೇನೈವಾಶುಗಾಮಿನಾ ।
ಯಾಯಾದಶ್ವಪ್ರಯುಕ್ತೇನ ತಥಾ ಬುದ್ಧಿಮತಾಂ ಗತಿಃ ॥೨೩॥

ಅದೇ ದೀರ್ಘವಾದ, ಹಿಂದೆಂದೂ ಕಾಣದ ಮಾರ್ಗವನ್ನು, ವೇಗವಾಗಿ ಸಾಗುವ ಕುದುರೆಗಳನ್ನು ಹೂಡಿರುವ ರಥದಲ್ಲಿ ಕುಳಿತು ಶೀಘ್ರವಾಗಿ ದಾಟುತ್ತಾನೋ ಅದರಂತೆ ಜ್ಞಾನಿಗಳು ಜ್ಞಾನಮಾರ್ಗದಿಂದ ಉದ್ದಿಷ್ಟವಾದ ಗುರಿಯನ್ನು ಮುಟ್ಟುತ್ತಾರೆ.

ಊರ್ಧ್ವಂ ಪರ್ವತಮಾರುಹ್ಯ ನಾನ್ವವೇಕ್ಷೇತ ಭೂತಲಮ್ ।
ರಥೇನ ರಥಿನಂ ಪಶ್ಯೇತ್ ಕ್ಲಿಶ್ಯಮಾನಮಚೇತನಮ್ ॥೨೪॥

ಯಾವ ರೀತಿಯಾಗಿ ಎತ್ತರದ ಬೆಟ್ಟವನ್ನು ಏರಿದವನು ಭೂಮಿಯನ್ನು ನೋಡುವುದಿಲ್ಲವೋ, ರಥದಲ್ಲಿ ಪ್ರಯಾಣ ಮಾಡುವವನು ಕಾಲ್ನಡಿಗೆಯಲ್ಲಿ ಹೋಗುವವರ ದುಃಖವನ್ನು ಅರಿಯುವುದಿಲ್ಲವೋ, ಅದೇ ರೀತಿ ಜ್ಞಾನಮಾರ್ಗದಲ್ಲಿ ಸಾಗುವ ಸಾಧಕನು ಜಗನ್ನಿಮಿತ್ತವಾದ ಕರ್ಮಮಾರ್ಗಗಳನ್ನು ನೋಡುವುದಿಲ್ಲ.

ಯಾವದ್ ರಥಪಥಸ್ತಾವದ್ ರಥೇನ ಸ ತು ಗಚ್ಛತಿ ।
ಕ್ಷೀಣೇ ರಥಪಥೇ ಪ್ರಾಜ್ಞೋ ರಥಮುತ್ಸೃಜ್ಯ ಗಚ್ಛತಿ ॥೨೫॥

ಯಾವ ರೀತಿಯಾಗಿ ಯಾತ್ರಿಕನು ರಥದಲ್ಲಿ ಸಾಗುತ್ತಾ, ರಥಕ್ಕೆ ಯೋಗ್ಯವಾದ ದಾರಿಯು ಮುಗಿಯುವ ತನಕ ರಥದಲ್ಲಿಯೇ ಪ್ರಯಾಣ ಮಾಡುತ್ತಾನೋ ರಥಪಥವು ನಿಂತ ಮೆಲೆ ರಥವನ್ನೇ ತ್ಯಾಗ ಮಾಡಿ ತಾನು ತಲುಪಬೇಕಾದ ಸ್ಥಳವನ್ನು ಸ್ವಯಂ ನಡೆದೇ ಹೋಗುತ್ತಾನೆ.

ಏವಂ ಗಚ್ಛತಿ ಮೇಧಾವೀ ತತ್ತ್ವಜ್ಞೋ ಮೋಕ್ಷಮಾರ್ಗವಿತ್ ।
ಸಮಾಜ್ಞಾಯ ಮಹಾಬುದ್ಧಿರುತ್ತರಾದುತ್ತರೋತ್ತರಮ್ ॥೨೬॥

ಇದೇ ರೀತಿಯಾಗಿ ಮೇಧಾವಿಯಾದ, ತತ್ತ್ವಜ್ಞಾನಾದ, ಮೋಕ್ಷಮಾರ್ಗವನ್ನು ತಿಳಿದ ಜ್ಞಾನಿಯು ಕರ್ಮಮಾರ್ಗವನ್ನು ತೊರೆದು, ತನ್ನ ತತ್ತ್ವಜ್ಞಾನದ ದೆಸೆಯಿಂದಲೇ ಉತ್ತಮೋತ್ತಮವಾದ ಗುರಿಯನ್ನು ಹೊಂದುತ್ತಾನೆ.

ಯಥಾ ಮಹಾರ್ಣವಂ ಘೋರಮಪ್ಲವಃ ಸಂಪ್ರಗಾಹತೇ ।
ಬಾಹುಭ್ಯಾಮೇವ ಸಮ್ಮೋಹಾದ್ ವಧಮಿಚ್ಛತ್ಯಸಂಶಯಮ್ ॥೨೭॥

ಘೋರವಾದ ಸಮುದ್ರವನ್ನು ದೋಣಿಯಿಲ್ಲದೆ ಮೋಹದಿಂದ ಕೈಯಿಂದಲೇ ದಾಟುತ್ತೇನೆ ಎಂದು ಇಚ್ಛಿಸಿದ ವ್ಯಕ್ತಿಯು ಸಮುದ್ರದಲ್ಲಿ ಮುಳುಗುವಂತೆ ಸಂಸಾರವೆಂಬ ಸಮುದ್ರವನ್ನು ಜ್ಞಾನದ ಆಶ್ರಯವಿಲ್ಲದೆ ದಾಟುತ್ತೇನೆ ಎನ್ನುವವನು ಹೀಗೆ ಮೂರ್ಖನಾಗುತ್ತಾನೆ.

ನಾವಾ ಕಯಾಪಿ ಚ ಪ್ರಾಜ್ಞಃ ವಿಭಾಗಜ್ಞಸ್ತ್ವರಿತ್ರಯಾ ।
ಅಶ್ರಾಂತಃ ಸಲಿಲಂ ಗಾಹೇತ್ ಶೀಘ್ರಂ ಸಂತರತೇ ಹ್ರದಮ್ ॥೨೮॥

ತೀರ್ಣೋ ಗಚ್ಛೇತ್ ಪರಂ ಪಾರಂ ನಾವಮುತ್ಸೃಜ್ಯ ನಿರ್ಮಮಃ ।
ವ್ಯಾಖ್ಯಾತಂ ಪೂರ್ವಕಲ್ಪೇನ ಯಥಾ ರಥಪದಾತಿನೋಃ ॥೨೯॥

ಯಾವ ರೀತಿಯಲ್ಲಿ ಸಮುದ್ರಮಾರ್ಗದ ವಿಭಾಗಗಳನ್ನು ತಿಳಿದ ನಾವಿಕನು ಹುಟ್ಟಿನಿಂದ ಕೂಡಿರುವ ದೋಣಿಯನ್ನು ಸಾಗಿಸುತ್ತಾ ಅನಾಯಾಸವಾಗಿ ಸಮುದ್ರವನ್ನು ದಾಟಿ ದಡವನ್ನು ಸೇರುತ್ತಾನೋ ಇದರಂತೆ ಸಂಸಾರಸಾಗರವನ್ನು ಕರ್ಮಗಳ ಮೇಲಿನ ವ್ಯಾಮೋಹವನ್ನು ತ್ಯಜಿಸಿದ ಜ್ಞಾನಿಯು, ಜ್ಞಾನೋಪಾಯಗಳನ್ನು ಸರಿಯಾಗಿ ತಿಳಿದು ಪರಬ್ರಹ್ಮನೆಂಬ ಗುರಿಯನ್ನು ಮುಟ್ಟುತ್ತಾನೆ. ಈ ವಿಷಯವನ್ನೇ ಹಿಂದೆ ರಥದಲ್ಲಿ ಹೋಗುವವನ, ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುವವನ ಉದಾಹರಣೆಯನ್ನು ಕೊಟ್ಟು ತಿಳಿಸಿದ್ದಾರೆ.

ಸ್ನೇಹಾತ್ ಸಮ್ಮೋಹಮಾಪನ್ನೋ ನಾವಿ ದಾಶೋ ಯಥಾ ತಥಾ ।
ಮಮತ್ವೇನಾಭಿಭೂತಸ್ತು ಸ ಕಥಂಚಿತ್ ನ ಮುಹ್ಯತೇ(ತಿ) ॥೩೦॥

ಹಡಗಿನಲ್ಲಿಯೇ ಆಸಕ್ತಿಯನ್ನು ಹೊಂದಿ, ಅದರ ಮೋಹದಲ್ಲೇ ತನ್ನದೆಂಬ ಅಭಿಮಾನದಿಂದ ಹಡಗಿನಲ್ಲಿಯೇ ಕುಳಿತುಕೊಂಡರೆ ಯಾವಾಗಲೂ ಸಮುದ್ರದಲ್ಲೇ ಸುತ್ತುವಂತೆ ಯಾರು ಹಡಗಿನಂತಿರುವ ಈ ದೇಹದಲ್ಲಿಯೇ ಮಮತ್ವದಿಂದ ಅಭಿಭೂತನಾಗಿ, ಇಲ್ಲಿಯೇ ಕುಳಿತುಕೊಂಡಲ್ಲಿ ಸಂಸಾರಚಕ್ರದಲ್ಲಿ ಸುತ್ತುತ್ತಾನೆ. ಇದರ ಮೋಹ ಹೋಗುತ್ತದೆ ಎಂಬ ನಿಶ್ಚಯವು ಇರುವುದಿಲ್ಲ.

ನಾವಂ ನ ಶಕ್ಯಮಾರುಹ್ಯ ಸ್ಥಲೇ ವಿಪರಿಧಾವಿತುಮ್ ।
ತಥೈವ ರಥಮಾರುಹ್ಯ ನಾಪ್ಸು ಚರ್ಯಾ ವಿಧೀಯತೇ ॥೩೧॥

ಏವಂ ಕರ್ಮಕೃತಂ ವೃತ್ತಂ ವಿವಿಧಸ್ಥಂ ಪೃಥಕ್ ಪೃಥಕ್ ।
ಯಥಾ ಕರ್ಮಕೃತಂ ಲೋಕೇ ತಥಾ ತದುಪಪದ್ಯತೇ ॥೩೨॥

ಹಡಗಿನಲ್ಲಿ ಕುಳಿತವನು ಹೇಗೆ ನೆಲದಲ್ಲಿ ಸಂಚರಿಸಲು ಸಾಧ್ಯವಾಗುವುದಿಲ್ಲವೋ, ರಥದಲ್ಲಿ ಕುಳಿತವನು ಸಮುದ್ರದಲ್ಲಿ ಸಾಗಲು ಹೇಗೆ ಸಾಧ್ಯವಾಗುವುದಿಲ್ಲವೋ ಹೀಗೆಯೇ ಬಗೆಬಗೆಯಾದ ಕರ್ಮಗಳಲ್ಲಿ ಆಸಕ್ತನಾದವನು ಗುರಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಕರ್ಮದಿಂದ ಸಿಗುವ ಫಲವು ಆ ಕರ್ಮಕ್ಕೆ ಅನುಗುಣವಾಗಿರುತ್ತದೆ. ಪುನಃ ಪುನಃ ಸಂಸಾರಚಕ್ರದಲ್ಲಿಯೇ ತಿರುಗುವಂತೆ ಮಾಡುತ್ತದೆ. ಆದ್ದರಿಂದ ಜ್ಞಾನಮಾರ್ಗವನ್ನೇ ಆಶ್ರಯಿಸಬೇಕು.

ಯನ್ನೈವ ಗಂಧಿ ನೋ ರಸ್ಯಂ ರೂಪಸಂಸ್ಪರ್ಶಶಬ್ದವತ್ ।
ಮನ್ಯತೇ ನ ಮನೋ ಬುದ್ಧ್ಯಾ ತತ್ ಪ್ರಧಾನಂ ಪ್ರಚಕ್ಷತೇ ॥೩೩॥

ಯಾವ ರೀತಿಯಾಗಿ ಚಕ್ಕುಲಿ ಮೊದಲಾದವುಗಳ ರಸವನ್ನು ಆಸ್ವಾದಿಸುವವನು ಬೇರೆ ಎಲ್ಲ ವಿಷಯಗಳನ್ನೂ ಮರೆತು ಆಸ್ವಾದಿಸುತ್ತಾನೋ ಇದರಂತೆ ಪರಮಾತ್ಮನನ್ನು ಜಗತ್ತಿನಿಂದ ವಿಷಯಗಳನ್ನೇ ಅನುಭವಿಸುವ ಸಾಧಕನು ಮರೆಯುತ್ತಾನೆ.

ವ್ಯಾಖ್ಯಾನ ವಿಶೇಷ– ಚಕ್ಕುಲಿಯನ್ನು ತಿನ್ನುವಾಗ ಜ್ಞಾನೇಂದ್ರಿಯವೆನಿಸಿದ ತ್ವಗಿಂದ್ರಿಯವು ಚಕ್ಕುಲಿಯ ಸ್ಪರ್ಶದಲ್ಲಿ ಏಕಾಗ್ರತೆಯನ್ನು ಹೊಂದಿರುತ್ತದೆ. ಚಕ್ಷುರಿಂದ್ರಿಯವು ಚಕ್ಕುಲಿಯ ರೂಪದಲ್ಲಿ, ಘ್ರಾಣೇಂದ್ರಿಯವು ಗಂಧದಲ್ಲಿ, ಶ್ರೋತ್ರೇಂದ್ರಿಯವು ತಿನ್ನುವಾಗ ಉಂಟಾಗುವ ಶಬ್ದದಲ್ಲಿ, ಜಿಹ್ವೇಂದ್ರಿಯವು ರುಚಿಯಲ್ಲಿಯೂ ಆಸಕ್ತವಾಗಿರುವುದರಿಂದ ಬೇರೆ ಜ್ಞಾನಗಳು ಹೇಗೆ ಬರುವುದಿಲ್ಲವೋ ಹಾಗೆಯೇ ಪ್ರಕೃತಿಯಲ್ಲಿಯೇ ಬದ್ಧನಾದವನು ಪ್ರಕೃತಿಯ ಗುಣಗಳನ್ನು ಆಸ್ವಾದಿಸುತ್ತಾ ಪರಮಾತ್ಮನನ್ನು ತಿಳಿಯುವುದಿಲ್ಲ.

ತತ್ರ ಪ್ರಧಾನಮವ್ಯಕ್ತಮವ್ಯಕ್ತಸ್ಯ ಗುಣೋ ಮಹಾನ್ ।
ಮಹಾನ್ ಪ್ರಧಾನಭೂತಸ್ಯ ಗುಣೋಽಹಂಕಾರ ಏವ ಚ ॥೩೪॥

ಪ್ರಧಾನವನ್ನೇ ಅವ್ಯಕ್ತ ಎನ್ನುತ್ತಾರೆ. ಅವ್ಯಕ್ತವೆನಿಸಿದ ಮೂಲಪ್ರಕೃತಿಯ ಕಾರ್ಯವೇ ಮಹತತ್ತ್ವವೆನಿಸಿದೆ. ಅವ್ಯಕ್ತ ಪ್ರಕೃತಿಯಿಂದ ಅಪ್ರಧಾನವಾಗಿ ಹುಟ್ಟಿದ ಮಹತ್ತತ್ತ್ವದ ಕಾರ್ಯವೇ ಅಹಂಕಾರತತ್ತ್ವದ ಕಾರ್ಯವಾಗಿದೆ.

ಅಹಂಕಾರಾತ್ ಪ್ರಧಾನಸ್ಯ ಮಹಾಭೂತಕೃತೋ ಗುಣಃ ।
ಪೃಥಕ್ತ್ವೇನ ಚ ಭೂತಾನಾಂ ವಿಷಯಾ ವೈ ಗುಣಾಃ ಸ್ಮೃತಾಃ ॥೩೫॥

ಅವ್ಯಕ್ತ ತತ್ತ್ವದ ಮೂಲಕ ಮಹತ್ತತ್ತ್ವದ ದೆಸೆಯಿಂದ ಹುಟ್ಟಿದ ಅಹಂಕಾರ ತತ್ತ್ವದಿಂದ ಪಂಚಭೂತದ ವಿಷಯಗಳು ಪ್ರತ್ಯೇಕ-ಪ್ರತ್ಯೇಕವಾಗಿ ಶಬ್ದ-ಸ್ಪರ್ಶಾದಿ ಗುಣಗಳೆಂದು ಹೇಳಲ್ಪಟ್ಟಿವೆ.

ಬೀಜಧರ್ಮಂ ಯಥಾऽವ್ಯಕ್ತಂ ತಥೈವ ಪ್ರಸವಾತ್ಮಕಮ್ ।
ಬೀಜಧರ್ಮೀ ಮಹಾನಾತ್ಮಾ ಪ್ರಸವಶ್ಚೇತಿ ನಃ ಶ್ರುತಮ್ ॥೩೬॥

ಅವ್ಯಕ್ತ ಪ್ರಕೃತಿಯು ಕಾರಣವಾಗಿದೆ, ಕಾರ್ಯವೂ ಆಗಿದೆ. ಅವ್ಯಕ್ತ ಪ್ರಕೃತಿಯಿಂದ ಹುಟ್ಟಿದ ಮಹತ್ತತ್ತ್ವವು ಕಾರಣವೂ ಆಗಿದೆ, ಕಾರ್ಯವೂ ಆಗಿದೆ ಎಂಬುದನ್ನು ನಾವು ಕೇಳಿದ್ದೇವೆ.

ಬೀಜಧರ್ಮೀ ತ್ವಹಂಕಾರಃ ಪ್ರಸವಶ್ಚ ಪುನಃ ಪುನಃ ।
ತಥೈವ ಬೀಜಧರ್ಮಾಣಿ ಮಹಾಭೂತಾನಿ ಪಂಚ ವೈ ॥೩೭॥

ಮಹತ್ತತ್ತ್ವದಿಂದ ಹುಟ್ಟಿದ ಅಹಂಕಾರ ತತ್ತ್ವವೂ ಕೂಡ ಕಾರಣವೂ ಆಗಿದೆ, ಕಾರ್ಯವೂ ಆಗಿದೆ. ಅಹಂಕಾರದಿಂದ ಹುಟ್ಟಿದ ಪಂಚಮಹಾಭೂತಗಳು ಕಾರಣವೂ ಆಗಿವೆ, ಕಾರ್ಯವೂ ಆಗಿವೆ.

ಬೀಜಧರ್ಮಿಣ ಇತ್ಯಾಹುಃ ಪ್ರಸವಂ ಚ ಪ್ರಕುರ್ವತೇ ।
ವಿಶೇಷಾಃ ಪಂಚಭೂತಾನಾಂ ತೇಷಾಂ ವಿತ್ತ ವಿಶೇಷಣಮ್ ॥೩೮॥

ಪಂಚಮಹಾಭೂತಗಳು ಬೀಜಧರ್ಮವುಳ್ಳವುಗಳೆಂದು ಅರ್ಥಾತ್ ಕಾರ್ಯವೆಂದು, ಪ್ರಸವಧರ್ಮಗಳುಳ್ಳವುಗಳೆಂದು ಅರ್ಥಾತ್ ಕಾರಣಗಳೆಂದು ಹೇಳುತ್ತಾರೆ. ಪಂಚಭೂತಗಳ ವಿಶೇಷವೆನಿಸಿದ ಕಾರ್ಯವು ಶಬ್ದಸ್ಪರ್ಶಾದಿ ವಿಷಯವೇ ಆಗಿದೆ. ಆ ಕಾರ್ಯಕ್ಕೆ ಪಂಚಭೂತಗಳ ಕಾರ್ಯವಿಶೇಷವು ಶಬ್ದಾದಿಗಳು ಎಂದು ತಿಳಿಯಿರಿ.

ತತ್ರೈಕಗುಣಮಾಕಾಶಂ ದ್ವಿಗುಣೋ ವಾಯುರುಚ್ಯತೇ ।
ತ್ರಿಗುಣಂ ಜ್ಯೋತಿರಿತ್ಯಾಹುರಾಪಶ್ಚಾಪಿ ಚತುರ್ಗುಣಾಃ ॥೩೯॥

ಪಂಚಭೂತಗಳಲ್ಲಿ ಆಕಾಶವು ಶಬ್ದ ಎಂಬ ಒಂದೇ ಗುಣವನ್ನು ಹೊಂದಿದೆ. ವಾಯುವಿನಲ್ಲಿ ಶಬ್ದ-ಸ್ಪರ್ಶಗಳೆಂಬ ಎರಡು ಗುಣಗಳಿವೆ. ತೇಜಸ್ಸಿನಲ್ಲಿ ಶಬ್ದ-ಸ್ಪರ್ಶ-ರೂಪ ಎಂಬ ಮೂರು ಗುಣಗಳಿವೆ. ನೀರಿನಲ್ಲಿ ಶಬ್ದ-ಸ್ಪರ್ಶ-ರೂಪ-ರಸ ಎಂಬ ನಾಲ್ಕು ಗುಣಗಳು ಇವೆ.

ಪೃಥ್ವೀ ಪಂಚಗುಣಾ ಜ್ಞೇಯಾ ತತ್ರ ಸ್ಥಾವರಜಂಗಮಾಃ ।
ಸರ್ವಭೂತಕರೀ ದೇವೀ ಶುಭಾಶುಭನಿದರ್ಶನಾ ॥೪೦॥

ಪೃಥಿವಿಯಲ್ಲಿ ಶಬ್ದ-ಸ್ಪರ್ಶ-ರೂಪ-ರಸ-ಗಂಧ ಎಂಬ ಐದು ಗುಣಗಳಿವೆ. ಆ ಪೃಥಿವೀತತ್ತ್ವದಲ್ಲಿ ಸ್ಥಾವರ-ಜಂಗಮಗಳೆಲ್ಲವೂ ವಿಹರಿಸುತ್ತವೆ. ಎಲ್ಲ ಪ್ರಾಣಿಗಳಿಗೂ ಜನ್ಮವನ್ನು ನೀಡುವವಳು, ಶುಭಾಶುಭಕರ್ಮಗಳಿಗೆ ಸಾಕ್ಷಿಯು ಈ ಪೃಥಿವಿಯೇ ಆಗಿದ್ದಾಳೆ.

ಶಬ್ದಃ ಸ್ಪರ್ಶಸ್ತಥಾ ರೂಪಂ ರಸೋ ಗಂಧಶ್ಚ ಪಂಚಮಃ ।
ಏತೇ ಪಂಚ ಗುಣಾ ಭೂಮೇರ್ವಿಜ್ಞೇಯಾ ದ್ವಿಜಸತ್ತಮಾಃ ॥೪೧॥

ವಿಪ್ರಶ್ರೇಷ್ಠರೇ, ಶಬ್ದ-ಸ್ಪರ್ಶ-ರೂಪ-ರಸ-ಗಂಧ ಎಂಬ ಐದು ಗುಣಗಳು ಪೃಥಿವಿಯ ಗುಣಗಳೆಂದು ತಿಳಿಯಬೇಕು.

ಪಾರ್ಥಿವಶ್ಚ ಸದಾ ಗಂಧೋ ಗಂಧಶ್ಚ ಬಹುಧಾ ಸ್ಮೃತಃ ।
ತಸ್ಯ ಗಂಧಸ್ಯ ವಕ್ಷ್ಯಾಮಿ ವಿಸ್ತರೇಣ ಬಹೂನ್ ಗುಣಾನ್ ॥೪೨॥

ಪೃಥಿವಿಯ ಮುಖ್ಯವಾದ ಗುಣವು ಗಂಧವು. ಆ ಗಂಧವು ಅನೇಕ ಪ್ರಕಾರವಾಗಿ ಇದೆ. ಆ ಗಂಧದ ಅನೇಕ ಪ್ರಕಾರವಾದ ಗುಣಗಳನ್ನು ವಿಸ್ತಾರವಾಗಿ ಹೇಳುತ್ತೇನೆ.

ಇಷ್ಟಶ್ಚಾನಿಷ್ಟಗಂಧಶ್ಚ ಮಧುರೋऽಮ್ಲಃ ಕಟುಸ್ತಥಾ ।
ನಿರ್ಹಾರೀ ಸಂಹತಃ ಸ್ನಿಗ್ಧೋ ರೂಕ್ಷೋ ವಿಶದ ಏವ ಚ ।
ಏವಂ ದಶವಿಧೋ ಜ್ಞೇಯಃ ಪಾರ್ಥಿವೋ ಗಂಧ ಇತ್ಯುತ ॥೪೩॥

ಇಷ್ಟಗಂಧ, ಅನಿಷ್ಟಗಂಧ, ಮಧುರ, ಹುಳಿ, ಕಟು, ನಿರ್ಹಾರಿ, ಮಿಶ್ರಿತ, ಸ್ನಿಗ್ಧ, ಕಠಿಣ, ವಿಶದ - ಹೀಗೆ ಪೃಥಿವಿಯ ಗುಣಗಳನ್ನು ಹತ್ತು ಎಂದು ಹೇಳುತ್ತಾರೆ.

ಶಬ್ದಃ ಸ್ಪರ್ಶಸ್ತಥಾ ರೂಪಂ ರಸಶ್ಚಾಪಾಂ ಗುಣಾಃ ಸ್ಮೃತಾಃ ।
ರಸಜ್ಞಾನಂ ತು ವಕ್ಷ್ಯಾಮಿ ರಸಸ್ತು ಬಹುಧಾ ಸ್ಮೃತಃ ।
ಮಧುರೋಽಮ್ಲಃ ಕಟುಸ್ತಿಕ್ತಃ ಕಷಾಯೋ ಲವಣಸ್ತಥಾ ॥೪೪॥

ಏವಂ ಷಡ್ವಿಧವಿಸ್ತಾರೋ ರಸೋ ವಾರಿಸಮುದ್ಭವಃ ॥೪೫॥

ಶಬ್ದ-ಸ್ಪರ್ಶ-ರೂಪ-ರಸ ಎಂಬ ನೀರಿನ ಗುಣಗಳು ನಾಲ್ಕು. ಅವುಗಳಲ್ಲಿ ರಸವೇ ನೀರಿನ ಮುಖ್ಯಗುಣವು. ರಸಗಳು ಬಹುಪ್ರಕಾರವಾಗಿವೆ. ಆ ರಸವಿಜ್ಞಾನವನ್ನು ಹೇಳುತ್ತೇನೆ- ಮಧುರ-ಆಮ್ಲ-ಕಟು-ತಿಕ್ತ-ಕಷಾಯ-ಲವಣ ಎಂಬುದಾಗಿ ರಸವು ಆರು ವಿಧವಾಗಿ ವಿಸ್ತಾರವನ್ನು ಹೊಂದಿದೆ. ಈ ಎಲ್ಲ ರಸಗಳು ನೀರಿನಿಂದಲೇ ಹುಟ್ಟಿದವುಗಳು.

ಶಬ್ದಃ ಸ್ಪರ್ಶಸ್ತಥಾ ರೂಪಂ ತ್ರಿಗುಣಂ ಜ್ಯೋತಿರುಚ್ಯತೇ ॥೪೬॥

ಜ್ಯೋತಿಷಶ್ಚ ಗುಣೋ ರೂಪಂ ರೂಪಂ ಚ ಬಹುಧಾ ಸ್ಮೃತಮ್ ।
ಶುಕ್ಲಂ ಕೃಷ್ಣಂ ತಥಾ ರಕ್ತಂ ನೀಲಂ ಪೀತಾರುಣಂ ತಥಾ ॥೪೭॥

ಹ್ರಸ್ವಂ ದೀರ್ಘಂ ತಥಾ ಸ್ಥೂಲಂ ಚತುರಸ್ರಾಣುವೃತ್ತಕಮ್ ।
ಏವಂ ದ್ವಾದಶವಿಸ್ತಾರಂ ಜ್ಯೋತಿಷಾಂ ರೂಪಮಿಷ್ಯತೇ ॥೪೮॥

ಶಬ್ದ-ಸ್ಪರ್ಶ-ರೂಪ ಎಂಬ ಮೂರುಗುಣಗಳು ತೇಜಸ್ಸಿನ ಗುಣಗಳು. ತೇಜಸ್ಸಿಗೆ ಬಹುಪ್ರಕಾರಗಳು ಹೇಳಲ್ಪಟ್ಟಿವೆ. ಬಿಳಿ, ಕಪ್ಪು, ಕೆಂಪು, ನೀಲಿ, ಹಳದಿ, ಅರುಣ, ಹ್ರಸ್ವ, ದೀರ್ಘ, ಕೃಶ, ಸ್ಥೂಲ, ಚಚ್ಚೌಕ, ದುಂಡು - ಈ ಹನ್ನೆರಡು ತೇಜಸ್ಸಿನ ಬಹುರೂಪಗಳು.

ವಿಜ್ಞೇಯಂ ಬ್ರಾಹ್ಮಣೈರ್ನಿತ್ಯಂ ಧರ್ಮಜ್ಞೈಃ ಸತ್ಯವಾದಿಭಿಃ ॥೪೯॥

ಇವುಗಳ ಸ್ವರೂಪವನ್ನು ಸತ್ಯವಾದಿಗಳಾದ, ವೃದ್ಧರಾದ, ಧರ್ಮಜ್ಞರಾದ ಬ್ರಾಹ್ಮಣರು ತಿಳಿದುಕೊಳ್ಳುತ್ತಾರೆ.

ಶಬ್ದಸ್ಪರ್ಶೌ ಚ ವಿಜ್ಞೇಯೌ ದ್ವಿಗುಣೋ ವಾಯುರುಚ್ಯತೇ ॥೫೦॥

ವಾಯೋಽಶ್ಚಾಪಿ ಗುಣಃ ಸ್ಪರ್ಶಃ ಸ್ಪರ್ಶಶ್ಚ ಬಹುಧಾ ಸ್ಮೃತಃ ॥೫೧॥

ಶಬ್ದ ಮತ್ತು ಸ್ಪರ್ಶ ಎರಡೂ ವಾಯುವಿನ ಗುಣಗಳು. ಸ್ಪರ್ಶವು ವಾಯುವಿನ ಮುಖ್ಯಗುಣ. ಸ್ಪರ್ಶದ ಗುಣಗಳೂ ಅನೇಕ ಪ್ರಕಾರವಾಗಿವೆ ಎಂದು ಹೇಳುತ್ತಾರೆ.

ಉಷ್ಣಃ ಶೀತಃ ಸುಖೋ ದುಃಖಃ ಸ್ನಿಗ್ಧೋ ವಿಶದ ಏವ ಚ ।
ಕಠಿನಶ್ಚಿಕ್ಕಣಃ ಶ್ಲಕ್ಷ್ಣಃ ಪಿಚ್ಛಿಲೋ ದಾರುಣೋ ಮೃದುಃ ॥೫೨॥

ಉಷ್ಣ, ಶೀತ, ಸುಖ, ದುಃಖ, ಸ್ನಿಗ್ಧ, ವಿಶದ, ಕಠಿಣ, ನುಣುಪು, ಶ್ಲಕ್ಷ್ಣ, ಜಿಡ್ಡು, ದಾರುಣ, ಕೋಮಲ ಎಂಬುದಾಗಿ.

ಏವಂ ದ್ವಾದಶವಿಸ್ತಾರೋ ವಾಯವ್ಯೋ ಗುಣ ಉಚ್ಯತೇ ।
ವಿಧಿವದ್ ಬ್ರಾಹ್ಮಣೈಃ ಸಿದ್ಧೈರ್ಧರ್ಮಜ್ಞೈಸ್ತತ್ತ್ವದರ್ಶಿಭಿಃ ॥೫೩॥

ಈ ರೀತಿಯಾಗಿ ಹನ್ನೆರಡು ವಾಯುವಿನ ಗುಣವಾದ ಸ್ಪರ್ಶದ ವಿಸ್ತಾರವಾದ ಗುಣಗಳು ಎಂಬುದಾಗಿ ತತ್ತ್ವದರ್ಶಿಗಳಾದ, ಸಿದ್ಧರಾದ ಬ್ರಾಹ್ಮಣರು ವಿಧಿವತ್ತಾಗಿ ಹೇಳುತ್ತಾರೆ.

ತತ್ರೈಕಗುಣ ಆಕಾಶಃ ಶಬ್ದ ಇತ್ಯೇವ ಸ ಸ್ಮೃತಃ ॥೫೪॥

ಇವುಗಳಲ್ಲಿ ಆಕಾಶವು ಒಂದೇ ಗುಣವನ್ನು ಹೊಂದಿದೆ. ಅದಕ್ಕೆ ಶಬ್ದ ಎಂದು ಹೆಸರು.

ತಸ್ಯ ಶಬ್ದಸ್ಯ ವಕ್ಷ್ಯಾಮಿ ವಿಸ್ತರೇಣ ಬಹೂನ್ ಗುಣಾನ್ ॥೫೫॥

ಆ ಶಬ್ದಕ್ಕೂ ಅನೇಕ ಪ್ರಕಾರಗಳಿವೆ. ಅದಕ್ಕಿರುವ ಬಹುಗುಣಗಳನ್ನು ಹೇಳುತ್ತೇನೆ.

ಷಡ್ಜರ್ಷಭಃ ಸ ಗಾಂಧಾರೋ ಮಧ್ಯಮಃ ಪಂಚಮಃ ಸ್ಮೃತಃ ।
ಅತಃಪರಂ ತು ವಿಜ್ಞೇಯೋ ನಿಷಾದೋ ಧೈ(ದೈ)ವತಸ್ತಥಾ ॥೫೬॥

ಇಷ್ಟಶ್ಚಾನಿಷ್ಟಶಬ್ದಶ್ಚ ಸಂಹತಃ ಪ್ರತಿಭಾನವಾನ್ ।
ಏವಂ ಬಹುವಿಧೋ ಜ್ಞೇಯಃ ಶಬ್ದ ಆಕಾಶಸಂಭವಃ ॥೫೭॥

ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ನಿಷಾದ, ಧೈವತ, ಇಷ್ಟ, ಅನಿಷ್ಟ, ಸಂಹತ - ಹೀಗೆ ಆಕಾಶದಿಂದ ಹುಟ್ಟಿದ ಶಬ್ದವು ಹತ್ತು ಭಾಗಗಳಾಗಿ ವಿಸ್ತಾರ ಹೊಂದಿದೆ.

ಆಕಾಶಮುತ್ತಮಂ ಭೂತಮಹಂಕಾರಸ್ತತಃ ಪರಃ ।
ಅಹಂಕಾರಾತ್ ಪರಾ ಬುದ್ಧಿಃ ಬುದ್ಧೇರಾತ್ಮಾ ತತಃ ಪರಃ ॥೫೮॥

ತಸ್ಮಾತ್ ತು ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ॥೫೯॥

ಆಕಾಶವೇ ಎಲ್ಲ ಭೂತಗಳಿಗಿಂತಲೂ ಶ್ರೇಷ್ಠವಾದುದು. ಅದಕ್ಕಿಂತಲೂ ಶ್ರೇಷ್ಠವಾದುದು ಅಹಂಕಾರತತ್ತ್ವ. ಅಹಂಕಾರತತ್ತ್ವಕ್ಕಿಂತ ಬುದ್ಧಿತತ್ತ್ವಶ್ರೇಷ್ಠ. ಬುದ್ಧಿತತ್ತ್ವಕ್ಕಿಂತಲೂ ಮಹತ್ತತ್ತ್ವಾಭಿಮಾನಿಯಾದ ಚತುರ್ಮುಖನು ಶ್ರೇಷ್ಠ. ಆ ಚತುರ್ಮುಖಬ್ರಹ್ಮನಿಗಿಂತಲೂ ಅವ್ಯಕ್ತತತ್ತ್ವಾಭಿಮಾನಿನಿಯಾದ ಮಹಾಲಕುಮಿಯು ಶ್ರೇಷ್ಠಳು. ಆ ಅವ್ಯಕ್ತತತ್ತ್ವಕ್ಕಿಂತಲೂ ಪರಮಪುರುಷನಾದ ನಾರಾಯಣನು ಸರ್ವೋತ್ತಮನು.

ಪರಾವರಜ್ಞೋ ಭೂತಾನಾಂ ಯಂ ಪ್ರಾಪ್ಯಾನಂತ್ಯಮಶ್ನುತೇ ॥೬೦॥

ಈ ಪಂಚಭೂತಗಳ ತಾರತಮ್ಯವನ್ನು ಸರಿಯಾಗಿ ತಿಳಿದವರು ಭಗವಂತನನ್ನು ಹೊಂದಿ ಅನಂತ ಸುಖವನ್ನು ಪಡೆಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನುಗೀತಾಸು ಗುಣವಿಸ್ತಾರಕಥನಂ ನಾಮ ಪಂಚಾಶೋऽಧ್ಯಾಯಃ॥

॥ ಅನುಗೀತಾಪರ್ವಣಿ ಪಂಚತ್ರಿಂಶೋऽಧ್ಯಾಯಃ ॥೩೫॥

ಇಲ್ಲಿಗೆ ಮಹಾಭಾರತದ ಅಶ್ವಮೇಧಿಕಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂದನೆಯ ಅಧ್ಯಾಯ

ಕೃಷ್ಣನು ಅರ್ಜುನನನ್ನು ಕುರಿತು ಮುಕ್ತಿಯ ಉಪಾಯವನ್ನು ಹೇಳುವ ಗುರು-ಶಿಷ್ಯ ಸಂವಾದವನ್ನು ಅನುವಾದಿಸುವ ಮೂಲಕ ಕಥಾವಿಸ್ತಾರವನ್ನು ಮುಕ್ತಾಯಗೊಳಿಸಿ, ತನ್ನ ಪಟ್ಟಣಕ್ಕೆ ಹೋಗುವ ಆಕಾಂಕ್ಷೆಯನ್ನು ತಿಳಿಸಿದುದು. ಅರ್ಜುನನು ಶ್ರೀಕೃಷ್ಣನಿಗೆ ಯುಧಿಷ್ಠಿರನ ಅನುಮತಿಯನ್ನು ಕೊಡಿಸುವ ಮೂಲಕ ದ್ವಾರಕೆಗೆ ಹೊರಡಲು ಒಪ್ಪಿದುದು.

ಬ್ರಹ್ಮಾ

ಭೂತಾನಾಮಥ ಪಂಚಾನಾಂ ಸರ್ವೇಷಾಮೀಶ್ವರಂ ಮನಃ ।
ನಿಯಮೇ ಚ ವಿಸರ್ಗೇ ಚ ಭೂತಾನಾಂ ಮನ ಏವ ಚ ॥೧॥

ಬ್ರಹ್ಮಾ- ಮಹರ್ಷಿಗಳೇ, ಪಂಚಭೂತಗಳ ಸೃಷ್ಟಿಮತ್ತು ನಿಯಮಗಳಲ್ಲಿ ಮನಸ್ಸು ಯಾವ ಸಾಮರ್ಥ್ಯವನ್ನು ಹೊಂದಿರುತ್ತದೋ ಆ ಸಾಮರ್ಥ್ಯವು ಉಳಿದ ಇಂದ್ರಿಯಗಳಿಗೆ ಇರುವುದಿಲ್ಲ. ಆದ್ದರಿಂದ ಎಲ್ಲರನ್ನೂ ನಿಯಮನ ಮಾಡುವ ಶಕ್ತಿಯು ಮನಸ್ಸಿನ ಶಕ್ತಿಯಾಗಿದೆ.

ಅಧಿಷ್ಠಾತೃ ಮನೋ ನಿತ್ಯಂ ಭೂತಾನಾಂ ಮಹತಾಂ ತಥಾ ।
ಬುದ್ಧಿಮೈಶ್ವರ್ಯಮಾಚಷ್ಟೇ ಕ್ಷೇತ್ರಜ್ಞಃ ಸರ್ವ ಉಚ್ಯತೇ ॥೨॥

ಪಂಚಮಹಾಭೂತಗಳಿಗೆ ಮನಸ್ಸು ಆಧಾರವಾಗಿದೆ. ಬುದ್ಧಿಯು ಜೀವನಲ್ಲಿರುವ ಐಶ್ವರ್ಯವನ್ನು ಹೇಳುತ್ತದೆ. ಮನಸ್ತತ್ತ್ವಕ್ಕಿಂತಲೂ ಶ್ರೇಷ್ಠವಾಗಿದೆ. ಮನಸ್ಸು, ಬುದ್ಧಿ ಪಂಚಭೂತಗಳಿಗೆಲ್ಲ ನಿಯಾಮಕನಾದ, ದೇಹವೆಂಬ ರಥವನ್ನು ಸ್ವತಂತ್ರವಾಗಿ ಚಲಿಸುವಂತೆ ಮಾಡುವ ಕ್ಷೇತ್ರಜ್ಞನಾದ ಪರಮಾತ್ಮನು ಸರ್ವ ಎಂದು ಕರೆಸಿಕೊಳ್ಳುತ್ತಾನೆ.

ಇಂದ್ರಿಯಾಣಿ ಮನೋ ಯುಕ್ತೇ ಸದಶ್ವಾನಿವ ಸಾರಥಿಃ ।
ಇಂದ್ರಿಯಾಣಿ ಮನೋ ಬುದ್ಧಿಃ ಕ್ಷೇತ್ರಜ್ಞೇ ಯುಜ್ಯತೇ ಸದಾ ॥೩॥

ನಿಪುಣನಾದ ಸಾರಥಿಯು ಪಳಗಿದ ಕುದುರೆಗಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡು ರಥವನ್ನು ನಡೆಸುವಂತೆ, ಮನಸ್ಸು ಸಮಸ್ತ ಇಂದ್ರಿಯಗಳೆಂಬ ಕುದುರೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನಡೆಸುತ್ತದೆ. ಆದರೆ ಈ ಮನಸ್ಸು, ಬುದ್ಧಿಗಳೆಲ್ಲವೂ ಕ್ಷೇತ್ರಜ್ಞನೆನಿಸಿದ ಪರಮಾತ್ಮನಿಂದ ನಿಯಮಿಸಲ್ಪಟ್ಟಿವೆ.

ಭೂತಬುದ್ಧಿಸಮಾಯುಕ್ತಂ ಬುದ್ಧಿಸಂಯಮನಂ ರಥಮ್ ।
ಸಮಾರುಹ್ಯ ಸ ಭೂತಾತ್ಮಾ ಸಮಂತಾತ್ ಪರಿಧಾವತಿ ॥೪॥

ಪಂಚಭೂತಗಳು, ಬುದ್ಧಿತತ್ತ್ವವು ಇದರಿಂದ ಕೂಡಿರುವ, ಬುದ್ಧಿಯಿಂದ ನಿಯಂತ್ರಿತವಾದ ರಥವನ್ನು ಏರಿಕೊಂಡ ಭೂತಾತ್ಮನಾದ ಪರಮಾತ್ಮನು ಎಲ್ಲ ಕಡೆಯಲ್ಲಿಯೂ ಸಂಚರಿಸುತ್ತಾನೆ.

ಇಂದ್ರಿಯಗ್ರಾಮಸಂಯುಕ್ತೋ ಮನಃ ಸಾರಥಿಮೇವ ಚ ।
ಬುದ್ಧಿಸಂಯಮನೋ ನಿತ್ಯಂ ಮಹಾನ್ ಬ್ರಹ್ಮಮಯೋ ರಥಃ ॥೫॥

ಇಂದ್ರಿಯಸಮೂಹದಿಂದ ಕೂಡಿರುವ ಶರೀರವೇ ಪರಬ್ರಹ್ಮನ ರಥ ಎನಿಸಿದೆ. ಏಕಾಗ್ರತೆಯ ಮನಸ್ಸು ಸಾರಥಿ ಎನಿಸಿದೆ. ಬುದ್ಧಿಯು ನಿಯಂತ್ರಿಸುವ ಹಗ್ಗವೆನಿಸಿದೆ.

ಏವಂ ಯೋ ವೇತ್ತಿ ವಿದ್ವಾನ್ ವೈ ಸದಾ ಬ್ರಹ್ಮಮಯಂ ರಥಮ್ ।
ಸ ಧೀರಃ ಸರ್ವಲೋಕೇಷು ನ ಮೋಹಮಧಿಗಚ್ಛತಿ ॥೬॥

ಯಾವ ವಿದ್ವಾಂಸನು ಪರಬ್ರಹ್ಮನಿಂದ ನಿಯಮನ ಹೊಂದುವ ಈ ದೇಹವೆಂಬ ರಥವನ್ನು ತಿಳಿದುಕೊಳ್ಳುತ್ತಾನೋ ಅಂತಹ ಧೀರನು ಪ್ರಾಣಿಗಳಲ್ಲಿ ಶ್ರೇಷ್ಠನಾಗಿದ್ದಾನೆ, ಎಂದಿಗೂ ಮೋಹಕ್ಕೆ ತುತ್ತಾಗುವುದಿಲ್ಲ.

ಅವ್ಯಕ್ತಾದಿವಿಶೇಷಾಂತಂ ಚರಸ್ಥಾವರಸಂಕುಲಮ್ ।
ಚಂದ್ರಸೂರ್ಯಪ್ರಭಾಲೋಕಂ ಗ್ರಹನಕ್ಷತ್ರಮಂಡಿತಮ್ ॥೭॥

ನದೀಪರ್ವತಜಾಲೈಶ್ಚ ಸರ್ವತಃ ಪರಿಭೂಷಿತಮ್ ।
ವಿವಿಧಾಭಿಸ್ತಥಾऽದ್ಭಿಶ್ಚ ಸತತಂ ಸಮಲಂಕೃತಮ್ ॥೮॥

ಅಜಿತಂ ಸರ್ವಭೂತಾನಾಂ ಸರ್ವಪ್ರಾಣಭೃತಾಂ ಗತಿಃ ।
ಏತದ್ ಬ್ರಹ್ಮಪದಂ ನಿತ್ಯಂ ಕ್ಷೇತ್ರಜ್ಞೋ ಯತ್ರ ತಿಷ್ಠತಿ ॥೯॥

ಈ ಭೂಗೋಲವೆಂಬ ಪರಬ್ರಹ್ಮನ ಸ್ಥಾನವು ಅವ್ಯಕ್ತತತ್ತ್ವವೇ ಪ್ರಧಾನವಾಗಿ ಕಾರಣವಾಗಿರುವ ಪೃಥಿವಿ ಎಂಬ ವಿಶಾಲವಾದ ಸ್ಥಳದಿಂದ ಕೂಡಿದೆ. ಸ್ಥಾವರ-ಜಂಗಮಗಳಿಂದ ತುಂಬಿದೆ. ಸೂರ್ಯ-ಚಂದ್ರರಿಂದ ಪ್ರಕಾಶಮಾನವಾಗಿದೆ. ಗ್ರಹ-ನಕ್ಷತ್ರಗಳಿಂದ ಅಲಂಕೃತವಾಗಿದೆ. ನದಿಗಳಿಂದಲೂ, ಪರ್ವತಗಳಿಂದಲೂ ಎಲ್ಲೆಡೆಯೂ ಅಲಂಕೃತವಾಗಿದೆ. ವಿಧವಿಧವಾದ ತೀರ್ಥಗಳಿಂದಲೂ ಅಲಂಕೃತವಾಗಿದೆ. ಸಮಸ್ತ ಪ್ರಾಣಿಗಳಿಗೆ ಆಧಾರವು, ಗತಿಪ್ರದವೂ ಆಗಿದೆ. ಈ ರೀತಿಯಾಗಿ ಭೂಮಿ ಎಂಬ ಸ್ಥಾನದಲ್ಲಿ '**ಅತ್ಯತಿಷ್ಠದ್ ದಶಾಂಗುಲಮ್**' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪರಮಾತ್ಮನು ದಶಾಂಗುಲಮೂರ್ತಿಯಾಗಿ ರಥದಲ್ಲಿ ಕುಳಿತುಕೊಂಡು ಈಚೆ-ಆಚೆ ಸಂಚರಿಸುತ್ತಾನೆ. ಈ ರೀತಿಯಾಗಿ ವ್ಯಾಪ್ತಮೂರ್ತಿಯಾದ ಪರಮಾತ್ಮನು ರಾಜಮಂದಿರದಂತಿರುವ ಭೂಗೋಲವೆಂಬ ಸ್ಥಾನದಲ್ಲಿ ಕ್ಷೇತ್ರಜ್ಞನೆನಿಸಿ ವಾಸ ಮಾಡುತ್ತಾನೆ.

ಲೋಕೇಽಸ್ಮಿನ್ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ತಾನ್ಯೇವಾಗ್ರೇ ಪ್ರಲೀಯಂತೇ ಪಶ್ಚಾದ್ ಭೂತಕೃತಾ ಗುಣಾಃ ॥೧೦॥

ಗುಣೇಭ್ಯಃ ಪಂಚ ಭೂತಾನಿ ಏಷ ಭೂತಸಮುಚ್ಛ್ರಯಃ ॥೧೧॥

ಈ ಲೋಕದಲ್ಲಿ ಯಾವ ಸ್ಥಾವರ-ಜಂಗಮ ಪ್ರಾಣಿಗಳಿವೆಯೋ ಅವೆಲ್ಲವೂ ಪ್ರಲಯಕಾಲ ಬಂದ ಕೂಡಲೇ ಮೂಲಪ್ರಕೃತಿಯಲ್ಲಿ ಲಯ ಹೊಂದುತ್ತವೆ. ಬಳಿಕ ಪಂಚಮಹಾಭೂತಗಳ ಕಾರ್ಯವು ಲಯಹೊಂದುತ್ತದೆ. ಬಳಿಕ ಪಂಚಭೂತಗಳು ಮೂಲಪ್ರಕೃತಿಯಲ್ಲಿ ಲಯಹೊಂದುತ್ತವೆ.

ದೇವಾ ಮನುಷ್ಯಾ ಗಂಧರ್ವಾಃ ಪಿಶಾಚೋರಗರಾಕ್ಷಸಾಃ ।
ಸರ್ವೇ ಸ್ವಭಾವತಃ ಸೃಷ್ಟಾ ನ ಕ್ರಿಯಾಭ್ಯೋ ನ ಕಾರಣಾತ್ ॥೧೨॥

ದೇವತೆಗಳು, ಮನುಷ್ಯರು, ಗಂಧರ್ವರು, ಪಿಶಾಚರು, ಅಸುರರು, ರಾಕ್ಷಸರು ಅದೃಷ್ಟವೆಂಬ ಕರ್ಮದಿಂದಲೇ ಸೃಷ್ಟಿಹೊಂದಿದವರಲ್ಲ. ಕೇವಲ ಮೂಲಪ್ರಕೃತಿ ಎಂಬ ಕಾರಣದಿಂದಲೂ ಸೃಷ್ಟಿಹೊಂದಿದವರಲ್ಲ. ಒಂದು ವೇಳೆ ಹಾಗಿದ್ದಲ್ಲಿ ದೇವರ್ಷಿಗಳು ಸತ್ಕರ್ಮಶೀಲರು, ದಾನವರು ದುಷ್ಕರ್ಮಶೀಲರು, ಮಾನವರು ಉಭಯ ಕರ್ಮಶೀಲರು ಎಂಬ ಕಾರ್ಯವೈಚಿತ್ರ್ಯವು ಉಂಟಾಗುತ್ತಿರಲಿಲ್ಲ. ಆದ್ದರಿಂದ ಕೇವಲ ಅದೃಷ್ಟಪ್ರಧಾನಗಳೇ ಕಾರಣವಾಗದೆ ಆಯಾ ಜೀವರ ಉತ್ತಮ-ಮಧ್ಯಮ-ಅಧಮ ಎಂಬ ಸ್ವಭಾವಗಳನ್ನು ಅನುಸರಿಸಿ ಪರಮಾತ್ಮನು ಸೃಷ್ಟಿಸಿದ್ದಾನೆ ಎಂದು ತಿಳಿಯಬೇಕು.

ಏತೇ ವಿಶ್ವಕೃತೋ ವಿಪ್ರಾ ಜಾಯಂತೀಹ ಪುನಃ ಪುನಃ ॥೧೩॥

ಈ ವಿಶ್ವವನ್ನು ಸೃಷ್ಟಿಸುವ ಮಹದಾದಿ ತತ್ತ್ವಗಳೇ ಪುನಃ ಪುನಃ ಹುಟ್ಟುತ್ತಿರುತ್ತವೆ.

ತೇಭ್ಯಃ ಪ್ರಸೂತಾಸ್ತೇಷ್ವೇವ ಮಹಾಭೂತೇಷು ಪಂಚಸು ।
ಪ್ರಲೀಯಂತೇ ಯಥಾಕಾಲಮೂರ್ಮಯಃ ಸಾಗರೇ ಯಥಾ ॥೧೪॥

ಈ ಮಹದಾದಿ ತತ್ತ್ವಗಳಿಂದ ಹುಟ್ಟಿದ ಪಂಚಭೂತಗಳು ಅಲ್ಲಿಯೇ ಲಯ ಹೊಂದುತ್ತವೆ. ಸಮುದ್ರದಲ್ಲಿ ಉತ್ಪನ್ನವಾದ ಅಲೆಗಳು ಅಲ್ಲಿಯೇ ಲಯ ಹೊಂದುವಂತೆ.

ವಿಶ್ವಸ್ಯೈಕ್ಯಸ್ತು(ಶ್ಚ) ಭೂತೇಭ್ಯೋ ಮಹಾಭೂತಾನಿ ಗಚ್ಛತಿ ।
ಭೂತೇಭ್ಯಶ್ಚಾಪಿ ಪಂಚಭ್ಯೋ ಮುಕ್ತೋ ಗಚ್ಛೇತ್ ಪರಾಂ ಗತಿಮ್ ॥

ವಿಶ್ವವನ್ನು ಸೃಷ್ಟಿಸುವ ಪಂಚಭೂತಗಳಿಂದ ಹುಟ್ಟಿದ ಕಾರ್ಯವು ಸೂಕ್ಷ್ಮ ಮಹಾಭೂತದಲ್ಲಿ ವ್ಯಾಪಿಸಿಕೊಂಡಿದೆ. ಹೀಗೆ ಸೂಕ್ಷ್ಮರೂಪದಲ್ಲಿರುವ ಪಂಚಭೂತಗಳಿಂದಲೂ ಯಾವನು ಮುಕ್ತನಾಗುತ್ತಾನೋ ಅವನು ಪರಮಗತಿಯನ್ನು ಹೊಂದುತ್ತಾನೆ.

ಪ್ರಜಾಪತಿರಿದಂ ಸರ್ವಂ ತಪಸೈವಾಸೃಜತ್ ಪ್ರಭುಃ ।
ತಥೈವ ದೇವಾನೃಷಯಸ್ತಪಸಾ ಪ್ರತಿಪೇದಿರೇ ॥೧೬॥

ಈ ಸಮಗ್ರವಾದ ಜಗತ್ತನ್ನು ಚತುರ್ಮುಖ ಬ್ರಹ್ಮನು ತನ್ನ ತಪಸ್ಸಿನಿಂದ ಸೃಷ್ಟಿಸಿದನು. ಅದೇ ರೀತಿ ದೇವತೆಗಳು, ಋಷಿಗಳು ತಪಸ್ಸಿನಿಂದಲೇ ಆಯಾ ಸ್ಥಾನವನ್ನು ಹೊಂದಿದರು.

ತಪಸಶ್ಚಾನುಪೂರ್ವ್ಯೇಣ ಫಲಮೂಲಾಶಿನಸ್ತಥಾ ।
ತ್ರೈಲೋಕ್ಯಂ ತಪಸಾ ಸಿದ್ಧಾಃ ಪಶ್ಯಂತೀಹ ಸಮಾಹಿತಾಃ ॥೧೭॥

ತಪಸ್ಸಿನ ಪ್ರಭಾವದಿಂದಲೇ ಹಣ್ಣು, ಗೆಡ್ಡೆ, ಗೆಣಸುಗಳನ್ನು ತಿನ್ನುವ ಸಿದ್ಧಪುರುಷರು ಏಕಾಗ್ರ ಮನಸ್ಸಿನಿಂದ, ತಪಸ್ಸಿನಿಂದ ಮೂರುಲೋಕಗಳನ್ನು ಪ್ರತ್ಯಕ್ಷವಾಗಿಯೇ ನೋಡುತ್ತಾರೆ.

ಔಷಧಾನ್ಯಗದಾದೀನಿ ನಾನಾವಿದ್ಯಾಶ್ಚ ಸರ್ವಶಃ ।
ತಪಸೈವ ಪ್ರಸಿದ್ಧ್ಯಂತಿ ತಪೋಮೂಲಂ ಹಿ ಸಾಧನಮ್ ॥೧೮॥

ಆರೋಗ್ಯಕ್ಕೆ ಸಾಧನವಾದ ಔಷಧಿಗಳು, ಸಮಸ್ತ ವಿದ್ಯೆಗಳು ತಪಸ್ಸಿನಿಂದಲೇ ಸಿದ್ಧಿಸುತ್ತವೆ. ಎಲ್ಲದಕ್ಕೂ ಮೂಲ ತಪಸ್ಸು.

ಯದ್ ದುರಾಪಂ ದುರಾಮ್ನಾಯಂ ದುರಾಧರ್ಷಂ ದುರನ್ವಯಮ್ ।
ತತ್ಸರ್ವಂ ತಪಸಾ ಸಾಧ್ಯಂ ತಪೋ ಹಿ ದುರತಿಕ್ರಮಮ್ ॥೧೯॥

ಯಾವುದು ಹೊಂದಲು ಅಸಾಧ್ಯವೋ, ಯಾವುದು ಅಭ್ಯಾಸ ಮಾಡಲು ಅಸಾಧ್ಯವೋ, ಯಾವುದು ಸಹಿಸಲು ಅಸಾಧ್ಯವೋ, ಯಾವುದು ಸಂಬಂಧ

ಹೊಂದಲು ಅಸಾಧ್ಯವೋ ಅವೆಲ್ಲವೂ ತಪಸ್ಸಿನಿಂದಲೇ ಸಾಧ್ಯವೆನಿಸುತ್ತವೆ. ಆದ್ದರಿಂದ ತಪಸ್ಸಿನ ಪ್ರಭಾವವು ದಾಟಲು ಅಸಾಧ್ಯವಾದುದು.

ಸುರಾಪೋ ಬ್ರಹ್ಮಹಾ ಸ್ತೇನೋ ಭ್ರೂಣಹಾ ಗುರುತಲ್ಪಗಃ ।
ತಪಸ್ಯೈವ ಸುತಪ್ತೇನ ಮುಚ್ಯತೇ ಕಿಲ್ಬಿಷಾತ್ ತತಃ ॥೨೦॥

ಸುರೆಯನ್ನು ಕುಡಿದವನು, ಬ್ರಹ್ಮಹತ್ಯೆಯನ್ನು ಎಸಗಿದವನು, ಕಳ್ಳತನದಲ್ಲಿ ಪ್ರವೃತ್ತನಾದವನು, ಭ್ರೂಣಹತ್ಯೆಯನ್ನು ಮಾಡಿದವನು, ಗುರುಪತ್ನಿಯ ಸಂಗ ಮಾಡಿದವನು ಇಂತಹ ಪಾಪಿಷ್ಠರು ಶ್ರದ್ಧೆಯಿಂದ ತಪಸ್ಸನ್ನು ಮಾಡಿ ಆ ಮಹಾಪಾಪಗಳಿಂದ ಮುಕ್ತರಾಗುತ್ತಾರೆ.

ಮನುಷ್ಯಾಃ ಪಿತರೋ ದೇವಾಃ ಪಶವೋ ಮೃಗಪಕ್ಷಿಣಃ ।
ಯಾನಿ ಚಾನ್ಯಾನಿ ಭೂತಾನಿ ಚರಾಣಿ ಸ್ಥಾವರಾಣಿ ಚ ॥೨೧॥

ತಪಃಪರಾಯಣಾ ನಿತ್ಯಂ ಸಿದ್ಧ್ಯಂತೇ ತಪಸಾ ಸದಾ ॥೨೨॥

ಮನುಷ್ಯರು, ಪಿತೃಗಳು, ದೇವತೆಗಳು, ಪಶುಗಳು, ಮೃಗ-ಪಕ್ಷಿಗಳು, ಸಮಸ್ತ ಚರಾಚರ ಪ್ರಾಣಿಗಳು, ನಿತ್ಯವೂ ತಪಸ್ಸಿನಲ್ಲಿಯೇ ಆಸಕ್ತವಾಗಿ ಸಿದ್ಧಿಯನ್ನು ಹೊಂದುತ್ತಾರೆ.

ತಥೈವ ತಪಸಾ ದೇವಾ ಮಹಾಭಾಗಾ ದಿವಂ ಗತಾಃ ॥೨೩॥

ಅದರಂತೆ ತಪಸ್ಸಿನ ಬಲದಿಂದಲೇ ಮಹಾಭಾಗ್ಯಶಾಲಿಗಳಾದ ದೇವತೆಗಳು ಸ್ವರ್ಗವನ್ನು ಸೇರಿರುತ್ತಾರೆ.

ಆಶೀರ್ಯುಕ್ತಾನಿ ಕರ್ಮಾಣಿ ಕುರ್ವತೇ ಯೇ ತ್ವತಂದ್ರಿತಾಃ ।
ಅಹಂಕಾರಸಮಾಯುಕ್ತಾಃ ತೇ ಸಕಾಶೇ ಪ್ರಜಾಪತೇಃ ॥೨೪॥

ಯಾರು ಸಕಾಮ ಕರ್ಮಗಳನ್ನು ಆಲಸ್ಯವಿಲ್ಲದೆ ಆಚರಿಸುತ್ತಾರೋ ಇವರೆಲ್ಲರೂ ಅಹಂಕಾರ-ಮಮಕಾರಗಳಿಂದ ಯುಕ್ತರಾಗಿ ಕರ್ಮ ಮಾಡಿರುವುದರಿಂದ ಚತುರ್ಮುಖ ಬ್ರಹ್ಮನ ಲೋಕಕ್ಕೆ ಹೋಗುತ್ತಾರೆ.

ಧ್ಯಾನಯೋಗೇನ ಶುದ್ಧೇನ ನಿರ್ಮಮಾ ನಿರಹಂಕೃತಾಃ ।
ಆಪ್ನುವಂತಿ ಮಹಾತ್ಮಾನೋ ಮಹಾಂತಂ ಲೋಕಮುತ್ತಮಮ್ ॥೨೫॥

ಯಾರು ಶುದ್ಧ ಮನಸ್ಕರಾಗಿ, ಅಹಂಕಾರ-ಮಮಕಾರದಿಂದ ದೂರರಾಗಿ, ಧ್ಯಾನ ಯೋಗದಲ್ಲಿ ನಿರತರಾಗಿ, ಭಗವಂತನನ್ನು ಧ್ಯಾನಿಸುತ್ತಾರೋ ಅವರು ಪ್ರಜಾಪತಿಯ ಲೋಕಕ್ಕಿಂತಲೂ ಅತ್ಯಂತ ಶ್ರೇಷ್ಠವಾದ ವೈಕುಂಠಲೋಕವನ್ನು ಸೇರುತ್ತಾರೆ.

ಧ್ಯಾನಯೋಗಮುಪಾಗಮ್ಯ ಪ್ರಸನ್ನಮತಯಃ ಸದಾ ।
ಸುಖೋಪಚಯಮವ್ಯಕ್ತಂ ಪ್ರವಿಶಂತ್ಯಾತ್ಮವತ್ತಯಾ ॥೨೬॥

ಧ್ಯಾನಯೋಗವನ್ನು ಆಶ್ರಯಿಸಿ, ಪ್ರಸನ್ನಮತಿಗಳಾಗಿ ಜೀವರ ಆತ್ಮಸುಖಕ್ಕೆ ಉಪಾಯ ಎನಿಸಿದ, ಅವ್ಯಕ್ತಶಬ್ದವಾಚ್ಯನಾದ ಪರಮಾತ್ಮನನ್ನು ಜಿತಮನಸ್ಕರಾಗಿ ತಿಳಿದು ಅವನನ್ನೇ ಹೊಂದುತ್ತಾರೆ.

ಧ್ಯಾನಯೋಗಾದುಪಾಗಮ್ಯ ನಿರ್ಮಮಾ ನಿರಹಂಕೃತಾಃ ।
ಅವ್ಯಕ್ತಂ ಪ್ರವಿಶಂತೀಹ ಮಹತಾಂ ಲೋಕಮುತ್ತಮಮ್ ॥೨೭॥

ಯಾರು ಅಹಂಕಾರ-ಮಮಕಾರಗಳನ್ನು ತೊರೆದು, ಧ್ಯಾನಯೋಗದಿಂದ ಸಿದ್ಧಿಯನ್ನು ಪಡೆದವರಾಗಿ ಇದ್ದಾರೋ ಎಲ್ಲ ಲೋಕಗಳಿಗಿಂತಲೂ ಶ್ರೇಷ್ಠವಾದ ಅವ್ಯಕ್ತ ಎನಿಸಿದ ಪರಮಾತ್ಮನನ್ನು ಹೊಂದುತ್ತಾರೆ.

ಅವ್ಯಕ್ತಾದೇವ ಸಂಭೂತಾಃ ಸಮಯಜ್ಞಾ ಗತಾಃ ಪುನಃ ।
ತಮೋರಜೋಭ್ಯಾಂ ನಿರ್ಮುಕ್ತಾಃ ಸಂಗಾತ್ ಸಂಜ್ಞಾಂ ಗತಾ ಹಿ ತೇ ॥

ಅವ್ಯಕ್ತನೆನಿಸಿದ ಪರಮಾತ್ಮನಿಂದಲೇ ಈ ಜೀವರೆಲ್ಲರೂ ಹುಟ್ಟನ್ನು ಪಡೆದಿದ್ದಾರೆ. ಇವರು ಎಲ್ಲೆಡೆಯೂ ಸತ್ತ್ವಗುಣದಿಂದ ಪರಮಾತ್ಮನನ್ನೇ ಹೊಂದಿದವರಾಗಿ ತಮಸ್ಸು, ರಜಸ್ಸು ಎಂಬ ಗುಣಗಳಿಂದ ಮುಕ್ತರಾಗಿ ಸಜ್ಜನರ ಸಂಗದಿಂದ ಯಥಾರ್ಥ ಜ್ಞಾನವನ್ನು ಹೊಂದಿರುತ್ತಾರೆ.

ನಿರ್ಮುಕ್ತಃ ಸರ್ವಪಾಪೇಭ್ಯಃ ಸರ್ವಂ ತ್ಯಜತಿ ಸರ್ವಶಃ ॥೨೯॥

ಹೀಗೆ ಎಲ್ಲ ಪಾಪಗಳನ್ನು ಭಗವದ್ಜ್ಞಾನದಿಂದ ಪರಿಹರಿಸಿಕೊಂಡು, ಎಲ್ಲ ವಿಧವಾದ ಬಿಡುಗಡೆಯನ್ನು ಹೊಂದುತ್ತಾರೆ.

ಕ್ಷೇತ್ರಜ್ಞ ಇತಿ ತಂ ಚಿಂತ್ಯಾತ್ ಯಸ್ತಂ ವೇದ ಸ ವೇದವಿತ್ ॥೩೦॥

ಯಾರು ಈ ರೀತಿಯಾಗಿ ಚಿಂತೆಯನ್ನು ಹುಟ್ಟಿಸುವ ವಿಷಯಪದಾರ್ಥಗಳನ್ನು ತೊರೆದು, ಮುಕ್ತಿಸ್ಥಾನದಲ್ಲಿರುವ ಪರಮಾತ್ಮನನ್ನು ಚಿಂತಿಸುತ್ತಾರೋ ಅವರೇ ವೇದಜ್ಞರು ಎನಿಸುತ್ತಾರೆ.

ಚಿತ್ತಂ ಚಿತ್ತಾದುಪಾಗಮ್ಯ ಮುನಿರಾಸೀತ ಸಂಯತಃ ।
ತಚ್ಚಿತ್ತಸ್ತನ್ಮನಾ ಭೂತ್ವಾ ಗ್ರಾಹ್ಯಮೇತತ್ ಸನಾತನಮ್ ॥೩೧॥

ಮುನಿಯು ಚಿತ್ತವನ್ನು ಚಿತ್ತದಿಂದ ಹೊಂದಿ (ಏಕಾಗ್ರತೆಯನ್ನು ಮನಸ್ಸಿನ ಮೂಲಕ ಸಾಧಿಸಿಕೊಂಡು) ಜಿತೇಂದ್ರಿಯನಾಗಿ ಇದ್ದಾನೋ ಅಂತಹ ಮುನಿಯ ಮನಸ್ಸು ಭಗವಂತನಲ್ಲಿಯೇ ಸಂಲಗ್ನವಾಗುತ್ತಾ ಸನಾತನವಾದ ಈ ಬ್ರಹ್ಮತತ್ತ್ವವನ್ನೇ ಗ್ರಹಿಸಬೇಕು.

ಅವ್ಯಕ್ತಾದಿವಿಶೇಷಾಂತಮವಿದ್ಯಾಲಕ್ಷಣಂ ಸ್ಮೃತಮ್ ।
ನಿಬೋಧತ ಯಥಾ ಹೀನಂ ಗುಣೈರ್ಲಕ್ಷಣಮಿತ್ಯುತ ॥೩೨॥

ಅವ್ಯಕ್ತಪ್ರಕೃತಿಯಿಂದ ಆರಂಭಿಸಿ ಮಹಾಭೂತಾದಿ ಹದಿನಾರು ತತ್ತ್ವಗಳ ತನಕ ಎಲ್ಲವನ್ನೂ ಅವಿದ್ಯಾಲಕ್ಷಣವೆನ್ನುತ್ತಾರೆ. ಇವುಗಳನ್ನು ಹೊಂದಿದವರು ಅಜ್ಞಾನಕ್ಕೂ ತುತ್ತಾಗಿರುತ್ತಾರೆ. ಪರಮಾತ್ಮನು ಜ್ಞಾನಾದಿ ಗುಣಲಕ್ಷಣವುಳ್ಳವನು. ಆದ್ದರಿಂದ ಈ ಅವ್ಯಕ್ತಾದಿ ಪಂಚಮಹಾಭೂತಗಳ ಗುಣಗಳು ಪರಮಾತ್ಮನಲ್ಲಿ ಇರುವುದಿಲ್ಲ. ಆದ್ದರಿಂದಲೇ ಎಂದಿಗೂ ಅಜ್ಞಾನವು ಈತನಲ್ಲಿ ಸುಳಿಯುವುದಿಲ್ಲ. ಅಥವಾ 'ಜನ್ಮಾದ್ಯಸ್ಯ ಯತಃ' ಎಂಬ ಬ್ರಹ್ಮಸೂತ್ರದ ವಚನದಂತೆ ಜನ್ಮಕಾರಣತ್ವಾದಿ ಗುಣಗಳ ಲಕ್ಷಣವುಳ್ಳವನು ಪರಮಾತ್ಮ ಎಂದು ತಿಳಿಯಬೇಕೇ ವಿನಾ ಅವ್ಯಕ್ತಾದಿ ಮಹಾಭೂತಗಳ ಗುಣಗಳನ್ನು ಶ್ರೀಹರಿಯಲ್ಲಿ ತಿಳಿಯಬಾರದು.

ದ್ವ್ಯಕ್ಷರಸ್ತು ಭವೇನ್ಮೃತ್ಯುಃ ತ್ರ್ಯಕ್ಷರಂ ಬ್ರಹ್ಮ ಶಾಶ್ವತಮ್ ।
ಮಮೇತಿ ಹಿ ಭವೇನ್ಮೃತ್ಯುರ್ನ ಮಮೇತಿ ಹಿ ಶಾಶ್ವತಮ್ ॥೩೩॥

ಎರಡು ಅಕ್ಷರಗಳ ಪದವು ಮೃತ್ಯು ಎನಿಸಿದೆ. ಮೂರು ಅಕ್ಷರದ ಪದವು ಬ್ರಹ್ಮ ಪದವನ್ನು ದೊರಕಿಸಿಕೊಡುತ್ತದೆ. 'ಮಮ' ಎಂಬ ಎರಡಕ್ಷರದ ಪದವೇ ಮೃತ್ಯುವೆನಿಸಿದೆ. 'ನ ಮಮ' ಎಂಬ ಮೂರಕ್ಷರದ ಪದವೇ ಶಾಶ್ವತ ಸುಖಕ್ಕೆ ಕಾರಣವಾಗಿದೆ.

ಕರ್ಮ ಕೇಚಿತ್ ಪ್ರಶಂಸಂತಿ ಮಂದಬುದ್ಧಿರತಾ ನರಾಃ ।
ಯೇ ತು ಬುದ್ಧ್ಯಾ ಮಹಾತ್ಮಾನೋ ನ ಪ್ರಶಂಸಂತಿ ಕರ್ಮ ತೇ ॥೩೪॥

ಕೆಲವರು ಸ್ವರ್ಗಾದಿ ಫಲಗಳನ್ನು ಕೊಡುವ ಕಾಮ್ಯಕರ್ಮಗಳನ್ನೇ ಪ್ರಶಂಸೆ ಮಾಡುತ್ತಾರೆ. ಇವರು ಮಂದಬುದ್ಧಿಯುಳ್ಳವರು. ಆದರೆ ಮಹಾತ್ಮರಾದ ಜ್ಞಾನವೃದ್ಧರು ಕಾಮ್ಯಕರ್ಮಗಳನ್ನು ಎಂದಿಗೂ ಪ್ರಶಂಸೆ ಮಾಡುವುದಿಲ್ಲ.

ಕರ್ಮಣಾ ಜಾಯತೇ ಜಂತುರ್ಮೂರ್ತಿಮಾನ್ ಷೋಡಶಾತ್ಮಕಃ ।
ಪುರುಷಂ ವ್ರಜತೇಽವಿದ್ಯಾ ಅಗ್ರಾಹ್ಯಮಮೃತಾಶಿನಮ್ ॥೩೫॥

ಸಕಾಮಕರ್ಮಗಳಿಂದ ಜೀವನು ಹದಿನಾರು ವಿಕಾರಗಳಿಂದ ಕೂಡಿದ ಸ್ಥೂಲ ಶರೀರವನ್ನು ಪಡೆಯುತ್ತಲೇ ಇರುತ್ತಾನೆ. ಈ ಅವಿದ್ಯೆಯು ಜೀವನನ್ನು ಆವರಿಸುತ್ತದೆ. ಸೂಕ್ಷ್ಮನಾಗಿರುವ ಬುದ್ಧಿ-ಇಂದ್ರಿಯಗಳಿಂದ ನೋಡಲಾಗದಿರುವ, ಅಮೃತಾಶನಿಯಾದ ಜೀವನನ್ನು ಕರ್ಮಗಳ ಮೂಲಕ ಅವಿದ್ಯೆಯು ಆವರಿಸುತ್ತದೆ.

ತಸ್ಮಾತ್ ಕರ್ಮಸು ನಿಃಸ್ನೇಹಾ ಯೇ ಕೇಚಿತ್ ಪಾರದರ್ಶಿನಃ ।
ವಿದ್ಯಾಮಯೋಽಯಂ ಪುರುಷೋ ನ ತು ಕರ್ಮಮಯಃ ಸ್ಮೃತಃ ॥

ಆದ್ದರಿಂದ ಕಾಮ್ಯಕರ್ಮಗಳಲ್ಲಿ ಸಂಗವನ್ನು, ಮೋಹವನ್ನು ತಾಳಬಾರದು. ಯಾರು ಪರಬ್ರಹ್ಮತತ್ತ್ವವನ್ನು ಕಂಡುಕೊಳ್ಳುತ್ತಾರೋ ಅವರು ತತ್ತ್ವಜ್ಞಾನಿ ಪುರುಷರು ಎನಿಸುತ್ತಾರೆ. ಕಾಮ್ಯಕರ್ಮಗಳನ್ನು ಮಾಡಿದವರನ್ನು ಹೀಗೆ ಕರೆಯಲಾಗುವುದಿಲ್ಲ.

ಅಪೂರ್ವಮಮೃತಂ ನಿತ್ಯಂ ಸ್ವಯೈನಮಭಿಚಾರಿಣಮ್ ।
ಯ ಏನಂ ವಿಂದತೇ ತ್ಮಾನಮಮೇಯಮವಿನಾಶಿನಮ್ ॥೩೭॥

ಅಗ್ರಾಹ್ಯೋಽಮೃತೋ ಭವತಿ ಸ ಏಭಿಃ ಕಾರಣೈರ್ಧ್ರುವಮ್ ॥೩೮॥

ಯಾವನು ಅಪೂರ್ವನೆನಿಸಿದ, ಅಮೃತನೆನಿಸಿದ, ನಿತ್ಯನಾದ ಜೀವನನ್ನು ಅವಿದ್ಯೆಯ ಮೂಲಕ ಸ್ವರ್ಗ-ನರಕಾದಿಗಳಲ್ಲಿ ಸಂಚರಿಸುವಂತೆ ಮಾಡುವ, ಹೃದಯಸ್ಥನಾದ, ಅಮೇಯನಾದ, ಅವಿನಾಶಿಯಾದ ಪರಮಾತ್ಮನನ್ನು ತಿಳಿದುಕೊಳ್ಳುತ್ತಾನೋ ಆ ವ್ಯಕ್ತಿಯು ಇಂತಹ ಗುಣಗಳಿಂದ ಭಗವಂತನನ್ನು ಚಿಂತಿಸಿದುದರ ಫಲವಾಗಿ, ಅಗ್ರಾಹ್ಯನಾದ ಪರಮಾತ್ಮನನ್ನು ಹೊಂದಿ ಸುಖಭಾಗಿಯಾಗುತ್ತಾನೆ.

ಅಪೋಹ್ಯ ಸರ್ವಸಂಕಲ್ಪಾನ್ ಸಂಯಮ್ಯಾತ್ಮಾನಮಾತ್ಮನಿ ।
ಸ ತದ್ ಬ್ರಹ್ಮ ಶುಭಂ ವೇತ್ತಿ ಯಸ್ಮಾದ್ ಭೂಯೋ ನ ವಿದ್ಯತೇ ॥೩೯॥

ಯಾವನು ಸಂಸಾರಕ್ಕೆ ಕಾರಣವಾದ ಎಲ್ಲ ವಿಧವಾದ ಆಸೆಗಳನ್ನೂ ತೊರೆದು, ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿದಲ್ಲಿ ಆ ಗುಣಪರಿಪೂರ್ಣನಾದ ಪರಬ್ರಹ್ಮನ ಜ್ಞಾನವನ್ನು ಪಡೆದು ಸುಖ ಹೊಂದುತ್ತಾನೆ. ಆ ಪರಬ್ರಹ್ಮನಿಗಿಂತ ಮಿಗಿಲಾದ ಮತ್ತೊಂದು ಪದಾರ್ಥವು ಜಗತ್ತಿನಲ್ಲಿ ಇರುವುದಿಲ್ಲ.

ಪ್ರಸಾದೇನ ಹಿ(ಚ) ಸತ್ತ್ವಸ್ಯ ಪ್ರಸಾದಂ ಸಮವಾಪ್ನುಯಾತ್ ।
ಲಕ್ಷಣಂ ಹಿ ಪ್ರಸಾದಸ್ಯ ಯಥಾ ಸ್ಯಾತ್ ಸ್ವಪ್ನದರ್ಶನಮ್ ॥೪೦॥

ಮನಸ್ಸಿನ ಪ್ರಸನ್ನತೆಯಿಂದ ಭಗವಂತನ ಅನುಗ್ರಹವನ್ನು ಹೊಂದುತ್ತಾನೆ. ಯಾವ ರೀತಿಯಾಗಿ ಬಾಹ್ಯಪದಾರ್ಥಗಳ ಸಂಯೋಜನೆ ಇಲ್ಲದೆ ಸ್ವಪ್ನದಲ್ಲಿ ಉಂಟಾಗುವ ಪದಾರ್ಥಗಳಿಂದಲೇ ಸುಖವನ್ನು ಹೊಂದುತ್ತಾನೋ, ಸ್ವಪ್ನ ನಿರ್ಮಾತೃವಾದ ಪರಮಾತ್ಮನಿಂದಲೇ ಸ್ವಪ್ನಸುಖವನ್ನು ಪಡೆಯುತ್ತಾನೋ, ಅದರಂತೆ ಬಾಹ್ಯ ಪದಾರ್ಥಗಳ ಸಂಯೋಜನೆ ಇಲ್ಲದೆಯೇ ಮನಸ್ಸಿನಲ್ಲಿ ಪ್ರಸನ್ನತೆಯು ಉಂಟಾದರೆ ಇದು ಭಗವಂತನ ಅನುಗ್ರಹದ ಸೂಚನೆ ಎನಿಸಿದೆ.

ಗತಿರೇಷಾ ತು ಮುಕ್ತಾನಾಂ ಯೇ ಜ್ಞಾನಪರಿನಿಷ್ಠಿತಾಃ ।
ಪ್ರವೃತ್ತಯಶ್ಚ ಯಾಃ ಸರ್ವಾಃ ಪಶ್ಯಂತಿ ಪರಿಣಾಮಜಾಃ ॥೪೧॥

ಜ್ಞಾನನಿಷ್ಠರಾದ, ಜೀವನ್ಮುಕ್ತರಾದ ಮಹಾತ್ಮರಿಗೆ ಪರಮಾತ್ಮನ ದರ್ಶನವೇ ಪರಮಗತಿ ಎನಿಸಿದೆ. ಕಾರಣ ಆ ಮಹಾತ್ಮರು ಪ್ರವೃತ್ತಿ ಮಾರ್ಗದಲ್ಲಿರುವ ಸಮಸ್ತ ಕರ್ಮಗಳಲ್ಲಿಯೂ ಶುಭಕರ್ಮದಿಂದಾಗುವ ಒಳಿತು, ಅಶುಭ ಕರ್ಮದಿಂದಾಗುವ ಅನರ್ಥಗಳನ್ನು ಅರಿತಿರುತ್ತಾರೆ.

ಏಷಾ ಗತಿರಸಕ್ತಾನಾಮೇಷ ಧರ್ಮಃ ಸನಾತನಃ ।
ಏಷಾ ಜ್ಞಾನವತಾಂ ಪ್ರಾಪ್ತಿಃ ಏತದ್ ವೃತ್ತಮನಿಂದಿತಮ್ ॥೪೨॥

ವಿರಕ್ತರಾದ ಸಜ್ಜನರಿಗೆ ಪರಮಾತ್ಮನೇ ಪರಮ ಆಶ್ರಯನಾಗಿದ್ದಾನೆ. ಇದೇ ಸನಾತನವಾದ ಧರ್ಮವೂ ಆಗಿದೆ. ಜ್ಞಾನಿಗಳಿಂದ ಹೊಂದಬೇಕಾದ ಸ್ಥಾನವೂ ಆಗಿದೆ. ಈ ಆಚರಣೆಯು ಯಾವ ದೋಷವೂ ಇಲ್ಲದ್ದಾಗಿದೆ.

ಸಮೇನ ಸರ್ವಭೂತೇಷು ನಿಸ್ಪೃಹೇಣ ನಿರಾಶಿಷಾ ।
ಶಕ್ಯಾ ಗತಿರಿಯಂ ಗಂತುಂ ಸರ್ವತ್ರ ಸಮದರ್ಶಿನಾ ॥೪೩॥

ಯಾವನು ಎಲ್ಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾದ ಪರಮಾತ್ಮನನ್ನು ನೋಡುತ್ತಾನೋ, ಯಾವುದೇ ಜಗತ್ತಿನ ಆಸೆಗಳಿಲ್ಲದೆ ನಿಸ್ಪೃಹನಾಗಿ ಬದುಕುತ್ತಾನೋ ಅಂತಹ ಸಮದರ್ಶಿಯಾದ ವ್ಯಕ್ತಿಯು ಈ ಪರಬ್ರಹ್ಮನ ಗತಿಯನ್ನು ಹೊಂದುತ್ತಾನೆ.

ಏತದ್ ಸರ್ವಮಾಖ್ಯಾತಂ ಮಯಾ ವಿಪ್ರರ್ಷಿಸತ್ತಮಾಃ ।
ಏವಮಾಚರತ ಕ್ಷಿಪ್ರಂ ತತಃ ಸಿದ್ಧಿಮವಾಪ್ಸ್ಯಥ ॥೪೪॥

ಬ್ರಹ್ಮರ್ಷಿಗಳೇ, ಈ ಎಲ್ಲ ವಿಷಯವನ್ನೂ ನಾನು ನಿಮಗೆ ವಿಸ್ತಾರವಾಗಿ ಹೇಳಿದ್ದೇನೆ. ನಾನು ಹೇಳಿದಂತೆ ನೀವು ಆಚರಿಸಿ, ಬೇಗನೆ ಸಿದ್ಧಿಯನ್ನು ಹೊಂದುತ್ತೀರಿ.

ಗುರುಃ

ಇತ್ಯುಕ್ತಾ ಗುರುಣಾ ತೇ ತು ಬ್ರಾಹ್ಮಣಾ ಮುನಯಸ್ತಥಾ ।
ಕೃತವಂತೋ ಮಹಾತ್ಮಾನಸ್ತತೋ ಲೋಕಮವಾಪ್ನುವನ್ ॥೪೫॥

ಗುರು– ಶಿಷ್ಯನೇ, ಗುರುವಾದ ಬ್ರಹ್ಮನು ಹೀಗೆ ಮುನಿಗಳನ್ನು ಕುರಿತು ಹೇಳಿದ ಬಳಿಕ, ಆ ಮುನಿಗಳು ಬ್ರಹ್ಮನ ಉಪದೇಶಕ್ಕನುಗುಣವಾಗಿ ಸತ್ಕರ್ಮಗಳನ್ನು ಆಚರಿಸಿ ಉತ್ತಮ ಲೋಕಗಳನ್ನೇ ಹೊಂದಿದರು.

ತ್ವಮಪ್ಯೇವಂ ಮಹಾಭಾಗ ಯಥೋಕ್ತಂ ಬ್ರಹ್ಮಣೋ ವಚಃ ।
ಸಮ್ಯಗಾಚರ ಶುದ್ಧಾತ್ಮನ್ ತತಃ ಸಿದ್ಧಿಮವಾಪ್ಸ್ಯಸಿ ॥೪೬॥

ಮಹಾಭಾಗ್ಯಶಾಲಿಯೇ, ಶುದ್ಧಾತ್ಮನೇ, ನೀನೂ ಕೂಡ ಆ ಮುನಿಗಳಂತೆ ನಾನು ಹೇಳಿದ ಬ್ರಹ್ಮನನ್ನು ಚೆನ್ನಾಗಿ ಅರಿತು, ಶ್ರದ್ಧೆಯಿಂದ ಸತ್ಕರ್ಮಗಳನ್ನು ಆಚರಿಸು, ಸಿದ್ಧಿಯನ್ನು ಹೊಂದುತ್ತಿ.

ಶ್ರೀಭಗವಾನ್

ಇತ್ಯುಕ್ತಃ ಸ ತದಾ ಶಿಷ್ಯೋ ಗುರುಣಾ ಧರ್ಮಮುತ್ತಮಮ್ ।
ಚಕಾರ ಸರ್ವಂ ಕೌಂತೇಯ ತತೋ ಮೋಕ್ಷಮವಾಪ್ತವಾನ್ ॥೪೭॥

ಶ್ರೀಭಗವಾನ್– ಅರ್ಜುನನೇ, ಗುರುವು ಈ ರೀತಿಯಾದ ಧರ್ಮಸಮ್ಮತವಾದ ಮಾತುಗಳನ್ನು ಹೇಳಿದ ಬಳಿಕ, ಶಿಷ್ಯನು ಗುರುವು ಹೇಳಿದಂತೆಯೇ ಎಲ್ಲವನ್ನೂ ಆಚರಿಸಿದನು. ಬಳಿಕ ಕೃತಕೃತ್ಯನಾಗಿ ಮುಕ್ತನಾದನು.

ಕೃತಕೃತ್ಯಶ್ಚ ಸ ತದಾ ಶಿಷ್ಯಃ ಕುರುಕುಲೋದ್ವಹ ।
ತತ್ಪದಂ ಸಮನುಪ್ರಾಪ್ತೋ ಯತ್ರ ಗತ್ವಾ ನ ಶೋಚತಿ ॥೪೮॥

ಕೃತಕೃತ್ಯನಾದ ಆ ಶಿಷ್ಯನು ಮುಕ್ತನಾದನು. ಯಾವ ಸ್ಥಾನವನ್ನು ಪಡೆದರೆ ಶೋಕಕ್ಕೆ ಅವಕಾಶವೇ ಇಲ್ಲವೋ ಅಂತಹ ಬ್ರಹ್ಮನ ಸ್ಥಾನವನ್ನು ಹೊಂದಿದನು.

ತ್ವಮಪ್ಯೇತನ್ಮಹಾಭಾಗ ಯಥೋಕ್ತಂ ಬ್ರಹ್ಮಣೋ ವಚಃ ।
ಸಮ್ಯಗಾಚರ ಶುದ್ಧಾತ್ಮನ್ ತತಃ ಸಿದ್ಧಿಮವಾಪ್ಸ್ಯಸಿ ॥೪೯॥

ಮಹಾಬಾಹುವಾದ ಅರ್ಜುನನೇ, ನೀನು ಆ ಬ್ರಾಹ್ಮಣನು ಹೇಳಿದಂತೆ ಸತ್ಕರ್ಮಗಳನ್ನು ಆಚರಿಸಿ, ಪರಬ್ರಹ್ಮನನ್ನು ಶುದ್ಧಮನಸ್ಸಿನಿಂದ ಧ್ಯಾನಿಸಿದಲ್ಲಿ ಸಿದ್ಧಿಯನ್ನು ಹೊಂದುತ್ತಿ.

ಅರ್ಜುನಃ

ಕೋ ನ್ವಸೌ ಬ್ರಾಹ್ಮಣಃ ಕೃಷ್ಣ ಕಶ್ಚ ಶಿಷ್ಯೋ ಜನಾರ್ದನ ।
ಜ್ಞಾತವ್ಯಂ ಚೇನ್ಮಯೈತದ್ ವೈ ತನ್ಮಮಾಚಕ್ಷ್ವ ಮೇ ವಿಭೋ ॥೫೦॥

ಜನಾರ್ದನನೇ, ಬ್ರಹ್ಮನಿಷ್ಠನಾದ ಆ ಬ್ರಾಹ್ಮಣ ಗುರುವು ಯಾರು? ಆ ಶಿಷ್ಯನು ಯಾರು? ಪ್ರಭುವೇ, ಈ ವಿಷಯವನ್ನು ನಾನು ತಿಳಿಯಬಹುದಾಗಿದ್ದಲ್ಲಿ ಯಥಾವತ್ತಾಗಿ ತಿಳಿಸು.

ಶ್ರೀಭಗವಾನ್

ಅಹಂ ಗುರುರ್ಮಹಾಬಾಹೋ ಮನಃ ಶಿಷ್ಯೋ ಹಿ ವಿದ್ಧಿ ಮೇ ।
ತತ್ತ್ವತ್ತ್ವೇತ್ಯಾ ಸರ್ವಮೇತದ್ ವೈ ಕಥಿತಂ ತೇ ಧನಂಜಯ ॥೫೧॥

ಶ್ರೀಭಗವಾನ್– ಮಹಾಬಾಹುವೇ, ಆ ಗುರುವೇ ನಾನು. ನನ್ನ ಮನಸ್ಸೇ ಶಿಷ್ಯ ಎಂದು ತಿಳಿ. ಧನಂಜಯನೇ, ನಿನ್ನಲ್ಲಿರುವ ಪ್ರೀತಿಯಿಂದ ರಹಸ್ಯವಾದ ಈ ವಿಷಯವನ್ನು ನಿನಗೆ ಹೇಳಿದೆನು.

ಮಯಿ ಚೇದಸ್ತಿ ತೇ ಭಕ್ತಿರ್ನಿತ್ಯಂ ಕುರುಕುಲೋದ್ವಹ ।
ಅಧ್ಯಾತ್ಮಮೇತಚ್ಛ್ರುತ್ವಾ ತ್ವಂ ಸಮ್ಯಗಾಚರ ಸುವ್ರತ ॥೫೨॥

ಸುವ್ರತನೇ, ಕುರುಕುಲಶ್ರೇಷ್ಠನೇ, ನಿನಗೆ ನನ್ನ ಮೇಲೆ ಪ್ರೀತಿಯಿದ್ದಲ್ಲಿ ಇಷ್ಟರವರೆಗೆ ಕೇಳಿದ ಈ ಅಧ್ಯಾತ್ಮವಿದ್ಯೆಯನ್ನು ನಿತ್ಯವೂ ಚೆನ್ನಾಗಿ ಆಚರಿಸು.

ತತಸ್ತ್ವಂ ಸಮ್ಯಗಾಚಾರೋ ಧರ್ಮೇऽಸ್ಮಿನ್ ಕುರುನಂದನ ।
ಸರ್ವಪಾಪವಿಶುದ್ಧಾತ್ಮಾ ಮೋಕ್ಷಂ ಪ್ರಾಪ್ಸ್ಯಸಿ ಕೇವಲಮ್ ॥೫೩॥

ಶತ್ರುಸೂದನನೇ, ಈ ಮೋಕ್ಷಧರ್ಮವನ್ನು ಪೂರ್ಣವಾಗಿ ನೀನು ಆಚರಿಸಿದಲ್ಲಿ ಸಮಸ್ತ ಪಾಪಗಳಿಂದ ದೂರನಾಗಿ ವಿಶುದ್ಧವಾದ ಮುಕ್ತಿಯನ್ನು ಹೊಂದುವಿ.

ಪೂರ್ವಮಪ್ಯೇತದೇವೋಕ್ತಂ ಯುದ್ಧಕಾ ಉಪಸ್ಥಿತೇ ।
ಮಯಾ ತವ ಮಹಾಬಾಹೋ ತಸ್ಮಾದತ್ರ ಮನಃ ಕುರು ॥೫೪॥

ಮಹಾಬಾಹುವೇ, ಹಿಂದೆಯೂ ಕೂಡ ಯುದ್ಧವು ಸನ್ನಿಹಿತವಾದಾಗ ಈ ಅಧ್ಯಾತ್ಮ ಉಪದೇಶವನ್ನೇ ನಿನಗೆ ಮಾಡಿದ್ದೆನು. ಅದನ್ನು ಮರೆತ ನೀನು ಈಗಲಾದರೂ ನಾನು ಹೇಳಿದ್ದನ್ನು ಮನನ ಮಾಡು.

ಮಯಾ ತು ಭರತಶ್ರೇಷ್ಠ ಚಿರದೃಷ್ಟಃ ಪಿತಾ ವಿಭೋ ।
ತಮಹಂ ದ್ರಷ್ಟುಮಿಚ್ಛಾಮಿ ಸಮ್ಮತೇ ತವ ಫಲ್ಗುನ ॥೫೫॥

ಭರತಶ್ರೇಷ್ಠನೇ, ಅರ್ಜುನನೇ, ಪ್ರಭುವಾದ ನನ್ನ ತಂದೆಯನ್ನು ನಾನು ನೋಡಿ ಬಹಳ ಕಾಲವಾಗಿದೆ. ನಾನು ನಿನ್ನ ಸಮ್ಮತಿಯನ್ನು ಪಡೆದು ಅವನನ್ನು ಕಾಣಲು ದ್ವಾರಕೆಗೆ ತೆರಳುತ್ತೇನೆ.

ಇತ್ಯುಕ್ತವಚನಂ ಕೃಷ್ಣಂ ಪ್ರತ್ಯುವಾಚ ಧನಂಜಯಃ ॥೫೬॥

ಕೃಷ್ಣನ ಮಾತನ್ನು ಕೇಳಿಸಿಕೊಂಡ ಧನಂಜಯನು ಕೃಷ್ಣನಿಗೆ ಹೇಳುತ್ತಾನೆ.

ಯದಿಷ್ಟಂ ಕುರು ಸರ್ವಸ್ಯಾಪೀಶ್ವರೋऽಸ್ಮಾನ್ ಪ್ರಪಾಲಯ ॥೫೭॥

ಕೃಷ್ಣನೇ, ನಿನಗೆ ಯಾವುದು ಇಷ್ಟವೋ ಅದನ್ನು ಆಚರಿಸು. ಸಮಸ್ತ ಪ್ರಪಂಚಕ್ಕೂ ನೀನೇ ಒಡೆಯನಾಗಿದ್ದಿ. ನಮ್ಮನ್ನು ಚೆನ್ನಾಗಿ ರಕ್ಷಿಸುವವನೂ ನೀನೇ ಆಗಿರುವಿ.

ನಮಸ್ತೇ ಸರ್ವಲೋಕಾತ್ಮನ್ ನಾರಾಯಣ ಪರಾತ್ಪರ ।
ಮನೋಮಲಾತ್ ತಪೋಽಶಕ್ಯಂ ಕರ್ಮ ಚಾವಿದ್ಯಯಾ ತಥಾ ॥೫೮॥

ಸರ್ವಲೋಕಗಳ ಅಂತರ್ಯಾಮಿಯಾದ ಪರಮಾತ್ಮನೇ, ಪರಾತ್ಪರನಾದ ನಾರಾಯಣನೇ, ನಿನಗೆ ನಮಸ್ಕಾರ. ಮನಸ್ಸಿನಲ್ಲಿ ಕಶ್ಮಲವನ್ನು ತುಂಬಿಕೊಂಡವರು, ಅಜ್ಞಾನಗ್ರಸ್ಥರಾದವರು ನಿನ್ನ ಧ್ಯಾನರೂಪವಾದ ಕರ್ಮವನ್ನು ಮಾಡಲು ಅಸಮರ್ಥರಾಗಿದ್ದಾರೆ.

ದಾನಮಪ್ಯರ್ಥದೋಷೇಣ ನಾಮ ತಸ್ಮಾತ್ ಕಲೌ ಸ್ಮರೇತ್ ॥೫೯॥

ಕಲಿಯುಗದಲ್ಲಿ ಎಲ್ಲ ವಿಧವಾದ ದಾನಗಳು ತಪ್ಪಾಗಿ ಸಂಪಾದಿಸಿದ ಅರ್ಥ-ದೋಷದಿಂದ ಕೂಡಿವೆ. ಆದ್ದರಿಂದ ನಿನ್ನ ಈ ನಾಮಸ್ಮರಣೆಗಳನ್ನೇ ಕಲಿಯುಗದಲ್ಲಿ ಮಾಡಬೇಕು.

ಯದಿ ಗಂತುಂ ಕೃತಾ ಬುದ್ಧಿರ್ವಾಸುದೇವ ನಮೋಽಸ್ತು ತೇ ।
ಗಚ್ಛಾವೋ ನಗರಂ ಕೃಷ್ಣ ಗಜಸಾಹ್ವಯಮದ್ಯ ವೈ ॥೬೦॥

ಕೃಷ್ಣನೇ, ದ್ವಾರಕೆಗೆ ತೆರಳಲು ನೀನು ಮನಸ್ಸು ಮಾಡಿರುವಿ. ವಾಸುದೇವನೇ, ನಿನಗೆ ನಮಸ್ಕಾರವಿರಲಿ. ಕೃಷ್ಣನೇ, ನಾವು ಹಸ್ತಿನಾವತಿ ನಗರವನ್ನು ಕುರಿತು ಸಾಗೋಣ.

ಸಮೇತ್ಯ ತತ್ರ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಸಮನುಜ್ಞಾಪ್ಯ ದುರ್ಧರ್ಷಂ ಸ್ವಾಂ ಪುರೀಂ ಯಾತುಮರ್ಹಸಿ ॥೬೧॥

ಅಲ್ಲಿ ಧರ್ಮಾತ್ಮನಾದ ಯುಧಿಷ್ಠಿರನ ಜೊತೆಗೆ ಸೇರಿ ಆಲೋಚಿಸೋಣ. ಅವನ ಅನುಮತಿಯಂತೆ ನೀನು ದ್ವಾರಕೆಗೆ ಹೊರಡಬಹುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅನುಗೀತಾಸು ಗುರುಶಿಷ್ಯಸಂವಾದೇ
ತಪಃಸಾಮರ್ಥ್ಯಕಥನಂ ನಾಮ ಏಕಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

॥ ಅನುಗೀತಾ ಸಮಾಪ್ತಾ ॥

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ಅನುಗೀತೆಯ ಉಪದೇಶದ ಬಳಿಕ ಕೃಷ್ಣಾರ್ಜುನರು ಹಸ್ತಿನಾವತಿಯನ್ನು ಕುರಿತು ಹೊರಟಿದುದು. ಮಾರ್ಗಮಧ್ಯದಲ್ಲಿ ವ್ಯಾಸ-ನಾರದಾದಿಗಳಿಂದ ಕೃಷ್ಣನ ಮಹಾತ್ಮ್ಯವನ್ನು ಅರ್ಜುನನು ತಿಳಿದುಕೊಂಡಿದುದು. ನಂತರ ಕೃಷ್ಣನು ಅರ್ಜುನನಿಂದ ಸಹಿತನಾಗಿ ಹಸ್ತಿನಾವತಿಗೆ ಆಗಮಿಸಿ, ಧೃತರಾಷ್ಟ್ರಾದಿಗಳಿಗೆ ವಂದಿಸಿ, ಕುಂತಿ-ಧರ್ಮರಾಜಾದಿಗಳ ಅನುಮತಿಯನ್ನು ಪಡೆದು, ದ್ವಾರಕೆಯನ್ನು ಕುರಿತು ಪಯಣ ಬೆಳೆಸಿದುದು.

ವೈಶಂಪಾಯನಃ

ತತೋ ಹ್ಯಚೋದಯತ್ ಕೃಷ್ಣೋ ಯುಜ್ಯತಾಮಿತಿ ದಾರುಕಮ್ ।
ಮುಹೂರ್ತಾದಿವ ಚಾಚಷ್ಟ ಯುಕ್ತಮಿತ್ಯೇವ ದಾರುಕಃ ॥೧॥

ವೈಶಂಪಾಯನ– ಜನಮೇಜಯನೇ, ನಂತರ ಕೃಷ್ಣನು ಕುದುರೆಗಳನ್ನು ರಥಕ್ಕೆ ಸಂಯೋಜಿಸುವಂತೆ ಸಾರಥಿಯಾದ ದಾರುಕನಿಗೆ ಹೇಳಿದನು. ಸ್ವಲ್ಪ ಹೊತ್ತಿನಲ್ಲಿಯೇ ದಾರುಕನು ರಥವು ಸಿದ್ಧವಾಗಿದೆ ಎಂದು ಹೇಳಿದನು.

ತಥೈವ ಚಾನುಯಾತ್ರಾಣಿ ಚೋದಯಾಮಾಸ ಪಾಂಡವಃ ॥೨॥

ಅರ್ಜುನನೂ ಕೂಡ ತನ್ನ ಸೇವಕರಿಗೆ ಹಸ್ತಿನಾಪಟ್ಟಣಕ್ಕೆ ಹೋಗೋಣ, ರಥವನ್ನು ಸಜ್ಜುಗೊಳಿಸಿರಿ ಎಂದು ಹೇಳಿದನು.

ಸನ್ನಹ್ಯಧ್ವಂ ಪ್ರಯಾಸ್ಯಾಮೋ ನಗರಂ ಗಜಸಾಹ್ವಯಮ್ ॥೩॥

ಇತ್ಯುಕ್ತಾಃ ಸೈನಿಕಾಸ್ತೇ ತು ಸಜ್ಜೀಭೂತಾ ವಿಶಾಂಪತೇ ।
ಆಚಖ್ಯುಃ ಸಜ್ಜಮಿತ್ಯೇವಂ ಪಾರ್ಥಾಯಾಮಿತತೇಜಸೇ ॥೪॥

ಈ ರೀತಿಯಾಗಿ ಆಜ್ಞಪ್ತರಾದ ಸೈನಿಕರು ಕೂಡಲೇ ರಥಗಳನ್ನು ಸಜ್ಜುಗೊಳಿಸಿ ಮಹಾತಪಸ್ವಿಯಾದ ಅರ್ಜುನನಿಗೆ, ಪ್ರಯಾಣಿಸಲು ಎಲ್ಲವೂ ಸಿದ್ಧವಾಗಿದೆ ಎಂದು ಹೇಳಿದರು.

ತತಸ್ತೌ ರಥಮಾಸ್ಥಾಯ ಪ್ರಯಾತೌ ಕೃಷ್ಣಪಾಂಡವೌ ।
ತೌ ಕುರ್ವಾಣೌ ಕಥಾಶ್ಚಿತ್ರಾಃ ಪ್ರೀಯಮಾಣೌ ವಿಶಾಂಪತೇ ॥೫॥

ನಂತರ ಸೈನಿಕರ ಜೊತೆಗೆ ಕೃಷ್ಣಾರ್ಜುನರು ರಥದಲ್ಲಿ ಕುಳಿತು ಪ್ರಯಾಣ ಬೆಳೆಸಿದರು. ಪ್ರಯಾಣದ ಸಮಯದಲ್ಲಿ ಕೃಷ್ಣಾರ್ಜುನರು ಅನೇಕ ಆಶ್ಚರ್ಯಕರವಾದ ಪ್ರಸಂಗದಿಂದ ಕೂಡಿದ ಕಥೆಗಳನ್ನು ಹೇಳಿಕೊಳ್ಳುತ್ತಾ ಪ್ರಯಾಣೋನ್ಮುಖರಾದರು.

ರಥಸ್ಥಂ ತಂ ಮಹಾತೇಜಾ ವಾಸುದೇವಂ ಧನಂಜಯಃ ।
ಪುನರೇವಾಬ್ರವೀದ್ ವಾಕ್ಯಮಿದಂ ಭರತಸತ್ತಮ ॥೬॥

ಮಹಾತೇಜಸ್ವಿಯಾದ ಧನಂಜಯನು ರಥದಲ್ಲಿದ್ದಾಗ ಕೃಷ್ಣನನ್ನು ಕುರಿತು ಈ ಮಾತನ್ನು ಹೇಳಿದನು.

ಅರ್ಜುನಃ

ತ್ವತ್ಪ್ರಸಾದಾಜ್ಜಯಂ ಪ್ರಾಪ್ತೋ ರಾಜಾ ವೃಷ್ಣಿಕುಲೋದ್ವಹ ।
ನಿಹತಾಃ ಶತ್ರವಶ್ಚಾಪಿ ಪ್ರಾಪ್ತಂ ರಾಜ್ಯಮಕಂಟಕಮ್ ॥೭॥

ಅರ್ಜುನ– ವೃಷ್ಣಿಕುಲದ ಶ್ರೇಷ್ಠ ಪುರುಷನೇ, ನಿನ್ನ ಅನುಗ್ರಹದಿಂದಲೇ ರಾಜನಾದ ಯುಧಿಷ್ಠಿರನಿಗೆ ವಿಜಯವು ದೊರಕಿತು. ಯಾವ ಶತ್ರುಗಳೂ ಇಲ್ಲದೆ ಇರುವ ರಾಜ್ಯವು ಲಭಿಸಿತು.

ನಾಥವಂತಶ್ಚ ಭವತಾ ಪಾಂಡವಾ ಮಧುಸೂದನ ।
ಭವಂತಂ ಪ್ಲವಮಾಸಾದ್ಯ ತೀರ್ಣಾಃ ಸ್ಮ ಕುರುಸಾಗರಮ್ ॥೮॥

ಮಧುಸೂದನನೇ, ನಿನ್ನಿಂದ ನಾವೆಲ್ಲರೂ ಸನಾಥರಾಗಿದ್ದೇವೆ. ನಾವೆಲ್ಲರೂ ನಿನ್ನನ್ನೇ ದೋಣಿಯನ್ನಾಗಿ ಮಾಡಿಕೊಂಡು ಕೌರವ ಸೇನೆ ಎಂಬ ಸಾಗರವನ್ನು ದಾಟಿದ್ದೇವೆ.

ಭಕ್ತಾನ್ ತ್ವಮಾಶ್ರಿತಾನಸ್ಮಾನ್ ಪಾಲಯಾಮುತ್ರ ಚೇಹ ಚ ॥೯॥

ನಿನ್ನನ್ನೇ ಆಶ್ರಯಿಸಿದ ಭಕ್ತರಾದ ನಮ್ಮನ್ನು ಇಲ್ಲಿಯೂ, ಪರಲೋಕದಲ್ಲಿಯೂ ನೀನೇ ರಕ್ಷಿಸು.

ವಿಶ್ವಕರ್ಮನ್ ನಮಸ್ತೇಽಸ್ತು ವಿಶ್ವಾತ್ಮನ್ ವಿಶ್ವಸಂಭವ ।
ಯಥಾಽಹಂ ತ್ವಾಂ ವಿಜಾನಾಮಿ ತಥಾ ಹಿ ಭಗವಾನ್ ಮಮ ॥೧೦॥

ವಿಶ್ವಕರ್ಮಸ್ವರೂಪನೇ ನಿನಗೆ ನಮಸ್ಕಾರ. ಜಗತ್ತಿನ ಅಂತರ್ಯಾಮಿಯೇ, ವಿಶ್ವಸಂಭವನೇ, ನಿನಗೆ ನಮಸ್ಕಾರ. ನಾನು ನಿನಗೆ ತುಂಬಾ ಹತ್ತಿರದವನಾಗಿ ಸಾಕಷ್ಟು ನಿನ್ನ ಮಹಿಮೆಯನ್ನು ತಿಳಿದಿದ್ದೇನೆ. ಆದರೂ ನೀನು ನನ್ನ ಪಾಲಿಗೆ ಭಗವಂತನೆಂದೇ ತೋರುತ್ತಿದ್ದಿ.

ತತ್ತೇಜಃಸಂಭವೋ ನಿತ್ಯಂ ಹುತಾಶೋ ಮಧುಸೂದನ ।
ರತಿಃ ಕ್ರೀಡಾಮಯೀ ತುಭ್ಯಂ ಮಾಯಾ ತೇ ರೋದಸೀ ವಿಭೋ ॥೧೧॥

ಮಧುಸೂದನನೇ, ನಿನ್ನ ತೇಜಸ್ಸಿನಿಂದಲೇ ಉತ್ಪನ್ನನಾದ ಅಗ್ನಿದೇವನು ಯಾವಾಗಲೂ ವ್ಯಾಪಾರ ಮಾಡುತ್ತಿದ್ದಾನೆ. ಈ ಭೂಮಂಡಲವೇ ನಿನಗೆ ಕ್ರೀಡಾ ಸ್ಥಾನವಾಗಿದೆ. ಆಕಾಶ-ಭೂಮಿಗಳು ನಿನ್ನ ಸಂಕಲ್ಪದಿಂದಲೇ ಉತ್ಪನ್ನವಾಗಿವೆ.

ತ್ವಯಿ ಸರ್ವಮಿದಂ ವಿಶ್ವಂ ಯದಿದಂ ಸ್ಥಾಣುಜಂಗಮಮ್ ॥೧೨॥

ಸಮಗ್ರ ಈ ವಿಶ್ವವು, ಚರಾಚರ ಪ್ರಪಂಚವು ನಿನ್ನಲ್ಲಿಯೇ ಸನ್ನಿಹಿತವಾಗಿದೆ.

ತ್ವಂ ಹಿ ಸರ್ವಂ ವಿಕುರುಷೇ ಭೂತಗ್ರಾಮಂ ಸನಾತನಮ್ ।
ಪೃಥಿವೀಂ ಚಾಂತರಿಕ್ಷಂ ಚ ತಥಾ ಸ್ಥಾವರಜಂಗಮಮ್ ॥೧೩॥

ಸಮಗ್ರ ಪ್ರಪಂಚವನ್ನು, ಚೇತನರನ್ನು ನೀನೇ ಸೃಷ್ಟಿಗೆ ತರುತ್ತಿ. ಪೃಥಿವೀ, ಅಂತರಿಕ್ಷ, ಆಕಾಶ, ಸ್ಥಾವರ-ಜಂಗಮಗಳೆಲ್ಲವೂ ನಿನ್ನಿಂದಲೇ ಉತ್ಪನ್ನವಾಗಿವೆ.

ಹಸಿತಂ ತೇऽಮಲಾ ಜ್ಯೋತ್ಸ್ನಾ ಋತವಶ್ಚೇಂದ್ರಿಯಾಣಿ ಚ ।
ಪ್ರಾಣೋ ವಾಯುಃ ಸತತಗಃ ಕ್ರೋಧೋ ಮೃತ್ಯುಃ ಸನಾತನಃ ॥೧೪॥

ನಿನ್ನ ನಿರ್ಮಲವಾದ ಮಂದಹಾಸವೇ ಬೆಳಗುವ ಬೆಳದಿಂಗಳಂತೆ ಇದೆ. ನಿನ್ನ ಇಂದ್ರಿಯಗಳೇ ಋತುಗಳಂತೆ ಇವೆ. ನಿನ್ನ ಪ್ರಾಣವು ಚಲಿಸುವ ವಾಯುವಾಗಿದೆ. ನಿನ್ನ ಕ್ರೋಧವೇ ಸನಾತನವಾದ ಮೃತ್ಯುವಾಗಿದೆ.

ಪ್ರಸಾದೇ ಚಾಪಿ ಪದ್ಮಾ ಶ್ರೀಃ ನಿತ್ಯಂ ತವ ಮಹಾಮತೇ ।
ರತಿಸ್ತುಷ್ಟಿರ್ಧೃತಿಃ ಕ್ಷಾಂತಿಸ್ತ್ವಯಿ ಚೇದಂ ಚರಾಚರಮ್ ॥೧೫॥

ಮಹಾಮತಿಯೇ, ನಿನ್ನ ಪ್ರಸನ್ನತೆಯಲ್ಲಿ ಲಕ್ಷ್ಮ್ಯಾಯು ಸನ್ನಿಹಿತಳಾಗಿದ್ದಾಳೆ. ವಿಶಾಪ್ತನೇ, ರತಿ, ತುಷ್ಟಿ, ಧೃತಿ, ಕ್ಷಾಂತಿ ಇವೆಲ್ಲವೂ ಚರಾಚರ ಪ್ರಪಂಚವೂ ನಿನ್ನನ್ನೇ ಆಶ್ರಯಿಸಿದೆ.

ತ್ವಮೇವ ಹಿ ಯುಗಾಂತೇಷು ನಿಧನಂ ಪ್ರೋಚ್ಯತೇಽನಘ ॥೧೬॥

ಲಯಕಾಲದಲ್ಲಿ ಸಮಗ್ರ ಜಗತ್ತನ್ನು ಉದರದಲ್ಲಿ ಹೊತ್ತುಕೊಳ್ಳುವ ಪರಬ್ರಹ್ಮ ನೀನು ಎಂದು ಹೇಳುತ್ತಾರೆ.

ಸುದೀರ್ಘೇಣಾಪಿ ಕಾಲೇನ ನ ತೇ ಶಕ್ಯಾ ಗುಣಾ ಮಯಾ ।
ಆತ್ಮಾ ಚ ಪರಮೋ ವಕ್ತುಂ ನಮಸ್ತೇ ನಲಿನೇಕ್ಷಣ ॥೧೭॥

ದೀರ್ಘಕಾಲದ ತನಕ ನಿನ್ನ ಗುಣಗಳನ್ನು ಹೇಳುತ್ತಿದ್ದರೂ ಆ ಗುಣಗಳ ತೀರವನ್ನು ಮುಟ್ಟುವುದು ನನ್ನಿಂದ ಸಾಧ್ಯವಿಲ್ಲ. ಪುಂಡರೀಕಾಕ್ಷನೇ, ಈ ನಿನ್ನ ಮಹಿಮೆಗಳನ್ನು ಸ್ವಯಂ ನೀನೇ ಹೇಳಲು ಸಮರ್ಥನಾಗಿದ್ದಿ.

ವಿದಿತೋ ಮೇ ಸುದುರ್ಧರ್ಷಂ ನಾರದಾದ್ ದೇವಲಾತ್ ತಥಾ ।
ಕೃಷ್ಣದ್ವೈಪಾಯನಾಚ್ಚೈವ ತಥಾ ಕುರುಪಿತಾಮಹಾತ್ ॥೧೮॥

ದುರ್ಧರ್ಷನೇ, ದೇವರ್ಷಿಗಳಾದ ನಾರದರಿಂದ, ದೇವಲದಿಂದ, ವ್ಯಾಸರಿಂದ, ಕುರುಕುಲಪಿತಾಮಹರಾದ ಭೀಷ್ಮರಿಂದಲೂ ನಿನ್ನ ಮಹಿಮೆಯನ್ನು ಅರಿತಿದ್ದೇನೆ.

ತ್ವಯಿ ಸರ್ವಂ ಸಮಾಸಕ್ತಂ ತ್ವಮೇವೈಕೋ ಜನಾರ್ದನಃ ॥೧೯॥

ಯಚ್ಚಾನುಗ್ರಹಸಂಯುಕ್ತಮೇತದುಕ್ತಂ ತ್ವಯಾಽನಘ ।
ಏತತ್ಸರ್ವಮಹಂ ಸಮ್ಯಕ್ ಕರಿಷ್ಯಾಮಿ ಜನಾರ್ದನ ॥೨೦॥

ಜನಾರ್ದನನೇ, ಭಗವಂತನೇ, ನೀನು ನನ್ನ ಮೇಲಿನ ದಯೆಯಿಂದ ಇಷ್ಟರ ತನಕ ಏನನ್ನು ಉಪದೇಶಿಸಿದ್ದೀಯೋ ಅದೆಲ್ಲವನ್ನೂ ಚೆನ್ನಾಗಿ ಆಚರಿಸುತ್ತೇನೆ.

ಇದಂ ಚಾದ್ಭುತಮವ್ಯಗ್ರಂ ಕೃತಮಸ್ಮತ್ಪ್ರಿಯೇಪ್ಸಯಾ ।
ಯತ್ಪಾಪಾ ನಿಹತಾಃ ಸಂಖ್ಯೇ ಕೌರವ್ಯಾ ಧೃತರಾಷ್ಟ್ರಜಾಃ ॥೨೧॥

ಭಗವಂತನೇ, ನಮ್ಮೆಲ್ಲರಿಗೂ ಹಿತವಾಗಬೇಕೆಂಬ ಸಂಕಲ್ಪದಿಂದ ಪರಮಶ್ರೇಷ್ಠವಾದ ಕಾರ್ಯವನ್ನೇ ಮಾಡಿದ್ದಿ. ಧೃತರಾಷ್ಟ್ರನ ಮಗನಾದ, ಕುರುಕುಲಕ್ಕೆ ಕಳಂಕನಾದ ಪಾಪಿಷ್ಠ ದುರ್ಯೋಧನನು ಯುದ್ಧದಲ್ಲಿ ಹತನಾದನು.

ತ್ವಯಾ ದಗ್ಧಂ ಹಿ ತತ್ಸೈನ್ಯಂ ಮಯಾ ವಿಜಿತಮಾಹವೇ ।
ಭವತಾ ತತ್ಕೃತಂ ಕರ್ಮ ಯೇನಾವಾಪ್ತೋ ಜಯೋ ಮಯಾ ॥೨೨॥

ಭಗವಂತನೇ, ಆ ಕೌರವ ಸೈನ್ಯವು ನಿನ್ನ ತೇಜಸ್ಸಿನಿಂದಲೇ ದಗ್ಧವಾಯಿತು. ಬಳಿಕ ಆ ಯುದ್ಧದ ಜಯವೆಂಬ ಫಲ ನನ್ನ ಪಾಲಿಗೆ ದೊರೆಯಿತು.

ದುರ್ಯೋಧನಸ್ಯ ಸಂಗ್ರಾಮೇ ತವ ಬುದ್ಧಿಪರಾಕ್ರಮೈಃ ।
ಕರ್ಣಸ್ಯ ಚ ವಧೋಪಾಯೋ ಯಥಾವತ್ ಸಂಪ್ರದರ್ಶಿತಃ ॥೨೩॥

ಸೈಂಧವಸ್ಯ ಚ ಪಾಪಸ್ಯ ಭೂರಿಶ್ರವಸ ಏವ ಚ ॥೨೪॥

ಆ ಯುದ್ಧದಲ್ಲಿ ನಿನ್ನ ಬುದ್ಧಿಯ ಸಾಮರ್ಥ್ಯದಿಂದಲೇ ದುರ್ಯೋಧನ, ಕರ್ಣ, ಪಾಪಿ ಜಯದ್ರಥ, ಭೂರಿಶ್ರವ ಮುಂತಾದವರ ವಧೆಯ ಉಪಾಯವು ಚೆನ್ನಾಗಿ ತಿಳಿಯಲ್ಪಟ್ಟಿತು.

ತಸ್ಮಾತ್ ತ್ವಮೇವ ಸಂಚಿಂತ್ಯ ಹಿತಂ ಕುರು ಯಥಾ ತಥಾ ॥೨೫॥

ದೇವಕೀನಂದನನೇ, ಆದ್ದರಿಂದ ನಮ್ಮ ಬದುಕಿಗೆ ಮುಂದಿನ ಹಿತ ಯಾವುದು ಎಂಬುದನ್ನು ನೀನೇ ಚಿಂತಿಸಿ ಅದನ್ನು ಮಾಡು.

ಅಹಂ ಚ ಪ್ರೀಯಮಾಣೋಽಸ್ಮಿ ತ್ವಯಾ ದೇವಕಿನಂದನ ।
ಯದುಕ್ತಂ ತತ್ಕರಿಷ್ಯಾಮಿ ನ ಹಿ ಮೇಽಸ್ತಿ ವಿಚಾರಣಾ ॥೨೬॥

ದೇವಕಿನಂದನನೇ, ಇಲ್ಲಿಯ ತನಕ ನನಗೆ ಯಾವ ಕಾರ್ಯವನ್ನು ಮಾಡಲು ಬೋಧಿಸಿರುವೆಯೋ ಅದನ್ನು ಯಥಾವತ್ತಾಗಿ ಮಾಡುತ್ತೇನೆ. ಇದರಲ್ಲಿ ಸಂಶಯ ಬೇಡ.

ರಾಜಾನಂ ಚ ಸಮಾಸಾದ್ಯ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಚೋದಯಿಷ್ಯಾಮಿ ಧರ್ಮಜ್ಞ ಗಮನಾರ್ಥಂ ತವಾನಘ ॥೨೭॥

ದೋಷರಹಿತನೇ, ಧರ್ಮಜ್ಞನೇ, ಜನಾರ್ದನನೇ, ನಾನು ಈಗಲೇ ಯುಧಿಷ್ಠಿರನ ಬಳಿಗೆ ಸಾಗಿ, ದ್ವಾರವತಿಗೆ ಹೊರಡಲು ನಿನಗೆ ಅನುಮತಿ ನೀಡೆಂದು ಪ್ರಾರ್ಥಿಸಿಕೊಳ್ಳುತ್ತೇನೆ, ಪ್ರೇರಿಸುತ್ತೇನೆ.

ರುಚಿತಂ ಹಿ ಮಮಾಪ್ಯೇತದ್ ದ್ವಾರಕಾಗಮನಂ ಪ್ರತಿ ॥೨೮॥

ನೀನು ದ್ವಾರಕೆಗೆ ಹೋಗುವುದು ಸರಿಯಾಗಿದೆ ಎಂದು ನನಗೂ ತೋರುತ್ತಿದೆ.

ದ್ರಷ್ಟಾಸಿ ನಚಿರಾದೇವ ಮಾತುಲಂ ಮಧುಸೂದನ ।
ಬಲದೇವಂ ಚ ದುರ್ಧರ್ಷಂ ತಥಾಽನ್ಯಾನ್ ವೃಷ್ಣಿಪುಂಗವಾನ್ ॥೨೯॥

ಮಧುಸೂದನನೇ, ಸ್ವಲ್ಪ ಸಮಯದಲ್ಲಿಯೇ ನೀನು ದ್ವಾರಕೆಗೆ ಹೋಗಿ, ನನ್ನ ಸೋದರಮಾವನಾದ ವಸುದೇವನನ್ನೂ, ದುರ್ಧರ್ಷನಾದ ಬಲದೇವನನ್ನು, ಬೇರೆ ವೃಷ್ಣಿಕುಲದ ಶ್ರೇಷ್ಠ ಪುರುಷರನ್ನು ನೋಡುವವನಾಗಿದ್ದಿ.

ವೈಶಂಪಾಯನಃ

ಏವಂ ಸಂಭಾಷಮಾಣೌ ತೌ ಪ್ರಾಪ್ತೌ ವಾರಣಸಾಹ್ವಯಮ್ ।
ತಥಾ ವಿವಿಶತುಶ್ಚೋಭೌ ಸಂಪ್ರಹೃಷ್ಟಜನಾಕುಲಮ್ ॥೩೦॥

ವೈಶಂಪಾಯನ– ಜನಮೇಜಯ, ಹೀಗೆ ಅವರು ಮಾತನಾಡಿಕೊಳ್ಳುತ್ತಾ ಹಸ್ತಿನಾವತಿಯನ್ನು ಮುಟ್ಟಿದರು. ಇಬ್ಬರೂ ಸಂತೋಷದಿಂದ ಕೂಡಿರುವ, ಪ್ರಜೆಗಳಿಂದ ತುಂಬಿಹೋಗಿದ್ದ ನಗರವನ್ನು ಪ್ರವೇಶಿಸಿದರು.

ತೌ ಗತ್ವಾ ಧೃತರಾಷ್ಟ್ರಸ್ಯ ಗೃಹಂ ಶಕ್ರಗೃಹೋಪಮಮ್ ।
ದೃಷ್ಟವಂತೌ ಮಹಾರಾಜ ಧೃತರಾಷ್ಟ್ರಂ ಜನೇಶ್ವರಮ್ ॥೩೧॥

ವಿದುರಂ ಚ ಮಹಾಬುದ್ಧಿಂ ರಾಜಾನಂ ಚ ಯುಧಿಷ್ಠಿರಮ್ ।
ಭೀಮಸೇನಂ ಚ ದುರ್ಧರ್ಷಂ ಮಾದ್ರೀಪುತ್ರೌ ಚ ಪಾಂಡವೌ ॥೩೨॥

ಬಳಿಕ ಇಂದ್ರನ ಮನೆಗೆ ಸಮಾನವಾದ ಧೃತರಾಷ್ಟ್ರನ ಅರಮನೆಯನ್ನು ಪ್ರವೇಶಿಸಿ ಅಲ್ಲಿ ಜನೇಶ್ವರನಾದ ಧೃತರಾಷ್ಟ್ರನನ್ನೂ, ಮಹಾಬುದ್ಧಿಶಾಲಿಯಾದ ವಿದುರನನ್ನೂ, ರಾಜನಾದ ಯುಧಿಷ್ಠಿರನನ್ನೂ, ದುರ್ಧರ್ಷನಾದ ಭೀಮಸೇನನನ್ನೂ, ಮಾದ್ರಿಯ ಮಕ್ಕಳಾದ ನಕುಲ-ಸಹದೇವರನ್ನೂ ಸಂದರ್ಶಿಸಿದರು.

ಧೃತರಾಷ್ಟ್ರಮುಪಾಸೀನಂ ಯುಯುತ್ಸುಂ ಚಾಪರಾಜಿತಮ್ ।
ಗಾಂಧಾರೀಂ ಚ ಮಹಾಪ್ರಾಜ್ಞಾಂ ಪೃಥಾಂ ಕೃಷ್ಣಾಂ ಚ ಭಾಮಿನೀಮ್ ॥

ಸುಭದ್ರಾಂ ಚಾಪಿ ತಾಃ ಸರ್ವಾ ಭರತಾನಾಂ ಸ್ತ್ರಿಯಸ್ತಥಾ ।
ದೃಷ್ಟವಂತೌ ಸ್ಥಿತಾಃ ಸರ್ವಾ ಗಾಂಧಾರೀಂ ಪರಿವಾರ್ಯ ತೇ ॥೩೪॥

ತತಃ ಸಮೇತ್ಯ ರಾಜಾನಂ ಧೃತರಾಷ್ಟ್ರಮರಿಂದಮೌ ।
ನಿವೇದ್ಯ ನಾಮಧೇಯೇ ಸ್ವೇ ವಂದೇತಾಂ ಚರಣೌ ತತಃ ॥೩೫॥

ಬಳಿಕ ಕುಳಿತಿರುವ ಧೃತರಾಷ್ಟ್ರನನ್ನೂ, ಯುದ್ಧದಲ್ಲಿ ಸೋಲನ್ನು ಅನುಭವಿಸದ ಯುಯುತ್ಸುವನ್ನೂ, ಮಹಾಪ್ರಾಜ್ಞಳಾದ ಗಾಂಧಾರಿಯನ್ನೂ, ಕುಂತಿಯನ್ನೂ, ಹೆಂಡತಿಯಾದ ದ್ರೌಪದಿಯನ್ನೂ, ಸುಭದ್ರೆಯನ್ನೂ, ಇತರ ಭರತಕುಲ ಸ್ತ್ರೀಯರನ್ನೂ ನೋಡಿದರು. ಗಾಂಧಾರಿಯನ್ನು ಸಂಪರ್ಕಿಸಿದ ಬಳಿಕ ಧೃತರಾಷ್ಟ್ರನ ಬಳಿ ಹೋಗಿ, ತಮ್ಮ ನಾಮಧೇಯಗಳನ್ನು ಹೇಳಿಕೊಂಡು, ಅಭಿವಾದನ ಪೂರ್ವಕವಾಗಿ ಅವನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದರು.

ಗಾಂಧಾರ್ಯಾಶ್ಚ ಪೃಥಾಯಾಶ್ಚ ಧರ್ಮರಾಜಸ್ಯ ಧೀಮತಃ ।
ಭೀಮಸ್ಯ ಚ ವವಂದಾತೇ ತಥಾ ಪಾದೌ ಮಹಾತ್ಮನಃ ॥೩೬॥

ಅದರಂತೆ ಗಾಂಧಾರೀ, ಕುಂತೀ, ಧರ್ಮರಾಜನಿಗೂ, ಜಾಣನಾದ ಭೀಮನಿಗೂ ಮಹಾತ್ಮರಾದ ಅವರೀರ್ವರೂ ನಮಸ್ಕರಿಸಿದರು.

ಪರಿಷ್ವಜ್ಯ ಮಹಾತ್ಮಾನಂ ವೈಶ್ಯಾಪುತ್ರಂ ಮಹಾರಥಮ್ ।
ಕ್ಷತ್ತಾರಂ ಚಾಭಿಸಂಪೂಜ್ಯ ಪೃಷ್ಟ್ವಾ ಕುಶಲಮವ್ಯಯಮ್ ॥೩೭॥

ಬಳಿಕ ಮಹಾತ್ಮನಾದ, ದಾಸೀಪುತ್ರನಾದ, ಮಹಾರಥನಾದ ವಿದುರನನ್ನು ಆಲಿಂಗಿಸಿ, ಅವನಿಂದ ಸತ್ಕೃತರಾಗಿ ನಿತ್ಯಕುಶಲ ಪ್ರಶ್ನೆಯನ್ನು ಕೇಳಿದರು.

ತೈಃ ಸಾರ್ಧಂ ನೃಪತಿಂ ವೃದ್ಧಂ ಉಪಾಸಾತೇ ತತಸ್ತು ತೌ ॥೩೮॥

ಬಳಿಕ ವಿದುರಾದಿಗಳಿಂದ ಕೂಡಿಕೊಂಡು ಹಿರಿಯರಾಜನಾದ ಧೃತರಾಷ್ಟ್ರನ ಬಳಿ ಅವರೀರ್ವರು ತೆರಳಿದರು.

ತತೋ ನಿಶಿ ಮಹಾರಾಜೋ ಧೃತರಾಷ್ಟ್ರೋ ಜನೇಶ್ವರಾನ್ ।
ಜನಾರ್ದನಂ ಚ ಮೇಧಾವೀ ವ್ಯಸರ್ಜಯತ ವೈ ಗೃಹಾನ್ ॥೩೯॥

ಬಳಿಕ ರಾತ್ರಿಕಾಲದಲ್ಲಿ ಬಹಳ ಹೊತ್ತಿನವರೆಗೆ ಪರಸ್ಪರ ಮಾತುಗಳನ್ನು ಆಡಿ ಧೃತರಾಷ್ಟ್ರನು ಜನಾರ್ದನನನ್ನೂ, ಧರ್ಮರಾಜನೇ ಮೊದಲಾದ ಕುರುಶ್ರೇಷ್ಠರನ್ನೂ ಅವರವರ ಮನೆಗೆ ಕಳುಹಿಸಿಕೊಟ್ಟನು.

ತೇऽನುಜ್ಞಾತಾ ನೃಪತಿನಾ ಯಯುಃ ಸ್ವಂ ಸ್ವಂ ನಿವೇಶನಮ್ ।
ಧನಂಜಯಗೃಹಾನೇವ ಯಯೌ ಕೃಷ್ಣಸ್ತು ವೀರ್ಯವಾನ್ ॥೪೦॥

ರಾಜನಾದ ಧೃತರಾಷ್ಟ್ರನಿಂದ ಆಜ್ಞಪ್ತರಾದ ಪಾಂಡವರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ವೀರ್ಯವಂತನಾದ ಕೃಷ್ಣನಾದರೂ ಅರ್ಜುನನ ಮನೆಗೇ ಹೊರಟನು.

ತತ್ರಾರ್ಚಿತೋ ಯಥಾನ್ಯಾಯಂ ಸರ್ವಕಾಮೈರುಪಸ್ಥಿತಃ ।
ಕೃಷ್ಣಃ ಸುಷ್ವಾಪ ಮೇಧಾವೀ ಧನಂಜಯಸಹಾಯವಾನ್ ॥೪೧॥

ಯಥಾಯೋಗ್ಯವಾಗಿ, ಸಮಸ್ತ ವೈಭವಗಳಿಂದ ಕೃಷ್ಣನು ಅರ್ಜುನನಿಂದ ಆರಾಧಿತನಾದನು. ಧನಂಜಯನ ಹಿತಚಿಂತಕನಾದ, ಮೇಧಾವಿಯಾದ ಕೃಷ್ಣನು ಧನಂಜಯನ ಮನೆಯಲ್ಲಿಯೇ ಮಲಗಿದನು.

ಪ್ರಭಾತಾಯಾಂ ತು ಶರ್ವರ್ಯಾಂ ಕೃತಸರ್ವಾಹ್ನಿಕಕ್ರಿಯೌ ।
ಧರ್ಮರಾಜಸ್ಯ ಭವನಂ ಜಗ್ಮತುಃ ಪರಮಾರ್ಚಿತೌ ॥೪೨॥

ಪ್ರಾತಃಕಾಲವಾಗುತ್ತಿರಲು ಎಲ್ಲ ವಿಧವಾದ ಆಹ್ನಿಕ ಕ್ರಿಯೆಗಳನ್ನು ಪೂರೈಸಿ ಧರ್ಮರಾಜನ ಮನೆಗೆ ತೆರಳಿದರು.

ಯತ್ರಾಸ್ತೇ ತು ಸಹಾಮಾತ್ಯೋ ಧರ್ಮರಾಜೋ ಮಹಾಮನಾಃ ॥೪೩॥

ಮಂತ್ರಿಯಿಂದ ಸಹಿತನಾಗಿರುವ ಧರ್ಮರಾಜನು ಎಲ್ಲಿದ್ದಾನೋ ಅಲ್ಲಿಗೇ ಕೃಷ್ಣಾರ್ಜುನರು ತೆರಳಿದರು.

ತತಸ್ತು ತತ್ ಪ್ರವಿಶ್ಯಾಥ ದದೃಶಾತೇ ಮಹಾಬಲೌ ।
ಧರ್ಮರಾಜಂ ತಮಾಸೀನಂ ದೇವರಾಜಮಿವಾಶ್ವಿನೌ ॥೪೪॥

ಧರ್ಮರಾಜನ ಅರಮನೆಯನ್ನು ಪ್ರವೇಶಿಸಿದ ಮಹಾಬಲಿಷ್ಠರಾದ ಕೃಷ್ಣಾರ್ಜುನರು ಅಶ್ವಿನೀದೇವತೆಗಳ ಜೊತೆಗೆ ಕುಳಿತಿರುವ ದೇವರಾಜನಂತೆ ನಕುಲ-ಸಹದೇವರ ಜೊತೆಗೆ ಕುಳಿತಿರುವ ಧರ್ಮರಾಜನನ್ನು ಕಂಡರು.

ತೌ ಸಮಾಸಾದ್ಯ ರಾಜಾನಂ ವಾರ್ಷ್ಣೇಯಕುರುಪುಂಗವೌ ।
ನಿಷೀದತುರನುಜ್ಞಾತೌ ಪ್ರೀಯಮಾಣೇನ ತೇನ ವೈ ॥೪೫॥

ವೃಷ್ಣಿಕುಲದ ವೀರನಾದ ಕೃಷ್ಣನು, ಕುರುಕುಲದ ವೀರನಾದ ಅರ್ಜುನನು ಧರ್ಮರಾಜನನ್ನು ಸಮೀಪಿಸಿ, ಅವನಿಗೆ ಸಂತೋಷವಾಗುವಂತೆ ಅನುಮತಿಯನ್ನು ಪಡೆದು ಅವನ ಬಳಿಯಲ್ಲಿಯೇ ಕುಳಿತರು.

ತತಃ ಸ ರಾಜಾ ಮೇಧಾವೀ ವಿವಕ್ಷೂ ಪ್ರೇಕ್ಷ್ಯ ತಾವುಭೌ ।
ಪ್ರೋವಾಚ ವದತಾಂ ಶ್ರೇಷ್ಠೌ ವಚನಂ ರಾಜಸತ್ತಮಃ ॥೪೬॥

ಮೇಧಾವಿಯಾದ ಧರ್ಮರಾಜನು ಕೃಷ್ಣಾರ್ಜುನರು ಏನೋ ಹೇಳಲು ಬಂದಿದ್ದಾರೆ ಎಂಬುದನ್ನು ಕಂಡು ರಾಜಶ್ರೇಷ್ಠನಾದ ಧರ್ಮರಾಜನು ಇಂತು ನುಡಿದನು.

ಯುಧಿಷ್ಠಿರಃ

ವಿವಕ್ಷೂ ಹಿ ಯುವಾಂ ಮನ್ಯೇ ವೀರೌ ಯದುಕುರೂದ್ವಹೌ ।
ಬ್ರೂತಂ ಕರ್ತಾಸ್ಮಿ ಸರ್ವಂ ವಾಂ ನ ಚಿರಾನ್ಮಾಂ ವಿಚಾರ್ಯತಾಮ್ ॥

ಯುಧಿಷ್ಠಿರ– ಯದುಕುಲ-ಕುರುಗಳ ವೀರರೇ, ನೀವೀರ್ವರೂ ನನಗೆ ಏನೋ ಹೇಳಬೇಕು ಎಂದು ತವಕವುಳ್ಳವರಾಗಿದ್ದೀರಿ ಎಂದು ಭಾವಿಸಿದ್ದೇನೆ. ನಾನು ಏನು ಮಾಡಬೇಕೆಂಬುದನ್ನು ಕೂಡಲೇ ತಿಳಿಸಿರಿ. ನನಗೆ ಹೇಳಿರಿ.

ವೈಶಂಪಾಯನಃ

ಇತ್ಯುಕ್ತಃ ಫಲ್ಗುನಸ್ತತ್ರ ಧರ್ಮರಾಜಾನಮಬ್ರವೀತ್ ।
ವಿನೀತವದುಪಾಗಮ್ಯ ವಾಕ್ಯಂ ವಾಕ್ಯವಿಶಾರದಃ ॥೪೮॥

ವೈಶಂಪಾಯನ– ಈ ರೀತಿಯಾಗಿ ಧರ್ಮರಾಜನು ನುಡಿದಾಗ, ಅರ್ಜುನನು ಧರ್ಮರಾಜನನ್ನು ವಿನೀತನಾಗಿ ಸಮೀಪಿಸಿ ಶ್ರೇಷ್ಠವಾದ ಈ ಮಾತನ್ನು ನುಡಿದನು.

ಅರ್ಜುನಃ

ಅಯಂ ಚಿರೋಷಿತೋ ರಾಜನ್ ವಾಸುದೇವಃ ಪ್ರತಾಪವಾನ್ ।
ಭವಂತಂ ಸಮನುಜ್ಞಾಪ್ಯ ಪಿತರಂ ದ್ರಷ್ಟುಮಿಚ್ಛತಿ ॥೪೯॥

ಅರ್ಜುನ– ಧರ್ಮರಾಜನೇ, ಪ್ರತಾಪಶಾಲಿಯಾದ ವಾಸುದೇವನು ನಮ್ಮ ಮನೆಗಳಲ್ಲಿ ಬಹಳ ಕಾಲದಿಂದ ಇದ್ದಾನೆ. ನಿನ್ನ ಅನುಮತಿಯನ್ನು ಪಡೆದು ತನ್ನ ತಂದೆಯನ್ನು ನೋಡಲು ಹೋಗಬೇಕೆಂದು ಬಯಸುತ್ತಿದ್ದಾನೆ.

ಸ ಗಚ್ಛತ್ವಭ್ಯನುಜ್ಞಾತೋ ಭವತಾ ಯದಿ ಮನ್ಯಸೇ ।
ಆನರ್ತನಗರಂ ವೀರಸ್ತದನುಜ್ಞಾತುಮರ್ಹಸಿ ॥೫೦॥

ನೀನು ಸಮ್ಮತಿಸಿದರೆ ನಿನ್ನ ಅನುಮತಿಯನ್ನು ಪಡೆದು ಅವನು ದ್ವಾರಕೆಗೆ ತೆರಳುತ್ತಾನೆ. ಅಲ್ಲಿಗೆ ತೆರಳಲು ನೀನು ಅನುಮತಿಯನ್ನು ನೀಡಬೇಕು.

ಯುಧಿಷ್ಠಿರಃ

ಪುಂಡರೀಕಾಕ್ಷ ಭದ್ರಂ ತೇ ಗಚ್ಛ ತ್ವಂ ಮಧುಸೂದನ ।
ಪುರೀಂ ದ್ವಾರಾವತೀಮದ್ಯ ದ್ರಷ್ಟುಂ ಶೂರಸುತಂ ವಿಭುಮ್ ॥೫೧॥

ಯುಧಿಷ್ಠಿರ– ಮಧುಸೂದನನೇ, ಪುಂಡರೀಕಾಕ್ಷನೇ, ನಿನಗೆ ಮಂಗಳವಾಗಲಿ. ನೀನು ಹೊರಡಬಹುದು. ಶೂರಸುತನಾದ ವಸುದೇವನನ್ನು ನೋಡಲು ದ್ವಾರಾವತಿಗೆ ಇಂದೇ ನೀನು ತೆರಳಬಹುದು.

ರೋಚತೇ ಮೇ ಮಹಾಬಾಹೋ ಗಮನಂ ತವ ಕೇಶವ ।
ಮಾತುಲಶ್ಚಿರದೃಷ್ಟಸ್ತೇ ತ್ವಯಾ ದೇವೀ ಚ ದೇವಕೀ ॥೫೨॥

ಮಹಾಬಾಹುವೇ, ಕೇಶವನೇ, ನನ್ನ ಸೋದರಮಾವನಾದ ವಸುದೇವನನ್ನು, ದೇವಕಿಯನ್ನು ನೀನು ನೋಡದೆ ಬಹಳ ಕಾಲವಾಗಿದೆ. ಆದ್ದರಿಂದ ನೋಡಲು ತೆರಳುವುದು ಯೋಗ್ಯವಾಗಿದೆ ಎಂದು ನನಗನಿಸುತ್ತಿದೆ.

ಮಾತುಲಂ ವಸುದೇವಂ ತ್ವಂ ಬಲದೇವಂ ಚ ಮಾಧವ ।
ಪೂಜಯೇಥಾ ಮಹಾಪ್ರಾಜ್ಞ ಮದ್ವಾಕ್ಯೇನ ಯಥಾರ್ಹತಃ ॥೫೩॥

ನನ್ನ ಸೋದರಮಾವನಾದ ವಸುದೇವನನ್ನೂ, ಬಲದೇವನನ್ನೂ, ಮಹಾಪ್ರಾಜ್ಞನಾದ ಮಾಧವನೇ, ನನ್ನ ಮಾತಿನಿಂದಲೂ ಪೂಜಿಸಿದ್ದೇನೆ ಎಂಬುದಾಗಿ ತಿಳಿಸು.

ಸ್ಮರೇಥಾಶ್ಚಾಪಿ ಮಾಂ ನಿತ್ಯಂ ಭೀಮಂ ಚ ಬಲಿನಾಂ ವರಮ್ ।
ಫಲ್ಗುನಂ ನಕುಲಂ ಚೈವ ಸಹದೇವಂ ಚ ಮಾಧವ ॥೫೪॥

ನನ್ನನ್ನು ಎಂದಿಗೂ ಮರೆಯಬಾರದೆಂದು ತಿಳಿಸು. ಬಲಿಷ್ಠರಲ್ಲಿಯೇ ಶ್ರೇಷ್ಠನಾದ ಭೀಮನನ್ನಾಗಲಿ, ಅರ್ಜುನನನ್ನಾಗಲಿ, ನಕುಲ-ಸಹದೇವರನ್ನಾಗಲಿ ಮಾಧವನೇ, ಮರೆಯಬಾರದೆಂದು ತಿಳಿಸು.

ಆನರ್ತಾನವಲೋಕ್ಯ ತ್ವಂ ಪಿತರಂ ಚ ಮಹಾಭುಜಮ್ ।
ವೃಷ್ಣೀಂಶ್ಚ ಪುನರಾಗಚ್ಛೇಃ ಹಯಮೇಧೇ ಮಮಾನಘ ॥೫೫॥

ದೋಷರಹಿತನೇ, ಆನರ್ತದೇಶದ ಪ್ರಜೆಗಳನ್ನೂ, ನಿನ್ನ ತಂದೆಯನ್ನೂ, ವೃಷ್ಣಿ ಕುಲಶ್ರೇಷ್ಠರನ್ನು ನೋಡಿ, ನಾನು ಮಾಡಲಿರುವ ಅಶ್ವಮೇಧ ಯಾಗಕ್ಕೆ ಪುನಃ ನೀನು ಆಗಮಿಸಬೇಕು.

ಸಂಗಚ್ಛ ರತ್ನಾನ್ಯಾದಾಯ ವಿವಿಧಾನಿ ವಸೂನಿ ಚ ।
ಯಚ್ಚಾಪ್ಯನ್ಯನ್ಮನೋಜ್ಞಂ ತೇ ತಚ್ಚಾಪ್ಯಾದತ್ಸ್ವ ಸಾತ್ವತ ॥೫೬॥

ಸಾತ್ವತನೇ, ವಿಧವಿಧವಾದ ರತ್ನಗಳನ್ನೂ, ಐಶ್ವರ್ಯಗಳನ್ನೂ, ನಿನಗೆ ಪ್ರಿಯವಾದ ಮನೋಜ್ಞವಾದ ಯಾವುದೇ ಇತರ ವಸ್ತುಗಳನ್ನು ತೆಗೆದುಕೊಂಡು ಪ್ರಯಾಣ ಬೆಳೆಸು.

ಇಯಂ ಹಿ ವಸುಧಾ ಸರ್ವಾ ಪ್ರಸಾದಾತ್ ತವ ಮಾಧವ ।
ಅಸ್ಮಾನುಪಾಗತಾ ವೀರ ನಿಹತಾಶ್ಚಾಪಿ ಶತ್ರವಃ ॥೫೭॥

ಕೇಶವನೇ, ನಿನ್ನ ಅನುಗ್ರಹದಿಂದಲೇ ಸಮಗ್ರ ಭೂಮಂಡಲವು ನಮ್ಮ ವಶವಾಯಿತು. ಶತ್ರುಗಳು ಹತರಾಗಿದ್ದಾರೆ.

ಸ್ವರ್ಗಾಪವರ್ಗವಿಷಯಂ ತ್ವದ್ಭಕ್ತಾನಾಂ ನ ದುಲರ್ಭಮ್ ।
ಸಂಸಾರಗಹನೇ ಚೇದ್ಧಪಾಪಾಗ್ನೇಃ ಪ್ರಶಮಾಂಬುದ ॥೫೮॥

ಭಗವಂತನೇ, ನಿನ್ನನ್ನು ಆಶ್ರಯಿಸಿದ ನಮಗೆ ಸ್ವರ್ಗಾಪವರ್ಗಗಳು ದುರ್ಲಭವಾದವುಗಳಲ್ಲ. ಈ ಗಹನವಾದ ಸಂಸಾರದಲ್ಲಿ ಪಾಪಾಗ್ನಿಗಳಿಂದ ಸುಡುತ್ತಿರುವ ನಮ್ಮನ್ನು ಉದ್ಧರಿಸು.

ವೈಶಂಪಾಯನಃ

ಏವಂ ಬ್ರುವತಿ ಕೌರವ್ಯೇ ಧರ್ಮರಾಜೇ ಯುಧಿಷ್ಠಿರೇ ।
ವಾಸುದೇವಃ ಪರಃ ಪುಂಸಾಮಿದಂ ವಚನಮಬ್ರವೀತ್ ॥೫೯॥

ವೈಶಂಪಾಯನ– ಈ ರೀತಿಯಾಗಿ ಕುರುಕುಲಶ್ರೇಷ್ಠನಾದ ಧರ್ಮರಾಜನು ಹೇಳುತ್ತಿರಲು ಸರ್ವೋತ್ತಮನಾದ ವಾಸುದೇವನು ಧರ್ಮರಾಜನನ್ನು ಕುರಿತು ಇಂತು ನುಡಿದನು.

ಶ್ರೀಭಗವಾನ್

ತವೈವ ರತ್ನಾನಿ ಧನಂ ಚ ಕೇವಲಂ
ಧರಾ ಚ ಕೃತ್ಸ್ನಾ ಚ ಮಹಾಭುಜಾದ್ಯ ವೈ ।
ಯದಸ್ತಿ ಚಾನ್ಯದ್ ದ್ರವಿಣಂ ಗೃಹೇಷು ಮೇ
ತ್ವಮೇವ ತಸ್ಯೇಶ್ವರ ನಿತ್ಯಮೀಶ್ವರಃ ॥೬೦॥

ಶ್ರೀಭಗವಾನ್– ಮಹಾಭುಜನೇ, ನರೇಶ್ವರನೇ, ರತ್ನಗಳು, ಧನ, ಸಮಗ್ರವಾದ ಭೂಮಂಡಲವು ಎಲ್ಲವೂ ನಿನ್ನದೇ ಆಗಿದೆ. ಇಷ್ಟೇ ಏನು, ಯಾವ ಯಾವ ಐಶ್ವರ್ಯವು ನನ್ನ ಮನೆಯಲ್ಲಿ ಇರುವುದೋ ಅಂತಹದ್ದೇ ಆದ ಸಕಲ ಐಶ್ವರ್ಯಕ್ಕೂ ನೀನೇ ಈಶ್ವರನಾಗಿರುವಿ.

ವೈಶಂಪಾಯನಃ

ತಥೇತ್ಯಥೋಕ್ತಃ ಪ್ರತಿಪೂಜಿತಸ್ತದಾ
ಗದಾಗ್ರಜೋ ಧರ್ಮಸುತೇನ ವೀರ್ಯವಾನ್ ।
ಪಿತೃಷ್ವಸಾರಂ ತ್ವಭಿವಾದ್ಯ ಸಾತ್ಯಕಿಂ
ಸಂಪೂಜಯಂಶ್ಚಾಪ್ಯಗಮತ್ ಪ್ರದಕ್ಷಿಣಮ್ ॥೬೧॥

ವೈಶಂಪಾಯನ– ಶ್ರೀಕೃಷ್ಣನು ಹೀಗೆ ಹೇಳಿದ ಬಳಿಕ ಯುಧಿಷ್ಠಿರನು ಹಾಗೆಯೇ ಆಗಲಿ ಎಂದು ಹೇಳಿ ಕೃಷ್ಣನನ್ನು ಸತ್ಕರಿಸಿದನು. ಗದನಿಗೆ ಅಣ್ಣನಾದ, ವೀರ್ಯವಂತನಾದ ಶ್ರೀಕೃಷ್ಣನು ಧರ್ಮರಾಜನಿಂದ ಸಮ್ಮಾನಿತನಾಗಿ, ತನ್ನ ತಂದೆಯ ತಂಗಿಯಾದ ಕುಂತಿಯ ಬಳಿ ಸಾಗಿ ಅವಳೊಡನೆಯೂ ಯಥೋಚಿತವಾದ ಮಾತುಗಳನ್ನಾಡಿ, ವಿಧಿವತ್ತಾಗಿ ಸತ್ಕಾರವನ್ನು ಪಡೆದು ಪ್ರದಕ್ಷಿಣೆ-ನಮಸ್ಕಾರವನ್ನು ಮಾಡಿದನು.

ತಯಾ ಸ ಸಮ್ಯಕ್ ಪ್ರತಿಪೂಜಿತಸ್ತದಾ
ತಥೈವ ಸರ್ವೈರ್ವಿದುರಾದಿಭಿಸ್ತತಃ ।
ವಿನಿರ್ಯಯೌ ನಾಗಪುರಾದ್ ಗದಾಗ್ರಜೋ
ರಥೇನ ದಿವ್ಯೇನ ಚತುರ್ಯುಜಾ ಹರಿಃ ॥೬೨॥

ಹೀಗೆ ಶ್ರೀಕೃಷ್ಣನು ಕುಂತಿ-ವಿದುರಾದಿಗಳಿಂದ, ಸಮಸ್ತರಿಂದಲೂ ಅಭಿನಂದಿಸಲ್ಪಟ್ಟವನಾಗಿ ಅವರೆಲ್ಲರಿಂದಲೂ ಅನುಮತಿಯನ್ನು ಪಡೆದು ದಿವ್ಯವಾದ ರಥದಲ್ಲಿ ಕುಳಿತು ನಾಗಪುರದಿಂದ ದ್ವಾರಕೆಯತ್ತ ಪ್ರಯಾಣ ಬೆಳೆಸಿದನು.

ರಥೇ ಸುಭದ್ರಾಮಧಿರೋಪ್ಯ ಭಾಮಿನೀಂ
ಯುಧಿಷ್ಠಿರಸ್ಯಾನುಮತೇ ಜನಾರ್ದನಃ ।
ಪಿತೃಷ್ವಸುಶ್ಚಾಪಿ ಜನಾರ್ದನಸ್ತದಾ
ವಿನಿರ್ಯಯೌ ಪೌರಜನಾಭಿಸತ್ಕೃತಃ ॥೬೩॥

ರಥದಲ್ಲಿ ತಂಗಿಯಾದ ಸುಭದ್ರೆಯನ್ನು ಕುಳ್ಳಿರಿಸಿಕೊಂಡು, ಯುಧಿಷ್ಠಿರನ ಅನುಮತಿಯನ್ನು ಪಡೆದ ಜನಾರ್ದನನು, ತಂದೆಯ ತಂಗಿಯಾದ ಕುಂತಿಯ ಅನುಮತಿಯಿಂದ ಪುರಜನರಿಂದ ಸತ್ಕೃತನಾಗಿ ಹೊರಟನು.

ತಮನ್ವಗಾದ್ ವಾನರವರ್ಯಕೇತನಃ
ಸಸಾತ್ಯಕೀ ಮಾದ್ರವತೀಸುತಾವಪಿ ।
ಅಗಾಧಬುದ್ಧಿರ್ವಿದುರಶ್ಚ ಮಾಧವಂ
ಸ್ವಯಂ ಚ ಭೀಮೋ ಗಜರಾಜವಿಕ್ರಮಃ ॥೬೪॥

ಶ್ರೀಕೃಷ್ಣನ ರಥವು ಹೊರಡುತ್ತಲೇ ಕಪಿಧ್ವಜನಾದ ಅರ್ಜುನನೂ, ಸಾತ್ಯಕಿಯೂ, ನಕುಲ-ಸಹದೇವರೂ, ಮಹಾಬುದ್ಧಿಶಾಲಿಯಾದ ವಿದುರನೂ, ಗಜವಿಕ್ರಮನಾದ ಭೀಮನೂ ಕೃಷ್ಣನನ್ನು ಹಿಂಬಾಲಿಸಿ ಸ್ವಲ್ಪ ದೂರದ ತನಕ ಹೊರಟರು.

ನಿವರ್ತ್ಯ ವೈತಾನ್ ಕುರುರಾಷ್ಟ್ರವರ್ಧನಾನ್
ತತಶ್ಚ ಸರ್ವಾನ್ ವಿದುರಂ ಚ ವೀರ್ಯವಾನ್ ।
ಜನಾರ್ದನೋ ದಾರುಕಮಾಹ ಸತ್ವರಃ
ಪ್ರಚೋದಯಾಶ್ವಾನಿತಿ ಸಾತ್ಯಕಿಂ ತದಾ ॥೬೫॥

ಬಳಿಕ ವೀರ್ಯವಂತನಾದ ಕೃಷ್ಣನು ಕುರುವಂಶ ವರ್ಧನರಾದ ಭೀಮಾದಿಗಳನ್ನು, ವಿದುರನನ್ನು, ತನ್ನನ್ನು ಅನುಸರಿಸಿ ಬರುತ್ತಿರುವ ಸಮಸ್ತರನ್ನೂ ಸವಿಯಾದ ಮಾತುಗಳಿಂದ ಹಿಂದಕ್ಕೆ ಕಳುಹಿಸಿದನು. ದಾರುಕನಿಗೂ, ಸಾತ್ಯಕಿಗೂ ಕುದುರೆಗಳನ್ನು ವೇಗವಾಗಿ ನಡೆಸಿಕೊಂಡು ಹೋಗುವಂತೆ ಆಜ್ಞಾಪಿಸಿದನು.

ತತೋ ಯಯೌ ಶತ್ರುಗಣಾವಮರ್ದನಃ
ಶಿನಿಪ್ರವೀರಾನುಗತೋ ಜನಾರ್ದನಃ ।
ಯಥಾ ನಿಹತ್ಯಾರಿಗಣಂ ಶತಕ್ರತುಃ
ದಿವಂ ತಥಾऽऽನರ್ತಪುರೀಂ ಪ್ರತಾಪವಾನ್ ॥೬೬॥

ಶತ್ರುಗಳನ್ನು ಸದೆಬಡಿಯುವ ಸಾಮರ್ಥ್ಯವುಳ್ಳ, ಶಿನಿಪ್ರವೀರನಾದ ಸಾತ್ಯಕಿಯಿಂದ ಹಿಂಬಾಲಿಸಲ್ಪಟ್ಟ ಶ್ರೀಕೃಷ್ಣನು ಶತಕ್ರತುವಾದ, ಪ್ರತಾಪವಂತನಾದ ಇಂದ್ರನು ಶತ್ರುಗಳನ್ನು ಸಂಹರಿಸಿ ಸ್ವರ್ಗಕ್ಕೆ ಸಾಗುವಂತೆ ದ್ವಾರಕೆಯನ್ನು ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಕೃಷ್ಣಸ್ಯ ದ್ವಾರಾವತೀಗಮನಂ ನಾಮ ದ್ವಿಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ (ಅಧ್ಯಾಯ-೫೦)

ಸಮಾಧಿವಿರತೋದಂಕಪರಿಪೃಷ್ಟಃ ಪಥಿ ಪ್ರಭುಃ ।
ಹತಂ ದುರ್ಯೋಧನಂ ಪ್ರಾಹ ಸಭ್ರಾತೃಸುತಸೈನಿಕಮ್ ॥

ದಾರಿಯಲ್ಲಿ ಸಮಾಧಿಯನ್ನು ಬಿಟ್ಟು ಎದ್ದಿದ್ದ ಉದಂಕಮುನಿ ಶ್ರೀಕೃಷ್ಣನನ್ನು ಕೇಳಿದಾಗ, ದುರ್ಯೋಧನನು ತನ್ನ ಸಹೋದರರಿಂದ, ಮಕ್ಕಳಿಂದ, ಸೈನಿಕರಿಂದ ಸಮೇತನಾಗಿ ಹತನಾದನು ಎಂದು ಹೇಳಿದನು.

ತಂ ಶಿಷ್ಯವಧಕೋಪೇನ ಶಪ್ತುಮಾತ್ಮಾನಮುದ್ಯತಮ್ ।
ಕೇಶವೋऽಶಮಯದ್ ವಾಕ್ಯೈರ್ವಿಶ್ವರೂಪಂ ಪ್ರದರ್ಶ್ಯ ಚ ॥

ಶಿಷ್ಯನಾದ ದುರ್ಯೋಧನನ ವಧೆಯ ಕೋಪದಿಂದ ಉದಂಕಮುನಿಯು ಶ್ರೀಕೃಷ್ಣನನ್ನು ಶಪಿಸಲು ಉದ್ಯುಕ್ತನಾದನು. ಶ್ರೀಕೃಷ್ಣನು ವಿಶ್ವರೂಪವನ್ನು ತೋರಿ, ಒಳ್ಳೆಯ ಮಾತುಗಳಿಂದ ಅವನನ್ನು ಸಮಾಧಾನ ಪಡಿಸಿದನು.

ಮದ್ಭಕ್ತೋ ನಿತರಾಮೇಷ ಮದಾರಾಧನತತ್ಪರಃ ।
ಮಾಮವಜ್ಞಾಯ ನಿರಯಂ ಮಾನುತ್ಥಾನಂ ವ್ರಜೇದಿತಿ ॥

ಕೃಪಯಾ ವಾಸುದೇವೇನ ಬೋಧಿತಃ ಶಾಂತಮಾನಸಃ ।
ಪಶ್ಚಾತ್ತಾಪಾಭಿತಪ್ತಾತ್ಮಾ ತಮೇವ ಶರಣಂ ಯಯೌ ॥

ಈತ ನನ್ನಲ್ಲಿ ಬಹಳ ಭಕ್ತಿ ಉಳ್ಳವ. ನನ್ನ ಆರಾಧನೆಯಲ್ಲಿ ನಿರತ. ನನ್ನನ್ನು ತಿರಸ್ಕರಿಸಿ ಶಾಶ್ವತ ನರಕವನ್ನು ಹೊಂದದಿರಲಿ ಎಂದು ಕೃಪೆಯಿಂದ ಶ್ರೀಕೃಷ್ಣ ಬೋಧಿಸಿದಾಗ ಉದಂಕಮುನಿಯ ಮನಸ್ಸು ಸಮಾಧಾನಗೊಂಡಿತು. ಆತ ಪಶ್ಚಾತ್ತಾಪದಿಂದ ಬೆಂದ ಮನಸ್ಸಿನಿಂದ ಕೃಷ್ಣನನ್ನೇ ಶರಣು ಹೊಂದಿದ.

ತಸ್ಮೈ ದೇವೋಽಭಯಂ ದತ್ತ್ವಾ ಪ್ರೇಷಯಿಷ್ಯೇಽಮೃತಂ ತವ ।
ದಾತುಂ ಶಕ್ರಮಿತಿ ಪ್ರೋಕ್ತ್ವಾ ಯಯೌ ದ್ವಾರವತೀಂ ಪ್ರಭುಃ ॥

ದೇವ ಶ್ರೀಕೃಷ್ಣ ಉದಂಕನಿಗೆ ಅಭಯ ನೀಡಿ, ನಿನಗೆ ಅಮೃತವನ್ನು ಕೊಡಲು ದೇವೇಂದ್ರನನ್ನು ಕಳಿಸುವೆನೆಂದು ಹೇಳಿ ದ್ವಾರಕೆಗೆ ತೆರಳಿದ.

ಅಥಾऽದಿದೇಶ ದೇವೇಶಂ ವಾಸುದೇವೋಽಮೃತಂ ಮುನೇಃ ।
ದೇಹೀತಿ ವಂಚಯಿಷ್ಯಾಮೀತ್ಯಾಹ ಸೋऽಪಿ ಕ್ಷಮಾಪಯನ್ ॥

ಬಳಿಕ ಶ್ರೀಕೃಷ್ಣನು ಮುನಿಗೆ ಅಮೃತ ನೀಡೆಂದು ದೇವೇಂದ್ರನಿಗೆ ಆದೇಶಿಸಿದನು. ಇಂದ್ರನು ಕ್ಷಮೆ ಬೇಡುತ್ತಾ ಮುನಿಯನ್ನು ವಂಚಿಸುವೆನೆಂದನು.

ಓಮಿತ್ಯುಕ್ತೋ ಭಗವತಾ ತತ್ಸ್ನೇಹಾತ್ಸ ಶಚೀಪತಿಃ ।
ಸುಜುಗುಪ್ಸಿತಮಾತಂಗವೇಷೋ ಭೂತ್ವಾ ಮುನಿಂ ಯಯೌ ॥

ಇಂದ್ರನ ಮೇಲಿನ ಪ್ರೀತಿಯಿಂದ ಶ್ರೀಕೃಷ್ಣ 'ಆಗಲಿ' ಎಂದನು. ಇಂದ್ರನು ಬಲು ಜುಗುಪ್ಸಿತವಾದ ಚಂಡಾಲವೇಷ ಧರಿಸಿ ಮುನಿಯ ಬಳಿಗೆ ನಡೆದನು.

ಮೂತ್ರಸ್ರೋತಸಿ ಸೋಧಶ್ಚ ನಿಧಾಯ ಕಲಶಂ ವಶೀ ।
ಮೂತ್ರಯನ್ನಿವ ತಂ ಪ್ರಾಹ ವಾಸುದೇವಃ ಸುಧಾಮಿಮಾಮ್ ।
ಮಹರ್ಷೇ ಪ್ರೇಷಯಾಮಾಸ ತವಾರ್ಥೇ ತತ್ ಪಿಬೇತಿ ಚ ॥

ಸ ಮೂತ್ರಮಿತಿ ಮತ್ವಾ ತಂ ಯಾಹೀತ್ಯೇಽವಾಹ ಭತ್ಸಯನ್ ।
ವಂಚಯಿತ್ವೈವ ತಂ ಶಕ್ರೋ ಯಯೌ ಪ್ರೀತಃ ಸ್ವಮಾಲಯಮ್ ॥

ಯೋಗಿ ಇಂದ್ರ ಮೂತ್ರದ್ವಾರದಲ್ಲಿ ಅಮೃತಕಲಶವನ್ನಿಟ್ಟುಕೊಂಡು, ಮೂತ್ರ ಮಾಡುವವನಂತೆ ತೋರುತ್ತಾ, 'ಮಹರ್ಷಿಯೇ, ಕೃಷ್ಣನೀ ಅಮೃತವನ್ನು ನಿನಗಾಗಿ ಕಳಿಸಿಕೊಟ್ಟಿದ್ದಾನೆ. ಆದ್ದರಿಂದ ಕುಡಿ' ಎಂದನು. ಮುನಿಯು ಅದನ್ನು ಮೂತ್ರವೆಂದೇ ಬಗೆದು ನಿಂದಿಸುತ್ತಾ 'ಆಚೆ ತೊಲಗು' ಎಂದನು. ದೇವೇಂದ್ರನು ಹೀಗೆ ಮುನಿಯನ್ನು ವಂಚಿಸಿ ಸಂತುಷ್ಟನಾಗಿ ಸ್ವರ್ಗಕ್ಕೆ ಹೊರಟುಹೋದನು.

ಅಸಾಧಾರಣಮನ್ನಂ ಹಿ ದೇವಾನಾಮಮೃತಂ ಸದಾ ।
ಅನ್ಯಪೀತಿಸ್ತತಸ್ತಸ್ಯ ದೇವಾನಾಂ ಪರಮಾ ಪ್ರಿಯಾ ॥

ಅಮೃತ ಸದಾ ದೇವತೆಗಳಿಗೇ ಮೀಸಲಾದ ಆಹಾರ. ಆದ್ದರಿಂದ ಅದನ್ನು ಅನ್ಯರು ಕುಡಿಯುವುದು ದೇವತೆಗಳಿಗೆ ಏನೂ ಇಷ್ಟವಿಲ್ಲ. ಆದ್ದರಿಂದ ವಂಚಿಸಿದನು.

ಆತ್ಮದತ್ತಪ್ರಸಾದಾಚ್ಚ ಸ್ವಾಪರಾಧಾತ್ ಪ್ರಚಾಲಿತೇ ।
ಉದಂಕೇ ವಾಸುದೇವಸ್ತು ಯುಕ್ತಮಿತ್ಯೇವ ಮನ್ಯತೇ ॥

ಉದಂಕಮುನಿಯು ಸ್ವಾಪರಾಧದಿಂದಲೇ ಶ್ರೀಕೃಷ್ಣನು ಕೊಡುತ್ತಿದ್ದ ಅನುಗ್ರಹದಿಂದ ವಂಚಿತನಾದಾಗ ಶ್ರೀಕೃಷ್ಣನು ಇದು ಸರಿಯೆಂದೇ ಭಾವಿಸಿದನು.

ಸ್ವಪುರೀಂ ಪ್ರಾಪ್ಯ ಯದುಭಿಃ ಪೂಜಿತಃ ಶೂರಸೂನವೇ ।
ವೃತ್ತಾಂತಂ ಕಥಯಾಮಾಸ ಕೇಶವೋ ಯದುಸಂಸದಿ ॥

ಶ್ರೀಕೃಷ್ಣನು ದ್ವಾರಕೆಗೆ ಹೋಗಿ, ಯಾದವರಿಂದ ಸತ್ಕೃತನಾಗಿ, ಯಾದವರ ಸಭೆಯಲ್ಲಿ ವಸುದೇವನಿಗೆ ಕುರುಕ್ಷೇತ್ರ ಯುದ್ಧದ ವೃತ್ತಾಂತವನ್ನು ಹೇಳಿದನು.

ವಧಮಂತರಿತಂ ಸೂನೋಃ ಸಾತ್ವತೇಶೇನ ಸಾತ್ವತೀ ।
ಪ್ರಣಮ್ಯ ಕಥಯೇತ್ಯೂಚೇ ತತ ಆಹ ಜನಾರ್ದನಃ ॥

ಶ್ರೀಕೃಷ್ಣನು ಅಭಿಮನ್ಯು ವಧೆಯ ವೃತ್ತಾಂತವನ್ನು ಹೇಳದೆ ಬಿಟ್ಟಾಗ ಸುಭದ್ರೆಯು ನಮಿಸಿ ಅದನ್ನೂ ಹೇಳೆಂದಳು. ಆಗ ಶ್ರೀಕೃಷ್ಣನು ಅದನ್ನೂ ಹೇಳಿದನು.

ತತಃ ಸುದುಃಖಿತಾಃ ಶೂರಪುತ್ರಾದ್ಯಾ ಅಭಿಮನ್ಯವೇ ।
ಶ್ರಾದ್ಧದಾನಾನಿ ಬಹುಶಶ್ಚಕ್ರುಃ ಕೇಶವಸಂಯುತಾಃ ॥

ಆಗ ವಸುದೇವ ಮುಂತಾದವರು ಬಹಳ ದುಃಖಿತರಾಗಿ, ಶ್ರೀಕೃಷ್ಣನೊಡಗೂಡಿ ಅಭಿಮನ್ಯುವಿಗೆ ಬಹಳ ಶ್ರಾದ್ಧ-ದಾನಗಳನ್ನು ನಡೆಸಿದರು.

ನಿವಸತ್ಯತ್ರ ವಿಶ್ವೇಶೇ ಧರ್ಮಪುತ್ರಃ ಕ್ರತೂತ್ತಮಮ್ ।
ಅಶ್ವಮೇಧಮನುಷ್ಠಾತುಂ ನಾವಿಂದದ್ ವಿತ್ತಮಂಜಸಾ ॥

ಶ್ರೀಕೃಷ್ಣನು ದ್ವಾರಕೆಯಲ್ಲಿ ವಾಸಮಾಡುತ್ತಿದ್ದಾಗ ಧರ್ಮರಾಜನು ಅಶ್ವಮೇಧವೆಂಬ ಶ್ರೇಷ್ಠ ಯಾಗವನ್ನು ವೈಭವದಿಂದ ನಡೆಸಲು ಬಯಸಿದನು. ಆದರೆ ಅವಶ್ಯವಾದ ಧನವನ್ನು ಅವನಿಗೆ ಪಡೆಯಲಾಗಲಿಲ್ಲ.

ಹತಶೇಷಾತ್ ಕ್ಷತ್ರಸಂಘಾತ್ ಕರಂ ನೈಚ್ಛದ್ ದಯಾಪರಃ ।
ನ ಚ ಮಧ್ಯಮಕಲ್ಪೇನ ಯಷ್ಟುಂ ತಸ್ಯ ಮನೋಗತಮ್ ॥

ಅಳಿದುಳಿದ ಕ್ಷತ್ರಿಯ ಸಮುದಾಯದಿಂದ ಕಪ್ಪವನ್ನು ಕೊಳ್ಳಲು ದಯಾಪರನಾದ ಧರ್ಮರಾಜನು ಬಯಸಲಿಲ್ಲ. ಗುರುಜನರ ಹಿಂಸೆ ಮಾಡಿಯೂ ಮಧ್ಯಮಕಲ್ಪದಿಂದ ಯಾಗ ಮಾಡುವುದು ಅವನ ಮನಸ್ಸಿಗೆ ಬರಲಿಲ್ಲ.

ವಿಜ್ಞಾಯ ನಿತ್ಯವಿಜ್ಞಾತನಿಖಿಲೋ ಬಾದರಾಯಣಃ ।
ಆವಿರ್ಭೂತೋ ಹಿಮವತಃ ಶೃಂಗಂ ಯತ್ರಾಭಿಸಂಗತಮ್ ॥

ಮೇರುಶೃಂಗೇಣ ಯತ್ರೈವ ವಿಷ್ಣುಃ ಸ್ವಾತ್ಮಾನಮವ್ಯಯಮ್ ।
ಲೋಕಸ್ಯ ಸಂಗ್ರಹಾಯೇಜೇ ಕರ್ಮಬಂಧೋಜ್ಝಿತೋಽಪಿ ಸನ್ ॥

ಶಂಕರಾದ್ಯಾಃ ಸುರಾ ಯತ್ರ ಮರುತ್ತಶ್ಚೇಜಿರೇ ಹರಿಮ್ ।
ದಾನವೋ ವೃಷಪರ್ವಾ ಚ ತತ್ರಾಸ್ತಿ ಧನಮಕ್ಷಯಮ್ ॥

ತಚ್ಛಂಕರಶರೀರಸ್ಥಂ ಜಾಮದಗ್ನ್ಯಂ ಹರಿಂ ಪರಮ್ ।
ಇಷ್ಟ್ವೈವಾನುಜ್ಞಯಾ ತಸ್ಯ ಸ್ವೀಕೃತ್ಯ ಯಜ ತೇನ ಚ ।
ಇತ್ಯಾಹ ವ್ಯಾಸವಾಕ್ಯಾನು ಭೀಮೋऽಪ್ಯಾಹ ನೃಪೋತ್ತಮಮ್ ॥

ಸದಾ ಸರ್ವಜ್ಞರಾದ ಶ್ರೀಬಾದರಾಯಣರು ಇದನ್ನು ತಿಳಿದು ಆವಿರ್ಭೂತರಾದರು. 'ಹಿಮಾಲಯ ಶಿಖರ ಮೇರು ಶಿಖರದೊಂದಿಗೆ ಸೇರುವಲ್ಲಿ ಹಿಂದೆ ವಿಷ್ಣು ಕರ್ಮಬಂಧರಹಿತನಾಗಿದ್ದರೂ ಲೋಕಶಿಕ್ಷಣಕ್ಕಾಗಿ ತನ್ನ ನಾಶರಹಿತ ರೂಪವನ್ನೇ ಯಜ್ಞದಿಂದ ಆರಾಧಿಸಿದನು. ರುದ್ರಾದಿ ದೇವತೆಗಳೂ ಮರುತ್ತರಾಜನೂ ವೃಷಪರ್ವದಾನವನೂ ವಿಷ್ಣುವನ್ನು ಯಜ್ಞದಿಂದ ಆರಾಧಿಸಿದರು. ಅಲ್ಲಿ ಅಕ್ಷಯ ಧನವಿದೆ. ಆದ್ದರಿಂದ ಶಿವಶರೀರಾಂತರ್ಗತನಾದ ಸರ್ವೋತ್ತಮನಾದ ಪರಶುರಾಮ ರೂಪಿ ನಾರಾಯಣನನ್ನು ಯಜ್ಞದಿಂದ ಆರಾಧಿಸಿ, ಅವನ ಅನುಜ್ಞೆಯಿಂದಲೇ ಆ ಧನವನ್ನು ಸ್ವೀಕರಿಸಿ ಅದರಿಂದ ಯಾಗ ಮಾಡು' ಎಂದರು ಬಾದರಾಯಣರು. ಅವರು ಹಾಗೆ ಹೇಳಿದಾಗ ಭೀಮನೂ ಧರ್ಮರಾಜನಿಗೆ ಹಾಗೇ ಹೇಳಿದನು.

ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯೋऽಖಿಲೇಶ್ವರಃ ।
ಸ ಶಂಕರಶರೀರಸ್ಥೋ ಯಜ್ಞೋಚ್ಛಿಷ್ಟಧನಾಧಿಪಃ ॥

'ಸರ್ವೇಶ್ವರನಾದ, ಪರಶುರಾಮರೂಪನಾದ ವಿಷ್ಣುವೇ ಧನಕ್ಕೆ ದೇವತೆ. ಅವನೇ ಶಿವಶರೀರಾಂತರ್ಗತನಾಗಿ ಯಜ್ಞಶೇಷವಾದ ಧನಕ್ಕೆ ಒಡೆಯನಾಗಿರುತ್ತಾನೆ.

ತೇನೈವ ವಿಷ್ಣುನಾ ದತ್ತಮರ್ಜುನಾಯಾಸ್ತ್ರಮುತ್ತಮಮ್ ।
ಕಾರ್ಯಾಣ್ಯನ್ಯಾನಿ ಚಾಸ್ಮಾಕಂ ಕೃತಾನ್ಯೇತೇನ ವಿಷ್ಣುನಾ ॥

ಆ ವಿಷ್ಣುವೇ ಅರ್ಜುನನಿಗೆ ಉತ್ತಮವಾದ ಪಾಶುಪತ ಅಸ್ತ್ರವನ್ನು ಕೊಟ್ಟಿದ್ದಾನೆ. ನಮ್ಮ ಬೇರೆ ಕಾರ್ಯಗಳೂ ಆ ವಿಷ್ಣುವಿನ ಅನುಗ್ರಹದಿಂದಲೇ ಸಾಧಿತವಾಗಿವೆ.

ಸ ಬ್ರಹ್ಮರುದ್ರಶಕ್ರಾದಿಪದದಾತಾऽಖಿಲೇಶ್ವರಃ ।
ಸ್ವತಂತ್ರಃ ಪರತಂತ್ರಾಂಸ್ತಾನಾವರ್ತಯತಿ ಚೇಚ್ಛಯಾ ॥

ಅವನೇ ಬ್ರಹ್ಮ-ರುದ್ರ-ಇಂದ್ರಾದಿಗಳಿಗೆ ಅವರ ಪದವಿಗಳನ್ನು ನೀಡುವವನು. ಸರ್ವೇಶ್ವರ, ಸ್ವತಂತ್ರ. ಪರತಂತ್ರರಾದ ಬ್ರಹ್ಮಾದಿಗಳನ್ನು ಅವನೇ ಸ್ವೇಚ್ಛೆಯಿಂದ ಸಂಸಾರದಲ್ಲಿ ತಿರುಗಿಸುತ್ತಾನೆ.

ಪ್ರಿಯೋಽಸ್ಮಾಕಂ ಪ್ರಿಯಾಸ್ತಸ್ಯ ಸರ್ವದೈವ ವಯಂ ನೃಪ ।
ಅತಸ್ತದಭ್ಯನುಜ್ಞಾತಧನೇನೈವ ಯಜಾಮಹೇ ॥

ಅವನೇ ನಮಗೆ ಸದಾ ಪ್ರಿಯನು. ಅವನಿಗೆ ನಾವು ಸದಾ ಪ್ರಿಯರು. ಅದರಿಂದ ಅವನ ಅನುಮತಿಯಿಂದ ಸಿಗುವ ಹಣದಿಂದಲೇ ನಾವು ಯಜ್ಞ ಮಾಡೋಣ.

ಸೋಽಯಂ ಪಿತಾಮಹೋಽಸ್ಮಾಕಂ ವ್ಯಾಸಸ್ತನ್ನಃ ಪ್ರದಾಸ್ಯತಿ ।
ಇತ್ಯುಕ್ತ್ವಾ ತಂ ಪುರಸ್ಕೃತ್ಯ ಕೃಷ್ಣದ್ವೈಪಾಯನಂ ಯಯುಃ ॥

ಆ ಪರಶುರಾಮರೇ ಇನ್ನೊಂದು ರೂಪದಿಂದ ನಮ್ಮ ತಾತನಾದ ವೇದವ್ಯಾಸರೆನಿಸಿದ್ದಾರೆ. ಅವರೇ ಆ ಸಂಪತ್ತನ್ನು ನಮಗೆ ಕೊಡಿಸುತ್ತಿದ್ದಾರೆ. ಹೀಗೆ ಹೇಳಿಕೊಂಡು ಪಾಂಡವರು ವೇದವ್ಯಾಸರನ್ನು ಮುಂದೆ ಮಾಡಿಕೊಂಡು ಹೋದರು.

ಧನಂ ಕೃಷ್ಣಃ ಸಮಾದಾಯ ಸಮಂತಾಚ್ಛತಯೋಜನಮ್ ।
ದದೌ ತೇಷಾಂ ತೇಽಪಿ ಚೋಹುರ್ಹಸ್ತ್ಯಶ್ವೋಷ್ಟ್ರಶ್ವನರಾದಿಭಿಃ ॥

ವೇದವ್ಯಾಸರು ಸುತ್ತಲೂ ನೂರುಯೋಜನ ಪರಿಮಿತವಾದ ಧನವನ್ನು ತೆಗೆದುಕೊಟ್ಟರು. ಪಾಂಡವರು ಅದನ್ನು ಆನೆ, ಕುದುರೆ, ಒಂಟೆ, ಮನುಷ್ಯರಿಂದ ಹೊರಿಸಿದರು.

ಯುಧಿಷ್ಠಿರಮೃತೇ ಸರ್ವೇ ಭೀಮಸೇನಪುರೋಗಮಾಃ ।
ಯಜ್ಞಾರ್ಥಮೂಹಿರೇ ಭೂರಿಸ್ವರ್ಣಮುದ್ಯದ್ರವಿಪ್ರಭಮ್ ॥

ಧರ್ಮರಾಜನ ಹೊರತು ಭೀಮಸೇನ ಮುಂತಾದವರೆಲ್ಲರೂ ಉದಿಸುವ ಸೂರ್ಯನಂತೆ ಹೊಳೆಯುವ ಬಹಳ ಚಿನ್ನವನ್ನು ಯಜ್ಞಕ್ಕಾಗಿ ಆನೆ ಮುಂತಾದವುಗಳಿಂದ ಹೊರಿಸಿದರು.

ತದೈವ ವಾಸುದೇವೋಽಪಿ ಸಭಾರ್ಯಃ ಸಹ ಭದ್ರಯಾ ।
ಆಗಚ್ಛನ್ ಹಸ್ತಿನಪುರಂ ಪಥ್ಯುದಂಕೇನ ಪೂಜಿತಃ ॥

ಆಗಲೇ ಶ್ರೀಕೃಷ್ಣನೂ ಭಾರ್ಯೆಯರೊಂದಿಗೆ ಮತ್ತು ಸುಭದ್ರೆಯೊಂದಿಗೆ ಹಸ್ತಿನಾಪುರಕ್ಕೆ ಹೊರಟನು. ಬರುತ್ತ ದಾರಿಯಲ್ಲಿ ಪುನಃ ಉದಂಕನಿಂದ ಪೂಜಿತನಾದನು.

ತತ್ಕಾಮವರ್ಷಿಣೋ ಮೇಘಾಂಸ್ತಸ್ಯ ದತ್ತ್ವೋದಕಾರ್ಥಿನಃ ।
ಸಫಲಂ ಸ್ವವರಂ ಕೃತ್ವಾ ಜಗಾಮ ಗಜಸಾಹ್ವಯಮ್ ॥

ಉದಂಕನು ಜಲಾರ್ಥಿಯಾಗಿದ್ದರಿಂದ ಶ್ರೀಕೃಷ್ಣನು ಅವನಿಗೆ ಯಥೇಚ್ಛವಾಗಿ ಮಳೆಗರೆವ ಮೋಡಗಳನ್ನು ಕೊಟ್ಟು, ತನ್ನ ವರವನ್ನು ಸಫಲವನ್ನಾಗಿ ಮಾಡಿ ಹಸ್ತಿನಾಪುರಕ್ಕೆ ತೆರಳಿದನು.

★ ★ ★ ★ ★

ಐವತ್ಮೂರನೆಯ ಅಧ್ಯಾಯ

ಶ್ರೀಕೃಷ್ಣನು ಹಸ್ತಿನಾವತಿಯಿಂದ ದ್ವಾರಕೆಗೆ ತೆರಳುವಾಗ ಮಾರ್ಗಮಧ್ಯದಲ್ಲಿ ಉದಂಕ ಮುನಿಯ ಭೇಟಿಯಾದುದು. ಕೌರವರ ವಿನಾಶವನ್ನು ತಿಳಿದ ಉದಂಕ ಮುನಿಯು ಇದಕ್ಕೆಲ್ಲ ಕೃಷ್ಣನೇ ಕಾರಣನೆಂದು ಶಾಪ ಕೊಡಲು ಹೊರಟಿದುದು. ಅವನನ್ನು ಸಾಂತ್ವನಗೊಳಿಸಲು ತತ್ತ್ವೋಪದೇಶವನ್ನು ಮಾಡಿದುದು.

ವೈಶಂಪಾಯನಃ

ತಥಾ ಪ್ರಯಾಂತಂ ವಾರ್ಷ್ಣೇಯಂ ದ್ವಾರಕಾಂ ಭರತರ್ಷಭಾಃ ।
ಪರಿಷ್ವಜ್ಯ ನ್ಯವರ್ತಂತ ಸಾನುಯಾತ್ರಾಃ ಪರಂತಪಾಃ ॥೧॥

ವೈಶಂಪಾಯನ– ಜನಮೇಜಯನೇ, ದ್ವಾರಕೆಯತ್ತ ಪ್ರಯಾಣ ಬೆಳೆಸಿದ ಕೃಷ್ಣನನ್ನು ಭರತಶ್ರೇಷ್ಠರಾದ, ಶತ್ರುಗಳನ್ನು ಸದೆಬಡಿಯಲು ಸಾಮರ್ಥ್ಯವುಳ್ಳ ಭೀಮಸೇನಾದಿಗಳು ಗಾಢವಾಗಿ ಆಲಿಂಗಿಸಿ, ಬೀಳ್ಕೊಟ್ಟು ತಮ್ಮ ಸೇವಕರೊಡನೆ ಹಸ್ತಿನಾವತಿಗೆ ಮರಳಿದರು.

ಪುನಃ ಪುನಶ್ಚ ವಾರ್ಷ್ಣೇಯಂ ಪರ್ಯಷ್ವಜತ ಫಲ್ಗುನಃ ।
ಆಚಕ್ಷುರ್ವಿಷಯಾದೇನಂ ದದರ್ಶ ಸ ಪುನಃ ಪುನಃ ॥೨॥

ಕೃಷ್ಣನಿಗೆ ಪ್ರಿಯಸಖನಾದ ಅರ್ಜುನನು ವೃಷ್ಣಿಕುಲದ ಅರಸನಾದ ಕೃಷ್ಣನನ್ನು ಪುನಃ ಪುನಃ ಆಲಿಂಗಿಸಿದನು. ಬಳಿಕ ಕಣ್ಣುಗಳಿಗೆ ಎಟುಕುವವರೆಗೂ ಕೃಷ್ಣನನ್ನು ನೋಡುತ್ತಲೇ ಇದ್ದನು.

ಕೃಚ್ಛ್ರೇಣೈವ ಚ ತಾಂ ಪಾರ್ಥೋ ಗೋವಿಂದೇ ವಿನಿವೇಶಿತಾಮ್ ।
ಸಂಜಹಾರ ತತೋ ದೃಷ್ಟಿಂ ಕೃಷ್ಣಶ್ಚಾಪ್ಯಪರಾಜಿತಃ ॥೩॥

ಪ್ರಿಯೋಽಸ್ಮಾಕಂ ಪ್ರಿಯಾಸ್ತಸ್ಯ ಸರ್ವದೈವ ವಯಂ ನೃಪ ।
ಅತಸ್ತದಭ್ಯನುಜ್ಞಾತಧನೇನೈವ ಯಜಾಮಹೇ ॥

ಅವನೇ ನಮಗೆ ಸದಾ ಪ್ರಿಯನು. ಅವನಿಗೆ ನಾವು ಸದಾ ಪ್ರಿಯರು. ಅದರಿಂದ ಅವನ ಅನುಮತಿಯಿಂದ ಸಿಗುವ ಹಣದಿಂದಲೇ ನಾವು ಯಜ್ಞ ಮಾಡೋಣ.

ಸೋಽಯಂ ಪಿತಾಮಹೋಽಸ್ಮಾಕಂ ವ್ಯಾಸಸ್ತನ್ನಃ ಪ್ರದಾಸ್ಯತಿ ।
ಇತ್ಯುಕ್ತ್ವಾ ತಂ ಪುರಸ್ಕೃತ್ಯ ಕೃಷ್ಣದ್ವೈಪಾಯನಂ ಯಯುಃ ॥

ಆ ಪರಶುರಾಮರೇ ಇನ್ನೊಂದು ರೂಪದಿಂದ ನಮ್ಮ ತಾತನಾದ ವೇದವ್ಯಾಸರೆನಿಸಿದ್ದಾರೆ. ಅವರೇ ಆ ಸಂಪತ್ತನ್ನು ನಮಗೆ ಕೊಡಿಸುತ್ತಿದ್ದಾರೆ. ಹೀಗೆ ಹೇಳಿಕೊಂಡು ಪಾಂಡವರು ವೇದವ್ಯಾಸರನ್ನು ಮುಂದೆ ಮಾಡಿಕೊಂಡು ಹೋದರು.

ಧನಂ ಕೃಷ್ಣಃ ಸಮಾದಾಯ ಸಮಂತಾಚ್ಛತಯೋಜನಮ್ ।
ದದೌ ತೇಷಾಂ ತೇಽಪಿ ಚೋಹುರ್ಹಸ್ತ್ಯಶ್ವೋಷ್ಟ್ರಶ್ವನರಾದಿಭಿಃ ॥

ವೇದವ್ಯಾಸರು ಸುತ್ತಲೂ ನೂರುಯೋಜನ ಪರಿಮಿತವಾದ ಧನವನ್ನು ತೆಗೆದುಕೊಟ್ಟರು. ಪಾಂಡವರು ಅದನ್ನು ಆನೆ, ಕುದುರೆ, ಒಂಟೆ, ಮನುಷ್ಯರಿಂದ ಹೊರಿಸಿದರು.

ಯುಧಿಷ್ಠಿರಮೃತೇ ಸರ್ವೇ ಭೀಮಸೇನಪುರೋಗಮಾಃ ।
ಯಜ್ಞಾರ್ಥಮೂಹಿರೇ ಭೂರಿಸ್ವರ್ಣಮುದ್ಯದ್ರವಿಪ್ರಭಮ್ ॥

ಧರ್ಮರಾಜನ ಹೊರತು ಭೀಮಸೇನ ಮುಂತಾದವರೆಲ್ಲರೂ ಉದಿಸುವ ಸೂರ್ಯನಂತೆ ಹೊಳೆಯುವ ಬಹಳ ಚಿನ್ನವನ್ನು ಯಜ್ಞಕ್ಕಾಗಿ ಆನೆ ಮುಂತಾದವುಗಳಿಂದ ಹೊರಿಸಿದರು.

ತದೈವ ವಾಸುದೇವೋಽಪಿ ಸಭಾರ್ಯಃ ಸಹ ಭದ್ರಯಾ ।
ಆಗಚ್ಛನ್ ಹಸ್ತಿನಪುರಂ ಪಥ್ಯುದಂಕೇನ ಪೂಜಿತಃ ॥

ಆಗಲೇ ಶ್ರೀಕೃಷ್ಣನೂ ಭಾರ್ಯೆಯರೊಂದಿಗೆ ಮತ್ತು ಸುಭದ್ರೆಯೊಂದಿಗೆ ಹಸ್ತಿನಾಪುರಕ್ಕೆ ಹೊರಟನು. ಬರುತ್ತ ದಾರಿಯಲ್ಲಿ ಪುನಃ ಉದಂಕನಿಂದ ಪೂಜಿತನಾದನು.

ತತ್ಕಾಮವರ್ಷಿಣೋ ಮೇಘಾಂಸ್ತಸ್ಯ ದತ್ತ್ವೋದಕಾರ್ಥಿನಃ ।
ಸಫಲಂ ಸ್ವವರಂ ಕೃತ್ವಾ ಜಗಾಮ ಗಜಸಾಹ್ವಯಮ್ ॥

ಉದಂಕನು ಜಲಾರ್ಥಿಯಾಗಿದ್ದರಿಂದ ಶ್ರೀಕೃಷ್ಣನು ಅವನಿಗೆ ಯಥೇಚ್ಛವಾಗಿ ಮಳೆಗರೆವ ಮೋಡಗಳನ್ನು ಕೊಟ್ಟು, ತನ್ನ ವರವನ್ನು ಸಫಲವನ್ನಾಗಿ ಮಾಡಿ ಹಸ್ತಿನಾಪುರಕ್ಕೆ ತೆರಳಿದನು.

★ ★ ★ ★ ★

ಐವತ್ತೂರನೆಯ ಅಧ್ಯಾಯ

ಶ್ರೀಕೃಷ್ಣನು ಹಸ್ತಿನಾವತಿಯಿಂದ ದ್ವಾರಕೆಗೆ ತೆರಳುವಾಗ ಮಾರ್ಗಮಧ್ಯದಲ್ಲಿ ಉದಂಕ ಮುನಿಯ ಭೇಟಿಯಾದುದು. ಕೌರವರ ವಿನಾಶವನ್ನು ತಿಳಿದ ಉದಂಕ ಮುನಿಯು ಇದಕ್ಕೆಲ್ಲ ಕೃಷ್ಣನೇ ಕಾರಣನೆಂದು ಶಾಪ ಕೊಡಲು ಹೊರಟಿದುದು. ಅವನನ್ನು ಸಾಂತ್ವನಗೊಳಿಸಲು ತತ್ತ್ವೋಪದೇಶವನ್ನು ಮಾಡಿದುದು.

ವೈಶಂಪಾಯನಃ

ತಥಾ ಪ್ರಯಾಂತಂ ವಾರ್ಷ್ಣೇಯಂ ದ್ವಾರಕಾಂ ಭರತರ್ಷಭಾಃ ।
ಪರಿಷ್ವಜ್ಯ ನ್ಯವರ್ತಂತ ಸಾನುಯಾತ್ರಾಃ ಪರಂತಪಾಃ ॥೧॥

ವೈಶಂಪಾಯನ– ಜನಮೇಜಯನೇ, ದ್ವಾರಕೆಯತ್ತ ಪ್ರಯಾಣ ಬೆಳೆಸಿದ ಕೃಷ್ಣನನ್ನು ಭರತಶ್ರೇಷ್ಠರಾದ, ಶತ್ರುಗಳನ್ನು ಸದೆಬಡಿಯಲು ಸಾಮರ್ಥ್ಯವುಳ್ಳ ಭೀಮಸೇನಾದಿಗಳು ಗಾಢವಾಗಿ ಆಲಿಂಗಿಸಿ, ಬೀಳ್ಕೊಟ್ಟು ತಮ್ಮ ಸೇವಕರೊಡನೆ ಹಸ್ತಿನಾವತಿಗೆ ಮರಳಿದರು.

ಪುನಃ ಪುನಶ್ಚ ವಾರ್ಷ್ಣೇಯಂ ಪರ್ಯಷ್ವಜತ ಫಲ್ಗುನಃ ।
ಆಚಕ್ಷುರ್ವಿಷಯಾದೇನಂ ದದರ್ಶ ಸ ಪುನಃ ಪುನಃ ॥೨॥

ಕೃಷ್ಣನಿಗೆ ಪ್ರಿಯಸಖನಾದ ಅರ್ಜುನನು ವೃಷ್ಣಿಕುಲದ ಅರಸನಾದ ಕೃಷ್ಣನನ್ನು ಪುನಃ ಪುನಃ ಆಲಿಂಗಿಸಿದನು. ಬಳಿಕ ಕಣ್ಣುಗಳಿಗೆ ಎಟುಕುವವರೆಗೂ ಕೃಷ್ಣನನ್ನು ನೋಡುತ್ತಲೇ ಇದ್ದನು.

ಕೃಚ್ಛ್ರೇಣೈವ ಚ ತಾಂ ಪಾರ್ಥೋ ಗೋವಿಂದೇ ವಿನಿವೇಶಿತಾಮ್ ।
ಸಂಜಹಾರ ತತೋ ದೃಷ್ಟಿಂ ಕೃಷ್ಣಶ್ಚಾಪ್ಯಪರಾಜಿತಃ ॥೩॥

ಗೋವಿಂದನಲ್ಲಿಯೇ ದೃಷ್ಟಿಯುಳ್ಳ ಅರ್ಜುನನು ಕೃಷ್ಣನ ರಥವು ದೂರ ಹೋಗುತ್ತಾ ಕಣ್ಮರೆಯಾಗುತ್ತಿರಲು ಅನಿವಾರ್ಯವಾಗಿ ತನ್ನ ದೃಷ್ಟಿಯನ್ನು ಹಿಂಪಡೆದನು. ಅರ್ಜುನನ ವಿಷಯದಲ್ಲಿ ಕೃಷ್ಣನ ಸ್ಥಿತಿಯೂ ಹೀಗೆಯೇ ಇತ್ತು.

ತತ್ರ ಪ್ರಯಾಣೇ ಯಾನ್ಯಾಸನ್ ನಿಮಿತ್ತಾನಿ ಮಹಾತ್ಮನಃ ।
ಬಹೂನ್ಯದ್ಭುತರೂಪಾಣಿ ತಾನಿ ಮೇ ಗದತಃ ಶೃಣು ॥೪॥

ಕೃಷ್ಣನು ತನ್ನ ಪ್ರಯಾಣದ ಸಮಯದಲ್ಲಿ ಅನೇಕ ಶಕುನಗಳನ್ನು ಕಂಡನು. ಅದನ್ನು ಹೇಳುತ್ತೇನೆ, ಕೇಳಿಸಿಕೊ.

ವಾಯುರ್ವೇಗೇನ ಮಹತಾ ರಥಸ್ಯ ಪುರತೋ ವವೌ ।
ಕುರ್ವನ್ ನಿಃಶರ್ಕರಂ ಮಾರ್ಗಂ ವಿರಜಸ್ಕಮಕಂಟಕಮ್ ॥೫॥

ಮಾತರಿಶ್ವನೆನಿಸಿದ ಮುಖ್ಯಪ್ರಾಣನು ಕೃಷ್ಣನು ಸಾಗುವ ಮಾರ್ಗದಲ್ಲಿರುವ ಕಲ್ಲು, ಧೂಳುಗಳನ್ನು ತನ್ನ ವೇಗವಾದ ಗಾಳಿಯ ಮೂಲಕ ಗುಡಿಸುತ್ತಾ, ಕೃಷ್ಣನ ರಥವು ಚಲಿಸುವ ಭೂಶುದ್ಧಿಯನ್ನು ಮಾಡುವಂತೆ ವೇಗವಾಗಿ ಬೀಸುತ್ತಿದ್ದನು.

ವವರ್ಷ ವಾಸವಶ್ಚೈವ ತೋಯಂ ಶುಚಿ ಸುಗಂಧಿ ಚ ।
ದಿವ್ಯಾನಿ ಚೈವ ಪುಷ್ಪಾಣಿ ಪುರತಃ ಶಾರ್ಙ್ಗಧನ್ವನಃ ॥೬॥

ಇಂದ್ರನು ಶುಭ್ರವೂ, ಗಂಧಯುಕ್ತವಾದ ಮಳೆಯ ನೀರನ್ನು, ದಿವ್ಯವಾದ ಪುಷ್ಪಗಳನ್ನು ಕೃಷ್ಣನ ರಥದ ಮುಂಭಾಗಗಳಲ್ಲಿ ಸುರಿಸುತ್ತಿದ್ದನು.

ಸಂಪ್ರಯಾತೋ ಮಹಾಬಾಹುಃ ಸಮೇಷು ಮರುಧನ್ವಸು ।
ಆಗಚ್ಛಂತಮಪಶ್ಯದ್ವೈ ಉದಂಕಂ ನಾಮ ನಾಮತಃ ॥೭॥

ಶ್ರೀಕೃಷ್ಣನು ಹೀಗೆ ದ್ವಾರಕೆಯನ್ನು ಕುರಿತು ಪ್ರಯಾಣಿಸುವಾಗ ಸಮದಟ್ಟಾದ ನೆಲದಲ್ಲಿಯೂ, ಮರುಭೂಮಿಯಲ್ಲಿಯೂ ಪ್ರಯಾಣವು ಆರಂಭವಾಯಿತು. ಅಲ್ಲಿ ಮಹಾತೇಜಸ್ವಿಯಾದ, ಮುನಿಶ್ರೇಷ್ಠನಾದ ಉದಂಕನನ್ನು ನೋಡಿದನು.

ಮಹರ್ಷಿಂ ಸಿದ್ಧತಪಸಂ ತ್ರಿಷು ಲೋಕೇಷು ವಿಶ್ರುತಮ್ ।
ಸ ತಂ ಸಂಪೂಜ್ಯ ತೇಜಸ್ವೀ ಮುನಿಂ ಕಮಲಲೋಚನಃ ॥೮॥

ಮಹರ್ಷಿಯಾದ ಉದಂಕನನ್ನು ವಿಶಾಲಾಕ್ಷನಾದ, ತೇಜಸ್ವಿಯಾದ ಕೃಷ್ಣನು ಯೋಗ್ಯವಾಗಿ ಸತ್ಕರಿಸಿದನು. ಅದಕ್ಕೆ ಪ್ರತಿಯಾಗಿ ಉದಂಕನು ಕೃಷ್ಣನನ್ನು ಯಥಾಯೋಗ್ಯವಾಗಿ ಗೌರವಿಸಿದನು.

ಪೂಜಿತಸ್ತೇನ ಚ ತದಾ ಪರ್ಯಪೃಚ್ಛದನಾಮಯಮ್ ॥೯॥

ಪೂಜಿತನಾದ ಶ್ರೀಕೃಷ್ಣನು ಉದಂಕನ ಯೋಗಕ್ಷೇಮವನ್ನು ವಿಚಾರಿಸಿದನು.

ಸ ಪೃಷ್ಟಃ ಕುಶಲಂ ತೇನ ಸಂಪೂಜ್ಯ ಮಧುಸೂದನಮ್ ।
ಉದಂಕೋ ಬ್ರಾಹ್ಮಣಶ್ರೇಷ್ಠಃ ತತಃ ಪಪ್ರಚ್ಛ ಮಾಧವಮ್ ॥೧೦॥

ಕುಶಲಪ್ರಶ್ನೆಯನ್ನು ಕೇಳಿದ ಮಧುಸೂದನನಿಗೆ ಬ್ರಾಹ್ಮಣಶ್ರೇಷ್ಠನಾದ ಉದಂಕನು ಸತ್ಕರಿಸಿ ಪ್ರಶ್ನಿಸಿದನು.

ಉದಂಕಃ

ಕಚ್ಚಿಚ್ಛೌರೇ ತ್ವಯಾ ಗತ್ವಾ ಕುರುಪಾಂಡವಸದ್ಮ ತತ್ ।
ಕೃತಂ ಸೌಭ್ರಾತ್ರಮಮಲಂ ತನ್ಮೇ ವ್ಯಾಖ್ಯಾತುಮರ್ಹಸಿ ॥೧೧॥

ಉದಂಕ– ಶ್ರೀಕೃಷ್ಣನೇ, ನೀನು ಕೌರವರು ಮತ್ತು ಪಾಂಡವರ ಮನೆಗಳಿಗೆ ಹೋಗಿ, ಪರಸ್ಪರ ಭ್ರಾತೃತ್ವದ ಪ್ರೀತಿಯು ಹುಟ್ಟುವಂತೆ ಅವರನ್ನು ಕುರಿತು ಉಪದೇಶಿಸಿ ಸಂಬಂಧವನ್ನು ಏರ್ಪಡಿಸಿದೆಯಾ? ನೀನು ಮಾಡಿದ ಈ ಸತ್ಕರ್ಮದ ಬಗ್ಗೆ ವಿಸ್ತಾರವಾಗಿ ಹೇಳು.

ಅಪಿ ಸಂಧಾಯ ತಾನ್ ವೀರಾನ್ ಉಪಾವೃತ್ತೋಽಸಿ ಕೇಶವ ।
ಸಂಬಂಧಿನಃ ಸುದಯಿತಾನ್ ಸತತಂ ವೃಷ್ಣಿಪುಂಗವ ॥೧೨॥

ಕೇಶವನೇ, ನಿನಗೆ ಸಂಬಂಧಿಗಳೂ, ಪ್ರೀತಿಪಾತ್ರರೂ ಆಗಿರುವ ಕೌರವ-ಪಾಂಡವರಲ್ಲಿ ಸಂಧಾನವನ್ನು ಏರ್ಪಡಿಸಿ ದ್ವಾರಕೆಗೆ ತೆರಳುತ್ತಿರುವೆಯಾ?

ಕಚ್ಚಿತ್ ಪಾಂಡುಸುತಾಃ ಪಂಚ ಧೃತರಾಷ್ಟ್ರಸ್ಯ ಚಾತ್ಮಜಾಃ ।
ಲೋಕೇಷು ವಿಹರಿಷ್ಯಂತಿ ತ್ವಯಾ ಸಹ ಪರಂತಪಾಃ ॥೧೩॥

ಐದು ಜನ ಪಾಂಡವರು ಧೃತರಾಷ್ಟ್ರನ ನೂರು ಜನ ಮಕ್ಕಳು ಒಟ್ಟಾಗಿ ಸೇರಿ ನಿನ್ನ ಜೊತೆಗೆ ಸುಖ-ಸಂತೋಷದಿಂದ ಲೋಕದಲ್ಲಿ ವಿಹರಿಸುತ್ತಿರುವರಾ?

ಸ್ವರಾಷ್ಟ್ರೇಷು ಚ ರಾಜಾನಃ ಕಚ್ಚಿತ್ ಪ್ರಾಪ್ಸ್ಯಂತಿ ವೈ ಸುಖಮ್ ।
ಕೌರವೇಷು ಪ್ರಶಾಂತೇಷು ತ್ವಯಾ ನಾಥೇನ ಮಾಧವ ॥೧೪॥

ಎಲ್ಲರಿಗೂ ಸ್ವಾಮಿಯಾದ ನೀನು ಕೌರವರಿಗೂ-ಪಾಂಡವರಿಗೂ ಸಂಧಾನ ಏರ್ಪಡಿಸಿದ ಬಳಿಕ ರಾಜರೆಲ್ಲರೂ ಸಂತುಷ್ಟರಾಗಿ ತಮ್ಮ ತಮ್ಮ ರಾಜ್ಯಗಳಲ್ಲಿ ಸುಖದಿಂದ ಇದ್ದಾರಷ್ಟೆ?

ಯಾ ಮೇ ಸಂಭಾವನಾ ತಾತ ತ್ವಯಿ ನಿತ್ಯಮವರ್ತತ ।
ಅಪಿ ಸಾ ಸಫಲಾ ಕೃಷ್ಣ ಕೃತಾ ತೇ ಭಾರತಾನ್ ಪ್ರತಿ ॥೧೫॥

ಕೃಷ್ಣನೇ, ನೀನು ಅವರಿಬ್ಬರಿಗೆ ಶಾಂತಿ-ಸಂಧಾನವನ್ನು ಏರ್ಪಡಿಸುತ್ತಿ ಎಂಬ ಊಹೆಯನ್ನು ನಾನು ಎಂದೋ ಮಾಡಿಕೊಂಡಿದ್ದೆನು. ಕಾರಣ ಕೌರವ-ಪಾಂಡವರ ವಿಷಯದಲ್ಲಿ, ಅವರ ವಂಶದಲ್ಲಿ ನಿನಗೆ ಪರಿಪೂರ್ಣವಾದ ಕೃಪೆ ಇದೆ. ಆದ್ದರಿಂದ ನಿನ್ನ ಸಂಧಾನವು ಫಲಿಸಿದೆ ಎಂದು ಭಾವಿಸುತ್ತೇನೆ.

ಶ್ರೀಭಗವಾನ್

ಕೃತೋ ಯತ್ನೋ ಮಯಾ ಬ್ರಹ್ಮನ್ ಸೌಶಾಮ್ಯೇ ಕೌರವಾನ್ ಪ್ರತಿ ।
ನ ಚಾಶಕ್ಯಂತ ಸಂಧಾತುಮಧರ್ಮರುಚಯೋ ಮಯಾ ॥೧೬॥

ಶ್ರೀಭಗವಾನ್– ಮಹಾಮುನಿಯೇ, ನೀನು ಹೇಳಿದಂತೆ ಕೌರವರ ಬಳಿ ಸಾಗಿ ಮಹಾಸಂಧಾನವನ್ನು ಏರ್ಪಡಿಸಲು ಬಹಳವಾಗಿಯೇ ನಾನು ಪ್ರಯತ್ನಿಸಿದೆನು. ಆದರೆ ಯಾವುದೇ ವಿಧಾನದಿಂದಲೂ ಅವರನ್ನು ಸಂಧಿಗೆ ಒಪ್ಪಿಸಲು ನನ್ನಿಂದ ಸಾಧ್ಯವಾಗಲಿಲ್ಲ.

ತತಸ್ತೇ ನಿಧನಂ ಪ್ರಾಪ್ತಾಃ ಸರ್ವೇ ಸಸುತಬಾಂಧವಾಃ ॥೧೭॥

ಸಂಧಾನಕ್ಕೆ ಒಪ್ಪಿಕೊಳ್ಳದ ಕೌರವರೆಲ್ಲರೂ ಪುತ್ರ-ಮಿತ್ರ-ಬಂಧುಗಳಿಂದ ಸಹಿತರಾಗಿ ಯುದ್ಧಭೂಮಿಯಲ್ಲಿ ನಿಧನ ಹೊಂದಿದರು.

ನ ದಿಷ್ಟಮಪ್ಯತಿಕ್ರಾಂತುಂ ಶಕ್ಯಂ ಬುದ್ಧ್ಯಾ ಬಲೇನ ವಾ ।
ಮಹರ್ಷೇ ವಿದಿತಂ ನೂನಂ ಸರ್ವಮೇತತ್ ತವಾನಘ ॥೧೮॥

ಉದಂಕರೇ, ವಿಧಿನಿಯಮವನ್ನು ಬುದ್ಧಿಯಿಂದಲಾಗಲಿ, ಬಲದಿಂದಲಾಗಲಿ ಅತಿಕ್ರಮಿಸಲಾಗದು. ಇದೆಲ್ಲವೂ ಜ್ಞಾನಿಗಳಾದ ನಿಮ್ಮಿಂದ ತಿಳಿಯಲ್ಪಟ್ಟಿದೆಯಷ್ಟೆ?

ಅತ್ಯಕ್ರಾಮನ್ ವಚೋ ಮಹ್ಯಂ ಭೀಷ್ಮಸ್ಯ ವಿದುರಸ್ಯ ಚ ।
ತತೋ ಯಮಕ್ಷಯಂ ಜಗ್ಮುಃ ಸಮಾಸಾದ್ಯೇತರೇತರಮ್ ॥೧೯॥

ಕೌರವರು ನನ್ನ, ಭೀಷ್ಮರ, ವಿದುರನ ನೀತಿಮಾತುಗಳನ್ನು ತಿರಸ್ಕರಿಸಿದರೆಂಬುದನ್ನು ನೀನೂ ಚೆನ್ನಾಗಿ ತಿಳಿದುಕೊಂಡಿರುವೆ. ಆದ್ದರಿಂದ ಅವರೆಲ್ಲರೂ ಪರಸ್ಪರ ಹೊಡೆದಾಡಿ ಯಮನ ಸದನವನ್ನು ಸೇರಿದ್ದಾರೆ.

ಪಂಚೈವ ಪಾಂಡವಾಃ ಶಿಷ್ಟಾ ಹತಾಮಿತ್ರಾ ಹತಾತ್ಮಜಾಃ ।
ಧಾರ್ತರಾಷ್ಟ್ರಾಶ್ಚ ನಿಹತಾಃ ಸರ್ವೇ ಸಸುತಬಾಂಧವಾಃ ॥೨೦॥

ಈಗ ಉಳಿದವರು ಐವರು ಪಾಂಡವರು ಮಾತ್ರ. ಧೃತರಾಷ್ಟ್ರನ ಮಕ್ಕಳೆಲ್ಲರೂ ಪುತ್ರ ಮತ್ತು ಬಂಧುಗಳಿಂದ ಸಹಿತರಾಗಿ ಮರಣ ಹೊಂದಿದ್ದಾರೆ.

ವೈಶಂಪಾಯನಃ

ಇತ್ಯುಕ್ತವಚನೇ ಕೃಷ್ಣೇ ಭೃಶಂ ಕ್ರೋಧಸಮನ್ವಿತಃ ।
ಉದಂಕಃ ಪ್ರತ್ಯುವಾಚೇದಂ ಕ್ರೋಧಾದುದ್ವೃತ್ಯ ಲೋಚನೇ ॥೨೧॥

ವೈಶಂಪಾಯನ– ಶ್ರೀಕೃಷ್ಣನು ಹೀಗೆ ಹೇಳುತ್ತಿರುವಾಗಲೇ ಕೋಪಾವಿಷ್ಟರಾದ ಉದಂಕರು ಕೋಪದಿಂದ ಕಣ್ಣನ್ನು ಅರಳಿಸಿ, ಕೆರಳಿದ ಕಣ್ಣಿನಿಂದಲೇ ಕೃಷ್ಣನನ್ನು ಕುರಿತು ಹೇಳುತ್ತಾರೆ.

ಉದಂಕಃ

ಯಸ್ಮಾಚ್ಚಕ್ತೇನ ತೇ ಕೃಷ್ಣ ನ ತ್ರಾತಾಃ ಕುರುಪಾಂಡವಾಃ ।
ಸಂಬಂಧಿನಃ ಪ್ರಿಯಾಸ್ತಸ್ಮಾತ್ ಶಪ್ಸ್ಯೇಹಂ ತ್ವಾಂ ನ ಸಂಶಯಃ ॥೨೨॥

ಉದಂಕ– ಸರ್ವಶಕ್ತನಾದ ಶ್ರೀಕೃಷ್ಣನೇ, ನೀನು ಸಂಬಂಧಿಗಳೂ, ಪ್ರೀತಿಪಾತ್ರರೂ ಆಗಿರುವ ಕೌರವಶ್ರೇಷ್ಠರನ್ನು ಏಕೆ ರಕ್ಷಿಸಲಿಲ್ಲ? ಇದರಿಂದ ಕ್ರುದ್ಧನಾದ ನಾನು ನಿನ್ನನ್ನೇ ಶಪಿಸುತ್ತೇನೆ, ಸಂಶಯವೇ ಬೇಡ.

ನ ಚ ವೈ ಪ್ರಸಭಂ ಯಸ್ಮಾತ್ ತೇ ನಿಗೃಹ್ಯ ನಿವರ್ತಿತಾಃ ।
ತಸ್ಮಾನ್ಮಮ್ಯುಪರೀತಸ್ತಾ ತ್ವಂ ಶಪ್ಸ್ಯಮಿ ಮಧುಸೂದನ ॥೨೩॥

ಮಧುಸೂದನನೇ, ಮಾತು ಕೇಳದಿದ್ದ ಕೌರವರನ್ನು ಬಲಾತ್ಕರಿಸಿಯಾದರೂ ತಡೆಯಬಹುದಾಗಿತ್ತು. ವಿನಾಶದಿಂದ ರಕ್ಷಿಸಬಹುದಾಗಿತ್ತು. ಆದರೆ ನೀನು ಹಾಗೆ ಮಾಡಲಿಲ್ಲ. ಇದರಿಂದ ಕ್ರುದ್ಧನಾದ ನಾನು ನಿನ್ನನ್ನು ಶಪಿಸುತ್ತೇನೆ.

ತ್ವಯಾ ಶಕ್ತೇನ ಹಿ ಸತಾ ಮಿಥ್ಯಾಚಾರೇಣ ಮಾಧವ ।
ಪ್ರಮಾಪಿತಾಃ ಕುರುಶ್ರೇಷ್ಠಾ ಯತ್ ತ್ವಯಾ ಸಮುಪೇಕ್ಷಿತಾಃ ॥೨೪॥

ಮಾಧವನೇ, ನೀನು ಯುದ್ಧವನ್ನು ತಡೆಯುವ ಸಾಮರ್ಥ್ಯವುಳ್ಳವನು. ಕ್ರೋಧ ವಶರಾಗಿರುವ ಕೌರವರು ಪರಸ್ಪರವಾಗಿ ಯುದ್ಧ ಮಾಡಿ ಸಾಯುತ್ತಿದ್ದರೂ ಕಪಟ ಬುದ್ಧಿಯಿಂದ ನೀನು ಅವರು ಸಾಯಲೆಂದು ರಕ್ಷಿಸಲು ಉಪೇಕ್ಷಿಸಿದೆ.

ಶ್ರೀಭಗವಾನ್

ಶೃಣು ಮೇ ವಿಸ್ತರೇಣೇದಂ ಯದ್ ವಕ್ಷ್ಯೇ ಭೃಗುನಂದನ ।
ಗೃಹಾಣಾನುನಯಂ ಚೈವ ತಪಸ್ವೀ ಹ್ಯಸಿ ಭಾರ್ಗವ ॥೨೫॥

ಶ್ರೀಭಗವಾನ್– ಭಾರ್ಗವನೇ, ನೀನು ತಪಸ್ವಿಯಾಗಿರುವಿ. ಕ್ರೋಧವಶನಾಗಬೇಡ. ನಾನು ಹೇಳುವ ವಿಷಯವನ್ನು ಸಮಾಧಾನಚಿತ್ತದಿಂದ ಪೂರ್ಣವಾಗಿ ಕೇಳಿಸಿಕೊ. ನನ್ನ ಪ್ರಾರ್ಥನೆಯನ್ನು ಸ್ವೀಕರಿಸು.

ಶ್ರುತ್ವಾ ತು ಮೇ ತದಧ್ಯಾತ್ಮಂ ಮುಂಚೇಥಾಃ ಶಾಪಮದ್ಯ ವೈ ।
ನ ಚ ಮಾಂ ತಪಸಾऽಲ್ಪೇನ ಶಕ್ನೋತಿ ಶಪಿತುಂ ಭವಾನ್ ॥೨೬॥

ನನ್ನಿಂದ ಅಧ್ಯಾತ್ಮ ಗೀತೆಯನ್ನು ಕೇಳಿಸಿಕೊಂಡ ನೀನು ಶಾಪವನ್ನು ಕೊಡಲು ಮುಂದಾಗುವುದಿಲ್ಲ. ಕೇಳಿಸಿಕೊಂಡ ಬಳಿಕ ಶಾಪ ಕೊಡುವುದು ಯೋಗ್ಯವಾಗಿದೆ. ಯಾವ ಮನುಷ್ಯನೇ ಆಗಲಿ, ತನ್ನ ಅಲ್ಪತಪಸ್ಸಿನಿಂದ ನನ್ನನ್ನು ಶಪಿಸಲಾರನು.

ನ ಚ ತೇ ತಪಸೋ ನಾಶಮಿಚ್ಛಾಮಿ ತಪತಾಂ ವರ ।
ತಪಸ್ತೇ ಸುಮಹತ್ ತಪ್ತಂ ಗುರವಶ್ಚಾಪಿ ತೋಷಿತಾಃ ॥೨೭॥

ನಿನ್ನ ತಪಸ್ಸು ವ್ಯರ್ಥವಾಗಿ ನಾಶವಾಗುವುದನ್ನು ನಾನು ಇಚ್ಛಿಸುವುದಿಲ್ಲ. ಅತ್ಯಂತ ತೇಜೋವಿಶಿಷ್ಟವಾದ ತಪಸ್ಸನ್ನು ಮಾಡಿರುವೆ. ನೀನು ಗುರುಜನರನ್ನು ಸೇವಿಸಿ, ಅವರ ಪ್ರೀತಿಗೆ ಪಾತ್ರನಾಗಿರುವೆ.

ಕೌಮಾರಂ ಬ್ರಹ್ಮಚರ್ಯಂ ತೇ ಜಾನಾಮಿ ದ್ವಿಜಸತ್ತಮ ।
ದುಃಖಾರ್ಜಿತಸ್ಯ ತಪಸಃ ತಸ್ಯಾನ್ನೇಚ್ಛಾಮಿ ತೇ ವ್ಯಯಮ್ ॥೨೮॥

ಬಾಲ್ಯಾವಸ್ಥೆಯಿಂದಲೇ ಬ್ರಹ್ಮಚರ್ಯನಿಷ್ಠನಾಗಿ ನೀನು ಸಿದ್ಧಿಸಿಕೊಂಡಿರುವ ತಪಸ್ಸಿನ ಬಗ್ಗೆ ನಾನು ಅರಿತಿರುವೆ. ಆದ್ದರಿಂದಲೇ ಕಷ್ಟದಿಂದ ಸಂಪಾದಿಸಿದ ನಿನ್ನ ತಪಸ್ಸಿನ ಫಲವು ನನಗೆ ಶಾಪ ಕೊಡುವ ಮೂಲಕ ನಾಶವಾಗಬಾರದು ಎಂದು ಬಯಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಉದಂಕದರ್ಶನಂ ನಾಮ ತ್ರಿಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ನಾಲ್ಕನೆಯ ಅಧ್ಯಾಯ

ಕೃಷ್ಣನು ಉದಂಕರನ್ನು ಕುರಿತು ತನ್ನ ಮಹಿಮೆಯನ್ನು ಹೇಳುವ ಮೂಲಕ ಕೌರವರ ನಾಶಕ್ಕೆ ಕಾರಣವಾದುದು ಕೃಷ್ಣನ ಮಾತಿನ ಉಲ್ಲಂಘನೆ. ಸ್ವಯಂಕೃತ ಅಪರಾಧದಿಂದ ಮರಣೋನ್ಮುಖರಾಗಿದ್ದಾರೆ ಎಂದು ತಿಳಿಸಿದುದು.

ಉದಂಕಃ

ಬ್ರೂಹಿ ಕೇಶವ ತತ್ತ್ವೇನ ತ್ವಂ ಮೇऽಧ್ಯಾತ್ಮಮನಿಂದಿತಮ್ ।
ಶ್ರುತ್ವಾ ಶ್ರೇಯೋ ವಿಧಾಸ್ಯಾಮಿ ನ ಶಾಪಂ ತೇ ಜನಾರ್ದನ ॥೧॥

ಉದಂಕ– ಕೇಶವನೇ, ಜನಾರ್ದನನೇ, ನೀನು ನನ್ನನ್ನು ಉದ್ದೇಶಿಸಿ ನಿರ್ದುಷ್ಟವಾದ ಅಧ್ಯಾತ್ಮ ತತ್ತ್ವವನ್ನು ಉಪದೇಶಿಸು. ಅದನ್ನು ಕೇಳಿದ ಬಳಿಕ ಯೋಗ್ಯವೆನಿಸಿದಲ್ಲಿ ನಿನ್ನ ಕಲ್ಯಾಣಕ್ಕೆ ಶ್ರೇಯಸ್ಸಿನ ಮಾತುಗಳನ್ನಾದರೂ ಆಡುತ್ತೇನೆ, ಶಾಪವನ್ನು ನೀಡುವುದಿಲ್ಲ.

ಶ್ರೀಭಗವಾನ್

ತಮೋ ರಜಶ್ಚ ಸತ್ವಂ ಚ ವಿದ್ಧಿ ಭಾವಾನ್ ಮದಾಶ್ರಯಾನ್ ।
ಸ್ಥಿತಿಸೃಷ್ಟಿಲಯಾಧ್ಯಕ್ಷೋ ವಿಷ್ಣುಬ್ರಹ್ಮೇಶಸಂಜ್ಞಿತಃ ॥೨॥

ಶ್ರೀಭಗವಾನ್– ವಿಪ್ರಶ್ರೇಷ್ಠನೇ, ತಮೋಗುಣ, ರಜೋಗುಣ, ಸತ್ತ್ವಗುಣಗಳು ನನ್ನನ್ನು ಆಶ್ರಯಿಸಿಕೊಂಡಿವೆ ಎಂದು ತಿಳಿದುಕೊ. ಸ್ಥಿತಿ-ಸೃಷ್ಟಿ-ಲಯಗಳಿಗೆ ವಿಷ್ಣು-ಬ್ರಹ್ಮ-ರುದ್ರ ಎನ್ನುವ ಹೆಸರಿನಿಂದ ನಾನೇ ನಿಯಾಮಕನಾಗಿದ್ದೇನೆ.

ಕದಾಚಿತ್ ತಮಸಾ ರುದ್ರೋ ವಿಷ್ಣುಃ ಸತ್ವಗುಣೇ ಸ್ಥಿತಃ ।
ರಜಸ್ಯಪಿ ತಥಾ ಬ್ರಹ್ಮಾ ಸ್ವಗುಣಾನ್ಯಗುಣಾವುಭೌ ॥೩॥

ಕೆಲವೊಮ್ಮೆ ತಮೋಗುಣದ ಕಾರ್ಯವನ್ನು ರುದ್ರ ನಡೆಸುತ್ತಾನೆ. ಆಗ ಅವನಲ್ಲಿ ರುದ್ರ ಎಂಬ ಹೆಸರಿನಲ್ಲಿ ನಿಂತು ಜಗತ್ತಿನ ಲಯವನ್ನು ಮಾಡುತ್ತೇನೆ. ನಾನು ಸ್ವಯಂ ಸತ್ವಗುಣದಲ್ಲಿ ಸನ್ನಿಹಿತನಾಗಿ ಪಾಲನೆಯಲ್ಲಿ ನಿರತನಾಗಿದ್ದೇನೆ. ರಜೋಗುಣದಲ್ಲಿ ಬ್ರಹ್ಮನನ್ನು ನಿಯೋಜಿಸಿ, ನಾನೇ ಸೃಷ್ಟಿಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಹೀಗೆ ಇತರರಲ್ಲಿರುವ ಗುಣಗಳಿಗೂ, ನನ್ನ ಗುಣಗಳಿಗೂ ನಾನೇ ನಿಯಾಮಕನಾಗಿದ್ದೇನೆ.

ಪ್ರಣವಾತ್ಮಾ ಚ ಶಬ್ದಾದಿ ತ್ರಿಗುಣಾತ್ಮಾ ಚರಾಚರಮ್ ।
ತಥಾ ರುದ್ರಾನ್ ವಸೂನ್ ವಾऽಪಿ ವಿದ್ಧಿ ಮತ್ಪ್ರಭವಾನ್ ದ್ವಿಜ ॥೪॥

ಮೂರು ಗುಣಗಳಿಂದ ಸಮಸ್ತ ಚರಾಚರ ಪ್ರಪಂಚವನ್ನು, ಪ್ರಣವಸ್ವರೂಪಿಯಾದ ನಾನು ಶಬ್ದಾದಿ ತನ್ಮಾತ್ರಗಳ ಮೂಲಕ ನಿಯಮಿಸುತ್ತಿದ್ದೇನೆ. ಅದರಂತೆ ರುದ್ರರನ್ನೂ, ವಸುದೇವತೆಗಳನ್ನೂ ನನ್ನ ಪ್ರಭಾವದಿಂದಲೇ ಹುಟ್ಟಿದವರೆಂದು ತಿಳಿದುಕೊ.

ಮಯಿ ಸರ್ವಾಣಿ ಭೂತಾನಿ ಸರ್ವಭೂತೇಷು ಚಾಪ್ಯಹಮ್ ।
ಸ್ಥಿತ ಇತ್ಯಭಿಜಾನೀಹಿ ಮಾ ತೇ ಭೂದತ್ರ ಸಂಶಯಃ ॥೫॥

ಎಲ್ಲ ಪ್ರಾಣಿಗಳು ನನ್ನನ್ನೇ ಆಶ್ರಯಿಸಿಕೊಂಡಿವೆ. ಎಲ್ಲ ಪ್ರಾಣಿಗಳಿಗೂ ನಾನೇ ಅಂತರ್ಯಾಮಿಯಾಗಿದ್ದೇನೆ. ಈ ವಿಷಯವನ್ನು ಚೆನ್ನಾಗಿ ಮನನ ಮಾಡಿಕೊ. ಯಾವ ಸಂಶಯವೂ ಬೇಡ.

ತಥಾ ದೈತ್ಯಗಣಾನ್ ಸರ್ವಾನ್ ಯಕ್ಷಗಂಧರ್ವರಾಕ್ಷಸಾನ್ ।
ವಿಬುಧಾಪ್ಸರಸಶ್ಚೈವ ವಿದ್ಧಿ ಮತ್ಪ್ರಭವಾನ್ ದ್ವಿಜ ॥೬॥

ದ್ವಿಜಶ್ರೇಷ್ಠನೇ, ದೈತ್ಯರು, ಯಕ್ಷ-ಗಂಧರ್ವರು, ರಾಕ್ಷಸರು, ನಾಗಗಳು, ಅಪ್ಸರೆಯರು ಇವರೆಲ್ಲರೂ ನನ್ನಿಂದಲೇ ಉತ್ಪನ್ನರಾಗಿದ್ದಾರೆಂದು ತಿಳಿ.

ಸದಸಚ್ಚೈವ ಯತ್ ಪ್ರಾಹುರವ್ಯಕ್ತಂ ವ್ಯಕ್ತಮೇವ ಚ ।
ಅಕ್ಷರಂ ಚ ಕ್ಷರಂ ಚೈವ ಸರ್ವಮೇತನ್ಮದಾಶ್ರಯಮ್ ॥೭॥

ಜ್ಞಾನಿಗಳು ಸತ್-ಅಸತ್ ಎಂದು ಹೇಳುವ, ವ್ಯಕ್ತ-ಅವ್ಯಕ್ತ ಎಂದು ಹೇಳುವ, ಕ್ಷರ-ಅಕ್ಷರ ಎಂದು ಹೇಳುವ ಈ ಎಲ್ಲವೂ ನನ್ನನ್ನೇ ಆಶ್ರಯಿಸಿಕೊಂಡಿವೆ.

ಯೇ ಚಾಶ್ರಮೇಷು ವೈ ಧರ್ಮಾಶ್ಚತುರ್ಷು ವಿಹಿತಾ ಮುನೇ ।
ದೈವತಾನಿ ಚ ಕರ್ಮಾಣಿ ವಿದ್ಧಿ ಸರ್ವಾನ್ ಗುಣಾತ್ಮಕಾನ್ ॥೮॥

ಮುನಿಶ್ರೇಷ್ಠನೇ, ಜಗತ್ತಿನಲ್ಲಿ ಪ್ರಸಿದ್ಧಗಳಾದ ನಾಲ್ಕು ಆಶ್ರಮಗಳಲ್ಲಿ ನಾಲ್ಕು ಯಾವ ಧರ್ಮಗಳಿವೆಯೋ ವೇದೋಕ್ತ ಕರ್ಮಗಳಿವೆಯೋ ಅವೆಲ್ಲವೂ ನನ್ನನ್ನೇ ಆಶ್ರಯಿಸಿಕೊಂಡಿವೆ ಎಂದು ತಿಳಿ.

ಅಸಚ್ಚ ಸಚ್ಚೈವ ಚ ಯದ್ ವಿಶ್ವಂ ಸದಸತಃ ಪರಮ್ ।
ತತಃ ಪರತರಂ ನಾಸ್ತಿ ದೇವದೇವಾತ್ ಸನಾತನಾತ್ ॥೯॥

ಅಸತ್, ಸತ್ ಮತ್ತು ಸದಸತ್, ಇದಕ್ಕಿಂತಲೂ ಆಚೆ ಇರುವ ಜಗತ್ತು - ಈ ಎಲ್ಲದಕ್ಕೂ ನಾನೇ ನಿಯಾಮಕನಾಗಿದ್ದೇನೆ. ಇದಕ್ಕಿಂತ ಅತಿರಿಕ್ತವಾದುದು ಯಾವುದೂ ಇರುವುದಿಲ್ಲ. ದೇವದೇವನೆನಿಸಿದ ಪರತರ ವಸ್ತುವು ನಾನೇ.

ಓಂಕಾರಪ್ರಭವಾನ್ ವೇದಾನ್ ವಿದ್ಧಿ ಮಾ ತ್ವಂ ಭೃಗೂದ್ವಹ ।
ತಥೈವ ಯೂಪಂ ಸೋಮಂ ಚ ತ್ರಿದಶಾಪ್ಯಾಯನಂ ಮಖೇ ॥೧೦॥

ಹೋತಾರಮಪಿ ಹವ್ಯಂ ಚ ವಿದ್ಧಿ ಮಾಂ ಭೃಗುನಂದನ ।
ಅಧ್ವರ್ಯುಃ ಕಲ್ಪಕೃಚ್ಚಾಪಿ ಹವಿಃ ಪರಮಸಂಸ್ಕೃತಮ್ ॥೧೧॥

ಭೃಗುಶ್ರೇಷ್ಠನೇ, ಓಂಕಾರದಿಂದ ಉತ್ಪತ್ತಿಯನ್ನು ಪಡೆದ ವೇದಗಳು ನನ್ನನ್ನೇ ಬೋಧಿಸುತ್ತಿವೆ ಎಂದು ತಿಳಿ. ಯಜ್ಞದಲ್ಲಿರುವ ಯೂಪ, ಸೋಮ, ಚರು, ದೇವತೆಗಳಿಗೆ ತೃಪ್ತಿಯನ್ನುಂಟು ಮಾಡುವ ಹೋಮ-ಹವನ-ಸಾಮಗ್ರಿ-ಅಧ್ವರ್ಯು-ನಿರ್ಮಾಪಕ-ಶ್ರೇಷ್ಠವಾದ ಸಂಸ್ಕೃತ ಹವಿಸ್ಸು ಇವೆಲ್ಲವೂ ನನ್ನ ಸನ್ನಿಧಾನವನ್ನು ಹೊಂದಿವೆ ಎಂದು ತಿಳಿ.

ಉದ್ಗಾತಾ ಚಾಪಿ ಮಾಂ ಸ್ತೌತಿ ಗೀತಘೋಷೈರ್ಮಹಾಧ್ವರೇ ॥೧೨॥

ಉಚ್ಚಸ್ವರದಲ್ಲಿ ಯಜ್ಞದಲ್ಲಿ ಗಾನ ಮಾಡುವ ಉದ್ಗಾತೃವು ಸಾಮಗಾನವನ್ನು ಹೇಳುತ್ತಾ ನನ್ನನ್ನೇ ಮಹಾಧ್ವರಗಳಲ್ಲಿ ಸ್ತುತಿಸುತ್ತಾನೆ.

ಪ್ರಾಯಶ್ಚಿತ್ತೇಷು ಮಾಂ ಬ್ರಹ್ಮನ್ ಶಾಂತಿಮಂಗಲವಾಚಕಾಃ ।
ಸ್ತುವಂತಿ ವಿಶ್ವಕರ್ಮಾಣಂ ಸತತಂ ದ್ವಿಜಸತ್ತಮಾಃ ॥೧೩॥

ಪ್ರಾಯಶ್ಚಿತ್ತ ಕರ್ಮಗಳಲ್ಲಿ ಮಂಗಳಮಯವಾದ ಶಾಂತಿಸೂಕ್ತವನ್ನು ಹೇಳುವ ಬ್ರಾಹ್ಮಣರು ಜಗತ್ಸೃಷ್ಟಿಕರ್ತನಾದ ನನ್ನನ್ನೇ ಸ್ತುತಿಸುತ್ತಾರೆ.

ವಿದ್ಧಿ ಮೇಽದ್ಯ ಸುತಂ ಧರ್ಮಮಗ್ರ್ಯಜಂ ದ್ವಿಜಸತ್ತಮ ।
ಮಾನಸಂ ದಯಿತಂ ವಿಪ್ರ ಸರ್ವಭೂತಗುಣಾತ್ಮಕಮ್ ॥೧೪॥

ಅತ್ರಾಹಂ ವರ್ತಮಾನೈಶ್ಚ ನಿವೃತ್ತೈಶ್ಚಾಪಿ ಮಾನವೈಃ ।
ಬಹುಧಾ ಜಾಯಮಾನೋ ವೈ ವರ್ತೇಯ ದ್ವಿಜಸತ್ತಮ ॥೧೫॥

ಲೋಕಸಂರಕ್ಷಣಾರ್ಥಾಯ ಧರ್ಮಸಂಸ್ಥಾಪನಾಯ ಚ ।
ತೈಸ್ತೈರ್ವೇಷೈಶ್ಚ ರೂಪೈಶ್ಚ ತ್ರಿಷು ಲೋಕೇಷು ಭಾರ್ಗವ ॥೧೬॥

ಸಕಲ ಪ್ರಾಣಿಗಳ ವಿಷಯದಲ್ಲಿಯೂ ಕರುಣೆಯ ದೃಷ್ಟಿಯನ್ನು ಬೀರುವ ಧರ್ಮನು ನನ್ನ ಮನಸ್ಸಂಕಲ್ಪದಿಂದ ಹುಟ್ಟಿದ, ನನಗೆ ಪ್ರೀತಿಪಾತ್ರನಾದ ಕಿರಿಯ ಮಗನು ಎಂದು ತಿಳಿದುಕೊ. ಭಾರ್ಗವನೇ, ಜಗತ್ತಿನಲ್ಲಿ ಪ್ರವೃತ್ತಿಧರ್ಮವ್ರತರಾದವರಲ್ಲಿ, ನಿವೃತ್ತಿ ಧರ್ಮವ್ರತರಾದವರಲ್ಲಿ ಎಲ್ಲರಿಗೂ ನಿಯಾಮಕನಾಗಿ ನಾನು ಸನ್ನಿಹಿತನಾಗಿರುತ್ತೇನೆ. ನಾನು ಧರ್ಮದ ರಕ್ಷಣೆಗಾಗಿ ಮೂರು ಲೋಕಗಳಲ್ಲಿಯೂ ಅನೇಕ ರೂಪಗಳಿಂದ ಅವತರಿಸಿ,

ಆಯಾ ಯೋನಿಗಳಿಗೆ ಅನುಗುಣವಾದ ರೂಪಗಳಿಂದ, ವೇಷಗಳಿಂದ, ವ್ಯವಹಾರಗಳಿಂದ ಧರ್ಮದ ರಕ್ಷಣೆ ಮತ್ತು ಸ್ಥಾಪನೆಗಳನ್ನು ಮಾಡುತ್ತಿದ್ದೇನೆ.

ಅಹಂ ವಿಷ್ಣುರಹಂ ಬ್ರಹ್ಮಾ ಶಕ್ರೋಽಹಂ ಪ್ರಭವಾಪ್ಯಯಃ ।
ಭೂತಗ್ರಾಮಸ್ಯ ಸರ್ವಸ್ಯ ಸ್ರಷ್ಟಾ ಸಂಹಾರ ಏವ ಚ ॥೧೭॥

ನಾನೇ ವಿಷ್ಣುವು, ನಾನೇ ಚತುರ್ಮುಖ ಬ್ರಹ್ಮನು, ನಾನೇ ಇಂದ್ರನು. ಎಲ್ಲ ಪ್ರಾಣಿಗಳ ಹುಟ್ಟು-ಸಾವುಗಳಿಗೂ ನಾನೇ ಕಾರಣ. ಸಮಸ್ತ ಪ್ರಾಣಿಸಮುದಾಯವು ನನ್ನಿಂದಲೇ ಹುಟ್ಟು-ಸಾವುಗಳನ್ನು ಹೊಂದುತ್ತಿದೆ.

ವ್ಯಾಖ್ಯಾನ ವಿಶೇಷ– ಇಲ್ಲಿ ನಾನೇ ಬ್ರಹ್ಮ, ನಾನೇ ಇಂದ್ರ ಮುಂತಾಗಿ ಕೃಷ್ಣನು ಹೇಳಿದ್ದಾನೆ. ಇಂದ್ರ-ಬ್ರಹ್ಮ ಎನ್ನುವ ನಾಮಗಳಿಂದ ಪ್ರಸಿದ್ಧರಾದ ದೇವತೆಗಳೇ ನಾನು ಎಂದು ಹೇಳಿರುವುದಿಲ್ಲ. ಹೀಗಾಗಿ ಬ್ರಹ್ಮಶಬ್ದವಾಚ್ಯತ್ವ, ಶಕ್ರಶಬ್ದವಾಚ್ಯತ್ವ ಪರಮಾತ್ಮನಲ್ಲಿಯೇ ಇದೆ. ಆಯಾ ದೇವತೆಗಳಲ್ಲಿ ತನ್ನ ಪ್ರಸಿದ್ಧವಾದ ಈ ನಾಮಗಳನ್ನು ಇರಿಸಿ, ಅವರ ಮೂಲಕ ಜಗತ್ತಿನ ವ್ಯಾಪಾರವನ್ನು ನಡೆಸುತ್ತಾನೆ. ಮೂಲಭೂತವಾಗಿ ಬ್ರಹ್ಮನಲ್ಲಿರುವ ಗುಣಗಳಿಗೆ ನಿಯಾಮಕನಾದ ಭಗವಂತನೇ ಬ್ರಹ್ಮ ಎನಿಸಿದ್ದಾನೆ. ರುದ್ರ-ಇಂದ್ರಾದಿಗಳಲ್ಲಿರುವ ಗುಣಗಳಿಗೆ ನಿಯಾಮಕನಾದ ಭಗವಂತನು ಆಯಾ ಶಬ್ದಗಳಿಂದ ವಾಚ್ಯನಾಗಿದ್ದಾನೆ ಎಂದು ತಿಳಿಯಬೇಕು.

ಅಧರ್ಮೇ ವರ್ತಮಾನಾನಾಂ ಸರ್ವೇಷಾಮಹಮಚ್ಯುತಃ ।
ಧರ್ಮಸ್ಯ ಸೇತುಂ ಬಧ್ನಾಮಿ ಚಲಿತೇ ಚಲಿತೇ ಯುಗೇ ॥೧೮॥

ತಾಸ್ತಾ ಯೋನೀಃ ಪ್ರವಿಶ್ಯಾಹಂ ಪ್ರಜಾನಾಂ ಹಿತಕಾಮ್ಯಯಾ ॥೧೯॥

ಅಧರ್ಮ ಮಾರ್ಗದಲ್ಲಿರುವ ಮನುಷ್ಯರನ್ನು ಶಿಕ್ಷಿಸುವವನು ನಾನೇ. ಧರ್ಮದ ಮರ್ಯಾದೆಯಿಂದ ವರ್ತಿಸುವವರಿಗೂ ನಿಯಾಮಕನು ನಾನೇ. ಧರ್ಮದ ಮರ್ಯಾದೆಯನ್ನು ರಕ್ಷಿಸುತ್ತಾ, ಯುಗದ ಪರಿವರ್ತನವು ಆದಾಗಲೆಲ್ಲ ಆಯಾ ಯೋನಿಗಳಲ್ಲಿ ಅದಕ್ಕನುಗುಣವಾದ ಶರೀರವನ್ನು ಧಾರಣೆ ಮಾಡಿಕೊಂಡು, ಧರ್ಮದ ಮರ್ಯಾದೆಯನ್ನು ಕಾಪಾಡುತ್ತೇನೆ. ಇದರಿಂದ ಪ್ರಜೆಗಳು ಹಿತವನ್ನು ಹೊಂದುತ್ತಿದ್ದಾರೆ.

ಯದಾ ತ್ವಹಂ ದೇವಯೋನೌ ವರ್ತೇ ಭೃಗುಕುಲೋದ್ವಹ ।
ತದಾಽಹಂ ದೇವವತ್ ಸರ್ವಮಾಚರಾಮಿ ನ ಸಂಶಯಃ ॥೨೦॥

ಭಾರ್ಗವನೇ, ನಾನು ದೇವಯೋನಿಯಲ್ಲಿ ಅವತರಿಸಿದಾಗ ದೇವತೆಯಂತೆ ವರ್ತಿಸುತ್ತೇನೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಯದಾ ಗಂಧರ್ವಯೋನೌ ತು ವರ್ತೇಽಹಂ ಭೃಗುನಂದನ ।
ತದಾ ಗಂಧರ್ವವಚ್ಚೇಷ್ಟಾಃ ಸರ್ವಾಶ್ಚೇಷ್ಟಾಮಿ ಭಾರ್ಗವ ॥೨೧॥

ನಾನು ಗಂಧರ್ವಯೋನಿಯಲ್ಲಿ ಅವತರಿಸಿದಾಗ ಗಂಧರ್ವನಂತೆಯೇ ಸಮಸ್ತ ವ್ಯವಹಾರಗಳನ್ನು ನಡೆಸುತ್ತೇನೆ. ಇದರಲ್ಲಿಯೂ ಸಂಶಯವಿಲ್ಲ.

ನಾಗಯೋನೌ ಯದಾ ವರ್ತೇ ತದಾ ಚೇಷ್ಟಾ ತು ನಾಗವತ್ ।
ಯಕ್ಷರಾಕ್ಷಸಯೋನೌ ತು ತಥಾವೃತ್ತಿಶ್ಚರಾಮ್ಯಹಮ್ ॥೨೨॥

ನಾನು ನಾಗಯೋನಿಯಲ್ಲಿ ಅವತರಿಸಿದಾಗ ನಾಗನಂತೆ, ಯಕ್ಷ-ರಾಕ್ಷಸರ ಯೋನಿಯಲ್ಲಿ ಹುಟ್ಟಿದಾಗ ಯಕ್ಷ-ರಾಕ್ಷಸರಂತೆಯೇ ವ್ಯವಹರಿಸುತ್ತೇನೆ.

ಮಾನುಷ್ಯೇ ವರ್ತಮಾನೇ ತು ಕೃಪಣಂ ಯಾಚಿತಾ ಮಯಾ ।
ನ ಚ ತೇ ಜಾತಸಮ್ಮೋಹಾ ವಚೋ ಗೃಹ್ಣಂತಿ ಮೇ ಹಿತಮ್ ॥೨೩॥

ಈಗ ಮನುಷ್ಯಯೋನಿಯಲ್ಲಿ ಅವತರಿಸಿದ್ದೇನೆ. ಆದ್ದರಿಂದ ಮನುಷ್ಯಸಹಜವಾದ ಬುದ್ಧಿಯಿಂದಲೇ ಕೌರವರ ಬಳಿ ಹೋಗಿ ಸಂಧಿ ಮಾಡಿಕೊ ಎಂದು ದೈನ್ಯದಿಂದಲೇ ಪ್ರಾರ್ಥಿಸಿದೆ. ಆದರೆ ಮೋಹಗ್ರಸ್ಥರಾದ ಅವರು ನನ್ನ ಹಿತೋಪದೇಶವನ್ನು, ಸಲಹೆಯನ್ನು ಸ್ವೀಕರಿಸಲಿಲ್ಲ.

ಭಯಂ ಚ ಮಹದುದ್ದಿಶ್ಯ ತ್ರಾಸಿತಾಃ ಕುರವೋ ಮಯಾ ।
ಕ್ರುದ್ಧೇನ ಭೂತ್ವಾ ತು ಪುನರ್ಯಥಾವದಭಿಗರ್ಹಿತಾಃ ॥೨೪॥

ತೇಽಧರ್ಮೇಣೇಹ ಸಂಯುಕ್ತಾಃ ಪರೀತಾಃ ಕಾಲಧರ್ಮಣಾ ।
ಧರ್ಮೇಣ ನಿಹತಾ ಯುದ್ಧೇ ಗತಾಃ ಸ್ವರ್ಗಂ ನ ಸಂಶಯಃ ॥೨೫॥

ಯುದ್ಧದ ಪರಿಣಾಮವಾಗಿ ಮುಂದೆ ಒದಗುವ ಭಯವನ್ನು ನಿರೂಪಿಸಿ ಕೌರವನನ್ನು ಭಯಪಡಿಸಿದೆ. ಸಿಟ್ಟಿನಿಂದಲೇ ಯುದ್ಧದ ದುಷ್ಪರಿಣಾಮಗಳನ್ನು ದೃಷ್ಟಾಂತ ಪೂರ್ವಕ ವಿವರಿಸಿದೆ. ಆದರೂ ಅಧರ್ಮಶೀಲರಾದ, ಕಾಲಗ್ರಸ್ತರಾದ ಅವರಿಗೆ ನನ್ನ

ಹಿತೋಪದೇಶ ರುಚಿಸಲಿಲ್ಲ. ಯುದ್ಧಧರ್ಮದಿಂದಲೇ ಅವರೆಲ್ಲರೂ ಪಾಂಡವರಿಂದ ವಧ್ಯರಾಗಿ ಸ್ವರ್ಗ ಸೇರಿದ್ದಾರೆ. ಇದರಲ್ಲಿ ಯಾವ ಸಂಶಯವೂ ಬೇಡ.

ಲೋಕೇಷು ಪಾಂಡವಾಃ ಖ್ಯಾತಿಂ ಗಮಿಷ್ಯಂತಿ ದ್ವಿಜೋತ್ತಮ ।
ಏತತ್ ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೬॥

ದ್ವಿಜಶ್ರೇಷ್ಠನೇ, ಪಾಂಡವರು ಧರ್ಮಾಚರಣೆಯಿಂದ ಮೂರು ಲೋಕದಲ್ಲಿಯೂ ವಿಖ್ಯಾತರು. ನೀನು ಹೇಳಿದ ಪ್ರಶ್ನೆಗೆ ಅನುಸಾರವಾಗಿ ಎಲ್ಲವನ್ನೂ ವಿವರಿಸಿರುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಕೌರವಾಪರಾಧಕಥನಂ ನಾಮ ಚತುಃಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೈದನೆಯ ಅಧ್ಯಾಯ

ಕೃಷ್ಣನು ಉದಂಕನಿಗೆ ವಿಶ್ವರೂಪವನ್ನು ತೋರಿಸುವ ಮೂಲಕ ಮರುಭೂಮಿಯಲ್ಲಿ ಬಾಯಾರಿಕೆಯಾದಾಗ ನೀರು ಸಿಗಲೆಂದು ವರವನ್ನು ಕೊಟ್ಟಿದುದು. ಕೃಷ್ಣನು ಉದಂಕನಿಗೆ ಅಮೃತವನ್ನು ನೀಡು ಎಂದು ಇಂದ್ರನಿಗೆ ಹೇಳಿದುದು. ಒಂದು ಬಾರಿ ಕಾಡಿನ ಮಧ್ಯದಲ್ಲಿ ಬಾಯಾರಿದ ಉದಂಕನಿಗೆ ಇಂದ್ರನು ಚಂಡಾಲವೇಷದಿಂದ ಆಗಮಿಸಿ, ನೀರನ್ನು ಸ್ವೀಕರಿಸು ಎಂದು ಪ್ರಾರ್ಥಿಸಿದಾಗ, ಉದಂಕನು ಇಂದ್ರನನ್ನು ಚಂಡಾಲನೆಂದು ಭಾವಿಸಿ, ಅಮೃತಮಯವಾದ ಜಲವನ್ನು ನಿರಾಕರಿಸಿದುದು. ನಂತರ ಚಂಡಾಲ ರೂಪನಾದ ಇಂದ್ರನು ಅದೃಶ್ಯನಾಗಲು ದುಃಖಿತನಾದ ಉದಂಕನನ್ನು ಕುರಿತು ಅಲ್ಲೇ ಇರುವ ಕೃಷ್ಣನು ಇಂದ್ರ ಮಾಡಿದ ವಂಚನೆಯನ್ನು ತಿಳಿಸಿ, ಮರು ಪ್ರದೇಶದಲ್ಲಿ ನೀರು ಸಿಗುವಂತಹ ವರವನ್ನು ನೀಡಿದುದು.

ಉದಂಕಃ

ಅಭಿಜಾನಾಮಿ ಜಗತಃ ಕರ್ತಾರಂ ತ್ವಾಂ ಜನಾರ್ದನ ।
ನೂನಂ ಭವತ್ಪ್ರಸಾದೋಽಯಮಿತಿ ಮೇ ನಾತ್ರ ಸಂಶಯಃ ॥೧॥

ಉದಂಕ– ಜನಾರ್ದನನೇ, ನೀನೇ ಜಗತ್ತಿನ ಕರ್ತೃ ಎಂಬುದನ್ನು ನಾನು ಚೆನ್ನಾಗಿ ತಿಳಿದಿದ್ದೇನೆ. ನಿನ್ನಿಂದ ಅಧ್ಯಾತ್ಮ ಉಪದೇಶವನ್ನು ನಾನು ಪಡೆದದ್ದು ಪರಮಾನುಗ್ರಹವೆಂದು ಭಾವಿಸುತ್ತೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಚಿತ್ತಂ ಚ ಸುಪ್ರಸನ್ನಂ ಮೇ ತ್ವದ್ಭಾವಗತಮಚ್ಯುತ ।
ವಿನಿವೃತ್ತಶ್ಚ ಮೇ ಶಾಪ ಇತಿ ವಿದ್ಧಿ ಯದೂತ್ತಮ ॥೨॥

ಯದುಶ್ರೇಷ್ಠನೇ, ನಿನ್ನ ಮೇಲಿನ ಭಕ್ತಿಯಿಂದ ತುಂಬಿರುವ ನನ್ನ ಮನಸ್ಸು ಈಗ ಪ್ರಸನ್ನತೆಯನ್ನು ಪಡೆದಿದೆ. ನಿನ್ನನ್ನು ಶಪಿಸಲು ಬಯಸುತ್ತಿಲ್ಲ.

ಯದಿ ತ್ವನುಗ್ರಹಂ ಕಂಚಿತ್ ತತ್ತೋಹ್ಯೋಹಂ ಜನಾರ್ದನ ।
ದ್ರಷ್ಟುಮಿಚ್ಛಾಮಿ ತೇ ರೂಪಂ ವೈಷ್ಣವಂ ಮಾಂ ನಿದರ್ಶಯ ॥೩॥

ಜನಾರ್ದನನೇ, ನಿನ್ನ ಅನುಗ್ರಹವನ್ನು ಪಡೆಯುವ ಯೋಗ್ಯತೆ ನನ್ನಲ್ಲಿ ಅಲ್ಪವಾದರೂ ಇದ್ದಲ್ಲಿ ನಿನ್ನ ವಿಶ್ವರೂಪವನ್ನು ನೋಡಲು ಬಯಸುತ್ತೇನೆ. ಅಂತಹ ವಿಶ್ವರೂಪವನ್ನು ತೋರಿಸು.

ವೈಶಂಪಾಯನಃ

ತತಃ ಸ ತಸ್ಮೈ ಪ್ರೀತಾತ್ಮಾ ದರ್ಶಯಾಮಾಸ ತದ್ ವಪುಃ ।
ಶಾಶ್ವತಂ ವೈಷ್ಣವಂ ಧೀಮಾನ್ ಯದ್ ದದರ್ಶ ಧನಂಜಯಃ ॥೪॥

ವೈಶಂಪಾಯನ– ಜನಮೇಜಯನೇ, ಉದಂಕನು ಹೀಗೆ ಪ್ರಾರ್ಥಿಸಿದಾಗ ಧೀಮಂತನಾದ ಉದಂಕನ ಮೇಲೆ ಪ್ರೀತನಾದ ಕೃಷ್ಣನು ಅರ್ಜುನನಿಗೆ ತೋರಿಸಿದ ವಿಶ್ವರೂಪವನ್ನೇ ಉದಂಕನಿಗೂ ತೋರಿಸಿದನು.

ಸ ದದರ್ಶ ಮಹಾತ್ಮಾನಂ ವಿಶ್ವರೂಪಂ ಮಹಾಭುಜಮ್ ।
ವಿಸ್ಮಯಂ ಚ ಯಯೌ ವಿಪ್ರಸ್ತದ್ ದೃಷ್ಟ್ವಾ ರೂಪಮೈಶ್ವರಮ್ ॥೫॥

ಉದಂಕನು ಮಹಾಭುಜಗಳಿಂದ ಕೂಡಿರುವ ಸಮಸ್ತ ಸೂರ್ಯಪ್ರಕಾಶನಾದ, ಸಮಸ್ತ ದಿಕ್ಕುಗಳನ್ನು ಬೆಳಗಿಸುತ್ತಿರುವ, ಯಜ್ಞೇಶ್ವರನಂತೆ ದೇದೀಪ್ಯಮಾನವಾಗಿರುವ ವಿಶ್ವರೂಪವನ್ನು ನೋಡಿದನು.

ಉದಂಕಃ

ನಮೋ ನಮಸ್ತೇ ಸರ್ವಾತ್ಮನ್ ನಾರಾಯಣ ಪರಾತ್ಪರ ।
ಪರಮಾತ್ಮನ್ ಪದ್ಮನಾಭ ಪುಂಡರೀಕಾಕ್ಷ ಮಾಧವ ॥೬॥

ಉದಂಕ– ಎಲ್ಲರ ಅಂತರ್ಯಾಮಿಯಾದ, ಪರಾತ್ಪರನೆನಿಸಿದ ನಾರಾಯಣನೇ ನಿನಗೆ ನಮಸ್ಕಾರ. ಪದ್ಮನಾಭನೇ, ಮಾಧವನೇ, ಪುಂಡರೀಕಾಕ್ಷನೇ, ಶ್ರೇಷ್ಠ ಚೇತನನೇ ನಿನಗೆ ನಮಸ್ಕಾರ.

ಹಿರಣ್ಯಗರ್ಭರೂಪಾಯ ಸಂಸಾರೋತ್ತಾರಣಾಯ ಚ ।
ಪುರುಷಾಯ ಪುರಾಣಾಯ ಚಾಂತರ್ಯಾಮಾಯ ತೇ ನಮಃ ॥೭॥

ಹಿರಣ್ಯಗರ್ಭನೆನಿಸಿದವನೇ, ಸಂಸಾರದಿಂದ ಉದ್ಧರಿಸುವವನೇ, ಪುರಾಣ ಪುರುಷನೇ, ಅಂತರ್ಯಾಮಿಯೇ ನಿನಗೆ ನಮಸ್ಕಾರ.

ಅವಿದ್ಯಾತಿಮಿರಾದಿತ್ಯಂ ಭವವ್ಯಾಧಿಮಹೌಷಧಿಮ್ ।
ಸಂಸಾರಾರ್ಣವಪಾರಂ ತ್ವಾಂ ಪ್ರಣಮಾಮಿ ಗತಿರ್ಭವ ॥೮॥

ಅವಿದ್ಯೆ ಎಂಬ ಕತ್ತಲೆಗೆ ಸೂರ್ಯನಂತಿರುವವನೇ, ಸಂಸಾರವೆಂಬ ವ್ಯಾಧಿಗೆ ದಿವ್ಯೌಷಧಿಯಂತಿರುವವನೇ, ಸಂಸಾರವೆಂಬ ಸಾಗರದಿಂದ ದಾಟಿಸುವ ನಿನ್ನನ್ನು ನಮಸ್ಕರಿಸುತ್ತೇನೆ. ನನಗೆ ನೀನೇ ಗತಿ.

ಸರ್ವವೇದೈಕವೇದ್ಯಾಯ ಸರ್ವದೇವಮಯಾಯ ಚ ।
ವಾಸುದೇವಾಯ ನಿತ್ಯಾಯ ನಮೋ ಭಕ್ತಪ್ರಿಯಾಯ ತೇ ॥೯॥

ಸಮಸ್ತ ವೇದಗಳಿಂದ ತಿಳಿಯಲ್ಪಡುವವನೇ, ಸರ್ವದೇವಮಯನೇ, ವಾಸುದೇವನೇ, ನಿತ್ಯನೇ, ಭಕ್ತಪ್ರಿಯನೇ ನಿನಗೆ ನಮಸ್ಕಾರ.

ದಯಯಾ ದುಃಖಿಮೋಹಾನ್ಮಾಂ ಸಮುದ್ಧರ್ತುಮಿಹಾರ್ಹಸಿ ।
ಕರ್ಮಭಿರ್ಬಹುಭಿಃ ಪಾಪೈರ್ಬದ್ಧಂ ಪಾಹಿ ಜನಾರ್ದನ ॥೧೦॥

ದುಃಖದಿಂದ ಮೋಹಿತನಾದ ನಾನು ತಿಳಿಯದೆ ಏನನ್ನೋ ಹೇಳಿದೆ. ನನ್ನನ್ನು ಉದ್ಧರಿಸಲು ನೀನು ಅರ್ಹನಾಗಿದ್ದಿ. ಅನೇಕ ಪಾಪಕರ್ಮಗಳಿಂದ ಬಂಧಿತನಾದ ನನ್ನನ್ನು ಉದ್ಧರಿಸು ಜನಾರ್ದನ.

ವಿಶ್ವರೂಪ ನಮಸ್ತೇಽಸ್ತು ಯಸ್ಯ ತೇ ರೂಪಮೈಶ್ವರಮ್ ॥೧೧॥

ವಿಶ್ವರೂಪನೇ ನಿನಗೆ ನಮಸ್ಕಾರ. ನಿನ್ನ ಐಶ್ವರ್ಯರೂಪವನ್ನು ನಾನು ನೋಡಿದ್ದೇನೆ.

ಪದ್ಭ್ಯಾಂ ತೇ ಪೃಥಿವೀ ವ್ಯಾಪ್ತಾ ಶಿರಸಾ ಚಾವೃತಂ ನಭಃ ॥೧೨॥

ನಿನ್ನ ಪಾದಗಳಿಂದ ಪೃಥಿವಿಯು ವ್ಯಾಪಿಸಿದೆ. ಶಿರಸ್ಸಿನಿಂದ ಅಂತರಿಕ್ಷ ಲೋಕವು ಆವೃತವಾಗಿದೆ.

ದ್ಯಾವಾಪೃಥಿವ್ಯೋರ್ಯನ್ಮಧ್ಯಂ ಜಠರೇಣ ತದಾವೃತಮ್ ।
ಭುಜಾಭ್ಯಾಮಾವೃತಾಶ್ಚಾಶಾಸ್ತ್ವಮಿದಂ ಸರ್ವಮಚ್ಯುತ ॥೧೩॥

ದ್ಯುಲೋಕ ಪೃಥಿವಿ ಲೋಕಗಳ ಮಧ್ಯೆ ಇರುವ ಅಂತರಿಕ್ಷಲೋಕವು ನಿನ್ನ ಉದರದಿಂದ ಆವೃತವಾಗಿದೆ. ನಿನ್ನ ಭುಜಗಳಿಂದ ದಿಕ್ಕುಗಳೆಲ್ಲವೂ ತುಂಬಿವೆ. ಜಗತ್ತಿನಲ್ಲಿ ನೀನೇ ವ್ಯಾಪಕನಾದವನು. ನೀನೇ ಅಚ್ಯುತ.

ಸಂಹರಸ್ವ ಪುನರ್ದೇವ ರೂಪಮಕ್ಷಯ್ಯಮುತ್ತಮಮ್ ।
ಪುನಸ್ತ್ವಾಂ ಸ್ವೇನ ರೂಪೇಣ ದ್ರಷ್ಟುಮಿಚ್ಛಾಮಿ ಶಾಶ್ವತಮ್ ॥೧೪॥

ನಿನ್ನ ಈ ಅಕ್ಷಯವಾದ, ಉತ್ತಮವಾದ ರೂಪವನ್ನು ದೇವನೇ ಉಪಸಂಹರಿಸು. ನಿನ್ನ ಮೊದಲಿನ ರೂಪವನ್ನೇ ನೋಡಬಯಸುತ್ತೇನೆ.

ವೈಶಂಪಾಯನಃ

ತಮುವಾಚ ಪ್ರಸನ್ನಾತ್ಮಾ ಗೋವಿಂದೋ ಜನಮೇಜಯ ।
ವರಂ ವೃಣೀಷ್ವೇತಿ ತದಾ ತಮುದಂಕೋಽಬ್ರವೀದಿದಮ್ ॥೧೫॥

ವೈಶಂಪಾಯನ– ಜನಮೇಜಯನೇ, ಗೋವಿಂದನು ಪ್ರಸನ್ನನಾಗಿ ಉದಂಕನನ್ನು ಕುರಿತು ಹೇಳಿದನು ಉದಂಕನೇ, ನಾನು ನಿನಗೆ ವರವನ್ನು ಕೊಡುತ್ತೇನೆ, ಕೇಳಿಕೊ. ಹೀಗೆ ಹೇಳಿದಾಗ ಉದಂಕನು ಈ ಮಾತನ್ನು ಹೇಳಿದನು.

ಉದಂಕಃ

ಪರ್ಯಾಪ್ತ ಏಷ ಏವಾದ್ಯ ವರಸ್ತ್ವತ್ತೋ ಮಹಾದ್ಯುತೇ ।
ಯತ್ ತೇ ರೂಪಮಿದಂ ಕೃಷ್ಣ ಪಶ್ಯಾಮಿ ಪ್ರಭವಾಪ್ಯಯಮ್ ॥೧೬॥

ಉದಂಕ– ಶ್ರೀಕೃಷ್ಣನೇ, ಮಹಾದ್ಯುತಿಯೇ, ಪುರುಷೋತ್ತಮನೇ, ನಿನ್ನ ಅನುಗ್ರಹದಿಂದ ನಿನ್ನ ದಿವ್ಯವಾದ ರೂಪವನ್ನು ನಾನು ಕಂಡೆನಲ್ಲವೇ! ನೀನು ನೀಡಿದ

ಈ ವರವೇ ಸಾಕು. ಸೃಷ್ಟಿ-ಸಂಹಾರನಿಯಾಮಕವಾದ ನಿನ್ನ ರೂಪದಿಂದಲೇ ತೃಪ್ತಿಯನ್ನು ಹೊಂದಿದ್ದೇನೆ.

ವೈಶಂಪಾಯನಃ

ತಮಬ್ರವೀತ್ ಪುನಃ ಕೃಷ್ಣೋ ಮಾ ತ್ವಮತ್ರ ವಿಚಾರಯ ।
ಅವಶ್ಯಮೇತತ್ ಕರ್ತವ್ಯಮಮೋಘಂ ದರ್ಶನಂ ಮಮ ॥೧೭॥

ವೈಶಂಪಾಯನ– ಈ ರೀತಿ ನುಡಿದ ಉದಂಕನನ್ನು ಕುರಿತು ಕೃಷ್ಣನು ಹೇಳುತ್ತಾನೆ- ಉದಂಕನೇ, ನೀನು ನನ್ನ ವಿಷಯದಲ್ಲಿ ಏನೂ ಚಿಂತಿಸಬೇಡ. ನನ್ನ ವಿಶ್ವರೂಪವು ಅಮೋಘವಾದುದು. ಅಂತಹ ನನ್ನ ಬಳಿ ವರವನ್ನು ಬಯಸುವುದು ಕರ್ತವ್ಯವೇ ಆಗಿದೆ.

ಉದಂಕಃ

ಅವಶ್ಯಂ ಕರಣೀಯಂ ಚೇದ್ ಯದೇವಂ ಮನ್ಯಸೇ ವಿಭೋ ।
ತೋಯಮಿಚ್ಛಾಮಿ ಯತ್ರೇಷ್ಟಂ ಮರುಷ್ವೇತದ್ಧಿ ದುಲರ್ಭಮ್ ॥೧೮॥

ಉದಂಕ– ಪ್ರಭುವೇ, ಅವಶ್ಯವಾಗಿ ವರವನ್ನು ಬೇಡಲೇಬೇಕು ಎನ್ನುವುದಾದರೆ ಏನು ಬೇಡಬೇಕು ಎಂದು ಯೋಚಿಸಿದಾಗ, ನಾನು ಬಯಸಿದ ಜಾಗದಲ್ಲಿ ನೀರು ದೊರೆಯಲೆಂದು ಅಪೇಕ್ಷಿಸುತ್ತೇನೆ. ಈ ಮರುಭೂಮಿಯಲ್ಲಿ ನೀರು ಅತ್ಯಂತ ದುರ್ಲಭವಾಗಿದೆ.

ವೈಶಂಪಾಯನಃ

ತತಃ ಸಂಹೃತ್ಯ ತತ್ ತೇಜಃ ಪ್ರೋವಾಚೋದಂಕಮೀಶ್ವರಃ ।
ಏಷ್ಟವ್ಯೇ ಸತಿ ಚಿಂತ್ಯೋಽಹಮಿತ್ಯುಕ್ತ್ವಾ ದ್ವಾರಕಾಂ ಯಯೌ ॥೧೯॥

ವೈಶಂಪಾಯನ– ಜನಮೇಜಯನೇ, ಉದಂಕನು ಹೀಗೆ ಪ್ರಾರ್ಥಿಸಿದ ಬಳಿಕ ಕೃಷ್ಣನು ತನ್ನ ತೇಜೋಮಯವಾದ ವಿಶ್ವರೂಪವನ್ನು ಉಪಸಂಹರಿಸಿ ಉದಂಕನಿಗೆ ಹೇಳುತ್ತಾನೆ- ಮುನಿಯೇ, ನಿನಗೆ ಯಾವಾಗ ನೀರಿನ ಬಯಕೆ ಹುಟ್ಟುತ್ತದೋ ಆಗ ನನ್ನನ್ನು ಸ್ಮರಿಸಿಕೊ. ಹೀಗೆ ನುಡಿದು ದ್ವಾರಕೆಯತ್ತ ಚಿತ್ತ ಬೆಳೆಸಿದನು.

ತತಃ ಕದಾಚಿದ್ ಭಗವಾನ್ ಉದಂಕಸ್ತೋಯಕಾಂಕ್ಷಯಾ ।
ತೃಷಿತಃ ಪರಿಚಕ್ರಾಮ ಮರೌ ಸಸ್ಮರ ಚಾಚ್ಯುತಮ್ ॥೨೦॥

ಕೆಲವು ದಿನಗಳ ಬಳಿಕ ಪೂಜ್ಯನಾದ ಉದಂಕನು ಬಾಯಾರಿದಾಗ, ನೀರಿನ ಬಯಕೆಯಿಂದ ಮರುಭೂಮಿಯಲ್ಲಿ ನೀರಿಗಾಗಿ ಹಪಹಪಿಸುತ್ತಾ ಕೃಷ್ಣನನ್ನು ಸ್ಮರಿಸಿದನು.

ತತೋ ದಿಗ್ವಾಸಸಂ ಧೀಮಾನ್ ಮಾತಂಗಂ ಮಲಪಂಕಿನಮ್ ।
ಅಪಶ್ಯತ ಮರೌ ತಸ್ಮಿನ್ ಶ್ವಗಣೈಃ ಪರಿವಾರಿತಮ್ ॥೨೧॥

ಆ ಪ್ರಸಂಗದಲ್ಲಿಯೇ ಧೀಮಂತನಾದ ಉದಂಕನು ದಿಗಂಬರನಾದ, ಕೆಸರಿನಿಂದ ಆವೃತನಾದ, ನಾಯಿಗಳಿಂದ ಸುತ್ತುವರಿದ ಒಬ್ಬ ಚಂಡಾಲನನ್ನು ಆ ಪರಿಸರದಲ್ಲಿ ಕಂಡನು.

ಭೀಷಣಂ ಬದ್ಧನಿಸ್ತ್ರಿಂಶಂ ಬಾಣಕಾರ್ಮುಕಧಾರಿಣಮ್ ।
ತಸ್ಯಾಥ ಸ್ರೋತಸೋಽಪಶ್ಯದ್ ವಾರಿ ಭೂರಿ ದ್ವಿಜೋತ್ತಮಃ ॥೨೨॥

ಅವನು ನೋಡಲು ಭಯಂಕರವಾಗಿ ಕಾಣಿಸುತ್ತಿದ್ದನು. ಸೊಂಟಕ್ಕೆ ಕತ್ತಿಯನ್ನು ಸಿಗಿಸಿ, ಧನುರ್ಬಾಣಗಳನ್ನು ಧರಿಸಿದ್ದನು. ಅವನು ನಿಂತಿರುವ ಜಾಗದಲ್ಲಿ ಒಂದು ಜಲಧಾರೆಯು ಹರಿಯುತ್ತಿರುವುದನ್ನು ಕಂಡನು.

ಸ್ಮರಂತಂ ಸ ಚ ತಂ ಪ್ರಾಹ ಮಾತಂಗಃ ಪ್ರಹಸನ್ನಿವ ॥೨೩॥

ಚಂಡಾಲನಾದರೂ ಪಾತ್ರೆಯನ್ನು ಹಿಡಿದು ಮೂತ್ರದಂತೆ ಆ ಜಲಧಾರೆಯನ್ನು ತೋರಿಸಿದ್ದನು. ಇವನೂ ಹಾಗೆ ಭಾವಿಸಿದನು. ಆ ದ್ವಿಜಶ್ರೇಷ್ಠನಾದ ಉದಂಕನು ಕೃಷ್ಣನನ್ನು ಸ್ಮರಿಸಿದ ಕೂಡಲೇ ಪ್ರತ್ಯಕ್ಷನಾಗಿರುವ ಈ ಚಂಡಾಲನನ್ನು ಕಂಡಿದ್ದನು. ಆ ಚಂಡಾಲನಾದರೂ ಮಂದಹಾಸವನ್ನು ಬೀರುತ್ತಾ ಉದಂಕನಿಗೆ ಹೇಳಿದನು.

ಮಾತಂಗಃ

ಏಹ್ಯುದಂಕ ಪ್ರತೀಚ್ಛಸ್ವ ಮತ್ತೋ ವಾರಿ ಭೃಗೂದ್ವಹ ।
ಕೃಪಾ ಹಿ ಮೇ ಸುಮಹತೀ ತ್ವಾಂ ದೃಷ್ಟ್ವಾ ತೃಟ್ಸಮನ್ವಿತಮ್ ॥೨೪॥

ಮಾತಂಗ– ಭೃಗುಶ್ರೇಷ್ಠನೇ, ಉದಂಕನೇ, ಈಚೆ ಬಾ. ನಾನು ಕೊಡುವ ನೀರನ್ನು ಸ್ವೀಕರಿಸು. ಬಾಯಾರಿಕೆಯಿಂದ ಬಳಲಿದ ನಿನ್ನನ್ನು ಕಂಡು ನಿನ್ನ ಬಗ್ಗೆ ಅತಿಶಯವಾದ ದಯೆಯು ನನ್ನಲ್ಲಿ ಉಂಟಾಗಿದೆ.

ವೈಶಂಪಾಯನಃ

ಇತ್ಯುಕ್ತಸ್ತೇನ ಸ ಮುನಿಃ ತತ್ತೋಯಂ ನಾಭ್ಯನಂದತ ।
ಚುಕೋಪ ಚ ಸ ತಂ ಧೀಮಾನ್ ವಾಗ್ಭಿರುಗ್ರಾಭಿರಚ್ಯುತಮ್ ॥೨೫॥

ವೈಶಂಪಾಯನ– ಮಾತಂಗನು ಅರ್ಥಾತ್ ಚಂಡಾಲನು ಹೀಗೆ ಹೇಳಿದರೂ ಉದಂಕನು ಆ ನೀರನ್ನು ಸ್ವೀಕರಿಸಲಿಲ್ಲ. ಸ್ಮರಿಸಿದ ಕೂಡಲೇ ನೀರು ಸಿಗುವಂತೆ ಮಾಡುತ್ತೇನೆ ಎಂದು ಕೃಷ್ಣನು ವರವನ್ನು ಕೊಟ್ಟು, ಈಗ ಚಂಡಾಲನ ಮೂಲಕ ನೀರನ್ನು ಒದಗಿಸುತ್ತಿರುವುದನ್ನು ಕಂಡ ಉದಂಕನು ಕೃಷ್ಣನನ್ನೇ ಕಠೋರವಾದ ಮಾತುಗಳಿಂದ ನಿಂದಿಸಿದನು.

ಪುನಃ ಪುನಶ್ಚ ಮಾತಂಗಃ ಪಿಬಸ್ವೇತಿ ತಮಬ್ರವೀತ್ ।
ನ ಚಾಪಿಬತ್ ಸ ಚ ಕ್ರೋಧಾತ್ ಕ್ಷುಭಿತೇನಾಂತರಾತ್ಮನಾ ॥೨೬॥

ಆದರೆ ಚಂಡಾಲನು ಮಾತ್ರ ಉದಂಕನನ್ನು ಕುರಿತು ಪುನಃ ಪುನಃ ನೀರನ್ನು ಕುಡಿ, ನೀರನ್ನು ಕುಡಿ ಎಂದು ಹೇಳುತ್ತಿದ್ದನು. ಆದರೂ ಉದಂಕನು ನೀರನ್ನು ಕುಡಿಯಲಿಲ್ಲ. ಕೋಪವನ್ನೇ ಹೊಂದಿದ್ದನು. ಅವನ ಮನಸ್ಸು ಕ್ಷುಬ್ಧವಾಯಿತು.

ಸ ತಥಾ ನಿಶ್ಚಯಾತ್ ತೇನ ಪ್ರತ್ಯಾಖ್ಯಾತೋ ಮಹಾಮನಾಃ ।
ಶ್ವಭಿಃ ಸಹ ಮಹಾರಾಜ ತತ್ರೈವಾಂತರಧೀಯತ ॥೨೭॥

ಮಹಾತ್ಮನಾದ ಉದಂಕನು ನೀರನ್ನು ಕುಡಿಯಲೇಬಾರದೆಂದು ನಿಶ್ಚಯಿಸಿಕೊಂಡು ಚಂಡಾಲನ ಮಾತುಗಳನ್ನು ತಿರಸ್ಕರಿಸಿದನು. ಬಳಿಕ ನಾಯಿಗಳಿಂದ ಕೂಡಿದ ಚಂಡಾಲನು ಅಲ್ಲಿಯೇ ಅದೃಶ್ಯನೂ ಆದನು.

ಉದಂಕಸ್ತಂ ತಥಾ ದೃಷ್ಟ್ವಾ ತತೋ ವ್ರೀಡಿತಮಾನಸಃ ।
ಮೇನೇ ಪ್ರಲಬ್ಧಮಾತ್ಮಾನಂ ಕೃಷ್ಣೇನಾಮಿತತೇಜಸಾ ॥೨೮॥

ಅಥ ತೇನೈವ ಮಾರ್ಗೇಣ ಶಂಖಚಕ್ರಗದಾಧರಃ ।
ಆಜಗಾಮ ಮಹಾಬಾಹುರುದಂಕಶ್ಚೈನಮಬ್ರವೀತ್ ॥೨೯॥

ಬಳಿಕ ಉದಂಕನು ಶ್ರೀಕೃಷ್ಣನೇ ತನಗೆ ಹೀಗೆ ವಂಚಿಸಿರಬಹುದೆಂದು ಭಾವಿಸಿ ಲಜ್ಜೆಗೊಂಡವನಾಗಿ ಇರುವಾಗ ಅದೇ ಮಾರ್ಗದಲ್ಲಿ ಶಂಖ-ಚಕ್ರ-ಗದಾಧಾರಿಯಾದ ಕೃಷ್ಣನು ಆಗಮಿಸಿದನು. ಮಹಾಬಾಹುವಾದ ಕೃಷ್ಣನನ್ನು ಕುರಿತು ಉದಂಕನು ಹೀಗೆ ನುಡಿದನು.

ಉದಂಕಃ

ನ ಯುಕ್ತಂ ತಾದೃಶಂ ದಾತುಂ ತ್ವಯಾ ಪುರುಷಸತ್ತಮ ।
ಸಲಿಲಂ ವಿಪ್ರಮುಖ್ಯೇಭ್ಯೋ ಮಾತಂಗಸ್ರೋತಸಾ ವಿಭೋ ॥೩೦॥

ಉದಂಕ– ಪುರುಷೋತ್ತಮನೇ, ವಿಭುವೇ, ಚಂಡಾಲನಿಗೆ ಸಂಬಂಧಿಸಿದ ಮೇಢ್ರದಿಂದ ಬಂದಿರುವ ಅಪವಿತ್ರವಾದ ನೀರನ್ನು ಬ್ರಾಹ್ಮಣನಿಗೆ ನೀಡುವುದು ಉಚಿತವಾಗಿರುವುದಿಲ್ಲ.

ವೈಶಂಪಾಯನಃ

ಇತ್ಯುಕ್ತವಚನಂ ತಂ ತು ಮಹಾಬುದ್ಧಿರ್ಜನಾರ್ದನಃ ।
ಉದಂಕಂ ಶ್ಲಕ್ಷ್ಣಯಾ ವಾಚಾ ಸಾಂತ್ವಯನ್ನಿದಮಬ್ರವೀತ್ ॥೩೧॥

ವೈಶಂಪಾಯನ– ಉದಂಕನು ಹೀಗೆ ಹೇಳಿದಾಗ, ಮಹಾಬುದ್ಧಿವಂತನಾದ ಜನಾರ್ದನನು ಮಧುರವಾದ ಮಾತುಗಳಿಂದ ಅವನನ್ನು ಸಂತೈಸುತ್ತಾ ಇಂತು ನುಡಿದನು.

ಶ್ರೀಭಗವಾನ್

ಯಾದೃಶೇನೈವ ರೂಪೇಣ ಯೋಗ್ಯಂ ದಾತುಮನೇನ ವೈ ।
ತಾದೃಶಂ ಖಲು ತೇ ದತ್ತಂ ತ್ವಂ ತು ತನ್ನಾವಬುಧ್ಯಸೇ ॥೩೨॥

ಮಯಾ ತ್ವದರ್ಥಮುಕ್ತೋ ಹಿ ವಜ್ರಪಾಣಿಃ ಪುರಂದರಃ ।
ಉದಂಕಾಯಾಮೃತಂ ದೇಹಿ ತೋಯರೂಪಮಿತಿ ಪ್ರಭುಃ ॥೩೩॥

ಶ್ರೀಭಗವಾನ್– ಮಹರ್ಷಿಯೇ, ಮರುಭೂಮಿಯಲ್ಲಿ ಯಾವ ರೂಪವನ್ನು ಧರಿಸಿ ನಿನಗೆ ನೀರನ್ನು ಕೊಡುವುದು ಯೋಗ್ಯವಾಗಿತ್ತೋ ಅದೇ ರೂಪವನ್ನು ಧರಿಸಿಯೇ ಇಂದ್ರನು ನಿನಗೆ ನೀರನ್ನು ಕುಡಿಯಲು ಕೊಟ್ಟನು. ಆದರೆ ಈ ರಹಸ್ಯವನ್ನು ನೀನು ಅರಿಯಲಿಲ್ಲ. ನಿಶ್ಚಿತವಾಗಿಯೂ ಆ ನೀರಿನ ರೂಪದಲ್ಲಿ ಅಮೃತವನ್ನು ಕೊಡಬೇಕೆಂದು ವಜ್ರಪಾಣಿಯಾದ ಪುರಂದರನಿಗೆ ನಾನು ಹೇಳಿದ್ದೆನು.

ಸ ಮಾಮುವಾಚ ದೇವೇಂದ್ರೋ ನ ಮರ್ತ್ಯೋ೯ಽಮರ್ತ್ಯತಾಂ ವ್ರಜೇತ್ ।
ಅನ್ಯಮಸ್ಮೈ ವರಂ ದೇಹೀತ್ಯಸಕೃದ್ ಭೃಗುನಂದನ ॥೩೪॥

ಆ ಇಂದ್ರನು ನನ್ನನ್ನು ಕುರಿತು ಹೇಳಿದನು- ಪ್ರಭುವೇ, ನಾನು ಅಮೃತವನ್ನು ನೀಡಿದರೆ ಮರ್ತ್ಯನು ಅಮೃತನಾಗುತ್ತಾನೆ. ಆದ್ದರಿಂದ ಬೇರೆ ಯಾವುದಾದರೂ ವರವನ್ನು ಕೊಡು ಎಂದು ಇಂದ್ರನು ಬಾರಿ ಬಾರಿಗೂ ನನ್ನನ್ನು ಒತ್ತಾಯಿಸಿದನು.

ಅಮೃತಂ ದೇಯಮಿತ್ಯೇವ ಮಯೋಕ್ತಃ ಸ ಶಚೀಪತಿಃ ।
ಸ ಮಾಂ ಪ್ರಸಾದ್ಯ ದೇವೇಂದ್ರಃ ಪುನರೇವೇದಮಬ್ರವೀತ್ ॥೩೫॥

ಆಗ ನಾನು ಅವನಿಗೆ ಅಮೃತವನ್ನೇ ನೀಡಬೇಕೆಂದು ಹಠದಿಂದ ಹೇಳಿದೆನು. ಆ ಸಮಯದಲ್ಲಿ ಇಂದ್ರನು ನನ್ನನ್ನು ಸವಿಮಾತುಗಳಿಂದ ಸಂತೋಷಗೊಳಿಸಿ ಇಂತು ನುಡಿದನು.

ದೇವೇಂದ್ರಃ

ಯದಿ ದೇಯಮವಶ್ಯಂ ಚೇನ್ಮಾತಂಗೋ೽ಹಂ ಮಹಾದ್ಯುತೇ ।
ಭೂತ್ವಾ೽ಮೃತಂ ಪ್ರದಾಸ್ಯಾಮಿ ಭಾರ್ಗವಾಯ ಮಹಾತ್ಮನೇ ॥೩೬॥

ದೇವೇಂದ್ರ– ಮಹಾಮತಿಯಾದ ಕೃಷ್ಣನೇ, ಉದಂಕನಿಗೆ ಅಮೃತವನ್ನು ಕೊಡಲೇಬೇಕು ಎಂಬ ಭಾವ ನಿನ್ನದಾಗಿದ್ದಲ್ಲಿ ನಾನು ಮಾತಂಗನ ರೂಪವನ್ನು ಧರಿಸಿ ಮಹಾತ್ಮನಾದ ಭಾರ್ಗವನಿಗೆ ಅಮೃತವನ್ನು ಕೊಡುತ್ತೇನೆ.

ಯದ್ಯೇತತ್ ಪ್ರತಿಗೃಹ್ಣಾತಿ ಭಾರ್ಗವೋ೽ಮೃತಮದ್ಯ ವೈ ।
ಪ್ರದಾತುಮೇಷ ಗಚ್ಛಾಮಿ ಭಾರ್ಗವಾಯಾಮೃತಂ ವಿಭೋ ॥೩೭॥

ಪ್ರತ್ಯಾಖ್ಯಾತಸ್ತ್ವಹಂ ತೇನ ನ ದಾಸ್ಯಾಮೀತಿ ಭಾರ್ಗವ ॥೩೮॥

ಚಂಡಾಲರೂಪಿಯಾದ ನನ್ನಿಂದ ಉದಂಕನು ಅಮೃತವನ್ನು ಸ್ವೀಕರಿಸುವುದಾದಲ್ಲಿ ನಾನು ಅವನಿಗೆ ಅಮೃತವನ್ನು ಕೊಡಲು ತೆರಳುತ್ತೇನೆ. ಅವನೇನಾದರೂ ತಿರಸ್ಕರಿಸಿದರೆ ಖಂಡಿತವಾಗಿಯೂ ನಾನು ನೀಡುವುದಿಲ್ಲ.

ಶ್ರೀಭಗವಾನ್

ಸ ತಥಾ ಸಮಯಂ ಕೃತ್ವಾ ತೇನ ರೂಪೇಣ ವಾಸವಃ ।
ಉಪಸ್ಥಿತಸ್ತ್ವಯಾ ಚಾಪಿ ಪ್ರತ್ಯಾಖ್ಯಾತೋಽಮೃತಂ ದದತ್ ॥೩೯॥

ಶ್ರೀಭಗವಾನ್– ಹೀಗೆ ಇಂದ್ರನು ನನ್ನ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡು, ಚಂಡಾಲರೂಪವನ್ನು ಧರಿಸಿ, ಅಮೃತವನ್ನು ನಿನಗೆ ಕೊಡಲು ಬಂದನು. ಆದರೆ ನೀನು ಅದನ್ನು ತಿರಸ್ಕರಿಸಿದೆ.

ಚಾಂಡಾಲರೂಪೀ ಭಗವಾನ್ ಸುಮಹಾಂಸ್ತೇ ವ್ಯತಿಕ್ರಮಃ ॥೪೦॥

ಚಂಡಾಲರೂಪವನ್ನು ಧರಿಸಿದ ಇಂದ್ರನ ವಿಷಯದಲ್ಲಿ ಮಹಾಪರಾಧವನ್ನೇ ಎಸಗಿರುವಿ.

ಯತ್ತು ಶಕ್ಯಂ ಮಯಾ ಕರ್ತುಂ ಭೂಯ ಏವ ತವೇಪ್ಸಿತಮ್ ।
ತೋಯೇಪ್ಸಾ ತವ ದುರ್ಧರ್ಷಾಂ ಕರಿಷ್ಯೇ ಸಫಲಾಮಹಮ್ ॥೪೧॥

ಆದರೂ ನಿನ್ನ ಬಯಕೆಯಂತೆ ನಾನು ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆ. ನಿನ್ನ ಸಹಿಸಲಾಗದ ನೀರಡಿಕೆಯನ್ನು ಪರಿಹರಿಸುತ್ತೇನೆ.

ಯೇಷ್ವಹಃಸು ತವ ಬ್ರಹ್ಮನ್ ಸಲಿಲೇಪ್ಸಾ ಭವಿಷ್ಯತಿ ।
ತದಾ ಮರೌ ಭವಿಷ್ಯಂತಿ ಜಕಪೂರ್ಣಾಃ ಪಯೋಧರಾಃ ॥೪೨॥

ರಸವಚ್ಚ ಪ್ರದಾಸ್ಯಂತಿ ತೋಯಂ ತೇ ಭೃಗುನಂದನ ।
ಉದಂಕಮೇಘಾ ಇತ್ಯುಕ್ತಾಃ ಖ್ಯಾತಿಂ ಯಾಸ್ಯಂತಿ ಚಾಪಿ ತೇ ॥೪೩॥

ನಿನಗೆ ಯಾವ ದಿನ ನೀರನ್ನು ಕುಡಿಯಲು ಬಯಕೆ ಉಂಟಾಗುತ್ತದೋ ಆ ದಿನವೇ ಮರುಭೂಮಿಯಲ್ಲಿ ಜಲದಿಂದ ತುಂಬಿದ ಮೋಡಗಳನ್ನು ನಿರ್ಮಿಸುತ್ತೇನೆ. ಆ

ಮೇಘಗಳು ನಿನಗೆ ಸವಿಯಾದ ನೀರನ್ನು ನೀಡುತ್ತವೆ. ಅಂದಿನಿಂದ ಆ ಮೇಘಗಳಿಗೆ ಉದಂಕ ಮೇಘಗಳು ಎಂದು ಜಗತ್ತಿನಲ್ಲಿ ಖ್ಯಾತಿ ಉಂಟಾಗುತ್ತದೆ.

ವೈಶಂಪಾಯನಃ

ಇತ್ಯುಕ್ತಃ ಪ್ರೀತಿಮಾನ್ ವಿಪ್ರಃ ಕೃಷ್ಣೇನ ಸ ಬಭೂವ ಹ ।
ಅದ್ಯಾಪ್ಯುದಂಕಮೇಘಾಶ್ಚ ಮರೌ ವರ್ಷಂತಿ ಭಾರತ ॥೪೪॥

ವೈಶಂಪಾಯನ– ಈ ರೀತಿಯಾಗಿ ಕೃಷ್ಣನು ಹೇಳುತ್ತಿರಲು ಉದಂಕನು ಕೃಷ್ಣನ ಮಾತುಗಳಿಂದ ಪ್ರಸನ್ನನಾದನು. ಕೃಷ್ಣನ ವರದಾನದಂತೆ ಈಗಲೂ ಮರುಭೂಮಿಯಲ್ಲಿ ಉದಂಕ ಮೇಘಗಳು ಮಳೆಯನ್ನು ಸುರಿಸುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಉದಂಕಸ್ಯ ಜಲದಾನಪ್ರಕಾರಕಥನಂ
ನಾಮ ಪಂಚಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತಾರನೆಯ ಅಧ್ಯಾಯ

ವೈಶಂಪಾಯನರು ಜನಮೇಜಯರಾಜನಿಗೆ ಉದಂಕೋಪಾಖ್ಯಾನವನ್ನು ಹೇಳಲು ಆರಂಭಿಸಿದುದು. ಉದಂಕನು ಗುರುಸೇವೆಯನ್ನು ಮಾಡಿದ್ದರೂ ಗೌತಮರು ಉದಂಕನಲ್ಲಿ ಸಂತುಷ್ಟರಾಗಿಯೇ ಗುರುಕುಲದಿಂದ ಬಿಡದಿರುವುದು. ಒಂದು ಬಾರಿ ಗೌತಮರ ಶಾಸನದಂತೆ ಕಾಡಿನಿಂದ ಕಟ್ಟಿಗೆಯನ್ನು ತರುವಾಗ ಕಾಷ್ಠದಲ್ಲಿ ಸಿಕ್ಕಿಬಿದ್ದ ತನ್ನ ನೆರೆಕೂದಲನ್ನು ಕಂಡು ಉದಂಕನು ದುಃಖ ಹೊಂದುವುದು. ನಂತರ ತನ್ನ ವೃದ್ಧಾಪ್ಯದಿಂದ ದುಃಖಪಡುತ್ತಿರುವ ಉದಂಕನಿಗೆ ಗುರುಗಳು ಸಮಾಧಾನಪಡಿಸಿ, ಗುರುಪತ್ನಿಯ ಆದೇಶದಂತೆ ಕುಂಡಲವನ್ನು ತರಲು ಸೌದಾಸನನ್ನು ಕುರಿತು ಉದಂಕನು ಹೊರಟಿದುದು.

ಜನಮೇಜಯಃ

ಉದಂಕಃ ಕೇನ ತಪಸಾ ಸಂಯುಕ್ತಃ ಸ ಮಹಾತಪಾಃ ।
ಯಃ ಶಾಪಂ ದಾತುಕಾಮೋಽಭೂದ್ ವಿಷ್ಣವೇ ಪ್ರಭವಿಷ್ಣವೇ ॥೧॥

ಜನಮೇಜಯ– ಬ್ರಾಹ್ಮಣಶ್ರೇಷ್ಠರೇ, ಎಲ್ಲ ಪ್ರಾಣಿಗಳ ಉತ್ಪತ್ತಿಗೆ ಕಾರಣನಾದ ಭಗವಂತನಿಗೂ ಉದಂಕಮುನಿಯು ಶಾಪವನ್ನು ಕೊಡಲು ಮುಂದಾದನು. ಕೃಷ್ಣನಿಗೂ ಶಾಪಕೊಡುವ ಮಹಾಸಿದ್ಧಪುರುಷನು ಇವನಾಗಿದ್ದಾನೆ ಎಂದಾದರೆ ಆ ಉದಂಕನು ಮಾಡಿದ ತಪಸ್ಸು ಯಾವುದು? ಅದನ್ನು ನನಗೆ ತಿಳಿಸಿರಿ.

ವೈಶಂಪಾಯನಃ

ಉದಂಕೋ ಮಹತಾ ಯುಕ್ತಃ ತಪಸಾ ಜನಮೇಜಯ ।
ಗುರುಭಕ್ತಃ ಸ ತೇಜಸ್ವೀ ನಾನ್ಯತ್ ಕಿಂಚಿದಪೂಜಯತ್ ॥೨॥

ವೈಶಂಪಾಯನ– ಜನಮೇಜಯನೇ, ಉದಂಕನು ಮಹಾತಪಸ್ವಿಯೂ, ಗುರುಭಕ್ತನೂ, ತೇಜಸ್ವಿಯೂ ಆಗಿದ್ದನು. ಗುರುದೇವತೆಯನ್ನು ಬಿಟ್ಟು ಬೇರೆ ಯಾರನ್ನೂ ಆರಾಧಿಸಲಿಲ್ಲ.

ಸರ್ವೇಷಾಮೃಷಿಪುತ್ರಾಣಾಮೇಷ ಚಾಸೀನ್ಮನೋರಥಃ ।
ಔದಂಕೀಂ ಗುರುವೃತ್ತಿಂ ವೈ ಪ್ರಾಪ್ನುಯಾಮೇತಿ ಭಾರತ ॥೩॥

ಗುರುಕುಲದಲ್ಲಿದ್ದಾಗ ಅವನ ಸಂಗಡಿಗರಾದ ಋಷಿಕುಮಾರರಿಗೂ ಉದಂಕನ ಗುರುಭಕ್ತಿಗೆ ಸಮಾನವಾದ ಭಕ್ತಿಯನ್ನು ತಾವೂ ಹೊಂದಬೇಕೆಂಬ ಅಭಿಲಾಷೆ ಇತ್ತು. ಉದಂಕನ ಗುರುವೃತ್ತಿಯು ಅಷ್ಟು ಆದರ್ಶಪ್ರಾಯವಾಗಿತ್ತು.

ಗೌತಮಸ್ಯ ತು ಶಿಷ್ಯಾಣಾಂ ಬಹೂನಾಂ ಜನಮೇಜಯ ।
ಉದಂಕೇऽಭ್ಯಧಿಕಾ ಪ್ರೀತಿಃ ಸ್ನೇಹಶ್ಚೈವಾಭವತ್ ತದಾ ॥೪॥

ಗೌತಮರೆಂಬ ಗುರುಗಳಿಗೆ ಅನೇಕ ಶಿಷ್ಯರಿದ್ದರು. ಆದರೆ ಗೌತಮರ ಅಧಿಕವಾದ ಪ್ರೀತಿ-ಸ್ನೇಹಗಳು ಉದಂಕನಲ್ಲಿಯೇ ಕೇಂದ್ರೀಕೃತವಾಗಿದ್ದವು.

ಸ ತಸ್ಯ ದಮಶೌಚಾಭ್ಯಾಂ ವಿಕ್ರಾಂತೇನ ಚ ಕರ್ಮಣಾ ।
ಸಮ್ಯಕ್ ಚೈವೋಪಚಾರೇಣ ಗೌತಮಃ ಪ್ರೀತಿಮಾನಭೂತ್ ॥೫॥

ಶ್ರದ್ಧೆಯಿಂದ ಕರ್ತವ್ಯವನ್ನು ಮಾಡುವ, ಇಂದ್ರಿಯಸಂಯಮ, ಅಂತಃಕರಣ ಶುದ್ಧಿ, ಬಹಿರ್ಶುದ್ಧಿ, ಪರಾಕ್ರಮ, ಮುಂತಾದ ಉದಂಕನ ಗುಣಗಳಿಂದ ಗೌತಮರು ಪ್ರೀತರಾಗಿದ್ದರು.

ಅಥ ಶಿಷ್ಯಸಹಸ್ರಾಣಿ ಸಮನುಜ್ಞಾಯ ಗೌತಮಃ ।
ಉದಂಕಂ ಪರಯಾ ಪ್ರೀತ್ಯಾ ನಾಭ್ಯನುಜ್ಞಾತುಮೈಚ್ಛತ ॥೬॥

ಗೌತಮರು ತಮ್ಮ ಬಳಿ ಇರುವ ಸಹಸ್ರಾರು ಶಿಷ್ಯರಿಗೆ ಅವರವರ ವಿದ್ಯಾಭ್ಯಾಸವು ಮುಗಿದ ಬಳಿಕ ಮನೆಗೆ ತೆರಳಲು ಅನುಮತಿಯನ್ನಿತ್ತರು. ಆದರೆ ಉದಂಕನ ಮೇಲಿನ ಪ್ರೀತಿಯಿಂದ ಅವನಿಗೆ ಮನೆಗೆ ಹೋಗಲು ಅನುಮತಿಯನ್ನು ನೀಡಲೇ ಇಲ್ಲ.

ತಂ ಕ್ರಮೇಣ ಜರಾ ತಾತ ಪರಿರೇಭೇ ಮಹಾಮುನಿಮ್ ।
ನ ಚಾನ್ವಬುಧ್ಯತ ತದಾ ಸ ಮುನಿರ್ಗುರುವತ್ಸಲಃ ॥೭॥

ಗುರುವಾತ್ಸಲ್ಯದಿಂದಲೇ ಕಾಲ ಕಳೆಯುತ್ತಿರುವ ಉದಂಕನಿಗೆ ಮುಪ್ಪು ಆವರಿಸಿತು. ಆದರೆ ತನಗೆ ಬಂದಿರುವ ಮುಪ್ಪನ್ನು ಉದಂಕನು ತಿಳಿಯಲೇ ಇಲ್ಲ.

ತತಃ ಕದಾಚಿದ್ ರಾಜೇಂದ್ರ ಕಾಷ್ಠಾನ್ಯಾನಯಿತುಂ ಯಯೌ ।
ಉದಂಕಃ ಕಾಷ್ಠಭಾರಂ ತು ಮಹಾಂತಂ ಸಮುಪಾನಯತ್ ॥೮॥

ಜನಮೇಜಯನೇ, ಒಂದು ಬಾರಿ ಉದಂಕನು ಗುರುಗಳ ಆದೇಶದಂತೆ ಕಟ್ಟಿಗೆಯನ್ನು ತರಲು ಕಾಡಿಗೆ ಹೋದನು. ಅಲ್ಲಿ ಅವನು ಕಟ್ಟಿಗೆಯ ರಾಶಿ ಮಾಡಿ, ದೊಡ್ಡದಾದ ಹೊರೆಯನ್ನು ಕಟ್ಟಿ ಅದನ್ನು ಹೊತ್ತುಕೊಂಡು ಆಶ್ರಮದ ಕಡೆ ಹೊರಟನು.

ಸ ತದ್ಭಾರಾಭಿಭೂತಾತ್ಮಾ ಕಾಷ್ಠಭಾರಮರಿಂದಮ ।
ನಿಷ್ಪಿಪೇಷ ಕ್ಷಿತೌ ರಾಜನ್ ಪರಿಶ್ರಾಂತೋ ಬುಭುಕ್ಷಿತಃ ॥೯॥

ಆ ಕಟ್ಟಿಗೆಯ ಭಾರದಿಂದ ಬಳಲಿದ ಉದಂಕನು ತಲೆಯ ಮೇಲಿದ್ದ ಹೊರೆಯನ್ನು ಕೆಳಗಡೆ ಇಳಿಸಲು ಪ್ರಯತ್ನಿಸಿದನು. ಆ ಭಾರದಿಂದ ಕಂಗಾಲಾದ, ಹಸಿವೆಯಿಂದ ಬಳಲಿದ ಉದಂಕನು ಕಟ್ಟಿಗೆ ಸಹಿತವಾಗಿ ಭೂಮಿಯ ಮೇಲೆ ಬಿದ್ದನು.

ತಸ್ಯ ಕಾಷ್ಠೇ ವಿಲಗ್ನಾऽಭೂತ್ ಜಟಾ ರೂಪ್ಯಸಮಪ್ರಭಾ ।
ತತಃ ಕಾಷ್ಠೈಃ ಸಹ ತದಾ ಪಪಾತ ಧರಣೀತಲೇ ॥೧೦॥

ಆ ಕೆಳಗೆ ಬಿದ್ದ ಕಾಷ್ಠಭಾರದಲ್ಲಿ ತನ್ನ ಜಟೆಯ ಕೂದಲೊಂದು ಸಿಕ್ಕಿ ಬಿದ್ದಿತು. ಬೆಳ್ಳಿಯ ಕಾಂತಿಯಂತೆ ತನ್ನ ಕೂದಲು ಹೊಳೆಯುತ್ತಾ ಕಾಷ್ಠದಲ್ಲಿ ಸಂಲಗ್ನವಾದುದನ್ನು ಕಂಡು ಉದಂಕನು ಭೂಮಿಯ ಮೇಲೆ ದುಃಖದಿಂದಲೇ ಕುಸಿದನು.

ತತಃ ಸ ಭಾರನಿಷ್ಪಿಷ್ಟಃ ಕ್ಷುಧಾವಿಷ್ಟಶ್ಚ ಭಾರ್ಗವಃ ।
ದೃಷ್ಟ್ವಾ ತಾಂ ವಯಸೋಽವಸ್ಥಾಂ ರುರೋದಾರ್ತಸ್ವರಂ ತದಾ ॥೧೧॥

ಬಳಿಕ ಭಾರದಿಂದ ಕಂಗಾಲಾಗಿರುವ, ಹಸಿವೆಯಿಂದ ಕಂಗೆಟ್ಟಿರುವ ಭಾರ್ಗವನು ತನ್ನ ಕೂದಲು ಬಿಳಿಯಾದದ್ದನ್ನು ಕಂಡು ಆರ್ತಸ್ವರದಿಂದ ರೋದಿಸಿದನು.

ತತೋ ಗುರುಸುತಾ ತಸ್ಯ ಪದ್ಮಪತ್ರಾಯತೇಕ್ಷಣಾ ।
ಜಗ್ರಾಹಾಶ್ರೂಣಿ ಸುಶ್ರೋಣೀ ತಪೋಯುಕ್ತಸ್ಯ ಧೀಮತಃ ॥೧೨॥

ಪಿತುರ್ನಿಯೋಗಾದ್ ಧರ್ಮಜ್ಞಾ ಶಿರಸಾಽವನತಾ ತದಾ ॥೧೩॥

ಆ ಸಮಯದಲ್ಲಿ ತಂದೆಯ ಆದೇಶದಂತೆ ತಲೆಬಾಗಿ ಧರ್ಮಜ್ಞಳಾದ, ಕಮಲಪತ್ರದಂತೆ ವಿಶಾಲವಾದ ಮುಖವನ್ನು ಹೊಂದಿದ್ದ, ಸುಂದರಿಯೂ ಆಗಿದ್ದ, ಗುರುಗಳ ಪುತ್ರಿಯು ತಪೋಯುಕ್ತನಾದ ಉದಂಕನ ಕಣ್ಣೀರನ್ನು ಬೊಗಸೆಯಿಂದ ತುಂಬಿಕೊಂಡಳು.

ತಸ್ಯಾ ನಿಪೇತತುರ್ದಗ್ಧೌ ಕರೌ ತೈರಶ್ರುಬಿಂದುಭಿಃ ।
ನ ಹಿ ತಾನಶ್ರುಪಾತಾನ್ ವೈ ಶಕ್ತಾ ಧಾರಯಿತುಂ ಮಹೀ ॥೧೪॥

ಬೊಗಸೆಯಲ್ಲಿ ಉದಂಕನ ಕಣ್ಣೀರನ್ನು ಧರಿಸಿದ ಕೂಡಲೇ ಗುರುಪುತ್ರಿಯ ಕೈಗಳನ್ನು ಬಿಸಿಯಾದ ಕಣ್ಣೀರಿನಿಂದ ಸುಟ್ಟುಹೋಗಿ ನೆಲದ ಮೇಲೆ ಬಿದ್ದವು. ಆ ದುಃಖಿತನಾದ ಉದಂಕನ ಅಶ್ರುಗಳನ್ನು ಧರಿಸಲು ಭೂದೇವಿಗೂ ಸಾಧ್ಯವಾಗಲಿಲ್ಲ.

ಗೌತಮಸ್ತ ಬ್ರವೀದ್ ವಿಪ್ರಮುದಂಕಂ ಪ್ರೀತಿಮಾನಸಃ ॥೧೫॥

ಗೌತಮರು ಪ್ರಸನ್ನಚಿತ್ತರಾಗಿ ಉದಂಕನಿಗೆ ಹೀಗೆ ಹೇಳಿದರು.

ಗೌತಮಃ

ಕಸ್ಮಾತ್ ತಾತ ತವಾದ್ಯೇಹ ಶೋಕೋತ್ತರಮಿದಂ ಮನಃ ।
ಸ ಸ್ವೈರಂ ಬ್ರೂಹಿ ವಿಪ್ರರ್ಷೇ ಶ್ರೋತುಮಿಚ್ಛಾಮಿ ತೇ ವಚಃ ॥೧೬॥

ಗೌತಮ– ವಿಪ್ರರ್ಷಿಯೇ, ನಿನ್ನ ಶೋಕದ ಕಾರಣವು ಏನೆಂಬುದನ್ನು ಬೇಗ ತಿಳಿಸು. ಅದನ್ನು ತಿಳಿದು ಪರಿಹರಿಸಲು ಬಯಸುತ್ತೇನೆ.

ಉದಂಕಃ

ಭವದ್ಗತೇನ ಮನಸಾ ಭವತ್ಪ್ರಿಯಚಿಕೀರ್ಷಯಾ ।
ಭವದ್ಭಕ್ತಿಗತೇನೇಹ ಭವದ್ಭಾವಾನುಗೇನ ಚ ॥೧೭॥

ಉದಂಕ– ಗುರುದೇವನೇ, ನಿಮ್ಮ ಪ್ರೀತಿಗೋಸ್ಕರವೇ ಸತ್ಕರ್ಮವನ್ನು ಮಾಡುತ್ತಾ ನಿಮ್ಮ ಸೇವೆಯಲ್ಲಿಯೇ ನನ್ನನ್ನು ತೊಡಗಿಸಿಕೊಂಡಿದ್ದೇನೆ. ನಿಮ್ಮ ಮೇಲಿನ ಭಕ್ತಿಯಿಂದ ನನ್ನ ಮನಸ್ಸು ನಿಮ್ಮ ಭಾವಕ್ಕನುಗುಣವಾಗಿ ವರ್ತಿಸುತ್ತಿದೆ.

ಜರೇಯಂ ನಾವಬುದ್ಧಾ ಮೇ ನಾಭಿಜ್ಞಾತಂ ಸುಖಂ ಚ ಮೇ ।
ಶತವರ್ಷೋಷಿತಂ ಹಿ ತ್ವಂ ನ ಮಾಮಭ್ಯನುಜಜ್ಞಿವಾನ್ ॥೧೮॥

ಗುರುಸೇವೆಯಲ್ಲಿಯೇ ನಿರತನಾಗಿ ವರ್ತಿಸುತ್ತಿರುವ ನನಗೆ ಮುಪ್ಪು ಬಂದದ್ದೇ ತಿಳಿಯಲಿಲ್ಲ. ಲೌಕಿಕವಾದ ಸುಖವೆಂದರೆ ಏನೆಂಬುದೇ ನನಗೆ ತಿಳಿಯಲಿಲ್ಲ. ನಿನ್ನ ಆಶ್ರಮಕ್ಕೆ ಬಂದು ನೂರುವರ್ಷಗಳು ಕಳೆದುಹೋದರೂ ನೀವು ನನಗೆ ಮನೆಗೆ ಹೋಗಲು ಅನುಮತಿಯನ್ನು ನೀಡಲಿಲ್ಲ.

ಭವತಾ ಹ್ಯಭ್ಯನುಜ್ಞಾತಾಃ ಶಿಷ್ಯಾಃ ಪ್ರತ್ಯವರಾ ಮಮ ।
ಉಪಪನ್ನಾ ದ್ವಿಜಶ್ರೇಷ್ಠ ಶತಶೋಽಥ ಸಹಸ್ರಶಃ ॥೧೯॥

ಇತ್ತೀಚಿಗೆ ಗುರುಕುಲಕ್ಕೆ ಬಂದ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಸಂಪನ್ನರಾಗಿ ನಿಮ್ಮ ಅನುಮತಿಯನ್ನು ಪಡೆದು ತಮ್ಮ ಗ್ರಾಮಗಳಿಗೆ ತೆರಳಿದ್ದಾರೆ.

ಗೌತಮಃ

ತ್ವತ್ಪ್ರೀತಿಯುಕ್ತೇನ ಮಯಾ ಗುರುಶುಶ್ರೂಷಯಾ ತವ ।
ವ್ಯತಿಕ್ರಾಮನ್ಮಹಾನ್ ಕಾಲೋ ನಾವಬುದ್ಧೋ ದ್ವಿಜರ್ಷಭ ॥೨೦॥

ಗೌತಮ– ಮಗು ಉದಂಕ, ಶ್ರದ್ಧೆಯಿಂದ ನೀನು ಮಾಡಿದ, ನಿರಂತರವಾದ ನಿನ್ನ ಶುಶ್ರೂಷೆಯಿಂದ ನಿನ್ನ ವಿಷಯದಲ್ಲಿ ಪ್ರೀತಿ ಹೊಂದಿರುವ ನನಗೆ ನೀನು ಆಗಮಿಸಿ ನೂರು ವರ್ಷವಾಗಿದೆ ಎಂಬ ಕಾಲದ ಅರಿವೇ ಉಂಟಾಗಲಿಲ್ಲ.

ಕಿಂ ತ್ವದ್ಯ ಯದಿ ತೇ ಶ್ರದ್ಧಾ ಗಮನಂ ಪ್ರತಿ ಭಾರ್ಗವ ।
ಅನುಜ್ಞಾಂ ಪ್ರಾಪ್ಯ ಮತ್ತಸ್ತ್ವಂ ಸ್ವಗೃಹಾನ್ ಗಚ್ಛ ಮಾ ಚಿರಮ್ ॥೨೧॥

ಈಗ ನೀನು ನಿನ್ನ ಊರಿಗೆ ಹೋಗುವುದರಲ್ಲಿ ಶ್ರದ್ಧೆಯನ್ನು ಹೊಂದಿದವನಾಗಿದ್ದರೆ ನನ್ನ ಅನುಜ್ಞೆಯನ್ನು ಪಡೆದು ಈಗಲೇ ನಿನ್ನ ಮನೆಗೆ ತೆರಳಬಹುದು.

ಉದಂಕಃ

ಗುರ್ವರ್ಥಂ ಕಿಂ ಪ್ರಯಚ್ಛಾಮಿ ಬ್ರೂಹಿ ತ್ವಂ ದ್ವಿಜಸತ್ತಮ ।
ಕಿಮುಪಾಹೃತ್ಯ ಗಚ್ಛೇಯಮನುಜ್ಞಾತಸ್ತ್ವಯಾ ವಿಭೋ ॥೨೨॥

ಉದಂಕ– ಬ್ರಾಹ್ಮಣಶ್ರೇಷ್ಠರೇ, ನಾನು ತೆರಳುತ್ತೇನೆ. ಅದಕ್ಕೆ ಮುನ್ನ ಗುರುದಕ್ಷಿಣೆಯಾಗಿ ಏನನ್ನು ನೀಡಲಿ? ದಯಮಾಡಿ ತಿಳಿಸಿರಿ. ತಾವು ಹೇಳಿದ್ದನ್ನು ತಂದುಕೊಟ್ಟು, ಬಳಿಕ ತಮ್ಮ ಅನುಮತಿಯನ್ನು ಪಡೆದು ಮನೆಗೆ ತೆರಳುತ್ತೇನೆ.

ಗೌತಮಃ

ದಕ್ಷಿಣಾ ಪರಿತೋಷೋ ವೈ ಗುರೂಣಾಂ ಸದ್ಭಿರುಚ್ಯತೇ ।
ತವ ಹ್ಯಾಚರತೋ ಧರ್ಮಂ ತುಷ್ಟೋಽಹಂ ವೈ ನ ಸಂಶಯಃ ॥೨೩॥

ಗೌತಮ– ಉದಂಕನೇ, ಶಿಷ್ಯರಾದವರಿಗೆ ಗುರುಸೇವೆಯನ್ನು ಮಾಡಿ ತೃಪ್ತಿ ಪಡಿಸುವುದೇ ಉತ್ಕೃಷ್ಟವಾದ ಗುರುದಕ್ಷಿಣೆಯಾಗಿದೆ ಎಂದು ಸತ್ಪುರುಷರ ಅಭಿಪ್ರಾಯ. ನೀನು ಗುರುಸೇವೆಯನ್ನು ನಿರ್ದುಷ್ಟವಾಗಿ ಆಚರಿಸಿರುವೆ. ಇದರಿಂದ ನಾನು ಸಂತುಷ್ಟನಾಗಿದ್ದೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಇತ್ಥಂ ಹಿ ಪರಿತುಷ್ಟಂ ಮಾಂ ವಿಜಾನೀಹಿ ಭೃಗೂದ್ವಹ ॥೨೪॥

ಯುವಾ ಷೋಡಶವರ್ಷೋ ಹಿ ತದದ್ಯ ತ್ವಂ ಭವಿಷ್ಯಸಿ ।
ದದಾನಿ ಪತ್ನೀಂ ಕನ್ಯಾಂ ಚ ಸ್ವಾಂ ತೇ ದುಹಿತರಂ ದ್ವಿಜ ॥೨೫॥

ಏತಾಮೃತೇ ಹಿ ನಾನ್ಯಾ ವೈ ತತ್ತೇಜೋಽರ್ಹತಿ ಸೇವಿತುಮ್ ॥೨೬॥

ಭೃಗುನಂದನನೇ, ನೀನು ನನ್ನ ಅನುಗ್ರಹದಿಂದ ನನ್ನನ್ನು ಸಂತೋಷ ಪಡಿಸಿರುವ ಕಾರಣದಿಂದ ಹದಿನಾರು ವರ್ಷದ ಯೌವನವನ್ನು ಪಡೆಯುವವನಾಗುತ್ತಿ. ನನ್ನ ಮಗಳನ್ನೇ ಸಂತುಷ್ಟಿಯಿಂದ ನಿನಗೆ ಮದುವೆ ಮಾಡಿಕೊಡುತ್ತೇನೆ. ನಿನ್ನ ವಿಷಯದಲ್ಲಿ ಸಂತುಷ್ಟನಾಗಿದ್ದೇನೆಂದು ತಿಳಿ. ತೇಜೋವಿಶಿಷ್ಟನಾದ ನಿನ್ನನ್ನು ನನ್ನ ಮಗಳು ಚೆನ್ನಾಗಿ

ಉಪಚರಿಸುತ್ತಾಳೆ. ಇವಳಷ್ಟು ಚೆನ್ನಾಗಿ ನಿನ್ನನ್ನು ಸೇವಿಸಲು ಬೇರೆ ಯಾರಿಗೂ ಸಾಧ್ಯವಿರುವುದಿಲ್ಲ.

ವೈಶಂಪಾಯನಃ

ತತಸ್ತಾಂ ಪ್ರತಿಜಗ್ರಾಹ ಯುವಾ ಭೂತ್ವಾ ತಪಸ್ವಿನೀಮ್ ।
ಗುರುಣಾ ಚಾಭ್ಯನುಜ್ಞಾತೋ ಗುರುಪತ್ನೀಮಥಾಬ್ರವೀತ್ ॥೨೭॥

ವೈಶಂಪಾಯನ– ಜನಮೇಜಯನೇ, ಕುಲಪತಿಗಳಾದ ಗೌತಮರ ಅನುಗ್ರಹದಿಂದ ಉದಂಕನು ಹದಿನಾರು ವರ್ಷದ ನವಯುವಕನಾದನು. ಯಶೋವಂತಳಾದ ಗುರುಪುತ್ರಿಯನ್ನು ಅವರ ಆದೇಶದಂತೆ ಸ್ವೀಕರಿಸಿದನು. ಬಳಿಕ ಗೌತಮರ ಅನುಮತಿಯನ್ನು ಪಡೆದು ಅವರ ಪತ್ನಿಯ ಬಳಿ ಹೋಗಿ ಹೇಳಿದನು.

ಉದಂಕಃ

ಕಿಂ ಭವತ್ಯೈ ಪ್ರಯಚ್ಛಾಮಿ ಗುರ್ವರ್ಥಂ ವಿನಿಯುಂಕ್ಷ್ವ ಮಾಮ್ ।
ಪ್ರಿಯಂ ಹಿ ತವ ಕಾಂಕ್ಷಾಮಿ ಪ್ರಾಣೈರಪಿ ಧನೈರಪಿ ॥೨೮॥

ಉದಂಕ– ಗುರುಪತ್ನಿಯೇ, ನಾನು ನಿನಗೆ ಗುರುದಕ್ಷಿಣಾ ರೂಪವಾಗಿ ಏನನ್ನು ಕೊಡಲಿ? ಆದೇಶಿಸು. ಪ್ರಾಣವನ್ನು ಒತ್ತೆಯಿಟ್ಟಾದರೂ ಐಶ್ವರ್ಯದಿಂದಾಗಲಿ ನಿನ್ನನ್ನು ಸೇವಿಸುವುದು ನನಗೆ ಹಿತವೆನಿಸಿದೆ. ನಿನಗೆ ಇಷ್ಟವಾದ ಕಾರ್ಯವನ್ನು ಮಾಡಲು ಬಯಸಿದ್ದೇನೆ.

ಯದ್ ದುರ್ಲಭಂ ಹಿ ಲೋಕೇಽಸ್ಮಿನ್ ರತ್ನಮತ್ಯದ್ಭುತಂ ಭವೇತ್ ।
ತದಾನಯೇಯಂ ತಪಸಾ ನ ಹಿ ಮೇಽತ್ರಾಸ್ತಿ ಸಂಶಯಃ ॥೨೯॥

ಈ ಲೋಕದಲ್ಲಿ ಅತ್ಯಂತ ದುರ್ಲಭವಾದ, ಮಹತ್ವವಾದ, ಅದ್ಭುತಪೂರ್ಣವಾದ ಯಾವ ವಸ್ತುವಿದೆ ಎನಿಸುತ್ತದೋ ಅದನ್ನು ಬೇಕಾದರೂ ತಪಸ್ಸಿನಿಂದ ಸಂಪಾದಿಸಿಕೊಂಡು ತಂದುಕೊಡುತ್ತೇನೆ. ಯಾವ ಸಂಶಯವನ್ನೂ ತಾಳಬೇಡ.

ಅಹಲ್ಯಾ

ಪರಿತುಷ್ಟಾಽಸ್ಮಿ ತೇ ವಿಪ್ರ ನಿತ್ಯಂ ಭಗವತಾ ಸಹ ।
ಪರ್ಯಾಪ್ತಮೇತದ್ ಭದ್ರಂ ತೇ ಗಚ್ಛ ತಾತ ಯಥೇಪ್ಸಿತಮ್ ॥೩೦॥

ಅಹಲ್ಯಾ– ಪಾಪರಹಿತ ವಿಪ್ರನೇ, ನೀನು ಪ್ರತಿದಿನವೂ ಭಕ್ತಿಯಿಂದ ಮಾಡುತ್ತಿರುವ ಸೇವೆಯಿಂದಲೇ ನಾನು ಸಂತುಷ್ಟಳಾಗಿದ್ದೇನೆ. ನನಗೆ ದೊಡ್ಡ ಗುರುದಕ್ಷಿಣೆಯು ಸಂದಾಯವಾಗಿದೆ. ನೀನು ನಿನ್ನ ಮನಸ್ಸಿದ್ದೆಡೆ ಪ್ರಯಾಣ ಬೆಳೆಸಬಹುದು.

ವೈಶಂಪಾಯನಃ

ಉದಂಕಸ್ತು ಮಹಾರಾಜ ಪುನರೇವಾಬ್ರವೀದ್ ವಚಃ ॥೩೧॥

ವೈಶಂಪಾಯನ– ರಾಜನೇ, ಉದಂಕನು ಗೌತಮರ ಪತ್ನಿಯು ಹೀಗೆ ಹೇಳುತ್ತಿದ್ದರೂ ಪುನಃ ಈ ಮಾತುಗಳನ್ನು ಆಡಿದನು.

ಉದಂಕಃ

ಆಜ್ಞಾಪಯಸ್ವ ಮಾಂ ಮಾತಃ ಕಿಂ ಕರ್ತವ್ಯಂ ಪ್ರಿಯಂ ತವ ॥೩೨॥

ಉದಂಕ– ತಾಯಿಯೇ ಆಜ್ಞಾಪಿಸು. ನಿನಗೆ ಪ್ರಿಯವಾದುದನ್ನು ತಂದುಕೊಡುತ್ತೇನೆ. ನಾನು ಏನು ಮಾಡಲೆಂದು ಹೇಳು ಎಂದು ಮತ್ತೂ ಮತ್ತೂ ಕೇಳಿದನು.

ಅಹಲ್ಯಾ

ಸೌದಾಸಪತ್ನ್ಯಾ ವಿಧೃತೇ ದಿವ್ಯೇ ಯೇ ಮಣಿಕುಂಡಲೇ ।
ತೇ ಮಮಾನಯ ಭದ್ರಂ ತೇ ಗುರ್ವರ್ಥಃ ಸ ಕೃತೋ ಭವೇತ್ ॥೩೩॥

ಅಹಲ್ಯಾ– ಉದಂಕನೇ, ನಿನಗೆ ಮಂಗಳವಾಗಲಿ. ರಾಜನಾಗಿರುವ ಸೌದಾಸನ ಪತ್ನಿಯು ತನ್ನ ಕಿವಿಗಳಲ್ಲಿ ರತ್ನಮಯವಾದ ಎರಡು ಕುಂಡಲಗಳನ್ನು ಧರಿಸಿದ್ದಾಳೆ. ಅವುಗಳನ್ನು ತಂದುನೀಡು. ನೀನು ಗುರುವಿನ ನಿಮಿತ್ತ ಸತ್ಕರ್ಮವನ್ನು ಮಾಡಿದಂತಾಗುತ್ತದೆ.

ವೈಶಂಪಾಯನಃ

ಸ ತಥೇತಿ ಪ್ರತಿಶ್ರುತ್ಯ ಜಗಾಮ ಜನಮೇಜಯ ।
ಗುರುಪತ್ನೀಪ್ರಿಯಾರ್ಥಂ ವೈ ತೇ ಸಮಾನಯಿತುಂ ತದಾ ॥೩೪॥

ವೈಶಂಪಾಯನ– ಜನಮೇಜಯ, ಬಳಿಕ ಉದಂಕನು ಹಾಗೆಯೇ ಆಗಲೆಂದು ಗುರುಪತ್ನಿಗೆ ಪ್ರಿಯವನ್ನುಂಟು ಮಾಡುವ ಕಾರಣದಿಂದ ಸೌದಾಸನ ಪತ್ನಿಯ ಕರ್ಣ-ಕುಂಡಲಗಳನ್ನು ತರಲು ಹೊರಟು ಹೋದನು.

ಸ ಜಗಾಮ ತತಃ ಶೀಘ್ರಮುದಂಕೋ ಬ್ರಾಹ್ಮಣರ್ಷಭಃ ।
ಸೌದಾಸಂ ಪುರುಷಾದಂ ವೈ ಭಿಕ್ಷಿತುಂ ಮಣಿಕುಂಡಲೇ ॥೩೫॥

ಬ್ರಾಹ್ಮಣಶ್ರೇಷ್ಠನಾದ ಉದಂಕನು ಕರ್ಣಕುಂಡಲಗಳನ್ನು ಬೇಡಿ ತರುವ ದೃಷ್ಟಿಯಿಂದ ಈಗಾಗಲೇ ರಾಕ್ಷಸನಾಗಿರುವ, ನರಭಕ್ಷಕನಾಗಿರುವ ಸೌದಾಸನ ಬಳಿ ಭಿಕ್ಷೆ ಬೇಡಲು ಹೋದನು.

ಗೌತಮಸ್ತ ಬ್ರವೀದ್ ಪತ್ನೀಮುದಂಕೋ ನಾತ್ರ ದೃಶ್ಯತೇ ।
ಇತಿ ಪೃಷ್ಟಾ ತಮಾಚಷ್ಟ ಕುಂಡಲಾರ್ಥಂ ಗತಂ ತು ವೈ ॥೩೬॥

ಆಶ್ರಮದಲ್ಲಿ ಉದಂಕನು ಕಣ್ಮರೆಯಾದುದನ್ನು ಕಂಡು ಗೌತಮರು ಪತ್ನಿಯ ಬಳಿ ವಿಚಾರಿಸಿದರು. ಅಹಲ್ಯೆಯು ಉದಂಕನು ಸೌದಾಸನ ಪತ್ನಿಯಿಂದ ಕರ್ಣಕುಂಡಲವನ್ನು ತರಲು ಹೋಗಿದ್ದಾನೆ, ನಾನೇ ಹೇಳಿದ್ದೇನೆ ಎಂದು ತಿಳಿಸಿದಳು.

ತತಃ ಪ್ರೋವಾಚ ಪತ್ನೀಂ ಸ ನ ತೇ ಸಮ್ಯಗಿದಂ ಕೃತಮ್ ।
ಶಪ್ತಃ ಸ ಪಾರ್ಥಿವೋ ನೂನಂ ಬ್ರಾಹ್ಮಣಂ ತಂ ಹನಿಷ್ಯತಿ ॥೩೭॥

ಅಹಲ್ಯೆಯ ಮಾತನ್ನು ಕೇಳಿಸಿಕೊಂಡ ಗೌತಮರು ದುಃಖದಿಂದ ಇಂತು ನುಡಿದರು- ದೇವಿಯೇ, ನೀನು ಚೆನ್ನಾಗಿ ಯೋಚಿಸಿ ಕಾರ್ಯವನ್ನು ಆದೇಶಿಸಬೇಕಿತ್ತು. ಸೌದಾಸನು ಇಂದು ಶಾಪದ ಕಾರಣದಿಂದ ರಾಕ್ಷಸನಾಗಿದ್ದಾನೆ. ಅವನ ಬಳಿ ಉದಂಕನು ಹೊರಟರೆ ಅವನನ್ನು ತಿಂದೇ ಮುಗಿಸುತ್ತಾನೆ.

ಅಹಲ್ಯಾ

ಅಜಾನಂತ್ಯಾ ನಿಯುಕ್ತಃ ಸ ಭಗವನ್ ಬ್ರಾಹ್ಮಣೋऽದ್ಯ ವೈ ।
ಭವತ್ಪ್ರಸಾದಾನ್ನ ಭಯಂ ಕಿಂಚಿತ್ ತಸ್ಯ ಭವಿಷ್ಯತಿ ॥೩೮॥

ಅಹಲ್ಯಾ– ಪೂಜ್ಯರೇ, ನಾನು ಈ ವಿಷಯವನ್ನು ತಿಳಿಯದವಳಾದೆ. ಸೌದಾಸನ ಪತ್ನಿಯಿಂದ ಕುಂಡಲವನ್ನು ತರಲು ಹೇಳಿದೆ. ಆದರೆ ನಿಮ್ಮ ಅನುಗ್ರಹವಿರುವ ಉದಂಕನಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲವೆಂಬ ವಿಶ್ವಾಸ ನನಗಿದೆ.

ವೈಶಂಪಾಯನಃ

ಇತ್ಯುಕ್ತಃ ಪ್ರಾಹ ತಾಂ ಪತ್ನೀಮೇವಮಸ್ತ್ವಿತಿ ಗೌತಮಃ ।
ಉದಂಕೋऽಪಿ ವನೇ ಶೂನ್ಯೇ ರಾಜಾನಂ ತಂ ದದರ್ಶ ಹ ॥೩೯॥

ವೈಶಂಪಾಯನ– ಈ ರೀತಿಯಾಗಿ ಅಹಲ್ಯೆಯು ಹೇಳಿದಾಗ ಗೌತಮರು, ಹಾಗೆಯೇ ಆಗಲಿ. ಉದಂಕನಿಗೆ ಸೌದಾಸನಿಂದ ತೊಂದರೆಯಾಗದಿರಲಿ ಎಂದು ಆಶೀರ್ವದಿಸಿದರು. ಅತ್ತ ಉದಂಕನು ಒಂದು ನಿರ್ಜನವಾದ ಅರಣ್ಯದಲ್ಲಿ ರಾಕ್ಷಸನಾಗಿರುವ ಸೌದಾಸರಾಜನನ್ನು ನೋಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಸೌದಾಸದರ್ಶನಕಥನಂ ನಾಮ ಷಟ್‌ಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೇಳನೆಯ ಅಧ್ಯಾಯ

ಶಾಪದಿಂದ ರಾಕ್ಷಸನಾಗಿರುವ ಸೌದಾಸನ ಬಳಿ ಉದಂಕನು ಸಾಗಿದುದು. ಸೌದಾಸನು ಉದಂಕನನ್ನು ತಿನ್ನಲು ಬಂದಾಗ ಕರ್ತವ್ಯವನ್ನು ಮುಗಿಸಿ ಪುನಃ ಬರುತ್ತೇನೆಂದು ಸಮಾಧಾನ ಪಡಿಸಿದುದು. ಸೌದಾಸನ ಬಳಿ ಕುಂಡಲವನ್ನು ಬೇಡಿದುದು. ಸೌದಾಸನ ಮಾತಿಗನುಗುಣವಾಗಿ ಉದಂಕನು ಅವನ ಪತ್ನಿಯ ಬಳಿ ಹೋಗಿ ಕುಂಡಲವನ್ನು ಬೇಡಿದಾಗ, ಗಂಡನ ಅನುಮತಿಯ ಚಿಹ್ನೆಯನ್ನು ಧರಿಸಿ ಬರುವಂತೆ ಮದಯಂತಿಯು ಹೇಳಿದುದು.

ವೈಶಂಪಾಯನಃ

ಸ ತಂ ದೃಷ್ಟ್ವಾ ತಥಾಭೂತಂ ರಾಜಾನಂ ಘೋರದರ್ಶನಮ್ ।
ದೀರ್ಘಶ್ಮಶ್ರುಧರಂ ನ್ಯಾಣಾಂ ಶೋಣಿತೇನ ಸಮುಕ್ಷಿತಮ್ ॥೧॥

ಚಕಾರ ನ ವ್ಯಥಾಂ ವಿಪ್ರೋ ರಾಜಾ ತ್ವೇನಮಥಾಬ್ರವೀತ್ ।
ಪ್ರತ್ಯುತ್ಥಾಯ ಮಹಾತೇಜಾ ಭಯಕರ್ತಾ ಯಮೋಪಮಃ ॥೨॥

ವೈಶಂಪಾಯನ– ಜನಮೇಜಯನೇ, ಉದಂಕನು ಮಹಾಭಯಂಕನಾಗಿರುವ, ದೀರ್ಘವಾದ ಗಡ್ಡ-ಮೀಸೆಗಳನ್ನು ಹೊಂದಿರುವ, ಮನುಷ್ಯರನ್ನು ಭಕ್ಷಿಸಿ ಅವರ ರಕ್ತದಿಂದ ತೊಯ್ದು ಹೋಗಿರುವ ರಾಕ್ಷಸನಾದ ಸೌದಾಸನನ್ನು ನೋಡಿ ವಿಪ್ರಶ್ರೇಷ್ಠನು ಹೆದರಿಕೊಳ್ಳಲಿಲ್ಲ. ಉದಂಕನು ತನ್ನ ಬಳಿ ಬಂದೊಡನೆ ಭಯವನ್ನು ಹುಟ್ಟಿಸುತ್ತಿದ್ದ ಸೌದಾಸನು ಯಮಸದೃಶನಾಗಿಯೇ ಕಾಣಿಸುತ್ತಿದ್ದ. ಇಂತಹ ಸೌದಾಸನು ಮಹಾತೇಜಸ್ವಿಯಾದ ಉದಂಕನ ಎದುರು ಬಂದು ಹೇಳುತ್ತಾನೆ.

ಸೌದಾಸಃ

ದಿಷ್ಟ್ಯಾ ತ್ವಮಸಿ ಕಲ್ಯಾಣ ಷಷ್ಠೇ ಕಾಲೇ ಮಮಾಂತಿಕಮ್ ।
ಭಕ್ಷ್ಯಂ ಮೃಗಯಮಾಣಸ್ಯ ಸಂಪ್ರಾಪ್ತೋ ದ್ವಿಜಸತ್ತಮ ॥೩॥

ಸೌದಾಸ– ಕಲ್ಯಾಣರೂಪಿಯಾದ ವಿಪ್ರನೇ, ದಿನದ ಆರನೆಯ ಭಾಗದಲ್ಲಿ ನನ್ನ ಅದೃಷ್ಟದಿಂದ ನೀನು ಇಲ್ಲಿಗೆ ಆಗಮಿಸಿರುವಿ. ನಾನು ಆಹಾರವನ್ನು ಹುಡುಕುವ ಸಮಯದಲ್ಲಿಯೇ ನೀನು ಸರಿಯಾಗಿ ನನಗೆ ಖಾದ್ಯವಾಗಿ ಸಿಕ್ಕಿರುವಿ.

ನ ಚ ಶಕ್ಯಸ್ತ್ವಮುತ್ಸ್ರಷ್ಟುಂ ಕ್ಷುಧಿತಸ್ಯ ಮಮಾದ್ಯ ವೈ ॥೪॥

ನೀನು ಹಸಿದಿರುವ ನನ್ನ ಕೈಯಿಂದ ತಪ್ಪಿಸಿಕೊಳ್ಳಲು ಸಮರ್ಥನಾಗಿರುವುದಿಲ್ಲ. ಇಂದು ನಿನ್ನನ್ನು ತಿಂದುಬಿಡುತ್ತೇನೆ.

ಉದಂಕಃ

ರಾಜನ್ ಗುರ್ವರ್ಥಿನಂ ವಿದ್ಧಿ ಚರಂತಂ ಮಾಮಿಹಾಗತಮ್ ।
ನ ಚ ಗುರ್ವರ್ಥಮುದ್ಯುಕ್ತಂ ಹಿಂಸ್ಯಮಾಹುರ್ಮನೀಷಿಣಃ ॥೫॥

ಉದಂಕ– ರಾಜನೇ, ನಾನು ಗುರುದಕ್ಷಿಣೆಯನ್ನು ಸಂಗ್ರಹಿಸಲು ಅಲ್ಲಲ್ಲಿ ಸುತ್ತಾಡುತ್ತಾ ನಿನ್ನ ಬಳಿ ಬಂದಿದ್ದೇನೆ. ಗುರುದಕ್ಷಿಣೆಗೋಸ್ಕರ ಸಂಚರಿಸುವ ವ್ಯಕ್ತಿಯನ್ನು ಹಿಂಸಿಸಬಾರದೆಂದು ತಿಳಿದವರು ಹೇಳುತ್ತಾರೆ.

ಸೌದಾಸಃ

ಷಷ್ಠೇ ಕಾಲೇ ಮಮಾಹಾರೋ ವಿಹಿತೋ ದ್ವಿಜಸತ್ತಮ ।
ನ ಶಕ್ಯಸ್ತ್ವಂ ಸಮುತ್ಸ್ರಷ್ಟುಂ ಕ್ಷುಧಿತೇನ ಮಯಾऽದ್ಯ ವೈ ॥೬॥

ಸೌದಾಸ– ಬ್ರಾಹ್ಮಣಶ್ರೇಷ್ಠನೇ, ದಿನದ ಆರನೆಯ ಭಾಗದಲ್ಲಿ ರಾಕ್ಷಸನಾದ ನನಗೆ ಆಹಾರವು ವಿಹಿತವಾಗಿದೆ. ಇದು ನನ್ನ ಆಹಾರದ ಸಮಯ. ಹಸಿವೆಯಿಂದ ಪೀಡಿತನೂ ಆಗಿದ್ದೇನೆ. ಆದ್ದರಿಂದ ನೀನು ನನಗೆ ತಿನ್ನಲು ಅರ್ಹನಾಗಿರುವಿ. ನನ್ನಿಂದ ಈ ಮಾತುಗಳ ಮೂಲಕ ತಪ್ಪಿಸಿಕೊಳ್ಳಲು ನಿನ್ನಿಂದ ಸಾಧ್ಯವಿಲ್ಲ.

ಉದಂಕಃ

ಏವಮಸ್ತು ಮಹಾರಾಜ ಸಮಯಃ ಕ್ರಿಯತಾಂ ತು ವೈ ।
ಗುರ್ವರ್ಥಮಭಿನಿರ್ವರ್ತ್ಯ ಪುನರೇಷ್ಯಾಮಿ ತೇ ವಶಮ್ ॥೭॥

ಉದಂಕ– ರಾಜನೇ, ಹಾಗಾದರೆ ನಾನೂ ನೀನು ಒಂದು ನಿರ್ಬಂಧನೆಯನ್ನು ಮಾಡಿಕೊಳ್ಳೋಣ. ಗುರುದಕ್ಷಿಣೆಯನ್ನು ಸಂಗ್ರಹಿಸುವ ತನಕ ನೀನು ನನ್ನನ್ನು ತಿನ್ನಬಾರದು. ಗುರುದಕ್ಷಿಣೆಯನ್ನು ಸಮರ್ಪಿಸಿದ ಬಳಿಕ ನಾನು ನಿನ್ನ ಬಳಿ ಬರಬೇಕು ಎಂಬ ನಿಯಮವನ್ನು ಹಾಕಿಕೊಳ್ಳೋಣ. ಗುರುದಕ್ಷಿಣೆಯನ್ನು ನೀಡಿ ನಿನ್ನ ವಶನಾಗುತ್ತೇನೆ.

ಸಂಶ್ರುತಶ್ಚ ಮಯಾ ಯೋಽರ್ಥೋ ಗುರವೇ ರಾಜಸತ್ತಮ ।
ತ್ವದಧೀನಃ ಸ ರಾಜೇಂದ್ರ ತಂ ತ್ವಾ ಭಿಕ್ಷೇ ನರೇಶ್ವರ ॥೮॥

ಇಷ್ಟಾಗಿ ನಾನು ಗುರುಗಳಿಗೆ ಯಾವ ವಸ್ತುವನ್ನು ನೀಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದೇನೋ ಅದು ನಿನ್ನ ಅಧೀನವಾಗಿಯೇ ಇದೆ. ಅಂತಹ ವಸ್ತುವನ್ನು ನಿನ್ನಿಂದ ನಾನು ಬೇಡುತ್ತಿದ್ದೇನೆ.

ದದಾಸಿ ವಿಪ್ರಮುಖ್ಯೇಭ್ಯಃ ತ್ವಂ ಹಿ ರತ್ನಾನಿ ನಿತ್ಯದಾ ।
ದಾತಾ ಚ ತ್ವಂ ನರವ್ಯಾಘ್ರ ಪಾತ್ರಭೂತಃ ಕ್ಷಿತಾವಹಮ್ ॥೯॥

ಪಾತ್ರಂ ಪ್ರತಿಗ್ರಹೇ ಚಾಪಿ ವಿದ್ಧಿ ಮಾಂ ನೃಪಸತ್ತಮ ॥೧೦॥

ರಾಜನ್, ನೀನು ವಿಪ್ರಶ್ರೇಷ್ಠರಿಗೆ ಅನೇಕ ವಿಧಗಳಾದ ರತ್ನಗಳನ್ನು ದಾನ ಮಾಡುತ್ತಲೇ ಇರುವೆ. ನೀನು ಈ ಭೂಮಿಯಲ್ಲಿ ಶ್ರೇಷ್ಠ ದಾನಿ ಎನಿಸಿದರೆ, ದಾನ ಸ್ವೀಕರಿಸುವವರಲ್ಲಿ ನಾನು ಸತ್ಪಾತ್ರನಾಗಿದ್ದೇನೆ ಎಂದು ಅರ್ಥೈಸಿಕೊ.

ಉಪಾಹೃತ್ಯ ಗುರೋರರ್ಥಂ ತ್ವದಾಯತ್ತಮರಿಂದಮ ।
ಸಮಯೇನೇಹ ರಾಜೇಂದ್ರ ಪುನರೇಷ್ಯಾಮಿ ತೇ ವಶಮ್ ॥೧೧॥

ಅರಿಂದಮನೇ, ಗುರುಗಳಿಗೆ ಬೇಕಾದ ವಸ್ತು ನಿನ್ನ ಅಧೀನದಲ್ಲಿದೆ. ಅದನ್ನು ತೆಗೆದುಕೊಂಡು ಗುರುಗಳಿಗೆ ಅರ್ಪಿಸಿ ಪುನಃ ಪ್ರತಿಜ್ಞೆಗನುಗುಣವಾಗಿ ಇಲ್ಲಿಗೆ ಮರಳಿ ಬರುತ್ತೇನೆ, ನಿನ್ನ ಅಧೀನವಾಗುತ್ತೇನೆ.

ಸತ್ಯಂ ತೇ ಪ್ರತಿಜಾನಾಮಿ ನಾತ್ರ ಮಿಥ್ಯಾ ಕಥಂಚನ ।
ಅನೃತಂ ನೋಕ್ತಪೂರ್ವಂ ಮೇ ಸ್ವೈರೇಷ್ವಪಿ ಕುತೋಽನ್ಯಥಾ ॥೧೨॥

ಮಹಾರಾಜ, ನಾನು ಸತ್ಯಪ್ರತಿಜ್ಞನು. ನಾನೆಂದಿಗೂ ಸುಳ್ಳು ಹೇಳುವುದಿಲ್ಲ. ಹಿಂದೆ ಎಂದೂ ತಮಾಷೆಗಾಗಿಯೂ ಸುಳ್ಳನ್ನು ಹೇಳಿರುವುದಿಲ್ಲ. ಹೀಗಿರುವಾಗ ಹೇಗೆ ಸುಳ್ಳನ್ನು ಹೇಳುತ್ತೇನೆ ಎಂಬುದನ್ನು ಯೋಚಿಸು.

ಸೌದಾಸಃ

ಯದ್ಯಸ್ಮಾಸು ತವಾಯತ್ತೋ ಗುರ್ವರ್ಥಃ ಕೃತ ಏವ ಸಃ ।
ಯದಿ ಚಾಸ್ತಿ ಪ್ರತಿಗ್ರಾಹ್ಯಂ ಸಾಂಪ್ರತಂ ತದ್ ಬ್ರವೀಹಿ ಮೇ ॥೧೩॥

ಸೌದಾಸ– ನೀನು ಗುರುಗಳಿಗೆ ಅರ್ಪಿಸಬೇಕಾದ ಪದಾರ್ಥ ನನ್ನ ಅಧೀನವಾಗಿದೆ ಎಂದು ಹೇಳಿದೆ. ಇದು ಸತ್ಯವಾದಲ್ಲಿ ಅದು ಖಂಡಿತವಾಗಿಯೂ ನಿನಗೆ ದೊರೆಯುತ್ತದೆ ಎಂದು ತಿಳಿದುಕೊ. ನೀನು ಸ್ವೀಕರಿಸಲು ಯೋಗ್ಯವಾದ ವಸ್ತುವಾದರೂ ಯಾವುದೆಂದು ತಿಳಿಸು.

ಉದಂಕಃ

ಪ್ರತಿಗ್ರಾಹ್ಯೋ ವರೋ ಮೇ ತ್ವಂ ಸದೈವ ಪುರುಷರ್ಷಭ ।
ಸೋಽಹಂ ತ್ವಾಮನು ಸಂಪ್ರಾಪ್ತೋ ಭಿಕ್ಷಿತುಂ ಮಣಿಕುಂಡಲೇ ॥೧೪॥

ಉದಂಕ– ಪುರುಷಶ್ರೇಷ್ಠನೇ, ನೀನು ದಾನಿಶ್ರೇಷ್ಠನಾಗಿದ್ದಿ ಎಂದು ನನ್ನ ಅಭಿಪ್ರಾಯ. ಆದ್ದರಿಂದ ನಿನ್ನ ಬಳಿ ಎರಡು ಮಣಿಕುಂಡಲಗಳನ್ನು ಬೇಡಲು ಆಗಮಿಸಿದ್ದೇನೆ.

ಸೌದಾಸಃ

ಪತ್ನ್ಯಾಸ್ತ್ವಮಪಿ ವಿಪ್ರರ್ಷೇ ರುಚಿರೇ ಮಣಿಕುಂಡಲೇ ।
ವರಯಾರ್ಥಂ ತ್ವಮನ್ಯಂ ಮೇ ತಂ ತೇ ದಾಸ್ಯಾಮಿ ಸುವ್ರತ ॥೧೫॥

ಸೌದಾಸ– ವಿಪ್ರರ್ಷಿಯೇ, ನೀನು ಬಯಸಿರುವ ಸುಂದರವಾದ ಮಣಿ ಕುಂಡಲಗಳು ನನ್ನ ಪತ್ನಿಯ ಬಳಿ ಇರಲು ಯೋಗ್ಯವಾಗಿವೆ. ಆದ್ದರಿಂದ ಅವುಗಳನ್ನು ಅವಳ ಬಳಿ ಹೋಗಿ ಬೇಡಿಕೊ. ಇವುಗಳನ್ನು ಬಿಟ್ಟು ನನ್ನ ಬಳಿ ಬೇರೆ ಯಾವುದಾದರೂ ವಸ್ತುವನ್ನು ಕೇಳು, ಅದನ್ನು ಕೊಡುತ್ತೇನೆ.

ಉದಂಕಃ

ಅಲಂ ತೇ ವ್ಯಪದೇಶೇನ ಪ್ರಮಾಣಂ ಯದಿ ತೇ ವಯಮ್ ।
ಪ್ರಯಚ್ಛ ಕುಂಡಲೇ ಮೇ ತ್ವಂ ಸತ್ಯವಾಗ್ ಭವ ವೈ ವಿಭೋ ॥೧೬॥

ಉದಂಕ– ಪಾರ್ಥಿವನೇ, ನೆಪವನ್ನು ಹೇಳುವುದು ಸಾಕು ಮಾಡು. ನನ್ನಲ್ಲಿ ನಿನಗೆ ನಂಬಿಕೆ ಇದ್ದಲ್ಲಿ, ನಾನು ಸತ್ಯವಾದಿ ಎಂದು ನೀನು ಭಾವಿಸಿದ್ದಲ್ಲಿ ನಿನ್ನ ಪತ್ನಿಯ ಕರ್ಣಕುಂಡಲವನ್ನು ನನಗೆ ಕೊಟ್ಟು ಸತ್ಯಪ್ರತಿಜ್ಞನಾಗು.

ವೈಶಂಪಾಯನಃ

ಇತ್ಯುಕ್ತಸ್ತ ಬ್ರುವೀದ್ ರಾಜಾ ತಮುದಂಕಂ ವಚಸ್ತದಾ ॥೧೭॥

ವೈಶಂಪಾಯನ– ಉದಂಕನು ಹೀಗೆ ಹೇಳಲು ರಾಜನು ಉದಂಕನಿಗೆ ಪುನಃ ಉತ್ತರಿಸಿದನು.

ಸೌದಾಸಃ

ಗಚ್ಛ ಮದ್ವಚನಾದ್ ದೇವೀಂ ಬ್ರೂಹಿ ದೇಹೀತಿ ಸತ್ತಮ ॥೧೮॥

ಸೈವಮುಕ್ತಾ ತ್ವಯಾ ನೂನಂ ಮದಾಖ್ಯೇನ ಶುಚಿವ್ರತಾ ।
ಪ್ರದಾಸ್ಯತಿ ದ್ವಿಜಶ್ರೇಷ್ಠ ಕುಂಡಲೇ ತೇ ನ ಸಂಶಯಃ ॥೧೯॥

ಸೌದಾಸ– ಬ್ರಾಹ್ಮಣನೇ, ನನ್ನ ರಾಣಿಯ ಬಳಿ ಸಾಗು. ಕರ್ಣಕುಂಡಲಗಳನ್ನು ಕೊಡಬೇಕೆಂದು ಹೇಳಿದ್ದೇನೆ ಎಂದು ತಿಳಿಸು. ನನ್ನ ಮಾತನ್ನು ಕೇಳಿದೊಡನೆ ಶುಚಿವ್ರತಳಾದ ಆಕೆಯು ನಿಶ್ಚಿತವಾಗಿಯೂ ತನ್ನ ಕರ್ಣಕುಂಡಲಗಳನ್ನು ಕೊಡುತ್ತಾಳೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಉದಂಕಃ

ಕ್ವ ಪತ್ನೀ ಭವತಃ ಶಕ್ಯಾ ಮಯಾ ದ್ರಷ್ಟುಂ ನರೇಶ್ವರ ।
ಸ್ವಯಂ ವಾಽಪಿ ಭವಾನ್ ಪತ್ನೀಂ ಕಿಮರ್ಥಂ ನೋಪಸರ್ಪತಿ ॥೨೦॥

ಉದಂಕ– ನರೇಶ್ವರನೇ, ನಿನ್ನ ಪತ್ನಿಯನ್ನು ನಾನು ಎಲ್ಲಿ ನೋಡಲಿ? ನೀನು ನಿನ್ನ ಪತ್ನಿಯ ಸಮೀಪಕ್ಕೆ ಹೋಗದಿರಲು ಕಾರಣವೇನು?

ಸೌದಾಸಃ

ದ್ರಕ್ಷ್ಯತೇ ಭವತಾ ಸಾದ್ಯ ಕಸ್ಮಿಂಶ್ಚಿದ್ ವನನಿರ್ಝರೇ ।
ಷಷ್ಠೇ ಕಾಲೇ ನ ಹಿ ಮಯಾ ಸಾ ಶಕ್ಯಾ ದ್ರಷ್ಟುಮದ್ಯ ವೈ ॥೨೧॥

ಸೌದಾಸ– ಬ್ರಾಹ್ಮಣನೇ, ನೀನು ನಿರ್ಜನವಾದ ಅರಣ್ಯದಲ್ಲಿ ಅವಳನ್ನು ಕಾಣಬಹುದು. ಈ ದಿನದ ಆರನೆಯ ಭಾಗದಲ್ಲಿ ಆಹಾರಕ್ಕಾಗಿ ಪರಿಗ್ರಹಿಸುತ್ತಿರುವ ನಾನು ಅವಳನ್ನು ನೋಡಲು ಸಾಧ್ಯವಿಲ್ಲ.

ವೈಶಂಪಾಯನಃ

ಉದಂಕಸ್ತು ತಥೇತ್ಯುಕ್ತ್ವಾ ಜಗಾಮ ಭರತರ್ಷಭ ।
ಮದಯಂತೀಂ ಚ ತಾಂ ದೃಷ್ಟ್ವಾ ಜ್ಞಾಪಯತ್ ಸ್ವಂ ಪ್ರಯೋಜನಮ್ ॥

ವೈಶಂಪಾಯನ– ಸೌದಾಸನ ಮಾತನ್ನು ಅಂಗೀಕರಿಸಿದ ಉದಂಕನು ಮದಯಂತಿಯನ್ನು ಅರಸಿಕೊಂಡು ಹೊರಟನು. ಮದಯಂತಿಯು ಅರಣ್ಯದ ಬಿಲುಮೆಯ ಸಮೀಪದಲ್ಲಿ ವಾಸಿಸುತ್ತಿದ್ದಳು. ಅವಳನ್ನು ಕಂಡು ತನ್ನ ಆಗಮನದ ಉದ್ದೇಶವನ್ನು ತಿಳಿಸಿದನು.

ಸೌದಾಸವಚನಂ ಶ್ರುತ್ವಾ ತತಃ ಸಾ ಪೃಥುಲೋಚನಾ ।
ಪ್ರತ್ಯುವಾಚ ಮಹಾಬುದ್ಧಿಮುದಂಕಂ ಜನಮೇಜಯ ॥೨೩॥

ಜನಮೇಜಯನೇ, ಅರಳಿದ ವಿಶಾಲವಾದ ಕಣ್ಣಿನಿಂದ ಕೂಡಿದ ಮದಯಂತಿಯಾದರೂ ಸೌದಾಸನ ಮಾತನ್ನು ಕೇಳಿಸಿಕೊಂಡು ಮಹಾಬುದ್ಧಿವಂತನಾದ ಉದಂಕನಿಗೆ ಪ್ರತ್ಯುತ್ತರಿಸಿದಳು.

ಮದಯಂತೀ

ಏವಮೇತನ್ಮಹಾಬ್ರಹ್ಮನ್ ನಾನೃತಂ ಭಾಷಸೇಽನಘ ।
ಅಭಿಜ್ಞಾನಂ ತು ಕಿಂಚಿನ್ಮೇ(ತ್ವಂ) ಸಮಾನಯಿತುಮರ್ಹಸಿ ॥೨೪॥

ಮದಯಂತಿ– ಮಹಾಬ್ರಾಹ್ಮಣನೇ, ನೀನು ಹೇಳಿದಂತೆಯೇ ಆಗಲಿ. ನೀನು ಸತ್ಯವಾದಿಯೇ ಆಗಿರುವೆ. ಆದರೆ ನನ್ನ ಪತಿಯೇ ಈ ಸಂದೇಶವನ್ನು ಕಳುಹಿಸಿದ್ದಾನೆ ಎನ್ನಲು ನೀನು ಅವನಿಂದ ಯಾವುದಾದರೂ ಒಂದು ಗುರುತನ್ನು ತರಲು ಅರ್ಹನಾಗಿರುವಿ.

ಇಮೇ ಹಿ ದಿವ್ಯೇ ಮಣಿಕುಂಡಲೇ ಶುಭೇ
ದೇವಾಶ್ಚ ಯಕ್ಷಾಶ್ಚ ಮಹೋರಗಾಶ್ಚ ।
ತೈಸ್ತೈರುಪಾಯೈರಪಹರ್ತುಕಾಮಾಃ
ಛಿದ್ರೇಷು ನಿತ್ಯಂ ಪರಿತರ್ಕಯಂತೇ ॥೨೫॥

ಉದಂಕನೇ, ನಿನ್ನ ಕಣ್ಣಿಗೆ ಕಾಣಿಸುತ್ತಿರುವ ಈ ದಿವ್ಯವಾದ ಮಣಿಕುಂಡಲಗಳನ್ನು ದೇವತೆಗಳು, ಯಕ್ಷರು, ಮಹರ್ಷಿಗಳು ನಾನಾ ವಿಧವಾದ ಉಪಾಯವನ್ನು ಮಾಡಿ ಅಪಹರಿಸಲು ಬಯಸುತ್ತಿದ್ದಾರೆ. ಅದಕ್ಕಾಗಿ ನನ್ನಲ್ಲಿ ದೋಷಗಳನ್ನು ಕಂಡುಹಿಡಿಯಲು ಮಗ್ನರೂ ಆಗಿದ್ದಾರೆ.

ನಿಕ್ಷಿಪ್ತಮೇತದ್ ಭುವಿ ಪನ್ನಗಾಸ್ತು
ರತ್ನಂ ಸಮಾಸಾದ್ಯ ಪರಾಮೃಶೇಯುಃ ।
ಯಕ್ಷಾಸ್ತಥೋಚ್ಛಿಷ್ಟಧೃತಂ ಸುರಾಶ್ಚ
ನಿದ್ರಾವಶಂ ತ್ವಾಂ ಪರಿಧರ್ಷಯೇಯುಃ ॥೨೬॥

ಈ ಕುಂಡಲಗಳನ್ನು ನೆಲದಲ್ಲಿಟ್ಟರೆ ಕೂಡಲೇ ಸರ್ಪಗಳೇ ಇವುಗಳನ್ನು ಹೊತ್ತೊಯ್ಯುತ್ತವೆ. ನಾನು ಅಶುಚಿಯಾಗಿ ಈ ಕುಂಡಲಗಳನ್ನು ಧರಿಸಿದಲ್ಲಿ ಅಥವಾ ಕುಂಡಲಗಳನ್ನು ಧರಿಸಿ ನಿದ್ರೆ ಮಾಡಿದಲ್ಲಿ ಯಕ್ಷರು-ದೇವತೆಗಳು ಬಲಾತ್ಕರಿಸಿ ಅಪಹರಿಸಿಕೊಂಡು ಸಾಗುತ್ತಾರೆ.

ಛಿದ್ರೇಷ್ವೇತೇಷು ಚ ಸದಾ ಧೃಷ್ಯಸೇ ಚ ದ್ವಿಜರ್ಷಭ ।
ದೈವರಾಕ್ಷಸಯಕ್ಷಾಣಾಮಪ್ರಮತ್ತೇನ ಧಾರ್ಯತೇ ॥೨೭॥

ಇಂತಹ ದೋಷವಿರುವ ದಿನದ ಆರನೆಯ ಭಾಗದಲ್ಲಿ ದೇವ-ರಾಕ್ಷಸ-ಯಕ್ಷರಿಂದ ಜಾಗರೂಕನಾಗಿರುವವನು ಮಾತ್ರವೇ ಇವುಗಳನ್ನು ಧರಿಸಬಲ್ಲ.

ಏತೇ ದಿವಾಽಪಿ ಭಾಸೇತೇ ರಾತ್ರೌ ಚ ದ್ವಿಜಸತ್ತಮ ।
ನಕ್ತಂ ನಕ್ಷತ್ರತಾರಾಣಾಂ ಪ್ರಭಾಮಾಕ್ಷಿಪ್ಯ ವರ್ತತಃ ॥೨೮॥

ಈ ಕರ್ಣಕುಂಡಲಗಳು ಹಗಲು-ರಾತ್ರಿ ಹೊಳೆಯುತ್ತಿರುತ್ತವೆ. ರಾತ್ರಿ ಕಾಲದಲ್ಲಿ ಮಿನುಗುವ ನಕ್ಷತ್ರ, ತಾರಾಮಂಡಲಗಳ ಪ್ರಭೆಯನ್ನು ಮಸುಕುಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ.

ಏತೇ ಹ್ಯಾಮುಚ್ಯ ಭಗವನ್ ಕ್ಷುತ್ಪಿಪಾಸಾಭಯಂ ಕುತಃ ।
ವಿಷಾಗ್ನಿಶಾಪದೇಭ್ಯಶ್ಚ ಭಯಂ ಜಾತು ನ ವಿದ್ಯತೇ ॥೨೯॥

ಪೂಜ್ಯನೆ, ಈ ಕುಂಡಲಗಳನ್ನು ಧರಿಸಿದಲ್ಲಿ ಹಸಿವು, ಬಾಯಾರಿಕೆಗಳ ಬಾಧೆಗಳು ಇರುವುದಿಲ್ಲ. ಇವುಗಳನ್ನು ಧರಿಸಿದವನಿಗೆ ಅಗ್ನಿ-ವಿಷಗಳ ಭಯಗಳು ಆವರಿಸುವುದಿಲ್ಲ. ಮಾಂಸಾಹಾರಿ ಪ್ರಾಣಿಗಳ ಭಯವೂ ಇರುವುದಿಲ್ಲ.

ಹ್ರಸ್ವೇನ ಚೈತೇ ಆಮುಕ್ತೇ ಭವತೋ ಹ್ರಸ್ವತೇ ಸದಾ ।
ಅನುರೂಪೇಣ ಚಾಮುಕ್ತೇ ತತ್ಪ್ರಮಾಣೇ ತಥೈವ ತೇ ॥೩೦॥

ಕುಳ್ಳಗಿರುವ ವ್ಯಕ್ತಿಯು ಈ ಕುಂಡಲಗಳನ್ನು ಧರಿಸಿದರೆ ಅವರ ದೇಹಕ್ಕನುಗುಣವಾಗಿ ಈ ಕುಂಡಲಗಳು ಹ್ರಸ್ವತ್ವವನ್ನು ಹೊಂದುತ್ತವೆ. ದೊಡ್ಡ ಆಕಾರವುಳ್ಳ ವ್ಯಕ್ತಿಯು ಇವುಗಳನ್ನು ಧರಿಸಿದರೆ ಆ ಆಕಾರಕ್ಕೆ ತಕ್ಕಂತೆ ದೊಡ್ಡದಾಗುತ್ತವೆ. ಹೀಗೆ ಅವರವರ ದೇಹ ಪ್ರಮಾಣಕ್ಕೆ ಅನುಗುಣವಾದ ಆಕಾರವನ್ನು ಹೊಂದುವ ಸಾಮರ್ಥ್ಯ ಈ ಕುಂಡಲಗಳಲ್ಲಿದೆ.

ಏವಂವಿಧೇ ಮಮಾಪ್ಯೇತೇ ಕುಂಡಲೇ ಪರಮಾರ್ಚಿತೇ ।
ತ್ರಿಷು ಲೋಕೇಷು ವಿಖ್ಯಾತೇ ತದಭಿಜ್ಞಾನಮಾನಯ ॥೩೧॥

ಇಂತಹ ದಿವ್ಯವಾದ ನನ್ನ ಕರ್ಣಕುಂಡಲಗಳು ಸಮಸ್ತ ಲೋಕಗಳಲ್ಲಿಯೂ ಪ್ರಶಂಸೆಗೆ ಪಾತ್ರವಾಗಿವೆ, ಪ್ರಸಿದ್ಧವಾಗಿವೆ. ಆದ್ದರಿಂದ ಇವುಗಳನ್ನು ಕೊಂಡೊಯ್ಯಲು ನನ್ನ ಗಂಡನಿಂದ ಏನಾದರೂ ಒಂದು ಗುರುತನ್ನು ಹೊತ್ತು ತಾ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಕುಂಡಲಮಾಹಾತ್ಮ್ಯಕಥನಂ ನಾಮ ಸಪ್ತಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆಂಟನೆಯ ಅಧ್ಯಾಯ

ಉದಂಕನು ಸೌದಾಸನ ಬಳಿ ಚಿಹ್ನೆಯನ್ನು ಸ್ವೀಕರಿಸಿ ಮದಯಂತಿಯಿಂದ ಕುಂಡಲಗಳನ್ನು ಸ್ವೀಕರಿಸಿ ಹೊರಟಿದುದು. ಮಾರ್ಗಮಧ್ಯದಲ್ಲಿ ಹಸಿವೆಯಿಂದ ಬಿಲ್ವವೃಕ್ಷದ ಹಣ್ಣನ್ನು ಸ್ವೀಕರಿಸುವಾಗ ಕುಂಡಲಗಳನ್ನು ಕೃಷ್ಣಾಜಿನದಲ್ಲಿ ಕಟ್ಟಿ ಇಟ್ಟಿದುದು. ಹಣ್ಣುಗಳು ಮರದಿಂದ ಉದುರುವಾಗ ಕುಂಡಲಗಳು ನೆಲದ ಮೇಲೆ ಬಿದ್ದಿದುದು. ನೆಲದಲ್ಲಿ ಬಿದ್ದ ಕುಂಡಲಗಳನ್ನು ಸರ್ಪ ಒಂದು ಅಪಹರಿಸಿ ನಾಗಲೋಕಕ್ಕೆ ಹೋಗಿದುದು. ಉದಂಕನು ಇಂದ್ರನ ಸಹಾಯದಿಂದ ಭೂಮಿಯನ್ನು ಸೀಳಿಕೊಂಡು ನಾಗಲೋಕಕ್ಕೆ ತೆರಳಿ ಅಲ್ಲಿರುವ ಕುದುರೆಯ ಮಾತಿನಂತೆ ಅದರ ಅಪಾನದ ದೇಶವನ್ನು ಊದಿದಾಗ ಅದರಿಂದ ಹೊರಹೊಮ್ಮಿದ ಹೊಗೆಯಿಂದ ಸರ್ಪಲೋಕವೇ ಕಂಗಾಲಾಗಿ ಉದಂಕನಿಗೆ ಕುಂಡಲವನ್ನು ತಂದು ಒಪ್ಪಿಸಿದುದು. ಬಳಿಕ ಉದಂಕನು ಗುರುಪತ್ನಿಗೆ ಕುಂಡಲವನ್ನು ಕೊಟ್ಟಿದುದು.

ವೈಶಂಪಾಯನಃ

ಸ ಮಿತ್ರಸಹಮಾಸಾದ್ಯ ತ್ವಭಿಜ್ಞಾನಮಯಾಚತ ।
ತಸ್ಮೈ ದದಾವಭಿಜ್ಞಾನಂ ಸ ಚೇಕ್ಷ್ವಾಕುವರಸ್ತದಾ ॥೧॥

ವೈಶಂಪಾಯನ– ಜನಮೇಜಯನೇ, ಉದಂಕನು ಮದಯಂತಿಯ ಮಾತಿಗೆ ಅನುಗುಣವಾಗಿ ಸೌದಾಸನ ಬಳಿ ಸಾಗಿ ಗುರುತನ್ನು ಕೇಳಿದನು. ಅದರಂತೆ ಸೌದಾಸನು ಉದಂಕನಿಗೆ ಗುರುತನ್ನು ಕೊಟ್ಟನು.

ಸೌದಾಸಃ

ನ ಚೈವೇಷಾ ಗತಿಃ ಕ್ಷೇಮ್ಯಾ ನ ಚಾನ್ಯಾ ವಿದ್ಯತೇ ಗತಿಃ ।
ಏತನ್ಮೇ ತತ್ತ್ವಮಾಜ್ಞಾಯ ಪ್ರಯಚ್ಛ ಮಣಿಕುಂಡಲೇ ॥೨॥

ಸೌದಾಸ– ಪ್ರಿಯೇ, ನಾನು ಈಗ ಇರುವ ದುಃಸ್ಥಿತಿಯು ಮಂಗಳಮಯ-ವಾಗಿರುವುದಿಲ್ಲ. ಬೇರೆ ಯಾವ ಮಾರ್ಗವೂ ನನ್ನ ಪಾಲಿಗೆ ಇಲ್ಲವಾಗಿದೆ. ಈ ನನ್ನ ಅಭಿಪ್ರಾಯವನ್ನು ತಿಳಿದ ನೀನು ಬ್ರಾಹ್ಮಣನಿಗೆ ಆ ಕುಂಡಲಗಳನ್ನು ನೀಡು.

ವೈಶಂಪಾಯನಃ

ಇತ್ಯುಕ್ತಸ್ತಾಮುದಂಕಸ್ತು ಭರ್ತುರ್ವಾಕ್ಯಮಥಾಬ್ರವೀತ್ ।
ಶ್ರುತ್ವಾ ತು ಸಾ ತತಃ ಪ್ರಾದಾತ್ ತಸ್ಮೈ ತೇ ಮಣಿಕುಂಡಲೇ ॥೩॥

ಅವಾಪ್ಯ ಕುಂಡಲೇ ತೇ ತು ರಾಜಾನಂ ಪುನರಬ್ರವೀತ್ ॥೪॥

ವೈಶಂಪಾಯನ– ಜನಮೇಜಯನೇ, ಸೌದಾಸನು ಹೀಗೆ ಹೇಳಿದ ಮಾತನ್ನೇ ಅಭಿಜ್ಞಾನವನ್ನಾಗಿ ಮಾಡಿಕೊಂಡು ಉದಂಕನು ಮದಯಂತಿಯ ಬಳಿ ಹೋಗಿ ಆ ಮಾತುಗಳನ್ನು ಉಚ್ಚರಿಸಿದನು. ಪತಿಯ ಮಾತನ್ನು ಕೇಳಿದ ರಾಣಿಯು ವಿಚಾರ ಮಾಡದೆ ತನ್ನ ಕಿವಿಯಲ್ಲಿದ್ದ ಮಣಿಕುಂಡಲಗಳನ್ನು ಉದಂಕನಿಗೆ ಕೊಟ್ಟಳು. ಮದಯಂತಿಯಿಂದ ಕುಂಡಲಗಳನ್ನು ಸ್ವೀಕರಿಸಿದ ಉದಂಕನು ಪುನಃ ಸೌದಾಸನ ಬಳಿ ಬಂದು ಹೀಗೆ ನುಡಿದನು.

ಉದಂಕಃ

ಕಿಮೇತದ್ ಗುಹ್ಯವಚನಂ ಶ್ರೋತುಮಿಚ್ಛಾಮಿ ತೇ ವಚಃ ॥೫॥

ಉದಂಕ– ಪಾರ್ಥಿವನೇ, ನೀನು ನಿನ್ನ ಪತ್ನಿಗೆ ಹೇಳಿದ ಮಾತಿನ ಗೂಢಾರ್ಥವನ್ನು ನಾನು ತಿಳಿಯಬಯಸುತ್ತೇನೆ.

ಸೌದಾಸಃ

ಪ್ರಜಾತಿಸರ್ಗಾದ್ ವಿಪ್ರಾನ್ ವೈ ಕ್ಷತ್ರಿಯಾಃ ಪೂಜಯಂತಿ ಹ ।
ವಿಪ್ರೇಭ್ಯಶ್ಚಾಪಿ ಬಹವೋ ದೋಷಾಃ ಪ್ರಾದುರ್ಭವಂತಿ ನಃ ॥೬॥

ಸೌದಾಸ– ಸರ್ವೋತ್ತಮನಾದ ನಾರಾಯಣನಿಂದ ಬ್ರಾಹ್ಮಣರು ಉತ್ಪನ್ನರಾಗಿದ್ದಾರೆ ಎಂಬ ಕಾರಣದಿಂದ ಕ್ಷತ್ರಿಯರೆಲ್ಲರೂ ಬ್ರಾಹ್ಮಣರನ್ನು ಪೂಜಿಸುತ್ತಾರೆ. ಹೀಗಿದ್ದರೂ ಬ್ರಾಹ್ಮಣರಲ್ಲಿಯೂ ಅನೇಕ ದೋಷಗಳು ಕೆಲವೊಮ್ಮೆ ಉತ್ಪನ್ನವಾಗುತ್ತವೆ.

ಸೋಽಹಂ ದ್ವಿಜೇಭ್ಯಃ ಪ್ರಣತೋ ವಿಪ್ರಾದ್ ದೋಷಮವಾಪ್ತವಾನ್ ।
ಗತಿಮನ್ಯಾಂ ನ ಪಶ್ಯಾಮಿ ಮದಯಂತೀಸಹಾಯವಾನ್ ॥೭॥

ನಾನು ಬ್ರಾಹ್ಮಣರ ವಿಷಯದಲ್ಲಿ ಯಾವಾಗಲೂ ನಮಸ್ಕಾರ ಬುದ್ಧಿಯುಳ್ಳವನಾಗಿಯೇ ಇರುತ್ತಿದ್ದೆನು. ಆದರೆ ಇಂದು ಅಂತಹ ಬ್ರಾಹ್ಮಣನಿಂದಲೇ ಶಾಪವನ್ನು ಪಡೆದು ಇಂತಹ ಸ್ಥಿತಿಯನ್ನು ಅನುಭವಿಸುತ್ತಿದ್ದೇನೆ. ಈ ಸಮಯದಲ್ಲಿ ನನಗೆ ಮದಯಂತಿಯೊಬ್ಬಳೇ ಸಹಾಯಕಳು. ಬೇರೆ ಯಾವ ಮಾರ್ಗವೂ ಕಾಣಿಸುತ್ತಿಲ್ಲ.

ನ ಚಾನ್ಯಮಪಿ ಪಶ್ಯಾಮಿ ಗತಿಂ ಗತಿಮತಾಂ ವರ ।
ಸ್ವರ್ಗದ್ವಾರಸ್ಯ ಗಮನೇ ಸ್ಥಾನೇ ಚೇಹ ದ್ವಿಜೋತ್ತಮ ॥೮॥

ಜಂಗಮ ಪ್ರಾಣಿಗಳಲ್ಲಿ ಶ್ರೇಷ್ಠನಾದ ದ್ವಿಜವರ್ಯನೇ, ಈ ಲೋಕದಲ್ಲಿ ನಾನು ಸುಖವಾಗಿರುವುದಕ್ಕೆ, ಪರಲೋಕದಲ್ಲಿ ಸುಖವನ್ನು ಹೊಂದುವುದಕ್ಕೆ, ಸತ್ಪಾತ್ರನಾದ ನಿನಗೆ ದಾನ ಮಾಡುವುದಕ್ಕಿಂತ ಬೇರೆ ಯಾವ ಮಾರ್ಗವನ್ನೂ ಕಾಣದಾಗಿದ್ದೇನೆ.

ನ ಹಿ ರಾಜ್ಞಾ ವಿಶೇಷೇಣ ವಿರುದ್ಧೇನ ದ್ವಿಜಾತಿಭಿಃ ।
ಶಕ್ಯಂ ತ್ರಿಲೋಕೇ ಸಂಸ್ಥಾತುಂ ಪ್ರೇತ್ಯ ವಾ ಸುಖಮೇಧಿತುಮ್ ॥೯॥

ಬ್ರಾಹ್ಮಣರಲ್ಲಿ ದ್ವೇಷ ಕಟ್ಟಿಕೊಂಡ ರಾಜನು ಈ ಲೋಕದಲ್ಲಿ ಬದುಕಲು ಅರ್ಹನಾಗಿರುವುದಿಲ್ಲ. ಪರಲೋಕಕ್ಕೆ ಹೋಗಿ ಅಲ್ಲಿ ಸುಖವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ತದಿಷ್ಟೇನ ಮಯೈವೈತೇ ದತ್ತೇ ಸ್ವೇ ಮಣಿಕುಂಡಲೇ ।
ಯಃ ಕೃತಸ್ತೇಽದ್ಯ ಸಮಯಃ ಸಫಲಂ ತಂ ಕುರುಷ್ವ ಮೇ ॥೧೦॥

ಆದ್ದರಿಂದ ಬ್ರಾಹ್ಮಣನು ಇಷ್ಟಪಟ್ಟ ಪದಾರ್ಥವನ್ನು ಕೊಡಬೇಕೆಂಬ ಭಾವದಿಂದಲೇ ಈ ಮಣಿಕುಂಡಲಗಳನ್ನು ನಿನಗೆ ನೀಡಿರುತ್ತೇನೆ. ನಿನ್ನ ನಿಬಂಧನೆಯ ಪ್ರಕಾರ ನೀನು ಮಾಡಬೇಕಾಗಿರುವುದನ್ನು ಸಫಲಗೊಳಿಸು.

ಉದಂಕಃ

ರಾಜಂಸ್ತಥೈವ ಕರ್ತಾಸ್ಮಿ ಪುನರೇಷ್ಯಾಮಿ ತೇ ವಶಮ್ ।
ಪ್ರಶ್ನಂ ಚ ಕಂಚಿತ್ ಪ್ರಷ್ಟುಂ ತ್ವಾಂ ವ್ಯವಸಿಷ್ಯೇ ಪರಂತಪ ॥೧೧॥

ಉದಂಕ– ಮಹಾರಾಜನೇ, ಹಾಗೆಯೇ ಆಗಲಿ. ನೀನು ಹೇಳಿದಂತೆಯೇ ಮಾಡುತ್ತೇನೆ. ಕರ್ಣಕುಂಡಲಗಳನ್ನು ಗುರುಗಳಿಗೆ ಒಪ್ಪಿಸಿ ನಿನ್ನ ಅಧೀನನಾಗುತ್ತೇನೆ. ಇನ್ನೊಂದು ಮುಖ್ಯವಾದ ಪ್ರಶ್ನೆಯು ನನ್ನ ತಲೆಯಲ್ಲಿದೆ. ಈ ಗುರುದಕ್ಷಿಣೆಯನ್ನು ಒಪ್ಪಿಸಿ ಬಂದು ಆ ಪ್ರಶ್ನೆಯನ್ನು ಕೇಳುತ್ತೇನೆ.

ಸೌದಾಸಃ

ಬ್ರೂಹಿ ವಿಪ್ರ ಯಥಾಕಾಮಂ ಪ್ರತಿವಕ್ತಾಸ್ಮಿ ತೇ ವಚಃ ।
ಛೇತ್ತಾಸ್ಮಿ ಸಂಶಯಂ ತೇಹಂ ನ ಮೇಽತ್ರಾಸ್ತಿ ವಿಚಾರಣಾ ॥೧೨॥

ಸೌದಾಸ– ವಿಪ್ರಶ್ರೇಷ್ಠನೇ, ನಿನ್ನ ಇಚ್ಛೆಯಂತೆ ಪ್ರಶ್ನಿಸು. ಅದಕ್ಕೆ ಉತ್ತರಿಸುತ್ತೇನೆ. ನಿನ್ನ ಸಂಶಯವನ್ನೂ ಪರಿಹರಿಸುತ್ತೇನೆ, ಯಾವ ಸಂಶಯವೂ ಬೇಡ.

ಉದಂಕಃ

ಪ್ರಾಹುರ್ವಾಕ್ಸಂಗಮಂ ಮಿತ್ರಂ ಧರ್ಮನೈಪುಣ್ಯದರ್ಶಿನಃ ।
ಮಿತ್ರೇಷು ಯಶ್ಚ ವಿಷಮಃ ಸ್ತೇನ ಇತ್ಯೇವ ತಂ ವಿದುಃ ॥೧೩॥

ಉದಂಕ– ಧರ್ಮಶಾಸ್ತ್ರಪ್ರವೀಣರಾದ ಪಂಡಿತರು ಮಾತಿನಲ್ಲಿ ಸಂಯಮ ಇರುವ ವ್ಯಕ್ತಿಯನ್ನೇ ಬ್ರಾಹ್ಮಣನೆನ್ನುತ್ತಾರೆ. ಯಾವನು ಸ್ನೇಹಿತನ ವಿಷಯದಲ್ಲಿ ವಿರುದ್ಧವಾಗಿ ವರ್ತಿಸುತ್ತಾನೋ ಅವನು ಕಳ್ಳನೆಂದೇ ಕರೆಸಿಕೊಳ್ಳುತ್ತಾನೆಂದು ಬಲ್ಲವರು ಹೇಳುತ್ತಾರೆ.

ಸ ಭವಾನ್ ಮಿತ್ರತಾಮದ್ಯ ಸಂಪ್ರಾಪ್ತೋ ಮಮ ಪಾರ್ಥಿವ ।
ಸ ಮೇ ಬುದ್ಧಿಂ ಪ್ರಯಚ್ಛ ತ್ವಂ ಯುಕ್ತಾಂ ಬುದ್ಧಿಮತಾಂ ವರ ॥೧೪॥

ಭೂಮಿಪಾಲಕನೇ, ಪುರುಷಶ್ರೇಷ್ಠನೇ, ಈಗ ನೀನು ನನ್ನ ಬಳಿ ಸ್ನೇಹಭಾವ ಹೊಂದಿರುವೆ. ಆದ್ದರಿಂದ ನೀನು ನನಗೆ ಒಳ್ಳೆಯ ಬುದ್ಧಿವಾದವನ್ನು ಹೇಳು.

ಅವಾಪ್ತಾರ್ಥೋ೯ಽಹಮದ್ಯಾಸ್ಮಿ ಭವಾಂಶ್ಚ ಪುರುಷಾದಕಃ ।
ಭವತ್ಸಕಾಶಮಾಗಂತುಂ ಕ್ಷಮಂ ಮಮ ನ ವೇತಿ ವೈ ॥೧೫॥

ನಿನ್ನ ಬಳಿ ಬಂದು ನನ್ನ ಮನಸ್ಸಿನ ಅಭಿಲಾಷೆಯನ್ನು ಈಡೇರಿಸಿಕೊಂಡಿದ್ದೇನೆ. ನೀನು ನರಭಕ್ಷಕನಾದ ರಾಕ್ಷಸ. ಇಂತಹ ಸ್ಥಿತಿಯಲ್ಲಿ ಪುನಃ ನಾನು ನಿನ್ನ ಬಳಿಗೆ ಬರುವುದು ಯೋಗ್ಯವಾಗುತ್ತದೆಯೇ? ತಿಳಿಸು.

ಸೌದಾಸಃ

ಸಮಶ್ಚೇದಿಹ ವಕ್ತವ್ಯಂ ಮಯಾ ದ್ವಿಜವರೋತ್ತಮ ।
ಮತ್ಸಮೀಪಂ ದ್ವಿಜಶ್ರೇಷ್ಠ ನಾಗಂತವ್ಯಂ ಕಥಂಚನ ॥೧೬॥

ಸೌದಾಸ– ಬ್ರಾಹ್ಮಣಶ್ರೇಷ್ಠನೇ, ಈ ವಿಷಯದಲ್ಲಿ ನಿನಗೆ ಯೋಗ್ಯವಾದ ಒಂದು ಮಾತನ್ನು ಹೇಳುತ್ತೇನೆ. ನನ್ನ ಬಳಿ ಯಾವುದೇ ಕಾರಣದಿಂದ ನೀನು ಬರುವ ಅಗತ್ಯವಿರುವುದಿಲ್ಲ. ಇಂತಹ ರಾಕ್ಷಸನಲ್ಲಿಯೂ ವಿಶ್ವಾಸವನ್ನು ತಾಳಿದ್ದಾದಲ್ಲಿ ನನ್ನ ಮಾತನ್ನು ಅಂಗೀಕರಿಸು.

ತವೈವ ತು ಪ್ರಪಶ್ಯಾಮಿ ಶ್ರೇಯೋ ಭೃಗುಕುಲೋದ್ವಹ ।
ಆಗಚ್ಛತೋ ಹಿ ತೇ ವಿಪ್ರ ಭವೇನ್ಮೃತ್ಯುರಸಂಶಯಃ ॥೧೭॥

ಭಾರ್ಗವನೇ, ನಿನ್ನ ಶ್ರೇಯಸ್ಸಿನ ದೃಷ್ಟಿಯಿಂದ ಈ ಮಾತುಗಳನ್ನು ಆಡಿದ್ದೇನೆ. ಪುನಃ ನೀನು ಮರಳಿ ಬಂದದ್ದೇ ಆದಲ್ಲಿ ನಿನಗೆ ಮೃತ್ಯುವು ಸಮೀಪಿಸುತ್ತದೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ವೈಶಂಪಾಯನಃ

ಇತ್ಯುಕ್ತಃ ಸ ತದಾ ರಾಜ್ಞಾ ಕ್ಷಮಂ ಬುದ್ಧಿಸಮಾಹಿತಮ್ ।
ಸಮನುಜ್ಞಾಪ್ಯ ರಾಜಾನಮಹಲ್ಯಾಂ ಪ್ರತಿ ಜಗ್ಮಿವಾನ್ ॥೧೮॥

ವೈಶಂಪಾಯನ– ಜನಮೇಜಯನೇ, ಹೀಗೆ ಬುದ್ಧಿವಂತನಾದ ಸೌದಾಸನು ಉಚಿತವಾದ, ಹಿತಕರವಾದ ಮಾತುಗಳನ್ನು ಹೇಳಿದ ಬಳಿಕ ಅವನ ಅನುಮತಿಯನ್ನು ಸ್ವೀಕರಿಸಿದ ಉದಂಕನು ಅಹಲ್ಯೆ ಇದ್ದ ಆಶ್ರಮದ ಕಡೆ ಪ್ರಯಾಣ ಬೆಳೆಸಿದನು.

ಗೃಹೀತ್ವಾ ಕುಂಡಲೇ ದಿವ್ಯೇ ಗುರುಪತ್ನ್ಯಾಃ ಪ್ರಿಯಂಕರಃ ।
ಜವೇನ ಮಹತಾ ಪ್ರಾಯಾದ್ ಗೌತಮಸ್ಯಾಶ್ರಮಂ ಪ್ರತಿ ॥೧೯॥

ದಿವ್ಯವಾದ ಕರ್ಣಕುಂಡಲಗಳನ್ನು ಸ್ವೀಕರಿಸಿ ಗುರುಪತ್ನಿಗೆ ಹಿತವನ್ನು ಮಾಡಬೇಕೆಂದು ಗೌತಮರ ಆಶ್ರಮವನ್ನು ಕುರಿತು ವೇಗವಾಗಿ ಹೊರಟನು.

ಯಥಾ ತಥಾ ರಕ್ಷಣಂ ಚ ಮದಯಂತ್ಯಾಭಿಭಾಷಿತಮ್ ।
ತಥಾ ತೇ ಕುಂಡಲೇ ಬದ್ಧ್ವಾ ತದಾ ಕೃಷ್ಣಾಜಿನೇನ ತತ್ ॥೨೦॥

ಮದಯಂತಿಯು ಉದಂಕನಿಗೆ ಕರ್ಣಕುಂಡಲಗಳನ್ನು ರಕ್ಷಿಸುವ ವಿಷಯದಲ್ಲಿ ಯಾವ ವಿಧಿಗಳನ್ನು ತಿಳಿಸಿದ್ದಳೋ ಅದನ್ನು ನೆನಪಿಸಿಕೊಂಡು ಆ ಕುಂಡಲಗಳನ್ನು ಶುದ್ಧವಾಗಿ ಹೊತ್ತೊಯ್ಯಲು ಕೃಷ್ಣಾಜಿನದಲ್ಲಿ ಕಟ್ಟಿದನು.

ಸ ಕಸ್ಮಿಂಶ್ಚಿತ್ ಕ್ಷುಧಾऽऽವಿಷ್ಟಃ ಫಲಭಾರಾವನಾಮಿತಮ್ ।
ಬಿಲ್ವಂ ದದರ್ಶ ತಸ್ಮಿಂಶ್ಚಾಪ್ಯಾರುರೋಹ ಕ್ಷುಧಾऽನ್ವಿತಃ ॥೨೧॥

ಉದಂಕನು ದಾರಿಯಲ್ಲಿ ಹೋಗುವಾಗ ಹಸಿವೆಯಿಂದ ಕಂಗಾಲಾಗಿ ಹಣ್ಣಿನಿಂದ ತುಂಬಿದ ಮರವೊಂದರ ಬಳಿ ಸಾಗಿದನು. ಆ ಮರದಲ್ಲಿ ಸಾಕಷ್ಟು ಬಿಲ್ವಫಲಗಳು ತುಂಬಿದ್ದವು. ಅಂತಹ ಬಿಲ್ವವೃಕ್ಷವನ್ನು ಹಸಿವೆಯಿಂದ ಏರಿದನು.

ಶಾಖಾಸ್ವಾಸಜ್ಯ ತಸ್ಯೈವ ಕೃಷ್ಣಾಜಿನಮರಿಂದಮ ॥೨೨॥

ಒಂದು ಶಾಖೆಯ ಮೇಲೆ ಕುಂಡಲಗಳಿರುವ ಕೃಷ್ಣಾಜಿನವನ್ನು ಇಟ್ಟನು.

ಯಸ್ಮಿಂಸ್ತೇ ಕುಂಡಲೇ ಬದ್ಧೇ ತದಾ ದ್ವಿಜವರೇಣ ವೈ ।
ವಿಶೀರ್ಣಬಂಧನೇ ತಸ್ಮಿನ್ ಗತೇ ಕೃಷ್ಣಾಜಿನೇ ಮಹೀಮ್ ॥೨೩॥

ಯಾವ ಕುಂಡಲಗಳುಳ್ಳ ಕೃಷ್ಣಾಜಿನವನ್ನು ಮರದ ಶಾಖೆಯಲ್ಲಿ ಬ್ರಾಹ್ಮಣನು ಸಿಕ್ಕಿಸಿ ಫಲಗಳನ್ನು ಉದುರಿಸುತ್ತಿದ್ದನೋ ಆ ಫಲಗಳ ಪತನದಿಂದ ಕೃಷ್ಣಾಜಿನದ ಬಂಧನವು ಸಡಿಲವಾಯಿತು. ಆ ಕೃಷ್ಣಾಜಿನದಲ್ಲಿರುವ ಕುಂಡಲಗಳು ಭೂಮಿಯಲ್ಲಿ ಬಿದ್ದವು.

ಅಪಶ್ಯದ್ ಭುಜಗಃ ಕಶ್ಚಿತ್ ತೇ ತತ್ರ ಮಣಿಕುಂಡಲೇ ॥೨೪॥

ಆ ಕುಂಡಲಗಳನ್ನು ಸರ್ಪ ಒಂದು ನೋಡಿತು.

ಐರಾವತಕುಲೋದ್ಭೂತಃ ಶೀಘ್ರೋ ಭೂತ್ವಾ ತದಾ ಸ ವೈ ।
ವಿಗೃಹ್ಯಾಸ್ಯೇನ ವಲ್ಮೀಕಂ ವಿವೇಶಾಥ ಸಕುಂಡಲಃ ॥೨೫॥

ಐರಾವತ ಕುಲದಲ್ಲಿ ಹುಟ್ಟಿದ ತಕ್ಷಕವೆಂಬ ಸರ್ಪವು ಆ ಕುಂಡಲಗಳನ್ನು ನೋಡಿ ಅವುಗಳನ್ನು ಬಾಯಿಂದ ಕಚ್ಚಿಕೊಂಡು ಶೀಘ್ರವಾಗಿ ಒಂದು ಹುತ್ತದ ಒಳಗಡೆ ಪ್ರವೇಶಿಸಿತು.

ಹ್ರಿಯಮಾಣೇ ಸ ದೃಷ್ಟ್ವಾ ತು ಕುಂಡಲೇ ಪನ್ನಗೇನ ತು ।
ಪಪಾತ ವೃಕ್ಷಾತ್ ಸೋದ್ವೇಗೋ ದುಃಖಾತ್ ಪರಮಕೋಪನಃ ॥೨೬॥

ಸರ್ಪವು ಕುಂಡಲಗಳನ್ನು ಅಪಹರಿಸಿಕೊಂಡು ಹೋಗುತ್ತಿರುವುದನ್ನು ಉದಂಕನು ಮರದ ಮೇಲಿಂದ ನೋಡಿದನು. ತುಂಬಾ ಉದ್ವಿಗ್ನನಾಗಿ ದುಃಖದಿಂದ ಸಿಟ್ಟುಗೊಳ್ಳುತ್ತಾ ನೆಲದಲ್ಲಿ ಹಾರಿದನು.

ಸ ದಂಡಕಾಷ್ಠಮಾದಾಯ ವಲ್ಮೀಕಂ ನ್ಯಖನನ್ ತದಾ ।
ಅಹಾನಿ ತ್ರಿಂಶದವ್ಯಗ್ರಃ ಪಂಚ ಚಾನ್ಯಾನಿ ಭಾರತ ॥೨೭॥

ಕ್ರೋಧಾಮರ್ಷಾಭಿತಪ್ತಾಂಗಸ್ತತೋ ವೈ ದ್ವಿಜಸತ್ತಮಃ ॥೨೮॥

ಅತ್ಯಂತ ಕೋಪಾವಿಷ್ಟನಾದ ಉದಂಕನು ಸಿಟ್ಟು-ದುಃಖಗಳಿಂದ ಸಹಿತನಾಗಿ ಒಂದು ಕೋಲನ್ನು ತೆಗೆದುಕೊಂಡು ಸರ್ಪವು ಪ್ರವೇಶಿಸಿದ ಹುತ್ತವನ್ನು ಅಗೆಯ ತೊಡಗಿದನು. ನಿರಂತರವೂ ಮೂವತ್ತೈದು ಹಗಲುಗಳಲ್ಲಿ ಉದಂಕನ ಈ ಪ್ರಯತ್ನವು ನಡೆಯಿತು.

ತಸ್ಯ ವೇಗಮಸಹ್ಯಂ ತಮಸಹಂತೀ ವಸುಂಧರಾ ।
ದಂಡಕಾಷ್ಠಾಭಿನುನ್ನಾಂಗೀ ಚಚಾಲ ಭೃಶಮಾತುರಾ ॥೨೯॥

ಸಹಿಸಲು ಅಸಾಧ್ಯವಾದ ಉದಂಕನ ವೇಗವನ್ನು ಭೂಮಿಯು ಸಹಿಸಲಾರದಾಯಿತು. ಮರದ ದೊಣ್ಣೆಯ ಪೆಟ್ಟಿನಿಂದ ದುಃಖಿತಳಾದ ಭೂಮಾತೆಯು ಚಿಂತಾಗ್ರಸ್ಥಳಾಗಿ ನಡುಗತೊಡಗಿದಳು. .

ತತಃ ಖನತ ಏವಾಸ್ಯ ವಿಪ್ರರ್ಷೇರ್ಧರಣೀತಳಮ್ ।
ನಾಗಲೋಕಸ್ಯ ಪಂಥಾನಂ ಕಾಮಯಾನಸ್ಯ ನಿಶ್ಚಯಾತ್ ॥೩೦॥

ರಥೇನ ಹರಿಯುಕ್ತೇನ ತಂ ದೇಶಮಭಿಜಗ್ಮಿವಾನ್ ।
ವಜ್ರಪಾಣಿರ್ಮಹಾತೇಜಾ ದದರ್ಶಾಥ ದ್ವಿಜೋತ್ತಮಮ್ ॥೩೧॥

ನಾಗಲೋಕಕ್ಕೆ ಉದಂಕನಿಗೆ ಮಾರ್ಗವನ್ನು ಕಲ್ಪಿಸಿಕೊಡಬೇಕೆಂದು ನಿಶ್ಚಯಿಸಿಕೊಂಡು ಉದಂಕನು ಭೂಮಿಯನ್ನು ಅಗೆಯುತ್ತಿರುವಾಗಲೇ ತೇಜಸ್ವಿಯಾದ ವಜ್ರಪಾಣಿಯಾದ ಇಂದ್ರನು ಕುದುರೆಗಳಿಂದ ಕೂಡಿರುವ ರಥದಲ್ಲಿ ಕುಳಿತು ಉದಂಕನು ಅಗೆಯುತ್ತಿರುವ ಭೂಮಿಯ ಕಡೆ ಆಗಮಿಸಿದನು. ಅಲ್ಲಿ ದ್ವಿಜಶ್ರೇಷ್ಠನಾದ ಉದಂಕನನ್ನು ನೋಡಿದನು.

ಸ ತತ್ರ ಬ್ರಾಹ್ಮಣೋ ಭೂತ್ವಾ ತಸ್ಯ ದುಃಖೇನ ದುಃಖಿತಃ ।
ಉದಂಕಮಬ್ರವೀತ್ ತಾತ ನೈತಚ್ಛಕ್ಯಂ ತ್ವಯೇತಿ ವೈ ॥೩೨॥

ಬ್ರಾಹ್ಮಣ ವೇಷವನ್ನು ಧರಿಸಿ ಇಂದ್ರನು ಉದಂಕನಿಗೆ ಹೇಳಿದನು- ಉದಂಕನೇ, ಈ ನಾಗಲೋಕಕ್ಕೆ ಮಾರ್ಗವನ್ನು ಮಾಡಲು ನಿನ್ನ ದೊಣ್ಣೆಯಿಂದ ಸಾಧ್ಯವಾಗುವುದಿಲ್ಲ.

ಇತೋಽಸ್ತಿ ನಾಗಲೋಕೋ ವೈ ಯೋಜನಾನಿ ಸಹಸ್ರಶಃ ।
ನ ದಂಡಕಾಷ್ಠಸಾಧ್ಯಂ ಚ ಮನ್ಯೇ ಕಾರ್ಯಮಿದಂ ತವ ॥೩೩॥

ಇಲ್ಲಿಂದ ನಾಗಲೋಕವು ಸಾವಿರಾರು ಯೋಜನಗಳ ದೂರದಲ್ಲಿದೆ. ಅಷ್ಟು ದೂರದ ಮಾರ್ಗವನ್ನು ಕಲ್ಪಿಸುವುದು ಈ ದಂಡಕಾಷ್ಠಕ್ಕೆ ಸಾಧ್ಯವಾಗುವುದಿಲ್ಲ.

ಉದಂಕಃ

ನಾಗಲೋಕಾದ್ ಯದಿ ಬ್ರಹ್ಮನ್ ನ ಶಕ್ಯೇ ಕುಂಡಲೇ ಮಯಾ ।
ಪ್ರಾಪ್ತುಂ ಪ್ರಾಣಾನ್ ವಿಮೋಕ್ಷ್ಯಾಮಿ ಪಶ್ಯತಸ್ತೇ ದ್ವಿಜೋತ್ತಮ ॥೩೪॥

ಉದಂಕ– ಬ್ರಾಹ್ಮಣವರ್ಯನೇ, ಈ ಕಾಷ್ಠದ ಮೂಲಕವಾಗಿಯೇ ಮಾರ್ಗವನ್ನು ಕಲ್ಪಿಸಿಕೊಂಡು ನಾಗಲೋಕಕ್ಕೆ ಹೋಗಿ ಕುಂಡಲಗಳನ್ನು ತರಲಾಗದಿದ್ದಲ್ಲಿ ನೀನು ನೋಡುತ್ತಿರುವಂತೆ ನನ್ನ ಪ್ರಾಣಗಳನ್ನೇ ತ್ಯಾಗ ಮಾಡುತ್ತೇನೆ.

ವೈಶಂಪಾಯನಃ

ಯದಾ ಸ ನಾಶಕತ್ ತಸ್ಯ ನಿಶ್ಚಯಂ ಕರ್ತುಮನ್ಯಥಾ ।
ವಜ್ರಪಾಣಿಸ್ತದಾ ದಂಡಂ ವಜ್ರಾಸ್ತ್ರೇಣ ಯುಯೋಜ ಹ ॥೩೫॥

ವೈಶಂಪಾಯನ– ಜನಮೇಜಯನೇ, ಉದಂಕನ ನಿಶ್ಚಯವಾದ ಮಾತುಗಳನ್ನು ಇಂದ್ರನು ಕೇಳಿಸಿಕೊಂಡನು. ಅವನನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ನಿಶ್ಚಯವಾದಾಗ ವಜ್ರಪಾಣಿಯಾದ ಇಂದ್ರನು ಅವನ ದಂಡಕಾಷ್ಠದಲ್ಲಿ ವಜ್ರಾಯುಧವನ್ನು ಪ್ರವೇಶಿಸಿದನು.

ತತೋ ವಜ್ರಪ್ರಹಾರೈಸ್ತೈರ್ದಾರ್ಯಮಾಣಾ ವಸುಂಧರಾ ।
ನಾಗಲೋಕಸ್ಯ ಪಂಥಾನಮಕರೋಜ್ಜ್ವನಮೇಜಯ ॥೩೬॥

ನಿರಂತರ ವಜ್ರಾಯುಧ ಪ್ರಹಾರದಿಂದ ಸೀಳಿದ ಭೂಮಿಯು ವೇಗವಾಗಿ ನಾಗಲೋಕಕ್ಕೆ ದಾರಿ ಮಾಡಿಕೊಟ್ಟಿತು.

ಸ ತೇನ ಮಾರ್ಗೇಣ ತದಾ ನಾಗಲೋಕಂ ವಿವೇಶ ಹ ॥೩೭॥

ಆ ಮಾರ್ಗದ ಮೂಲಕ ಉದಂಕನು ನಾಗಲೋಕವನ್ನು ಪ್ರವೇಶಿಸಿದನು.

ದದರ್ಶ ನಾಗಲೋಕಂ ಚ ಯೋಜನಾನಿ ಸಹಸ್ರಶಃ ॥೩೮॥

ಸಾವಿರಾರು ಯೋಜನಗಳಿಂದ ವಿಸ್ತೀರ್ಣವಾಗಿರುವ ನಾಗಲೋಕವನ್ನು ನೋಡಿದನು.

ಪ್ರಾಕಾರನಿಚಯೈರ್ದಿವ್ಯೈರ್ಮಣಿಮುಕ್ತಾದ್ಯಲಂಕೃತೈಃ ।
ಉಪಪನ್ನಂ ಮಹಾಭಾಗ ಶಾತಕುಂಭಮಯೈಸ್ತಥಾ ॥೩೯॥

ನಾಗಲೋಕವಾದರೂ ಅನೇಕ ಪ್ರಾಕಾರಗಳಿಂದ ಕೂಡಿದ್ದಿತು. ದಿವ್ಯವಾದ ಮಣಿಗಳಿಂದಲೂ, ಮುತ್ತುಗಳಿಂದಲೂ ಅಲಂಕೃತವಾಗಿದ್ದಿತು. ಬಂಗಾರದ ಕುಂಭಗಳಿಂದ ತುಂಬಿರುವ ಈ ನಾಗಲೋಕವನ್ನು ಉದಂಕನು ಕಂಡನು.

ವಾಪೀಃ ಸ್ಫಟಿಕಸೋಪಾನಾ ನದೀಶ್ಚ ವಿಮಲೋದಕಾಃ ।
ದದರ್ಶ ವೃಕ್ಷಾಂಶ್ಚ ಬಹೂನ್ ನಾನಾದ್ವಿಜಗಣಾಯುತಾನ್ ॥೪೦॥

ಸ್ಫಟಿಕಮಯವಾದ ಮೆಟ್ಟಿಲುಗಳಿಂದ ಕೂಡಿರುವ ಬಾವಿಗಳನ್ನೂ, ನಿರ್ಮಲವಾದ ನೀರಿನ ಸ್ರೋತಗಳುಳ್ಳ ನದಿಗಳನ್ನೂ, ಅನೇಕ ವಿಧವಾದ ಪಕ್ಷಿಗಳಿಂದ ತುಂಬಿದ ವೃಕ್ಷವಿಶೇಷಗಳನ್ನೂ ಕಂಡನು.

ನಾಗಲೋಕಸ್ಯ ವಿವರಂ ಸ ದದರ್ಶ ಭೃಗೂದ್ವಹಃ ।
ಪಂಚಯೋಜನವಿಸ್ತಾರಮಾಯತಂ ಶತಯೋಜನಮ್ ॥೪೧॥

ಐದು ಯೋಜನ ವಿಸ್ತಾರವುಳ್ಳ, ನೂರು ಯೋಜನ ಉದ್ದವಾಗಿರುವ ನಾಗಲೋಕದ ಮಹಾದ್ವಾರವನ್ನು ಕಂಡು ಆಶ್ಚರ್ಯಚಕಿತನಾದನು.

ನಾಗಲೋಕಮುದಂಕಸ್ತು ಪ್ರೇಕ್ಷ್ಯ ದೀನೋऽಭವತ್ ತದಾ ।
ನಿರಾಶಶ್ಚಾಭವತ್ ತತ್ರ ಕುಂಡಲಾಹರಣೇ ತತಃ ॥೪೨॥

ವಿಸ್ತಾರವಾದ ನಾಗಲೋಕವನ್ನು ನೋಡಿ ಕಳೆದು ಹೋಗಿರುವ ತನ್ನ ಮಣಿಯನ್ನು ಎಲ್ಲಿ ಹುಡುಕಬೇಕೆಂದೇ ತಿಳಿಯದೆ ಉದಂಕನ ಉತ್ಸಾಹವು ಉಡುಗಿತು. ತನ್ನ ಕರ್ಣಕುಂಡಲಗಳನ್ನು ಪಡೆಯುವುದರಲ್ಲಿ ನಿರಾಸೆ ಹೊಂದಿದನು.

ತತ್ರ ಪ್ರೋವಾಚ ತುರಗಸ್ತಂ ಕೃಷ್ಣಶ್ವೇತವಾಲಧಿಃ ।
ತಾಮ್ರಾಸ್ಯನೇತ್ರಃ ಕೌರವ್ಯ ಪ್ರಜ್ವಲನ್ನಿವ ತೇಜಸಾ ॥೪೩॥

ಇದೇ ಸಮಯಕ್ಕೆ ಸರಿಯಾಗಿ ಕಪ್ಪು-ಬಿಳಿ ಕೂದಲುಗಳ ಬಾಲವುಳ್ಳ, ಕೆಂಪಾದ ಮುಖ, ಕಣ್ಣುಗಳಿಂದ ಕೂಡಿರುವ, ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವುದೋ ಎಂಬಂತಿರುವ ಒಂದು ಕುದುರೆಯು ಉದಂಕನ ಬಳಿ ಬಂದು ಹೇಳಿತು.

ಅಶ್ವಃ

ಧಮ ಹ್ಯಪಾನಮೇತನ್ಮೇ ತತಸ್ತ್ವಂ ವಿಪ್ರ ಲಪ್ಸ್ಯಸೇ ।
ಐರಾವತಸುತೇನೇಹ ತವಾನೀತೇ ಹಿ ಕುಂಡಲೇ ॥೪೪॥

ಅಶ್ವ– ವಿಪ್ರವರ್ಯನೇ, ನನ್ನ ಅಪಾನಸ್ಥಳವನ್ನು ಜೋರಾಗಿ ಊದು. ಹೀಗೆ ನೀನು ಮಾಡುವುದರಿಂದ ಐರಾವತನ ಸುತನು ತೆಗೆದುಕೊಂಡಿರುವ ನಿನ್ನ ಕರ್ಣ ಕುಂಡಲಗಳನ್ನು ನೀನು ಪಡೆಯಬಹುದು.

ಮಾ ಜುಗುಪ್ಸಾಂ ಕೃಥಾಃ ಪುತ್ರ ತ್ವಮತ್ರಾರ್ಥೇ ಕಥಂಚನ ।
ಆಸೇವಿತಸ್ತ್ವಯೈತದ್ಧಿ ಗೌತಮಸ್ಯಾಶ್ರಮೇ ತದಾ ॥೪೫॥

ವಿಪ್ರವರ್ಯನೇ, ಈ ಕರ್ತವ್ಯದಲ್ಲಿ ಹೇಸಿಗೆ ಪಡಬೇಡ. ಗೌತಮರ ಆಶ್ರಮದಲ್ಲಿ ಅನೇಕ ಬಾರಿ ಇಂತಹ ಕರ್ಮಗಳನ್ನು ಮಾಡಿರುತ್ತಿ.

ಉದಂಕಃ

ಕಥಂ ಭವಂತಂ ಜಾನೀಯಾಮುಪಾಧ್ಯಾಯಾಶ್ರಮಂ ಪ್ರತಿ ।
ತನ್ಮಯಾ ಚೀರ್ಣಪೂರ್ವಂ ಚ ಶ್ರೋತುಮಿಚ್ಛಾಮಿ ತತ್ತ್ವತಃ ॥೪೬॥

ಉದಂಕ– ಅಶ್ವಶ್ರೇಷ್ಠನೇ, ಉಪಾಧ್ಯಾಯರ ಆಶ್ರಮದಲ್ಲಿ ನಾನು ನಿನ್ನನ್ನು ಯಾವಾಗ ನೋಡಿದೆ? ಆ ಆಶ್ರಮದಲ್ಲಿದ್ದಾಗ ನಿನ್ನ ಅಪಾನಸ್ಥಳವನ್ನು ಯಾವಾಗ ಊದಿದೆ? ಈ ವಿಷಯವನ್ನು ತಿಳಿಯಲು ಬಯಸುತ್ತೇನೆ.

ಅಶ್ವಃ

ಗುರೋರ್ಗುರುಂ ಮಾಂ ಜಾನೀಹಿ ಜ್ವಲಿತಂ ಜಾತವೇದಸಮ್ ॥೪೭॥

ತ್ವಯಾ ಹ್ಯಹಂ ಸದಾ ವತ್ಸ ಗುರೋರರ್ಥೇ ತಪೋಧನ ।
ಸತತಂ ಪೂಜಿತೋ ವಿಪ್ರ ಶುಚಿನಾ ಭೃಗುಸತ್ತಮ ॥೪೮॥

ತತಃ ಶ್ರೇಯೋ ವಿಧಾಸ್ಯಾಮಿ ತವೈವ ಕುರು ಮಾ ಚಿರಮ್ ॥೪೯॥

ಅಶ್ವ– ಭೃಗುನಂದನನೇ, ವಿಪ್ರಶ್ರೇಷ್ಠನೇ, ನನ್ನನ್ನು ನಿನ್ನ ಗುರುವಿಗೂ ಗುರುವಾದ ಅಗ್ನಿದೇವನೆಂದು ಭಾವಿಸು. ಗುರುವಿನ ಸಲುವಾಗಿ ಶುಚಿಯಾಗಿ ಹೋಮಾದಿಗಳನ್ನು ವಿಧಿವತ್ತಾಗಿ ಅನುಷ್ಠಾನ ಮಾಡಿ ನನ್ನನ್ನು ಪೂಜಿಸಿರುವೆ. ಅದರಂತೆ ನಿನಗೆ ಶ್ರೇಯಸ್ಸನ್ನು ಮಾಡುತ್ತೇನೆ. ನಾನು ಹೇಳಿದಂತೆ ಕೂಡಲೇ ಮಾಡುವುದು ನಿನಗೆ ಯೋಗ್ಯವಾಗಿದೆ.

ವೈಶಂಪಾಯನಃ

ಇತ್ಯುಕ್ತಃ ಸ ತಥಾऽಕಾರ್ಷೀದ್ ಉದಂಕಶ್ಚಿತ್ರಭಾನುನಾ ।
ಘೃತಾರ್ಚಿಃ ಪ್ರೀತಿಮಾಂಶ್ಚಾಪಿ ಪ್ರಜಜ್ವಾಲ ದಿಧಕ್ಷಯಾ ॥೫೦॥

ವೈಶಂಪಾಯನ– ಅಶ್ವವು ಹೀಗೆ ಹೇಳಿದ ಬಳಿಕ ಉದಂಕನು ಅದರಂತೆ ಆಚರಿಸಿದನು. ತುಪ್ಪದಿಂದ ಯುಕ್ತವಾದ ಜ್ವಾಲೆಯುಳ್ಳ ಅಗ್ನಿಯು ಇದರಿಂದ ಪ್ರೀತನಾಗಿ ನಾಗಲೋಕವನ್ನೇ ಸುಡುವಂತೆ ಬೆಳಗಿದನು.

ತತೋऽಸ್ಯ ರೋಮಕೂಪೇಭ್ಯೋ ಧ್ಮಾಯಮಾನಸ್ಯ ಭಾರತ ।
ಘನಃ ಪ್ರಾದುರಭೂದ್ ಧೂಮೋ ನಾಗಲೋಕಭಯಾವಹಃ ॥೫೧॥

ಉದಂಕನು ಅಪಾನಸ್ಥಳವನ್ನು ಊದುತ್ತಿರುವಂತೆ ಕುದುರೆಯ ರೋಮಕೂಪದಿಂದ ದಟ್ಟವಾದ ಹೊಗೆಯು ಹೊರಹೊಮ್ಮಿತು. ಆ ಭಯಂಕರವಾದ ಘನವಾದ ಹೊಗೆಯು ನಾಗಲೋಕಕ್ಕೆ ಭಯವನ್ನು ಹುಟ್ಟಿಸಿತು.

ತೇನ ಧೂಮೇನ ಸಹಸಾ ವರ್ಧಮಾನೇನ ಭಾರತ ।
ನಾಗಲೋಕೇ ಮಹಾರಾಜ ನ ಪ್ರಾಜ್ಞಾಯತ ಕಿಂಚನ ॥೫೨॥

ಕ್ಷಣಕ್ಷಣಕ್ಕೂ ಬೆಳೆಯುತ್ತಿರುವ ಹೊಗೆಯಿಂದಾಗಿ ನಾಗಲೋಕದಲ್ಲಿರುವ ಸರ್ಪಗಳು ಕಂಗಾಲಾದವು. ಯಾವ ಭಾಗದಲ್ಲಿ ಏನಿದೆ ಎಂದು ತಿಳಿಯಲು ಸಾಧ್ಯವಾಗಲಿಲ್ಲ.

ಹಾಹಾಕೃತಮಭೂತ್ ಸರ್ವಮೈರಾವತನಿವೇಶನಮ್ ।
ವಾಸುಕಿಪ್ರಮುಖಾನಾಂ ಚ ನಾಗಾನಾಂ ಜನಮೇಜಯ ॥೫೩॥

ಹೊಗೆಯಿಂದ ಆವೃತವಾದ ಸರ್ಪಗಳು ಹಾಹಾಕಾರವನ್ನು ಮಾಡಿದವು. ಐರಾವತನ ಮನೆಯೆಲ್ಲವೂ ವಾಸುಕಿ ಪ್ರಮುಖರಿಂದ ದುಃಖಿತವಾಯಿತು.

ನ ಪ್ರಾಕಾಶಂತ ವೇಶ್ಮಾನಿ ಧೂಮರುದ್ಧಾನಿ ಸರ್ವಶಃ ।
ನೀಹಾರಸಂವೃತಾನೀವ ವನಾನಿ ಗಿರಯಸ್ತದಾ ॥೫೪॥

ಹೊಗೆಯಿಂದ ವ್ಯಾಪಿಸಿದ ಯಾರ ಮನೆಗಳೂ ಕಣ್ಣಿಗೆ ಕಾಣಿಸಲಿಲ್ಲ. ಮಂಜಿನಿಂದ ಕವಿದ ವನಗಳು, ಪರ್ವತಗಳು ಕಣ್ಣಿಗೆ ಕಾಣಿಸದಿರುವಂತೆ ಹೊಗೆಯಿಂದ ನಾಗಲೋಕವೇ ಮುಚ್ಚಿಹೋಯಿತು.

ತೇ ಧೂಮರಕ್ತನಯನಾ ವಹ್ನಿತೇಜೋಭಿತಾಪಿತಾಃ ।
ಆಜಗ್ಮುರ್ನಿಶ್ಚಯಂ ಜ್ಞಾತುಂ ಭಾರ್ಗವಸ್ಯಾತಿತೇಜಸಃ ॥೫೫॥

ಕೆಂಪಾದ ಕಣ್ಣುಗಳಿಂದ ಕೂಡಿದ, ಬೆಂಕಿಯ ಜ್ವಾಲೆಗಳಂತೆಯೇ ಪ್ರಜ್ವಲಿಸುತ್ತಿರುವ ನಾಗಗಳೆಲ್ಲವೂ ಒಟ್ಟಾಗಿ ಸೇರಿ ಮಹಾತ್ಮನಾದ ಉದಂಕನ ಭಾವವೇನೆಂಬುದನ್ನು ತಿಳಿದುಕೊಳ್ಳಲು ಅವನ ಬಳಿ ಆಗಮಿಸಿದವು.

ಶ್ರುತ್ವಾ ತು ನಿಶ್ಚಯಂ ತಸ್ಯ ಮಹರ್ಷೇಸ್ತಿಗ್ಮತೇಜಸಃ ।
ಸಂಭ್ರಾಂತಮನಸಃ ಸರ್ವೇ ಪೂಜಾಂ ಚಕ್ರುರ್ಯಥಾವಿಧಿ ॥೫೬॥

ಮಹಾತೇಜಸ್ವಿಯಾದ ಉದಂಕನ ನಿರ್ಧಾರವೇನೆಂದು ತಿಳಿದು ಸರ್ಪಗಳೆಲ್ಲವೂ ಕಂಗಾಲಾದ ಮನಸ್ಸಿನಿಂದ ಕೂಡಿಕೊಂಡು ಉದಂಕನನ್ನು ಯೋಗ್ಯವಾಗಿ ಸತ್ಕರಿಸಿದವು.

ಸರ್ವೇ ಪ್ರಾಂಜಲಯೋ ನಾಗಾ ಬಾಲವೃದ್ಧಪುರೋಗಮಾಃ ।
ಶಿರೋಭಿಃ ಪ್ರಣಿಪತ್ಯೋಚುಃ ಪ್ರಸೀದ ಭಗವನ್ನಿತಿ ॥೫೭॥

ಸರ್ಪಗಳೆಲ್ಲವೂ ಉದಂಕನಿಗೆ ತಲೆಬಾಗಿ ನಮಸ್ಕರಿಸಿ ಪೂಜ್ಯನೇ, ಪ್ರಸನ್ನನಾಗು ಎಂದು ಪ್ರಾರ್ಥಿಸಿದವು.

ಪ್ರಸಾದ್ಯ ಬ್ರಾಹ್ಮಣಂ ತೇ ತು ಪಾದ್ಯಮರ್ಘ್ಯಂ ನಿವೇದ್ಯ ಚ ।
ಪ್ರಾಯಚ್ಛತ್ ಕುಂಡಲೇ ದಿವ್ಯೇ ಪನ್ನಗಾಃ ಪರಮಾರ್ಚಿತೇ ॥೫೮॥

ಬ್ರಾಹ್ಮಣನನ್ನು ಸಂತೋಷಪಡಿಸುತ್ತಾ ಅರ್ಘ್ಯ-ಪಾದ್ಯಾದಿಗಳನ್ನು ನೀಡಿ, ಪವಿತ್ರವಾದ ಮಣಿಕುಂಡಲವನ್ನು ತೆಗೆದುಕೊಂಡು ಬಂದು ಉದಂಕನಿಗೆ ಒಪ್ಪಿಸಿದವು.

ತತಃ ಸ ಪೂಜಿತೋ ನಾಗೈಃ ತದೋದಂಕಃ ಪ್ರತಾಪವಾನ್ ।
ಅಗ್ನಿಂ ಪ್ರದಕ್ಷಿಣಂ ಕೃತ್ವಾ ಜಗಾಮ ಗುರುಸದ್ಮ ತತ್ ॥೫೯॥

ಹೀಗೆ ಪ್ರತಾಪಶಾಲಿಯಾದ ಉದಂಕನು ಸರ್ಪದಿಂದ ಪೂಜಿತನಾಗಿ, ಅಗ್ನಿಯನ್ನು ಪ್ರದಕ್ಷಿಣಿ ಗುರುಗಳ ಆಶ್ರಮದೆಡೆ ನಡೆದನು.

ಸ ಗತ್ವಾ ತ್ವರಿತೋ ರಾಜನ್ ಗೌತಮಸ್ಯ ನಿವೇಶನಮ್ ।
ಪ್ರಾಯಚ್ಛತ್ ಕುಂಡಲೇ ದಿವ್ಯೇ ಗುರುಪತ್ನ್ಯಾಸ್ತದಾऽನಘ ॥೬೦॥

ಉದಂಕನು ವೇಗವಾಗಿ ಗೌತಮರ ಆಶ್ರಮಕ್ಕೆ ಹೋಗಿ, ದಿವ್ಯವಾದ ಮಣಿಕುಂಡಲಗಳನ್ನು ಗುರುಪತ್ನಿಗೆ ನಿವೇದಿಸಿದನು.

ಏವಂ ಲೋಕದ್ವಯಂ ತೇನ ವಿಪ್ರೇಣ ಜನಮೇಜಯ ।
ಪರಿಕ್ರಮ್ಯಾಹೃತೇ ದಿವ್ಯೇ ತತಸ್ತೇ ಮಣಿಕುಂಡಲೇ ॥೬೧॥

ಹೀಗೆ ಭೂಲೋಕ, ನಾಗಲೋಕಗಳನ್ನು ಸಂಚರಿಸಿ ದಿವ್ಯವಾದ ಮಣಿಕುಂಡಲಗಳನ್ನು ಸಂಗ್ರಹಿಸಿ, ವಿಪ್ರಶ್ರೇಷ್ಠನಾದ ಉದಂಕನು ಗುರುಪತ್ನಿಗೆ ನೀಡಿದನು.

ಏವಂಪ್ರಭಾವಃ ಸ ಮುನಿರುದಂಕೋ ಭರತರ್ಷಭ ।
ಪರೇಣ ತಪಸಾ ಯುಕ್ತೋ ಯಸ್ಮಾಂ ತ್ವಂ ಪರಿಪೃಚ್ಛಸಿ ॥೬೨॥

ಭರತಶ್ರೇಷ್ಠನೇ, ಇಂತಹ ಉತ್ತಮವಾದ ಪ್ರಭಾವದಿಂದ ಕೂಡಿದವನು ಮುನಿಶ್ರೇಷ್ಠನಾದ ಉದಂಕನು. ಶ್ರೇಷ್ಠವಾದ ತಪಸ್ಸಿನಿಂದ ಕೂಡಿದ ಉದಂಕನ ಬಗ್ಗೆ ಪ್ರಶ್ನಿಸಿದಾಗ ಇಷ್ಟು ಉತ್ತರಿಸಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಉದಂಕೋಪಾಖ್ಯಾನೇ ಕುಂಡಲಾಹರಣಪ್ರಕಾರಕಥನಂ ನಾಮ
ಅಷ್ಟಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

॥ ಉದಂಕೋಪಾಖ್ಯಾನಂ ಸಮಾಪ್ತಮ್ ॥

★ ★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಉದಂಕನಿಗೆ ವರವನ್ನು ನೀಡಿ ಶ್ರೀಕೃಷ್ಣನು ದ್ವಾರಕೆಗೆ ಆಗಮಿಸುವಾಗ ಮಧ್ಯದಲ್ಲಿ ರೈವತ ಪರ್ವತಕ್ಕೆ ಹೋದುದು. ರೈವತ ಮಹೋತ್ಸವದಲ್ಲಿ ಕೃಷ್ಣನು ಭಾಗವಹಿಸಿ ಬಳಿಕ ದ್ವಾರಕೆಗೆ ಆಗಮಿಸಿ, ತಂದೆ-ತಾಯಿಗಳನ್ನು ನಮಸ್ಕರಿಸಿದುದು.

ಜನಮೇಜಯಃ

ಉದಂಕಾಯ ವರಂ ದತ್ತ್ವಾ ಗೋವಿಂದೋ ದ್ವಿಜಸತ್ತಮ ।
ಅತ ಊರ್ಧ್ವಂ ಮಹಾಬಾಹುಃ ಕಿಂ ಚಕಾರ ಮಹಾಯಶಾಃ ॥೧॥

ಜನಮೇಜಯ– ದ್ವಿಜಶ್ರೇಷ್ಠರಾದ ವೈಶಂಪಾಯನರೇ, ಮಹಾಕೀರ್ತಿ ಸಂಪನ್ನನಾದ, ಬಾಹುಬಲಶಾಲಿಯಾದ ಶ್ರೀಕೃಷ್ಣನು ಉದಂಕನಿಗೆ ಮರುಭೂಮಿಯಲ್ಲೂನೀರು ಸಿಗುವಂತೆ ವರವನ್ನು ಕೊಟ್ಟುಮುಂದೇನು ಮಾಡಿದನು ಎಂದು ತಿಳಿಸಿರಿ.

ವೈಶಂಪಾಯನಃ

ದತ್ತ್ವಾ ವರಮುದಂಕಾಯ ಪ್ರಾಯಾತ್ ಸಾತ್ಯಕಿನಾ ಸಹ ।
ದ್ವಾರಕಾಮೇವ ಗೋವಿಂದಃ ಶೀಘ್ರವೇಗೈರ್ಹಯೋತ್ತಮೈಃ ॥೨॥

ವೈಶಂಪಾಯನ– ಜನಮೇಜಯನೇ, ಕೃಷ್ಣನು ಉದಂಕನಿಗೆ ವರದಾನ ಮಾಡಿದ ಬಳಿಕ ಶೀಘ್ರವಾಗಿ ಸಾಗುವ ಕುದುರೆಗಳಿಂದ ಕೂಡಿದ ರಥವನ್ನೇರಿ ಸಾತ್ಯಕಿಯ ಜೊತೆಗೆ ದ್ವಾರಕೆಯ ಕಡೆಗೆ ನಡೆದನು.

ಸ ಸರಾಂಸಿ ನದೀಶ್ಚೈವ ವನಾನಿ ವಿವಿಧಾನಿ ಚ ।
ಅತಿಕ್ರಮ್ಯಾಸಸಾದಾಥ ರಮ್ಯಾಂ ದ್ವಾರವತೀಂ ಪುರೀಮ್ ॥೩॥

ದಾರಿಯಲ್ಲಿಸಿಗುವ ಸರೋವರಗಳನ್ನು, ನದಿಗಳನ್ನು, ಅರಣ್ಯಗಳನ್ನು, ಬಗೆಬಗೆಯ ಗಿರಿ-ಪರ್ವತಗಳನ್ನು ದಾಟಿ, ಕೃಷ್ಣನು ಸಾತ್ಯಕಿಯ ಜೊತೆಗೆ ರಮಣೀಯವಾದ ದ್ವಾರಕಾ ಪಟ್ಟಣವನ್ನು ಸೇರಿದನು.

ವರ್ತಮಾನೇ ಮಹಾರಾಜ ಮಹೇ ರೈವತಕಸ್ಯ ತು ।
ಉಪಾಯಾತ್ ಪುಂಡರೀಕಾಕ್ಷೋ ಯುಯುಧಾನಾನುಗಸ್ತಥಾ ॥೪॥

ಶ್ರೀಕೃಷ್ಣನು ದ್ವಾರಕೆಗೆ ಹೋಗುವ ಸಮಯದಲ್ಲಿ ರೈವತ ಪರ್ವತದಲ್ಲಿ ಒಂದು ಪೂಜಾರೂಪವಾದ ಉತ್ಸವವು ನಡೆಯುತ್ತಿತ್ತು. ಸಾತ್ಯಕಿಯಿಂದ ಸಹಿತನಾಗಿ ಪುಂಡರೀಕಾಕ್ಷನು ಆ ಉತ್ಸವಕ್ಕೆ ಹೋದನು.

ಅಲಂಕೃತಸ್ತು ಸ ಗಿರಿರ್ನಾನಾರೂಪೈರ್ವಿಚಿತ್ರಕೈಃ ।
ಬಭೌ ರುಗ್ಮಮಯೈಃ ಕೋಶೈಃ ಸರ್ವತ್ರ ಪುರುಷರ್ಷಭ ॥೫॥

ಆ ಉತ್ಸವದಲ್ಲಿ ರೈವತ ಪರ್ವತವು ಬಗೆಬಗೆಯ ಆಕಾರಗಳುಳ್ಳ, ವಿಚಿತ್ರವಾದ, ಸುವರ್ಣಮಯವಾದ ಡೇರೆಗಳಿಂದ ಕೂಡಿಕೊಂಡು ಶೋಭಾಯಮಾನವಾಗಿ ಕಾಣಿಸುತ್ತಿತ್ತು.

ಕಾಂಚನಸ್ರಗ್ಭಿರಗ್ಯಾಭಿಃ ಸುಮನೋಭಿಸ್ತಥೈವ ಚ ।
ವಾಸೋಭಿಶ್ಚ ಮಹಾಶೈಲಃ ಕಲ್ಪವೃಕ್ಷೈಶ್ಚ ಸರ್ವಶಃ ॥೬॥

ಬಂಗಾರಮಯವಾದ ಶ್ರೇಷ್ಠವಾದ ಮಾಲೆಗಳಿಂದಲೂ, ದೇವತೆಗಳಿಂದಲೂ, ವಸ್ತ್ರಗಳಿಂದಲೂ, ಕಲ್ಪವೃಕ್ಷಗಳಿಂದಲೂ ಮಹಾಪರ್ವತವೆನಿಸಿದ ರೈವತ ಪರ್ವತವು ಶೋಭಿಸುತ್ತಿತ್ತು.

ದೀಪವೃಕ್ಷೈಶ್ಚ ಸೌವರ್ಣೈರಭೀಕ್ಷ್ಣಮಭಿಶೋಭಿತಃ ।
ಗುಹಾನಿರ್ಝರಭಾಗೇಷು ದೀಪಭೂತೋ ಬಭೂವ ಹ ॥೭॥

ಬಂಗಾರಮಯವಾದ ದೀಪವೃಕ್ಷಗಳಿಂದ ನಿರಂತರವಾಗಿ ಶೋಭಿಸುತ್ತಿರುವ ಆ ಪರ್ವತದ ಗುಹೆಗಳಲ್ಲಿ, ಚಿಲುಮೆಗಳಿದ್ದ ಪ್ರದೇಶಗಳಲ್ಲಿ ಸದಾ ಬೆಳಕೇ ಇರುವಂತೆ ಕಾಣಿಸುತ್ತಿತ್ತು.

ಪತಾಕಾಭಿಶ್ಚ ಚಿತ್ರಾಭಿಃ ಸಂಘಟ್ಟಾಭಿಃ ಸಮಂತತಃ ।
ಪುಂಭಿಃ ಸ್ತ್ರೀಭಿಶ್ಚ ಸಂಪೂರ್ಣಃ ಪ್ರಗೀತ ಇವ ಚಾಭವತ್ ॥೮॥

ಚಿತ್ರ-ವಿಚಿತ್ರವಾದ ಪತಾಕೆಗಳಿಂದ, ಗಂಟೆಗಳಿಂದ, ಸ್ತ್ರೀ-ಪುರುಷರಿಂದ ಉಚ್ಚರಿಸಲ್ಪಡುವ ಸುಮಧುರ ಶಬ್ದಗಳಿಂದ ಸಂಗೀತಮಯವಾಗಿ ಕಾಣಿಸುತ್ತಿತ್ತು.

ಅತೀವ ಪ್ರೇಕ್ಷಣೀಯೋಽಭೂನ್ಮೇರುರ್ಮುನಿಗಣೈರಿವ ॥೯॥

ಮುನಿಗಳಿಗೆ ಅತ್ಯಂತ ಶ್ರೇಷ್ಠವಾದ ಪ್ರೇಕ್ಷಣೀಯ ಸ್ಥಳವಾದ ಮೇರುಪರ್ವತದಂತೆ ರೈವತಕವು ಶೋಭಿಸುತ್ತಿತ್ತು.

ಮತ್ತಾನಾಂ ಹೃಷ್ಟರೂಪಾಣಾಂ ಸ್ತ್ರೀಣಾಂ ಪುಂಸಾಂ ಚ ಭಾರತ ।
ಗಾಯತಾಂ ಪರ್ವತೇಂದ್ರಸ್ಯ ದಿವಿಸ್ಪೃಗಿವ ನಿಃಸ್ವನಃ ॥೧೦॥

ಶ್ರೇಷ್ಠವಾದ ಪರ್ವತದ ಶಿಖರದಲ್ಲಿ ಸಂತೋಷದಿಂದ ಉನ್ಮತ್ತರಾದ, ಗಾನ ಮಾಡುತ್ತಿರುವ ಸ್ತ್ರೀ-ಪುರುಷರ ಶಬ್ದವು ಆಕಾಶವನ್ನೇ ತುಂಬಿತ್ತು.

ಮತ್ತಪ್ರಮತ್ತಸಮ್ಮತ್ತಕ್ಷ್ವೇಡಿತಾಕೃಷ್ಟಸಂಕುಲಃ ।
ತಥಾ ಕಿಲಕಿಲಾಶಬ್ದೈಃ ಭೂರಭೂತ್ ಸುಮನೋರಮಾ ॥೧೧॥

ಮತ್ತರಾದ, ಪ್ರಮತ್ತರಾದ, ಸನ್ಮತ್ತರಾದ ಈ ಸ್ತ್ರೀ-ಪುರುಷರು ಕುಣಿದು ಕುಪ್ಪಳಿಸುತ್ತಿರುವ ಸಂದರ್ಭದಲ್ಲಿ ಮಧುರವಾದ ಕಿಲಕಿಲಾ ಮೊದಲಾದ ಶಬ್ದಗಳಿಂದ ಆ ಪರ್ವತವು ತುಂಬಿಹೋಗಿತ್ತು.

ವಿಪಣಾಪಣವಾನ್ ರಮ್ಯೋ ಭಕ್ಷ್ಯಭೋಜ್ಯವಿಹಾರವಾನ್ ।
ವಸ್ತ್ರಮಾಲ್ಯೋತ್ಕರಯುತೋ ವೀಣಾವೇಣುಮೃದಂಗವಾನ್ ॥೧೨॥

ಆ ಪರ್ವತದಲ್ಲಿ ರಮಣೀಯವಾದ ಅಂಗಡಿಗಳು, ಮುಂಗಟ್ಟುಗಳು ತುಂಬಿಕೊಂಡಿದ್ದವು. ಭಕ್ಷ್ಯ-ಭೋಜ್ಯಾದಿಗಳು ಯಥೇಷ್ಟವಾಗಿದ್ದವು. ವಸ್ತ್ರಗಳು, ಮಾಲೆಗಳು ರಾಶಿರಾಶಿಯಾಗಿ ತುಂಬಿದ್ದವು. ವೀಣೆ, ಕೊಳಲು, ಮೃದಂಗಗಳ ನಿನಾದ ಕೇಳಿ ಬರುತ್ತಿತ್ತು.

ಸುರಾಮೈರೇಯಮಿಶ್ರೇಣ ಭಕ್ಷ್ಯಭೋಜ್ಯೇನ ಚೈವ ಹಿ ।
ದೀನಾಂಧಕೃಪಣಾದಿಭ್ಯೋ ದೀಯಮಾನೇನ ಚಾನಿಶಮ್ ॥೧೩॥

ಸುರಾ ಮತ್ತು ಮೈರೇಯ ಮಿಶ್ರವಾದ ಭಕ್ಷ್ಯ-ಭೋಜ್ಯಗಳನ್ನು ದೀನರಿಗೂ, ಕುರುಡರಿಗೂ, ಕೃಪಣರಿಗೂ ನಿರಂತರವಾಗಿ ಕೊಡುತ್ತಿದ್ದರು.

ಬಭೌ ಪರಮಕಲ್ಯಾಣೋ ಮಹಸ್ತಸ್ಯ ಮಹಾಗಿರೇಃ ॥೧೪॥

ಶ್ರೀಕೃಷ್ಣನು ದ್ವಾರಕೆಗೆ ಹೋಗುವ ಸಮಯದಲ್ಲಿ ರೈವತ ಪರ್ವತದಲ್ಲಿ ಒಂದು ಪೂಜಾರೂಪವಾದ ಉತ್ಸವವು ನಡೆಯುತ್ತಿತ್ತು. ಸಾತ್ಯಕಿಯಿಂದ ಸಹಿತನಾಗಿ ಪುಂಡರೀಕಾಕ್ಷನು ಆ ಉತ್ಸವಕ್ಕೆ ಹೋದನು.

ಅಲಂಕೃತಸ್ತು ಸ ಗಿರಿರ್ನಾನಾರೂಪೈರ್ವಿಚಿತ್ರಕೈಃ ।
ಬಭೌ ರುಗ್ಮಮಯೈಃ ಕೋಶೈಃ ಸರ್ವತ್ರ ಪುರುಷರ್ಷಭ ॥೫॥

ಆ ಉತ್ಸವದಲ್ಲಿ ರೈವತ ಪರ್ವತವು ಬಗೆಬಗೆಯ ಆಕಾರಗಳುಳ್ಳ, ವಿಚಿತ್ರವಾದ, ಸುವರ್ಣಮಯವಾದ ಡೇರೆಗಳಿಂದ ಕೂಡಿಕೊಂಡು ಶೋಭಾಯಮಾನವಾಗಿ ಕಾಣಿಸುತ್ತಿತ್ತು.

ಕಾಂಚನಸ್ರಗ್ಭಿರಗ್ಯ್ಯಾಭಿಃ ಸುಮನೋಭಿಸ್ತಥೈವ ಚ ।
ವಾಸೋಭಿಶ್ಚ ಮಹಾಶೈಲಃ ಕಲ್ಪವೃಕ್ಷೈಶ್ಚ ಸರ್ವಶಃ ॥೬॥

ಬಂಗಾರಮಯವಾದ ಶ್ರೇಷ್ಠವಾದ ಮಾಲೆಗಳಿಂದಲೂ, ದೇವತೆಗಳಿಂದಲೂ, ವಸ್ತ್ರಗಳಿಂದಲೂ, ಕಲ್ಪವೃಕ್ಷಗಳಿಂದಲೂ ಮಹಾಪರ್ವತವೆನಿಸಿದ ರೈವತ ಪರ್ವತವು ಶೋಭಿಸುತ್ತಿತ್ತು.

ದೀಪವೃಕ್ಷೈಶ್ಚ ಸೌವರ್ಣೈರಭೀಕ್ಷ್ಣಮಭಿಶೋಭಿತಃ ।
ಗುಹಾನಿರ್ಝರಭಾಗೇಷು ದೀಪಭೂತೋ ಬಭೂವ ಹ ॥೭॥

ಬಂಗಾರಮಯವಾದ ದೀಪವೃಕ್ಷಗಳಿಂದ ನಿರಂತರವಾಗಿ ಶೋಭಿಸುತ್ತಿರುವ ಆ ಪರ್ವತದ ಗುಹೆಗಳಲ್ಲಿ, ಚಿಲುಮೆಗಳಿದ್ದ ಪ್ರದೇಶಗಳಲ್ಲಿ ಸದಾ ಬೆಳಕೇ ಇರುವಂತೆ ಕಾಣಿಸುತ್ತಿತ್ತು.

ಪತಾಕಾಭಿಶ್ಚ ಚಿತ್ರಾಭಿಃ ಸಂಘಟ್ಟಾಭಿಃ ಸಮಂತತಃ ।
ಪುಂಭಿಃ ಸ್ತ್ರೀಭಿಶ್ಚ ಸಂಪೂರ್ಣಃ ಪ್ರಗೀತ ಇವ ಚಾಭವತ್ ॥೮॥

ಚಿತ್ರ-ವಿಚಿತ್ರವಾದ ಪತಾಕೆಗಳಿಂದ, ಗಂಟೆಗಳಿಂದ, ಸ್ತ್ರೀ-ಪುರುಷರಿಂದ ಉಚ್ಚರಿಸಲ್ಪಡುವ ಸುಮಧುರ ಶಬ್ದಗಳಿಂದ ಸಂಗೀತಮಯವಾಗಿ ಕಾಣಿಸುತ್ತಿತ್ತು.

ಅತೀವ ಪ್ರೇಕ್ಷಣೀಯೋಽಭೂನ್ಮೇರುರ್ಮುನಿಗಣೈರಿವ ॥೯॥

ಮುನಿಗಳಿಗೆ ಅತ್ಯಂತ ಶ್ರೇಷ್ಠವಾದ ಪ್ರೇಕ್ಷಣೀಯ ಸ್ಥಳವಾದ ಮೇರುಪರ್ವತದಂತೆ ರೈವತಕವು ಶೋಭಿಸುತ್ತಿತ್ತು.

ಮತ್ತಾನಾಂ ಹೃಷ್ಟರೂಪಾಣಾಂ ಸ್ತ್ರೀಣಾಂ ಪುಂಸಾಂ ಚ ಭಾರತ ।
ಗಾಯತಾಂ ಪರ್ವತೇಂದ್ರಸ್ಯ ದಿವಿಸ್ಪೃಗಿವ ನಿಃಸ್ವನಃ ॥೧೦॥

ಶ್ರೇಷ್ಠವಾದ ಪರ್ವತದ ಶಿಖರದಲ್ಲಿ ಸಂತೋಷದಿಂದ ಉನ್ಮತ್ತರಾದ, ಗಾನ ಮಾಡುತ್ತಿರುವ ಸ್ತ್ರೀ-ಪುರುಷರ ಶಬ್ದವು ಆಕಾಶವನ್ನೇ ತುಂಬಿತ್ತು.

ಮತ್ತಪ್ರಮತ್ತಸಮ್ಮತ್ತಕ್ಷ್ವೇಡಿತಾಕೃಷ್ಟಸಂಕುಲಃ ।
ತಥಾ ಕಿಲಕಿಲಾಶಬ್ದೈಃ ಭೂರಭೂತ್ ಸುಮನೋರಮಾ ॥೧೧॥

ಮತ್ತರಾದ, ಪ್ರಮತ್ತರಾದ, ಸನ್ಮತ್ತರಾದ ಈ ಸ್ತ್ರೀ-ಪುರುಷರು ಕುಣಿದು ಕುಪ್ಪಳಿಸುತ್ತಿರುವ ಸಂದರ್ಭದಲ್ಲಿ ಮಧುರವಾದ ಕಿಲಕಿಲಾ ಮೊದಲಾದ ಶಬ್ದಗಳಿಂದ ಆ ಪರ್ವತವು ತುಂಬಿಹೋಗಿತ್ತು.

ವಿಪಣಾಪಣವಾನ್ ರಮ್ಯೋ ಭಕ್ಷ್ಯಭೋಜ್ಯವಿಹಾರವಾನ್ ।
ವಸ್ತ್ರಮಾಲ್ಯೋತ್ಕರಯುತೋ ವೀಣಾವೇಣುಮೃದಂಗವಾನ್ ॥೧೨॥

ಆ ಪರ್ವತದಲ್ಲಿ ರಮಣೀಯವಾದ ಅಂಗಡಿಗಳು, ಮುಂಗಟ್ಟುಗಳು ತುಂಬಿಕೊಂಡಿದ್ದವು. ಭಕ್ಷ್ಯ-ಭೋಜ್ಯಾದಿಗಳು ಯಥೇಷ್ಟವಾಗಿದ್ದವು. ವಸ್ತ್ರಗಳು, ಮಾಲೆಗಳು ರಾಶಿರಾಶಿಯಾಗಿ ತುಂಬಿದ್ದವು. ವೀಣೆ, ಕೊಳಲು, ಮೃದಂಗಗಳ ನಿನಾದ ಕೇಳಿ ಬರುತ್ತಿತ್ತು.

ಸುರಾಮೈರೇಯಮಿಶ್ರೇಣ ಭಕ್ಷ್ಯಭೋಜ್ಯೇನ ಚೈವ ಹಿ ।
ದೀನಾಂಧಕೃಪಣಾದಿಭ್ಯೋ ದೀಯಮಾನೇನ ಚಾನಿಶಮ್ ॥೧೩॥

ಸುರಾ ಮತ್ತು ಮೈರೇಯ ಮಿಶ್ರವಾದ ಭಕ್ಷ್ಯ-ಭೋಜ್ಯಗಳನ್ನು ದೀನರಿಗೂ, ಕುರುಡರಿಗೂ, ಕೃಪಣರಿಗೂ ನಿರಂತರವಾಗಿ ಕೊಡುತ್ತಿದ್ದರು.

ಬಭೌ ಪರಮಕಲ್ಯಾಣೋ ಮಹಸ್ತಸ್ಯ ಮಹಾಗಿರೇಃ ॥೧೪॥

ಹೀಗೆ ಆ ಮಹಾಗಿರಿ ಎನಿಸಿದ ರೈವತಕವು ಈ ಎಲ್ಲ ವ್ಯಾಪಾರಗಳಿಂದ ಪರಮ ಮಂಗಳವಾಗಿ ಶೋಭಿಸಿತು.

ಪುಣ್ಯಾವಸಥವಾನ್ ವೀರೈಃ ಪುಣ್ಯಕೃದ್ಭಿರ್ನಿಷೇವಿತಃ ।
ವಿಹಾರೋ ವೃಷ್ಣಿವೀರಾಣಾಂ ಬಭೌ ರೈವತಕಸ್ಯ ಚ ॥೧೫॥

ಆ ಪರ್ವತದಲ್ಲಿ ಸತ್ಕರ್ಮಾನುಷ್ಠಾನಕ್ಕಾಗಿ ನಿರ್ಮಾಣ ಮಾಡಿದ ಮನೆಗಳಿದ್ದವು, ಆಶ್ರಮಗಳಿದ್ದವು. ಅವುಗಳಲ್ಲಿ ವೃಷ್ಣಿವೀರರು ವಿಹರಿಸುತ್ತಿದ್ದರು. ಅನುಷ್ಠಾನ ನಿರತರಾಗಿ ಶೋಭಿಸುತ್ತಿದ್ದರು.

ಸ ತಥಾ ವೇಶ್ಮಸಂಕೀರ್ಣೋ ದೇವಲೋಕ ಇವಾಬಭೌ ।
ತದಾ ಚ ಕೃಷ್ಣಸಾನ್ನಿಧ್ಯಾನ್ಮುದಾ ದೇವಗಣೈರ್ಯುತಃ ॥೧೬॥

ಇಂತಹ ಶ್ರೇಷ್ಠವಾದ ಮನೆಗಳಿಂದ ತುಂಬಿದ ರೈವತಕವು ದೇವಲೋಕದಂತೆ ಶೋಭಿಸಿತು. ಈ ಪ್ರಸಂಗದಲ್ಲಿ ಕೃಷ್ಣನ ಸಾನ್ನಿಧ್ಯವನ್ನು ಹೊಂದಿರುವ ವ್ಯಕ್ತಿಗಳು ದೇವತೆಗಳಂತೆ ಸಂತೋಷಪಟ್ಟರು.

ಸ್ತುವಂತ್ಯಂತರ್ಹಿತಾ ದೇವಾ ಗಂಧರ್ವಾಶ್ಚ ಸಹರ್ಷಿಭಿಃ ॥೧೭॥

ಆ ಪರ್ವತದಲ್ಲಿ ಋಷಿಗಳಿಂದ ಸಹಿತರಾದ ಗಂಧರ್ವರು, ದೇವತೆಗಳು ಅವ್ಯಕ್ತವಾಗಿ ನಿಂತು ಭಗವಂತನನ್ನು ಸ್ತುತಿಸಿದರು.

ದೇವ-ಗಂಧರ್ವಾಃ

ಸಾಧಕಃ ಸರ್ವಧರ್ಮಾಣಾಮಸುರಾಣಾಂ ವಿನಾಶಕಃ ।
ತ್ವಂ ಸ್ರಷ್ಟಾ ಸೃಜ್ಯಮಾಧಾರಂ ಕಾರಣಂ ಧರ್ಮವೇದವಿತ್ ॥೧೮॥

ದೇವಗಂಧರ್ವ– ಭಗವಂತನೇ, ನೀನು ಸಮಸ್ತ ಧರ್ಮಗಳನ್ನು ಸಾಧಿಸುವವನು, ಅಸುರರನ್ನು ಸಂಹರಿಸುವವನು, ಸಮಸ್ತ ಜೀವರಿಗೆ ಆಧಾರವಾದ ಈ ಜಗತ್ತಿಗೆ ನೀನೇ ಕಾರಣ, ನೀನೇ ಸೃಷ್ಟಿಕರ್ತಾ, ನೀನೇ ಧರ್ಮವೇತ್ತ.

ತ್ವಯಾ ಯತ್ ಕ್ರಿಯತೇ ದೇವ ನ ಜಾನೀಮೋऽತ್ರ ಮಾಯಯಾ ॥

ಭಗವಂತನೇ, ನಿನ್ನ ಸಂಕಲ್ಪಕ್ಕನುಗುಣವಾಗಿ ಸೃಷ್ಟಿಯನ್ನು ಹೊಂದುವ ಈ ಜಗತ್ತನ್ನು, ನಿನ್ನ ವ್ಯಾಪಾರಗಳನ್ನು ನಾವು ತಿಳಿಯದಾಗಿದ್ದೇವೆ.

ಕೇವಲಂ ತ್ವಾಽಭಿಜಾನೀಮಃ ಶರಣಂ ಪರಮೇಶ್ವರಮ್ ।
ಬ್ರಹ್ಮಾದೀನಾಂ ಚ ಗೋವಿಂದ ಸಾನ್ನಿಧ್ಯಂ ಶರಣಂ ನಮಃ ॥೨೦॥

ಭಗವಂತನೇ, ಸರ್ವೋತ್ತಮನಾದ ನಿನ್ನನ್ನು ನಾವು ಮಾತ್ರ ತಿಳಿಯದವರಲ್ಲ. ಬ್ರಹ್ಮಾದಿ ದೇವತೆಗಳಿಗೂ ನಿನ್ನ ಮಹಿಮೆಯು ತಿಳಿಯದಾಗದು. ಅಂತಹ ನಿನ್ನ ಸನ್ನಿಧಾನಕ್ಕೆ ನಾವು ಪೊಡಮಡುತ್ತೇವೆ (ನಮಿಸುತ್ತೇವೆ).

ವೈಶಂಪಾಯನಃ

ಇತಿ ಸ್ತುತೇ ಮಾನುಷೈಶ್ಚ ಪೂಜಿತೇ ದೇವಕೀಸುತೇ ।
ಶಕ್ರಸದ್ಮಪ್ರತೀಕಾಶೋ ಬಭೂವ ಸ ಹಿ ರೈವತಃ ॥೨೧॥

ವೈಶಂಪಾಯನ– ಈ ರೀತಿಯಾಗಿ ದೇವಕೀ ಸುತನಾದ ಶ್ರೀಕೃಷ್ಣನು ಮನುಷ್ಯರಿಂದ ಸ್ತುತಿಸಲ್ಪಡುತ್ತಿರಲು, ಇಂದ್ರನ ಭವನದಂತೆ ಕಂಗೊಳಿಸುತ್ತಿರುವ ಆ ರೈವತಕ ಪರ್ವತವು ವಿಶೇಷವಾಗಿ ಕೃಷ್ಣನ ಸಾನ್ನಿಧ್ಯದಿಂದ ಶೋಭಿಸಿತು.

ತತಃ ಸಂಪೂಜ್ಯಮಾನಃ ಸ ವಿವೇಶ ಭವನಂ ಶುಭಮ್ ।
ಗೋವಿಂದಃ ಸಾತ್ಯಕಿಶ್ಚಾಪಿ ಜಗ್ಮತುರ್ಭವನಂ ಸ್ವಕಮ್ ॥೨೨॥

ಬಳಿಕ ವೃಷ್ಣಿಪುಂಗವರಿಂದ ಸನ್ಮಾನಿತನಾದ ಶ್ರೀಕೃಷ್ಣನು ತನ್ನ ಸುಂದರವಾದ ಅರಮನೆಯನ್ನು ಪ್ರವೇಶಿಸಿದನು. ಅದರಂತೆ ಸಾತ್ಯಕಿಯೂ ತನ್ನ ಅರಮನೆಗೆ ಪ್ರವೇಶಿಸಿದನು.

ವಿವೇಶ ಚ ಸ ಹೃಷ್ಟಾತ್ಮಾ ಚಿರಕಾಲಪ್ರವಾಸಕಃ ।
ಕೃತ್ವಾ ನಸುಕರಂ ಕರ್ಮ ದಾನವೇಷ್ವಿವ ವಾಸವಃ ॥೨೩॥

ದಾನವರ ಬಳಿ ಯುದ್ಧಕ್ಕೆ ಸಾಗಿದ ಇಂದ್ರದೇವನು ಕಾರ್ಯವನ್ನು ಸಾಧಿಸಿ, ತುಂಬಾ ಸಮಯದ ಬಳಿಕ ತನ್ನ ಅರಮನೆಯನ್ನು ಪ್ರವೇಶಿಸುವಂತೆ, ಶ್ರೀಕೃಷ್ಣನು ದುರ್ಯೋಧನಾದಿಗಳನ್ನು ಪಾಂಡವರ ಮೂಲಕ ವಧಿಸಿ, ಕಾರ್ಯವನ್ನು ಸಾಧಿಸಿ, ತುಂಬಾ ಕಾಲದ ಬಳಿಕ ದ್ವಾರಕೆಗೆ ಆಗಮಿಸಿ ತನ್ನ ಅರಮನೆಯನ್ನು ಪ್ರವೇಶಿಸಿದನು.

ಉಪಾಯಾಂತಂ ತು ವಾರ್ಷ್ಣೇಯಂ ಭೋಜವೃಷ್ಣ್ಯಂಧಕಾಸ್ತದಾ ।
ಅಭ್ಯಗಚ್ಛನ್ಮಹಾತ್ಮಾನಂ ದೇವಾ ಇವ ಶತಕ್ರತುಮ್ ॥೨೪॥

ವಿಜಯಶೀಲನಾಗಿ ಬಂದ ಇಂದ್ರನನ್ನು ದೇವತಾ ವೃಂದವು ಮುಂದೆ ಹೋಗಿ ಸ್ವಾಗತಿಸುವಂತೆ, ಬಹಳ ಕಾಲದ ಕ್ಷೇತ್ರಯಾತ್ರೆಯನ್ನು ಮುಗಿಸಿ ಆಗಮಿಸಿದ ಶ್ರೀಕೃಷ್ಣನನ್ನು ಭೋಜರು-ವೃಷ್ಣಿಗಳು-ಅಂಧಕರು ಮುಂದೆ ಬಂದು ಸ್ವಾಗತಿಸಿದರು.

ಸ ತಾನಭ್ಯರ್ಚ್ಯ ಮೇಧಾವೀ ಪೃಷ್ಟ್ವಾ ಚ ಕುಶಲಂ ತದಾ ।
ಅಭ್ಯವಾದಯತ ಪ್ರೀತಃ ಪಿತರಂ ಮಾತರಂ ತದಾ ॥೨೫॥

ಮೇಧಾವಿಯಾದ ಕೃಷ್ಣನು ಅವರೆಲ್ಲರ ಸತ್ಕಾರವನ್ನು ಸ್ವೀಕರಿಸಿ, ಅವರ ಕುಶಲ ಪ್ರಶ್ನೆಗಳನ್ನು ಮಾಡಿದನು. ಬಳಿಕ ತಂದೆ-ತಾಯಿಗಳನ್ನು ನೋಡಿ, ಸಂತುಷ್ಟನಾಗಿ ಅವರಿಗೆ ಅಭಿವಂದಿಸಿದನು.

ತಾಭ್ಯಾಂ ಚ ಸಂಪರಿಷ್ವಕ್ತಃ ಸಾಂತ್ವಿತಃ ಸ ಮಹಾಭುಜಃ ।
ಉಪೋಪವಿಷ್ಟೈಃ ಸರ್ವೈರ್ವೃಷ್ಣಿಭಿಃ ಪರಿವಾರಿತಃ ॥೨೬॥

ತಂದೆ-ತಾಯಿಗಳಿಬ್ಬರೂ ಮಹಾಭುಜನಾದ ಕೃಷ್ಣನನ್ನು ತಬ್ಬಿಕೊಂಡು ಸಂತೈಸಿದರು. ತಂದೆ-ತಾಯಿಗಳ ಬಳಿ ಕುಳಿತಿರುವ ಕೃಷ್ಣನ ಬಳಿ ವೃಷ್ಣಿವೀರರೆಲ್ಲರೂ ಸೇರಿ, ಕುಳಿತುಕೊಂಡರು.

ಸ ವಿಶ್ರಾಂತೋ ಮಹಾತೇಜಾಃ ಕೃತಪಾದಾವನೇಜನಃ ।
ಕಥಯಾಮಾಸ ತಂ ಕೃತ್ಸ್ನಂ ಪೃಷ್ಟಃ ಪಿತ್ರಾ ಮಹಾಹವಮ್ ॥೨೭॥

ಕೃಷ್ಣನು ತಂದೆಯ ಅನುಮತಿಯಂತೆ ಕೈ-ಕಾಲುಗಳನ್ನು ತೊಳೆದುಕೊಂಡು ಸ್ವಲ್ಪ ಸಮಯ ವಿಶ್ರಾಂತಿಯನ್ನು ಪಡೆದನು. ಬಳಿಕ ತಂದೆಯು ಪ್ರಶ್ನಿಸಿದಾಗ ಮಹಾಯುದ್ಧದ ಪ್ರಸಂಗವೆಲ್ಲವನ್ನೂ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಕೃಷ್ಣಸ್ಯ ರೈವತಗಿರೇರುತ್ಸವದರ್ಶನಂ ನಾಮ
ಏಕೋನಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಐವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತನೆಯ ಅಧ್ಯಾಯ

ವಸುದೇವಾದಿಗಳನ್ನು ಕುರಿತು ಕೃಷ್ಣನು ಕುರು-ಪಾಂಡವರ ಯುದ್ಧಪ್ರಕಾರವನ್ನು ನಿರೂಪಿಸಿದುದು.

ವಸುದೇವಃ

ಶ್ರುತವಾನಸ್ಮಿ ವಾರ್ಷ್ಣೇಯ ಸಂಗ್ರಾಮಂ ಪರಮಾದ್ಭುತಮ್ ।
ನರಾಣಾಂ ವದತಾಂ ಪುತ್ರ ಕಥೋದ್ಘಾತೇಷು ನಿತ್ಯಶಃ ॥೧॥

ವಸುದೇವ– ವೃಷ್ಣಿಕುಮಾರನೇ, ಪರಮಾದ್ಭುತವಾದ ಮಹಾಭಾರತ ಯುದ್ಧವು ನಡೆಯಿತೆಂದು ಜನರು ಮಾತನಾಡಿಕೊಳ್ಳುವುದನ್ನು ನಾನು ಕೇಳಿದ್ದೇನೆ. ಕೌರವ-ಪಾಂಡವರ ಯುದ್ಧವು ಪ್ರತಿದಿನವು ಹೇಗೆ ನಡೆಯಿತು?

ತ್ವಂ ತು ಪ್ರತ್ಯಕ್ಷದರ್ಶೀ ಚ ಕಾರ್ಯಜ್ಞಶ್ಚ ಮಹಾಭುಜ ।
ತಸ್ಮಾತ್ ಪ್ರಬ್ರೂಹಿ ಸಂಗ್ರಾಮಂ ಯಾಥಾತಥ್ಯೇನ ಮೇಽನಘ ॥೨॥

ನೀನು ಆ ಯುದ್ಧವನ್ನು ಪ್ರತ್ಯಕ್ಷವಾಗಿ ನೋಡಿರುವಿ. ಆ ಯುದ್ಧಕಾರ್ಯದ ಸ್ವರೂಪವನ್ನು ತಿಳಿದವನಾಗಿರುವಿ. ಆದ್ದರಿಂದ ಯಥಾರ್ಥವಾಗಿ ಯುದ್ಧವು ಹೇಗೆ ನಡೆಯಿತು ಎಂಬುದನ್ನು ನನಗೆ ತಿಳಿಸು.

ಕಥಂ ತದಭವದ್ ಯುದ್ಧಂ ಪಾಂಡವಾನಾಂ ಮಹಾತ್ಮನಾಮ್ ।
ಭೀಷ್ಮಕರ್ಣಕೃಪದ್ರೋಣಶಲ್ಯಾದಿಭಿರನುತ್ತಮಮ್ ॥೩॥

ಮಹಾತ್ಮರಾದ ಭೀಷ್ಮ-ದ್ರೋಣ-ಕೃಪ-ಶಲ್ಯಾದಿಗಳ ಜೊತೆಗೆ ಪಾಂಡವರ ಶ್ರೇಷ್ಠವಾದ ಯುದ್ಧವು ಹೇಗೆ ನಡೆಯಿತು?

ಅನ್ಯೇಷಾಂ ಕ್ಷತ್ರಿಯಾಣಾಂ ಚ ಕೃತಾಸ್ತ್ರಾಣಾಮನೇಕಶಃ ।
ನಾನಾವೇಷಾಕೃತಿಮತಾಂ ನಾನಾದೇಶನಿವಾಸಿನಾಮ್ ॥೪॥

ಬೇರೆ ದೇಶದಲ್ಲಿ ಇರುವ, ನಾನಾ ವಿಧವಾದ ವೇಷಭೂಷಣಗಳನ್ನು ಧರಿಸಿರುವ, ಬಗೆಬಗೆಯ ಆಕಾರಗಳಿಂದ ಕೂಡಿರುವ, ಅಸ್ತ್ರವಿದ್ಯಾವಿಶಾರದರಾದ ವ್ಯಕ್ತಿಗಳಿಗೂ ಪರಸ್ಪರ ಯುದ್ಧವು ಹೇಗೆ ನಡೆಯಿತು? ವಿಷದವಾಗಿ ತಿಳಿಸು.

ವೈಶಂಪಾಯನಃ

ಇತ್ಯುಕ್ತಃ ಪುಂಡರೀಕಾಕ್ಷಃ ಪಿತ್ರಾ ಮಾತುಸ್ತಕಥಾಂತಿಕೇ ।
ಶಶಂಸ ಕುರುವೀರಾಣಾಂ ಸಂಗ್ರಾಮೇ ನಿಧನಂ ಯಥಾ ॥೫॥

ವೈಶಂಪಾಯನ– ಹೀಗೆ ತಂದೆಯಾದ ವಸುದೇವನು ಪ್ರಶ್ನಿಸಿದಾಗ ದೇವಕಿಯ ಬಳಿ ಕುಳಿತಿರುವ ಪುಂಡರೀಕಾಕ್ಷನಾದ ಕೃಷ್ಣನು ಕೌರವರ ಯುದ್ಧವು ಹೇಗೆ ನಡೆಯಿತು, ನಿಧನವು ಹೇಗೆ ಉಂಟಾಯಿತು ಎಂಬುದನ್ನು ವಿವರಿಸಿದನು.

ಶ್ರೀಭಗವಾನ್

ಅತ್ಯದ್ಭುತಾನಿ ಕರ್ಮಾಣಿ ಕ್ಷತ್ರಿಯಾಣಾಂ ಮಹಾತ್ಮನಾಮ್ ।
ಬಹುಲತ್ವಾನ್ನ ಸಂಖ್ಯಾತುಂ ಶಕ್ಯಾನ್ಯಂದಗಣೈರಪಿ ॥೬॥

ಶ್ರೀಭಗವಾನ್– ತಂದೆಯೇ, ಮಹಾತ್ಮರಾದ ಕ್ಷತ್ರಿಯರು ಯುದ್ಧದಲ್ಲಿ ತೋರಿಸಿದ ಸಾಹಸ ಕರ್ಮಗಳು ಅದ್ಭುತವಾಗಿದ್ದವು. ಅವರ ಸಾಹಸ ಕರ್ಮಗಳು ಬಹಳವಾಗಿ ಇರುವುದರಿಂದ ನಿರಂತರ ಹೇಳಿದರೂ ಹೇಳಿ ಮುಗಿಸಲಾಗುವುದಿಲ್ಲ.

ಪ್ರಾಧಾನ್ಯತಸ್ತು ಗದತಃ ಸಮಾಸೇನೈವ ಮೇ ಶೃಣು ।
ಕರ್ಮಾಣಿ ಕುರುವೀರಾಣಾಂ ಯಥಾವದಮರದ್ಯುತೇ ॥೭॥

ಆದರೂ ಮುಖ್ಯವಾದ ಘಟನೆಗಳನ್ನು ಮಾತ್ರ ಸಂಕ್ಷಿಪ್ತವಾಗಿ ಹೇಳುತ್ತೇನೆ. ದೇವತಾ ತೇಜಸ್ಸಿಗೆ ಸಮಾನನಾದ ತಂದೆಯೇ, ಪೃಥಿವೀಪಾಲರ ಸಾಹಸಕರ್ಮಗಳನ್ನು ಕೇಳಿಸಿಕೊ.

ಭೀಷ್ಮಃ ಸೇನಾಪತಿರಭೂದ್ ಏಕಾದಶಚಮೂಪತಿಃ ।
ಕೌರವ್ಯಃ ಕೌರವೇಯಾಣಾಂ ದೇವಾನಾಮಿವ ಪಾವಕಿಃ ॥೮॥

ಹನ್ನೊಂದು ಅಕ್ಷೌಹಿಣಿಗೆ ಒಡೆಯರಾಗಿರುವ, ಕುರುಶ್ರೇಷ್ಠರಾದ ಭೀಷ್ಮಾಚಾರ್ಯರು ಕೌರವರ ಸೇನೆಗೆ ಸೇನಾಪತಿಗಳಾದರು. ದೇವತೆಗಳಿಗೆ ಅಗ್ನಿದೇವನು ಹೇಗೋ ಹಾಗೆ ಇಲ್ಲಿ ಭೀಷ್ಮರು ಇದ್ದರು.

ಶಿಖಂಡೀ ಪಾಂಡುಪುತ್ರಾಣಾಂ ನೇತಾ ಸಪ್ತಚಮೂಪತಿಃ ।
ಬಭೂವ ರಕ್ಷಿತೋ ನಿತ್ಯಂ ಧೀಮತಾ ಸವ್ಯಸಾಚಿನಾ ॥೯॥

ಪಾಂಡುಪುತ್ರರ ಸೇನಾನಾಯಕನಾದ, ಏಳು ಅಕ್ಷೌಹಿಣಿ ಸೇನೆಯ ನೇತಾರನಾದ ಶಿಖಂಡಿಯನ್ನು ಬುದ್ಧಿವಂತನಾದ ಸವ್ಯಸಾಚಿ ಎನಿಸಿದ ಅರ್ಜುನನು ಯಾವಾಗಲೂ ರಕ್ಷಿಸುತ್ತಿದ್ದನು.

ತೇಷಾಂ ತದಭವದ್ಯುದ್ಧಂ ದಶಾಹಾನಿ ಮಹಾತ್ಮನಾಮ್ ।
ಕುರೂಣಾಂ ಪಾಂಡವೇಯಾನಾಂ ಸುಮಹದ್ ರೋಮಹರ್ಷಣಮ್ ॥

ಈ ರೀತಿಯಾಗಿ ರೋಮಾಂಚಕಾರಿಯಾದ ಯುದ್ಧವು ಹತ್ತು ದಿವಸಗಳವರೆಗೆ ಕೌರವರಿಗೂ ಪಾಂಡವರಿಗೂ ನಡೆಯಿತು.

ಅಯುಧ್ಯಮಾನಂ ಗಾಂಗೇಯಂ ಶಿಖಂಡೀ ತಂ ಮಹಾದ್ಯುತಿಮ್ ।
ಜಘಾನ ಬಹುಭಿರ್ಬಾಣೈಃ ಸಹ ಗಾಂಡೀವಧನ್ವನಾ ॥೧೧॥

ಆ ಯುದ್ಧರಂಗದಲ್ಲಿ ಭೀಷ್ಮಾಚಾರ್ಯರನ್ನು ಅನೇಕ ಬಾಣಗಳಿಂದ ಅರ್ಜುನನಿಂದ ಸಹಿತನಾದ ಶಿಖಂಡಿಯು ಪ್ರಹರಿಸಿದನು. ಭೀಷ್ಮಾಚಾರ್ಯರಾದರೋ ಶಿಖಂಡಿಯ ಜೊತೆಗೆ ಯುದ್ಧವನ್ನು ಮಾಡುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿದ್ದರು.

ಅಕರೋತ್ ಸ ತತಃ ಕಾಲಂ ಶರತಲ್ಪಗತೋ ಮುನಿಃ ।
ಅಯನಂ ದಕ್ಷಿಣಂ ಹಿತ್ವಾ ಸಂಪ್ರಾಪ್ತೇ ಚೋತ್ತರಾಯಣೇ ॥೧೨॥

ಬಾಣಗಳ ನಿರಂತರ ಪ್ರಹಾರದಿಂದ ಭೀಷ್ಮರಿಗೆ ಪ್ರಾಣ ಹೋಗುವ ಸನ್ನಿವೇಶ ಒದಗಿ ಬಂದಿದ್ದರೂ ಸ್ವೇಚ್ಛಾಮರಣಿಗಳಾದ ಭೀಷ್ಮರು ಬಾಣಗಳ ಹಾಸಿಗೆಯಲ್ಲಿ ಮಲಗಿ, ದಕ್ಷಿಣಾಯನವನ್ನು ಕಳೆದು ಉತ್ತರಾಯಣ ಬಂದ ಬಳಿಕ ಪ್ರಾಣತ್ಯಾಗ ಮಾಡಬೇಕೆಂದು ನಿಶ್ಚಯಿಸಿಕೊಂಡರು.

ತತಃ ಸೇನಾಪತಿರಭೂದ್ ದ್ರೋಣೋ ಬ್ರಹ್ಮವಿದಾಂ ವರಃ ।
ವಿಪ್ರೇಂದ್ರಃ ಕೌರವೇಂದ್ರಸ್ಯ ಕಾವ್ಯೋ ದೈತ್ಯಪತೇರಿವ ॥೧೩॥

ಮಹಾವೀರರಾದ, ಅಸ್ತ್ರವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠರಾದ ದ್ರೋಣರು ಭೀಷ್ಮರ ಬಳಿಕ ಸೇನಾನಾಯಕರಾದರು. ಇದು ದೈತ್ಯಪತಿಯಾದ ಬಲಿಚಕ್ರವರ್ತಿಗೆ ಶುಕ್ರಾಚಾರ್ಯರು ಗುರುಗಳಾದಂತೆ ಇತ್ತು.

ಅಕ್ಷೌಹಿಣೀಭಿಃ ಶಿಷ್ಟಾಭಿರ್ನವಭಿರ್ದ್ವಿಜಸತ್ತಮಃ।
ಸಂವೃತಃ ಸಮರಶ್ಲಾಘೀ ಗುಪ್ತಃ ಕೃಪಸುತಾದಿಭಿಃ ॥೧೪॥

ದ್ರೋಣಾಚಾರ್ಯರು ಯುದ್ಧವನ್ನು ಪ್ರಶಂಸೆ ಮಾಡುವವರಾಗಿದ್ದರು. ಹತರಾಗಿ ಉಳಿದಿದ್ದ ಒಂಬತ್ತು ಅಕ್ಷೌಹಿಣಿ ಸೇನೆಯಿಂದ ಕೂಡಿಕೊಂಡಿರುವ ದ್ರೋಣರನ್ನು ಕೃಪ-ಕರ್ಣರು ರಕ್ಷಿಸುತ್ತಿದ್ದರು.

ಧೃಷ್ಟದ್ಯುಮ್ನಸ್ತ್ವಭೂನ್ನೇತಾ ಪಾಂಡವಾನಾಂ ಮಹಾಸ್ತ್ರವಿತ್ ।
ಗುಪ್ತೋ ಭೀಮೇನ ಮೇಧಾವೀ ಮಿತ್ರೇಣ ವರುಣೋ ಯಥಾ ॥೧೫॥

ದ್ರೋಣರು ಕುರುಸೇನೆಗೆ ಸೇನಾಪತಿಯಾದಾಗ ಧೃಷ್ಟದ್ಯುಮ್ನನು ಪಾಂಡವರ ಸೇನಾ ನಾಯಕನಾಗಿದ್ದನು. ಮಿತ್ರನು ವರುಣನನ್ನು ರಕ್ಷಿಸುವಂತೆ ಭೀಮಸೇನನು ಮೇಧಾವಿಯಾದ ಧೃಷ್ಟದ್ಯುಮ್ನನನ್ನು ರಕ್ಷಿಸುತ್ತಿದ್ದನು.

ಪಾಂಡುಸೇನಾಪರಿವೃತೋ ದ್ರೋಣಪ್ರೇಪ್ಸುರ್ಮಹಾಮನಾಃ ।
ಪಿತುರ್ನಿಕಾರಾನ್ ಸಂಸ್ಮೃತ್ಯ ರಣೇ ಕರ್ಮಾಕರೋನ್ಮಹತ್ ॥೧೬॥

ಮಹಾತ್ಮರಾದ ದ್ರೋಣರನ್ನು ಸೆರೆಹಿಡಿಯಬೇಕೆಂಬ ಪ್ರಯತ್ನ ಧೃಷ್ಟದ್ಯುಮ್ನನದ್ದಾಗಿತ್ತು. ಇವರಿಗೆ ಪಾಂಡವರು ರಕ್ಷಕರಾಗಿ ನಿಂತಿದ್ದರು. ತನ್ನ ತಂದೆಯಾದ ದ್ರುಪದನಿಗೆ ಮಾಡಿದ ಅವಮಾನವನ್ನು ಸ್ಮರಿಸಿಕೊಂಡು, ತನ್ನ ಪ್ರಭಾವವನ್ನು ಯುದ್ಧದಲ್ಲಿ ತೋರಿಸುತ್ತಿದ್ದನು.

ತಸ್ಮಿಂಸ್ತೇ ಪೃಥಿವೀಪಾಲಾ ದ್ರೋಣಪಾರ್ಷತಸಂಗಮೇ ।
ನಾನಾದೇಶಾಗತಾ ವೀರಾಃ ಪ್ರಾಯಶೋ ನಿಧನಂ ಗತಾಃ ॥೧೭॥

ಧೃಷ್ಟದ್ಯುಮ್ನ-ದ್ರೋಣಾಚಾರ್ಯರ ಪರಸ್ಪರ ಯುದ್ಧದಿಂದ ಬೇರೆ ಬೇರೆ ದೇಶದಿಂದ ಆಗಮಿಸಿದ ನೂರಾರು ಕ್ಷತ್ರಿಯರಾಜರು ಪ್ರಾಯಶಃ ನಿಧನವನ್ನು ಹೊಂದಿದರು.

ದಿನಾನಿ ಪಂಚ ತದ್ಯುದ್ಧಮಭೂತ್ ಪರಮದಾರುಣಮ್ ।
ತತೋ ದ್ರೋಣಃ ಪರಿಶ್ರಾಂತೋ ಧೃಷ್ಟದ್ಯುಮ್ನವಶಂ ಗತಃ ॥೧೮॥

ದ್ರೋಣಾಚಾರ್ಯರು ಐದು ದಿನಗಳ ತನಕ ಸೇನಾನಾಯಕರಾಗಿ ಮಹಾಯುದ್ಧವನ್ನು ಮಾಡಿದರು. ಬಳಿಕ ಆಯಾಸಗೊಂಡ ದ್ರೋಣರು ಧೃಷ್ಟದ್ಯುಮ್ನನಿಗೆ ವಶರಾದರು.

ತತಃ ಸೇನಾಪತಿರಭೂತ್ ಕರ್ಣೋ ದೌರ್ಯೋಧನೇ ಬಲೇ ।
ಅಕ್ಷೌಹಿಣೀಭಿಃ ಶಿಷ್ಟಾಭಿಃ ವೃತಃ ಪಂಚಭಿರಾಹವೇ ॥೧೯॥

ದ್ರೋಣರು ಮರಣ ಹೊಂದಿದ ಬಳಿಕ ದುರ್ಯೋಧನನ ಸೇನೆಗೆ ಕರ್ಣನು ಅಧಿಪತಿಯಾದನು. ಯುದ್ಧದಲ್ಲಿ ಉಳಿದಿರುವ ಐದು ಅಕ್ಷೋಹಿಣಿ ಸೈನ್ಯದಿಂದ ಪರಿವೃತನಾದ ಕರ್ಣನು ವಿಶಿಷ್ಟವಾದ ಯುದ್ಧವನ್ನು ಮಾಡಿದನು.

ತಿಸ್ರಸ್ತು ಪಾಂಡುಪುತ್ರಾಣಾಂ ಶಿಷ್ಟಾ ಬೀಭತ್ಸುಪಾಲಿತಾಃ ।
ಹತಪ್ರವೀರಭೂಯಿಷ್ಠಾ ಬಭೂವುಃ ಪರ್ಯವಸ್ಥಿತಾಃ ॥೨೦॥

ಕರ್ಣನು ಸೇನಾಪತಿಯಾದಾಗ ಪಾಂಡವರ ಬಳಿ ಮೂರು ಅಕ್ಷೋಹಿಣಿ ಸೈನ್ಯವು ಮಾತ್ರ ಉಳಿದಿತ್ತು. ಅದನ್ನು ಅರ್ಜುನನು ರಕ್ಷಿಸುತ್ತಿದ್ದನು. ಇಷ್ಟರಲ್ಲಿ ಅನೇಕ ಕ್ಷತ್ರಿಯ ಪ್ರಮುಖರೆಲ್ಲರೂ ಹತರಾಗಿದ್ದರು.

ತತಃ ಪಾರ್ಥಂ ಸಮಾಸಾದ್ಯ ಪತಂಗ ಇವ ಪಾವಕಮ್ ।
ಸ ದ್ವಿತೀಯೇಽಹನಿ ತದಾ ಫಲ್ಗುನೇನ ನಿಪಾತಿತಃ ॥೨೧॥

ದುರ್ಯೋಧನನ ದಂಡನಾಯಕತ್ವದಲ್ಲಿ ಕರ್ಣನು ಎರಡನೆಯ ದಿವಸ, ಪತಂಗದ ಹುಳುವು ಬೆಂಕಿಯ ಬಳಿ ಹೋಗಿ ನಾಶ ಹೊಂದುವಂತೆ ಅರ್ಜುನನ ಬಳಿ ಯುದ್ಧವನ್ನು ಮಾಡಲು ಹೋಗಿ ಶತ್ರುಭಯಂಕರನಾಗಿದ್ದರೂ ಮರಣ ಹೊಂದಿದನು.

ಹತೇ ಕರ್ಣೇ ತು ಕೌರವ್ಯಾ ನಿರುತ್ಸಾಹಾ ಹತೌಜಸಃ ।
ಅಕ್ಷೋಹಿಣೀಭಿಸ್ತಿಸೃಭಿಃ ಮದ್ರೇಶಂ ಪರ್ಯವಾರಯನ್ ॥೨೨॥

ಕರ್ಣನ ಮರಣದ ಬಳಿಕ ದುರ್ಯೋಧನನೇ ಮೊದಲಾದ ಕೌರವರು ಉತ್ಸಾಹವನ್ನು ಕಳೆದುಕೊಂಡರು, ತೇಜೋವಿಹೀನರಾದರು. ಕರ್ಣನ ಅನಂತರ ಶಲ್ಯನಿಗೆ ಸೇನಾಧಿಪತ್ಯದ ಪಟ್ಟವನ್ನು ದುರ್ಯೋಧನನು ಕೊಟ್ಟನು.

ಹತವಾಹನಭೂಯಿಷ್ಠಾಃ ಪಾಂಡವಾಸ್ತು ಯುಧಿಷ್ಠಿರಮ್ ।
ಅಕ್ಷೋಹಿಣ್ಯಾ ನಿರುತ್ಸಾಹಾಃ ಶಿಷ್ಟಯಾ ಪರ್ಯವಾರಯನ್ ॥೨೩॥

ಕೌರವರು ಮೂರು ಅಕ್ಷೋಹಿಣಿ ಸೈನ್ಯದಿಂದ ಕೂಡಿಕೊಂಡು ಶಲ್ಯನಿಗೆ ರಕ್ಷಣೆಯನ್ನು ಒದಗಿಸಿದರು. ಪಾಂಡವರೂ ಅನೇಕ ಸೈನ್ಯವನ್ನು ಕಳೆದುಕೊಂಡು ಯುದ್ಧದಲ್ಲಿಯೇ ಅನಾಸಕ್ತರಾಗಿದ್ದರು.

ಅವಧೀನ್ಮದ್ರರಾಜಾನಂ ಕುರುರಾಜೋ ಯುಧಿಷ್ಠಿರಃ ।
ತಸ್ಮಿಂಸ್ತದಾऽರ್ಧದಿವಸೇ ಕೃತ್ವಾ ಕರ್ಮ ಸುದುಷ್ಕರಮ್ ॥೨೪॥

ಈ ಪ್ರಸಂಗದಲ್ಲಿ ಪಾಂಡವರ ಬಳಿ ಒಂದು ಅಕ್ಷೋಹಿಣಿ ಸೈನ್ಯವು ಉಳಿದಿತ್ತು. ಈ ಪಾಂಡವರ ಸೇನೆಯಲ್ಲಿದ್ದ ಯುಧಿಷ್ಠಿರನು ಅರ್ಧದಿವಸದ ಕಾಲ ದುಷ್ಕರವಾದ ಪರಾಕ್ರಮವನ್ನು ತೋರಿಸುತ್ತಾ, ಮದ್ರರಾಜನನ್ನು ಎದುರಿಸಿ ಅವನನ್ನು ಸಂಹರಿಸಿದನು.

ಹತೇ ಶಲ್ಯೇ ತು ಶಕುನಿಂ ಸಹದೇವೋ ಮಹಾಮನಾಃ ।
ಆಹರ್ತಾರಂ ಕಲೇಸ್ತಸ್ಯ ಜಘಾನಾಮಿತವಿಕ್ರಮಃ ॥೨೫॥

ಶಲ್ಯನು ಮರಣ ಹೊಂದಿದ ಬಳಿಕ ಪರಾಕ್ರಮಿಯಾದ, ಮಹಾತ್ಮನಾದ ಸಹದೇವನು ಯುದ್ಧಕ್ಕೆ ಮೂಲಕಾರಣನಾದ ಶಕುನಿಯನ್ನು ಎದುರಿಸಿ, ಅಮಿತವಾದ ತನ್ನ ಪರಾಕ್ರಮದಿಂದ ಶಕುನಿಯನ್ನು ಕೊಂದನು.

ನಿಹತೇ ಶಕುನೌ ರಾಜಾ ಧಾರ್ತರಾಷ್ಟ್ರಃ ಸುದುರ್ಮನಾಃ ।
ಅಪಾಕ್ರಾಮದ್ ಗದಾಪಾಣಿರ್ಹತಭೂಯಿಷ್ಠಸೈನಿಕಃ ॥೨೬॥

ಶಕುನಿಯ ನಿಧನದ ಬಳಿಕ ದುರ್ಯೋಧನನ ಮನಸ್ಸು ದುಃಖಗೊಂಡಿತು. ಖಿನ್ನನಾದ ಕೌರವನು ಗದಾಪಾಣಿಯಾಗಿ ಯುದ್ಧಭೂಮಿಯನ್ನೇ ತೊರೆದು ಹೊರಟು ಹೋದನು.

ತಮನ್ವಧಾವತ್ ಸಂಕ್ರುದ್ಧೋ ಭೀಮಸೇನಃ ಪ್ರತಾಪವಾನ್ ।
ಹ್ರದೇ ದ್ವೈಪಾಯನೇ ಚೈವ ಸಲಿಲಸ್ಥಂ ದದರ್ಶ ಸಃ ॥೨೭॥

ಆದರೆ ಅತ್ಯಂತ ಕ್ರುದ್ಧನಾದ ಭೀಮಸೇನನು ಪ್ರತಾಪವಂತನಾಗಿ ಕೌರವನನ್ನು ಬೆನ್ನಟ್ಟಿ ಹೊರಟನು. ದ್ವೈಪಾಯನ ಸರೋವರದ ನೀರಿನ ಮಧ್ಯದಲ್ಲಿ ಅಡಗಿರುವ ದುರ್ಯೋಧನನನ್ನು ಕಂಡುಹಿಡಿದನು.

ತತಃ ಶಿಷ್ಟೇನ ಸೈನ್ಯೇನ ಸಮಂತಾತ್ ಪರ್ಯವಾರಯತ್ ।
ಉಪೋಪವಿವಿಶುರ್ಹೃಷ್ಟಾ ಹ್ರದಸ್ಥಂ ಪಂಚ ಪಾಂಡವಾಃ ॥೨೮॥

ಬಳಿಕ ಪಾಂಡವರು ಸಂತುಷ್ಟವಾಗಿ, ಅಳಿದುಳಿದ ಸೈನ್ಯದೊಂದಿಗೆ ಕೂಡಿಕೊಂಡು ದ್ವೈಪಾಯನ ಸರೋವರದ ಬಳಿ ಆಗಮಿಸಿದರು. ನೀರಿನಲ್ಲಿ ಮುಳುಗಿದ್ದ ದುರ್ಯೋಧನನನ್ನು ಸುತ್ತುಗಟ್ಟಿದರು.

ವಿಗಾಹ್ಯ ಸಲಿಲಂ ತ್ವಾಶು ವಾಗ್ಬಾಣೈರ್ಭೃಶವಿಕ್ಷತಃ ।
ಉತ್ಥಾಯ ಸ ಗದಾಪಾಣಿರ್ಯುದ್ಧಾಯ ಸಮುಪಸ್ಥಿತಃ ॥೨೯॥

ನೀರಿನಲ್ಲಿ ಅಡಗಿರುವ ಕೌರವನನ್ನು ಕುರಿತು ಭೀಮನು ವಾಗ್ಬಾಣಗಳಿಂದ ಘಾಸಿಗೊಳಿಸಿದನು. ಇದರಿಂದ ನೀರಿನಲ್ಲಿ ಕುಳಿತುಕೊಳ್ಳಲಾಗದ ದುರ್ಯೋಧನನು ಒಡನೆಯೇ ಮೇಲಕ್ಕೆ ಬಂದು ಗದಾಪಾಣಿಯಾಗಿ ಯುದ್ಧಕ್ಕೆ ನಿಂತನು.

ತತಃ ಸ ನಿಹತೋ ರಾಜಾ ಧಾರ್ತರಾಷ್ಟ್ರೋ ಮಹಾಮೃಧೇ ।
ಭೀಮಸೇನೇನ ವಿಕ್ರಮ್ಯ ಪಶ್ಯತಾಂ ಪೃಥಿವೀಕ್ಷಿತಾಮ್ ॥೩೦॥

ಆ ಸಂದರ್ಭದಲ್ಲಿ ಅವರೀರ್ವರಿಗೂ ಮಹಾಯುದ್ಧವು ನಡೆಯಿತು. ಎಲ್ಲರೂ ನೋಡುತ್ತಿದ್ದಂತೆ ಅತುಲವಾದ ಪರಾಕ್ರಮದಿಂದ ಭೀಮಸೇನನು ಧೃತರಾಷ್ಟ್ರನ ಸುತನನ್ನು ಸಂಹರಿಸಿದನು.

ತತಸ್ತತ್ ಪಾಂಡವಂ ಸೈನ್ಯಂ ಸಂಸುಪ್ತಂ ಶಿಬಿರೇ ನಿಶಿ ।
ನಿಹತಂ ದ್ರೋಣಪುತ್ರೇಣ ಪಿತುರ್ವಧಮಮೃಷ್ಯತಾ ॥೩೧॥

ಯುದ್ಧವೆಲ್ಲವೂ ಮುಗಿದ ರಾತ್ರಿಯಲ್ಲಿ, ಶಿಬಿರಗಳಲ್ಲಿ ಅಳಿದುಳಿದ ಪಾಂಡವರ ಸೈನ್ಯವೆಲ್ಲವೂ ಮಲಗಿ ನಿದ್ರಿಸುತ್ತಿತ್ತು. ಈ ಪ್ರಸಂಗದಲ್ಲಿ ತಂದೆಯ ಮರಣವನ್ನು ಸಹಿಸದ ಅಶ್ವತ್ಥಾಮನು ಶಿಬಿರಕ್ಕೆ ನುಗ್ಗಿ ಮಲಗಿದವರನ್ನೆಲ್ಲ ಸಂಹಾರಗೈದನು.

ಹತಪುತ್ರಾ ಹತಬಲಾ ಹತಮಿತ್ರಾ ಮಯಾ ಸಹ ।
ಯುಯುಧಾನದ್ವಿತೀಯೇನ ಪಂಚ ಶಿಷ್ಟಾಸ್ತು ಪಾಂಡವಾಃ ॥೩೨॥

ಇದರ ಪರಿಣಾಮವಾಗಿ ಪಾಂಡವರ ಮಕ್ಕಳು, ಮಿತ್ರರು, ಸೈನಿಕರು ಎಲ್ಲರೂ ಮರಣೋನ್ಮುಖರಾದರು. ನನ್ನ ಜೊತೆ ಸಾತ್ಯಕಿ ಹಾಗೂ ಐದು ಮಂದಿ ಪಾಂಡವರು ಮಾತ್ರ ಉಳಿದುಕೊಂಡರು.

ಸಹೈವ ಕೃಪಭೋಜಾಭ್ಯಾಂ ದ್ರೌಣಿರ್ಯುದ್ಧಾದಮುಚ್ಯತ ।
ಯುಯುತ್ಸುಶ್ಚಾಪಿ ಕೌರವ್ಯೋ ಮುಕ್ತಃ ಪಾಂಡವಸಂಶ್ರಯಾತ್ ॥೩೩॥

ದುರ್ಯೋಧನನ ಪಕ್ಷದಲ್ಲಿ ಕೃಪ-ಕೃತವರ್ಮ-ಅಶ್ವತ್ಥಾಮರು ಯುದ್ಧವೆಂಬ ಕಾಡ್ಗಿಚ್ಚಿನಿಂದ ಪಾರಾಗಿ ಉಳಿದಿದ್ದರು. ಪಾಂಡವರ ಆಶ್ರಯವನ್ನು ಹೊಂದಿದ ಕಾರಣದಿಂದ ಧೃತರಾಷ್ಟ್ರನ ಮೂಲಕ ವೈಶ್ಯೆಯಲ್ಲಿ ಹುಟ್ಟಿರುವ ಯುಯುತ್ಸುವು ಉಳಿದುಕೊಂಡಿದ್ದನು.

ನಿಹತೇ ಕೌರವೇಂದ್ರೇ ಚ ಸಾನುಬಂಧೇ ಸುಯೋಧನೇ ।
ವಿದುರಃ ಸಂಜಯಶ್ಚೈವ ಧರ್ಮರಾಜಮುಪಸ್ಥಿತೌ ॥೩೪॥

ಕೌರವರಿಗೆ ಇಂದ್ರನಂತಿರುವ ದುರ್ಯೋಧನನು ಬಂಧು-ಬಾಂಧವರೊಂದಿಗೆ ನಿಧನ ಹೊಂದುತ್ತಿರಲು ವಿದುರ, ಸಂಜಯ ಈರ್ವರು ಧರ್ಮರಾಜನನ್ನು ಸಮೀಪಿಸಿದರು.

ಏವಂ ತದಭವದ್ ಯುದ್ಧಮಹಾನ್ಯಷ್ಟಾದಶ ಪ್ರಭೋ ।
ಯತ್ರ ತೇ ಪೃಥಿವೀಪಾಲಾ ನಿಹತಾಃ ಸ್ವರ್ಗಮಾವಸನ್ ॥೩೫॥

ಪ್ರಭುವೇ, ಹೀಗೆ ಭಾರತ ಯುದ್ಧವು ಹದಿನೆಂಟು ದಿನಗಳ ಪರ್ಯಂತ ನಡೆಯಿತು. ಯುದ್ಧದಲ್ಲಿ ನಿಧನ ಹೊಂದಿದ ಕ್ಷತ್ರಿಯ ರಾಜರೆಲ್ಲರೂ ಸ್ವರ್ಗವನ್ನು ಹೊಂದಿದರು.

ವೈಶಂಪಾಯನಃ

ಶೃಣ್ವತಾಂ ತು ತಥಾ ತೇಷಾಂ ಕಥಾಂ ತಾಂ ರೋಮಹರ್ಷಣೀಮ್ ।
ದುಃಖಾಮರ್ಷಪರಿಕ್ಲೇಶೋ ವೃಷ್ಣೀನಾಮಭವತ್ ತದಾ ॥೩೬॥

ವೈಶಂಪಾಯನ– ರೋಮಾಂಚನವನ್ನುಂಟು ಮಾಡುವ ಯುದ್ಧದ ವಾರ್ತೆಯನ್ನು ಕೇಳಿಸಿಕೊಂಡ ಯಾದವರೆಲ್ಲರೂ ಶೋಕದಿಂದ ಕಳವಳ ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಪುನರ್ಯುದ್ಧಪ್ರಕಾರಕಥನಂ ನಾಮ ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂದನೆಯ ಅಧ್ಯಾಯ

ಸಭೆಯಲ್ಲಿ ವಸುದೇವನಿಗೆ ಯುದ್ಧದ ಕಥೆಯನ್ನು ಕೃಷ್ಣನು ಹೇಳುವಾಗ ಅಭಿಮನ್ಯುವಿನ ವಧೆಯ ಕಥೆಯನ್ನು ಹೇಳಲಿಲ್ಲ. ಇದರಿಂದ ಸುಭದ್ರೆಯು ದುಃಖಿತಳಾಗಿ, ಆ ಕಥೆಯನ್ನು ಹೇಳುವಂತೆ ಕೃಷ್ಣನನ್ನು ಪ್ರಚೋದಿಸಿದಳು. ಸುಭದ್ರೆಯ ಮಾತಿನಂತೆ ಅಭಿಮನ್ಯುವಿನ ಮರಣದ ವಾರ್ತೆಯನ್ನು ವಸುದೇವನಿಗೆ ಹೇಳುವಾಗ ಮೋಹದಿಂದ ಸುಭದ್ರೆಯು ಭೂಮಿಯಲ್ಲಿ ಮೂರ್ಛಿತಳಾಗಿ ಬಿದ್ದಳು. ಬಳಿಕ ಕೃಷ್ಣ-ವಸುದೇವರು ಸಂತೈಸಿದರು.

ವೈಶಂಪಾಯನಃ

ಕಥಯನ್ನೇವ ತು ತದಾ ವಾಸುದೇವಃ ಪ್ರತಾಪವಾನ್ ।
ಮಹಾಭಾರತಯುದ್ಧಂ ತತ್ ಕಥಾಂತೇ ಪಿತುರಗ್ರತಃ ॥೧॥

ವೈಶಂಪಾಯನ– ಜನಮೇಜಯನೇ, ಪ್ರತಾಪಶಾಲಿಯಾದ, ಮಹಾಮತಿಯಾದ ವಾಸುದೇವನು ತಂದೆಯ ಮುಂದೆ ಮಹಾಭಾರತದ ಯುದ್ಧದ ಕಥೆಯನ್ನು ಹೇಳುತ್ತಿದ್ದನು.

ಅಭಿಮನ್ಯೋರ್ವಧಂ ವೀರಃ ಸೋऽತ್ಯಕ್ರಾಮತ ಭಾರತ ।
ಅಪ್ರಿಯಂ ವಸುದೇವಸ್ಯ ಮಾ ಭೂದಿತಿ ಮಹಾಮನಾಃ ॥೨॥

ಮಹಾಜ್ಞಾನಿಯಾದ ಕೃಷ್ಣನು ಆ ಸಭೆಯಲ್ಲಿ ಸುಭದ್ರೆ ಇದ್ದದ್ದನ್ನು ಕಂಡು, ಅಭಿಮನ್ಯುವಿನ ಮರಣ ವಾರ್ತೆಯನ್ನು ಹೇಳದೆ ಮುಂದೆ ಕಥೆಗಳನ್ನು ಹೇಳಿದನು. ವಸುದೇವನಿಗಾಗಲಿ, ಸುಭದ್ರೆಗಾಗಲಿ ಅಪ್ರಿಯವಾದದ್ದನ್ನು ಹೇಳಬಾರದೆಂಬ ಅಭಿಪ್ರಾಯ ಕೃಷ್ಣನಲ್ಲಿದ್ದಿತು.

ಮಾ ದೌಹಿತ್ರವಧಂ ಶ್ರುತ್ವಾ ವಸುದೇವೋ ಮಹಾತ್ಯಯಮ್ ।
ದುಃಖಶೋಕಾಭಿಸಂತಪ್ತೋ ಭವೇದಿತಿ ಮಹಾದ್ಯುತಿಃ ॥೩॥

ಮೊಮ್ಮಗನ ಅನಿಷ್ಟಕರವಾದ ಮರಣವಾರ್ತೆಯನ್ನು ಕೇಳಿಸಿಕೊಂಡ ತಂದೆಯಾದ ವಸುದೇವನು ದುಃಖ-ಶೋಕಗಳಿಂದ ಪರಿತಪಿಸಬಾರದು ಎಂಬ ದೂರದೃಷ್ಟಿ ಕೃಷ್ಣನಲ್ಲಿತ್ತು.

ಸುಭದ್ರಾ ತು ತಮುತ್ತಾಂತಮಾತ್ಮಜಸ್ಯ ವಧಂ ರಣೇ ।
ಆಚಕ್ಷ್ವ ಕೃಷ್ಣ ಸೌಭದ್ರವಧಮಿತ್ಯಪತದ್ ಭುವಿ ॥೪॥

ಆದರೆ ಆ ಸಭೆಯಲ್ಲಿ ಕುಳಿತಿದ್ದ ಸುಭದ್ರೆಯು, ಮಗನ ಮರಣದ ವೃತ್ತಾಂತವನ್ನು ಕೃಷ್ಣನು ತಿಳಿಸಲಿಲ್ಲ ಎಂದು ಗಮನಿಸಿ, ಕೃಷ್ಣನೇ, ಅಭಿಮನ್ಯುವಿನ ವಧೆಯ ವಾರ್ತೆಯನ್ನು ಹೇಳು ಎಂದು ಕೇಳುತ್ತಲೇ ಮೂರ್ಛಿತಳಾಗಿ ನೆಲದಲ್ಲಿ ಬಿದ್ದಳು.

ತಾಮಪಶ್ಯನ್ನಿಪತಿತಾಂ ವಸುದೇವಃ ಕ್ಷಿತೌ ತದಾ ।
ತಥೈವ ಚ ಪಪಾತೋರ್ವ್ಯಾಂ ಸೋಽಪಿ ದುಃಖೇನ ಮೂರ್ಛಿತಃ ॥೫॥

ವಸುದೇವನು ತನ್ನ ಮಗಳ ದುಃಖದ ಅವಸ್ಥೆಯನ್ನು ಕಂಡು, ತಾನೂ ವಿಮೋಹಿತನಾಗಿ ದುಃಖದಿಂದ ನೆಲದಲ್ಲಿ ಕುಸಿದು ಬಿದ್ದನು.

ತತಃ ಸ ದೌಹಿತ್ರವಧಾದ್ ದುಃಖಶೋಕಸಮನ್ವಿತಃ ।
ವಸುದೇವೋ ಮಹಾರಾಜ ಕೃಷ್ಣಂ ವಾಕ್ಯಮಥಾಬ್ರವೀತ್ ॥೬॥

ಸ್ವಲ್ಪ ಹೊತ್ತಿನ ಬಳಿಕ ಸಾವರಿಸಿಕೊಂಡು, ಮೊಮ್ಮಗನು ಹೇಗೆ ಯುದ್ಧದಲ್ಲಿ ಮರಣವನ್ನು ಹೊಂದಿದನು ಎಂಬುದನ್ನು ತಿಳಿಸಬೇಕೆಂದು ಕೃಷ್ಣನಲ್ಲಿ ಕೇಳಿದನು.

ವಸುದೇವಃ

ನನು ತ್ವಂ ಪುಂಡರೀಕಾಕ್ಷ ಸತ್ಯವಾಗ್ ಭುವಿ ವಿಶ್ರುತಃ ।
ಯದ್ ದೌಹಿತ್ರವಧಂ ಮೇಽದ್ಯ ನ ಖ್ಯಾಪಯಸಿ ಶತ್ರುಹನ್ ॥೭॥

ವಸುದೇವ– ಪುಂಡರೀಕಾಕ್ಷನೇ, ನೀನು ಸತ್ಯವಾದಿ ಎಂದು ಜಗತ್ತಿನಲ್ಲೇ ಪ್ರಸಿದ್ಧನಾಗಿರುವಿ. ಹೀಗಿದ್ದರೂ ಯಾವ ಕಾರಣದಿಂದ ಅಭಿಮನ್ಯುವಿನ ವಧೆಯ ವಾರ್ತೆಯನ್ನು ಹೇಳಲಿಲ್ಲ?

ತ್ವದ್ ಭಾಗಿನೇಯನಿಧನಂ ತತ್ತ್ವೇನಾಚಕ್ಷ್ವ ಮೇ ವಿಭೋ ।
ಸದೃಶಾಕ್ಷಸ್ತವ ಕಥಂ ಶತ್ರುಭಿರ್ನಿಹತೋ ರಣೇ ॥೮॥

ಪ್ರಭಾವಶಾಲಿಯೇ, ನಿನ್ನ ಸೋದರಳಿಯನ ಮರಣದ ವಾರ್ತೆಯನ್ನು ಯಥಾವತ್ತಾಗಿ ನನಗೆ ತಿಳಿಸು. ಕೃಷ್ಣನೇ, ನಿನ್ನ ಕಣ್ಣುಗಳಂತೆ ಅಭಿಮನ್ಯುವಿನ ಕಣ್ಣುಗಳಿದ್ದವು. ಇಂತಹ ಅಭಿಮನ್ಯುವು ಶತ್ರುಗಳಿಂದ ಹೇಗೆ ಹತನಾದನು? ತಿಳಿಸು.

ದುಷ್ಕರಂ ಬತ ವಾರ್ಷ್ಣೇಯ ಕಾಲೇ ಪ್ರಾಪ್ತೇ ನೃಭಿಃ ಸದಾ ।
ಯತ್ರ ಮೇ ಹೃದಯಂ ದುಃಖಾತ್ ಶತಧಾ ನ ವಿದೀರ್ಯತೇ ॥೯॥

ವೃಷ್ಣಿಕುಲಶ್ರೇಷ್ಠನೇ, ಕಾಲವು ಸನ್ನಿಹಿತವಾಗಿದ್ದಲ್ಲಿ ಮರಣವನ್ನು ಹೊಂದುವುದೂ ಕಷ್ಟವೇ. ಏಕೆಂದರೆ ದೌಹಿತ್ರನ ಮರಣದ ವಾರ್ತೆಯನ್ನು ಕೇಳಿಸಿಕೊಂಡರೂ ಈ ದುಃಖದಿಂದ ನನ್ನ ಹೃದಯವು ನೂರು ಹೋಳಾಗಿ ಸೀಳದೆ ಇನ್ನೂ ಉಳಿದುಕೊಂಡಿದೆಯಲ್ಲ!

ಕಿಮಬ್ರವೀತ್ ತ್ವಾಂ ಸಂಗ್ರಾಮೇ ಸುಭದ್ರಾಂ ಮಾತರಂ ಪ್ರತಿ ।
ಮಾಂ ಚಾಪಿ ಪುಂಡರೀಕಾಕ್ಷ ಚಪಲಾಕ್ಷಃ ಪ್ರಿಯೋ ಮಮ ॥೧೦॥

ಪುಂಡರೀಕಾಕ್ಷನೇ, ರಣಭೂಮಿಯಲ್ಲಿ ನಿನ್ನನ್ನು ಉದ್ದೇಶಿಸಿ ಅಭಿಮನ್ಯುವು ಏನು ಹೇಳಿದನು? ತಾಯಿಗೆ ಸಂಬಂಧಿಸಿದಂತೆ ಯಾವ ಸಂದೇಶವನ್ನು ಹೇಳಿದ್ದಾನೆ? ನನಗೂ ಏನಾದರೂ ಹೇಳಿದ್ದಾನೋ? ಚಂಚಲಾಕ್ಷನಾದ ಅಭಿಮನ್ಯುವು ನನಗೆ ಅತ್ಯಂತ ಪ್ರೀತಿಪಾತ್ರನು.

ಆಹವಂ ಪೃಷ್ಠತಃ ಕೃತ್ವಾ ಕ್ವಚಿನ್ನ ನಿಹತಃ ಪರೈಃ ।
ಕಚ್ಚಿದ್ ದುಃಖೇನ ಗೋವಿಂದ ತೇನಾಜೌ ವಿಮುಖಃ ಕೃತಃ ॥೧೧॥

ಯುದ್ಧರಂಗಕ್ಕೆ ಬೆನ್ನು ಹಾಕಿ ಓಡುವ ಶತ್ರುಗಳನ್ನು ಅವನೇನು ಸಂಹರಿಸಿಲ್ಲವಷ್ಟೆ! ಭಯದಿಂದ ಅವನ ಮುಖವು ವಿಕಾರ ಹೊಂದಲಿಲ್ಲವಷ್ಟೆ!

ಸ ಹಿ ಕೃಷ್ಣ ಮಹಾತೇಜಾಃ ಶ್ಲಾಘಮಾನೋ ಮಮಾಗ್ರತಃ ।
ಬಲಾಭಾವೇನ ವಿಜಯಮಾತ್ಮನೋಕಥಯತ್ ಪ್ರಭುಃ ॥೧೨॥

ಕೃಷ್ಣನೇ, ಮಹಾತೇಜಸ್ವಿಯಾಗಿರುವ, ಪ್ರಭಾವಶಾಲಿಯಾಗಿದ್ದನಮ್ಮ ಅಭಿಮನ್ಯುವು ಬಾಲಭಾವದಿಂದ, ತನ್ನ ಪರಾಕ್ರಮದಿಂದ ಅನೇಕ ಬಾರಿ ನನ್ನ ಬಳಿ ಪ್ರಶಂಸಿಸಿಕೊಂಡಿದ್ದಾನೆ.

ಕಚ್ಚಿನ್ನ ನಿಕೃತೋ ಬಾಣೈರ್ದ್ರೋಣಕರ್ಣಕೃಪಾದಿಭಿಃ ।
ಧರಣ್ಯಾಂ ನಿಹತಃ ಶೇತೇ ತನ್ಮಾಚಕ್ಷ್ವ ಕೇಶವ ॥೧೩॥

ಅಂತಹ ಅಭಿಮನ್ಯುವು ದ್ರೋಣ-ಕರ್ಣ-ಕೃಪ ಮೊದಲಾದವರ ಬಾಣಗಳಿಂದ ವಂಚನೆಗೀಡಾಗದೆ ಹತನಾಗಿರುವನಷ್ಟೆ? ಭೂಮಿಯಲ್ಲಿ ವಂಚನೆಯಿಂದ ಹತನಾಗಿ ಬೀಳಲಿಲ್ಲವಷ್ಟೇ ? ಈ ವೃತ್ತಾಂತವನ್ನು ವಿಷದೀಕರಿಸು ಕೇಶವ.

ಸ ಹಿ ಭೀಷ್ಮಂ ತಥಾ ದ್ರೋಣಂ ಕರ್ಣಂ ಚ ರಥಿನಾಂ ವರಮ್ ।
ಸ್ಪರ್ಧತೇ ಸ್ಮ ರಣೇ ನಿತ್ಯಂ ದುಹಿತುಃ ಪುತ್ರಕೋ ಮಮ ॥೧೪॥

ಆ ಅಭಿಮನ್ಯುವು ದ್ರೋಣ, ಭೀಷ್ಮ, ಬಲಿಷ್ಠನಾದ ಕರ್ಣನನ್ನು ಯುದ್ಧದಲ್ಲಿ ನಿತ್ಯವೂ ಸ್ಪರ್ಧಿಸುತ್ತೇನೆ ಎಂಬುದಾಗಿ ನನ್ನ ಬಳಿ ಹೇಳುತ್ತಿದ್ದನು. ಅವನಿಗೇನಾಯಿತೆಂದು ತಿಳಿಸು.

ಏವಂವಿಧಂ ಬಹು ತದಾ ವಿಲಪಂತಂ ಸುದುಃಖಿತಮ್ ।
ಪಿತರಂ ದುಃಖಿತತರೋ ಗೋವಿಂದೋ ವಾಕ್ಯಮಬ್ರವೀತ್ ॥೧೫॥

ಹೀಗೆ ದುಃಖದಿಂದ ಅನೇಕ ರೀತಿ ಅಳುತ್ತಿರುವ ತಂದೆಯನ್ನು ಉದ್ದೇಶಿಸಿ ಗೋವಿಂದನು ಬಹಳ ದುಃಖದಿಂದಲೇ ಈ ಮಾತುಗಳನ್ನು ಹೇಳಿದನು.

ಶ್ರೀಭಗವಾನ್

ನ ತೇನ ವಿಹಿತಂ ವಕ್ತ್ರಂ ಕೃತಂ ಸಂಗ್ರಾಮಮೂರ್ಧನಿ ।
ನ ಪೃಷ್ಠತಃ ಕೃತಶ್ಚಾಪಿ ಸಂಗ್ರಾಮಸ್ತೇನ ದುಸ್ತರಃ ॥೧೬॥

ಶ್ರೀಭಗವಾನ್– ತಂದೆಯೇ, ರಣರಂಗದ ಮುಂಭಾಗದಲ್ಲಿಯೇ ಅಭಿಮನ್ಯುವು ಯಾವಾಗಲೂ ಯುದ್ಧ ಮಾಡುತ್ತಿದ್ದ. ತನ್ನ ಮುಖವನ್ನು ಯಾವತ್ತೂ ವಿಕಾರಗೊಳಿಸಿಕೊಳ್ಳಲಿಲ್ಲ, ಅರ್ಥಾತ್ ಉತ್ಸಾಹವನ್ನು ಕಳೆದುಕೊಳ್ಳಲಿಲ್ಲ. ಸಾಧಾರಣ ಮನುಷ್ಯರಿಂದ ದಾಟಲು ಅಶಕ್ಯವಾದ ಸಮರಾಂಗಣವನ್ನು ಬಿಟ್ಟು ಅಭಿಮನ್ಯುವು

ಎಂದೂ ಬೆನ್ನು ಹಾಕಿ ಓಡಲಿಲ್ಲ. ಯಾರಿಗೂ ಹಿಂದಿನಿಂದ ಬಾಣ ಪ್ರಯೋಗವನ್ನು ಮಾಡಲಿಲ್ಲ.

ನಿಹತ್ಯ ಪೃಥಿವೀಪಾಲಾನ್ ಶತಶೋಽಥ ಸಹಸ್ರಶಃ ।
ವೇದಿತೋ ದ್ರೋಣಕರ್ಣಾಭ್ಯಾಂ ದೌಃಶಾಸನಿವಶಂ ಗತಃ ॥೧೭॥

ನೂರಾರು, ಸಾವಿರಾರು ಪೃಥಿವೀಪಾಲರನ್ನು ಕೊಂದಿರುವ ನಿನ್ನ ಮೊಮ್ಮಗನು ದುಶ್ಶಾಸನನ ಮಗನಿಂದ, ದ್ರೋಣ-ಕರ್ಣರೊಡನೆ ಯುದ್ಧಮಾಡುವಾಗ ಹತನಾದನು.

ಏಕೋ ಹ್ಯೇಕೇನ ಸತತಂ ಯುಧ್ಯಮಾನೋ ಯದಿ ಪ್ರಭೋ ।
ಸ ಹಿ ಶಕ್ಯೋ ನ ಸಂಗ್ರಾಮೇ ನಿಹಂತುಮಪಿ ವಜ್ರಿಣಾ ॥೧೮॥

ಒಬ್ಬನ ಬಳಿ ಒಬ್ಬನೇ ಯುದ್ಧಮಾಡಬೇಕು ಎಂಬ ನಿಯಮವೇನಾದರೂ ಇದ್ದಿದ್ದಲ್ಲಿ ಅಭಿಮನ್ಯುವನ್ನು ಸಂಗ್ರಾಮದಲ್ಲಿ ಕೊಲ್ಲಲು ವಜ್ರಾಯುಧವನ್ನು ಧರಿಸಿದ ಇಂದ್ರನಿಗೂ ಸಾಧ್ಯವಾಗುತ್ತಿರಲಿಲ್ಲ.

ಸಮಾಹೂತೇ ತು ಸಂಗ್ರಾಮೇ ಪಾರ್ಥೇ ಸಂಶಪ್ತಕೈಸ್ತದಾ ।
ಪರಿವಾರ್ಯ ತು ಸಂಕ್ರುದ್ಧೈಃ ಸ ದ್ರೋಣಾದಿಭಿರಾಹವೇ ॥೧೯॥

ಅರ್ಜುನನು ಸಂಶಪ್ತಕರೊಡನೆ ಯುದ್ಧಮಾಡಬೇಕೆಂದು ರಣರಂಗದಿಂದ ಬಹಳ ದೂರಕ್ಕೆ ಹೊರಟು ಹೋಗಿದ್ದನು. ಅದೇ ಸಮಯದಲ್ಲಿ ದ್ರೋಣರೇ ಮೊದಲಾದ ಅನೇಕ ಜನರು ಅಭಿಮನ್ಯುವನ್ನು ಕ್ರುದ್ಧರಾಗಿ ಸುತ್ತುವರಿದರು.

ತತಃ ಶತ್ರುಕ್ಷಯಂ ಕೃತ್ವಾ ಸುಮಹಾಂತಂ ರಣೇ ಪಿತಃ ।
ದೌಹಿತ್ರಸ್ತವ ವಾರ್ಷ್ಣೇಯ ದೌಃಶಾಸನಿವಶಂ ಗತಃ ॥೨೦॥

ತಂದೆಯೇ, ಆ ಸಮಯದಲ್ಲಿ ನಿನ್ನ ಮೊಮ್ಮಗನಾದ ಅಭಿಮನ್ಯುವು ಮಹಾವೀರರಿಂದ ಸುತ್ತುಗಟ್ಟಲ್ಪಟ್ಟಿದ್ದರೂ ಅಪಾರ ಸಂಖ್ಯೆಯಲ್ಲಿ ಶತ್ರುಗಳನ್ನು ಸದೆಬಡಿದು ಕೊನೆಯಲ್ಲಿ ದುಶ್ಶಾಸನನ ಪುತ್ರನಿಗೆ ವಶನಾದನು.

ವ್ಯಕ್ತಂ ಚ ಸ ಗತಃ ಸ್ವರ್ಗಂ ಜಹಿ ಶೋಕಂ ಮಹಾಮತೇ ।
ನ ಹಿ ವ್ಯಸನಮಾಸಾದ್ಯ ಸೀದೇಯುಃ ಸುನರಾಃ ಕ್ವಚಿತ್ ॥೨೧॥

ಮಹಾಮತಿಯೇ, ನಿನ್ನ ದೌಹಿತ್ರನೂ ನಿಶ್ಚಿತವಾಗಿ ಸ್ವರ್ಗಕ್ಕೆ ಹೋಗಿದ್ದಾನೆ. ಆದ್ದರಿಂದ ಉತ್ತಮ ಪಕ್ವತೆಯ ಬುದ್ಧಿಯುಳ್ಳ ಸತ್ಪುರುಷನಾದ ನೀನು ದುಃಖಿಸಬೇಡ. ಸತ್ಪುರುಷರು ಸಂಸ್ಕಾರಬುದ್ಧಿಯನ್ನು ಹೊಂದಿದ್ದು ವ್ಯಸನದಲ್ಲಿ ಖಿನ್ನರಾಗುವುದಿಲ್ಲ.

ದ್ರೋಣಕರ್ಣಪ್ರಭೃತಯೋ ಯೇನ ಪ್ರತಿಸಮಾಹಿತಾಃ ।
ರಣೇ ಮಹೇಂದ್ರಪ್ರತಿಮಃ ಸ ಕಥಂ ನಾಪ್ನುಯಾದ್ ದಿವಮ್ ॥೨೨॥

ಸ ಶೋಕಂ ಜಹಿ ದುರ್ಧರ್ಷ ಮಾ ಚ ಮನ್ಯುವಶಂ ಗಮಃ ।
ಶಸ್ತ್ರಪೂತಾಂ ಹಿ ಸ ಗತಿಂ ಗತಃ ಪರಮದುರ್ಜಯಃ ॥೨೩॥

(★ಈ ಎರಡು ಶ್ಲೋಕಗಳಿಗೆ ಪೂರ್ತಿ ಅನುವಾದವಾಗಿಲ್ಲ ಅನಿಸುತ್ತದೆ) ಯಾರಿಂದಲೂ ಗೆಲ್ಲಲಾಗದ ಅಭಿಮನ್ಯುವು ಶಸ್ತ್ರಗಳಿಂದ ಪೂತನಾಗಿ ಸ್ವರ್ಗವನ್ನು ಸೇರಿದ್ದಾನೆ.

ತಸ್ಮಿಂಸ್ತು ನಿಹತೇ ಪುತ್ರೇ ಸುಭದ್ರೇಯಂ ಸ್ವಸಾ ಮಮ ।
ದುಃಖಾರ್ತಾ ಚ ಪೃಥಾಂ ಪ್ರಾಪ್ಯ ಕುರರೀವ ನನಾದ ಹ ॥೨೪॥

ಅಭಿಮನ್ಯುವು ಹತನಾದ ಬಳಿಕ ಅವನ ತಾಯಿ, ನನ್ನ ತಂಗಿಯಾದ ಸುಭದ್ರೆಯು ಮಗನ ಬಳಿ ಹೋಗಿ ಕುರರಿಯಂತೆ ಬಹುವಾಗಿ ರೋದನಗೈದಳು.

ದ್ರೌಪದೀಂ ಚ ಸಮಾಸಾದ್ಯ ಪರ್ಯಪೃಚ್ಛತ್ ಸುದುಃಖಿತಾ ॥೨೫॥

ದ್ರೌಪದಿಯನ್ನು ಸಮೀಪಿಸಿ ದುಃಖಿತಳಾಗಿ ಅವಳ ಬಳಿ ಪ್ರಶ್ನಿಸಿದಳು.

ಸುಭದ್ರಾ

ಆರ್ಯೇ ಕ್ವ ದಾರಕಾಃ ಸರ್ವೇ ದ್ರಷ್ಟುಮಿಚ್ಛಾಮಿ ತಾನಹಮ್ ॥೨೬॥

ಸುಭದ್ರಾ– ಪೂಜ್ಯಳೇ, ನನ್ನ ಮಕ್ಕಳೆಲ್ಲರೂ ಎಲ್ಲಿ ಹೋಗಿದ್ದಾರೆ? ಅವರೆಲ್ಲರನ್ನೂ ನಾನು ನೋಡಬಯಸುತ್ತೇನೆ.

ಶ್ರೀಭಗವಾನ್

ಅಸ್ಯಾಸ್ತು ವಚನಂ ಶ್ರುತ್ವಾ ಸರ್ವಾಸ್ತಾಃ ಕುರುಯೋಷಿತಃ ।
ಭುಜಾಭ್ಯಾಂ ಪರಿಗೃಹ್ಯೈನಾಂ ಚುಕ್ರುಶುಃ ಪರಮಾರ್ತವತ್ ॥೨೭॥

ಶ್ರೀಭಗವಾನ್– ಸುಭದ್ರೆಯ ಮಾತುಗಳನ್ನು ಕೇಳಿ ಖಿನ್ನರಾದ ಸ್ತ್ರೀಯರೆಲ್ಲರೂ ಅವಳ ಕೈಗಳನ್ನು ಹಿಡಿದುಕೊಂಡು ಅತ್ಯಂತ ದುಃಖದಿಂದ ರೋದನಗೈದರು.

ಉತ್ತರಾಂ ಚಾಬ್ರವೀದ್ ಭದ್ರಾಂ ಭದ್ರೇ ಭರ್ತಾ ಕ್ವ ತೇ ಗತಃ ।
ಕ್ಷಿಪ್ರಮಾಗಮನಂ ಮಹ್ಯಂ ತಸ್ಯ ತ್ವಂ ವೇದಯಸ್ವ ಹ ॥೨೮॥

ನಂತರ ದ್ರೌಪದಿಯು ಉತ್ತರೆಯ ಕೈಗಳನ್ನು ಹಿಡಿದು ಮಂಗಳಾಂಗಿಯೇ, ನಿನ್ನ ಗಂಡನು ಎಲ್ಲಿಗೆ ಹೋಗಿದ್ದಾನೆ? ಅವನ ಆಗಮನವನ್ನು ಬೇಗನೆ ಬಂದು ನನಗೆ ತಿಳಿಸು ಎಂದು ಹೇಳಿದಳು.

ನನು ನಾಮಾಸ್ಮಿ ವೈರಾಟಿ ಶ್ರುತ್ವಾ ಮಮ ಗಿರಂ ಸದಾ ।
ಭವನಾನ್ನಿಷ್ಪತತ್ಯಾಶು ಕಸ್ಮಾನ್ನಾಭ್ಯೇತಿ ತೇ ಪತಿಃ ॥೨೯॥

ಉತ್ತರೆಯೇ, ನಾನು ನನ್ನ ಮಗನ ಜೊತೆಗೆ ಇಲ್ಲವಷ್ಟೆ? ಯಾವಾಗಲೂ ನನ್ನ ಧ್ವನಿಯನ್ನು ಕೇಳಿದ ಕೂಡಲೇ ನಿನ್ನ ಗಂಡನು (ಅಭಿಮನ್ಯುವು) ಕೂಡಲೇ ನಿನ್ನ ಅಂತಃಪುರದಿಂದ ಓಡಿಬರುತ್ತಿದ್ದನು. ಆ ನಿನ್ನ ಪತಿಯು ಈಗ ಏಕೆ ಬರುತ್ತಿಲ್ಲ?

ಅಭಿಮನ್ಯೋ ಕುಶಲಿನೋ ಮಾತುಲಸ್ತೇ ಮಹಾರಥಾಃ ।
ಕುಶಲಂ ಚಾಬ್ರುವನ್ ಸರ್ವೇ ತ್ವಾಂ ಯುಯುತ್ಸುಮಿಹಾಗತಮ್ ॥೩೦॥

ಅಭಿಮನ್ಯುವೇ, ಮಹಾರಥನಾದ ನಿನ್ನ ಮಾವಂದಿರೆಲ್ಲರೂ ಕುಶಲಿಗಳಾಗಿದ್ದಾರೆ. ಯುದ್ಧ ಮಾಡಲು ಆಗಮಿಸಿದ ನಿನ್ನನ್ನು ಅವರು ಕುಶಲಪ್ರಶ್ನೆ ಕೇಳುತ್ತಿದ್ದಾರೆ. ಹೀಗೆ ಗೋಳಿಟ್ಟಳು.

ಆಚಕ್ಷ್ವ ಮೇಽದ್ಯ ಸಂಗ್ರಾಮಂ ಯಥಾಪೂರ್ವಮರಿಂದಮ ।
ಕಸ್ಮಾದೇವಂ ವಿಲಪತೀಂ ನಾದ್ಯ ವೈ ಪ್ರತಿಭಾಷಸೇ ॥೩೧॥

ಅರಿಂದಮನೇ, ಹಿಂದೆ ಯುದ್ಧದ ವಿಷಯವಾಗಿ ಹೇಳುತ್ತಿದ್ದಂತೆ ಈಗಲೂ ಹೇಳು. ನಾನು ಅಳುತ್ತಿದ್ದರೂ ನೀನೇಕೆ ಪ್ರತ್ಯುತ್ತರವನ್ನು ನೀಡುತ್ತಿಲ್ಲ ಎಂದು ಹೇಳುತ್ತಾ ದುಃಖಿತಳಾದಳು.

ಏವಮಾದಿ ತು ವಾಷ್ಣೇಯ್ಯಾಃ ತದಾಽಸ್ಯಾಃ ಪರಿದೇವಿತಮ್ ।
ಶ್ರುತ್ವಾ ಪೃಥಾ ಸುದುಃಖಾರ್ತಾ ಶನೈರ್ವಾಕ್ಯಮಥಾಬ್ರವೀತ್ ॥೩೨॥

ಇದೇ ಮೊದಲಾದ ರೀತಿಯಲ್ಲಿ ಸುಭದ್ರೆಯು ಅಳುತ್ತಿದ್ದಾಗ, ಇವಳ ದುಃಖವನ್ನು ಕೇಳಿ, ಮೊಮ್ಮಗನ ಮರಣದಿಂದ ದುಃಖಪೀಡಿತಳಾದ ಕುಂತಿಯು ಸುಭದ್ರೆಯನ್ನು ಸಂತೈಸುತ್ತಾ ಮೆಲ್ಲನೆ ಇಂತು ನುಡಿದಳು.

ಪೃಥಾ

ಸುಭದ್ರೇ ವಾಸುದೇವೇನ ತಥಾ ಸಾತ್ಯಕಿನಾ ರಣೇ ।
ಪಿತ್ರಾ ಚ ಪಾಲಿತೋ ಬಾಲಃ ಸ ಗತಃ ಕಾಲಧರ್ಮಣಾ ॥೩೩॥

ಕುಂತಿ– ಸುಭದ್ರೆಯೇ, ಶ್ರೀಕೃಷ್ಣ, ಸಾತ್ಯಕಿ ಮತ್ತು ತಂದೆಯಾದ ಅರ್ಜುನನಿಂದ ರಕ್ಷಿಸಲ್ಪಡುತ್ತಿದ್ದ ಬಾಲಕನಾದ ಅಭಿಮನ್ಯುವು ಕಾಲಧರ್ಮದಿಂದಲೇ ಹತನಾಗಿದ್ದಾನೆ.

ಈದೃಶೋ ಮರ್ತ್ಯಭಾವೋಽಯಂ ಮಾ ಶುಚೋ ಯದುನಂದಿನಿ ।
ಪುತ್ರೋ ಹಿ ತವ ದುರ್ಧರ್ಷಃ ಸಂಪ್ರಾಪ್ತಃ ಪರಮಾಂ ಗತಿಮ್ ॥೩೪॥

ಯದುನಂದಿನಿಯೇ, ಮರ್ತ್ಯಧರ್ಮವೇ ಈ ರೀತಿಯಾದುದು. ಮನುಷ್ಯ ಲೋಕದಲ್ಲಿ ಹುಟ್ಟಿದವರು ಸತ್ತೇ ತೀರುತ್ತಾರೆ. ನಿನ್ನ ಮಗನು ಶ್ರೇಷ್ಠ ಗತಿ ಹೊಂದಿದ್ದಾನೆ. ಆದ್ದರಿಂದ ಶೋಕಿಸಬೇಡ.

ಕುಲೇ ಮಹತಿ ಜಾತಾಽಸಿ ಕ್ಷತ್ರಿಯಾಣಾಂ ಮಹಾತ್ಮನಾಮ್ ।
ಮಾ ಶುಚಶ್ಚಪಲಾಕ್ಷಿ ತ್ವಂ ಪುಂಡರೀಕನಿಭೇಕ್ಷಣಮ್ ॥೩೫॥

ಶ್ರೇಷ್ಠವಾದ ಕುಲದಲ್ಲಿ ಸಂಜಾತಳಾಗಿರುವಿ. ಮಹಾತ್ಮರಾದ ಕ್ಷತ್ರಿಯರ ಕುಲವು ನಿನ್ನದು. ಚಪಲಾಕ್ಷಿಯೇ, ನೀನು ಪುಂಡರೀಕ ಸದೃಶ ಕಣ್ಣುಗಳನ್ನು ಹೊಂದಿದ್ದ ಮಗನ ವಿಷಯದಲ್ಲಿ ದುಃಖವನ್ನು ಹೊಂದಬೇಡ.

ಉತ್ತರಾಂ ತ್ವಮವೇಕ್ಷಸ್ವ ಗರ್ಭಿಣೀಂ ಮಾ ಶುಚಃ ಶುಭೇ ।
ಪುತ್ರಮೇಷಾ ಹಿ ತಸ್ಯಾಶು ಜನಯಿಷ್ಯತಿ ಭಾಮಿನೀ ॥೩೬॥

ಗರ್ಭಿಣಿಯಾಗಿರುವ ನಿನ್ನ ಸೊಸೆ ಉತ್ತರೆಯನ್ನಾದರೂ ನೋಡಿಕೊಂಡು ನಿನ್ನ ದುಃಖವನ್ನು ಪರಿತ್ಯಜಿಸು. ಭಾಮಿನಿಯಾದ ಈ ಉತ್ತರೆಯು ಅಭಿಮನ್ಯುವಿನ ಮಗುವಿಗೆ ಬೇಗ ಜನ್ಮವನ್ನು ನೀಡುತ್ತಾಳೆ.

ಶ್ರೀಭಗವಾನ್

ಏವಂ ತು ಸಾಂತ್ವಯಿತ್ವೈನಾಂ ಕುಂತೀ ಯದುಕುಲೋದ್ವಹಾಮ್ ।
ವಿಹಾಯ ಶೋಕಂ ದುರ್ಧರ್ಷ ಶ್ರಾದ್ಧಮಸ್ಯಾಪ್ಯಕಲ್ಪಯತ್ ॥೩೭॥

ಶ್ರೀಭಗವಾನ್– ತಂದೆಯೇ, ಈ ರೀತಿಯಾಗಿ ಕುಂತೀದೇವಿಯು ಸುಭದ್ರೆಯನ್ನು ಸಂತೈಸಿ, ದುಸ್ತರವಾದ ಶೋಕವನ್ನು ತ್ಯಾಗ ಮಾಡಿ, ಅಭಿಮನ್ಯುವಿನ ಶ್ರಾದ್ಧದ ಸಿದ್ಧತೆಗಳನ್ನು ಮಾಡಿದಳು.

ಸಮನುಜ್ಞಾಪ್ಯ ಧರ್ಮಜ್ಞಂ ರಾಜಾನಂ ಭೀಮಮೇವ ಚ ।
ಯಮೌ ಯಮೋಪಮೌ ಚೈವ ದದೌ ದಾನಾನ್ಯನೇಕಶಃ ॥೩೮॥

ಧರ್ಮಜ್ಞನಾದ ಯುಧಿಷ್ಠಿರನ, ಭೀಮನ, ಯಮನಿಗೆ ಸದೃಶವಾದ ಪರಾಕ್ರಮವುಳ್ಳ ನಕುಲ-ಸಹದೇವರ ಅನುಮತಿಯನ್ನು ಪಡೆದು, ಅಭಿಮನ್ಯುವಿಗೆ ಸದ್ಗತಿಯಾಗಲೆಂದು ಅನೇಕ ವಿಧವಾದ ದಾನಗಳನ್ನು ಸತ್ಪಾತ್ರರಿಗೆ ಮಾಡಿದಳು.

ತತಃ ಪ್ರದಾಯ ಬಹ್ವೀರ್ಗಾ ಬ್ರಾಹ್ಮಣೇಭ್ಯೋ ಯದೂದ್ವಹ ।
ಸಮಹೃಷ್ಯತ ವಾರ್ಷ್ಣೇಯೀ ವೈರಾಟೀಂ ಚಾಬ್ರವೀದಿದಮ್ ॥೩೯॥

ಬ್ರಾಹ್ಮಣರಿಗೆ ಬಹುಸಂಖ್ಯಾತವಾದ ಗೋವುಗಳನ್ನು ದಾನವಾಗಿ ಕೊಟ್ಟು ಸಮಾಧಾನ ಮಾಡಿಕೊಂಡು ಉತ್ತರೆಯನ್ನುದ್ದೇಶಿಸಿ ಹೇಳಿದಳು.

ಕುಂತೀ

ವೈರಾಟಿ ನೇಹ ಸಂತಾಪಸ್ತ್ವಯಾ ಕಾರ್ಯೋ ಯಶಸ್ವಿನಿ ।
ಭರ್ತಾರಂ ಪ್ರತಿ ಸುಶ್ರೋಣಿ ಗರ್ಭಸ್ಥಂ ರಕ್ಷ ಮೇ ಶಿಶುಮ್ ॥೪೦॥

ಕುಂತೀ– ನಿರ್ದುಷ್ಟಳೇ, ಸುಂದರಿಯೇ, ವಿರಾಟಪುತ್ರಿಯೇ, ನೀನು ನಿನ್ನ ಪತಿಯ ನಿಮಿತ್ತವಾಗಿ ದುಃಖಿಸಬೇಡ. ಗರ್ಭದಲ್ಲಿರುವ ಶಿಶುವನ್ನು ಚೆನ್ನಾಗಿ ರಕ್ಷಿಸು.

ಶ್ರೀಭಗವಾನ್

ಏವಮುಕ್ತ್ವಾ ತತಃ ಕುಂತೀ ವಿರರಾಮ ಮಹಾದ್ಯುತೇ ।
ತಾಮನುಜ್ಞಾಪ್ಯ ಚೇಹೇಮಾಂ ಸುಭದ್ರಾಂ ಪುನರಾನಯಮ್ ॥೪೧॥

ಶ್ರೀಭಗವಾನ್– ಈ ರೀತಿಯಾಗಿ ಉತ್ತರೆಗೆ ಸಾಂತ್ವನವನ್ನು ಹೇಳಿ ಕುಂತಿಯು ಮಾತಿನಿಂದ ವಿರಮಿಸಿದಳು. ಅವಳ ಅನುಮತಿಯನ್ನು ಪಡೆದು ನಾನು ಸುಭದ್ರೆಯನ್ನು ಪುನಃ ಇಲ್ಲಿಗೆ ಕರೆದು ತಂದಿದ್ದೇನೆ.

ಏವಂ ಸ ನಿಧನಂ ಪ್ರಾಪ್ತೋ ದೌಹಿತ್ರಸ್ತವ ಮಾನದ ।
ಸಂತಾಪಂ ತ್ಯಜ ದುರ್ಧರ್ಷ ಮಾ ಚ ಶೋಕೇ ಮನಃ ಕೃಥಾಃ ॥೪೨॥

ಮಾನದನೇ, ಹೀಗೆ ನಿನ್ನ ಮೊಮ್ಮಗನು ಯುದ್ಧದಲ್ಲಿ ಮರಣವನ್ನು ಹೊಂದಿದ್ದಾನೆ. ದುರ್ಧರ್ಷನೇ, ಸಂತಾಪವನ್ನು ಬಿಟ್ಟುಬಿಡು. ದುಃಖಪಡಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವಸುದೇವಶೋಕಹರಣಂ ನಾಮ ಏಕಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ವಸುದೇವಾದಿಗಳಿಂದ ಅಭಿಮನ್ಯುವಿಗೆ ಶ್ರಾದ್ಧಪ್ರಕ್ರಿಯೆ. ವೇದವ್ಯಾಸರು ಉತ್ತರೆಯನ್ನು, ಅರ್ಜುನನನ್ನು ಸಮಾಧಾನಪಡಿಸಿ, ಯುಧಿಷ್ಠಿರನಿಗೆ ಅಶ್ವಮೇಧ ಯಾಗವನ್ನು ಮಾಡಲು ಹೇಳಿ ಅಂತರ್ಧಾನ ಹೊಂದಿದುದು.

ವೈಶಂಪಾಯನಃ

ಏತಚ್ಛ್ರುತ್ವಾ ತು ಪುತ್ರಸ್ಯ ವಚಃ ಶೂರಾತ್ಮಜಸ್ತದಾ ।
ವಿಹಾಯ ಶೋಕಂ ಧರ್ಮಾತ್ಮಾ ದದೌ ಶ್ರಾದ್ಧಮನುತ್ತಮಮ್ ॥೧॥

ವೈಶಂಪಾಯನ– ಜನಮೇಜಯನೇ, ಶೂರಸೇನನ ಸುತನಾದ, ಧರ್ಮಾತ್ಮನಾದ ವಸುದೇವನು ಕೃಷ್ಣನು ಹೇಳಿದ ಮಾತುಗಳನ್ನು ಕೇಳಿ, ಶೋಕವನ್ನು ತ್ಯಜಿಸಿ, ಅಭಿಮನ್ಯುವಿಗಾಗಿ ಉತ್ತಮ ರೀತಿಯಾದ ಶ್ರಾದ್ಧಕ್ರಿಯೆಗಳನ್ನು ನಡೆಸಿದನು.

ತಥೈವ ವಾಸುದೇವೋऽಪಿ ಸ್ವಸ್ರೀಯಸ್ಯ ಮಹಾತ್ಮನಃ ।
ದಯಿತಸ್ಯ ಪಿತುರ್ನಿತ್ಯಮಕರೋದೌರ್ಧ್ವದೈಹಿಕಮ್ ॥೨॥

ಇದರಂತೆ ಶ್ರೀಕೃಷ್ಣನೂ ತಂಗಿಯ ಮಗನಾದ, ಮಹಾತ್ಮನಾದ, ತನ್ನ ತಂದೆಗೆ ಪ್ರೀತಿಪಾತ್ರನಾದ ಅಭಿಮನ್ಯುವಿಗೆ ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡಿದನು.

ಷಷ್ಟಿಂ ಶತಸಹಸ್ರಾಣಿ ಬ್ರಾಹ್ಮಣಾನಾಂ ಮಹಾಭುಜ ।
ವಿಧಿವದ್ ಭೋಜಯಾಮಾಸ ಭೋಜ್ಯಂ ಸರ್ವಗುಣಾನ್ವಿತಮ್ ॥೩॥

ಮಹಾತೇಜಸ್ವಿಗಳಾದ, ಅರವತ್ತು ಲಕ್ಷ ಬ್ರಾಹ್ಮಣರಿಗೆ ಸ್ವೀಕರಿಸಲು ಯೋಗ್ಯವಾದ, ಸಮಸ್ತ ಗುಣಗಳಿಂದ ತುಂಬಿದ ಅನ್ನವನ್ನು ವಿಧಿವತ್ತಾಗಿ ದಾನ ಮಾಡಿದನು.

ಆಚ್ಛಾದ್ಯ ಚ ಮಹಾಬಾಹುರ್ಧನತೃಷ್ಣಾಮಪಾನುದತ್ ।
ಬ್ರಾಹ್ಮಣಾನಾಂ ತದಾ ಕೃಷ್ಣಸ್ತದಭೂದ್ ರೋಮಹರ್ಷಣಮ್ ॥೪॥

ಆ ಸಮಯದಲ್ಲಿ ಶ್ರೀಕೃಷ್ಣನು ಬ್ರಾಹ್ಮಣರಿಗೆ ವಸ್ತ್ರಗಳನ್ನು ಹೊದ್ದಿಸಿ, ಅವರಿಗೆ ಮತ್ತೂ ಹಣದ ಬಯಕೆ ಉಂಟಾಗದಿರುವ ರೀತಿಯಲ್ಲಿ ಅಪಾರವಾದ ಧನ-ಕನಕಗಳನ್ನು ದಾನ ಮಾಡಿದನು. ಕೃಷ್ಣನ ಈ ಪ್ರಕ್ರಿಯೆಯು ರೋಮಾಂಚನವನ್ನು ಉಂಟುಮಾಡುವಂತಿತ್ತು.

ಸುವರ್ಣಂ ಚೈವ ಗಾಶ್ಚೈವ ಶಯನಾಚ್ಛಾದನಂ ತಥಾ ।
ದೀಯಮಾನಂ ತದಾ ವಿಪ್ರಾಃ ಪ್ರಭೂತಮಿತಿ ಚಾಬ್ರುವನ್ ॥೫॥

ಸುವರ್ಣವನ್ನೂ, ಗೋವುಗಳನ್ನೂ, ಹಾಸಿಗೆ-ಹೊದ್ದಿಗೆಗಳನ್ನೂ ದಾನ ಮಾಡುತ್ತಿದ್ದಾಗ ಬ್ರಾಹ್ಮಣರು 'ವರ್ಧತಾಂ' (ಅಭಿವೃದ್ಧಿಯನ್ನು ಹೊಂದಲಿ) ಎಂಬ ಮಾತುಗಳನ್ನು ಮತ್ತೂ ಹೆಚ್ಚಾದ ಸಂಪತ್ತು ಉಂಟಾಗಲಿ ಎಂಬ ಮಾತುಗಳನ್ನು ಆಡಿದರು.

ವಾಸುದೇವೋಽಥ ದಾಶಾರ್ಹೋ ಬಲದೇವಃ ಸಸಾತ್ಯಕಿಃ ।
ಅಭಿಮನ್ಯೋಸ್ತದಾ ಶ್ರಾದ್ಧಮಕುರ್ವನ್ ಸತ್ಯವಿಕ್ರಮಾಃ ॥೬॥

ವಾಸುದೇವನು ಶ್ರಾದ್ಧ ಪ್ರಕ್ರಿಯೆಯನ್ನು ಮಾಡಿದ ನಂತರ ಬಲಭದ್ರ, ಸಾತ್ಯಕಿ ಮೊದಲಾದ ಸತ್ಯವಿಕ್ರಮರು ಅಭಿಮನ್ಯುವನ್ನು ಉದ್ದೇಶಿಸಿಕೊಂಡು ಶ್ರಾದ್ಧವನ್ನು ಮಾಡಿದರು.

ತತಃ ಶೋಕಂ ಕುರುಶ್ರೇಷ್ಠ ಜಹಿ ತ್ವಮರಿಮರ್ದನ ।
ಅತೀವ ದುಃಖಸಂತಪ್ತಾ ನ ಶಮಂ ಚೋಪಲೇಭಿರೇ ॥೭॥

ಅಭಿಮನ್ಯುವಿನ ವಧೆಯಿಂದ ಯಾದವರು ಎಷ್ಟೇ ಸಮಾಧಾನವನ್ನು ತಂದುಕೊಂಡರೂ ಮನಶ್ಶಾಂತಿಯನ್ನು ಹೊಂದಲಿಲ್ಲ.

ತಥೈವ ಪಾಂಡವಾ ಧೀರಾ ನಗರೇ ನಾಗಸಾಹ್ವಯೇ ।
ನೋಪಾಗಚ್ಛಂಸ್ತಥಾ ಶಾಂತಿಮಭಿಮನ್ಯುವಿನಾಕೃತಾಃ ॥೮॥

ಇದರಂತೆ ವೀರರಾಗಿರುವಂತಹ ಪಾಂಡವರಿಗೂ ಹಸ್ತಿನಾವತಿಯಲ್ಲಿದ್ದಾಗ ಅಭಿಮನ್ಯುವಿನ ವಿಯೋಗದ ದುಃಖವು ಮರೆಯದಾಯಿತು, ಮನಶ್ಶಾಂತಿ ಸಿಗದಂತಾಯಿತು.

ಸುಬಹೂನಿ ಚ ರಾಜೇಂದ್ರ ದಿವಸಾನಿ ವಿರಾಟಜಾ ।
ನಾಭುಂಕ್ತ ಪತಿಶೋಕಾರ್ತಾ ತದಭೂತ್ ಕರುಣಂ ಮಹತ್ ॥೯॥

ವಿರಾಟನ ಮಗಳಾದ ಉತ್ತರೆಯು ಪತಿಯನ್ನು ಕಳೆದುಕೊಂಡ ದುಃಖದಿಂದ ಅನೇಕ ದಿನಗಳ ತನಕ ಊಟವನ್ನೂ ಮಾಡಲಿಲ್ಲ. ಇವಳ ಸ್ಥಿತಿಯು ಅತ್ಯಂತ ಕರುಣಾಜನಕವಾಗಿತ್ತು.

ಧ್ರಿಯಮಾಣೇ ತು ತಸ್ಮಿಂಸ್ತು ಗರ್ಭೇ ಕುಕ್ಷಿಸ್ಥ ಏವ ಚ ।
ಆಜಗಾಮ ತದಾ ವ್ಯಾಸೋ ಜ್ಞಾತ್ವಾ ದಿವ್ಯೇನ ಚಕ್ಷುಷಾ ॥೧೦॥

ಈ ಪ್ರಸಂಗದಲ್ಲಿ ಉತ್ತರೆಯು ಗರ್ಭವನ್ನು ಧರಿಸಿದ್ದಳು. ಅನೇಕ ದಿನಗಳ ತನಕ ನಿರಶನಳಾಗಿಯೇ ಇದ್ದುದರಿಂದ ಗರ್ಭಸ್ಥ ಶಿಶುವು ದಿನದಿನಕ್ಕೂ ಕ್ಷೀಣಿಸಲಾರಂಭಿಸಿತು.

ಆಗಮ್ಯ ಚಾಬ್ರವೀದ್ ಧೀಮಾನ್ ಪೃಥಾಂ ಪೃಥುಲಲೋಚನಾಮ್ ।
ಉತ್ತರಾಂ ಚ ಮಹಾತೇಜಾಃ ಶೋಕಃ ಸಂತ್ಯಜ್ಯತಾಮಿತಿ ॥೧೧॥

ಈ ವಿಷಯವನ್ನು ದಿವ್ಯದೃಷ್ಟಿಯಿಂದ ತಿಳಿದ ವೇದವ್ಯಾಸದೇವರು ಹಸ್ತಿನಾವತಿಗೆ ಆಗಮಿಸಿದರು. ತೇಜಸ್ವಿಗಳಾದ ವ್ಯಾಸರು ವಿಶಾಲಾಕ್ಷಿಯಾದ ಕುಂತಿಯನ್ನು, ಉತ್ತರೆಯನ್ನು ಸಂಪರ್ಕಿಸಿ, ಶೋಕವನ್ನು ಬಿಟ್ಟುಬಿಡಿರಿ ಎಂದು ತಿಳಿಸಿದರು.

ವ್ಯಾಸಃ

ಜನಿಷ್ಯತಿ ಮಹಾತೇಜಾಃ ಪುತ್ರಸ್ತವ ಯಶಸ್ವಿನಿ ॥೧೨॥

ವ್ಯಾಸರು– ಯಶಸ್ವಿನಿಯಾದ ಉತ್ತರೆಯೇ, ನಿನಗೆ ಮಹಾತೇಜಸ್ವಿಯಾದ ಮಗನು ಹುಟ್ಟುತ್ತಾನೆ.

ಪ್ರಭಾವಾದ್ ವಾಸುದೇವಸ್ಯ ಮಮ ವ್ಯಾಹರಣಾದಪಿ ।
ಪಾಂಡವಾನಾಮಯಂ ಚಾಂತೇ ಪಾಲಯಿಷ್ಯತಿ ಮೇದಿನೀಮ್ ॥೧೩॥

ಶ್ರೀಕೃಷ್ಣ ಪರಮಾತ್ಮನ ಅನುಗ್ರಹದಿಂದ, ನಾನು ಆಡಿದ ಆಶೀರ್ವಾದದ ಮಾತುಗಳಿಂದಲೂ ಪಾಂಡವರ ಬಳಿಕ ಈ ಭೂಮಂಡಲವನ್ನು ರಕ್ಷಿಸುವವನು ನಿನ್ನ ಮಗನೇ ಆಗಿದ್ದಾನೆ.

ವೈಶಂಪಾಯನಃ

ಧನಂಜಯಂ ಚ ಸಂಪ್ರೇಕ್ಷ್ಯ ಧರ್ಮರಾಜಸ್ಯ ಪಶ್ಯತಃ ।
ವ್ಯಾಸೋ ವಾಕ್ಯಮುವಾಚೇದಂ ಹರ್ಷಯನ್ನಿವ ಭಾರತ ॥೧೪॥

ವೈಶಂಪಾಯನ– ಜನಮೇಜಯನೇ, ವ್ಯಾಸರು ಉತ್ತರೆಯನ್ನು ಸಂತೈಸಿ, ಅರ್ಜುನನ ಕಡೆ ನೋಡಿ, ಧರ್ಮರಾಜನು ನೋಡುತ್ತಿರುವಾಗಲೇ ಅರ್ಜುನನಿಗೆ ಸಂತೋಷವಾಗುವ ಈ ಮಾತನ್ನು ಆಡಿದರು.

ವ್ಯಾಸಃ

ಪೌತ್ರೋ ಧ್ರುವಂ ಮಹಾಭಾಗೋ ಭವಿಷ್ಯತಿ ಮಹಾಮತಿಃ ।
ಪೃಥ್ವೀಂ ಸಾಗರಪರ್ಯಂತಾಂ ಪಾಲಯಿಷ್ಯತಿ ಚೈವ ಹ ॥೧೫॥

ವ್ಯಾಸರು– ಕುರುಶ್ರೇಷ್ಠನೇ, ನಿನಗೆ ನಿಶ್ಚಿತವಾಗಿಯೂ ಮಹಾಭಾಗ್ಯಶಾಲಿಯಾದ, ಮಹಾಮತಿಯಾದ ಮೊಮ್ಮಗನು ಹುಟ್ಟುತ್ತಾನೆ. ಅವನು ಸಾಗರಪರ್ಯಂತವಾದ ಭೂಮಿಯನ್ನು ಪರಿಪಾಲಿಸುತ್ತಾನೆ.

ತಸ್ಮಾಚ್ಛೋಕಂ ಕುರುಶ್ರೇಷ್ಠ ಜಹಿ ತ್ವಮರಿಮರ್ದನ ।
ವಿಚಾರ್ಯಮತ್ರ ನ ಹಿ ತೇ ಸತ್ಯಮೇತದ್ ಭವಿಷ್ಯತಿ ॥೧೬॥

ಕುರುಶ್ರೇಷ್ಠನೇ, ಆದ್ದರಿಂದ ನಿನ್ನ ಮಗನ ವಧೆಯಿಂದ ಉಂಟಾದ ಶೋಕವನ್ನು ತ್ಯಾಗ ಮಾಡು. ನನ್ನ ಮಾತಿನಲ್ಲಿ ವಿಶ್ವಾಸವಿಡು. ನನ್ನ ಮಾತು ಸತ್ಯವೇ ಆಗುತ್ತದೆ. ಇದರಲ್ಲಿ ವಿಚಾರ ಮಾಡುವ ಅಂಶವು ಯಾವುದೂ ಇರುವುದಿಲ್ಲ.

ಯಚ್ಚಾಪಿ ವೃಷ್ಣಿವೀರೇಣ ಕೃಷ್ಣೇನ ಕುರುನಂದನ ।
ಪುರಾ ಚೋಕ್ತಂ ತಥಾ ಭಾವಿ ಮಾ ತೇ ಭೂದತ್ರ ಸಂಶಯಃ ॥೧೭॥

ಇಷ್ಟೇ ಅಲ್ಲದೆ ವೃಷ್ಣಿವೀರನಾದ ಕೃಷ್ಣನಿಂದ ಹಿಂದೆ ಏನು ಹೇಳಲ್ಪಟ್ಟಿದೆಯೋ ಅದೆಲ್ಲವೂ ಹಾಗೆಯೇ ನಡೆಯುತ್ತದೆ. ಕುರುನಂದನನೇ, ದುಃಖ ಪಡಬೇಡ.

ವಿಬುಧಾನಾಂ ಗತೋ ಲೋಕಾನ್ ಅಕ್ಷಯಾನಾತ್ಮನಿರ್ಜಿತಾನ್ ।
ನ ಸ ಶೋಚ್ಯಸ್ತಥಾ ವತ್ಸ ನ ಚಾನ್ಯೈಃ ಕುರುಭಿಸ್ತಥಾ ॥೧೮॥

ವೀರನಾದ ಅಭಿಮನ್ಯುವು ಪರಾಕ್ರಮದಿಂದ ಈಗಾಗಲೇ ದೇವತೆಗಳ ಅಕ್ಷಯ ಲೋಕವನ್ನು ಹೊಂದಿರುತ್ತಾನೆ. ಆದ್ದರಿಂದ ನೀನಾಗಲೀ, ಬೇರೆ ಕುರುವಂಶದವರಾಗಲೀ ಅಭಿಮನ್ಯುವಿನ ನಿಮಿತ್ತ ದುಃಖಿಸಬೇಡಿರಿ.

ವೈಶಂಪಾಯನಃ

ಏವಂ ಪಿತಾಮಹೇನೋಕ್ತೋ ಧರ್ಮಾತ್ಮಾ ಸ ಧನಂಜಯಃ ।
ತ್ಯಕ್ತ್ವಾ ಶೋಕಂ ಮಹಾರಾಜ ಹೃಷ್ಟರೂಪೋಽಭವದ್ ತದಾ ॥೧೯॥

ವೈಶಂಪಾಯನ– ಹೀಗೆ ಕುರುಕುಲ ಪಿತಾಮಹರಾದ ವೇದವ್ಯಾಸರು ಹೇಳಿದ ಬಳಿಕ, ಧರ್ಮಾತ್ಮನಾದ ಧನಂಜಯನು ಶೋಕವನ್ನು ಬಿಟ್ಟನು. ವೀರನಾದ ಮೊಮ್ಮಗನು ಹುಟ್ಟುತ್ತಾನೆ ಎಂದು ಸಂತಸವನ್ನೂ ಪಟ್ಟನು.

ಪಿತಾಽಪಿ ತವ ಧರ್ಮಜ್ಞ ಗರ್ಭೇ ತಸ್ಮಿನ್ ಮಹಾಮತೇ ।
ಅವರ್ಧತ ಯಥಾಕಾಲಂ ಶುಕ್ಲಪಕ್ಷೇ ಯಥಾ ಶಶೀ ॥೨೦॥

ಜನಮೇಜಯನೇ, ನಿನ್ನ ತಂದೆಯೂ ಕೂಡ ಉತ್ತರೆಯ ಗರ್ಭದಲ್ಲಿ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೂ ಬೆಳೆಯ ತೊಡಗಿದನು.

ತತಃ ಸಂಚೋದಯಾಮಾಸ ವ್ಯಾಸೋ ಧರ್ಮಾತ್ಮಜಂ ನೃಪಮ್ ।
ಅಶ್ವಮೇಧಂ ಪ್ರತಿ ತದಾ ತತಃ ಸೋಽಂತರ್ಹಿತೋಭವತ್ ॥೨೧॥

ಬಳಿಕ ವ್ಯಾಸರು ಧರ್ಮರಾಜನನ್ನು ಅಶ್ವಮೇಧಯಾಗ ಮಾಡುವಂತೆ ಹುರಿದುಂಬಿಸಿದರು. ನಂತರ ಆ ಸ್ಥಳದಿಂದ ಅಂತರ್ಧಾನವನ್ನು ಹೊಂದಿದರು.

ಧರ್ಮರಾಜಶ್ಚ ಮೇಧಾವೀ ಶ್ರುತ್ವಾ ವ್ಯಾಸಸ್ಯ ತದ್ ವಚಃ ।
ವಿತ್ತೋಪನಯನೇ ತಾತ ಚಕಾರ ಮತಿಮಾನ್ ಮತಿಮ್ ॥೨೨॥

ಮೇಧಾವಿಯಾದ ಧರ್ಮರಾಜನು ವ್ಯಾಸರ ಮಾತುಗಳನ್ನು ಕೇಳಿಸಿಕೊಂಡು, ಐಶ್ವರ್ಯವನ್ನು ತರಬೇಕೆಂದು ಹಿಮಾಲಯಕ್ಕೆ ಸಾಗಲು ಮತಿ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವ್ಯಾಸವಚನಂ ನಾಮ ದ್ವಿಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ಮೂರನೆಯ ಅಧ್ಯಾಯ

ಯುಧಿಷ್ಠಿರನು ವೇದವ್ಯಾಸದೇವರ ಆದೇಶದಂತೆ ಭೀಮಸೇನನೇ ಮೊದಲಾದವರ ಜೊತೆ ಸಮಾಲೋಚಿಸಿ, ಯಜ್ಞಕ್ಕಾಗಿ ಧನವನ್ನು ತರಬೇಕೆಂದು ಎಲ್ಲರೊಟ್ಟಿಗೆ ಹಿಮಾಲಯದ ತಪ್ಪಲಿಗೆ ಸಾಗಿದುದು.

ಜನಮೇಜಯಃ

ಶ್ರುತ್ವೈತದ್ ವಚನಂ ಬ್ರಹ್ಮನ್ ವ್ಯಾಸೇನೋಕ್ತಂ ಮಹಾತ್ಮನಾ ।
ಅಶ್ವಮೇಧಂ ಪ್ರತಿ ತದಾ ಕಿಂ ಚಕಾರ ಯುಧಿಷ್ಠಿರಃ ॥೧॥

ಜನಮೇಜಯ– ಬ್ರಾಹ್ಮಣೋತ್ತಮರೇ, ಮಹಾತ್ಮರಾದ ವೇದವ್ಯಾಸರ ವಚನವನ್ನು ಕೇಳಿಸಿಕೊಂಡ ಯುಧಿಷ್ಠಿರನು ಅಶ್ವಮೇಧ ಸಂಬಂಧವಾಗಿ ಯಾವ ಕಾರ್ಯವನ್ನು ಮಾಡಿದನೆಂದು ತಿಳಿಸಿರಿ.

ರತ್ನಂ ಚ ಯನ್ಮರುತ್ತೇನ ನಿಹಿತಂ ಪೃಥಿವೀತಳೇ ।
ತದವಾಪ್ತಂ ಕಥಂ ಚೈತತ್ ತನ್ಮೇ ಬ್ರೂಹಿ ದ್ವಿಜೋತ್ತಮ ॥೨॥

ಮರುತ್ತನು ಭೂಮಿಯ ಅಡಿಯಲ್ಲಿ ಹುದುಗಿಸಿಟ್ಟಿರುವ ರತ್ನಮಯವಾದ ಯಜ್ಞೋಪಕರಣಗಳನ್ನು ಹೇಗೆ ಪಡೆದುಕೊಂಡನೆಂದು ನನಗೆ ವಿಸ್ತಾರವಾಗಿ ತಿಳಿಸಿರಿ.

ವೈಶಂಪಾಯನಃ

ಶ್ರುತ್ವಾ ದ್ವೈಪಾಯನವಚೋ ಧರ್ಮರಾಜೋ ಯುಧಿಷ್ಠಿರಃ ।
ಭ್ರಾತೄನ್ ಸರ್ವಾನ್ ಸಮಾಭಾಷ್ಯ ಕಾಲೇ ವಚನಮಬ್ರವೀತ್ ॥೩॥

ಅರ್ಜುನಂ ಭೀಮಸೇನಂ ಚ ಮಾದ್ರೀಪುತ್ರೌ ಯಮಾವಪಿ ॥೪॥

ವೈಶಂಪಾಯನ– ಯುಧಿಷ್ಠಿರನು ಕೃಷ್ಣದ್ವೈಪಾಯನರ ಮಾತನ್ನು ಕೇಳಿಸಿಕೊಂಡು ತನ್ನ ಸಹೋದರರಾದ ಭೀಮಸೇನ, ಅರ್ಜುನ, ನಕುಲ-ಸಹದೇವರನ್ನು ಕರೆಸಿದನು. ಸಮಯೋಚಿತವಾದ ಮಾತುಗಳನ್ನು ಹೇಳಿದನು.

ಯುಧಿಷ್ಠಿರಃ

ಶ್ರುತಂ ವೋ ವಚನಂ ವೀರಾಃ ಸೌಹೃದಾದ್ ಯನ್ಮಹಾತ್ಮನಾ ।
ಕುರೂಣಾಂ ಹಿತಕಾಮೇನ ಪ್ರೋಕ್ತಂ ಕೃಷ್ಣೇನ ಧೀಮತಾ ॥೫॥

ಯುಧಿಷ್ಠಿರ– ವೀರರೇ, ಕುರುಗಳಿಗೆ ಹಿತವನ್ನೇ ಯಾವಾಗಲೂ ಬಯಸುವ, ಬುದ್ಧಿವಂತರಾದ, ಮಹಾನುಭಾವರಾದ ವೇದವ್ಯಾಸದೇವರು ನಮ್ಮ ಹಿತಚಿಂತನೆಗಾಗಿ ಹೇಳಿದ ಮಾತನ್ನು ನೀವೆಲ್ಲ ಕೇಳಿಸಿಕೊಂಡಿರುವಿರಿ.

ತಪೋವೃದ್ಧೇನ ಮಹತಾ ಸುಹೃದಾಂ ಭೂತಿಮಿಚ್ಛತಾ ।
ಗುರುಣಾ ಧರ್ಮಶೀಲೇನ ವ್ಯಾಸೇನಾದ್ಭುತಕರ್ಮಣಾ ॥೬॥

ಪಿತಾಮಹೇನ ಭೀಷ್ಮೇಣ ಗೋವಿಂದೇನ ಚ ಧೀಮತಾ ।
ಸಂಸ್ಮೃತ್ಯ ತದಹಂ ಸಮ್ಯಕ್ ಕರ್ತುಮಿಚ್ಛಾಮಿ ಪಾಂಡವಾಃ ॥೭॥

ಭಕ್ತರ ಅಭಿವೃದ್ಧಿಯನ್ನೇ ಬಯಸುವ, ತಪೋವೃದ್ಧರಾದ, ಮಹಾತ್ಮರಾದ, ಗುರುಗಳಾದ, ಧರ್ಮಶೀಲರಾದ, ಅದ್ಭುತಕರ್ಮಸಂಪನ್ನರಾದ ವೇದವ್ಯಾಸದೇವರು, ಪಿತಾಮಹನಾದ ಭೀಷ್ಮನು, ಧೀಮಂತನಾದ ಗೋವಿಂದನು - ಇವರೆಲ್ಲರನ್ನೂ ಕೂಡ ಸ್ಮರಿಸಿಕೊಂಡು, ಪಾಂಡವರೇ ಅವರು ಹೇಳಿದ ಕರ್ಮವನ್ನು ಮಾಡಲು ಬಯಸಿದ್ದೇನೆ.

ಆಯತ್ಯಾಂ ಚ ತದಾತ್ವೇ ಚ ಸರ್ವೇಷಾಂ ತದ್ಧಿ ನೋ ಹಿತಮ್ ।
ಅನುಬಂಧೇ ಚ ಕಲ್ಯಾಣಂ ಯದ್ವಚೋ ಬ್ರಹ್ಮವಾದಿನಃ ॥೮॥

ವ್ಯಾಸ-ಭೀಷ್ಮ-ಕೃಷ್ಣರ ಮಾತುಗಳು ನಮಗೆ ಈಗಾಗಲಿ, ಮುಂದಾಗಲಿ ಕಲ್ಯಾಣಕ್ಕೆ ಕಾರಣಗಳಾಗಿವೆ. ಬ್ರಹ್ಮವಾದಿಗಳ ಮಾತು ನಮ್ಮ ಶ್ರೇಯಸ್ಸಿಗೆ ಕಾರಣವಾದವುಗಳು.

ಇಯಂ ಹಿ ವಸುಧಾ ಸರ್ವಾ ಕ್ಷೀಣರತ್ನಾ ಕುರೂದ್ವಹಾಃ ।
ತಚ್ಚಾಚಷ್ಟ ಬಹು ವ್ಯಾಸೋ ಮರುತ್ತಸ್ಯ ಧನಂ ನೃಪಾಃ ॥೯॥

ಈ ಸಮಗ್ರ ಭೂಮಂಡಲವು ರತ್ನಗಳಿಂದ, ಐಶ್ವರ್ಯದಿಂದ ಕ್ಷೀಣವಾಗಿದೆ. ಕುರುಕುಲಶ್ರೇಷ್ಠರೇ, ಆದ್ದರಿಂದಲೇ ವೇದವ್ಯಾಸದೇವರು ಮರುತ್ತನ ಧನದ ಬಗ್ಗೆ ನಮಗೆ ತಿಳಿಸಿರುತ್ತಾರೆ.

ಯದ್ಯೇತದ್ ವೋ ಬಹುಮತಂ ಮನ್ಯಧ್ವಂ ವಾ ಕ್ಷಮಂ ಯದಿ ।
ತದಾನಯಾಮಹೇ ಸರ್ವೇ ಕಥಂ ವಾ ಭೀಮ ಮನ್ಯಸೇ ॥೧೦॥

ನೀವು ಮರುತ್ತನು ಇಟ್ಟಿರುವ ಐಶ್ವರ್ಯವು ಸಾಕೆಂದು ತಿಳಿಯುವಿರಾದರೆ, ವ್ಯಾಸರ ಮಾತು ಯೋಗ್ಯವೆನಿಸಿದಾದಲ್ಲಿ, ಆ ಸಂಪತ್ತನ್ನು ತರುವ ಅರ್ಹತೆಯನ್ನು ಪಡೆದಿದ್ದೇವೆ ಎಂದು ಭಾವಿಸಿದ್ದಲ್ಲಿ, ವ್ಯಾಸರು ಹೇಳಿದಂತೆ ಆ ಐಶ್ವರ್ಯವನ್ನು ತೆಗೆದುಕೊಂಡು ಬರೋಣ. ಭೀಮನೇ, ಇದಕ್ಕೆ ನಿನ್ನ ವಿಚಾರವೇನು?

ವೈಶಂಪಾಯನಃ

ಇತ್ಯುಕ್ತವಾಕ್ಯೇ ನೃಪತೌ ತದಾ ಕುರುಕುಲೋದ್ವಹ ।
ಭೀಮಸೇನೋ ನೃಪಶ್ರೇಷ್ಠಂ ಪ್ರಾಂಜಲಿರ್ವಾಕ್ಯಮಬ್ರವೀತ್ ॥೧೧॥

ವೈಶಂಪಾಯನ– ಈ ವಿಷಯದಲ್ಲಿ ಧರ್ಮರಾಜನು ಹೀಗೆ ಹೇಳುತ್ತಿರಲು ಕುರುಕುಲಶ್ರೇಷ್ಠನಾದ ಭೀಮಸೇನನು ಧರ್ಮರಾಜನನ್ನು ಕುರಿತು, ಕೈಮುಗಿದು ಇಂತು ನುಡಿದನು.

ಭೀಮಸೇನಃ

ರೋಚತೇ ಮೇ ಮಹಾಬಾಹೋ ಯದಿದಂ ಭಾಷಿತಂ ತ್ವಯಾ ।
ವ್ಯಾಸಾಖ್ಯಾತಸ್ಯ ವಿತ್ತಸ್ಯ ಸಮುಪಾನಯನಂ ಪ್ರತಿ ॥೧೨॥

ತತ್ ಪ್ರಾಪ್ನುಯಾಮಹೇ ಧರ್ಮಾದ್ ಧನಮುದ್ವೀಕ್ಷಿತಂ ಪ್ರಭೋ ।
ಕೃತಮೇವ ಮಹಾರಾಜ ಭವೇದಿತಿ ಮತಿರ್ಮಮ ॥೧೩॥

ಭೀಮಸೇನ– ಮಹಾಬಾಹುವಾದ ಧರ್ಮರಾಜನೇ, ವೇದವ್ಯಾಸರು ಹೇಳಿದ ಮರುತ್ತನ ಐಶ್ವರ್ಯವನ್ನು ತರುವ ವಿಷಯದಲ್ಲಿ ಯಾವ ಮಾತುಗಳನ್ನು ನೀನು ಆಡಿದ್ದೀಯೋ ಪ್ರಭುವೇ, ಆ ಮರುತ್ತನ ಐಶ್ವರ್ಯವನ್ನು ತರುವ ವಿಷಯದಲ್ಲಿ ನಾನು ಉತ್ಸುಕನಾಗಿದ್ದೇನೆ. ಧರ್ಮದಿಂದ ಆ ಧನವನ್ನು ನಾವು ಪಡೆದುಕೊಂಡಲ್ಲಿ ಯಜ್ಞಕ್ಕೆ ಸಂಬಂಧವಾದ ಸಕಲ ಕರ್ಮಗಳೂ ಮುಗಿದಂತೆಯೇ ಸರಿ ಎಂದು ನನಗನಿಸುತ್ತಿದೆ.

ತೇ ವಯಂ ಪ್ರಣಿಪಾತೇನ ಗಿರೀಶಸ್ಯ ಮಹಾತ್ಮನಃ ।
ತದಾನಯಾಮ ಭದ್ರಂ ತೇ ತಮಭ್ಯರ್ಚ್ಯ ಕಪರ್ದಿನಮ್ ॥೧೪॥

ಮಹಾರಾಜನೇ, ಮಹಾತ್ಮನಾದ ಗೌರೀಶನಿಗೆ ನಾವೆಲ್ಲರೂ ನಮಸ್ಕರಿಸಿ, ಅವನನ್ನು ಆರಾಧಿಸಿ, ಅವನ ಅನುಗ್ರಹದಿಂದಲೇ ಆ ಸಂಪತ್ತನ್ನು ತೆಗೆದುಕೊಂಡು ಬರೋಣ.

ತಂ ವಿಭುಂ ದೇವದೇವೇಶಂ ಶೂಲಪಾಣಿಂ ತ್ರಿಲೋಚನಮ್ ।
ಅನಾದಿನಿಧನಂ ಶಂಭುಂ ನಮಸ್ಯಾಮ ಮಹೇಶ್ವರಮ್ ॥೧೫॥

ದೇವದೇವೇಶನಾದ, ಶೂಲಪಾಣಿಯಾದ, ಶಕ್ತನಾದ, ತ್ರಿಲೋಕೇಶನಾದ, ಅನಾದಿ ನಿಧನನೆನಿಸಿದ, ಮಹೇಶ್ವರನಾದ ಶಂಭುವನ್ನು ನಾವೆಲ್ಲರೂ ನಮಸ್ಕರಿಸೋಣ.

ಲೋಕನಾಥಂ ಗಣಾಧ್ಯಕ್ಷಂ ತಸ್ಯೈವಾನುಚರಾನ್ ಸ್ಥಿತಾನ್ ।
ಪ್ರಸಾದ್ಯಾರ್ಥಮವಾಪ್ಸ್ಯಾಮೋ ಮನೋ ವಾಗ್ಬುದ್ಧಿಕರ್ಮಭಿಃ ॥೧೬॥

ಲೋಕನಾಥನಾದ, ಗಣಾಧ್ಯಕ್ಷನಾದ, ಮಹಾರುದ್ರನನ್ನು, ಅವನ ಅನುಚರರನ್ನು ಸಂತೋಷಪಡಿಸಿ, ಮನಸ್ಸು, ಮಾತು, ಬುದ್ಧಿ, ಕರ್ಮಗಳಿಂದ ಆ ಸಂಪತ್ತನ್ನು ಪಡೆಯೋಣ.

ರಕ್ಷಂತಿ ಯೇ ಚ ತದ್ ದ್ರವ್ಯಂ ಕಿನ್ನರಾ ರೌದ್ರದರ್ಶನಾಃ ।
ತೇ ಚ ವಶ್ಯಾ ಭವಿಷ್ಯಂತಿ ಪ್ರಸನ್ನೇ ವೃಷಭಧ್ವಜೇ ॥೧೭॥

ಭಯಂಕರ ದರ್ಶನವುಳ್ಳ ಕಿನ್ನರರು ಆ ದ್ರವ್ಯವನ್ನು ರಕ್ಷಿಸುತ್ತಿದ್ದಾರೆ. ಮಹಾರುದ್ರನು ನಮ್ಮಲ್ಲಿ ಪ್ರಸನ್ನನಾಗಲು ಆ ಕಿನ್ನರರು ನಮಗೆ ವಶರಾಗುತ್ತಾರೆ.

ಸ ಹಿ ದೇವಃ ಪ್ರಸನ್ನಾತ್ಮಾ ಭಕ್ತಾನಾಂ ಪರಮೇಶ್ವರಃ ।
ದದಾತ್ಯಮರತಾಂ ಚಾಪಿ ಕಿಂ ಪುನಃ ಕಾಂಚನಂ ಪ್ರಭುಃ ॥೧೮॥

ಭಕ್ತರ ವಿಷಯದಲ್ಲಿ ಪ್ರಸನ್ನಾತ್ಮನಾದ ಪರಮೇಶ್ವರನು ಶಕ್ತನಾಗಿದ್ದಾನೆ. ನಮ್ಮ ಪಾಲಿಗೆ ಅಮರತ್ವವನ್ನೂ ನೀಡುತ್ತಾನೆಂದ ಬಳಿಕ ಬಂಗಾರವನ್ನು ಕೊಡದಿರುವನೆ?

ವನಸ್ಥಸ್ಯ ಪುರಾ ಜಿಷ್ಣೋರಸ್ತ್ರಂ ಪಾಶುಪತಂ ಮಹತ್ ।
ರೌದ್ರಂ ಬ್ರಹ್ಮಶಿರಶ್ಚಾದಾತ್ ಪ್ರಸನ್ನಃ ಕಿಂ ಪುನರ್ಧನಮ್ ॥೧೯॥

ಹಿಂದೆ ಜಯಶೀಲನಾದ ಅರ್ಜುನನಿಗೆ ಮಹತ್ತರವಾದ ಪಾಶುಪತಾಸ್ತ್ರವನ್ನೇ ನೀಡಿದ್ದಾನೆ. ಭಯಂಕರವಾದ ಬ್ರಹ್ಮಶಿರೋಸ್ತ್ರವನ್ನು ಪ್ರಸನ್ನನಾಗಿ ಕೊಟ್ಟಿರುವ ಮಹಾರುದ್ರನು ಧನವನ್ನು ಕೊಡದಿರುವನೆ?

ವಯಂ ಸರ್ವೇ ಚ ತದ್ಭಕ್ತಾಃ ಸ ಚಾಸ್ಮಾಕಂ ಪ್ರಸೀದತಿ ।
ತತ್ಪ್ರಸಾದಾದ್ ವಯಂ ರಾಜ್ಯಂ ಪ್ರಾಪ್ತಾಃ ಕೌರವನಂದನ ॥೨೦॥

ನಾವೆಲ್ಲರೂ ಅವನ ಭಕ್ತರೇ ಆಗಿದ್ದೇವೆ. ಆದ್ದರಿಂದ ನಮ್ಮ ವಿಷಯದಲ್ಲಿ ಮಹಾರುದ್ರನು ಪ್ರಸನ್ನನಾಗುತ್ತಾನೆ. ಅವನ ಅನುಗ್ರಹದಿಂದ ನಾವೆಲ್ಲರೂ ರಾಜ್ಯವನ್ನು ಹೊಂದಿದ್ದೇವೆ.

ಅಭಿಮನ್ಯೋರ್ವಧೇ ವೃತ್ತೇ ಪ್ರತಿಜ್ಞಾತೇ ಧನಂಜಯೇ ।
ಜಯದ್ರಥವಧಾರ್ಥಾಯ ಸ್ವಪ್ನೇ ಲೋಕಗುರುರ್ನಿಶಿ ॥೨೧॥

ಪ್ರಸಾದ್ಯ ಲಬ್ಧವಾನಸ್ತ್ರಮರ್ಜುನಃ ಸಹಕೇಶವಃ ॥೨೨॥

ಅಭಿಮನ್ಯುವಿನ ವಧೆಯು ನಡೆಯುತ್ತಿರಲು, ಧನಂಜಯನು ಜಯದ್ರಥನ ವಧೆಗಾಗಿ ಪ್ರತಿಜ್ಞೆಯನ್ನು ಮಾಡಿದನು. ಅಂದು ರಾತ್ರಿ ಲೋಕಗುರುವಾದ ಮಹಾರುದ್ರನು ಸ್ವಪ್ನದಲ್ಲಿ ಕಾಣಿಸಿ, ಅಸ್ತ್ರವನ್ನು ಕೃಷ್ಣನ ಜೊತೆಗಿದ್ದ ಅರ್ಜುನನಿಗೆ ಪ್ರಸನ್ನತೆಯಿಂದಲೇ ನೀಡಿದನು.

ತತಃ ಪ್ರಭಾತಾಂ ರಜನೀಂ ಫಲ್ಗುನಸ್ಯಾಗ್ರತಃ ಪ್ರಭುಃ ।
ಜಘಾನ ಸೈನ್ಯಂ ಶೂಲೇನ ಪ್ರತ್ಯಕ್ಷಂ ಸವ್ಯಸಾಚಿನಃ ॥೨೩॥

ಮರುದಿನ ಪ್ರಾತಃಕಾಲ ಅರ್ಜುನನ ಮುಂಭಾಗದಲ್ಲಿಯೇ ಸಮಗ್ರ ಸೈನ್ಯವನ್ನು ಸವ್ಯಸಾಚಿಯು ನೋಡುತ್ತಿರುವಾಗಲೇ ಮಹಾರುದ್ರನು ಸಂಹರಿಸಿದನು.

ಕಸ್ತಾಂ ಸೇನಾಂ ಮಹಾರಾಜ ಮನಸಾऽಪಿ ಪ್ರಧರ್ಷಯೇತ್ ।
ದ್ರೋಣಕರ್ಣಮುಖೈರ್ಯುಕ್ತಾಂ ಮಹೇಷ್ವಾಸೈಃ ಪ್ರಹಾರಿಭಿಃ ॥೨೪॥

ಋತೇ ದೇವಾನ್ಮಹೇಷ್ವಾಸಾದ್ ಬಹುರೂಪಾನ್ಮಹೇಶ್ವರಾತ್ ॥೨೫॥

ದ್ರೋಣ-ಕರ್ಣ ಮೊದಲಾದವರಿಂದ ಕೂಡಿದ ಶ್ರೇಷ್ಠ ಅಸ್ತ್ರಜ್ಞರ ಪ್ರಹಾರಗಳಿಂದ ತುಂಬಿದ ಆ ಸೇನೆಯನ್ನು, ಮಹಾರಾಜನೇ, ಯಾರಿಂದಲೂ ಮನಸ್ಸಿನಿಂದಲೂ ಎದುರಿಸಲು ಸಾಧ್ಯವಾಗಿರಲಿಲ್ಲ. ದೇವಶ್ರೇಷ್ಠನಾದ, ಬಹುರೂಪವನ್ನು ಧರಿಸುವ, ಮಹೇಶ್ವರನೆನಿಸಿದ, ಮಹಾಧನುರ್ಧಾರಿಯಾದ ಈಶ್ವರನನ್ನು ಹೊರತು ಯಾರಿಂದ ಎದುರಿಸಲು ಸಾಧ್ಯವಾಗಿತ್ತು ?

ತಸ್ಯೈವ ಚ ಪ್ರಸಾದೇನ ನಿಹತಾಃ ಶತ್ರವಸ್ತವ ।
ಅಶ್ವಮೇಧಸ್ಯ ಸಂಸಿದ್ಧಿಂ ಸ ತು ಸಂಪಾದಯಿಷ್ಯತಿ ॥೨೬॥

ಅವನ ಅನುಗ್ರಹದಿಂದಲೇ ಶತ್ರುಗಳೆಲ್ಲರೂ ಕೊಲ್ಲಲ್ಪಟ್ಟಿದ್ದಾರೆ. ಆದ್ದರಿಂದ ಅಶ್ವಮೇಧ ಯಜ್ಞದ ಪೂರ್ಣತೆಯೂ ಕೂಡ ಅವನಿಂದಲೇ ಉಂಟಾಗುತ್ತದೆ.

ವೈಶಂಪಾಯನಃ

ಶ್ರುತ್ವೈವ ಬ್ರುವತಸ್ತಸ್ಯ ವಾಕ್ಯಂ ಭೀಮಸ್ಯ ಪಾರ್ಥಿವ ।
ಪ್ರೀತೋ ಧರ್ಮಾತ್ಮಜೋ ರಾಜಾ ಬಭೂವಾತೀವ ಭಾರತ ॥೨೭॥

ವೈಶಂಪಾಯನ– ಜನಮೇಜಯನೇ, ಭೀಮನು ಧರ್ಮರಾಜನ ಮುಂದೆ ಹೀಗೆ ನುಡಿಯುತ್ತಿರಲು ಧರ್ಮರಾಜನು ಅತ್ಯಂತ ಸಂತುಷ್ಟನಾದನು.

ಅರ್ಜುನಪ್ರಮುಖಾಶ್ಚೈವ ತಥೇತ್ಯೇವಾಬ್ರುವನ್ ಮುದಾ ॥೨೮॥

ಅರ್ಜುನನೇ ಮೊದಲಾದವರೆಲ್ಲರೂ ಭೀಮನ ಮಾತನ್ನು ಹಾಗೆ ಆಗಲೆಂದು ಸಂತೋಷದಿಂದ ಅನುಮೋದಿಸಿದರು.

ಕೃತ್ವಾ ತು ಪಾಂಡವಾಃ ಸರ್ವೇ ರತ್ನಾಹರಣನಿಶ್ಚಯಮ್ ।
ಸೇನಾಮಾಜ್ಞಾಪಯಾಮಾಸುಃ ನಕ್ಷತ್ರೇऽಹನಿ ಪೂಜಿತೇ ॥೨೯॥

ಪಾಂಡವರೆಲ್ಲರೂ ರತ್ನಾಹರಣ ನಿಶ್ಚಯವನ್ನು ಮಾಡಿಕೊಂಡು, ಶ್ರೇಷ್ಠವಾದ ನಕ್ಷತ್ರದಿಂದ ಕೂಡಿದ ಶುಭದಿನದಲ್ಲಿ ಸೇನೆಗೆ ಸಜ್ಜಾಗುವಂತೆ ಆಜ್ಞಾಪಿಸಿದರು.

ತತೋ ಯಯುಃ ಪಾಂಡುಸುತಾ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಚ ।
ಅರ್ಚಯಿತ್ವಾ ಸುರಶ್ರೇಷ್ಠಂ ಪೂರ್ವಮೇವ ಮಹೇಶ್ವರಮ್ ॥೩೦॥

ಮೋದಕೈಃ ಪಾಯಸೇನಾಥ ಮಾಷಾಪೂಪೈಸ್ತಥೈವ ಚ ।
ಆರಾಧ್ಯ ಚ ಮಹಾತ್ಮಾನಂ ಪ್ರಯಯುರ್ಮುದಿತಾ ಭೃಶಮ್ ॥೩೧॥

ಬಳಿಕ ಪಾಂಡವರೆಲ್ಲರೂ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಪಡೆದುಕೊಂಡು, ಸುರಶ್ರೇಷ್ಠನಾದ ಮಹಾರುದ್ರನನ್ನೂ ಮೊದಲೇ ಚೆನ್ನಾಗಿ ಆರಾಧಿಸಿ, ಮೋದಕಗಳಿಂದ, ಪಾಯಸದಿಂದ, ಉದ್ದಿನ ಅಪೂಪಗಳಿಂದಲೂ ಮಹಾತ್ಮನಾದ ಮಹಾರುದ್ರನನ್ನು ಆರಾಧಿಸಿ, ಸಂತುಷ್ಟರಾಗಿ, ವೇಗವಾಗಿ ಐಶ್ವರ್ಯವನ್ನು ತರಲು ಹೊರಟರು.

ತೇಷಾಂ ಪ್ರಯಾಸ್ಯತಾಂ ತತ್ರ ಮಂಗಲಾನಿ ಶುಭಾನ್ಯಥ ।
ಪ್ರಾಹುಃ ಪ್ರಹೃಷ್ಟಮನಸೋ ದ್ವಿಜಾಗ್ರ್ಯಾ ನಾಗರಾಶ್ಚ ಯೇ ॥೩೨॥

ಅವರು ಪ್ರಯಾಣಕ್ಕೆ ಹೊರಟಿರುವಾಗ ಮಂಗಳಮಯವಾದ ಶಕುನಗಳು ಕಂಡುಬಂದವು. ಅದನ್ನು ಕಂಡು ಸಂತುಷ್ಟರಾದ ಬ್ರಾಹ್ಮಣ ಶ್ರೇಷ್ಠರು, ಪ್ರಜಾಜನರು ಶುಭ ಶಕುನಗಳನ್ನು ಹೇಳಿದರು.

ತತಃ ಪ್ರದಕ್ಷಿಣೀಕೃತ್ಯ ಶಿರೋಭಿಃ ಪ್ರಣಿಪತ್ಯ ಚ ।
ಬ್ರಾಹ್ಮಣಾನಗ್ನಿಸಹಿತಾನ್ ಪ್ರಯಯುಃ ಪಾಂಡವರ್ಷಭಾಃ ॥೩೩॥

ಬಳಿಕ ಪಾಂಡವರು ಬ್ರಾಹ್ಮಣರನ್ನು ಅಗ್ನಿಸಹಿತರಾಗಿರುವಾಗ ಪ್ರದಕ್ಷಿಣೆ ಮಾಡಿ, ನಮಸ್ಕಾರವನ್ನು ಮಾಡಿ ಅಲ್ಲಿಂದ ಹೊರಟರು.

ಸಮನುಜ್ಞಾಪ್ಯ ರಾಜಾನಂ ಪುತ್ರಶೋಕಸಮಾಹತಮ್ ।
ಧೃತರಾಷ್ಟ್ರಂ ಸಭಾರ್ಯಂ ವೈ ಪೃಥಾಂ ಚ ಪೃಥುಲೋಚನಾಮ್ ॥೩೪॥

ಮೂಲೇ ನಿಕ್ಷಿಪ್ಯ ಕೌರವ್ಯಂ ಯುಯುತ್ಸುಂ ಧೃತರಾಷ್ಟ್ರಜಮ್ ॥೩೫॥

ಯಾತ್ರೆಗೆ ಹೊರಡುವ ಮೊದಲು ಪುತ್ರಶೋಕದಿಂದ ಕಂಗಾಲಾಗಿರುವ ಧೃತರಾಷ್ಟ್ರ, ಗಾಂಧಾರಿಯರ, ವಿಸ್ತಾರವಾದ ದೃಷ್ಟಿಯುಳ್ಳ ಕುಂತಿಯ ಆಶೀರ್ವಾದವನ್ನು ಪಡೆದು, ಧೃತರಾಷ್ಟ್ರನ ಮಗನಾದ ಯುಯುತ್ಸುವಿನ ಅಧೀನದಲ್ಲಿ ರಾಜ್ಯವನ್ನು ಒಪ್ಪಿಸಿ ಹೊರಟರು.

ಸಂಪೂಜ್ಯಮಾನಾಃ ಪೌರೈಶ್ಚ ಬ್ರಾಹ್ಮಣೈಶ್ಚ ಮಹರ್ಷಿಭಿಃ ।
ಪ್ರಯಯುಃ ಪಾಂಡವಾ ವೀರಾ ನಿಯಮಸ್ಥಾಃ ಶುಚಿವ್ರತಾಃ ॥೩೬॥

ವಿದ್ವಾಂಸರಾದ ಬ್ರಾಹ್ಮಣರಿಂದಲೂ, ಮಹರ್ಷಿಗಳಿಂದಲೂ, ನಾಗರಿಕರಿಂದಲೂ ಸಂಪೂಜಿತರಾದ ವೀರರಾದ ಪಾಂಡವರು ಶುಚಿವ್ರತರಾಗಿ, ನಿಯಮಸ್ಥರಾಗಿ ಪಟ್ಟಣದಿಂದ ಹೊರಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ದ್ರವ್ಯಾನಯನಾರ್ಥಗಮನಪ್ರಕಾರಕಥನಂ ನಾಮ
ತ್ರಿಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ನಾಲ್ಕನೆಯ ಅಧ್ಯಾಯ

ಯುಧಿಷ್ಠಿರನು ಹಿಮವತ್‌ಪರ್ವತದ ಬಳಿಗೆ ಸೇನಾ ಸಹಿತವಾಗಿ ಬಂದುದು. ಅಲ್ಲಿರುವ ಬ್ರಾಹ್ಮಣರ ಪ್ರೇರಣೆಯಂತೆ ಉಪವಾಸವೇ ಮೊದಲಾದ ವ್ರತಗಳನ್ನು ಆಚರಿಸಿ ರಾತ್ರಿಯನ್ನು ಕಳೆದುದು.

ವೈಶಂಪಾಯನಃ

ತತಸ್ತೇ ಪ್ರಯಯುರ್ಹೃಷ್ಟಾಃ ಸಬಲಾಃ ಸಹವಾಹನಾಃ ।
ರಥಘೋಷೇಣ ಮಹತಾ ಪೂರಯಂತೋ ವಸುಂಧರಾಮ್ ॥೧॥

ವೈಶಂಪಾಯನ– ಜನಮೇಜಯನೇ, ಸಂತುಷ್ಟರಾದ ಮನುಷ್ಯರಿಂದ, ವಾಹನಗಳಿಂದ ಕೂಡಿ ಪ್ರಹೃಷ್ಟರಾದ ಪಾಂಡವರು ರಥಗಳ ಶಬ್ದದಿಂದ ಭೂಮಿಯನ್ನು ತುಂಬುತ್ತಾ ಪ್ರಯಾಣವನ್ನು ಬೆಳೆಸಿದರು.

ಸಂಸ್ತೂಯಮಾನಾಃ ಸ್ತುತಿಭಿಃ ಸೂತಮಾಗಧವಂದಿಭಿಃ ।
ಸ್ವೇನ ಸೈನ್ಯೇನ ಸಹಿತಾ ಯಥಾऽऽದಿತ್ಯಾಃ ಸ್ವರಶ್ಮಿಭಿಃ ॥೨॥

ಸೂತ, ಮಾಗಧ, ವಂದಿಗಳಿಂದ ಹೊಗಳಿಸಿಕೊಳ್ಳುತ್ತಿದ್ದ ಪಾಂಡವರು, ದ್ವಾದಶಾದಿತ್ಯರು ತಮ್ಮ ರಶ್ಮಿಗಳಿಂದ ಪ್ರಕಾಶಿಸುವಂತೆ ತಮ್ಮ ಸೈನ್ಯಗಳಿಂದ ಪರಿವೃತರಾಗಿ ಪ್ರಕಾಶಿಸುತ್ತಿದ್ದರು.

ಪಾಂಡುರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ಬಭೌ ಯುಧಿಷ್ಠಿರಸ್ತತ್ರ ಪೌರ್ಣಮಾಸ್ಯಾಮಿವೋಡುರಾಟ್ ॥೩॥

ತಲೆಯ ಮೇಲೆ ಧರಿಸಿದ ಶ್ವೇತಚ್ಛತ್ರವೆಂಬ ಪಡೆಯುಳ್ಳ ಯುಧಿಷ್ಠಿರನು ಹುಣ್ಣಿಮೆಯ ಚಂದ್ರನಂತೆ ಶೋಭಿಸಿದನು.

ಜಯಾಶಿಷಃ ಪ್ರಹೃಷ್ಟಾಸ್ತೇ ನರಾಣಾಂ ಪಥಿ ಪಾರ್ಥಿವಾಃ ।
ಪ್ರತ್ಯಗೃಹ್ಣನ್ ಯಥಾನ್ಯಾಯಂ ಯಥಾವದ್ ಭರತರ್ಷಭ ॥೪॥

ಪಾಂಡವರೆಲ್ಲರೂ ದಾರಿಯಲ್ಲಿ ಮನುಷ್ಯರ ಜಯಘೋಷಗಳಿಂದ, ಆಶೀರ್ವಚನಗಳಿಂದ ಸಂತುಷ್ಟರಾಗಿ ನೀಡುತ್ತಿದ್ದ ಅವರ ಪ್ರೀತಿಪೂರ್ವಕವಾದ ವಚನಗಳನ್ನೂ, ಪದಾರ್ಥಗಳನ್ನೂ ಯಥಾಯೋಗ್ಯವಾಗಿ ಸ್ವೀಕರಿಸುತ್ತಿದ್ದರು.

ತಥೈವ ಸೈನಿಕಾ ರಾಜನ್ ರಾಜಾನಮನುಯಾಂತಿ ಯೇ ।
ತೇಷಾಂ ಹಲಹಲಾಶಬ್ದೋ ದಿಗಂತಂ ವ್ಯಾಪ್ಯ ತಿಷ್ಠತಿ ॥೫॥

ಅದರಂತೆ ಧರ್ಮರಾಜನ ಸೈನಿಕರೆಲ್ಲರೂ ಧರ್ಮರಾಜನನ್ನು ಹಿಂಬಾಲಿಸುತ್ತಿದ್ದರು. ಅವರೆಲ್ಲರೂ ಸಾಗುವ ಹಲಹಲ ಎಂಬ ಶಬ್ದವು ದಿಗಂತ ವ್ಯಾಪಿಸಿತ್ತು.

ಸ ಸರಾಂಸಿ ನದೀಶ್ಚೈವ ವನಾನ್ಯುಪವನಾನಿ ಚ ।
ಅತ್ಯಕ್ರಾಮನ್ಮಹಾರಾಜೋ ಗಿರಿಂ ಚಾಪ್ಯನ್ವಪದ್ಯತ ॥೬॥

ಅವರೆಲ್ಲರೂ ಸರೋವರಗಳನ್ನೂ, ನದಿಗಳನ್ನೂ, ವನಗಳನ್ನೂ, ಉಪವನಗಳನ್ನೂ ಅತಿಕ್ರಮಿಸಿ ಹಿಮವದ್ ಪರ್ವತವನ್ನು ಸೇರಿದರು.

ತಸ್ಮಿನ್ ದೇಶೇ ಚ ರಾಜೇಂದ್ರ ಯತ್ರ ತದ್ ದ್ರವ್ಯಮುತ್ತಮಮ್ ।
ಚಕ್ರೇ ನಿವೇಶನಂ ರಾಜಾ ಪಾಂಡವಃ ಸಹಸೈನಿಕೈಃ ॥೭॥

ಆ ಹಿಮವದ್ ಪರ್ವತ ಪ್ರದೇಶದಲ್ಲಿ ವ್ಯಾಸರು ತಿಳಿಸಿದ ಉತ್ತಮವಾದ ದ್ರವ್ಯವು ಎಲ್ಲಿ ಇರುವುದೋ ಪಾಂಡವರೆಲ್ಲರೂ ಸೇನಾ ಸಹಿತರಾಗಿ ಅಲ್ಲಿಯೇ ಬೀಡುಬಿಟ್ಟರು.

ಶಿವೇ ದೇಶೇ ಸಮೇ ಚೈವ ತದಾ ಭರತಸತ್ತಮ ॥೮॥

ಪರಮಮಂಗಳವಾದ, ಸಮತಟ್ಟಾದ ಪ್ರದೇಶದಲ್ಲಿ ಅವರೆಲ್ಲರೂ ಕೂಡ ತಂಗಿದರು.

ಅಗ್ರತೋ ಬ್ರಾಹ್ಮಣಾನ್ ಕೃತ್ವಾ ತಪೋವಿದ್ಯಾದಮಾನ್ವಿತಾನ್ ।
ಪುರೋಹಿತಂ ಚ ಕೌರವ್ಯ ವೇದವೇದಾಂಗಪಾರಗಮ್ ॥೯॥

ಪ್ರಾನಿವೇಶಾತ್ತು ರಾಜಾನಂ ಬ್ರಾಹ್ಮಣಾಃ ಸಪುರೋಹಿತಾಃ ।
ಕೃತ್ವಾ ಶಾಂತಿಂ ಯಥಾನ್ಯಾಯಂ ಸರ್ವತಃ ಪರ್ಯವಾರಯನ್ ॥೧೦॥

ವೇದವೇದಾಂಗ ಪಾರಂಗತರಾದ ಧೌಮ್ಯರನ್ನು, ತಪಸ್ವಿಗಳೂ, ವಿದ್ವಾಂಸರೂ, ಜಿತೇಂದ್ರಿಯರೂ ಆಗಿದ್ದ ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು, ಯುಧಿಷ್ಠಿರನು ಶುಭಕರವಾದ, ಸಮತಟ್ಟಾದ ಪ್ರದೇಶದಲ್ಲಿ ಸೈನ್ಯದೊಂದಿಗೆ ಬಿಡಾರ ಹೂಡಿದನು. ಯುಧಿಷ್ಠಿರನೊಡನೆ ಆಗಮಿಸಿದ ರಾಜರು, ಮಂತ್ರಿಗಳು, ಬ್ರಾಹ್ಮಣರು ರಾಜನಿಗೆ ಯಥಾ ವಿಧಿಯಾಗಿ ಶಾಂತಿಕರ್ಮಗಳನ್ನು ಮಾಡಿಸಿ ಸುತ್ತಲೂ ಕುಳಿತುಕೊಂಡರು.

ಕೃತ್ವಾ ಮಧ್ಯೇ ಚ ರಾಜಾನಮಮಾತ್ಯಾಂಶ್ಚ ಯಥಾವಿಧಿ ।
ಷಟ್‌ಪದಂ ನವಸಂಸ್ಥಾನಂ ನಿವೇಶಂ ಚಕ್ರಿರೇ ಜನಾಃ ॥೧೧॥

ಧರ್ಮರಾಜನನ್ನು ಮಧ್ಯ ಮಾಡಿಕೊಂಡು ಮಂತ್ರಿಗಳು ಯಥಾವಿಧಿಯಾಗಿ ಆರು ರಾಜಮಾರ್ಗಗಳನ್ನು, ಒಂಬತ್ತು ನಿವೇಶನದ ಗುಂಪುಗಳನ್ನು ರಚಿಸಿದರು.

ಮತ್ತಾನಾಂ ವಾರಣೇಂದ್ರಾಣಾಂ ನಿವೇಶಂ ಚ ಯಥಾವಿಧಿ ।
ಕಾರಯಿತ್ವಾ ಸ ರಾಜೇಂದ್ರೋ ಬ್ರಾಹ್ಮಣಾನಿದಮಬ್ರವೀತ್ ॥೧೨॥

ಮದಭರಿತವಾದ ಆನೆಗಳಿಗೂ ಯಥಾಯೋಗ್ಯವಾಗಿ ಶಿಬಿರಗಳನ್ನು ಕಲ್ಪಿಸಿ, ರಾಜಶ್ರೇಷ್ಠನಾದ ಧರ್ಮರಾಜನು ಬ್ರಾಹ್ಮಣರುಗಳನ್ನುದ್ದೇಶಿಸಿ ಇಂತು ನುಡಿದನು.

ಯುಧಿಷ್ಠಿರಃ

ಅಸ್ಮಿನ್ ಕಾರ್ಯೇ ದ್ವಿಜಶ್ರೇಷ್ಠಾ ನಕ್ಷತ್ರೇ ದಿವಸೇ ಶುಭೇ ।
ಯಥಾ ಭವಂತೋ ಮನ್ಯಂತೇ ಕರ್ತುಮರ್ಹಂತಿ ತದ್ವಿದಃ ॥೧೩॥

ಯುಧಿಷ್ಠಿರ– ಬ್ರಾಹ್ಮಣರೇ, ಧನವನ್ನು ತರುವ ಕಾರ್ಯದಲ್ಲಿ ಯಾವ ನಕ್ಷತ್ರ, ಯಾವ ಶುಭದಿನವನ್ನು ಗುರುತು ಪಡಿಸುತ್ತೀರೋ ಅಂದಿನ ದಿನವೇ ಈ ಸಂಪತ್ತಿಗಾಗಿ ಕರ್ತವ್ಯವನ್ನು ಮಾಡಲು ಯೋಗ್ಯವಾಗಿದೆ ಎಂದು ಜ್ಞಾನಿಗಳಾದ ನೀವೆಲ್ಲರೂ ತಿಳಿದಿರುತ್ತೀರಿ.

ನ ನಃ ಕಾಲಾತ್ಯಯೋ ವೈ ಸ್ಯಾದ್ ಇಹೈವ ಪರಿತಿಷ್ಠತಾಮ್ ।
ಇತಿ ನಿಶ್ಚಿತ್ಯ ವಿಪ್ರೇಂದ್ರಾಃ ಕ್ರಿಯತಾಂ ಯದನಂತರಮ್ ॥೧೪॥

ಇಲ್ಲಿಯೇ ಹೆಚ್ಚು ಕಾಲಹರಣವಾಗದಂತೆ ಸಾಧ್ಯವಾದಷ್ಟು ಬೇಗ ಕಾರ್ಯಸಿದ್ಧಿಯು ನಡೆಯಬೇಕು. ಅದರಂತೆ ನೀವು ಆಶೀರ್ವದಿಸಿರಿ.

ವೈಶಂಪಾಯನಃ

ಶ್ರುತ್ವೈತದ್ ವಚನಂ ರಾಜ್ಞೋ ಬ್ರಾಹ್ಮಣಾಃ ಸಪುರೋಧಸಃ ।
ಇದಮೂಚುರ್ವಚೋ ಹೃಷ್ಟಾ ಧರ್ಮರಾಜಪ್ರಿಯೇಪ್ಸವಃ ॥೧೫॥

ವೈಶಂಪಾಯನ– ಧರ್ಮರಾಜನ ಈ ಮಾತುಗಳನ್ನು ಕೇಳಿಸಿಕೊಂಡ ಪುರೋಹಿತರೇ ಮುಖ್ಯರಾದ ಬ್ರಾಹ್ಮಣರು ಸಂತುಷ್ಟಮನಸ್ಕರಾಗಿ, ಧರ್ಮರಾಜನಿಗೆ ಪ್ರಿಯವನ್ನುಂಟು ಮಾಡುವ ದೃಷ್ಟಿಯಿಂದ ಈ ಮಾತನ್ನು ಆಡಿದರು.

ಬ್ರಾಹ್ಮಣಾಃ

ಅದ್ಯೈವ ನಕ್ಷತ್ರಮಹಶ್ಚ ಪುಣ್ಯಂ
ಯತಾಮಹೇ ಶ್ರೇಷ್ಠತಮಂ ಕ್ರಿಯಾಸು ।
ತಪೋಭಿರದ್ಯೇಹ ವಸಾಮ ರಾಜನ್
ಉಪೋಷ್ಯತಾಂ ಚಾಪಿ ಭವದ್ಭಿರದ್ಯ ॥೧೬॥

ಬ್ರಾಹ್ಮಣರು– ಮಹಾರಾಜನೇ, ಇಂದಿನ ದಿನವೇ ಪವಿತ್ರವಾದ ನಕ್ಷತ್ರದಿಂದ ಕೂಡಿದ ಶುಭದಿನವಾಗಿದೆ. ಆದ್ದರಿಂದ ಈ ಶ್ರೇಷ್ಠತಮವಾದ ಕರ್ಮವನ್ನು ಮಾಡಲು

ಇಂದೇ ಪ್ರಯತ್ನಿಸುತ್ತೇವೆ. ನಾವು ತಪಸ್ಸನ್ನು ಮಾಡುತ್ತಾ ವಾಸ ಮಾಡುತ್ತೇವೆ. ಉಪವಾಸವಿದ್ದು ಯಾವ ಆಹಾರವನ್ನೂ ತೆಗೆದುಕೊಳ್ಳದೆ ನಿನಗಾಗಿ ಶ್ರೇಯಸ್ಸನ್ನು ಬಯಸುತ್ತೇವೆ.

ವೈಶಂಪಾಯನಃ

ಶ್ರುತ್ವಾ ತು ತೇಷಾಂ ದ್ವಿಜಸತ್ತಮಾನಾಂ
ಕೃತೋಪವಾಸಾ ರಜನೀಂ ನರೇಂದ್ರಾಃ ।
ಊಷುಃ ಪ್ರತೀತಾಃ ಕುಶಸಂಸ್ತರೇಷು
ಯಥಾಧ್ವರೇಷೂಜ್ಜ್ವಲಿತಾ ಹವ್ಯವಾಹಾಃ ॥೧೭॥

ವೈಶಂಪಾಯನ– ಜನಮೇಜಯನೇ, ದ್ವಿಜಶ್ರೇಷ್ಠರ ಈ ಮಾತನ್ನು ಕೇಳಿಸಿಕೊಂಡು ಸಂತುಷ್ಟರಾದ ರಾಜರೆಲ್ಲರೂ ಅಂದು ಉಪವಾಸವೇ ಇದ್ದು, ಆ ರಾತ್ರಿ ಯಾವ ಆಹಾರವನ್ನು ತೆಗೆದುಕೊಳ್ಳದೆ, ದರ್ಭೆಯನ್ನೇ ಹಾಸಿಕೊಂಡು ಮಲಗಿದರು. ಆ ಪಂಚಪಾಂಡವರು ಮಲಗಿದ್ದನ್ನು ನೋಡಿದರೆ ಯಜ್ಞದಲ್ಲಿ ಪ್ರಜ್ವಲಿಸುವ ಪಂಚಾಗ್ನಿಗಳಂತೆಯೇ ಕಾಣುತ್ತಿದ್ದರು.

ತತೋ ನಿಶಾ ಸಾ ವ್ಯಗಮನ್ಮಹಾತ್ಮನಾಂ
ಸಂಶೃಣ್ವತಾಂ ವಿಪ್ರಸಮೀರಿತಾ ಗಿರಃ ।
ತತಃ ಪ್ರಭಾತೇ ವಿಮಲೇ ದ್ವಿಜರ್ಷಭಾ
ವಚೋಽಬ್ರುವನ್ ಧರ್ಮಸುತಂ ನರಾಧಿಪಮ್ ॥೧೮॥

ಬ್ರಾಹ್ಮಣರು ಹೇಳುತ್ತಿರುವ ಮಧುರವಾದ ಮಾತುಗಳನ್ನು ಕೇಳುವಾಗಲೇ ಮಹಾತ್ಮರಾದ ಪಾಂಡವರಿಗೆ ಆ ರಾತ್ರಿಯು ಕಳೆದು ಹೋಯಿತು. ನಿರ್ಮಲವಾದ ಪ್ರಾತಃಕಾಲದ ಸಮಯದಲ್ಲಿ ಬ್ರಾಹ್ಮಣಶ್ರೇಷ್ಠರು ನರಶ್ರೇಷ್ಠನಾದ ಧರ್ಮಜನ ಬಳಿ ಬಂದು ಹೀಗೆ ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ದ್ರವ್ಯಾನಯನೇ ದೇಹಶುದ್ಧಿಕಥನಂ ನಾಮ
ಚತುಃಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೈದನೆಯ ಅಧ್ಯಾಯ

ಯುಧಿಷ್ಠಿರನು ಬ್ರಾಹ್ಮಣರ ಆದೇಶದಂತೆ ಮಹಾರುದ್ರನನ್ನು, ಭೂತಗಣಗಳನ್ನು ಬಲಿಹರಣಾದಿಗಳಿಂದ ಸಂತೋಷಪಡಿಸಿದುದು. ಭೂಮಿಯನ್ನಗೆದು ಧನರಾಶಿಯನ್ನು ತುಂಬಿಕೊಂಡು, ಹಸ್ತಿನಾವತಿಯ ಕಡೆ ಪ್ರಯಾಣ ಬೆಳೆಸಿದುದು.

ಬ್ರಾಹ್ಮಣಾಃ

ಕ್ರಿಯತಾಮುಪಹಾರೋಽದ್ಯ ತ್ರ್ಯಂಬಕಸ್ಯ ಮಹಾತ್ಮನಃ ।
ಕೃತ್ವೋಪಹಾರಂ ನೃಪತೇ ತತಃ ಸ್ವಾರ್ಥಂ ಯತಾಮಹೇ ॥೧॥

ಬ್ರಾಹ್ಮಣರು– ರಾಜಶ್ರೇಷ್ಠನೇ, ಆರಂಭದಲ್ಲಿ ತ್ರ್ಯಂಬಕನಾದ ಶಂಕರನಿಗೆ ಬಲಿಯನ್ನು ಸಮರ್ಪಿಸು. ಬಳಿಕ ನಮ್ಮ ಇಷ್ಟಾರ್ಥವನ್ನು ಪಡೆಯೋಣ.

ವೈಶಂಪಾಯನಃ

ತೇಷಾಂ ತು ವಚನಂ ಶ್ರುತ್ವಾ ಬ್ರಾಹ್ಮಣಾನಾಂ ಯುಧಿಷ್ಠಿರಃ ।
ಗಿರೀಶಸ್ಯ ಯಥಾನ್ಯಾಯಮುಪಹಾರಮುಪಾಹರತ್ ॥೨॥

ವೈಶಂಪಾಯನ– ಜನಮೇಜಯನೆ, ಯುಧಿಷ್ಠಿರನು ಬ್ರಾಹ್ಮಣರ ಮಾತಿನಂತೆ ಗಿರೀಶನನ್ನು ವಿಧಿವತ್ತಾಗಿ ಪೂಜಿಸಿ, ನೈವೇದ್ಯವನ್ನು ಸಮರ್ಪಿಸಿದನು.

ಆಜ್ಯೇನ ತರ್ಪಯಿತ್ವಾಽಗ್ನಿಂ ವಿಧಿವತ್ ಸಂಸ್ಕೃತೇನ ಹ ।
ಮಂತ್ರಸಿದ್ಧಂ ಚರುಂ ಕೃತ್ವಾ ಪುರೋಧಾಃ ಪ್ರಯಯೌ ತದಾ ॥೩॥

ತುಪ್ಪದಿಂದ ಅಗ್ನಿದೇವನನ್ನು ವಿಧಿವತ್ತಾಗಿ ತೃಪ್ತಿಗೊಳಿಸಿ, ಮಂತ್ರಪೂರ್ವಕವಾಗಿ ಚರುವನ್ನು ಸಿದ್ಧಮಾಡಿಕೊಂಡು, ರುದ್ರನಿಗೆ ಬಲಿಯನ್ನು ಕೊಡುವ ದೃಷ್ಟಿಯಿಂದ ಪುರೋಹಿತರ ಸಹಿತವಾಗಿ ಬಂದರು.

ಸ ಗೃಹೀತ್ವಾ ಸುಮನಸೋ ಮಂತ್ರಪೂತಾ ಜನಾಧಿಪ ।
ಮೋದಕೈಃ ಪಾಯಸೇನಾಥ ಮಾಂಸೈಶ್ಚೋಪಾಹರದ್ ಬಲಿಮ್ ॥೪॥

ಸುಮನೋಭಿಶ್ಚ ಚಿತ್ರಾಭಿರ್ಮಾಲ್ಯೈರುಚ್ಚಾವಚೈರಪಿ ॥೫॥

ಪುರೋಹಿತರೆಲ್ಲರೂ ಮಂತ್ರಪೂತವಾದ ಪುಷ್ಪಗುಚ್ಛವನ್ನು ಕೈಯಲ್ಲಿ ಹಿಡಿದು ಮೋದಕ, ಪಾಯಸ, ಮಾಂಸ ಮುಂತಾದವು, ವಿಚಿತ್ರವಾದ ಪುಷ್ಪಗಳು, ಆರಳುಗಳು, ನಾನಾ ವಿಧವಾದ ವಸ್ತುಗಳಿಂದಲೂ ಬಲಿಯನ್ನು ಸಮರ್ಪಣೆ ಮಾಡಿದರು.

ಸರ್ವಂ ಸ್ವಿಷ್ಟಕೃತಂ ಹುತ್ವಾ ವಿಧಿವದ್ ವೇದಪಾರಗಃ ।
ಕಿಂಕರಾಣಾಂ ತತಃ ಪಶ್ಚಾತ್ ಚಕಾರ ಬಲಿಮುತ್ತಮಮ್ ॥೬॥

ವೇದಪಾರಂಗತರು ವಿಧಿಬದ್ಧವಾಗಿ ಸ್ವಿಷ್ಟಕೃತ್ ಹೋಮವನ್ನು ಪೂರೈಸಿ, ಬಳಿಕ ರುದ್ರಗಣಗಳಿಗೆ ಆರಾಧನೆಯನ್ನೂ ಮಾಡಿದರು.

ಯಕ್ಷೇಂದ್ರಾಯ ಕುಬೇರಾಯ ಮಣಿಭದ್ರಾಯ ಚೈವ ಹ ।
ತಥಾಽನ್ಯೇಷಾಂ ಚ ಯಕ್ಷೇಭ್ಯೋ ಭೂತಾಧಿಪತಯಶ್ಚ ಯೇ ॥೭॥

ಕೃಸರೇಣ ಸಮಾಂಸೇನ ನಿವಾಪೈಸ್ತಿಲಸಂಯುತೈಃ ।
ಪಿತೃಣಾಮಂಜಲಿಂ ಕೃತ್ವಾ ಪುರೋಧಾಃ ಸಮುಪಾಹರತ್ ॥೮॥

ಯಕ್ಷಶ್ರೇಷ್ಠನಾದ ಕುಬೇರನಿಗೂ, ಮಣಿಭದ್ರನಿಗೂ, ಇತರ ಯಕ್ಷರಿಗೂ, ಭೂತಗಳ ಅಧಿಪತಿಗಳಿಗೂ ಎಳ್ಳು-ಅನ್ನಗಳಿಂದ ಕೂಡಿದ ಮಾಂಸದಿಂದಲೂ, ಎಳ್ಳಿನಿಂದ ಕೂಡಿದ ನೀರಿನಿಂದಲೂ ಬಲಿಯನ್ನು ಸಮರ್ಪಿಸಿದರು. ಪಿತೃಗಳಿಗೆ ತರ್ಪಣಗಳನ್ನೂ ನೀಡಿದರು.

ಬ್ರಾಹ್ಮಣೇಭ್ಯಃ ಸಹಸ್ರಾಣಿ ಗವಾಂ ದತ್ತ್ವಾ ತು ಭೂಮಿಪಃ ।
ನಕ್ತಂಚರೇಭ್ಯೋ ಭೂತೇಭ್ಯೋ ವ್ಯಾದಿದೇಶ ಬಲಿಂ ತದಾ ॥೯॥

ರಾಜನಾದ ಧರ್ಮಜನು ಬ್ರಾಹ್ಮಣರಿಗೆ ಸಾವಿರಾರು ಗೋವುಗಳನ್ನು ದಾನ ಮಾಡಿದನು. ರಾತ್ರಿ ಸಂಚರಿಸುವ ಭೂತಗಳಿಗೂ ಬಲಿಯನ್ನು ಕೊಡುವಂತೆ ಆದೇಶಿಸಿದನು.

ಧೂಪಗಂಧನಿರುದ್ಧಂ ತತ್ ಸುಮನೋಭಿಶ್ಚ ಸಂವೃತಮ್ ।
ಶುಶುಭೇ ಸ್ಥಾನಮತ್ಯಂತಂ ದೇವದೇವಸ್ಯ ಪಾರ್ಥಿವ ॥೧೦॥

ಧೂಪ-ಗಂಧಗಳಿಂದ, ದೇವತೆಗಳಿಂದಲೂ ಆ ಪ್ರದೇಶವು ತುಂಬಿ ಹೋಗಿತ್ತು. ದೇವದೇವನಾದ ಈಶ್ವರನ ಸ್ಥಾನವು ಧರ್ಮರಾಜನ ಆರಾಧನೆಯಿಂದ ಅತ್ಯಂತ ಮನೋಹರವಾಗಿ ಕಂಗೊಳಿಸಿತು.

ಕೃತ್ವಾ ಪೂಜಾಂ ತು ರುದ್ರಸ್ಯ ಗಣಾನಾಂ ಚೈವ ಸರ್ವಶಃ ।
ಯಯೌ ವ್ಯಾಸಂ ಪುರಸ್ಕೃತ್ಯ ತತ್ರ ರತ್ನನಿಧಿಂ ಪ್ರತಿ ॥೧೧॥

ಮಹಾರುದ್ರದೇವರಿಗೆ ಪೂಜೆಯನ್ನು ಸಲ್ಲಿಸಿ ಅವನ ಪರಿವಾರದವರಿಗೂ ತೃಪ್ತಿಪಡಿಸಿ ವೇದವ್ಯಾಸದೇವರನ್ನು ಮುಂದಿಟ್ಟುಕೊಂಡು ಐಶ್ವರ್ಯವಿದ್ದ ಜಾಗಕ್ಕೆ ಪಾಂಡವರು ಪರಿವಾರಸಹಿತರಾಗಿ ಹೊರಟರು.

ಪೂಜಯಿತ್ವಾ ಧನಾಧ್ಯಕ್ಷಂ ರುದ್ರಂ ಪ್ರತ್ಯಭಿವಾದ್ಯ ಚ ।
ಸುಮನೋಭಿರ್ವಿಚಿತ್ರಾಭಿರಪೂಪೈಃ ಕೃಸರೇಣ ಚ ॥೧೨॥

ಅಲ್ಲಿ ಧನಾಧ್ಯಕ್ಷನಾದ ಕುಬೇರನನ್ನು ಆರಾಧಿಸಿ, ರುದ್ರನನ್ನು ಅಭಿವಂದಿಸಿ, ಸಮಸ್ತ ದೇವತೆಗಳನ್ನು ವಿಚಿತ್ರವಾದ ಅಪೂಪಗಳಿಂದಲೂ, ಎಳ್ಳನ್ನಗಳಿಂದಲೂ ಆರಾಧಿಸಿದರು.

ಶಂಖಾದೀಂಶ್ಚ ನಿಧೀನ್ ಸರ್ವಾನ್ ನಿಧಿಪಾಲಾಂಶ್ಚ ಸರ್ವಶಃ ।
ಅರ್ಚಯಿತ್ವಾ ದ್ವಿಜಾಗ್ರ್ಯಾನ್ ಸ ಸ್ವಸ್ತಿ ಸಂವಾಚ್ಯ ವೀರ್ಯವಾನ್ ॥೧೩॥

ಶಂಖವೇ ಮೊದಲಾದ ನಿಧಿಗಳನ್ನೂ, ನಿಧಿಪಾಲಕರನ್ನೂ, ಬ್ರಾಹ್ಮಣರನ್ನೂ ಚೆನ್ನಾಗಿ ಆರಾಧಿಸಿ, ಅವರ ಮೂಲಕ ವೀರ್ಯವಂತನಾದ ಧರ್ಮರಾಜನು ಮಂಗಳವಾಚಕಗಳಾದ ಪುಣ್ಯಾಹ ಮಂತ್ರಗಳನ್ನು ಧರಿಸಿದನು.

ತೇಷಾಂ ಪುಣ್ಯಾಹಘೋಷೇಣ ತೇಜಸಾ ಸಮವಸ್ಥಿತಃ ।
ಪ್ರೀತಿಮಾನ್ ಸ ಕುರುಶ್ರೇಷ್ಠಃ ಖಾನಯಾಮಾಸ ತಂ ನಿಧಿಮ್ ॥೧೪॥

ಆ ಬ್ರಾಹ್ಮಣರ ಪುಣ್ಯಾಹದ ಘೋಷದಿಂದ ಶಕ್ತಿಯನ್ನು ಪಡೆದ ಧರ್ಮರಾಜನು ಸಂತುಷ್ಟನಾಗಿ, ಐಶ್ವರ್ಯವಿದ್ದ ಜಾಗವನ್ನು ಭೃತ್ಯರ ಮೂಲಕ ಅಗೆಸಿದನು.

ತತಃ ಪತ್ರಾಣಿ ಕರಕಾ ಸಾಶ್ಮಂತಕಮನೋರಮಾಃ ।
ಭೃಂಗರಾಣಿ ಕಟಾಹಾನಿ ಕಲಶಾನ್ ವರ್ಧಮಾನಕಾಃ ॥೧೫॥

ಅಗೆಯುತ್ತಿದ್ದಂತೆ ಸುವರ್ಣಮಯವಾದ, ರತ್ನಖಚಿತವಾದ, ಬಹಳ ನಯನ ಮನೋಹರಗಳಾದ ದೊಡ್ಡದೊಡ್ಡ ಪಾತ್ರೆಗಳೂ, ಕಡಾಯಿಗಳು, ಕಲಶಗಳು, ಶರಾವೆಗಳು (ಮೊರ), ಒಲೆಗಳು, ಊದುಕೊಳವೆಗಳು ಇವೆಲ್ಲವೂ ದೊರೆತವು. ಎಲ್ಲವೂ ಬಂಗಾರಮಯವಾಗಿದ್ದವು.

ಬಹೂನಿ ಚ ವಿಚಿತ್ರಾಣಿ ಭಾಜನಾನಿ ಸಹಸ್ರಶಃ ।
ಉದ್ಧಾರಯಾಮಾಸ ತದಾ ಧರ್ಮಪುತ್ರೋ ಯುಧಿಷ್ಠಿರಃ ॥೧೬॥

ಚಿತ್ರವಿಚಿತ್ರವಾದ ಸಾವಿರಾರು ಸಂಖ್ಯೆಯ ಪಾತ್ರೆಗಳು ದೊರೆತವು. ಧರ್ಮರಾಜನು ಅವೆಲ್ಲವನ್ನೂ ಅಲ್ಲಿಂದ ಹೊರ ತೆಗೆಸಿದನು.

ತೇಷಾಂ ಲಕ್ಷಾಣಿ ಚಾಪ್ಯಾಸನ್ ಮಹಾಕರಪುಟಸ್ತದಾ ।
ನದ್ಧಂ ಚ ಭಾಜನಂ ರಾಜನ್ ತುಲಾರ್ಧಮಭವನ್ನೃಪ ॥೧೭॥

ಆ ಬಿಲದಿಂದ ಸಮಸ್ತ ವೈಭವದ ಪರಿಕರಗಳನ್ನು ತೆಗೆಯುವಾಗ ಮಹಾಭಾರವಾದ ಪಾತ್ರೆಗಳನ್ನು ಹೊತ್ತು ತರಲು ಬಿಲದ ಒಳಗಡೆ ಆನೆ, ಒಂಟೆಗಳನ್ನು ಹೋಗಿಸಿದರು. ಆ ಬಿಲದಲ್ಲಿ ಆನೆ, ಒಂಟೆಗಳು ಹೋಗುವುದು ಕಷ್ಟವಾದುದರಿಂದ ಮಹಾರುದ್ರದೇವರು ಆ ಪ್ರಾಣಿಗಳು ಬಿಲದ ಒಳಗಡೆ ನುಗ್ಗುವಾಗ ಹ್ರಸ್ವದೇಹವನ್ನು ಪಡೆಯುವಂತೆ ಅನುಗ್ರಹಿಸಿದನು. ಆ ಪದಾರ್ಥಗಳನ್ನು ಹೊತ್ತು ತಂದ ಬಳಿಕ ಯಥಾರೀತಿಯಾಗಿ ಒಂಟೆಯೇ ಮೊದಲಾದ ಪ್ರಾಣಿಗಳು ಹಿಂದಿನಂತೆಯೇ ದೇಹವನ್ನು ಹೊಂದಿದವು. ಈ ರೀತಿಯಾಗಿ ಪ್ರಾಣಿಗಳನ್ನು ಈ ಐಶ್ವರ್ಯ ತರುವ ಪ್ರಕ್ರಿಯೆಯಲ್ಲಿ ಉಪಯೋಗಿಸಿಕೊಂಡರು. ಅಲ್ಲಿಂದ ತೆಗೆದ ಐಶ್ವರ್ಯವು ಅರ್ಧತುಲೆಗೆ ಸಮಾನವಾಗಿತ್ತು.

ವ್ಯಾಖ್ಯಾನ ವಿಶೇಷ– ನೀಲಕಂಠೀಯ ವ್ಯಾಖ್ಯಾನದಲ್ಲಿ ಹದಿನಾರು ಕೋಟಿ ಎಂಟು ಲಕ್ಷದ ಇಪ್ಪತ್ನಾಲ್ಕು ಸಾವಿರ ಭಾರದ ಸುವರ್ಣವು ಅಲ್ಲಿ ದೊರೆಯಿತೆಂದು ಅರ್ಧತುಲೆಯನ್ನು ವ್ಯಾಖ್ಯಾನಿಸಿ ತಿಳಿಸಿದ್ದಾರೆ.

ವಾಹನಂ ಪಾಂಡುಪುತ್ರಸ್ಯ ತತ್ರಾಸೀತ್ತು ವಿಶಾಂಪತೇ ।
ಷಷ್ಟಿರುಷ್ಟ್ರಸಹಸ್ರಾಣಿ ಶತಾನಿ ದ್ವಿಗುಣಾ ಹಯಾಃ ॥೧೮॥

ವಾರಣಾಶ್ಚ ಮಹಾರಾಜ ಸಹಸ್ರಶತಸಮ್ಮಿತಾಃ ।
ಶಕಟಾನಿ ರಥಾಶ್ಚೈವ ತಾವದೇವ ಯಥಾ ಗಜಾಃ ॥೧೯॥

ಖರಾಣಾಂ ಪುರುಷಾಣಾಂ ಚ ಪರಿಸಂಖ್ಯಾ ನ ವಿದ್ಯತೇ ॥೨೦॥

ಪಾಂಡುಪುತ್ರನಾದ ಧರ್ಮಜನ ವಾಹನಗಳು ಅಲ್ಲಿರುವ ಸಮಸ್ತ ಸಾಧನಗಳನ್ನು ಹೊತ್ತು ಸಾಗಲು ಸಿದ್ಧವಾಗಿ ನಿಂತವು. ಅರವತ್ತು ಲಕ್ಷ ಒಂಟೆಗಳು, ಒಂದು ಕೋಟಿ

ಇಪ್ಪತ್ತು ಲಕ್ಷ ಕುದುರೆಗಳು, ಒಂದು ಲಕ್ಷ ಆನೆಗಳು, ಒಂದು ಲಕ್ಷ ಎತ್ತಿನ ಗಾಡಿಗಳು, ಒಂದು ಲಕ್ಷ ರಥಗಳು, ಒಂದು ಲಕ್ಷ ಹೆಣ್ಣಾನೆಗಳು, ಮನುಷ್ಯರು, ಕತ್ತೆಗಳು ಅಸಂಖ್ಯೆಯಿಂದಲೂ ಅಲ್ಲಿ ಉಪಸ್ಥಿತವಾದವು.

ಏತಾವದ್ ವಿತ್ತಮಭವದ್ ಯದುದ್ದಧ್ರೇ ಯುಧಿಷ್ಠಿರಃ ॥೨೧॥

ಇಷ್ಟು ಪ್ರಾಣಿಗಳು, ಮಾನವರು, ರಥಗಳು ಹೊತ್ತುಕೊಳ್ಳುವಷ್ಟು ಸಂಪತ್ತನ್ನು ಆ ಸ್ಥಳದಿಂದ ಯುಧಿಷ್ಠಿರನು ಹೊರ ತೆಗೆದಿದ್ದನು.

ಷೋಡಶಾಷ್ಟೌ ಚತುರ್ವಿಂಶತ್ಸಹಸ್ರಂ ಭಾರಲಕ್ಷಣಮ್ ।
ಏತೇಷ್ವಾಧಾಯ ತದ್ ದ್ರವ್ಯಂ ಪುನರಭ್ಯರ್ಚ್ಯ ಪಾಂಡವಃ ॥೨೨॥

ಮಹಾದೇವಂ ಮಹಾರಾಜ ಪ್ರತ್ಯಾಗಚ್ಛದ್ ಯುಧಿಷ್ಠಿರಃ ॥೨೩॥

ಹದಿನಾರು ಕೋಟಿ ಎಂಟು ಲಕ್ಷ ಇಪ್ಪತ್ನಾಲ್ಕು ಸಾವಿರದ ಸುವರ್ಣವನ್ನು ಒಂದು ಭಾರ ಎಂದು ಕರೆದಿದ್ದಾರೆ. ಇಷ್ಟು ಸಂಪತ್ತನ್ನು ಆ ಪ್ರಾಣಿಗಳಲ್ಲಿ ಹೊತ್ತುಕೊಂಡು, ಪುನಃ ಮಹಾರುದ್ರದೇವರನ್ನು ನಮಸ್ಕರಿಸಿ ಪಾಂಡವರು ಯುಧಿಷ್ಠಿರನಿಂದ ಕೂಡಿಕೊಂಡು ಹಸ್ತಿನಾವತಿಗೆ ಮರಳಿ ಬಂದರು.

ದ್ವೈಪಾಯನಾಭ್ಯನುಜ್ಞಾತಃ ಪುರಸ್ಕೃತ್ಯ ಪುರೋಹಿತಮ್ ।
ಗೋರುತೇ ಗೋರುತೇ ಚಾಪಿ ನ್ಯವಸತ್ ಪುರುಷರ್ಷಭಃ ॥೨೪॥

ವೇದವ್ಯಾಸದೇವರಿಂದ ಅನುಜ್ಞಾತರಾದ ಪಾಂಡವರು ಪುರೋಹಿತರನ್ನು ಮುಂದಿಟ್ಟುಕೊಂಡು ಪ್ರಯಾಣ ಬೆಳೆಸುತ್ತಾ, ಒಂದು ಬಲಿಷ್ಠವಾದ ಗೂಳಿಯು ಧ್ವನಿಗೈದಾಗ ಎಷ್ಟು ದೂರ ಪ್ರದೇಶದ ತನಕ ಕೇಳಿಸುತ್ತದೋ ಅಲ್ಲಿಯ ತನಕ ಪ್ರಯಾಣ ಬೆಳೆಸಿ, ಅಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದರು. ಹೀಗೆ ಸ್ವಲ್ಪ ಸ್ವಲ್ಪ ದೂರದಲ್ಲಿ ಭಾರ ಹೊತ್ತ ಸೈನಿಕರಿಗೆ ವಿಶ್ರಾಂತಿಯನ್ನು ನೀಡಿಸುತ್ತಾ, ಸಂಪತ್ತನ್ನು ತೆಗೆದುಕೊಂಡು ಹಸ್ತಿನಾವತಿಯ ಕಡೆಗೆ ಧರ್ಮಜನು ಹೊರಟನು.

ಸಾ ಪುರಾಭಿಮುಖೀ ರಾಜನ್ ಜಗಾಮ ಮಹತೀ ಚಮೂಃ ।
ಕೃಚ್ಛ್ರಾದ್ ದ್ರವಿಣಭಾರಾರ್ತಾ ವಾಹಯಂತೀ ಕುರೂತ್ತಮಾನ್ ॥೨೫॥

ಆ ಹಸ್ತಿನಾವತಿಯ ಕಡೆಗೆ ಹೊರಟಿರುವ ಮಹಾಸೈನ್ಯವು ದ್ರವ್ಯ, ಧನಗಳ ಭಾರದಿಂದ ಪೀಡಿಸಲ್ಪಟ್ಟಿತ್ತು. ಹೀಗಿದ್ದರೂ ಕುರುಶ್ರೇಷ್ಠರನ್ನು ಸಂತೋಷಗೊಳಿಸುತ್ತಾ, ಬಹಳ ಕಷ್ಟದಿಂದಲೇ ಮಹಾ ಐಶ್ವರ್ಯವನ್ನು ಹೊತ್ತು ಹಸ್ತಿನಾವತಿಗೆ ಪ್ರಯಾಣ ಮಾಡಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವಿತ್ತಂ ಗೃಹೀತ್ವಾ ಪುನರಾಗಮನಂ ನಾಮ
ಪಂಚಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ – ೫೦ನೇ ಅಧ್ಯಾಯ

ಆಸನ್ನೇಷ್ವೇವ ಪಾರ್ಥೇಷು ವ್ಯಾಸೇ ಚ ಪುರುಷೋತ್ತಮೇ ।
ಪ್ರವಿವೇಶ ಪುರಂ ಕೃಷ್ಣಸ್ತದಾಸೂತೋತ್ತರಾ ಮೃತಮ್ ॥

ಪಾಂಡವರೂ ಪುರುಷೋತ್ತಮ ಶ್ರೀವೇದವ್ಯಾಸರೂ ಸಮೀಪಕ್ಕೆ ಬರುತ್ತಿದ್ದಾಗಲೇ ಶ್ರೀಕೃಷ್ಣನೂ ಹಸ್ತಿನಾಪುರವನ್ನು ಪ್ರವೇಶಿಸಿದ. ಆಗಲೇ ಉತ್ತರೆ ಮೃತಶಿಶುವನ್ನು ಪ್ರಸವಿಸಿದಳು.

ದ್ರೌಣ್ಯಸ್ತ್ರಸೂದಿತಂ ಬಾಲಂ ದೃಷ್ಟ್ವಾ ಕುಂತ್ಯಾದಿಕಾಃ ಸ್ತ್ರಿಯಃ ।
ಶರಣ್ಯಂ ಶರಣಂ ಜಗ್ಮುರ್ವಾಸುದೇವಂ ಜಗತ್ಪತಿಮ್ ॥

ಹುಟ್ಟುವಾಗಲೆ ಅಶ್ವತ್ಥಾಮರ ಅಸ್ತ್ರದಿಂದ ಹತವಾಗಿದ್ದ ಶಿಶುವನ್ನು ಕಂಡು ಕುಂತಿ ಮುಂತಾದ ಸ್ತ್ರೀಯರು ಸರ್ವರಕ್ಷಕನಾದ ಜಗದೊಡೆಯ ಶ್ರೀಕೃಷ್ಣನನ್ನು ಮೊರೆಹೊಕ್ಕರು.

ಪ್ರತ್ಯಕ್ಷಮಾತ್ಮನಾ ಗರ್ಭೇ ರಕ್ಷಿತಂ ಪ್ರಸವೇ ಹತಮ್ ।
ಪುನರುಜ್ಜೀವಯಾಮಾಸ ಕೇಶವಃ ಪಾರ್ಥತಂತವೇ ॥

ಗರ್ಭದಲ್ಲಿ ಪ್ರತ್ಯಕ್ಷವಾಗಿ ತನ್ನಿಂದ ರಕ್ಷಿತನಾಗಿದ್ದು, ಪ್ರಸವಕಾಲದಲ್ಲಿ ಹತನಾದ ಬಾಲಕ ಪರೀಕ್ಷಿತನನ್ನು ಪಾಂಡವರ ಸಂತತಿಯ ರಕ್ಷಣೆಗಾಗಿ ಶ್ರೀಕೃಷ್ಣನು ಪುನಃ ಬದುಕಿಸಿದನು.

ತದೈವ ವಿವಿಶುಃ ಪಾರ್ಥಾಃ ಸಕೃಷ್ಣಾಃ ಸಧನೋಚ್ಚಯಾಃ ।
ಸರ್ವೇ ಮುಮುದಿರೇ ದೃಷ್ಟ್ವಾ ಪೌತ್ರಂ ಕೇಶವರಕ್ಷಿತಮ್ ॥

ಆಗಲೇ ವೇದವ್ಯಾಸರೊಂದಿಗೆ ಪಾಂಡವರು ಧನರಾಶಿಯುಕ್ತರಾಗಿ ಹಸ್ತಿನಾವತಿಯನ್ನು ಪ್ರವೇಶಿಸಿದರು. ಶ್ರೀಕೃಷ್ಣನಿಂದ ರಕ್ಷಿತನಾದ ಮೊಮ್ಮಗನನ್ನು ಕಂಡು ಆನಂದಿಸಿದರು.

ದದೌ ದಾನಾನಿ ಬಹುಶೋ ಧರ್ಮಪುತ್ರೋ ಯುಧಿಷ್ಠಿರಃ ।
ಪೌತ್ರಜನ್ಮನಿ ಹೃಷ್ಟಾತ್ಮಾ ವಾಸುದೇವಂ ನನಾಮ ಚ ॥

ಧರ್ಮಪುತ್ರನಾದ ಯುಧಿಷ್ಠಿರನು ಮೊಮ್ಮಗನ ಜನನದಿಂದ ಸಂತುಷ್ಟಮನಸ್ಕನಾಗಿ ಬಹಳ ದಾನಗಳನ್ನು ಮಾಡಿದ ಮತ್ತು ಶ್ರೀಕೃಷ್ಣನನ್ನು ನಮಿಸಿದನು.

ಕುಂತೀಕೃಷ್ಣಾಸುಭದ್ರಾಭಿರ್ವೈರಾಟ್ಯಾಽನ್ಯಾಭಿರೇವ ಚ ।
ಪಾಂಡವೈಃ ಪುರುಷೈಶ್ಚಾನ್ಯೈಃ ಸಂಸ್ತುತಃ ಪ್ರಣತೋ ಹರಿಃ ॥

ಕುಂತಿ, ದ್ರೌಪದಿ, ಸುಭದ್ರೆ, ಉತ್ತರೆ, ಬೇರೆ ಸ್ತ್ರೀಯರು, ಪಾಂಡವರು ಮತ್ತು ಬೇರೆ ಜನರೂ ಕೃಷ್ಣನನ್ನು ಹೊಗಳಿ ನಮಿಸಿದರು.

★ ★ ★ ★ ★

ಅರವತ್ತಾರನೆಯ ಅಧ್ಯಾಯ

ಕೃಷ್ಣನು, ಬಲರಾಮ, ಸುಭದ್ರೆ ಮೊದಲಾದವರಿಂದ ಕೂಡಿಕೊಂಡು ಪಾಂಡವರು ನಡೆಸುವ ಯಜ್ಞಕ್ಕಾಗಿ ಹಸ್ತಿನಾವತಿಗೆ ಆಗಮಿಸಿದುದು. ಅದೇ ಪ್ರಸಂಗದಲ್ಲಿ ಉತ್ತರೆಯು ಪರೀಕ್ಷಿತನಿಗೆ ಜನ್ಮ ನೀಡಿದುದು. ಅಶ್ವತ್ಥಾಮರ ಬ್ರಹ್ಮಶಿರೋಸ್ತ್ರದಿಂದ ಹುಟ್ಟುವ ಸಮಯದಲ್ಲಿ ಹೆಣವಾಗಿರುವ ಆ ಶಿಶುವನ್ನು ಬದುಕಿಸುವಂತೆ ಕುಂತಿ ಮೊದಲಾದವರು ಕೃಷ್ಣನ ಬಳಿ ಪ್ರಾರ್ಥಿಸಿದುದು.

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ವಾಸುದೇವಃ ಪ್ರತಾಪವಾನ್ ।
ಉಪಾಯಾದ್ ವೃಷ್ಣಿಭಿಃ ಸಾರ್ಧಂ ಪುರಂ ವಾರಣಸಾಹ್ವಯಮ್ ॥೧॥

ವೈಶಂಪಾಯನ– ಇದೇ ಕಾಲದಲ್ಲಿ ಪ್ರತಾಪಿಯಾದ ವಾಸುದೇವನು ಯಾದವರೊಡನೆ ಕೂಡಿಕೊಂಡು ಹಸ್ತಿನಾವತಿಗೆ ಆಗಮಿಸಿದನು.

ಸಮಯಂ ವಾಜಿಮೇಧಸ್ಯ ವಿದಿತ್ವಾ ಪುರುಷರ್ಷಭ ।
ಯಥೋಕ್ತೋ ಧರ್ಮಪುತ್ರೇಣ ಪ್ರವ್ರಜನ್ ಸ್ವಪುರೀಂ ಪ್ರತಿ ॥೨॥

ಅಶ್ವಮೇಧ ಯಜ್ಞವು ನಡೆಯುತ್ತಿದೆ ಎಂಬುದನ್ನು ತಿಳಿದ ಶ್ರೀಕೃಷ್ಣನು ಹಿಂದೆ ದ್ವಾರಕೆಗೆ ತೆರಳುವಾಗಲೇ ಧರ್ಮರಾಜನಿಂದ ಈ ಯಜ್ಞದ ಕುರಿತು ಆಹ್ವಾನಿತನಾಗಿದ್ದನು.

ರೌಗ್ಮಿಣೇಯೇನ ಸಹಿತೋ ಯುಯುಧಾನೇನ ಚೈವ ಹಿ ।
ಚಾರುದೇಷ್ಣೇನ ಸಾಂಬೇನ ಗದೇನ ಕೃತವರ್ಮಣಾ ॥೩॥

ಸಾರಣೇನ ಚ ವೀರೇಣ ನಿಶಠೇನೋನ್ಮುಖೇನ ಚ ॥೪॥

ಬಲದೇವಂ ಪುರಸ್ಕೃತ್ಯ ಸುಭದ್ರಾಸಹಿತಸ್ತದಾ ॥೫॥

ರುಗ್ಮಿಣಿಯ ಮಗನಾದ ಪ್ರದ್ಯುಮ್ನ, ಸಾತ್ಯಕಿ, ಚಾರುದೇಷ್ಣ, ಸಾಂಬ, ಗದ, ಕೃತವರ್ಮ, ಸಾರಣ, ನಿಶಠ, ಉನ್ಮುಖ, ಬಲಭದ್ರ, ಸುಭದ್ರಾ - ಇವರೆಲ್ಲರನ್ನೂ ಮುಂದೆ ಮಾಡಿಕೊಂಡು ಯುಧಿಷ್ಠಿರನ ಮನೆಗೆ ಆಗಮಿಸಿದನು.

ದ್ರೌಪದೀಮುತ್ತರಾಂ ಚಾಪಿ ಪೃಥಾಂ ಚಾಪವಲೋಕಕಃ ।
ಸಮಾಶ್ವಾಸಯಿತುಂ ಚಾಪಿ ಕ್ಷತ್ರಿಯಾನ್ ನಿಹತೇಶ್ವರಾನ್ ॥೬॥

ದ್ರೌಪದಿಯನ್ನೂ, ಉತ್ತರೆಯನ್ನೂ, ಕುಂತಿಯನ್ನೂ ನೋಡಿ ಅವರ ಯೋಗಕ್ಷೇಮಗಳನ್ನು ವಿಚಾರಿಸಿ, ಪತಿಗಳನ್ನು ಕಳೆದುಕೊಂಡ ಕ್ಷತ್ರಿಯ ಸ್ತ್ರೀಯರನ್ನು ಸಮಾಧಾನ ಪಡಿಸುವುದು ಮುಂತಾದ ಕೆಲಸಗಳೇ ಕೃಷ್ಣನ ಆಗಮನದ ಮುಖ್ಯ ಉದ್ದೇಶವಾಗಿತ್ತು.

ತಾನಾಗತಾನ್ ಸಮೀಕ್ಷ್ಯೈವ ಧೃತರಾಷ್ಟ್ರೋ ಮಹೀಪತಿಃ ।
ಪ್ರತ್ಯಗೃಹ್ಣಾದ್ ಯಥಾನ್ಯಾಯಂ ವಿದುರಶ್ಚ ಮಹಾಮನಾಃ ॥೭॥

ಬಲರಾಮನೇ ಮೊದಲಾದ ಪರಾಕ್ರಮಿಗಳೊಂದಿಗೆ ಆಗಮಿಸಿದ, ವೃಷ್ಣಿಕುಲ ವೀರನಾದ ಕೃಷ್ಣನನ್ನು ರಾಜನಾದ ಧೃತರಾಷ್ಟ್ರನು, ಮಹಾಮತಿಯಾದ ವಿದುರನು ನೋಡುತ್ತಲೇ ಮುಂದೆ ಹೋಗಿ ಸ್ವಾಗತಿಸಿದರು.

ತತ್ರೈವ ನ್ಯವಸತ್ ಕೃಷ್ಣಃ ಸತ್ಕೃತಃ ಪುರುಷರ್ಷಭಃ ।
ವಿದುರೇಣ ಮಹಾತೇಜಾಸ್ತಥೈವ ಚ ಯುಯುತ್ಸುನಾ ॥೮॥

ವಿದುರನಿಂದ, ಯುಯುತ್ಸುವಿನಿಂದ ಸತ್ಕೃತನಾದ, ಪುರುಷಶ್ರೇಷ್ಠನಾದ, ತೇಜಸ್ವಿಯಾದ ಕೃಷ್ಣನು ಸ್ವಲ್ಪ ದಿವಸಗಳ ತನಕ ಅವರ ಬಳಿಯೇ ವಾಸ ಮಾಡಿದನು.

ವಸತ್ಸು ವೃಷ್ಣಿವೀರೇಷು ತತ್ರಾಥ ಜನಮೇಜಯ ।
ಜಜ್ಞೇ ತವ ಪಿತಾ ರಾಜಾ ಪರೀಕ್ಷಿತ್ ಪರವೀರಹಾ ॥೯॥

ಜನಮೇಜಯನೇ, ಶ್ರೀಕೃಷ್ಣನೊಡನೆ ಆಗಮಿಸಿದ್ದ ವೃಷ್ಣಿವೀರರು ಅಲ್ಲಿಯೇ ವಾಸಿಸುವ ಪ್ರಸಂಗದಲ್ಲಿ ಶತ್ರುಹಂತಕನಾದ, ನಿನ್ನ ತಂದೆಯಾದ ಪರೀಕ್ಷಿತನ ಜನ್ಮವಾಯಿತು.

ಸ ತು ಜಾತೋ ಮಹಾರಾಜ ಬ್ರಹ್ಮಾಸ್ತ್ರೇಣ ಚ ಪೀಡಿತಃ ।
ಶವೋ ಬಭೂವ ನಿಶ್ಚೇಷ್ಟೋ ಹರ್ಷಶೋಕವಿವರ್ಧನಃ ॥೧೦॥

ಆ ನಿನ್ನ ತಂದೆಯಾದರೋ ಅಶ್ವತ್ಥಾಮರ ಬ್ರಹ್ಮಾಸ್ತ್ರದಿಂದ ಪೀಡಿತನಾಗಿ ಚೇಷ್ಟಾರಹಿತವಾದ ಶವವಾಗಿದ್ದನು. ಅವನ ಜನ್ಮದ ಪ್ರಸಂಗದಲ್ಲಿ ಬಂಧುಗಳಿಗೆ ಹರ್ಷದ ಜೊತೆಗೆ ಶೋಕವೇ ಅಧಿಕವಾಯಿತು.

ಹೃಷ್ಟಾನಾಂ ಸಿಂಹನಾದೇನ ಜನಾನಾಂ ತತ್ರ ನಿಃಸ್ವನಃ ।
ಆವಿವೇಶ ದಿಶಃ ಸರ್ವಾ ಪುನರೇವಾಪ್ಯುಪಾರಮತ್ ॥೧೧॥

ರಾಜಪುತ್ರನ ಜನ್ಮದ ಸಮಾಚಾರವನ್ನು ಕೇಳಿ ಸಂತುಷ್ಟರಾದ ಪ್ರಜೆಗಳ ಸಿಂಹನಾದವು ಪ್ರತಿದಿಕ್ಕುಗಳಲ್ಲಿ ವ್ಯಾಪಿಸಿತು. ಮರುಕ್ಷಣದಲ್ಲಿಯೇ ಆ ಶಿಶುವು ಮರಣ ಹೊಂದಿದೆ ಎಂಬ ವಾರ್ತೆಯು ಜನ್ಮದ ಸುಖವಾರ್ತೆಯನ್ನು ತಡೆಯಿತು.

ತತಃ ಸೋಽಭಿತ್ವರನ್ ಕೃಷ್ಣೋ ವಿವೇಶಾಂತಃಪುರಂ ತದಾ ।
ಯುಯುಧಾನದ್ವಿತೀಯೋ ವೈ ವ್ಯಥಿತೇಂದ್ರಿಯಮಾನಸಃ ॥೧೨॥

ಆ ಸಮಯದಲ್ಲಿ ಅತ್ಯಂತ ಅವಸರದಿಂದ, ವ್ಯಾಕುಲವಾದ ಇಂದ್ರಿಯ, ಮನಸ್ಸುಗಳಿಂದ ಕೂಡಿದ ಕೃಷ್ಣನು ಸಾತ್ಯಕಿಯೊಡನೆ ಅಂತಃಪುರವನ್ನು ಪ್ರವೇಶಿಸಿದನು.

ತತಸ್ತ್ವರಿತಮಾಯಾಂತೀಂ ದದರ್ಶ ಸ್ವಾಂ ಪಿತೃಷ್ವಸಾಮ್ ।
ಕ್ರೋಶಂತೀಮಭಿಧಾವಂತೀಂ ವಾಸುದೇವಂ ಪುನಃ ಪುನಃ ॥೧೩॥

ಅತ್ಯಂತ ವೇಗವಾಗಿ ಆಗಮಿಸಿದ ಕೃಷ್ಣನನ್ನು ಸೋದರತ್ತೆಯಾದ ಕುಂತಿಯು ನೋಡಿದಳು. ಶ್ರೀಕೃಷ್ಣನು ತನ್ನ ಬಳಿ ಗಟ್ಟಿಯಾಗಿ, ದುಃಖದಿಂದ ಕಿರುಚಿಕೊಂಡು ಓಡಿಬರುತ್ತಿರುವ ಕುಂತಿಯನ್ನು ನೋಡಿದನು.

ಪೃಷ್ಠತೋ ದ್ರೌಪದೀಂ ಚೈವ ಸುಭದ್ರಾಂ ಚ ಯಶಸ್ವಿನೀಮ್ ।
ವಿಕ್ರೋಶಂತ್ಯಶ್ಚ ಕರುಣಂ ಪಾಂಡವಾನಾಂ ಸ್ತ್ರಿಯೋ ನೃಪ ॥೧೪॥

ಆ ಕುಂತಿಯ ಹಿಂದೆ ದ್ರೌಪದಿಯೂ, ಯಶಸ್ವಿನಿಯಾದ ಸುಭದ್ರೆಯೂ, ಪಾಂಡವ ಸ್ತ್ರೀಯರು ಕರುಣೆ ಹುಟ್ಟುವಂತೆ ಕಿರುಚುತ್ತಾ ಆಗಮಿಸಿದರು.

ತತಃ ಕೃಷ್ಣಂ ಸಮಾಸಾದ್ಯ ಕುಂತೀ ರಾಜಸುತಾ ತದಾ ।
ಪ್ರೋವಾಚ ರಾಜಶಾರ್ದೂಲ ಬಾಷ್ಪಗದ್ಗದಯಾ ಗಿರಾ ॥೧೫॥

ಆ ಪ್ರಸಂಗದಲ್ಲಿ ರಾಜಸುತೆಯಾದ ಕುಂತಿಯು ಕೃಷ್ಣನನ್ನು ಸಮೀಪಿಸಿ, ಬಾಷ್ಪಗದ್ಗದವಾದ ಕಂಠದಿಂದ ಜನಮೇಜಯನೇ, ಈ ಮಾತುಗಳನ್ನು ಹೇಳಿದಳು.

ಕುಂತೀ

ವಾಸುದೇವ ಮಹಾಬಾಹೋ ಸುಪ್ರಜಾ ದೇವಕೀ ತ್ವಯಾ ।
ತ್ವಂ ನೋ ಗತಿಃ ಪ್ರತಿಷ್ಠಾ ಚ ತ್ವದಾಯತ್ತಮಿದಂ ಕುಲಮ್ ॥೧೬॥

ಕುಂತೀ– ಮಹಾಬಾಹುವಾದ ಶ್ರೀಕೃಷ್ಣನೇ, ದೇವಕೀದೇವಿಯು ನಿನ್ನಂತಹ ಮಗನನ್ನು ಹಡೆದು ಸುಪ್ರಜಾ ಎಂಬ ಬಿರುದಿಗೆ ಭಾಜನಳಾಗಿದ್ದಾಳೆ. ನೀನೇ ನಮ್ಮೆಲ್ಲರಿಗೂ ಗತಿಪ್ರದನು. ನೀನೇ ನಮ್ಮೆಲ್ಲರಿಗೂ ಸ್ತುತಿಪ್ರದನು. ನಮ್ಮ ಕೌರವಕುಲವು ನಿನ್ನ ಅಧೀನವಾಗಿದೆ.

ಯದುಪ್ರವೀರ ಯೋಽಯಂ ತೇ ಸ್ವಸ್ರೀಯಸ್ಯಾತ್ಮಜಃ ಪ್ರಭೋ ।
ಅಶ್ವತ್ಥಾಮ್ನಾ ಹತೋ ಜಾತಸ್ತಮುಜ್ಜೀವಯ ಕೇಶವ ॥೧೭॥

ಯದುಶ್ರೇಷ್ಠನೇ, ಈಗ ಜನ್ಮವನ್ನು ತಾಳಿದ ಶಿಶುವು ನಿನ್ನ ಸೋದರಳಿಯನ ಮಗುವಾಗಿದೆ. ಅಶ್ವತ್ಥಾಮರ ಬ್ರಹ್ಮಾಸ್ತ್ರದಿಂದ ಮರಣವನ್ನು ಹೊಂದಿಯೇ ಹುಟ್ಟಿದೆ. ಕೇಶವನೇ ಇದನ್ನು ಬದುಕಿಸು.

ತ್ವಯಾ ಹ್ಯೇತತ್ ಪ್ರತಿಜ್ಞಾತಮೈಷೀಕೇ ಯದುನಂದನ ।
ಅಹಂ ಸಂಜೀವಯಿಷ್ಯಾಮಿ ಮೃತಂ ಜಾತಮಿತಿ ಪ್ರಭೋ ॥೧೮॥

ಯದುನಂದನನೇ, ಅಶ್ವತ್ಥಾಮರು ಇಷೀಕವನ್ನು ಬ್ರಹ್ಮಾಸ್ತ್ರವನ್ನಾಗಿ ಅಭಿಮಂತ್ರಿಸಿ ಪಾಂಡವಕುಲವನ್ನೇ ಗುರಿಯಾಗಿಟ್ಟುಕೊಂಡು ಪ್ರಯೋಗಿಸಿದಾಗ ಸತ್ತು ಹುಟ್ಟುವ ಮಗುವನ್ನೂ ನಾನು ಬದುಕಿಸುತ್ತೇನೆ ಎಂದು ಹಿಂದೆ ನೀನು ಪ್ರತಿಜ್ಞೆಯನ್ನು ಮಾಡಿರುವಿಯಷ್ಟೆ?

ಸೋಽಯಂ ಜಾತೋ ಮೃತಸ್ತಾತ ಪಶ್ಯೈನಂ ಪುರುಷರ್ಷಭ ।
ಉತ್ತರಾಂ ಚ ಸುಭದ್ರಾಂ ಚ ದ್ರೌಪದೀಂ ಮಾಂ ಚ ಮಾಧವ ॥೧೯॥

ಧರ್ಮಪುತ್ರಂ ಚ ಭೀಮಂ ಚ ಫಲ್ಗುನಂ ನಕುಲಂ ತಥಾ ।
ಸಹದೇವಂ ಚ ದುರ್ಧರ್ಷಂ ಸರ್ವಾಂಶ್ಚ ಭರತಾನಪಿ ॥೨೦॥

ಪುರುಷಶ್ರೇಷ್ಠನೇ, ಆ ಶಿಶುವನ್ನು ಈಗ ನೋಡು. ಇದು ಮರಣವನ್ನು ಹೊಂದಿದೆ. ಇದರ ಮೇಲೆ ಕೃಪೆಯನ್ನು ತೋರು. ಈ ಶಿಶುವನ್ನು ಬದುಕಿಸಿ, ಉತ್ತರೆ, ಸುಭದ್ರೆ, ದ್ರೌಪದಿಯರನ್ನು, ಧರ್ಮಪುತ್ರನಾದ ಭೀಮ, ಅರ್ಜುನ, ನಕುಲ-ಸಹದೇವರನ್ನು, ಸಮಸ್ತ ಭರತವಂಶೀಯರನ್ನು ನೀನೇ ರಕ್ಷಿಸು.

ತಸ್ಮಿನ್ ಪ್ರಾಣಾಃ ಸಮಾಯತ್ತಾಃ ಪಾಂಡವಾನಾಂ ಮಮೈವ ಚ ।
ಪಾಂಡೋಶ್ಚ ಪಿಂಡೋ ದಾಶಾರ್ಹ ತಥೈವ ಶ್ವಶುರಸ್ಯ ಮೇ ॥೨೧॥

ಈ ಸಮಯದಲ್ಲಿ ಮಹಾಸಂಕಟದಿಂದ ಕೂಡಿರುವ ಪಾಂಡವರನ್ನೂ, ನಮ್ಮೆಲ್ಲರನ್ನೂ ಉದ್ಧರಿಸುವುದು ನಿನಗೆ ಯೋಗ್ಯವಾಗಿದೆ. ನನ್ನ ಮತ್ತು ಪಾಂಡವರ ಪ್ರಾಣಗಳು ಈ ಶಿಶುವಿನ ಅಧೀನವಾಗಿವೆ. ನನ್ನ ಮಾವನಾದ ವಿಚಿತ್ರವೀರ್ಯನಿಗೂ, ಪತಿಯಾದ ಪಾಂಡುವಿಗೂ ಕೊಡಬೇಕಾದ ಪಿಂಡದಾನವು ಈ ಶಿಶುವನ್ನೇ ಅವಲಂಬಿಸಿಕೊಂಡಿದೆ.

ಅಭಿಮನ್ಯೋಶ್ಚ ಭದ್ರಂ ತೇ ಪ್ರಿಯಸ್ಯ ಸದೃಶಸ್ಯ ತೇ ।
ಪ್ರಿಯಮುತ್ಪಾದಯಾದ್ಯ ತ್ವಂ ಪ್ರೇತಸ್ಯಾಪಿ ಜನಾರ್ದನ ॥೨೨॥

ಜನಾರ್ದನನೇ, ನಿನಗೆ ಮಂಗಳವಾಗಲಿ. ನಿನ್ನ ಮೂಲಕ ಪರಲೋಕದಲ್ಲಿರುವ ಅಭಿಮನ್ಯುವಿಗೂ ಹಿತವುಂಟಾಗಲಿ. ಈ ಶಿಶುವನ್ನು ಬದುಕಿಸುವುದರ ಮೂಲಕ ಅಭಿಮನ್ಯುವಿಗೆ ಸಂತೋಷವನ್ನುಂಟು ಮಾಡು.

ಉತ್ತರಾ ಹಿ ಪುರೋಕ್ತಂ ವೈ ಕಥಯತ್ಯರಿಸೂದನ ।
ಅಭಿಮನ್ಯೋರ್ವಚಃ ಕೃಷ್ಣ ಪ್ರಿಯಂ ತತ್ ತೇ ನ ಸಂಶಯಃ ॥೨೩॥

ಅಬ್ರವೀತ್ ಕಿಲ ದಾಶಾರ್ಹ ವೈರಾಟೀಮಾರ್ಜುನಿಸ್ತದಾ ॥೨೪॥

ಶತ್ರುಸೂದನನೇ, ಕೃಷ್ಣನೇ, ಹಿಂದೆ ಉತ್ತರಾದೇವಿಯು ಅಭಿಮನ್ಯುವು ಅವಳ ಬಳಿ ಹೇಳಿದ ಮಾತುಗಳನ್ನು ಅತ್ಯಂತ ಪ್ರಿಯವಾಗಿದ್ದರಿಂದ ನನ್ನ ಬಳಿ ಹೆಜ್ಜೆ ಹೆಜ್ಜೆಗೂ ಹೇಳುತ್ತಿದ್ದಳು. ವಿರಾಟನ ಮಗಳಾದ ಉತ್ತರೆಗೆ ಅಭಿಮನ್ಯುವು ಹೀಗೆ ಹೇಳುತ್ತಿದ್ದನು.

ಅಭಿಮನ್ಯುಃ

ಮಾತುಲಸ್ಯ ಕುಲಂ ಭದ್ರೇ ತವ ಪುತ್ರೋ ಗಮಿಷ್ಯತಿ ।
ಗತ್ವಾ ವೃಷ್ಣ್ಯಂಧಕಕುಲಂ ಧನುರ್ವೇದಂ ಗ್ರಹೀಷ್ಯತಿ ॥೨೫॥

ಅಸ್ತ್ರಾಣಿ ಚ ವಿಚಿತ್ರಾಣಿ ನೀತಿಶಾಸ್ತ್ರಂ ಚ ಕೇವಲಮ್ ॥೨೬॥

ಅಭಿಮನ್ಯು– ಕಲ್ಯಾಣಿಯೇ, ನಿನ್ನ ಮಗನು ನನ್ನ ಸೋದರಮಾವನ ಮನೆಗೆ ಹೋಗುತ್ತಾನೆ. ಅರ್ಥಾತ್ ಕೃಷ್ಣನ ಬಳಿ ಹೋಗುತ್ತಾನೆ. ವೃಷ್ಣ್ಯಂಧಕರ ಮನೆಗೆ ಹೋಗಿ ಧನುರ್ವೇದ ಮತ್ತು ಚಿತ್ರ-ವಿಚಿತ್ರವಾದ ಅಸ್ತ್ರ-ಶಸ್ತ್ರಗಳನ್ನೂ ಮತ್ತು ನೀತಿಶಾಸ್ತ್ರಗಳನ್ನೂ ಪಡೆದುಕೊಳ್ಳುತ್ತಾನೆ.

ಕುಂತೀ

ಇತ್ಯೇತತ್ ಪ್ರಣಯಾತ್ ತಾತ ಸೌಭದ್ರಃ ಪರವೀರಹಾ ।
ಕಥಯಾಮಾಸ ದುರ್ಧರ್ಷಸ್ತಥೈವೈತನ್ನ ಸಂಶಯಃ ॥೨೭॥

ಕುಂತೀ– ಕೃಷ್ಣನೇ, ಇಂತಹ ಮಾತುಗಳನ್ನು ಅಭಿಮನ್ಯುವು ತನ್ನ ಪ್ರಿಯತಮೆಯಾದ ಉತ್ತರೆಯ ಬಳಿ ಅತ್ಯಂತ ಪ್ರೀತಿಯಿಂದ ಹೇಳುತ್ತಿದ್ದನು. ಶತ್ರುವೀರಹಂತಕನಾದ, ಶತ್ರುಗಳಿಂದ ಎದುರಿಸಲು ಅಸಾಧ್ಯನಾದ ಅಭಿಮನ್ಯುವಿನ ಮಾತುಗಳು ಇವು.

ತಾಸ್ತಾ ತ್ವಂ ವಯಂ ಪ್ರಣಮ್ಯೇಹ ಚಾಯಾಮೋ ಮಧುಸೂದನ ।
ಕುಲಸ್ಯಾಸ್ಯ ಹಿತಾರ್ಥಂ ತ್ವಂ ಕುರು ಕಲ್ಯಾಣಮುತ್ತಮಮ್ ॥೨೮॥

ಮಧುಸೂದನನೇ, ಈ ಕುರುಕುಲಕ್ಕೆ ಸೇರಿರುವ ಸ್ತ್ರೀಯರೆಲ್ಲರೂ ನಿನ್ನ ಪಾದಗಳಿಗೆ ನಮಿಸಿ ಪ್ರಾರ್ಥಿಸುತ್ತೇವೆ. ಈ ಕುರುಕುಲದ ಹಿತಕ್ಕೋಸ್ಕರ ಈ ಮಗುವನ್ನು ಬದುಕಿಸಿಕೊಡುವ ಪರಮಶ್ರೇಷ್ಠವಾದ ಮಂಗಳಕಾರ್ಯವನ್ನು ನೀನು ಮಾಡು.

ವೈಶಂಪಾಯನಃ

ಏವಮುಕ್ತ್ವಾ ತು ವಾರ್ಷ್ಣೇಯಂ ಪೃಥಾ ಪೃಥುಲೋಚನಾ ।
ಉದ್ಧತ್ಯ ಬಾಹೂ ದುಃಖಾರ್ತಾ ಪ್ರಾಪತದ್ ಭುವಿ ವಿಹ್ವಲಾ ॥೨೯॥

ವೈಶಂಪಾಯನ– ಜನಮೇಜಯನೇ, ವಿಶಾಲಾಕ್ಷಿಯಾದ ಕುಂತಿಯು ಕೃಷ್ಣನ ಬಳಿ ಹೀಗೆ ದುಃಖಪೀಡಿತಳಾಗಿ, ಕೈಗಳೆರಡನ್ನು ಮೇಲಕ್ಕೆತ್ತಿ ಪ್ರಾರ್ಥಿಸುತ್ತಾ ದೊಪ್ಪನೆ ನೆಲದಲ್ಲಿ ಬಿದ್ದಳು.

ಅಬ್ರುವಂಶ್ಚ ಮಹಾರಾಜ ಸರ್ವಾಃ ಸಸ್ರಾವಿಲೇಕ್ಷಣಾಃ ।
ಸ್ವಸ್ರೀಯೋ ವಾಸುದೇವಸ್ಯ ಮೃತೋ ಜಾತ ಇತಿ ಪ್ರಭೋ ॥೩೦॥

ಅವಳ ಜೊತೆಯಲ್ಲಿಯೇ ಇದ್ದ ದ್ರೌಪದಿ ಮೊದಲಾದ ಇತರ ಸ್ತ್ರೀಯರೂ ಭೂಮಿಯ ಮೇಲೆ ಬಿದ್ದರು. ಅರಮನೆಯಲ್ಲಿದ್ದ ಸ್ತ್ರೀಯರೆಲ್ಲರೂ ಕಣ್ಣೀರು ಸುರಿಸುತ್ತಾ ಅಯ್ಯೋ! ಶ್ರೀಕೃಷ್ಣನ ಸೋದರಿಯ ಮೊಮ್ಮಗನು ಸತ್ತುಹುಟ್ಟಿದ್ದಾನೆ ಎಂದು ಬೊಬ್ಬೆ ಹೊಡೆಯುತ್ತಿದ್ದರು.

ಏವಂ ಗತೇ ತತಃ ಕುಂತೀಂ ಪರ್ಯಗೃಹ್ಣಾಜ್ಜನಾರ್ದನಃ ।
ಭೂಮೌ ನಿಪತಿತಾಂ ಚೈನಾಂ ಸಾಂತ್ವಯಾಮಾಸ ಭಾರತ ॥೩೧॥

ಇವರೆಲ್ಲರ ಮಾತುಗಳನ್ನು ಕೇಳಿದ ಶ್ರೀಕೃಷ್ಣನು, ಭೂಮಿಯಲ್ಲಿ ಬಿದ್ದಿರುವ ತನ್ನ ಸೋದರತ್ತೆಯಾದ ಕುಂತಿಯನ್ನು ಹಿಡಿದೆಬ್ಬಿಸಿ ಕುಳ್ಳಿರಿಸಿ, ಸವಿಯಾದ ಮಾತುಗಳಿಂದ ಇಂತು ಸಂತೈಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಪರೀಕ್ಷಿಜ್ಜನನಪ್ರಕಾರಕಥನಂ ನಾಮ ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಉತ್ತರಾ ಹಿ ಪುರೋಕ್ತಂ ವೈ ಕಥಯತ್ಯರಿಸೂದನ ।
ಅಭಿಮನ್ಯೋರ್ವಚಃ ಕೃಷ್ಣ ಪ್ರಿಯಂ ತತ್ ತೇ ನ ಸಂಶಯಃ ॥೨೩॥

ಅಬ್ರವೀತ್ ಕಿಲ ದಾಶಾರ್ಹ ವೈರಾಟೀಮಾರ್ಜುನಿಸ್ತದಾ ॥೨೪॥

ಶತ್ರುಸೂದನನೇ, ಕೃಷ್ಣನೇ, ಹಿಂದೆ ಉತ್ತರಾದೇವಿಯು ಅಭಿಮನ್ಯುವು ಅವಳ ಬಳಿ ಹೇಳಿದ ಮಾತುಗಳನ್ನು ಅತ್ಯಂತ ಪ್ರಿಯವಾಗಿದ್ದರಿಂದ ನನ್ನ ಬಳಿ ಹೆಜ್ಜೆ ಹೆಜ್ಜೆಗೂ ಹೇಳುತ್ತಿದ್ದಳು. ವಿರಾಟನ ಮಗಳಾದ ಉತ್ತರೆಗೆ ಅಭಿಮನ್ಯುವು ಹೀಗೆ ಹೇಳುತ್ತಿದ್ದನು.

ಅಭಿಮನ್ಯುಃ

ಮಾತುಲಸ್ಯ ಕುಲಂ ಭದ್ರೇ ತವ ಪುತ್ರೋ ಗಮಿಷ್ಯತಿ ।
ಗತ್ವಾ ವೃಷ್ಣ್ಯಂಧಕಕುಲಂ ಧನುರ್ವೇದಂ ಗ್ರಹೀಷ್ಯತಿ ॥೨೫॥

ಅಸ್ತ್ರಾಣಿ ಚ ವಿಚಿತ್ರಾಣಿ ನೀತಿಶಾಸ್ತ್ರಂ ಚ ಕೇವಲಮ್ ॥೨೬॥

ಅಭಿಮನ್ಯು– ಕಲ್ಯಾಣಿಯೇ, ನಿನ್ನ ಮಗನು ನನ್ನ ಸೋದರಮಾವನ ಮನೆಗೆ ಹೋಗುತ್ತಾನೆ. ಅರ್ಥಾತ್ ಕೃಷ್ಣನ ಬಳಿ ಹೋಗುತ್ತಾನೆ. ವೃಷ್ಣ್ಯಂಧಕರ ಮನೆಗೆ ಹೋಗಿ ಧನುರ್ವೇದ ಮತ್ತು ಚಿತ್ರ-ವಿಚಿತ್ರವಾದ ಅಸ್ತ್ರ-ಶಸ್ತ್ರಗಳನ್ನೂ ಮತ್ತು ನೀತಿಶಾಸ್ತ್ರಗಳನ್ನೂ ಪಡೆದುಕೊಳ್ಳುತ್ತಾನೆ.

ಕುಂತೀ

ಇತ್ಯೇತತ್ ಪ್ರಣಯಾತ್ ತಾತ ಸೌಭದ್ರಃ ಪರವೀರಹಾ ।
ಕಥಯಾಮಾಸ ದುರ್ಧರ್ಷಸ್ತಥೈವೈತನ್ನ ಸಂಶಯಃ ॥೨೭॥

ಕುಂತೀ– ಕೃಷ್ಣನೇ, ಇಂತಹ ಮಾತುಗಳನ್ನು ಅಭಿಮನ್ಯುವು ತನ್ನ ಪ್ರಿಯತಮೆಯಾದ ಉತ್ತರೆಯ ಬಳಿ ಅತ್ಯಂತ ಪ್ರೀತಿಯಿಂದ ಹೇಳುತ್ತಿದ್ದನು. ಶತ್ರುವೀರಹಂತಕನಾದ, ಶತ್ರುಗಳಿಂದ ಎದುರಿಸಲು ಅಸಾಧ್ಯನಾದ ಅಭಿಮನ್ಯುವಿನ ಮಾತುಗಳು ಇವು.

ತಾಸ್ತಾ ತ್ವಂ ವಯಂ ಪ್ರಣಮ್ಯೇಹ ಚಾಯಾಮೋ ಮಧುಸೂದನ ।
ಕುಲಸ್ಯಾಸ್ಯ ಹಿತಾರ್ಥಂ ತ್ವಂ ಕುರು ಕಲ್ಯಾಣಮುತ್ತಮಮ್ ॥೨೮॥

ಮಧುಸೂದನನೇ, ಈ ಕುರುಕುಲಕ್ಕೆ ಸೇರಿರುವ ಸ್ತ್ರೀಯರೆಲ್ಲರೂ ನಿನ್ನ ಪಾದಗಳಿಗೆ ನಮಿಸಿ ಪ್ರಾರ್ಥಿಸುತ್ತೇವೆ. ಈ ಕುರುಕುಲದ ಹಿತಕ್ಕೋಸ್ಕರ ಈ ಮಗುವನ್ನು ಬದುಕಿಸಿಕೊಡುವ ಪರಮಶ್ರೇಷ್ಠವಾದ ಮಂಗಳಕಾರ್ಯವನ್ನು ನೀನು ಮಾಡು.

ವೈಶಂಪಾಯನಃ

ಏವಮುಕ್ತ್ವಾ ತು ವಾರ್ಷ್ಣೇಯಂ ಪೃಥಾ ಪೃಥುಲೋಚನಾ ।
ಉದ್ಧತ್ಯ ಬಾಹೂ ದುಃಖಾರ್ತಾ ಪ್ರಾಪತದ್ ಭುವಿ ವಿಹ್ವಲಾ ॥೨೯॥

ವೈಶಂಪಾಯನ– ಜನಮೇಜಯನೇ, ವಿಶಾಲಾಕ್ಷಿಯಾದ ಕುಂತಿಯು ಕೃಷ್ಣನ ಬಳಿ ಹೀಗೆ ದುಃಖಪೀಡಿತಳಾಗಿ, ಕೈಗಳೆರಡನ್ನು ಮೇಲಕ್ಕೆತ್ತಿ ಪ್ರಾರ್ಥಿಸುತ್ತಾ ದೊಪ್ಪನೆ ನೆಲದಲ್ಲಿ ಬಿದ್ದಳು.

ಅಬ್ರುವಂಶ್ಚ ಮಹಾರಾಜ ಸರ್ವಾಃ ಸಸ್ರಾವಿಲೇಕ್ಷಣಾಃ ।
ಸ್ವಸ್ತ್ರೀಯೋ ವಾಸುದೇವಸ್ಯ ಮೃತೋ ಜಾತ ಇತಿ ಪ್ರಭೋ ॥೩೦॥

ಅವಳ ಜೊತೆಯಲ್ಲಿಯೇ ಇದ್ದ ದ್ರೌಪದಿ ಮೊದಲಾದ ಇತರ ಸ್ತ್ರೀಯರೂ ಭೂಮಿಯ ಮೇಲೆ ಬಿದ್ದರು. ಅರಮನೆಯಲ್ಲಿದ್ದ ಸ್ತ್ರೀಯರೆಲ್ಲರೂ ಕಣ್ಣೀರು ಸುರಿಸುತ್ತಾ ಅಯ್ಯೋ! ಶ್ರೀಕೃಷ್ಣನ ಸೋದರಿಯ ಮೊಮ್ಮಗನು ಸತ್ತುಹುಟ್ಟಿದ್ದಾನೆ ಎಂದು ಬೊಬ್ಬೆ ಹೊಡೆಯುತ್ತಿದ್ದರು.

ಏವಂ ಗತೇ ತತಃ ಕುಂತೀಂ ಪರ್ಯಗೃಹ್ಣಾಜ್ಜನಾರ್ದನಃ ।
ಭೂಮೌ ನಿಪತಿತಾಂ ಚೈನಾಂ ಸಾಂತ್ವಯಾಮಾಸ ಭಾರತ ॥೩೧॥

ಇವರೆಲ್ಲರ ಮಾತುಗಳನ್ನು ಕೇಳಿದ ಶ್ರೀಕೃಷ್ಣನು, ಭೂಮಿಯಲ್ಲಿ ಬಿದ್ದಿರುವ ತನ್ನ ಸೋದರತ್ತೆಯಾದ ಕುಂತಿಯನ್ನು ಹಿಡಿದೆಬ್ಬಿಸಿ ಕುಳ್ಳಿರಿಸಿ, ಸವಿಯಾದ ಮಾತುಗಳಿಂದ ಇಂತು ಸಂತೈಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಪರೀಕ್ಷಿಜ್ಜನನಪ್ರಕಾರಕಥನಂ ನಾಮ ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

ಸುಭದ್ರೆಯು ಕೃಷ್ಣನ ಬಳಿ ಅವನ ಮಹಿಮೆಯನ್ನು ವರ್ಣಿಸುತ್ತಾ ಶಿಶುವನ್ನು ಬದುಕಿಸು ಎಂದು ಪ್ರಾರ್ಥಿಸಿದುದು.

ವೈಶಂಪಾಯನಃ

ಉತ್ಥಿತಾಯಾಂ ಪೃಥಾಯಾಂ ತು ಸುಭದ್ರಾ ಭ್ರಾತರಂ ತದಾ ।
ದೃಷ್ಟ್ವಾ ಚುಕ್ರೋಶ ದುಃಖಾರ್ತಾ ವಚನಂ ಚೇದಮಬ್ರವೀತ್ ॥೧॥

ವೈಶಂಪಾಯನ– ನೆಲದಲ್ಲಿ ಬಿದ್ದು ಕೃಷ್ಣನಿಂದ ಎತ್ತಲ್ಪಟ್ಟ ಕುಂತಿಯು ಎದ್ದು ಕುಳಿತ ಬಳಿಕ ಸುಭದ್ರೆಯು ತನ್ನ ಅಣ್ಣನೆನಿಸಿದ ಕೃಷ್ಣನನ್ನು ಕುರಿತು ದುಃಖಾರ್ತಳಾಗಿ ಅಳುತ್ತಲೇ ಕೃಷ್ಣನ ಬಳಿ ಹೀಗೆ ನುಡಿದಳು.

ಸುಭದ್ರಾ

ಪುಂಡರೀಕಾಕ್ಷ ಪಶ್ಯ ತ್ವಂ ಪೌತ್ರಂ ಪಾರ್ಥಸ್ಯ ಧೀಮತಃ ।
ಪರಿಕ್ಷೀಣೇಷು ಕುರುಷು ಪರಿಕ್ಷೀಣಂ ಗತಾಯುಷಮ್ ॥೨॥

ಸುಭದ್ರಾ– ಪುಂಡರೀಕಾಕ್ಷನೇ, ಕುರುವಂಶೀಯರೆಲ್ಲರೂ ಸಂತಾನವಿಲ್ಲದೆ ನಾಶ ಹೊಂದುತ್ತಿರುವಾಗ, ಹುಟ್ಟುತ್ತಲೇ ಆಯುಷ್ಯವಿಲ್ಲದೆ ಹುಟ್ಟಿರುವ ಧೀಮಂತನಾದ ಅರ್ಜುನನ ಮೊಮ್ಮಗನನ್ನು ನೋಡು.

ಇಷೀಕಾ ದ್ರೋಣಪುತ್ರೇಣ ಭೀಮಸೇನಾರ್ಥಮುದ್ಯತಾ ।
ಸೋತ್ತರಾಯಾಂ ನಿಪತಿತಾ ವಿಜಯೇ ಮಯಿ ಚೈವ ಹ ॥೩॥

ದ್ರೋಣಪುತ್ರನಾದ ಅಶ್ವತ್ಥಾಮರು ಭೀಮಸೇನನನ್ನು ಸಂಹರಿಸುವ ದೃಷ್ಟಿಯಿಂದ ಬ್ರಹ್ಮಶಿರೋಸ್ತ್ರವನ್ನು ಹಿಂದೆ ಪ್ರಯೋಗಿಸಿದ್ದರು. ಅದೇ ಇಷೀಕಾಸ್ತ್ರವು ಉತ್ತರೆಯ ಮೇಲೂ, ನನ್ನ ಮೇಲೂ, ಅರ್ಜುನನ ಮೇಲೂ ಬಿದ್ದಿತು.

ಸೇಯಂ ಜ್ವಲಂತೀ ಹೃದಯೇ ಮಮ ತಿಷ್ಠತಿ ಕೇಶವ ।
ಯನ್ನ ಪಶ್ಯಾಮಿ ದುರ್ಧರ್ಷಮಹಂ ಪುತ್ರಸುತಂ ವಿಭೋ ॥೪॥

ದುರ್ಧರ್ಷನೇ, ಕೇಶವನೇ, ಪ್ರಭುವೇ, ಈ ಇಷೀಕಾಸ್ತ್ರವು ಈಗಲೂ ಸೀಳಿ ಹೋಗಿರುವ ನನ್ನ ಹೃದಯದಲ್ಲಿ ಸಂಕಟವನ್ನುಂಟು ಮಾಡುತ್ತಿದೆ. ಪುತ್ರಸಹಿತನಾದ

ಅಭಿಮನ್ಯುವನ್ನು ನಾನು ಈಗ ಕಾಣುತ್ತಿಲ್ಲ. ಇದಕ್ಕಿಂತಲೂ ದುಃಖಕರವಾದ ಸಂಗತಿಯು ನನ್ನ ಪಾಲಿಗೆ ಬೇರೆ ಯಾವುದಿದೆ?

ಕಿಂ ನು ವಕ್ಷ್ಯತಿ ಧರ್ಮಾತ್ಮಾ ಧರ್ಮಪುತ್ರೋ ಯುಧಿಷ್ಠಿರಃ ।
ಭೀಮಸೇನಾರ್ಜುನೌ ಚೋಭೌ ಮಾದ್ರವತ್ಯಾಃ ಸುತೌ ಚ ತೌ ॥೫॥

ಶ್ರುತ್ವಾಽಭಿಮನ್ಯೋಸ್ತನಯಂ ಜಾತಂ ಚ ಮೃತಮೇವ ಚ ।
ಮುಷಿತಾ ಇವ ವಾರ್ಷ್ಣೇಯ ದ್ರೋಣಪುತ್ರೇಣ ಪಾಂಡವಾಃ ॥೬॥

ಅಭಿಮನ್ಯುವಿನ ಶಿಶುವು ಹುಟ್ಟುವಾಗಲೇ ಸತ್ತಿದೆ ಎಂಬ ವಾರ್ತೆಯನ್ನು ಕೇಳಿಸಿಕೊಂಡ ಯುಧಿಷ್ಠಿರನ ಸ್ಥಿತಿ ಏನು? ಭೀಮಾರ್ಜುನರು, ಸಹದೇವರಾದರೂ ಹೇಗೆ ಸಹಿಸುತ್ತಾರೆ? ವೃಷ್ಣಿಕುಲಶ್ರೇಷ್ಠನೇ, ಸತ್ಯ ಹೇಳುವುದಾದಲ್ಲಿ ದ್ರೋಣಸುತರಾದ ಅಶ್ವತ್ಥಾಮರು ಈ ಶಿಶುವನ್ನು ಕೊಲ್ಲುವ ಮೂಲಕ ಪಾಂಡವರ ಸರ್ವಸ್ವವನ್ನೂ ನಾಶ ಮಾಡಿದ್ದಾರೆ.

ಅಭಿಮನ್ಯುಃ ಪ್ರಿಯಃ ಕೃಷ್ಣ ಪಿತೄಣಾಂ ನಾತ್ರ ಸಂಶಯಃ ।
ತೇ ಶ್ರುತ್ವಾ ಕಿಂ ನು ವಕ್ಷ್ಯಂತಿ ದ್ರೋಣಪುತ್ರಾಸ್ತ್ರನಿರ್ಜಿತಾಃ ॥೭॥

ಕೃಷ್ಣನೇ, ಪಾಂಡವರಿಗೆ ಅಭಿಮನ್ಯುವು ಅತ್ಯಂತ ಪ್ರೀತಿಪಾತ್ರನಾದವನು. ಇದರಲ್ಲಿ ಯಾವ ಸಂಶಯವೂ ಇಲ್ಲ. ಅಂತಹವನಿಗೆ ಇಂತಹ ಮೃತಪುತ್ರನು ಹುಟ್ಟಿದ್ದಾನೆ ಎಂಬುದನ್ನು ಕೇಳಿದ ಪಾಂಡವರು ದ್ರೋಣಪುತ್ರನ ಅಸ್ತ್ರದ ಈ ಪರಾಜಯವನ್ನು ಕೇಳಿ ಏನು ಹೇಳಿಯಾರು?

ಭವಿತಾ ನಃ ಪರಂ ದುಃಖಂ ಕಿಂ ನು ಮನ್ಯೇ ಜನಾರ್ದನ ।
ಅಭಿಮನ್ಯೋಃ ಸುತಾತ್ ಕೃಷ್ಣ ಮೃತಾಜ್ಜಾತಾದರಿಂದಮ ॥೮॥

ಶತ್ರುಸೂದನನೇ, ಜನಾರ್ದನನೇ, ಅಭಿಮನ್ಯುವಿಗೆ ಮೃತಶಿಶುವಿನ ಜನ್ಮವಾಗಿದೆ ಎಂಬ ವಾರ್ತೆಗಿಂತ ಮಿಗಿಲಾದ ದುಃಖ ಅವರ ಜೀವನದಲ್ಲಿ ಯಾವುದಿದ್ದಿತು? ಯೋಚಿಸು.

ಸಾಹಂ ಪ್ರಸಾದಯೇ ಕೃಷ್ಣ ತ್ವಾಮದ್ಯ ಶಿರಸಾ ನತಾ ।
ಪೃಥಾಂ ಚ ದ್ರೌಪದೀಂ ಚೈವ ಮಾಂ ಪಶ್ಯ ಪುರುಷೋತ್ತಮ ॥೯॥

ಪುರುಷೋತ್ತಮನೇ, ಶ್ರೀಕೃಷ್ಣನೇ, ನಿನ್ನ ಬಳಿ ಶಿರಬಾಗಿ ನಮಿಸುತ್ತೇನೆ. ಪ್ರಸನ್ನನಾಗೆಂದು ಪ್ರಾರ್ಥಿಸುತ್ತೇನೆ. ನಮ್ಮ ಅತ್ತೆಯಾದ ಕುಂತಿ, ದ್ರೌಪದಿ, ಎಲ್ಲರೂ ಅಂಗಲಾಚಿ ಬೇಡುತ್ತಿರುವುದನ್ನು ನೋಡು, ದಯೆತೋರು.

ಯದಾ ದ್ರೋಣಸುತೋ ಗರ್ಭಾನ್ ಪಾಂಡೂನಾಂ ಹಂತಿ ಮಾಧವ ।
ತ್ವಯಾ ಕಿಲ ಪುರಾ ದ್ರೌಣಿಃ ಕ್ರುದ್ಧೇನೋಕ್ತೋರಿಮರ್ದನ ॥೧೦॥

ಮಾಧವನೇ, ಅಶ್ವತ್ಥಾಮರು ಪಾಂಡುಪುತ್ರನ ಗರ್ಭವನ್ನು ನಾಶಪಡಿಸಲು ಪ್ರಯತ್ನಿಸಿದಾಗ ಸಿಟ್ಟಾದ ನೀನು ಅವನಿಗೆ ಹೇಳಿದ ಮಾತು ಇಂತಿದೆ.

ಶ್ರೀಭಗವಾನ್

ಅಕಾಮಂ ತ್ವಾಂ ಕರಿಷ್ಯಾಮಿ ಬ್ರಹ್ಮಬಂಧೋ ನರಾಧಮ ।
ಅಹಂ ಸಂಜೀವಯಿಷ್ಯಾಮಿ ಕಿರೀಟಿತನಯಾತ್ಮಜಮ್ ॥೧೧॥

ಶ್ರೀಭಗವಾನ್– ಬ್ರಹ್ಮಬಂಧುವೇ, ನರಾಧಮನೇ, ನಿನ್ನ ಅಪೇಕ್ಷೆಯು ನೆರವೇರದಂತೆ ಮಾಡುತ್ತೇನೆ. ಅರ್ಜುನನ ಮೊಮ್ಮಗನನ್ನು ನಾನು ಬದುಕಿಸುತ್ತೇನೆ.

ಸುಭದ್ರಾ

ಇತ್ಯೇತದ್ ವಚನಂ ಶ್ರುತ್ವಾ ಜಾನಾನಾऽಹಂ ಬಲಂ ತವ ।
ಪ್ರಸಾದಯೇ ತ್ವಾಂ ದುರ್ಧರ್ಷ ಜೀವತಾಮಭಿಮನ್ಯುಜಃ ॥೧೨॥

ಸುಭದ್ರಾ– ಶತ್ರುಗಳಿಂದಲೂ ಎದುರಿಸಲು ಅಸಾಧ್ಯನಾದ ಕೃಷ್ಣನೇ, ಅಶ್ವತ್ಥಾಮರ ಬಳಿ ಅಂದು ನೀನು ಹೇಳಿದ ಮಾತನ್ನು ಕೇಳಿದಾಗ ನಿನ್ನ ಬಲವೇನೆಂಬುದನ್ನು ನಾನು ಅರಿತೆನು. ಕೃಷ್ಣನೇ, ಪುನಃ ಪುನಃ ಬಿನ್ನವಿಸುತ್ತೇನೆ, ಅಶ್ವತ್ಥಾಮರಿಗೆ ಅಂದು ಹೇಳಿದಂತೆ ನೀನು ಅಭಿಮನ್ಯುವಿನ ಪುತ್ರನನ್ನು ಬದುಕಿಸು.

ಯದ್ಯೇತತ್ ತ್ವಂ ಪ್ರತಿಶ್ರುತ್ಯ ನ ಕರೋಷಿ ವಚಃ ಶುಭಮ್ ।
ಸಫಲಂ ವೃಷ್ಣಿಶಾರ್ದೂಲ ಮೃತಾಂ ಮಾಮವಧಾರಯ ॥೧೩॥

ವೃಷ್ಣಿಕುಲವೀರನೇ, ನಾನು ಬದುಕಿಸುತ್ತೇನೆ ಎಂದು ಮಾಡಿದ ಆ ಮಂಗಳ ಪ್ರತಿಜ್ಞೆಯನ್ನು ನೀನು ಪೂರ್ಣಗೊಳಿಸದಿದ್ದಲ್ಲಿ ನನ್ನನ್ನೂ ಸತ್ತಂತೆ ಭಾವಿಸು. ನಾನೂ ಪ್ರಾಣತ್ಯಾಗ ಮಾಡುತ್ತೇನೆ.

ಅಭಿಮನ್ಯೋಃ ಸುತೋ ವೀರ ನ ಸಂಜೀವತಿ ಯದ್ಯಯಮ್ ।
ಜೀವತಿ ತ್ವಯಿ ದುರ್ಧರ್ಷ ಕಿಂ ಕರಿಷ್ಯಾಮ್ಯಹಂ ತ್ವಯಾ ॥೧೪॥

ದುರ್ಧರ್ಷನೇ, ವೀರನೇ, ಕೃಷ್ಣನಾದ, ಸರ್ವಶಕ್ತನಾದ ನೀನಿದ್ದಾಗಲೂ ನನ್ನ ಮೊಮ್ಮಗನು ಬದುಕದಿದ್ದರೆ ನಿನ್ನ ಅಸ್ತಿತ್ವದಿಂದ ನಾನು ಪಡೆದ ಲಾಭವಾದರೂ ಏನು?

ಸಂಜೀವಯೈನಂ ದುರ್ಧರ್ಷ ಮೃತಂ ತ್ವಮಭಿಮನ್ಯುಜಮ್ ।
ಸದೃಶಾಕ್ಷಸುತಂ ವೀರ ಸತ್ಯಂ ವರ್ಷಾಸ್ವಿವಾಂಬುದಃ ॥೧೫॥

ದುರ್ಧರ್ಷನೇ, ಮೃತನಾದ ಅಭಿಮನ್ಯುವಿನ ಶಿಶುವನ್ನು ಬದುಕಿಸು. ಸೊರಗಿ ಹೋದ ಸಸ್ಯಪ್ರಪಂಚವನ್ನು ಮೇಘಗಳು ಮಳೆಗರೆದು ಚೈತನ್ಯಗೊಳಿಸುವಂತೆ ನಿನ್ನ ಕರುಣಾಪೂರ್ಣವಾದ ದೃಷ್ಟಿಯನ್ನು ಮೃತಶಿಶುವಿನ ಮೇಲೆ ಬೀರಿ ಚೈತನ್ಯಗೊಳಿಸು.

ತ್ವಂ ಹಿ ಕೇಶವ ಧರ್ಮಾತ್ಮಾ ಸತ್ಯವಾಕ್ ಸತ್ಯವಿಕ್ರಮಃ ।
ಸ ತಾಂ ವಾಚಮೃತಾಂ ಕರ್ತುಮರ್ಹಸಿ ತ್ವಮರಿಂದಮ ॥೧೬॥

ಕೇಶವನೇ, ನೀನು ಧರ್ಮಾತ್ಮನೂ, ಸತ್ಯವಂತನೂ, ಸತ್ಯಪರಾಕ್ರಮಿಯು. ಅರಿಂದಮನೇ, ಅಂದು ಅಶ್ವತ್ಥಾಮರ ಬಳಿ ಮಾಡಿದ ಪ್ರತಿಜ್ಞೆಯನ್ನು ಇಂದು ಸತ್ಯವಾಗಿಸು.

ಇಚ್ಛನ್ನಪಿ ಹಿ ಲೋಕಾಂಸ್ತ್ರೀನ್ ಜೀವಯೇಥಾ ಮೃತಾನಪಿ ।
ಕಿಂ ಪುನರ್ದಯಿತಂ ಜಾತಂ ಸ್ವಸ್ರೀಯಸ್ಯಾತ್ಮಜಂ ಮೃತಮ್ ॥೧೭॥

ಮಾಧವನೇ, ನೀನು ಅಪೇಕ್ಷಿಸಿದಲ್ಲಿ ಮೃತವಾಗಿರುವ ಮೂರುಲೋಕಗಳನ್ನೂ ಬದುಕಿಸಬಲ್ಲೆ. ನಿನ್ನ ಸಾಮರ್ಥ್ಯದ ಅರಿವು ನನಗಿದೆ. ಹೀಗಿರುವಾಗ ನಿನ್ನ ಪ್ರೀತಿಗೆ ಅರ್ಹನಾದ, ಈ ಸೋದರಳಿಯನಾದ ಅಭಿಮನ್ಯುವಿನ ಮಗನನ್ನು ಬದುಕಿಸಲು ಅಶಕ್ಯವೇ?

ಪ್ರಭಾವಜ್ಞೋಽಸ್ಮಿ ತೇ ಕೃಷ್ಣ ತಸ್ಮಾದೇತದ್ ಬ್ರವೀಮಿ ತೇ ।
ಕುರುಷ್ವ ಪಾಂಡುಪುತ್ರಾಣಾಮಿಮಂ ಪರಮನುಗ್ರಹಮ್ ॥೧೮॥

ಕೃಷ್ಣನೇ, ನಿನ್ನ ಮಹತ್ವವನ್ನು ಚೆನ್ನಾಗಿ ಅರಿತಿರುವೆನು. ಆದ್ದರಿಂದ ಬಿನ್ನವಿಸಿಕೊಳ್ಳುತ್ತಿದ್ದೇನೆ. ಈ ಕ್ಷಣದಲ್ಲಿಯೇ ಮೃತಶಿಶುವನ್ನು ಬದುಕಿಸಿ ಪಾಂಡುವಿನ ಸಂತತಿಯನ್ನು ಅನುಗ್ರಹಿಸು.

ಸ್ವಸೇತಿ ವಾ ಮಹಾಬಾಹೋ ಹತಪುತ್ರೇತಿ ವಾ ಪುನಃ ।
ಪ್ರಪನ್ನಾ ಮಾಮಿಯಂ ವೇತಿ ದಯಾಂ ಕರ್ತುಮಿಹಾರ್ಹಸಿ ॥೧೯॥

ಮಹಾಬಾಹುವಾದ ಕೃಷ್ಣನೇ, ತಂಗಿ ಎಂಬ ಪ್ರೀತಿಯಿಂದ ನನ್ನ ಮೇಲೆ ದಯೆತೋರು. ಇರುವ ಒಬ್ಬ ಸುತನನ್ನು ಕಳೆದುಕೊಂಡ ನತದೃಷ್ಟಳೆಂದು ಭಾವಿಸಿಯಾದರೂ ನಿನ್ನ ಪ್ರತಿಜ್ಞೆಯಂತೆ ನಡೆದುಕೊ. ನನ್ನನ್ನೇ ಶರಣು ಹೊಂದಿದ್ದಾಳೆ ಎಂಬ ದಯಾಭಾವದಿಂದಲಾದರೂ ನನ್ನ ಮೊಮ್ಮಗನನ್ನು ಬದುಕಿಸಿಕೊಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಶ್ರೀಕೃಷ್ಣಪ್ರಾರ್ಥನಂ ನಾಮ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆಂಟನೆಯ ಅಧ್ಯಾಯ

ಕೃಷ್ಣನು ಪ್ರಸೂತಿಗೃಹಕ್ಕೆ ತೆರಳಿದುದು. ಉತ್ತರೆಯ ವಿಲಾಪ. ಮಗನನ್ನು ಬದುಕಿಸಿಕೊಡುವಂತೆ ಅನೇಕ ಪ್ರಕಾರದಿಂದ ವಿಲಾಪಗೈಯ್ಯುತ್ತಾ ಉತ್ತರೆಯು ಪ್ರಾರ್ಥಿಸಿದುದು.

ವೈಶಂಪಾಯನಃ

ಏವಮುಕ್ತಃ ಸ ರಾಜೇಂದ್ರ ಕೇಶಿಹಾ ದುಃಖಮೂರ್ಚ್ಛಿತಃ ।
ತಥೇತಿ ವ್ಯಾಜಹಾರೋಚ್ಚೈಃ ಹ್ಲಾದಯನ್ನಿವ ತಂ ಜನಮ್ ॥೧॥

ವೈಶಂಪಾಯನ– ಜನಮೇಜಯನೇ, ಸುಭದ್ರೆಯು ಕೃಷ್ಣನಿಗೆ ಹೀಗೆ ಹೇಳಿದ ಬಳಿಕ ಕೇಶಿ ಎಂಬ ದೈತ್ಯನನ್ನು ಸಂಹರಿಸಿದ ಕೇಶವನು ಅಲ್ಲಿ ನೆರೆದಿರುವ ಎಲ್ಲರನ್ನೂ ಸಂತೋಷಗೊಳಿಸುವನೋ ಎಂಬಂತೆ ಸುಭದ್ರೆಯನ್ನುದ್ದೇಶಿಸಿ ಈ ಮಾತುಗಳನ್ನು ಗಟ್ಟಿಯಾಗಿಯೇ ಹೇಳಿದನು.

ವಾಕ್ಯೇನೈತೇನ ಸಹಸಾ ತಂ ಜನಂ ಪುರುಷರ್ಷಭಃ ।
ಹ್ಲಾದಯಾಮಾಸ ಸ ವಿಭುರ್ಘರ್ಮಾರ್ತಂ ಸಲಿಲೈರಿವ ॥೨॥

ಅಲ್ಲಿರುವ ಜನರೆಲ್ಲರನ್ನೂ ಬಿಸಿಲಿನಲ್ಲಿ ಬೆಂದ ವ್ಯಕ್ತಿಗಳಿಗೆ ಮಳೆಸುರಿಸಿ ತಣಿಸುವಂತೆ ಸುಭದ್ರೆಯೇ ನೀನು ಹೇಳಿದಂತೆ ಮಾಡುತ್ತೇನೆ ಎಂಬ ಮಾತಿನ ಮೂಲಕ ಕೃಷ್ಣನು ಸಂತೋಷಪಡಿಸಿದನು.

ತತಃ ಸ ಪ್ರಾವಿಶತ್ ತೂರ್ಣಂ ಜನ್ಮವೇಶ್ಮ ಪಿತುಸ್ತವ ।
ಅರ್ಚಿತಂ ಪುರುಷವ್ಯಾಘ್ರ ಸಿತೈರ್ಮಾಲ್ಯೈರ್ಯಥಾವಿಧಿ ॥೩॥

ಬಳಿಕ ವೇಗವಾಗಿ ಕೃಷ್ಣನು ಬಿಳಿಯ ಹೂಗಳಿಂದ ಪೂಜಿಸಲ್ಪಟ್ಟು ಅಲಂಕರಿಸಲ್ಪಟ್ಟ ನಿನ್ನ ತಂದೆ ಇದ್ದ ಪ್ರಸೂತಿ ಗೃಹವನ್ನು ಪ್ರವೇಶಿಸಿದನು.

ಅಪಾಂ ಕುಂಭೈಃ ಸುಪೂರ್ಣೈಶ್ಚ ವಿನ್ಯಸ್ತೈಃ ಸರ್ವತೋದಿಶಮ್ ।
ಘೃತೇನ ತಿಂದುಕಾಲಾಜೈಃ ಸರ್ಷಪೈಶ್ಚ ಮಹಾಭುಜಃ ॥೪॥

ಮಹಾಬಾಹುವೇ, ಆ ಪ್ರಸೂತಿಗೃಹವು ಜಲಪೂರ್ಣವಾದ ಕುಂಭಗಳಿಂದ ಶೋಭಿಸುತ್ತಿತ್ತು. ತುಪ್ಪದಲ್ಲಿನೆನೆದ ತುಂಬೇಗಿಡ ಪಂಜುಗಳಿಂದ ಬೆಳಗುತ್ತಿತ್ತು. ಪ್ರಸೂತಿ ಗೃಹದ ಸುತ್ತಲೂ ಬಿಳಿ ಸಾಸುವೆಗಳನ್ನು ಎಸೆದಿದ್ದರು.

ಶಸ್ತ್ರೈಶ್ಚ ವಿಮಲೈರ್ನ್ಯಸ್ತೈಃ ಪಾವಕೈಶ್ಚ ಸಮಂತತಃ ॥೫॥

ವೃದ್ಧಾಭಿಶ್ಚಾನುರೂಪಾಭಿಃ ಪರಿವಾರಾರ್ಥಮಪ್ಯುತ ।
ದಕ್ಷೈಶ್ಚ ಪರಿತೋ ವೀರ ಭಿಷಗ್ಭಿಃ ಕುಶಲೈಸ್ತಥಾ ॥೬॥

ಶುಭ್ರವಾಗಿ ಹೊಳೆಯುವ ಶಸ್ತ್ರಗಳಿಂದಲೂ ಪ್ರಸೂತಿಗೃಹವು ಶೋಭಾಯಮಾನವಾಗಿತ್ತು. ಅಗ್ನಿಗಳು ಪ್ರಜ್ವಲಿಸುತ್ತಿದ್ದವು. ರಾಜಪುತ್ರಿಯನ್ನು ಉಪಚರಿಸುವ ದೃಷ್ಟಿಯಿಂದ ವೃದ್ಧಸ್ತ್ರೀಯರು ಅಲ್ಲಿ ನೆರೆದಿದ್ದರು. ದಕ್ಷರಾದ, ಕುಶಲರಾದ ವೈದ್ಯರೂ ಅಲ್ಲಿಯೇ ನಿಂತಿದ್ದರು.

ದದರ್ಶ ಸ ಚ ಸ ತೇಜಸ್ವೀ ರಕ್ಷೋಘ್ನಾನ್ಯಪಿ ಸರ್ವಶಃ ।
ದ್ರವ್ಯಾಣಿ ಸ್ಥಾಪಿತಾನಿ ಸ್ಮ ವಿಧಿವತ್ ಕುಶಲೈಸ್ತಥಾ ॥೭॥

ಕುಶಲರಾಗಿರುವ ಜನರೆಲ್ಲರೂ ರಾಕ್ಷಸರನ್ನು ವಿನಾಶಗೊಳಿಸಲು ಸಮರ್ಥವಾದ ಪದಾರ್ಥಗಳನ್ನು ಪ್ರಸೂತಿ ಗೃಹದ ಸುತ್ತಲೂ ವಿಧಿಬದ್ಧವಾಗಿ ಇಟ್ಟಿದ್ದರು. ತೇಜಸ್ವಿಯಾದ ಕೃಷ್ಣನು ಈ ಎಲ್ಲ ವ್ಯವಸ್ಥೆಗಳನ್ನು ಅಲ್ಲಿ ಕಂಡನು.

ಜನೈರ್ಯುಕ್ತಂ ಚ ತದ್ ದೃಷ್ಟ್ವಾ ಜನ್ಮವೇಶ್ಮ ಪಿತುಸ್ತವ ।
ಹೃಷ್ಟೋಽಭವದ್ ಹೃಷೀಕೇಶಃ ಸಾಧು ಸಾಧ್ವಿತಿ ಸೋಽಬ್ರವೀತ್ ॥೮॥

ಅನೇಕ ವಸ್ತುಗಳಿಂದ, ಜನರಿಂದ ಸಂಪನ್ನವಾಗಿರುವ ಸೂತಿಕಾಗೃಹವನ್ನು ಕಂಡ ಕೃಷ್ಣನು ಸಂತುಷ್ಟನಾದನು. ಈ ವ್ಯವಸ್ಥೆಗಳೆಲ್ಲವೂ ಸರಿಯಾಗಿದೆ, ಸರಿಯಾಗಿದೆ ಎಂದು ಕೃಷ್ಣನು ಹೇಳಿದನು.

ತಥಾ ಬ್ರುವತಿ ಗೋವಿಂದೇ ಪ್ರಹೃಷ್ಟವದನೇ ತದಾ ।
ದ್ರೌಪದೀ ತ್ವರಿತಾ ಗತ್ವಾ ವೈರಾಟೀಂ ವಾಕ್ಯಮಬ್ರವೀತ್ ॥೯॥

ಸಂತುಷ್ಟಮನಸ್ಕನಾಗಿ ಕೃಷ್ಣನು ಹೀಗೆ ಹೇಳುತ್ತಿರುವಾಗ ದ್ರೌಪದಿಯು ಅವಸರದಿಂದ ಬಂದು ಉತ್ತರೆಯನ್ನು ಕುರಿತು ಹೇಳಿದಳು.

ದ್ರೌಪದೀ

ಅಯಮಾಯಾತಿ ತೇ ಭರ್ತುರ್ಮಾತುಲೋ ಮಧುಸೂದನಃ ।
ಪುರಾಣರ್ಷಿರಚಿಂತ್ಯಾತ್ಮಾ ಸಮೀಪಮಪರಾಜಿತಃ ॥೧೦॥

ದ್ರೌಪದೀ– ಕಲ್ಯಾಣಿಯೇ, ಇಲ್ಲಿ ನೋಡು. ನಿನ್ನ ಮಾವನಾದ, ಅಚಿಂತ್ಯ ಮಹಿಮನಾದ, ಅಪರಾಜಿತನಾದ, ಪುರಾತನ ಮಹರ್ಷಿಯಾದ, ಪೂಜ್ಯನಾದ ಮಧುಸೂದನನು ನಿನ್ನ ಬಳಿ ಆಗಮಿಸುತ್ತಿದ್ದಾನೆ.

ವೈಶಂಪಾಯನಃ

ಸಾ ತು ಬಾಷ್ಪಕಲಾಂ ವಾಚಂ ನಿಗೃಹ್ಯಾಶ್ರೂಣಿ ಚೈವ ಹ ।
ಸುಸಂವೀತಾ ತದಾ ಭೂತ್ವಾ ದೇವವತ್ ಕೃಷ್ಣಮೀಕ್ಷತಿ ॥೧೧॥

ವೈಶಂಪಾಯನ– ದ್ರೌಪದಿಯ ಈ ಮಾತನ್ನು ಕೇಳಿಸಿಕೊಂಡ ಉತ್ತರೆಯು ತನ್ನ ಕಣ್ಣೀರನ್ನು ಒರೆಸಿಕೊಂಡಳು. ವಸ್ತ್ರವನ್ನು ಸರಿಪಡಿಸಿಕೊಂಡಳು. ಕೃಷ್ಣನನ್ನು ದೇವರೆಂದೇ ಭಾವಿಸುತ್ತಾ ನೋಡಿದಳು.

ಸಾ ತದಾ ದೂಯಮಾನೇನ ಹೃದಯೇನ ಮನಸ್ವಿನೀ ।
ದೃಷ್ಟ್ವಾ ಗೋವಿಂದಮಾಯಾಂತಂ ಕೃಪಣಂ ಪರ್ಯದೇವಯತ್ ॥೧೨॥

ಉತ್ತರೆಯು ದೀನವಾದ ಹೃದಯದಿಂದ ಕೂಡಿದವಳಾಗಿ, ಆಗಮಿಸುತ್ತಿರುವ ಕೃಷ್ಣನನ್ನು ಕಂಡು ಬಿಕ್ಕಿ ಬಿಕ್ಕಿ ಅಳುತ್ತಾ ಇಂತು ನುಡಿದಳು.

ಉತ್ತರಾ

ಪುಂಡರೀಕಾಕ್ಷ ಪಶ್ಯ ತ್ವಂ ಬಾಲಾವಿಹ ವಿನಾಕೃತೌ ।
ಅಭಿಮನ್ಯುಂ ಚ ಮಾಂ ಚೈವ ಹತೌ ತುಲ್ಯಂ ಜನಾರ್ದನ ॥೧೩॥

ಉತ್ತರಾ– ಪುಂಡರೀಕಾಕ್ಷನೇ, ಜನಾರ್ದನನೇ, ನಾನೂ ಮತ್ತು ನನ್ನ ಪತಿಯು ಇಬ್ಬರೂ ಸಂತಾನರಾಗಿರುವುದನ್ನು ನೋಡು. ಅಭಿಮನ್ಯುವು ಹತನಾಗಿದ್ದಾನೆ. ನಾನು ಬದುಕಿದ್ದೂ, ಹತಳಾಗಿದ್ದೇನೆ. ನಮ್ಮೀರ್ವರನ್ನೂ ನೋಡು.

ವಾರ್ಷ್ಣೇಯ ಮಧುಹನ್ ವೀರ ಶಿರಸಾ ತ್ವಾಂ ಪ್ರಸಾದಯೇ ।
ದ್ರೋಣಪುತ್ರಾಸ್ತ್ರನಿರ್ದಗ್ಧಂ ಜೀವಯೈನಂ ಜನಾರ್ದನ ॥೧೪॥

ವೃಷ್ಣಿನಂದನನೇ, ಮಧುಸೂದನನೇ, ವೀರನೇ, ಶಿರಬಾಗಿ ನಮಿಸಿ ನಿನ್ನ ಬಳಿ ಬಿನ್ನವಿಸುತ್ತೇನೆ. ದ್ರೌಣಿಯ ಬ್ರಹ್ಮಾಸ್ತ್ರದಿಂದ ಬೆಂದುಹೋದ ನನ್ನ ಶಿಶುವನ್ನು ಬದುಕಿಸು.

ಯದಿ ಸ್ಮ ಧರ್ಮರಾಜೇನ ಭೀಮಸೇನೇನ ವಾ ಪುನಃ ।
ತ್ವಯಾ ವಾ ಪುಂಡರೀಕಾಕ್ಷ ವಾಕ್ಯಮುಕ್ತಮಿದಂ ಭವೇತ್ ॥೧೫॥

ಪುಂಡರೀಕಾಕ್ಷನೇ, ಧರ್ಮರಾಜನಾಗಲೀ, ಭೀಮನಾಗಲೀ, ನೀನಾಗಲೀ ದ್ರೌಣಿಯು ಬಿಟ್ಟ ಹೆಸರಿಗೆ ಮಾತ್ರ ಹೊಡೆಯುವ ಅರ್ಥಾತ್ ಮೃತಶಿಶುವಿಗೆ ಹೊಡೆಯುವ ತಾಯಿಗೆ ಪ್ರಯೋಗಿಸಲ್ಪಡಲಿ.

ಅಜಾತಾನಾಮಿಷೀಕೇಯಂ ಜನಿತ್ರೀಂ ಹಂತ್ವಿತಿ ಪ್ರಭೋ ।
ಅಹಮೇವ ವಿನಷ್ಟಾ ಸ್ಯಾಂ ನೇದಮೇವಂ ಗತಂ ಭವೇತ್ ॥೧೬॥

ನಿಜವಾದ ಮಗುವನ್ನು ಹಡೆದ ತಾಯಿಯನ್ನು ಬ್ರಹ್ಮಾಸ್ತ್ರವು ಕೊಲ್ಲುವುದು ಬೇಡ ಎಂದು ಹೇಳಿದ್ದಲ್ಲಿ ಇಂದು ಆ ಬ್ರಹ್ಮಾಸ್ತ್ರವು ನನಗೂ ತಾಗಿ ನಾನೂ ಮರಣವನ್ನು

ಹೊಂದಿ ಸುಖವನ್ನು ಹೊಂದುತ್ತಿದ್ದೆನು. ಆದರೆ ನೀವು ಹಿಂದೆ ಇಂತು ನುಡಿಯದೆ ಮಗುವಿನ ತಾಯಿಯನ್ನು ಕೊಲ್ಲುವುದು ಬೇಡ ಎಂದು ಹೇಳಿದ್ದರಿಂದ ಈ ಶವದ ತಾಯಿಯಾದ ನಾನು ಬದುಕಿದ್ದೇನೆ ಎಂಬುದೇ ದುಃಖಕ್ಕೆ ಕಾರಣವಾಗಿದೆ. ಈ ಬ್ರಹ್ಮಾಸ್ತ್ರದಿಂದ ನಾನೇ ಮರಣ ಹೊಂದಿದ್ದಲ್ಲಿ ಈ ಮೃತಪುತ್ರನನ್ನು ನೋಡುವ ದುರ್ಗತಿಯು ನನಗೆ ಬರುತ್ತಿರಲಿಲ್ಲ. ಆದ್ದರಿಂದ ಈ ಮಗನನ್ನು ನೀನು ಬದುಕಿಸಿದಲ್ಲಿ ನಿಜವಾದ ಮಗುವಿಗೆ ತಾಯಿ ಎನಿಸುತ್ತೇನೆ. ಆದ್ದರಿಂದ ನನ್ನ ರಕ್ಷಣೆಯಾದಂತಾಗುತ್ತದೆ. ಇಲ್ಲದಿದ್ದಲ್ಲಿ ಮಗನಂತೂ ಸತ್ತಿದ್ದಾನೆ, ನಾನೂ ಸಾಯುತ್ತೇನೆ.

ಗರ್ಭಸ್ಥಸ್ಯಾಸ್ಯ ಬಾಲಸ್ಯ ಬ್ರಹ್ಮಾಸ್ತ್ರೇಣ ನಿಪಾತನಮ್ ।
ಕೃತ್ವಾ ನೃಶಂಸಂ ದುರ್ಬುದ್ಧಿರ್ದ್ರೌಣಿಃ ಕಿಂ ಫಲಮಶ್ನುತೇ ॥೧೭॥

ಗರ್ಭದಲ್ಲಿರುವ ಈ ಬಾಲಕನನ್ನು ಬ್ರಹ್ಮಾಸ್ತ್ರದಿಂದ ಸಂಹರಿಸುವ ಅತ್ಯಂತ ಕ್ರೂರ ಕರ್ಮವನ್ನು ಅಶ್ವತ್ಥಾಮನು ಮಾಡಿರುತ್ತಾನೆ. ಇದರಿಂದ ಅವನಿಗಾದ ಲಾಭವೇನೆಂದು ತಿಳಿಯೆನು!

ಸಾ ತ್ವಾಂ ಪ್ರಣಮ್ಯ ಶಿರಸಾ ಯಾಚೇ ಶತ್ರುನಿಬರ್ಹಣ ।
ಪ್ರಾಣಾಂಸ್ತ್ಯಕ್ಷ್ಯಾಮಿ ಗೋವಿಂದ ನಾಯಂ ಜೀವತಿ ವಾ ಯದಿ ॥೧೮॥

ಗೋವಿಂದನೇ, ಶತ್ರುವಿನಾಶಕನಾದ ನಿನ್ನ ಬಳಿ ಶಿರಬಾಗಿ ಬೇಡುತ್ತೇನೆ. ದಯೆಯಿಟ್ಟು ಈ ಶಿಶುವನ್ನು ಬದುಕಿಸಿಕೊಡು. ಒಂದು ವೇಳೆ ಈ ಶಿಶುವನ್ನು ಬದುಕಿಸದಿದ್ದಲ್ಲಿ ನಿಶ್ಚಿತವಾಗಿಯೂ ಪ್ರಾಣತ್ಯಾಗ ಮಾಡುತ್ತೇನೆ.

ಅಸ್ಮಿನ್ ಹಿ ಬಹವಃ ಕೃಷ್ಣ ಯೇ ಮಮಾಸನ್ ಮನೋರಥಾಃ ।
ತೇ ದ್ರೌಣಪುತ್ರೇಣ ಹತಾಃ ಕಿಂ ನು ಜೀವಾಮಿ ಕೇಶವ ॥೧೯॥

ಸತ್ಪುರುಷನೇ, ಈ ಮಗನಲ್ಲಿಯೇ ನನ್ನ ಮನಸ್ಸಿನ ಅನೇಕ ಆಸೆಗಳನ್ನು ಇಟ್ಟುಕೊಂಡಿದ್ದೇನೆ. ಆ ಮನೋರಥಗಳೆಲ್ಲವೂ ದ್ರೌಣಿಯ ಅಸ್ತ್ರದಿಂದ ವಿಫಲವಾಗಿವೆ. ಕೇಶವನೇ, ನನ್ನ ಬದುಕಿಗೆ ಏನು ಅರ್ಥವಿದೆ?

ಆಸೀನ್ಮಮ ಮತಿಃ ಕೃಷ್ಣ ಪೂರ್ಣೋತ್ಸಂಗಾ ಜನಾರ್ದನ ।
ಅಭಿವಾದಯಿಷ್ಯೇ ಹೃಷ್ಟೇತಿ ತದಿದಂ ವಿತಥಂ ಕೃತಮ್ ॥೨೦॥

ಕೃಷ್ಣನೇ, ಇದು ನನ್ನ ಪುಟ್ಟಕಂದ ಎಂದು ನನ್ನ ಕಂಕುಳಿನಲ್ಲಿ ಧರಿಸಿ ಸಂತೋಷದಿಂದ ನಿನ್ನ ಪಾದದ ಬಳಿ ಬಂದು ನಮಸ್ಕರಿಸಿ ನಿನ್ನಿಂದ ಆಶೀರ್ವಾದವನ್ನು ಪಡೆಯಬೇಕೆಂದು ಬಯಸಿದ್ದೆನು. ಆ ನನ್ನ ಆಸೆಯೆಲ್ಲವೂ ಮಣ್ಣುಪಾಲಾಗಿ ಹೋಯಿತು.

ಚಪಲಾಕ್ಷಸ್ಯ ದಾಯಾದೇ ಮೃತೇಽಸ್ಮಿನ್ ಪುರುಷರ್ಷಭ ।
ವಿಫಲಾ ಮೇ ಕೃತಾಃ ಕೃಷ್ಣ ಹೃದಿ ಸರ್ವೇ ಮನೋರಥಾಃ ॥೨೧॥

ಪುಂಡರೀಕಾಕ್ಷನೇ, ಕೃಷ್ಣನೇ, ಅತ್ಯಂತ ಆಸೆ-ಆಕಾಂಕ್ಷೆಯಿಂದ ತುಂಬಿದ ಕಣ್ಣುಗಳುಳ್ಳ ನನ್ನ ಪತಿದೇವನ ಈ ಸುತನು ಸತ್ತ ಬಳಿಕ ನನ್ನ ಮನದ ಸಮಸ್ತ ಬಯಕೆಗಳು ನಿಷ್ಫಲಗೊಂಡಿವೆ.

ಚಪಲಾಕ್ಷಃ ಕಿಲಾತೀವ ಪ್ರಿಯಸ್ತೇ ಮಧುಸೂದನ ।
ಸುತಮೀಕ್ಷಸ್ವ ತಸ್ಯೈನಂ ಬ್ರಹ್ಮಾಸ್ತ್ರೇಣ ನಿಪಾತಿತಮ್ ॥೨೨॥

ಮಧುಸೂದನನೇ, ಚಪಲಾಕ್ಷನಾದ ನನ್ನ ಪತಿಯು ನಿನಗೆ ಅತ್ಯಂತ ಪ್ರಿಯನಲ್ಲವೇ? ಅಂತಹ ಅಭಿಮನ್ಯುವಿನ ಮಗನು ಬ್ರಹ್ಮಾಸ್ತ್ರ ಪ್ರಹಾರದಿಂದ ಈಗ ಸತ್ತಿರುವ ಪ್ರಸಂಗವನ್ನು ನೋಡು.

ಕೃತಘ್ನೋಽಯಂ ನೃಶಂಸೋಽಯಂ ಯಥಾಸ್ಯ ಜನಕಸ್ತಥಾ ।
ಯಃ ಪಾಂಡವೀಂ ಶ್ರಿಯಂ ತ್ಯಕ್ತ್ವಾ ಗತೋಽದ್ಯ ಯಮಸಾದನಮ್ ॥

ಈ ನನ್ನ ಗರ್ಭದಿಂದ ಸಂಜಾತನಾದ ಬಾಲಕನು ತಂದೆಯಂತೆಯೇ ಕೃತಘ್ನನೂ, ಕ್ರೂರಿಯೂ ಆಗಿದ್ದಾನೆ. ತಂದೆಯು ಪಾಂಡವರ ರಾಜ್ಯಲಕ್ಷ್ಮಿಯನ್ನು ತ್ಯಜಿಸಿ ಯಮಲೋಕಕ್ಕೆ ಹೊರಟಂತೆ ತಂದೆಯ ಮಾರ್ಗವನ್ನೇ ಇವನೂ ಅನುಸರಿಸಿದ್ದಾನೆ.

ಮಯಾ ಚೈತತ್ ಪ್ರತಿಜ್ಞಾತಂ ರಣಮೂರ್ಧ್ನಿ ಕೇಶವ ।
ಅಭಿಮನ್ಯೌ ಹತೇ ವೀರ ತ್ವಾಮೇಷ್ಯಾಮ್ಯಚಿರಾದಿವ ॥೨೪॥

ಕೇಶವನೇ, ನಾನು ನನ್ನ ಗಂಡನ ಬಳಿ ಹೀಗೆ ಪ್ರತಿಜ್ಞೆ ಮಾಡಿದ್ದೆನು. ವೀರನೇ, ನೀನೇನಾದರೂ ರಣಾಂಗಣದಲ್ಲಿ ಹತನಾದರೆ ನಾನೂ ನಿನ್ನ ಬಳಿ ಬೇಗ ಬಂದು ಬಿಡುತ್ತೇನೆ ಎಂದು.

ತಚ್ಚ ನಾಕರವಂ ಕೃಷ್ಣ ನೃಶಂಸಾ ಜೀವಿತಪ್ರಿಯಾ ।
ಇದಾನೀಮಾಗತಾಂ ತತ್ರ ಕಿಂ ನು ವಕ್ಷ್ಯತಿ ಫಾಲ್ಗುನಿಃ ॥೨೫॥

ಆದರೆ ನಿರ್ದಯಳಾದ, ಬದುಕಿನಲ್ಲಿ ಆಸೆ ಕಟ್ಟಿಕೊಂಡಿರುವ ನಾನು ನನ್ನ ಪತಿಗೆ ಮಾತು ಕೊಟ್ಟ ಪ್ರತಿಜ್ಞೆಯಂತೆ ನಡೆಯಲಿಲ್ಲ. ಈ ಸಮಯದಲ್ಲಿ ಪರಲೋಕಕ್ಕೆ ನಾನು ಹೋದರೆ ಅಲ್ಲಿ ನನ್ನ ಪತಿಯು ನನ್ನನ್ನು ಹಿಯಾಳಿಸುವುದಿಲ್ಲವೇ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಜನ್ಮಗೃಹಪ್ರವೇಶನೇ ಉತ್ತರಾಯಾ ವಚನಪ್ರಕಾರಕಥನಂ ನಾಮ ಅಷ್ಟಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂಬತ್ತನೆಯ ಅಧ್ಯಾಯ

ಉತ್ತರೆಯ ವಿಲಾಪವನ್ನು ಕೇಳಿಸಿಕೊಂಡ ಕೃಷ್ಣನು ಶಪಥ ಮಾಡುತ್ತಾ ಪರೀಕ್ಷಿತರಾಜನನ್ನು ಸ್ಪರ್ಶ ಮಾಡಿದುದು. ಪರೀಕ್ಷಿತನು ಜೀವಂತನಾದುದು.

ವೈಶಂಪಾಯನಃ

ಏವಂ ವಿಲಪ್ಯ ಕರುಣಂ ಸೋನ್ಮಾದೇವ ತಪಸ್ವಿನೀ ।
ಉತ್ತರಾ ನ್ಯಪತದ್ ಭೂಮೌ ಕೃಪಣಾ ಪುತ್ರಗರ್ದ್ಧಿನೀ ॥೧॥

ವೈಶಂಪಾಯನ– ಪುತ್ರಪ್ರಿಯಳಾದ, ದುಃಖಿತಳಾದ ಉತ್ತರೆಯು ಹೀಗೆ ಕರುಣಾಜನಕವಾದ ಮಾತುಗಳನ್ನು ಹೇಳುತ್ತಲೇ ದುಃಖಿತಳಾಗಿ ಭೂಮಿಯ ಮೇಲೆ ಬಿದ್ದುಬಿಟ್ಟಳು.

ತಾಂ ತು ದೃಷ್ಟ್ವಾ ನಿಪತತಾಂ ಹತಬಂಧುಪರಿಚ್ಛದಾಮ್ ।
ಚುಕ್ರೋಶ ಕುಂತೀ ದುಃಖಾರ್ತಾ ಸರ್ವಾಶ್ಚ ಭರತಸ್ತ್ರಿಯಃ ॥೨॥

ಪುತ್ರನನ್ನೂ, ಬಂಧುಗಳನ್ನೂ ಕಳೆದುಕೊಂಡಿರುವ ಉತ್ತರೆಯು ಭೂಮಿಯಲ್ಲಿ ಬಿದ್ದಿರುವುದನ್ನು ಕಂಡು ದುಃಖಿತಳಾದ ಕುಂತಿ ಮತ್ತು ಕುರುವಂಶದ ಸ್ತ್ರೀಯರು ಗಟ್ಟಿಯಾಗಿ ಅಳತೊಡಗಿದರು.

ಮುಹೂರ್ತಮಿವ ತದ್ ರಾಜನ್ ಪಾಂಡವಾನಾಂ ನಿವೇಶನಮ್ ।
ಅಪ್ರೇಕ್ಷಣೀಯಮಭವದ್ ಆರ್ತಸ್ವರವಿನಾದಿತಮ್ ॥೩॥

ಒಂದು ಮುಹೂರ್ತಕಾಲ ಆ ಪಾಂಡವರ ಅರಮನೆಯಲ್ಲಿ ದುಃಖದ ಧ್ವನಿಯೇ ಪ್ರತಿಧ್ವನಿಸುತ್ತಿತ್ತು. ಈ ಪ್ರಸಂಗವು ನೋಡಲು ಅಸಾಧ್ಯವಾಗಿತ್ತು.

ಸಾ ಮುಹೂರ್ತಂ ಚ ರಾಜೇಂದ್ರ ಪುತ್ರಶೋಕಾಭಿಪೀಡಿತಾ ।
ಕಶ್ಮಲಾಭಿಹತಾ ವೀರ ವೈರಾಟೀ ತ್ವಭವತ್ ತದಾ ॥೪॥

ಪ್ರತಿಲಭ್ಯ ತು ಸಾ ಸಂಜ್ಞಾಮುತ್ತರಾ ಭರತರ್ಷಭ ।
ಅಂಕಮಾರೋಪ್ಯ ತಂ ಪುತ್ರಮಿದಂ ವಚನಮಬ್ರವೀತ್ ॥೫॥

ಒಂದು ಮುಹೂರ್ತಕಾಲ ಉತ್ತರೆಯು ಮೂರ್ಛಿತಳಾಗಿಯೇ ಬಿದ್ದಿದ್ದಳು. ಬಳಿಕ ಎಚ್ಚರಗೊಂಡು, ತನ್ನ ತೊಡೆಯ ಮೇಲೆ ಮೃತವಾಗಿದ್ದ ಶಿಶುವನ್ನು ಮಲಗಿಸಿಕೊಂಡು ಈ ಮಾತುಗಳನ್ನು ಹೇಳಲಾರಂಭಿಸಿದಳು.

ಉತ್ತರಾ

ಧರ್ಮಜ್ಞಸ್ಯ ಸುತಃ ಸಂಸ್ತ್ವಂ ನ ಧರ್ಮಮವಬುಧ್ಯಸೇ ।
ಯಸ್ತ್ವಂ ವೃಷ್ಣಿಪ್ರವೀರಸ್ಯ ಕುರುಷೇ ನಾಭಿವಾದನಮ್ ॥೬॥

ಉತ್ತರಾ– ಮಗುವೇ, ನೀನು ಧರ್ಮಜ್ಞನಾದ ತಂದೆಯ ಮಗನಾಗಿರುವಿ. ಹೀಗಿದ್ದರೂ ಅಧರ್ಮಕಾರ್ಯವನ್ನು ನೀನು ಮಾಡುತ್ತಿರುವಿ. ನಿನಗೆ ತಿಳಿಯುತ್ತಿಲ್ಲ. ವೃಷ್ಣಿವಂಶಶ್ರೇಷ್ಠನಾದ ಕೃಷ್ಣನು ನಿನ್ನ ಸಮೀಪದಲ್ಲಿಯೇ ಇದ್ದಾನೆ. ಅವನನ್ನು ಧರ್ಮ ಬುದ್ಧಿಯಿಂದ ನಮಸ್ಕರಿಸಬೇಕು. ಏಕೆ ನಮಸ್ಕರಿಸುತ್ತಿಲ್ಲ?

ಪುತ್ರ ಗತ್ವಾ ಮಮ ವಚೋ ಬ್ರೂಯಾಸ್ತ್ವಂ ಪಿತರಂ ತವ ।
ದುರ್ಮರಂ ಪ್ರಾಣಿನಾಂ ವೀರ ಕಾಲೇಪ್ರಾಪ್ತೇ ಕಥಂಚನ ॥೭॥

ಮಗುವೇ, ನೀನು ಪರಲೋಕಕ್ಕೆ ಸಾಗಿ ನಾನು ಹೇಳುವ ಈ ಮಾತುಗಳನ್ನು ನಿನ್ನ ತಂದೆಯ ಬಳಿ ಹೇಳು. ಪ್ರಾಣನಾಥನೇ, ಕಾಲವು ಸನ್ನಿಹಿತವಾಗದೆ ಪ್ರಾಣಿಗಳಿಗೆ ಮರಣವು ಸಂಭವಿಸುವುದು ಅಸಾಧ್ಯವೇ ಸರಿ.

ಯಾऽಹಂ ತ್ವಯಾ ವಿಹೀನಾऽದ್ಯ ಹೀನಾ ಪುತ್ರೇಣ ಚೈವ ಹ ।
ಮರಣಂ ನಾಧಿಗಚ್ಛಾಮಿ ತವ ಸ್ಪೃಹಿ ನ ಕಿಂಚನ ॥೮॥

ಯಾವ ನಾನು ನಿನ್ನಂತಹ ಪತಿಯಿಂದಲೂ ಪರೀಕ್ಷಿತನಂತಹ ಪುತ್ರನಿಂದಲೂ ವಿಹೀನಳಾಗಿದ್ದೇನೆ. ಇಂತಹ ದುಃಖದ ಪ್ರಸಂಗದಲ್ಲಿಯೂ ನಾನು ಸಾಯುತ್ತಿಲ್ಲ ಎಂದರೆ ಅಮಂಗಳೆಯಾದ ನನ್ನಿಂದ ನಿನಗೂ ಕಲ್ಯಾಣವಾಗುತ್ತಿಲ್ಲ ಎಂದೇ ಭಾವಿಸುತ್ತೇನೆ ಎಂದು ನಿನ್ನ ತಂದೆಯ ಬಳಿ ಹೇಳು.

ಅಥವಾ ಧರ್ಮರಾಜ್ಞಾಹಮನುಜ್ಞಾತಾ ಮಹಾಭುಜ ।
ಖಾದಯಿಷ್ಯೇ ವಿಷಂ ತೀಕ್ಷ್ಣಂ ಪ್ರವೇಕ್ಷ್ಯಾಮ್ಯಥವಾऽನಲಮ್ ॥೯॥

ಅಥವಾ ಮಹಾಬಾಹುವೇ, ಧರ್ಮರಾಜನಿಂದ ಆಜ್ಞಪ್ತಳಾದ ನಾನು ತೀಕ್ಷ್ಣವಾದ ವಿಷವನ್ನು ತಿನ್ನುತ್ತೇನೆ ಅಥವಾ ಬೆಂಕಿಯಲ್ಲಿ ಹಾರಿಕೊಳ್ಳುತ್ತೇನೆ.

ಅಥವಾ ದುರ್ಮರಂ ತಾತ ಯದಿದಂ ಮೇ ಸಹಸ್ರಧಾ ।
ಪತಿಪುತ್ರವಿಹೀನಾಯಾ ಹೃದಯಂ ನಾವದೀರ್ಯತೇ ॥೧೦॥

ಅಥವಾ ಕಠಿಣವಾದ ಮರಣವನ್ನು ಹೊಂದುತ್ತೇನೆ. ಪುತ್ರ-ಪತಿ ವಿಹೀನಳಾದ ನನ್ನ ಹೃದಯವು ಇನ್ನೂ ಸಾವಿರ ಹೋಳಾಗದೆ ಇರುವುದರಿಂದ ದುಃಖಿತಳಾದ ನಾನು ಸಾವಿಗೆ ಬೇಕಾದ ಈ ಉಪಾಯಗಳನ್ನೇ ಮಾಡುತ್ತೇನೆ.

ಉತ್ತಿಷ್ಠ ಪುತ್ರ ಪಶ್ಯೇಮಾಂ ದುಃಖಿತಾಂ ಪ್ರಪಿತಾಮಹೀಮ್ ।
ಆರ್ತಾಮುಪಪ್ಲುತಾಂ ದೀನಾಂ ನಿಮಗ್ನಾಂ ಶೋಕಸಾಗರೇ ॥೧೧॥

ಮಗುವೇ ಎದ್ದೇಳು. ದುಃಖಿತಳಾದ, ಆರ್ತಳಾದ, ದೀನಳಾದ, ಶೋಕಸಾಗರದಲ್ಲಿ ಮುಳುಗಿರುವ ನಿನ್ನ ಮುತ್ತಜ್ಜಿಯನ್ನು ನೋಡು.

ಆರ್ಯಾಂ ಚ ಪಶ್ಯ ಪಾಂಚಾಲೀಂ ಸಾತ್ವತೀಂ ಚ ತಪಸ್ವಿನೀಮ್ ।
ಮಾಂ ಚ ಪಶ್ಯ ಸುದುಃಖಾರ್ತಾಂ ವ್ಯಾಧವಿದ್ಧಾಂ ಮೃಗೀಮಿವ ॥೧೨॥

ಆರ್ತಳಾದ, ಪೂಜ್ಯಳಾದ ಪಾಂಚಾಲಿಯನ್ನು ನೋಡು. ದುಃಖದಿಂದ ಅಳುತ್ತಿರುವ ಸುಭದ್ರೆಯನ್ನು ನೋಡು. ಬಾಣದಿಂದ ಪೆಟ್ಟುತಿಂದ ಹೆಣ್ಣು ಜಿಂಕೆಯಂತೆ ದುಃಖದಿಂದ ಸಂಕಟಪಡುತ್ತಿರುವ ನನ್ನನ್ನಾದರೂ ನೋಡು.

ಉತ್ತಿಷ್ಠ ಪಶ್ಯ ವದನಂ ಲೋಕನಾಥಸ್ಯ ಪಶ್ಯತಃ ।
ಪುಂಡರೀಕವಿಶಾಲಾಕ್ಷಂ ಪುರೇವ ಚಪಲೇಕ್ಷಣಮ್ ॥೧೩॥

ಮಗನೇ, ಎದ್ದೇಳು. ಧೀಮಂತನಾದ, ಲೋಕನಾಥನಾದ ಪುಂಡರೀಕಾಕ್ಷನ ದಿವ್ಯವಾದ ಮುಖವನ್ನು ನೋಡು. ಹಿಂದೆ ಚಂಚಲಾಕ್ಷನಾದ ನನ್ನ ಪತಿಯನ್ನು ನಾನು ನೋಡಿದಂತೆ ನಿನ್ನ ಹತ್ತಿರದಲ್ಲಿರುವ ಕಮಲದ ಎಲೆಯಂತೆ ವಿಶಾಲವಾದ ಕಣ್ಣುಗಳಿಂದ ಕೂಡಿರುವ ಮಾಧವನನ್ನು ನೋಡು.

ವೈಶಂಪಾಯನಃ

ಏವಂ ವಿಲಪತೀಂ ತಾಂ ತು ದೃಷ್ಟ್ವಾ ನಿಪತಿತಾಂ ಪುನಃ ।
ಉತ್ತರಾಂ ತಾಂ ಸ್ತ್ರಿಯಃ ಸರ್ವಾಃ ಪುನರುತ್ಥಾಪಯಂತ್ಯುತ ॥೧೪॥

ವೈಶಂಪಾಯನ– ಹೀಗೆ ಹೇಳಿಕೊಂಡು ಪುನಃ ಪುನಃ ಅಳುತ್ತಿರುವ ಭೂಮಿಯ ಮೇಲೆ ಬೀಳುತ್ತಿರುವ ಉತ್ತರೆಯನ್ನು ಕಂಡು ಭರತಕುಲದ ಸ್ತ್ರೀಯರೆಲ್ಲರೂ ಪುನಃ ಅವಳನ್ನು ಎತ್ತಿ ಕುಳ್ಳಿರಿಸಿದರು.

ಉತ್ಥಾಯ ಚ ಪುನರ್ಧೈರ್ಯಾತ್ ತದಾ ಮತ್ಸ್ಯಪತೇಃ ಸುತಾ ।
ಪ್ರಾಂಚಾಲಿಃ ಪುಂಡರೀಕಾಕ್ಷಂ ಭೂಮಾವೇವಾಭ್ಯವಂದತ ॥೧೫॥

ಮತ್ಸ್ಯದೇಶದ ಅರಸನಾದ, ವಿರಾಟನ ಮಗಳಾದ ಉತ್ತರೆಯು ಎದ್ದು ಕುಳಿತು, ಧೈರ್ಯವನ್ನು ಆಶ್ರಯಿಸಿ, ಕರಗಳನ್ನೆತ್ತಿ ಕುಳಿತಲ್ಲಿಯೇ ವಾಸುದೇವನನ್ನು ನಮಿಸಿದಳು.

ಶ್ರುತ್ವಾ ತಸ್ಯಾಪಿ ವಿಪುಲಂ ವಿಲಾಪಂ ಪುರುಷರ್ಷಭಃ ।
ಉಪಸ್ಪೃಶ್ಯ ತತಃ ಕೃಷ್ಣೋ ಬ್ರಹ್ಮಾಸ್ತ್ರಂ ಸಂಜಹಾರ ತತ್ ॥೧೬॥

ಯದುಶ್ರೇಷ್ಠನಾದ ಕೃಷ್ಣನು ಅವಳ ಅಪಾರವಾದ ದುಃಖವನ್ನು ಕೇಳಿಸಿಕೊಂಡು ದಯಾರ್ದ್ರಹೃದಯದಿಂದ ಕೂಡಿ, ಆಚಮನ ಮಾಡಿ, ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರದ ಪ್ರಭಾವವನ್ನು ಉಪಶಮನಗೊಳಿಸಿದನು.

ಪ್ರತಿಜಜ್ಞೇ ಸ ದಾಶಾರ್ಹಸ್ತಸ್ಯ ಜೀವಿತಮಚ್ಯುತಃ ।
ಅಬ್ರವೀಚ್ಚ ವಿಶುದ್ಧಾತ್ಮಾ ಸರ್ವಂ ವಿಶ್ರಾವಯನ್ ಜಗತ್ ॥೧೭॥

ಹಿಂದೆ ದಾಶಾರ್ಹನಾದ ಅಚ್ಯುತನು ಈ ಮಗುವನ್ನು ಬದುಕಿಸುವುದಾಗಿ ಪ್ರತಿಜ್ಞೆಯನ್ನು ಮಾಡಿದ್ದನು. ಅದೇ ಪ್ರತಿಜ್ಞೆಯನ್ನು ಜಗತ್ತೆಲ್ಲವೂ ಕೇಳುವಂತೆ ವಿಶುದ್ಧಾತ್ಮನಾಗಿ, ಗಟ್ಟಿಯಾಗಿ ಮಗದೊಮ್ಮೆ ಉಚ್ಚರಿಸಿದನು.

ಶ್ರೀಭಗವಾನ್

ನ ಬ್ರವೀಮ್ಯುತ್ತರೇ ಮಿಥ್ಯಾ ಸತ್ಯಮೇತದ್ ಭವಿಷ್ಯತಿ ।
ಏಷ ಸಂಜೀವಯಾಮ್ಯೇನಂ ಪಶ್ಯತಾಂ ಸರ್ವದೇಹಿನಾಮ್ ॥೧೮॥

ಶ್ರೀಭಗವಾನ್– ಉತ್ತರೆಯೇ, ನಾನೆಂದಿಗೂ ಸುಳ್ಳು ಹೇಳುವವನಲ್ಲ. ನಾನು ಹೇಳಿದ್ದು ನಿಜವೇ ಆಗುತ್ತದೆ. ಇಲ್ಲಿ ಬದುಕಿರುವ ಸಮಸ್ತ ಪ್ರಾಣಿಗಳು ನೋಡುತ್ತಿರುವಾಗಲೇ ಸತ್ತಿರುವ ಈ ಮಗುವನ್ನು ನಾನು ಬದುಕಿಸುತ್ತೇನೆ.

ನೋಕ್ತಪೂರ್ವಂ ಮಯಾ ಮಿಥ್ಯಾ ಸ್ವೈರೇಷ್ವಪಿ ಕದಾಚನ ।
ನ ಚ ಯುದ್ಧಾತ್ ಪರಾವೃತ್ತಸ್ತಥಾ ಸಂಜೀವಯಾಮ್ಯಹಮ್ ॥೧೯॥

ನಾನು ಸ್ವೇಚ್ಛೆಯಿಂದ ಆಟವಾಡುವಾಗಲೂ ತಮಾಷೆಗಾಗಿ ಹೇಳಿದ ಮಾತುಗಳು ಸುಳ್ಳಾಗಿರುವುದಿಲ್ಲ. ಎಂದೂ ಸುಳ್ಳು ಹೇಳಿರುವವನಲ್ಲ. ಯುದ್ಧದಿಂದ ಹಿಮ್ಮೆಟ್ಟಿದವನೂ ಅಲ್ಲ. ನನ್ನ ಸತ್ಯನಿಷ್ಠೆ ಮತ್ತು ಯುದ್ಧದಿಂದ ಹಿಂದಿರುಗದೆ ಇರುವಿಕೆ ಈ ಎರಡು ಶ್ರೇಷ್ಠ ಧರ್ಮಗಳ ಫಲವಾಗಿ ಈ ಶಿಶುವು ಬದುಕುವಂತಾಗಲಿ.

ಯಥಾ ಮೇ ದಯಿತೋ ಧರ್ಮೋ ಬ್ರಾಹ್ಮಣಾಶ್ಚ ವಿಶೇಷತಃ ।
ಅಭಿಮನ್ಯೋಃ ಸುತೋ ಜಾತೋ ಮೃತೋ ಜೀವತ್ವಯಂ ತಥಾ ॥೨೦॥

ನನಗೆ ಧರ್ಮವು ಬಹಳ ಪ್ರಿಯವಾಗಿದೆ. ಅದರಲ್ಲಿಯೂ ಬ್ರಾಹ್ಮಣರು ನನಗೆ ಅತ್ಯಂತ ಪ್ರೀತಿಪಾತ್ರರು. ಈ ಮಾತು ಸತ್ಯವಾದಲ್ಲಿ ಹುಟ್ಟಿರುವ ಈ ಅಭಿಮನ್ಯುವಿನ ಮಗನು ಬದುಕುವಂತಾಗಲಿ.

ಯಥಾಽಹಂ ನಾಭಿಜಾನಾಮಿ ವಿಜಯೇ ನ ಕದಾಚನ ।
ವಿರೋಧಂ ತೇನ ಸತ್ಯೇನ ಮೃತೋ ಜೀವತ್ವಯಂ ಶಿಶುಃ ॥೨೧॥

ನಾನು ಎಂದಿಗೂ ಅರ್ಜುನನ ವಿಷಯದಲ್ಲಿ ವಿರೋಧವನ್ನೇ ಮನಸ್ಸಿನಲ್ಲಿಯೂ ಭಾವಿಸಿಲ್ಲ. ಈ ಮಾತು ಸತ್ಯವಾಗಿದ್ದಲ್ಲಿ ಈ ಶಿಶುವು ಬದುಕುವಂತಾಗಲಿ.

ತಥಾ ಸತ್ಯಂ ಚ ಧರ್ಮಶ್ಚ ಮಯಾ ನಿತ್ಯಂ ಪ್ರತಿಷ್ಠಿತೌ ।
ತಥಾ ಮೃತಃ ಶಿಶುರಯಂ ಜೀವತ್ವದ್ಯಾಭಿಮನ್ಯುಜಃ ॥೨೨॥

ನನ್ನಲ್ಲಿ ಸತ್ಯ-ಧರ್ಮಗಳು ನಿರಂತರ ನೆಲೆಗೊಂಡಿವೆ. ಈ ಮಾತು ಸತ್ಯವಾದಲ್ಲಿ ಅಭಿಮನ್ಯುವಿನ ಮೃತಶಿಶುವು ಜೀವಂತವಾಗಲಿ.

ಯಥಾ ಕಂಸಶ್ಚ ಕೇಶೀ ಚ ಧರ್ಮೇಣ ನಿಹತೌ ಮಯಾ ।
ತೇನ ಸತ್ಯೇನ ಬಾಲೋಽಯಂ ಪುನರುಜ್ಜೀವಯಾಮಿ ಹ ॥೨೩॥

ಕಂಸನನ್ನೂ, ಕೇಶಿ ಎಂಬ ದೈತ್ಯನನ್ನೂ ನಾನು ಕ್ಷಾತ್ರಧರ್ಮದಿಂದಲೇ ಸಂಹರಿಸಿದ್ದೇನೆ. ಈ ಮಾತು ಸತ್ಯವಾದಲ್ಲಿ ಅದರ ಪ್ರಭಾವದಿಂದ ಶಿಶುವು ಜೀವಂತವಾಗಲಿ.

ಯದಿ ಮೇ ಬ್ರಹ್ಮಚರ್ಯಂ ಸ್ಯಾತ್ ಯ ತ್ವಂ ಚ ಮಯಿ ತಿಷ್ಠತಿ ।
ಅವ್ಯಾಹತಂ ಮಮೈಶ್ವರ್ಯಂ ತೇನ ಜೀವತು ಬಾಲಕಃ ॥೨೪॥

ನಾನು ಗೋಪಿಯರ ಸಂಗ, ಅನೇಕ ಸ್ತ್ರೀಯರ ಸಂಗವನ್ನು ಮಾಡಿದ್ದರೂ ಬ್ರಹ್ಮಚರ್ಯನಿಷ್ಠನಾಗಿದ್ದೇನೆ. ಈ ನನ್ನ ಮಾತು ಸತ್ಯವಾದಲ್ಲಿ, ಎಂದೂ ನಾಶವಾಗದ ಐಶ್ವರ್ಯವು ಕೃಷ್ಣನಲ್ಲಿಯೇ ಇದೆ ಎಂಬ ಮಾತು ಸತ್ಯವಾದಲ್ಲಿ, ಅದರಿಂದ ಈ ಮಗುವು ಬದುಕುವಂತಾಗಲಿ.

ವೈಶಂಪಾಯನಃ

ಇತ್ಯುಕ್ತ್ವಾ ವಾಸುದೇವೋಽಥ ತಂ ಬಾಲಂ ಭರತರ್ಷಭ ।
ಹಸ್ತೇನ ಕಮಲಾಭೇನ ಬ್ರಹ್ಮರುದ್ರಾರ್ಚಿತೇನ ಚ ॥೨೫॥

ಪಸ್ಪರ್ಶ ಪುಂಡರೀಕಾಕ್ಷ ಆಪಾದತಲಮಸ್ತಕಮ್ ॥೨೬॥

ವೈಶಂಪಾಯನ– ಈ ರೀತಿಯಾಗಿ ವಾಸುದೇವನು ಹೇಳಿ, ಬ್ರಹ್ಮ- ರುದ್ರಾದಿಗಳಿಂದ ಅರ್ಚಿತನಾದ ಕಮಲಸದೃಶವಾದ, ತನ್ನ ಕೈಗಳಿಂದ ಪುಂಡರೀಕಾಕ್ಷನು ಆ ಶಿಶುವಿನ ಪಾದದಿಂದ ಆರಂಭಿಸಿ ತಲೆಯ ತನಕ ದೇಹವನ್ನು ಸ್ಪರ್ಶ ಮಾಡಿದನು.

ಸ್ಪಷ್ಟಮಾತ್ರಸ್ತು ಕೃಷ್ಣೇನ ಸ ಬಾಲೋ ಅಭಿಮನ್ಯುಜಃ ।
ಶನೈಃ ಶನೈರ್ಮಹಾರಾಜ ಪ್ರಾಪದ್ಯತ ಸ ಚೇತನಾಮ್ ॥೨೭॥

ಕೃಷ್ಣನ ಕೇವಲ ಹಸ್ತಸ್ಪರ್ಶಮಾತ್ರದಿಂದಲೆ ಅಭಿಮನ್ಯುವಿನ ಮಗನು ಮೆಲ್ಲಮೆಲ್ಲನೆ ಚೈತನ್ಯವನ್ನು ಹೊಂದಲು ಆರಂಭಿಸಿದನು.

ಶನೈಃ ಶನೈರ್ಮಹಾರಾಜ ಪ್ರಾಸ್ಪಂದತ ಸಚೇತನಃ ॥೨೮॥

ಮಹಾರಾಜನೇ, ಚೈತನ್ಯವನ್ನು ಹೊಂದುತ್ತಾ ಮೆಲ್ಲಮೆಲ್ಲನೆ ಜಗತ್ತಿಗೆ ಸ್ಪಂದಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಮೃತಪರೀಕ್ಷಿತ್ ಸಂಜೀವನಪ್ರಕಾರಕಥನಂ ನಾಮ
ಏಕೋನಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತನೆಯ ಅಧ್ಯಾಯ

ಕೃಷ್ಣನು ಅಭಿಮನ್ಯುವಿನ ಮಗನಿಗೆ ನಾಮಕರಣವನ್ನು ಮಾಡಿದುದು. ಈ ಮಧ್ಯದಲ್ಲಿ ಯುಧಿಷ್ಠಿರಾದಿಗಳು ಸ್ವರ್ಣದ ಭಾರವನ್ನು ಹೊತ್ತುಕೊಂಡು ಹಸ್ತಿನಾಪಟ್ಟಣದ ಬಳಿಗೆ ಆಗಮಿಸಿದುದು. ಅವರನ್ನು ಕೃಷ್ಣನನ್ನು ಮುಂದಿಟ್ಟುಕೊಂಡು ನಾಗರಿಕರು ಸ್ವಾಗತಿಸಿದುದು.

ವೈಶಂಪಾಯನಃ

ಬ್ರಹ್ಮಾಸ್ತ್ರಂ ತು ಮಹಾರಾಜ ಕೃಷ್ಣೇನ ಪ್ರತಿಸಂಹೃತಮ್ ।
ತದಾ ತದ್ವೇಶ್ಮ ತೇ ಪಿತ್ರಾ ಸರ್ವತೋऽಪಿ ವಿದೀಪಿತಮ್ ॥೧॥

ವೈಶಂಪಾಯನ– ಜನಮೇಜಯನೇ, ಶ್ರೀಕೃಷ್ಣನು ಬ್ರಹ್ಮಾಸ್ತ್ರವನ್ನು ಉಪಶಮನಗೊಳಿಸಿದ ಕೂಡಲೇ ಪ್ರಸೂತಿಗೃಹವು ನಿನ್ನ ತಂದೆಯ ತೇಜಸ್ಸಿನಿಂದ ಬೆಳಗಲಾರಂಭಿಸಿತು.

ತತೋ ರಕ್ಷಾಂಸಿ ಸರ್ವಾಣಿ ನೇಶುಸ್ಯಕ್ತ್ವಾ ಗೃಹಂ ತು ತತ್ ।
ಅಂತರಿಕ್ಷೇ ಚ ವಾಗಾಸೀತ್ ಸಾಧು ಕೇಶವ ಸಾಧ್ವಿತಿ ॥೨॥

ಅವನ ಉತ್ಪತ್ತಿಯ ಪ್ರಭಾವದಿಂದ, ಅವನನ್ನು ಕೊಲ್ಲಲು ಆಗಮಿಸಿರುವ ರಾಕ್ಷಸರೆಲ್ಲರೂ ಅರಮನೆಯನ್ನು ಬಿಟ್ಟು ಹೊರಟು ಹೋದರು. ಅಂತರಿಕ್ಷದಿಂದ, ಕೇಶವನೇ ಸಾಧು-ಸಾಧು ಎಂಬ ಮಾತು ಕೇಳಿಸಿದವು.

ತದಸ್ತ್ರಂ ಜ್ವಲಿತಂ ಚಾಪಿ ಪಿತಾಮಹಮಗಾತ್ ತದಾ ।
ತತಃ ಪ್ರಾಣಾನ್ ಪುನರ್ಲೇಭೇ ಪಿತಾ ತವ ಜನೇಶ್ವರ ॥೩॥

ಪ್ರಜ್ವಲಿಸುತ್ತಿರುವ ಆ ಬ್ರಹ್ಮಾಸ್ತ್ರವು ಚತುರ್ಮುಖ ಬ್ರಹ್ಮನ ಬಳಿಯೇ ಹೊರಟು ಹೋಯಿತು. ಹೀಗೆ ನಿನ್ನ ತಂದೆಯು ಮರುಜೀವವನ್ನು ಪಡೆದುಕೊಂಡನು.

ವ್ಯಚೇಷ್ಟತ ಚ ಬಾಲೋಽಸೌ ಯಥೋಕ್ತಂ ಶೌರಿಣಾ ತದಾ ।
ಬಭೂವುರ್ಮುದಿತಾ ರಾಜನ್ ತತಸ್ತಾ ಭರತಸ್ತ್ರಿಯಃ ॥೪॥

ಕೃಷ್ಣನ ಮಾತಿಗನುಗುಣವಾಗಿ ಅಭಿಮನ್ಯುವಿನ ಮಗುವು ಉತ್ಸಾಹ ಮತ್ತು ಬಲಗಳಿಗೆ ಅನುಸಾರವಾಗಿ ಆಟವಾಡಲು ಆರಂಭಿಸಿತು. ಭರತವಂಶದ ಸ್ತ್ರೀಯರೆಲ್ಲರಿಗೂ ಅವನ ಚೇಷ್ಟೆಗಳು ಸಂತೋಷವನ್ನು ನೀಡಿದವು.

ಬ್ರಾಹ್ಮಣಾ ವಾಚಯಾಮಾಸುರ್ಗೋವಿಂದಸ್ಯ ಚ ಶಾಸನಾತ್ ।
ತತಸ್ತಾ ಮುದಿತಾಃ ಸರ್ವಾಃ ಪ್ರಶಶಂಸುರ್ಜನಾರ್ದನಮ್ ॥೫॥

ಭರತವಂಶದವರೆಲ್ಲರೂ ಗೋವಿಂದನ ಆದೇಶದಂತೆ ಬ್ರಾಹ್ಮಣರಿಂದ ಸ್ವಸ್ತಿವಾಚನಗಳನ್ನು ಮಾಡಿಸಿದರು. ಪ್ರತಿಯೊಬ್ಬರು ಸಂತುಷ್ಟರಾಗಿ ಜನಾರ್ದನನನ್ನು ಪ್ರಶಂಸಿಸಿದರು.

ಸ್ತ್ರಿಯೋ ಭರತಸಿಂಹಾನಾಂ ನಾವಂ ದೃಷ್ಟ್ವೇವ ಪಾರಗಾಃ ॥೬॥

ಕುಂತೀ ದ್ರುಪದಪುತ್ರೀ ಚ ಸುಭದ್ರಾ ಚೋತ್ತರಾ ತಥಾ ।
ಸ್ತ್ರಿಯಶ್ಚಾನ್ಯಾ ನೃಸಿಂಹಾನಾಂ ಬಭೂವುರ್ಹೃಷ್ಟಮಾನಸಾಃ ॥೭॥

ನದಿಯನ್ನು ದಾಟಲು ಬಯಸುವ ವ್ಯಕ್ತಿಗಳು ದೋಣಿಯನ್ನು ಕಂಡಾಗ ಸಂತೋಷ ಹೊಂದುವಂತೆ ಭರತಶ್ರೇಷ್ಠರಾದ ಪಾಂಡವ ಪತ್ನಿಯರೂ, ಕುಂತೀ, ದ್ರೌಪದಿ, ಸುಭದ್ರೆ, ಉತ್ತರೆ ಮೊದಲಾದವರು ವಂಶೋದ್ಧಾರಕನಾದ ಪುತ್ರನನ್ನು ನೋಡಿ ಅತ್ಯಂತ ಸಂತುಷ್ಟ ಮನಸ್ಕರಾದರು.

ತತ್ರ ಮಲ್ಲಾ ನಟಾ ಝುಲ್ಲಾ ರಂಜಿಕಾಃ ಸೌಖಶಾಯಿಕಾಃ ।
ಸೂತಮಾಗಧಸಂಘಾಶ್ಚಾಪ್ಯಸ್ತುವಂಸ್ತಂ ಜನಾರ್ದನಮ್ ॥೮॥

ಬಳಿಕ ಮಲ್ಲರು, ನಾಟ್ಯವಾಡುವವರು, ಪ್ರಾಣಿಗಳಂತೆ ಶಬ್ದವನ್ನು ಮಾಡುವವರು (ಮಿಮಿಕ್ರಿ), ಅಲಂಕಾರ ಮಾಡುವವರು, ಪಾದವನ್ನು ಒತ್ತುವ ಪರಿಚಾರಕರು, ಸೂತ-ಮಾಗಧರು ಕುರುವಂಶದ ಸ್ತುತಿ ಮತ್ತು ಆಶೀರ್ವಾದಗಳೊಂದಿಗೆ ಕೃಷ್ಣನನ್ನು ಸ್ತೋತ್ರ ಮಾಡಿದರು.

ಕುರುವಂಶಸ್ತವಾರ್ಥಾಭಿರಾಶೀರ್ಭಿರ್ಭರತರ್ಷಭ ।
ಸಭಾಜಯತ ಸಂಹೃಷ್ಟೋ ಮಹಾರಾಜ ಮಹಾಜನಃ ॥೯॥

ಕುರುವಂಶವನ್ನು ಸ್ತುತಿಗಳ ಮೂಲಕ ಆಶೀರ್ವದಿಸುತ್ತಾ ಮಹಾಜನರೆಲ್ಲರೂ ಸಂಹೃಷ್ಟಮನಸ್ಕರಾಗಿ ಅಲ್ಲಿ ಕಂಗೊಳಿಸಿದರು.

ಉತ್ಥಾಯ ತು ಯಥಾಕಾಲಮುತ್ತರಾ ಯದುನಂದನಮ್ ।
ಅಭ್ಯವಾದಯತ ಪ್ರೀತಾ ಸಹ ಪುತ್ರೇಣ ಭಾರತ ॥೧೦॥

ಯದುನಂದನನನ್ನು ಉತ್ತರೆಯು ತನ್ನ ಕಂಕುಳಿನಲ್ಲಿ ಮಗುವನ್ನು ಹೊತ್ತುಕೊಂಡು ಎದ್ದುಬಂದು ನಮಸ್ಕರಿಸಿದಳು.

ತಸ್ಯೈ ಕೃಷ್ಣೋ ದದೌ ಪ್ರೀತೋ ಬಹುರತ್ನಂ ವಿಶೇಷವಿತ್ ।
ತಥೈವ ವೃಷ್ಣಿಶಾರ್ದೂಲೋ ನಾಮ ಚಾಸ್ಯಾಕರೋತ್ ಪ್ರಭುಃ ॥೧೧॥

ಸರ್ವಶಕ್ತನಾದ ಶ್ರೀಕೃಷ್ಣನು ಆ ಉತ್ತರೆಗೆ ಪ್ರೀತಿಯಿಂದ ವಿಶೇಷವಾದ ಬಹುರತ್ನಗಳನ್ನು ನೀಡಿದನು. ವೃಷ್ಣಿಶಾರ್ದೂಲನಾದ ಕೃಷ್ಣನು ಉತ್ತರೆಯ ಮಗನಿಗೆ ಯೋಗ್ಯವಾದ ಹೆಸರನ್ನೂ ಇಟ್ಟನು.

ಪಿತುಸ್ತವ ಮಹಾರಾಜ ಸತ್ಯಸಂಧೋ ಜನಾರ್ದನಃ ॥೧೨॥

ಮಹಾರಾಜನೇ, ಸತ್ಯಸಂಧನಾದ ಜನಾರ್ದನನು ನಿನ್ನ ತಂದೆಗೆ ನಾಮಕರಣವನ್ನು ಮಾಡಿರುತ್ತಾನೆ.

ಪರಿಕ್ಷೀಣೇ ಕುಲೇ ಯಸ್ಮಾತ್ ಜಾತೋಽಯಮಭಿಮನ್ಯುಜಃ ।
ಪರೀಕ್ಷಿದಿತಿ ನಾಮಾಸ್ಯ ಭವತ್ವಿತ್ಯಬ್ರವೀತ್ ತದಾ ॥೧೩॥

ಕುರುಕುಲವು ನಾಶವೇ ಹೊಂದುತ್ತಿರುವಾಗ ಯಾವ ಈ ಶಿಶುವು ಅಭಿಮನ್ಯುವಿನ ಮೂಲಕ ಜನಿಸಿದೆಯೋ ಆದ್ದರಿಂದ ಅರ್ಥವತ್ತಾಗಿ ಈ ಶಿಶುವಿಗೆ ಪರೀಕ್ಷಿತ ಎಂಬ ಹೆಸರೇ ಬರಲಿ ಎಂದು ಕೃಷ್ಣನು ನುಡಿದನು.

ಸೋಽವರ್ಧತ ಯಥಾಕಾಲಂ ಪಿತಾ ತವ ನರಾಧಿಪ ।
ಮನಃಪ್ರಹ್ಲಾದನಶ್ಚಾಸೀತ್ ಸರ್ವಲೋಕಸ್ಯ ಭಾರತ ॥೧೪॥

ನರಾಧಿಪನೇ, ನಿನ್ನ ತಂದೆಯು ಕಾಲಕ್ಕನುಗುಣವಾದ ಬೆಳವಣಿಗೆಯನ್ನು ಹೊಂದಿದನು. ಅವನ ಬೆಳವಣಿಗೆಯಿಂದ ಭರತವಂಶೀಯರೆಲ್ಲರ, ಪ್ರಜೆಗಳೆಲ್ಲರ ಮನಸ್ಸಿಗೆ ಅತ್ಯಂತ ಸಂತೋಷವಾಯಿತು.

ಮಾಸಂ ಜಾತಸ್ತು ತೇ ವೀರ ಪಿತಾ ಭವತಿ ಭಾರತ ।
ಅಥಾಜಗ್ಮುಃ ಸುಬಹುಲಂ ರತ್ನಮಾದಾಯ ಪಾಂಡವಾಃ ॥೧೫॥

ಜನಮೇಜಯನೇ, ನಿನ್ನ ತಂದೆಗೆ ಒಂದು ತಿಂಗಳು ಪೂರ್ಣವಾಗುತ್ತಿರಲು ಹಿಮವದ್ ಪರ್ವತಕ್ಕೆ ರತ್ನಗಳನ್ನು ಹೊತ್ತು ತರಲು ಹೋದ ಪಾಂಡವರೆಲ್ಲರೂ ಆಗಮಿಸಿದರು.

ಮೇರುಕೂಟನಿಭಾನ್ ಭಾಂಡಾನ್ ಕಲಶಾನ್ ಭಾಜನಾನಿ ಚ ।
ಕೃತಾಕೃತಂ ಮಹದ್ದ್ರವ್ಯಮಾದಾಯ ಪುರುಷೋತ್ತಮಾಃ ॥೧೬॥

ಮೇರುಪರ್ವತದ ಶಿಖರಕ್ಕೆ ಸದೃಶವಾದ ಭಾಂಡಗಳನ್ನು, ಕಲಶಗಳನ್ನು, ಪಾತ್ರೆಗಳನ್ನು, ಬಂಗಾರದ ಗಟ್ಟಿಗಳನ್ನು ಪುರುಷಶ್ರೇಷ್ಠರು ತೆಗೆದುಕೊಂಡು ಬರುತ್ತಿದ್ದರು.

ಭಾರಾರ್ತ್ಯೈರ್ವಾಹನೈಸ್ತತ್ರ ಗೋರುತೇ ಗೋರುತೇ ಪಥಿ ।
ನಿವಸಂತೋ ಯಯುರ್ದೇವಂ ಸ್ಮರಂತಃ ಪರಮೇಷ್ಠಿನಮ್ ॥೧೭॥

ಆ ಬಂಗಾರದ ಭಾರಗಳಿಂದ ದುಃಖಿತವಾದ ಒಂಟೆ, ಕುದುರೆಗಳಿಂದ ಕೂಡಿರುವ ಆ ಸೈನ್ಯವು ಗೂಳಿಯು ಕೂಗುವ ಧ್ವನಿಯು ಮುಕ್ತಾಯವಾಗುವಷ್ಟು ಸ್ಥಳದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಾ, ಭಗವಂತನನ್ನು ಸ್ಮರಿಸುತ್ತಾ ಆಗಮಿಸುತ್ತಿತ್ತು.

ನಾಸೀತ್ ತತ್ರ ನರಃ ಕಶ್ಚಿದ್ ಅಭಾರಾರ್ತೋ ನೃಪಂ ವಿನಾ ।
ಭೀಮಾದಯೋಽಪಿ ಯಜ್ಞಾರ್ಥಂ ವಹಂತೇ ಕಿಂ ಪುನರ್ಜನಾಃ ॥೧೮॥

ಧರ್ಮರಾಜನನ್ನು ಬಿಟ್ಟು ಬಂಗಾರವನ್ನು ಹೊರದೆ, ದುಃಖಿತರಾಗದೆ ಇರುವ ಒಬ್ಬ ವ್ಯಕ್ತಿಯೂ ಆ ಸೇನೆಯಲ್ಲಿರಲಿಲ್ಲ. ಭೀಮಸೇನನೇ ಮೊದಲಾದವರು ಯಜ್ಞಕ್ಕಾಗಿ ಪದಾರ್ಥಗಳನ್ನು ಹೊತ್ತು ತರುತ್ತಿರಲು ಜನರ ಬಗ್ಗೆ ಹೇಳುವುದೇನು?

ತಾನ್ ಸಮೀಪಗತಾನ್ ದೃಷ್ಟ್ವಾ ನಿರ್ಯಯುರ್ವೃಷ್ಣಿಪುಂಗವಾಃ ।
ಅಲಂಚಕ್ರುಶ್ಚ ಮಾಲ್ಯೈಶ್ಚ ನಗರಂ ನಾಗಸಾಹ್ವಯಮ್ ॥೧೯॥

ಆ ಬೃಹತ್ತಾದ ಸೇನೆಯು ನಗರದ ಸಮೀಪಕ್ಕೆ ಆಗಮಿಸುತ್ತಿರುವುದನ್ನು ಕಂಡು ವೃಷ್ಣಿಪುಂಗವರೆಲ್ಲರೂ ಅವರನ್ನು ಎದುರುಗೊಳ್ಳಲು ಹೊರಟರು. ಅನೇಕ ಮಾಲೆಗಳಿಂದ ಹಸ್ತಿನಾವತಿಯನ್ನು ಅಲಂಕರಿಸಿದರು.

ಪತಾಕಾಭಿರ್ವಿಚಿತ್ರಾಭಿರ್ಧ್ವಜೈಶ್ಚ ವಿವಿಧೈರಪಿ ।
ವೇಶ್ಮಾನಿ ಸಮಲಂಚಕ್ರುಃ ಪೌರಾಶ್ಚಾಪಿ ನರಾಧಿಪ ॥೨೦॥

ಚಿತ್ರ-ವಿಚಿತ್ರವಾದ ಪತಾಕೆಗಳಿಂದ, ನಾನಾವಿಧವಾದ ಧ್ವಜಗಳಿಂದ ಮನೆಗಳನ್ನು ಅಲಂಕರಿಸಿದರು. ಸ್ವತಃ ತಮ್ಮನ್ನೂ ಅಲಂಕರಿಸಿಕೊಂಡರು.

ದೇವತಾಯತನಾನಾಂ ಚ ಪೂಜಾ ಬಹುವಿಧಾಸ್ತಥಾ ।
ಸಂದಿದೇಶಾಥ ವಿದುರಃ ಪಾಂಡುಪುತ್ರಪ್ರಿಯೇಪ್ಸಯಾ ॥೨೧॥

ದೇವಾಲಯಗಳಲ್ಲಿ ಬಗೆ ಬಗೆಯ ಪೂಜೆಗಳನ್ನು ಸಲ್ಲಿಸಿದರು. ವಿದುರನು ಪಾಂಡುವಿನ ಮಕ್ಕಳಿಗೆ ಪ್ರಿಯವನ್ನುಂಟು ಮಾಡುವ ನಿಮಿತ್ತದಿಂದ ಎಲ್ಲೆಡೆಯೂ ದೇವತಾರಾಧನೆಯನ್ನು ಮಾಡಲು ಆದೇಶಿಸಿದನು.

ರಾಜಮಾರ್ಗಾಶ್ಚ ತತ್ರಾಸನ್ ಸುಮನೋಭಿರಲಂಕೃತಾಃ ।
ಶುಶುಭೇ ತತ್ಪುರಂ ಚಾಪಿ ಸಮುದ್ರೌಘನಿಭಸ್ವನಮ್ ॥೨೨॥

ಶ್ರೇಷ್ಠವಾದ ಪುಷ್ಪಗಳಿಂದಲೂ, ಸುಗಂಧಯುಕ್ತವಾದ ಮಾಲೆಗಳಿಂದಲೂ ರಾಜಮಾರ್ಗವು ಅಲಂಕೃತವಾಗಿತ್ತು. ಆ ಪಟ್ಟಣದಲ್ಲಿ ಬೃಹತ್ತಾದ ಸೇನೆಯು ಆಗಮಿಸುತ್ತಿರಲು ಸಮುದ್ರದ ಬೋರ್ಗರೆಯುವ ಶಬ್ದಕ್ಕೆ ಸದೃಶವಾದ ಶಬ್ದವು ಕೇಳಿ ಬರುತ್ತಿತ್ತು.

ನರ್ತಕೈಶ್ಚಾಪಿ ನೃತ್ಯದ್ಭಿರ್ಗಾಯಕಾನಾಂ ಚ ನಿಃಸ್ವನೈಃ ।
ಆಸೀದ್ವೈಶ್ರವಣಸ್ಯೇವ ನಿವಾಸಸ್ತತ್ ಪುರಂ ತದಾ ॥೨೩॥

ನರ್ತಕರು, ನೃತ್ಯ ಮಾಡುವ ಶಬ್ದಗಳು, ಗಾಯಕರು ಹಾಡು ಹೇಳುವ ಶಬ್ದಗಳು, ಇವೆಲ್ಲದರಿಂದ ದೂರದಿಂದ ನೋಡಿದರೆ ಹಸ್ತಿನಾವತಿಯು ಕುಬೇರನ ಅಲಕಾಪಟ್ಟಣಕ್ಕೆ ಸಮಾನವಾಗಿ ಕಂಡುಬರುತ್ತಿತ್ತು.

ವಂದಿಭಿಶ್ಚ ನರೈ ರಾಜನ್ ಸ್ತ್ರೀಸಹಾಯೈಃ ಸಹಸ್ರಶಃ ।
ತತ್ರ ತತ್ರ ವಿವಿಕ್ತೇಷು ಸಮಂತಾದುಪಶೋಭಿತಮ್ ॥೨೪॥

ಸ್ತ್ರೀಯರಿಂದ, ಸಾವಿರಾರು ಸಂಖ್ಯೆಯಲ್ಲಿ ಕೂಡಿರುವ ವಂದಿ-ಮಾಗಧರಿಂದ ಆ ಪಟ್ಟಣವು ಅಲಂಕೃತವಾಗಿತ್ತು. ಹಸ್ತಿನಾಪುರವು ಶೋಭಾಯಮಾನವಾಗಿ ಎಲ್ಲೆಡೆಯೂ ಕಾಣುತ್ತಿತ್ತು.

ಪತಾಕಾ ಧೂಯಮಾನಾಶ್ಚ ಸಮಂತಾನ್ಮಾತರಿಶ್ವನಾ ।
ಅದರ್ಶಯನ್ನಿವ ತದಾ ಕುರೂನ್ ವೈ ದಕ್ಷಿಣೋತ್ತರಾನ್ ॥೨೫॥

ಅಲ್ಲಲ್ಲಿ ಪತಾಕೆಗಳು ಗಾಳಿ ಬೀಸುವುದರಿಂದ ಎಲ್ಲೆಡೆಯೂ ಹಾರಾಡುತ್ತಿದ್ದವು. ದಕ್ಷಿಣ ಮತ್ತು ಉತ್ತರ ಕುರುದೇಶಗಳ ಶೋಭೆಯನ್ನು ಆ ಹಸ್ತಿನಾಪಟ್ಟಣದಲ್ಲಿಯೇ ನೋಡಬಹುದಾಗಿತ್ತು.

ಅಘೋಷಯಂಸ್ತದಾ ಚಾಪಿ ಪುರುಷಾ ರಾಜಮಾರ್ಗತಃ ।
ಸರ್ವರಾತ್ರವಿಹಾರೋಽದ್ಯ ರತ್ನಾಭರಣಲಕ್ಷಣಃ ॥೨೬॥

ರಾಜಕಾರ್ಯದಲ್ಲಿ ಸತ್ಪರರಾದ ಪುರುಷರು ಇಂದು ರಾಜ್ಯೋತ್ಸವವಾಗಿದೆ. ಸ್ತ್ರೀ-ಪುರುಷರೆಲ್ಲರೂ ಉತ್ತಮೋತ್ತಮವಾದ ರತ್ನಾಭರಣವನ್ನು ಧರಿಸಿಕೊಂಡು, ಬಹು ಮೌಲ್ಯವಾದ ಆಭರಣಗಳನ್ನು ಧರಿಸಿ ಈ ರಾಷ್ಟ್ರೋತ್ಸವದಲ್ಲಿ ಭಾಗವಹಿಸಿ ಎಂದು ಎಲ್ಲ ಕಡೆಯೂ ಸಾರುತ್ತಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಹಸ್ತಿನಾಪುರಿ ಶೃಂಗಾರಕಥನಂ ನಾಮ ಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೦ನೇ ಅಧ್ಯಾಯ

ತತಃ ಕೃಷ್ಣಾಭ್ಯನುಜ್ಞಾತಾಃ ಪಾರಾಶರ್ಯಸದಸ್ಯಕಾಃ ।
ಆರೇಭಿರೇಽಶ್ವಮೇಧಂ ತೇ ಮುನಿಭಿರ್ಬ್ರಹ್ಮವಾದಿಭಿಃ ॥

ಬಳಿಕ ಪಾಂಡವರು ಶ್ರೀಕೃಷ್ಣನಿಂದ ಅನುಜ್ಞೆಯನ್ನು ಪಡೆದು ವೇದವ್ಯಾಸರನ್ನು ಸದಸ್ಯರನ್ನಾಗಿ ಮಾಡಿಕೊಂಡು ಬ್ರಹ್ಮವಾದಿಗಳಾದ ಮುನಿಗಳೊಂದಿಗೆ ಅಶ್ವಮೇಧ ಯಾಗವನ್ನು ಆರಂಭಿಸಿದರು.

ಸರ್ವಯಜ್ಞಾತ್ಮಕಂ ತೇಷಾಮಶ್ವಮೇಧಂ ಜಗತ್ಪತಿಃ ।
ಕಾರಯಾಮಾಸ ಭಗವಾನ್ ಕೃಷ್ಣದ್ವೈಪಾಯನಃ ಸ್ವಯಮ್ ॥

ಜಗದೊಡೆಯರಾದ ಭಗವಾನ್ ಶ್ರೀವೇದವ್ಯಾಸರು ಸ್ವತಃ ಪಾಂಡವರ ಅಶ್ವಮೇಧ ಯಾಗವನ್ನು ಸರ್ವಯಜ್ಞ ಸ್ವರೂಪವಾಗುವಂತೆ ನಡೆಸಿಕೊಟ್ಟರು.

ಸಾಧನಾನಿ ತು ಸರ್ವಾಣಿ ಶಾಲಾಂ ಚೈವ ಹಿರಣ್ಮಯೀಮ್ ।
ಪವಮಾನಸುತಶ್ಚಕ್ರೇ ಕೃಷ್ಣದ್ವೈಪಾಯನೇರಿತಃ ॥

ಎಲ್ಲ ಯಜ್ಞ ಸಾಧನಗಳನ್ನೂ ಸುವರ್ಣಮಯವಾದ ಯಜ್ಞಶಾಲೆಯನ್ನೂ ವೇದವ್ಯಾಸರ ಆದೇಶದಂತೆ ಭೀಮಸೇನನೇ ಸಿದ್ಧಪಡಿಸಿದನು.

★ ★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಕೃಷ್ಣನು ಪರಿವಾರದವರ ಜೊತೆ ಪಾಂಡವರನ್ನು ಸ್ವಾಗತಿಸಿದುದು.
ಸ್ವರ್ಣಭಾರ ಸಹಿತರಾಗಿ ಪಾಂಡವರು ಹಸ್ತಿನಾವತಿಗೆ ಆಗಮಿಸಿದುದು.
ವ್ಯಾಸ-ಕೃಷ್ಣರು ಧರ್ಮಜನಿಗೆ ಯಾಗ ಮಾಡಲು ಆದೇಶಿಸಿದುದು.

ವೈಶಂಪಾಯನಃ

ತಾನ್ ಸಮೀಪಗತಾನ್ ಶ್ರುತ್ವಾ ಪಾಂಡವಾನ್ ಶತ್ರುಕರ್ಶನಃ ।
ವಾಸುದೇವಃ ಸಹಾಮಾತ್ಯಃ ಪ್ರತ್ಯುದ್ಯಾತೋ ದಿದೃಕ್ಷಯಾ ॥೧॥

ವೈಶಂಪಾಯನ– ಶತ್ರುಕರ್ಶನನಾದ ಶ್ರೀಕೃಷ್ಣನು ಹಸ್ತಿನಾಪುರದ ಸಮೀಪಕ್ಕೆ ಪಾಂಡವರು ಬಂದಿರುವ ಸಮಾಚಾರವನ್ನು ತಿಳಿದು ಮಿತ್ರರಿಂದಲೂ, ಅಮಾತ್ಯರಿಂದಲೂ ಸೇರಿಕೊಂಡು ಸ್ವಾಗತಿಸಲು ಮಹಾದ್ವಾರದ ಬಳಿ ಸಾಗಿದನು.

ತೇ ಸಮೇತ್ಯ ಯಥಾನ್ಯಾಯಂ ಪಾಂಡವಾ ವೃಷ್ಣಿಭಿಃ ಸಹ ।
ವಿವಿಶುಃ ಸಹಿತಾ ರಾಜನ್ ಪುರಂ ವಾರಣಸಾಹ್ವಯಮ್ ॥೨॥

ಅಂಧಕರು, ವೃಷ್ಣಿಗಳು ಪಾಂಡವರನ್ನು ನೋಡಲು ಮುಂದೆ ಸಾಗಿ ಹೃದಯ ಪೂರ್ಣವಾಗಿ ಸ್ವಾಗತಿಸಿದರು. ನ್ಯಾಯಮಾರ್ಗದಿಂದ ಧರ್ಮಾನುಸಾರವಾಗಿ ಇಬ್ಬರೂ ಸೇರಿ ಹಸ್ತಿನಾಪುರವನ್ನು ಪ್ರವೇಶಿಸಿದರು.

ಮಹತಸ್ತಸ್ಯ ಸೈನ್ಯಸ್ಯ ರಥನೇಮಿಸ್ವನೇನ ಚ ।
ದ್ಯಾವಾಪೃಥಿವ್ಯೌ ಖಂ ಚೈವ ಶಬ್ದೇನಾಸೀತ್ ಸಮಾವೃತಮ್ ॥೩॥

ಪಾಂಡವರ ದೊಡ್ಡದಾದ ಸೈನ್ಯದ ಶಬ್ದದಿಂದಲೂ, ಕುದುರೆಗಳ ಗೊರಸಿನ ರಥ ಶಬ್ದದಿಂದಲೂ ಭೂಮಿ-ಸ್ವರ್ಗಗಳ ನಡುವಿನ ಅಂತರಿಕ್ಷಲೋಕವು ತುಂಬಿಹೋಯಿತು.

ತೇ ಕೋಶಮಗ್ರತಃ ಕೃತ್ವಾ ವಿವಿಶುಃ ಸ್ವಪುರಂ ತದಾ ।
ಪಾಂಡವಾಃ ಪ್ರೀತಮನಸಃ ಸಾಮಾತ್ಯಾಃ ಸಸುಹೃದ್ಗಣಾಃ ॥೪॥

ಪ್ರಸನ್ನಚಿತ್ತರಾದ ಪಾಂಡವರು ಅಮಾತ್ಯರಿಂದೊಡಗೂಡಿ, ಸ್ನೇಹಿತರಿಂದ ಕೂಡಿಕೊಂಡು ಹಿಮವದ್ ಪರ್ವತದಿಂದ ತಂದಿರುವ ರತ್ನದಿಂದ ತುಂಬಿದ್ದ ಪೆಟ್ಟಿಗೆಗಳನ್ನು ಹೊತ್ತುಕೊಂಡು ಹಸ್ತಿನಾವತಿಯನ್ನು ಪ್ರವೇಶಿಸಿದರು.

ತೇ ಸಮೇತ್ಯ ಯಥಾನ್ಯಾಯಂ ಧೃತರಾಷ್ಟ್ರಂ ಜನೇಶ್ವರಮ್ ।
ಕೀರ್ತಯಂತಃ ಸ್ವನಾಮಾನಿ ತಸ್ಯ ಪಾದೌ ವವಂದಿರೇ ॥೫॥

ಅರಮನೆಯನ್ನು ಸೇರಿದ ಪಾಂಡವರು ಒಟ್ಟಾಗಿ ಜನೇಶ್ವರನಾದ ಧೃತರಾಷ್ಟ್ರನ ಬಳಿಗೆ ಬಂದು ನ್ಯಾಯೋಚಿತವಾದ ರೀತಿಯಲ್ಲಿ ತಮ್ಮ ತಮ್ಮ ಹೆಸರುಗಳನ್ನು ಹೇಳಿ ಅವನ ಪಾದಗಳಿಗೆ ನಮಸ್ಕರಿಸಿದರು.

ಧೃತರಾಷ್ಟ್ರಸ್ಯಾನುಮತೇ ಗಾಂಧಾರೀಂ ಸುಬಲಾತ್ಮಜಾಮ್ ।
ಕುಂತೀಂ ಚ ರಾಜಶಾರ್ದೂಲ ತದಾ ಭರತಸತ್ತಮಾಃ ॥೬॥

ಧೃತರಾಷ್ಟ್ರನಿಗೆ ನಮಿಸಿದ ತರುವಾಯ ಸುಬಲನ ಮಗಳಾದ ಗಾಂಧಾರಿಯನ್ನೂ, ಕುಂತಿಯನ್ನು ನಮಸ್ಕರಿಸಿದರು.

ವಿದುರಂ ಪೂಜಯಿತ್ವಾ ಚ ವೈಶ್ಯಾಪುತ್ರಂ ಸಮೇತ್ಯ ಚ ।
ಪೂಜ್ಯಮಾನಾಸ್ತು ತೇ ವೀರಾ ವ್ಯರಾಜಂತ ವಿಶಾಂಪತೇ ॥೭॥

ವಿದುರನನ್ನು ಯಥೋಚಿತವಾಗಿ ಪೂಜಿಸಿ, ವೈಶ್ಯ ಜಾತಿಯವಳಲ್ಲಿ ಹುಟ್ಟಿದವನಾದ ಯುಯುತ್ಸುವನ್ನು ಕಂಡು ಪ್ರೀತಿಯಿಂದ ಆಲಂಗಿಸಿಕೊಂಡರು. ಅವರೆಲ್ಲರಿಂದಲೂ ಸಮ್ಮಾನಿತರಾದ ಪಾಂಡವರು ಸುಂದರವಾಗಿ ಬೆಳಗಿದರು.

ತತಸ್ತತ್ ಪರಮಾಶ್ಚರ್ಯಂ ವಿಚಿತ್ರಂ ಮಹದದ್ಭುತಮ್ ।
ಶುಶ್ರುವುಸ್ತೇ ಮಹಾವೀರಾಃ ಪಿತುಸ್ತೇ ಜನ್ಮ ಭಾರತ ॥೮॥

ಬಳಿಕ ವೀರಶಿರೋಮಣಿಗಳಾದ ಪಾಂಡವರು ಅತ್ಯಂತ ಆಶ್ಚರ್ಯಕರವಾದ, ವಿಚಿತ್ರವಾದ, ಪರಮಾದ್ಭುತವಾದ ನಿನ್ನ ತಂದೆಯ ಜನ್ಮವೃತ್ತಾಂತವನ್ನು ಕೇಳಿಸಿಕೊಂಡರು.

ತದುಪಶ್ರುತ್ಯ ತೇ ಕರ್ಮ ವಾಸುದೇವಸ್ಯ ಧೀಮತಃ ।
ಪೂಜಾರ್ಹಂ ಪೂಜಯಾಮಾಸುಃ ಕೃಷ್ಣಂ ದೇವಕಿನಂದನಮ್ ॥೯॥

ಶ್ರೀಕೃಷ್ಣನ ಅಲೌಕಿಕವಾದ ಮಹಿಮೆಯನ್ನು ಕೇಳಿಸಿಕೊಂಡ ಪಾಂಡವರು ದೇವಕೀ ಸುತನಾದ, ಪೂಜಿಸಲು ಅರ್ಹನಾದ ಕೃಷ್ಣನನ್ನು ಯಥಾಯೋಗ್ಯವಾಗಿ ಪೂಜಿಸಿದರು.

ತತಃ ಕತಿಪಯಾಹಸ್ಸು ವ್ಯಾಸಃ ಸತ್ಯವತೀಸುತಃ ।
ಆಜಗಾಮ ಮಹಾತೇಜಾ ನಗರಂ ನಾಗಸಾಹ್ವಯಮ್ ॥೧೦॥

ಈ ಎಲ್ಲ ಕಾರ್ಯಗಳು ನಡೆದು ಕೆಲವು ದಿವಸಗಳ ಬಳಿಕ ಸತ್ಯವತೀಸುತರಾದ, ಮಹಾತೇಜಸ್ವಿಗಳಾದ ವ್ಯಾಸರು ಹಸ್ತಿನಾವತಿಯನ್ನು ಆಗಮಿಸಿದರು.

ತಸ್ಯ ಸರ್ವೇ ಯಥಾನ್ಯಾಯಂ ಪೂಜಾಂ ಚಕ್ರುಃ ಕುರೂದ್ವಹಾಃ ।
ಸಹ ವೃಷ್ಣ್ಯಂಧಕವ್ಯಾಘ್ರೈಃ ಉಪಾಸಾಂಚಕ್ರಿರೇ ತದಾ ॥೧೧॥

ಆಗಮಿಸಿದ ವ್ಯಾಸರನ್ನೂ, ಕುರುಕುಲ ತಿಲಕರಾದ ಪಾಂಡವರೆಲ್ಲರೂ ಯಥಾಯೋಗ್ಯವಾಗಿ ಸತ್ಕರಿಸಿ ನಮಿಸಿದರು. ವೃಷ್ಣ್ಯಂಧಕ ಶ್ರೇಷ್ಠರೊಡನೆ ವ್ಯಾಸರ ಸೇವೆಯಲ್ಲಿ ನಿರತರಾದರು.

ತತ್ರ ನಾನಾವಿಧಾಕಾರಾಃ ಕಥಾಃ ಸಮನುಕೀರ್ತ್ಯ ವೈ ।
ಯುಧಿಷ್ಠಿರೋ ಧರ್ಮಸುತೋ ವ್ಯಾಸಂ ವಚನಮಬ್ರವೀತ್ ॥೧೨॥

ಅನೇಕ ವಿಧವಾದ ಕಥೆಗಳನ್ನೂ ವ್ಯಾಸರ ಮುಖದಿಂದ ಕೇಳುತ್ತಾ ಇರುವಾಗಲೇ ಧರ್ಮಸುತನಾದ ಯುಧಿಷ್ಠಿರನು ವ್ಯಾಸರನ್ನು ಕುರಿತು ಇಂತು ನುಡಿದನು.

ಯುಧಿಷ್ಠಿರಃ

ಭವತ್ಪ್ರಸಾದಾದ್ ಭಗವನ್ ಯದಿದಂ ರತ್ನಮಾಹೃತಮ್ ।
ಉಪಯೋಕ್ತುಂ ತದಿಚ್ಛಾಮಿ ವಾಜಿಮೇಧೇ ಮಹಾಕ್ರತೌ ॥೧೩॥

ಯುಧಿಷ್ಠಿರ– ಪೂಜ್ಯರೇ, ತಮ್ಮ ಅನುಗ್ರಹದಿಂದ ಕಣ್ಣಿಗೆ ಕಾಣಿಸುತ್ತಿರುವ ಈ ಮಹೇಶ್ವರ್ಯವನ್ನು ತಂದಿರುತ್ತೇವೆ. ಅಶ್ವಮೇಧ ಮಹಾಯಜ್ಞದಲ್ಲಿ ಇದೆಲ್ಲವನ್ನೂ ವಿನಿಯೋಗಿಸುವಂತೆ ನೀವು ಅನುಮತಿಯನ್ನು ನೀಡಿರಿ.

ತದನುಜ್ಞಾತುಮಿಚ್ಛಾಮಿ ಭವತಾ ಮುನಿಸತ್ತಮ ।
ತ್ವದಧೀನಾ ವಯಂ ಸರ್ವೇ ಕೃಷ್ಣೇನ ಚ ಮಹಾತ್ಮನಾ ॥೧೪॥

ಮುನಿಶ್ರೇಷ್ಠರೇ, ಪೂಜ್ಯರಾದ ನಿಮ್ಮಿಂದ ಅಶ್ವಮೇಧ ಯಜ್ಞಕ್ಕೆ ಅನುಮತಿಯನ್ನು ಬಯಸುತ್ತಿದ್ದೇನೆ. ನಾವೆಲ್ಲರೂ ಮಹಾತ್ಮನಾದ ಶ್ರೀಕೃಷ್ಣಮತ್ತು ನಿಮ್ಮ ವಶರಾಗಿದ್ದೇವೆ.

ವ್ಯಾಸಃ

ಅನುಜಾನಾಮಿ ರಾಜಂಸ್ತ್ವಂ ಕ್ರಿಯತಾಂ ಯದನಂತರಮ್ ।
ಯಜಸ್ವ ವಾಜಿಮೇಧೇನ ವಿಧಿವದ್ ದಕ್ಷಿಣಾವತಾ ॥೧೫॥

ವ್ಯಾಸರು– ಮಹಾರಾಜನೇ, ನಿನಗೆ ಯಜ್ಞ ಮಾಡಲು ಅನುಮತಿಯನ್ನು ನೀಡುತ್ತಿದ್ದೇನೆ. ಮುಂದೆ ಮಾಡಬೇಕಾದ ಕಾರ್ಯಗಳನ್ನು ತಡಮಾಡದೆ ಮಾಡು. ವಿಧಿವತ್ತಾಗಿ ಬಹುದಕ್ಷಿಣಾಕವಾದ ಅಶ್ವಮೇಧ ಯಾಗವನ್ನು ಮಾಡುವ ಮೂಲಕ ದೇವತೆಗಳನ್ನು ಸಂತೋಷಪಡಿಸು.

ಅಶ್ವಮೇಧೋ ಹಿ ರಾಜೇಂದ್ರ ಪಾವನಃ ಸರ್ವಪಾಪ್ಮನಾಮ್ ।
ತೇನೇಷ್ಟ್ವಾ ತ್ವಂ ವಿಪಾಪ್ಮಾ ವೈ ಭವಿತಾ ನಾತ್ರ ಸಂಶಯಃ ॥೧೬॥

ಮಹಾರಾಜನೇ, ಅಶ್ವಮೇಧ ಯಾಗವು ಸಮಸ್ತ ಪಾಪನಾಶಕವಾದ ಯಾಗವಾಗಿ ಯಜಮಾನನನ್ನು ಪವಿತ್ರಗೊಳಿಸುತ್ತದೆ. ಅಶ್ವಮೇಧದ ಮೂಲಕ ನೀನು ದೇವತೆಗಳನ್ನು ತೃಪ್ತಿಗೊಳಿಸಿ ಪಾಪಮುಕ್ತನಾಗುವಿ. ಇದರಲ್ಲಿ ಸಂಶಯವಿಲ್ಲ.

ವೈಶಂಪಾಯನಃ

ಇತ್ಯುಕ್ತಃ ಸ ತು ಧರ್ಮಾತ್ಮಾ ಕುರುರಾಜೋ ಯುಧಿಷ್ಠಿರಃ ।
ಅಶ್ವಮೇಧಸ್ಯ ಕೌರವ್ಯ ಚಕಾರಾಹರಣೇ ಮತಿಮ್ ॥೧೭॥

ವೈಶಂಪಾಯನ– ಧರ್ಮಾತ್ಮನಾದ ಯುಧಿಷ್ಠಿರನು ವ್ಯಾಸರಿಂದ ಹೀಗೆ ಅಶ್ವಮೇಧ ಯಾಗವನ್ನು ಮಾಡಲು ಆಜ್ಞಾಪಿಸಿಕೊಂಡ ಬಳಿ ಅದರಂತೆ ಯಜ್ಞ ಮಾಡಲು ನಿರ್ಧರಿಸಿಕೊಂಡನು.

ಸಮನುಜ್ಞಾಪ್ಯ ತು ಸ ತಂ ಕೃಷ್ಣದ್ವೈಪಾಯನಂ ನೃಪ ।
ವಾಸುದೇವಮಥಾಮಂತ್ರ್ಯ ವಾಗ್ಮೀ ವಚನಮಬ್ರವೀತ್ ॥೧೮॥

ವೇದವ್ಯಾಸರಿಂದ ಧರ್ಮರಾಜನು ಎಲ್ಲ ಕಾರ್ಯಗಳಿಗೂ ಅನುಮತಿಯನ್ನು ಪಡೆದು ಬಳಿಕ ವಾಗ್ಮಿಯಾದ ಧರ್ಮಜನು ವಾಸುದೇವನ ಬಳಿ ತೆರಳಿ ಇಂತು ನುಡಿದನು.

ಯುಧಿಷ್ಠಿರಃ

ದೇವಕೀ ಸುಪ್ರಜಾ ದೇವ ತ್ವಯಾ ಪುರುಷಸತ್ತಮ ।
ಯದ್ ಬ್ರೂಯಾಸ್ತ್ವಂ ಮಹಾಬಾಹೋ ತತ್ ಕುರ್ಯಾಮಹಮಚ್ಯುತ॥

ಯುಧಿಷ್ಠಿರ– ಪುರುಷೋತ್ತಮನಾದ, ಮಹಾಬಾಹುವಾದ ಅಚ್ಯುತನೇ, ನಿನ್ನನ್ನು ಪಡೆದ ದೇವಕಿಯು ಸುಪ್ರಜಾ ಎಂಬ ಕೀರ್ತಿಗೆ ಭಾಜನಳಾದಳು. ನಾನು ನಿನಗೆ ಯಾವ ಕಾರ್ಯವನ್ನು ಮಾಡಲು ಪ್ರಾರ್ಥಿಸುತ್ತೇನೋ ಅದನ್ನು ನೀನು ಇಲ್ಲಿ ಪೂರೈಸಿಕೊಡಬೇಕು.

ತ್ವಂ ಗತಿಃ ಸರ್ವಭೂತಾನಾಮಿತಿ ಮೇ ನಿಶ್ಚಿತಾ ಮತಿಃ ।
ತತ್ತ್ವಭಾವಾರ್ಜಿತಾನ್ ಭೋಗಾನಶ್ನೀಮೋ ಯದುನಂದನ ॥೨೦॥

ಕೃಷ್ಣನೇ, ಸಮಸ್ತ ಪ್ರಾಣಿ ಪ್ರಪಂಚಕ್ಕೂ ನೀನೇ ಗತಿಯು ಎಂದು ನನ್ನ ಮತಿಯು ನಿಶ್ಚಯ ಹೊಂದಿದೆ. ನಿನ್ನ ಅನುಗ್ರಹದಿಂದಲೇ ಸಂಪಾದಿತವಾದ ಐಶ್ವರ್ಯಗಳು, ನಿನ್ನ ಅನುಗ್ರಹದಿಂದಲೇ ನಾವೆಲ್ಲರೂ ಸುಖವನ್ನು ಅನುಭವಿಸುತ್ತಿದ್ದೇವೆ.

ಪರಾಕ್ರಮೇಣ ಬುದ್ಧ್ಯಾ ಚ ತವೇಯಂ ನಿರ್ಜಿತಾ ಮಹೀ ॥೨೧॥

ನಿನ್ನ ಪರಾಕ್ರಮದಿಂದಲೇ, ನಿನ್ನ ಬುದ್ಧಿಯಿಂದಲೇ ಸಮಗ್ರ ಈ ಭೂಮಂಡಲವು ನಮ್ಮಿಂದ ಹೊಂದಲ್ಪಟ್ಟಿದೆ.

ದೀಕ್ಷಯಸ್ವ ತ್ವಮಾತ್ಮಾನಂ ತ್ವಂ ಹಿ ನಃ ಪರಮೋ ಗುರುಃ ।
ತ್ವಯೀಷ್ಟವತಿ ಧರ್ಮಜ್ಞ ವಿಪಾಪ್ಮಾ ಸ್ಯಾಮಹಂ ವಿಭೋ ॥೨೨॥

ಶ್ರೀಕೃಷ್ಣನೇ, ನೀನೇ ನಮ್ಮ ಪಾಪಿಗೆ ಪರಮಗುರುವಾಗಿರುವಿ. ಆದ್ದರಿಂದ ಈ ಅಶ್ವಮೇಧ ಯಜ್ಞದಲ್ಲಿ ನೀನೇ ದೀಕ್ಷೆಯನ್ನು ಸ್ವೀಕರಿಸು. ವಿಭುವೇ, ನೀನು ಧರ್ಮಜ್ಞನಾಗಿರುವಿ. ಈ ಅಶ್ವಮೇಧ ಯಜ್ಞದಲ್ಲಿನೀನು ಕ್ರಿಯಾಶೀಲನಾದಲ್ಲಿನಾನು ಪಾಪದಿಂದ ಬಿಡುಗಡೆಯನ್ನು ಹೊಂದುತ್ತೇನೆ.

ತ್ವಂ ಹಿ ಯಜ್ಞೋಽಕ್ಷರಃಶಬ್ದೋ ಧರ್ಮಜ್ಞಸ್ತ್ವಂ ಪ್ರಜಾಪತಿಃ ॥೨೩॥

ಶ್ರೀಕೃಷ್ಣನೇ, ನೀನೇ ಯಜ್ಞನಾಗಿರುವಿ. ನೀನೇ ಅಕ್ಷರನಾಗಿರುವಿ. ನೀನೇ ವೇದರೂಪನೂ ಆಗಿರುವಿ. ನೀನೇ ಪ್ರಜಾಪತಿಯು, ನೀನೇ ಧರ್ಮಜ್ಞನು.

ಶ್ರೀಭಗವಾನ್

ತ್ವಮೇವೈತನ್ಮಹಾಬಾಹೋ ವಕ್ತುಮರ್ಹಸ್ಯರಿಂದಮ ।
ತ್ವಂ ಗತಿಃ ಸರ್ವಭೂತಾನಾಮಿತಿ ಮೇ ನಿಶ್ಚಿತಾ ಮತಿಃ ॥೨೪॥

ಶ್ರೀಭಗವಾನ್– ಮಹಾಬಾಹುವಾದ ಧರ್ಮಜನೇ, ಇಂತಹ ಸುಂದರವಾದ ಮಾತುಗಳನ್ನಾಡಲು ನೀನೇ ಅರ್ಹನಾಗಿದ್ದಿ. ಆದರೆ ಇಂದು ವಾಸಿಸುವ ಎಲ್ಲ ಪ್ರಾಣಿಗಳಿಗೂ ನೀನೇ ರಾಜನಾಗಿರುವಿ ಎಂಬ ನಿಶ್ಚಯವು ನನಗಿರುವುದು.

ತ್ವಂ ಚಾದ್ಯ ಕುರುವೀರಾಣಾಂ ಧರ್ಮೇಣಾತಿ ವಿರಾಜಸೇ ।
ಗುರುಭೂತಸ್ತು ಮೇ ರಾಜನ್ ತ್ವಂ ನೋ ರಾಜಾ ಮತೋ ಗುರುಃ ॥

ಕುರುವೀರರಲ್ಲಿ ಧರ್ಮದಿಂದ ಕಂಗೊಳಿಸುವ ರಾಜನು ಇಂದು ನೀನಾಗಿರುವಿ. ರಾಜನಾದ ನೀನೇ ಎಲ್ಲರಿಗೂ ಗುರುವಾಗಿರುವಿ. ನನಗೂ ಗುರುವಾಗಿರುವಿ ಎಂದು ಭಾವಿಸುತ್ತೇನೆ.

ಯಜಸ್ವ ವಾಜಿಮೇಧೇನ ಪ್ರಾಪ್ತ ಏಷ ಕ್ರತುಸ್ತ್ವಯಾ ।
ಯುನಕ್ತು ನೋ ಭವಾನ್ ಕಾರ್ಯೇ ಯತ್ರ ವಾಚ್ಛತಿ ಭಾರತ ॥೨೬॥

ಭಗವದನುಗ್ರಹದಿಂದ ಅಶ್ವಮೇಧ ಯಾಗವನ್ನು ಮಾಡುವ ಯೋಗವು ನಿನಗೆ ಲಭಿಸಿದೆ. ಅಶ್ವಮೇಧ ಯಾಗವನ್ನು ಉಪಕ್ರಮಿಸು. ನೀನು ಬಯಸಿದ ಯಾವ ಕಾರ್ಯವನ್ನಾದರೂ ಮಾಡಲು ನಾನು ಸಿದ್ಧನಿದ್ದೇನೆ. ಸತ್ಕರ್ಮದಲ್ಲಿ ನನ್ನನ್ನು ನಿಯೋಜಿಸು.

ಸತ್ಯಂ ತೇ ಪ್ರತಿಜಾನಾಮಿ ಸರ್ವಂ ಕರ್ತಾಸ್ಮಿ ತೇಽನಘ ॥೨೭॥

ಧರ್ಮಜನೇ, ನಿನ್ನ ಬಳಿ ಸತ್ಯಪ್ರತಿಜ್ಞೆಯನ್ನು ಮಾಡುತ್ತೇನೆ. ನೀನೇ ಆದೇಶಿಸು. ಎಲೈ ಅನಘನೇ, ನೀನು ಹೇಳಿದ್ದೆಲ್ಲವನ್ನೂ ನಾನು ಆಚರಿಸುತ್ತೇನೆ.

ಭೀಮಸೇನಾರ್ಜುನೌ ಚೈವ ತಥಾ ಮಾದ್ರವತೀಸುತೌ ।
ಇಷ್ಟವಂತೋ ಭವಿಷ್ಯಂತಿ ತ್ವಯೀಷ್ಟವತಿ ಪಾರ್ಥಿವ ॥೨೮॥

ಧರ್ಮಜನೇ, ನೀನು ಯಜ್ಞವನ್ನು ಮಾಡಿದಲ್ಲಿ ಭೀಮಾರ್ಜುನರೂ, ಮಾದ್ರೀ ಸುತರಾದ ನಕುಲ-ಸಹದೇವರೂ ಯಜ್ಞ ಮಾಡಿದವರೇ ಆಗುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ದೀಕ್ಷಾಂ ಕುರ್ವತಿ ಕೃಷ್ಣವಚನಂ ನಾಮ
ಏಕಸಪ್ತತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ವೇದವ್ಯಾಸರು ಯುಧಿಷ್ಠಿರನಿಗೆ ಪೃಥಿವಿಯಲ್ಲಿ ಸಂಚರಿಸಲು ಯಜ್ಞಾಶ್ವವನ್ನು ಬಿಡುವಂತೆ ಪ್ರಚೋದಿಸಿದುದು. ಅದರಂತೆ ಅಶ್ವವನ್ನು ರಕ್ಷಿಸಲು ಅರ್ಜುನನನ್ನು ನಿಯೋಜಿಸಿದುದು.

ವೈಶಂಪಾಯನಃ

ಏವಮುಕ್ತಸ್ತು ಕೃಷ್ಣೇನ ಧರ್ಮರಾಜೋ ಯುಧಿಷ್ಠಿರಃ ।
ವ್ಯಾಸಮಾಮಂತ್ರ್ಯ ಮೇಧಾವೀ ತತೋ ವಚನಮಬ್ರವೀತ್ ॥೧॥

ವೈಶಂಪಾಯನ– ಜನಮೇಜಯನೇ, ಶ್ರೀಕೃಷ್ಣನು ಅಶ್ವಮೇಧ ಯಾಗವನ್ನು ಮಾಡುವಂತೆಯೇ, ಅದಕ್ಕೆ ತನ್ನ ಸಂಪೂರ್ಣವಾದ ಸಹಕಾರವಿದೆ ಎಂದು ಹೇಳಲು ಮೇಧಾವಿಯಾದ ಧರ್ಮಪುತ್ರನಾದ ಯುಧಿಷ್ಠಿರನು ವ್ಯಾಸರನ್ನು ಕರೆಸಿ ಇಂತು ನುಡಿದನು.

ಯುಧಿಷ್ಠಿರಃ

ಯದಾ ಕಾಲಂ ಭವಾನ್ ವೇತ್ತಿ ಹಯಮೇಧಸ್ಯ ತತ್ತ್ವತಃ ।
ದೀಕ್ಷಯಸ್ವ ತದಾऽऽತ್ಮಾನಂ ತ್ವದಾಯತ್ತೋ ಹಿ ಮೇ ಕ್ರತುಃ ॥೨॥

ಯುಧಿಷ್ಠಿರ– ಪೂಜ್ಯರೇ, ಅಶ್ವಮೇಧ ಯಾಗವನ್ನು ಮಾಡಲು ಯೋಗ್ಯವಾದ ಕಾಲ ಯಾವುದು? ನೀವು ವಿಧಿವತ್ತಾಗಿ ಎಲ್ಲವನ್ನೂ ತಿಳಿದಿರುವಿರಿ. ನಿಮ್ಮ ಅಧೀನವಾಗಿ ನನ್ನ ಯಜ್ಞವು ನಡೆಯುತ್ತದೆ. ನೀವು ಹೇಳಿದಾಗ ಅಶ್ವಮೇಧ ಯಜ್ಞದಲ್ಲಿ ನಾನು ದೀಕ್ಷೆಯನ್ನು ಸ್ವೀಕರಿಸುತ್ತೇನೆ.

ವ್ಯಾಸಃ

ಅಹಂ ಪೈಲೋऽಥ ಕೌಂತೇಯ ಯಾಜ್ಞವಲ್ಕ್ಯಸ್ತಥೈವ ಚ ।
ವಿಧಾನಂ ಯದ್ಯಥಾಕಾಂ ತತ್ ಕರ್ತಾರೋ ನ ಸಂಶಯಃ ॥೩॥

ವ್ಯಾಸರು– ಧರ್ಮರಾಜನೇ, ನಿನ್ನಿಂದ ಯಜ್ಞವನ್ನು ಮಾಡುವ ಕಾಲವು ಸನ್ನಿಹಿತವಾದ ಕೂಡಲೇ ಪೈಲ, ಯಾಜ್ಞವಲ್ಕ್ಯ ಇವರೇ ಮುಂತಾದ ಋತ್ವಿಜರೊಡನೆ ನಾನೇ ಆಗಮಿಸಿ ನಿನ್ನ ಯಜ್ಞವಿಧಾನಗಳೆಲ್ಲವನ್ನೂ ಸಮಗ್ರವಾಗಿ ಮಾಡಿಸಿಕೊಡುತ್ತೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಚೈತ್ಯಾಂ ಹಿ ಪೌರ್ಣಮಾಸ್ಯಾಂ ವೈ ತವ ದೀಕ್ಷಾ ಭವಿಷ್ಯತಿ ।
ಸಂಭಾರಾಃ ಸಂಭ್ರಿಯಂತಾಂ ವೈ ಯಜ್ಞಾರ್ಥಂ ಪುರುಷರ್ಷಭ ॥೪॥

ಪುರುಷಶ್ರೇಷ್ಠನೇ, ಮುಂದೆ ಬರುವ ಚೈತ್ರ ಶುಕ್ಲ ಪೂರ್ಣಿಮೆಯಂದು ನಿನ್ನ ಯಜ್ಞದೀಕ್ಷೆಗೆ ಯೋಗ್ಯವಾದ ಸಮಯವಾಗಿರುತ್ತದೆ. ಅಷ್ಟರೊಳಗಾಗಿ ಯಜ್ಞಕ್ಕೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸು.

ಅಶ್ವವಿದ್ಯಾವಿದಶ್ಚೈವ ಸೂತಾ ವಿಪ್ರಾಶ್ಚ ತದ್ವಿದಃ ।
ಮೇಧ್ಯಮಶ್ವಂ ಪರೀಕ್ಷಂತಾಂ ತವ ಯಜ್ಞಾರ್ಥಸಿದ್ಧಯೇ ॥೫॥

ಯಜ್ಞಕ್ಕೆ ಯೋಗ್ಯವಾದ ಪವಿತ್ರವಾದ ಕುದುರೆ ಯಾವುದು ಎಂಬುದನ್ನು ಅಶ್ವವಿದ್ಯೆಯನ್ನು ಚೆನ್ನಾಗಿ ತಿಳಿದಿರುವ ಸೂತರು, ಬ್ರಾಹ್ಮಣರು ಇವರುಗಳು ಪರೀಕ್ಷಿಸಲಿ.

ತಮುತ್ಸೃಜ್ಯ ಯಥಾಶಾಸ್ತ್ರಂ ಪೃಥಿವೀಂ ಸಾಗರಾಂಬರಾಮ್ ।
ಸ ಪರ್ಯೇತು ಯಶೋ ದೀಪ್ತಂ ತವ ಪಾರ್ಥಿವ ವರ್ಧಯನ್ ॥೬॥

ಶಾಸ್ತ್ರವಿಧಿಗೆ ಅನುಗುಣವಾಗಿ ಕುದುರೆಯನ್ನು ಸ್ವೀಕರಿಸಿ ಅದನ್ನು ದೇಶ ಪರ್ಯಟನೆಗೆ ಬಿಟ್ಟುಬಿಡು. ಆ ಕುದುರೆಯು ನಿನ್ನ ಉಜ್ವಲವಾದ ಯಶಸ್ಸನ್ನು ಜಗತ್ತಿಗೆ ತೋರಿಸುತ್ತಾ ಸಮುದ್ರವೇ ಬಟ್ಟೆಯಾಗಿ ಉಳ್ಳ ಅಖಂಡಭೂಮಂಡಲದಲ್ಲಿ ಸಂಚರಿಸಲಿ.

ವೈಶಂಪಾಯನಃ

ಇತ್ಯುಕ್ತಃ ಸ ತಥೇತ್ಯುಕ್ತ್ವಾ ಪಾಂಡವಃ ಪೃಥಿವೀಪತಿಃ ।
ಚಕಾರ ಸರ್ವಂ ರಾಜೇಂದ್ರೋ ಯಥೋಕ್ತಂ ಬ್ರಹ್ಮವಾದಿನಾ ॥೭॥

ವೈಶಂಪಾಯನ– ಜನಮೇಜಯನೇ, ಬ್ರಹ್ಮವಾದಿಗಳಾದ ವೇದವ್ಯಾಸರು ಹೀಗೆ ಹೇಳಲಾಗಿ ಯುಧಿಷ್ಠಿರನು ಹಾಗೆಯೇ ಆಗಲೆಂದು ಹೇಳಿದನು. ಪೃಥಿವೀಪತಿಯಾದ ಯುಧಿಷ್ಠಿರನು ವ್ಯಾಸರ ಮಾತಿನಂತೆ ಎಲ್ಲವನ್ನೂ ಮಾಡಿದನು.

ಸಂಭಾರಾಶ್ಚೈವ ರಾಜೇಂದ್ರ ಸರ್ವೇ ಸಂಕಲ್ಪಿತಾ ಭವನ್ ॥೮॥

ಯಜ್ಞಕ್ಕೆ ಸಂಬಂಧಪಟ್ಟ ಯಾವ ಯಾವ ಪದಾರ್ಥಗಳನ್ನು ತರಬೇಕೆಂದು ಸಂಕಲ್ಪಿಸಲಾಗಿತ್ತೋ ಅದೆಲ್ಲವನ್ನೂ ಮಹಾತ್ಮನಾದ ಯುಧಿಷ್ಠಿರನು ಸಂಗ್ರಹಿಸಿದನು.

ಸ ಸಂಭಾರಾನ್ ಸಮಾಹೃತ್ಯ ನೃಪೋ ಧರ್ಮಾತ್ಮಜಸ್ತದಾ ।
ನ್ಯವೇದಯದಮೇಯಾತ್ಮಾ ಕೃಷ್ಣದ್ವೈಪಾಯನಾಯ ವೈ ॥೯॥

ಆ ಪದಾರ್ಥಗಳನ್ನೆಲ್ಲ ಸಂಗ್ರಹಿಸಿದ ಧರ್ಮಾತ್ಮಜನಾದ ಯುಧಿಷ್ಠಿರನು ಕೃಷ್ಣದ್ವೈಪಾಯನರಿಗೆ ಎಲ್ಲ ಪದಾರ್ಥಗಳನ್ನು ತಂದಿರುವುದಾಗಿ ತಿಳಿಸಿದನು.

ತತೋಽಬ್ರವೀನ್ಮಹಾತೇಜಾ ವ್ಯಾಸೋ ಧರ್ಮಾತ್ಮಜಂ ನೃಪಮ್ ॥೧೦॥

ಬಳಿಕ ಮಹಾತೇಜಸ್ವಿಯಾದ ವ್ಯಾಸರು ಧರ್ಮರಾಜನನ್ನು ಕುರಿತು ಹೇಳಿದರು.

ವ್ಯಾಸಃ

ಯಥಾಕಾಲಂ ಯಥಾಯೋಗಂ ಸಜ್ಜಾಃ ಸ್ಮ ತವ ದೀಕ್ಷಣೇ ॥೧೧॥

ವ್ಯಾಸರು– ಯುಧಿಷ್ಠಿರನೇ, ನಾವು ಯೋಗ್ಯವಾದ ಕಾಲದಲ್ಲಿ, ಯೋಗ್ಯವಾದ ಯೋಗದಲ್ಲಿ ನಿನ್ನನ್ನು ಯಜ್ಞದೀಕ್ಷಿತನನ್ನಾಗಿ ಮಾಡಲು ಸಿದ್ಧರಾಗಿದ್ದೇವೆ.

ಸ್ರುಕ್ ಚ ಕೂರ್ಚಂ ಚ ಸೌವರ್ಣಂ ಯಚ್ಚಾನ್ಯದಪಿ ಕೌರವ ।
ಯತ್ತು ಯೋಗ್ಯಂ ಭವೇತ್ ಕಿಂಚಿತ್ ತದ್ಭ್ರೌಕ್ಮಂ ಕ್ರಿಯತಾಮಿಹ ॥೧೨॥

ಯಜ್ಞಕ್ಕೆ ಬೇಕಾದ ಸ್ರುಕ್‌ಗಳನ್ನೂ, ಕೂರ್ಚಗಳನ್ನೂ, ಬಂಗಾರದ ಬೇರೆ ಸಾಮಗ್ರಿಗಳನ್ನೂ, ಏನೇನು ಬೇಕೋ ಅವೆಲ್ಲವನ್ನೂ ಬಂಗಾರದಿಂದ ಬೇಗನೆ ಸಿದ್ಧಗೊಳಿಸು.

ಅಶ್ವಶ್ಚೋತ್ಸೃಜ್ಯತಾಮದ್ಯ ಪೃಥ್ವ್ಯಾಮಥ ಯಥಾಕ್ರಮಮ್ ।
ಸುಗುಪ್ತಶ್ಚ ಚರತ್ವೇಷ ಯಥಾಶಾಸ್ತ್ರಂ ಯುಧಿಷ್ಠಿರ ॥೧೩॥

ಶಾಸ್ತ್ರವಿಧಿಗೆ ಅನುಗುಣವಾಗಿ ಇಂದೇ ಭೂಮಿಯಲ್ಲಿ ಸಂಚರಿಸಲು ಯಜ್ಞಾಶ್ವವನ್ನು ಬಿಟ್ಟುಬಿಡು. ಆ ಕುದುರೆಯು ಶಾಸ್ತ್ರವಿಧಿಗೆ ಅನುಗುಣವಾಗಿ ಸುರಕ್ಷಿತವಾಗಿ ಭೂಮಿಯಲ್ಲಿ ಸಂಚರಿಸಲಿ.

ಯುಧಿಷ್ಠಿರಃ

ಅಯಮಶ್ವೋ ಯಥಾ ಬ್ರಹ್ಮನ್ನುತ್ಸೃಷ್ಟಃ ಪೃಥಿವೀಮಿಮಾಮ್ ।
ಚರಿಷ್ಯತಿ ಯಥಾಕಾಮಂ ತತ್ರ ಸಮ್ಯಗ್ ವಿಧೀಯತಾಮ್ ॥೧೪॥

ಯುಧಿಷ್ಠಿರ– ಬ್ರಾಹ್ಮಣಶ್ರೇಷ್ಠರೇ, ನಿಮ್ಮೆದುರು ಕಾಣಿಸುತ್ತಿರುವ ಈ ಯಜ್ಞಾಶ್ವವು ಬ್ರಾಹ್ಮಣರು ಮತ್ತು ಸೂತರಿಂದ ಪರೀಕ್ಷಿಸಲ್ಪಟ್ಟ ಅಶ್ವವೆನಿಸಿದೆ. ನಮ್ಮಿಂದ ಬಿಡಲ್ಪಡುವ ಈ ಕುದುರೆಯು ಸ್ವಚ್ಛಂದವಾಗಿ ಭೂಮಿಯಲ್ಲಿ ಸಂಚರಿಸುತ್ತದೆ. ಇದಕ್ಕೆ ಸಂಬಂಧಪಟ್ಟ ಸಲಹೆಗಳನ್ನು ನೀವೇ ನೀಡಬೇಕಾಗಿದೆ.

ಪೃಥಿವೀಂ ಪರ್ಯಟಂತಂ ಹಿ ತುರಗಂ ಕಾಮಚಾರಿಣಮ್ ।
ಕಃ ಪಾಲಯೀದಿತಿ ಮುನೇ ತದ್ಭವಾನ್ ವಕ್ತುಮರ್ಹತಿ ॥೧೫॥

ಸ್ವಚ್ಛಂದವಾಗಿ ಭೂಮಂಡಲದಲ್ಲಿ ಸಂಚರಿಸುವ ಈ ಕುದುರೆಯನ್ನು ಯಾರು ರಕ್ಷಿಸಬೇಕೆಂದು ವ್ಯಾಸಮುನಿಗಳೇ ನೀವೇ ಹೇಳಲು ಯೋಗ್ಯರಾಗಿದ್ದೀರಿ.

ವೈಶಂಪಾಯನಃ

ಇತ್ಯುಕ್ತಃ ಸ ತು ರಾಜೇಂದ್ರ ಕೃಷ್ಣದ್ವೈಪಾಯನೋಽಬ್ರವೀತ್ ॥೧೬॥

ವೈಶಂಪಾಯನ– ಈ ರೀತಿಯಾಗಿ ಧರ್ಮಜನಿಂದ ಹೇಳಿಸಿಕೊಳ್ಳಲ್ಪಟ್ಟ ವ್ಯಾಸರು ಪ್ರತ್ಯುತ್ತರಿಸುತ್ತಾರೆ.

ವ್ಯಾಸಃ

ಭೀಮಸೇನಾದವರಜಃ ಶ್ರೇಷ್ಠಃ ಸರ್ವಧನುಷ್ಮತಾಮ್ ।
ಜಿಷ್ಣುಃ ಸಹಿಷ್ಣುರ್ಧರ್ಮಿಷ್ಣುಃ ಸ ಏನಂ ಪಾಲಯಿಷ್ಯತಿ ॥೧೭॥

ವ್ಯಾಸರು– ಭೀಮಸೇನನ ತಮ್ಮನಾದ ಶ್ರೇಷ್ಠ ಧನುರ್ವಿದ್ಯೆಯನ್ನು ಹೊಂದಿರುವ, ಜಯಶೀಲನೂ, ಸಹನಶೀಲನೂ, ಧರ್ಮನಿಷ್ಠನೂ ಆಗಿರುವ ಅರ್ಜುನನು ಈ ಯಜ್ಞಾಶ್ವವನ್ನು ರಕ್ಷಿಸುತ್ತಾನೆ.

ಶಕ್ತಃ ಸ ಹಿ ಮಹೀಂ ಜೇತುಂ ನಿವಾತಕವಚಾಂತಕಃ ।
ತಸ್ಮಿನ್ನಸ್ತ್ರಾಣಿ ದಿವ್ಯಾನಿ ವರ್ತಂತೇ ಖಿಲು ಸರ್ವದಾ ॥೧೮॥

ನಿವಾತಕವಚರನ್ನು ಸಂಹರಿಸಿರುವ ಅರ್ಜುನನು ಈ ಭೂಮಂಡಲವನ್ನೂ ಜಯಿಸಲು ಸಮರ್ಥನಾಗಿದ್ದಾನೆ. ನಿರಮ್ತರವೂ ಅವನ ಬಳಿ ದಿವ್ಯವಾದ ಅಸ್ತ್ರಗಳು ಇರುತ್ತವೆ.

ದಿವ್ಯಂ ಧನುಶ್ಚೇಷುಧೀ ಚ ಸ ಏನಮನುಯಾಸ್ಯತಿ ॥೧೯॥

ದಿವ್ಯವಾದ ಧನುಸ್ಸುಳ್ಳ, ಬಾಣಗಳುಳ್ಳ ಆ ಅರ್ಜುನನು ಯಜ್ಞಾಶ್ವವನ್ನು ಅನುಸರಿಸಿ ಹೋಗುತ್ತಾನೆ.

ಸ ಹಿ ಧರ್ಮಾರ್ಥಕುಶಲಃ ಸರ್ವವಿದ್ಯಾವಿಶಾರದಃ ।
ಯಥಾಶಾಸ್ತ್ರಂ ನೃಪಶ್ರೇಷ್ಠ ಚಾರಯಿಷ್ಯತಿ ತೇ ಹಯಮ್ ॥೨೦॥

ಆ ಅರ್ಜುನನಾದರೂ ಧರ್ಮಾರ್ಥಕುಶಲನಾಗಿದ್ದಾನೆ, ಸರ್ವವಿದ್ಯಾ ವಿಶಾರದನಾಗಿದ್ದಾನೆ. ಶಾಸ್ತ್ರವಿಧಿಗೆ ಅನುಗುಣವಾಗಿ ಈ ಯಜ್ಞಾಶ್ವವನ್ನು ನಿಶ್ಚಿತವಾಗಿಯೂ ಸಂಚರಿಸಿಕೊಂಡು ಬರುತ್ತಾರೆ. ಧರ್ಮರಾಜನೇ, ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ರಾಜಪುತ್ರೋ ಮಹಾಬಾಹುಃ ಶ್ಯಾಮೋ ರಾಜೀವಲೋಚನಃ ।
ಅಭಿಮನ್ಯೋಃ ಪಿತಾ ವೀರಃ ಸ ಏನಮನುಯಾಸ್ಯತಿ ॥೨೧॥

ರಾಜಪುತ್ರನಾದ, ಮಹಾಬಾಹುವಾದ, ರಾಜೀವಲೋಚನನಾದ, ಶ್ಯಾಮ ವರ್ಣದವನಾದ, ಅಭಿಮನ್ಯುವಿನ ತಂದೆಯಾದ, ವೀರಶ್ರೇಷ್ಠನಾದ ಆ ಅರ್ಜುನನು ಈ ಯಜ್ಞಾಶ್ವವನ್ನು ರಕ್ಷಿಸುತ್ತಾನೆ.

ಭೀಮಸೇನೋಽಪಿ ತೇಜಸ್ವೀ ಕೌಂತೇಯೋಽಮಿತವಿಕ್ರಮಃ ।
ಸಮರ್ಥೋ ರಕ್ಷಿತುಂ ರಾಷ್ಟ್ರಂ ನಕುಲಶ್ಚ ವಿಶಾಂಪತೇ ॥೨೨॥

ಕೌಂತೇಯನೇ, ಅಮಿತವಿಕ್ರಮನಾದ, ತೇಜಸ್ವಿಯಾದ ಭೀಮಸೇನನು ಈ ರಾಷ್ಟ್ರವನ್ನು ರಕ್ಷಿಸಲು ಸಮರ್ಥನಾಗಿದ್ದಾನೆ. ಇವನಿಗೆ ಸಹಕಾರಿಯಾಗಿ ನಕುಲನೂ ಇರುತ್ತಾನೆ.

ಸಹದೇವಸ್ತು ಕೌರವ್ಯ ಸರ್ವಮನ್ಯತ್ ಕರಿಷ್ಯತಿ ।
ಕುಟುಂಬತಂತ್ರಂ ವಿಧಿವತ್ ಸರ್ವಮೇತನ್ಮಹಾಯಶಾಃ ॥೨೩॥

ಕುರುಶ್ರೇಷ್ಠನೇ, ಸಹದೇವನು ನಕುಲನಂತೆ ಭೀಮಸೇನನಿಗೆ ಸಂಬಂಧಿಸಿದ ಇತರ ಕಾರ್ಯಗಳನ್ನು ಮಾಡುತ್ತಾನೆ. ಕುಟುಂಬ ರಕ್ಷಣೆಗೆ ಸಂಬಂಧಪಟ್ಟ ಕೆಲಸಗಳನ್ನು ಮಹಾಕೀರ್ತಿಸಂಪನ್ನನಾದ ಸಹದೇವನು ವಿಧಿಬದ್ಧವಾಗಿಯೇ ಮಾಡುತ್ತಾನೆ.

ವೈಶಂಪಾಯನಃ

ಏತತ್ಸರ್ವಂ ಯಥಾನ್ಯಾಯಮುಕ್ತಂ ಕುರುಕುಲೋದ್ವಹಃ ।
ಚಕಾರ ಫಲ್ಗುನಂ ಚಾಪಿ ಸಂದಿದೇಶ ಹಯಂ ಪ್ರತಿ ॥೨೪॥

ವೈಶಂಪಾಯನ– ಕುರುಕುಲತಿಲಕನಾದ ಯುಧಿಷ್ಠಿರನು ವ್ಯಾಸರು ಹೇಗೆ ನುಡಿದರೋ ಹಾಗೆಯೇ ನ್ಯಾಯೋಚಿತವಾದ ರೀತಿಯಲ್ಲಿ ಪೂರೈಸಿದನು. ಯಜ್ಞಾಶ್ವವನ್ನು ಕರೆದುಕೊಂಡು ಹೋಗಲು ಅರ್ಜುನನಿಗೆ ಆದೇಶಿಸಿದನು.

ಯುಧಿಷ್ಠಿರಃ

ಏಹ್ಯರ್ಜುನ ತ್ವಯಾ ವೀರ ಹಯೋಽಯಂ ಪರಿಪಾಲ್ಯತಾಮ್ ।
ತ್ವಮರ್ಹೋ ರಕ್ಷಿತುಂ ಹ್ಯೇನಂ ನಾನ್ಯಃ ಕಶ್ಚನ ಮಾನವಃ ॥೨೫॥

ಯುಧಿಷ್ಠಿರ– ಅರ್ಜುನನೇ, ಇತ್ತ ಬಾ. ವೀರನೇ, ಈ ಯಜ್ಞಾಶ್ವವನ್ನು ನೀನೇ ಪರಿಪಾಲಿಸು. ಈ ಯಜ್ಞಾಶ್ವವನ್ನು ರಕ್ಷಿಸಲು ನಿನ್ನ ಹೊರತು ಬೇರೆ ಯಾವ ಪುರುಷರೂ ಸಮರ್ಥರಾಗಿರುವುದಿಲ್ಲ.

ಯೇ ಚಾಪಿ ತ್ವಾಂ ಮಹಾಬಾಹೋ ಪ್ರತ್ಯುದೀಯುರ್ನರಾಧಿಪಾಃ ।
ತೈರ್ವಿಗ್ರಹೋ ಯಥಾ ನ ಸ್ಯಾತ್ ತಥಾ ಕಾರ್ಯಂ ತ್ವಯಾನಘ ॥೨೬॥

ಮಹಾಬಾಹುವಾದ ಅರ್ಜುನನೇ, ಈ ಯಜ್ಞಾಶ್ವವನ್ನು ಕರೆದೊಯ್ಯುವಾಗ ಕೆಲವು ಕ್ಷತ್ರಿಯರು ಯುದ್ಧಕ್ಕಾಗಿ ಆಗಮಿಸಬಹುದು. ಆದರೆ ನಿರ್ದುಷ್ಟನಾದ ಅರ್ಜುನನೇ, ಎಂದಿಗೂ ನೀನು ಅವರ ಬಳಿ ಯುದ್ಧೋನ್ಮುಖನಾಗದೆ ಕಾರ್ಯವನ್ನು ಸಾಧಿಸಿಕೊಂಡು ಆಗಮಿಸಬೇಕು.

ಆಖ್ಯಾತವ್ಯಶ್ಚ ಭವತಾ ಯಜ್ಞೋಽಯಂ ಮಮ ಸರ್ವಶಃ ।
ಪಾರ್ಥಿವೇಭ್ಯೋ ಮಹಾಬಾಹೋ ಸಮಯೇ ಗಮ್ಯತಾಮಿತಿ ॥೨೭॥

ಪ್ರತಿ ಕ್ಷತ್ರಿಯರಿಗೂ ನನ್ನ ಯಜ್ಞಕ್ಕೆ ಆಗಮಿಸುವಂತೆ ಆಹ್ವಾನವನ್ನು ನೀಡಬೇಕು. ಸಮಗ್ರ ಪಾರ್ಥಿವರಿಗೂ ಮಹಾಬಾಹುವೂ ಯಜ್ಞದ ಸಂಬಂಧದಲ್ಲಿ ಬರುವಂತೆ ಪ್ರಚೋದಿಸಬೇಕು.

ವೈಶಂಪಾಯನಃ

ಏವಮುಕ್ತ್ವಾ ಸ ಧರ್ಮಾತ್ಮಾ ಭ್ರಾತರಂ ಸವ್ಯಸಾಚಿನಮ್ ।
ಭೀಮಂ ಚ ನಕುಲಂ ಚೈವ ಪುರಗುಪ್ತೌ ಸಮಾದಧತ್ ॥೨೮॥

ವೈಶಂಪಾಯನ– ಧರ್ಮಾತ್ಮನಾದ ಯುಧಿಷ್ಠಿರನು ಸವ್ಯಸಾಚಿಯಾದ ಸಹೋದರನಾದ ಅರ್ಜುನನಿಗೆ ಈ ಕ್ರಮದಲ್ಲಿ ಹೇಳಿ ಭೀಮ, ನಕುಲ ಇವರನ್ನು ಪಟ್ಟಣವನ್ನು ರಕ್ಷಿಸಲು ಆದೇಶಿಸಿದನು.

ಕುಟುಂಬತಂತ್ರೇ ಚ ತದಾ ಸಹದೇವಂ ಯುಧಾಂಪತಿಮ್ ।
ಅನುಮಾನ್ಯ ಮಹೀಪಾಲಂ ಧೃತರಾಷ್ಟ್ರಂ ಯುಧಿಷ್ಠಿರಃ ॥೨೯॥

ಕುಟುಂಬ ರಕ್ಷಣೆಯ ಜವಾಬ್ದಾರಿಯನ್ನು ಯುದ್ಧನಿಪುಣನಾದ ಸಹದೇವನಿಗೆ ವಹಿಸಿದನು. ಯುಧಿಷ್ಠಿರನು ಧೃತರಾಷ್ಟ್ರನ ಅನುಮತಿಯನ್ನು ಪಡೆದು ಸಹದೇವನನ್ನು ನಿಯೋಜಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವರಕ್ಷಣಸನ್ದೇಶೋ ನಾಮ ದ್ವಾಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ಮೂರನೆಯ ಅಧ್ಯಾಯ

ಅರ್ಜುನನು ಸೇನೆಯೊಡನೆ ಯಜ್ಞಾಶ್ವವನ್ನು ರಕ್ಷಿಸಿಕೊಂಡು
ಉತ್ತರ ದಿಕ್ಕಿನೆಡೆ ನಡೆದುದು.

ವೈಶಂಪಾಯನಃ

ದೀಕ್ಷಾಕಾಲೇ ತು ಸಂಪ್ರಾಪ್ತೇ ತತಸ್ತೇ ಸುಮಹರ್ತ್ವಿಜಃ ।
ವಿಧಿವದ್ ದೀಕ್ಷಾಯಾಮಾಸುರಶ್ವಮೇಧಾಯ ಪಾರ್ಥಿವಮ್ ॥೧॥

ವೈಶಂಪಾಯನ– ವೇದವ್ಯಾಸರು ತಿಳಿಸಿದ ದೀಕ್ಷಾಕಾಲವು ಸನ್ನಿಹಿತವಾದಾಗ ಮಹಾತ್ಮರಾದ ಋತ್ವಿಜರು ಅಶ್ವಮೇಧ ಯಾಗಕ್ಕಾಗಿ ಯುಧಿಷ್ಠಿರನನ್ನು ವಿಧಿವತ್ತಾಗಿ ದೀಕ್ಷಾಬದ್ಧನನ್ನಾಗಿಸಿದರು.

ಕೃತ್ವಾ ಸ ಪಶುಮೇಧಾಂಸ್ತು ದೀಕ್ಷಿತಃ ಪಾಂಡುನಂದನಃ ।
ಧರ್ಮರಾಜೋ ಮಹಾತೇಜಾಃ ಸಹರ್ತ್ವಿಗ್ಭಿರ್ವ್ಯರೋಚತ ॥೨॥

ಅವನ ಮೂಲಕ ಪಶುಬಂಧಾದಿ ಕರ್ಮಗಳನ್ನು ಮಾಡಿಸಿದರು. ಇದರಿಂದ ಪಾಂಡುನಂದನನಾದ, ಮಹಾತೇಜಸ್ವಿಯಾದ ಧರ್ಮರಾಜನು ಋತ್ವಿಕ್ಕುಗಳಿಂದ ಸಹಿತನಾಗಿ ವಿಶೇಷವಾಗಿ ಶೋಭಿಸಿದನು.

ಹಯಶ್ಚ ಹಯಮೇಧಾರ್ಥಂ ಸ್ವಯಂ ಸ ಬ್ರಹ್ಮವಾದಿನಾ ।
ಉತ್ಸೃಷ್ಟಃ ಶಾಸ್ತ್ರವಿಧಿನಾ ವ್ಯಾಸೇನಾಮಿತತೇಜಸಾ ॥೩॥

ಆ ಪ್ರಸಂಗದಲ್ಲಿ ಬ್ರಹ್ಮವಾದಿಗಳಾದ, ಮಹಾತೇಜಸ್ವಿಗಳಾದ ವೇದವ್ಯಾಸರು ಶಾಸ್ತ್ರವಿಧಿಗೆ ಅನುಸಾರವಾಗಿ ಅಶ್ವಮೇಧ ಯಜ್ಞದ ನಿಮಿತ್ತದಿಂದ ಕುದುರೆಯನ್ನು ದೇಶವನ್ನು ಸಂಚರಿಸಲು ಬಿಟ್ಟು ಬಿಟ್ಟರು.

ಸ ರಾಜಾ ಧರ್ಮತೋ ರಾಜನ್ ದೀಕ್ಷಿತೋ ವಿಬಭೌ ತದಾ ।
ಹೇಮಮಾಲೀ ರುಗ್ಮಕಂಠಃ ಪ್ರದೀಪ್ತ ಇವ ಪಾವಕಃ ॥೪॥

ಆ ಪ್ರಸಂಗದಲ್ಲಿ ಸುವರ್ಣಮಯವಾದ ಮಾಲೆಯನ್ನು ಧರಿಸಿದ, ಸುವರ್ಣ ಕಂಠನಾಗಿದ್ದ, ಯಜ್ಞದೀಕ್ಷಿತನಾದ ರಾಜನಾದ ಯುಧಿಷ್ಠಿರನು ಪ್ರಜ್ವಲಿಸುವ ಬೆಂಕಿಯಂತೆ ತೋರುತ್ತಿದ್ದನು.

ಕೃಷ್ಣಾಜಿನೀ ದಂಡಪಾಣಿಃ ಕ್ಷೌಮವಾಸಾಃ ಸ ಧರ್ಮಜಃ ।
ವಿಬಭೌ ದ್ಯುತಿಮಾನ್ ಭೂಯಃ ಪ್ರಜಾಪತಿರಿವಾಧ್ವರೇ ॥೫॥

ಕೃಷ್ಣಾಜಿನವನ್ನು ಧರಿಸಿರುವ, ದಂಡಪಾಣಿಯಾದ, ರೇಶ್ಮೆವಸ್ತ್ರವನ್ನು ಧರಿಸಿರುವ ಧರ್ಮಜನು ಕಾಂತಿಯಿಂದ ಈ ಅಶ್ವಮೇಧ ಯಾಗದಲ್ಲಿ ಮತ್ತೊಬ್ಬ ಕಾಂತಿಸಂಪನ್ನನಾದ ಪ್ರಜಾಪತಿಯಂತೆ ಕಂಗೊಳಿಸಿದನು.

ತಥೈವಾಸ್ಯರ್ತ್ವಿಜಃ ಸರ್ವೇ ತುಲ್ಯವೇಷಾ ವಿಶಾಂಪತೇ ।
ಬಭೂವುರರ್ಜುನಶ್ಚೈವ ಪ್ರದೀಪ್ತ ಇವ ಪಾವಕಃ ॥೬॥

ಇದರಂತೆ ಇತರ ಋತ್ವಿಕ್‌ಗಳು ಎಲ್ಲರೂ ಸಮಾನವಾದ ವೇಷವನ್ನು ಧರಿಸಿದ್ದರು. ಅರ್ಜುನನು ಜ್ವಲಿಸುವ ಬೆಂಕಿಯಂತಲೇ ಕಾಣಿಸುತ್ತಿದ್ದನು.

ಶ್ವೇತಾಶ್ವಃ ಕೃಷ್ಣಸಾರಂಗಂ ಸಸಾರಾಶ್ವಂ ಧನಂಜಯಃ ।
ವಿಧಿವದ್ ಪೃಥಿವೀಪಾಲ ಧರ್ಮರಾಜಸ್ಯ ಶಾಸನಾತ್ ॥೭॥

ಬಿಳಿಯಾದ ಕುದುರೆಯುಳ್ಳ, ಕೃಷ್ಣಸಾರಮೃಗದಂತೆ ಚಿತ್ರದಿಂದ ಕೂಡಿದ ಅವಯವವುಳ್ಳ ಶ್ರೇಷ್ಠವಾದ ಅಶ್ವವನ್ನು ಧನಂಜಯನು ವಿಧಿವತ್ತಾಗಿ ಧರ್ಮರಾಜನ ಶಾಸನದಿಂದ ಅನುಸರಿಸುತ್ತಾ ಹೊರಟನು.

ವಿಕ್ಷಿಪನ್ ಗಾಂಡಿವಂ ರಾಜನ್ ಬದ್ಧಗೋಧಾಂಗುಲಿತ್ರವಾನ್ ।
ತಮಶ್ವಂ ಪೃಥಿವೀಪಾಲ ಮುದಾ ಯುಕ್ತಃ ಸಸಾರ ಹ ॥೮॥

ಅರ್ಜುನನು ಸಂತೋಷಭರಿತನಾಗಿ ಗಾಂಡೀವ ಧನುಸ್ಸನ್ನು ಠೇಂಕರಿಸುತ್ತಾ, ಕೈಯಲ್ಲಿ ಧನುಸ್ಸಿನ ಘಾಸಿಯನ್ನು ತಡೆಯುವ ಗೋದ ಎಂಬ ಹೆಸರಿನ ಚರ್ಮವನ್ನು ಧರಿಸಿರುವ ಅರ್ಜುನನು ಸಂತೋಷದಿಂದ ಆ ಕುದುರೆಯನ್ನು ಭೂಮಿಯಲ್ಲಿ ಸಂಚರಿಸುವಂತೆ ಮಾಡುತ್ತಾ ಅನುಸರಿಸಿ ಹೊರಟನು.

ಅಕುಮಾರಂ ತದಾ ರಾಜನ್ನಾಗಮತ್ ತತ್ಪುರಂ ವಿಭೋ ।
ದ್ರಷ್ಟುಕಾಮಂ ಕುರುಶ್ರೇಷ್ಠಂ ಪ್ರಯಾಸ್ಯಂತಂ ಧನಂಜಯಮ್ ॥೯॥

ಕುರುಶ್ರೇಷ್ಠನಾದ ಅರ್ಜುನನು ಯಾವ ಪ್ರದೇಶಕ್ಕೆ ಹೋಗುತ್ತಾನೋ ಆ ಪ್ರದೇಶದಲ್ಲಿ ಅರ್ಜುನನನ್ನು ನೋಡುವ ನಿಮಿತ್ತದಿಂದ ಬಾಲಕರೇ ಮೊದಲಾಗಿ ಮುದುಕರ ತನಕವೂ ಪ್ರಜೆಗಳು ಆಗಮಿಸಿದರು.

ತೇಷಾಮನ್ಯೋನ್ಯಸಮ್ಮರ್ದಾದ್ ಊಷ್ಮೇವ ಸಮಜಾಯತ ।
ದಿದೃಕ್ಷೂಣಾಂ ಹಯಂ ತಂ ಚ ತಂ ಚೈವ ಹಯಸಾರಿಣಮ್ ॥೧೦॥

ಆ ಪ್ರಜೆಗಳ ಪರಸ್ಪರ ನುಗ್ಗಾಟದಿಂದ ಎಲ್ಲರ ಮುಖದಲ್ಲಿಯೂ ಸೆಕೆಯು ಉಂಟಾಯಿತು. ಎಲ್ಲರೂ ಯಜ್ಞಾಶ್ವವನ್ನೂ, ಅರ್ಜುನನನ್ನೂ ನೋಡಲು ಆಗಮಿಸುತ್ತಿದ್ದರು.

ತತಃ ಶಬ್ದೋ ಮಹಾರಾಜ ದಶಾಶಾಃ ಪ್ರತಿಪೂರಯನ್ ।
ಬಭೂವ ವೀಕ್ಷತಾಂ ನೃಣಾಂ ಕುಂತೀಪುತ್ರಂ ಧನಂಜಯಮ್ ॥೧೧॥

ಆ ಸಮಯದಲ್ಲಿ ಉಂಟಾದ ಶಬ್ದವು ಮಹಾರಾಜನೇ, ಹತ್ತು ದಿಕ್ಕುಗಳನ್ನು ತುಂಬಿದವು. ಕುಂತೀಪುತ್ರನಾದ ಧನಂಜಯನನ್ನು ನೋಡಲು ಬರುವ ಮಾನವರ ಸಂಖ್ಯೆಯು ವಿಶೇಷವಾಗಿ ಶೋಭಿಸಿತು.

ಏಷ ಗಚ್ಛತಿ ಕೌಂತೇಯಸ್ತುರಗಶ್ಚೈವ ದೀಪ್ತಿಮಾನ್ ।
ಸಮನ್ವೇತಿ ಮಹಾಬಾಹುಃ ಸಂಸ್ಪರ್ಶನ್ ಧನುರುತ್ತಮಮ್ ॥೧೨॥

ಅರ್ಜುನನು ಸಾಗುತ್ತಿದ್ದಾನೆ, ಕೌಂತೇಯನಾದ ಅರ್ಜುನನ ಜೊತೆ ಕಾಂತಿಯುಕ್ತವಾದ ಯಜ್ಞಾಶ್ವವೂ ಸಾಗುತ್ತಿದೆ. ಮಹಾಬಾಹುವಾದ ಅರ್ಜುನನು ಶ್ರೇಷ್ಠವಾದ ಗಾಂಡೀವ ಧನುಸ್ಸನ್ನು ಧರಿಸಿರುತ್ತಾನೆ.

ಏವಂ ಶುಶ್ರಾವ ವದತಾಂ ಗಿರೋ ಜಿಷ್ಣುರುದಾರಧೀಃ ।
ಸ್ವಸ್ತಿ ತೇಽಸ್ತು ವ್ರಜಾರಿಷ್ಟಂ ಪುನಶ್ಚೇಹೀತಿ ಭಾರತ ॥೧೩॥

ಈ ರೀತಿಯಾಗಿ ಜನರು ಹೇಳುವ ಶಬ್ದಗಳು ಕೇಳಿಸುತ್ತಿದ್ದವು. ಜಯಶೀಲನಾದ, ಉದಾರಚೇತನನಾದ ಅರ್ಜುನನಿಗೆ ಜಯವಾಗಲಿ, ಕ್ಷೇಮಕರವಾದ ಮಾರ್ಗದಲ್ಲಿ ನೀನು ಸಂಚರಿಸು. ಪುನಃ ಹಸ್ತಿನಾವತಿಯನ್ನು ಕುರಿತು ಆಗಮಿಸು ಎಂಬ ಆಶೀರ್ವಾದ ಯುಕ್ತವಾದ ದುರ್ದರ ಮಾತುಗಳು ಆ ಗುಂಪಿನಲ್ಲಿ ಕೇಳಿ ಬರುತ್ತಿದ್ದವು.

ಅಥಾಪರೇ ಮನುಷ್ಯೇಂದ್ರ ಪುರುಷಾ ವಾಕ್ಯಮಬ್ರುವನ್ ।
ನೈನಂ ಪಶ್ಯಾಮ ಸಮ್ಮರ್ದೇ ಧನುರೇತತ್ ಪ್ರದೃಶ್ಯತೇ ॥೧೪॥

ಬಳಿಕ ಮನುಷ್ಯಶ್ರೇಷ್ಠನೇ, ಜನಮೇಜಯನೇ, ಇನ್ನು ಕೆಲವು ಪುರುಷರು ಈ ಜನಜಂಗುಳಿಯಲ್ಲಿ ಅರ್ಜುನನನ್ನು ಕಾಣುತ್ತಿಲ್ಲ. ಅವನ ವಿಖ್ಯಾತವಾದ ಧನುಸ್ಸು ನಮ್ಮ ಕಣ್ಣಿಗೆ ಕಾಣಿಸುತ್ತಿದೆ.

ಏತದ್ಧಿ ಮೇಘನಿರ್ಹ್ರಾದಂ ವಿಶ್ರುತಂ ಗಾಂಡಿವಂ ಧನುಃ ।
ಸ್ವಸ್ತಿ ಗಚ್ಛತ್ವರಿಷ್ಟಂ ವೈ ಪಂಥಾನಮಕುತೋಭಯಮ್ ॥೧೫॥

ಭಯಂಕರವಾಗಿ ಶಬ್ದ ಮಾಡುವ ಆ ಧನುಸ್ಸು ಗಾಂಡೀವ ಎಂಬ ಹೆಸರಿನಿಂದ ವಿಖ್ಯಾತವಾಗಿದೆ. ಯಜ್ಞದ ಕುದುರೆಯನ್ನು ಅನುಸರಿಸಿ ಹೋಗುತ್ತಿರುವ ಈ

ಅರ್ಜುನನಿಗೆ ಮಂಗಳವಾಗಲಿ. ಯಾವ ವಿಧದ ತೊಂದರೆಯೂ ಇಲ್ಲದೆ ನಿರ್ಭಯವಾದ ಮಾರ್ಗದಲ್ಲಿ ಸಂಚರಿಸಲಿ.

ನಿವೃತ್ತಮೇನಂ ದ್ರಕ್ಷ್ಯಾಮಃ ಪುನರೇವಂ ಚ ತೇऽಬ್ರುವನ್ ॥೧೬॥

ಕ್ಷೇಮದಿಂದ ಪುನಃ ಹಸ್ತಿನಾವತಿಗೆ ಮರಳುವ ಅರ್ಜುನನನ್ನು ನಾವೆಲ್ಲರೂ ನೋಡೋಣ ಎಂದು ಆ ಗುಂಪಿನಲ್ಲಿ ಸೇರಿದ ಹಲವರು ಹೇಳಿದರು.

ಏವಮಾದಿ ಮನುಷ್ಯಾಣಾಮ್ ಅರ್ಜುನೋ ಭರತರ್ಷಭ ।
ಶುಶ್ರಾವ ಮಧುರಾ ವಾಚಃ ಪುನಃ ಪುನರುದೀರಿತಾಃ ॥೧೭॥

ಭರತರ್ಷಭನೇ, ಅರ್ಜುನನು ಈ ಜನಜಂಗುಳಿಯಲ್ಲಿ ಮನುಷ್ಯರಿಂದ ಹೇಳಲ್ಪಟ್ಟ ಮಧುರವಾದ ಮಾತುಗಳನ್ನು ಪುನಃ ಪುನಃ ಕೇಳಿಸಿಕೊಳ್ಳುತ್ತಲೇ ಇದ್ದನು.

ಯಾಜ್ಞವಲ್ಕ್ಯಃ ಸಶಿಷ್ಯಶ್ಚ ಕುಶಲೋ ಯಜ್ಞಕರ್ಮಣಿ ।
ಪ್ರಾಯಾತ್ ಪಾರ್ಥೇನ ಸಹಿತಃ ಶಾಂತ್ಯರ್ಥಂ ವೇದಪಾರಗಃ ॥೧೮॥

ಯಾಜ್ಞವಲ್ಕ್ಯರು ಶಿಷ್ಯರಿಂದ ಸಹಿತರಾಗಿ ಯಜ್ಞಕರ್ಮದಲ್ಲಿ ಕುಶಲರಾಗಿ, ವೇದಪಾರಂಗತರಾಗಿ, ಅರ್ಜುನನಿಂದ ಸಹಿತರಾಗಿ ಅವನ ಶಾಂತಿಗಾಗಿ ಪ್ರಯಾಣ ಬೆಳೆಸಿದರು.

ಬ್ರಾಹ್ಮಣಾಶ್ಚ ಮಹೀಪಾಲ ಬಹವೋ ವೇದಪಾರಗಾಃ ।
ಅನುಜಗ್ಮುರ್ಮಹಾತ್ಮಾನಂ ಕ್ಷತ್ರಿಯಾಶ್ಚ ವಿಶೋऽಪಿ ಚ ॥೧೯॥

ಅರ್ಜುನನನ್ನು ವೇದಪಾರಂಗತರಾದ ಅನೇಕ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಹಿಂಬಾಲಿಸಿದರು.

ಪಾಂಡವೈಃ ಪೃಥಿವೀಮಶ್ವೋ ನಿರ್ಜಿತಾಂ ಶಸ್ತ್ರತೇಜಸಾ ।
ಚಚಾರ ಸ ಮಹಾರಾಜ ಯಥಾದೇಶಂ ಚ ಸತ್ತಮ ॥೨೦॥

ಪಾಂಡವರಿಂದ ಸಹಿತವಾದ ಕುದುರೆಯು ಶಸ್ತ್ರತೇಜಸ್ಸಿನಿಂದ ಭೂಮಿಯನ್ನೆಲ್ಲ ಜಯಿಸಿಕೊಂಡು ಯೋಗ್ಯವಾದ ದೇಶಗಳಲ್ಲಿ ಸಂಚರಿಸುತ್ತಾ ಮುಂದೆ ಹೊರಟಿತು.

ಯತ್ರ ಯುದ್ಧಾನಿ ವೃತ್ತಾನಿ ಯಾನ್ಯಾಸನ್ ಪಾಂಡವಸ್ಯ ಹ ।
ತಾನಿ ವಕ್ಷ್ಯಾಮಿ ತೇ ವೀರ ವಿಚಿತ್ರಾಣಿ ಮಹಾಂತಿ ಚ ॥೨೧॥

ಯಾವ ಪ್ರದೇಶದಲ್ಲಿ ಯಜ್ಞಾಶ್ವನಿಮಿತ್ತವಾಗಿ ಯುದ್ಧಗಳು ಅರ್ಜುನನಿಗೂ ಅಲ್ಲಿನ ರಾಜರಿಗೂ ನಡೆದವೋ ಅಂತಹ ವಿಚಿತ್ರವಾದ, ಮಹತ್ವಪೂರ್ಣವಾದ ಯುದ್ಧದ ವೃತ್ತಾಂತಗಳನ್ನು ವೀರನಾದ ಜನಮೇಜಯನೇ ನಿನಗೆ ತಿಳಿಸುತ್ತೇನೆ.

ಸ ಹಯಃ ಪೃಥಿವೀಂ ರಾಜನ್ ಪ್ರದಕ್ಷಿಣಮರಿಂದಮ ।
ಸಸಾರೋತ್ತರತಃ ಪೂರ್ವಂ ತನ್ನಿಬೋಧ ಮಹೀಪತೇ ॥೨೨॥

ಅರಿಂದಮನೇ, ಆ ಯಜ್ಞಾಶ್ವವು ಉತ್ತರದಿಕ್ಕಿನ ಕಡೆ ಇರುವ ಪೃಥಿವಿಯನ್ನು ಸಂಚರಿಸುತ್ತಾ ಹೇಗೆ ಸಾಗಿತು ಎಂಬುದನ್ನು ತಿಳಿಸುತ್ತೇನೆ. ರಾಜನೇ ಕೇಳಿಸಿಕೋ.

ಅಪಾಮಾರ್ಜನ್ ಸ ರಾಷ್ಟ್ರಾಣಿ ಪಾರ್ಥಿವಾನಾಂ ಹಯೋತ್ತಮಃ ।
ಶನ್ಯೈಸ್ತಥಾ ಪರಿಯಯೌ ಶ್ವೇತಾಶ್ವಶ್ಚ ಮಹಾರಥಃ ॥೨೩॥

ಆ ಶ್ರೇಷ್ಠವಾದ ಯಜ್ಞಾಶ್ವವು ಶ್ರೇಷ್ಠ ಚಕ್ರವರ್ತಿಗಳ ರಾಷ್ಟ್ರವನ್ನು ಶುದ್ಧೀಕರಿಸುತ್ತಾ ಮೆಲ್ಲನೆ ಸಾಗುತ್ತಿತ್ತು. ಬಿಳಿಯಾದ ಕುದುರೆಯು ಅರ್ಜುನನಿಂದ ಸಹಿತವಾಗಿ ಸಾಗುವ ಪರಿಯೇ ರಮಣೀಯವಾಗಿತ್ತು.

ತತ್ರ ಸಂಕಲ್ಪನಾ ನಾಸ್ತಿ ರಾಜ್ಞಾಮಯುತಶಸ್ತದಾ ॥೨೪॥

ಮಹಾಭಾರತದ ಯುದ್ಧದಲ್ಲಿ ಬಂಧುಗಳನ್ನು ಕಳೆದುಕೊಂಡಿದ್ದ ಸಾವಿರಾರು ಕ್ಷತ್ರಿಯರು ಸೇಡುತೀರಿಸಿಕೊಳ್ಳುವ ನೆಪದಿಂದ ಅರ್ಜುನನ ಜೊತೆ ಯುದ್ಧಮಾಡಿದರು.

ಯೇऽಯುಧ್ಯಂತ ಮಹಾರಾಜ ಕ್ಷತ್ರಿಯಾ ಹತಬಾಂಧವಾಃ ।
ಕಿರಾತಾ ವಿಷ್ಯತಾ ರಾಜನ್ ಬಹವೋ ಹಿ ಧನುರ್ಧರಾಃ ॥೨೫॥

ಆಗಮಿಸಿದ ಆ ರಾಜರ ಸಂಖ್ಯೆಗೆ ಪರಿಮಿತಿ ಇರಲಿಲ್ಲ. ಎಣಿಸಲಾಗದಷ್ಟು ಆವಿಷ್ಕಾರವನ್ನು ಹೊಂದಿದ ಕಿರಾತರೂ ಬಹುಸಂಖ್ಯೆಯಿಂದ ಧನುರ್ಧಾರಿಗಳಾಗಿ ಆಗಮಿಸಿದರು.

ಮ್ಲೇಚ್ಛಾಶ್ಚಾನ್ಯೇ ವಿನಿಕೃತಾಃ ಪುರಾ ರಾಜನ್ ಮಹಾರಣೇ ॥೨೬॥

ಮ್ಲೇಚ್ಛರು, ಯವನರು, ಹಿಂದೆ ಪಾಂಡವರಿಂದ ಪರಾಭವಗೊಂಡಿದ್ದನ್ನು ನೆನೆದು ಅರ್ಜುನನ ಬಳಿ ಯುದ್ಧಕ್ಕೆ ಆಗಮಿಸಿದರು.

ಆರ್ಯಾಶ್ಚ ಪೃಥಿವೀಪಾಲಾಃ ಪ್ರಹೃಷ್ಟನರವಾಹನಾಃ ।
ಸಮೀಯುಃ ಪಾಂಡುಪುತ್ರೇಣ ಬಹವೋ ಯುದ್ಧದುರ್ಮದಾಃ ॥೨೭॥

ಅನೇಕ ಜನರ ಶ್ರೇಷ್ಠರಾದ ಚಕ್ರವರ್ತಿಗಳು ಸಂತುಷ್ಟರಾದ ಸೈನಿಕರಿಂದಲೂ, ವಾಹನಗಳಿಂದಲೂ ಕೂಡಿದವರಾಗಿ ಯುದ್ಧೋತ್ಸಾಹದಿಂದ ಬಹುಸಂಖ್ಯೆಯಿಂದ ಅರ್ಜುನನನ್ನು ಎದುರುಗೊಂಡರು.

ಏವಂ ಯುದ್ಧಾನಿ ವೃತ್ತಾನಿ ತತ್ರ ತತ್ರ ವಿಶಾಂಪತೇ ।
ಅರ್ಜುನಸ್ಯ ಮಹೀಪಾಲೈರ್ನಾನಾದೇಶನಿವಾಸಿಭಿಃ ॥೨೮॥

ಈ ರೀತಿಯಾಗಿ ನಾನಾ ದೇಶಗಳಲ್ಲಿ ಅರ್ಜುನನಿಗೂ, ನಾನಾ ದೇಶ ನಿವಾಸಿಗಳಾದ ಚಕ್ರವರ್ತಿಗಳಿಗೂ ಭಯಂಕರವಾದ ಯುದ್ಧವು ನಡೆಯಿತು.

ಯಾನಿ ತೂಭಯತೋ ರಾಜನ್ ಪ್ರವೃತ್ತಾನಿ ಮಹಾಂತಿ ಚ ।
ತಾನಿ ಯುದ್ಧಾನಿ ವಕ್ಷ್ಯಾಮಿ ಕೌಂತೇಯಸ್ಯ ಮಹಾತ್ಮನಃ ॥೨೯॥

ಯಾವ ಯಾವ ಯುದ್ಧಗಳು ಎರಡೂ ಪಕ್ಷಗಳ ದೃಷ್ಟಿಯಿಂದ ಕಷ್ಟದಾಯಕ ಆಗಿದ್ದವೋ, ಮಹತ್ವಪೂರ್ಣವಾಗಿದ್ದವೋ ಅಂತಹ ಅರ್ಜುನನ ಯುದ್ಧದ ಪ್ರಸಂಗಗಳನ್ನು ವಿವರಿಸಿ ಹೇಳುತ್ತೇನೆ. ರಾಜನೇ ಕೇಳಿಸಿಕೋ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ತ್ರಿಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ನಾಲ್ಕನೆಯ ಅಧ್ಯಾಯ

ಅರ್ಜುನನಿಂದ ತ್ರಿಗರ್ತರ ಪರಾಜಯ.

ವೈಶಂಪಾಯನಃ

ತ್ರಿಗರ್ತೈರಭವದ್ ಯುದ್ಧಂ ಕೃತವೈರೈಃ ಕಿರೀಟಿನಃ ।
ಮಹಾರಥಸಮಾಜ್ಞಾತೈರ್ಹತಾನಾಂ ಪುತ್ರನಪ್ತೃಭಿಃ ॥೧॥

ವೈಶಂಪಾಯನ– ಜನಮೇಜಯನೇ, ಭೂಮಂಡಲದಲ್ಲಿ ಯುದ್ಧದ ಕುದುರೆಯು ಸಂಚರಿಸುತ್ತಿರುವಾಗ ತ್ರಿಗರ್ತರ ದೇಶಕ್ಕೆ ಕುದುರೆಯು ಸಾಗಿತು. ಕುರುಕ್ಷೇತ್ರದಲ್ಲಿ ಹತರಾಗಿರುವ ತ್ರಿಗರ್ತರ ಮಕ್ಕಳು, ಮೊಮ್ಮಕ್ಕಳು ಆ ರಾಜ್ಯವನ್ನು ಆಳುತ್ತಿದ್ದರು. ಅವರೆಲ್ಲರೂ ಮಹಾರಥರೆಂದೇ ಪ್ರಸಿದ್ಧಿಯನ್ನು ಹೊಂದಿದ್ದರು.

ತೇ ತಮಾಜ್ಞಾಯ ಸಂಪ್ರಾಪ್ತಂ ಯಾಜ್ಞಿಯಂ ತುರಗೋತ್ತಮಮ್ ।
ವಿಷಯಾಂತೇ ತತೋ ವೀರಾ ದಂಸಿತಾಃ ಪರ್ಯವಾರಯನ್ ॥೨॥

ಅವರೆಲ್ಲರಿಗೂ ಅರ್ಜುನನ ಬಗ್ಗೆ ಬಹಳ ಸಿಟ್ಟಿತ್ತು. ಯುಧಿಷ್ಠಿರನ ಮೇಧಾಶ್ವವು ತಮ್ಮ ರಾಜ್ಯಕ್ಕೆ ಬಂದೊಡನೆಯೇ ಅದನ್ನು ಬಂಧಿಸಿದರು. ಈ ವಿಷಯದಿಂದ ಅರ್ಜುನನಿಗೂ ತ್ರಿಗರ್ತರಿಗೂ ಭಯಂಕರವಾದ ಯುದ್ಧವಾಯಿತು.

ರಥಿನೋ ಬದ್ಧತೂಣೀರಾಃ ಸದಶ್ವೈಃ ಸಮಲಂಕೃತೈಃ ।
ಪರಿವಾರ್ಯ ಹಯಂ ರಾಜನ್ ಗ್ರಹೀತುಮುಪಚಕ್ರಮುಃ ॥೩॥

ಅಶ್ವಮೇಧ ಅಶ್ವವು ತಮ್ಮ ರಾಜ್ಯದ ಗಡಿಗೆ ಬಂದಿರುವುದನ್ನು ಅರಿತ ತ್ರಿಗರ್ತರು ಕವಚಧಾರಿಗಳಾಗಿ, ಬೆನ್ನಿಗೆ ಬತ್ತಳಿಕೆಗಳನ್ನು ಕಟ್ಟಿ ಉತ್ತಮವಾದ ಅಲಂಕೃತವಾದ ಕುದುರೆಗಳಿಂದ ಯುಕ್ತವಾದ ರಥಗಳಲ್ಲಿ ಕುಳಿತುಕೊಂಡು ಯಜ್ಞದ ಕುದುರೆಯನ್ನು ವಶಕ್ಕೆ ತೆಗೆದುಕೊಳ್ಳಲು ಆಗಮಿಸಿದರು.

ತತಃ ಕಿರೀಟೀ ಸಂಚಿಂತ್ಯ ತೇಷಾಂ ರಾಜ್ಞಾಂ ಚಿಕೀರ್ಷಿತಮ್ ।
ವಾರಯಾಮಾಸ ತಾನ್ ಸರ್ವಾನ್ ಸಾಂತ್ವಪೂರ್ವಮರಿಂದಮಃ ॥೪॥

ಆ ಪ್ರಸಂಗದಲ್ಲಿ ಅರ್ಜುನನು ತ್ರಿಗರ್ತವೀರರು ಯಜ್ಞದ ಕುದುರೆಯನ್ನು ತಡೆಯುತ್ತಿರುವುದನ್ನು ಕಂಡು ಸ್ವಲ್ಪ ಕಾಲ ಹೀಗೆ ಯೋಚಿಸುತ್ತಾ ಯುಧಿಷ್ಠಿರನ ಮಾತನ್ನು

ನೆನಪಿಸಿಕೊಂಡು ಸಾಂತ್ವನ ಪೂರ್ವಕ ಮಾತುಗಳಿಂದಲೇ ಕುದುರೆಯನ್ನು ಬಂಧಿಸಬಾರದೆಂದು ಹೇಳಿದನು.

ತಮನಾದೃತ್ಯ ತೇ ಸರ್ವೇ ಶರೈರಭ್ಯಹನಂಸ್ತದಾ ।
ತಮೋರಜೋಭ್ಯಾಂ ಸಂಛಾನ್ನಾನ್ ತಾನ್ ಕಿರೀಟೀ ನ್ಯವಾರಯತ್ ॥

ಆದರೆ ತ್ರಿಗರ್ತ ಯೋಧರು ಅರ್ಜುನನ ಸಮಾಧಾನದ ಮಾತುಗಳಿಗೆ ಬೆಲೆ ಕೊಡಲಿಲ್ಲ. ಬಾಣಗಳಿಂದ ಅವನನ್ನು ಹೊಡೆಯಲು ತೊಡಗಿದರು. ರಜೋಗುಣ, ತಮೋಗುಣಗಳಿಂದ ಆವಿಷ್ಟರಾಗಿರುವ ತ್ರಿಗರ್ತ ಯೋಧರನ್ನು ಅರ್ಜುನನ್ನು ಪ್ರತ್ಯಸ್ತ್ರಗಳ ಪ್ರಯೋಗದಿಂದ ನಗುತ್ತಲೇ ತಡೆದನು.

ಅಬ್ರವೀಚ್ಚ ತತೋ ಜಿಷ್ಣುಃ ಪ್ರಹಸನ್ನಿವ ಭಾರತ ॥೬॥

ಮಂದಹಾಸವನ್ನು ಬೀರುತ್ತಾ ಅವರನ್ನುದ್ದೇಶಿಸಿ ಜಯಶೀಲನಾದ ಅರ್ಜುನನು ಇಂತು ನುಡಿದನು.

ಅರ್ಜುನಃ

ನಿವರ್ತಧ್ವಮಧರ್ಮಜ್ಞಾಃ ಶ್ರೇಯೋ ಜೀವಿತಮೇವ ವಃ ॥೭॥

ಅರ್ಜುನ– ಧರ್ಮವನ್ನು ತಿಳಿದ ವೀರರೇ, ಯುದ್ಧದಿಂದ ಹಿಮ್ಮೆಟ್ಟಿರಿ. ಈ ಸಮಯದಲ್ಲಿ ಜೀವಂತವಾಗಿ ಸಾಗುವುದೇ ನಿಮಗೆ ಶ್ರೇಯಸ್ಕರವೆಂದು ಭಾವಿಸುತ್ತೇನೆ.

ವೈಶಂಪಾಯನಃ

ಸ್ವಯಂ ವೀರಃ ಪ್ರಯಾಸ್ಯನ್ ವೈ ಧರ್ಮರಾಜೇನ ವಾರಿತಃ ।
ಅಬಾಂಧವಾ ರಣೇ ವೀರ ಹಂತವ್ಯಾಃ ಕ್ಷತ್ರಿಯಾ ಇತಿ ॥೮॥

ವೈಶಂಪಾಯನ– ಜನಮೇಜಯನೇ, ಅರ್ಜುನನು ಶತ್ರುಗಳೊಡನೆ ಹೀಗೆ ಹೇಳಲು ಕಾರಣವೇನೆಂದರೆ ಯಜ್ಞಾಶ್ವದ ರಕ್ಷಣೆಗಾಗಿ ಯುಧಿಷ್ಠಿರನು ನಿಯೋಜಿಸಿದಾಗ ಬಂಧುಗಳನ್ನು ಕಳೆದುಕೊಂಡ ರಾಜರನ್ನು ನೀನು ಕೊಲ್ಲಬಾರದು ಎಂದು ಕಟ್ಟಪ್ಪಣೆ ಮಾಡಿದ್ದನು. ಆ ಮಾತನ್ನು ಸ್ಮರಿಸಿಕೊಂಡು ಯುದ್ಧಭೂಮಿಯಿಂದ ಹಿಂದಿರುಗುವಂತೆ ಅರ್ಜುನನು ನೀತಿ ಮಾತನ್ನು ಹೇಳಿದನು.

ಸ ತದಾ ತದ್ವಚಃ ಶ್ರುತ್ವಾ ಧರ್ಮರಾಜಸ್ಯ ಧೀಮತಃ ।
ತಾನ್ ನಿವರ್ತಧ್ವಮಿತ್ಯಾಹ ನ ನ್ಯವರ್ತಂತ ಚಾಪಿ ತೇ ॥೯॥

ಜ್ಞಾನಿಯಾದ ಧರ್ಮರಾಜನ ಯುದ್ಧದಿಂದ ಹಿಂದಿರುಗಿರಿ ಎಂಬ ಸಮಾಧಾನದ ಮಾತುಗಳನ್ನು ಕೇಳಿಸಿಕೊಂಡರೂ ಅವರ್ಯಾರೂ ಯುದ್ಧದಿಂದ ಹಿಮ್ಮೆಟ್ಟಲೇ ಇಲ್ಲ.

ತತಸ್ತ್ರಿಗರ್ತರಾಜಾನಂ ಸೂರ್ಯವರ್ಮಾಣಮಾಹವೇ ।
ವಿತತ್ಯ ಶರಜಾಲೇನ ಪ್ರಜಹಾಸ ಧನಂಜಯಃ ॥೧೦॥

ಬಳಿಕ ಆ ಯುದ್ಧದಲ್ಲಿ ಅರ್ಜುನನು ತ್ರಿಗರ್ತಾಧಿಪತಿಯಾದ ಸೂರ್ಯವರ್ಮನನ್ನು ಬಾಣಗಳ ಸಮೂಹದಿಂದ ಮುಚ್ಚಿ ಗಹಗಹಿಸಿ ನಕ್ಕನು.

ತತಸ್ತೇ ರಥಘೋಷೇಣ ಖುರನೇಮಿಸ್ವನೇನ ಚ ।
ಪೂರಯಂತೋ ದಿಶಃ ಸರ್ವಾ ಧನಂಜಯಮುಪಾದ್ರವನ್ ॥೧೧॥

ಮರುಕ್ಷಣದಲ್ಲಿಯೇ ತ್ರಿಗರ್ತದೇಶದ ಯೋಧರು ರಣಘೋಷದಿಂದ, ರಥ ಚಕ್ರದ ಗಡಗಡ ಶಬ್ದಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬುತ್ತಾ ಅರ್ಜುನನನ್ನು ಆಕ್ರಮಿಸಿದರು.

ಸೂರ್ಯವರ್ಮಾ ತತಃ ಪಾರ್ಥೇ ಶರಾಣಾಂ ನತಪರ್ವಣಾಮ್ ।
ಶತಾನ್ಯಮುಂಚದ್ ರಾಜೇಂದ್ರ ಲಾಘವಂ ತ್ವಭಿದರ್ಶಯನ್ ॥೧೨॥

ಸೂರ್ಯವರ್ಮನು ತನ್ನ ಕೈಚಳಕವನ್ನು ತೋರಿಸುತ್ತಾ ಕೆಳಮುಖವಾಗಿ ಬಿಲ್ಲುಗಳಿಂದ ಬಗ್ಗಿರುವ ನೂರಾರು ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು.

ತಥಾ ಚಾನ್ಯೇ ಮಹೇಷ್ವಾಸಾ ಯೇ ತಸ್ಯೈವಾನುಯಾಯಿನಃ ।
ಮುಮುಚುಃ ಶರವರ್ಷಾಣಿ ಧನಂಜಯಮುಪಾದ್ರವನ್ ॥೧೩॥

ಅವನನ್ನು ಅನುಸರಿಸಿದ ಮಹಾಧನುಷ್ಮಂತರಾದ ತ್ರಿಗರ್ತಯೋಧರು ಅರ್ಜುನನನ್ನು ಕೊಲ್ಲುವ ಇಚ್ಛೆಯಿಂದಲೇ ಬಾಣಗಳ ಮಳೆಯನ್ನು ಸುರಿಸಿದರು.

ತತಸ್ತ್ರಿಗರ್ತೈರ್ನಿರ್ಮುಕ್ತಾನ್ ಬಹುಭಿಃ ಸುಬಹೂನ್ ಶರಾನ್ ।
ಚಿಚ್ಛೇದ ಪಾಂಡವೋ ರಾಜನ್ ತೇ ಭೂಮೌ ನ್ಯಪತನ್ ತದಾ ॥೧೪॥

ಅದಕ್ಕೆ ಪ್ರತಿಯಾಗಿ ಅರ್ಜುನನು ಶಿಂಜಿನಿಯ ಮುಖದಿಂದ ಹೊರಟ ಅನೇಕ ಬಾಣಗಳಿಂದ ತ್ರಿಗರ್ತಯೋಧರು ಬಿಟ್ಟ ಬಾಣಗಳನ್ನು ಕತ್ತರಿಸಿದನು. ಒಡೆನೆಯೇ ಅವೆಲ್ಲವೂ ಭೂಮಿಯಲ್ಲಿ ದೊಪ್ಪನೆ ಬಿದ್ದವು.

ಕೇತುವರ್ಮಾ ತು ತೇಜಸ್ವೀ ತಸ್ಯೈವಾವರಜೋ ಯುವಾ ।
ಯುಯುಧೇ ಭ್ರಾತುರರ್ಥಾಯ ಪಾಂಡವೇನ ಮಹಾತ್ಮನಾ ॥೧೫॥

ಬಳಿಕ ಸೂರ್ಯವರ್ಮನ ಸಹೋದರನಾದ, ತೇಜಸ್ವಿಯಾದ, ಯುವಕನಾದ ಕೇತುವರ್ಮನು ತನ್ನ ಅಣ್ಣನ ಗೆಲುವಿನ ದೃಷ್ಟಿಯಿಂದ ಯಶೋವಂತನಾದ ಅರ್ಜುನನ ಜೊತೆಯಲ್ಲಿ ಯುದ್ಧದಲ್ಲಿ ತೊಡಗಿಸಿಕೊಂಡನು.

ತಮಾಪತಂತಂ ಸಂಪ್ರೇಕ್ಷ್ಯ ಕೇತುವರ್ಮಾಣಮಾಹವೇ ।
ಅಭ್ಯಘ್ನನ್ ನಿಶಿತೈರ್ಬಾಣೈಃ ಬೀಭತ್ಸುಃ ಪರವೀರಹಾ ॥೧೬॥

ಯುದ್ಧದಲ್ಲಿ ಕೇತುವರ್ಮನು ತನ್ನ ಮೇಲೆ ಬೀಳುತ್ತಿರುವುದನ್ನು ನೋಡಿದ ಶತ್ರುಹಂತಕನಾದ ಬೀಭತ್ಸುವು ನಿಶಿತವಾದ ಬಾಣಗಳಿಂದ ಅವನನ್ನು ಸಂಹರಿಸಿದನು.

ಕೇತುವರ್ಮಣ್ಯಭಿಹತೇ ಧೃತವರ್ಮಾ ಮಹಾರಥಃ ।
ರಥೇನಾಶು ಸಮಾವೃತ್ಯ ಶರೈರ್ಜಿಷ್ಣುಮವಾಕಿರತ್ ॥೧೭॥

ಕೇತುವರ್ಮನು ಹತನಾದ ಬಳಿಕ ಮಹಾರಥನಾದ ಧೃತವರ್ಮನು ರಥದಲ್ಲಿ ಕುಳಿತು ಅರ್ಜುನನನ್ನು ಸಮೀಪಿಸಿ ಕೂಡಲೇ ಜಯಶೀಲನಾದ ಅರ್ಜುನನನ್ನು ಬಾಣಗಳಿಂದ ಮುಚ್ಚಿಬಿಟ್ಟನು.

ತಸ್ಯ ತಾಂ ಶೀಘ್ರತಾಂ ಜ್ಞಾತ್ವಾ ತುತೋಷಾತೀವ ವೀರ್ಯವಾನ್ ।
ಗುಡಾಕೇಶೋ ಮಹಾತೇಜಾ ಬಾಲಸ್ಯ ಧೃತವರ್ಮಣಃ ॥೧೮॥

ಇನ್ನೂ ಬಾಲಕನಾಗಿರುವ ಧೃತವರ್ಮನ ಬಾಣಪ್ರಯೋಗದ ಕುಶಲವನ್ನು ನೋಡಿದ ವೀರನಾದ ಮಹಾತೇಜಸ್ವಿಯಾದ ಗುಡಾಕೇಶನು ಅವನ ವಿಷಯದಲ್ಲಿ ಸಂತೋಷಪಟ್ಟನು.

ನ ಸಂದಧಾನಂ ದದೃಶೇ ನಾದದಾನಂ ಚ ತಂ ತದಾ ।
ಕಿರಂತಮೇವ ಸ ಶರಾನ್ ದದೃಶೇ ಪಾಕಶಾಸನಿಃ ॥೧೯॥

ಧೃತವರ್ಮನು ಬತ್ತಳಿಕೆಯಿಂದ ಬಾಣವನ್ನು ತೆಗೆದುಕೊಳ್ಳುವುದಾಗಲಿ, ಅವುಗಳನ್ನು ಧನುಸ್ಸಿನಲ್ಲಿ ಅನುಸಂಧಾನ ಮಾಡುವುದನ್ನಾಗಲಿ ಅರ್ಜುನನಿಗೆ ನೋಡಲು ಸಾಧ್ಯವಾಗುತ್ತಿರಲಿಲ್ಲ. ಬಾಣಗಳು ಮಳೆಗರೆಯುವುದನ್ನು ಮಾತ್ರ ನೋಡುತ್ತಿದ್ದನು. ಇಂತಹ ಕೈಚಳಕವನ್ನು ಧೃತವರ್ಮನು ತೋರಿಸಿದನು.

ಸ ತು ತಂ ಪೂಜಯಾಮಾಸ ಧೃತವರ್ಮಾಣಮಾಹವೇ ।
ಪರಿವವ್ರುರ್ಗುಡಾಕೇಶಂ ತತ್ರಾಕ್ರುದ್ಧ್ಯದ್ ಧನಂಜಯಃ ॥೨೦॥

ಅರ್ಜುನನು ಧೃತವರ್ಮನ ರಣೋತ್ಸಾಹವನ್ನು ಹೆಚ್ಚಿಸುತ್ತಾ ಬಾಣಪ್ರಯೋಗದಲ್ಲಿ ಅವನಿಗಿರುವ ಕೈಚಳಕವನ್ನು ಮನಸ್ಸಿನಲ್ಲಿಯೇ ಸ್ವಲ್ಪ ಸಮಯ ಶ್ಲಾಘಿಸಿದನು. ಧೃತವರ್ಮನು ಕ್ರುದ್ಧನಾಗಿ ಯುದ್ಧ ಮಾಡುತ್ತಿದ್ದರೂ ಪ್ರೀತಿಯಿಂದ ಅವನನ್ನು ಸಂಹರಿಸಲಿಲ್ಲ.

ತತೋ ಯೋಧಾನ್ ಜಘಾನಾಶು ತೇಷಾಂ ಸ ದಶ ಚಾಷ್ಟ ಚ ।
ಮಹೇಂದ್ರವಜ್ರಪ್ರತಿಮೈರಾಯಸೈಃ ನಿಶಿತೈಃ ಶರೈಃ ॥೨೧॥

ಬಳಿಕ ತೇಜಸ್ವಿಯಾದ ಅರ್ಜುನನು ಪ್ರೀತಿಯಿಂದ ಶತ್ರುವಿನ ಮೇಲೆ ಪ್ರಾಣವನ್ನು ತೆಗೆಯುವಂತೆ ಬಾಣಗಳನ್ನು ಪ್ರಯೋಗಿಸದೆ ಮೃದುಯೋಧಿಯಾಗಿದ್ದನು. ಈ ಅವಕಾಶವನ್ನು ಉಪಯೋಗಿಸಿಕೊಂಡು ಧೃತವರ್ಮನು ಅರ್ಜುನನ ಯೋಧರ ಮೇಲೆ ನಿಶಿತವಾದ, ವಜ್ರಾಯುಧಕ್ಕೆ ಸಮಾನವಾದ ಎಂಟು-ಹತ್ತು ಬಾಣಗಳನ್ನು ಪ್ರಯೋಗಿಸಿದನು.

ತಾಂಸ್ತು ಭಗ್ನಾನ್ ಸ ಸಂಪ್ರೇಕ್ಷ್ಯ ತ್ವರಮಾಣೋ ಧನಂಜಯಃ ।
ಶರೈರಾಶೀವಿಷಾಕಾರೈರ್ಜಘಾನ ಸ್ವನವದ್ದಸನ್ ॥೨೨॥

ನಿಶಿತವಾದ ಬಾಣಗಳು ಭಗ್ನವಾದುದನ್ನು ಕಂಡು ಧನಂಜಯನು ವೇಗವಾಗಿ ಸರ್ಪದಂತೆ ಆಕಾರವನ್ನು ಹೊಂದಿರುವ ಬಾಣಗಳಿಂದ ಧೃತವರ್ಮನ ಬಾಣಗಳನ್ನು ನಗುತ್ತಲೇ ತುಂಡರಿಸಿದನು.

ತೇ ಭಗ್ನಮನಸಃ ಸರ್ವೇ ತ್ರಿಗರ್ತಾಸ್ತು ಮಹಾರಥಾಃ ।
ದಿಶೋ ವಿದುದ್ರುವೂ ರಾಜನ್ ಧನಂಜಯಶರಾರ್ದಿತಾಃ ॥೨೩॥

ತಮ್ಮ ಉದ್ದೇಶ ಸಿದ್ಧಿಯೂ ಆಗದೆ ತ್ರಿಗರ್ತ ಯೋಧ ಮಹಾರಥರೆಲ್ಲರೂ ಧನಂಜಯನ ಬಾಣಗಳಿಂದ ಪೀಡಿತರಾಗಿ ಹತ್ತು ದಿಕ್ಕುಗಳ ಕಡೆ ಓಡಿದರು.

ಹತಾವಶಿಷ್ಟಾ ಹಿ ಪುರಾ ಪಾರ್ಥಂ ದೃಷ್ಟಪರಾಕ್ರಮಾಃ ।
ತಮೂಚುಃ ಪುರುಷವ್ಯಾಘ್ರಂ ಸಂಶಪ್ತಕನಿಷೂದನಮ್ ॥೨೪॥

ಹಿಂದೆಯೇ ಅರ್ಜುನನ ಪರಾಕ್ರಮವನ್ನು ಅನುಭವಿಸಿದ ರಣರಂಗದಲ್ಲಿ ಹತರಾಗದೆ ಉಳಿದಿರುವ ಆ ಯೋಧರು ಸಂಶಪ್ತಕರನ್ನು ಕೊಂದಿರುವ ಪುರುಷವ್ಯಾಘ್ರನಾದ ಅರ್ಜುನನನ್ನು ಕುರಿತು ಇಂತು ನುಡಿದರು.

ತ್ರಿಗರ್ತಾಃ

ತವ ಸ್ಮ ಕಿಂಕರಾಃ ಸರ್ವೇ ಸರ್ವೇ ಚ ವಶಗಾಸ್ತವ ।
ಆಜ್ಞಾಪಯಸ್ವ ನಃ ಪಾರ್ಥ ಪ್ರಹ್ವಾನ್ ಪ್ರೇಷ್ಯಾನಿವ ಸ್ಥಿತಾನ್ ॥೨೫॥

ಕರಿಷ್ಯಾಮಃ ಪ್ರಿಯಂ ಸರ್ವೇ ತವ ಕೌರವನಂದನ ॥೨೬॥

ತ್ರಿಗರ್ತರು– ಅರ್ಜುನನೇ, ನಾವೆಲ್ಲರೂ ನಿನ್ನ ಸೇವಕರಾಗಿದ್ದೇವೆ. ನಿನ್ನ ಅಧೀನರಾಗಿದ್ದೇವೆ. ವಿನೀತರಾದ ಸೇವಕರಾದ ನಮಗೆ ಕರ್ತವ್ಯವನ್ನು ಆಜ್ಞಾಪಿಸು. ನಿನಗೆ ಪ್ರಿಯವಾದುದನ್ನೆಲ್ಲ ಮಾಡುತ್ತೇವೆ.

ವೈಶಂಪಾಯನಃ

ಏತದಾಜ್ಞಾಯ ವಚನಂ ಸರ್ವಾಂಸ್ತಾನಬ್ರವೀತ್ ತದಾ ॥೨೭॥

ವೈಶಂಪಾಯನ– ಜನಮೇಜಯನೇ, ತ್ರಿಗರ್ತ ಯೋಧರು ವಿನಯ ಪೂರ್ವಕವಾಗಿ ಇಂತು ನುಡಿದ ಬಳಿಕ ಅವರನ್ನುದ್ದೇಶಿಸಿ ಅರ್ಜುನನು ಹೇಳಿದನು.

ಅರ್ಜುನಃ

ಜೀವಿತಂ ರಕ್ಷತ ನೃಪಾಃ ಶಾಸನಂ ಗೃಹ್ಯತಾಂ ಮಮ ॥೨೮॥

ಅರ್ಜುನ– ರಾಜರೇ, ನೀವು ನಮ್ಮ ಅಧಿಕಾರವನ್ನೊಪ್ಪಿಕೊಂಡು ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಿರಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅಶ್ವಮೇಧಿಕಪರ್ವಣಿ ತ್ರಿಗರ್ತಯುದ್ಧವರ್ಣನಂ ನಾಮ ಚತುಃಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅಶ್ವಮೇಧಿಕಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ಪ್ರಾಗ್ಜ್ಯೋತಿಷ ಪುರವನ್ನು ಹೊಂದಿದ ಅರ್ಜುನನು
ಭಗದತ್ತನ ಮಗನಾದ ವಜ್ರದತ್ತನೊಡನೆ ಯುದ್ಧ ಮಾಡಿದ ಪ್ರಸಂಗ.

ವೈಶಂಪಾಯನಃ

ಪ್ರಾಗ್ಜ್ಯೋತಿಷಮಥಾಭ್ಯೇತ್ಯ ವ್ಯಚರತ್ ಸ ಹಯೋತ್ತಮಃ ।
ಭಗದತ್ತಾತ್ಮಜಸ್ತತ್ರ ನಿರ್ಯಯೌ ರಣಕರ್ಕಶಃ ॥೧॥

ವೈಶಂಪಾಯನ– ಜನಮೇಜಯನೇ, ಅನಂತರ ಅರ್ಜುನನು ಯುಧಿಷ್ಠಿರನ ಮೇಧಾಶ್ವವು ಪ್ರಾಗ್ಜ್ಯೋತಿಷ ನಗರಕ್ಕೆ ಪ್ರವೇಶಿಸುತ್ತಿರಲು ಅದನ್ನು ಅನುಸರಿಸಿ ಹೊರಟನು. ಆ ಪುರದಲ್ಲಿಯಾದರೂ ರಣಭಯಂಕರನಾದ ಭಗದತ್ತನ ಮಗನಾದ ವಜ್ರದತ್ತನು ಕುದುರೆಯನ್ನು ಬಂಧಿಸಬೇಕೆಂದು ತನ್ನ ರಾಜಧಾನಿಯಿಂದ ಹೊರಟನು.

ಸಹಯಂ ಪಾಂಡುಪುತ್ರಂ ತಂ ವಿಷಯಾಂತಮುಪಾಗತಮ್ ।
ಯುಯುಧೇ ಭರತಶ್ರೇಷ್ಠ ವಜ್ರದತ್ತೋ ಮಹೀಪತಿಃ ॥೨॥

ಪಾಂಡುಪುತ್ರನಾದ ಯುಧಿಷ್ಠಿರನ ಯಜ್ಞಾಶ್ವವು ತನ್ನ ಪುರಕ್ಕೆ ಆಗಮಿಸಿದೆ. ಆ ಯಜ್ಞಾಶ್ವದ ಜೊತೆಗೆ ಅರ್ಜುನನೂ ಆಗಮಿಸಿದ್ದಾನೆ ಎಂಬುದನ್ನು ತಿಳಿದು ವಜ್ರದತ್ತನು ಆ ಕುದುರೆಯನ್ನು ಬಂಧಿಸಿ ಯುದ್ಧ ಮಾಡಬೇಕೆಂದು ಬಯಸಿದನು.

ಸೋऽಭಿನಿರ್ಯಾಯ ನಗರಾದ್ ಭಗದತ್ತಸುತೋ ನೃಪಃ ।
ಅಶ್ವಮಾಯಾಂತಮುನ್ಮಥ್ಯ ನಗರಾಭಿಮುಖೋ ಯಯೌ ॥೩॥

ವಜ್ರದತ್ತನು ನಗರದಿಂದ ಹೊರಟು ತನ್ನ ಕಡೆ ಬರುತ್ತಿರುವ ಕುದುರೆಯನ್ನು ಬಂಧಿಸಿ ಕುದುರೆಯೊಡನೆ ಪಟ್ಟಣದ ಕಡೆ ಪ್ರಯಾಣ ಮಾಡಿದನು.

ತಮಾಲಕ್ಷ್ಯ ಮಹಾಬಾಹುಃ ಕುರೂಣಾಮೃಷಭಸ್ತದಾ ।
ಗಾಂಡೀವಂ ವಿಕ್ಷಿಪಂಸ್ತೂರ್ಣಂ ಸಹಸಾ ಸಮುಪಾದ್ರವತ್ ॥೪॥

ಇದನ್ನು ಕಂಡ ಕುರುಶ್ರೇಷ್ಠನಾದ ಮಹಾಬಾಹುವಾದ ಅರ್ಜುನನು ಗಾಂಡೀವ ಧನುಸ್ಸನ್ನು ಠೇಂಕರಿಸುತ್ತಾ ವೇಗವಾಗಿ ವಜ್ರದತ್ತನನ್ನು ಆಕ್ರಮಿಸಿದನು.

ತತೋ ಗಾಂಡೀವನಿರ್ಮುಕ್ತೈರಿಷುಭಿರ್ಮೋಹಿತೋ ನೃಪಃ ।
ಹಯಮುತ್ಸೃಜ್ಯ ತಂ ವೀರಃ ತತಃ ಪಾರ್ಥಮುಪಾದ್ರವತ್ ॥೫॥

ಗಾಂಡೀವ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ವಿಮೋಹಿತನಾದ ವಜ್ರದತ್ತನು ಕುದುರೆಯನ್ನು ಬಿಟ್ಟು ನಗರಕ್ಕೆ ಹೋಗಿ ಯುದ್ಧಸನ್ನದ್ಧನಾಗಿ ಪಾರ್ಥನನ್ನು ಆಕ್ರಮಿಸಿದನು.

ಪುನಃ ಪ್ರವಿಶ್ಯ ನಗರಂ ದಂಸಿತಸ್ತು ನೃಪೋತ್ತಮಃ ।
ಆರುಹ್ಯ ನಾಗಪ್ರವರಂ ನಿರ್ಯಯೌ ಯೋದ್ಧುಕಾಂಕ್ಷಯಾ ॥೬॥

ಅರ್ಜುನನ ಬಾಣಗಳಿಂದ ಪೆಟ್ಟು ತಿಂದಿರುವ ವಜ್ರದತ್ತನು ಪುನಃ ನಗರವನ್ನು ಪ್ರವೇಶಿಸಿ ಶ್ರೇಷ್ಠವಾದ ಆನೆಯೊಂದನ್ನು ಏರಿಕೊಂಡು ಯುದ್ಧ ಮಾಡುವ ದೃಷ್ಟಿಯಿಂದ ಆಗಮಿಸಿದನು.

ಪಾಂಡುರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ದೋಧೂಯಮಾನೇನ ತದಾ ಚಾಮರೇಣ ಮಹಾರಥಃ ॥೭॥

ಯುದ್ಧಕ್ಕೆ ಆಗಮಿಸಿದ ವಜ್ರದತ್ತನು ಶ್ವೇತಚ್ಛತ್ರವನ್ನು ತನ್ನ ತಲೆಯ ಮೇಲೆ ಧರಿಸಿದ್ದನು. ಸೇವಕರು ಬಿಳಿಯ ಚಾಮರಗಳನ್ನು ಬೀಸುತ್ತಿದ್ದರು.

ತತಃ ಪಾರ್ಥಂ ಸಮಾಸಾದ್ಯ ಪಾಂಡವಾನಾಂ ಮಹಾರಥಮ್ ।
ಆಹೂತವಾನ್ ಹಿ ಕೌರವ್ಯಂ ಬಾಲ್ಯಾನ್ಮೋಹಾಚ್ಚ ಸಂಯುಗೇ ॥೮॥

ಯುದ್ಧ ಮದದಿಂದ ಅರ್ಜುನನ ಬಳಿ ಆಗಮಿಸಿದ ವಜ್ರದತ್ತನು ಬಾಲ್ಯ ಚಾಪಲ್ಯತೆಯಿಂದಲೂ, ಮೌಢ್ಯದಿಂದಲೂ ಅರ್ಜುನನನ್ನು ಯುದ್ಧಕ್ಕೆ ಕರೆದನು.

ಸ ವಾರಣಂ ನಗಪ್ರಖ್ಯಂ ಪ್ರಭಿನ್ನಕರಟಾಮುಖಿಮ್ ।
ಪ್ರೇಷಯಾಮಾಸ ಸಂಕ್ರುದ್ಧಸ್ತತಃ ಶ್ವೇತಹಯಂ ಪ್ರತಿ ॥೯॥

ಅತ್ಯಂತ ಕೋಪಗೊಂಡಿರುವ ವಜ್ರದತ್ತನು ಮದೋದಕವನ್ನು ಸುರಿಸುತ್ತಿದ್ದ, ಪರ್ವತದಂತೆ ಕಾಣುತ್ತಿದ್ದ ಮಹಾಗಜವನ್ನು ಅರ್ಜುನನ ಮೇಲೆ ಎರಗಿ ಬೀಳುವಂತೆ ಪ್ರಚೋದಿಸಿದನು.

ವಿಕ್ಷರಂತಂ ಯಥಾ ಮೇಘಂ ಪರವಾರಣವಾರಣಮ್ ।
ಶಸ್ತ್ರವತ್ ಕಲ್ಪಿತಂ ಸಂಖೇ ತ್ರಿಸಾಹಂ ಯುದ್ಧದುರ್ಮದಮ್ ॥೧೦॥

ಆ ಮಹಾಗಜವು ಮಹಾಮೇಘವು ಮಳೆಯನ್ನು ಸುರಿಸುವಂತೆ ತನ್ನ ತಲೆಯಿಂದ ಮದೋದಕವನ್ನು ಸುರಿಸುತ್ತಿತ್ತು. ಅದರ ಎರಡು ದಂತಗಳು ಎರಡು ಶಸ್ತ್ರದಂತೆ ಇದ್ದವು. ಆ ಆನೆಯ ಎರಡು ಕರ್ಣಮೂಲಗಳು ಕಾಲುಗಳಿಂದ ಉಂಟಾಗುವ ವೇದನೆಯನ್ನು ಸಹಿಸಿಕೊಳ್ಳುತ್ತಿದ್ದವು (ಮಾವುತನು ಆನೆಯ ಕಿವಿಗಳನ್ನು ಕಾಲಿನಿಂದ ತುಳಿಯುತ್ತಿರುವಾಗ ವೇದನೆಯು ಉಂಟಾಗುತ್ತದೆ. ಈ ಮಹಾಗಜಕ್ಕೆ ಅಂತಹ ವೇದನೆಯು ಉಂಟಾಗುತ್ತಿರಲಿಲ್ಲ ಎಂದು ಭಾವ). ತಲೆಯಲ್ಲಿ ಅಂಕುಶದ ದಾತವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿತ್ತು. ಈ ಅಭಿಪ್ರಾಯದಲ್ಲಿ 'ತ್ರಿಸಾಹಂ' ಎರಡು ಕಿವಿಗಳು, ತಲೆ - ಮೂರು ಸ್ಥಳಗಳಲ್ಲಿ ವೇದನೆಯನ್ನು ಸಹಿಸಿಕೊಳ್ಳುವ ಗಜ ಎಂದಿದ್ದಾರೆ.

ಪ್ರಚೋದ್ಯಮಾನಃ ಸ ಗಜಸ್ತೇನ ರಾಜ್ಞಾ ಮಹಾಬಲಃ ।
ತದಾಽಂಕುಶೇನ ವಿಬಭಾವುತ್ಪತಿಷ್ಯನ್ನಿವಾಂಬರಮ್ ॥೧೧॥

ಯುದ್ಧ ದುರ್ಮದವಾದ ಇಂತಹ ಗಜವನ್ನು ವಜ್ರದತ್ತನು ಅರ್ಜುನನ ಮೇಲೆ ಬೀಳಲು ಪ್ರಚೋದಿಸಿದನು. ಮಹಾಬಲಿಷ್ಠವಾದ ಆನೆಯು ಅಂಕುಶದಿಂದ ಪ್ರಚೋದಿತವಾಗಿ ಅರ್ಜುನನ ಮೇಲೆ ಎರಗುತ್ತಾ ಆಕಾಶಕ್ಕೆ ಹಾರುತ್ತಿರುವುದೋ ಎಂಬಂತೆ ಕಾಣಿಸುತ್ತಿತ್ತು.

ತಮಾಪತಂತಂ ಸಂಪ್ರೇಕ್ಷ್ಯ ಕ್ರುದ್ಧೋ ರಾಜನ್ ಧನಂಜಯಃ ।
ಭೂಮಿಷ್ಠೋ ವಾರಣಗತಂ ಯೋಧಯಾಮಾಸ ಭಾರತ ॥೧೨॥

ವಜ್ರದತ್ತನು ಈ ಕ್ರಮದಲ್ಲಿ ಆನೆಯನ್ನೇರಿ ತನ್ನನ್ನು ಅತಿಕ್ರಮಿಸಲು ಬರುತ್ತಿರುವುದನ್ನು ಕಂಡ ಕ್ರುದ್ಧನಾದ ಅರ್ಜುನನು ತಾನು ಭೂಮಿಯ ಮೇಲೆ ನಿಂತಿದ್ದರೂ ಆನೆಯ ಮೇಲಿದ್ದ ವಜ್ರದತ್ತನೊಡನೆ ಯುದ್ಧದಲ್ಲಿ ತೊಡಗಿದನು.

ವಜ್ರದತ್ತಸ್ತು ಸಂಕ್ರುದ್ಧೋ ಮುಮೋಚಾಶು ಧನಂಜಯೇ ।
ತೋಮರಾನಗ್ನಿಸಂಕಾಶಾನ್ ಶಲಭಾನಿವ ವೇಗಿತಾನ್ ॥೧೩॥

ಕ್ರುದ್ಧನಾದ ವಜ್ರದತ್ತನು ಅಗ್ನಿಸದೃಶವಾಗಿದ್ದ ಶಲಬಗಳಂತೆ ವೇಗವುಳ್ಳವುಗಳಾಗಿದ್ದ ತೋಮರಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು.

ಅರ್ಜುನಸ್ತಾನಸಂಪ್ರಾಪ್ತಾನ್ ಗಾಂಡೀವಪ್ರೇಷಿತೈಃ ಶರೈಃ ।
ದ್ವಿಧಾ ತ್ರಿಧಾ ಚ ಚಿಚ್ಛೇದ ಖ ಏವ ಖಗಮೈಸ್ತದಾ ॥೧೪॥

ವಜ್ರದತ್ತನು ಪ್ರಯೋಗಿಸಿದ ತೋಮರಗಳು ಹತ್ತಿರಕ್ಕೆ ಬರುವ ಮೊದಲೇ ಅರ್ಜುನನು ಆಕಾಶಚಾರಿಗಳಾದ ತೀಕ್ಷ್ಣವಾದ ಬಾಣಗಳನ್ನು ಗಾಂಡೀವ ಧನುಸ್ಸಿನಿಂದ ಪ್ರಯೋಗಿಸಿ ವಜ್ರದತ್ತನ ಬಾಣಗಳನ್ನು ಎರಡು-ಮೂರು ಭಾಗಗಳಾಗಿ ಕತ್ತರಿಸಿದನು.

ಸ ತಾನ್ ದೃಷ್ಟ್ವಾ ತದಾ ಛಿನ್ನಾನ್ ತೋಮರಾನ್ ಭಗದತ್ತಜಃ ।
ಇಷೂನಸಕ್ತಾಂಸ್ತ್ವರಿತಃ ಪ್ರಾಹಿಣೋತ್ ಪಾಂಡವಂ ಪ್ರತಿ ॥೧೫॥

ವಜ್ರದತ್ತನು ಬಿಡಲ್ಪಟ್ಟ ತೋಮರಗಳೆಲ್ಲವೂ ಕೆಳಗೆ ಬಿದ್ದುದನ್ನು ಕಂಡು ಪುನಃ ವೇಗವಾಗಿ ಸುವರ್ಣಮಯವಾದ ಗರಿಗಳನ್ನು ಹೊಂದಿರುವ ನೇರವಾಗಿ ಹೋಗುವ ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು.

ತತೋಽರ್ಜುನಸ್ತೂರ್ಣತರಂ ರುಗ್ಮಪುಂಖಾನಜಿಹ್ಮಗಾನ್ ।
ಪ್ರೇಷಯಾಮಾಸ ಸಂಕ್ರುದ್ಧೋ ಭಗದತ್ತಾತ್ಮಜಂ ಪ್ರತಿ ॥೧೬॥

ಭಗದತ್ತನ ಸುತನಲ್ಲಿ ಕ್ರುದ್ಧನಾದ ಅರ್ಜುನನು ವೇಗವಾಗಿ ಸುವರ್ಣಮಯವಾದ ಪುಂಖಗಳನ್ನು ಹೊಂದಿರುವ ನೇರವಾಗಿ ಸಾಗುವ ಬಾಣಗಳನ್ನು ವಜ್ರದತ್ತನ ಮೇಲೆ ಪ್ರಯೋಗಿಸಿದನು.

ಸ ತೈರ್ವಿದ್ಧೋ ಮಹಾತೇಜಾ ವಜ್ರದತ್ತೋ ಮಹಾಹವೇ ।
ಭೃಶಂ ಹತಃ ಪಪಾತೋರ್ವ್ಯಾಂ ನ ತ್ವೇನಮಜಹಾತ್ ಸ್ಮೃತಿಃ ॥೧೭॥

ಆ ಮಹಾಯುದ್ಧದಲ್ಲಿ ಅರ್ಜುನನ ತೀಕ್ಷ್ಣಬಾಣಗಳಿಂದ ಹೊಡೆಯಲ್ಪಟ್ಟ ತೇಜಸ್ವಿಯಾದ ವಜ್ರದತ್ತನು ಗಾಯಗೊಂಡವನಾಗಿ ನೆಲದ ಮೇಲೆ ಬಿದ್ದನು. ಆದರೆ ಮೂರ್ಛೆ ಹೊಂದಲಿಲ್ಲ.

ತತಃ ಸ ಪುನರಾರುಹ್ಯ ವಾರಣಪ್ರವರಂ ರಣೇ ।
ಅವ್ಯಗ್ರಂ ಪ್ರೇಷಯಾಮಾಸ ಜಯಾರ್ಥೀ ವಿಜಯಂ ಪ್ರತಿ ॥೧೮॥

ಪುನಃ ವಜ್ರದತ್ತನು ಶ್ರೇಷ್ಠವಾದ ಆನೆಯ ಮೇಲೆ ಕುಳಿತು ಜಯಾಕಾಂಕ್ಷಿಯಾಗಿ ಏಕಾಂಗಿಯಾಗಿ ವಿಜಯನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ತಸ್ಮೈ ಬಾಣಾಂಸ್ತತೋ ಜಿಷ್ಣುರ್ನಿರ್ಮುಕ್ತಾಶೀವಿಷೋಪಮಾನ್ ।
ಪ್ರೇಷಯಾಮಾಸ ಸಂಕ್ರುದ್ಧೋ ಜ್ವಲಿತಾನಿವ ಪಾವಕಾನ್ ॥೧೯॥

ಇದರಿಂದ ಕ್ರುದ್ಧನಾದ ಧನಂಜಯನೂ ಯಜ್ಞೇಶ್ವರನು ತೇಜೋವಿಶಿಷ್ಟನಾಗಿ ಬೆಳಗುವಂತೆ ಬೆಳಗುವ ಬಾಣಗಳನ್ನು ವಜ್ರದತ್ತನ ಆನೆಯ ಮೇಲೆ ಪ್ರಯೋಗಿಸಿದನು.

ಸ ತೈರ್ವಿದ್ಧೋ ಮಹಾಭಾಗೋ ವಿಸ್ರವನ್ ರುಧಿರಂ ಬಭೌ ।
ಹಿಮವಾನಿವ ಶೈಲೇಂದ್ರೋ ಬಹುಪ್ರಸ್ರವಣಸ್ತದಾ ॥೨೦॥

ಅರ್ಜುನನು ಪ್ರಯೋಗಿಸಿದ ಬಾಣಗಳಿಂದ ವ್ಯಥಿತವಾದ ಆನೆಯು ಧಾರಾಕಾರವಾಗಿ ರಕ್ತವನ್ನು ಸುರಿಸುತ್ತಾ ಗೈರಿಕಾರಿ ಧಾತುಗಳಿಂದ ಮಿಶ್ರಿತವಾದ, ನೀರಿನಿಂದ ಪ್ರವಹಿಸುವ ಝರಿಗಳುಳ್ಳ ಹಿಮವದ್ ಪರ್ವತದಂತೆಯೇ ಕಾಣಿಸುತ್ತಿತ್ತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವಸಂಚರಣೋ ನಾಮ ಪಂಚಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★



ISBN: 978-93-88813-39-6